ಪುಣೆ ಮ್ಯುನಿಸಿಪಾಲಿಟಿಯು ಮಾನಪತ್ರ ಸಮರ್ಪಣೆಯು ಕಡೆ ತನಕ ಆದ್ಭುತವಾದ ಮಾನಪತ್ರಸಮರ್ಪಣೆಯಾಗಬಾರದೆಂದು ಸನಾತನಿಗಳು ನಡಿಸಿದ ಪ್ರಯತ್ನಗಳನ್ನು ಒಣ್ಣಿಸಲಸದಳ. ಮಾನಪತ್ರದ ರಾಷ್ಟ್ರ ಕಾಯಿದೆಯಂತೆ ಮಂಜೂರಾಗಲಿಲ್ಲವಾಗಿ ಸನಾತನ ಪುಢಾರ್ಯರು ಮೊದಲಿನ ದಿನ ಹೈ ಕೋರ್ಟಿನಲ್ಲಿ ಮ್ಯುನಿಸಿಪಾಲಿಟಿಯ ಮೇಲೆ ದಾವೆ ಮಾಡಿ ಆ ದಾವೆ ನಿರ್ಣಯವಾಗುವ ತನಕ ಮಾನಪತ್ರಸಮರ್ಪಣೆಯಾಗದಂತೆ ಸಹಿ ಜಸ್ಟೀಸ ರಾ| ಪೂಂದಾರ ಇವರ ಕೋರ್ಟಿನಲ್ಲಿ ಪ್ರತಿಬಂಧಕ ಹುಕುಮನ್ನು ಪಡೆದರು. ಜಡ್ಜರು ಆ ದಾವೆಯನ್ನು ಸ್ವೀಕರಿಸಿ ನೋಟೀಸು ಕೊಟ್ಟು ತಾ ಅಂದಿನ ಕ್ರಮದಂತೆ ಸಹ ಕರೆದರು. ಸಹ ಕರೆಯಬಾರದಾಗಿ ಅನೇಕ ದಾವೆ ದಾಖಲಾಯಿತು. ಪುನಃ ಪ್ರತಿಬಂಧಕ ಹುಕುಮಿಗ ಅರ್ಜಿ. ರಾ| ಸ್ಟೋನತವಾರರವರು ಇತ್ತಟ್ಟಿನ ಅಂಬೂಣ ಕೇಳಕೊಂಡು ಪ್ರತಿಬಂಧಕ ಹುಕುಮು ಕೊಡಲಾಗುವದಿಲ್ಲವೆಂದು ಹುಕುಮು ಕೊಟ್ಟರು. ಕಳೆದ ಸೋಮವಾರ ಮ್ಯುನಿಸಿಪಾಲಿಟಿಯಲ್ಲಿ ಪುನಃ ಈ ಬಗ್ಗೆ ಚರ್ಚೆಯಾಯಿತು. ಅಂತು ಆ ಸಭಾಸದರಲ್ಲಿ ಇಬ್ಬರ ವಿರೋಧಿಸಿದರು, ಉಳಿದವರೆಲ್ಲರೂ ಮಾನಪತ್ರ ಕೊಟ್ಟು ಜಗದ್ವಂದ್ಯ ವಿಭೂತಿಗೆ ಸತ್ಕರಿಸಬೇಕಾಗಿಯೂ, ಅದಕ್ಕಾಗಿ ರೂ. ೫೦೦ನ್ನು ಖರ್ಚು ಮಾಡಬೇಕಾಗಿಯೂ ಠರಾಯಿಸಿದರು, ಆ ಠರಾವಿನಂತೆ ಅದೇ ದಿನ ಸಂಜೆ ೭| ಘಂಟೆಗೆ ಮಾನಪತ್ರ ಸಮರ್ಪಣೆಯಾಗಬೇಕಾಗಿಯೂ ಗೊತ್ತಾಯಿತು. ಸಾಯಂಕಾಲ ಮ್ಯುನಿಸಿಪಾಲಿಟಿಯ ಸಭಾಮಂದಿರದ ಸುತ್ತಮುತ್ತ ಹೇಳಲಾರದಷ್ಟು ಜನಸಂದಣಿ. ಮಹಾತ್ಮರ ಸತ್ಕಾರ ಸಮಾರಂಭ ನೋಡಬೇಕೆನ್ನುವ ಕಾಗಲು ಜನರು ಒತ್ತೊತ್ತಿ ನೆರೆದಿದ್ದರು. ೬ ಘಂಟೆಯಿಂದ ಜನರು ನೆರೆಯುತ್ತಿದ್ದರು. ೭ ಘಂಟೆಯಾಗಿ ೩೩ ನಿಮಿಷವಾಯಿತು, ಒಂದು ಮೋಟಾರ ಕಾರು ಬಂದು ಸಭಾಮಂದಿರದ ಬಳಿ ನಿಂತಿತು. ಮಹಾತ್ಮರು ತಮ್ಮ ಮನೆಯವರೊಡನೆ ಬಂದರೆ ಮಹಾತ್ಮರೇ ಅನುಗ್ರಹಿಸಿದರೆಂದು ಜನರು ಭಾವಿಸಿ ಬಂಡಿಗೆ ಮುತ್ತಿದರು. ಒಂದು ಸ್ಫೋಟವಾಯಿತು, ಮಹಾತ್ಮರ ಪ್ರೀತ್ಯರ್ಥ ಘಟನೆಯನ್ನು ಹಾರಿಸಿದನೆಂದು ಹಲವರ ಗ್ರಹಿಕೆ. ಆದರೆ ನೋಡಿದರೆ, ಕೇಳಿದರೆ ಭಯಂಕರ ಅನರ್ಥ. ನರಾಧಮನೊಬ್ಬನು ಮಹಾತ್ಮರ ಪ್ರಾಣವನ್ನೇ ಅಪಹರಿಸುವದಕ್ಕಾಗಿ ಮೋಟಾರಿನ ಮೇಲೆ ಬಾಂಬನ್ನು ಎಸೆದಿದ್ದನು. ಪುಣ್ಯ ನಗರಿಯ ಪುಣ್ಯಪ್ರಭಾವದಿಂದಲೂ, ಬಡ ಭಾರತೀಯರ ಪೂರ್ವಸಂಚಿತದಿಂದಲೂ ಆ ಬಂಡಿಯಲ್ಲಿ ಮಹಾತ್ಮರಿರಲಿಲ್ಲ. ಬಂಡಿಯಲ್ಲಿದ್ದ ರಾ| ಜೋಶಿ ಕಾರಕರ, ರಾ| ಭಾಗವತ ಮೊದಲಾದ ೭ ಮಂದಿಗಳಿಗೂ, ಸುತ್ತಮುತ್ತ ಕೂಡಿದ ಕೆಲ ಹುಡುಗರಿಗೂ ಗಾಯಗಳಾದವು. ಸನಾತನಿ ಪ್ರಮುಖರಾದ, ಮ್ಯುನಿಸಿಪಾಲಿಟಿಯ ಸಭಾಸದರಾದ ರಾ| ಭೋಪಟಕರರವರಿಗೆ ಗಾಯಗಳಾದ ಬಗ್ಗೆ ಎಲ್ಲರೂ ವ್ಯಸನಪಡುತ್ತಾರೆ. ಅತ್ಯಾಚಾರಕ್ಕೆ ಸನಾತನಿಗಳೇ ಕಾರಣರೆಂದು ಅನೇಕರ ಅಂಬೋಣ. ೭ ನಿಮಿಷಗಳಲ್ಲಿ ಒಂದರ, ಸರಿಯಾಗಿ ೭|| ಘಂಟೆಗೆ ಮಹಾತ್ಮರ ಮೋಟಾರು ಬಂತು! ಮಹಾತ್ಮರಿಗೆ ಮ್ಯುನಿಸಿಪಾಲಿಟಿಯು ಸಭಾಮಂದಿರಕ್ಕೆ ಕರೆದೊಯ್ದು ಬಾಂಬಿನ ಸ್ಫೋಟದ ಕಥೆ ಹಾಗು ಸಂಭವನೀಯ ಸಂಕಲ್ಪಿತ ಪರಿಣಾಮವು ತಿಳಿಯಿತು. 'ಖುದಾ ಬಚಾ ಲಿಯಾ!' ಹೀಗೆ ಮಹಾತ್ಮರು ಉದ್ಗರಿಸಿ ಕ್ರಮದಂತೆ ಸಮಾರಂಭ ನಡೆದ ಪಿಂದು ಸಮಾಧಾನದಿಂದ ನುಡಿದರು. ಮಾಲ್ಯಾರ್ಪಣ ಸಮಾರಂಭ ಮುಗಿಸಿ ಮಹಾತ್ಮರು ಸ್ವಸ್ಥಾನಕ್ಕೆ ತೆರಳಿದರು. ಮಹಾತ್ಮರ ಜೊತೆಗಿದ್ದವರೊಬ್ಬರು ಈ ಪ್ರಕರಣದ ಕಥೆಯನ್ನು ಬಹು ಚಿತ್ತಾಕರ್ಷಕವಾಗಿ ವರ್ಣಿಸಿದ್ದಾರೆ. "ಇದೊಂದು ಅದ್ಭುತವಾದ ಚಮತ್ಕಾರವು! ದೇವರ ಲೀಲೆ ಯಾರಿಗೂ ತಿಳಿಯದು! ಅದು ಇಂದ್ರಜಾಲದಂತೆ ಘಟಿಸಿತು!! ಮಹಾತ್ಮರ ಮೇಲೆ ಬಾಂಬು ಹಾರಿಸುವ ವ್ಯವಸ್ಥೆ ಸಂಪೂರ್ಣವಾಗಿದ್ದಿತು. ಇದರೊಳಗಿಂದ ಮಹಾತ್ಮರು ಪಾರಾದದ್ದೇ ಚಮತ್ಕಾರವು! ಆಕಸ್ಮಿಕವಾಗಿ ಬಾಪೂಜಿಯವರು ಹಿಂದಾದರು, ಮುಂದಿನ ಮೋಟಾರು ಬಂಡಿಯು ಆ ಸಮಯ ಹೆಬ್ಬಾಗಿಲಿಗೆ ಹೋಗಿ ತಲ್ಪಿತು. ಬಾಪೂಜಿಯವರು ಒಂದರಂತೆ ದೃಶ್ಯವಾಯಿತು; ಬಾಂಬು ಹಾರಿಸುವವನು ರಕ್ತ್ರಸಿನ ಆಗಮನವಾಯಿತೆಂದು ಭಾವಿಸಿದನು, ಅನಾವಶ್ಯಕವಾಗಿ ಅವನು ತನ್ನ ಕೆಲಸ ಮಾಡಿದನು. ಬಾಪೂಜಿಗೆ ಒರೆಲು ೭ ನಿಮಿಷ ತಡವಾಯಿತು. ನಡೆದ ವೃತ್ತಾಂತವನ್ನು ಅವರಿಗೆ ಕೇಳಿಸಲು, ತಮಗಾಗಿ ಪರರಿಗೆ ಕಷ್ಟವಾದ ಬಗ್ಗೆ ಅವರ ಹೃದಯ ಮಿಡುಕಿತು. ಇಷ್ಟೇ ಹೊರತು ಅವರ ಶಾಂತಿಯ ಸ್ವಭಾವದಲ್ಲಿ ಬದಲಾಗಲಿಲ್ಲ. ಅವರಿಗೆ ಇದೇನು ದೊಡ್ಡ ಮಾತಲ್ಲ. ಇಂಥ ಪ್ರಸಂಗ-ವನ್ನು ಅವರು ಮುಂದಾಗಿ ಎಣಿಸಿ ಬಿಟ್ಟಿದ್ದಾರೆ. ಅವರು ಮರಣಕ್ಕೆ ಹೆದರರು, ಬದುಕಿಗೆ ಉಬ್ಬರು. ಅವರು ಹಾತೊರೆಯುವದೂ ಇಲ್ಲ." ಮಹಾತ್ಮರ ನಿಕಟವರ್ತಿ ಜೊತೆಗಾರರ ಅಭಿಪ್ರಾಯವಿದು! ಸಂಕಟದೊಳಗಿಂದ ಪಾರಾದ ಬಗ್ಗೆ ಮಹಾತ್ಮರಿಗೆ ಎಲ್ಲರೂ ಹರಸುತ್ತಾರೆ. ಪಂಡಿತ ಮದನಮೋಹನ ಮಾಲವೀಯ, ಜಮನಾದಾಸ ಮೆಹತಾ(?), ಸೌ| ಸರೋಜಿನಿ ನಾಯುಡು, ಸರ್ ಪುರುಷೋತ್ತಮದಾಸ ಠಾಕುರದಾಸ, ರಾ| ಸತ್ಯಮೂರ್ತಿ, ರಾ| ಭಕ್ತವತ್ಸಲಂ, ರಾ| ಮುತ್ತುರಂಗ ಮುದಲಿಯಾರ, ರಾವಬಹಾದ್ದೂರ ರಾಮಶರಣದಾಸ (ಪಂಜಾಬದ ಸನಾತನ ಧರ್ಮ ಪ್ರತಿನಿಧಿ ಸಭೆಯ ಅಧ್ಯಕ್ಷ) ಮೊದಲಾದವರು ಮಹಾತ್ಮರಿಗೆ ಅಭಿನಂದಿಸಿ ಸನಾತನಿಗಳ ದುಷ್ಕೃತ್ಯವನ್ನು ಕಡುತರವಾಗಿ ನಿಷೇಧಿಸುತ್ತಾರೆ. "ಮಹಾತ್ಮರು ಪಾರಾದರು, ಅವರ ಜೊತೆಗೆ ದೇವರು ಹಿಂದು ಧರ್ಮವನ್ನು ಪಾರು ಮಾಡಿದನು." ಹೀಗೆ ಸಹ ಪ್ರಮುಖರ ಅಂಬೋಣ. "ಈ ಅತ್ಯಾಚಾರದಿಂದ ಹರಿಜನ ಕಾರ್ಯಕ್ಕೆ ಕಳೆಯೇರುವದು; ಕಳೆಗುಂದದು" ಹೀಗೆ ಮಹಾತ್ಮರು ಉದ್ಗರಿಸಿದ್ದಾರೆ.

ಮುಂಬಯಿಯೊಳಗೆ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳ ಕಡೆ ಹೇಳಿದ ಮಾತುಗಳನ್ನು ಎಲ್ಲರೂ ಅಂತಃಕರಣದಲ್ಲಿ ಕೊರೆದಿಡತಕ್ಕದ್ದು. ಮಹಾತ್ಮರು ನುಡಿದದ್ದೇನಂದರೆ.— "ನನ್ನ ಪ್ರಾಣವು ಸಂಪೂರ್ಣವಾಗಿ ದೇವರ ಸ್ವಾಧೀನವಿದೆ. ದೇವರು ಸರ್ವಸಾಮರ್ಥ್ಯವಂತನೆಂದು ನನ್ನ ಶ್ರದ್ಧೆ. ಆತನ ಕಾರ್ಯಕ್ಕಾಗಿ, ಆತನಿಗೆ ಈ ದೇಹ ಬೇಕಾಗುವ ತನಕ ಆತನು ಅದನ್ನು ಸಮಸ್ತ ಸಂಕಟದೊಳಗಿಂದ ನಿಃಸಂದೇಹವಾಗಿ ರಕ್ಷಿಸುವನು. ಆತನ ಕಾರ್ಯಕ್ಕೆ ಈ ದೇಹ ಬೇಡಾದ ಬಳಿಕ, ಭೂಮಂಡಲದೊಳಗಿನ ಯಾವತ್ತು ರಕ್ಷಕ ಸಾಮರ್ಥ್ಯಗಳನ್ನು ಒಟ್ಟುಗೂಡಿಸಿದಾಗ್ಯೂ ಅದರಿಂದ ಏನಷ್ಟೂ ಪ್ರಯೋಜನ ಆಗದು." ಮಹಾತ್ಮರು ಎಂದಿನಂತೆ ನಗನಗುತ್ತ ಮಾತಾಡುತ್ತಿದ್ದರು. ಮಹಾತ್ಮರು ಈ ಕುರಿತು ಹೊರಡಿಸಿದ ಪ್ರಕಟಣೆಯೇನಂದರೆ — "ನಾನು ಅನೇಕ ಪ್ರಾಣಸಂಕಟದೊಳಗಿಂದ ಪಾರಾಗಿದ್ದೇನೆ. ಇದರಿಂದ ಈಗ ನನಗೇನು ಆಶ್ಚರ್ಯವೆನಿಸದು. ಯಾರಿಗೂ ಪ್ರಾಣಹಾನಿಯಾಗಲಿಲ್ಲೆಂದು ನಾನು ದೇವರ ಉಪಕಾರ ನೆನಿಸುತ್ತೇನೆ. ಗಾಯಪಟ್ಟವರಲ್ಲಿರೂ ಶೀಘ್ರವೇ ವಾಸಿಯಾಗಬೇಕೆಂದು ನನ್ನ ಬಯಕೆ. ಈ ಹೊತ್ತು ನಡಿಸಿದ ಹುಚ್ಚುತನವನ್ನು ವಿಚಾರವಂತ ಸನಾತನಿಗಳು ಎಂದಿಗೂ ಮನ್ನಿಸರು. ಇದಂತು ಖಂಡಿತ ಮಾತು. ಸನಾತನಿಗಳು ತಮ್ಮ ವಿರೋಧ ಧೋರಣೆಯನ್ನೂ, ಭಾಷಣಗಳನ್ನೂ ಸುಧಾರಿಸಿಕೊಳ್ಳಬೇಕು. ಈ ಶೋಕಪ್ರದ ಘಟನೆಯಿಂದ ಹರಿಜನ ಕಾರ್ಯಕ್ಕೆ ನಿಃಸಂದೇಹವಾಗಿ ಬೆಂಬಲ ಸಿಕ್ಕಿದೆ. ಕಾರ್ಯಪುರಸ್ಕರ್ತರ ಪ್ರಾಣಾಹುತಿಯಿಂದ ಕಾರ್ಯದ ಅಭಿವೃದ್ಧಿಯಾಗುತ್ತದಾಗಿ ಎಲ್ಲರೂ ತಿಳಿದ ಮಾತು. ಪ್ರಾಣಾಹುತಿ ಕೊಟ್ಟು ಜಗತ್ಪ್ರಸಿದ್ಧಿ ಪಡೆಯಲು ನಾನು ಹವಣಿಸುವದಿಲ್ಲ, ಕೋಟ್ಯಾವಧಿ ಹಿಂದುಗಳ ನನ್ನ ಧರ್ಮರಕ್ಷಣೆಗಾಗಿ ಕರ್ತವ್ಯ ಮಾಡುವಲ್ಲಿ ನನ್ನ ಪ್ರಾಣಪ್ರೇಮವೇ ಅಡ್ಡ ಬರುತ್ತಿದ್ದರೆ ಅದನ್ನು ತ್ಯಜಿಸಲು ನಾನು ಸಂತೋಷದಿಂದ ಸಿದ್ಧನಿದ್ದೇನೆ. ಹರಿಜನರ ಸಾಕ್ಷಿಯಾಗಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು, ಅವಶ್ಯ ಬಿದ್ದಲ್ಲಿ ಪ್ರಾಣವನ್ನೇ ಅರ್ಪಿಸುವೆನಾಗಿ ನಾನು ಮಾಡಿದ ಪ್ರತಿಜ್ಞೆಯು ಕೇವಲ ನಿಜವಾದದ್ದೆಂದು ಇತಿಹಾಸಕಾರರು ಮುಂದೆ ಹೇಳುವರು. ನಾನು ಬದುಕಿ ಉಳಿದದ್ದು ನೋಡಿ ಗಾಬರಿಗೊಂಡವರಿಗೆ ನಾನೊಂದು ಮಾತು ಹೇಳುತ್ತೇನೆ. "ನನ್ನ ಶರೀರ ನಾಶ ಮಾಡುವದು ತೀರ ಸುಲಭವಾದ ಮಾತು. ನನ್ನಂಥ ಪಾಪಿಯನ್ನು ನಾಶ ಮಾಡುವದಕ್ಕಾಗಿ ಅನೇಕ ನಿರಪರಾಧಿ ಜನರಿಗೆ ಸಂಕಟದಲ್ಲಿ ತಳ್ಳುವದೇಕೆ? ಬಾಂಬು ನನ್ನ ಮೇಲೂ ನನ್ನ ಪರಿವಾರದವರ ಮೇಲೂ ಬಿದ್ದಲ್ಲಿ-ನನ್ನ-ಬಗ್ಗೆ-ಜಗತ್ತು ಏನನ್ನುತ್ತಿತ್ತು? ನನ್ನೊಡನೆ ಹೆಂಡತಿಯಿದ್ದಳು, ಮೂವ ಹುಡುಗಿಯರಿದ್ದರು. ಹುಡುಗಿಯರು ನನಗೆ ಮಗಳಂದಿರಂತೆಯೇ. ಅವರ ತಾಯಿ-ತಂದೆಗಳು ಅವರನ್ನು ವಿಶ್ವಾಸದಿಂದ ನನಗೊಪ್ಪಿಸಿದ್ದಾರೆ. ಬಾಂಬು ಎಸೆದವನು ಅವರಿಗೆ ನಾಶ ಪಡಿಸಲು ಇಚ್ಛಿಸಿದ್ದನೆಂದು ನನಗ ತೋರದು. ಅಜ್ಞಾತ ಬಾಂಬು ಎಸದವನ ಬಗ್ಗೆ ನನಗೆ ದಯೆ ಹುಟ್ಟುತ್ತದೆ. ನನ್ನ ಮಾತೇ ನಡಿಯುತ್ತಿದ್ದರೆ, ಬಾಂಬು ಎಸದವನ ಪತ್ತೆಯಾಗಿದ್ದರೆ ಆತನಿಗೆ ಬಿಟ್ಟುಬಿಡಲು ನಾನು

ನಿಃಸಂದೇಹವಾಗಿ ಹುಟ್ಟುತ್ತಿದ್ದ. ದಕ್ಷಿಣ ಆಫ್ರಿಕೆಯಲ್ಲಿ ನನಗ ಒಳ್ಳೇ ಪೆಟ್ಟು ಕೊಟ್ಟವರಿಗೆ ನಾನು ಹೇಗೇ ಬಿಡಿಸಿದ್ದೆನೆ. ಸುಧಾರಕರು ಬಾಬು ಎಸ್ಸಿ ಮೇಲೆ ಪೆಟ್ಟು ಮಾಡಲಾಗದು, ಆತನ ಪ್ರೇರಕರ ಮೇಲೂ ಪೆಟ್ಟು ಮಾಡಬಾರದು. ಧರ್ಮಘಾತಕವಾದ ಅಸ್ಪೃಶ್ಯತೆಯ ಕಲಂಕವನ್ನು ಹೋಗಲಾಡಿಸಲು ಇಷ್ಟು ಪ್ರಯತ್ನ ಮಾಡುವ ಕು " 'ನಾನು ಮಹಾತ್ಮನೆಂದು ಅವರ ಕಾರ್ಯೋಜನೆಯಿದ್ದರೆ, ಅವರು ನನ್ನನ್ನು ಜನಸಂದಣಿಯೊಳಗಿಂದ ಪ್ರತ್ಯೇಕಿಸಿ ಕೊಲ್ಲಬಹುದಿತ್ತು, ಅಲ್ಲದೆ ನಿರಪರಾಧಿಗಳಿಗೆ ಕಷ್ಟ ಕೊಡಬಾರದಿತ್ತು." ಹೀಗೆ ನುಡಿದರು ಮಹಾತ್ಮರು. ಇನ್ನೊಂದು ಪ್ರಕಟನೆಯಲ್ಲಿ ಪ್ರಕಟಿಸಿದ್ದಾರೆ. ಮುಂಬಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ನಡೆದ ಚರ್ಚೆಯಲ್ಲಿ ಈ ವಿಷಯ ನುಡಿದ ಕೆಲ ಮಾತುಗಳು ವಿಚಾರಾರ್ಹವಿವೆ. ಸನಾತನಿಯೆಂದು ಬಂದವರು ನನ್ನ ಮೇಲೆ ಅತ್ಯಾಚಾರ ಮಾಡಲು ಯತ್ನಿಸಿದನೆಂದು ಸನಾತನ ಸಮಾಜವೇ ಅತ್ಯಾಚಾರ ಪ್ರವೃತ್ತಿಯದೆಂದು ನಾನು ಹೇಳುವದಿಲ್ಲ. ನನ್ನ ಮೇಲೆ ಬಲಾತ್ಕಾರ ಮಾಡಿ ವಿರೋಧಿಸುವಷ್ಟು ಸನಾತನಿಗಳು ಸಂಘಟಿತರಾಗಿಲ್ಲ. ಪ್ರತಿ ... ಕಡೆಗಳಲ್ಲಿ ನಡೆಯುವ ಚಳವಳಿಗಳ ಮೂಲಕ ಕೆಲ ಭಾವನೆಯು ಎಳೆ ಹುಡುಗರ ತಲೆತಿರುಗಿದೆ. ೧೮೯೭ನೇ ಇಸ್ವಿಯಲ್ಲಿ ನಾನು ದಕ್ಷಿಣ ಆಫ್ರಿಕೆಯಿಂದ ಹಿಂದುಸ್ಥಾನಕ್ಕೆ ತಿರುಗಿಬಂದೆ. ಯಾವದೇ ಕಾರ್ಯದ ನೆವದಿಂದಿರಲಿ, ಬಾಂಬು ಈ ದೇಶದಲ್ಲಿ ಬೇರೂರಿಕೊಂಡರೆ ಅದರ ಉಪಯೋಗವು ಇಲ್ಲ ನಿಶ್ಚಿತವಾಗಿ ನಾನು ಭವಿಷ್ಯ ಮಾಡಿದ್ದ. ಆ ಭವಿಷ್ಯವು ಅನೇಕಾವರ್ತಿ ನಿಜವಾಗಿದೆ. ವಿಚಾರದಿಂದಾಗಲಿ, ವಚನದಿಂದಾಗಲಿ ನಾವು ಹಿಂಸೆಯನ್ನು ಅಂಗೀಕರಿಸಿದರ ಅದು ಒಂದಿಲ್ಲೊಂದು ದಿನ ಆಚಾರದಲ್ಲಿ ಪರಿಣಮಿಸದೆ ಉಳಿಯದು. ಸತ್ಕಾರ್ಯದಲ್ಲಿಯೂ ಆ ಪ್ರವೃತ್ತಿ ನಿಯಂತ್ರಿತವಾಗುವದೆಂದು ತಿಳಿಯಕೂಡದು. ಸಾಧ್ಯದ ಮೇಲಿಂದ ಸಾಧನದ ಯೋಗ್ಯಾಯೋಗ್ಯತೆಯನ್ನು ನಿರ್ಣಯಿಸ ಕೂಡದು. ಸತ್ಕಾರ್ಯಸಾಧ್ಯ ಮಾಡಲು ಸತ್ಸಾಧನ ಬೇಕು. ಎಷ್ಟು ಬಲಾತ್ಕಾರ ಮಾಡಿದಾಗ್ಯೂ ನನ್ನ ಬದಿಗೆ ತೋರಿದ ಸತ್ಕಾರ್ಯ ನಾನೆಷ್ಟಕ್ಕೂ ತ್ಯಜಿಸಲಾರೆ. ಇತಿಹಾಸದಲ್ಲಿ ನಮೂದಿದ್ದ, ಈ ಹಿಂದೆ ಇಂಥ ಕಾರ್ಯಗಳಲ್ಲಿ ಘಟಿಸಿದ್ದ ಸಂಗತಿಗಳೇ ಅಸ್ಪೃಶ್ಯತಾ ನಿವಾರಣೆ ಕಾರ್ಯದಲ್ಲಿ ಘಟಿಸುತ್ತಿವೆ. ಸುಧಾರಕನು ತನ್ನ ಪ್ರಾಣವನ್ನು ಗಂಡಾಂತರದಲ್ಲಿ ಹಾಕದ ಹೊರತು ದೊಡ್ಡ ಸುಧಾರಣಾ ಕಾರ್ಯವು ಲೋಕದಲ್ಲಿ ನಡೆಯಲೇ ಇಲ್ಲ. ಅಸ್ಪೃಶ್ಯತೆಯ ರಾಕ್ಷಸನು ನನ್ನ ಪ್ರಾಣವನ್ನೊಂದು ಕೊಂಡು ಸಮಾಧಾನ ಹೊಂದುವನಾದರೆ, ಇದೇನು ದೊಡ್ಡ ತ್ಯಾಗವಲ್ಲ. ಧರ್ಮದ ಹೆಸರಿನಿಂದ ನಡೆದು ಬಂದ ಅಧರ್ಮವನ್ನು ಪರಿಹರಿಸಲೋಸುಗ ತಕ್ಕ ತ್ಯಾಗ ಮಾಡಲೇಬೇಕಾಗಿದೆ." ಮಹಾತ್ಮರು ಈ ಪ್ರಕಾರ ಅತ್ಯಾಚಾರದ ಅರ್ಥ ಮಾಡಿ ತಮ್ಮ ಕಾರ್ಯಕ್ಕೆ ತೊಡಗಿದ್ದಾರೆ. ದೇಶಬಾಂಧವರೂ, ಪ್ರಮುಖ್ಯವಾಗಿ ಹಿಂದು ಧರ್ಮಾಭಿಮಾನಿಗಳೂ ಇವರ ಮೇಲಿಂದ ತಕ್ಕ ಬೋಧ ಪಡೆಯಬೇಕು

*

ಮಹಾತ್ಮರು ಈಗ ಬಿಡಾರು ಮಾಡಿದ ಸಾಬರಮತಿ ಆಶ್ರಮದೊಳಗಿನ ಸ್ಥಿತ್ಯಂತರವನ್ನು ಒಬ್ಬರು ಬಣ್ಣಿಸಿದ್ದಾರೆ. ಅದು ಕೌತುಕವಂಥಾದ್ದಿದೆ.– "ಇದು ಮುಂಚೆ ವೀರರ ನಿವಾಸಸ್ಥಾನವಾಗಿದ್ದಿತು. ರಾಷ್ಟ್ರದಲ್ಲಿ ನಿಷ್ಠೆಯಿಂದಲೂ, ವಿರಕ್ತಿಯಿಂದಲೂ ಕಾರ್ಯ ಮಾಡುವ ಕಾರ್ಯಕರ್ತರು ಇಲ್ಲಿ ತಯಾರಾಗುತ್ತಿದ್ದರು. ಈಗ ಇದು ಕಷ್ಟಕ್ಕೀಡಾದವರ ಮನೆಯಾಗಿದೆ. ಇದರ ಮುಂಚಿನ ಹೆಸರು 'ಸತ್ಯಾಗ್ರಹಾಶ್ರಮ,' ಈಗ ಇದಕ್ಕೆ 'ಹರಿಜನಾಶ್ರಮ' ನನ್ನುತ್ತಾರೆ. ನಾನು ಕಳೆದ ಆಗಸ್ಟ್ ಒಂದನೇ ತಾರೀಖಿಗೆ ಇಲ್ಲಿ ಬಂದಿದ್ದೆ. ಕಟ್ಟಡಗಳು ಆಗಿನವೇ, ಕೋಣೆಗಳು ಆಗಿನವೇ; ಎಲ್ಲವೂ ಮೊದಲಿನವೇ. ಆದರೆ ಮುಂಚಿನ ಪ್ರಾಣ ಒಂದಿಲ್ಲ! ದಿಗಂತ ಕೀರ್ತಿ ಪಡೆದ ಇಂಥಾ ಸುಪ್ರಸಿದ್ಧ ಸತ್ಯಾಗ್ರಹಾಶ್ರಮವು ಹರಿಜನರ ಸಣ್ಣ ಮನೆಯಾಗಿದೆ. ಸ್ಪೃಶ್ಯ ಬಾಂಧವರಂತೆಯೇ ನಾಗರಿಕರಾಗಲು ಹರಿಜನರು ಇಲ್ಲಿ ಬಂದು ಶಿಕ್ಷಣ ಪಡೆಯುತ್ತಿದ್ದಾರೆ. ಹರಿಜನಸೇವಕ ಸಂಘದ ಕಾರ್ಯಕರ್ತರಾದ ರಾ| ಪರೀಕ್ಷಿತಲಾಲ ಮಜುಮುದಾರರವರು ನನಗೆ ಇಡೀ ಆಶ್ರಮವನ್ನು ತೋರಿಸಿದರು. ಆಶ್ರಮವಾಸಿಗಳಿಗಾಗಿ ಒಡಗಯ ಕೆಲಸ ನಡೆಯುವ ದೊಡ್ಡ ಕಾರಖಾನೆಯಿದ್ದಲ್ಲಿ ಈಗ ಸಣ್ಣ ಚರ್ಮದ ಕಾರಖಾನೆಯಿದೆ. ಇದರ ಕೆಲಸದಲ್ಲಿ ನುರಿತವರಾದ್ಯರು ಹರಿಜನ ಹುಡುಗರಿಗೆ ಮೆಟ್ಟು, ಪಾದ್ಯ ಮೊದಲಾದವುಗಳನ್ನು ತಯಾರಿಸುವ ಶಿಕ್ಷಣ ಕೊಡುತ್ತಾರೆ. ಇಲ್ಲಿ ೧೫ ಜನ ಹುಡುಗರಿದ್ದಾರೆ. ಹದಮಾಡಿದ ಚರ್ಮ ಮಾತ್ರ ಕೊಂಡು ತಂದು ಇಲ್ಲಿ ಚರ್ಮದ ಯಾವತ್ತೂ ವಸ್ತುಗಳನ್ನು ತಯಾರಿಸುತ್ತಾರೆ. ೨ ತಿಂಗಳ ಶಿಕ್ಷಣ ಕ್ರಮವಿದೆ. ಶಿಕ್ಷಣ ಮುಗಿಸಿ ಹುಡುಗರು ತಮ್ಮ ತಮ್ಮ ಹಳ್ಳಿಗೆ ಹೋಗಿ ಜೀವನ ಮಾಡುತ್ತಾರೆ. ಈ ಕಾರಖಾನೆಗೆ ಕೈಯಿಂದ ಖರ್ಚು ಬೀಳುವದಿಲ್ಲ, ಆದಾಯ–ವೆಚ್ಚಗಳು ಬರಾಯಿಗಾಗುತ್ತವೆ. ಇದಕ್ಕೆ ತಾಗಿ ಹೊಲಿಗೆಯ ಶಾಲೆಯಿದೆ. ಇಲ್ಲಿ ೬ ಯಾ ೯ ತಿಂಗಳ ತನಕ ಶಿಕ್ಷಣ ಪಡೆಯಬೇಕು. ೬ ಹರಿಜನ ಹುಡುಗರು ಹೊಲಿಗೆಯ ಕೆಲಸ ಕಲಿಯುತ್ತಾರೆ. ಇದಕ್ಕೆ ತಾಗಿ ಆಶ್ರಮದಲ್ಲಿ ಬರುವ ಅತಿಥಿಗಳಿಗೆ ಉಪಕಾರ್ಯದ ವ್ಯವಸ್ಥೆಯಿತ್ತು. ಆ ಕೋಣೆಯಲ್ಲೀಗ ಚರ್ಮದ ವಸ್ತುಗಳ ಅಂಗಡಿಯಿದೆ. ತರತರದ ವಸ್ತುಗಳು ಕಾಣುತ್ತವೆ – ಮೊಂಗ್ಯ ಪಟ್ಟಿ, ಸೊಂಟಪಟ್ಟಿ, ಪಾಕೀಟು, ಕೈಚೀಲ ಇವೇ ಮೊದಲಾದವುಗಳು. ಇವನ್ನೆಲ್ಲ ಹರಿಜನ ಹುಡುಗರೇ ತಯಾರಿಸಿದ್ದು. ಕಸಬುದಾರ ಚಮಗಾರರು ಇವನ್ನು ಮಾಡಿರುವಂತೆ ಭಾಸವಾಗುತ್ತಿತ್ತು. ಆದರೆ, ಚರ್ಮವು ಅಷ್ಟು ಮೆತ್ತಗಾಗಿರಲಿಲ್ಲ. ಇದನ್ನು ರಾ| ಮುಝುಮುದಾರರು ಗ್ರಹಿಸಿ ಹೇಳಿದ್ದೇನಂದರೆ – "ಈ ಕೊರತೆ ಹೋಗಲಾಡಿಸಬಹುದು. ಸತ್ತ ದನಗಳ ಚರ್ಮದಿಂದ ತಯಾರಿಸಿದ ಚರ್ಮ ಇದಕ್ಕೂ ಮೆತ್ತಗಾಗದ, ಕೊಲೆಮಾಡಿದ ದನಗಳ ಚರ್ಮ ಮಾತ್ರ ಮೃದುವಾಗುತ್ತದೆ." ಚರ್ಮದ ತಜ್ಞರು ಸಹ ಹೀಗೆಯೇ ಅಭಿಪ್ರಾಯಪಡುತ್ತಾರೆ. ಈ ಅಂಗಡಿಯನ್ನು ನವಸಾರಿಯ ಮೋಲ್ವಾಜಿಯವರೊಬ್ಬರು ನಡೆಸುತ್ತಾರೆ. ಆಲ್ಮೋರಾ, ರಂಗೂನ ಮೊದಲಾದ ದೂರದೂರ ಪ್ರದೇಶಗಳಿಂದ ಸಹ ಈ ಸರಕಿಗೆ ಆರ್ಡರು ಬರುತ್ತದಾಗಿ ಅಂಗಡಿಕಾರರು ಹೇಳಿದರು. ಆ ಮೇಲೆ ನಾವು ಮಹಾತ್ಮರು ಉಳಿಯುವ ಕೋಣೆಗೆ ಬಂದೆವು. ಇದರೊಳಗಿನ ಅವಸ್ಥಾಂತರ ನೋಡಿ ನಾನು ಚಕಿತನಾದೆ. ಭಯಂಕರವಾದ ರಾಜಕೀಯ ಚರ್ಚೆ ನಡೆದ ರಣರಂಗವಿದು. ಭಾರತೀಯ ಲೋಕನಾಯಕರು ಸಾಬರಮತಿಯೊಳಗಿನ ಮಹನೀಯರ ಅಧಿಪತ್ಯದಲ್ಲಿ ದೇಶೋದ್ಧಾರಕ್ಕಾಗಿ ಕೈಕೊಂಡ ಯೋಜನೆಗಳ ಜನ್ಮಸ್ಥಾನವಿದು! ಈಗ ಹರಿಜನ ಹುಡುಗಿಯರ ವಸತಿಸ್ಥಾನವಾಗಿದೆ. ೭ರಿಂದ ೧೬ ವರ್ಷ ಪ್ರಾಯದ ೧೩ ಮಂದಿ ಹುಡುಗಿಯರು ಇಲ್ಲಿ ಉಳಿಯುತ್ತಾರೆ. ಅವರಿಗೆ ಪ್ರಾಥಮಿಕ ಶಿಕ್ಷಣ, ನೂಲುವದು, ಹೊಲಿಗೆ, ಆರೋಗ್ಯಪಾಲನೆ ಮೊದಲಾದವು ಕಲಿಸಲಾಗುತ್ತವೆ. ಈ ಹುಡುಗಿಯರು ಹರಿಜನರೆಂದು ಯಾರೂ ಹೇಳರು. ಅಷ್ಟು ಅವರ ಉಡಿಗೆ-ತೊಡಿಗೆಗಳೂ, ನಡೆ-ನುಡಿಗಳೂ ಪರಿಶುದ್ಧವಾಗಿವೆ. ಡಾ| ಸ್ಟೀಗಲ್ ಮೊದಲಾದ ೨-೩ ಮಂದಿ ಸ್ತ್ರೀಯರೂ ಈ ಹುಡುಗಿಯರ ಮೇಲ್ವಿಚಾರಕರು. ಬುಕ್‌ಬೈಂಡಿಂಗ ... ಕಲಿಸಲಿಕ್ಕಾಗಿ ಇನ್ನೊಂದು ಕೋಣೆಯಲ್ಲಿ ವ್ಯವಸ್ಥೆಯಿದೆ. ಮುಂಚೆ ಶಿಕ್ಷಕರ ವಿದ್ಯಾರ್ಥಿಗಳಲ್ಲಿ ಈಗ ನೇಕಾರರಿದ್ದಾರೆ. ಆಶ್ರಮದ ದೊಡ್ಡ ಅಡಿಗೆಯ ಕೋಣೆಯಲ್ಲಿ ಈಗ ಒಬ್ಬರೂ ಇಲ್ಲ, ವಿಶಾಲವಾದ ಭೋಜನಗೃಹವು ಈಗ ಬರಿದಾಗಿದೆ. ಅದರ ಮುಂದಿನ ಪಟಾಂಗಣವು ಈಗ ಸ್ತಬ್ಧವಿದೆ. ಮಹಾತ್ಮರು ಈ ಪಟಾಂಗಣದಲ್ಲಿ ಅನೇಕಾವರ್ತಿ ಸಭೆ ಸೇರಿಸಿ ಮಾತನಾಡಿದ್ದಾರೆ. ಮುಂಚಿನಂತೆ ಈಗ ಇದ್ದದ್ದೊಂದು ದನದ ಕೊಟ್ಟಿಗೆ. ದನಗಳ ಸಂಖ್ಯೆ ಕಡಿಮೆಯಾದಾಗ್ಯೂ ಮುಂಚಿನಂತೆಯೇ ಈ ಕೊಟ್ಟಿಗೆಯು ಸ್ವಚ್ಛವಾಗಿ ಕಂಗೊಳಿಸುತ್ತಿದೆ. ಈ ಆಶ್ರಮದಲ್ಲಿ ಈಗ ೬೦ ಜನರಿದ್ದಾರೆ. ಇದೆಲ್ಲ ನೋಡಿ ಬಲು ಮನಸಂಕಟವಾಯಿತು. ಸತ್ಯಾಗ್ರಹಾಶ್ರಮದ ಕಲ್ಪನೆ ಒಂದು ನಾನು ಮಜುಮುದಾರರವರ ಕಡೆ ಸೂಚಿಸಿದ್ದಕ್ಕೆನಂದರೆ– "ಗಾಂಧಿಜಿಯವರು ತಯಾರಿಸಿದ 'ಚಿರಸ್ಮರಣೀಯ ಕೃತಿಯಿದು! ಇದನ್ನಾದರೂ ಅವರು ಕಾದಿಡಬಹುದಿತ್ತು. ಮುಂದಿನ ಪೀಳಿಗೆಯವರಿಗೆ ಇದರಿಂದ ಪ್ರೇರಣೆಯೂ, ಮಾರ್ಗದರ್ಶಕತ್ವವೂ ಸಿಗುತ್ತಿತ್ತು. ಆಶ್ರಮವನ್ನು ಬಿಡಿಸುವದರ ರಹಸ್ಯವೇನು?" ರಾ| ಮುಝುಮುದಾರರವರು ಗಂಭೀರರಾದರು. ನುಡಿದದ್ದೇನಂದರೆ — "ಬಾಪೂಜಿಯವರು ಮಾಡಬೇಕಾದದ್ದನ್ನೇ ಮಾಡಿರುತ್ತಾರೆ. ಮಹಾತ್ಮರು ಎಲ್ಲರಿಗೂ ತಮ್ಮ ಪ್ರೇಮದ ವಸ್ತುಗಳನ್ನು ತ್ಯಜಿಸಲು ಹೇಳುತ್ತಾರೆ. "ಒಕ್ಕಲಿಗರಿಗೆ ಭೂಮಿಯ ಮೇಲೆ ಭಾರವಿರಿಸಿ ಹೇಳುತ್ತಾರೆ. ಆಶ್ರಮವಾಸಿಗೆ ಸರ್ವಸ್ವವನ್ನು ತ್ಯಜಿಸ ಹೇಳುತ್ತಾರೆ. ತಾವು ಮಾತ್ರ ಅಮೂಲ್ಯ ವಸ್ತುಗಳನ್ನು ಇಟ್ಟುಕೊಳ್ಳುವ ಬಗೆ ಹೇಗೆ? ಇದರಿಂದ ಇದನ್ನೂ ತ್ಯಜಿಸಿದರು. ಬಾಪೂಜಿಯವರಿಗೆ ಪರಮ ಪ್ರಿಯವಾದ ಕಾರ್ಯಕ್ಕೆ ಈ ಮಂದಿರದ ಉಪಯೋಗವಾಗಬೇಕಾಗಿತ್ತಾಗಿ ಅವರ ಸಂಕಲ್ಪವಿತ್ತು." ನಾನು ಮರುಮಾತಾಡದೆ ಹಿಂತಿರುಗಿದೆ."

ರಾಷ್ಟ್ರೀಯ ಸಭೆಯ ತಯಾರಿ

ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯನ್ನು ಸೇರಿಸುವ ತಯಾರಿ ಭರದಿಂದ ಸಾಗಿದೆ. ರಾಷ್ಟ್ರೀಯ ಸಭೆಯು ಅಕ್ಟೋಬರ ತಿಂಗಳ ಕೊನೆಯ ವಾರದಲ್ಲಿ ಕೂಡುವದು. ಸ್ವಾಗತ ಸಮಿತಿಯ ಸಭಾಸದರನ್ನು ಕೂಡಿಸುವದಕ್ಕಾಗಿ ಸಮಿತಿಯವರು ಪ್ರಚಾರ ಮಾಡುತ್ತಿದ್ದಾರೆ. ಮುಂಬಯಿ ಪ್ರಾಂತಿಕ ಕಾಂಗ್ರೆಸ

(೧೦ನೇ ಪಾನಿನ ಮೇಲೆ ಮುಂದುವರಿಸಿದೆ)

ಸದ್ಯಸ್ಥಿತಿ.

[ನಿರೀಕ್ಷಕನು ಬರೆದುದು]

ಸದ್ಯಸ್ಥಿತಿಯೊಳಗಿನ ಮುಖ್ಯ ಸಂಗತಿಯನ್ನು ಮಾತ್ರವಾದಲು ವಿವರಿಸಬಯಸುತ್ತೇನೆ 'ಕಾಂಚನಂ ಕಾರ್ಯಸಿದ್ಧಿಃ' ಎಂಬಂತೆ ಕಾಂಚನವೇ ಸದ್ಯಸ್ಥಿತಿಯೊಳಗಿನ ಮುಖ್ಯವಾದ ವಿಷಯ ಮಹಾಯುದ್ಧದಲ್ಲಿ ತೆಗೆದ ಸಾಲಗಳನ್ನು ತೀರಿಸಲ್ಲಿ ಜರ್ಮನಿಯಿಂದ ಇಂಗ್ಲಂಡ ಮೊದಲಾದ ಮಿತ್ರರಾಷ್ಟ್ರಗಳಿಗೆ ನಷ್ಟಪರಿಹಾರ ಸಲ್ಲಬೇಕು, ಇಂಗ್ಲಂಡ ಮೊದಲಾದ ಮಿತ್ರರಾಷ್ಟ್ರಗಳಿಂದ ಅಮೇರಿಕೆಯವರಿಗೆ ಸಾಲ ಸಲ್ಲಬೇಕು. ಬ್ರಿಟಿಶರು ಪರಸ್ಪರ ವ್ಯವಹಾರದಲ್ಲಿ ನಿಪುಣರು. ಜರ್ಮನಿಯ ಋಣಿಗಳು, ಅಮೇರಿಕೆಯವರ ಸಾಲಿಗರು ಪರಸ್ಪರ ಹವಾಲೆ ಹಾಕಿ ಅವರು ಸಂಚರಿಸಬಯಸುತ್ತಾರೆ. ಅಮೇರಿಕೆಯವರು ಸಾಲ ಕೊಟ್ಟಿದ್ದು ಬ್ರಿಟಿಶರಿಗೆ, ಜರ್ಮನರಿಗಲ್ಲ. ಬ್ರಿಟಿಶರ ಸಾಲದ ... ಯಾವರ ... ಕೇಳುವರ ಸಲುವಾಗಿ ಬಾಧ್ಯತೆ ಇಟ್ಟು ... ತಮ್ಮ ಸಾಲ ತೀರಿಸಿದರಿ ಎಂಬ ... ಅಮೇರಿಕನ್ನರ ... ಯ ಜರ್ಮನ್ ಇಂಗ್ಲಂಡ ಮೊದಲಾದ ದೇಶಗಳ ಸ್ಥಿತಿಯನ್ನು ವಿಚಾರಿಸಿ ಒಬ್ಬ ... ಸಲ್ಲಿಸತಕ್ಕ ಸಾಲವನ್ನು ತೀರಿಸುವ ವ್ಯವಸ್ಥೆ ಮಾಡುವದಕ್ಕಾಗಿ ... ಎಲ್ಲರೂ ಕೂಡಿ ಅರ್ಥಶಾಸ್ತ್ರಜ್ಞರಾದ ... ಯಂಗರವರಿಗೆ ನೇಮಿಸಿದರು. ಅವರೊಂದು ಯೋಜನೆ ತಯಾರಿಸಿದರು ಆ ಯೋಜನೆಯಂತೆ ಇಂಗ್ಲಂಡ ಜರ್ಮನಿ ಮೊದಲಾದ ರಾಷ್ಟ್ರಗಳ ... ನಡೆಯಲಾಗಲಿಲ್ಲ. ಆದರಿಂದ ಪುನಃ ಆಲೋಚನೆ ... ಯಂಗರವರಿಗೆ ಎಲ್ಲರೂ ಕೂಡಿ ನೇಮಿಸಿದರು. ಅವರು ಸಾಲವನ್ನು ಹಪ್ತೆಬಂದಿಯಿಂದ ತೀರಿಸಬೇಕಾಗಿ ಗೊತ್ತುಪಡಿಸಿದರು. ಯಾವದೇ ಯೋಜನೆಯಿಂದ ದುಡ್ಡು ಹುಟ್ಟುವದಿಲ್ಲ. ಹುಟ್ಟಿ ಬಹುದಾದ ಹಣವನ್ನು ಹಂಚಿಹಾಕುವ ಕಲ್ಪನೆ ಮಾತ್ರ ಡಾ. ... ಯಂಗ ಯೋಜನೆಗಳಿಂದ ವಿಚಾರಿಸಲ್ಪಟ್ಟಿತು. ಜರ್ಮನಿಯವರು ತಮ್ಮಿಂದ ಹಣ ಕೊಡಲಾಗದೆಂದರು. ಹರ್ ಹಿಟ್ಲರರವರು ಈಗಿನ ಜರ್ಮನ್ ಸರಕಾರದ ಅಧಿಕಾರಿಗಳು ತಮ್ಮಿಂದ ಈ ಖಂಡಣೆ ಈಗಿನ ಯೋಜನೆಗಳಂತೆ ತೀರಿಸಲಿಕ್ಕೆ ಸಾಧ್ಯವಿಲ್ಲವಾಗಿ ಅವರು ಖಂಡಿತ ಹೇಳಿದರು 'ಜರ್ಮನಿಯ ಲ್ಲಿ ಹಣ ಹುಟ್ಟಿಸುವ ಯೋಜನೆಗಳನ್ನು ಕೈಕೊಳ್ಳಿರಿ, ಆ ಮೇಲೆ ಸಾಲ ತೀರಿಸಹೇಳಿರಿ, ಸಾಲ ಕೊಡಬಾರದೆಂದು ನನ್ನ ಅಂಬೋಣವಿಲ್ಲ ಹಣಾನುಕೂಲತೆ ಯಿಲ್ಲದೆ ಸಂಕಟವಾಗಿದೆ' ಹೀಗೆ ಹರ್ ಹಿಟ್ಲರರವರ ಅಂಬೋಣ. ಜರ್ಮನರು ತಣ್ಣಗೆ ಕೂತುಕೊಂಡ ಕಾರಣ ಬ್ರಿಟಿಶರಿಗೆ ಗೊಂದಲವಾಯಿತು ಕೆಂತು ... ವ್ಯಥೆ ಬಂತು. ಜೂನ ೧೫ನೇ ತಾರೀಖಿಗೆ ಬ್ರಿಟಿಶರು ... ಕೋಟಿ ಡಾಲರು ಅಂದರೆ ... ಕೋಟಿ ರೂಪಾಯಿಗಳ ಕಂತನ್ನು ಅಮೇರಿಕೆಯವರಿಗೆ ಸಲ್ಲಿಸಬೇಕಾಗಿತ್ತು. ಅದನ್ನು ಬ್ರಿಟಿಶರು ತೆರಲಿಲ್ಲ. ಆ ಕುರಿತು ಪತ್ರವ್ಯವಹಾರವು ನಡೆದಿದೆ. ಬ್ರಿಟಿಶರು ಸಾಲ ಕೊಡುವದಿಲ್ಲವಾಗಿ ಹೇಳುವದಿಲ್ಲ. ಈ ಕುರಿತು ಮತ್ತೆ ವಿಚಾರ ಮಾಡಬಯಸುತ್ತಾರೆ. ಜರ್ಮನಿಯಿಂದ ಸಾಲ ವಸೂಲು ಮಾಡಿ ಆ ಮೇಲೆ ಅಮೇರಿಕೆಗೆ ಸಾಲ ತೀರಿಸುವ ಹಂಚಿಕೆ ನಮದಾಗಿ ನನ್ನ ಹೇಳಿಕೆ.

ಜರ್ಮನರಿಗೂ, ಬ್ರಿಟಿಶರಿಗೂ ಲಂಡನಿನಲ್ಲಿ ಖಂಡಣಿ ವಸೂಲಿಯ ವಿಷಯ ಈಗೊಂದು ಚರ್ಚೆ ನಡೆದಿದೆ. ಇತ್ತಲೆಯವರಿಗೂ ಸ್ನೇಹಭಾವದಿಂದ ಚರ್ಚೆ ಜಾಯಿತಂತೆ. ಬ್ರಿಟಿಶ ದೇಶದಲ್ಲಿ ಜರ್ಮನ್ ಸರಕು ರಪ್ತು ಮಾಡಲು ಜರ್ಮನರು ಕೆಲ ಅನುಕೂಲತೆ ಕೇಳುತ್ತಾರೆ, ಸಾಲದ ಮೇಲಿನ ಬಡ್ಡಿಯ ದರ ಕುಗ್ಗಿಸಬೇಕಾಗಿಯೂ ಅವರ ಅಂಬೋಣವಿದೆ. ಇನ್ನೂ ಚರ್ಚೆ ನಡೆದದೆ. ಚರ್ಚೆ ಅಂತ್ಯವಾದ ವರ್ತೆ ಬಂದಿಲ್ಲ. ಆದರಿಂದ ಈ ಕುರಿತು ಇದೀಗಲೇ ನಾನು ಅಭಿಪ್ರಾಯ ಕೊಡಲಾರೆ. ಸ್ನೇಹಭಾವದ ಸಂಧಿ ಪ್ರಸ್ತಾಪವು ಮುರಿದು ಹೋದ್ದಲ್ಲಿ ಇಂಗ್ಲಂಡ ಜರ್ಮನಿ ದೇಶಗಳೊಳಗೆ ಸಹಜವಾಗಿ ವೈಮನಸ್ಸುಂಟಾಗುವ ಲಕ್ಷಣಗಳಿವೆ. ಸಮೋಪಚಾರದಿಂದ ಸಾಲವನ್ನು ಜರ್ಮನರು ವಸೂಲ ಕೊಡದಿದ್ದಲ್ಲಿ ಒತ್ತಾಯದಿಂದ ಅದನ್ನು ವಸೂಲ ಮಾಡುವ ಕಾಯಿದೆಯನ್ನು ಬ್ರಿಟಿಶ ಪಾರ್ಲಿಮೆಂಟು ಮಂಜೂರ ಮಾಡಿದೆ. ... ಡೆಟ್ ಕ್ಲಿಯರಿಂಗ್ ಆಫೀಸಸ್ ಮತ್ತು ಇಂಪ್ರೋವ್ಡ ರಿಸ್ಟ್ರಿಕ್ಶನ್ ರಿಪ್ಯಾಸಲ್ಸ ಎಕ್ಟ' ಎಂದು ಹೆಸರು ಇದರಿಂದ ಕೋಶಾಧಿಕಾರಿಗಳಿಗೆ ಪರದೇಶದಿಂದ ಸಲ್ಲುವ ಸಾಲವನ್ನು ವಸೂಲ ಮಾಡಿ ಕೊಳ್ಳುವ ಅಧಿಕಾರ ಕೊಡಲಾಗಿದೆ. ಪರದೇಶಸ್ಥರಿಗೆ ಸಲ್ಲುವ ರಕಮನ್ನು ಸಾಮ್ರಾಜ್ಯ ಸರಕಾರವ ಕೋಶದಲ್ಲಿ ಜಮಾ ಮಾಡಿಕೊಂಡು ಆ ದೇಶದವರಿಗೆ ಸಲ್ಲತಕ್ಕ ರಕಮನ್ನು ಸಲ್ಲಿಸದೆ ಇಡಲು ಈ ಕಾಯಿದೆ ಮಾಡಲಾಗಿದೆ. ಇದಲ್ಲದೆ, ಬ್ರಿಟಿಶ ಸರಕುಗಳ ... ರಕ್ಕೆ ಯಾವದೇ ಪ್ರಕಾರದ ಪ್ರತಿಬಂಧ ಮಾಡುವ ದೇಶಗಳ ಸರಕನ್ನು ಬ್ರಿಟಿಶ ದೇಶದಲ್ಲಿ ಪ್ರವೇಶಿಸದಂತೆ ಹುಕುಮು ಹೊರಡಿಸಲಿಕ್ಕೂ ವರ್ತಕ ಇಲಾಖೆಗೆ ಈ ಕಾಯಿದೆಯಿಂದ ಅಧಿಕಾರ ಕೊಡಲಾಗಿದೆ. ಈ ಕಾಯಿದೆಗೆ ಒಡೆಯರವರು ಗುರುವಾರ ತಾರೀಖಿಗೆ ಸಮ್ಮತಿ ಕೊಟ್ಟರು. ಈ ಕಾಯಿದೆಯಂತೆ ಜರ್ಮನ ಸರಕನ್ನು ತರಿಸುವ ಬ್ರಿಟಿಶ ದೇಶದೊಳಗಿನ ಬ್ರಿಟಿಶ ವ್ಯಾಪಾರಸ್ಥರ ಮೇಲೆ ಬ್ರಿಟಿಶ ಕೋಶಾಧಿಕಾರಿಗಳು ಹುಕುಮು ಹೊರಡಿಸಿ ಜರ್ಮನ್ ವ್ಯಾಪಾರಸ್ಥರಿಗೆ ಸಲ್ಲತಕ್ಕ ರಕಮನ್ನು ಜರ್ಮನ್ ಸರಕಾರದಿಂದ ಬ್ರಿಟಿಶ ಸರಕಾರಕ್ಕೆ ಸಲ್ಲತಕ್ಕ ಖಂಡಣಿಯ ರಕಮಿನಲ್ಲಿ ಜಮಾಮಾಡುವರು. ಈ ಪ್ರಕಾರಗಳಿಂದ ಇಂಗ್ಲಂಡ ಜರ್ಮನ್ ದೇಶಗಳೊಳಗಿನ ವ್ಯಾಪಾರವು ಒಮ್ಮೆಲೆ ಕಟ್ಟಾಗುವದು ಇಷ್ಟೇ ಅಲ್ಲ, ಯುರೋಪ ಖಂಡದೊಳಗಿನ ಯಾವತ್ತೂ ರಾಷ್ಟ್ರಗಳಲ್ಲಿ ವಿತುಷ್ಟ ಬೆಳೆಯುವಂತಿದೆ. ಜರ್ಮನಿ ಸರಕಾರದ ಪರವಾಗಿ ಡಾ| ... ರವರು ಇದೊಂದು ಉತ್ಪಾತವೆಂದು ಎಣಿಸಿ ಇದನ್ನು ಪರಿಹರಿಸಲು ಎಲ್ಲರೂ ಪ್ರಯತ್ನ ಮಾಡಬೇಕೆಂದು ಹೇಳುತ್ತಾರೆ. ಅವರ ಹೇಳಿಕೆಯೇನೆಂದರೆ "ಜರ್ಮನ್ ಸರಕಾರಕ್ಕೆ ಪಿರಾಕ ಮಾಡಬೇಡಿ, ಸಾಲದ ಭಾರವನ್ನು ಕುಗ್ಗಿಸಿರಿ, ಜರ್ಮನಿಯು ಕಡೆಯಿಂದ ಕಳಕೊಂಡ ವಸಾಹತುಗಳನ್ನು ತಿರುಗಿ ಕೊಡಿರಿ. ಜರ್ಮನಿಯ ಕೈಗಾರಿಕೆಗಳಿಗೆ ಉತ್ತೇಜನ ಕೊಡಿರಿ," ಹೀಗವರು ಹೇಳುತ್ತಾರೆ. ಸಾವುಕಾರ ರಾಷ್ಟ್ರಗಳಲ್ಲಿ ಸಹ ತಕ್ಕಮಟ್ಟಿಗೆ ಇದೇ ನಮೂನೆಯ ತೊಂದರೆ. ನಿರುದ್ಯೋಗಿ ಕೂಲಿಕಾರರಿಗೆ ತಕ್ಕ ಬುದ್ಧಿ ಮೆ ಸಂಗ್ರಹಿಸಲಾಗದೆ ಅಮೇರಿಕಾ-ಇಂಗ್ಲಂಡ ರಾಷ್ಟ್ರಗಳು ಬಳಲುತ್ತಿವೆ. ಜಗತ್ತಿನಲ್ಲಿ ಒಮ್ಮೆಲೇ ಉಂಟಾದ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ದಾರಿ ಕಾಣದ ಮುತ್ಸದ್ದಿಗಳು ಚಿಂತಾವಿಷ್ಟರಾಗಿರುವರು. ಸಾಲ ಪರಿಹರಿಸಿಕೊಳ್ಳಲು ಜರ್ಮನ್ ದೇಶದ ಅಭ್ಯುದಯ ಯೋಜನೆ ಮಾಡುವದಕ್ಕಿಂತ ಸಾಲ ಬಿಡುವದೇ ಲೇಸು. ಜರ್ಮನರು ಪ್ರತ್ಯಕ್ಷ ಬಾಯಿಯಿಂದ ಸಾಲ ಬಿಡಹೇಳದಿದ್ದಾಗ್ಯೂ ಅರ್ಥಮಾತ್ರ ಅಲ್ಲಿಗೇ ಬಂದು ಮುಟ್ಟುತ್ತದೆ. ಬ್ರಿಟಿಶರು ಸಾಲ ಬಿಡಲೊಲ್ಲರು. ಈಗ ಲಂಡನಿನಲ್ಲಿ ನಡೆದ ಸಂಧಿ ಪ್ರಸ್ತಾಪವು ನಿರರ್ಥಕವಾಗುವಲ್ಲಿ ಹೊಸ ಕಾಯಿದೆಯಂತೆ ಬಲಾತ್ಕಾರದಿಂದ ವಸೂಲಿಯ ಕ್ರಮಗಳು ನಡೆಯುವವು. ಇವುಗಳ ಪರಿಣಾಮ ಮಾತ್ರ ನಾ ಹೇಳಲಾರೆ.

ಜಿನೇವಾದಲ್ಲೀಗ ಶಸ್ತ್ರಸನ್ಯಾಸ ಪರಿಷತ್ತು ನಡೆದಿದೆ. ಈ ಪರಿಷತ್ತಿನಲ್ಲಿ ಫ್ರಾನ್ಸ, ರಶಿಯಾ, ಇಟಾಲಿ ಇಂಗ್ಲಂಡ, ಬೆಲ್ಜಿಯಮ್ ಪೋಲಂಡ, ಅಮೇರಿಕಾ, ತುರ್ಕಸ್ಥಾನ ಮೊದಲಾದ ರಾಷ್ಟ್ರಗಳು ಸೇರಿವೆ. ಜರ್ಮನರು ಈ ಪರಿಷತ್ತಿನಲ್ಲಿ ಸೇರಿಲ್ಲ. ಈ ಪರಿಷತ್ತಿನಲ್ಲಿ ಶಸ್ತ್ರಾಸ್ತ್ರಗಳ ಪರಿಮಾಣ ನಿಶ್ಚಯವಾಗತಕ್ಕದ್ದಿದೆ. ಪ್ರತಿಯೊಬ್ಬರು ತಮ್ಮ ತಮ್ಮ ಕಮರೆಯನ್ನೇ ಮುಂದೊಡ್ಡುತ್ತಿದ್ದಾರೆ. ಜರ್ಮನರಿಗೆ ಬಿಟ್ಟು ಶಸ್ತ್ರಾಸ್ತ್ರಗಳ ನಿರ್ಣಯ ಮಾಡಿ ನಿರರ್ಥಕವೆಂದು ಪರಿಷತ್ತಿನ ಅಭಿಪ್ರಾಯವಾಗಿದೆ. ಜರ್ಮನಿಗೂ, ಇಟಾಲಿಗೂ ಒಳ್ಳೇ ಸ್ನೇಹಭಾವ. ವೇನೀಸ ಪಟ್ಟಣದಲ್ಲಿ ಜರ್ಮನಿಯ ಸರ್ವಾಧಿಕಾರಿಯಾದ ಹರ್ ಹಿಟ್ಲರರವರಿಗೂ, ಇಟಾಲಿಯ ಸರ್ವಾಧಿಕಾರಿಗಳಾದ ಸಿನ್ಯೋರ ಮುಸೋಲಿನಿಯವರಿಗೂ ದೀರ್ಘ ಸಂಭಾಷಣವಾಗಿ ಇತ್ತಟ್ಟಿನಲ್ಲಿ ಸಂಧಿ ಕರಾರಾಗಿದೆ. ಜರ್ಮನ್ ರಾಷ್ಟ್ರಕ್ಕೆ ಸಮಸ್ತರಂತೆ ಅಧಿಕಾರಗಳು ದೊರೆತಲ್ಲಿ, ಜರ್ಮನ್ ರಾಷ್ಟ್ರವು ರಾಷ್ಟ್ರಸಂಘದಲ್ಲಿ ಸೇರಿ ಅಂತರ್ರಾಷ್ಟ್ರೀಯ ಯೋಜನೆಯಂತೆ ನಡಕೊಳ್ಳುವದಾಗಿ ಹರ್ ಹಿಟ್ಲರರು ಅಭಿವಚನ ಕೊಟ್ಟಿರುತ್ತಾರೆ. ಈ ಧೋರಣದಂತೆ ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ಇಟಾಲಿಯ ಪ್ರತಿನಿಧಿಗಳಾದ ಎಮ್. ... ರವರು ಜರ್ಮನಿಯ ವಕೀಲಿ ನಡಿಸಿದರು. ಇಂಗ್ಲಂಡ-ಫ್ರಾನ್ಸ ದೇಶಗಳ ತಮ್ಮ ಕಡೆ ಈಗಿದ್ದಷ್ಟು ನೌಕಾಬಲವನ್ನು ಕಾಪಾಡಲು ಯತ್ನಿಸುತ್ತಿವೆ. ಹವಾಯಿ ಬಲವು ... ಲವಾಗಲು ... ಶಸ್ತ್ರಸನ್ಯಾಸ ಪರಿಷತ್ತಿನ ಪ್ರಮುಖ ಪ್ರವರ್ತಕರು ನಡಿಸಲಿಕ್ಕೆ ಶಸ್ತ್ರಸಂಸಾರ ಬೆಳವಣಿಗೆಯ ವಾರ್ತೆ ಇದೀಗಲೇ ಹಬ್ಬಿದೆ. ಅದನ್ನು ಮುತ್ಸದ್ದಿಗಳು ನಿರಾಕರಿಸದಿದ್ದುದೊಂದು ವಿಶೇಷ! ಜಪಾನ ಸರಕಾರವು ಸೈನ್ಯಬಲವನ್ನು ಬೆಳೆಸಲು ವಾದಿಸುತ್ತಿದೆ. ರಾಜ್ಯವಿಸ್ತಾರ ಹೊಂದಿದ ಜವಾಬದಾರಿಗಳು ಮಿಗಿಲಾಗಿವೆ. ಅವಕ್ಕನುಸಾರವಾಗಿ ರಾಜ್ಯಭದ್ರತೆಯ ಕುರಿತು ಹೆಚ್ಚಿನ ಸೈನ್ಯಬಲ ಬೇಕು, ಈಗಿದ್ದಷ್ಟು ಸಾಲದು, ಎಂದು ಜಪಾನ ಸರಕಾರದ ಸಾಧನೆ. ಜರ್ಮನಿಯನ್ನು ರಾಷ್ಟ್ರಸಂಘದಲ್ಲಿಯಾ ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ಸೇರಿಕೊಳ್ಳಲು ಮತ್ಸರಗ್ರಸ್ತ ಫ್ರಾನ್ಸ ದೇಶವು ಒಪ್ಪುವದಿಲ್ಲ. ಹರ್ ಹಿಟ್ಲರರವರು ಸ್ವಾರ್ಥಕ್ಕಾಗಿ ಶಸ್ತ್ರಬಲ ಬೆಳೆಸಲು ಬಯಸುವಂತಿಲ್ಲ. ಯುರೋಪ ಖಂಡದ ಶಾಂತತೆಯ ಸಲುವಾಗಿ ಶಸ್ತ್ರಾಸ್ತ್ರಗಳನ್ನು ತಾವು ಸಂಗ್ರಹಿಸಬೇಕಾಗಿರುವದೆಂದು ಹರ್ ಹಿಟ್ಲರರವರು ನುಡಿಯುತ್ತಾರೆ.

ಜರ್ಮನಿಯ ನೆರೆಯಲ್ಲಿ ಫ್ರಾನ್ಸ್ ದೇಶವಿದ್ದ ಪ್ರಾಂತದ ಬಳಿ ಬೇಕಷ್ಟು ಸೈನ್ಯಬಲವಿದೆ, ಅಂಥ ಸಮಯದಲ್ಲಿ ಜರ್ಮನಿಯು ಶಸ್ತ್ರಸನ್ಯಾಸಿಯಾಗಿ ನಿರ್ಬಲವಾದರೆ ನೆರೆಹೊರೆಯೊಳಗಿನ ರಾಷ್ಟ್ರಗಳು ದಂಡೆತ್ತಿಕೊಂಡು ಬಂದು ಜರ್ಮನಿಯನ್ನು ಹಂಚಿಕೊಳ್ಳಬಹುದಲ್ಲವೆ? ಆದುದರಿಂದ ಜರ್ಮನಿಯು ಸಾಮರ್ಥ್ಯವಂತವಾಗಬೇಕಾಗಿದೆ. ಶಸ್ತ್ರಸಂಭಾರ ಮಾಡಲು ನಮಗೆ ಒಪ್ಪಿಗೆ ಕೊಡದಿದ್ದರೆ, ರಾಷ್ಟ್ರಸಂಘದಲ್ಲಿ ನಾವು ಇರಲಾರೆವು ಜರ್ಮನಿಯು ಕೂಗಿಕೊಂಡಿತು, ಜಪಾನ ದೇಶದ ಸ್ವಾರ್ಥ, ಇವೆರಡರ ಪರಿಣಾಮ ಒಂದೇ. ಶಸ್ತ್ರಾಸ್ತ್ರಗಳನ್ನು ತಗ್ಗಿಸಲು ಏರ್ಪಡಿಸಿದ ಸಭೆಯಲ್ಲಿ ಶಸ್ತ್ರಾಸ್ತ್ರಗಳನ್ನು ಬೆಳೆಸಲು ಅಪ್ಪಣೆ ಬೇಕು. ಲಂಡನಿನಲ್ಲಿ ಸೇರಿದ ನೌಕಾ ಪರಿಷತ್ತಿನ ಫಲಿತವಾದರೂ ಇಷ್ಟೇ. ಫ್ರೆಂಚ ದೇಶದವರಿಗೆ ಇಟಾಲಿ-ಜರ್ಮನಿಗಳಲ್ಲಿ ಕೂಡಿ ಇದ್ದಷ್ಟು ಹಡಗುಪಡೆಗಳನ್ನು ಬೆಳೆಸಲು ಬೇಕು, ಇಂಗ್ಲಂಡದೇಶಕ್ಕೆ ವ್ಯಾಪಾರಿಕ ದಳವನ್ನು ಬೆಳೆಸಲು ಬೇಕು. ಜಪಾನ ಹಡಗುಪಡೆಗಳ ಪ್ರಮಾಣ ನಿಯಂತ್ರಿಸುವ ವಿಚಾರ ನಡೆಯುತ್ತಿರುವಾಗಲೇ ಅಲ್ಲಲ್ಲಿಯ ಸರಕಾರಗಳು ಹಡಗುಪಡೆಗಳನ್ನು ಬೆಳೆಸುತ್ತಿವೆ. ಇಟಾಲಿಯವರು ತಮ್ಮ ಖರ್ಚನ್ನು ಶೇಕಡಾ ೯½ಯಂತೆ, ಅಮೇರಿಕೆಯವರು ಶೇಕಡಾ ೧೨ರಂತೆ, ಜರ್ಮನರು ಶೇಕಡಾ ೧೫ರಂತೆ, ಜಪಾನಿಯರು ಶೇಕಡಾ ೮ರಂತೆ, ಫ್ರೆಂಚರು ೧೦೦ಕ್ಕೆ ೧೦ರಂತೆ, ರಷ್ಯರು ೧೦೦ಕ್ಕೆ ೧೯ರಂತೆ ಹಡಗುಪಡೆಗಳ ಖರ್ಚ ಹೆಚ್ಚಿಸಿದರು, ಬ್ರಿಟಿಶರು ಶೇಕಡಾ ೧೬ರಂತೆ ಇಳಿಸಿದರು. ಹೀಗೆ ಒಟ್ಟಿನಲ್ಲಿ ಇಂಗ್ಲಂಡ ದೇಶವು ಶಸ್ತ್ರಸನ್ಯಾಸಿಯಾಗುವದು ಕ್ಷೇಮಕರವಲ್ಲೆಂದು ಬ್ರಿಟಿಶ ನೌಕಾದಳದ ಮುಖ್ಯಸ್ಥರು ವರ್ಸೆಸ್ಟರದಲ್ಲಿ ನಡೆದ ಭಾಷಣದಲ್ಲಿ ನುಡಿದರು. ನಾಳೆ ಯಾವ ದಿಕ್ಕಿಗೆ ಹರಿಯುತ್ತದೆಂದು ವಿಚಾರಿಸಿ ಪ್ರಕಟಿಸಿದರು. ಇಂಥ ಪರಿಷತ್ತುಗಳಿಂದ ಲೋಕಕ್ಕೆ ಕ್ಷೇಮವಾಗುವದೇನೆಂಬ ವಿಷಯವನ್ನು ವಿಚಾರಿಸಬಹುದು. ಬ್ರಿಟನಾದಿ ರಾಷ್ಟ್ರಗಳೊಳಗಿನ ರಾಜಕಾರಣ ಧುರಂಧರರು ಲೋಕದಲ್ಲಿ ಶಾಂತತೆ ಪ್ರಸ್ಥಾಪಿಸಲು ಪ್ರಯತ್ನಿಸುತ್ತಾರೋ? ಯುದ್ಧಕ್ಕಾಗಿ ಸಿದ್ಧತೆಗಳನ್ನು ನಡೆಸುತ್ತಾರೋ? ಎಂಬದನ್ನು ವಿಚಾರಿಸಬಹುದು. ತನ್ಮಧ್ಯದಲ್ಲಿ ಶಸ್ತ್ರಸನ್ಯಾಸ ಪರಿಷತ್ತಿನ ಅಧ್ಯಕ್ಷರಾದ ಮಿ| ಹೆಂಡರಸನ್‌ರವರು ರಾಜವೈದ್ಯರ ಸಲಹೆಯಿಂದ ವಿಶ್ರಾಂತಿ ಪಡೆಯುವರೆಂದೂ, ಅವರ ಪ್ರಕೃತಿ ನೆಟ್ಟಗಿಲ್ಲವಾಗಿಯೂ ೩೦ರ ವಾರ್ತೆ ಇವರ ಘಟ್ಟೋನೆಂದು ತಿಳಿಯುದು.

ಇನ್ನು ನಮ್ಮ ಹಿಂದುಸ್ಥಾನದ ವಿಷಯವನ್ನು ಪರಿಶೀಲಿಸುತ್ತೇನೆ. ಜ್ಯಾಂಯಿಂಟ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟು ಆಗಸ್ಟ ತಿಂಗಳಲ್ಲಿ ಪ್ರಸಿದ್ಧವಾಗುವದೆಂದು ಈ ಹಿಂದೆ ಹೇಳಿದ್ದೆವು. ಆದರೆ, ಪುನಃ ಆ ಶ್ವೇತಪತ್ರಿಕೆ ಬದಲಿತು. ಸಭಾಧ್ಯಕ್ಷರ ವಿಚಾರ ಇನ್ನೂ ಮುಗಿಯಲಿಲ್ಲ. ಆದುದರಿಂದ ರಿಪೋರ್ಟು ಆಗಸ್ಟ ತಿಂಗಳಲ್ಲಿ ಪ್ರಕಟವಾದನಕ ಬ್ರಿಟಿಶ ಪಾರ್ಲಿಮೆಂಟನ್ನು ವಿಸರ್ಜಿಸಬಾರದು. ಪಾರ್ಲಿಮೆಂಟಿನ ಸಭೆಯನ್ನು ವಿಸರ್ಜಿಸಿದ್ದಲ್ಲಿ ಕಾಯಿದೆಯಂತೆ ಜ್ಯಾಂಯಿಂಟ ಪಾರ್ಲಿಮೆಂಟರಿ ಕಮಿಟಿಯೂ ವಿಸರ್ಜನ ಹೊಂದುತ್ತದೆ. ಆದುದರಿಂದ ಪಾರ್ಲಿಮೆಂಟಿನ ಸಭೆಯನ್ನು ನವಂಬರ ತನಕ ಮುಂದರಿಸಬೇಕೆಂದು ಗೊತ್ತಾಗಿದೆ. ನವಂಬರ ತಿಂಗಳಲ್ಲಿ ರಿಪೋರ್ಟು ಪ್ರಕಟವಾಗುವದು. ರಿಪೋರ್ಟಿನ ಚರ್ಚೆ ಡಿಸೆಂಬರದಲ್ಲಿ ಪಾರ್ಲಿಮೆಂಟಿನ ಸಭಾಸದರು ನಡೆಸುವರು. ಆಮೇಲೆ ನಾತಾಳ ಹಬ್ಬದ ರಜೆ. ೧೯೩೫ನೇ ಇಸ್ವಿಯ ಜನವರಿ ತಿಂಗಳಲ್ಲಿ ಹಿಂದುಸ್ಥಾನ ಸರಕಾರದ ತಿದ್ದಿ ಬರೆದ ಅಥವಾ ತಗ್ಗಿಸಿದ ರಾಜ್ಯಯೋಜನೆಯ ಒಕ್ಕಲೆಕೆ ಕಾಯಿದೆ ಪಾರ್ಲಿಮೆಂಟಿನಲ್ಲಿ ಇಡೀ ವರ್ಷ ಚರ್ಚೆ ನಡೆದು ೧೯೩೬ನೇ ಇಸ್ವಿಯಲ್ಲಿ ಹೊರತರುವರು. ರಾಜ್ಯಯೋಜನೆಗೆ ಪ್ರಾರಂಭವಾಗುವದು. ಅಲ್ಲಿಯ ತನಕ ಸರ್ ಸಾಮ್ಯುಯಲ್ ಹೋರರವರು ಭಾರತ ಮಂತ್ರಿಗಳಾಗಿ ಬಾಳಬೇಕು ಅವರು ಬಾಳ್ವರೆಂದು ಈಗ ನಾವು ಹೇಳಲಾರೆವು. ಈ ಹಿಂದೆ ನಮೂದಿಸಿದಂತೆ ಸರ್ ಸಾಮ್ಯುಯಲ್ ಹೋರರವರಿಗೂ, ಮಿ| ಚರ್ಚಿಲ್ಲಾದಿ ಸಭಾಸದರಿಗೂ ಕೂಡಿಬರುವದಿಲ್ಲ. ಈ ಯೋಜನೆಗಾಗಿ ಇವರಲ್ಲಿ ವಿರುದ್ಧ ಜಗಳವಿದೆ. ಮುಖ್ಯ ಪ್ರಧಾನರಾದ ಮಿ| ಮೆಕಡೋನಲ್ಡರವರು ರಾಜೀನಾಮೆ ಕೊಟ್ಟು ವಿಶ್ರಾಂತಿಗಾಗಿ ಕೆನಡಾ ದೇಶಕ್ಕೆ ಹೋಗುವರೆಂದು ಸುದ್ದಿ. ಹಿಂದುಸ್ಥಾನದ ರಾಜ್ಯಯೋಜನೆಯ ವಿಷಯದಲ್ಲಿ ಭಾರತ ಮಂತ್ರಿ ಸರ್ ಸಾಮ್ಯುಯಲ್ ಹೋರರವರ ಮೇಲೆ ಮಿ| ಚರ್ಚಿಲ್ಲರು ಮಾಡಿದ ಆರೋಪದ ಚೌಕಶಿ ಮುಂತಾದ ಪರಿಸ್ಥಿತಿಯಿಂದಲೂ ಮಿ| ಮೆಕಡೋನಲ್ಡರವರಿಗೆ ಕಣ್ಣು ಕುರುಡಾಗುವ ಸ್ಥಿತಿ ಬಂದಿರುವದೆಂದು ಕೆಲವು ಪತ್ರವಾಹಕರ ವಾರ್ತೆ. ರಾಜವೈದ್ಯರು ಸಹ ಮಿ| ಮೆಕಡೋನಲ್ಡರವರ ಪ್ರಕೃತಿ ಪರೀಕ್ಷೆ ಮಾಡಿ ವಿಶ್ರಾಂತಿಯ ಅಭಿಪ್ರಾಯ ಕೊಟ್ಟರಂತೆ. ವಿಶ್ರಾಂತಿ ಕೊಳ್ಳದಿದ್ದರೆ ಅನರ್ಥವಾಗುವದಾಗಿಯೂ ಒಂದು ವಾರ್ತೆ. ಆದರೆ ಲಂಡನಿನೊಳಗಿನ 'ಡೇಲಿ ಹೆರಾಲ್ಡ', 'ಇಲ್ಲಸ್ಟ್ರೇಟೆಡ್ ವೀಕಲಿ' ಎಂಬ ವಾರಪತ್ರಿಕೆಯ 'ಸೀಕ್ರೆಟ್ ಸರ್ವಿಸ ಮನ್' ಯೆಂಬ ಪತ್ರಲೇಖಕನ ಸುದ್ದಿಯೊಳಗೆ "ಮಿ| ಮೆಕಡೋನಲ್ಡರವರ ಪ್ರಕೃತಿ ಹಾದಿಕೆಯಂತೆ ಇದೆ. ಅಸ್ವಸ್ಥತೆಯು ರಾಜಕಾರಣದ್ದು (diplomatic)" ಜ್ಯಾಂಯಿಂಟ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟು ಮಿ| ಮೆಕಡೋನಲ್ಡರವರ ಧೋರಣವನ್ನು ಪಾಲಿಸುವದಿಲ್ಲ, ಚರ್ಚಿಲ್ಲರವರ ಧೋರಣವನ್ನು ಅನುಸರಿಸಲಾರಂಭಿಸಿದೆ. ಹುದ್ದೆಯಿಂದ ಚರ್ಚಿಲ್ ಪಕ್ಷದ ಪ್ರಮುಖರಾದ ಮಿ| ಬಾಲ್ಡ್‌ವಿನ್‌ರವರು ಮುಖ್ಯ ಪ್ರಧಾನರಾಗುವರು. ಮಿ| ಬಾಲ್ಡ್‌ವಿನ್-ಹೋರರ ರಾಜ್ಯಧೋರಣ ಕೂಡುವದಿಲ್ಲ. ಮಿ| ಮೆಕಡೋನಲ್ಡರವರು ರಾಜೀನಾಮೆ ಕೊಡುವ ಪ್ರಸಂಗವಿದೆ. ಭಾರತ ಮಂತ್ರಿ ಹೋರರವರೂ ಅವರಿಗೆ ಹಿಂಬಾಲಿಸುವರು. ಆದ ಕಾರಣ ಹೊಸ ರಾಜ್ಯಯೋಜನೆಗೆ ಹೊರತರ ಹೆಸರು ಬಿದ್ದೀತೆಂದು ನಾ ಹಂತಕಾರಿ. ಕಾಂಗ್ರೆಸ ಹಾಗು ಲಿಬರಲ್ಲರ ವಿರೋಧದಿಂದ ಶ್ವೇತಪತ್ರಿಕೆಯ ಇಡೀ ಯೋಜನ ರದ್ದಾಗುವ ಸಂಭವವೂ ಉಂಟು. ರಾಷ್ಟ್ರೀಯರು ಸುಸಂಘಟಿತರಾಗಿ ದುಡಿಯುತ್ತಿದ್ದಾರೆ. ಮತಭೇದಗಳನ್ನು ದೂರ ಸಾರಿ ಒಮ್ಮನಸ್ಸಿನಿಂದ ಶ್ವೇತಪತ್ರಿಕೆಗೆ ಇದಿರಾಗಲು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡ ಅಲ್ಲಲ್ಲಿ ಪ್ರಚಾರ ಮಾಡುತ್ತಿದೆ. ಬ್ರಿಟಿಶ ಮುತ್ಸದ್ದಿಗಳು ರಾಷ್ಟ್ರೀಯರೊಳಗೆ ಒಡಕು ಹುಟ್ಟುವ ಹಾದಿ ಕಾಯುತ್ತಿದ್ದಾರೆಂತೆ ತೋರುತ್ತದೆ. ಮಹಾತ್ಮರು ಪುಣೆಯಿಂದ ಮುಂಬಯಿಗೆ ಬಂದೊಡನೆ 'ಎಸೋಸಿಯೇಟೆಡ ಪ್ರೆಸ್' ಪತ್ರಿಕಾ ಪ್ರತಿನಿಧಿಗಳು 'ರಾಷ್ಟ್ರೀಯ ಸಭೆಯಲ್ಲಿ ಒಡಕುಂಟಾಗಿದೇನೆಂದು ಮಹಾತ್ಮರಿಗೆ ಕೇಳಲು ಒಡಕು ಹುಟ್ಟುವ ಭೀತಿಯಿಲ್ಲವಾಗಿ ಮಹಾತ್ಮರು ಹೇಳಿ ಆ ಪ್ರಸಂಗ ಪ್ರತಿನಿಧಿಗಳಿಗೆ ಸುಮ್ಮಗಿರಿಸಿದರು.

ಶ್ವೇತಪತ್ರಿಕೆಯ ಕೆಲಸ ಮಾಡಲು ಇಂಗ್ಲಂಡದಲ್ಲಿ ಗುಪ್ತವಾಗಿ ಹೊಂಚುಹಾಕುತ್ತಿದೆ. ಲೋಯಡ್ ನೇ ಮಿ| ಚರ್ಚಿಲ್ಲಾದಿ ಪ್ರಾಮಾಣಿಕ ಹಿಂದಿತವಿರೋಧಿ ಪಕ್ಷದ ಮೂವರು ಮುಖಂಡರಾದ ಕೆಪ್ಟನ್ ಸ್ಪೆನ್ಸರ, ಚರ್ಚಿಲ್, ಮಿ| ಎಡ್ವರ್ಡ ರಸೆಲ್ ಮೊದಲಾದ ಪ್ರತಿನಿಧಿಗಳು ಹಿಂದುಸ್ಥಾನಕ್ಕೆ ಭೇಟಿಯಿಂದ ಬಂದಿರುತ್ತಾರೆ. ಇವರು ವಿಶೇಷವಾಗಿ ಒಂದೆರಡು ಸಂಸ್ಥಾನಿಕರ ಸರ್ವಾಧಿಪತಿಗಳ ಭೆಟ್ಟಿಯಾಗಿ ಶ್ವೇತಪತ್ರಿಕೆಯ ಸುಧಾರಣೆಗೆ ತಮ್ಮ ಪಕ್ಷ ಎಂದೆ ಒಪ್ಪುವದಿಲ್ಲವಾಗಿ ಮಹಾರಾಜರು ಕೊಟ್ಟರು. ಶ್ವೇತಪತ್ರಿಕೆಗೆ ಬೆಂಬಲ ಕೊಡದೆ ವಿಲಿಂಗ್ಡನ ದೊರೆಗಳಿಗೆ ತಿಳಿಸಿರುವದೇನೆಂದರೆ ಯೂ ಅವರು ಹೇಳಿದರಂತೆ. ಕೆಲ ಸಂಸ್ಥಾನಿಕರು ಇವರು ಭೆಟ್ಟಿಯಾಗುವದು ಸುಧಾರಣೆಯ ಯೋಜನಯಲ್ಲಿ ಸೇರಬಾರದೆಂದು ಅವರಿಗೆ ತಿಳಿಸಿದರು. ಆ ಮೇಲೆ ಅವರು ಮೈಸೂರಿಗೆ ಹೋಗಿ ಬಿಡಾರ ಮಾಡಿ ಸ್ವದೇಶಕ್ಕೆ ಹಿಂತಿರುಗುವರು. ಮೈಸೂರ ಮಹಾರಾಜರ ಪರವಾಗಿ ದಿವಾಣರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಅವರಿಗೆ ನಿಮಂತ್ರಣ ಕೊಟ್ಟಿದ್ದರಂತೆ! ಅಕ್ಟೋಬರದಲ್ಲಿ ಈ ಪಕ್ಷದ ನಾಲ್ಕನೇರಾದ ಮೇಜರ ಕೋರ್ಟನಲ್ಡ ಡಾರ್ಲಿಂಗ್ಟನ ಹಾಗು ವೆಸ್ಟಮಿನ್ಸ್ಟರದ ಡ್ಯೂಕರವರು ಬರಲಿಕ್ಕಿದ್ದಾರೆ. ಮೇಜರ ಕೋರ್ಟನಲ್ಡರವರು ಈ ಹಿಂದೆ ಇದ್ದ ಬಂಗಾಲ ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳೂ ಕೋರ್ಟನಲ್ಡರವರಿಗೂ ಆವೇಶದಿಂದ ಮಾತುಕತೆ ನಡೆದ ಮೇಲೆ "ಹಿಂದುಸ್ಥಾನದ ಬಗ್ಗೆ ನಿಮಗೇನು ಗೊತ್ತಿದೆ?" ಎಂದು ವಿಲಿಂಗ್ಡನ್ ದೊರೆಗಳು ಕೇಳಲು, ಭಾರತ ಮಂತ್ರಿ ಸರ್ ಸಾಮ್ಯುಯಲ್ ಹೋರರವರು ಇಂಗ್ಲಂಡದಲ್ಲಿ ಕೂತು ಹಿಂದುಸ್ಥಾನದ ವಿಷಯ ಹೇಗೆ ಮಾತನಾಡಬಲ್ಲರೆಂದು ಕೋರ್ಟನಲ್ಡರು ವಿಲಿಂಗ್ಡನ್ ದೊರೆಗಳನ್ನು ಕೇಳಿ ಸುಮ್ಮಗಿರಿಸಿದರಂತೆ! ಹಿಂದುಸ್ಥಾನದ ಸ್ಥಿತಿ ವಿಲಿಂಗ್ಡನ್ ದೊರೆಗಳಿಗೂ ಗೊತ್ತಿಲ್ಲ, ಮೇಜರ ಕೋರ್ಟನಲ್ಡರವರಿಗೂ ಗೊತ್ತಿಲ್ಲ, ಭಾರತ ಮಂತ್ರಿ ಸರ್ ಸಾಮ್ಯುಯಲ್ ಹೋರರವರಿಗಂತು ಗೊತ್ತೇ ಇಲ್ಲ! ಆದರೆ, ಎಲ್ಲರು ತಜ್ಞರೆಂದೆಣಿಸಿ ರಾಜ್ಯಭಾರವನ್ನು ಸುಧಾರಿಸಬಯಸುವವರೇ. ಇಂಥ ಪ್ರವೃತ್ತಿಯಿಂದ ಹಿಂದಿ ಪ್ರಮುಖರಾದವನ ನಾಮೋಪದರ ನಡೆಯುವದಾಗಿ ಎಣಿಸುವದು ತೀರ ತಪ್ಪು. ನಿರಂಕುಶ ಪ್ರಭುಗಳಾಗಿ ಆಳಬೇಕೆಂಬ ಗರ್ವ ವಿಚಾರ ನಡೆದ ಮೇಲೆ ನಾನೆಯೋಪದರ ಸುದಿಗಳಲ್ಲಿ? ಈ ಪ್ರಕಾರ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಶಿಮ್ಲಾದ ಸುದ್ದಿಗಾರರು ಪ್ರಕಟಿಸುತ್ತಾರೆ.

ಯೆರವಡಾಮಂದಿರದಲ್ಲಿ ರಾಜಬಂದಿಯಾಗಿದ್ದ ಸರದಾರ ವಲ್ಲಭಭಾಯಿ ಪಟೇಲರು ನಾಶಿಕ ಸೆಂಟ್ರಲ್ ಪ್ರಿಝನ್‌ದಲ್ಲಿದ್ದರೆ ಅವರಿಗೆ ಸಂಕ್ರಾಮಕ ... ಅವರ ಬಿಡುಗಡೆಯ ಕುರಿತು ಪತ್ರವ್ಯವಹಾರ ನಡೆದದ್ದಾಗಿ ಒಂದು ವರ್ತಮಾನ ಹಬ್ಬಿತ್ತು. ಇದ ದಿಟವಲ್ಲವಾಗಿ ಸರದಾರರು ತಮಗೆ ಕಾಣತಕ್ಕವರಿಗೆ ತಿಳಿಸಿದ್ದಾರೆ. ಪತ್ರವ್ಯವಹಾರ ನಡೆಯುವ ಸಂಭವವಿಲ್ಲವಾಗಿಯೂ, ತಮ್ಮ ಬಿಡುಗಡೆಯಾಗುವ

ಸಂಗತಿ ತಮಗೆ ಗೊತ್ತಿಲ್ಲವಾಗಿಯೂ ಸರದಾರರು ನುಡಿವರು. ಸರದಾರರ ಪ್ರಕೃತಿ ನೆಟ್ಟಗಿಲ್ಲವಾಗಿಯೂ ಮೂಗಿನ ಅಸ್ವಾಸ್ಥ್ಯವಿರುವದಾಗಿಯೂ ಹೇಳುತ್ತಾರೆ. ಸರದಾರರು ಬರೆದ ಪತ್ರಗಳೊಳಗಿಂದ ಅಸಾಸ್ಥ್ಯ ಭಾಗವನ್ನು ಒರಸಿತೆಗೆದದ್ದು ಖಾತ್ರಿದಾಗಿಯೂ ಮುಂಬಯಿಯಲ್ಲಿ ಸುದ್ದಿ ಹಬ್ಬಿರುವಾಗ ಜೈಲಿನಲ್ಲಿದ್ದ ಗಡಿನಾಡಿನ ಗಾಂಧಿಗಳಾದ ಖಾನ ಅಬ್ದುಲ್ಲ ಗಫಾರ ಖಾನರವರ ಪ್ರಕೃತಿ ನೆಟ್ಟಗಿಲ್ಲ. ಅವರ ಶೋಕ ಕುಗ್ಗಿದ ಅವರಿಗೂ ಬಿಡುಗಡೆಯಾಗುವ ಲಕ್ಷಣವಿಲ್ಲ. ಖುದಾಯಿ-ಖಿದಮತಗಾರ ಸಂಸ್ಥೆಗಳು ರಾಷ್ಟ್ರೀಯ ಸಭೆಯ ಒಂದು ಅಂಗವೆಂದು, ಕೊಂಗ್ರೆಸ ಕಾರ್ಯಕಾರಿ ಮಂಡಳದ ಠರಾವಾದಂತೆ ಅಧ್ಯಕ್ಷರಾದ ಶ್ರೀ ಜಮನಾಲಾಲ ಬಜಾಜರವರು ಹಿಂದುಸ್ಥಾನ ಸರಕಾರದ ಕಡೆ ನಡಿಸಿದ ಪತ್ರವ್ಯವಹಾರವು ನಿರರ್ಥಕವಾಯಿತು. ಸರಕಾರವು ಅವುಗಳ ಮೇಲಿನ ಒತ್ತಾಯವನ್ನು ಪರಿಹರಿಸಲೊಪ್ಪಲಿಲ್ಲ. ಅದು ಸರಕಾರಕ್ಕೆ ಅಗಾತ್ರವೆಂದೋ ಹಿಂದುಸ್ಥಾನ ಸರಕಾರದ ಅಭಿಪ್ರಾಯ. ಹಿಂದುಸ್ಥಾನ ಸರಕಾರವು ಖುದಾಯಿ-ಖಿದಮತಗಾರರ ಅಪಕೃತ್ಯಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ತಿಳಿಸಿದ್ದರೆ ಇಲ್ಲವೆ ಅವನ್ನು ಸಾಧಾರ ಪ್ರಕಟಿಸಿದ್ದರೆ ಅಸಂತೋಷ ಕಾರಣವು ಬಯಲಾಗುತ್ತಿದ್ದಿತು. ಹಿಂದುಸ್ಥಾನ ಸರಕಾರವು ಮೌನತಾಳಿದರಿಂದ ಖುದಾಯಿ-ಖಿದಮತಗಾರರು ನಿರಪರಾಧಿಗಳೆಂದೇ ಸಮಸ್ತರ ಅಭಿಪ್ರಾಯ. ನಿರಪರಾಧಿಗಳಿಗೆ ಹಿಂದುಸ್ಥಾನ ಸರಕಾರವು ನಿಷ್ಕಾರಣವಾಗಿ ದಂಡಿಸುತ್ತದೆಂದು ರಾಷ್ಟ್ರೀಯ ಸ್ವಾಭಿಮಾನಿಗಳೆಲ್ಲ ಮುನಿದಿದ್ದಾರೆ.

ನೆರೆಹಾವಳಿಯೊಳಗಿನ ಕಥಾ ತಂತುಗಳು

— ಆಸಾಮುದಲ್ಲಿ ಅದ್ಭುತ ನೆರೆ. ನವಗಾಂಗ ಜಿಲ್ಲೆಯಲ್ಲಿ ನವಕಡೋಕಾಪಾದಿಯಲ್ಲಿ ತೆರೆಗಳು ಒಂದು ಮನೆಗಳನ್ನು ಸೆಳಕೊಂಡು ಹೋಗುತ್ತವೆ. ಮೂವರು ಬಿದ್ದ ಮನೆಗಳ ಮೇಲೆ ಕೂತು ಜೀವ ಕಾಯ್ದುಕೊಂಡಿದ್ದರು, ಒಂದು ತೆರೆ ಬಂದು ಮೂವರಿಗೆ ಜಲಸಮಾಧಿ ಕೊಟ್ಟಿತು. ಒಬ್ಬ ಹೆಂಗಸು ಕಿರುವಿಗೆ ಅಪ್ಪಿಕೊಂಡು ಮರಣ ಹೊಂದಿದಳು, ಚಿಕ್ಕ ಪಾಕಿಕೊಂಡಿದ್ದ ಮದುಮಗಳ ಶವವೊಂದು ಸಿಕ್ಕಿದೆ. ಸಿಂಗಮಾರಿಯಲ್ಲಿ ಒಂದು ಡೋಣಿಯಲ್ಲಿ ಕೂತು ಒಂದು ಮನೆಯವರು ಜೀವ ಬದುಕಿಸಿಕೊಂಡು ಹೋಗುತ್ತಿದ್ದರು. ನೆರೆಯಲ್ಲಿ ಒಂದು ಹುಲಿ ಬಳಲಿ ಬಂದು ಡೋಣಿ ಹಿಡಿದು ಡೋಣಿಯಲ್ಲಿ ಕೂತಿತು. ಕೆಲ ಹೊತ್ತಿನ ಮೇಲೆ ಒಂದು ಮರದ ಬೊಡ್ಡೆಯ ಮೇಲೆ ಹಾರಿ ಹೋಯಿತು. ಧರ್ಮಟೋಲಿ ಮೊಗನ ಸ್ಟೇಶನ್ ಮಾಸ್ತರರೂ, ಟಪಾಲ ಮಾಸ್ತರರೂ, ಅವರ ಮನೆಯವರೂ ಕಾಣೆ. ೫೦೦ ಚದರ ಮೈಲು ಪ್ರದೇಶದ ೭೦ ಹಳ್ಳಿಗಳ ಜನರು ಮನೆ-ಮಾರು, ಕಾಳು-ಕಡಿ ಕಳಕೊಂಡು ನಿರಾಶ್ರಿತರಾಗಿ ಬಳಲುತ್ತಿದ್ದಾರೆ. ೨೦ ಲಕ್ಷಕ್ಕೆ ಮಿಕ್ಕಿ ನಷ್ಟವಾಗಿರುವದಾಗಿ ಈಗಿನ ಅಂದಾಜು. ಆಸಾಮು ಸರಕಾರವು ನಿರಾಶ್ರಿತರಿಗೆ ೧ ಲಕ್ಷ ರೂಪಾಯಿಗಳ ಸಾಲ ಕೊಡುವ ಏರ್ಪಾಟು ಮಾಡಿದೆ. ನಿರಾಶ್ರಿತರಿಗಾಗಿ ನಿಧಿ ಸಂಚಯ ಮಾಡಲು ಶ್ರೀ ಶರಣರಾಮ ಫೂಕನ್‌ರವರ ಅಧ್ಯಕ್ಷತೆಯಲ್ಲಿ ಒಂದು ಮಂಡಳವು ಏರ್ಪಾಟಾಗಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಒಳ್ಳೇ ಮಳೆ ಸುರಿಯಿತು, ನೆರೆ ಕಟ್ಟಿತು. ನಿನ್ನೆ ರಾತ್ರಿಯಿಂದ ಮಳೆ ಸಮಾಧಾನ ಹೊಂದಿದೆ. ಈ ವಾರದಲ್ಲಿ ೨೪—೫೬ ಇಂಚು ಮಳೆ; ಈ ತನಕ ಒಟ್ಟು ೬೬—೫೬ ಇಂಚು ಮಳೆಯಾಯಿತು.

ಕುಮಟಾ—ಡ ಜೋಯಿಡ ಕೋರ್ಟು ಈ ತಿಂಗಳಿನಿಂದ ರದ್ದಾಗಿ ಮುಂಚಿನಂತೆ ಎರಡೂ ಶಾಖೆಗಳಲ್ಲಿ ಪ್ರತ್ಯೇಕ ಕೋರ್ಟುಗಳಾಗಿವೆ. ರಾ. ಭೋಗರೆ ಇವರಿಗೆ ಈ ಕೋರ್ಟಿಗೆ ಸಬಜಡ್ಜರಾಗಿಯೂ, ರಾ. ಪಡಗಳಕರ ಇವರಿಗೆ ೨ನೇ ಕೋರ್ಟಿನ ಸಬಜಡ್ಜರಾಗಿಯೂ ನೇಮಿಸಿದಂತೆ ಕೋರ್ಟುಗಳ ಕೆಲಸ ನಡೆದದೆ. ಇಲ್ಲಿಯ ಕೋರ್ಟಿಗೆ ರಾ. ಲಕ್ಷ್ಮಣ ಸುಬ್ರಾಯ ಕಾಮತ, ಎಮ್. ಏ ರಾ. ಈಶ್ವರ ಶಂಕರ ಹೆಗಡೆ, ರಾ. ಶಂಕರ ಗಣೇಶ ಶಾಸ್ತ್ರಿ ಇವರು ವಕೀಲರಾಗಿ ದಾಖಲಾಗಿದ್ದಾರೆ.

ಇಲ್ಲಿಯ ರಾ. ಗೋವಿಂದ ಸುಬ್ರಾಯ ಪ್ರಭು ಇವರು ಗಿಬ್ಸ ಹೈಸ್ಕೂಲ ಹಾಗು ಕೆನರಾ ಎಜ್ಯುಕೇಶನ್ ಸೊಸೈಟಿ ಮತ್ತು ಗಿಬ್ಸ ಸಾರಸ್ವತ ಬ್ರಾಹ್ಮಣ ವಿದ್ಯಾವರ್ಧಕ ಫಂಡುಗಳ ಚಾಲಕರಾದ ದಿವಂಗತ ಕಿ ನಾರಾಯಣ ಸುಬ್ರಾಯ ಕಾಮತ ರಾ. ಅನ್ನಪ್ಪ ರಾಮಚಂದ್ರ ಪೈ, ರಾಮಕೃಷ್ಣ ಪಾಂಡುರಂಗ ಪೈ, ಜಗನ್ನಾಥ ವಿಷ್ಣು ಗಾಯತ್ತೊಂಡೆ ಮೊದಲಾದವರ ಮೇಲೆ ೧೦-೧೫ ಸಾವಿರ ರೂಪಾಯಿಗಳ ವಂಚನೆ ಆರೋಪ ಹೊರಿಸಿ ೧ನೇ ಸಬಡಿವಿಜನಲ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ತಾ ೧೫-೬-೩೪ನೇಗೆ ಫಿರ್ಯಾದು ದಾಖಲ ಮಾಡಿದ್ದರು. ಅದು ಇಲ್ಲಿಯ ಮೆಜಿಸ್ಟ್ರೇಟ ಕೋರ್ಟಿಗೆ ಪೂರ್ವತಪಾಸಣೆಗೆ ಬಂದ ವೇಳೆ ಕಳೆದ ಶನಿವಾರ ತಾ. ೨೩ನೇಗೆ ಲೆಕ್ಕದ ಪುಸ್ತಕಗಳ ಜಪ್ತಿಗೆ ಕೊಟ್ಟ ಅರ್ಜಿಯಂತೆ ಕಳೆದ ತಾ ೨೫ನೇ ಸೋಮವಾರ ಪೋಲೀಸರು ಕೆನರಾ ಎಜ್ಯುಕೇಶನ್ ಸೊಸೈಟಿಯ ಆಫೀಸಿಗೆ ಹೋಗಿ ಕೆಲ ಲೆಕ್ಕದ ಪುಸ್ತಕಗಳನ್ನು ಜಪ್ತಿಯಿಂದ ಕೋರ್ಟಿಗೆ ಒಯ್ದಿದ್ದಾರೆ. ಕೆಲ ವರ್ಷದ ಲೆಕ್ಕದ ಪುಸ್ತಕಗಳು ಕಾಣೆಯಾಗಿರುವದಾಗಿ ರಾ. ಗಾಯತ್ತೊಂಡೆ ಪೋಲೀಸರ ಕಡೆ ಬರೆದುಕೊಟ್ಟದಾಗಿ ತಿಳಿಯುತ್ತದೆ.

ಇಲ್ಲಿಯ ಮ್ಯುನಿಸಿಪಾಲಿಟಿಗೂ, ಕಲೆಕ್ಟರರಿಗೂ ತಿಕ್ಕಾಟ ಬಿದ್ದಿದೆ. ಮುಕಾಶಿ ಲಿಸ್ಟಿಜನ್ ಪ್ರಕರಣದಲ್ಲಿ ಮ್ಯುನಿಸಿಪಾಲಿಟಿಯವರು ಅನ್ಯಾಯ ಮಾಡಿದರಾಗಿ ಕಲೆಕ್ಟರರ ಅಭಿಪ್ರಾಯ. ನ್ಯಾಯದಂತೆ ನಡೆದಿದ್ದೇವಾಗಿ ಮ್ಯುನಿಸಿಪಾಲಿಟಿಯವರ ಅಭಿಪ್ರಾಯ. ಕಲೆಕ್ಟರರು ರಿವಿಜನ್ ಲಿಸ್ಟಿನಂತೆ ಮುಸೆತೆರಿಗೆ ವಸೂಲ ಮಾಡತಕ್ಕದ್ದಾಗಿ ಮ್ಯುನಿಸಿಪಲ್ ಲಿಸ್ಟಿನ ೧೩೯ನೇ ಕಲಮಿನನ್ವಯ ಪ್ರತಿಬಂಧಕ ಹುಕುಮು ಕೊಟ್ಟರು. ಈ ಹುಕುಮನ್ನು ಕಮಿಶನರರು ಎತ್ತಿ ಹಿಡಿದರು, ಮುಂಬಯಿ ಸರಕಾರವೂ ಎತ್ತಿಹಿಡಿಯಿತು. ಕಲೆಕ್ಟರರಿಗೆ ಇಂಥ ಹುಕುಮು ಕೊಡಬರುವದಿಲ್ಲವಾಗಿಯೂ, ಈ ಹುಕುಮನ್ನು ರದ್ದುಪಡಿಸಬೇಕಾಗಿಯೂ ಇಲ್ಲದಿದ್ದರೆ ಸರಕಾರದ ಮೇಲೆ ದಾವೆ ಹಾಕಬೇಕಾಗುವದಾಗಿಯೂ ಅಬ್ಬಿ ತೆಂಗೆದಾರರು ಕಳೆದ ಮೇ ೨೫ನೇ ತಾರೀಖಿಗೆ ಕಲೆಕ್ಟರರಿಗೆ ನೋಟೀಸು ಕೊಟ್ಟಿರುತ್ತಾರೆ. ರಿವಿಜನ್ ಲಿಸ್ಟಿನಂತೆ ಹೊಸ ಇಲೆಕ್ಷನಿನ ಬಗ್ಗೆ ಇಟ್ಟ ಮತದಾರ ಪತ್ರಿಕೆ ಮೇ ೩೦ ೧೬ನೇಗೆ ಕಾಯಂದಾಗಿ ಪ್ರಕಟಿಸಲ್ಪಟ್ಟಿತ, ದಶ್ಯ ಲಿಸ್ಟ ಮೊನ್ನೆ ೩೦ ೩೦ನೇಗೆ ಪ್ರಕಟವಾಗುವದಿತ್ತು, ಅಷ್ಟರಲ್ಲಿ ಇಲೆಕ್ಷನಿನ ಮುಂದಿನ ಕಾರ್ಯಕ್ರಮವನ್ನು ತಡೆಹಿಡಿಯಬೇಕಾಗಿ ಕಲೆಕ್ಟರರಿಂದ ಹುಕುಮು ಬಂದಂತೆ ಮುಂದಿನ ಕಾರ್ಯಕ್ರಮ ತಡೆಹಿಡಿಯಲ್ಪಟ್ಟಿದೆ. ರಿವಿಜನ್ ಲಿಸ್ಟಿನ ಕಾರಣ ಮಾಳವ ಪವಿದ್ದದರಿಂದ ಮ್ಯುನಿಸಿಪಾಲಿಟಿಯನ್ನೇ ರದ್ದುಪಡಿಸಬೇಕಾಗಿ ಕಲೆಕ್ಟರರು ಕಮಿಶನರಿಗೆ ಬರೆದು ಹಾಕಿದ್ದಾರಂತೆ!

ಇಲ್ಲಿಯ ಅರ್ಬನ್ ಕೋಆಪರೇಟಿವ್ ಬ್ಯಾಂಕಿನ ವಾರ್ಷಿಕ ಸಾಧಾರಣ ಸಭೆಯು ಇದೇ ಕಳೆದ ತಾ ೩೦ನೇ ಶನಿವಾರ ಸಾಯಂಕಾಲ ಬ್ಯಾಂಕಿನ ಮಾಳಿಗೆಯ ಮೇಲೆ ಸೇರಿ, ವರದಿ ಮಂಜೂರಾಯಿತು. ಶೇರು ದಾರರಿಗೆ ಶೇಕಡಾ ೬ರಂತೆ ಮುನಾಫೆ ಹಂಚಬೇಕಾಗಿ ಠರಾವಾಯಿತು. ಹಳೇ ಡೈರೆಕ್ಟರ ಮಂಡಳದ ಮಿ। ಮಹಮೂದ ಸಾಹೇಬ ಇವರ ಬದಲಿಗೆ ಮಿ। ಸಿದ್ಧೀಕ ಅಬ್ದುಲ್ ಹಸನ ಸಾಹೇಬ ಇವರಿಗೆ ಸೇರಿಸಿಕೊಳ್ಳಲಾಗಿದೆ, ಉಳಿದವರೆಲ್ಲ ಹಳೇ ಡೈರೆಕ್ಟರರೇ.

ಹೊನ್ನಾವರ— (ತಾ. ೨೯-೬-೧೯೩೪) ಮಳೆ ಬೀಳುತ್ತಿದೆ. ಗದ್ದೆ ನೆಟ್ಟಿ ಕೆಲಸಕ್ಕೆ ಶುರುವಾಗಿದೆ.

ಉಪ್ಪೋಣಿಯಲ್ಲಿ ಹಲಿದಾ ಉಪದ್ರವ. ಇದು ತೀರ ಸೊಕ್ಕಿದ ಆಸರ ಕಡೆ ಹೊಡೆಯುವ ಶಸ್ತ್ರಾಸ್ತ್ರಗಳಿಲ್ಲೆಂದು ಹುಲಿಗೆ ತಿಳಿದದೆಯೋ ಏನೋ! ಹಗಲಿಗೆ ಸಹ ಇದರ ಹಾವಳಿ. ದಿನಾ ದನಗಳ ಫಲಾಹಾರವಾಗುತ್ತಿದೆ. ಮೇಲಧಿಕಾರಿಗಳು ಈ ಕಡೆ ಲಕ್ಷ ಕೊಡಬೇಕು.

ಮ್ಯುನಿಸಿಪಾಲಿಟಿಯ ಜನರಲ್ ಇಲೆಕ್ಷನು ಸಮೀಪಿಸಿತಂತೆ. ತೆಂಗೆದಾರರ ಹಿತ ನೋಡಿ ಮ್ಯುನಿಸಿಪಾಲಿಟಿಯಲ್ಲಿ ಕೆಲಸ ಮಾಡುವವರಿಗೇ ಜನರು ಮತ ಕೊಡಬೇಕು, ಈಗಲೇ ಯಾರಿಗೂ ಮತದಾನದ ವಚನ ಕೊಡಬಾರದಾಗಿ ಬಿಸ್ಸೊಂದು ಸೂಚನೆ.

ಭಟಕಳ— (ತಾ ೨೯-೬-೩೪) ಈ ವಾರದಲ್ಲಿ ಮಳೆ ಚಲೋ ಬೀಳುತ್ತಿದ್ದು ಗದ್ದೆ ನೆಟ್ಟಿ ಭರದಿಂದ ನಡೆದಿದೆ. ಹವಾಮಾನ ಒಳ್ಳೇದು.

೧೯ರಂದು ಶ್ರೀ ನಾರಾಯಣ ಹೈಸ್ಕೂಲಿನ ಕನ್ನಡ ಪಂಡಿತರಾದ ರಾ। ಪಡ್ತಿ ಸುಬ್ರಾಯ ಪೈ ಇವರು ಇಲ್ಲಿ ನೂತನವಾಗಿ ತೆರೆದ ಹರಿಜನ ಶಾಲಾ ವಿದ್ಯಾರ್ಥಿಗಳಿಗೆ ಖಾದಿಯ ಟೊಪ್ಪಿಗೆ, ಖಾದಿಯ ಪೋಲಕಗಳನ್ನು ಉಚಿತವಾಗಿ ಹಂಚಿಸಿದರು. ಪಾಟಿ ಹಾಗು ಪುಸ್ತಕಗಳ ಬಗ್ಗೆ ೪ ರೂಪಾಯಿಗಳನ್ನು ಕಳಿಸಿರುತ್ತಾರೆ, ಹೀಗೆ ಹರಿಜನ ಶಾಲೆಯ ಮಾಸ್ತರರು ತಿಳಿಸುತ್ತಾರೆ.

ಇಲ್ಲಿಯ ಮುಸಲ್ಮಾನ ಬಾಂಧವರು ತಾ. ೨೫ನೇಗೆ ಪೈಗಂಬರ ದಿನವನ್ನು ವೈಭವದಿಂದ ಆಚರಿಸಿದರು. ಈ ಉತ್ಸವಕ್ಕಾಗಿ ಧಾರವಾಡದ ಕರ್ನಾಟಕ ಕಾಲೇಜಿನ ಪ್ರೊಫೆಸರರಾದ ಮೌಲವಿಯವರೂ, ಸಲ್ಲಾ ಖಾನ ಮೌಲಾನಾ ಮಹಾಸಿಯವರೂ ನಿಮಂತ್ರಣ ಮೇರೆಗೆ ಬಂದಿದ್ದರು. ಸಾಯಂಕಾಲ ಮೆರವಣಿಗೆಯಾದ ಬಳಿಕ ರಾತ್ರಿ ಸಭಾಮಂಟಪದಲ್ಲಿ ಪ್ರಾರ್ಥನೆಯಾಯಿತು. ಬಳಿಕ, ಹಂಚಿನ ಕಮಿಟಿಯ ಅಧ್ಯಕ್ಷರಾದ ಮಿ। ಸಿದ್ಧೀಕರವರು ಸಭೆಗೂ, ಮೆರವಣಿಗೆಗೂ ಸೇರಿದ ಹಿಂದು-ಮುಸಲ್ಮಾನ ಬಾಂಧವರನ್ನು ಸ್ವಾಗತಿಸಿದರು. ಬೆಂಗಳೂರಿನ ಕೇಂದ್ರದ ಮಿ। ಸಯ್ಯದ ಸೋಹಬ್ದೀನವರ ಸೂಚನೆಯಂತೆ ಪ್ರೊ। ಮೌಲವಿಯವರು ಅಧ್ಯಕ್ಷಸ್ಥಾನದಲ್ಲಿ ಇಸ್ಲಾಂ ಧರ್ಮ ತತ್ವಗಳನ್ನು ಸರಸವಾಗಿಯೂ, ಗಂಭೀರವಾಗಿಯೂ ವಿವರಿಸಿದರು. ರ್ಗ ಸೊಲ್ಲಾಪುರದ ಮೌಲಾನಾ ಮಹಾಸಿಯವರು ಹಾಗು ಬಾಗಲಕೋಟದ ಮೌಲಾನಾ ವಿದ್ಯೆಯವರ ಭಾಷಣಗಳಾದವು. ಬೆಂಗಳೂರಿನ ಮೌಲವಿ ಅಬ್ದುಲ್ಲ ಅಜೀಜರವರು ಕೆಲ ಹಿಂದು ಧರ್ಮ ತತ್ವಗಳನ್ನು ವಿವರಿಸಿದರು. ಪೈಗಂಬರರು ಸಮಾಜಸುಧಾರಕರೂ, ರಾಷ್ಟ್ರಪುರುಷರೂ ಎಂಬುದಾಗಿ ರಾ। ಹೀಪೋಳ್ಳಿ ತಿಮ್ಮ ಭಟ್ಟರು ಪ್ರತಿಪಾದಿಸಿದರು. ಮಿ। ಎಚ್ ಎಮ್ ಜೋಕಾಕು ಇವರ ಭಾಷಣವಾದ ಬಳಿಕ, ರಾತ್ರಿ ವಾದ್ಯಗೋಷ್ಠಿಯಾಗಿ ಸಭೆ ವಿಸರ್ಜನ ಹೊಂದಿತು. ಮಾರನೇ ದಿನ ಮೌ। ಸಾದಿಕಿಯವರ ಅಧ್ಯಕ್ಷತೆಯಲ್ಲಿ ಮುಸಲ್ಮಾನರ ಪರಿಷತ್ತು ಸೇರಿ ಕೆಲ ನಿರ್ಣಯಗಳಾದವು.

ಅಂಕೋಲಾ— (ತಾ ೨೯-೬-೩೪) ನಮ್ಮ ಗ್ರಹಕಾಲದಲ್ಲಿ ನೋಟ ಪ್ರತಿಬಂಧಕ ಹುಕುಮುಗಳ

ಪ್ಲಿ ಈಗ ಉದ್ಭವಿಸಿದ ಕಾಂಗ್ರೆಸ ಕಮೀಟಿಯನ್ನು ಪ್ರತಿಬಂಧಿಸಿದ ಕುರಿತು ಪ್ರಾಂತಿಕ ಕಾಂಗ್ರೆಸ ಕಮೀಟಿಯಿಂದ ಸರಕಾರದ ಮೇಲೆ ಕಾಂಗ್ರೆಸ ಕಾರ್ಯಕರರು ಈ ಕಾರ್ಯದಲ್ಲಿ ತೊಡಗಿದ್ದಾರೆ

ಶಾರದಾ ಕಾನೂನಿಗೆ ವಿರೋಧವಾಗಿ ೧೪ ವರ್ಷಕ್ಕೆ ಕಲ ದಿನ ಕಡಿಮೆಯಾಗಿರುವಾಗ ಒಬ್ಬರು ತಮ್ಮ ಮಗಳನ್ನು ಇಲ್ಲಿಯವರೊಬ್ಬರಿಗೆ ಗೋಕರ್ಣಕ್ಷೇತ್ರದಲ್ಲಿ ಮದುವೆ ಮಾಡಿಕೊಟ್ಟ ಬಗ್ಗೆ ಇತ್ತೀಚಿನ ಅಪ್ಪೀಲೊಂದು ಡಿ. ಮೆಜಿಸ್ಟ್ರೇಟ ಕೋರ್ಟಿನಲ್ಲಿ ಎರಡನೇ ವಿಚಾರಣೆಯು ಫೂರ್ವ ಬಿಜಾಪುರ ಜಿಲ್ಲೆಯ ೧ನೇ ವರ್ಗ ಮೆಜಿಸ್ಟ್ರೇಟ ಕೋರ್ಟಿನಲ್ಲಿ ನಡೆಯಿತು

ಕಾರವಾರ— (ತಾ ೧-೭-೩೧) ದಿ। ಸುಬ್ರಾಯ ರಾಮಚಂದ್ರ ಹಳದೀಪೂರಕರ ಇವರು ದೊಡ್ಡ ಕವಿಯಾಗಿ ಸಾಯಂಕಾಲ ಗೋಕರ್ಣಕರಿಂದ ಇಲ್ಲಿ ಬಂದು ತಲ್ಪಿದರು ಎಲ್ಲರಿಗೂ ಪರಿಚಿತರಾಗಿದ್ದ ದಿ। ಹಳದೀಪೂರಕರರವರು ನೆಟ್ಟನೆ ಬಂದವರು ಮಾರುತಿ ದೇವಾಲಯಕ್ಕೆ ಹೋಗಿ ದೇವದರ್ಶನ ಪಡೆದು, ಅಲ್ಲಿಂದ ಸ್ವಾಮಿ ಕರೆತಂದ ಕುಟುಂಬವಾಸಿಗಳು. ೫॥ ವರುಷಗಳಿಂದ ಸತ್ಯಾಗ್ರಹ ಯುಗದಲ್ಲಿ ದಿ। ಸುಬ್ರಾಯ ಹಳದೀಪೂರಕರರು (ಜಿಲ್ಲಾ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ ಕಾರ್ಯ ನಡೆಸುತ್ತಿರುವಾಗ ಅವರಿಗೆ ತಾ. ೨೬—೧—೩೧ರಂದು ಶಿಕ್ಷೆಯಾಗಿತ್ತು. ಅಲ್ಲಿಯ ಸರಕಾರದಿಂದ ಪರದೇಶ ಬಟ್ಟೆಯ ಗಂಟುಗಳನ್ನು ಕಟ್ಟಿ ಇಟ್ಟು ಈ ಹುಕುಮಿನ ಉಲ್ಲಂಘನೆ ಮಾಡಿದ ಬಗ್ಗೆ ೧೯೩೧ನೇ ಇಸ್ವಿ ಜನವರಿ ತಿಂಗಳಲ್ಲಿ ಖಟ್ಲೆ ನಡೆದು ಇವರಿಗೆ ೧ ವರ್ಷದ ಸಕ್ತ ಕಾರಾಗೃಹವಾಸದ ಶಿಕ್ಷೆಯಾಗಿತ್ತು. ಅದರಂತೆ ಅವರು ಬೆಳಗಾವಿ, ವಿಜಾಪುರ ಇವೆರಡು ಜೈಲುಗಳಲ್ಲಿ ಶಿಕ್ಷೆಯನ್ನನುಭವಿಸಿ ಬಿಡುಗಡೆ ಮಾಡಿದ ನಂತರ ನೆಟ್ಟಗೆ ಗೋಕರ್ಣಕ್ಷೇತ್ರಕ್ಕೆ ಹೋಗಿ ಅಲ್ಲಿ ಕೆಲಕಾಲ ಇದ್ದು ಮೇಲೆ ಇಲ್ಲಿಗೆ ಬಂದರು. ಕಾಂಗ್ರೆಸ ಕಾರ್ಯದಲ್ಲಿ ಸೇರದಂತೆ ಪ್ರತಿಬಂಧಕ ಹುಕುಮನ್ನು ಡಿ। ಮೆಜಿಸ್ಟ್ರೇಟರು ಜಾರಿಗೊಳಿಸಿದರು. ಅದು ಅವರ ಮೇಲೆ ಜಾರಿಯಾಗಲಿಲ್ಲ ಈ ಹುಕುಮನ್ನು ಜಾರಿಮಾಡಿಕೊಳ್ಳಬೇಕಾದವರು ತಪ್ಪಿಸಿಕೊಳ್ಳುತ್ತಾರಾಗಿ ಗೃಹಪಾಲನೆಯಲ್ಲಿಯೇ ಖಟ್ಲೆ ನಡೆದು ಅವರ ಸ್ವಾಧೀನ ಆಸ್ತಿ ಜಪ್ತಿಯ ಹುಕುಮು ಸಹ ಆಯಿತು. ಈ ಹುಕುಮನ್ನು ಕ್ರಮ ಬಾಹಿರವಾದುದು ಎಂದು ಅವರ ತಮ್ಮಂದಿರಾದ ದಿ। ಹಳದೀಪೂರಕರ ಕೃಷ್ಣರಾಯರು ಹೈಕೋರ್ಟಿಗೆ ಮಾಡಿದ ಅರ್ಜಿಯನ್ನು ನ್ಯಾಯಮೂರ್ತಿ ಮಿ। ಮರ್ಫಿಯವರು ಮನ್ನಿಸಿ ಆ ಜಪ್ತಿ ಹುಕುಮನ್ನು ರದ್ದುಗೊಳಿಸಿದ್ದರು. ಬ್ರಿಟಿಶ ಹಿಂದುಸ್ಥಾನದ ಹೊರಗೆ ಗೋಕರ್ಣಕ್ಷೇತ್ರದಲ್ಲಿರುವ ಪ್ರಜಾ ಜನರ ಮೇಲೆ ಡಿ। ಮೆಜಿಸ್ಟ್ರೇಟರಿಗೆ ಆಯಿತೆಂತ ಹುಕುಮು ಹೊರಡಿಸುವಂತಿಲ್ಲವಾಗಿ ನ್ಯಾಯಮೂರ್ತಿಗಳ ಅಭಿಪ್ರಾಯ. ದಿ। ಹಳದೀಪೂರಕರವರಿಗೆ ವಿಧಿಸಿದ ರೂ ೩೦೦ ದಂಡದ ರಕಮು ಪಡೆಯಲಾಗಲಿಲ್ಲ ಪೋಲೀಸರು ಜಪ್ತಿ ಮಾಡಿದರು. ಅವಿಭಕ್ತ ಕುಟುಂಬದ ವಸ್ತುಗಳನ್ನು ಜಪ್ತಿ ಮಾಡುತ್ತಿರುವದರಿಂದ ದಿ। ಹಳದೀಪೂರ ಕೃಷ್ಣರಾವ ಮೊದಲಾದವರು ಸರಕಾರದ ಮೇಲೆ ದಾವೆ ಹೂಡಿರುತ್ತಾರಾಗಿ ತಿಳಿದು ಬಂದಿದೆ

ಹೊನ್ನಾವರ ತಾಲೂಕಿನ ಸಾಲಕೋಡದ ದಿ। ಗಣಪತಿ ವೆಂಕಟ್ರಮಣಭಟ್ಟ ಹಾಗು ಕೆಳಗಿನೂರಿನ ದಿ। ಗಣೇಶ ತಿರುಪತಿಹೆಗಡೆ ಇವರ ಮೇಲೆ ಶಾರದಾ ಕಾನೂನಿನಂತೆ ೧೪ ವರ್ಷವಾಗದ ಅಪ್ರಾಪ್ತ ಹುಡುಗಿಯನ್ನು ಮದುವೆ ಮಾಡಿದ ಬಗ್ಗೆ ಡಿ। ಮೆಜಿಸ್ಟ್ರೇಟರ ಮುಂದೆ ಖಟ್ಲೆ ನಡೆದು, ಮದುಮಗನಾದ ದಿ। ಗಣಪತಿ ಭಟ್ಟರಿಗೆ ರೂ ೭೫೦ ಮಾವನಾದ ದಿ। ಗಣೇಶ ಹೆಗಡೆಗೆ ರೂ ೫೦೦, ದಂಡ ವಿಧಿಸಲಾಗಿತ್ತು. ಫಿರ್ಯಾದಿ ಕಡೆ ಪುರಾವೆ ಕೊಡಬೇಕಾಗಿ ಅಪ್ಪಣೆಯಾಗಿತ್ತು. ಶಾರದಾ ಕಾನೂನಿನಂತೆ ಇದು

ನಮ್ಮ ಜಿಲ್ಲೆಯಲ್ಲಿ ನಡೆದ ಮೊದಲನೇ ಖಟ್ಲೆ ಎಂಬುದು ಮೇಲಿನ ಆಪೀಲಿನ ನಿರ್ಣಯದ ಮೇಲೆ ವಿದಿತವಾಗುವದು. ದಿ। ಮೆಜಿಸ್ಟ್ರೇಟರು ತಮ್ಮ ತೀರ್ಪಿನಲ್ಲಿ ಬರೆದಿದ್ದಾರೆ. ಈ ಹುಕುಮಿನ ಮೇಲೆ ಇಲ್ಲಿಯ ಸೆಶನ್ಸ ಕೋರ್ಟಿನಲ್ಲಿ ದಾಖಲಾದ ಅಪೀಲನ್ನು ಸೆಶನ್ಸ ಜಜ್ಜರು ತಿರಸ್ಕರಿಸಿದ್ದರೂ ಆರೋಪಿ ಮೆಜಿಸ್ಟ್ರೇಟರಿಂದ ವಿಧಿಸಿದ ದಂಡದ ರಕಮು ಹೆಚ್ಚಾದ್ದಾಗಿ ಸೆಶನ್ಸ ಜಜ್ಜರ ಅಭಿಪ್ರಾಯ.

ಕಳೆದ ೧೫ ದಿನಗಳಿಂದ ಎಡೆಬಿಡದೆ ಮಳೆ ಬೀಳುತ್ತದೆ

ಬಿಕಾರ ಮಂಡಳದ ಹಿತಚಿಂತಕರೇನಂದರೆ — ಇಲ್ಲಿಯ ಹೈಸ್ಕೂಲು ಹಾಗು ಕನ್ನಡ ಶಾಲೆಗಳ ಬಗ್ಗೆ ಮ್ಯುನಿಸಿಪಾಲಿಟಿಯವರು ಬೇಡಿಕೆಯ ಪತ್ರಗಳನ್ನು ತಾ. ೫-೬ ತಿಂಗಳಿನ ಅವಧಿಯೊಳಗೆ ಕನ್ನಡ ಶಾಲೆಯ ಹಿಂಬದಿಯಲ್ಲಿ ಆರೋಗ್ಯದ ಕಾರಣಕ್ಕೆ ಯೋಗ್ಯ ಗಿಡಗಳು ಬೆಳೆಯುತ್ತವೆ. ಮ್ಯುನಿಸಿಪಾಲಿಟಿಯವರು ಕಣ್ಣು ಮುಚ್ಚಿಕೊಂಡಿದ್ದಾರೆ, ಈ ವಿಷಯದ ಕಡೆ ಶಾಲೆ ಕಮೀಟಿ ಮತ್ತು ಮ್ಯುನಿಸಿಪಾಲಿಟಿಯವರು ಲಕ್ಷ್ಯಕೊಟ್ಟು ಪರಿಹರಿಸಬೇಕಾಗಿ ವಿನಂತಿ

— ಸರ್ ಬಾಲಚಂದ್ರ. ನಕ್ಷತ್ರರವರು ಪ್ರಾಂತಿಕ ಗವರ್ನರ ಕೌನ್ಸಿಲಿನ ಸದಸ್ಯರ ಜಾಗೆಯ ರಾಜಿನಾಮೆ ಕೊಟ್ಟಿದ್ದಾರೆ. ಅವರ ಸ್ಥಾನಕ್ಕೆ ಸರದಾರ ಸಿ—ಆ ಸಾವಂತ ದೇಸಾಯಿ ಯವರು ನಿಯಮಿಸಲ್ಪಟ್ಟಿದ್ದಾರೆ

— ಸತ್ಯಾಗ್ರಹಾಶ್ರಮದಲ್ಲಿ ಕುಮಾರಿ ಚಂದನ ಬೆಂಗೇರಿಯವರಿಗೂ, ಶ್ರೀ। ಸ್ವಾಮಿ ಕೃಷ್ಣ ಬೆಂಕರರವರಿಗೂ ವಿವಾಹವಾಯಿತು ಕುಮಾರಿ ಚಂದನ ಬೆಂಗೇರಿ ಮತ್ತು ಮಹಾತ್ಮರ ಪರಿವಾರದವರ ಸ್ಯಾನಿಟೋರಿಯಂ ಶ್ರೀ। ಮಾಲವೀಯ ಯವರ ಸಂಚಾರ ಮೊದಲ ಉತ್ತರ ತಾಸಿನಲ್ಲಿ ವಿವಾಹ ಸಮಾರಂಭ ಸಾಗಿಯಿತು ಮಹಾತ್ಮರು ದಂಪತಿಗಳಿಗೆ ಆಶೀರ್ವದಿಸಿದರು. ಮದುಮಗನ ತಂದೆ ಮಹಾತ್ಮರಿಗೆ ೫೦೦೦ರೂ ಗಳ ಕಾಣಿಕೆಯ ನ್ನಿತ್ತನು.

— ವಿಜಾಪುರದಲ್ಲಿ ಸಿದ್ಧೇಶ್ವರ ಸಂಸ್ಥೆಯವರು ಆಸ್ತಿಯಾದ ಕುಮಾರಿ ಮೋಹಿನಿ ಬಾಯರ ಎಂಬವರಿಗೆ ವೀರಶೈವ ದೀಕ್ಷೆ ಕೊಟ್ಟರು. ಈ ದೀಕ್ಷಾ ಸಮಾರಂಭಕ್ಕೆ ಬಹುಜನರು ಸೇರಿದ್ದರು. ಮೈನಾವತಿ ದೇವಿ ಎಂದು ನಾಮಕರಣವಾಯಿತು. ವೀರಶೈವ ದೀಕ್ಷೆ ಹೊಂದಿದ ಬಳಿಕ ದಿನಗಳಲ್ಲಿ ಸಾಂಗಲಿಯ ದಂತವೈದ್ಯರಾದ ಡಾ॥ ಬಿ. ಆರ್ ನಾಯಕ ಇವರೊಡನೆ ಮೈನಾವತೀ ಬಾಯರ ಅಂತರ್ ವಿವಾಹವಾಯಿತು

— ಅರಬಸ್ತಾನದಲ್ಲಿ ಇಬ್ನಸೌದ ಅರಸರಿಗೂ, ಯಮೆನದ ಇಮಾಮರಿಗೂ ಯುದ್ಧ ನಡೆದಿತ್ತು. ಸೀಮೆಯ ಪ್ರದೇಶದೊಳಗಿನ ಅಸೀರ ದಜರಾಣ ಗ್ರಾಮಗಳನ್ನು ಸೌದಿ ರಾಜ್ಯದಲ್ಲಿ ಸೇರಿಸಬೇಕಾಗಿ ಗೊತ್ತಾಗಿದೆ. ಒಂದನೆ ಒಬ್ಬರಿಗೆ ಮತ್ತೊಬ್ಬರು ಕಾಡುವದಿಲ್ಲ ಪರದೇಶ ಧೋರಣವು ಇಬ್ಬರದೂ ಒಂದಾಗಿರಬೇಕು ಇಬ್ಬರಿಗೂ ಸ್ವತಂತ್ರಯಾದ ಹೊರತು ಪರದೇಶದವರೊಡನೆ ಸಂಧಿ ಮಾಡಕೂಡದು. ಪರದೇಶದಲ್ಲಿ ಸೌದಿರಾಯಭಾರಿಗಳೇ ಯೆಮನದ ರಾಯಭಾರ ನಡಿಸಬೇಕು. ಸೌದಿ ರಾಜ್ಯದೊಳಗಿನ ದ್ರೋಹಿಗಳಿಗೆ ಯೆಮೆನದವರು ಆಶ್ರಯ ಕೊಡಬಾರದು, ಯೆಮೆನದವರು ಆಶ್ರಯ ಕೊಡಕೂಡದು. ಇತ್ಯಾದಿ ಸ್ಥಿತಿಯಲ್ಲಿಯೂ ವಿಚಾರವಾಗಿ ಅಧಿಕ ಯೋಜನೆಯ ನಿರ್ಣಯವಾಗಬೇಕು

— ಶ್ರೀ। ದತ್ತಾತ್ರೇಯ ಕಾಲೇಲಕರರವರು ಸಿಂಧ ಪ್ರಾಂತದೊಳಗಿನ ಹೈದರಾಬಾದ ಜೈಲಿನಲ್ಲಿದ್ದಾರೆ ಅವರು ಅಸ್ವಸ್ಥ ಇದ್ದುದ್ದಾಗಿ ಮುಂಬಯಿಯಲ್ಲಿ ಸುದ್ದಿ. ಶ್ರೀ। ಕಾಲೇಲಕರರವರು ಬರೆದ ಪತ್ರಗಳ ಕೆಲ ಭಾಗವನ್ನು ಜೈಲು ಅಧಿಕಾರಿಗಳು ಒರಸಿ ತೆಗೆದಿದ್ದಾರಾಗಿಯೂ, ಅಸ್ವಸ್ಥತೆಯ ವಾರ್ತೆ ತಿಳಿಯಬಾರದಾಗಿ ಈ ಪ್ರಕಾರ ಮಾಡಿಸಿದರಾಗಿಯೂ ಮುಂಬಯಿಯ ಸುದ್ದಿಗಾರರ ಅನುಮಾನ

ಮಕ್ಕಳಿದ್ದರೆ ಮನೆ ಚಂದ!

ಮಕ್ಕಳ ಫಲದ

ಬಂಜೆತನದಿಂದ ಮುಕ್ತರಾಗುವಿರಿ!

ಚಿಂತಿಸ ಬೇಡಿರಿ

ಗರ್ಭಧಾರಣ ಸಂಜೀವನೀ.

ಈ ನಮ್ಮ ಅನುಭವಿಕ ಔಷಧ ಮೂರು ದಿನ ಋತುಸ್ನಾನ ಆಗುವ ವರೆಗೆ ಪ್ರತಿಸಾರ ಕೊಟ್ಟು ಮೂರು ದಿವಸ ತಪ್ಪದೆ ಉಪಯೋಗಿಸಿದರೆ ಪುತ್ರಲಾಭ ಆಗುವದು. ೧ ಗುಳಿಗೆಗಳ ಕಿಂ. ರೂ ೩. ಪೋ. ಖ. ೫ ಆಣೆ. ಅನುಪಾನ ಪತ್ರಿಕೆ ಸಂಗಡ

ಪತ್ತೆ— ವೈದ್ಯ ವ್ಹಿ. ಎಸ್. ಕಾಪಸೇ, ಮಿರಜ. (S M C)

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ.—1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂಪನಿ ದಾರರೂ, ಡೈರೆಕ್ಟರರೂ ಬಹಳ ಹೆಸರಾದವರು ಇದ್ದಾರೆ. ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents— D.K NAYAK Bros
Honavar Agent R V PARBHU Esq.

K. Padmanabha Rao & Sons,
BELGAUM
Chief Agents for
Karnatak Districts & S. M. States

ಈಗಿನ ಪ್ರಪಂಚ.

(೯ನೇ ಪುಟದಿಂದ ಮುಂದರಿದಿದೆ)

ಕಮಿಟಿಯವರೂ ನೆರವಾಗುತ್ತಿದ್ದಾರೆ ಮಹಾಲಕ್ಷ್ಮಿಯೊಳಗಿನ ಕುದುರೆ ಶರ್ಯತ್ತಿನ ಬೈಲಲ್ಲಿ ರಾಷ್ಟ್ರೀಯ ಸಭಾಮಂಟಪವನ್ನು ಏರ್ಪಡಿಸಬೇಕೆಂದು ಗೊತ್ತಾಗಿದೆ ಇಲ್ಲಿ ರಾಷ್ಟ್ರಸಭೆಯ ಮಂಟಪದ ಏರ್ಪಾಟು ಒರಿ ಬಳಿಯಲ್ಲಿರುವ ಡೆವ್ಹಲಪ್‌ಮೆಂಟ ಖಾತೆಯ ಕೊಠಡಿಗಳಲ್ಲಿ ಪ್ರತಿನಿಧಿಗಳಿಗೆ ಉಳಕೊಳ್ಳಲು ಏರ್ಪಾಟು ಮಾಡಲನುಕೂಲವಿದೆ ಸುಮಾರು ೧೦೦ ಚಾಳಗಳಿದ್ದು ಒಂದೊಂದರಲ್ಲಿ ೨೦೦ರಂತೆ ಪ್ರತಿನಿಧಿಗಳ ವ್ಯವಸ್ಥೆ ಮಾಡುವಂತಿದೆ ಸದ್ಯಕ್ಕೆ ಸ್ವಯಂಸೇವಕ ಶಿಬಿರದ ಏರ್ಪಾಟಾಗುವದು ೨೦೦೦ ಸ್ವಯಂಸೇವಕರೂ, ೧೦೦ ಮಂದಿ ಸ್ವಯಂಸೇವಿಕೆಯರೂ ಅವಶ್ಯರಿದ್ದಾರೆ ಡಾ| ಹರ್ಡೀಕರ ನಾರಾಯಣರಾಯರು ಸ್ವಯಂಸೇವಕ ಶಿಬಿರ ಸ್ಥಾಪನೆಯಲ್ಲಿ ನೆರವಾಗುವರು ರಾಷ್ಟ್ರೀಯ ಸಭೆಯೊಡನೆ ಸ್ವದೇಶಿ ಪ್ರದರ್ಶನವೂ ಜರಗುವದಿದೆ. ಮಹಾತ್ಮರು ಈಗ ಸ್ವದೇಶೀಯ ವ್ಯಾಖ್ಯೆಯನ್ನು ಬದಲಿಸಿದ್ದಾರೆ. ಕೈಯಿಂದ ತಯಾರಿಸಿದ ವಸ್ತುಗಳು ಮಾತ್ರ ಸ್ವದೇಶಿ, ಮುಂಚೆ ಈ ವ್ಯಾಖ್ಯೆ ಗಿರಣಿಗೆ ಮಾತ್ರ ಲಾಗು ಇತ್ತು, ಆದರಿಂದ ಸ್ವದೇಶಿ ಪ್ರದರ್ಶನದಲ್ಲಿ ಗಿರಣಿ ಗಿರಣಿಗ ಪ್ರವೇಶವಿರಲಿಲ್ಲ ಹೊಸ ವ್ಯಾಖ್ಯೆಯ ಮೂಲಕ ಯಂತ್ರವು ತಯಾರಿಸುವ ಯಾವತ್ತೂ ವಸ್ತುಗಳನ್ನು ಬಹಿಷ್ಕರಿಸಬೇಕಾಗಿದೆ ಆದ ಕಾರಣ, ಮರ್ಯಾದೆಯಂತೆ ಸ್ವದೇಶಿ ಪ್ರದರ್ಶನವೊಂದು ಖಾದಿ ಪ್ರದರ್ಶನವೊಂದು, ಹೀಗೆ ಬೇರೆ ಬೇರೆ ಪ್ರದರ್ಶನಗಳನ್ನು ಸೇರಿಸದ ರಾಷ್ಟ್ರೀಯ ಸಭೆಯ ಅಧಿವೇಶನದೊಡನೆ ಒಂದೇ ಒಂದು ಸ್ವದೇಶಿ ಪ್ರದರ್ಶನವನ್ನು ಸೇರಿಸಬೇಕೆಂದು ಪ್ರದರ್ಶನ ಮಂಡಳದ ನಿರ್ಣಯವಾಗಿದೆ

***

ರಾಷ್ಟ್ರೀಯ ಸಭೆಯ ವಾರದಲ್ಲಿ ರಾಷ್ಟ್ರೀಯ ಸಭೆಯ ಸುವರ್ಣ ಜ್ಯುಬಿಲಿ ಮಹೋತ್ಸವವನ್ನು ಸೇರಿಸಬೇಕೆಂಬದೊಂದು ಕಲ್ಪನೆ ಹುಟ್ಟಿದೆ ರಾಷ್ಟ್ರೀಯ ಸಭೆಯ ವಾರದಲ್ಲಿ ಈ ಉತ್ಸವವನ್ನು ದೇಶತುಂಬ ಪಾಲಿಸಬೇಕು ರಾಷ್ಟ್ರೋದ್ಧಾರಕ್ಕಾಗಿ ಪ್ರಾಣಾರ್ಪಣ ಮಾಡಿದವರಿಗಾಗಿ ಸ್ಮಾರಕವನ್ನೇರ್ಪಡಿಸಬೇಕು, ರಾಷ್ಟ್ರೀಯ ಸಭೆಯ ಈವರೆಗಿನ ಇತಿಹಾಸವನ್ನು ಒಳಗೊಂಡ ಗ್ರಂಥವನ್ನೊಂದು ಪ್ರಕಟಿಸಬೇಕು, ರಾಜಾಶ್ರಯದಲ್ಲಿ ಮೊಟ್ಟಮೊದಲು ಮುಂಬಯಿಯೊಳಗೆ ೧೮೮೫ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆ ಸ್ಥಾಪನೆಯಾಯಿತು, ಆ ಕಾಲದಿಂದ ಈ ತನಕ ರಾಷ್ಟ್ರೀಯ ಸಭೆಯಲ್ಲಿ ಕ್ರಮವಾಗಿ ಉಂಟಾದ ಅವಸ್ಥಾಂತರಗಳನ್ನು ಆ ಗ್ರಂಥದಲ್ಲಿ ವಿವರಿಸಬೇಕು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶೌರ್ಯ ಪ್ರಕಟಿಸಿದ ಕಾರ್ಯಕರ್ತರ ಸಂಕ್ಷಿಪ್ತ ಉಲ್ಲೇಖ ಮಾಡಿ ಒಂದು ಜ್ಞಾಪಕ ಪುಸ್ತಕ ಬರೆಯಬೇಕು, ಮೆರವಣಿಗೆ, ಧ್ವಜಾರೋಹಣ, ಸಭೆ ಮೊದಲಾದವುಗಳು ಎಲ್ಲೆಲ್ಲಿಯೂ ಜರಗಬೇಕು, ಈ ಕಲ್ಪನೆಯನ್ನು ಪಂಡಿತ ಮದನಮೋಹನ ಮಾಲವೀಯರವರೂ, ಶ್ರೀ| ಮಾಧವರಾವ ಅಣೆ, ನರಸೋಪಂತ ಕೇಳಕರರವರೂ, ಜಗತ್‌ನಾರಾಯಣಲಾಲರವರೂ ಪುರಸ್ಕರಿಸಿದ್ದಾರೆ

***

ತ್ಯಾಗಿ ಸತ್ಯಾಗ್ರಹಿಗಳಿಗೆ ನೆರವಾಗಿರಿ.

ಕಳೆದ ರವಿವಾರ ತಾ ೨೪ನೇಯ ಮುಂಬಯಿಯ ಜಿನ್ನಾ ಹಾಲಿನಲ್ಲಿ ಪ್ರಚಂಡ ಸಭೆಯಾಯಿತು. ಸತ್ಯಾಗ್ರಹ ಸಂಗ್ರಾಮದಲ್ಲಿ ಸರ್ವಸ್ವವನ್ನು ಕಳಕೊಂಡು ನಿರಾಧಾರಿಗಳಾದ ಗುಜರಾಥ ಹಾಗು ಕರ್ನಾಟಕದೊಳಗಿನ ಒಕ್ಕಲಿಗರಿಗೆ ನೆರವಾಗಲು ನಿಧಿಸಂಗ್ರಹ ಮಾಡಲೋಸುಗ ಈ ಸಭೆ ಸೇರಿತ್ತು ಸೌ| ಸರೋಜಿನೀ ದೇವಿಯವರು ಅಧ್ಯಕ್ಷರಿದ್ದರು ಗುಜರಾಥ ಹಾಗು ಕರ್ನಾಟಕ ದೇಶದೊಳಗಿನ ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಡಿಸಿದ ಕಾದಾಟವು ಚಿರಸ್ಮರಣೀಯವಿದೆ ಅವರು ನಿರ್ಗತಿಕರಾಗಿದ್ದಾರೆ ಅವರ ನಿರ್ವಾಹಕ್ಕಾಗಿ ತಕ್ಕ ಯೋಜನ ಮಾಡುವದು ನಮ್ಮ ಕರ್ತವ್ಯವಿದೆಂದು ಸೌ| ಯವರು ನುಡಿದರು ನಿರಕ್ಷರ ಒಕ್ಕಲಿಗರು ಶೌರ್ಯದಿಂದ ಕಾದಾಡಿದರೆಂದು [illegible] ನರಿಮಾನರವರು ಉದ್ಗರಿಸಿದರು "ಸತ್ಯಾಗ್ರಹಿಗಳಿಗೆ ಉಳಿಯಲು ಮನೆಯಿಲ್ಲ, ಉಣ್ಣಲು ಕಾಳಿಲ್ಲ, ಇಷ್ಟಾಗಿ ಅವರು ಬೇಡುವದಿಲ್ಲ ಆದಾಗ್ಯೂ, ನಮ್ಮ ಕರ್ತವ್ಯವೊಂದಿದೆ ಒಕ್ಕಲಿಗರು ಜೀವದ ಹರಿವೆಯನ್ನೂ ಸಂಸಾರದ ಚಿಂತೆಯನ್ನೂ ಬಿಟ್ಟು ಸ್ವಾತಂತ್ರ್ಯದಲ್ಲಿ ನಿಶ್ಚಯದಿಂದ ಹೋರಾಡಿದರು ಅವರ ಸಹಾಯಕ್ಕೆ ೫ ಲಕ್ಷ ರೂಪಾಯಿ ಬೇಕು ಒಡವರು ಇಂಥ ನಿಧಿಗೆ ಹಣ ಕೊಡುತ್ತಾರೆ ಐಶ್ವರ್ಯವಂತರೇ ನೆರವಾಗುವದಿಲ್ಲ ಈ ಹಣವನ್ನು ಒಕ್ಕಲಿಗರಿಗೆ ಕೊಟ್ಟು ಅವರಿಗೆ ಬೆಳೆ ಬೆಳೆಸಲು ಸಹಾಯ ಮಾಡಲೋಸುಗ ಈ ನಿಧಿಯ ಏರ್ಪಾಟಾಗಿದೆ" ಹೀಗೆ ಶ್ರೀ| ಬುಲಾಭಾಯಿ ದೇಸಾಯಿಯವರು ಉದ್ಗರಿಸಿ, ತಾವು ೧೦ ಸಾವಿರ ರೂಪಾಯಿಗಳನ್ನು ಈ ನಿಧಿಗೆ ಅರ್ಪಿಸುತ್ತೇವೆಂದರು "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಸಂಪಾದಕರಾದ ಮಿ ಸಯ್ಯದ ಅಬ್ದುಲ್ಲಾ ಬ್ರೇಲ್ವಿಯವರೂ, ಡಾ ಹರ್ಡೀಕರ ನಾರಾಯಣರಾಯರೂ ಇತರರೂ ಭಾಷಣ ಮಾಡಿದ ಬಳಿಕ, ಸಭೆಯಲ್ಲಿ ೫೦ ಸಾವಿರ ರೂಪಾಯಿಗಳ ವರ್ಗಣಿಯಾಯಿತು ವರ್ಗಣಿ ಎತ್ತುವ ಕೆಲಸ ನಡದದೆ ಸಹಾಯ ಬೇಕಾದವರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಪರವಾಗಿ ಸಹಾಯ ಕೇಳಿಕೊಳ್ಳಬಹುದು

***

ಕರ್ನಾಟಕಪ್ರಾಂ ಕೊಂಗ್ರೆಸ ಕಮಿಟಿಯ ಸಭೆ.

ರವಿವಾರ ಸಾಯಂಕಾಲ ಧಾರವಾಡದ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಛೇರಿಯಲ್ಲಿ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭೆ ಸೇರಿತು. ಈ ಸಭೆಗೆ ಬಾಗಲಕೋಟೆ, ಬಳ್ಳಾರಿ, ಜಮಖಂಡಿ, ವಿಜಾಪುರ, ಕಾರವಾರ ಮೊದಲಾದ ಕಡೆಗಳಿಂದ ಕೊಂಗ್ರೆಸ ಕಾರ್ಯಕರ್ತರು ಬಂದಿದ್ದರು ಬೆಳಗಾವಿಯ ಶ್ರೀ| ನಾರಾಯಣರಾವ ಜೋಶಿಯವರು ಅಧ್ಯಕ್ಷರಾಗಿದ್ದರು ಈ ಸಭೆಯಲ್ಲಿ ಮನ್ನಿಸಲಾದ ಠರಾವುಗಳ ವಿವರ — (೧) ಕೊಂಗ್ರೆಸ ಕಾರ್ಯಕ್ಕಾಗಿ ಸಂಘಟನೆ ಮಾಡಲು ಶ್ರೀ| ಗಂಗಾಧರರಾವ ದೇಶಪಾಂಡೆ, ಸಿದ್ದಪ್ಪಾ ಹೊಸಮನಿ, ಗುದ್ಲೆಪ್ಪ ಹಳ್ಳಿಕೇರಿ (ಕಾರ್ಯದರ್ಶಿ), ಹಣಮಂತರಾವ ಕೌಜಲಗಿ, ದತ್ತಾತ್ರೇಯ ಕರಮರಕರ ರಾಮರಾವ ಹುಕ್ಕೇರಿಕರ, ಇವರಿಗೆ ನೇಮಿಸಲಾಯಿತು (೨) ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಮೇಲೆ ಕರ್ನಾಟಕದ ಪರಿಯಿಂದ ಶ್ರೀ| ಗಂಗಾಧರರಾವ, ಸದಾಶಿವರಾವ ಕಾರ್ನಾಡ, ಟಿ ಸುಬ್ರಹ್ಮಣ್ಯಂ (ಬಳ್ಳಾರಿ), ಇವರಿಗೆ ಸಭಾಸದರಾಗಿ ನೇಮಿಸಿಕೊಳ್ಳಬೇಕಾಗಿ ಠರಾವಾಯಿತ. (೩) ಪಾಟಣಾ ಪಟ್ಟಣದಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಠರಾವುಗಳನ್ನೂ, ವರ್ಧಾ ಹಾಗು ಮುಂಬಯಿ ಪಟ್ಟಣಗಳಲ್ಲಿ ಮನ್ನಿಸಲಾದ ಕೊಂಗ್ರೆಸ ಕಾರ್ಯಕಾರಿ ಮಂಡಳದ ಠರಾವುಗಳನ್ನೂ ಕಮಿಟಿಯವರು ಅಂಗೀಕರಿಸಿ ಅದರಂತೆ ಪ್ರಾಂತದಲ್ಲಿ ಜಿಲ್ಹಾ ಕೊಂಗ್ರೆಸ ಕಮಿಟಿಗಳನ್ನು ಏರ್ಪಡಿಸಬೇಕಾಗಿ ಠರಾವಾಯಿತು (೪) ಸತ್ಯಾಗ್ರಹದಲ್ಲಿ ಸೇರಿದ ಒಕ್ಕಲಿಗರ ಭೂಮಿ ಹಾಗು ಮನೆ ಜಪ್ತಾದ ಉತ್ತರ ಕನ್ನಡ ಜಿಲ್ಲೆಯೊಳಗಿನ ಒಕ್ಕಲಿಗರಿಗೆ ಉದ್ಧರಿಸುವದಕ್ಕಾಗಿ ಪ್ರಯತ್ನಪಡುವದು ಅವಶ್ಯವಿದೆ, ಅದರಿಂದ ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ಅಧೀನವಾಗಿ ನಡೆಯುವ ಜಿಲ್ಹಾ ಕೊಂಗ್ರೆಸ ಕಮಿಟಿಗಳೂ, ಇತರೇ ಸಂಸ್ಥೆಗಳೂ ಒಕ್ಕಲಿಗರ ಕಷ್ಟನಿವಾರಣಕ್ಕಾಗಿ ಕೂಡಲೇ ನಿಧಿಸಂಗ್ರಹ ಮಾಡಲು ತೊಡಗಬೇಕು ಆ ಕೆಲಸಕ್ಕಾಗಿ ಶ್ರೀ| ಗಂಗಾಧರರಾವ ದೇಶಪಾಂಡೆ, ಸುಬ್ರಾವ ಹಳದೀಪುರಕರ (ಕಾರ್ಯದರ್ಶಿ), ನಾರಾಯಣರಾವ ಜೋಶಿ, ಸಿದ್ದಪ್ಪ ಹೊಸಮನಿ, ಹಣಮಂತರಾವ ಕೌಜಲಗಿ, ರಾಮರಾವ ಹಡಬಿದ್ರಿ, ದತ್ತಾತ್ರೇಯ ಕರಮರಕರ, ರಾಮರಾವ ಹುಕ್ಕೇರಿಕರ, ಇವರದೊಂದು ಕಮಿಟಿಯು ರಚಿಸಲ್ಪಟ್ಟಿತು ಈ ಮುಂದಿನ ವ್ಯವಸ್ಥೆಯಾಗುವ ತನಕ ಈಗಿನ ವ್ಯವಸ್ಥೆಯಂತೆ ಶ್ರೀ| ಗಂಗಾಧರರಾಯರು ಕೆಲಸ ನಡಿಸತಕ್ಕದ್ದು, ಈ ಪ್ರಕಾರದ ಠರಾವಿನ ಮೇಲೆ ಎಲ್ಲರೂ ಸಹಾನುಭೂತಿಯಿಂದ ಮಾತನಾಡಿದರು (೫) ಅಖಿಲ ಭಾರತೀಯ ನೂಲುಗಾರರ ಸಂಘದ ಖಾದಿಯ ಮಾರಾಟವನ್ನು ಪುರಸ್ಕರಿಸಲು ಕಾರ್ಯಕರ್ತರಿಗೆಲ್ಲ ಬಿನ್ನೈಸಿಕೊಳ್ಳಲಾಯಿತು ಕರ್ನಾಟಕಸ್ಥರು ಖಾದಿಯನ್ನೇ ಧರಿಸಬೇಕಾಗಿಯೂ, ಗಿರಣಿಯ ಅರಿವೆಯನ್ನು ಧರಿಸಬಾರದಾಗಿಯೂ ಠರಾವಾಯಿತು (೬) ಶಿವಮೊಗ್ಗೆ ಹಾಗು ಕಾರವಾರ ಪಟ್ಟಣಗಳಲ್ಲಿ ಅನಾಥ ಬಾಲಕಾಶ್ರಮಗಳ ವ್ಯವಸ್ಥೆಯ ಕುರಿತು ಗದಗಿನಲ್ಲಿ ತಾ ೧೦-೫-೧೯೩೪ನೇ ಕೊಂಗ್ರೆಸ ಕಾರ್ಯಕರ್ತರು ಕೈಕೊಂಡ ಠರಾವನ್ನು ಈ ಕಮಿಟಿಯು ಮನ್ನಿಸುತ್ತದಾಗಿಯೂ ಠರಾವಾಯಿತು

***

ಅಖಿಲ ಭಾರತೀಯ ಹರಿಜನ ದಿನ,

ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಶ್ರೀ| ಘನಶ್ಯಾಮದಾಸ ಬಿರ್ಲಾರವರು ದಿಲ್ಲಿಯಿಂದ ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ ಮಹಾತ್ಮರು ಕೈಕೊಂಡ ಹರಿಜನ ಸೇವಕ ದಿಗ್ವಿಜಯ ಆಗಸ್ಟ ೨ನೇ ತಾರೀಖಿಗೆ ಶ್ರೀ ಕಾಶಿ ಕ್ಷೇತ್ರದಲ್ಲಿ ಪೂರ್ತಿಯಾಗುತ್ತದೆ ಮಹಾತ್ಮರು ಇಡೀ ದೇಶವನ್ನೇ ೯ ತಿಂಗಳ ಅವಧಿಯಲ್ಲಿ ಸಂಚರಿಸಿ ಒಂದರು ಕನ್ಯಾಕುಮಾರಿ ಭೂಶಿರದಿಂದ ಶ್ರೀ ಕಾಶೀಕ್ಷೇತ್ರದ ತನಕ ಸಂಚಾರ ಮಾಡಿದರು ಒರಿಸಾ ಪ್ರಾಂತದಲ್ಲಿ ಪಾದಚಾರಿಯಾಗಿ ಅವರು ಸಂಚರಿಸಿದರು ಶ್ರೀ ಕಾಶೀಕ್ಷೇತ್ರದಂಥ ಪುಣ್ಯಸ್ಥಾನದಲ್ಲಿ ಈ ಸಂಚಾರವು ಸಮಾಪ್ತಿಯಾಗುತ್ತದೆ ಹಿಂದು ಧರ್ಮದ ಇತಿಹಾಸದಲ್ಲಿ ಇದೊಂದು ಚಿರಸ್ಮರಣೀಯ ಘಟನೆ ಅನ್ಯಾಯ ಹರಿಜನರನ್ನುದ್ಧರಿಸಿ ಹಿಂದು ಧರ್ಮದ ಮೇಲಿನ ಕಲಂಕವನ್ನು ಹೋಗಲಾಡಿಸಲು ಕೈಕೊಂಡ ಮಹತ್ವದ ಕಾರ್ಯವಿದು ಧರ್ಮಸುಧಾರಕರು ಅಸ್ಪೃಶ್ಯತೆಯನ್ನು, ಹೋಗಲಾಡಿಸಲು ಎಂದೆಂದಿಗೂ [illegible]

ಯಬೇಕಾಗಿದೆ ಇಂಥ ಮಹತ್ವದ ದಿಗ್ವಿಜಯಪ್ರಾರ್ತಿಯನ್ನು ಪರಮ ಸಂಭ್ರಮದಿಂದ ನವು ಪಾಲಿಸತಕ್ಕದ್ದು. ಇದೇ ೮-೭-೩೪ನೇ ಎಲ್ಲೆಲ್ಲಿಯೂ ಸಭೆಗಳಾಗಿ ಮಹಾತ್ಮರಿಗೆ ಅಭಿನಂದಿಸಿ ಅವರ ಉಪಕಾರ ಸ್ಮರಣ ಮಾಡಬೇಕು. ತಾ ೨೫-೭-೩೪ಕ್ಕೆ ಮುಂಬಯಿ ಸರಕಾರದ ಪತ್ರಿಕೆಯಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಕ್ಕೂ, ಅಸ್ಪೃಶ್ಯರ ಯೋಗಕ್ಷೇಮ, ಸಾಮಾಜಿಕ ಕೊರತೆಗಳನ್ನು ಪರಿಹರಿಸಲಿಕ್ಕೂ ಆದ ಠರಾವನ್ನು ಪುನಃ ಪ್ರಸ್ತಾಪಿಸಬೇಕು. ಹರಿಜನ ಕೇರಿಗಳಿಗೆ ಹೋಗಿ ಅವರಿಗೆ ಹಿಂದೂ ಸಮಾಜದವರಂತೆ ನಡಿಸಬೇಕು. ಮಹಾತ್ಮರು ಒರಿಸಾ ಪ್ರಾಂತದಲ್ಲಿ ನಡಿಸಿದ ಕಾಲ್ನಡಿಗೆಯ ಪ್ರವಾಸವನ್ನು ಹರಿಜನ ಸೇವಕ ಪ್ರಮುಖರು ಒಂದು ವಾರ ನಡಿಸಬೇಕು. ಹರಿಜನರಿಗೆ ನೀರಿನ ಪ್ರತ್ಯೇಕ ಬಾವಿ ಮಾಡಲು ವಿಶೇಷ ಪ್ರಯತ್ನ ಮಾಡಬೇಕು. ಹರಿಜನ ಫಂಡಿಗೆ ಹಣ ಕೂಡಿಸಬೇಕು.

***

ಚಿನ್ನವೆಲ್ಲಿದೆ ?

ಲಂಡನ್ನಿನೊಳಗಿನ 'ಹೆರಲ್ಡ್' ಪತ್ರಿಕೆಯು ಚಿನ್ನದ ಪತ್ತೆ ಹಚ್ಚಿದೆ— "ಲಂಡನ್ ಪಟ್ಟಣದೊಳಗಿರುವ ಬೇಂಕುಗಳ ನೆಲಮನೆಗಳಲ್ಲಿ ಚಿನ್ನದಿಂದ ತುಂಬಿ ತುಳುಕುತ್ತಿವೆ. ಚಿನ್ನದ ಕಂಬಿಗಳು, ಚಿನ್ನದ ಪುಡಿ, ಪವನು, ಫ್ರಾಂಕು ಡಾಲರು ಮುಂತಾದ ಬೇರೆ ಬೇರೆ ದೇಶಗಳ ಚಿನ್ನದ ನಾಣ್ಯಗಳು ಇಲ್ಲಿ ತುಂಬಿಕೊಂಡಿವೆ. ಜಗತ್ತಿನೊಳಗಿನ ಚಿನ್ನವೆಲ್ಲ ಲಂಡನ್ನಿಗೆ ಹರಿದು ಬಂದಿದೆ. ಇದರಿಂದೇನು ಮಾಡಬೇಕೆಂದು ಅಧಿಕಾರಿಗಳಿಗೆ ತೋಚದು. ಕಳೆದ ವರ್ಷ ೨೦ ಕೋಟಿ ಪವನಿನ ಚಿನ್ನವಿತ್ತು. ಈಗ ೩೦ ಕೋಟಿ ಪವನಿಗೆ ಮಿಕ್ಕಿದೆ. ಇದಲ್ಲದೆ, ೧೦ ಕೋಟಿ ಪವನಿನ ವಿನಿಮಯ ಸರಿಪಡಿಸುವ ನಿಧಿಯಿದೆ. ನೋಟಿನ ಖಾತೆಯಲ್ಲಿ ೭ ಕೋಟಿ ಪವನಿನ ಚಿನ್ನ ಹೆಚ್ಚಾಯಿತು. ಇದಲ್ಲದೆ ಸರಕಾರಿ ಸಂಗ್ರಹದ ಲೆಕ್ಕ. ಜನರು ಹೆದರಿಕೊಂಡು ತಮ್ಮ ಠೇವುಗಳನ್ನು ತಿರುಗಿ ಪಡೆದು ಚಿನ್ನ ಸಂಗ್ರಹಿಸಿಟ್ಟ ರಕಮು ತಕ್ಕಮಟ್ಟಿಗೆ ೩೦ ಕೋಟಿ ಪವನಾದೀತು. ಬ್ರಿಟಿಶರು ಸ್ವದೇಶಕ್ಕೆ ಕಳಿಸಿದ ಚಿನ್ನವಿದು. ಲಂಡನ್ನಿಗೆ ಪ್ರತಿಯೊಂದು ದೇಶದಿಂದಲೂ ಚಿನ್ನ ಬರುತ್ತಿದೆ. ಜರ್ಮನಿಯು ೩೦ ಲಕ್ಷ ಪವನನ್ನು ಕಳಿಸಿಕೊಂಡಿತು. ಇವರಲ್ಲಿ ದೊಡ್ಡ ಭಾಗವು ಲಂಡನ್ನಿಗೆ ಬಂತು. ಫ್ರಾನ್ಸ ದೇಶದಿಂದ ೧೧ ಕೋಟಿ ಪವನು ಚಿನ್ನ ರಫ್ತಾಯಿತು. ಹೋಲಂಡ ದೇಶದಿಂದ ೪ ಕೋಟಿ ಪವನು, ಸ್ವಿಝರ್ಲಂಡ ದೇಶದಿಂದ ೭ ಕೋಟಿ ಪವನು ರಫ್ತಾದವು. ಕೆಲ ಚಿನ್ನ ಅಮೇರಿಕೆಗೆ ರಫ್ತಾದಾಗ್ಯೂ, ಈ ಚಿನ್ನದಲ್ಲಿಯೂ ಕೆಲಭಾಗ ಬ್ರಿಟಿಶ ದೇಶಕ್ಕೆ ತಿಕ್ಕಿತು." ಹಿಂದುಸ್ಥಾನದಲ್ಲಿ ಚಿನ್ನ ತುಟ್ಟಿಯೆಂದು ಚಿನ್ನ ಮಾರಿ ದುಡ್ಡು ಮಾಡುವವರು ಜಾಣರೋ? ಠೇವುಗಳನ್ನು ತಿರುಗಿ ಪಡೆದು ಚಿನ್ನ ಕೊಂಡಿಡುವ ಬ್ರಿಟಿಶ ದೇಶದವರು ಜಾಣರೋ? ಲೌಕಿಕ ವ್ಯವಹಾರದಲ್ಲಿ ಹಿಂದೀಯರಿಗಿಂತ ಬ್ರಿಟಿಶರು ಜಾಣರೆಂದು ಎಲ್ಲರೂ ಒಪ್ಪತಕ್ಕಂಥ ಮಾತು.

———◎———

ವೃತ್ತಸಾರ.

— ಮುಂಬಯಿಯಲ್ಲಿ ಪೋಲೀಸರು ಪರ್ವಕ್ಕೆ ಒಂದು ಜುಗಾರು ಮನೆ ಹಿಡಿದರು. ೩೫೦ ಧಿಗಳಿಗೆ ಪೋಲೀಸರಿಗೆ ಲಂಚ ತಿಂದು ಬಿಟ್ಟರೆಂದೂ, ಅವರ ಒಬ್ಬನಿಗೆ ಸಿರಪರಾಧಿಗಳೊಬ್ಬನನ್ನು ಹಿಡಿಸಿಕೊಂದರೆಂದೂ ಆರೋಪ ಬಂದು ಅದರ ಚೌಕಶಿಯಾಗಿ ಇಬ್ಬ ಪೌಜದಾರರಿಗೆ ಬಡತರ್ಫ ಮಾಡಲಾಗಿದೆ.

— ಪಂಜಾಬ ಪ್ರಾಂತದ ರುಪಾರ ಎಂಬ ಗ್ರಾಮದೊಳಗಿನ ಕಾಳು ಕಡಿ ಪೇಟೆಯ ಮಧ್ಯಭಾಗದಲ್ಲಿ ಕಹಿಬೇವಿನ ಮರವಿದೆ. ಜೂನ ೧ನೇ ತಾರೀಖಿನ ರಾತ್ರಿ ೧೧ ಘಂಟೆ ಸಮಯ ಆ ಮರದೊಳಗಿಂದ ಬೆಂಕಿಯ ಕಿಡಿಗಳು ಹಾರಲಾರಂಭಿಸಿದವು. ೧-೧॥ ತಾಸಿನ ತನಕ ಈ ಬೆಂಕಿಯ ಮಳೆ ಸುರಿಯಿತು. ನಿಂತ ಬಳಿಕ ಅಲ್ಲಿ ಹೋಗಿ ನೋಡಲು ಅಲ್ಲಿ ಏನೂ ಇರಲಿಲ್ಲ, ಬೂದಿ ಸಹ ಇರಲಿಲ್ಲ. ಬೇವಿನ ಮರ ಇದ್ದಕಿದ್ದ ಹಾಗೆ ಇತ್ತು. ಇದೇ ಪ್ರಕಾರ ೪೩ ವರ್ಷಗಳ ಹಿಂದ ಸಂಭವಿಸಿತ್ತಾಗಿ ಅಲ್ಲಿಯ ವೃದ್ಧರು ಹೇಳುತ್ತಾರೆ. ಈ ಪ್ರಕಾರ ಲಾಹೋರದ 'ಟ್ರಿಬ್ಯೂನ' ಪತ್ರಿಕೆಯ ಅಂಬಾಲಾ ಸುದ್ದಿಗಾರರ ವಾರ್ತೆ.

— ಶ್ರೀ ಕಾಶೀ ಮಠಾಧೀಶರಾದ ಶ್ರೀ ಸುಕೃತೀಂದ್ರ ತೀರ್ಥಸ್ವಾಮಿಗಳು ಮುಂಬಯಿಗೆ ಚಿತ್ತೈಸಿದ್ದಾರೆ. ಗೌಡಸಾರಸ್ವತ ಬ್ರಾಹ್ಮಣ ಸಮಾಜದವರು ಶ್ರೀಗಳಿಗೆ ಸಂಭ್ರಮದಿಂದ ಶ್ರೀ ವಾಲಕೇಶ್ವರದೊಳಗಿನ ಮಠಕ್ಕೆ ಕರೆದೊಯ್ದರು.

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಿರಿ.

ಆದರೆ, ಬಹುತ್ತ ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಉಪೇಕ್ಷೆ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅವುಗಳ ಕುರಿತು ಲಕ್ಷಗೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಒಳ್ಳೇ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಸ್ನಾನದ ತರುವಾಯ ಈ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದರೆ ಕೂದಲಿನ ತಲೆಯ ಹೊಟ್ಟು ಹೋಗುತ್ತದೆ. ರೋಮರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ. ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತಿದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೨—೦
ಅಂಚವೆಚ್ಚ	,,	೦—೧೦—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

——— ೦ ———

೩ ಔಂಸಿಗೆ	ರೂ.	೨—೦—೦
ಔಂಸಿಗೆ	"	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ ದಿಲ್ ಬಹಾರ ಲಕ್ಷ್ಯ ಮರೆಯಬೇಡಿರಿ !

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು ?

ಓಟ್ಟೋ-ದಿಲ್ ಬಹಾರ್ ! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಓಟ್ಟೋ ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.,

POST BOX 2082 **BOMBAY No 2.**

ಶ್ರೀ

'ದಶಮೂಲಾರಿಷ್ಟ.'

'ದಶಮೂಲಾರಿಷ್ಟ'

ಇದು ಬಹುತರಾಗಿ ಎಲ್ಲ ಆರ್ಯುವೈದ್ಯರಿಗೂ ಹಾಗೂ ಎಲ್ಲ ಡಾಕ್ಟರುಗಳಿಗೂ [illegible] ಅವರಿ [illegible] ನಮ್ಮ ವೈದ್ಯರು ಎಲ್ಲಾ ಕಡೆಯಲ್ಲಿ [illegible] ವಿಧಿಯಾಗಿ [illegible] ದಶಮೂಲಾರಿಷ್ಟವು [illegible] ನಮ್ಮ ವೈದ್ಯರ [illegible] ರೀತಿಯಿಂದ ತಯಾರಿಸಿ [illegible] ಈ ಔಷಧಿ [illegible] ಇದರ ಗುಣವು [illegible]

ಈ ಔಷಧದಿಂದ [illegible] ಶಕ್ತಿಯನ್ನು [illegible]

ವಾತದ ಅರುಚಿ, ಕೆಮ್ಮು, ದಮ್ಮು, [illegible] (ವಾತ, ಪಿತ್ತ, ವಾಂತಿ) [illegible] ರೋಗ, ರಕ್ತ ಸಂಬಂಧದ ಕ್ಷಯ ವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ [illegible] ಹೆಂಗಸರಿಗೆ ಪ್ರಸವ [illegible] ಯಾವ [illegible] ರೋಗಗಳಿಗೆ [illegible]

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ [illegible] ನಂತರ (ದಿನ ಎರಡಾವರ್ತಿ) [illegible] ದಿನಗಳ ವರೆಗೆ ಕೊಟ್ಟರೆ [illegible] ಯಾವದೇ ತರದ ರೋಗಗಳು ಮುಂದೆ ಆಗದೆ [illegible]

[illegible]

೧ ಪೌಂಡ ಬಾಟ್ಲಿ ೧ಕ್ಕೆ ರೂ ೧—೮—೦
,, ಬಾಟ್ಲಿ ೬ಕ್ಕೆ ರೂ ೮—೧೨—೦
,, ಬಾಟ್ಲಿ ೧೨ಕ್ಕೆ ರೂ ೧೭—೦—೦

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯುವೇದ ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ ಕನ್ನಡ)

ನಾರಿನ ಮೇಲೆ ರಾಮಬಾಣ!

ಮೂರು ದಿವಸಗಳಲ್ಲಿ ನಟ್ಟಗಾಗಿ ಮುಂದ ಎಂದೂ ಆಗುವದಿಲ್ಲ [illegible] ತರಿಸಿ ಕೊಳ್ಳಿರಿ [illegible]

ಪತ್ತೆ — ವೈದ್ಯ ವ್ಹಿ. ಎಸ್. ಕಾಪಸೇ, ಮಿರಜ. S.M.C.

[illegible] ಜಗತ್ತು] ೧೦೦೦ ರೂಪಾಯಿ ಇನಾಮು. [ಬಂದ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಪೆಡ

ಧಿಕ್ಕರಿಸಿದರೆ ಕ್ಷೀಣತೆ ಕಾಯುದ್ದ ಕೋಲ್ವರಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು, ಮತ್ತು ಮುಷ್ಟಿ ಮೈಥುನದಿಂದ, ಬಾಲ್ಯ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ [illegible] ವೀರ್ಯ ಸ್ಖಲನ, ಪಮರ್ಮ, ಗರ್ಮಿಯ ದೋಷ, ಉಷ್ಣತೆ, ಪಿತ್ತಪ್ರಕೋಪ, ನಡ, ಬೆನ್ನು ಸೆಳವು, ಸೊಂಟ ಕಡಿತ ಒಲೋಣ, ಯಾವದೇ ತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ; ಇವೆಲ್ಲ ರೋಗಗಳು [illegible] ಗಟ್ಟಿತನ, ಸ್ಥಂಭನ, ಶರೀರಿಕ ತರುಣತ್ವ ಕಾಮೋತ್ತೇಜನ [illegible] ಸ್ಮರಣ ಶಕ್ತಿ ಮತ್ತು ಕಣ್ಣು ತೂಕ ಬೆಳೆಯುತ್ತದೆ. ಇದರಿಂದ [illegible] ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗ ನಿವಾರಣೆ ಚೂರ್ಣವನ್ನು [illegible] ಗರ್ಭಾಶಯವು ಶುದ್ಧಿಯಾಗುತ್ತದೆ [illegible] ಸಂತತಿಯಾಗಲಿಕ್ಕೆ [illegible] ಪೂರ್ಣ ಗುಣವಾದ [illegible] ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, [illegible] ಅನುಭವ ಪತ್ರಿಕೆಯಲ್ಲಿ [illegible]

ಸ್ತ್ರೀ ರೋಗ ನಿವಾರಣೆ ಚೂರ್ಣ.

ಎಲ್ಲ ಒಟ್ಟಿದ ಕೆಲಗು, ಮುಟ್ಟಿಕಟ್ಟು ಆಗುವದು, ಅನಿಯಮಿತತನ, ಹೆಚ್ಚು ಕಡಿಮೆ [illegible] ಆಗೋಣ, [illegible] ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ [illegible] ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು [illegible] ಎದೆ ಬಡಿಯೋಣ, [illegible] ಗರ್ಭಾಶಯದೋಷ, ಗರ್ಭಧಾರಣೆ ಆಗದೇ ಇರೋಣ, ಗರ್ಭಪಾತ [illegible] ಇವೆಲ್ಲ ಸ್ತ್ರೀರೋಗಗಳು ಹೋಗಿ ತ್ವರೆ ಮುಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವ [illegible] ಅವಶ್ಯವಾಗಿ [illegible] ೪೦ ವರ್ಷದ ಸ್ತ್ರೀಯರ [illegible] ಸಂತತಿಗಳಾಗುತ್ತವೆ. ೬೦ ದಿವಸ ಸಾಲುವ ಪೂರ್ಣ ಗುಣವಾಗುವ [illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible] ಯಾವ ಸ್ತ್ರೀಯರಿಗೆ ಗರ್ಭಧಾರಣೆ ವಹಿಸುವ [illegible] ಅತಿ ತೀವ್ರ ಇದೆ, [illegible] ಕಷ್ಟವನ್ನು ಸಹಿಸೋಣವಾಗುವದಿಲ್ಲ ಮತ್ತು [illegible] ಸ್ಥಿತಿಯಲ್ಲಿ [illegible] ಮತ್ತು ಯಾವ ಸ್ತ್ರೀಯರಿಗೆ ಭಯಂಕರ [illegible] ಕಾರಣದಿಂದ ಸಂತತಿ ಇಚ್ಛಾ [illegible] ಅವರಿಗೆ ಈ ಉಪಯುಕ್ತ [illegible] ಶರೀರದಲ್ಲಿಯೂ, ಸಂಸಾರ ಸುಖದಲ್ಲಿಯೂ [illegible] ಆಗುವದು, ಸುರು ಇದ್ದ ಗರ್ಭಧಾರಣೆ ಒಂದು [illegible] ಸುರು ಆಗುವದಿಲ್ಲ ಹೀಗೆ ಖಚಿತವು ಇದೆ. ಪೂರ್ಣ ವಿಚಾರ ಮಾಡಿ [illegible] ಪೂರ್ಣ ಗುಣಕಾರಿ ಒಂದು [illegible] ಮತ್ತು ನಮ್ಮ ಕಡೆಗೆ ಇರುವ [illegible]

ಮಾಲಕ:— ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. M. S. M.

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿದಂದಿನಿಂದ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಿಗೆ ಉಂಟಾಗತಕ್ಕ ಸರ್ವ ವ್ಯಾಧಿಗಳು, ಶಾಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೇ ತಂತಕ್ಕೆ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು [illegible] ಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ

(Registered Trade Mark)

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ [illegible]

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ೪ ಆಣೆ ಡಜನ್ ೧ಕ್ಕೆ ರೂ. ೨-೮-೦. ವಿ ಪಿ ೦ ೬ ೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸದ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦, ಪಾರ್ಕಟೌನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ವ್ಯಾಸಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಒಫ್ ಕೆನರಾ ಪ್ರೆಸ್ಸಿ"ನಲ್ಲ ಮುದ್ರಿಸಿ ಪ್ರಕಟಿಸಿದರು

Reg. No. B. 1270. Monday, 9th July, 1934.

ವರ್ಷ ೧೭

ಸಂಚಿಕೆ ೩

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವ ರೂಪಾಯಿ 2-1-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಯಿಂದ ಕಳಿಸಿದ್ದರೆ ರೂಪಾಯಿ 3-3-0
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1-0-0 ೮ ನಂತರ ಪ್ರತಿಸಾಲಿಗೆ 0-2-0. ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೯ ನೇ ಜುಲೈ ಸನ್ ೧೯೩೪ನೇ ಇಸವಿ.)—

ದಿ ಪ್ರೆಸಿಡೆನ್ಸಿ ಲೈಫ್

ಇನ್ಶೂರನ್ಸ ಕಂಪನಿ, ಲಿಮಿಟೆಡ್.

ಹೆಡ್ ಓಫೀಸು — ಯೋರ್ಕ ಬಿಲ್ಡಿಂಗ

ಹೊರ್ನಬಿ ರೋಡ, ಫೋರ್ಟ, ಮುಂಬಯಿ.

ಇಲ್ಲಿ ಎಲ್ಲ ತರದ ಜೀವವಿಮೆ ಇಳಿಸಲ್ಪಡುತ್ತದೆ "Insurance Vade-Mecum" 1932 ಎಂಬ ವಿಮೆ ವಿಷಯಕ ಪತ್ರಿಕೆಯು ಬರೆಯುವದೇ ನೆಂದರೆ— 'ಪ್ರೆಸಿಡೆನ್ಸಿ'ಯ ಮೊದಲನೇ ವಾರ್ಷಿಕ ರಿಪೋರ್ಟಿನ ಮೇಲಿಂದ ಕಂಪನಿಯು ಆದಕ್ಷತೆಯನ್ನು ದಕ್ಷತೆಯಿಂದಲೂ, ಮಿತವ್ಯಯದಿಂದಲೂ ನಡಿಸುತ್ತದೆಂದು ಸ್ಪಷ್ಟವಾಗುತ್ತದೆ. ಕಂಪನಿಯು ಆಡಳಿತ ಖರ್ಚಿನ ಪ್ರಮಾಣವು ಶೇಕಡಾ ೪೯-೭ರಂತೆ ಬಿತ್ತು ಬಂದ್ಯಾವನ್ನು ಯಲ್ಲಿ ಇಷ್ಟು ಕಾರ್ಯವನ್ನು ಯಾವದೇ ಜೀವ ವಿಮಾ ಕಂಪನಿಯು ಈ ತನಕ ತೋರಿಸಿಲ್ಲ

ಏಜನ್ಸಿ ನಮೂನೆ ಮಾಹಿತಿಯ ಪತ್ರಗಳಿಗಾಗಿ ಹೆಡ್ ಆಫೀಸಿಗೆ ಬರೆದುಕೊಳ್ಳಿ.

SiromaniUdipiNarayanacharya,

CHAUKHAMBA, BENARES CITY.

ಮಹಾಶಯರೇ, ರುದ್ರಸೇತಿಯ ಸ್ವಚ್ಛವಾದ ರುದ್ರಾಕ್ಷಿಗಳನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಶ್ರೀ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ವರೆ1ಕ್ಕೆ ರೂ.0 8 0ಯಿಂದ ರೂ 100 ವರೆಗೆ. ಗೌರಿಶಂಕರ 1ಕ್ಕೆ ರೂ. 3-8-0ರಿಂದ 35ರ ವರೆಗೆ ಮತ್ತು ದೇಶ ಮಾಲೆಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1-0ಸ್ಟ್ಯಾಂಪು ಕಳಿಸಿದರೆ, 1ರಾಶಿ ನಕ್ಷೆ, 1 ವಿಶ್ವೇಶ್ವರನ ಪಟ, ಪಟ್ಟಿ ಬಹುಮಾನ ಕಳಿಸಲಾಗುವದು. ಪತ್ತೆ:—

ಶಿರೋಮಣಿ ನಾರಾಯಣಾಚಾರ್ಯ,

ಚೌಕಾಂಬಾ, ಕಾಶೀ ಕ್ಷೇತ್ರ

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್

Head Office — Mukund Nivas, UDIPI

Branches — Udipi, Bangalore City, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, & Kumta.

Figures as at 31st May, 1934.

Authorised Capital (ಅಧಿಕೃತ ಮೂಲಧನ)	Rs. 5 00,000
Paid-up " (ತೆತ್ತು ಬಂದದ್ದು)	.. 58,100.
Reserve Fund (ರಿಝರ್ವ ಫಂಡು)	. 30,500.
Total Deposits (ಒಂಟು ಠೇವಣಾತಿಗಳು)	.. 10,21,148-7-3.

☞ Deposits are received at favourable rates of interest

Bills collected drafts issued and every description of Banking business transacted

For further particulars please apply to —

Kumta, 27—6—1934. T. RANGA PAI, Agent at KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಶೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

ಸಂಪೂರ್ಣ ಹಿಂದೀ ಕಂಪನಿ— ೧೯ ವರ್ಷಗಳಿಂದ ನಡೆದು ಬಂದದ್ದು.

ಹೆಡ್ ಆಫೀಸು— ಎಪೊಲೊ ಸ್ಟ್ರೀಟ, ಫೋರ್ಟ, ಮುಂಬಯಿ.

೧೯೩೦, ಇನ್ನೊಂದು ಹೆಸರಾದ ವರ್ಷ.

ಈ ವರ್ಷದಲ್ಲಿ ೧೯೨೯ನೇ ಸಾಲಿಗಿಂತ ಶೇಕಡಾ ೩೩ರಷ್ಟು ಹೆಚ್ಚಿನ ವಿಮೆ ಇಳಿಸಲಾಯಿತು. ಕಂಪನಿಯು ಹೆಚ್ಚು ಹೆಚ್ಚಾಗಿ ಲೋಕಪ್ರಿಯವಾಗುತ್ತಿದೆ— ಇದು ಜನರ ನಂಬಿಗೆಯ ಸಾಕ್ಷಿ. ವಿಮೆದಾರರಿಗೆ ತುಂಬಾ ಬಿದ್ದಿರುವದು. ಸಂಪೂರ್ಣವಾದ ರಕ್ಷಣೆಯಿದೆ. ಕಂಪನಿಯವರು ಹೊಸ ಹೊಸ ಯೋಜನೆಗಳನ್ನು ಕಲ್ಪಿಸಿದ್ದಾರೆ— ಸ್ತ್ರೀಯರೂ ವಿಮೆ ಇಳಿಸಬಹುದು. ದಿನೇ ದಿನೇ ಪ್ರಗತಿ ಹೊಂದುತ್ತಿರುವ ಈ ವಿಮಾ ಕಂಪನಿಯ ಏಜನ್ಸಿ ತೊಳ್ಳುವದರಿಂದ ಜನರಿಗೆ ಬಹು ಲಾಭವಿದೆ.

ವಿಶೇಷ ಮಾಹಿತಿಯ ಬಗ್ಗೆ ಬರೆಯಬೇಕಾದ ಪತ್ತೆ:—

ಪ್ರಮುಖ ಏಜಂಟರು:—

ಪಿ. ಎಸ್. ಶ್ಯಾನಭಾಗ ಎಂಡ್ ಬ್ರದರ್ಸ, ಕುಮಟಾ. (ಉ. ಕನ್ನಡ) ಅಥವಾ ದಿ ಮೆನೇಜರ, ಹೆಡ್ ಆಫೀಸು.

ಈಗಿನ ಪ್ರಪಂಚ.

ಗಂಗೋದಕದ ಮಹಿಮೆ

ನಮ್ಮ ಹಿಂದು ಧರ್ಮಶಾಸ್ತ್ರಗಳಲ್ಲಿ ಗಂಗೋದಕದ ಮಹಿಮೆಯು ಅಪಾರವಾಗಿ ಬಣ್ಣಿಸಲ್ಪಟ್ಟಿದೆ. ಭಗವಾನ್ ಸೀತಾದೇವಿಯು ಪಾವಿತ್ರ್ಯವನ್ನು ಗಂಗೋದಕದ ಉಪಮೆಯಿಂದ ಉಲ್ಲೇಖಿಸೋಣ [illegible] ಗಂಗೋದಕಂ ಚ ವಹ್ನಿಶ್ಚ ನಾನ್ಯತ ಶುದ್ಧಿಮರ್ಹತ ಗಂಗೋದಕವೂ, ಅಗ್ನಿಯೂ ಇತರರಿಂದ ಶುದ್ಧಿಯಾಗುವಂಥವಲ್ಲ, ಅವು ಸ್ವತಃ ಪವಿತ್ರವಿದ್ದು ಇತರ ವಸ್ತುಗಳನ್ನು ಪವಿತ್ರ ಮಾಡಬಲ್ಲವು. ಜಗನ್ಮಾತೆ ಸೀತಾದೇವಿಯು ಅಂತೆಯೇ ಪವಿತ್ರಳೆಂದು ಹೇಳಲಾಗುತ್ತದೆ. ಗಂಗೋದಕದ ಪಾವಿತ್ರ್ಯವನ್ನು ಈಗ ಪಾಶ್ಚಾತ್ಯ ವೈದ್ಯಶಾಸ್ತ್ರಜ್ಞರು ಸಹ ಮನ್ನಿಸಿದ್ದಾರೆ. 'ಗುಡ್ ಹೆಲ್ತ್' ಎಂಬ ಆರೋಗ್ಯ ಪತ್ರಿಕೆಯಲ್ಲಿ ಡಾ| ಸಿ. ನೆಲ್ಸನ್ ಎಮ್. ಡಿ. ಇವರು ಬರೆಯುವದೇನೆಂದರೆ 'ಭಾಗೀರಥಿ ನದಿಯನ್ನು ಹಿಂದುಗಳು ಪವಿತ್ರವೆಂದು ಎಣಿಸುತ್ತಾರೆ. ಅದರ ನೀರು ಎಂದೂ ಕೆಡುವದಿಲ್ಲವೆಂದು ಅವರ ಅಂಬೋಣ. ನಾವು ಪ್ರಾಚೀನ ಶಾಸ್ತ್ರಕ್ಕೆ ಮಹತ್ವ [illegible] ಧರ್ಮಶಾಸ್ತ್ರವೆಂದು ತಿಳಿದುಕೊಂಡಿದ್ದರು. [illegible] ಗನ್ನು, ಇತರ ಹಸಕಸಿಗಳನ್ನು ಆ ನದಿಯಲ್ಲಿ ಚೆಲ್ಲುತ್ತಿದ್ದರು ಇದಕ್ಕಿಂತ ಹೆಚ್ಚಿನ ಮೋಸವೇನು? ಎಂದು ನನಗನಿಸುತ್ತಿತ್ತು. ಆದರೂ, ಹುಗ್ಲಿ ನದಿಯಿಂದ ಇಂಗ್ಲಂಡ ದೇಶಕ್ಕೆ ಹೋಗಬೇಕಾಗುವ ಹಡಗದವರು ಇದೇ ಹೊಲಸು ಗಂಗಾ ನದಿಯ ನೀರನ್ನು ಸಂಗ್ರಹಿಸಿ ಒಯ್ಯುತ್ತಿದ್ದರು, ಆ ನೀರು ಇಂಗ್ಲಂಡಕ್ಕೆ ಹೋಗುವ ತನಕ ಕೆಡದೆ ಉಳಿಯುತ್ತಿತ್ತು. ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಬರುವ ಹಡಗದವರು ಲಂಡನಿನಲ್ಲಿ ಕೊಂಡ ನೀರು ಮುಂಬಯಿಗೆ ಬರುವಷ್ಟರಲ್ಲಿ ಕೆಟ್ಟು ಹೋಗುತ್ತಿತ್ತು. ಆದ್ದರಿಂದ ಹಡಗದವರು ಸಯ್ಯದ, ಸುಯೆಜ ಅಥವಾ ಏಡನ್ ಬಂದರಗಳಲ್ಲಿಯೇ ಹೊಸ ನೀರನ್ನು ಕೊಳ್ಳಬೇಕಾಗುತ್ತಿತ್ತು. ಇಷ್ಟಾಗಿ ಮುಂಬಯಿಯಿಂದ, ಕಲಕತ್ತೆಗಿಂತ ಸಮೀಪದ ಬಂದರ! ಲಂಡನಿನಿಂದ ಹಿಂದುಸ್ಥಾನಕ್ಕೆ ತರುವ ನೀರು ಥೇಮ್ಸ ನದಿಯದು. ಆ ನದಿಯ ನೀರು ಅಷ್ಟು ಹೊಲಸು. ಗಂಗಾ ನದಿಯ ನೀರು ಅಷ್ಟು ನಿರ್ಮಲ, ಹೀಗೆ ಭೇದವಿರುವದೇಕೆ? ವಿಚಿತ್ರವೇನೋ ಇರುವದು! ಗಂಗೋದಕದಲ್ಲಿಯಷ್ಟು ಹೊಲಸಿರುವದರಿಂದಲೇ ಅದು ನಿರ್ದೋಷವಿದೆ. ಇತ್ತ ಕಡೆ ನಡೆದ ಕೆಲವು ಕ್ರಿಮಿಶೋಧಗಳಿಂದ ಈ ಸಿದ್ಧಾಂತಕ್ಕೆ ಆಧಾರ ದೊರೆತಿದೆ. ಹಿಂದುಸ್ಥಾನದಲ್ಲಿ ಕಾಲರಾ ಬೇನೆ ಹಬ್ಬಿತ್ತು, ಅತಿಸಾರದ ಬೇನೆಯೂ ಹಬ್ಬಿತ್ತು. ಶ್ರೀ ಕ್ಷೇತ್ರ ಕಾಶಿಯಲ್ಲಿ ನೂರಾರು ಜನರು ಸಾಯುತ್ತಿದ್ದರು, ಅವರ ಶವಗಳು ಗಂಗಾ ನದಿಯಲ್ಲಿ ತೇಲಿ ಹೋಗುತ್ತಿದ್ದವು, ಆ ಕಾಲದಲ್ಲಿ ಫ್ರಾನ್ಸ ದೇಶದ ಡಾ| ಡಿ ಹರೇಲಿಯವರು ಇದ್ದರು ಈ ಶವ ಹೋದ ಕಡೆಗಳಲ್ಲಿ ಲಕ್ಷಾವಧಿ ಕ್ರಿಮಿಗಳಿರಬೇಕಾಗಿತ್ತು, ಆದರೆ, ಶವಗಳ ಸುತ್ತುಮುತ್ತು ಒಂದಿಂಚು ನೀರಿನಲ್ಲಿ ಒಂದೂ ರೋಗದ ಕ್ರಿಮಿ ಕಾಣಲಿಲ್ಲ. ಆದರಿಂದ ಅವರು ರೋಗಗ್ರಸ್ತರ ಶರೀರದಿಂದ ಕ್ರಿಮಿಗಳನ್ನು ಪಡೆದು ಅವನ್ನು ಬೇರೆ ನೀರಿನಲ್ಲಿ ಹಾಕಿದರು ಅವು ಲಕ್ಷಾವಧಿ ಬೆಳೆದವು, ಹೀಗೆ ಬೆಳೆಸಿದ ಕ್ರಿಮಿ (*Culture*) ಕೊಳವೆಯಲ್ಲಿ ಗಂಗೋದಕವನ್ನು ಹಾಕಿದರು ಕೆಲ ಘಂಟೆಗಳಲ್ಲಿ ಹೀಗೆ ಯಾವತ್ತೂ ಕ್ರಿಮಿಗಳು ಸಂಪೂರ್ಣವಾಗಿ ನಾಶಹೊಂದಿದವು. ಈ ಮಿಶ್ರಣದ ಒಂದು ಹನಿಯನ್ನು ಇನ್ನೊಂದು ಕ್ರಿಮಿ ತುಂಬಿದ ಕೊಳವೆಯಲ್ಲಿ ಹಾಕಲು ಆ ಕ್ರಿಮಿಗಳೂ ನಾಶವಾದವು. [illegible] ಡಾ. ಡಿ. ಹರೇಲಿಯವರು ಈ ಶೋಧದಿಂದ 'ಬೆಕ್ಟೀರಿಯೋ ಫಾಜ' ಎಂಬ ಔಷಧವನ್ನು ತಯಾರಿಸಿದ್ದಾರೆ. [illegible] ಈ ರೋಗದ ಕ್ರಿಮಿಗಳನ್ನು ಕೂಡಿಸಿ [illegible] ಗಂಗೋದಕವನ್ನು ಬಿಟ್ಟು ಒಂದು ಮಿಶ್ರಣ ತಯಾರಿಸುತ್ತಾರೆ. ಆ ಮಿಶ್ರಣವೇ 'ಬೆಕ್ಟೀರಿಯೋ ಫೇಜ' ಎಂದು ಹೆಸರಾಗಿದೆ. ಇದರಿಂದ [illegible] ತಾಸುಗಳಲ್ಲಿ ರೋಗಿಗಳು ವಾಸಿಯಾಗುತ್ತಾರೆ. ಈ ಮಿಶ್ರಣ ತಯಾರಿಸುವ ಇನ್ನೊಂದು ಕ್ರಮವಿದೆ. [illegible] ಅತಿಸಾರದ ಕುತ್ತಿನಿಂದ [illegible] ರೋಗಿಗಳ ಮಲವನ್ನು [illegible] ಕ್ರಿಮಿ ತುಂಬಿದ ಕೊಳವೆಗಳಲ್ಲಿ ಬಿಟ್ಟು ತಯಾರಿಸಿದ ಮಿಶ್ರಣವಾದರೂ ಈ [illegible] ಸಾಧಕವಿದೆ. 'ಬೆಕ್ಟೀರಿಯೋ ಫಾಜ [illegible] ಅತಿ ಪವಿತ್ರ ಗಂಗೋದಕ [illegible] ರೋಗಿಗಳು [illegible] ವಾಸಿಯಾಗುತ್ತಾರೆ. 'ಲಂಡನ [illegible]' [illegible] ಕೇಂಬ್ರಿಜ [illegible] ಪೆಥಾಲೋಜಿ (ರೋಗಶಾಸ್ತ್ರ), ಬೆಕ್ಟೀರಿಯಾಲಜಿ (ಕ್ರಿಮಿಶಾಸ್ತ್ರ) [illegible] ಪ್ರೊಫೆಸರರವರು ಬೆಕ್ಟೀರಿಯೋ ಫಾಜ ಔಷಧದ ಚರ್ಚೆ ಮಾಡುವಾಗ [illegible] ನದಿಯಲ್ಲಿ 'ಬೆಕ್ಟೀರಿಯೋ ಫಾಜ' [illegible] ಸಿದ್ಧಾಂತ ಮಾಡಿದ್ದಾರೆ. ಗಂಗೋದಕದಲ್ಲಿ ಕ್ರಿಮಿನಾಶಕ ಗುಣವಿದೆ ಎಂಬುದು [illegible] 'ಬೆಕ್ಟೀರಿಯೋ ಫಾಜ'ದ ಗುಣ [illegible] ಇರಲಿ, ಗಂಗೋದಕದಲ್ಲಿ ಕಾಲರಾ ಬೇನೆ ಮತ್ತು ಅತಿಸಾರದ ಬೇನೆ ಮೊದಲಾದ ಭಯಂಕರ [illegible] ನಾಶ ಮಾಡುವ [illegible] ಗುಣವಿರುವದಾಗಿ ತಾನೇ ಸಿದ್ಧ [illegible] ಗಂಗೋದಕವನ್ನು ಸವಿಸ್ತಾರ [illegible] ಯಲ್ಲಿ [illegible] ಪ್ರಯತ್ನದಿಂದ [illegible] ಕೊಂಡ [illegible] ವನ್ನು [illegible] ತೀರ್ಮಾನ ಹೇಳಬೇಕಲ್ಲವೇ?

* *

ಮಾರ್ಕ ಟ್ವೇನ ಎಂಬವರು ಅಮೇರಿಕೆಯವರು, ಇವರು ಪ್ರಸಿದ್ಧ ಗ್ರಂಥಕರ್ತರು '*More Tramps Abroad*' ಯಾನೆ ಪರದೇಶ ಸಂಚಾರ ಎಂಬ ಗ್ರಂಥವನ್ನು ಬರೆದಿದ್ದಾರೆ. ಈ ಗ್ರಂಥದಲ್ಲಿ [illegible] ಇಸ್ವಿಯಲ್ಲಿ ಅವರು ಹಿಂದುಸ್ಥಾನಕ್ಕೆ ಬಂದ ವಾರ್ತೆಯಿದೆ. ಗಂಗೋದಕದ ಮಹಿಮೆಯ ಉಲ್ಲೇಖ ಹೀಗಿದೆ — (ಮಾರ್ಕ ಟ್ವೇನರವರು ಶ್ರೀ ಕಾಶಿ ಕ್ಷೇತ್ರದಲ್ಲಿ ಕಂಡ ನೋಟವನ್ನು ವರ್ಣಿಸುತ್ತಾರೆ) "ಆ ಭಯಂಕರ ನೀರಿನಿಂದ ಜನರ ಶುದ್ಧಿಮಾರ್ಜನ ಮಾಡಿಕೊಂಡು, ಅದೇ ನೀರನ್ನು ಕುಡಿಯುತ್ತಿದ್ದರು! [illegible] ನನಗೆ ಬೇಸರ ಬಂತು, ಸಹಜವಾಗಿಯೂ ನನಗೆ ಬೇಸರ ಬಂತು! ಒಂದೆಡೆ ನಾವು ಕೆಲ ಹೊತ್ತು ನಿಂತುಕೊಂಡೆವು ಅಷ್ಟರಲ್ಲಿ ಒಂದು ಕಾಲುವೆಯೊಳಗಿಂದ ಹೊಲಸು ನೀರು ನದಿಯಲ್ಲಿ ಸೇರಿತು, ಸುತ್ತು ಮುತ್ತಲಿನ ನೀರೆಲ್ಲ ಕೊಳಕೋ ಕೊಳಕು! ಒಡೇ ಸಮಯ ಒಂದು ಹೆಣ ನೀಲ್ಲದಿಯಿಂದ ತೇಲುತ್ತ ಬಂತು ಹತ್ತು ಹೆಜ್ಜೆ ಅಂತರದಲ್ಲಿ ಸ್ತ್ರೀ-ಪುರುಷರೂ, ಸೊಬಗಿನ ಹುಡುಗಿಯರೂ ಸೊಂಟ ನೀರಿನಲ್ಲಿ ನಿಂತು, ಆ ನೀರನ್ನು ಕುಡಿಯುತ್ತಿದ್ದರು ಶ್ರದ್ಧೆಯಿಂದ ಅಪಘಾತಗಳು ಸಂಭವಿಸುತ್ತವೆ ಇದೇ ಇದಕ್ಕೊಂದು ಉದಾಹರಣ ನೀರಡಿಕೆಯನ್ನು ತಣಿಸಿಕೊಳ್ಳುವದಕ್ಕಾಗಿ ಜನರು ಆ ಭಯಂಕರ ಪದಾರ್ಥವನ್ನು ಕುಡಿಯುತ್ತಿದ್ದಿಲ್ಲ, ಆತ್ಮಶುದ್ಧಿಗಾಗಿ, ದೇಹದ ಅಂತಃಶುದ್ಧಿಗಾಗಿ ಅವರು ಕುಡಿಯುತ್ತಿದ್ದರು ಸ್ಪರ್ಶಮಾತ್ರದಿಂದ ಗಂಗೋದಕವು ಯಾವತ್ತೂ ಪದಾರ್ಥಗಳನ್ನು ಪವಿತ್ರ ಮಾಡುತ್ತದಾಗಿ ಅವರಿಗೆ ದೃಢಶ್ರದ್ಧೆಯಾಗಿತ್ತು. ಕಾಲುವೆಯ ನೀರಿನಿಂದ ಯಾವ ರಸದಿಂದ ಅವರ ಮನಸ್ಸು ಹೇಸಲಿಲ್ಲ ಯಾಕೆಂದರೆ, ಅವರದಕ್ಕೆ! ಕ್ಷೇತ್ರ ಜಲ ಸ್ಪರ್ಶವಾಗಿ ಅವು ಸ್ಫಟಿಕದಂತೆ ನಿರ್ಮಲವಾಗಿದ್ದವು. ಅವು ಗಳಲ್ಲಿದ್ದ ದೋಷಗುಣವೇ ಲಯಹೊಂದಿತ್ತು. ಆ ನೋಟವನ್ನು ನಾನೆಂದೂ ಮರೆಯಲಾರೆ ಮೊಲನು ಹಾಗು ಸರ್ವಪವಿತ್ರ ಗಂಗೋದಕದ ಕುರಿತು ಇನ್ನೊಂದು ಸಂಗತಿ ಹೇಳುತ್ತೇನೆ. ನಾವು ಪಯಣ ಮಾಡುತ್ತ ಆಗ್ರಾ ಪಟ್ಟಣಕ್ಕೆ ಹೋದೆವು ಆ ಸಮಯ ಚಿರಸ್ಮರಣೀಯವಾದ ಒಂದು ಶೋಧವಾಯಿತು ಆ ಶೋಧದಿಂದ ಕೆಲ ಮಟ್ಟಿಗೆ ಹೊಲಸು ಕಂಡು ನಿಂದಾಸ್ಪದವಾದ ಗಂಗೋದಕವು ಭೂತಲದೊಳಗ ನಿರ್ಮಲಗೊಳಿಸುವ ಸರ್ವಸಮರ್ಥ ಪದಾರ್ಥವೆಂದು ಸಿದ್ಧವಾಯಿತು ಆಧುನಿಕ ಶಾಸ್ತ್ರಶೋಧಗಳ ಆಧಾರದಲ್ಲಿ ಇನ್ನೊಂದು ಚಮತ್ಕಾರ ಕಾರಿತ್ತು ಶ್ರೀ ಕಾಶಿ ಕ್ಷೇತ್ರದಲ್ಲಿ ಕಾಲರಾ ಪಿಡುಗು ಇದ್ದಾಗ್ಯೂ ಅಲ್ಲಿಂದ ಅದು ನೆರೆಹೊರೆಯಲ್ಲಿ ಹಬ್ಬುವದಿಲ್ಲ ಇದು ವಿಲಕ್ಷಣವೆಂದು ಎಲ್ಲರೂ ಹೇಳುತ್ತಿದ್ದರು ಆ ಕಾಲದಲ್ಲಿ ಆಗ್ರಾದೊಳಗ ಮಿ| ಹೆಂಕಿನ್ ಎಂಬ ಸರಕಾರಿ ಸಂಶೋಧಕರಿದ್ದರು ಅವರು ಶ್ರೀ ಕಾಶಿ ಕ್ಷೇತ್ರಕ್ಕೆ ಹೋಗಿ ಆ ನೀರಿನ ಪರೀಕ್ಷೆ ಮಾಡಿದರು ಸ್ನಾನ ಮಾಡುವ ಘಾಟ ಸ್ಥಳಗಳ ಬಳಿ ಊರ ಹೊಲಸಿನ ಕಾಲುವೆಗಳು ಗಂಗಾ ನದಿಗೆ ಬಂದು ಕೂಡುತ್ತವೆ ಅಲ್ಲಿಯ ಒಂದು ಹನಿ ಹೊಲಸು ನೀರನ್ನು ತರು ಕೊಂಡಿಟ್ಟರು. [illegible] ತಾಸುಗಳಲ್ಲಿ ಅದರೊಳಗಿರುವ ಯಾವತ್ತೂ ಕಾಲರಾ ಕ್ರಿಮಿಗಳು ಸತ್ತುಹೋದವು ಒಂದು ಶವ ಹರಿದುಹೋಗುತ್ತಿತ್ತು, ಅದನ್ನು ಹಿಡಿದು ದಂಡೆಗೆ ತಂದು ಅದರ ಬಳಿ ಕಾಲರಾ ಕ್ರಿಮಿ ನೀರನ್ನು ತಂದಿಟ್ಟರು. [illegible] ತಾಸುಗಳಲ್ಲಿ ಯಾವತ್ತೂ ಕ್ರಿಮಿಗಳು ನಾಶಹೊಂದಿದವು, ಹೆಸರಿಗೆ ಸಹ ಒಂದು ಕ್ರಿಮಿ ಇರಲಿಲ್ಲ, ಎಲ್ಲಿಯೂ ನ ದೊರೆತಿದ್ದ. ಆ ಮೇಲೆ ಅವರು ಬಾವಿಯಿಂದ ಸ್ವಚ್ಛವಾದ ನೀರು ತಂದು ಅದರೊಳಗೆ ಕೆಲವು ಕಾಲರಾ ಕ್ರಿಮಿಗಳನ್ನು ಹಾಕಿದರು ಕೂಡಲೆ, ಅವು ಬೆಳೆದವು [illegible] ತಾಸುಗಳಲ್ಲಿ ಲಕ್ಷಾವಧಿ ಅವ್ಯಾಹತವಾದವು. ಗಂಗೋದಕವು ಯಾವಾಗಲೂ ಪವಿತ್ರವಾದದ್ದು, ಯಾವುದರಿಂದಲೂ ಅದು ಅಪವಿತ್ರವಾಗದು ಅದರ ಸ್ಪರ್ಶಮಾತ್ರದಿಂದ ಯಾವತ್ತೂ ವಸ್ತುಗಳು ಪವಿತ್ರವಾಗುತ್ತವೆ, ಎಂಬದಾಗಿ ಹಿಂದುಗಳು ಅನಾದಿಕಾಲದಿಂದ ಪರಂಪರೆಯಿಂದ ನಂಬಿಕೊಂಡು

ಒಂದಿರುತ್ತಾರೆ. ಈಗಲೂ ಅವರ ಜೀವನ ಭಾಗ ವಸ್ತು ಉಂಟು. ಅದಕ್ಕಾಗಿಯೇ ಬಾಹ್ಯದೃಷ್ಟಿಗೆ ಕಾಣುವ ಗೋಳುಮಯವಾದ ಹರಿದು ಬರುವ ಗಂಗಾ ನದಿಯೆ ಇದ್ದರೆ ಅವರು ಅದರಲ್ಲಿ ಸ್ನಾನ ಮಾಡುತ್ತಾರೆ, ಹಾಗು ಅದನ್ನು ಕುಡಿಯುತ್ತಾರೆ!! ಇಂಥ ಒಂದುಗಂಗೆ ನೋಡಿ ಈ ತನಕ ಜನರು ನಗುತ್ತಿದ್ದರು, ಈ ರೀತಿಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಪುರಾತನ ಕಾಲದಲ್ಲಿ ಈ ಗುಟ್ಟನ್ನು ಅವರು ಹೇಗೆ ಕಂಡುಹಿಡಿದಿದ್ದರು? ಆ ಕಾಲದಲ್ಲಿ ಕ್ರಿಮಿಶಾಸ್ತ್ರಜ್ಞರಿದ್ದರೇನು? ನಮಗೇನು ಗೊತ್ತಿಲ್ಲ ಇಷ್ಟಂತು ನಾವು ಬಲ್ಲೆವು — ನಾವು ಕಾಡು ಸ್ಥಿತಿಯಲ್ಲಿದ್ದಾಗ ಹಿಂದುಗಳು ಸುಸಂಸ್ಕೃತರಾಗಿದ್ದರು " ಗಂಗೋದಕದ ಪಾವಿತ್ರ್ಯ ಶೋಧದಿಂದ ಹಿಂದೀಯರ ಪುರಾತನ ಸಂಸ್ಕೃತಿಯೂ ಸಿದ್ಧವಾಗಿದೆ ಗಂಗೋದಕದ ಮಹಿಮೆಯನ್ನು ಹಿಂದೂ ವಾಸಿಯರು ಇದಕ್ಕೂ ಹೆಚ್ಚಿಗೆಯಾಗಿ ಬಲ್ಲರಲ್ಲವೇ?

***

ಕಲಕತ್ತೆಯ ಮ್ಯುನಿಸಿಪಾಲಿಟಿಯೊಳಗಿನ ದಾಯಾದಿ ಮತ್ಸರ.

ಕಲಕತ್ತೆಯ ಮ್ಯುನಿಸಿಪಾಲಿಟಿಗೆ ಈಗ ೩ ತಿಂಗಳುಗಳಿಂದ ಅಧ್ಯಕ್ಷರಿಲ್ಲ. ಯಜಮಾನನಿಲ್ಲದ ಮನೆಯಂತೆಯೇ ಮ್ಯುನಿಸಿಪಾಲಿಟಿಯ ಅವಸ್ಥೆಯಾಗಿದೆ. ಬಂಗಾಲ ಪ್ರಾಂತದಲ್ಲಿ ಇದೊಂದು ಮುಖ್ಯ ಚರ್ಚೆಯ ವಿಷಯವಾಗಿದೆ ಮಹಾತ್ಮರು ಈ ವಿಷಯವನ್ನು ಪರಾಂಬರಿಸುವವರಿದ್ದಾರಾಗಿ ತಿಳಿಯುತ್ತದೆ ಆದದರಿಂದ ಅಲ್ಲಿಯ ವೃತ್ತಾಂತವನ್ನು ತಿಳಿದುಕೊಳ್ಳುವದವಶ್ಯ. ದೊಡ್ಡ ದೊಡ್ಡವರು ಮತ್ಸರಗ್ರಸ್ತರಾದ ಬಳಿಕ, ಯಃಕಶ್ಚಿತ್ ಸಾಮಾನ್ಯರಂತೆ ವರ್ತಿಸುವ ಸಂಗತಿಯೂ ನೋಡತಕ್ಕಂಥಾದ್ದಿದೆ, ಕೇಳತಕ್ಕಂಥಾದ್ದಿದೆ! ಮೌಲಾನಾ ಅಬ್ದುಲ ಹಕ್, ದಾ| ನಲಿನಿ ರಂಜನ ಸರಕಾರ ದಾ| ಬಿಧಾನಚಂದ್ರ ವಿಶ್ವಾಸ ಈ ಮೂವರು ಈ ಗೊಂದಲದೊಳಗಿನ ಮುಖ್ಯಸ್ಥರು ಇವರಿಗೆ ಅನುಕೂಲರಾಗಿ ಮಿ| ಹಮರುದ್ದೀನ ಅಹಮ್ಮದ, ದಾ| ಸಾಸಮಲ್. ಡಾ| ಕೇ. ಸಿ. ರೋಯ್ ಮೊದಲಾದ ಪರಿವಾರದವರಿದ್ದಾರೆ ವಂಗದೇಶದಲ್ಲಿ ಎಲ್ಲೆಲ್ಲಿಯೂ ರಾಷ್ಟ್ರೀಯರು, ರಾಷ್ಟ್ರೀಯೇತರರು ಹೀಗ ಮುಖ್ಯವಾಗಿ ೨ ಭೇದ. ರಾಷ್ಟ್ರೀಯರಲ್ಲಿ — ಪಕ್ಷ ಒಂದು ಶ್ರೀ| ಸೇನಗುಪ್ತರದು, ಮತ್ತೊಂದು ಶ್ರೀ| ಸುಭಾಷಚಂದ್ರ ಬೋಸರದು ಇತ್ತೀಚೆಗೆ ದೇಶಬಂಧು ದಾಸರವರ ಅನುಯಾಯಿಗಳೆಂದು ಹೇಳಿಕೊಳ್ಳುವವರೇ ಇತ್ತೀಚೆಗೆ ವಂಗದೇಶದಲ್ಲಿ ದಾಯಾದಿಗಳಿಗೆ ಮಿಕ್ಕಿ ಮಾತ್ಸರ್ಯದಿಂದ ಜಗಳಾಡುತ್ತಿದ್ದಾರೆ ಹೀಗೆ ಇಬ್ಬರಲ್ಲಿ ಉಪಪಕ್ಷಭೇದದ ಮೇರೆ ಮೀರಿದ್ದೇ ಇದೆ. ಎರಡೂ ಪಕ್ಷಗಳಿಗೆ ತಾವಾದ ಪ್ರತ್ಯೇಕ ವರ್ತಮಾನಪತ್ರಗಳುಂಟು 'ಎಡ್ವಾನ್ಸ' ಪತ್ರಿಕೆ ಶ್ರೀ| ಸೇನಗುಪ್ತರದು 'ಫಾರ್ವರ್ಡ' ಪತ್ರಿಕೆ ಶ್ರೀ| ಬೋಸರದು ಜೂಜಿಗೆ ಕಟ್ಟಿದ ಕೋಳಿಗಳಂತೆ ಜಗಳಾಡುತ್ತಾರೆ. ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಗೊಂದಲವಾಗಲು ಈ ಜಗಳವೇ ಕಾರಣ. ಕಲಕತ್ತೆಯಂಥ ಪಟ್ಟಣಗಳ ಮ್ಯುನಿಸಿಪಾಲಿಟಿಗಳಿಗೆ ವರ್ಷಕ್ಕೊಮ್ಮೆ ಅಧ್ಯಕ್ಷರನ್ನು ನೇಮಿಸಬೇಕೆಂದು ಕಾಯಿದೆಯಿದೆ ಇಲೆಕ್ಷನು ೩ ವರ್ಷಕ್ಕೊಮ್ಮೆ ನಡೆಯುತ್ತಿದ್ದಾಗ್ಯೂ ಅಧ್ಯಕ್ಷರನ್ನು ಪ್ರತಿವರ್ಷ ನೇಮಿಸಲೇ ಬೇಕು. ಅದರಂತೆ ಕಳೆದ ಎಪ್ರಿಲ್ ತಿಂಗಳ ೧ನೇ ತಾರೀಖಿಗೆ ಹೊಸ ಅಧ್ಯಕ್ಷರನ್ನಾರಿಸಲಿಕ್ಕೆ ಮ್ಯು| ಮಸಲ ರೀತಿಯಂತೆ ಕರೆದಿದ್ದರು ಆ ಸಭೆಯಾಗುವ ಪೂರ್ವದಲ್ಲಿಯೇ ಅಧ್ಯಕ್ಷರ್ಯಾರಾಗಬೇಕೆಂದು ಚರ್ಚೆ ನಡೆದಿತ್ತು ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಮುಖ್ಯವಾಗಿ ೩ ಪಂಗಡಗಳು — (೧) ರಾಷ್ಟ್ರೀಯರು, (೨) ಮುಸಲ್ಮಾನರು, (೩) ಸರಕಾರಿ ಸಭಾಸದರು. ಒಟ್ಟು ಮ್ಯುನಿಸಿಪಾಲಿಟಿಯಲ್ಲಿ ೯೦ ಸಭಾಸದರು ೭೫ ಲೋಕನಿಯುಕ್ತರು, ೧೫ ಸರಕಾರ ನಿಯುಕ್ತರು, ಚುನಾಯಿಸಿದ ೬೦ ಸಭಾಸದರ ನೇಮಿಸಿದ ಇತರ ೫ವರು, ಹೀಗೆ ಒಟ್ಟು ೯೦ ಮಂದಿ ಸಭಾಸದರಿರುತ್ತಾರೆ ಇವರಲ್ಲಿ ರಾಷ್ಟ್ರೀಯರು ೪೬, ರಾಷ್ಟ್ರೀಯರಲ್ಲಿ ಸೇನಗುಪ್ತ ಪಕ್ಷದವರ ೨೪, ಬೋಸ ಪಕ್ಷದವರು ೨೨ ಬೋಸ ಪಕ್ಷಕ್ಕೆ ಸರಕಾರನಿಯುಕ್ತರೂ, ಇತರ ಕೆಲವರೂ ಕೂಡಿದ್ದಾರೆ, ಸೇನಗುಪ್ತ ಪಕ್ಷಕ್ಕೆ ಮುಸಲ್ಮಾನರು ಸೇರಿದ್ದಾರೆ ಸಭಾಸದರ ಸಂಖ್ಯೆಯಿಂದ ಬೋಸ ಪಕ್ಷದವರ ಪ್ರಾಬಲ್ಯ ಬೋಸ ಪಕ್ಷದವರಲ್ಲಿ ಸರಕಾರನಿಯುಕ್ತ ಮುಸಲ್ಮಾನರಿದ್ದಾರೆ ಆದರಿಂದಲೇ ಈ ಕಾದಾಟವು ಮುಖ್ಯವಾಗಿ ಬೋಸ ಹಾಗು ಸೇನಗುಪ್ತ ಪಕ್ಷಗಳೊಳಗಿನದು ಸೇನಗುಪ್ತ ಪಕ್ಷದವರು ಮೌ|| ಅಬ್ದುಲ ಹಕ್‌ರವರು ಅಧ್ಯಕ್ಷರಾಗಬೇಕನ್ನುತ್ತಾರೆ ಬೋಸ ಪಕ್ಷದವರು ದಾ| ನಲಿನಿ ರಂಜನ ಸರಕಾರರವರು ಅಧ್ಯಕ್ಷರಾಗಬೇಕೆಂದು ಹಟ ತೊಟ್ಟಿದ್ದಾರೆ ದಾ| ಬಿಧಾನಚಂದ್ರ ವಿಶ್ವಾಸರವರು ಸರಕಾರನಿಯುಕ್ತ ಸಭಾಸದರ ಮುಖ್ಯಸ್ಥರು ಆ ಪಕ್ಷದಲ್ಲಿ ಯುರೋಪಿಯನ್ನರೂ, ಹಿಂದುಗಳೂ, ಮುಸಲ್ಮಾನರೂ ಎಲ್ಲರೂ ಇದ್ದಾರೆ ಅವರೆಲ್ಲರು ಮೌ| ಅಬ್ದುಲ ಹಕ್‌ರವರಿಗೆ ವಿರೋಧಿಸುವರು ಮುಸಲ್ಮಾನರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಲು ನಮ್ಮ ಆಕ್ಷೇಪವಿಲ್ಲ ಮೌ| ಹಕ್‌ರವರಿಗೆ ನಾವು ಮತ ಕೊಡಲಾರೆವು, ಅವರಿಗಲ್ಲದೆ ಇತರ ಯಾರಿಗೂ ಅಧ್ಯಕ್ಷರಾಗಿ ನೇಮಿಸಲು ಸೂಚನೆ ಮಾಡಿರಿ, ನಾವು ಅವರಿಗೆ ಬೆಂಬಲ ಕೊಡುತ್ತೇವೆ, ಹೀಗೆಂದು ಅವರ ಅಂಬೋಣ. ಮೌ| ಹಕ್ ಪಕ್ಷದವರು ಇದಕ್ಕೊಪ್ಪರು ಸರಕಾರನಿಯುಕ್ತರಿಗೆ ಯುಕ್ತಿ — ಪ್ರಯುಕ್ತಿಯಿಂದ ಇಲೆಕ್ಷನಿನೊಳಗಿಂದ ಹೊರತೆಗೆಯಬೇಕಾಗಿ ಹಕ್ ಪಕ್ಷದ ಸಾಧನೆ. ಇಂಥ ಸ್ಥಿತಿಯಲ್ಲಿ ಎಪ್ರಿಲ್ ೧ನೇ ತಾರೀಖಿನ ಸಭೆ ಸೇರಿತು ಆ ದಿನ ಭಯಂಕರ ಗದ್ದಲ. ಮಿ| ಹಮರುದ್ದೀನ ಅಹಮ್ಮದರವರು ಮತ ಗಣನೆಯಾಗುವ ಮುಂಚೆಯೇ ಅಧ್ಯಕ್ಷಸ್ಥಾನದ ಮೇಲೆ ಕುಳಿತುಕೊಂಡು ಅಧ್ಯಕ್ಷರಾಗಿಬಿಟ್ಟರು! "ಸರಕಾರನಿಯುಕ್ತ ಸಭಾಸದರ ಅವಧಿ ಮಾರ್ಚ ೩೧ನೇ ತಾರೀಖಿಗೆ ತೀರಿತ್ತು, ಈ ಹೊತ್ತು ಅವರು ಸಭಾಸದರಲ್ಲ, ಆದರಿಂದ ಅವರಿಗೆ ಮತ ಕೊಡಬಾರದು, ಈ ಕುರಿತು ಅಧ್ಯಕ್ಷರ ಅಭಿಪ್ರಾಯ ಬೇಕು" ಎಂಬದಾಗಿ ಒಬ್ಬ ಸಭಾಸದರು ಆಕ್ಷೇಪ ತೆಗೆದರು, ಅಧ್ಯಕ್ಷರು ತಲೆದೂಗಿದರು. ಅಧ್ಯಕ್ಷರ ಅಭಿಪ್ರಾಯ ಕೇಳಿದೊಡನೆ ಎಲ್ಲರೂ ಚಕಿತರಾದರು! ದಾ| ಬಿಧಾನಚಂದ್ರ ವಿಶ್ವಾಸರವರು ಈ ನಿರ್ಣಯಕ್ಕೆ ಒಪ್ಪಲಿಲ್ಲ ಎಲ್ಲರೂ ಮಾತನಾಡಲಾರಂಭಿಸಿದರು. ಸರಕಾರನಿಯುಕ್ತರಿಗೆ ತಾ ೧೭-೪-೧೯೨೩ನೇ ಸಾಲಿನ ವರ್ಷದ ಬಗ್ಗೆ ನೇಮಿಸಲ್ಪಟ್ಟಿತ್ತು ಅದರಂತೆ ತಾ. ೧೩-೪-೨೪ನೇ ತನಕ ತಾವು ಸಭಾಸದರೆಂಬದಾಗಿ ದಾ| ವಿಶ್ವಾಸರವರು ನುಡಿದರು ಎಲ್ಲರೂ ಎದ್ದೆದ್ದು ಮಾತನಾಡುವವರೇ! ಕೇಳುವವರಿಲ್ಲದಂತಾಯಿತು. ಮಿ| ಹಮರುದ್ದೀನ ಅಹಮ್ಮದರವರಿಗೆ ಅಧ್ಯಕ್ಷರನ್ನಾರಿಸುವ ಸಭೆಗೆ ಸಭಾಪತಿಯನ್ನು ನೇಮಿಸಲು ಅಧ್ಯಕ್ಷರಾಗಿ ನೇಮಿಸಿತ್ತು ಕಲಕತ್ತಾ ಮ್ಯುನಿಸಿಪಲ್ ಆಕ್ಟಿನ ೩ (೯)ನೇ ಕಲಮಿನಲ್ಲಿ ವರ್ಷದ ವ್ಯಾಖ್ಯೆ ಹೀಗಿದೆ — "ವರ್ಷವೆಂದರೆ, ಎಪ್ರಿಲ್ ೧ನೇ ತಾರೀಖಿನಿಂದ ವರ್ಷ. ಅಂದರೆ, ಎಪ್ರಿಲ್ ೧ನೇ ತಾರೀಖಿನಿಂದ ಮಾರ್ಚ ೩೧ನೇ ತಾರೀಖಿನ ವರೆಗೆ" ಎಂದು. ಈ ವ್ಯಾಖ್ಯೆಯಿಂದ ಸರಕಾರಿ ನಾಮನಿರ್ದೇಶಿತ ಸದಸ್ಯರ ಅವಧಿ ಮುಗಿದಿಲ್ಲವಾಗಿ ದಾ| ವಿಶ್ವಾಸರವರ ಅಭಿಪ್ರಾಯ ಬಂಗಾಲ ಸರಕಾರದ ಎಡ್ವೊಕೇಟ ಜನರಲ್‌ರ ಕಡೆಯಿಂದ ಈ ಕುರಿತು ಈ ಹಿಂದೆಯೇ ಅಭಿಪ್ರಾಯ ತರಿಸಲಾಗಿತ್ತು. ಅವರು ಈ ವ್ಯಾಖ್ಯೆ ಸರಕಾರಿ ನಾಮನಿರ್ದೇಶಿತರಿಗೆ ಅನ್ವಯಿಸುವದಿಲ್ಲವಾಗಿಯೂ, ನಿಯುಕ್ತರಾದ ತಾರೀಖಿನಿಂದ ವರ್ಷವನ್ನೆಣಿಸಬೇಕಾಗಿಯೂ ಅಭಿಪ್ರಾಯ ಕೊಟ್ಟಿರು. ಈ ಅಭಿಪ್ರಾಯವನ್ನೇ ಸಭೆಯಲ್ಲಿ ಹೇಳಬೇಕಾಗಿ ಕೆಲ ಸಭಾಸದರು ಸೂಚಿಸುತ್ತಿರುವಷ್ಟರಲ್ಲಿ, ದಾ| ಸಾಸಮಲ್‌ರವರು ಅಧ್ಯಕ್ಷರನ್ನಾರಿಸುವ ಸಭೆಗೆ ಸಭಾಪತಿಗಳಾಗಿ ಆರಿಸಲ್ಪಟ್ಟು, ಅಧ್ಯಕ್ಷಸ್ಥಾನವನ್ನು ಕ್ರಮಿಸಿದರು. ಪ್ರಶ್ನೆ ಇದೇ ಪ್ರಶ್ನೆ ಕೇಳಲಾಯಿತು "ಮಿ| ಹಮರುದ್ದೀನರವರ ಕೊಟ್ಟ ನಿರ್ಣಯವೇ ನನ್ನ ನಿರ್ಣಯ" ವೆಂದು ಮಿ| ಸಾಸಮಲ್‌ರವರು ನುಡಿದರು ಸಭೆಯನ್ನು ವಿಸರ್ಜಿಸಿ ಮುಂದೂಡಬೇಕಾಗಿ ಬಂದ ಸೂಚನೆಯನ್ನು ದಾ| ಸಾಸಮಲ್‌ರವರು ತಿರಸ್ಕರಿಸಿದರು. 'ನನ್ನ ನಿರ್ಣಯ ನಾನು ಹೇಳಿಬಿಟ್ಟಿದ್ದೇನೆ. ವರ್ಷದ ವ್ಯಾಖ್ಯೆ ಕುರಿತು ಎಡ್ವೊಕೇಟ ಜನರಲ್‌ರ ಅಭಿಪ್ರಾಯ ನಾ ಒಲ್ಲೆ. ನೀವು ತಕ್ಕ ಅಧಿಕಾರಸ್ಥರ ಕಡೆ ಪರಿಹಾರ ಪಡೆಯಬಹುದು. ಈಗ ಸಭಾಕಾರ್ಯ ನಡೆಯಬೇಕಾ? ನಾನು ವಿಧಿಸುತ್ತೇನೆ' ಎಂದು ದಾ| ಸಾಸಮಲ್‌ರವರು ಅಪ್ಪಣೆ ಮಾಡಿದರು "ನೀವು ಅಧ್ಯಕ್ಷಸ್ಥಾನವನ್ನು ತ್ಯಜಿಸಬೇಕು, ಈಗೆ ನನ್ನ ಸೂಚನ" ಎಂದು ನಾಮದಾರ ಬಸುರವರು ಸೂಚಿಸಿದರು ನಾಮದಾರ ಬಸುರವರು ಕೌನ್ಸಿಲ್ ಆಫ್ ಸ್ಟೇಟ ನ ಸಭಾಸದರಿದ್ದು, ಹಿಂದೆ ಕಲಕತ್ತಾ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದರು, ಇವರು ಸರಕಾರನಿಯುಕ್ತ ಸಭಾಸದರು "ಇಂಗ್ಲಂಡ ದೇಶದ ಬ್ಯಾರಿಸ್ಟರ ವರ್ಗಕ್ಕೆ ಸೇರಿದವರು ಹೀಗೆ ನಿರಂಕುಶ ವರ್ತಿಸುವದು ನಾಚಿಕಗೇಡಿತನ!" ಎಂದು ದಾ| ರೋಯ್ ಚೌಧರಿಯವರು ಹೇಳಿದರು! "ಯಾವತ್ತು ಕ್ರಮ ಬೇಕಾಬಿಟ್ಟಿ ಇದೆ. ನಾವು ಹೊರಹೋಗುತ್ತೇವೆ" ಎಂದು ದಾ| ಬಸುರವರು ನುಡಿದು ಸಭಾಸ್ಥಾನದಿಂದ ಎದ್ದು ಹೋದರು ಅವರ ಬೆನ್ನಿಗೆ ೪೮—೪೯ ಮಂದಿ ಸಭಾಸದರು ಹೊರನಡೆದ ಬಳಿಕ, ಉಳಿದವರು ಮೌ| ಅಬ್ದುಲ್ ಹಕ್‌ರವರಿಗೆ ಅಧ್ಯಕ್ಷರನ್ನಾಗಿ ಆರಿಸಿದರು. ವಾಡಿಕೆಯಂತೆ ಅಭಿನಂದನ ಕ್ರಮವೂ ನಡೆದು ಸಭಾವಿಸರ್ಜನೆ ಹೊಂದಿತು. ಮೌ| ಹಕ್‌ರವರಿಗೆ ಬಂಗಾಲ ಪ್ರಾಂತದೊಳಗಿನ ಸೇನಗುಪ್ತ ಪಕ್ಷದ ಪರವಾಗಿ ಎಲ್ಲೆಲ್ಲಿಂದ ಅಭಿನಂದನಪರ ಸಂದೇಶಗಳು ಬಂದವು, ಸುಭೋಜನ—ಔತಣ ಸಮಾರಂಭಗಳಾದವು; ತಾಂಬೂಲ ಸಮರ್ಪಣ ಮೊದಲಾದ ಸಂಭ್ರಮಗಳೂ ನಡೆದವು.

***

೧೧ ಚಾರುಚಂದ್ರ ಪಿತ್ತಿನ ನೇತೃತ್ವದ ಸಭಾಸದರು ಪ್ರಾಂತಿಕ ಸರಕಾರಕ್ಕೆ ಅರ್ಜಿ ಮಾಡಿ ಸರಕಾರ ನಿಯುಕ್ತ ಸಭಾಸದರಿಗೆ ಮತ ಕೊಡಲು ಅಧಿಕಾರವಿಲ್ಲವಾಗಿ ಸಭಾಪತಿಗಳಾಗಿದ್ದ ಮಿ ರಮಾಪ್ರಸಾದ ಮುಖರ್ಜಿಯವರೂ, ಚಿಂಸ್ಪರ ಗಾಸಪುಲ್‌ರವರೂ ನಿರ್ಣಯ ಕೊಟ್ಟು ನಡಿಸಿದ ಸಭೆ ಕಾಯದೆ ಬೇಕಾಯಿರ್ದಾಗಿಂದ ಎಂದೂ, ಆ ಸಭಾ ನಿರ್ಣಯವನ್ನು ರದ್ದುಪಡಿಸಬೇಕಾಗಿಯೂ ಬೇಡಿಕೊಂಡರು. ಆ ಅರ್ಜಿಯ ಕುರಿತು ಅಂಬೋಣ ತಿಳಿಸಬೇಕೆಂದು ಕಲಕತ್ತೆಯ ಮ್ಯುನಿಸಿಪಾಲಿಟಿಗೆ ಪ್ರಾಂತಿಕ ಸರಕಾರವು ಅಪ್ಪಣೆ ಕೊಟ್ಟಿತು. ಎಪ್ರಿಲ್ ೨೦ ನೇ ತಾರೀಖಿನೊಳಗೆ ಅಂಬೋಣ ತಿಳಿಸುವ ಅವಧಿಯಿತ್ತು. ಮ್ಯುನಿಸಿಪಾಲಿಟಿಯ ವಿನಂತಿ ಮೇರೆಗೆ ಮೇ ೧೦ನೇ ತಾರೀಖಿನವರೆಗೆ ಆ ಅವಧಿ ಬೆಳೆಸಲಾಯಿತು. ಈ ಅವಧಿಯಲ್ಲಿ ಈ ವಿಷಯ ವಿಚಾರಿಸಲು ೩೬ ಸಲ ಮ್ಯುನಿಸಿಪಾಲಿಟಿಯ ಸಭೆ ನೆರೆದರೂ ಯಾವುದೂ ನಿರ್ಣಯವಾಗಲಿಲ್ಲ. ಸರಕಾರನಿಯುಕ್ತ ಸಭಾಸದರನ್ನು ಹೊರಬಿಸಿಕೊಂಡು ಹೆರ್ ರವರ ಮ್ಯುನಿಸಿಪಲ್ ಲಿಮಿಟ್ ನಿರ್ಣಯ ಕೊಡುವ ಉದ್ದೇಶವಿರಲಿಲ್ಲ. ಸರಕಾರ ನಿಯುಕ್ತ ಸಭಾಸದರನ್ನು ಹೊರದೂಡಬೇಕೆಂದು ಹೈಕೋರ್ಟಿನಲ್ಲಿ ದಾವೆ ಹಾಕಲಾಗಿದ್ದುದರಿಂದ ಅದರ ನಿರ್ಣಯವಾಗುವವರೆಗೆ ಸಭಾಕಾರ್ಯ ನಡೆಯಲಿಲ್ಲವೆಂದೂ ಸರಕಾರಕ್ಕೆ ವರದಿಮಾಡಬೇಕಾಯಿತು. ಎಪ್ರಿಲ್ ೨೦ನೇ ತಾರೀಖಿನ ಸಭೆಯಲ್ಲಿ ಪ್ರಶ್ನೋತ್ತರಗಳಲ್ಲಿಯೆ ಬಹು ಕಾಲ ಕಳೆದು ಸ್ವಲ್ಪ ಚರ್ಚೆ ನಡೆಯಿತು. ಸಭೆ ಎಪ್ರಿಲ್ ೩೦ನೇ ತಾರೀಖಿಗೆ ಮುಂದರಿಯಿತು. ಸಭೆಯಲ್ಲಿ ಸರ್ ಶಂಕರನ್ ನಾಯರ ಸರ್ ದಿನಶಾ ಮುಲ್ಲಾ, ಹಾಗೂ ಬಹಾದ್ದೂರ ರಾಜಾ ಇನ್ನೂ ಯಿಲ್ ರಾಜೆ ಮೊದಲಾದವರ ಮರಣದ ಕುರಿತು ದುಃಖಪ್ರದರ್ಶನ ಠರಾವುಗಳಾದವು. ಈ ಠರಾವು ೮ ಮೇರೆ ಸೇನಗುಪ್ತ ಪಕ್ಷದವರು ಬುದ್ಧಿಪೂರ್ವಕವಾಗಿ ಉದ್ದುಪ್ಪ ಭಾಷಣ ಮಾಡಿ ಆ ದಿನ ಕಳೆದರು. ' ಸರಕಾರಕ್ಕೆ ಉತ್ತರ ಕೊಡುವ ಉದ್ದೇಶದಿಂದ ಕರೆದ ಸಭೆಯಲ್ಲಿ ಅವಾಂತರ ವಿಷಯಗಳ ಚರ್ಚೆಯಾಗುವದು ಕಾನೂನಿಗೆ ಸಮ್ಮತವಲ್ಲವೆಂದು ಆ ದಿವಸ ಮೊದಲಾದವರು ಸಭೆಯಲ್ಲಿ ಅಧ್ಯಕ್ಷರಾಗಿದ್ದ ಮೆ|| ಹೆರ್‌ರವರು ಒಪ್ಪಲಿಲ್ಲ. ಮೇ ೩ನೇ ತಾರೀಖಿಗೆ ಪುನಃ ಸಭೆ ಸೇರಿತು. ಆ ಸಭೆಯಲ್ಲಿಯೂ ಕೆಲ ಹೊತ್ತು ಚರ್ಚೆ ನಡೆದು ಪುನಃ ಸಭೆ ವಿಸರ್ಜನ ಹೊಂದಿತು. ಮೇ ೮ನೇ ತಾರೀಖಿಗೆ ಪುನಃ ಸಭೆಯಾಯಿತು, ಆ ಸಭೆಯಲ್ಲಿಯೂ ಪುನಃ ಇದೇ ಅವಸ್ಥೆ. ಹೀಗೆ ಸರಕಾರಕ್ಕೆ ಮೇ ೧೦ನೇ ತಾರೀಖಿನೊಳಗೆ ಉತ್ತರ ಕೊಡದ್ದರಿಂದ ಮರುದಿನ ೧೧ನೇ ತಾರೀಖಿಗೆ ಎಪ್ರಿಲ್ ೧೦ನೇ ತಾರೀಖಿನ ಸಭಾಕಾರ್ಯವನ್ನು ರದ್ದುಪಡಿಸಿ ಹೊಸದಾಗಿ ಸಭೆ ಸೇರಿಸಿ ಅಧ್ಯಕ್ಷರನ್ನು ಆರಿಸಿಕೊಳ್ಳಬೇಕೆಂದು ಬಂಗಾಲ ಸರಕಾರವು—ಚೀಫ್ ಎಕ್ಸಿಕ್ಯುಟಿವ ಆಫೀಸರರಾದ ರಾಯ್ ಜೆ.ಸಿ. ಮುಕರ್ಜಿಯವರಿಗೆ ಅಪ್ಪಣೆ ಮಾಡಿದಂತೆ ಮೇ ೧೬ನೇ ತಾರೀಖಿಗೆ ಪುನಃ ಅಧ್ಯಕ್ಷರನ್ನಾರಿಸುವ ಸಭೆ ಸೇರಿತು. ಮೇ ೧೬ನೇ ತಾರೀಖಿನ ಸಭೆಯ ವೃತ್ತಾಂತವನ್ನು ಹೇಳುವ ಮುಂಚೆ ಮೇ ೬ನೇ ತಾರೀಖಿನ ಸಭೆಯೊಳಗಿನ ವೃತ್ತಾಂತದ ಕೆಲ ಅಂಶಗಳನ್ನು ಹೇಳುವದು ಉಚಿತ. ಪ್ರತಿಪಕ್ಷಗಳಾದ ಡಾ|| ನಲಿನಿ ರಂಜನ ಸರಕಾರ್‌ರವರು ಮೆ|| ಹೆರ್‌ರವರಿಗೆ ಅಧ್ಯಕ್ಷರನ್ನಾಗಿ ಮಾಡಲು ಮುಂಚೆ ಒಪ್ಪಿದ್ದರು; ಆದರೆ, ಬೋಸ ಪಕ್ಷದವರು ಒಪ್ಪಲಿಲ್ಲ. ಹೀಗೆ ಡಾ|| ಸರಕಾರ್‌ರವರು ಬೆಂಬಲ ಕೊಡಲು ಕಾರಣವಿತ್ತು. ಮೆ|| ಹೆರ್‌ರವರು ಬಂಗಾಲ ಸರಕಾರದ ಎಕ್ಸಿಕ್ಯುಟಿವ್ಹ ಮೆಂಬರ ಯಾನೆ ಕಾರ್ಯಕಾರಿ ಸಭಾಸದರಾಗಲು ಪ್ರಯತ್ನಿಸಿದ್ದರು. ಒಂದು ಪಕ್ಷದವರಿಗಾದರೂ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದರೆ ಆ ಅಧಿಕಾರ ಸಿಗಲು ತಮಗೆ ಬೆಂಬಲ ದೊರೆಯುವದಾಗಿ ಅವರು ಡಾ|| ಸರಕಾರ್‌ರವರಿಗೆ ಹೇಳಿದ್ದರು. ಡಾ|| ಸರಕಾರ್‌ರವರೂ, ಮೆ|| ಹೆರ್‌ರವರೂ ಈಗ ೨೦ ವರ್ಷಗಳಿಂದ ಮಿತ್ರರಿದ್ದಾರೆ, ಇನ್ನೂ ಈ ಅಧ್ಯಕ್ಷಸ್ಥಾನದ ಕುರಿತು ಕಾರಸ್ಥಾನಗಳಿದ್ದವು, ಹೀಗೆ ಸಹ ಚರ್ಚೆಯಲ್ಲಿ ಹೊರಬಿತ್ತು, ಅವು ಯಾವವೆಂದು ಪ್ರಕಟವಾಗಲಿಲ್ಲ

*

ಮುಂದೆ ಮೇ ೧೬ನೇ ತಾರೀಖಿಗೆ ಬಂಗಾಲ ಸರಕಾರದ ಅಪ್ಪಣೆಯಂತೆ ಸಭೆ ಸೇರಿತು ಈ ಸಭೆಯ ಹಕೀಕತನ್ನು ಬಂಗಾಲದೊಳಗಿನ ಪತ್ರಿಕೆಗಳು ಪ್ರಕಟಿಸಿ, ಕಲಕತ್ತಾ ಮ್ಯುನಿಸಿಪಾಲಿಟಿಯವರು ಮಂಗಳಾಪುರ ಮಾನಭಂಗ ಮಾಡಿದರಾಗಿ ಹೇಳಿರುತ್ತಾರೆ ಈ ಸಭೆಯಲ್ಲಿ ಭಯಂಕರ ಗದ್ದಲ. ಚೀಫ್ ಎಕ್ಸಿಕ್ಯುಟಿವ್ಹ ಆಫೀಸರರು ಸಭೆಯ ನೋಟೀಸನ್ನು ಓದಿ ಹೇಳುವ ಮುಂಚೆಯೇ ಅಂದರೆ, ಕ್ರಮಪ್ರಕಾರ ಸಭೆ ಸೇರುವ ಮುಂಚೆಯೇ ಒಬ್ಬ ಸಭಾಸದರು ತಾವೇ ಅಧ್ಯಕ್ಷರೆಂದು ಅಧ್ಯಕ್ಷ ಸ್ಥಾನವನ್ನಾಕ್ರಮಿಸಿದರು. 'ನಾನಿನ್ನೂ ಮ್ಯುನಿಸಿಪಾಲಿಟಿಯ ಅಧ್ಯಕ್ಷನಿದ್ದೇನೆ ಸರಕಾರವು ಎಪ್ರಿಲ್ ೧೦ನೇ ತಾರೀಖಿನ ಸಭೆಯ ನಿರ್ಣಯಗಳನ್ನು ಮಾತ್ರ ರದ್ದುಪಡಿಸಿದೆ, ನನ್ನ ಅಧ್ಯಕ್ಷಾಧಿಕಾರವನ್ನು ರದ್ದುಪಡಿಸಿಲ್ಲ ನನ್ನ ಆಸನ ನನಗೆ ಬಿಟ್ಟುಕೊಡಲೊಲ್ಲರೇನು?' ಎಂಬದಾಗಿ ಮೆ|| ಹೆರ್‌ರವರು ನುಡಿದರು. ಎಪ್ರಿಲ್ ೧೦ನೇ ತಾರೀಖಿನ ನಿರ್ಣಯದಂತೆ, ಮೆ|| ಹೆರ್‌ರವರು ಅಧ್ಯಕ್ಷರಾಗಿದ್ದರೆಂಬ ಸಂಗತಿಯನ್ನು ಅವರು ಮರೆತರು "ನೀವು ಅಧ್ಯಕ್ಷರಲ್ಲ," ಎಂದು ಅಧ್ಯಕ್ಷಸ್ಥಾನವನ್ನಾಕ್ರಮಿಸಿದ ಸಭಾಸದರು ನುಡಿದರು "ನಾನೇ ಅಧ್ಯಕ್ಷನು," ಎಂಬದಾಗಿ ಮೆ|| ಹೆರ್‌ರವರು ನುಡಿದು ಮೇಜಿನ ಮೇಲೆ ಕೂತರು. ಹುಡುಗಾಟಿಕೆ ಮಾಡಬಾರದಾಗಿ ಒಬ್ಬರು ಹೇಳಿದರು ಇನ್ನೊಬ್ಬ ೬೫ ವರ್ಷ ಪ್ರಾಯದ ಮುದುಕರು ತಾವೇ ಅಧ್ಯಕ್ಷರೆಂದು ಅಧ್ಯಕ್ಷಸ್ಥಾನದ ಮೇಲೆ ಕೂತ ಸಭಾಸದರ ತೊಡೆಯ ಮೇಲೆ ಕೂತರು ಬಹು ಗದ್ದಲವಾಯಿತು. ಎಲ್ಲರ ಅನುಮತಿಯಿಂದ ಡಾ|| ಬಸುರವರು ಅಧ್ಯಕ್ಷರಾದರು ಸಭೆಯಲ್ಲಿ ಶಾಂತತೆಯಾದ ಬಳಿಕ, ಅಧ್ಯಕ್ಷರನ್ನಾರಿಸುವ ಸಭೆಗೆ ಸಭಾಪತಿಯನ್ನಾರಿಸಬೇಕೆಂದು ಸೂಚನೆ ಬಂತು ಸೇನಗುಪ್ತ ಪಕ್ಷದವರು ಒಬ್ಬರಿಗೆ, ಬೋಸ ಪಕ್ಷದವರು ಇನ್ನೊಬ್ಬರಿಗೆ, ಹೀಗೆ ಸೂಚನೆಗಳಾದವು ಬೋಸ ಪಕ್ಷದ ಸಭಾಸದರಿಗೆ ಹೆಚ್ಚಿನ ಬಹುಮತ ಬಿತ್ತು, ಎಂಬದಾಗಿ ಡಾ|| ಬಸುರವರು ಜಾಹೀರ ಮಾಡಿದರು. 'ಕ್ರಮದಂತೆ ನಡಕೊಳ್ಳಿರೆಂದೂ, ಡಾ|| ಬಸುರವರ ನಿರ್ಣಯವನ್ನು ಮಾನ್ಯ ಮಾಡಬೇಕೆಂದೂ ಮುಸಲ್ಮಾನ ಸಂಗಡಿಗ [ಮಿ|| ರಘುನಾಥರವರು ಹೇಳಿದಾಗ್ಯೂ ಸೇನಗುಪ್ತ ಪಕ್ಷದವರು ಅತ್ತ ಕಿವಿಗೊಡಲಿಲ್ಲ. ಗದ್ದಲ ಮಾಡಿ ಗೊಂದಲವನ್ನೆಬ್ಬಿಸಿ ಬಿಟ್ಟರು ಇದಕ್ಕೊಂದು ಕಾರಣವಿದೆ ಎಪ್ರಿಲ್ ೧೦ನೇ ತಾರೀಖಿಗೆ ಸರಕಾರನಿಯುಕ್ತ ಸಭಾಸದರ ೧ ವರ್ಷದ ಅವಧಿ ಮುಗಿದಿತ್ತು, ಮುಖ್ಯವಾಗಿ ಅವರಿಗೇ ಸರಕಾರವು ಹುಕ್ಮಿನಿಂದ ವರ್ಷದ ಬಗ್ಗೆ ನೇಮಿಸಿತು ಹೀಗೆ ಸರಕಾರಕ್ಕೆ ನೇಮಿಸಲು ಅಧಿಕಾರವಿಲ್ಲವಾಗಿ ' ಸೇನಗುಪ್ತ ಪಕ್ಷದವರ ಅಂಬೋಣ ಇದರಿಂದ ತಮ್ಮ ಪಕ್ಷದ ಸಭಾಪತಿಗಳನ್ನು ನೇಮಿಸಿಕೊಂಡು ಲೋಕನಿಯುಕ್ತರಿಗೆ ಮತಾಧಿಕಾರವಿಲ್ಲವಾಗಿ ಸಭಾಪತಿಗಳಿಂದ ನಿರ್ಣಯಿಸಿಕೊಂಡು ಪುನಃ ಮೆ|| ಹೆರ್‌ರವರಿಗೇ ನೇಮಿಸಬೇಕೆಂದು ಅವರು ಹಟತೊಟ್ಟಿದ್ದರು ಈ ದುರಾಗ್ರಹದ ಮೂಲಕ ಸಭೆಯಲ್ಲಿ ಗೊಂದಲವಾಯಿತು, ಈ ಸಭೆಯಲ್ಲಿ ಬೋಸ—ಸೇನಗುಪ್ತ ಪಕ್ಷದ ಇಬ್ಬ ಸಭಾಪತಿಗಳು ಸಭೆ ನಡಿಸಿ ಅಧ್ಯಕ್ಷರ ಜೋಡಿ ಒಂದು, ಉಪಾಧ್ಯಕ್ಷರ ಜೋಡಿ ಒಂದು, ಹೀಗೆ ಸವತಿ ಇಸಮು ನೇಮಿಸಿ ಗದ್ದಲ ಮಾಡಿದರು. ಈ ಕ್ರಮವೆಲ್ಲ ಬೇಕಾಯಿದೇಶೀರ ಎಂದು ಚೀಫ ಎಕ್ಸಿಕ್ಯುಟಿವ್ಹ ಆಫೀಸರರು ಬಂಗಾಲ ಸರಕಾರಕ್ಕೆ ಬರೆದು ಯಾರ ಬಹುಮತವನ್ನು ತಾವು ಮನ್ನಿಸಬೇಕೆಂಬುದರ ಕುರಿತು ಅಪ್ಪಣೆ ಬೇಡಿದರು ಅನಕ ವರೆಗೆ ಅಧ್ಯಕ್ಷ—ಉಪಾಧ್ಯಕ್ಷರ ಕೋಣಗಳಿಗೂ, ಮ್ಯುನಿಸಿಪಾಲಿಟಿಯ ಸಭಾಗೃಹಕ್ಕೂ ಬಾಗಿಲು ಮುಚ್ಚಿಟ್ಟರು. ಮ್ಯುನಿಸಿಪಾಲಿಟಿಯ ಅಧ್ಯಕ್ಷರ್ಯಾರೆಂದು ಯಾರಿಗೂ ತಿಳಿಯಲಿಲ್ಲ ಅಧ್ಯಕ್ಷರು ತಮ್ಮ ಅಧಿಕಾರವನ್ನು ಅಮಲಿನಲ್ಲಿ ತರಲು ಮುಂದೇನು ಮಾಡಬೇಕೆಂಬುದರ ಕುರಿತು ಕಾಯಿದೆ ಪಂಡಿತರ ಸಲಹೆ ಕೇಳಿಕೊಂಡರು. ಹೈಕೋರ್ಟಿಗೆ ಹೋಗಿ ನಿರ್ಣಯಿಸಿಕೊಳ್ಳಬೇಕೆಂದು ಕೆಲವರ ಸಲಹೆ. ಸಭಾಕಾರ್ಯವು ಬೇಕಾಯಿದೇಶೀರ ಆದ್ದರಿಂದ ಹೊಸ ಸಭೆಯನ್ನೇ ಕರೆಯ ಬೇಕೆಂದೂ, ಅದನ್ನು ಕಳೆದ ವರ್ಷ ಅಧ್ಯಕ್ಷರಾಗಿದ್ದ ಡಾ|| ಸಂತೋಷಕುಮಾರ ಬಸುರವರು ಕರೆಯಬೇಕೆಂದೂ, ಕಾಯಿದೆಯಂತೆ ಹೊಸ ಅಧ್ಯಕ್ಷರು ಆರಿಸಲ್ಪಡುವವರೆಗೆ ಅವರ ಅಧ್ಯಕ್ಷಾಧಿಕಾರ ಉಳಿಯುತ್ತದೆಂದೂ ಕೆಲ ಸಭಾಸದರು ಕಾಯಿದೆಪಂಡಿತರ ಸಲ್ಲೆ ಪಡೆದು ರಿಕ್ವಿಝಿಶನ್ ಯಾನೆ ಒಂದು ಅರ್ಜಿಯನ್ನು ಕೊಟ್ಟರು ಡಾ|| ಸಂತೋಷಕುಮಾರ ಬಸುರವರು ಅದನ್ನು ಚೀಫ ಎಕ್ಸಿಕ್ಯುಟಿವ್ ಆಫೀಸರರಿಗೆ ಕಳಿಸಿ ಮ್ಯುನಿಸಿಪಾಲಿಟಿಯ ಕಾಯಿದೆಪಂಡಿತರ ಸಲಹೆ ಪಡೆಯಹೇಳಿದರು ಇತ್ತಕಡೆ ಸಂಧಿ ಮಾಡಲು ಪ್ರಯತ್ನಗಳೂ ನಡೆದವು. ದಾರ್ಜಿಲಿಂಗದಿಂದ ಸ್ಥಾನಿಕ ಸ್ವರಾಜ್ಯ ಇಲಾಖೆಯ ದಿವಾಣರು ಬಂದರು, ಸರಕಾರಿ ಸಭಾಸದರೂ ಬಂದರು, ಎಲ್ಲರೊಳಗೆ ಸಂಧಿ ಮಾಡಲು ಪ್ರಯತ್ನಿಸಿದರು, ಆದರೆ, ಸಂಧಿಯಾಗಲಿಲ್ಲ ಮ್ಯುನಿಸಿಪಾಲಿಟಿಯನ್ನು ರದ್ದುಪಡಿಸಲು ಕಲಕತ್ತಾ ಮ್ಯುನಿಸಿಪಲ್ ಆಕ್ಟಿನಂತೆ ಬಂಗಾಲ ಸರಕಾರಕ್ಕೆ ಅಧಿಕಾರವಿಲ್ಲ ರಾಜಶಾಸನವನ್ನು ಹೊರದಿಸಿ ವ್ಯವಸ್ಥೆ ಮಾಡಬೇಕಾಗಿ ಬಂಗಾಲ-ಸರಕಾರವು ಹಿಂದುಸ್ಥಾನ ಸರಕಾರಕ್ಕೆ ಬರೆಯಿತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಈ ಪ್ರಕಾರ ಕೈಹಾಕಿರುವದಿಲ್ಲವಾಗಿಯೂ, ಕೈಹಾಕುವದು ಯುಕ್ತವಲ್ಲವಾಗಿಯೂ, ರಾಜಕೀಯ ದೋರಣಕ್ಕೆ ಬಾಧ ತಟ್ಟುವಲ್ಲಿ ಮಾತ್ರ ಕೈಹಾಕುವದು ಯುಕ್ತವೆಂದೂ ಹಿಂದುಸ್ಥಾನ ಸರಕಾರವು ಒಂದು ಬಂಗಾಲ ಸರಕಾರದ ರಾಜಶಾಸನದ ಸೂಚನೆಯನ್ನು ತಿರಸ್ಕರಿಸಿತು ಬಂಗಾಲ

ಪ್ರಾಂತಿಕ ಕಾಯಿದ ಕೌನ್ಸಿಲಿನ ವಿಶೇಷ ಅಧಿವೇಶನವನ್ನು ಸೇರಿಸಿ ಮ್ಯುನಿಸಿಪಾಲಿಟಿ ಆಕ್ಟಿನಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕಾಗಿಯೂ ಒಂದು ಸೂಚನೆಯನ್ನು ಬಂಗಾಲ ಸರಕಾರವು ಸೂಚಿಸಿತು ಅದಕ್ಕೆ ಬಹಳ ಖರ್ಚ ತಗಲುತ್ತದೆಂದೂ, ಅದು ಒಹು ದೊಡ್ಡ ಉಪಕ್ರಮವೆಂದೂ ತಿರಸ್ಕರಿಸಲಾಯಿತು. ಮ್ಯುನಿಸಿಪಾಲಿಟಿಯು ಸಭಾಸದರ ನಡತೆಯಿಂದ ಬಂಗಾಲದಲ್ಲೆಲ್ಲ ಉಂಟಾದ ಕ್ಷೋಭದ ಬೆಂಬಲ ಪಡೆದು ಸಭಾಸದರು ಸದ್ವರ್ತನದ ವಚನ ಕೊಟ್ಟರೆ ಪುನಃ ಸಭೆ ಸೇರಿಸಲು ಅಪ್ಪಣೆ ಕೊಡಬೇಕಾಗಿ ಬಂಗಾಲ ಸರಕಾರದ ಅಭಿಪ್ರಾಯವಾಗಿ ಅದರಂತೆ ಸಭಾಸದರಿಗೆ ಸರ್ಕಲಾರನ್ನು ಹೊರಡಿಸಿತು ಆ ಸರ್ಕಲಾರಿಗೆ ಸಭಾಸದರು ಒಪ್ಪಿದ್ದರಿಂದ ಜುಲ್ಯಾ ೪ನೇ ತಾರೀಖಿಗೆ ಪುನಃ ಸಭೆ ಕರೆದು ಅಧ್ಯಕ್ಷರನ್ನು ಆರಿಸಿಕೊಳ್ಳಬೇಕಾಗಿ ಚೀಫ ಎಗ್ಜಿಕ್ಯೂಟಿವ್ಹ ಆಫೀಸರರ ವಿದ್ಯಮಾನ ಬಂಗಾಲ ಸರಕಾರದ ಅಪ್ಪಣೆ ಹೊರಟಿತು. ಸರಕಾರ ನಿಯುಕ್ತ ಸಭಾಸದರು ಸಭಿಕರೆಂದು ಎಣಿಸಬೇಕು, ಅವರ ಮತಗಳನ್ನೆಣಿಸಿ ಸಭೆಯಲ್ಲಿ ನಿರ್ಣಯವಾಗತಕ್ಕದ್ದು, ಹೀಗೆ ಸಹ ಸರ್ಕಲಾರಿನಲ್ಲಿ ನಮೂದಿತ್ತು. ಇದರಿಂದ ಬೋಸ ಪಕ್ಷವು ಜಯ ಹೊಂದುತ್ತದೆ, ಅಂದರೆ ಸೇನಗುಪ್ತ ಪಕ್ಷಕ್ಕೆ ಅಪಜಯವಾಗುತ್ತದೆ; ಅದರಿಂದ ಸೇನಗುಪ್ತ ಪಕ್ಷದ ರಾ| ನಾಸಮಲ್ಲರವರು ಮಹಾತ್ಮರಿಗೆ ತಂತಿ ಮಾಡಿದರು. ಕೊನೆಯ ಪ್ರಯತ್ನವಿದು ! "ರಾಷ್ಟ್ರೀಯ ಸಭೆಯವರಲ್ಲಿ ಬಹುಮತದವರು ಮೌ| ಹಕ್‌ರವರು ಅಧ್ಯಕ್ಷರಾಗಬೇಕೆನ್ನುತ್ತಾರೆ ಈ ವರ್ಷ ಅವರಿಗೆ ಬೆಂಬಲ ಕೊಡುವಂತೆ ಬೋಸ ಪಕ್ಷದವರಿಗೆ ಆಜ್ಞೆ ಮಾಡಬೇಕು, ಹಿಂದು-ಮುಸಲ್ಮಾನರ ಐಕ್ಯಯೋಜನೆಯಿದು, ಶೀಘ್ರ ನೇ ಹಿಡಿಬನ್ನಿ, ಜುಲ್ಯಾ ೯ನೇ ತಾರೀಖಿಗಿಂದ ಬಹು ವಿಳಂಬವಾಗುತ್ತದೆ," ಹೀಗೆ ಮಹಾತ್ಮರಿಗೆ ರಾ| ನಾಸಮಲ್‌ರವರ ತಂತಿ "ಇತ್ತಿಟ್ಟಿಗೆ ಒಪ್ಪಿಗೆಯಿದ್ದ ಸಂಗತಿಗಳ ಮೇಲಿಂದ ಸ್ಥಳಿಕ ಸ್ಥಳಕ್ಕೆ ಬಂದ ಹೊರತು ನಿರ್ಣಯ ಕೊಡಲಾರೆ, ತ್ವರಿತ ಬರಲಸಾಧ್ಯ," ಹೀಗೆ ಮಹಾತ್ಮರ ತಂತಿ. "ಸ್ಥಳಿಕ ತಪಾಸೇಕೆ? ಜುಲ್ಯಾ ೯ನೇ ತಾರೀಖಿನೊಳಗೆ ಅಧ್ಯಕ್ಷರನ್ನಾರಿಸಿದರೆ, ಬಂಗಾಲದೊಳಗೆ ರಾಷ್ಟ್ರೀಯ ಸಭೆಯು ತೊಡಕಿನಲ್ಲಿ ಸಿಲುಕುವದು. ಆ ಮೇಲೆ ಅದನ್ನು ಸುಧಾರಿಸುವದು ಕಷ್ಟ ಸರಕಾರವು ನೇಮಿಸಿದ ಸಭೆಯ ತಾರೀಖಿಗೆ ನಿಮ್ಮ ಆಗಮನ ನಿರೀಕ್ಷಣೆಯಿಂದ ನಾನು ಸಭೆಯನ್ನು ಮುಂದೂಡುವಂತೆ ಸೂಚನೆ ತರುತ್ತೇನೆ, ಅದಕ್ಕಾದರೂ ಬೆಂಬಲ ಕೊಡಲು ತಿಳಿಸಿರಿ, ನನ್ನ ಕರ್ತವ್ಯ ಮುಗಿಯಿತು, ಈಗ ನಿಮ್ಮ ಕರ್ತವ್ಯ" ಹೀಗೆ ಮಹಾತ್ಮರಿಗೆ ರಾ| ನಾಸಮಲ್‌ರವರ ಪ್ರತಿತಂತಿ ಈ ತಂತಿಗೆ "ಇತ್ತಿಟ್ಟಿನವರೂ ನನ್ನೆಡೆ ಮೊರೆಕೊಂಡನಕ ನನಗೆ ಈ ವಿಷಯದಲ್ಲಿ ಕೈಹಾಕ ಧೈರ್ಯವಿಲ್ಲ"ವೆಂದು ಮಹಾತ್ಮರ ಉತ್ತರ ಜುಲ್ಯೈ ತಾ ೪ನೇಗೆ ಖಾನಬಹಾದ್ದೂರ ಮೊಮಿನ್‌ರವರ ಅಧ್ಯಕ್ಷತೆಯಲ್ಲಿ ಮ್ಯುನಿಸಿಪಾಲಿಟಿಯ ಸಭೆಯಾಗಿ ರಾ| ಸರಕಾರ್‌ರವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಮೌ| ಹಕ್‌ರವರು ರಾ| ಸರಕಾರ್‌ರವರಿಗೆ ಅಭಿನಂದಿಸುವಾಗ ನುಡಿದಂತೆ ಅಂತು ಕಲಕತ್ತೆಯ ಮ್ಯುನಿಸಿಪಾಲಿಟಿಯು ರಾ| ಸರಕಾರರಂಥ ಬ್ರಹ್ಮಚಾರಿಯನ್ನು *(a confirmed bachelor)* ನೇಮಿಸಿಕೊಂಡು ವಿರಹತಾಪವನ್ನು ಕಳಕೊಂಡಿದೆ, ಮತ್ಸರವು ಮಾತ್ರ ಇದ್ದಕ್ಕಿದ್ದಂತೆಯೇ ಇದೆ !! ಮೌ| ಹಕ್‌ರವರಿಗ ಸೇನಗುಪ್ತ ಪಕ್ಷದವರು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರೂ ಅವರಿಗ ಬಹುಮತ ದೊರಕಲಿಲ್ಲ ಅದರಿಂದ ಸಹಜವಾಗಿ ಅವರು ರೇಗಿದ್ದಾರೆ. ರಾ| ಸರಕಾರ್‌ರವರಿಗೆ ಅಭಿನಂದಿಸುವಾಗ ಅವರು ನುಡಿದದ್ದೇನಂದರೆ:— ೧೭ ವರ್ಷಗಳ ಹಿಂದೆ ಒದಗಿದಂತೆ, ಕ್ಲೈವ್ಹ ಸ್ಟ್ರೀಟದೊಳಗಿನ ಸಾವಕಾರರು (ಯುರೋಪಿಯನ್ನರು) ಮೀರ ಜಾಫರ, ಉಮಿಚಂದ, ಜಗತ್ ಶೇಟರವರ ವಂಶದವರೊಡನೆ ಒಳಸಂಚು ಮಾಡಿ ನನಗೆ ಸೋಲಿಸಿದ್ದಾರೆ ಯುರೋಪಿಯನ್ ಸಭಾಸದರು ಮತಪ್ರಾಬಲ್ಯದಿಂದ ನನಗೆ ಸೋಲಿಸಿದ ಬಗ್ಗೆ ಅಭಿಮಾನ ಪಡಬಹುದು. ರಾಜನಾಮ ಕೊಟ್ಟವರೂ ಮತಕೊಡಬಂದಿದ್ದಾರೆ. ಈ ಸಂಗತಿ ಇಷ್ಟಕ್ಕೆ ಮುಗಿಯಿತೆಂದು ಅವರು ತಿಳಿಯಕೂಡದು." ರಾ| ನಾಸಮಲ್‌ರವರ ತಂತಿಯನ್ನೋದಿದರೂ ವಂಗದೇಶದಲ್ಲಿ ಮತ್ಸರದಿಂದ ರಾಷ್ಟ್ರಕಾರ್ಯ ಹಾನಿಯಾಗುತ್ತದೆಂಬದೊಂದು ಭೀತಿ ಆದರ, ಸದ್ಯಕ್ಕೇ ಮಹಾತ್ಮರು ಅಲ್ಲಿ ದಿಗ್ವಿಜಯ ಮಾಡುವರಿದ್ದಾರೆ ಮೋಹನ ಮೂರುತಿಯಿದು ! ಹಾಗಾದರೂ ಅವರು ಸಂಧಿ ಮಾಡದೆ ಬಿಡರು !!

***

ಇದರೊಳಗಿನ ಆಕ್ಷೇಪವನ್ನೊಂದು ಕೇಳಿ ಕಲಕತ್ತೆಯ ಮ್ಯುನಿಸಿಪಲ್ ಆಕ್ಟಿನಂತೆ ಒಮ್ಮೆ ಸರಕಾರವು ಎಷ್ಟೇ ಅವಧಿಯ ಒಗ್ಗ ಸಭಾಸದರನ್ನು ನೇಮಿಸಿದ ಬಳಿಕ, ಪುನಃ ಸರಕಾರಕ್ಕೆ ಸಭಾಸದರನ್ನು ನೇಮಿಸಲು ಹಕ್ಕಿಲ್ಲವಾಗಿಯೂ, ಹೀಗೆ ಎಪ್ರಿಲ್ ೧೬ನೇ ತಾರೀಖಿನ ನಂತರ ನೇಮಿಸಲ್ಪಟ್ಟ ಸರಕಾರಿ ಸಭಾಸದರಿಗೆ ಮತದಾನ ಮಾಡುವ ಹಕ್ಕಿಲ್ಲವಾಗಿಯೂ ಬಾಧಿಸಿ ೧೦ ಮಂದಿ ಸರಕಾರನಿಯುಕ್ತ ಸಭಾಸದರನ್ನು ಪದಭ್ರಷ್ಟಮಾಡಿ ಮೌ| ಹಕ್‌ರವರಿಗ ಅಧ್ಯಕ್ಷಸ್ಥಾನ ಸಿಗುವಂತ ಏರ್ಪಡಿಸಲು ಕಲಕತ್ತೆಯ ಹೈಕೋರ್ಟಿನಲ್ಲಿ ಎಪ್ರಿಲ್ ತಾ ೨೦ನೇಗೆ ಮೌ| ರಮ್ಜಾನ ಅಲಿ ಮೊದಲಾದವರ" ಬಂಗಾಲ ಸರಕಾರದ ಪತ್ರಕ್ಕೆ ಉತ್ತರ ಕೊಡಲು ಎಪ್ರಿಲ್ ತಾ ೨೧ನೇಗೆ ಕರೆದ ಹಾಗು ಬೇರೆ ಮ್ಯುನಿಸಿಪಾಲಿಟಿಯ ಕಾರ್ಯಕ್ಕಾಗಿ ಕರೆಯಲಾದ ಇತರ ಸಭೆಗಳಲ್ಲಿ ಸರಕಾರ ನಿಯುಕ್ತ ೧೦ ಮಂದಿ ಸಭಾಸದರು ಸೇರದಂತೆ ಏಕತರ್ಫಿ ಪ್ರತಿಬಂಧಕ ಹುಕುಮು ಬೇಡಿ ಜೊತೆಗೆ ಅರ್ಜಿ !! ಏಕಪಕ್ಷದಿಂದ ಹುಕುಮು ಕೊಡಬರುವದಿಲ್ಲವಾಗಿ ನ್ಯಾ| ಮೂ| ರೊಯ್‌ರವರು ನುಡಿದು ನೋಟೀಸು ಹೊರಡಿಸಿ ವಿಚಾರಕ್ಕಿಟ್ಟರು. ಇತ್ತಿಟ್ಟಿನ ವಿಚಾರ ಕೇಳಿಕೊಂಡು ಅನುಕೂಲತೆಯ ದೃಷ್ಟಿಯಿಂದ ಪ್ರತಿಬಂಧಕ ಹುಕುಮು ಕೊಡದಿರುವದು ನ್ಯಾಯವೆಂದು ನ್ಯಾಯಮೂರ್ತಿಗಳ ಅಭಿಪ್ರಾಯವಾಗಿ ಅವರು ಅರ್ಜಿಯನ್ನು ಕಿತ್ತೊಗೆದರು. ಬಂಗಾಲ ಸರಕಾರವು ೧೯೩೩ನೇ ಇಸ್ವಿಯಿಂದ ವರ್ಷ ವರ್ಷಕ್ಕೆ ಸಭಾಸದರನ್ನು ನೇಮಿಸುತ್ತಿರುವದಾಗಿಯೂ, ಈ ಕುರಿತು ಈ ತನಕ ಯಾರೂ ಆಕ್ಷೇಪ ಮಾಡಿಲ್ಲವಾಗಿಯೂ ವಾದಿಯ ಕಡೆ ಬೆರಿಸ್ಟರ ಮಿ|| ಬೋಸರವರು ಒಪ್ಪಿದರು ತೀರ್ಪಿನ ನಕಲು ಸಿಗುವತನಕ ಹಾದಿ ಕಾಯದೆ ಅಪೀಲು ದಾಖಲಾಗಿ ಏಕತರ್ಫಿನಿಂದ ಪ್ರತಿಬಂಧಕ ಹುಕುಮು ಹೊರಡಿಸಬೇಕಾಗಿ ನ್ಯಾ| ಮೂ| ಕೊಸ್ಟೆಲೊ, ಲೊರ್ಟವಿಲಿಯಮ್ಸರವರ ಕೋರ್ಟಿನಲ್ಲಿ ಅರ್ಜಿ ದಾಖಲಾಯಿತು ನ್ಯಾಯಮೂರ್ತಿಗಳು ಒಪ್ಪಲಿಲ್ಲ ಪುನಃ ಮೇ ೧೯ನೇ ತಾರೀಖಿಗೆ ತೀರ್ಪಿನ ನಕಲು ದಾಖಲ ಮಾಡಿ ಮತ್ತೊಂದು ಅರ್ಜಿ ದಾಖಲಾಯಿತು ಪುನಃ ಏಕತರ್ಫಿನಿಂದ ಹುಕುಮು ಕೊಡಬೇಕಾಗಿ ಅಪೀಲಾಂಟರ ಪರವಾಗಿ ಮಿ| ಪ್ಯಾರಿರವರು ವಾದಿಸಿದರು 'ಸರಕಾರಿ ಪತ್ರಿಕ್ಕೆ ಉತ್ತರ ಕೊಡುವ ಸಭೆಯಲ್ಲಾದರೂ ಅವರಿಗ ಸೇರದಂತೆ ನಿಯಮಿತ ಕೆಲಸದ ಪ್ರತಿಬಂಧಕ ಹುಕುಮು ಕೊಡಿರೆಂ'ದು ಮಿ| ಪ್ಯಾರವರು ನ್ಯಾಯಮೂರ್ತಿಗಳ ಕಡೆ ಬಿನ್ನೈಸಿಕೊಂಡರು, ನ್ಯಾಯಮೂರ್ತಿಗಳು ಒಪ್ಪಲಿಲ್ಲ ಆ ಮೇಲೆ ಮೇ ೨೬ನೇ ತಾರೀಖಿಗೆ ಅಪೀಲು ರೀತಿಯಂತೆ ವಿಚಾರಕ್ಕೆ ಬಂತು ೩ ತಾಸುಗಳ ತನಕ ಅಪೀಲು ನಡೆಯುತ್ತದೋ ಇಲ್ಲವೋ ? ಎಂಬ ಬಗ್ಗೆ ಬೆರಿಸ್ಟರರಿಗೂ, ನ್ಯಾಯಮೂರ್ತಿಗಳಿಗೂ ಘೋರ ಚರ್ಚೆಯಾಯಿತು. ಈ ಚರ್ಚೆಯಲ್ಲಿ ಸೇನಗುಪ್ತರ ಪಕ್ಷವು ಗೆದ್ದಿತು, ಅಪೀಲು ನಡೆಯುತ್ತದಾಗಿ ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು, ಆದರೆ, ವಿಚಾರ ಮಾಡಿ ಅರ್ಜಿಯನ್ನು ಕಿತ್ತೊಗೆದರು ಪ್ರತಿಬಂಧಕ ಹುಕುಮು ನ್ನು ಕೊಡದಿದ್ದಲ್ಲಿ ಅಪೀಲಾಂಟ ವಾದಿಗೆ ನಷ್ಟವಿಲ್ಲ, ಕೊಟ್ಟಲ್ಲಿ ರಿಸ್ಪಾಂಡೆಂಟ ಪ್ರತಿವಾದಿಗೆ ನಷ್ಟವಿದೆ, ಎಂದು ನ್ಯಾ| ಮೂರ್ತಿಗಳು ತೀರ್ಪಿನಲ್ಲಿ ನಮೂದಿಸಿದ್ದಾರೆ. ಈ ಪ್ರಕಾರ ಸರಕಾರನಿಯುಕ್ತ ಸಭಾಸದರಿಗೆ ಅಲಕ್ಷ ಮಾಡಿ ಮ್ಯುನಿಸಿಪಾಲಿಟಿಯ ಸಭೆಯನ್ನು ಸೇರಿಸಿ ಅಲ್ಪ ಮತವನ್ನು ಬಹುಮತವನ್ನಾಗಿ ಪರಿಣಮಿಸಲು ಸೇನಗುಪ್ತ ಪಕ್ಷವು ಮಾಡಿದ ಮರಾಠಿ ನಿಷ್ಫಲವಾಯಿತು

***

ಮೌ| ಫಜಲುಲ್ ಹಕ್‌ರವರೆಂದರೆ, ಸಾಮಾನ್ಯ ಪುರುಷರಲ್ಲ. ಹೆಸರಾದ ಬೆರಿಸ್ಟರರು; ಕೆಲಕಾಲ ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾಗಿದ್ದರು ಮೊಂಟೆಗ್ಯೂ ಸ್ವರಾಜ್ಯಯುಗದಲ್ಲಿ ದಿವಾಣರಿದ್ದರು. ಇವರು ದಿವಾಣರಿದ್ದಾಗಲೇ ದೇಶಬಂಧು ದಾಸರವರು ಇವರ ಮೇಲೆ ನಿಂದಾವ್ಯಂಜಕ ಠರಾವು ಮಂಜೂರ ಮಾಡಿ ಇವರ ಲೆಕ್ಕಕ್ಕೆ ಖರ್ಚು ಹಾಕಿದ ಸಂಬಳವನ್ನು ಬಂಗಾಲ ಸರಕಾರದ ಜಮಾ ಖರ್ಚು ಪತ್ರಿಕೆಯೊಳಗಿಂದ ಕಿತ್ತೊಗೆಯಬೇಕಾಗಿ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಠರಾವನ್ನು ಮನ್ನಿಸಿಕೊಂಡು ಮೊಂಟೆಗ್ಯೂ ಸ್ವರಾಜ್ಯ ಮುರಿದ ಕಥೆ ಎಲ್ಲರಿಗೂ ವಿದಿತವಾದದ್ದೇ ಆ ಮೇಲೆ ಇವರು ರೌಂಡ ಟೇಬಲಿಗೆ ಪ್ರತಿನಿಧಿಗಳಾಗಿ ಹೋದರು ರಾಷ್ಟ್ರೀಯ ಸಭೆಯ ವಿರೋಧಕರಾದರು ' ಈಗ ಸೇನಗುಪ್ತ ಪಕ್ಷದವರು ಅವರಿಗ ಮ್ಯುನಿಸಿಪಾಲಿಟಿಯ ಅಧ್ಯಕ್ಷಸ್ಥಾನ ಕೊಡ ಮಾಡಿದ್ದರಿಂದ ಇವರು ರಾಷ್ಟ್ರೀಯರಾಗಿ ರೂಪಾಂತರ ಹೊಂದಿದ್ದಾರೆಂ'ದು ಸರಕಾರ ನಿಯುಕ್ತ ಖಾ| ಬ| ಮೋಮಿನ್‌ರವರು ಕಲಕತ್ತೆಯೊಳಗಿನ 'ಅಮೃತ ಬಝಾರ ಪತ್ರಿಕೆ'ಗ ಬರೆದಿದ್ದಾರೆ ರಾ| ನಲಿನಿರಂಜನ ಸರಕಾರ್‌ರವರು ಬಿ. ಎಲ ಚಾರಿಟೀಯ ವರ್ತಕ ಸಂಘದ ಅಧ್ಯಕ್ಷರಿದ್ದಾರೆ, ಮಾನ್ಯರು.

———

— ಮಹಾತ್ಮರು ಶ್ರೀಕಾಶೀಕ್ಷೇತ್ರದಲ್ಲಿ ಹರಿಜನೋದ್ಧಾರ ಸಂಚಾರ ಮುಗಿಸಿ ವರ್ಧಾದೊಳಗಿನ ಆಶ್ರಮದಲ್ಲಿ ಉಳಕೊಳ್ಳುವರಾಗಿ ಪ್ರಕಟವಾಗಿದೆ

ಕೃಷ್ಣ ಕಾರಸ್ಥಾನ.

[ನಿರೀಕ್ಷಕನು ಬರೆದುದು]

ಶ್ವೇತಪತ್ರಿಕೆಯ ಕೃಷ್ಣಕಾರಸ್ಥಾನಗಳನ್ನು ಪರಾಂಬರಿಸಿದ ನನಗಂತು ನಾಲ್ಕು ಹತ್ತು ಪರಸ್ಪರವಿಸಂಗತ ವಾರ್ತೆಗಳು ಪ್ರಕಟವಾಗುತ್ತಿವೆ. ಶ್ವೇತಪತ್ರಿಕೆಯನ್ನು ಹಿಂದೀಯರ ಮನಸ್ಸೊಲಿಸುವಂತೆ ಪಟಿಸಲು ಬ್ರಿಟಿಶ ಪ್ರಧಾನ ಮಂಡಳವೂ, ಹಿಂದುಸ್ಥಾನ ಸರಕಾರವೂ ಪ್ರಯತ್ನಪಡುತ್ತದಾಗಿ ನನಗೂ ವೇದ್ಯವಾಗುತ್ತದೆ. ಸರದಾರ ವಲ್ಲಭಭಾಯಿ ಪಟೇಲರಿಗೆ ಬಿಡುಗಡೆ ಮಾಡಲು ಅಹಮದಾಬಾದ-- ಜಿಲ್ಹಾಧಿಕಾರಿಗಳು ಒಪ್ಪಿರುವರಂತೆ. ಮುಂಬಯಿ ಸರಕಾರವು ಬಿಡುಗಡೆ ಮಾಡುವ ಆಲೋಚನೆಯಲ್ಲಿರುವದು ಸರಕಾರಿ ಪ್ರಕಟನೆಯಿಂದ ಲೋಕನಾಯಕರ ಬಿಡುಗಡೆಯು ಸಂಪೂರ್ಣವಾಗಿ ಪ್ರಾಂತಿಕ ಸರಕಾರಗಳಿಗೆ ಕೂಡಿಕೊಂಡಿದೆ. ಆದರಿಂದ ಸರದಾರರು ತ್ವರಿತ ಬಿಡುಗಡೆ ಹೊಂದುವರೆಂದು ಒಂದು ಆಶೆ. ಮಹಾತ್ಮರ ಸರದಾರ, ಜವಾಹಿರಲಾಲ, ಖಾನ ಅಬ್ದುಲ್ಲ ಗಫಾರಖಾನರವರ ಬಂದಿವಾಸದಿಂದ ಸರಕಾರದೊಡನೆ ಸಹಕಾರ ಮಾಡಲು ಮನಸ್ಸು ಸಂಪೂರ್ಣ ಒಡಂಬಡಲಿಲ್ಲವಾಗಿ ಉದ್ಗರಿಸಿದ್ದರಷ್ಟೇ! ಭಾವನಗರದಲ್ಲಿಯೂ ಮಹಾತ್ಮರು ಹರಿಜನ ಹುಡುಗನೊಡನೆ ಮಾತಾಡಿದ ವರ್ತಮಾನದ ಒಂದು ಮಾತು ಅರ್ಥಪೂರ್ಣವಿದೆ. "ಹರಿಜನ ಕಾರ್ಯಕ್ಕೆ ತಾವು ಸಂಪೂರ್ಣವಾಗಿ ತೊಡಗಬೇಕು ... ಗಳಲ್ಲಿ ... ಹೀಗೆ ಹುಡುಗನು ಮಹಾತ್ಮರಿಗೆ ... ಮಹಾತ್ಮರು ಹೇಳಿದರು 'ಜೈಲಿಗೆ ಹೋಗಲು ಬೇಕಾದವರೂ, ಸಹಕಾರಿಗಳೂ ನನಗೆ ಉಪದೇಶಿಸುತ್ತಾರೆ, ನೀನು ಜೈಲಿಗೆ ಹೋಗಲು ಸಿದ್ಧನೋ?' ಎಂದು ಮಹಾತ್ಮರು ಹುಡುಗನಿಗೆ ಕೇಳಿದರು. 'ನಾನು ಜೈಲಿಗೆ ಹೋಗಸಿದ್ಧ" ಹೀಗೆ ಆ ಹುಡುಗನು ನುಡಿಯಲು, "ನೀನು ಜೈಲಿಗೆ ಹೋಗಲು ಸಿದ್ಧನಿರುವಾಗ ನಿಮಗೆಲ್ಲರಿಗೆ ಜೈಲಿಗೆ ... ಜೈಲಿನ ... ಗುವದು?" ಹೀಗೆ ಮಹಾತ್ಮರು ನುಡಿದರೆಂದು 'ಫ್ರೀ ಪ್ರೆಸ್' ಪತ್ರಿಕೆಯ ವರ್ತಮಾನ. ಮಹಾತ್ಮರು ತಾವಾಗಿ ಜೈಲಿಗೆ ಹೋಗುವ ಪ್ರಸಂಗವನ್ನು ತಂದುಕೊಳ್ಳರು. ಆದರೆ ಪ್ರಸಂಗ ಬಿದ್ದಲ್ಲಿ ಜೈಲಿಗೆ ಹೋಗಲಿಕ್ಕೆ ಅವರು ಸಿದ್ಧರೇ. ಕೌನ್ಸಿಲ ಪ್ರವೇಶದ ರಾಷ್ಟ್ರೀಯ ಸಭೆಯವರ ತೀರ್ಮಾನದಂತೆ ತಮ್ಮ ಮುಂದಿನ ಧೋರಣವನ್ನು ಮಹಾತ್ಮರು ನಿರ್ಣಯಿಸುವ ಆಲೋಚನೆಯಲ್ಲಿದ್ದಾರೆ. ರಾಜಕೀಯ ಕೈದಿಗಳನ್ನು ಸರಕಾರವು ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದಲ್ಲಿ ಮಹಾತ್ಮರು ಸಮಾಧಾನ ತಾಳುವರಾಗಿಯೂ 'ಅಸೋಸಿಯೇಟೆಡ್ ಪ್ರೆಸ್' ವಾರ್ತಾವಾಹಕ ಸಂಸ್ಥೆಯು ಅನುಮಾನ ಮಾಡಿದ್ದೂ ಗಿನ ಸುದ್ದಿಗಾರರ ಸುದ್ದಿ! ಸರಕಾರವು ಮಹಾತ್ಮರ ಮನಸ್ಸೊಲಿಸಲು ಪ್ರಯತ್ನಪಡುತ್ತವಾಗಿ ಕಾಣುತ್ತದಾದರೂ ನಿಶ್ಚಿತವಾಗಿ ನಾನು ಹೇಳಬಾರದು. ಕಳೆದ ಗುರುವಾರವೇ ಗಡಿನಾಡಿನ ಸರಕಾರವು ಗಡಿನಾಡಿನ ಗಾಂಧಿಯವರ ಖಾನ ಅಬ್ದುಲ್‌ಗಫಾರ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭಾಸದರಾದ ಡಾಕ್ಟರ ಅಬ್ದುಲ್ಲ ಗಫಾರಖಾನರ ಮಂತ್ರಿ, ಮಿ| ರಹೀಮಬಕ್ಷ ... ರು ಮುಂತಾದ ... ಆಪಾರ ಸೇವೆಯನ್ನು ಮಾಡಿದ ೩೦ ಜನರ ಮೇಲೆ ವಿಧಿಸಲಾದ ಬಹಿಷ್ಕಾರ ನೋಟೀಸುಗಳನ್ನು ಹಿಂದೆಗೆದರು. ಕೆಲವರಿಗೆ ಊರು ಬಿಟ್ಟು ಹೋಗಬಾರದೆಂದೂ ಅಪ್ಪಣೆ. ಕೆಲವರಿಗೆ ಜಿಲ್ಲೆ ಬಿಟ್ಟು ಹೋಗಬಾರದೆಂದು ಆಜ್ಞೆ. ಈ ಅನಪೇಕ್ಷಿತ ಪ್ರಕಾರಗಳಿಂದ ಎಲ್ಲರೂ ದಿಗಿಲುಬಿದ್ದರು. ಸರಕಾರದ ಪರವಾಗಿ ದಿಲ್ಲಿಯಲ್ಲಿ ರಾಷ್ಟ್ರೀಯ ಸಭೆಗೆ ಮುನ್ನರಿಕೆ ಕೊಡುವ ವಿಚಾರವಿರುವದಿಲ್ಲೆಂದೂ ಹೇಳಲ್ಪಡುತ್ತಾರೆ. ಕೊಂಗ್ರೆಸ ಕಾರ್ಯಕಾರಿ ಮಂಡಳವು ಪ್ರಾಂತಿಕ ಕೊಂಗ್ರೆಸ ಮಂಡಳಗಳಿಗೆ ವಿಧಿಸಿದ ಸೂಚನೆಗಳಲ್ಲಿ ಸರಕಾರಕ್ಕೆ ಕೊಂಗ್ರೆಸ ಕಮಿಟಿಗಳ ಮೇಲಿನ ಬಹಿಷ್ಕಾರವನ್ನು ರದ್ದುಪಡಿಸಿಕೊಳ್ಳಲು ಅರ್ಜಿ ಮಾಡಬಾರದಾಗಿಯೂ, ಇನ್ನು ೧೦-೧೫ ದಿನಗಳ ತನಕ ರಾಷ್ಟ್ರೀಯ ಬಹಿಷ್ಕಾರ ನಿರ್ಣಯವಾಗದಿದ್ದಲ್ಲಿ ಸರಕಾರಕ್ಕೆ ಸೂಚಿಸಬೇಕೆಂದೂ ಒಂದು ಸುದ್ದಿಯಿದೆ. ಇದರ ಮೇಲಿಂದ ರಾಷ್ಟ್ರೀಯ ಸಭೆಯೂ, ಸರಕಾರವೂ, ಪರಸ್ಪರ ನಡತೆಯನ್ನು ಪರಾಂಬರಿಸುತ್ತಿವೆ. ನನ್ನ ಊಹೆ, ರಾಷ್ಟ್ರೀಯಸಭೆಯ ಮೇಲಿನ ಸರಕಾರದ ಬಹಿಷ್ಕಾರ ತಪ್ಪಿ, ಸರಕಾರದ ಮೇಲೆ ರಾಷ್ಟ್ರೀಯ ಸಭೆಯ ವರವಿಶ್ವಾಸವುಳ್ಳ, ಪರಸ್ಪರ ವಿಶ್ವಾಸಯುಕ್ತ ಗಯುಂಡ ಮೇಲ್ಪಕ್ಷದವರು ನಡೆಕೊಳ್ಳುತ್ತಿದ್ದಾರೆ. ಈ ನಡತೆಯು ಸಹವಾಸವೆಂದೂ, ಶ್ವೇತಪತ್ರಿಕೆಯ ಸ್ವೀಕಾರವೆಂದೂ — ಎರಡೇ ಊಹಿಸಬೇಕು.

ಬ್ರಿಟಿಶ ಪ್ರಧಾನ ಮಂಡಳವು ಸಿದ್ಧಗೊಳಿಸಿದ ಶ್ವೇತಪತ್ರಿಕೆಯ ಸಂಬಂಧದ ಜಾಯಿಂಟ ಕಮಿಟಿಯ ರಿಪೋರ್ಟ ಸಿದ್ಧವಾಗುತ್ತಿದೆ. ಹಿಂದುಸ್ಥಾನದ ಸ್ಥಿತಿಗತಿ ಬಗ್ಗೆ ಅದರಲ್ಲಿ ಬದಲಾವಣೆಗಳು ಆಗುತ್ತಿವೆ ಮುಖ್ಯ ಪ್ರಧಾನರು ಕೊಂಡು ಹೋಗಲು ಯಾರದೇ ನಗಿಸಿ ಒಡೆದು ಅದರಿಂದ ಶ್ವೇತಪತ್ರಿಕೆಯು ಬಹಳ ಮಾರ್ಪಾಡಿನ ... ಕರ್ಮೋನಲ್ಲರ ಉದಾರ ಮತದ ನಾಗರಿಕರು ಗುಣವಾಗಿ ನುಡಿದರೆಂದು ತಿಳಿಯಿತು. ಈಗಂತೂ ಇಂಗ್ಲೆಂಡ ದೇಶದ ಕನ್ಸರ್ವೇಟಿವ ಪಕ್ಷದವರೊಳಗಿನ ಪ್ರಮುಖ ಮುತ್ಸದ್ದಿ ಮೆಕಡೋನಲ್ಡರ ಸಹಕಾರಿಗಳಾಗಿದ್ದ ಸ್ನೋಡೆನ್ ದೊರೆಗಳು ಮೆಕಡೋನಲ್ಡರ ಮಂತ್ರಿಮಂಡಳದಿಂದ ಹೊರಬಿದ್ದವರು. ಸ್ನೋಡೆನ್ ದೊರೆಗಳು ಪ್ರಧಾನರಿಗೆ ಬರೆದ ಕಾಗದದಲ್ಲಿ ಹೀಗೆ ಬರೆದಿತ್ತು "ಈ ಕಾನೂನನ್ನು ಮತ ಪ್ರಪಂಚಿಸುವಾಗಿಯೂ ಇದನ್ನು ಕ್ರಮಕ್ರಮವಾಗಿ ರದ್ದು ಪಡಿಸುವದೇ ಆಗಿಯೂ, ವಿರೋಧ ಪಕ್ಷದ ಪ್ರಧಾನರ ಹೇಳಿಕೆಯನ್ನು ತಾವು ಮನ್ನಿಸಲಿಕ್ಕಿಲ್ಲವಾಗಿಯೂ, ನಾನು ಈ ವಿಷಯ ರಾಜೀನಾಮೆ ಕೊಡಬೇಕಾದದೆಂದು ಮೆಕಡೋನಲ್ಡರು ಕಣ್ಣೀರು ಸುರಿಸಿ ನನಗೆ ಆಶ್ವಾಸನವನ್ನಿತ್ತಿದ್ದರು. ಆ ಅಭಿವಚನವನ್ನು ಅವರು ಮುರಿದು ಈಗ ಈ ಕಾನೂನನ್ನು ರದ್ದುಮಾಡಲು ಸೂಚನೆ ತಂದಿರುತ್ತಾರೆ. ಇವರಿಗೆ ವಚನಗಳ ಬೆಲೆಯಿಲ್ಲ. ಮುಖ್ಯ ಪ್ರಧಾನರೆಂದು ಹೆಸರುಗೊಳ್ಳುವದಕ್ಕಾಗಿ ಬೇಕಾದಷ್ಟು ಧಾರಾಳರಾಗಲು ಇವರು ಸಿದ್ಧರಿದ್ದಾರೆ" ಎಂದು ಸ್ನೋಡೆನ್ ದೊರೆಗಳು ಮೆಕಡೋನಲ್ಡರಿಗೆ ಹೇಳಿದ್ದು ಲೋಕಸಭೆಯಲ್ಲಿ ಮಾತನಾಡಿದರು. ಜಕಾತಿಯ ಕಾನೂನಿನ ರದ್ದಿಯಿಂದ ಬಂಡವಲಗಾರರಿಗೆ ಅನುಕೂಲ, ಕೂಲಿಕಾರರ ಪಕ್ಷದವರು ಈ ಕಾನೂನನ್ನು ಪ್ರತಿಪಾದಿಸಲು ಪ್ರಯತ್ನಪಡುವವರಾಗಿದ್ದರು. ಸ್ನೋಡೆನ್ ಇವರು ಮಂತ್ರಿ ನೆಲೆಯಿಂದ ಇಳಿದರು. ಆ ಜಾಗೀರಿನ ದೊರೆಗಳೇ ಮೊದಲು ಆದಾರದ ಮೇಲಿಂದಲೇ ಪಾರ್ಲಿಮೆಂಟಿನ ತತ್ತ್ವಪರ ಮಾಗಿ ಮುಖ್ಯ ಪ್ರಧಾನ ಮೆಕಡೋನಲ್ಡರು ಪಾರ್ಲಿಮೆಂಟಿನಲ್ಲಿ ನಿಂತಿದ್ದರು. ಅಂಥ ವಚನ ... ಈಗ ... ಕನ ಗುಣ ರೋಗ ಒಂದಿದೆ. ಇದನ್ನು ನೋಡಲಾಗದೆ ಸ್ನೋಡನ್ ದೊರೆಗಳು ಕಂಡ ಮಾತನ್ನು ಕೇಳಿದ ತೆಯೇ ಕಡಿ ... ಗೊಂದು ಆಡಿಬಿಟ್ಟರು. ಸ್ನೋಡನ್ ದೊರೆಗಳು ಕೂಲಿಕಾರ ಪಕ್ಷದವರು. ಇಂದ ಪರಿಸ್ಥಿತಿಯಲ್ಲಿ ಮಿ| ಚರ್ಚಿಲ್ಲ, ಇವರು ಒಡೆಯನಾದ ಹಿಂದಹಿತವಿರೋಧಕ ಪಕ್ಷದ ಧೋರಣವನ್ನೇ ಪರಾಂಬರಿಸಬೇಕಾಗಿದೆ. ಭಾರತ ಮಂತ್ರಿಗಳಾದ ಸರ್ ಸ್ಯಾಮ್ಯುಲ ಹೋರ್, ಮಿ| ಬಾಲ್ಡ್ವಿನ್‌ರಾಗಲಿ ತಮ್ಮ ಪಕ್ಷದ ಮಿ| ಚರ್ಚಿಲ್ಲರವರೊಡನೆ ಜಗಳಾಡುತ್ತಿದ್ದಾಗ್ಯೂ ನಿಜವಾಗಿ ಅವರ ಧೋರಣವನ್ನೇ ಸವಿ ಸವಿ ಮಾತುಗಳಿಂದ ಅನುಸರಿಸುತ್ತಿದ್ದಾರೆ. ಸದ್ಯಕ್ಕೆ ಟೈಕನ್ ಹಾಮ್ ಗ್ರಾಮದಲ್ಲಿ ಪಾರ್ಲಿಮೆಂಟಿನ ಇಲೆಕ್ಷನಯಿದೆ. ಆ ಇಲೆಕ್ಷನಿನಲ್ಲಿ ಚರ್ಚಿಲ್ಲ ಬಾಲ್ಡ್ವಿನ್ ಪಕ್ಷದ ಉಮೇದ್ವಾರರೇ ನಿಂತರು. ಅವರ ಇಲೆಕ್ಷನ ಜಾಹೀರನಾಮೆಯೊಳಗಿನ ಒಂದೆರಡು ವಾಕ್ಯಗಳು ಅರ್ಥಪೂರ್ಣವಿವೆ 'ಶ್ವೇತಪತ್ರಿಕೆಗೆ ನಾನು ಮನ್ನಿಸಲಾರೆ, ಪಾರ್ಲಿಮೆಂಟರಿ ಕಮಿಟಿಯವರು ತಮ್ಮ ರಿಪೋರ್ಟನ್ನು ತಕ್ಕದ್ದಾಗಿ ಸುಧಾರಿಸಿ ಬ್ರಿಟಿಶ ದೇಶದ ಹಿತಕ್ಕೆ ಬಾಧೆ ತಟ್ಟದಂತೆ ಉಪಾಯಯೋಜನೆ ಮಾಡಿದರೆ ನಾನು ಅದಕ್ಕೆ ಬೆಂಬಲ ಕೊಡುವೆ' ಈ ಜಾಹೀರನಾಮೆಯನ್ನು ಮಿ| ಬಾಲ್ಡ್ವಿನ್‌ರ ಪಕ್ಷದವರು ಒಪ್ಪಿಕೊಂಡಿರುತ್ತಾರೆ. ಇದರ ಮೇಲಿಂದ ಜ್ಯಾಯಿಂಟ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟ ಮತ್ತೂ ಬಿರುಸಾಗುವದೆಂದೂ, ಶ್ವೇತಪತ್ರಿಕೆಯಲ್ಲಿ ಕಣ್ಣು ತಪ್ಪಿ ಉಳಿದ ಪ್ರಜಾಧಿಕಾರದ ಅವಶೇಷವೂ ಗುಡಿಸಿ ಹೋಗುವದೆಂದೂ ಇದರಿಂದಲೇ ಊಹಿಸಬಹುದು. ಲಂಕೆಶಾಯರದೊಳಗಿನ ಗಿರಣಿ ವರ್ತಕರು ಸದ್ಯಕ್ಕೆ ತಮ್ಮ ವರ್ತಕ ಸಂಘದ ಸಾಧನದಿಂದ ತಮ್ಮ ವ್ಯಾಪಾರವನ್ನು ರಕ್ಷಿಸಿಕೊಳ್ಳಲು ಬಿರುಬಿರುಸಿನ ಸಂರಕ್ಷಕ ಉಪಾಯಗಳನ್ನು ಜ್ಯಾಯಿಂಟ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟಿನಲ್ಲಿ ಸೇರಿಸುವಂತೆ ಏರ್ಪಾಡಾಗಬೇಕಾಗಿ ಹಾರಾಡುತ್ತಿದ್ದಾರೆ, ಜನರ ಮನವೊಲಿಸಿಕೊಂಡು ಕಾರ್ಯಭಾಗ ಸಾಧಿಸಿಕೊಳ್ಳಬೇಕಾಗಿಯೂ ಸರಕಾರಕ್ಕೆ ಮ್ಯಾಂಚೆಸ್ಟರ ವರ್ತಕ ಸಂಘದ ಸೂಚನೆ. ಆಕ್ಷೇಪ ನಿಯಾಗದಂತೆ ಅನ್ನಸಂತರ್ಪಣೆಯ ಕ್ರಿಯೆ ಪಡೆಯಲು ಮ್ಯಾಂಚೆಸ್ಟರದೊಳಗಿನ ವರ್ತಕರು ಪ್ರಯತ್ನಪಡುತ್ತಿದ್ದಾರೆ. ಹಿಂದುಸ್ಥಾನಕ್ಕೆ ಅಹಿತವಾಗದಂತೆ ಬ್ರಿಟಿಶ ದೇಶದ ಅಭ್ಯುದಯವಾಗುತ್ತಿದ್ದರೆ ಅದಕ್ಕೆ ನಾನೆಂದೂ ಎಷ್ಟಕ್ಕೂ <u>ವಿರೋಧ ಮಾಡ</u>ಲಾರೆ. <u>ಬ್ರಿಟಿಶರವೂ</u>, ಹಿಂದೀಯರದೂ ಒಮ್ಮೆಲೇ ಕಲ್ಯಾಣವಾಗಬೇಕು. ಆದರೆ, ಬ್ರಿಟಿಶರ ಕಲ್ಯಾಣ ಸಾಧನೆಯಾಗಿ ಹಿಂದೀಯರಿಗೆ ಅಕಲ್ಯಾಣವಾಗಬಾರದು. ಸದ್ಯಕ್ಕೆ ಹಿಂದುಸ್ಥಾನ ಸರಕಾರಕ್ಕೂ ಬ್ರಿಟಿಶ ಸರಕಾರಕ್ಕೂ ಉಗಿ ಹಡಗಗಳ ವ್ಯಾಪಾರದ ಕುರಿತು ಒಂದು ಕರಾರಾಯಿತು — ಬ್ರಿಟಿಶ ಸರಕಾರವು ಹಿಂದುಸ್ಥಾನ ಸರಕಾರಕ್ಕೆ ೩೦ ಕೋಟಿ ಹಣವನ್ನು ದಾನ ಮಾಡಿ ಈ ರಕಮನ್ನು ಬ್ರಿಟಿಶ ಹಡಗಗಳೊಡನೆ ಸಂಬಂಧವಾದ ಸವಲತ್ತು ಗಳಿಗಾಗಿ ...

ಕಂಪನಿಗಳನ್ನು ನಡೆಯಿಸಲು ಉಪಯೋಗಿಸಬೇಕೆಂದು ಗೊತ್ತಾಗಿದೆ. ಹಿಂದೀ ಹಡಗುಗಳ ಸಂರಕ್ಷಣೆಗೆ ಈ ರೀತಿಯ ಉಪಯೋಗವಿಲ್ಲೆಂಬುದು ಸ್ಪಷ್ಟವಿದೆ. ಹಿಂದುಸ್ಥಾನದಲ್ಲಿ ಹಡಗುಗಳ ವ್ಯಾಪಾರ ಅಭಿವೃದ್ಧಿಗೊಳ್ಳದಿರಲು ಮುಖ್ಯವಾಗಿ ರಾಜಾಶ್ರಯದ ಕೊರತೆಯೇ ಕಾರಣ. ಅದನ್ನು ಹಿಂದುಸ್ಥಾನ ಸರಕಾರವು ಕೊಡುವದಿಲ್ಲ, ಬ್ರಿಟಿಶ ಸರಕಾರದಿಂದ ಸಿಗುವದಿಲ್ಲ. ಸ್ವೀಕೃತಪತ್ರಿಕೆಯ ಸಲಹಾದರೂ ಇದೇ ಮಾದರಿಯದೆಂದು ನನ್ನ ಎಣಿಕೆ. ಸರ್ ತೇಜಬಹಾದ್ದೂರ ಸಪ್ರು ಮೊದಲಾದ ಮಹನೀಯರಿಗೆ ಒಂದೆರಡು ವೃತ್ತಾಂತಗಳ ಗವರ್ನರರಾಗಿ ಸೇವಿಸಿ ಜನಸಾಮಾನ್ಯರ ಮನವೊಲಿಸಿಕೊಳ್ಳುವ ಹಂಚಿಕೆ ನಡೆದದ್ದಾಗಿ ದಿಲ್ಲಿಯೊಳಗಿನ ‘ಹ್ಯಾಲ್ಸ ವೀಕ್ಲಿ’ ಪತ್ರಿಕೆಯ ವಾರ್ತೆ. ಸಮಸ್ತ ಸಂಗತವಾದರೂ ತಮ್ಮೊಳಗೆ ಇರಬಹುದೆಂದು ಅನಿಸುವದು.

ಸರ್ ತೇಜಬಹಾದ್ದೂರ ಸಪ್ರುರವರು ರಾಜಕಾರಣವನ್ನೇ ತೊರೆದಿರುವರಾಗಿ ಹೇಳುತ್ತಾರೆ. ಅವರಿಗೆ ಯಾವತ್ತೂ ಕಾರಸ್ಥಾನ ನೋಡಿ ಬೇಸರ ಬಂತೇನೆಂದು ನಾನರಿಯೆ. ಆದರೆ, ಬುದ್ಧಿಪೂರ್ವಕವಾಗಿ ಅವರು ರಾಜಕೀಯ ಸನ್ಯಾಸಿಯಾಗಿದ್ದಾರೆಂಬ ಸಂಗತಿಯನ್ನಷ್ಟು ನಾ ಹೇಳಬಲ್ಲೆ. ಮಹಾತ್ಮರು ಸದ್ಯಕ್ಕೆ ಹರಿಜನೋದ್ಧಾರ ಫಂಡ ಕೂಡಿಸುವ ನಿಮಿತ್ತ ಪ್ರವಾಸಕ್ಕೆ ಹೋಗಿರುವರು. ಡಾ|| ಸಪ್ರುರವರು ಮಹಾತ್ಮರ ಸತ್ಕಾರ ಸಭೆಯ ಅಧ್ಯಕ್ಷರು. ಇದರ ಮೂಲಕ ಪುನಃ ಅವರು ರಾಜಕಾರಣದಲ್ಲಿ ಸೇರುವರೆಂದು ವಾರ್ತೆ ಹಬ್ಬಿತ್ತು. ದಾಗೆಸಿಲ್ಲವಾಗಿ ಪತ್ರಿಕೆಗಳು ಪ್ರಕಟಿಸುತ್ತವೆ. ಈ ಸನ್ಯಾಸದ ಅರ್ಥವನ್ನು ಎರಡು ಪ್ರಕಾರಗಳಿಂದ ಮಾಡಬಹುದೆಂದು ನಾ ಬಲ್ಲೆ. ಗವರ್ನರಿಯಂಥ ದೊಡ್ಡ ಅಧಿಕಾರ ಸಿಗುವಂಥವರು ರಾಜಕಾರಣದ ಚರ್ಚೆಯಲ್ಲಿ ಸೇರಿ ವಿವಾದ ಮಾಡುವದು ವಿಹಿತವಲ್ಲವಾಗಿ ಡಾ|| ಸಪ್ರುರವರು ಎಣಿಸಿ ಒಲಿಪ್ಪರಗಿರಲೂ ಬಹುದು! ಮಾಡಿದ ಪ್ರಯತ್ನಗಳಲ್ಲಿ ಕೈಗೂಡದೆ ನಿಷ್ಫಲವಾದದ್ದನ್ನು ನೋಡಿ ವಿರಕ್ತರಾಗಿರಲೂ ಬಹುದು!! ವೃಕ್ಷದ ಫಲದಂತೆ ವಾಚಕರು ಅರ್ಥ ಮಾಡಿಕೊಂಡರಾಯಿತು.

ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟು ಪ್ರಕಟವಾಗಲು ವಿಳಂಬವಾದ ಕಾರಣ ನನಗೀಗ ತೋರಿತು. ರಾಷ್ಟ್ರೀಯ ಸಭೆಯ ಅಧಿವೇಶನ ಒಕ್ಟೋಬರ ತಿಂಗಳಿನಲ್ಲಿ ಜರುಗುವ ಮುಂದಿನ ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಕುರಿತು ಚರ್ಚೆ ನಡೆದಿದೆ. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಗಳಾಗುತ್ತಿವೆ, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಪ್ರಚಾರ ಕಾರ್ಯದ ವಿಚಾರಗಳು ನಡೆಯುತ್ತಿವೆ. ಇದನ್ನು ಬ್ರಿಟಿಶ ಪ್ರಧಾನ ಮಂಡಳವೂ, ಜೊಯಿಂಟ ಪಾರ್ಲಿಮೆಂಟರಿ ಬೋರ್ಡೂ ಸೂಕ್ಷ್ಮವಾಗಿ ನಿರೀಕ್ಷಿಸಿ ಲೋಕಮತವನ್ನು ಗ್ರಹಿಸಿ ಮುಂದಿನ ರಾಜ್ಯಯೋಜನೆಯನ್ನು ನಿರ್ಧರಿಸುವ ವಿಚಾರದಲ್ಲಿವೆ. ರಾಷ್ಟ್ರೀಯ ಸಭೆಯವರ ಅಭಿಪ್ರಾಯಗಳು ಇನ್ನೂ ನಿರ್ಣಯಾತ್ಮಕ ರೂಪ ತಾಳಿಲ್ಲ. ರಾಷ್ಟ್ರೀಯ ಸಭೆಯ ಅಧಿವೇಶನದ ಸಮಯ ಚಿತ್ರಗಳಿಗೊಂದು ಹೊಸ ಬಂದೀತು. ಅದನ್ನು ನೋಡಿ ಅದಕ್ಕೆ ಪ್ರತಿಯಾಗಿ ರಾಜ್ಯಯೋಜನೆಯನ್ನು ತಯಾರಿಸಬೇಕಾಗಿಯೇ ರಿಪೋರ್ಟಿನ ಪ್ರಕಟಣೆಗೆ ಕಾಲಹರಣವಾಗುತ್ತಿರಬಹುದೆಂದು ನನ್ನ ಅಂಬೋಣ. ಯಾವತ್ತು ಪರಿಸ್ಥಿತಿ ಅಭ್ಯಾಸ ಮಾಡಿದ ಜೊಯಿಂಟ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಲಿನ್‌ಲಿಥ್‌ಗೋ ದೊರೆಗಳು ವಿಲಿಂಗ್ಡನ್ ದೊರೆಗಳ ಉತ್ತರಾಧಿಕಾರಿಯಾಗಿ ಬರಬಹುದೆಂದು ಕಲಕತ್ತೆಯ ‘ಅಮೃತ ಬಜಾರ ಪತ್ರಿಕೆ’ಯ ವಾರ್ತೆ. ಹೊಸ ರಾಜ್ಯಘಟನೆಯನ್ನು ಕಲ್ಪಿಸಿದವರ ಮೇಲೆಯೇ ಅದನ್ನು ಒಮಲಿನಲ್ಲಿ ತಂದು ತೋರಿಸುವ ಜವಾಬದಾರಿ ಹೊರಿಸಿದ್ದಲ್ಲಿ ರಾಜ್ಯಘಟನೆಯನ್ನು ಲಿನ್‌ಲಿಥ್‌ಗೋ ದೊರೆಗಳು ಜವಾಬದಾರಿಯಿಂದ ತಯಾರಿಸುವರೆಂದು ಪ್ರಧಾನ ಮಂಡಳವು ಎಣಿಸಿರಬೇಕು. ಇದು ಸಹಜವಾದದ್ದು. ಲಿನ್‌ಲಿಥ್‌ಗೋ ದೊರೆಗಳು ತಮ್ಮ ಜವಾಬದಾರಿಯನ್ನೂ, ರಾಷ್ಟ್ರೀಯ ಸಭೆಯ ಪ್ರಾಬಲ್ಯವನ್ನೂ, ಮಹಾತ್ಮರ ದಕ್ಷತೆಯನ್ನೂ ಎಣಿಸಿ ರಾಜ್ಯಭಾರ ಕಲ್ಪಿಸಿದರೆ ಬ್ರಿಟಿಶ-ಹಿಂದುಸ್ಥಾನ ದೇಶಗಳ ಕಲ್ಯಾಣವಾಗುವದು. ಇಲ್ಲವಿದ್ದರೆ ಮುಂದಿನ ದಿನ ತೆಂದು ಯಾರೂ ಹೇಳಲಾರರು!

ಜರ್ಮನಿ, ಇಂಗ್ಲಂಡ ದೇಶಗಳೊಳಗೆ ನಡೆದ ನಾವಿಕಬಲದ ಒಪ್ಪಂದಯಲ್ಲಿ ಇನ್ನಷ್ಟು ಸಂಬಂಧವಾದ ಶುಭ ವಾರ್ತೆ ಬಂದಿದೆ. ಒಂದನೇ ಅನೇಕ ಆಕರಗಳು ಉಳಿಯುವದು ಜರ್ಮನರು ನೌಕೆಗಳನ್ನು ಕಟ್ಟಿ ಬ್ರಿಟಿಶರ ಸಾಲ ತೀರಿಸಬೇಕು. ಫ್ರೆಂಚರ ಭೀತಿಯಿಂದ ಜರ್ಮನರು ಬ್ರಿಟಿಶರ ಮನವೊಲಿಸಲು ಪ್ರಯತ್ನ ಮಾಡಿದರಾಗಿ ಪತ್ರಿಕೆ ಇಲ್ಲದಿದ್ದರೆ ಈ ಸಂಧಿಯಾಗುತ್ತಿದ್ದಿಲ್ಲವಾಗಿ ಹೇಳುತ್ತಾರೆ. ಜರ್ಮನರಿಗೂ, ಫ್ರೆಂಚರಿಗೂ ತಿಕ್ಕಾಟ ನಡೆಯುತ್ತಿದೆ. ಜರ್ಮನ-ಫ್ರೆಂಚ ಸ್ನೇಹ ಅನವಿಕ ಲಕ್ಷ್ಯ, ಸರ-ಹೂವರು ರಾಜ್ಯಗಳು ಒಂದಿಲ್ಲೊಂದು ಕಾರಣದಿಂದ ಈ ಉಭಯರಿಗೆ ಜಗಳ ಹಚ್ಚುತ್ತಿದೆ. ಗಡಿನಾಡಿನ ಸ್ಟಾರ ಪ್ರದೇಶದ ಕುರಿತು ವಿವಾದವಿದೆ. ಅದರಿಂದ ಇವೆಲ್ಲ ಪ್ರಕರಣಗಳಲ್ಲಿ ಬ್ರಿಟಿಶರ ಆಶ್ರಯ ಸಿಗಬೇಕೆಂದು ಜರ್ಮನಿಯು ಹವಣಿಸಿ ಬ್ರಿಟಿಶರ ಮರೆಹೊಕ್ಕಿದೆ. ಫ್ರೆಂಚರೂ, ಬ್ರಿಟಿಶರೂ ಮುಂಚಿನಿಂದ ಸ್ನೇಹಿತರು. ಸ್ನೇಹಭಾವವನ್ನು ವೃದ್ಧಿಗೊಳಿಸುವದಕ್ಕಾಗಿ ಈ ಕೆಲ್ಲಿನಿಂದ ಫ್ರೆಂಚ ರಾಯಭಾರಿಗಳೂ, ಬ್ರಿಟಿಶ ರಾಯಭಾರಿಗಳೂ ಚರ್ಚೆಯಾಗುವದಿದೆ. ಫ್ರೆಂಚ ಸೈನ್ಯದ ಜಂತೆಯ ಇಸ್ಸಪಕ್ಷದ ಜನರಲ್‌ರಾದ ಸೇನಾಪತಿ ವೇಗಂಡರವರು ಇತ್ತ ೧-೨ ವಾರಗಳಿಂದ ಲಂಡನಿನಲ್ಲಿ ಮುಕ್ಕಾಮು ಮಾಡಿದ್ದಾರೆ. “ ಸಹಜ ಬಂದಿದ್ದೇನೆ, ರಾಜಕಾರ್ಯವಾನಿಲ್ಲ ” ಹೀಗವರು ಕೇಳುವವರಿಗೆ ಹೇಳುತ್ತಾರೆ. ಆದರೆ, ಒಳಗುಟ್ಟೇ ಬೇರೆ. ಯುರೋಪಖಂಡದಲ್ಲಿ ಯುದ್ಧವೇಳುವ ಸಂದರ್ಭದಲ್ಲಿ ಬ್ರಿಟಿಶರೂ, ಫ್ರೆಂಚರೂ ಒಕ್ಕಟ್ಟಿನಿಂದ ಸೈನ್ಯ ಪಡೆಗಳನ್ನು ರಣಾಂಗಣಕ್ಕೆ ಕಳುಹುವಂತೆ ವ್ಯವಸ್ಥೆ ಮಾಡಲು ಸೇನಾಪತಿ ವೇಗಂಡರವರು ಇಂದಿರ ಕಾಗಿ ಬಂದವರ ಊಹೆ ವಾರ್ತಾಸದೋಸಗಿನ ‘ಒಬ್ಸರ’ ಪತ್ರಿಕೆಯು ಸಮಾಸ್ಯವಾಗಿ ಇದನ್ನೇ ಸೂಚಿಸುತ್ತಿದೆ. ಬೆಲ್ಜಿಯಮ್-ಹೊಲಂಡ ಪ್ರದೇಶಗಳಲ್ಲಿ ಯುರೋಪಖಂಡದೊಳಗಿನ ಯಾವದೇ ರಾಷ್ಟ್ರಗಳ ಸೈನ್ಯ ಕಾಲಿಡ ಹೋಗದಂತೆ ತಡೆಯಾಗುವಂತೆ ಯೋಜಿಸಲು ಸೇನಾಪತಿ ವೇಗಂಡರವರು ಬ್ರಿಟಿಶ ದೇಶಕ್ಕೆ ಹೋಗಿರಬೇಕಾಗಿ ‘ಒಬ್ಸರ’ ಪತ್ರಿಕೆಯ ಅಂಬೋಣ. ಜರ್ಮನಿಯೂ ಈ ಕಡನಾಮೆಯಲ್ಲಿ ಸೇರಬೇಕು. ಈ ಕರಾರನಾಮೆಯನ್ನು ಮುರಿದು ಜರ್ಮನ್ ಸೈನ್ಯವನ್ನು ಬೆಲ್ಜಿಯಮ್ ಪ್ರದೇಶದಲ್ಲಿ ಕಳಿಸಿದ ಬಗ್ಗೆ ೧೯೧೪ನೇ ಇಸ್ವಿಯಲ್ಲಿ ಮಹಾಯುದ್ಧವಾಗಿತ್ತು. ಅಂತಹ ಕರಾರನಾಮೆಯೇ ಈಗ ಪುನಃ ಜರಗ ಬೇಕಾದವರ! ಮಹಾಯುದ್ಧ ಮಾರ್ದದಲ್ಲಿ ಬ್ರಿಟಿಶ-ಫ್ರೆಂಚ ಸೇನಾಧಿಪತಿಗಳು ಇದೇ ಪ್ರಕಾರ ಗುಪ್ತ ಆಲೋಚನೆ ನಡೆಸುತ್ತಿದ್ದರು. ಜಟಿಸ್ತವೃತ್ತಿಯ ಕರಾರನಾಮೆ ಮಾಲೆ ಫ್ರೆಂಚರು ವಿಶೇಷ ಕಟಾಕ್ಷವನ್ನಿಟ್ಟಿದ್ದಾರೆ. ಸೇನಾಪತಿ ವೇಗಂಡರವರಂತಹ ಮಾನ್ಯ ಪುರುಷರಲ್ಲಿ ಇಡೀ ಯುರೋಪಖಂಡದಲ್ಲಿ ಇವರ ಪ್ರತಿಯೋಗಿ ಇವರ ಕೈಕೆಳಗೆ ಕಠೋರ ಶಿಸ್ತಿನ ಸರಂಜಾಮಿನ ಪ್ರಚಂಡ ಸೈನ್ಯವಿದೆ. ಇಷ್ಟು ಸೈನ್ಯವು ಇತರ ಯಾರ ಕೈಕೆಳಗೂ ಇರುವದಿಲ್ಲ. ಮಹಾಯುದ್ಧದಲ್ಲಿ ಅಸ್ವಬಲ ವಿಷಯದ ಮೇಲೆ ಇವರು ಕೊಟ್ಟ ಉಪನ್ಯಾಸ ಕೇಳಿ ಫ್ರೆಂಚ ಸೇನಾಪತಿ ಮಾರ್ಶಲ್ ಫೋಶರವರು ಪ್ರಸನ್ನರಾಗಿ ಇವರಿಗೆ ಮಹಾಯುದ್ಧದಲ್ಲಿ ಸೇನಾಪತಿಗಳಾಗಿ ನೇಮಿಸಿದರು. ಅಂದಿನಿಂದ ಈ ತನಕ ಸೇನಾಪತಿ ವೇಗಂಡರವರು ತಮ್ಮ ಚಾತುರ್ಯವನ್ನೂ, ಸೈನ್ಯಸಂಘಟನೆಯನ್ನೂ ಲೋಕಕ್ಕೆ ತೋರಿಸಿದ್ದಾರೆ. ಜರ್ಮನಿಯನ್ನು ಹಣ್ಣುಗೊಳಿಸುವದಕ್ಕಾಗಿ ಇವರು ಬ್ರಿಟಿಶ ಸೈನ್ಯಾಧಿಕಾರಿಗಳೊಡನೆ ಮಾತುಕತೆ ನಡೆಸುತ್ತಿದ್ದಾರೆ. ನೌಕಾದಳದ ಕುರಿತು ಬ್ರಿಟನ್, ಅಮೇರಿಕಾ, ಜಪಾನ, ಫ್ರಾನ್ಸ ಇತರ ದೇಶಗಳ ಕೂಡ ಸದ್ಯಕ್ಕೆ ಇಂಟ್ಟ ಸೇರಲಿದೆ. ಬಹುತರವಾಗಿ ಇದೇ ತಿಂಗಳಲ್ಲಿ ಒಪ್ಪಂದವು ಆಗುವದು. ಇತ್ತ ಜಪಾನ ದೇಶವು ಮಾತು-ಕಥೆ ನಡೆಯುತ್ತಿರುವಾಗಲೇ ನೌಕಾದಳವನ್ನು ಅಪರಮಿತವಾಗಿ ಬೆಳೆಸಿದೆ. ಜಪಾನ ದೇಶದಲ್ಲಿ ಸೈನ್ಯಬಲವು ಅಪಾರವಾಗಿರುವದರಿಂದ ಪೌರ್ವಾತ್ಯ ರಾಷ್ಟ್ರಗಳಲ್ಲಿ ೨ ವರ್ಷಗಳ ವರೆಗೆ ಸಂಚರಿಸಿ ಮುಂಬಯಿಗೆ ಬಂದ ಮಿಸ್ಟರ ಪಲಿಕ್ಸ ಪ್ಲಾಟಿಜವರು ‘ ಮುಂಬಯಿ ಕ್ರೊನಿಕಲ್ ’ ಪತ್ರಿಕೆಯ ಪ್ರತಿನಿಧಿಗಳ ಬಳಿ ನುಡಿದರು. ಜಪಾನ ದೇಶದ ಬಲ ಯಾವದೇ ಒಂದು ರಾಷ್ಟ್ರಕ್ಕೆ ಸಹಜವಾಗಿ ಸೋಲಿಸುವಷ್ಟು ಸೈನ್ಯಬಲವಿರುವದಾಗಿ ಅವರು ಹೇಳುವರು. ಜಪಾನಿಯರ ಮೇಲೆ ಅಮೇರಿಕೆಯವರ ಕಣ್ಣಿದೆ. ಅಮೇರಿಕೆಯವರು ತಮ್ಮ ಹಡಗುಪಡೆಗಳನ್ನು ಬೆಳೆಸಲು ೧೧ ಕೋಟಿ ರೂಪಾಯಿ ಮಂಜೂರ ಮಾಡಿದೆ. ಇಟಾಲಿಯವರು ೩೨ ಸಾವಿರ ಟನ್ನಿನ ೨ ಹಡಗುಪಡೆಗಳನ್ನು ಕಟ್ಟಿಸುವ ನಿರ್ಧಾರ ಮಾಡಿದ್ದಾರೆ. ಅದರಿಂದ ಫ್ರೆಂಚರು ರೇಗಿದ್ದಾರೆ. ಇಂಥ ಹಡಗುಪಡೆಗಳನ್ನು ಕಟ್ಟಿಸಲಿಕ್ಕೆ ಹಕ್ಕೇ ಇರುವದಿಲ್ಲವಾಗಿ ಫ್ರೆಂಚರ ಸಾಧನೆ. ಜರ್ಮನರು ಯುದ್ಧ ವಿಮಾನಗಳನ್ನು ಕಟ್ಟಿಸಬಾರದಾಗಿ ಮಹಾಯುದ್ಧದಲ್ಲಿ ಸೋತದ್ದು ಒಪ್ಪಿಸುವರು ಒಬ್ಬರೇ ಮುರಿಯುವದಿಲ್ಲ. ಸಂಚಾರ ಮಾಡಲೋಸುಗ ಜರ್ಮನರು ತಯಾರಿಸಿದ ಹೊಸ ವಿಮಾನವು ಕಂಪ ವಾರದಿಂದ ಒಡಾಡಲಾರಂಭಿಸಿದೆ. ಇದು ತಾಸಿಗೆ ೩೦೦ ಮೈಲಿನಂತೆ ಮೇಲಕ್ಕೆ ಹಾರುತ್ತಿದೆ. ತಾಸಿಗೆ ೧೯೯ ಮೈಲಿನಂತೆ ಪ್ರವಾಸ ಮಾಡಬಲ್ಲದು. ಒಂಬತ್ತು ಹಾರಿಸಲು ಇದರಷ್ಟು ನಷ್ಟವಾಹನ ಬೇರೊಂದಿಲ್ಲ. ಒಮ್ಮೆಟಕ್ಕೆ ಇದರ ಪ್ರಯೋಜನವಾಗುತ್ತದೆಂದು ತೋರಿಸಲು ಈಗ ಇದನ್ನು ಟಪಾಲ ಕರೆ-ಒಯ್ಯುವ ಉಪಯೋಗಕ್ಕೆ ಹಚ್ಚಿದ್ದಾರೆ. ಇದರಿಂದ ವಿಚಾರ ಹುಟ್ಟಿದು, ಇದೆಲ್ಲ ವಿವರದಿಂದ ಜರ್ಮನ ಸಂಹಾರದ ಉದ್ದೇಶವು ಸ್ಪಷ್ಟವಾಗುವಂತಿದೆ. ಯುರೋಪ ಖಂಡದೊಳಗಿನ ಸಂಧಾನ ಪರಿಷ

ತ್ತುಗಳ ವಿಧ್ವಂಸನ ನಡೆಯುವ ಕ್ಷಣ್ಣಕಾರಸ್ಥಾನಗಳ ಪರಿಣಾಮವೇನೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಯುದ್ಧಪರಿಹಾರದ ನಾಟಕ ತೋರಿಸಿ, ಪ್ರತ್ಯಕ್ಷ ಯುದ್ಧತಯಾರಿಯೇ ನಡೆದಿದೆ ನಿಮಿತ್ತ ಮಾತ್ರಕ್ಕೆ ಕಿಡಿಯೊಂದು ಹಾರಬೇಕು ಆ ಕಿಡಿ ಎಲ್ಲಿ ಹಾರೀತು? ಹಂಗೇರಿಯಾ ದೇಶದ ಮೇಲೆ ಕಣ್ಣಿಟ್ಟಿರುವವರು ಜಪಾನ ದೇಶಕ್ಕೂ, ರಶಿಯಾ ದೇಶಕ್ಕೂ ಚೀನದೊಳಗಿನ ಕೆಲ ಪ್ರದೇಶಗಳಿಗಾಗಿ ಯುದ್ಧವಾಗುವದೆಂದು ಹೇಳುತ್ತಾರೆ. ಕೆಲ್ವರಿಗೂ, ಜೀನಿಯವರಿಗೂ ಗುಪ್ತ ತಹನಾಮೆಯಾದ ಒಂದು ವಾರ್ತೆಯಿದೆ ಬಾಲ್ಕನ್ ಪ್ರದೇಶದಲ್ಲಿಯೇ ಕಿಡಿ ಹಾರಿ ಇತಿಹಾಸದ ಪುನರಾವೃತ್ತಿಯಾಗುತ್ತದೆಂಬದೊಂದು ಘೋಷ. ಮಹಾಯುದ್ಧವು ಇದೇ ಪ್ರದೇಶದೊಳಗಿನ ಸರ್ವಿಯಾ ದೇಶದ ರಾಜಪುತ್ರನ ಕೊಲೆಯಿಂದ ಉದ್ಭವಿಸಿತು! ನ್ಯಾ ರುಮಾನಿಯಾ ದೇಶಕ್ಕೆ ಫ್ರೆಂಚ ದೇಶದ ಪರದೇಶ ಮಂತ್ರಿಗಳಾದ ಎಮ್. ಬಾರ್ಥೋರವರು, ಹೋಗಿ ಜರ್ಮನ್ ಪಕ್ಷದ ನಾಝಿ ಸಂಸ್ಥೆಗಳನ್ನೆಲ್ಲ ರುಮಾನಿಯಾ ದೇಶದ ಸರಕಾರದಿಂದ ಕಳೆದ ವಾರ ಹದಗೆಡಿಸಿಕೊಂಡರು. ಫ್ರೆಂಚರು ಈ ಒಗ್ಗೆ ರುಮಾನಿಯಾ ದೇಶಕ್ಕೆ ಸಾಲ ಕೊಡಬೇಕಾಯಿತಂತೆ ರುಮಾನಿಯಾ ದೇಶದಲ್ಲಿ ಫ್ರೆಂಚರ ಪ್ರಾಬಲ್ಯ ಹೆಚ್ಚಲು ಇಟಾಲಿ ಜರ್ಮನಿಗಳಿಗೆ ಸಂತೋಷವಿಲ್ಲ. ಇದರಿಂದ ಆ ವಿಷಯವೇ ಕಲಹಕಾರಣವಾಗುವದಾಗಿ ಕೆಲವರ ಊಹೆ.

ನಿಶ್ಚಯವಾಗಿ ನಾನೇನು ಹೇಳಲಿ? ಎಲ್ಲರೂ ಸ್ವಾರ್ಥಪರಾಯಣರಾಗಿ ಪರೋಪಕಾರದ ಮಾತಾಗ ಲಿಲ್ಲದಿದ್ದರೆ ಇದರ ಮೂಲದಿಂದ ಜಗತ್ತಿನಲ್ಲಿ ಕ್ಷೇಮವಿಲ್ಲ, ಈ ಮಾತೊಂದು ಖಂಡಿತ ಅಕ್ಷೋಭ್ಯ ಅಪವಾದ ಹೇಗೆ, ಎಷ್ಟು, ಯಾವಾಗ ಪ್ರಕಟಗೊಳ್ಳುವದೆಂದು ನಾನು ಹೇಳುವ ಬಗೆ ಹೇಗೆ?

— ಉತ್ತರ ಅಫಗಾನಿಸ್ಥಾನದ ಯಾಕಾತುರ್, ವಗಾಮುಟ, ಫರಿಯಾಬ, ಇಜಾಬಾಕಂದಾಜ ಮೊದಲಾದ ಗ್ರಾಮಗಳಲ್ಲಿ ನೆರೆಕಟ್ಟಿ ೧೨೦೦—೩೦೦೦ ಜನರು ತೀರಿಹೋದರು. ೧೦೦೦ಕ್ಕೆ ಮಿಕ್ಕಿ ದನಗಳು ನಾಶ ಹೊಂದಿದವು. ಗುಡ್ಡದ ಮೇಲಿನ ಒಂದೆರಡು ಹಿಡಿ ಬಿಟ್ಟು ಚಕಕರ್ಡರ್ ತಾಲೂಕ ಎಂಬ ಜಿಲ್ಲೆ ಗ್ರಾಮವೇ ಮುಳುಗಿಬಿಟ್ಟಿದೆ. ಆ ಮುಂದಿನ ದಿನಗಳು ದೊರೆತವು, ಉಳಿದವುಗಳು ಒಳವು ಹೋದವು.

- ಕಾರೀಸಾದ ಸಂಸ್ಥಾನದಲ್ಲಿ ಜೋಕನ್ವರದ ಶ್ರೀಮಂತ ವರ್ತಕರು ಸಿಂಡಿಕೇಟ ಯಾನೆ ಒಕ್ಕೂಟ ಮಾಡಿರುತ್ತಾರೆ ಇಜಿಪ್ತದೊಳಗಿಂದ ಪರದೇಶಿ ಬಿಳಿ ಅರಳೆ ಮಾರಿ ಜೌತಪುರದಲ್ಲಿ ಅದನ್ನೆಲ್ಲ ಸಂಗ್ರಹಿಸಿ ದೇಶಕ್ಕಂಪಿ ಅದನ್ನು ಮಾರುವ ವ್ಯವಸ್ಥೆ ಮಾಡಬೇಕಾಗಿ ವರ್ತಕ ಸಂಘದ ಕಾರಸ್ಥಾನ. ಮುಂಬಯಿಯ ಗಿರಣಿ ಸಾವಕಾರರಿಗೂ, ಕೂಲಿಕಾರರಿಗೂ ಮನಸ್ತಾಪವುಂಟಾದ್ದರಿಂದ ಈಗ ಮುಂಬಯಿಯ ಬಟ್ಟೆ ವ್ಯಾಪಾರ ಕೆಟ್ಟ ಹಾಗೆಯೇ. ಅದರಿಂದ ಜಪಾನ ದೇಶದಿಂದ ಅಗ್ಗವಾದ ಅರಿವೆ-ಅಂಚಿ ತರಿಸಿ ಉಚಿತ ಪಡೆಯುವ ವ್ಯಾಪಾರ ನಡೆದಿದೆ ಜಪಾನ ಗಿರಣಿಗಳಲ್ಲಿ ಹಿಂದೀ ಗಿರಣಿಗಳಲ್ಲಿ ತಯಾರಾಗವ ನಮೂನೆಯ ಅರಿವೆಯನ್ನೇ ತಯಾರಿಸುವಂತೆ ಪ್ರಯತ್ನಿಸ್ಸುವರು ಹೇಳಲಾಗಿದೆಯಂತೆ.

☞ ಈ ಸಂಚಿಕೆಯ ಪುರವಣಿ ನೋಡಿರಿ.

ಸ್ಥಾನಿಕ ವೃತ್ತಾಂತ.

ಕುಮಟಾ— ನಿನ್ನೆ-ಮೊನ್ನೆಯಿಂದ ಮಳೆ ಬಳ್ಳೆ ಸಮಾಧಾನ ತಾಗಿದೆ. ಬಡ್ಡನ್ನು ಜಡಿಮಳೆ ಜೊತೆಯುತ್ತದೆ ಹೊಳೆಗಳ ಕಟ್ಟಿದ ನೆರೆ ಇಳಿಯಿತು. ಗಜನಿಗಳಲ್ಲಿ ಬಿತ್ತಿದ ಬೀಜ ಕೊಳೆತುಹೋಯಿತು. ಕೆಗಳು ಕೊಳೆತುಹೋದವು, ಇನ್ನು ಬಿತ್ತಲು ಬೀಜ ದೊರೆಕದು. ಒಕ್ಕಲಿಗರ ಪೇಚಾಟ ಈ ವಾರದಲ್ಲ ೯-೪ ಇಂಚು ಮಳೆ, ಈ ತನಕ ಒಟ್ಟು ೩೫-೯೬ ಇಂಚು ಮಳೆಯಾಯಿತು.

ಮಂಗಳವಾರ ಕೆನರಾ ಹ್ಯಾಂಡ್ಲೂಮಿನವರು ಹೊಸದಿನ ಸೋಡ್ರಿಯಲ್ಲಿ ಇದ್ದರು ಬರ್ಮಾ—ಕಂಪನಿ ಸೆಕ್ರೆಟರಿಯವರಾದ ಮಿ. ಸ್ಟುವರ್ಟರವರಿಗೆ ೧೦ ಸಾವಿರ ರೂಪಾಯಿಗಳ ಮೊದಲನೇ ಅನಾಹುತ ಟ್ಟಿದೆ!

ಬಾಡಗ್ರಾಮದಲ್ಲಿ ರಾ। ರಾ। ವಿಠೋಬಾ ಕೃಷ್ಣನಾಯಕ ಬೊರಕರ ನಾಲ್ಕು ಮೂಲೆಗಳ ಒಕ್ಕಲು ಗಾಂಧಿ-ಇರ್ವಿನ್ ಒಪ್ಪಂದದಂತೆ ಕಳೆದ ವರ್ಷ ಉಪ್ಪು ಬೆಳೆಸಿದ್ದರು ಆಕಾರ ಅವರ ಮೇಲೆ ಪ್ರಕರಣ ನಡೆಯಿತು ಮುಂಬಯಿ ಸರಕಾರವು ತಾ। ೧೬-೩-೧೯೩೩ನೇಗೆ ರ ಒಡಂಬಡಿಕೆಯಂತೆ ಕೊಟ್ಟ ಸೌಕರ್ಯವನ್ನು ರದ್ದುಪಡಿಸಿ ಒಕ್ಕಲು ವಾಸದ ಉಪ್ಪಿನ ಅಗರಗಳನ್ನು ನಾಶಪಡಿಸಿತು. ಉಪ್ಪು ಬೆಳಸುವದು ಬಿನ್‌ಕೇತಕಿಯಿಂದೂ, ಸರಕಾರ ಅಪ್ಪಣೆ ಪಡೆದು ಉಪ್ಪು ಬೆಳಿಸಿ ಬಿನ್‌ಕೇತಕಿ ಉಪಯೋಗ ಮಾಡಿದ್ದರಿಂದ ರೂ ೩೦ ದಂಡ ಕೊಡಬೇಕಾಗಿಯೂ, ರೂ ೩೫ ಬಿನ್‌ಕೇತಕಿ ತೀರ್ವ ಕೊಡಬೇಕಾಗಿಯೂ ರ ನಾಲ್ಕು ಒಕ್ಕಲುಗಳ ಮೇಲೆ ಹುಕುಮು ಆದವು. ಮೂಲ ತೀರ್ವ ರೂ ೧೫—೧೩—೦. ಈ ಕುಂಕು ರಾ। ರಾ। ನಾಯ್ಕ ಮೊದಲಾದವರು ಮುಂಬಯಿ ಸರಕಾರಕ್ಕೆ, ಸರ್ವಾಧಿಕಾರಿಗಳಿಗೂ, ಬಾಡದ ಮಂತ್ರಿಗಳಿಗೂ ಅರ್ಜಿ ಮಾಡಿಕೊಂಡರು. ಆವರಿಂದ ಏನೂ ಬಾರದ ಹಾಗೆ ಆದರೆ ತಿರುಗಿ ಕೊಟ್ಟ, ಈಗ ರ ಹಣವನ್ನು ಒತ್ತಾಯದ ಕಡೆಯಿಂದ ವಸೂಲ ಮಾಡುವ ಕ್ರಮ ನಡೆದ ಬಟ್ಟ ಒತ್ತಾಯದ ಅಂಗಡಿನಲ್ಲಿ ಜಪ್ತಿ ಮಾಡುವ ಬೀತಿ ತೋರಿಸಿ ರೂ. ೯೦೦ ವಸೂಲ ಮಾಡಿಕೊಳ್ಳಲು ಶಾಯಿತಾಗಿ ಕೇಳುತ್ತಿವೆ. ಹಾಡೇದಾರರು ಒಕ್ಕಲೊಕ್ಕಲಿಲ್ಲ, ಉಪ್ಪು ಬೆಳಸಿದವರಿಗೆ ಶಾಸನ ಮಾಡಿದೆ, ಹಣ ದಂಡಿಗೆ ವಸೂಲು ನ್ಯಾಯವೇ? ಎಂದಿದ್ದಾಗಿ ಒಟ್ಟು ೮ ವೃಕ್ಷ ಕಲಕ್ಟರರೂ, ಕಮಿಶನರರೂ ವಿಚಾರಿಸಿ ನಿರ್ಧಾರದ ಬಾಕಿದಾರರಿಗಾದ ಅನ್ಯಾಯವನ್ನು ಪರಿಹರಿಸಬೇಕು.

ಇಲ್ಲಿಯ ಸಬ್ ಇನ್ಸಪೆಕ್ಟರರು ಗಿದ್ದ ಮಿ। ಕಾಸಬೇಕಾರ ಅವರಿಗೆ ಬಂಗಿ ವರ್ಗವಾಗಿದೆ. ಅವರ ಸ್ಥಳದಲ್ಲಿ ಗೋಕರ್ಣದ ಸಬ್‌ಜರಿ ಮಿ। ಕಂಕಣವಾಡಿ ಇವರು ಇಂದು ಹಾಜರಾದರು.

ಗೋಕರ್ಣ ಮ್ಯುನಿಸಿಪಾಲಿಟಿಗೂ, ಕಲೆಕ್ಟರರಿಗೂ ಜೂನ ಪೂರ್ವೀನ ಎಡೆಗಳ ಕುರಿತು ವಿವಾದ ಉಳಿದ ಕೇಸಿನಲ್ಲಿ ಕಟ್ಟಿನ ಪಕ್ಕಲಿಗೆ ಬೆಂಕಿ ಬಿದ್ದ ಒಗ್ಗೆ ಸತ್ಯಾಗ್ರಹ ಚಳವಳಿಯಲ್ಲಿ ಜೂನ ಪೋಲೀಸ್ ಬೆಪ್ಪತ್ತಿನಾರ್ ಕೆಪ್ಪ ! ಪ್ರಿಯ ವಿಶ್ವವಾದ ಒಗ್ಗೆ ವಿಶ್ವಭೂಷಾಯ ವಾತ, ಪೋಲೀಸ ಟಿಬಂಡಿಯ ಟರ್ನ್. ಹೀಗೆ ಅಂತು ಸನಾರು ಆ-೧೦ ಸಾವಿರ ರೂಪಾಯಿ ಈ ತಾಲೂಕಿನ ಹಿರೇಗುತ್ತಿ, ಮಾದನಗೇರಿ, ಮಾಸ್ಕೇರಿ, ಗೋಕರ್ಣ ವೊದಲಾದ ಊರವರು ಕೊಡಬೇಕಾಗಿ ಕಲೆಕ್ಟರರ ಅಪ್ಪಣೆ ದೊರಕಿತ್ತು. ತೀರ್ವ ಕೊಡತಕ್ಕವರು ಮನೆ ಬಿಟ್ಟು ಇದ್ದವರು ಈ ಅಕವನ್ನು ವಿಚಾರಿಸಿ ತಲೆಬೇಕಾಗಿ ವಿಧಿಸೋಣವಾಗಿತ್ತು. ಕಟ್ಟಿನ ಪಕ್ಕಲುಗಳಿಗೆ ಬೆಂಕಿ ಹಾಕಿದ ಪ್ರಕರಣ ಕತ್ತಿ ಹತ್ತದ್ದರಿಂದ ಈ ಭೂದಂಡ ವಿಧಿಸೋಣವಾಗಿತ್ತು ಈ ಗ್ರಾಮದೊಳಗೆ ಸಾಕ್ಷ್ಯ ಬಿಟ್ಟವರು ಈ ಗುಸ್ತೆಯ ವಾರ್ತೆಯಲ್ಲಿದ್ದರು ಹಿರೇಗ್ರಾಮದಲ್ಲಿ ಭೂಮಿಯಿರುವದೆಂಬ ಒಂದೇ ಕಾರಣದಿಂದ ಈ ದಂಡ ತರಬೇಕಾಗಿತ್ತು. ಕೆಲವರು ತೆತ್ತರು; ಕೆಲವರು ತೆರುತ್ತಿದ್ದಾರೆ, ಕೆಲವರದು ಬಾಕಿಯುಳಿದಿದೆ! ಪಟೇಲ-ಶಾನಭೋಗರು ವಸೂಲು ಮಾಡುತ್ತಿದ್ದಾರೆ. ಗೋಕರ್ಣ ಮ್ಯುನಿಸಿಪಾಲಿಟಿ ಹದ್ದಿನೊಳಗಿನ ನಿವಾಸಿಗಳು ರೂ. ೪೦೦೦ನ್ನು ತರಬೇಕಾಗಿ ಕಲೆಕ್ಟರರ ಅಪ್ಪಣೆ ಅದನ್ನು ಇತರ ಗ್ರಾಮಗಳಂತೆ ಪಟೇಲಶಾನಭೋಗರು ವಸೂಲ ಮಾಡದೆ ಗೋಕರ್ಣ ಮ್ಯುನಿಸಿಪಾಲಿಟಿಯವರು ವಸೂಲ ಮಾಡಿ ಸರಕಾರಕ್ಕೆ ತುಂಬಬೇಕಾಗಿ ಕಲೆಕ್ಟರರ ಅಪ್ಪಣೆ. ಮ್ಯುನಿಸಿಪಾಲಿಟಿಯವರು ತಮ್ಮಿಂದ ಇದು ಅಸಾಧ್ಯವೆಂದು ಕಲೆಕ್ಟರರಿಗೆ ಒರೆದರು. ತರುಗ ವಸೂಲ ಮಾಡದಿದ್ದಲ್ಲಿ ಮ್ಯುನಿಸಿಪಾಲಿಟಿಯನ್ನು ಸರಕಾರ ಸ್ವಾಧೀನ ಕೊಳ್ಳುವದಾಗಿ ಕಲೆಕ್ಟರರ ಫರ್ಮಾನು! ಈ ಮ್ಯುನಿಸಿಪಾಲಿಟಿಯು ೮ ತಿಂಗಳಿನ ನರದ್ದು. ಕಮಸರದಲ್ಲಿ ಸರಕಾರನಿಯುಕ್ತರೇ ೯ ಡಿಸ್ಟ್ರಿಕನ ಪ್ರಾಂತ ಸಾಹೇಬರು ಮ್ಯುನಿಸಿಪಾಲಿಟಿ ಅಧ್ಯಕ್ಷರು. ಈ ವಿಷಯವು ಪ್ರಾಂತ ಸಾಹೇಬರ ಅಧ್ಯಕ್ಷತೆಯಲ್ಲಿಯೇ ಮ್ಯುನಿಸಿಪಾಲಿಟಿಯವರು ವಿಚಾರಿಸಿ ೪ ತಿಂಗಳಿಂದ ಈ ದಂಡವನ್ನು ಸರಕಾರಕ್ಕೆ ತುಂಬಬೇಕಾಗಿ ಠರಾವಾಯಿತು ಹಾಗೆ ಕಂತು ವಸೂಲಾಗುವದಿಲ್ಲವಾಗಿ ಕಲೆಕ್ಟರರ ಅಪ್ಪಣೆ. ಮ್ಯುನಿಸಿಪಾಲಿಟಿಯವರು ಪೋತ್ತಗಾರರು, ಅಧಿಕಾರಿಗಳ ಭೀತಿಗೆ ರೂಪಾಯಿನ ಮೇಲೆ ರೂಪಾಯಿಗೆ ೦-೩-ಆಯಂತೆ ಈ ಹಾಡಾ ತೆರಿಗೆಯನ್ನು ಹಂಚಿಹಾಕಿ ವಸೂಲ ಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ನಿರ್ಧರಿಸಿದ್ದಾರೆ. ಇನ್ನೊಂದು ವಾರದೊಳಗೆ ವಸೂಲಿಯು ಪ್ರಾರಂಭವಾಗುವದು! ಹೇಗೂ ಇರಲಿ. ಮ್ಯುನಿಸಿಪಾಲಿಟಿಯ ಸಭಾಸದರು ಊರ ಮ್ಯುನಿಸಿಪಾಲಿಟಿಯನ್ನು ಕಾಯ್ದುಕೊಂಡರೆಂದು ಗೋಕರ್ಣದಲ್ಲಿಲ್ಲರೂ ಹರಸುತ್ತಾರೆ!! ಜಾಡಾ ತೆರಿಗೆ ವಸೂಲ ಮಾಡಲು ಅಸಾಧ್ಯವೆಂದು ನಿರ್ಧರಿಸಿದವರ ಕಡೆಯಿಂದಲೇ ಸಾಧ್ಯ ಮಾಡಿಕೊಂಡ ಬಗ್ಗೆ ಕಲೆಕ್ಟರರ ಮಹತ್ವವು ಕೊಂಡಾಡುವಂತಹದ್ದು! ದೇಶಸ್ಥಾನಿಕ ಸ್ವರಾಜ್ಯವೆನೆಳಗಿನ ಸ್ವರಾಜ್ಯಾಧಿಕಾರದ ಪ್ರದರ್ಶನವಿದು! ಸರಕಾರ ಪಡೆದಿರುವ ಸ್ಥಾನಿಕ ಅಧಿಕಾರಗಳಿಗೆ ಅಧೀನವಾಗಿ ನಡೆಯುವ ಸಂಸ್ಥೆಯೇ ಸ್ಥಾನಿಕ ಸ್ವರಾಜ್ಯ ಸಂಸ್ಥೆ! ಹೀಗೆ ಬಲ್ಲವರು ಟೀಕಿಸುತ್ತಾರೆ ಮುಂಬಯಿ ಸರಕಾರವು ಪರಾಂಬರಿಸಬೇಕು.

ನಿನ್ನೆ ಇಲ್ಲಿಯ ಶ್ರೀ ವಿಠೋಬ ದೇವಸ್ಥಾನದ ಭಜನೆ ಸಪ್ತಾಹದ ಮಂಗಳೋತ್ಸವ ನೆರವೇರಿತು. ಶ್ರೀ ದೇವರ ಪಲ್ಲಕ್ಕಿ ಹೊರಡಿಸುವಾಗ ದೇವಸ್ಥಾನದಲ್ಲಿ ಆರತಿ ಸಮಯ ಹಚ್ಚಿದ ಕರ್ಪೂರ-ದೀಪದ ಹೊಗೆಯಿಂದ ಜನರಿಗೆ ವಿಲಕ್ಷಣವಾಗಿ ೩—೪ ಜನರಿಗೆ ಬೆಂಕಿ ಹತ್ತಿ ಪಟ್ಟಾಗಿದೆ. ಉಟ್ಟ ಧೋತರಕ್ಕೂ, ತೊಟ್ಟ ಅಂಗಿಗೂ ಹ್ಯಾಲೆದತ್ತಿ ಒಬ್ಬರ ಆಡೀ ಮೈ ಸುಟ್ಟುಹೋಗಿರುವದಂತೆ.

ಹೊನ್ನಾವರ— (ತಾ. ೬-೭-೧೯೩೪) ತಲಬಿದ ಮಳೆ, ಇತ್ತಲಾಗಿ ೫-೬ದಿನಗಳಿಂದ ಬಿಸಿಲು ಬೀಳದೆಯೇ ಇಲ್ಲಿ ಹೊಳೆಗೆ ನೆರೆ ಗದ್ದೆಗೆ ಹಾಕಿದ ಅಗೆ ಕೊಳೆತುಹೋಯಿತು. ಇಷ್ಟರತನಕ ೬೦ ಇಂಚಿಗೆ ಮಿಕ್ಕಿತು.

ಮ್ಯುನಿಸಿಪಾಲಿಟಿಯ ಅಧ್ಯಕ್ಷನು ಇದೇ ಬರುವ ತಾ. ೧೩-೭-೧೯೩೪ನೇಗೆ. ಮುಕದ್ದರರು ಈಗಿನ ಮ್ಯುನಿಸಿಪಾಲಿಟಿಯವರ ವರ್ತನ ನೋಡಿ ಯೋಗ್ಯವಿದ್ದವರಿಗೆ ಮತದಾನ ಮಾಡಬೇಕು ಈಗಿನ ಮ್ಯುನಿಸಿಪಾಲಿಟಿಯಲ್ಲಿ ಇತ್ತಂತ, ಹಲವರು ಸಭೆಗೆ ಹೋಗದೆ, ಕೋರಮ್ ಆಗದೆ, ಎಜ್ಯೋರ್ನ ಮಿಟಿಂಗ ಗಳಾಗುವದೇ ಹೆಚ್ಚು. ಅದರಿಂದ ಈಗ ದುರ್ಲಕ್ಷ ಮಾಡಲಾಗದು ಮುಂದೆ ಪಶ್ಚಾತ್ತಾಪಪಡಬೇಕಾದೀತು. ಈ ಬಾರಿ ಒಂದು ಹೊಸ ಅವಕಾಶ. — ಉಮೇದ್ವಾರರಾಗಿ ಸಾವರ ರು ತಮ್ಮ ಉಮೇದ್ವಾರಿ ಅರ್ಜಿಯನ್ನು ಪಾವತಿಯೇದಿಂದ ಕಡೆ ಹಾಜರುಪಡಿಸಬೇಕು. ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಈ ತನಕ ಈ ಅರ್ಜಿಗಳನ್ನು ಸ್ವೀಕರಿಸುತ್ತಿದ್ದರು. ಹೀಗೆ ಜಿಲ್ಲೆಯೊಳಗಿನ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಮೇಲೆ ಆರೋಪಗಳಿಗೆ ಕಾರಣವೇನೆಂದು ತಿಳಿಯುತ್ತಿಲ್ಲ

ಕುಮಟೆ ಕಡೆಗೆ ಹೋಗುವ ಸಂಕಗಳು ಕಡಿದು ಬಿದ್ದು ಹೋಗಿವೆ ಆದರು ಬೋಟಿನಿಂದ ಹಾದಿಯು ಪುನಃ ಕತ್ತಬೇಕಾಗುತ್ತದೆ. ಬಡಗಣಿ ಹಾರಿಯಲ್ಲಿ ಬೋಟಿನ ಪತ್ತಿನ ವ್ಯವಸ್ಥೆ ಇಟ್ಟಿಗಿಲ್ಲ. ಹಾದಿಯಿಂದ, ಡಾಯರೆಕ್ಟರನ ಸೈಟ್ಟ ಹೊಸ ಬೋಟಿನಿಂದ ಪಡೆ ನನ ೭-೮ ಸಾವಿರ ರೂಪಾಯಿ ಉತ್ಪನ್ನವಿರುವಾಗ ಈ ಅವಸ್ಥೆ! ಸರಕಾರವು ಈ ಕಡೆ ಲಕ್ಷ ಕೊಡಬೇಕು.

ಇಲ್ಲಿಯ ಸಬಜಜ್ಜ ಕೋರ್ಟಿಗೆ ರಾ| ಬಿ. ಡಿ. ನಾಡಕರ್ಣಿಯವರು ಸಬಜಜ್ಜರಾಗಿ ನೇಮಿಸಲ್ಪಟ್ಟಿದ್ದರೆ ಸಬಜಜ್ಜರಾಗಿದ್ದ ಮಿ| ಸಿಕ್ವೆರಾ ಇವರು ೩ ತಿಂಗಳ ರಜೆ ಕೊಂಡದ್ದರಿಂದ ಈ ನೇಮಣೂಕಿ.

ಈಗ ಗೇರಸೊಪ್ಪೆಗೆ ಹೋಗಲು ಬೋಟಿನ ವ್ಯವಸ್ಥೆ ಇದೆ.

ಅಂಕೋಲಾ—(ತಾ ೮-೭-೧೯೩೦) ಕಳೆದ ವಾರದಲ್ಲಿ ೧೪-೫೭ ಇಂಚು ಮಳೆ ಬಿತ್ತು, ಈ ವರೆಗೆ ಒಟ್ಟು ಮಳೆ ೫೩-೧೪ ಇಂಚಾಯಿತು.

ಅಂಕೋಲೆಯಲ್ಲಿ ನಡೆದ ಸತ್ಯಾಗ್ರಹದ ಸಮಯ ಸತ್ಯಾಗ್ರಹ ಮಾಡಲು ಉತ್ತೇಜನ ಕೊಟ್ಟ ಬಗ್ಗೆ ವಾಂಗ ಸೂರಿನ ಶ್ರೀ| ಕಾರ್ನಾಡ ಸದಾಶಿವರಾಯರ ಮೇಲೆ ಕ್ರಿಮಿನಲ್ ಪ್ರೊ. ಎಮೆಂಡಮೆಂಟ ಆಕ್ಟ ಕಲಂ ೧೭ (೧) ರನ್ವಯ ಫಿರ್ಯಾದು ದಾಖಲಾಗಿತ್ತು. ಶ್ರೀ| ಸದಾಶಿವರಾಯರು ಅಸ್ವಸ್ಥರ ಮೂಲಕ ಈ ಫಿರ್ಯಾದಿಯ ... ಇದೇ ತಿಂಗಳ ೧೪ನೇ ತಾರೀಖಿಗೆ ವಿಚಾರಣೆ ಇಟ್ಟಿದೆ. ಸತ್ಯಾಗ್ರಹದ ತ್ಯಾಗವಾದರೂ ಸರಕಾರವು ಇನ್ನು ಇಂಥ ಖಟ್ಲೆಗಳನ್ನು ಹಿಂತೆಗೆದುಕೊಳ್ಳುವದಿಲ್ಲವೇ?

ಈ ತಾಲೂಕಿನಲ್ಲಿ ಕಾಯಿದೆ ಭಂಗ ನಡೆದಾಗ ನಷ್ಟಪಟ್ಟ ಕೃಷಕರ ಸಂಕಟಗಳನ್ನು ವಿಚಾರಿಸಿ ಅವರಿಗೆ ಈಗ ಬೇಕಾದ ಸಹಾಯದ ಅಂದಾಜು ಮಾಡಲು ಧಾರವಾಡದಿಂದ ಪ್ರಾಂತಿಕ ಕೊಂಗ್ರೆಸ ಕಮಿಟಿಯು ವರನಾಗಿ ಈ ಕೆಲವು ಕಾರ್ಯಕರ್ತರು ಬರಲಿಕ್ಕಿದ್ದಾರೆ.

ತಿದ್ದುಪಡಿ— ಕಳೆದ ತಾ. ೨ನೇ ಸಂಚಿಕೆಯಲ್ಲಿ "ತ್ಯಾಗಿ ಸತ್ಯಾಗ್ರಹಿಗಳಿಗೆ ನೆರವಾಗಿ" ಎಂಬ ಸದರಿನಲ್ಲಿ ಪ್ರಕಟವಾದ ಕೆಲ ಸಂಗತಿಗಳು ಅಯಥಾರ್ಥವಿರುವವಾಗಿ ಸಭೆಯಲ್ಲಿ ಹಾಜರಿದ್ದ ಪ್ರೇಕ್ಷಕರೊಬ್ಬರು ತಿಳಿಸುತ್ತಾರೆ. ಅವರು ಬರೆಯುವದೇನೆಂದರೆ:— ಶ್ರೀ| ಭುಲಾಭಾಯಿ ದೇಸಾಯಿಯವರು ರೂ. ೧೦೦೦೦ ಗುಜರಾದ-ಕರ್ನಾಟಕ ಸತ್ಯಾಗ್ರಹಿಗಳಿಗಾಗಿ ಆ ದಿನ ನಿರ್ಮಾಣವಾದ ನಿಧಿಗೆ ಅರ್ಪಿಸುತ್ತೇನೆಂದು ಹೇಳಿಯಿಲ್ಲ; ಶ್ರೀ| ದೇಸಾಯಿಯವರು ಈ ಹಿಂದೆ ಗುಜರಾಥ ಕಷ್ಟ ನಿವಾರಣಾ ನಿಧಿಗೆ ರೂ ೧೦೦೦೦ವನ್ನು ಸಿರ್ಸಿ ಧನ್ಯರಾಗಿದ್ದಾರಾಗಿ ಅಧ್ಯಕ್ಷಸ್ಥಾನದಿಂದ ಸೌ| ಸರೋಜಿನಿಯವರು ಹೇಳಿದ್ದು. ಕರ್ನಾಟಕ ನಿಧಿಗೆ ಇವರಿನ್ನೂ ತಮ್ಮ ರಕಮಿನ ಅಂಕಿ ಹಾಕಿಲ್ಲ; ರೂ. ೫೦ ಸಾವಿರದ ಅಂಕಿ ಸಭೆಯಲ್ಲಿ ಬಿದ್ದಿದ್ದೆಂಬುದು ಸಹ ತಪ್ಪು. ಗುಜರಾಥದವರು ಮುಂಬಯಿಯಲ್ಲಿ ಎತ್ತುವಳಿ ಮಾಡಲಾರಂಭಿಸಿದ್ದಾರೆ. ಕರ್ನಾಟಕದ ಬಗ್ಗೆ ಇನ್ನೂ ಕೆಲಸ ಪ್ರಾರಂಭವಾಗಲಿಲ್ಲ. ಒಬ್ಬ ಗುಜರಾಥಿ ಗೃಹಸ್ಥರು ಸಭೆಯಲ್ಲಿ ಸ್ವಯಂಸ್ಫೂರ್ತಿಯಿಂದ ಕೊಟ್ಟ ರೂ. ೯೦ ದಲ್ಲಿ, ರೂ ೫ ಕರ್ನಾಟಕದ ಪಾಲಿಗೆ ಬಂದಿವೆ. ಇವಲ್ಲದೆ ಸಭೆಯಾದ ಮೇಲೆ ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ| ಅಚ್ಯುತರಲ್ಲಿ ಇವರ ಕಡೆ ಮುಂಬಯಿಯ ಮಾರಾಕೋನಾದೊಳಗಿನ 'ಸೋನು ಜಾಂದಿ ಕೋಲವಾನೂ ವೇಪಾರಿ ಮಂಡಳನೂ ದರವಾನೋ ಕಾಂಟೋ' ಎಂಬ ಚಿನ್ನ-ಬೆಳ್ಳಿ ವ್ಯಾಪಾರಿ ಮಂಡಳದವರು ಗುಜರಾಥ-ಕರ್ನಾಟಕ ನಿರಾಶ್ರಿತ ನಿಧಿಗೆ ರೂ ೧೦೦೧ ಕೊಟ್ಟಿದ್ದಾರೆ. ಇತರ ಸಂಘದವರೂ ಇದರಂತೆಯೇ ನಿರಾಶ್ರಿತರಿಗೆ ನೆರವಾಗಬೇಕಾಗಿ ಕಾರ್ಯದರ್ಶಿಗಳ ವಿನಂತಿ.

ವಿವಿಧ !

— ಜರ್ಮನಿಯಲ್ಲಿ ಭಯಂಕರ ಅನರ್ಥ. ಹಿಟ್ಲರರವರಿಗೆ ಅಧಿಕಾರಕ್ಕೇರಿಸಿದ 'ಸ್ಟಾರ್ಮಟ್ರೂಪ್ಸ'ಎಂಬ ಸ್ವಯಂಸೇವಕ ಪಥಕದವರಿಗೂ, ಹಿಟ್ಲರರ ಸರಕಾರಕ್ಕೂ ಈಗ ವಿಷಮಪ್ರಸಂಗವಾಗಿದೆ ಸ್ವಯಂಸೇವಕ ಪಥಕದವರು ಹಿಟ್ಲರರಿಗೆ ಪದಚ್ಯುತ ಮಾಡಲು ಒಳಸಂಚು ಮಾಡಿದ್ದರು. ಮ್ಯುನಿಚ್‌ದಲ್ಲಿ ಹಿಟ್ಲರ ದ್ರೋಹಿಗಳ ಸಭೆ ಸೇರುವದಿತ್ತು. ಹಿಟ್ಲರರು ಮ್ಯುನಿಚ್ಕ್ಕೆ ವಿಮಾನೋಡ್ಡಾಣ ಮಾಡಿ ಹೋಗಿ ಮುಖ್ಯಸ್ಥರಾದ ಕೆಪ್ಟನ್ ಅರ್ನ್ಸ್ಟ ರ್ಯಾಮ್ ರವರಿಗೆ ಮಲಗಿದ್ದಲ್ಲಿಯೇ ನಸುಕು ಹರಿಯುವದರೊಳಗೆ ಹಿಡಿದು ಗೃಹದಿಂದಾಗ ಒಯ್ದು ಗುಂಡು ಹಾಕಿ ಕೊಂದರು. ಕೈಸರರ ಮಗಂದಿರಿಗೂ ಸಹ! ಇತರರಿಗೂ ಸೆರೆಹಿಡಿದಿದ್ದಾರೆ! ಕೆಲವರಿಗೆ ಗುಂಡು ಹಾಕಿ ಕೊಲ್ಲಿಸಿದರು! ಅಧ್ಯಕ್ಷರಾದ ಹಿಂಡನ್‌ಬರ್ಗರವರು ಈ ಪ್ರಕಾರಕ್ಕೆ ಸಮ್ಮತಿ ಕೊಡದೆ ಅನುಮಾನಿಸಲು, ಸಮ್ಮತಿ ಕೊಡದಿದ್ದಲ್ಲಿ ವ್ಹಾನ್ ಪಾಪೆನ್ ಮೊದಲಾದ ಇತರರಿಗೂ ಗುಂಡು ಹಾಕಿ ಕೊಲ್ಲಿಸುತ್ತೇನೆಂದು ಅಂಜಿಕೆ ಹಾಕಿ ಅವರ ಸಹಿ ಪಡೆದರಂತೆ. ವ್ಹಾನ್ ಪಾಪೆನ್‌ರವರು ಜರ್ಮನ್ ಸರಕಾರದ ಪ್ರಧಾನರೊಬ್ಬರು, ದಕ್ಷ ಪುರುಷರು ಅವರಿಗೂ ಸೆರೆಹಿಡಿಯಲಾಗಿತ್ತು, ಈಗ ಅವರಿಗೆ ಬಿಡುಗಡೆಯಾಗಿದೆ. ಅವರು ಪ್ರಧಾನಪದವನ್ನು ತ್ಯಜಿಸಲಿಕ್ಕಿಲ್ಲವಂತೆ. ತ್ಯಜಿಸಿದ್ದಲ್ಲಿ ಲೋಕಮತದ ಪ್ರಕ್ಷೋಭವಾಗುವದೆಂದು ಅಸ್ವಸ್ಥರಾದ ರಾಜ ಪದ ಕೊಂಡು ಮುಂದೆ ರೀತಿಯಂತೆ ಲ್ವವೃತ್ತರಾಗುವರು. ಇದರ ಕಾರ್ಯಕಾರಣದ ಸಂಪೂರ್ಣ ವೃತ್ತಾಂತ ವಿವರವಾಗಿ ತಿಳಿಯಲಿಲ್ಲ.

— ಆಸಾಮ ಪ್ರಾಂತಕ್ಕೊಳ್ಪಟ್ಟ ನವಗಾಂಗ ಜಿಲ್ಲೆಯಲ್ಲಿ ಕಪಿಲಾ ನದಿಗೆ ಅದ್ಭುತವಾದ ನೆರೆಬಿಟ್ಟು ೧೩೦೦ ಗ್ರಾಮಗಳೊಳಗಿನ ೩ ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಉಗಿಬಂಡಿಯ ಮಾರ್ಗವೆಲ್ಲ ಕೊಚ್ಚಿ ಹೋಗಿದೆ. ಇಂಥ ನೆರೆಯನ್ನು ಈ ಹಿಂದೆ ಯಾರೂ ನೋಡಿಲ್ಲವಂತೆ ೮ ಗಾವುಗಳ ತನಕ ಒಂದೊಂದು ಮನೆಯಲ್ಲಿ ೭-೮ ಅಡಿ ನೀರು ತುಂಬಿ ನಿಂತಿತ್ತು. ಸಾವಿರಾರು ಜನರಿಗೆ ಅನ್ನಸಂತರ್ಪಣೆ ಮಾಡಬಲ್ಲವರು ನೀರಿನಲ್ಲಿ ಕೂಳಿಗೆ ಗತಿಯಿಲ್ಲದವರಾದರು. ಕಾಡಾನೆಗಳು ಸಹ ಸತ್ತು ತೇಲಿ ಬಂದವು! ಜನರು ಅರಿವೆ-ಅಂಚಡಿಗಳಿಲ್ಲದೆ, ದೋಣಿಗಳಿಲ್ಲದೆ ಮರಗಳ ಕೊಂಬೆಗಳ ಮೇಲೆ ಕೂತು ಜೀವ ಉಳಿಸಿಕೊಂಡರು. ಕಪಿಲಾ ನದಿಯ ದಕ್ಷಿಣ ದಂಡೆಯ ಭಾಗದಲ್ಲಿಂತು ಒಂದು ಸಹ ದನ ಕರ ಉಳಿದಿಲ್ಲವಂತೆ. ಚಿಕ್ಕ ಚಿಕ್ಕ ಬಾಲಕರು ಕೂಳಿಗಾಗಿ ಗೋಳಾಡುವದನ್ನು ನೋಡಲಾಗದೆ ತಾಯಿ ತಂದೆಗಳು ಆತ್ಮಹತ್ಯ ಮಾಡಿಕೊಂಡರಂತೆ! ಆಸಾಮ ಸರಕಾರವು ಉಚಿತವಾಗಿ ಹಂಚಲು ೩೦ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿದೆ. ಈ ರಕಮು ೧ ದಿವಸದ ಖರ್ಚಿಗೆ ಸಾಲದು!

ಅರ್ಗನೈಝರರು ಬೇಕು!!

ನಮ್ಮ 'ಕ್ಲಾಕ್ ಇನ್ಸೂರನ್ಸ' ಯೋಜನೆಗಳನ್ನು ಪ್ರಚುರಗೊಳಿಸಲಿಕ್ಕೆ.

ನಮ್ಮ ಯೋಜನೆ ಬಹಳ ನವೀನವಾದದು! ಸಂಬಳ-ಭತ್ತೆ-ಕಮೀಶನ ಸಿಗುತ್ತವೆ. ವಜನುದಾರ ಹಾಗು ಒಳ್ಳೇ ಉದ್ಯೋಗ ಸಂಬಂಧವುಳ್ಳವರು ಅರ್ಜಿ ಮಾಡಬೇಕು. ಪತ್ರವ್ಯವಹಾರ ಇಂಗ್ಲೀಷಿನಿಂದಲೇ ಮಾಡಬೇಕು.

Neptune Assurance Co., Ltd.,
Post Box No 620, Bombay.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರತ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿವೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ಸವಿಸ್ತರ ಮಾಹಿತಿ ಸಲುವಾಗಿ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆಯಬೇಕು..

Kumta Agents.- D.K. NAYAK Bros Honnavar Agent:- R. V. PARBHU Esq	**K. PadmanabhaRao & Sons.,** BELGAUM *Chief Agents for* *Karnatak Districts & S M States*

☛ ಮಕ್ಕಳಿದ್ದರೆ ಮನೆ ಚಂದ! ☚

ಮಕ್ಕಳ ಛಂದ	ಬಂಜೆತನದಿಂದ ಮುಕ್ತರಾಗುವಿರಿ!	ಬಂಜೆತನ ಬೇಡಿರಿ

ಗರ್ಭಧಾರಣ ಸಂಜೀವನೀ.

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾತ ಆಗುವ ವರೆಗೆ ಪ್ರತಿಸಾರೆ ಮೂರು-ಮೂರು ದಿವಸ ತಕ್ಕೊಂಡರೆ ಪುತ್ರಣಿ ಆಗುವದು ೯ ಗುಳಿಗೆಗಳ ಕಿಂ. ರೂ. ೩. ಟ. ಖ. ೫ ಆಣೆ. ಅನುಪಾನ ಪತ್ರಿಕೆ ಸಂಗಡ

ಪತ್ತೆ:— ವೈದ್ಯ ವ್ಹಿ. ಎಸ್. ಕಾಪಸೇ, ಮಿರಜ. (S.M.C.)

ವೃತ್ತಸಾರ.

— ಬಿಹಾರ ಪ್ರಾಂತದೊಳಗಿನ ಭೂಕಂಪಗ್ರಸ್ತರ ಅವಸ್ಥೆ [illegible] ಭೂಕಂಪದ ಬೆನ್ನಿಗೆ ನೆರೆ ಬಂತು, ಬಿರುಗಾಳಿ ಬೀಸಿತು. ಮಳೆಯೂ ಎಡೆಬಿಡದೆ ಬಿತ್ತು. ತಿನ್ನಲಿಕ್ಕೆ ಕಾಳಿಲ್ಲ. ಮುಂದಿನ ಪೈರು ನಷ್ಟವಾಗುತ್ತಿದೆ. ಬಿಕ್ಕೆ ಬೇಡಿದರೆ ಕೊಡುವವರಿಲ್ಲ. ಬಾಬು ರಾಜೇಂದ್ರಪ್ರಸಾದರವರ ಫಂಡಿನಿಂದ ಸಮಸ್ತರಿಗೆ ನೆರವಾಗುವದು ಅಶಕ್ಯವಾಗಿದೆ. ಸರ್ವಾಧಿಪತಿ ವಿಲಿಂಗಡನ್ ದೊರೆಗಳ ಹೆಸರಿನಿಂದ ಜನಸಾಮಾನ್ಯರಿಂದ ಎತ್ತುವಳಿ ಮಾಡಿದ ಸರಕಾರಿ ಫಂಡು ಯುರೋಪಿಯನ್ ತೋಟಗಾರರಿಗೆ ಹಂಚಿಹೋಗುತ್ತದಾಗಿ ಒಂದು ತಕ್ರಾರು ಹುಟ್ಟಿದೆ. ಈ ಫಂಡಿನಿಂದ ಸಹಾಯ ಬೇಕಾದವರ ಹೆಸರು ಕೊಡಬೇಕಾಗಿ ಹೇಳಿದ್ದಕ್ಕೆ ಸರಕಾರದಿಂದ ಹೆಸರಿನ ಪಟ್ಟಿ ಕೊಡಲಾಗಲಿಲ್ಲ. ಜನರು ಕೈಮುರಿದು ದುಡಿದು ಹೊಟ್ಟೆ ತುಂಬಿಕೊಳ್ಳಲಿಕ್ಕೆ ಸಿದ್ಧರಿದ್ದಾರೆ, ಆದರೆ, ಅವರೆಲ್ಲರಿಗೆ ಕೆಲಸ ಕೊಡುವ ವ್ಯವಸ್ಥೆ ಇನ್ನೂ ಆಗಿಲ್ಲ. ಅಖಿಲ ಭಾರತೀಯ ನೂಲುಗಾರರ ಸಂಘದವರು ಕೈರಾಟೆಯ ಕೇಂದ್ರಗಳನ್ನು ಸ್ಥಾಪಿಸಿ ೩೦-೩೫ ಸಾವಿರ ಜನರಿಗೆ ಕೂಲಿಯ ವ್ಯವಸ್ಥೆ ಮಾಡಿದ್ದಾರೆ. ಪುರಾತನ ಕೈರಾಟೆಯ ಮೇಲೆ ೬೦ ಸಂಖ್ಯೆಯ [illegible] ಜನರು ನೂತು [illegible] ಹೊಟ್ಟೆ ತುಂಬಿಕೊಳ್ಳುತ್ತಾರೆ. ಈ ರಾಟೆಗಳು ೮-೧೦ ಆಣೆಗಳಿಗೆ ತಯಾರಿಸಬರುತ್ತವೆ. ಇವನ್ನು ಮಾಡಿಸಲಿಕ್ಕೆ ಸಹ ಜನರ ಕಡೆ ಹಣವಿಲ್ಲ. [illegible] ಕಡೆ ಏನಾದರೂ ಕೂಲಿ-ನಷ್ಟ ಮಾಡಿ ಈ ರಾಟೆಗಳನ್ನು ಜನರು ತಯಾರಿಸಿಕೊಳ್ಳುತ್ತಾರೆ. ಹೆಸರಾದ ಮಲಮಲಿನ ನೂಲು ಸಹ ಈ ರಾಟೆಗಳ ಮೇಲೆ ತಯಾರಾಗುತ್ತದೆ. ೧೦೦ ನಂಬರ ನೂಲು ಸಹ ಇವುಗಳ ಮೇಲೆ ತಯಾರಾಗುತ್ತದೆ. ಬಿಕ್ಷೆಯನ್ನು [illegible] ಹತ್ತಿ ತಂದು ಅದನ್ನು ನೂತು, ಆ ನೂಲು ಮಾರಿ ಆ ಹಣದಿಂದಲೇ ಮತ್ತೆ ಹತ್ತಿ ತಂದು ಇವರು ಸಂಸಾರ ಮಾಡುವ ಸಮಾಚಾರ ನೋಡಿದರೆ ಮನಸ್ಸು ತಲ್ಲಣಗೊಳ್ಳುತ್ತದೆ. ಈ ಪ್ರಕಾರ ಸಹ [illegible] ಮಾಡಲಾಗದೆ [illegible] ಗ್ರಾಮದೊಳಗಿನ ೧೩ ಮಂದಿಗಳು ಉಪವಾಸ ಸತ್ತರು. ೧ ಆಣೆ ಕೂಲಿಯಿಂದ ಅವರು ಇಡೀ ದಿನ ಕೆಲಸ ಮಾಡತಯಾರಿದ್ದರು. ಅದೂ ಸಹ ಸಿಗದೆ ಅವರು [illegible]. [illegible] ಬಂದ ನಂತರ [illegible] 'ತೇನಾ' ಹೊಲಸನ್ನು ಸಹ ತಿಂದು ಜೀವ ಬದುಕಿಸಿಕೊಂಡವರನೇಕರಿದ್ದಾರೆ. ಈಗ ಅದೂ ಸಹ ಸಿಗದೆ ಅವರು ಉಪವಾಸ ಸಾಯುತ್ತಿದ್ದಾರೆ. 'ತೇನಾ' ಹೊಲಸಿನಲ್ಲಿ ಹುಣ್ಣು-ಗಂಡೆಗಳು [illegible]. ದರಭಂಗ ದಲ್ಲಿ ಭೂಕಂಪದಿಂದ ಮನೆ ಮಾರು ಕಳಕೊಂಡ ಒಕ್ಕಲಿಗರಿಗೆ ದರಭಂಗಾದ ಮಹಾರಾಜಾಧಿರಾಜರವರು [illegible] ರೂ. ೨ ಬಡ್ಡಿಯ ದರದಿಂದ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ದರಭಂಗಾ ಪಟ್ಟಣದ ಉದ್ಧಾರಕ್ಕಾಗಿ ಇದರು ೭೫ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಸರ್ವಾಧಿಪತಿಗಳ ಫಂಡಿಗೆ ೧ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಭೂಕಂಪದಲ್ಲಿ ಇವರ ಅರಮನೆಯ ಒಂದು ಭಾಗ ಬಿದ್ದು ಮಹಾರಾಜಾಧಿರಾಜರಿಗೆ ೧೦-೧೫ ಲಕ್ಷ ರೂಪಾಯಿಗಳಾದರೂ ನಷ್ಟವಾಗಿರಬೇಕು. ಹೀಗೆ ದರ್ಭಂಗಾ ಪ್ರದೇಶವನ್ನು ಉಳಿಸಿಕೊಳ್ಳಲಿಕ್ಕೆ ಮನುಷ್ಯ ಪ್ರಯತ್ನವೇನೋ ನಡೆದಿದೆ. ಜ್ವಾಲಾಮುಖಿಯಾಗುತ್ತದೇನೆಂಬದೊಂದು ಭೀತಿ. ಕಳೆದ ತಾ. ೨೫ನೇ ಮಧ್ಯಾಹ್ನ ಸಮಯ ಒಂದರೆ ರಾಜನಗರವು ಭಯಂಕರ ಕಾದು ಅದರೊಳಗಿಂದ ೧೦ ನಿಮಿಷಗಳ ತನಕ ಕಪ್ಪು ಹೊಗೆ ಉಕ್ಕಿಬಂತು. ಪಾಂಥಸ್ಥರ ಕಾಲು ಸುಟ್ಟುಹೋದವು. ಇದೇನೆಂದು ಎಲ್ಲರೂ ದಿಗಿಲುಬಿದ್ದಿದ್ದಾರೆ.

— ಸತ್ಯಾಗ್ರಹ ಮನ್ವಂತರದಲ್ಲಿ ಜೈಲಿಗೆ ಹೋದ ಗುಜರಾತ ಪ್ರಾಂತದ ಪ್ರಮುಖರಾದ ದರಬಾರ ಗೋಪಾಲದಾಸರವರು ೧½ ವರ್ಷದ ಕಾರಾಗೃಹವಾಸವನ್ನನುಭವಿಸಿ ನಾಶಿಕ ಜೈಲಿನಿಂದ ರವಿವಾರ ತಾ. ೩ನೇಯಿಗೆ ಬಿಡುಗಡೆ ಹೊಂದಿದರು. ದರಬಾರ ಸಾಹೇಬರಿಗೆ ಕಾರಾಗೃಹವಾಸವೇ ಮನೆಯಾಗಿದೆ. ಅಲ್ಲಿಯ ಆಹಾರದಿಂದಾಗಲೀ, ಶಿಸ್ತಿನಿಂದಾಗಲಿ, ಪರಿಶ್ರಮದಿಂದಾಗಲಿ ಅವರ ಮೈಕಟ್ಟು ಬಡಬೀಳಲಿಲ್ಲ. ಜೈಲಿನಲ್ಲಿ ಬಿಡುವು ಸಿಕ್ಕಿದಾಗ ಅವರು ನೂಲಗಲಿತರು. ಸ್ವತಃ ಸೀಳು ಮಾಡಿ ೮೦—೧೦೦ ನಂಬರಿನ ನೂಲನ್ನು ತೆಗೆಯಕಲಿತಿದ್ದಾರೆ. ಅವರು ಕಳೆದ ೭½ ವರ್ಷಗಳಿಂದ ಜೈಲಿನಲ್ಲೇ ಇದ್ದಾರೆ. ೧೯೩೦ನೇ ಇಸ್ವಿಯಲ್ಲಿ ೧ ವರ್ಷ ಶಿಕ್ಷೆಯಾಯಿತು, ಹೊರಬಂದ ಕೂಡಲೇ ಪುನಃ ಸತ್ಯಾಗ್ರಹ ಮಾಡಿ ೧½ ವರ್ಷದ ಶಿಕ್ಷೆ ಹೊಂದಿ ಪುನಃ ಜೈಲಿಗೆ ಹೋದರು. ದರಬಾರ ಸಾಹೇಬರು ಮಾತಾಡುವವರಲ್ಲ, ಕೆಲಸ ಮಾಡುವವರು. "ನಾನು ಸಹಕಾರಿಗಳಿಗೆ ಕಂಡು ಅವರೊಡನೆ ಮಾತನಾಡಿ ನಮಗ ನಿರತವಾದ ಸತ್ಯಾಗ್ರಹ ಒಕ್ಕಲಿಗರ ಕಷ್ಟನಿವಾರಣಕ್ಕಾಗಿ ಯತ್ನಿಸುವೆನು" ಹೀಗ ಅವರು ಕಾಣಬಂದ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು "ಸರದಾರ ವಲ್ಲಭಭಾಯಿಯವರೂ, ನಾನೂ ಪ್ರತ್ಯೇಕ ಪ್ರತ್ಯೇಕ ಕೋಣೆಯಲ್ಲಿರುತ್ತಿದ್ದೆ, ಅದರಿಂದ ಅವರ ಪ್ರಕೃತಿಯ ಕುರಿತು ನಾನೇನೂ ಹೇಳಲಾರೆ. ಅವರ ಪ್ರಕೃತಿ ನೆಟ್ಟಗಿಲ್ಲವೆಂದು 'ಜೈಲ ಗೆಝೇಟಿನ' ವಾರ್ತೆ" 'ಜೈಲ ಗ್ಯಾಝೇಟ' ಎಂದರ ಜೈಲಿನಲ್ಲಿ ಹಬ್ಬುವ ಗಾಳಿ ವಾರ್ತೆ.

— ವಿಚಿತ್ರ ವಾರ್ತೆ! ಮೇರಠದರದ ಶೀರ ಅಹಮ್ಮದಖಾನರವರು ಒಂದು ವಾರದೊಳಗೆ ೪ ಮಂದಿ ಹುಡುಗರ ತಂದೆಯಾಗಿದ್ದಾರೆ ಒಂದು ಹುಡುಗಿ! ೩ ಮಂದಿ ಹುಡುಗರು!! ಹುಡುಗರು ೧೯-೨೦ ತಾಸು ಅಂತರದಿಂದ ಹುಟ್ಟಿದರು. ತಾಯಿ-ಮಕ್ಕಳು ಕ್ಷೇಮವಿಂದಿದ್ದಾರೆ! ದಿಲ್ಲಿಯೊಳಗಿನ ರಾಜವೈದ್ಯರಲ್ಲಿ ಮಾಸ್ಟ ಗಣ್ಣಲ ಅಲ್ಲಿಯ ವ್ಹಿಕ್ಟೋರಿಯಾ ಝನಾನಾ ಯಾನೆ ಹೆಂಗಸರ ಹೆರಿಗೆಯ ಆಸ್ಪತ್ರೆಯಲ್ಲಿ ೬½ ವರ್ಷದ ಹುಡುಗಿ ಹೆತ್ತಿದ್ದಾಳೆ!! ಇವಳ ವಯಸ್ಸು ತಪ್ಪಾಗಿರಬೇಕೆಂದು ಡಾಕ್ಟರರು ಚೌಕಶಿ ಮಾಡಿದರು, ತಾ. ೮-೧೦-೧೯೨೭ಕ್ಕೆ ಇವಳು ಹುಟ್ಟಿದಳೆಂದು ಈಗ ಖಾತ್ರಿಯಾಗಿದೆ. ಆಕೆ ಭಾವಚಿತ್ರವನ್ನೂ, ಅವಳ ದೇಹದ ಕ್ಷ-ಕಿರಣದ ಸಹಾಯದಿಂದ ಇತರ ಚಿತ್ರಗಳನ್ನೂ ಡಾಕ್ಟರ [illegible] ಪಡೆದು 'ಬ್ರಿಟಿಶ್ ಮೆಡಿಕಲ್ ಜರ್ನಲ್' ಎಂಬ ಬ್ರಿಟಿಶ ವೈದ್ಯಪತ್ರಿಕೆಗೆ ಒಂದು ಲೇಖ ಕಳುಹಿದ್ದಾರೆ ೬ ವರ್ಷದ ಹುಡುಗಿ ಕೂಸು ಹೆತ್ತಿದ್ದು ಪರಮಾಶ್ಚರ್ಯ!!

— ಪಂಡಿತ ಜವಾಹಿರಲಾಲರು ನಿಲುಗುವ ಜೈಲ ಕೋಣೆಯಲ್ಲಿ ಒಂದು ಹಾವು ಹೋಗಿತ್ತಾಗಿಯೂ, ಅದನ್ನು ಪಂಡಿತಜಿಯವರು ನೋಡಿ, ಜೈಲಿನ ಕಾವಲುಗಾರನ ಮುಖಾಂತರ ಹೊಡಿಸಿದರಾಗಿಯೂ, ಆ ಹಾವು ಒಟ್ಟು ೩೦ ಇಂಚು ಉದ್ದವಿತ್ತಾಗಿಯೂ, ವಿಷಕಾರಕವಿದ್ದಿಲ್ಲವಾಗಿಯೂ ಸರಕಾರಿ ಪ್ರಕಟಣೆ. ಜವಾಹಿರಲಾಲರು ಕ್ಷೇಮದಿಂದ ಪಾರಾದ ಬಗ್ಗೆ ಎಲ್ಲರಿಗೂ ಸಂತೋಷ.

— ಅಮೃತಸರದ ಕಂಟ್ರಾಕ್ಟರರಾದ ಸೈನ ಚರಕದಿನ್‌ರವರು ಜುಲೈ ೩ನೇ ತಾರೀಖಿಗೆ ಸರಕಾರಕ್ಕೆ ನೋಟೀಸ ಕೊಟ್ಟು ೧ ಲಕ್ಷ ರೂಪಾಯಿಗಳ ನಷ್ಟಭರಪಾಯಿ ಬೇಡಿದ್ದಾರೆ. ಆ ನೋಟೀಸು ಲಾಹೋರದ 'ಟ್ರಿಬ್ಯೂನ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ನೋಟೀಸಿನ ವಿವರ ಬೋಧಪ್ರದವಿದ್ದದರಿಂದ ಈ ಕೆಳಗೆ ಕೊಟ್ಟಿದೆ — "ನಾನು ದೊಡ್ಡ ವ್ಯಾಪಾರಿ; ಸರಕಾರಕ್ಕೆ ರೂ. ೩೦೦ ಇನಕಮ್ ಟೆಕ್ಸ ಕೊಡುತ್ತೇನೆ. ೧೯೨೮ನೇ ಇಸ್ವಿಯಲ್ಲಿ ಸರಕಾರಿ ಅಧಿಕಾರಿ....... ಗಳು ನನ್ನ ಕಡೆ ಬಂದು ಸರಕಾರಕ್ಕೆ ಸಹಾಯ ಮಾಡಬೇಕೆಂದೂ, ಅದಕ್ಕೆ ತಗಲುವ ಯಾವತ್ತೂ ಖರ್ಚು ಸರಕಾರದಿಂದ ಸಿಗುವದೆಂದೂ, ಸರಕಾರಕ್ಕೆ ನೆರವಾದವರಿಗೆಲ್ಲ ಪಾರಿತೋಷಕ ಕೊಡುವದೆಂದೂ ಹೇಳಿದರು. ಅದರಂತೆ ನಾನ ಕೈದ ಖಾಸಿ ಮುಲ್ಕ ಮಂಡಳ; ಅಂದರೆ ಹಿಂದೀ ರಾಜನಿಷ್ಠ ಯುವಕ ಮಂಡಳವನ್ನು ಸ್ಥಾಪಿಸಿ ಅದರ ಅಧ್ಯಕ್ಷನಾದೆನು. ಡೆಪ್ಯುಟಿ ಕಮಿಶನರರ ಅಪ್ಪಣೆಯಂತೆ ಅದಕ್ಕೆ ಸಭಾಸದರನ್ನು ನೇಮಿಸಿಕೊಂಡು, ನಾನು ಅಧ್ಯಕ್ಷನಾದೆನು. ಸರಕಾರಿ ಅಧಿಕಾರಸ್ಥರ ಅಪ್ಪಣೆಯನ್ನು ಮುಂದಾಗಿ ಪಡಕೊಂಡು ಗೋಡೆಗೆ ಹಚ್ಚುವ ದೊಡ್ಡ ದೊಡ್ಡ ಜಾಹೀರಾತುಗಳನ್ನೂ, ಹಸ್ತಪತ್ರಿಕೆಗಳನ್ನೂ ಹೊರಡಿಸಿದೆನು. ಈ ಹಸ್ತಪತ್ರಿಕೆಗಳಿಗೆ ಪಂಜಾಬ ಸರಕಾರದ ಕಾರ್ಯದರ್ಶಿಗಳು ಸಹ ಪ್ರಶಂಸೆ ಮಾಡಿದ್ದಾರೆ. ನಾನು ಮಾಡಿದ ಸರಕಾರಿ ಸೇವೆಯನ್ನು ಅಮೃತಸರದ ಸೆಶನ್ಸ ಜಜ್ಜರು ನನ್ನ ಮೇಲಾದ ಖಟ್ಲೆಯಲ್ಲಿ ಹೊಗಳಿದ್ದಾರೆ. ಪ್ರಚಾರದ ಖರ್ಚನ್ನು ನಾನು ಮೊದಲು ಪೂರೈಸಬೇಕು, ಆ ಮೇಲೆ ಸರಕಾರವು ತೆರುವದು, ಹೀಗೆ ನನಗೆ ಅಭಿವಚನವಿತ್ತು. ಸರಕಾರದ ಪಕ್ಷಪಾತಿಯಾಗಿ ನಾನು ನಡಿಸುತ್ತಿರುವ ಪ್ರಚಾರಕಾರ್ಯದಿಂದ ನನ್ನ ಮೇಲೆ ಹಿಂದೀಯರು ದ್ವೇಷ ಹಿಡಿದರು. ನನ್ನಮನೆಯ ಮುಂದೆ ಪಿಕೆಟಿಂಗು ನಡೆಯಿತು. ಪೋಲೀಸರು ನನ್ನ ಮೇಲೆ ಸಂಶಯ ಹಿಡಿದು ನನ್ನ ಮನೆಯ ಝಡತಿ ಮಾಡಿ ಸರಕಾರಿ ಅಧಿಕಾರಿಗಳು ನನಗೆ ಬರೆದ ಗುಪ್ತ ಕಾಗದ-ಪತ್ರಗಳನ್ನು ಒಯ್ದರು. ಆ ಕುರಿತು ನಾನು ಸರಕಾರದ ಕಡೆ ದೂರಿಕೊಂಡೆ, ಅವು ನನಗೆ ಇನ್ನೂ ಸಿಕ್ಕಿಲ್ಲ. ಪೋಲೀಸರು ನನಗ ಬದ-ಲೋಕರ ರಜಿಸ್ಟರದಲ್ಲಿ ಸೇರಿಸಿ ನನಗೆ ಪೀಡಿಸ ಹತ್ತಿದರು. ನಾ! ಗವ್ಹರ್ನರರ ಕಡೆ ದೂರಿಕೊಂಡ ಬಳಿಕ, ನನ್ನ ಹೆಸರು ಆ ರಜಿಸ್ಟರದೊಳಗಿಂದ ತೆಗೆದರು. ನನಗೆ ಅಂತು ೭೦ ಸಾವಿರ ರೂಪಾಯಿ ಖರ್ಚು ಬಂತು, ೩೦ ಸಾವಿರ ರೂಪಾಯಿ ನನ್ನ ಇನಾಮಿನ ಬಗ್ಗೆ ಬರಬೇಕು. ಅಂತು ೧ ಲಕ್ಷ ರೂಪಾಯಿಗಳನ್ನು ೩ ತಿಂಗಳುಗಳಲ್ಲಿ ಸಲ್ಲಾಯಿಸದಿದ್ದರೆ ಭಾರತ ಮಂತ್ರಿಗಳ ಮೇಲೆ ದಾವೆ ಹೂಡುತ್ತೇನೆ" ನೋಟೀಸಿನಿಂದ ಎಷ್ಟು ದೊಡ್ಡ ಕಾರಸ್ಥಾನ ಬೈಲಿಗ ಬಂತು ನೋಡಿ!!

ಸಾವಿಗ ! ...ಲ್ಲ ಅವಿಕೆಸಾಧಿಕ್ಕರಿದ... "...

ಪುರವಣಿ— ಕಾನಡಾವೃತ್ತ— ಸೋಮವಾರ, ತಾರೀಖು ೯ ಮಾಹೆ ಜುಲೈ ಸನ್ ೧೯೩೪ನೇ ಇಸವಿ.

ವೃತ್ತಸಾರ.

— ಜೂನ ತಿಂಗಳಲ್ಲಿ ಲಾಹೋರ 'ಹೈಕೋರ್ಟನೊಳಗೆ' ಸಿವಿಲ ರೀತಿಯಾದ ಒಂದು ದಾವೆಯ ಹಕೀಕತ ಜೋಡಿಸ್ಪದವಿದೆ. ಪಂಜಾಬ ಪ್ರಾಂತದ ಶಹಾಪುರ ಜಿಲ್ಲೆಯೊಳಗಿನ ಜಮೀನದಾರರೊಬ್ಬರು ಗ್ರಾಮ ಸಾವಕಾರರ ಕಡೆಯಿಂದ ೬೦೦ ರೂಪಾಯಿ ಸಾಲ ತೆಗೆದು ತಮ್ಮ ಭೂಮಿಯನ್ನು ಭೋಗ್ಯಕ್ಕಾಗಿ ಅವನಿಗೆ ಕೊಟ್ಟರು. ಇದರಮೇಲೆ ರೂ ೩೦೦ಕ್ಕೆ ಬಡ್ಡಿಯಿಲ್ಲ, ೩೦೦ಕ್ಕೆ ಮಾತ್ರ ಚಕ್ರಬಡ್ಡಿ! ೪೬ ವರ್ಷಗಳ ಮೇಲೆ ಭೂಮಿ ಬಿಡಿಸಿಕೊಳ್ಳುವದಕ್ಕಾಗಿ ಜಮೀನದಾರರ ಪುತ್ರ ಶಹಾಪುರದ ಸಬಜಜ್ಜ ಕೋರ್ಟಿನಲ್ಲಿ ದಾವೆ ಮಾಡಿದರು. ಚಕ್ರಬಡ್ಡಿಯಿಂದ ರೂ ೩೦೦ರ ರಕಮು ರೂ. ೯೩೦೦ಕ್ಕೆ ಏರಿತು. ಅದಕ್ಕೆ ಬಡ್ಡಿಯಿಲ್ಲದ ಅಸಲು ರೂ ೩೦೦ನ್ನು ಕೂಡಿಸಿ, ರೂ ೯೬೦೦ ಕೊಟ್ಟು ಜಮೀನದಾರರು ಭೂಮಿ ಬಿಡಿಸಿಕೊಳ್ಳಬೇಕೆಂದು ಸಬಜಜ್ಜರ ತೀರ್ಪ. ಇದರ ಮೇಲೆ ಜಮೀನದಾರರು ಲಾಹೋರ ಹೈಕೋರ್ಟಿಗೆ ಮಾಡಿದ ಅಪೀಲನ್ನು ನ್ಯಾ| ಮಿ. ಎಲ್ಬನ್ ಹಾಗು ... ದೀನ ಮಹಮ್ಮದರವರು ವಿಚಾರಿಸಿ ರೂ ೩೦೦ಕ್ಕೆ ಮಿಕ್ಕಿ ಬಡ್ಡಿ ಸಿಗಲಾಗದೆಂದು ಅಭಿಪ್ರಾಯ ಪಟ್ಟು, ರೂ ೯೦೦ನ್ನು ತೆಗೆದು ಜಮೀನು ಬಿಟ್ಟುಕೊಡಬೇಕೆಂದು ನಿರ್ಣಯಿಸಿದ್ದಾರೆ ಬಡ್ಡಿಯ-ಬಡ್ಡಿ ಲೆಕ್ಕ ನೋಡಿರಿ!! ಪಂಜಾಬ ಪ್ರಾಂತದಲ್ಲಿ ಮುಂಬಯಿ ಇಲಾಖೆಯೊಳಗಿನ ದೃಢ ಕಾಯದೆ ಇರುವದಿಲ್ಲ, ಇದ್ದರೆ ಬಡ್ಡಿಗೆ ಬಡ್ಡಿ ತಿನುವದಿಲ್ಲಾಗಿತ್ತು.

— ಬ್ರಿಟಿಶ ಸರಕಾರಕ್ಕೂ, ಚೀನ ಸರಕಾರಕ್ಕೂ ಸೀಮೆಯ ಪ್ರದೇಶದ ತಂಟೆಯಾಗಿದೆ 'ಪ್ಯಾನ್‌ಲ್ಯಾನ' ಪ್ರದೇಶವು ಬ್ರಹ್ಮದೇಶ ಹಾಗು ಚೀನ ಸರಕಾರದ ಗಡಿಪ್ರದೇಶವು, ಅದರ ಆಚೆಗೆ ಚೀನ ದೇಶ, ಈಚೆಗೆ ಬ್ರಹ್ಮದೇಶ ಈ ಪ್ರದೇಶವು ಬ್ರಹ್ಮದೇಶದೊಳಗೆ ಸೇರುತ್ತದೆ ಈ ಪ್ರದೇಶದಲ್ಲಿ ಖನಿಜ ವಸ್ತುಗಳಿವೆ. ಅವುಗಳ ಶೋಧಕ್ಕಾಗಿ ಬ್ರಹ್ಮದೇಶ ಸರಕಾರವು ಶೋಧಕರಿಗೆ ಆ ಪ್ರದೇಶಕ್ಕೆ ಕಳಿಸಿದ. ಚೀನಿಯರು ಆ ಭಾಗವು ತಮ್ಮದೆಂದು ಅನ್ನುತಿದ್ದರು, ಅದರಿಂದ ಬ್ರಿಟಿಶ ಸೈನಿಕರಿಗೂ, ಚೀನಿಯರಿಗೂ ಜಗಳವಾಗಿ ಸಣ್ಣ ಯುದ್ಧವಾಯಿತು ಕೆಲ ಚೀನಿಯರು ಮಡಿದರಂತೆ. ಬ್ರಿಟಿಶರಿಗೇನೂ ಅಪಾಯವಾಗಲಿಲ್ಲ ಅಷ್ಟರಲ್ಲಿ ಈ ಪ್ರದೇಶದೊಳಗೆ ತೆರಳಿಸಲ್ಪಟ್ಟ ಮಳೆ ನಿಂತಿತು ಅದರಿಂದ ಈ ಪ್ರದೇಶದೊಳಗಿನ ಜಗಳ ನಿಂತಿದೆ ಬ್ರಿಟಿಶ ಸರಕಾರಕ್ಕೂ, ಚೀನ ಸರಕಾರಕ್ಕೂ ಪತ್ರವ್ಯವಹಾರ ನಡೆಯುತ್ತಿದ್ದು ಚೀನ ಸರಕಾರವು ತಮ್ಮ ಸೈನ್ಯವನ್ನು ಹಿಂತೆಗೆದುಕೊಳ್ಳುವ ಅಭಿವಚನ ಕೊಟ್ಟಿರುವದಾಗಿ ತಿಳಿಯುತ್ತದೆ.

— ನವಾನಗರದ ಜಾಮ ಸಾಹೇಬರು ಮುಂಬಯಿಯ 'ತಾಜಮಹಾಲ ಹೊಟೆಲ'ದಲ್ಲಿ ಠಿಕಾಣಿ ಮಾಡಿದ್ದಾಗ ಬೀಗಯಲ್ಲ ಬಿಟ್ಟ ರಕ್ಷಕರ ಲಕ್ಷಕರಿಗೆ ಕೊಟ್ಟುಕೊಂಡಿದ್ದಾರಂತೆ ಒಂದು ಮುತ್ತಿನ ಸರವನ್ನು ಕೊಂಡುಕೊಳ್ಳುವವರಿಗಾಗಿ ಅವರು ಮುಂಬೈ ತನಕ ಸ್ವತಃ ಬಂದಿರುತ್ತಾರೆ. ಘೂ... ೨-೩ ಲಕ್ಷಬಿದ್ದರೂ ಕೊಡಲು ಜಾಮಸಾಹೇಬರು ಸಿದ್ಧರೇ! ಸದ್ಯಕ್ಕೆ ಜಾಮಸಾಹೇಬರಿಗೆ ಹಣದ ಅಡಚಣೆಯಿಂದು ೨೫ ಲಕ್ಷ ರೂಪಾಯಿಗಳನ್ನು ಹಿಂದುಸ್ಥಾನ ಸರಕಾರವು ಸಾಲ ಕೊಟ್ಟಿದೆ ಸಂಸ್ಥಾನಿಕರ ಕಡೆ ಹಣವಿಲ್ಲದಿದ್ದಲ್ಲಿ ಲಕ್ಷಾವಧಿ ರೂಪಾಯಿ ಖರ್ಚು ಮಾಡಿ ಮುತ್ತಿನ-ಸರ-ಮೊದಲಾದ-ಭೂಷಣ ಕೊಂಡುಕೊಳ್ಳಲು ಹಣವೆಲ್ಲಿಂದ ಬಂತು? ಸಾಲ ಕೊಂಡದ್ದು 'ಪ್ರೊಡಕ್ಟಿವ್ ಪರ್ಪಜೆಸ' ಯಾನೆ ಉತ್ಪಾದಕ ಕಾರ್ಯಗಳಿಗೆಂದು ಹಿಂದುಸ್ಥಾನ ಸರಕಾರವು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಹೇಳಿದೆ. ಇದೇನು ಜೋಡ್ಯವೆಂದು ಸುದ್ದಿಗಾರರ ಸವಾಲು

— ಪ್ರೆಂಚ ಮ್ಯುನಿಸಿಪಾಲಿಟಿಯ ಮಾನಪತ್ರ ಅರ್ಪಣದ ಸಮಯ ಬಾಂಬು ಹಾರಿಸಿದ ಘಾತಕಿಯು ಪತ್ತೆ ಇನ್ನೂ ಆಗಲಿಲ್ಲ ಇದರ ಪತ್ತೆ ಹಚ್ಚಿಕೊಡುವವರಿಗೆ ರೂ. ೧೦೦೦ದ ಇನಾಮು ಕೊಡಲಾಗಿ ಪೋಲೀಸ ಇಲಾಖೆಯವರು ಪ್ರಕಟಣೆ ಹೊರಡಿಸಿದ್ದಾರೆ.

— ಜಗತ್ತಿನಲ್ಲಿ ಹಿರಿಯನೆಂದು ಖ್ಯಾತಿಹೊಂದಿದ ಇಸ್ತಂಬೂಲದೊಳಗಿನ ಜೊರೊ ಆಗಾದವರು ಕಳೆದ ಶುಕ್ರವಾರ ಇಸ್ತಂಬೂಲದಲ್ಲಿ ತೀರಿಕೊಂಡರು ಇವರ ಪ್ರಾಯ ೧೬೦ ವರ್ಷ. ನೆಪೋಲಿಯನ್‌ದೊರೆ ನಡೆಸಿದ ಯುದ್ಧಗಳಲ್ಲಿ ಇವರು ತುರ್ಕಸ್ಥಾನದ ಪರವಾಗಿ ಕಾದಾಡಿದ್ದಾರೆ ಇವರು ೧೧ ಬಾರಿ ಮದುವೆಯಾದರು. ಮಕ್ಕಳು ಮೊಮ್ಮಕ್ಕಳು, ಮರಿಮಕ್ಕಳು ಎಲ್ಲರೂ ಜೊರೊ ಆಗಾದವರಿಗೆ ಉಪಚಾರ ಮಾಡಿದಾಗ್ಯೂ ಅವರಿಗೆ ಬದುಕಿಸಿಕೊಳ್ಳಲಾಗಲಿಲ್ಲ. ೬೮ ವರ್ಷ ಪ್ರಾಯದ ಮಗನ ... ನೇ ಹೆಂಡತಿಯೂ ಹಾಸಿಗೆಯ ಬಳಿ ಬಹು ಚಿಂತಾತುರರಾಗಿ ಕಾದುಕೊಂಡು ಉಪಚಾರ ನಡೆಸಿದರು, ಆದಾಗ್ಯೂ ಅವರು ಬದುಕಲಿಲ್ಲ ಇವರ ಪ್ರಾಯದ ಕುರಿತು ನಡೆದ ಚರ್ಚೆಯೇ ಇವರ ಮರಣಕ್ಕೆ ಕಾರಣವಾಯಿತೆಂದು ೬೮ ವರ್ಷ ಪ್ರಾಯದ ... ಇವರ ೧೬೦ ವರ್ಷವೆಂದು ಪ್ರಕಟವಾಯಿತಂತೆ; ಇದರಿಂದ ಆಗಾರವರಿಗೆ ಮಹಾಘಾತವಾದಂತಾಯಿತು, ಜ್ವರ ಬಂದು ಕಳೆದ ಶುಕ್ರವಾರ ಪ್ರಾಣ ತೊರೆದು ತೀರಿಕೊಂಡರು ಯಮನಿಗೊಂದು ನಮ !!

— ಶ್ರೀ ಕ್ಷೇತ್ರ ಹರಿದ್ವಾರದಿಂದ ಶ್ರೀ ಕ್ಷೇತ್ರ ಬದರೀನಾಥಕ್ಕೆ ಯಾತ್ರೆ ಮಾಡಲು ಈಗ ಬಹಳ ಅನುಕೂಲತೆಯಾಗಿದೆ ಮುಂಚೆ ಈ ಯಾತ್ರೆಗೆ ೨೦ ದಿವಸ ತಗಲುತ್ತಿತ್ತು, ಗುಡ್ಡ ಹತ್ತಿ ಹೋಗಬೇಕಾಗಿದ್ದು ಹಲವು ದಿವಸಗಳ ಈ ಯಾತ್ರೆ ಮಾಡಬೇಕಾದರೆ ಸಾಕುಬೇಕಾಗುತ್ತಿತ್ತು. ಈಗ ೫೦ ಮಿನಿಟುಗಳಲ್ಲಿ ಹರಿದ್ವಾರದಿಂದ ಬದರೀನಾಥಕ್ಕೆ ಹಾರಿಹೋಗಬಹುದು!! ಖರ್ಚು ಒಬ್ಬರಿಗೆ ರೂ. ೨೫೦! ಮತ್ತು ... ಯಾತ್ರೆಯಾಗುತ್ತದೆ!! ಶ್ರೀ ಬದರೀನಾಥನ ದರ್ಶನ ಪಡೆಯಬೇಕೆಂದು ಇದ್ದವರಿಗೆ ಈಗ ಬಹು ಸುಲಭವಾಯಿತು!

— ಪ್ಯಾರಿಸದಲ್ಲಿನ ಮಿಸೆಸ್ ಫ್ರಾಂಸಿಸ್ ಡಿಮೊಲಿ-ಪಿಡೇನ ಇಸ್ಲಾಮ ಸಂಸ್ಥೆಯ ಪ್ರಮುಖರ ಪ್ರೋತ್ಸಾಹದಿಂದ ಇಸ್ಲಾಮು ಧರ್ಮದ ದೀಕ್ಷೆ ತೆಗೆದುಕೊಂಡಿದಾರೆ. "ನಾನು ಪವಿತ್ರ ಕುರಾನ ಗ್ರಂಥವನ್ನು ಓದಿದ್ದೇನೆ, ದೇವದೂತ ಪೈಗಂಬರರ ಚರಿತ್ರೆಯನ್ನು ಓದಿದ್ದೇನೆ ಇಸ್ಲಾಮು ಧರ್ಮದಲ್ಲಿ ವಿಧಿಸಿದಂತೆ ಇಸ್ಲಾಮು ಧರ್ಮದವರು ನಡೆದುಕೊಂಡಲ್ಲಿ ಮಾನವಕೋಟಿಗೆ ಬಹು ಕಲ್ಯಾಣವಾಗುವದು ಇಸ್ಲಾಮು ಧರ್ಮದ ತತ್ವಗಳ ವಿಚಾರದಿಂದ ಇಸ್ಲಾಮು ಧರ್ಮವು ಶ್ರೇಷ್ಠ ತರಗತಿಯ ಧರ್ಮಗಳಲ್ಲಿ ನಿಸ್ಸಂದೇಹವಾಗಿ ಸೇರುತ್ತದೆ."

— ಅಫಘಾನಿಸ್ಥಾನದಲ್ಲಿ ಸರಿಕಟ್ಟ ಕೈಸರ ಪ್ರದೇಶದಲ್ಲಿ ೧೫ ಜನರು ಸತ್ತುಹೋದರು, ೬-೭ ಸಾವಿರ ದನ ತೀರಿಹೋದವು. ೫ ಮನೆಗಳು ಬಿದ್ದುಹೋದವು ಸರಕಾರವು ನಿರಾಶ್ರಿತರಿಗೆ ತತ್ಪರತೆಯಿಂದ ಸಹಾಯ ಮಾಡಿತು. ಅಫಘಾನಿಸ್ಥಾನದಲ್ಲಿ ಈಗಿನ ಸರಕಾರವು ಪ್ರಜೆಗಳ ಸಂವರ್ಧನ್ಯದಯ ಮಾಡಲು ಬಹಳ ದುಡಿಯುತ್ತದೆ. ಬೇಸಿಗೆಯಲ್ಲಿ ಮಜಾರ ಶರೀಫ ಪ್ರದೇಶದೊಳಗೆ ೪೩ ಸಾವಿರ ಹಣ್ಣು-ಹಂಪಲಗಳ ಗಿಡಗಳು ಹಚ್ಚಲ್ಪಟ್ಟವು. ಸರಕಾರದ ಪ್ರಯತ್ನದಿಂದ ಮಿಡಿತೆಗಳ ಹಾವಳಿ ಕಡಿಮೆಯಾಗಿ ತೋಟಗಳ ಬೆಳೆ ಪ್ರಜೆಗಳ ಕೈಸೇರಿತು. ಈ ಬಾರಿ ಬೆಳೆ ಚನ್ನಾಗಿದೆ, ಇತ್ತಕಡೆ ಇಂಥ ಬೆಳೆಯಾಗಲಿಲ್ಲವೆಂದು ಹೇಳುತ್ತಾರೆ.

ಸಿಟ್ರೋದಿಲ್ ಬಹಾರ ನೋಡಲಿಕ್ಕೆ ಮರೆಯಬೇಡಿರಿ!

ಸಿಟ್ರೋದಿಲ್ ಬಹಾರದಿಂದ ಆಕರ್ಷಕವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಮುನ್ನದ ಸ್ಥಳ ...

THE ANGLO INDIAN DRUG & CHEMICAL CO.,
POST BOX 2082 BOMBAY No 2



ಈಗಿನ ದಿನಮಾನದಲ್ಲಿ ಹಳ್ಳಿಯೊಳಗಿನ ಪ್ರತಿ ಒಂದು ಕುಟುಂಬದವರು
ಈ ಪೆಟ್ಟಿಗೆಯನ್ನು ಕೊಂಡಿಟ್ಟುಕೊಳ್ಳುವದವಶ್ಯ.

ಡಾ॥ ಹಳ್ದಾರ ಇವರ

ಕುಟುಂಬವೈದ್ಯ.

"ಕುಟುಂಬವೈದ್ಯ"ವೆಂದರೆ, ಕುಟುಂಬದಲ್ಲಿ ಆಗುವ ಸಾಮಾನ್ಯ ಬೇನೆಗಳ [illegible] ಔಷಧಗಳನ್ನು [illegible] ಪೆಟ್ಟಿಗೆ. ಈ ಪೆಟ್ಟಿಗೆಯಲ್ಲಿ ಈ ಕೆಳಗೆ ವಿವರಿಸಿದ [illegible] ಮದ್ದುಗಳಿವೆ. [illegible] ಉಪಯೋಗಿಸುವ ಕ್ರಮ ಆಯಾ ಔಷಧದ ಮುಂದೆ ಬರೆದದೆ, ಅದರಂತೆ ಉಪಯೋಗಿಸಿದ್ದಲ್ಲಿ ಆಯಾ ರೋಗಗಳು ಶಮನವಾಗುತ್ತವೆ.

೧ ಅಮೃತ ಬಿಂದು.

ಎಲ್ಲ ತರದ ಜ್ವರಗಳ ಮೇಲೆ ಇದನ್ನು ಉಪಯೋಗಿಸಬಹುದು. ಈ ಕೆಳಗೆ [illegible] ವಯೋಮಾನದ ಪ್ರಕಾರ [illegible] ಕಾಸಿ ಆರಿಸಿದ ನೀರಿನಲ್ಲಿ ಹಾಕಿ ದಿನಾ ಮೂರಾವರ್ತಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಆಹಾರ ಕೊಂಡ [illegible] ತಾಸಿನ ಮೇಲೆ ಕೊಡಬೇಕು.

ವರ್ಷ	ಹುಂದು	ಕಾಸಾರಿದ ನೀರು
೧ರಿಂದ ೫	೫	೧ ಚಮಚ
೫ರಿಂದ ೧೦	೧೦	೨ ,,
೧೦ಕ್ಕ ಮಿಕ್ಕಿದವರಿಗೆ	೩೦	೩ ,,

ಸೂಚನೆ — [illegible] ಪದಾರ್ಥ, ಮಜ್ಜಿಗೆ [illegible] [illegible] ಬೇಕು

೨ ದಶಮೂಲ ಮಿಶ್ರಣ.

ನೆಗಡಿ, ಕೆಮ್ಮು, ನೆಗಡಿ, ಇದ್ದರೆ, ಎದೆನೋವು [illegible] ಇದನ್ನು ಸೇವಿಸುವ ಪ್ರಮಾಣ ಮೇಲೆ 'ಅಮೃತ ಬಿಂದು'ವಿಗೆ ಬರೆದಂತೆ. ಈ ಮಿಶ್ರಣ [illegible] ಕಫನಾಶಕ ವಟಿಯನ್ನು [illegible] ಸಂಗಡ ಮಿಶ್ರಣ ಮಾಡಿ ಕೊಳ್ಳಬೇಕು.
ಕಫನಾಶಕ ವಟಿಯನ್ನು ಸೇವಿಸುವ ಪ್ರಮಾಣ [illegible] ಸಣ್ಣ ಹುಡುಗರಿಂದ ೧೦ ವರ್ಷದ ವರೆಗೆ ದಿನ [illegible] ೨ ಭಾಗ ಮಾಡಿಕೊಳ್ಳಬೇಕು. ೧೦ ವರ್ಷಕ್ಕೆ ಮಿಕ್ಕಿದವರು [illegible] ಭಾಗ ಮಾಡಿ [illegible] ಕೊಳ್ಳಬೇಕು.

೩ ಕಫನಾಶಕ ವಟಿ.

ಸೇವಿಸುವ ಕ್ರಮ ಮೇಲೆ ಬರೆದದೆ.

೪ ಅಜವಾನ ಅರ್ಕ.

ಹೊಟ್ಟೆಯಲ್ಲಿ ಆಗುವ ಯಾವತ್ತೂ ವಾಯುವಿಕಾರಗಳನ್ನು [illegible] ಹೊಟ್ಟೆ ಉಬ್ಬಿ ಬರುವದು, ತೇಗುವದು, ಅಜೀರ್ಣ ಮೊದಲಾದ ವಿಕಾರವಾದಾಗ ಇದನ್ನು ಮೇಲೆ ಬರೆದ 'ಅಮೃತ ಬಿಂದು'ವಿನ ಪ್ರಮಾಣದಂತೆ ಸೇವಿಸುವದು.
ಸೂಚನೆ — ಮಜ್ಜಿಗೆ [illegible] ತೆಗೆದುಕೊಳ್ಳಬೇಕು, ಹಾಲು [illegible] ತೆಗೆದುಕೊಳ್ಳಬಾರದು.

೫ ಸೇತುಬಂಧನಮಿಶ್ರಣ.

ಅತಿಸಾರ, ಹೊಟ್ಟೆಯೊರಕಡೆ, ಆಮಾಂಶ, ಗ್ರಹಿಣಿ ಮೊದಲಾದ ವಿಕಾರಗಳ ಮೇಲೆ 'ಅಮೃತಬಿಂದು'ವಿಗೆ ಬರೆದ ಪ್ರಮಾಣದಂತೆ ಸೇವಿಸಿದರೆ ಕೂಡಲೇ ಗುಣವಾಗುತ್ತದೆ.

ಸೂಚನೆ— ಮಜ್ಜಿಗೆ, [illegible] ತಗೆ ರಸ, [illegible] ಇವನ್ನು ತೆಗೆದುಕೊಳ್ಳತಕ್ಕದ್ದು. ಹಾಸಿಗೆಯ ಮೇಲೆ ಬಿದ್ದುಕೊಂಡಿರಬೇಕು. ಅವಶ್ಯಕ ಹೊಟ್ಟೆಗೆ ಹಾಲು ಕೊಡಬಾರದು.

೬ ಸೇತುಬಂಧನ ವಟಿ

ಮೇಲಿನ ಮಿಶ್ರಣ ತೆಗೆದುಕೊಂಡ [illegible] ತಾಸಿನಲ್ಲಿ ಈ ವಟಿಯನ್ನು ಕಫನಾಶಕ ವಟಿಗಳ ಪ್ರಮಾಣದಂತೆ ಮಜ್ಜಿಗೆಯಲ್ಲಿ ತೇದಿ ದಿನಾ ೩ ಸಲ ಕೊಳ್ಳುವದು.

೭ ನೇತ್ರಾನಂದ ತೈಲ.

ತಲೆನೋವು, ಕಣ್ಣು ಉರಿ, ಕಣ್ಣಿನಿಂದ ನೀರು ಸುರಿಯುವದು, ಹೂವು, ಪರೆ ಮೊದಲಾದ ನೇತ್ರ ರೋಗಗಳು ದೂರವಾಗುತ್ತವೆ. [illegible] ಬೀಳುವದು. ತಲೆ ಕೂದಲು ಉದುರುವವರಿಗೆ ದಿವ್ಯವದ! ದಿನಾ ಬೆಳಿಗ್ಗೆ-ಸಂಜೆ ತಲೆಗೆ ಹಾಕಿ [illegible] ಬೇಕು.

೮ ಶಿರೋವೇದಹರ ವಟಿ.

ಅರೆತಲೆನೋವು, ತಲೆನೋವು, ತಲೆಸಿಡಿತ ಮೊದಲಾದ ವಿವಿಧ ತಲೆನೋವುಗಳಾದಾಗ ೧ ವಟಿ [illegible] ತಣ್ಣೀರು ಕುಡಿಯುವದು.

೯ ಬಾಲಸಂಜೀವಿನಿ ವಟಿ.

ಮಕ್ಕಳ ಎಲ್ಲಾ ತರದ ಬಾಲಗ್ರಹ ವಿಕಾರಗಳಿಗೆ ಇವನ್ನು ಜೇನುತುಪ್ಪದಲ್ಲಿ ತೇದಿ ನೆಕ್ಕಿಸುವದು, [illegible] ತುಳಸೀ ರಸದಲ್ಲಿ ತೇದಿ ಕೊಡಬೇಕು.
ಪ್ರಮಾಣ — ೧ ವರ್ಷದ ಕೆಳಗಿನ ಕೂಸುಗಳಿಗೆ ೧ ವಟಿಯನ್ನು ೬ ಭಾಗ ಮಾಡಿ ದಿವಸಕ್ಕೆ ೩ ಭಾಗ ಕೊಡುವದು. [illegible]ರಿಂದ ೫ ವರ್ಷದ ವರೆಗೆ [illegible] ಮಾಡಿ ೩ ಸರ್ತಿ ಕೊಡತಕ್ಕದ್ದು.

☞ ಈ ಕೆಳಗಿನ ೧೦-೧೧-೧೨ನೇ ಔಷಧಗಳು ವಿಷಕಾರಿ. ಅವು ಹೊಟ್ಟೆಗೆ ಹೋಗಕೂಡದು.

೧೦ **ದಂತ ಸಂಜೀವಿನಿ**— ಹಲ್ಲು ನೋವು, ಹಲ್ಲು [illegible], ವಸಡು ಉಬ್ಬುವದು ಮೊದಲಾದವುಗಳಿಗೆ [illegible] ಹತ್ತಿಯಲ್ಲಿ [illegible] ದಂತಸಂಜೀವಿನಿಯನ್ನು ಹಾಕಿ ನೋವಿನ ಸ್ಥಳದಲ್ಲಿ ಜಾಗ್ರತೆಯಿಂದ ಇಡುವದು. ಹೊಟ್ಟೆಯಲ್ಲಿ [illegible] ಬಾರದು.

೧೧ **ವ್ರಣನಿವಾರಿಣಿ**— ಈ ಪುಡಿಯನ್ನು ಬಿದ್ದ ಪೆಟ್ಟು, ಕಡಿದ ಗಾಯ ಮೊದಲಾದ ವ್ರಣಗಳಿಗೆ ಹಚ್ಚುವದು.

೧೨ **ಲೂತಿ ಚೂರ್ಣ**— ಗಜಕರ್ಣ, ಇಸಬು, ತದ್ದು, ಕಜ್ಜಿ ಮೊದಲಾದ ಚರ್ಮ ರೋಗಗಳಿಗೆ [illegible]ಯಲ್ಲಿ ಕಲಿಸಿ ಹಚ್ಚುವದು.

ಬೆಲೆ ರೂ. ೩—೦—೦ **ಡಾ॥ ಎಸ್. ಕೇ. ಭಟ್ಟ ಹಳ್ದಾರ, ಕುಮಟಾ.** (ಉ. ಕಾನಡಾ)

ಶಿರಸಿಯಲ್ಲಿ ಸಿಗುವ ಸ್ಥಳ— ಚನ್ನಪಟ್ಟಣದಲ್ಲಿರುವ ಮು॥ ರಾ॥ ದೇವರ ಭಟ್ಟರ ದುಕಾನಿನಲ್ಲಿ

[illegible] ಕುಮಟಾ]

ರೂಪಾಯಿ ಕೊಟ್ಟವರಿಗೆ [illegible]
[illegible] ಒಂದು ಭಾಗ ಬಿದ್ದು [illegible] — ಪಂಡಿತ [illegible] ವಲಗಾವ ಜೈಲ್

ಸಾನ್ನಿಧ್ಯ!

ಶ್ರೀ ಪಮನಂತ — ಎನ್ ಪಡೀಕ, ಬಿ

ರಾತ್ರಿಯಲ್ಲಾ ನಿದ್ರೆ ಇರಲಿಲ್ಲ ಕಾರ್ಯಕ್ಷಣ ನನ್ನ ಕಣ್ಣು ಹೃದಯವು ತವಕಗೊಂಡಿತ್ತು. ನನ್ನ ಅವರದಾಗಿತ್ತು "

ಏರಿಳಂದ ಬೆಳಗ ನಸುಕು ಕೆಲ್ಲಿ ಪ್ರಾರ್ಥನಾ ಮುಗಿಯಿತು ಅವರು ಸಿರಾಕ ನಕ್ಕು ತರಳಿದರು

ಅದೇ ಮೇಲೆ ಎರಿಯುವರೆಗೆ ಅವರ ಕಡೆ ಯಂತ ಕರಳಿಂದು ಸಿರಿಸ್ಕಿಸಿದ ಸಮಯವು ಸಹಾ ಸಿಸಿತಂದು ಮನವು ಹರ್ಷಗೊಂಡಿತ ನಮ್ಮನ್ನು ಕರಕರೆಂದು ಅವರು ಒಳ್ಳೆ ಹೋದರು

ಗಾರ್ಡಿಯಲ್ಲಿ ಒಂದು ಪ್ರದೀಪವೊಂದು ಉರಿ ಯುತ್ತಿತ್ತು ಅದರ ಬೆಳಕು ಒಳದಾಗಿತ್ತು ಆಸು ದ ಎಡಬದಿಯಲ್ಲಿ ಇಬ್ಬರು ವನಿತೆಯರು ಪತ್ರ್ರದಿಗ ಳನ್ನು ಸರ್ಗಾಸ ಸ್ವರದಲ್ಲಿ ಮಗ್ನರಾಗಿದ್ದರ ಸಾಸ್ತ ಸರಿ ಬಳಿ ನಗದಲ್ಲ ಕುಳಿತುಕೊಂಡವು ಲಕ್ಷ ಮಿಸಲಿರುವ ತಣ್ಣಬಿರಸನ್ನು ಅಟಕಿಯಾಗಿದೆ ಕಾ ಣಬರುದಾಗಿತ್ತು

ನಾನು ನೀಲಾಕಾಶದಲ್ಲಿಯ ಚಂದ್ರನನ್ನು ನೋಡು ತ್ತ ಇದ್ದು ಒಮ್ಮೆ ಹಾತೊರೆಗಿರಲಿಲ್ಲ ಎಷ್ಟರಲ್ಲ ನಾವ ಗಾ ಸನ್ನಳವು ಕಾಣಿಸಿತು ಎದ ಬದಿತವು ಇನ್ನೂ ಬೆಳ್ಳಾಯಿತು ಮರು ಕ್ಷಣದಲ್ಲಿಯೇ ಮಹಾತ್ಮರು ಬಂದು ತಮ್ಮ ಸೀಠದಲ್ಲಿ ವಿರಾಜಮಾನರಾದರು

ನಿರಾಡಂಬರ ಹಾಲ್ಜೇನು-ಹಣ್ಣು ಹಂಪಲು ಗಳ ನೈವೇದ್ಯವನ್ನು ಚಂದು ಸಮರ್ಪಿಸಿದಳು ಅದ ನ್ನು ಸೇವಿಸುತ್ತಿರುವಾಗಲೇ ಶ್ರೀ ಪಾಲಿಜಾಯಿ ದೇಸಾಯಿಯವರು ನನ್ನ ವಿಜ್ಞಾಪನೆಯನ್ನು ಅವ ರಲ್ಲಿ ಅರಿಕೆಮಾಡಿದರು ಅವರ ದೃಷ್ಟಿಯು ನನ್ನ ಕಡೆಗ ಹರಿಯಿತು

ನಾನು ನನ್ನ ಗೀತಾಗ್ರಂಥವನ್ನು ಕನ್ನಡಿ ಸಿದ್ದೇನೆ ಅದನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಿ ಕ್ಕೆ ತಮ್ಮ ಸಮ್ಮತಿಯನ್ನು, ಒಂದೆರಡು ಸಂದೇ ಶವನ್ನು ಬೇಡುತ್ತೇನೆ" ನಾನು ತದಬಡಿಯಿಂದ ನುಡಿದು ವಿಜ್ಞಾಪಿಸಿದೆನು

"ನಮ್ಮ ಗ್ರಂಥಾ ಇಷ್ಟು ಇದೆ ಅದರ ನನಗೆ ನೂ ಕನ್ನಡ ಬರಿಯುವದಿಲ್ಲ! ಕನ್ನಡ ಅನುವಾದವ ನ್ನು ನೋಡದೆ ನಾನು ಏನೆಂದು ಸಂದೇಶ ಕೊಡಲಿ? ನನ್ನಿಂದ ಏದಲ್ಲಿ ವಿಧ್ದುದನ್ನು ನಾನು ಪ್ರಕಟಿ ಸಲೇ?" ಎಂದು ಮಹಾತ್ಮರು ಪ್ರಶ್ನಿಸಿದರು

"ಅವರು ಬರೆಯುತ್ತಿರುವದು ಅನುವಾದವನ್ನು ಕುರಿತು ಪ್ರಶಸ್ತಿಪತ್ರ ವನ್ನಲ್ಲ, ಕನ್ನಡ ವಾಚಕವೃಂದಕ್ಕೆ ಗೀತಾಬೋಧವನ್ನು ರೂಪದಾಗಿ ಅರ್ಪಿಸವಾ ತನ್ಮದಾಂದವಾದ ಸಾರ್ವವಾದ ಸಂದೇಶವನ್ನು" ಎಂದು ನನ್ನ ಪರವಾಗಿ ನನ್ನ ಮಿತ್ರರಾದ ಶ್ರೀ ಎಸ್ ಡಿ ನಾಡಕರ್ಣಿಯವರ ನುಡಿದರು

"ಗೀತೆಯ ಸಂದೇಶವನ್ನು ನಾನು ಈ ಮೊದಲೇ ಒಸಾಕ ಸರ್ತಿ ತಿಳಿಸಿದ್ದೇನೆ ಸಾಮಾನ್ಯವಾಗಿ ಹೇಳು ವದ ದರ ಗೀತೆಯ ವಾಚನವು ವಿಶ್ವವ್ಯಾಪಿಯಾಗ ಬೇಕು (*The reading of the Gita should be universal*)" ಎಂದರು ಮಹಾತ್ಮರ

"ಅದನ್ನೇ ನಮ್ಮ ಹಸ್ತಾಕ್ಷರದಲ್ಲಿ ನಾನು ಬೇಡು ತ್ತಿರುವದು" 'ಅದರಲ್ಲಿ ನನಗೆ ಯಾವ ಔಚಿತ್ಯವೂ ಕಾಣುವದಿಲ್ಲ!" ಗಾಂಧಿಜಿಯವರು ಗಂಭೀರವಾಗಿ ನುಡಿದರು ನಾನು ಸುಮ್ಮನಾದನು

"ಗೀತಾಬೋಧದ ಪ್ರಕಟನೆಯಿಂದ ಅವರು ಯಾವ ಪ್ರತಿಫಲದ ಅಪೇಕ್ಷೆಯನ್ನು ಮಾಡಿಲ್ಲ *It is a labour of love* ಎಸ, ನರವಾಗಿ ನನ್ನ ಮಿತ್ರರು ವಾದಿಸಿದರು

ಈ ಕರಣಾಗಿ (ನನ್ನ ಹಸ್ತಾಕ್ಷರದ ರೂಪದಿಂ ದ ದರೂ) ಪ್ರತಿಫಲದ ಅಪೇಕ್ಷೆಯನ್ನು ಅವರು ಯಾ ಕ ಮಾಡಬೇಕು? ಎಂದು ನ ಡಿದು ಎಗಾಸಕ್ತ — ಯೋಗಿಗಳ ಶ್ರೇಷ್ಠ ಗಾಂಧೀಜಿಯವರು ತಮ್ಮ ಅನಾಸಕ್ತಿಯೋಗದ ಸಂದೇಶವನು ನನ್ನ ಹೃದ ಯಪಟಲದ ಮೇಲೆ ಒತ್ತಿಯಾಗ ಮಾಡಿಬಿಟ್ಟರು ನನ್ನ ಚಿತ್ತ ವಿತ್ತಿಯಲ್ಲಿ ಕ್ರಾಂತಿ ಉಕ್ಕಿರಲು ನನಗ ಸಿಕ್ಕದ ಗಾಂಧಿ ಅವರ ಹ್ಯ ಬರಹದ ಅಪೇಕ್ಷೆ ನಾನ ಯಾಕೆ ಮಾಡಲಿ? ನನ್ನ ಮನಸ್ಸು ಶಾಂತವಾಯಿತು

ಮಹಾತ್ಮರ ದಿವ್ಯ ಸಾನ್ನಿಧ್ಯದಿಂದ ನಾವು ಮರಳಿ ಹೊರಗೆ ಬಂದಾಗ ಇನ್ನೂ ನಸುಗತ್ತಲೆಯಿತ್ತು ಅವರ ದರ್ಶನೋತ್ಸುಕವಾದ ಜನಸಂದಣಿ ಉಸ್ತ್ರ ಸತ್ಯಾಗ್ರಹದಿಂದ ಹಸರಿಗೆ ಬಂದ ಕಾರವಾರದ ಗದ್ದ ಗೆಯಲ್ಲಿ ಸೇರಿಯುತ್ತಿತ್ತು ಸಾಗರ ಅದನ್ನು ಸಾರಿಬಿಟ್ಟ ಆಗ ಮೂಡಣದ ಬಾನಿನಲ್ಲಿ ಬೆಳ್ಳಿಚುಕ್ಕೆ ಬಿ ಗು ಗಂದನ್ನು ಲಕ್ಷಿಸುತ್ತ ಅರುಣನ ಹಾಂಗದಿರು ಗಳು ದಿಗ್ಪತ್ರಿಯನ್ನು ಛೇದಿಸಿ ತಾಂಡವ ಗಿ ಹೊರಬಿದ್ದ ಉಷೆಯು ಪಕ್ಷಿಗಳು ಪ್ರಭಾತಗೀತವನ್ನು ಮಧುರಾ ಲಾಪನೆಯಿಂದಿಗ ಇಂಪಾಗಿ ಹಾಡುತ್ತಿದ್ದವು ಸೂ ರ್ಯದೇವನ ಬರುವಿಕೆಗಾಗಿ ಸರ್ವಸಿದ್ಧತೆಯೂ ಆಗಿತ್ತು ಎಲ್ಲರೂ ಅವನ ಬರುವಿಕೆಯನ್ನು ಉತ್ಕಂಠ ಯಿಂದ ಎದುರುನೋಡುತ್ತಿದ್ದರು!

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಿರಿ.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ವಿನಾ ಜ ಕುರಿತ ಲಕ್ಷ್ಯಕೊಡಬೇಕು ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು ನೀವು ಅದಕ್ಕೆ ಚಲೋ 'ಕೂದಲನ್ನು' ಬೆಳೆಸೀರಿ. ಶ್ರೇಷ್ಠವಾದ ಕೂದಲನ್ನ್ಯಾವುದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ವಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು ಹಿಮ್ಮ ತಿಕ್ಕಿದ ಕೂಡಲೆ ತಲೆಯ ಉಷ್ಣ ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರೆತು ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆ ಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ		೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ ,,		೨—೧೨—೦
ಅಂಚೆವೆಚ್ಚ	,,	೦—೧೧—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

೭ ಔಂಸಿಗೆ ರೂ.		೨—೦—೦
೩ ಔ ಸಿಗೆ	"	೦—೪—೦
ಡ್ರಾಮಿಗೆ ,,		೦—೧೨—೦
ಅಂಚೆವೆಚ್ಚ ,,		೦—೬—೦

ಒಟ್ಟೋ ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ!

"ಹೂವೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಇಂಥ ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಭುತವು !

ಒಟ್ಟೋ ದಿಲ್ ಬಹಾರ್!

(ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಧಾರಣ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳ ವಿಲ್ಲ ಅವುಗಳಲ್ಲಿ ಆಲ್ಕೋಹೋಲ ಯಾವ ಮದ್ಯವು ಸೇರಿರುತ್ತದೆ ಇದರಿಂದ ಹೂವಿನ ಸಹಜ ಪರಿಮಳವು ಸಿಗ ದದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಮದ್ಯದ ಸ್ಪರ್ಶವಿಲ್ಲ .

THE ANGLO INDIAN DRUG & CHEMICAL CO.,

POST BOX 2082 **BOMBAY No 2**

ಓಂ

'ದಶಮೂಲಾರಿಷ್ಟ.'

'ದಶಮೂಲಾರಿಷ್ಟ'

ಇದು ಬಹಳ ದಿವಸಗಳ ಎಲ್ಲ ಆಯುರ್ವೇದ ಗ್ರಂಥಗಳಲ್ಲಿ ಹೇಳಿದ ಪ್ರಸಿದ್ಧವಾದ ಔಷಧವು ... ನಮ್ಮ ಔಷಧಾಲಯದಲ್ಲಿ ... ಇದರ ಗುಣಗಳು ಸರಿಯಾಗಿ ... ಇವರ ಗುಣವು ಬಹಳ ಪ್ರಸಿದ್ಧವಾಗಿರುತ್ತದೆ.

ಈ ಔಷಧದಿಂದ ... ಹಸಿವೆ, ರಕ್ತವನ್ನು, ಶಕ್ತಿಯನ್ನು ಹೆಚ್ಚಿಸುತ್ತದೆ.

ಅರುಚಿ, ... (ವಾತ, ಕಫ, ಪಿತ್ತ) ದೋಷದಿಂದ ರೋಗ ಸಂಬಂಧದ ಕಷ್ಟವ್ಯಾಧಿ ... ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ, ಮೂತ್ರಕೃಚ್ಛ್ರ, ... ಪ್ರಸವದ ನಂತರ ... ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡು ...) ... ದಿನಗಳ ವರೆಗೆ ಕೊಟ್ಟರೆ ... ಯಾವದೇ ತರದ ರೋಗಗಳು ... ಆಗದೆ ...

ವ್ಯಾಪಾರಸ್ಥರಿಗೆ ... ಪತ್ರವ್ಯವಹಾರ ಮಾಡಬೇಕು.

... ಬಾಟ್ಲಿ ... — ೧
... ಬಾಟ್ಲಿ ... — ೦
... ಬಾಟ್ಲಿ ... — ೦

ನಮ್ಮ ವಿಳಾಸ

ಪಿ. ಅಚ್ಯುತ ಪಂಡಿತ,

— ಮಾಲಕ —

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ (ಉ. ಕನ್ನಡ)

ನಾರಿವರ್ಧನ ರಾಮಬಾಣ'

ಮುಂದೆ ದಿವಸದಲ್ಲಿ ... ಉಪಯೋಗಿಸುವವೆಲ್ಲ ... ಕಿಂಮತ ...

ಪತ್ತೆ — ವೈದ್ಯ ಪ್ಪಿ. ಎಸ. ಕಾಪಸೇ ಮಿರಜ S. M. C.

... ಬಗಡ] ೧೦೦೦ ರೂಪಾಯಿ ಇನಾಮು. [ಆದಿ ... ನೋಡಿರಿ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ವಾಪರಿಸಿದ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ದಿಕ್ಕುಂಸಿದರೆ ಪ್ರಾಣಕೆ ಕಾಯ್ದು ಕೊಳ್ಳಿರಿ

ಮೂತ್ರದ್ವಾರದಿಂದ ಸ್ವಪ್ನಾವಸ್ಥೆಯಿಂದ ಹೋಗುವ ಧಾತು, ಮತ್ತು ಮುಷ್ಟಿ ಮೈಥುನದಿಂದ, ಬಾಲ ಸ್ತ್ರೀ ಸಂಭೋಗದಿಂದ ಇಂದ್ರಿಯ ... ನಪುಂಸಕತನ ... ಪ್ರಮೇಹ, ... ಗಮಿ ದೋಷ ಅಶಕ್ತಿ, ಚಿತ್ತಭ್ರಂಶ, ... ಬೆನ್ನು ನೋವು ... ಯಾವದೇ ತರದ ರೋಗದಿಂದ ಬಂದ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ ವೀರ್ಯವೃದ್ಧಿ, ಗಟ್ಟಿತನ ಸ್ತಂಭನ, ... ಸ್ಮರಣ ಶಕ್ತಿ ಮತ್ತು ... ಬೆಳೆಯುತ್ತದೆ. ಇದರಿಂದ ಪುರುಷರ ... ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗ ನಿವಾರಣ ಚೂರ್ಣ ವನ್ನು ... ಸ್ತ್ರೀಯರ ಎಲ್ಲ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ ... ಸಂತತಿ ... ದಿವಸ ... ಪೂರ್ಣ ಗುಣ ... ಪತ್ರಗಳನ್ನು ಕೊಟ್ಟವರ ಹೆಸರು, ... ಪತ್ರಿಕೆಯಲ್ಲಿ ...

ಸ್ತ್ರೀ ರೋಗ ನಿವಾರಣ ಚೂರ್ಣ.

... ಮುಟ್ಟಿದ ... ಆಗುವ ಕಾಲಕ್ಕೆ ... ಹೊಟ್ಟೆ ... ಗರ್ಭಧಾರಣ ಆಗದ ... ರೋಗಗಳು ಹೋಗುತ್ತವೆ ... ಗೃಹದೇವತೆಗೆ ಇದೇ ಔಷಧ ಅವಶ್ಯವಾಗಿ ... ಸ್ತ್ರೀಯರಿಗೆ ... ಸಂತತಿಯಾಗುತ್ತದೆ ... ದಿವಸ ... ಪೂರ್ಣ ಗುಣ ...

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ... ನಾಜೂಕ ಆದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣ ... ಶಕ್ತಿ ... ಮತ್ತು ಪ್ರಸೂತಿ ಕಷ್ಟವನ್ನು ಸಹಿಸಲಾರರೋ ಮತ್ತು ... ಸಂತತಿಗಳಾಗಿ ... ಮತ್ತು ಯಾವ ಸ್ತ್ರೀಯರಿಗೆ ... ಇಂಥ ... ಕಾರಣದಿಂದ ಸಂತತಿ ... ಉಪಾಯ ... ಸಂಸಾರ ಸುಖವಲ್ಲಿಯೂ ... ಆಗುವದು ... ಗರ್ಭಧಾರಣ ಒಂದು ... ಬಿಟ್ಟರೆ ... ಆಗುವದಿಲ್ಲ ... ಪೂರ್ಣ ... ಮಾಡಿ ... ಕಡೆಗೆ ... ಔಷಧಗಳ ...

ಮಾಲಕ:— ವೈದ್ಯ ಪ್ಪಿ. ಎಸ್. ಕಾಪಸೆ, ಮು. ಪೋಂ ಮಿರಜ (S. M. C.)

... ಡಾಕ್ಟರ ಜೇ. ಬೀ. ಯವರ ಸುಗಂಧಿ ಸತ್ಯದ ಪುಡಿ ...

... ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ... ಈ ಸತ್ಯದ ಪುಡಿಯಿಂದ ... ವ್ಯಾಧಿಗಳ ... ಕಣ್ಣುಗಳಲ್ಲಿ ... ವ್ಯಾಧಿಗಳು ಪರಿಹಾರವಾಗುವವಲ್ಲದೆ ... ಇದನು ಅನೇಕ ವ್ಯಕ್ತಿಗಳು ... ಗೃಹದಲ್ಲಿ ... ಔಷಧವಾಗಿ ...

(Registered Trade Mark)

... ಗುರುಬಸವ ಆಂಡ್ ಕಂಪನಿ ... ಪೋ ...

Reg No. B 1270.

Monday, 16th July, 1934

ವರ್ಷ ೧೨

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ 3-1-0
ವ್ಹಿ ಪಿ ಅ ಶಿವೆಚ್ಚ ಸೇರಿ
ರೂಪಾಯಿ 3-3-0
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೬

ಜಾಹೀರಾತುಗಳ ದರ
ಕನ್ನಡ ಇಂಗ್ಲಿಷ ಪ್ರಾಕಾ
ಟೈಪಿನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ 1-0-0
೮ ನಂತ್ರ ಪ್ರತಿಸಾಲಿಗೆ 0-2-0
ಹನ್ನಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಯಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—※(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೬ ಮಾಹೆ ಜುಲೈ ಸನ್ ೧೯೩೪ನೇ ಇಸವಿ.)※—

ಪ್ರೆಸಿಡೆನ್ಸಿ ವಿಮಾ ಕಂಪನಿಯ
ಅಪೂರ್ವ ಸವಲತ್ತು"

ದಿ ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಶೂರನ್ಸ ಕಂಪನಿ, ಲಿಮಿಟೆಡ್

ಹೆಡ್ ಆಫೀಸು ಯೋರ್ಕ ಬಿಲ್ಡಿಂಗ ಮುಂಬಯಿ

ಇವರ ಆಡಳಿತೆ ಸಂಪೂರ್ಣವಾಗಿ ಹಿಂದೀ ಜನರ ಕೈಯಲ್ಲಿದೆ. ಆಡಳಿತೆಯು ಖರ್ಚು ಎಲ್ಲ ಕಂಪನಿಗಳಿಂತಲೂ ಕಡಿಮೆ. ಈ ಕಂಪನಿಯು ಮೂವರಿನ್ ವ್ಹಲ್ಯುಏಶನ್ ರಿಪೋರ್ಟಗಳಲ್ಲಿ ಬೋನಸ ಘೋಷಿಸಿ ಲೋಕಪ್ರಿಯವಾಗಿದೆ. ಇದಕ್ಕೆ ಲೋಕಪ್ರಿಯತೆಯು ದಿನೇ ದಿನೇ ಹೆಚ್ಚುತ್ತಲಿದೆ.

ಸರಕಾರ ಮನ್ನಣೆಯುಳ್ಳ ಎಕ್ಚ್ಯುಏರಿಯವರು ಈ ಕಂಪನಿಯ ಲೆಕ್ಕ ತಪಾಸಣೆ ಮಾಡುತ್ತಾರೆ. ಆದರಿಂದ ಇಡೀ ಹಿಂದುಸ್ಥಾನದಲ್ಲಿ ಈ ಕಂಪನಿಯ ಭದ್ರತೆ ಪ್ರಖ್ಯಾತವಿದೆ. ಇಂಗ್ಲಂಡಿನ ಎಕ್ಚ್ಯುಏರಿಗಳಾದ ಶ್ರೀ ಜಿ ಎಸ್ ಮುರಾರಿಯವರು ತಮ್ಮ ರಿಪೋರ್ಟಿನಲ್ಲಿ ಬರೆಯುವದೇನಂದರೆ— ವ್ಹಲ್ಯುಏಶನ್ ಕಾಲಕ್ಕೆ ಬೋನಸ್ ಹಂಚುವ ವ್ಯವಸ್ಥೆ ಇರುವ ಕಂಪನಿ ಇಡೀ ಹಿಂದುಸ್ಥಾನದಲ್ಲಿ ಇದೊಂದೇ. ಹೊರತು ಬೇರೆ ಕಂಪನಿಯಿಲ್ಲ.

ಈ ಕಂಪನಿಯಲ್ಲಿ ಎಲ್ಲ ತರದ ವಿಮೆ ಇಳಿಸುವ ಏರ್ಪಾಟಿದೆ. ದುಃಖ್ಖಕರ ವೈದ್ಯಕೀಯ ಪರೀಕ್ಷಣೆಯ ನಿರ್ಬಂಧವಿಲ್ಲ. ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬುವ ಅನುಕೂಲತೆಯಿದೆ. ಬಡವರು ಸಹ ವಿಮಾ ಇಳಿಸಬಹುದು.

ಉತ್ತರ ಕನ್ನಡ ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸಂಬಿಗಸ್ತ ಏಜಂಟರು ಬೇಕು. ಏಜನ್ಸಿಯ ನಿಯಮಗಳ ಬಗ್ಗೆ ಹೆಡ್ ಆಫೀಸಿಗೆ ಯಾ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಎಮ್ ಪಿ ರೇವಣಕರ ಹಳದೀಪುರ,
ಉತ್ತರ ಕಾನಡಾ ಜಿಲ್ಲೆಯ ಆರ್ಗನೈಜರರು,
ಪೋ ಕುಮಟಾ (ಉತ್ತರ ಕನ್ನಡ)

The Canara Industrial & Banking Syndicate, Ltd

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್

Head Office — Mukund Nivas, UDIPI

Branches — [illegible], Bangalore City, Mangalore, [illegible], Cannanore, [illegible], Honnavar, Karwar, Hubli, Belgaum, [illegible], & Kumta

Figures as at 31st May, 1934.

Authorised Capital (ಅಧಿಕೃತ ಮೂಲಧನ)	Rs 5 00 000
Subscribed Capital (ಜಂಪಾ ಆರ್ಹಿಸಿದ್ದು)	Rs 1 28 100
Paid up (ತೆತ್ತು ಬಂದದ್ದು)	98 100
Reserve Fund (ರಿಝರ್ವ ಫಂಡು)	30,000
Total Deposits (ಅಂತು ಠೇವಣಿಗಳು)	10 24,448 7 3

☞ Deposits are received at favourable rates of interest

Bills collected drafts issued and every description of Banking business transacted

To further particulars please apply to —

Kumta, *27—6—1934*

T. RANGA PAI,
Agent at KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಶೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

ಸಂಪೂರ್ಣ ಹಿಂದೀ ಕಂಪನಿ— ೧೯ ವರ್ಷಗಳಿಂದ ನಡೆದು ಬಂದದ್ದು

ಹೆಡ್ ಆಫೀಸು ಎಸ್ಪ್ಲನೇಡ ಸ್ಟ್ರೀಟ, [illegible], ಮುಂಬಯಿ.

೧೯೩೦, ಇನ್ನೊಂದು ಹೆಸರಾದ ವರ್ಷ

ಈ ವರ್ಷದಲ್ಲಿ [illegible] ವಿಮೆ ಇಳಿಸಲಾಯಿತು
ಕಂಪನಿಯು [illegible] ಲೋಕಪ್ರಿಯವಾಗುತ್ತಿದೆ— ಇದು ಜನರ ನಂಬಿಗೆಯ ಸಾಕ್ಷಿ
ವಿಮಾದಾರರಿಗೆ ತುಂಬಾ ಭದ್ರತೆಯಿದೆ, ಸಂಪೂರ್ಣವಾದ [illegible]
ಕಂಪನಿಯವರು ಹೊಸ ಹೊಸ ಯೋಜನೆಗಳನ್ನು ಕಲ್ಪಿಸಿದ್ದಾರೆ— ಸ್ತ್ರೀಯರೂ ವಿಮೆ ಇಳಿಸಬಹುದು
ಇಂಥ ದಿನೇ ದಿನೇ ಪ್ರಗತಿ ಮಾಡುತ್ತಿರುವ ವಿಮೆ ಕಂಪನಿಯ
ಏಜನ್ಸಿ ಕೊಡಲ್ಪಡುವದರಿಂದ ಜನರಿಗೆ [illegible]
ವಿಶೇಷ ಮಾಹಿತಿಯ ಬಗ್ಗೆ ಬರೆಕೊಳ್ಳಬೇಕಾದ ವಿಳಾಸ—

ಪ್ರಾಮುಖ್ಯ ಏಜಂಟರು —

ಪಿ ಎಸ್ ಶ್ಯಾನಭಾಗ ಎಂಡ್ ಬ್ರದರ್ಸ, ಕುಮಟಾ (ಉ ಕನ್ನಡ) ಅಥವಾ ದಿ ಮೆನೇಜರ, ಹೆಡ್ ಆಫೀಸು

ಈಗಿನ ಪ್ರಪಂಚ.

ಮಹಾತ್ಮರು ಪುನಃ ಉಪವಾಸ ಮಾಡುತ್ತಾರೆ!

ಇದೇ ಬರುವ ಅಗಸ್ಟ ೭ನೇ ತಾರೀಖಿನ ಮಂಗಳವಾರದಿಂದ ಮಹಾತ್ಮರು ೭ ದಿನಗಳ ಪರ್ಯಂತ ಉಪೋಷಣ ಮಾಡುವ ಪ್ರತಿಜ್ಞೆ ಮಾಡಿರುತ್ತಾರೆ. ಇದು ಮಹಾತ್ಮರ ೭ನೇ ಉಪವಾಸ! ಈ ಉಪವಾಸದ ಕಾರಣವೇನಂದರೆ — ಕಳೆದ ಜುಲೈ ೪ನೇ ತಾರೀಖಿಗೆ ಮಹಾತ್ಮರು ಅಜಮೀರಿಗೆ ಹೋಗಿದ್ದರು. ಸಾಯಂಕಾಲ ಪ್ರಚಂಡ ಸಭೆ. ಮಳೆ [illegible] ಬೀಳುತ್ತಿತ್ತು, ಆದಾಗ್ಯೂ, ಮಹಾತ್ಮರ ಭಾಷಣವನ್ನು ಕೇಳಲು, ದರ್ಶನ ಪಡೆಯಲು ೨೦ ಸಾವಿರಕ್ಕೆ ಮಿಕ್ಕಿ ಜನರು ಸೇರಿದ್ದರು. ಸನಾತನಿಗಳು ಈ ಸಭೆಯಲ್ಲಿ ತಮ್ಮ ವಿರೋಧವನ್ನು ಪ್ರಕಟಿಸಬಂದವರು, ಪಂಡಿತ ಲಾಲನಾಥರವರ ನೇತೃತ್ವದಲ್ಲಿ ಹಲವು ಸನಾತನಿಗಳು ಕಪ್ಪು ಪತಾಕೆಗಳನ್ನು ಹಿಡಕೊಂಡು ಬಂದರು. ತಮ್ಮ ವಿರೋಧ ಪ್ರದರ್ಶನ ಮಾಡುವದಾಗಿಯೂ, ಹರಿಜನೋದ್ಧಾರದಿಂದ ರಾಷ್ಟ್ರಕ್ಕೆ ಕ್ಷೇಮವಿಲ್ಲವಾಗಿಯೂ ಪಂಡಿತ ಲಾಲನಾಥರು ಮಹಾತ್ಮರಿಗೂ, ಸಭೆಯ ಕಾರ್ಯಕರ್ತರಿಗೂ ಮುಂದಾಗಿಯೇ ತಿಳಿಸಿ ಸಭೆಯಲ್ಲಿ ಬರಲು ಅಪ್ಪಣೆ ಪಡೆದಿದ್ದರು. ಕಪ್ಪು ಪತಾಕೆ ನೋಡಿದೊಡನೆ ಜನರು ಕೈಮೀರಿದರು. ಅವರ ಮೈಮೇಲೆ ಬಿದ್ದರು. ಸನಾತನಿಗಳಿಗೂ, ಜನರಿಗೂ ಹೊಡೆದಾಟವಾಗಿ ಕೆಲವರಿಗೆ ಗಾಯಗಳಾದವು. ಪಂಡಿತ ಲಾಲನಾಥರವರ ತಲೆಗೊಂದು ಪೆಟ್ಟಾಯಿತು. ಮಹಾತ್ಮರು ಸಭೆಗೆ ಬಂದೊಡನೆ ಈ ಸಂಗತಿ ತಿಳಿದು ಮರುಗಿದರು. ಪಂಡಿತ ಲಾಲನಾಥರವರಿಗೆ ಸಭೆಯಲ್ಲಿ ಕರೆಸಿ ಅವರಿಗೆ ಭಾಷಣ ಮಾಡಹೇಳಿದರು. ಪಂಡಿತ ಲಾಲನಾಥರು ಅಸ್ಪೃಶ್ಯತಾನಿವಾರಣೆಯ ಕಾರ್ಯವು ಹಿಂದುಸ್ಥಾನದಲ್ಲಿ ಅನರ್ಥಕಾರಕವಾಗುವದಾಗಿ ಪ್ರತಿಪಾದಿಸಿದರು. "ಈ ಹೊತ್ತಿನ ಅತ್ಯಾಚಾರದ ಪಾಪಪರಿಮಾರ್ಜನಕ್ಕಾಗಿ ನಾನು ಪ್ರಾಯಶ್ಚಿತ್ತ ಪಡೆಯುವ ಪ್ರಸಂಗ ಬಂದಿರುವದೆಂ"ದು ಮಹಾತ್ಮರು ಅದೇ ಸಭೆಯಲ್ಲಿ ಹೇಳಿದರು! ಪ್ರಾಯಶ್ಚಿತ್ತ ಸ್ವರೂಪವೇನೆಂದು ತಮಗೆ ಗೊತ್ತಿಲ್ಲವಾಗಿ ಮಹಾತ್ಮರು ಉದ್ಗರಿಸಿ ರೀತಿಯಿಂತೆ ಹರಿಜನೋದ್ಧಾರವನ್ನು ಕುರಿತು ಭಾಷಣ ಸಹ ಮಾಡದೆ ಸಭೆಯನ್ನು ವಿಸರ್ಜಿಸಿದರು. ಮಹಾತ್ಮರು ದೀರ್ಘ ವಿಚಾರ ಮಾಡಿ ಉಪೋಷಣದ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಮಹಾತ್ಮರು ಹೊರಡಿಸಿದ ಪ್ರಕಟಣೆಯೇನಂದರೆ — ಪಂಡಿತ ಲಾಲನಾಥರವರ ಪೆಟ್ಟಿಗೆ ಕಾರಣವಾದ ಅಜಮೀರ ದಂಗೆಯ ಪ್ರಕಾರವನ್ನು ನಾನು ಚೌಕಶಿ ಮಾಡಿದೆ. ಕಪ್ಪು ಪತಾಕೆಗಳ ಪ್ರಕಾರ ನೋಡಿ ಜನರಿಗೂ, ಸ್ವಯಂಸೇವಕರಿಗೂ ಸಿಟ್ಟುಬಂತು. ಅವರು ಪತಾಕೆ ಕಸಕೊಂಡು ತೆಗೆದರು. ಇಕ್ಕಟ್ಟಿನಲ್ಲಿ ಜಗಳವಾಗಿ ಪಂಡಿತ ಲಾಲನಾಥರವರಿಗೆ ತಲೆಗೆ ಗಾಯವಾಗಿದೆ. ಇತರರಿಗೆ ತಾಗಿರತಕ್ಕಂಥ ಪೆಟ್ಟುಗಳಿದ್ದದ್ದೊಂದು ಸುದ್ದಿಯ. ಕಪ್ಪು ಪತಾಕೆಗಳನ್ನು ಸಭೆಯಲ್ಲಿ ಮೆರೆಸಬಂದ ಪಂಡಿತ ಲಾಲನಾಥ ಮೊದಲಾದ ಸನಾತನಿಗಳನ್ನು ಯಾವ ಪ್ರಕಾರದಿಂದ ದಣಿಸದೆ ರಕ್ಷಿಸಬೇಕಾಗಿ ಸ್ವಯಂಸೇವಕ ದಳವಾಯಿಗಳಿಗೆ ಮುದ್ದಾಂ ಸೂಚನೆ ಕೊಟ್ಟಿತ್ತು. ಹೀಗೆ ನನಗೆ ಅಭಿವಚನ ಕೊಟ್ಟವರಿಂದ ಸಭೆಯವರು ಮಾಡಿದ ಅನ್ಯಾಯವು ದ್ವಿಗುಣಿತವಾಗುತ್ತದೆ. ಪಂಡಿತ ಲಾಲನಾಥಾದಿ ಸನಾತನಿಗಳು ನಿಯಮಿತ ವೇಳೆಗಿಂತ ಪೂರ್ವದಲ್ಲಿಯೇ ಬಂದದ್ದರಿಂದ ಅನರ್ಥವೊದಗಿತಾಗಿ ನೆವ ಹೇಳುತ್ತಾರೆ. ಆದರೆ, ಇದರಿಂದ ಪ್ರಯೋಜನವಿಲ್ಲ. ಸಭೆಯ ಮುಖ್ಯ ಮುಖ್ಯ ಭಾಗಗಳಲ್ಲಿ ಜವಾಬದಾರ ಜನರು ವ್ಯವಸ್ಥೆಗಾಗಿ ನಿಂತು ಗೊಂದಲವಾಗದಂತೆ ಮುಂಜಾಗ್ರತೆ ಕೊಳ್ಳಬೇಕಿತ್ತು, ಇದಲ್ಲದೆ, ಸಭಾಸ್ಥಾನದಲ್ಲಿ ಪ್ರತಿಬಂಧ ಮಾಡದಂತೆ ಜನರಿಗೆ ಸೂಚನೆ ಕೊಡುವ ಪಟಗಳನ್ನು ಹಚ್ಚಬೇಕಾಗಿತ್ತು. ಹೀಗೆ ಮುಂಜಾಗ್ರತೆ ಕೊಡಲಿಲ್ಲ. ಆದರಿಂದ ಪಂಡಿತ ಲಾಲನಾಥ ಮೊದಲಾದವರಿಗೆ ಕೊಟ್ಟ ಸುರಕ್ಷಣೆಯ ವಚನಕ್ಕೆ ಭಂಗ ಬಂತು. ಅಭಿವಚನವನ್ನು ನಾನೇ ಕೊಟ್ಟಿದ್ದೆ. ಸ್ವಯಂಸೇವಕ ದಳವಾಯಿಗಳು ಸಂತೋಷದಿಂದ ಈ ವಚನ ಪಾಲಿಸುವರಾಗಿಯೂ, ವಚನ ಪಾಲಿಸಲು ಅವರು ಸಮರ್ಥರೆಂದೂ ನನ್ನ ತಿಳುವಳಿಕೆ ಇತ್ತು. ಸ್ವಯಂಸೇವಕ ದಳವಾಯಿಗಳು ವಚನವನ್ನು ಪಾಲಿಸಲು ಸಂತೋಷದಿಂದ ಒಪ್ಪಿದ್ದರು. ಆದರಿಂದ ವಚನ ಪಾಲಿಸಲಾಗಲಿಲ್ಲ, ಆ ಜವಾಬದಾರಿ ನನ್ನದು. ನಿಜವಾಗಿ ಇಂಥ ವಚನ ಕೊಡುವ ಅವಶ್ಯಕತೆಯೇ ಇರಲಿಲ್ಲ. ಧರ್ಮಶುದ್ಧಿಗಾಗಿ ಕೈಕೊಂಡ ಚಳವಳಿಯಲ್ಲಿ ಯಾವತ್ತೂ ಜನರು ಅಹಿಂಸೆಯಿಂದ ನಡೆದುಕೊಳ್ಳಲು ಬದ್ಧರಿದ್ದಾರೆ. ನಾವು ಮಾಡಿದ ಅಪರಾಧದ ಪರಿಣಾಮವನ್ನು ಜನರು ಗ್ರಹಿಸಬೇಕೆಂದು ನಾನು ವಚನದ ಮಾತು ಜನರಿಗೆ ತಿಳಿಸಿದ್ದೇನೆ. ಹರಿಜನೋದ್ಧಾರ ಚಳವಳಿಯಿಂದ ಜನರು ಅಹಿಂಸೆಯನ್ನು ತೊರೆದು ಹಿಂಸಕರಾಗಬಹುದೆಂದು ಪಂಡಿತ ಲಾಲನಾಥರು ನನಗೆ ಮುಂಜಾಗ್ರತೆ ಕೊಟ್ಟಿದ್ದರು, ನನಗೇನು ಅಂಥ ಭೀತಿಯಿರಲಿಲ್ಲ. ಈಗಲೂ ಅಂಥ ಭೀತಿಯಿರುವದಿಲ್ಲ. ಪಂಡಿತ ಲಾಲನಾಥರು ಕಪ್ಪು ಪತಾಕೆ ಹಿಡಿದವರಿಗೆ ಹೊಡೆದ ಕೆಲ ಸಂಗತಿಗಳನ್ನು ನನಗೆ ತಿಳಿಸಿದಾಗ್ಯೂ, ನನಗೆ ಈ ಚಳವಳಿಯಿಂದ ಹಿಂಸಾಪ್ರವೃತ್ತಿಯ ಪ್ರಚಾರವಾಗುವದೆಂದು ಭೀತಿಯಿಲ್ಲ. ಸ್ವಲ್ಪ ಪ್ರಚಾರವಾದಾಗ್ಯೂ ಅತ್ಯಾಚಾರ ಮಾಡಲು ಜನರಿಗೆ ಕಾರಣವಿಲ್ಲವಾಗಿ ನನ್ನ ಆಂದೋಲನವು ಬುದ್ಧಿ ಹೇಳಿ ಅಂತಃಕರಣವನ್ನು ಬದಲಿಸಿ ಈ ಕಾರ್ಯವನ್ನು ಸಾಧಿಸಿಕೊಳ್ಳಬೇಕು. ಸುಧಾರಕರು ನಿರ್ಮಲರಿದ್ದು ತಪಶ್ಚರ್ಯ ಮಾಡಿದರೆ ಮಾತ್ರ ಇದು ಸಾಧ್ಯವಿದೆ. ನಾನು ಬಹಳ ದೀರ್ಘ ವಿಚಾರ ಮಾಡಿ ೭ ದಿನಗಳ ತನಕ ಉಪವಾಸ ಮಾಡಬೇಕೆಂದು ನಿರ್ಧರಿಸಿದ್ದೇನೆ. ಅಗಸ್ಟ ೫ನೇ ತಾರೀಖಿಗೆ ನಾನು ವರ್ಧಾಕ್ಕೆ ತಲ್ಪುತ್ತೇನೆ. ಅದೇ ೭ ದಿನಗಳಲ್ಲಿ ಅಂದರೆ ಅಗಸ್ಟ ತಾ ೭ನೇ ಮಂಗಳವಾರ ಮಧ್ಯಾಹ್ನದಿಂದ ಉಪವಾಸಕ್ಕೆ ಪ್ರಾರಂಭವಾಗುತ್ತದೆ. ಇಷ್ಟಾದರೂ ಪಂಡಿತ ಲಾಲನಾಥ ಮೊದಲಾದ ಸನಾತನಿಗಳ ಬಗ್ಗೆ ನಾನು ಪ್ರಾಯಶ್ಚಿತ್ತ ಕೊಳ್ಳಲೇಬೇಕು. ದೇವರ ದಯೆಯಿಂದ ಅಗಸ್ಟ ೨ನೇ ತಾರೀಖಿಗೆ ನಾನು ಹರಿಜನ ಸಂಚಾರ ಕಾರ್ಯಕ್ರಮವನ್ನು ಶ್ರೀ ಕಾಶಿ ಕ್ಷೇತ್ರದಲ್ಲಿ ಪೂರ್ತಿಗೊಳಿಸುತ್ತೇನೆ. ಇದು ಯೋಗ್ಯವಾದ ಪೂರ್ಣತೆಯೇ! ಪ್ರಾಯಶ್ಚಿತ್ತ ಈ ಉಪೋಷಣದಿಂದ ಈ ಸಂಬಂಧದಲ್ಲಿ ತಿಳಿದು ಇಲ್ಲವೆ ತಿಳಿಯದೆ ನನ್ನಿಂದ ಯಾ ನನ್ನ ಸಹಕಾರಿಗಳಿಂದ ಘಟಿಸಿದ ಯಾವತ್ತೂ ಪಾಪಗಳ ಪರಿಹಾರವಾಗಲಿ. ಉಪೋಷಣದಿಂದ ಈ ಚಳವಳಿಯು ನಿಜವಾದ ಧರ್ಮದ ಹೆಸರಿನಿಂದ ೫ ಕೋಟಿ ಜನಾಂಗದ ಮೇಲೆ ನಡೆದ ಪೀಡನೆಯನ್ನು ಪರಿಹರಿಸಲು ನೂತನವಾದ ಹಾಗು ನಿರ್ಮಲವಾದ ಉಪಾಯಯೋಜನೆ ಮಾಡುವ ಹೊಸ ಉಪಕ್ರಮವಾಗಲಿ. ಸಂಕಲ್ಪದಿಂದಾಗಲಿ, ವಿಚಾರದಿಂದಾಗಲಿ, ಆಚಾರದಿಂದಾಗಲಿ ಅಸತ್ಯ ಯಾ ಹಿಂಸೆಯನ್ನಾಶ್ರಯಿಸದೆ ನಿರ್ಮಲ ಮನಸ್ಸಿನಿಂದ ಈ ಚಳವಳಿಯಲ್ಲಿ ಸೇರುವವರಿಗೆ ಇದೊಂದು ಮುಂಜಾಗ್ರತೆ! ಈಗ ಈ ಚಳವಳಿಯಲ್ಲಿರುವವರೂ ಎಚ್ಚರಿಕೆ ಪಡೆಯಬೇಕು. ಮತ್ತಾರೂ ನನ್ನಂತೆ ಉಪೋಷಣೆ ಮಾಡಲಾಗದು. ಹರಿಜನ ಕಾರ್ಯಕ್ಕಾಗಿ ಮತ್ತಿಷ್ಟು ನಿಷ್ಠೆಯಿಂದ ದುಡಿಯಬೇಕು." ಹೀಗೆ ಮಹಾತ್ಮರ ಪ್ರಕಟಣೆ. ಮಹಾತ್ಮರು ಯಾವದೇ ನಿರ್ಧಾರದಿಂದ ಚ್ಯುತರಾಗುವವರಲ್ಲ. ಈ ಉಪೋಷಣ ವ್ರತದೊಳಗಿಂದ ಅವರಿಗೆ ಕ್ಷೇಮದಿಂದ ಪಾರಗಾಣಿಸುವಂತೆ ಭಗವಂತನಲ್ಲಿ ಎಲ್ಲರೂ ಪ್ರಾರ್ಥಿಸಿಕೊಳ್ಳಬೇಕು.

***

ಈ ಹಿಂದೆ ಮಹಾತ್ಮರು ೬ ಬಾರಿ ಉಪೋಷಣ ಮಾಡಿದ್ದಾರೆ. ಅವುಗಳ ವಿವರವೇನಂದರೆ — ೧೯೨೧ನೇ ಇಸ್ವಿಯಲ್ಲಿ ಮುಂಬಯಿಯೊಳಗೆ ಹಿಂದು-ಮುಸಲ್ಮಾನರ ದೊಂಬಿ ನಡೆದಿತ್ತು. ಅದರ ಶಾಂತಿಗಾಗಿ ಮಹಾತ್ಮರು ೩ ದಿನಗಳ ಉಪವಾಸ ಮಾಡಿದರು. ೨ನೇ ಉಪವಾಸ ಸಾಬರಮತಿಯ ಆಶ್ರಮದಲ್ಲಿ. ಆಶ್ರಮದೊಳಗಿನ ಅನೀತಿಯ ಪರಿಹಾರಕ್ಕಾಗಿ ೧೯೨೫ನೇ ಇಸ್ವಿಯಲ್ಲಿ ೭ ದಿನಗಳ ೩ನೇ ಉಪವಾಸ. ೪ನೇ ಉಪವಾಸ ದಿಲ್ಲಿಯೊಳಗೆ ಹಿಂದು-ಮುಸಲ್ಮಾನ ಮೊದಲಾದ ಭಿನ್ನ ಭಿನ್ನ ಜಾತಿಗಳಲ್ಲಿ ಐಕ್ಯವಾಗಬೇಕೆಂದು ೨೧ ದಿನಗಳ ಉಪವಾಸವನ್ನು ೧೯೨೪ನೇ ಇಸ್ವಿಯಲ್ಲಿ ಮಹಾತ್ಮರು ಕೈಕೊಂಡಿದ್ದರು. ಮುಖ್ಯ ಪ್ರಧಾನರಾದ ಮಿ| ಮೆಕಡೋನಲ್ಡರವರು ಕೊಟ್ಟ ಜಾತಿ ನಿರ್ಣಯದಂತೆ ಹರಿಜನರಿಗೆ ಪ್ರತ್ಯೇಕಿಸಿದ ಬಗ್ಗೆ ಯೆರವಡಾ ಜೈಲಿನಲ್ಲಿ ೧೯೩೨ನೇ ಇಸ್ವಿ ಸಪ್ಟಂಬರ ತಿಂಗಳಲ್ಲಿ ೬ ದಿನಗಳ ಉಪವಾಸ ಮಾಡಿದರು. ಇದು ೫ನೇ ಉಪೋಷಣ. ಆತ್ಮಶುದ್ಧಿಗಾಗಿಯೂ, ಅನುಯಾಯಿಗಳ ಅಂತಃಶುದ್ಧಿಗಾಗಿಯೂ ಪುಣೆಯೊಳಗೆ ಪರ್ಣಕುಟಿಯಲ್ಲಿ ೧೯೩೩ನೇ ಇಸ್ವಿ ಮೇ ತಿಂಗಳಲ್ಲಿ ಕೈಕೊಂಡ ೨೧ ದಿನಗಳ ೫ನೇ ಉಪವಾಸ. ೬ನೇ ಉಪವಾಸ ಪುನಃ ಯೆರವಡಾ ಜೈಲಿನಲ್ಲಿ ಅದೇ ಇಸ್ವಿಯ ಅಗಸ್ಟ ತಿಂಗಳಲ್ಲಿ ರಾಜಶಾಸನದಂತೆ ಹೊರಡಿಸಿದ ಹುಕುಮನ್ನು ಮುರಿದು ಮಹಾತ್ಮರಿಗೆ ಕೈಯಿದೆಯಂತೆ ಶಿಕ್ಷೆ ವಿಧಿಸಲಾಗಿತ್ತು, ಆ ಮೂಲಕ ಜೈಲಿನಲ್ಲಿದ್ದುಕೊಂಡು ಹರಿಜನ ಕಾರ್ಯ ಮಾಡಲು ಮಹಾತ್ಮರಿಗೆ ಮುಂಚೆ ಇದ್ದ ಸ್ವಾತಂತ್ರ್ಯ ನಷ್ಟವಾಯಿತು. ಅದಕ್ಕಾಗಿ ಮಹಾತ್ಮರು ೨೧ ದಿನಗಳ ತನಕ ಉಪೋಷಣ ಮಾಡಿದರು. ಹೀಗೆ ೬ ಬಾರಿ ಉಪೋಷಣವಾಗಿ ಬರುವ ಅಗಸ್ಟ ೭ನೇ ತಾರೀಖಿಗೆ ಪ್ರಾರಂಭವಾಗುವ ಉಪೋಷಣವು ೭ನೇದು. ೬ ಉಪೋಷಣ ಪ್ರತಿಜ್ಞೆಗಳನ್ನು ಪರಮಾತ್ಮನು ಮಹಾತ್ಮರ ಕಡೆಯಿಂದ ನೆರವೇರಿಸಿಕೊಂಡಂತೆ ಇದನ್ನೂ ನೆರವೇರಿಸಿಕೊಳ್ಳಲೆಂದು ಸಮಸ್ತರ ಪ್ರಾರ್ಥನೆ.

***

ಮಹಾತ್ಮರ ಉಪವಾಸದ ಪ್ರತಿಜ್ಞೆಯನ್ನು ಕೇಳಿ ರಜಪುತಾನಾ ಹರಿಜನ ಮಂಡಳದ ಕಾರ್ಯದರ್ಶಿಗಳಾದ ಶ್ರೀ| ರಾಮನಾರಾಯಣ ಚೌದರಿಯವರು ಮಹಾತ್ಮರಿಗೆ ತಂತಿ ಮಾಡಿ ಉಪವಾಸದ ವಿಚಾರವನ್ನು ಸದ್ಯಕ್ಕೆ ನಿಲ್ಲಿಸಲು ಬಿನ್ನೈಸಿಕೊಂಡಿದ್ದಾರೆ "ನನಗೆ ಅಜಮೀರದೊಳಗಿನ ಪ್ರಕಾರಗಳ ವಿಷಯ ಚೌಕಶಿ ಮಾಡಲು ತಾವೇ ನೇಮಿಸಿದ್ದಿರಿ, ವರದಿ ತಲ್ಪುವ ತನಕ ಯಾವದೇ ನಿರ್ಧಾರ ಕೈಕೊಳ್ಳಬಾರದಿತ್ತು, ನಿನ್ನೆ ಸಾಯಂಕಾಲಕ್ಕೇ ನನ್ನ ಚೌಕಶಿ ಮುಗಿದು ವರದಿ ಟಪಾಲಿಗೆ ಹಾಕಹೋಗುವಷ್ಟರಲ್ಲಿ ನಿಮ್ಮ ಪ್ರಕಟಣೆಯನ್ನು ಓದಿದೆನು, ಸ್ವಾಗತ ಮಂಡಳದ ಕೈಕೆಳಗೆ ಕೆಲಸ ಮಾಡುವ ಸ್ವಯಂಸೇವಕರು ಪಂಡಿತ ಲಾಲನಾಥರಿಗೆ ಯಾವದೇ ಪ್ರಕಾರ ಅಪಾಯ ಮಾಡಲಿಲ್ಲ, ಸ್ವಯಂಸೇವಕ ದಳವಾಯಿಗಳು ನಿರಪರಾಧಿಯಿದ್ದಾರೆ ತಾವು ನನಗೆ ಹೇಳಿದ ಸೂಚನೆಗಳನ್ನು ಸಕಾಲದಲ್ಲಿ ನನ್ನಿಂದ ದಳವಾಯಿಗಳಿಗೆ ಮುಟ್ಟಿಸಲಾಗಲಿಲ್ಲ, ನನಗೆ ವಿಸ್ಮರಣೆಯಾಯಿತು ಸರ್ವಾಪರಾಧ ನನ್ನದು, ನನಗೆ ಪ್ರಾಯಶ್ಚಿತ್ತ ವಿಧಿಸಬೇಕು ' ಹೀಗವರು ಮಹಾತ್ಮರ ಕಡೆ ಅರಿಕೆ ಮಾಡಿಕೊಂಡಿದ್ದಾರೆ. ಬುಧವಾರ ಜುಲೈ ೧೨ನೇ ತಾರೀಖಿಗೆ ಮಹಾತ್ಮರಿಗೂ, ಕರಾಚಿಯೊಳಗಿನ ಪತ್ರಿಕಾ ಪ್ರತಿನಿಧಿಗಳಿಗೂ (ಮಹಾತ್ಮರು ಆ ದಿನ ಕರಾಚಿಯಲ್ಲಿದ್ದರು) ಚರ್ಚೆಯಾಯಿತು. "ಉಪವಾಸ ಮಾಡಬೇಡಿರಿ. ತಾವು ಕೊಟ್ಟ ಕಾರಣಗಳು ಸಮರ್ಪಕವಲ್ಲ, ಹೀಗೆ 'ಸಿಂಧ ಒಬ್ಸರ್ವರ' ಪತ್ರಿಕೆಯ ಸಂಪಾದಕರು ಮಹಾತ್ಮರಿಗೆ ಅಂದರು "ಈ ಚಳವಳಿಯು ತೀರ ಮಹತ್ವದ್ದಿದೆ ಉಪವಾಸದಂಥ ಕಠೋರ ಉಪಾಯ ಕೈಕೊಂಡರೆ ಪ್ರಯೋಜನವಿಲ್ಲ ಲೇಖನ-ಭಾಷಣಗಳಿಂದ ಜನಸಾಮಾನ್ಯರ ಮನವೊಲಿಸಬಹುದು, ಆತ್ಮಕ್ಲೇಶ ಸಹಿಸಿದರೆ ಮಾತ್ರ ಲೋಕಪ್ರವೃತ್ತಿಯಲ್ಲಿ ತಿದ್ದುಪಾಟ ಮಾಡಬರುತ್ತದೆ ಉಪವಾಸವೇ ಆತ್ಮಕ್ಲೇಶದ ರಾಜಮಾರ್ಗ. ಈ ದೇಶದಲ್ಲಿಯೂ, ದಕ್ಷಿಣ ಆಫ್ರಿಕೆಯಲ್ಲಿಯೂ ನಾನಿದನ್ನು ಪ್ರಯೋಗಿಸಿದ್ದೇನೆ. ಇದರಷ್ಟು ಅಮೋಘ ಉಪಾಯ ಬೇರೊಂದಿಲ್ಲವಾಗಿ ನನ್ನ ಅನುಭವ. ನಾನು ಸಾಮಾನ್ಯ ಜನರೊಡನೆ ಕೆಲಸ ಮಾಡಬೇಕಾಗಿದೆ, ಅವರಿಂದ ನಾನು ಕಾರ್ಯ ಸಾಧಿಸಿಕೊಳ್ಳಬೇಕು ಅಂತಃಕರಣದ ಭಾಷೆಯಿಂದ ಮಾತಾಡಿದರೆ ಮಾತ್ರ ಅವರಿಗೆ ಗ್ರಹಿಕೆಯಾಗುತ್ತದೆ. ಸಂಪೂರ್ಣವಾಗಿ ನಿರಪೇಕ್ಷೆಯಿಂದ ಉಪವಾಸ ಮಾಡುವದೇ ಅಂತಃಕರಣದ ಭಾಷೆ ' ಹೀಗೆ ಮಹಾತ್ಮರು ಉದ್ಗರಿಸಿದರು "ಹರಿಜನ ಸಂಚಾರ ಮುಗಿಸಿದ ಕೂಡಲೆ ಇಂಥ ಕಠಿಣ ವ್ರತದಿಂದ ದೇಹವು ಹಾಳಾಗಲಿಕ್ಕಿಲ್ಲವೇನು?" ಎಂದು ಒಬ್ಬರು ನುಡಿಯಲು, ಮಹಾತ್ಮರು ಉದ್ಗರಿಸಿದ್ದೇನಂದರೆ—"ನನಗೆ ಆ ಹೆದರಿಕೆ ಇಲ್ಲ. ಆರೋಗ್ಯವಿಚಾರ ಮಾಡಿದರೆ, ಪ್ರವಾಸದ ಪರಿಶ್ರಮವನ್ನು ಉಪವಾಸದಿಂದಲೇ ಪರಿಹರಿಸಬರುತ್ತದೆ ನೀವು ಹೇಳುವಂತೆ ಗಂಡಾಂತರದ ಭೀತಿಯಿದೆ. ನನ್ನೀ ದೇಹಕ್ಕೆ ಸಂಚಾರದ ಪರಿಶ್ರಮವನ್ನು ಕಳೆಕೊಳ್ಳಲು ಉಪವಾಸ ಮಾಡುವ ಆವಶ್ಯಕತೆಯಿಲ್ಲ, ಆದರೆ, ಪ್ರಾಯಶ್ಚಿತ್ತವೆಂದ ಬಳಿಕ, ದೇಹಕ್ಕೆ ಕ್ಲೇಶವಾಗಲೇಬೇಕು. ಇಲ್ಲದಿದ್ದರೆ, ಪ್ರಾಯಶ್ಚಿತ್ತವೆನ್ನುವ ಅರ್ಥವೇನು? ಬುದ್ಧಿಪೂರ್ವಕವಾಗಿ ನಾನು ಈ ನಿರ್ಣಯ ಕೈಕೊಂಡು ಪ್ರಕಟಿಸಿದ್ದೇನೆ. ಜೊತೆಗಿದ್ದ ಗೆಳೆಯರು ಸಹ ಇದಕ್ಕೆ ಒಡಂಬಟ್ಟಿದ್ದಾರೆ." "ಶ್ರೀ| ಕಸ್ತೂರಬಾಯಿ ಗಾಂಧಿಯವರು ಸಹ ಒಪ್ಪಿಕೊಂಡರೇನು?" ಎಂದೊಬ್ಬರು ಕೇಳಿದರು ಮಹಾತ್ಮರ ಕಣ್ಣುಗಳು ಕರಗಿತು, ಕಣ್ಣೀರು ಬಂತು! "ಈ ವಿಷಯದಲ್ಲಿ ನಾನು ಭಾಗ್ಯವಂತನಿದ್ದೇನೆ ನನಗವಳು ಎಂದೂ ಉಪದ್ರವ ಕೊಟ್ಟಿಲ್ಲ, ಸ್ವೇಚ್ಛೆಯಿಂದ ವರ್ತಿಸಬಿಟ್ಟಿದ್ದಾಳೆ. ಅವಳಿಗೆ ವ್ಯಸನವಾಗುತ್ತದಾದರೂ ಅವಳು ನನಗೆ ಪ್ರತಿಬಂಧ ಮಾಡುವದಿಲ್ಲ. ಇಂಥ ಶೂರ ಸ್ತ್ರೀಯನ್ನು ನಾನೆಲ್ಲಿಯೂ ಕಾಣಲಿಲ್ಲ ನನ್ನ ಹೆಂಡತಿಯೆಂದ ನಾನು ಶಿಫಾರಸು ಮಾಡುತ್ತೇನೆಂಬ ಗ ಯಾರೂ ಎಣಿಸಕೂಡದು" ಹೀಗೆ ಮಹಾತ್ಮರು ನುಡಿದು ಉಪವಾಸ ಪ್ರತಿಜ್ಞೆಯನ್ನು ಸ್ಥಿರಗೊಳಿಸಿದ್ದಾರೆ

**

ಮಹಾತ್ಮರ ಪ್ರಕೃತಿ ಇತ್ತ ನೆಟ್ಟಗಿಲ್ಲ ಅವರು ಸಂಪೂರ್ಣ ದಣಿದಿದ್ದಾರೆ "ಹಿಂದುಸ್ಥಾನದಲ್ಲಿ ಸಂಚರಿಸಿ ನಾ ದಣಿದೆ ಜುಲೈ ೩೧ರ ನಂತರ ವಿಶ್ರಾಂತಿ ಪಡೆಯಬೇಕು," ಹೀಗವರು ಕರಾಚಿಯಲ್ಲಿ ಉದ್ಗರಿಸಿದರಂತೆ. 'ಆರೋಗ್ಯರಕ್ಷಣೆಗಾಗಿ ಮಹಾತ್ಮರ ಸಂಚಾರ ಕಾರ್ಯಕ್ರಮವನ್ನು ಯಾವದೇ ಕಾಲಕ್ಕೆ ರದ್ದುಮಾಡಬಹುದೆಂ'ದು ಶ್ರೀ| ಅಮೃತಲಾಲ ಠಕ್ಕರರವರು ಲಾಹೋರದೊಳಗಿನ ಗಾಂಧಿ ಸತ್ಕಾರ ಸಭೆಗೆ ಎಚ್ಚರಿಕೆ ಕೊಟ್ಟಿರುತ್ತಾರೆ ದಿನಾ ೮ ತಾಸಿನ ಮಿಕ್ಕಿ ಕಾರ್ಯಕ್ರಮವನ್ನಿಡಕೂಡದಾಗಿಯೂ ಶ್ರೀ| ಠಕ್ಕರರವರ ಎಚ್ಚರಿಕೆ ಮಹಾತ್ಮರು ನಿರ್ವಾಣವಂತ ಪುರುಷರು, ಅವರಿಗೆ ಈ ಕುರಿತು ಕೇಳಲು, 'ಮಾನಸಿಕ ವೃತ್ತಿಯ ಬದಲು, ಶಾರೀರಿಕ ವೃತ್ತಿಯಿಂದಲೂ ನಾನು ದಣಿದಿದ್ದೇನೋ ನಿಜ. ಆದರೆ, ಈ ಸಂಚಾರವನ್ನು ಮುಗಿಸುವಷ್ಟು ಚೈತನ್ಯ ನನ್ನಲ್ಲಿರುವದೆಂದು ನಾನು ನಂಬಿಕೊಂಡಿದ್ದೇನೆ. ಹಗಲಿಗೆ ನನಗೆ ವಿಶ್ರಾಂತಿ ಬೇಕು, ಯಾರೂ ಗಾಬರಿಗೊಳ್ಳುವ ಕಾರಣವಿಲ್ಲ' ಹೀಗೆ ಮಹಾತ್ಮರು ಕೇಳಬಂದ ಕರಾಚಿಯ ವಾರ್ತಾವಾಹಕರಿಗೆ ತಿಳಿಸಿದರು. ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ| ಮಹಾದೇವಭಾಯಿಯವರು ಸದ್ಯಕ್ಕೇ ಹಿಂಡಲಗಿ ಜೈಲಿನಿಂದ ಬಿಡುಗಡೆ ಹೊಂದಿದ್ದಾರೆ. ಅಹಮದಾಬಾದದಲ್ಲಿ ಅವರಿಗೆ ಮಹಾತ್ಮರ ಉಪವಾಸದ ವಾರ್ತೆ ತಿಳಿಯಿತು. "ಹರಿಜನ ಸಂಚಾರದ ಕಾರ್ಯಕ್ರಮವನ್ನು ನಿರ್ದಾಕ್ಷಿಣ್ಯದಿಂದ ಕತ್ತರಿಸಿ ಮಹಾತ್ಮರ ಚೈತನ್ಯಶಕ್ತಿಯನ್ನು ಉಪವಾಸ ವ್ರತಕ್ಕಾಗಿ ಕಾದಿಡಬೇಕೆಂ"ದು ಅವರು ತಂತಿಯಿಂದ ಶ್ರೀ| ಠಕ್ಕರರವರಿಗೆ ಬಿನ್ನೈಸಿಕೊಂಡಿದ್ದಾರೆ ಪ್ರಸಂಗ ತೀರ ಕಠಿಣವಿದೆ. ಜಗಚ್ಚಾಲಕನೇ ಕಾಪಾಡಬೇಕು

* *

"ಕಾನಡಾ ಜಿಲ್ಲೆಯೊಳಗಿನ ಒಕ್ಕಲಿಗರಿಗೆ ನೆರವಾಗಿರಿ."

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ನೇಮಿಸಿದ ಕನ್ನಡ ಜಿಲ್ಹೆಯ ಒಕ್ಕಲಿಗರ ಕಷ್ಟನಿವಾರಣಾ ಮಂಡಳದ ಕಾರ್ಯದರ್ಶಿಗಳು ಒದಗಿಸುವ ಪತ್ರಕ:— ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಶ್ರೀ| ಗಂಗಾಧರರಾಯರ ಅಧ್ಯಕ್ಷತೆಯಲ್ಲಿ ಒಂದು ಮಂಡಳವನ್ನು ನೇಮಿಸಿ ಕರನಿರಾಕರಣೆಯ ಚಳವಳಿಯಲ್ಲಿ ಭೂಮಿ ಕಳಕೊಂಡ, ಮನೆ-ಮಾರು ಕಳಕೊಂಡ ಸಿದ್ದಾಪುರ-ಅಂಕೋಲೆಗಳೊಳಗಿನ ಒಕ್ಕಲಿಗರಿಗೆ ಸಹಾಯ ಮಾಡಲು ಉಪಾಯಯೋಜನೆ ಮಾಡಬೇಕೆಂದು ವಿಧಿಸಿದೆ. ಈ ಮಂಡಳದವರು ಸದ್ಯಕ್ಕೇ ಸಿದ್ದಾಪುರ-ಅಂಕೋಲೆಗಳಲ್ಲಿ ಸಂಚರಿಸಿ ಒಕ್ಕಲಿಗರಿಗೆ ಉದರನಿರ್ವಾಹ ಮಾಡಲು ಯಾವ ಯಾವ ಯೋಜನೆ ಮಾಡಬೇಕೆಂಬದನ್ನು ಸ್ವತಃ ಚೌಕಶಿ ಮಾಡುವರು. ಭೂಕಂದಾಯ-ಕರನಿರಾಕರಣೆಯನ್ನು ಕುರಿತು ಹೊರಟ ರಾಜಶಾಸನಗಳು ಬೇರೆಯಲ್ಲಿ ಹಿಂತೆಗೆದುಕೊಂಡಾಗ್ಯೂ ಕಾನಡಾ ಜಿಲ್ಹೆಯಲ್ಲಿ ಚಾಲು ಇರುವವೆಂಬ ಸಂಗತಿ ಎಲ್ಲರೂ ಅರಿತದ್ದೇ ಇವೆರಡೂ ತಾಲೂಕುಗಳಲ್ಲಿ ಕರನಿರಾಕರಣೆಯ ಕ್ರಮವು ಭರದಿಂದ ಪುರಸ್ಕರಿಸಲ್ಪಟ್ಟಿತು. ಆದರಿಂದ ಸಿದ್ದಾಪುರದಲ್ಲಿ ಸರಕಾರವು ಸ್ಪೆಶಲ್ ಪೋಲೀಸರನ್ನಿಟ್ಟು ಕೂಲಿಯಾಳುಗಳನ್ನು ಸಂಗ್ರಹಿಸಿ ಜಪ್ತಾದ ಭೂಮಿಗಳ ಬೆಳೆ ಕೊಯ್ಯಬೇಕಾಯಿತು ಅಂಕೋಲೆಯಲ್ಲಿ ಜಾದಾ ಪೋಲೀಸ ಶಿಬಂದಿ ಇತ್ತು ಸತ್ಯಾಗ್ರಹಿಗಳು ಆ ಕಾಲದಲ್ಲಿ ಸಮಾಧಾನದಿಂದ ಸಹಿಸಿದ ಕಷ್ಟಗಳನ್ನು ಪ್ರಕಟಿಸಲಸಾಧ್ಯ. ಈಗ ಸತ್ಯಾಗ್ರಹಕ್ಕೆ ತಡೆಬಿದ್ದಿದೆ ಇಂಥ ಸಮಯ ಮನುಷ್ಯತ್ವವನ್ನು ನೆನಿಸಿ ಅವರಿಗೆ ದೇಶಬಾಂಧವರು ನೆರವಾಗತಕ್ಕದ್ದು ಕರ್ತವ್ಯ ಕಾನಡಾ ಜಿಲ್ಹೆಯ ಸ್ಥಿತಿಯನ್ನು ಪ್ರಾಂತಿಕ ಕಾರ್ಯಕರ್ತರು ಕಾಲಕಾಲಕ್ಕೆ ತಿಳಿಸುತ್ತಿದ್ದರು ಆದರೆ, ಆ ಪ್ರದೇಶದೊಳಗಿನ ವೃತ್ತಾಂತವನ್ನು ಆ ಕಾಲದಲ್ಲಿ ಪ್ರಕಟಿಸುವದು ಬಿಡುವದಿಲ್ಲ ಈಗ ಸ್ಥಿತಿ ಬದಲಿದೆ ಕ್ರಮವಾಗಿ ನೆಮ್ಮಗ ನಡೆಯಲು ಅನುಕೂಲವಾಗಿದ ಆದರಿಂದ ಕಷ್ಟಕ್ಕೀಡಾದ ಸತ್ಯಾಗ್ರಹಿಗಳ ಸತ್ಯಸ್ಥಿತಿಯನ್ನು ಜನರಿಗೆ ತಿಳಿಸಿ ಅವರ ಕಡೆಯಿಂದ ಸತ್ಯಾಗ್ರಹಿಗಳ ಕಷ್ಟಪರಿಹಾರ ಮಾಡಲು ಯೋಜಿಸಬೇಕಾಗಿದೆ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಸದ್ಯದಲ್ಲಿಯೇ ಈ ಕುರಿತು ಸವಿಸ್ತರ ವರದಿ ಪ್ರಕಟಿಸುವವರಿದ್ದಾರೆ ಸ್ಥೂಲಮಾನದಿಂದ ಈಗ ಅಲ್ಲಿಯ ಸ್ಥಿತಿ ವಿವರಿಸ ಬಯಸುತ್ತೇವೆ. ಅಂಕೋಲೆಯಲ್ಲಿ ೧೯೩೦ನೇ ಇಸ್ವಿಯಲ್ಲಿ ೬೧೩ ಮಂದಿ ಖಾತೆದಾರರು ಕರನಿರಾಕರಿಸಿದರು, ಮಾರ್ಚದಿಂದ ಗಳಲ್ಲಿ ಅವರೆಲ್ಲರ ಜಪ್ತಿಗಳಿಕ್ಕೆ ಪ್ರಾರಂಭ ಪತ್ರ, ಪಾತ್ರೆ, ದನ-ಕರುಗಳು ಜಪ್ತಾಗಿ ಬೆಕ್ಕಿದಂತೆ ಲಿಲಾಂವಾದವು, ಪುನಃ ಪುನಃ ಧುಡಕಿಗಳಾದವು ನಿಂತ ಬೆಳೆ ಸಹ ಜಪ್ತಾಗಿ ಮಾರಾಟವಾಯಿತು ಕೋಳಿ-ಕೋಳಿಮರಿಗಳನ್ನು ಸಹ ತಾಲೂಕ ಕಚೇರಿಗೆ ಒಯ್ದು ಲಿಲಾಂವು ಮಾಡಿದರು. ಕೈಗೆ ಸಿಕ್ಕ ಯಾವದೇ ಜಿನಗಿ ಬಿಡಲಿಲ್ಲ ಸತ್ಯಾಗ್ರಹಿಗಳಿಗೆ ೧೯೩೦-೩೧ನೇ ವರ್ಷಗಳಲ್ಲಿ ಜೀವನಕ್ಕೆ ಹಿಡಿತವೆಯಿಲ್ಲ ಇಷ್ಟೆಲ್ಲ ಜಪ್ತಿ-ಲಿಲಾಂವಾದಾಗ್ಯೂ ೧೮೦ ಮಂದಿ ಖಾತೆದಾರರ ಕಿರ್ದಿ ಬಾಕಿಯಲ್ಲಿ ಉಳಿಯಿತು, ಆದರಿಂದ ಅವರ ಆಸ್ತಿಯಲ್ಲಿ ಸರಕಾರಜಪ್ತಾಯಿತು —ಸತ್ಯಾಗ್ರಹಿಗಳು ಮುಟ್ಟಿಕೊಂಡಿದ್ದ ಭೂಮಿಯ ಕಿರ್ದಿ ತೆರಲಿಲ್ಲ, ಆದರಿಂದ ಅವರ ಮನೆ ಸಹ ಜಪ್ತಾದವು, ಸತ್ಯಾಗ್ರಹಿಗಳಿಗೆ ೧೯೩೧ನೇ ಇಸ್ವಿಯಲ್ಲಿ ಸಂಯೋಗದಿಂದ ಹೊರತರು ಅವರು ಕಟ್ಟಿಕೊಂಡ ಸಣ್ಣ ಸಣ್ಣ ಗುಡಿಸಲುಗಳೂ ಮಾರಾಟವಾದವು. ೧೯೩೦ನೇ ಇಸ್ವಿಯಿಂದ ಅವರಿಗೆ ಕೆಲ ಸಹಾಯ ಸಿಗುತ್ತದೆ, ಆದರೆ ಇಷ್ಟು ಅಲ್ಪಸಹಾಯ ಪಡೆದು ಅವರಿಗೆ ಮರ್ಯಾದೆಯಿಂದ ಸಂಸಾರ ನಡಿಸಲಸಾಧ್ಯ ಹುಲ್ಲಿಲ್ಲದೆ ಅವರ ದನಗಳು ಉಪವಾಸಬೀಳುತ್ತವಾಗ ತಿಳಿಯುತ್ತದೆ ಈ ಬಾರಿ ಹುಲ್ಲಿನ ಬರಗಾಲವಿದ್ದದರಿಂದ ಅವರ ಕಷ್ಟಗಳು ಮಿಗಿಲಾಗಿವೆ

ಸಿದ್ದಾಪುರದಲ್ಲಿ ೪೬೦ ಮನೆತನಗಳು ಈ ಸತ್ಯಾಗ್ರಹದಲ್ಲಿ ಸೇರಿದವು. ಈ ತಾಲೂಕಿನೊಳಗಿನ ಹಳ್ಳಿಗಳು ದೂರ ದೂರವಿದ್ದವರಿಂದ ಅಂಕೋಲೆಯವರಿಗಿಂತ ಇಲ್ಲಿಯವರಿಗೆ ಹೆಚ್ಚಿನ ಕಷ್ಟವಾಯಿತು. ಅಂಕೋಲೆಯೊಳಗಿನ ಭೂಮಿ ಬಹುತರವಾಗಿ ಬತ್ತ ಬೆಳೆಯುವ ಗದ್ದೆ. ಸಿದ್ದಾಪುರದೊಳಗಿನ ಭೂಮಿ ಅಡಿಕೆ-ಯಾಲಕ್ಕಿ-ಮೆಣಸು ಬೆಳೆಯುವ ತೋಟ. ಅರ್ಧ ಭಾಗ ತೋಟವಿದ್ದು, ಅರ್ಧ ಭಾಗ ಗದ್ದೆ. ೧೬೦ ಮಂದಿ ಸತ್ಯಾಗ್ರಹಿಗಳ ಭೂಮಿ ಜಪ್ತಾಯಿತು. ೧೯೩೦ನೇ ಇಸ್ವಿಯಿಂದ ಈ ಮನೆತನಗಳಿಗೆ ತಮ್ಮದೆಂಬ ಭೂಮಿಯಿಲ್ಲ, ಸರಕಾರವೇ ಉಳಿಕೆ ಕೊಯ್ಯುತ್ತಿದೆ. ಚರಾಸ್ತಿ ಜಪ್ತಾಗಿ ಲಿಲಾಂವಾಗಿದೆ. ಅನೇಕರಿಗೆ ಮನೆಯೊಳಗಿಂದ ಹೊರತಳ್ಳಲಾಯಿತು. ಇವರಿಗೆ ಬಹಳ ದ್ರವ್ಯಸಹಾಯ ಮಾಡೋಣವಾಗಿದೆ. ಉಪವಾಸ ಬಿದ್ದು ಕಾಲ ಕಳೆಯುವದು ಅಶಕ್ಯವಾದ್ದರಿಂದ ಸುಮಾರು ೨೫ ಕುಟುಂಬದವರು ಸಾಗರ ಸೀಮೆಗೆ ದೇಶಾಂತರ ಹೋಗಿದರು. ಉಳಿದವರು ಕೂಳಿಗ ಗತಿಯಿಲ್ಲದೆ ಅಲೆದಾಡುತ್ತಿದ್ದಾರೆ. ೧೯೩೦ನೇ ಇಸ್ವಿಯಲ್ಲಿ ಸಿದ್ದಾಪುರ ಮತ್ತು ಸಿರ್ಸಿಯವರು ಬೆಳೆ ಹುಟ್ಟಿದ್ದರಿಂದ ತೀರ್ವೆ ತೆರದೆ ಕಷ್ಟಪಟ್ಟ ಸಂಗತಿಯೂ, ಅವರಿಗೆ ಗಾಂಧಿ ಸೇವಾ ಸಂಘದವರು ನೆರವಾದ ಸಂಗತಿಯೂ ಎಲ್ಲರಿಗೂ ಗೊತ್ತಿದೆ. ಅಂಕೋಲೆಯವರಿಗಾಗಲಿ, ಸಿದ್ದಾಪುರದವರಿಗಾಗಲಿ ಬೇಸಾಯವೇ ಜೀವನೋಪಾಯ. ಕೂಲಿ ಕೊಟ್ಟರೂ ರಾತ್ರಿಯದಲ್ಲಿ ಆಳು ಸಿಗುವದು ದುರ್ಲಭ. ಅಂಕೋಲಾ-ಮತ್ತು ಸಿದ್ದಾಪುರಗಳಲ್ಲಿ ಕೂಡಿ ಸುಮಾರು ೩೦೦೦ ಎಕರೆ ಭೂಮಿಯನ್ನು ಸತ್ಯಾಗ್ರಹಿಗಳು ಕಳಕೊಂಡಿದ್ದಾರೆ. ಇದು ಮೂಲ ಮಾಲೀಕರಿಗೆ ಸಿಗುವ ಆಶೆಯಿಲ್ಲ. ಸತ್ಯಾಗ್ರಹಿಗಳಿಗಾಗಲಿ, ಅವರ ನೆಂಟರಿಗಾಗಲಿ ಭೂಮಿಯನ್ನು ಎಷ್ಟಕ್ಕೂ ಹಿಂತಿರುಗಿ ಕೊಡಬಾರದೆಂಬ ಕರಾರಿನ ಮೇಲೆ ಲಿಲಾಂವಾಗಿದೆ. ಆದರಿಂದ ಮೂರು ಪ್ರಕಾರದ ಸಹಾಯ ಬೇಕಾಗಿದೆ — (೧) ಈ ವರ್ಷದ ಪೈರು ಸಿಗುವ ತನಕ ಹೊಟ್ಟೆಗೆ ಕೊಡುವದು, (೨) ಮನೆ ಮಾರು ಕಳಕೊಂಡವರಿಗೆ ಮನೆ ಕಟ್ಟಿಸಿ ಕೊಡುವದು, (೩) ಕಳಕೊಂಡ ಭೂಮಿಗಳನ್ನು ಅವರಿಗೆ ತಿರುಗಿ ಸಂಪಾದಿಸಿಕೊಟ್ಟು ಇಲ್ಲವೆ ಒಕ್ಕಲು ಲಾಭವುಳಿಯುವಂತೆ ಗೇಣಿಯಿಂದ ಭೂಮಿ ಸಂಪಾದಿಸಿಕೊಟ್ಟು ಅವರಿಗೆ ಸ್ಥಿರವಾದ ಜೀವನೋಪಾಯ ಕಲ್ಪಿಸಿಕೊಡುವದು. ಇಷ್ಟಕ್ಕೆಲ್ಲ ಹಣ ಬೇಕು.

ಈ ಪ್ರಕಾರ ಪ್ರಾಂತಿಕ ಕೊಂಗ್ರೆಸ ಕಮಿಟಿಯವರ ಪ್ರಕಟನೆ ಮಂಡಳದವರು ಅಂಕೋಲಾ-ಸಿದ್ದಾಪುರ ತಾಲೂಕುಗಳಲ್ಲಿ ಸಂಚರಿಸಲಾರಂಭಿಸಿದ್ದಾರೆ. ಅವರಿಗೆ ಅಲ್ಲಲ್ಲಿಯ ಪ್ರಮುಖರು, ಅಲ್ಲಲ್ಲಿಯ ಸ್ಥಿತಿ-ಗತಿಗಳನ್ನು ತಿಳುಹಬೇಕು ಮತ್ತು ಸತ್ಯಾಗ್ರಹಿಗಳ ಕಷ್ಟನಿವಾರಣ ಮಾಡಲು ಶಕ್ತಿಯುಕ್ತಿ ನೆರವಾಗಬೇಕು. ಸತ್ಯಾಗ್ರಹಿಗಳು ದೇಶಬಾಂಧವರು, ಮೇಲಾಗಿ ಮಹಾತ್ಮರ ಅಪ್ಪಣೆಯಂತೆ ಸತ್ಯಾಗ್ರಹ ಸಂಗ್ರಾಮದಲ್ಲಿ ಸೇರಿ ದೇಶಸ್ವಾತಂತ್ರ್ಯಕ್ಕಾಗಿ ಸರ್ವಸ್ವಕ್ಕೂ ದಾಟೆಯಿರಿಸಿ, ಜೀವದ ಹಂಗು ಸಹ ತೊರೆದು ಕಾದಾಡಿದ ವೀರ ಬಂಟರು. ಇಂಥ ಸಾಹಸಿಗರಿಗೆ ಮನೆ-ಮಾರು ಕಟ್ಟಿಕೊಳ್ಳಲಿಕ್ಕೂ, ಜೀವನೋಪಾಯ ಸಾಧಿಸಲಿಕ್ಕೂ ತಕ್ಕ ಏರ್ಪಾಟು ಮಾಡಿಕೊಡುವದು ಸ್ವರಾಜ್ಯಕಾಂಕ್ಷಿಗಳ ಕರ್ತವ್ಯವಿದೆ.

ಜರ್ಮನಿಯೊಳಗಿನ ‘ ಕುದಿಕುಂಡ. ’

ಜರ್ಮನಿಯಲ್ಲಿ ಕಳೆದ ವಾರದಿಂದ ಒಂದು ವಿಲಕ್ಷಣ ಪ್ರಕಾರ ನಡೆಯಿತು. ಜರ್ಮನಿಯ ಚಾನ್ಸಲರ ಯಾನೆ ಸರ್ವಾಧಿಕಾರಿಗಳಾದ ಹರ್ ಹಿಟ್ಲರರವರು ‘ ಸ್ಟಾರ್ಮ-ಟ್ರೂಪ್ಸ ’ ಎಂಬ ಸ್ವಯಂಸೇವಕದ ದಳದ ಮುಖ್ಯ-ಮುಖ್ಯಸ್ಥರನ್ನು ಬಂಧಿಸಿ ಸೆರೆ ಹಿಡಿದು ಕೆಲವರನ್ನು ವಧೆ ಮಾಡಿ ಕೆಲವರಿಗೆ ಗುಂಡು ಹಾಕಿ ಕೊಂದರು, ಕೆಲವರ ವಿಚಾರ ಮಾಡದೆ ಕೊಂದರು. ಹಳೆಯ ಮಿತ್ರರಾದವರ ‘ ಸ್ಟಾರ್ಮ - ಟ್ರೂಪ್ಸ ’ ಎಂದರೆ ಹಿಟ್ಲರರಿಗೆ ಈ [illegible] ಸರ್ವಾಧಿಕಾರ [illegible] ಸಂಸ್ಥೆ. ಇಂಥ ಸಂಸ್ಥೆಯಲ್ಲಿ ತಮ್ಮ ದ್ರೋಹಿಗಳಿರುವ ಸಂದೇಹ ಹುಟ್ಟಿ ಹಿಟ್ಲರರವರು ತಕ್ಷಣ ಮ್ಯೂನಿಕ್ ಪಟ್ಟಣಕ್ಕೆ ಹಾರಿಹೋಗಿ ಅಲ್ಲಿಯ ಮುಖ್ಯಸ್ಥರನ್ನೆಲ್ಲ ಯಮಸದನಕ್ಕಟ್ಟಿ ‘ ಸ್ಟಾರ್ಮಟ್ರೂಪ್ಸ ’ ಸಂಸ್ಥೆಯಲ್ಲಿ ಸೇರಿದ ಕೊಳೆಯನ್ನು ತಕ್ಷಣ ತೊಳೆಯಬೇಕೆನಿಸಿದ್ದರೆ. ಕೆಪ್ಟನ್ ಅರ್ನೆಸ್ಟ ರ್‍ಹೋಮರವರು ಈಗ ಈ ‘ ಸ್ಟಾರ್ಮ-ಟ್ರೂಪ್ಸ ’ ಸಂಸ್ಥೆಯ ಅಧ್ಯಕ್ಷರಿದ್ದರು. ಅವರಿಗೆ ಹಿಟ್ಲರರು ಪದಚ್ಯುತ ಮಾಡಿ ಸೆರೆಯಲ್ಲಿಟ್ಟು ಆತ್ಮಹತ್ಯೆಕ್ಕೊಪ್ಪದ್ದರಿಂದ ಒಳಗಿನ ಜೈಲಿನಲ್ಲಿ ಗುಂಡುಹಾಕಿ ಕೊಂದರು. ‘ ಜರ್ಮನ ದೇಶಕ್ಕಾಗಿ, ನನ್ನ ಒಡೆಯನಿಗಾಗಿ ನಾನೀ ಪ್ರಾಣವನ್ನರ್ಪಿಸುತ್ತೇನೆಂದು ’ ಕೆಪ್ಟನ್ ರ್‍ಹೋಮರವರು ಎದೆಗಟ್ಟಿ ಮಾಡಿ ಗುಂಡಿಗೀಡಾದರು. ಇವರ ಮೇಲಿನ ಆಪಾದನೆ ವಿಚಾರವು [illegible] ತಾಸಿನಲ್ಲಿಯೂ ಮುಗಿದ. ಇವರಿಗೂ ಇವರ ಮಿತ್ರರಿಗೆ ಇನ್ನು [illegible] ಮಂದಿ [illegible] ಹಾಕಿ ಕೊಂದರು. [illegible] ಹಿಟ್ಲರರು ತಮ್ಮ ‘ [illegible] ’ ದಳದ ಕೈಯಿಂದ ಗುಂಡು [illegible]. ಈ ಪ್ರಕಾರ ಜರ್ಮನ [illegible] ಹಿಟ್ಲರರು ‘ ಸ್ಟಾರ್ಮಟ್ರೂಪ್ಸ ’ದೊಳಗಿನ ದ್ರೋಹಿಗಳ ಕೊಲೆ ಮಾಡಿ ‘ ಸ್ಟಾರ್ಮ-ಟ್ರೂಪ್ಸ ’ ಸಂಸ್ಥೆ ಪವಿತ್ರಗೊಳಿಸಿದ ಬಗ್ಗೆ ಜರ್ಮನ್ ಸರಕಾರದ ಅಧ್ಯಕ್ಷರಾದ ಹಿಂಡನಬರ್ಗರವರು ಹಿಟ್ಲರರಿಗೆ ಹರಸಿದರಂತೆ. ‘ ಸ್ಟಾರ್ಮಟ್ರೂಪ್ಸ ’ದ [illegible] ಜರ್ಮನಿಯಲ್ಲಿ [illegible]. ಆ ಸಂಸ್ಥೆಯೇ ಹಿಟ್ಲರರಿಗೆ ಆಧಾರವಾಗಿರುತ್ತದೆ. ‘ ಸ್ಟಾರ್ಮಟ್ರೂಪ್ಸ ’ ಸೈನ್ಯಬಲದಿಂದಲೇ ಹಿಟ್ಲರರು ಜರ್ಮನಿಯಲ್ಲಿ ಸರ್ವಾಧಿಕಾರ ನಡಿಸುತ್ತಿದ್ದಾರೆ. ಇಂಥ ಸಂಸ್ಥೆಯ ಸಂಕ್ಷಿಪ್ತ ಇತಿಹಾಸವನ್ನು ತಿಳಕೊಳ್ಳುವದುಚಿತ. ಈಗ ಗುಂಡಿಗೀಡಾದ ಕೆಪ್ಟನ್ ಅರ್ನೆಸ್ಟ ರ್‍ಹೋಮರವರೇ ನ್ಯೂಯೊರ್ಕದೊಳಗಿನ ‘ ಅಮೇರಿಕನ್ ಇಲ್ಲಸ್ಟ್ರೇಟೆಡ್ ನ್ಯೂಸ ’ ಎಂಬ ಪತ್ರಿಕೆಯ ಹಿಟ್ಲರ ಸಂಚಿಕೆಯಲ್ಲಿ ‘ ಸ್ಟಾರ್ಮ ಟ್ರೂಪ್ಸ ’ ಸಂಸ್ಥೆಯ ವಿಷಯ ಒಂದು ಲೇಖ ಬರೆದಿದ್ದರು. ಅದರೊಳಗೆ ಅವರು ಹೇಳುವದೇನಂದರೆ — ‘ ಎಡೊಲ್ಫ ಹಿಟ್ಲರರವರು ಮಹಾಯುದ್ಧ ಕಾಲದಲ್ಲಿ ಸಾಮಾನ್ಯ ಶಿಪಾಯಿಯಂತೆ ರಣಾಂಗಣದಲ್ಲಿ ಕಾದಾಡಿದ್ದಾರೆ. ಯುದ್ಧ ರಣರಂಗದ ಎಲ್ಲ ತರ್‍ಹಾ ಗಂಡಾಂತರಗಳನ್ನು ಇವರು ಅನುಭವಿಸಿದ್ದಾರೆ. ಎರಡಾವರ್ತಿ ಇವರು ಗಾಯಪಟ್ಟರು. ಇವರ ಶೌರ್ಯ ನೋಡಿ ಜರ್ಮನ್ ಸರಕಾರವು ಇವರಿಗೆ ‘ ಆಯರ್ನ ಕ್ರಾಸ್ ’ ಎಂಬ ಕಬ್ಬಿಣದ ಬಿರುದನ್ನು ಕೊಟ್ಟಿದೆ. ಹಿಟ್ಲರರು ಧರ್ಮಯೋದ್ಧರು, ಅವರು ಎಷ್ಟಕ್ಕೂ ಕ್ರೂರರಲ್ಲ. ಜರ್ಮನ್ ರಾಷ್ಟ್ರಕ್ಕೆ ಮಹಾಯುದ್ಧದಲ್ಲಿ ಆದ ಅಪಜಯದಿಂದ ಹಿಟ್ಲರರು ತೀರ ನೊಂದರು. ಆ ಕಾಲದ ಸರಕಾರವೇ ಅಪಜಯಕ್ಕೆ ಕಾರಣವಾಯಿತೆಂದೂ, ಜರ್ಮನ್ ಸೈನಿಕರಿಗೆ ಸರಕಾರವು ವಿಶ್ವಾಸಘಾತ ಮಾಡಿತೆಂದೂ ಅವರ ಮನವರಿಕೆಯಾಗಿ ಆಗಿನ ಸರಕಾರವನ್ನು ಕೈವಶ ಮಾಡಿಕೊಳ್ಳುವ ವಿಚಾರದಲ್ಲಿ ತೊಡಗಿದರು. ಆ ಕಾಲದಲ್ಲಿ ಅಲ್ಲಿಂದು ‘ ಸೋಶಲ್ ಡೆಮೊಕ್ರೆಟ್ ’ ಎಂಬ ಪಕ್ಷವಿತ್ತು. ಸ್ಥಿರವಾಗಿ, ಕ್ರಮವಾಗಿ ಕೆಳತರಗತಿಯ ಜನರ ಕಷ್ಟಗಳನ್ನು ಸುಧಾರಿಸುವದೇ ಆ ಪಕ್ಷದ ಉದ್ದೇಶ. ಹಿಟ್ಲರರಿಗೆ ಈ [illegible] ಸಂಪ್ರದಾಯ ಸೇರಿಕೆಯಿಲ್ಲ. ರಣಾಂಗಣದಲ್ಲಿ ಉಚ್ಚ-ನೀಚ ಎಂಬ ಭೇದಭಾವವಿಲ್ಲದೆ ಎಲ್ಲರೂ ಒಂದೇ ಭಾವನೆಯಿಂದ ಶತ್ರುಗಳ ಮೇಲೆ, ಜೀವದ ಹರಿವೆ ಹಿಡಿಯದೆ ಸಾಗಿಹೋಗುವಂತೆ ಜರ್ಮನ್ ದೇಶದೊಳಗಿನ ಯಾವತ್ತೂ ಪ್ರಜೆಗಳು ಒಂದೇ ಎಂಬ ಭಾವನೆ ಹಿಡಿದು ಜರ್ಮನ್ ಸಮಾಜಘಟನೆ ಮಾಡಬೇಕಾಗಿ ಅವರ ಕಲ್ಪನೆಯಾಯಿತು. ಹಿಟ್ಲರರ ಹೊಸ ಪಂಥಕ್ಕೆ ‘ ನೆಶನಲ್ ಸೋಶಿಯಲಿಝಮ್ ’ ಯಾನೆ ‘ ನಾಝಿ ’ ಪಕ್ಷವೆಂದು ಹೆಸರು. ಯಾವತ್ತೂ ಆಸ್ತಿಗೆ ಜರ್ಮನ್ ರಾಷ್ಟ್ರವೇ ಒಡೆತನ, ಹೀಗೆ ಹಿಟ್ಲರರ ತತ್ವ. ಆ ತತ್ವದಂತೆ ಜರ್ಮನಿಯಲ್ಲಿ ಅವರು ಪ್ರಚಾರ ನಡಿಸಿದರು. ಮೊದಲನೇ ಸಭೆಯಲ್ಲಿ ೧೨೦೦ ಜನರಿದ್ದರು, ೨೦೦ ಹಿಟ್ಲರರ ಪಕ್ಷದವರು, ೮೦೦ ಹಿಟ್ಲರ ವಿರೋಧಕರು. ಹಿಟ್ಲರರು ನುಡಿದದ್ದೇನಂದರೆ — “ ಈ ಹೊತ್ತು ನಿಮ್ಮ ಪರೀಕ್ಷೆಯಿದೆ, ಒಬ್ಬರೂ ಸಭಾಮಂದಿರವನ್ನು ಎಷ್ಟಕ್ಕೂ ತ್ಯಜಿಸಕೂಡದು, ದೇಹದಲ್ಲಿ ಪ್ರಾಣವಿರುವವರೆಗೆ ನಾವೀ ಸಭೆಯನ್ನು ತೊರೆಯ ಕೂಡದು. ನನ್ನ ಅನುಯಾಯಿಗಳಲ್ಲಿ ಒಬ್ಬನಾದರೂ ಹೇಡಿಯಾದದ್ದು ಕಂಡರೆ ನಾನು ಅವನಿಗೆ ಕೊಟ್ಟ ಬಿಲ್ಲೆಯನ್ನು ಕಸಗೊಂಡು ಚೂರು ಚೂರು ಮಾಡುವೆ. ಸಭೆಯನ್ನು ನಡಿಯಲು ಎಷ್ಟಾದರೂ ಪ್ರತಿಪಕ್ಷಿಗಳು ಪ್ರಯತ್ನಪಟ್ಟರ ಅವರ ಮೇಲೆ ಸಾಗಿಹೋಗುವದೇ ಆತ್ಮರಕ್ಷಣೆಯ [illegible] ಉಪಾಯವಿದೆ ” ಹೀಗೆ ಹಿಟ್ಲರರು ಮಾತಾಡುತ್ತಿರುವಷ್ಟರಲ್ಲಿ ಸಭೆಯನ್ನು ಪ್ರತಿಪಕ್ಷಗಳು ಚದರಿಸ [illegible]. ಕೂಡಲೆ ೪೫ ಮಂದಿ ಹಿಟ್ಲರರ ಅನುಯಾಯಿಗಳು ಆ ೮೦೦ ಮಂದಿ ವಿರೋಧಿಗಳಿಗೆ ಅಪೂರ್ವ ಶೌರ್ಯದಿಂದ ಸಭಾಸ್ಥಾನದಿಂದ ಹೊರತಳ್ಳಿದರು, ಹಿಟ್ಲರರು ಪ್ರಸನ್ನರಾದರು. ಅಂದಿನಿಂದ ತಮ್ಮ ಸೈನಿಕರಿಗೆ ‘ ಸ್ಟೋರ್ಮಟ್ರೂಪ್ಸ ’ ಯಾನೆ ಪರಾಕ್ರಮಿ ದಂಡು, ಎಂದು ಅಭಿಮಾನದಿಂದ ಹೆಸರಿಟ್ಟರು. ಆ ದಿನ ಸಭಾಕಾರ್ಯವು ನಿರಾತಂಕದಿಂದ ಸಾಗಿತು. ಆ ಬಳಿಕ, ಪರಾಕ್ರಮಿ ದಂಡಿನ ಮೆರವಣಿಗೆಗೆ ಪ್ರತಿಬಂಧವಾಗುತ್ತಿತ್ತು, ಆಗ ರಾಜಮಾರ್ಗಗಳ ಮೇಲೆ ಅಡ್ಡಬಂದ ಜನರ ಮೇಲೆ ಸಾಗಿಹೋಗಿ ಸಂಕಲ್ಪದಂತೆ ಅವರು ಮೆರವಣಿಗೆಯನ್ನು ನಡಿಸಿದರು. ಜರ್ಮನ್ ದೇಶದ ರಾಜಮಾರ್ಗಗಳೇ ಹಿಟ್ಲರ ದಂಡಿನ ರಣಾಂಗಣ. ಅಲ್ಲಿಯೇ ಅವರು ಜರ್ಮನ್ ಸರಕಾರವನ್ನು ಗೆದ್ದರು. ಸುಮಾರು ೩೦೦ ಹಿಟ್ಲರ ಅನುಯಾಯಿಗಳು ಈ ಕದನಗಳಲ್ಲಿ ಆತ್ಮಾರ್ಪಣೆ ಮಾಡಬೇಕಾಯಿತು. ಅರ್ಧ ಲಕ್ಷ ಜನರ ಮೈಮೇಲೆ ಗಾಯದ ಕಲೆಗಳು ಇನ್ನೂ ಕಾಣುತ್ತಿವೆ. ಆ ಕಾಲದ ಜರ್ಮನ್ ಸರಕಾರವು ಹಿಟ್ಲರ ಪರಾಕ್ರಮಿ ದಂಡಿಗೆ ಹಣ್ಣುಗೆ ತರುವದಕ್ಕಾಗಿ ತರತರದ ಕಾಯಿದೆಗಳನ್ನು ರಚಿಸಿತು. ಗೌಪ್ಯವಾಗಿ ಇವರ ಮೇಲೆ ಹಲ್ಲೆ ಮಾಡೋಣಾದವು. ಹಲವರಿಗೆ ಸೆರೆಹಿಡಿದು, ಕೈದುಖಾನೆಗಳಲ್ಲಿ ದೇಹಸೋ-

ಣವಾಯಿತು. ತರತರದ ಪ್ರತಿಬಂಧಕ ಹುಕುಮುಗಳು ಹೊರಡಿಸಲ್ಪಟ್ಟವು. ಇದರಿಂದ ಪರಾಕ್ರಮಿ ದಂಡಿನ ಪರಾಕ್ರಮಕ್ಕೆ ಕುಂದು ಬರಲಿಲ್ಲ. ಪರಾಕ್ರಮಿ ಮಾಡಿ ಹಿಟ್ಲರರ ಮತ್ತು ಜರ್ಮನ್ ಸರಕಾರದ ಯಾವತ್ತೂ ಕಾರಸ್ಥಾನಗಳನ್ನು ನಿರರ್ಥಕಗೊಳಿಸಿ ಮುಂದಾಯಿತು. ಈ ದಂಡಿನ ಸೈನ್ಯಬಲವು ಭರಭರನೆ ಬಳಯಿತು. ಈಗ ಜರ್ಮನಿಯಲ್ಲಿ ಇಷ್ಟು ಪ್ರಚಂಡ ಸಂಘಟನೆಯ ದಳ ಬೇರೊಂದಿಲ್ಲ. ಜರ್ಮನ್ ದೇಶದಲ್ಲಿ ಪರಾಕ್ರಮಿ ದಂಡಿನ ಕೆಲಸಕ್ಕೆ ಕೇಂದ್ರ ಕೂಡಲೆ ಜನರು ಹೆದರುತ್ತಿದ್ದರು. ಒಲ್ಲಿಯ ಪಾರ್ಲಮೆಂಟಿನಲ್ಲಿ ಬಹುಮತ ಸಂಪಾದಿಸಲು ಹಿಟ್ಲರರು ಹೋರಾಡಲಿಲ್ಲ. ಸ್ವಸ್ತಿಕಾ ಧ್ವಜದ ಅಡಿ ರಾಷ್ಟ್ರಭಾವನೆಯಿಂದಲೂ, ಸಮಾಜ ಕಲ್ಯಾಣದೃಷ್ಟಿಯಿಂದಲೂ ಸಮಸ್ತ ಜರ್ಮನ್‌ರು ಒಂದಾಗಬೇಕೆಂಬದೇ ಹಿಟ್ಲರರ ಉದ್ದೇಶ. ಇದಕ್ಕಾಗಿಯೇ 'ಸ್ಟಾರ್ಮಟ್ರೂಪ್ಸ' ಎಂಬ ಪರಾಕ್ರಮಿ ದಂಡು ಘಟಿಸಲ್ಪಟ್ಟಿತ್ತು. ಇವರು ರಾಜಕೀಯ ಸೈನಿಕರು. ಇವರ ಕರ್ತವ್ಯವೇನೆಂದರೆ - ಸಭೆಗಳನ್ನು ರಕ್ಷಿಸುವದು, ಸಭೆಗಳಲ್ಲಿ ಒಲಾತ್ಕಾರವಾಗದಂತೆ ಜಾಗ್ರತೆಯಿಡುವದು ಮತ್ತು ನೂತನ ಸಂಪ್ರದಾಯದ ಪ್ರಚಾರ ಮಾಡುವದು. 'ಸ್ಟಾರ್ಮಟ್ರೂಪ್ಸ'ದವರು ಹೆಸರಿಗೆ ಮಾತ್ರ ಸೈನಿಕರು, ಇವರ ಕಡೆ ಶಸ್ತ್ರಾಸ್ತ್ರಗಳಿಲ್ಲ, ತುಪಾಕಿಗಳಿಲ್ಲ, ತೋಫುಗಳಿಲ್ಲ, ಮದ್ದುಗುಂಡಿಲ್ಲ. ಮಹಾಯುದ್ಧದಲ್ಲಿ ಆದ ಒಪ್ಪಂದದಂತೆ ಜರ್ಮನಿಯು ಹೊಸ ಸೈನ್ಯವನ್ನು ನಿರ್ಮಾಣಿಸಬಾರದಾಗಿ ಕಟ್ಟಪ್ಪಣೆಯಿದೆ. ಆದನ್ನು ಹಿಟ್ಲರರು ಮೀರಿಯಲ್ಲಿ ಪರಾಕ್ರಮಿ ದಂಡನ್ನು ನೂತನ ಚಳವಳಿಗಾಗಿಯೇ ಅವರು ಘಟಿಸಿದ್ದರು. ಅವರೆಲ್ಲರೂ ಕಂದೀ ಬಣ್ಣದ ಉಡಿಗೆ-ತೊಡಿಗೆಗಳನ್ನು ಧರಿಸುತ್ತಾರೆ. ತಮ್ಮ ದಂಡಿನ ನಾಯಕರಿಗೆ ಹಿಟ್ಲರರು ಸರಕಾರಿ ಸೈನ್ಯದ ಬಿಲ್ಲೆಗೆ ಸಂಬಂಧವಿಲ್ಲದಂಥ ಬೇರೆ ಬೇರೆ ಮಾದರಿಯ ಬಿಲ್ಲೆಗಳನ್ನು ಕೊಟ್ಟರು. ಅವರ ಶಿಸ್ತಿನಲ್ಲಿ ಸಹ ಭೇದವಿತ್ತು. ಸಾವಿರಾರು ಜನರನ್ನು ಒಕ್ಕಟ್ಟಿಗೆ ಸೇರಿಸಿ ವ್ಯವಸ್ಥೆ ಕಾಪಾಡಲು ಆವಶ್ಯವುಳ್ಳ ವಿಧೇಯತೆಯನ್ನೂ, ನಿರಭಿಮಾನವನ್ನೂ ಪರಾಕ್ರಮಿ ದಂಡಿಗೆ ಕಲಿಸಿದರು. ಕಂದೀ ಬಣ್ಣದ ಉಡಿಗೆ-ತೊಡಿಗೆಗಳನ್ನು ತೊಟ್ಟು ಕಂದೀ ಬಣ್ಣದ ಪ್ರಯಾಣ ಗಂಟನ್ನು ಹೆಗಲ ಮೇಲೆ ಹಾಕಿಕೊಂಡು ಕಷ್ಟ ಸಹಿಸಲಿಕ್ಕೆ ಸುಸಂಘಟಿತವಾಗಿ ಶಿಸ್ತಿನಿಂದ ದಂಡು ಕೂಚು ಮಾಡುವದನ್ನು ನೋಡಿ ಜರ್ಮನ್ ಪ್ರಜೆಗಳ ಉತ್ಸಾಹವು ಉಕ್ಕೇರುತ್ತಿತ್ತು. ನಗೆಮೊಗದಿಂದ ರಾಷ್ಟ್ರೋದ್ಧಾರಕ್ಕಾಗಿ ಹೊರಟ ಅಪೂರ್ವ ನೋಟದಿಂದಲೇ ಜರ್ಮನಿಯಲ್ಲಿ ಹಿಟ್ಲರ ಸಂಪ್ರದಾಯವು ವಿದ್ಯುದ್ವೇಗದಿಂದ ಹಬ್ಬಿತು, ಜರ್ಮನ್ ಸರಕಾರವು ಹಿಟ್ಲರರ ಆಧೀನವಾಯಿತು. ಹಿಟ್ಲರರು ಸರ್ವಾಧಿಕಾರಿಗಳಾದರು !! ಸರಕಾರಿ ಸೈನ್ಯದಲ್ಲಿ ತಮ್ಮ ಸಂಪ್ರದಾಯ ಹಬ್ಬಬೇಕೆಂದು ಹಿಟ್ಲರರು ತಮ್ಮ ಮುಖ್ಯ ಮುಖ್ಯ ಅನುಯಾಯಿಗಳನ್ನು ನೇಮಿಸಿಕೊಂಡು ರಾಷ್ಟ್ರವನ್ನೂ, ಸರಕಾರವನ್ನೂ ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡು ಜರ್ಮನ್ ರಾಷ್ಟ್ರದ ಅದ್ವಿತೀಯ ಪ್ರತಿನಿಧಿಗಳಾಗಿದ್ದಾರೆ" ಈ ಪ್ರಕಾರ ರ್‍ಹೋಮರವರು ಹಿಟ್ಲರರಿಗೆ ಹೊಗಳಿದ್ದಾರೆ. ಹಿಟ್ಲರರು ದಯಾಘನರು, ದುಷ್ಟರಲ್ಲ. ಅವರ ವಿಷಯ ಲೋಕದಲ್ಲಿ ಹರಡಿದ ಕ್ರೂರ ಕರ್ಮಗಳ ಕಥೆಯೆಲ್ಲ ತೀರ ಸುಳ್ಳು. ಸಹಕಾರಿಗಳನ್ನು ಕುರಿತು ಇವರಿಗೆ ಒಳ್ಳೇ ಅದರವಿದೆ. ಜರ್ಮನ್ ಸರಕಾರವು ಯುದ್ಧ ಕಾಲದಲ್ಲಿ ಸೈನಿಕರಿಗೆ ಬೆಂಬಲ ಕೊಡದೆ ರಾಷ್ಟ್ರವನ್ನೇ ಅಪಕೀರ್ತಿಗೀಡು ಮಾಡಿತ್ತಾಗಿ ಹಿಟ್ಲರರು ಆಗಿಂದಾಗ ನೊಂದುಕೊಂಡು ಜರ್ಮನ್ ರಾಷ್ಟ್ರದ ಕೀರ್ತಿ ಬೆಳಸುವದಕ್ಕಾಗಿ ಹಗಲಿರುಳು ದಣಿಯದೆ ದುಡಿದರಾಗಿ ಕೆಪ್ಟನ್ ರ್‍ಹೋಮರವರು ಒಡೆಯರಿಗೆ ಹೊಗಳಿದ ೩-೪ ತಿಂಗಳಲ್ಲಿ ಸ್ವಾಮಿದ್ರೋಹದ ಆರೋಪ ಹೊರಿಸಿ ಒಡೆಯರೇ ತಮಗೆ ಕೊಲ್ಲಿಸುವದನ್ನೂ, ಪ್ರಾಣಾರ್ಪಣೆ ಮಾಡುವಾಗ 'ಒಡೆಯರಿಗಾಗಿ ಸ್ವದೇಶಕ್ಕಾಗಿ ಪ್ರಾಣಾಹುತಿ ಕೊಡುತ್ತೇನಾಗಿ' ರ್‍ಹೋಮರವರು ಉದ್ಗರಿಸುವದನ್ನೂ ಕೇಳಿದರೆ, ಕರಳು ಕರಗಿ ನೀರಾಗುತ್ತದೆ. ಹಿಟ್ಲರರವರೂ ದೇಶಕಲ್ಯಾಣಕ್ಕಾಗಿಯೇ 'ಸ್ಟಾರ್ಮ ಟ್ರೂಪ್ಸ' ಸಂಸ್ಥೆಯನ್ನು ಶುದ್ಧಿ ಮಾಡಬಯಸಿದ್ದಾರೆ. 'ನ್ಯೂಯೋರ್ಕ ಟೈಮ್ಸ' ಪತ್ರಿಕೆಯ ಪ್ರತಿನಿಧಿಗಳಿಂದ ಪ್ರೊಫೆಸರ ಆಲ್ಫ್ರೆಡ್ ಪಿಯರಸನ್‌ರವರು ಹರ್ ಹಿಟ್ಲರರವರ ಕಡೆ ಈ ಕುರಿತು ಕೇಳಲು, "ನಾಝಿ ಪಕ್ಷದಲ್ಲಿ ಇತ್ತಲಾಗಿ ಬಣಗಳಾಗಿವೆ, ನನ್ನ ಅತ್ಯಂತ ನಂಬಿಗಸ್ತ ಜನರು ಸರಕಾರದ ದ್ರೋಹ ಮಾಡಿದರು, ಇದರಿಂದ ಮಹತ್ವಾಕಾಂಕ್ಷೆಯುಂಟಾಯಿತು. ಇಂಥ ದ್ರೋಹಿಗಳ ಬಲಿ ಕೊಳ್ಳುವದು ನನ್ನ ಪ್ರಥಮ ಕರ್ತವ್ಯ. ಇಲ್ಲದಿದ್ದರೆ, ಜರ್ಮನ್ ದೇಶದಲ್ಲಿ ಯಾದವಿಯುಂಟಾಗಿ ಅನರ್ಥವಾಗುತ್ತಿತ್ತು. ಜನಕ ಭೂಮಿ (ಜರ್ಮನ್‌ರು ಸ್ವದೇಶಕ್ಕೆ 'ಪಾದರಲೆಂಡ' ಅನ್ನುತ್ತಾರೆ) ಯ ಮೇಲಿನ ಸಂಕಟವನ್ನು ನಾನು ಪರಿಹರಿಸಿದ್ದೇನೆ. ಜರ್ಮನ್ ಸರಕಾರ ಧೋರಣದಲ್ಲಿ ಬದಲಾವಣೆಯಿಲ್ಲ, ಈಗಿನ ಧೋರಣವನ್ನೇ ಅದು ಅನುಸರಿಸುತ್ತಿರುವದು" ಎಂದರು. ಇನ್ನೂ ಜರ್ಮನಿಯಲ್ಲಿ ಕೆಲವರಿಗೆ ಗಲ್ಲಿಗೇರಿಸುವ ವಿಚಾರ ನಡೆದಿದೆ. ಪೋಲೀಸರು ಚೌಕಶಿ ನಡಿಸುತ್ತಿದ್ದಾರೆ. ಪರರಾಷ್ಟ್ರಗಳು ಜರ್ಮನಿಯ ಮೇಲೆ ಅನಾವಶ್ಯಕವಾದ ಆರೋಪ ಹೊರಿಸಿ ಜರ್ಮನ್ ದೇಶದ ಮೇಲೆ ಕ್ರೂರತನದ ಆಪಾದನೆ ಮಾಡುವದು ಪ್ರಾಮಾಣಿಕವಲ್ಲವೆಂದೂ ಹಿಟ್ಲರರ ಪರವಾಗಿ ಜರ್ಮನ್ ಪ್ರಚಾರ ಖಾತೆಯ ಪ್ರಧಾನರಾದ ಡಾ॥ ಗೋಬೆಲ್ಸರವರು ಆವೇಶದಿಂದ ನುಡಿಯುತ್ತಾರೆ. ಜರ್ಮನ್ ಪತ್ರಿಕೆಗಳು ಶಿಸ್ತನ್ನು ಕಾಪಾಡಿವೆ; ಕೆಪ್ಟನ್ ರ್‍ಹೋಮ ಮೊದಲಾದವರ ಕೊಲೆಯು ರಾಷ್ಟ್ರಹಿತದೃಷ್ಟಿಯಿಂದ ವಿಹಿತವಾದದ್ದೆಂದು ಅಭಿಪ್ರಾಯಪಡುತ್ತವೆ. ಜರ್ಮನ್ ದೇಶದೊಳಗಿಂದ ಪರದೇಶದ ಪತ್ರಿಕಾಪ್ರತಿನಿಧಿಗಳನ್ನು ಹೊರಹಾಕುವ ವಿಚಾರವನ್ನೂ ಡಾ॥ ಗೋಬೆಲ್ಸರವರು ನುಡಿದರು. ಜರ್ಮನಿಯೊಳಗಿನ ಪತ್ರಿಕೆಗಳ ಸಾಕ್ಷಿ ಕೊಟ್ಟಲ್ಲಿ 'ಶುದ್ಧಿಕುಂಡ'ದ ಸಮುಚ್ಚಯವಾಗದು. ಅಂತು ಜರ್ಮನ್ ದೇಶದಲ್ಲಿ ಭಯಂಕರ ಕೊಲೆಪಾತಕದ ಯಜ್ಞವೇ ನಡೆದಿದೆ. ಈತನಕ ಜರ್ಮನ್ ದೇಶದಲ್ಲಿ ೩೫೫ ಮಂದಿ ಮುಂದಾಳುಗಳ ಕೊಲೆಯಾಯಿತು!

⁂

ಜರ್ಮನಿಯಲ್ಲಿ ಈಗ ಕೋಲಾಹಲದ ಶಾಂತಿ. ಜನರು ಜರ್ಮನಿಯಲ್ಲಿ ಒಳಗೆ ನೊಂದುಕೊಂಡಿದ್ದಾರೆ. ಪರಾಕ್ರಮಿ ದಂಡಿನಲ್ಲಿ ಈಗ ೩೦ ಲಕ್ಷ ಜನರಿದ್ದಾರೆ. ಆಗಸ್ಟ ೧ಲನೇ ತಾರೀಖಿನ ವರೆಗೆ ಅವರೆಲ್ಲರಿಗೆ ರಜೆ ಕೊಡೋಣವಾಗಿದೆ. ಮುಕ್ಕಾಲು ಪಾಲು ಜನರು ಪುನಃ ಹಾಜರಾಗಲಿಕ್ಕಿಲ್ಲವಾಗಿ ಹೇಳುತ್ತಾರೆ. ಶುದ್ಧಿಕುಂಡದ ದುಷ್ಟ ಪ್ರಕಾರದಿಂದ ವಿರೋಧಕರಿಗೆ ಅನುಕೂಲವಾಗಿದೆ. ಇದರಿಂದ ಸರಕಾರದ ಪರಿಸ್ಥಿತಿ ಗಡಚಾಗುವದು. 'ಸ್ಟಾರ್ಮ ಟ್ರೂಪ್ಸ' ಸಂಸ್ಥೆಯ ಹೆಸರಿನಿಂದ ಹಣವನ್ನೆತ್ತುವಳಿ ಮಾಡಿ ದ್ರೋಹಿಗಳು ಸರಕಾರವನ್ನು ನಾಶಪಡಿಸುವದಕ್ಕಾಗಿ ಮದ್ದುಗುಂಡು ಸಂಗ್ರಹಿಸುತ್ತಿದ್ದರಂತೆ. ಅರ್ನೆಸ್ಟ ರ್‍ಹೋಮರವರಿಗೆ ಸೆರೆಹಿಡಿದಾಗ ಅವರ ಕಡೆ ೧ ಲಕ್ಷ ಮಾರ್ಕ್ಸ (ಜರ್ಮನ್ ನಾಣ್ಯ-ಬೆಲೆ ೧ ಶಿಲಿಂಗು) ಸಿಕ್ಕಿದವು. ಹಿಟ್ಲರರಿಗೆ ಪದಚ್ಯುತ ಮಾಡುವದಕ್ಕಾಗಿ ಅವರ ವಿರೋಧಕರಿಂದ ರ್‍ಹೋಮರವರಿಗೆ ಪ್ರತಿ ತಿಂಗಳಿಗೆ ೧ ಸಾವಿರ ಮಾರ್ಕ ಸಂಬಳ, ೬೦೦ ಮಾರ್ಕ ಭತ್ತೆ ಸಿಗುತ್ತಿತ್ತಂತೆ! ಮೇಲೆ ಓಡಾಡಲಿಕ್ಕೆ ಮೋಟರ ವಾಹನಗಳು ಸಿಗುತ್ತಿದ್ದವು !! ಹೀಗೆ ಬ್ರೈಟಿಶ ವಾರ್ತಾವಾಹಕ ಸಂಸ್ಥೆಯ ಬರ್ಲಿನ್ ಸುದ್ದಿಗಾರರ ತಂತಿ.

— ಪುಣೆ ಮ್ಯುನಿಸಿಪಾಲಿಟಿಯ ಮಾನಪತ್ರ ಅರ್ಪಣ ಕಾಲಕ್ಕೆ ಎಸೆದ ಬಾಂಬು ಸನಾತನಿಗಳ ಕುಹಕವಲ್ಲವಾಗಿಯೂ, ಅದು ಮಹಾತ್ಮರಿಗೆ ಉದ್ದೇಶಿಸಿದ್ದಲ್ಲವಾಗಿಯೂ ಶ್ರೀ॥ ಲಕ್ಷ್ಮಣರಾವ ಭೋಪಟಕರರ ಅಂಬೋಣ. ಆ ದಿನ ಒಗೆದ ಬಾಂಬಿನಿಂದ ವೈಕುಂಠ ತಮಗೆ ೭೩ ಗಾಯಗಳಾದವೆಂದು ಅವರು ಸಂಡಿಕ ಮದನಮೋಹನ ಮಾಲವೀಯರವರು ಪುಣೆಗೆ ಹೋದ ಸಮಯ ಅವರ ಕಡೆ ಹೇಳಿದರು. ತಮ್ಮ ಮೇಲ ಸಹ ಅದನ್ನು ಒಗೆಯುವ ವಿಚಾರವಿದ್ದಿಲ್ಲವಾಗಿಯೂ ಅವರ ಅಂಬೋಣ. ಹಾಗಾದರೆ, ಈ ಅಧಮತನದ ಕಾರಣವೇನು?

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

—ಈ ಕಂಪನಿಯು—ಪ್ರೀಮಿಯಮ್—ಹಿಂದೀ ಕಡ್ಡಾ—ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇದೆ ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟಿನ ನಿಯಮಗಳಂತೆ ಜವಾಬ್ದಾರಿಯ ಸಿಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ವಿಸ್ತರ ವಾಕಿಫ್ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು..

Kumta Agents:— D.K NAYAK Bros
Honavar Agent R V PRABHU Esq

K. PadmanabhaRao & Sons.,
BELGAUM
Chief Agents for
Karnatak Districts & S M States

ಕಾನಡಾವೃತ್ತ.

ವಿ ಕಿ ಭಾವ ಸಂ। ಆಷಾಢ ಶ [illegible] ಸೋಮವಾರ

ಸಾಲವೇ ಶೂಲ!

— ಅಗ್ರಲೇಖ —

ಇಡೀ ಹಿಂದುಸ್ಥಾನದಲ್ಲಿ [illegible] ಲಿಪ್ಟೋ ಚರ್ಚೆ ನಡೆದ [illegible] ನಂತರದಿಂದ ಆವ ಸಾಲವನ್ನು [illegible]ಗಿಸುವ ಬಗೆ ಯಾಗ? [illegible] ಎಲ್ಲರೂ ಮಾಡುತ್ತಿದ್ದರ [illegible] ಯುಕ್ತ [illegible] ಯುದ್ಧ [illegible] ಎಲ್ಲರ [illegible] ಒತ್ತರಿಸ ಬದಕ್ಕೆ! [illegible] ದವರೂ ಯುಕ್ತಿ [illegible] ರಾಷ್ಟ್ರ [illegible] ಮಾತು [illegible] ವನ್ನು [illegible] ವಿಚಾರಿಸಬಯಸ ಬದಿಲ್ಲ [illegible] ದ [illegible] ಬೆಳೆಯುತ್ತಿ [illegible]

[illegible] ಕಾರರಿಗೆ [illegible] ಸಾವಕಾರರು ಒಂದ [illegible] ಕೊಡುತ್ತಾರೆ, [illegible] ಒತ್ತಿ [illegible] ರೈತರ [illegible] ಸುಲಿಯ ಲ್ಪಡುತ್ತಾರೆ ಈ ಪ್ರಕಾರ [illegible] ಕಮಿಟಿ [illegible] ಸಂಸ್ಥಾನ [illegible] ರಿಪೋರ್ಟನ್ನು [illegible] ಯಲು [illegible] ಯಲ್ಲಿ [illegible] ಕೆಲ ಪ್ರಕ [illegible] ಸಾವಕಾರರ [illegible] ದ್ಯೋತಕವಿವೆ [illegible] ಪದ್ಧತಿಯ [illegible] ಅಂದರೆ [illegible] ೧೦೦ ರೂಪಾಯಿ ಕೊಟ್ಟು [illegible] ಕರಾರು [illegible] ರೂಪಾಯಿ [illegible] ಈ ಹಣವನ್ನು [illegible] ಸಾವಕಾರರಿಗೆ ತಿರುಗಿ [illegible] ಬೇಕು [illegible] ಮಣ [illegible] ಬೆಳೆ ಒಂದ [illegible] ಕೊಡಬೇಕು [illegible] ಹತ್ತಿ [illegible] ದಲ್ಲಿ ಇರುವ [illegible] ಯಂತೆ [illegible] ಮಾಡಿ [illegible] ಬೇಕು, ಅಂದರೆ [illegible] ಮಣ ಹತ್ತಿ [illegible] ಪೇಟೆ [illegible] ಹತ್ತಿಯ ಮಣ [illegible] ರೂಪಾಯಿ [illegible] ಇದ್ದಲ್ಲಿ [illegible] ರೂಪಾಯಿಯಂತೆ [illegible] ಸಾವಕಾರನಿಗೆ ಬರಕೊಡಬೇಕು [illegible] ಹಣ [illegible] ರೂ ೧೦೦ಕ್ಕೆ ರೂ [illegible] ಪರಿಣಾಮ [illegible] ಎಂಬ ಇನ್ನೊಂದು ಪದ್ಧತಿಯಿದೆ ಈ ಪದ್ಧತಿಯಂತೆ ಬೆಳೆ [illegible] ಮುಂಬಯಿ [illegible] ಇಲ್ಲವೆ [illegible] ದರ [illegible] ಬೆಂದಿನ [illegible] ಮುಂದಿನ ಬೆಳೆ [illegible] ಮಾರು ವದಿದೆ ಈ ಪ್ರಕಾರ [illegible] ರೈತರು ಸುಲಿಯ ಲ್ಪಡುತ್ತಾರೆ ಸಾವಕಾರರ [illegible] ರೈತರನ್ನು [illegible] ಬಿಡ್ಡ [illegible] ಅಂದು [illegible]

ಒಟ್ಟಿನ ಮೇಲೆ ಸಾವಕಾರರ ಹಿಂದೆಯಿಂದ ರೈತರ [illegible] ವಿಮೋಚನವಾಗದು [illegible] ಕಮಿಟಿ ರಿಪೋರ್ಟಿನಲ್ಲಿ [illegible] ಯಪಟ್ಟಂತೆ ಗ್ರಾಮ ಸಾವಕಾರರನ್ನು ಇದೀ ಗಲೇ ಸಂಪೂರ್ಣವಾಗಿ ಪದಚ್ಯುತ ಮಾಡುವದು ಆಸ [illegible] ಮಾತು ಅದರಿಂದ ರೈತ ಸುಧಾರಣೆಯ ವಿಚಾರ ಮಾಡುವಾಗ ನಾವು ಈಗಿನ ಸಾವಕಾರರನ್ನು ದುರ್ಲಕ್ಷ ಮಾಡಿ ದುರವಸ್ಥೆಯನ್ನು ಪರಿಹರಿಸಲು ಅಸಾಧ್ಯವಿದೆ ಸಾವಕಾರರು ಸಾಮಾನ್ಯವಾಗಿ [illegible] ಕರನ್ನು [illegible] ಮಾಡಲು ಹಾತೊರೆಯುವವ ರೆಂದು ಎಣಿಸುವದು ತೀರ ತಪ್ಪು. ಸಾವಕಾರರು ರೈತರನ್ನು ಸುಲಿಯುವದಕ್ಕಾದರೂ [illegible] ವಿಪರೀತವಾಗಿ ಸಾಲಗಾರರಿಗೆ ದಣಿಸಿದರೆ ಸಾವಕಾರರ [illegible] ಬಿಡುತ್ತಾರೆ ಸ್ವಾರ್ಥ ಸಾಧಿಸುವಾಗ ಪರಾರ್ಥವನ್ನೂ ಅವರು ಎಣಿಸಬೇಕು. [illegible] ಸಾಲ ಸಾಧನಾಗುವಂತ ಅವರು ದಣಿಸಿದರೆ, ಮುಂದೆ ಅವರ ಉದ್ದಿಮೆಯಾದ ರೂ [illegible] ಬಗ ಹೇಗೆ? ಸಾವಕಾರರು ಸಾಮಾನ್ಯವಾಗಿ ರೈತರಿಗ ದ್ರವ್ಯ ಪೂರೈಸಿ ನರವಾಗು [illegible] ಇಷ್ಟು [illegible] ಬಡ್ಡಿಯ ದರವು ರೈತರ ಸಭ್ಯತ [illegible] ಮೇಲೆ ಸರ್ವಥಾ ಅವಲಂಬಿಸಿದೆ [illegible] ಇರುವದರಿಂದಲೂ [illegible] ಅವರು ಸಡಕಾಯ್ಯತ್ತಾರಾದ್ದರಿಂದ [illegible] ಕಡಿಮೆ [illegible] ದರದಿಂದ ಸಾಲ [illegible] ಸಾಲ [illegible] ನಿವಾರಣೆಯ [illegible] ರೈತರಿಗೆ ಪತ್ತು ಇರುವದಿಲ್ಲದ್ದರಿಂದ ಸಹಜ [illegible] ಅವರಿಂದ ಒಟ್ಟಿನ ಸಾವಕಾರರಿಗ ಹಿಂದಿ ರೈತರ ಸಾಲ [illegible] ವ್ಯವಹಾರವಲ್ಲ

ಇಷ್ಟು [illegible] ನಿಂದಿಸುವದೂ ಉಂಟು ರೈತರು [illegible] ದಿಂದ ತಮ್ಮ ರಕ್ಷೆಯ ವಿಚಾರ ಮಾಡದೆ ಮದುವೆ-ಮುಂಜಿ ಮುಂತಾದ ಶುಭ ಕಾರ್ಯಗಳಲ್ಲಿಯೂ ಉತ್ತರಕ್ರಿಯೆ ಮೊದಲಾದ [illegible] ಗಳಲ್ಲಿಯೂ [illegible] ಮಾಡಿ ಸಾಲಗಾರರಾಗುತ್ತಾರೆ [illegible] ಹೇಳುವವರೇ! ಈ ಆರೋಪವು [illegible] ದಿಂದ ಹೊರಿಸಲ್ಪಡುತ್ತದೆ ಇದ [illegible] ವಿಶೇಷ [illegible] ವದಿಲ್ಲ ಯಾವತ್ತೂ ರೈತರು [illegible] ಎಣಿಸಿ ಈ ಸಿದ್ಧಾಂತ [illegible] ವ್ಯವಹಾರ [illegible] ಮನುಷ್ಯಸ್ವಭಾವದಂತೆ ಕಾಲ [illegible] ಕ್ಕನುಸರಿಸಿ [illegible] ಶುಭ ಶುಭ ಕಾರ್ಯಗಳಿಗ [illegible] ನಿಜ ಪರಂಪರೆಯಿಂದ ನಡೆ ದುಬಂದ ಮನೆತನದ ಹೆಸರನ್ನು ಕಾಪಾಡುವದಕ್ಕಾಗಿ [illegible] ಸ್ಥಿತಿ-ಗತಿಯ ವಿಚಾರ ಮಾಡದ ಸಾಲ ಮಾಡುವ ಸಂಗತಿಯನ್ನು ಸಾಮಾನ್ಯವೆಂದು [illegible] ಇದರ ವಿಚಾರ [illegible] ಸಾಮಾನ್ಯವಾಗಿ ಎಲ್ಲರೂ [illegible] ಗ್ರಹಿಸ ಯಾವತ್ತು ರೈತರಿಗ [illegible] ವದು ತೀರ ತಪ್ಪು [illegible] ಸಂಸ್ಥಾನಿಕರ ಬಾಕಿಂಗ ರಿಪೋರ್ಟಿನಲ್ಲಿ ನಮೂದಿಸಿರುವಂತೆ [illegible] ಯವು ಈಗ ತಕ್ಕಷ್ಟು [illegible] ಕೊಡುವ ಗುಪ್ತಿ [illegible] ಯಿಲ್ಲ [illegible] ದಿಂದ ಬೆಳೆಗನುಕೂಲವಾಗಿ ಮಳೆ ಬೀಳಬೇಕು, [illegible] ತಕ್ಕ [illegible] [illegible]

ಮುಟ್ಟಬೇಕು ಆದಾಗ್ಯೂ ಈಗಿನ ಪರಿಸ್ಥಿತಿಯಲ್ಲಿ [illegible] ಕಳೆದು ರೈತರಿಗೆ ಸಂಸಾರಕ್ಕೆ ಸಾಲುವಷ್ಟು [illegible] ಯವಾಗುವದು ಕಷ್ಟ [illegible] ಕಡಿಮೆ [illegible] ಸಾವಕಾರರಿಗೆ ಬಡ್ಡಿ ತೆರಬೇಕು, ಸರ್ಕಾರ [illegible] ಕಂದಾಯ ತರಬೇಕು. ಕಂದಾಯ ತೆರಹೋ [illegible] ಊಟಕ್ಕಿಲ್ಲ, ಊಟ ಮಾಡಹೋದರೆ ಕಂದಾಯ [illegible] ಸಾವಕಾರರಿಗೆ ಬಡ್ಡಿ ತೆರಹೋದರಂತು ಊಟ ಮಾಡುವದ [illegible] ಭೂಕಂದಾಯ ತೆರುವದೂ [illegible] ಒಂದು ವರ್ಷವಾದರೂ ರೈತರು ಸುಖ ದಿಂದ [illegible] ತೆರುವದಿಲ್ಲ ಭೂಕಂದಾಯ ತೆರುವಾಗ ರೈತರಿಗೆ [illegible] ಸವದು ಕಷ್ಟ! ಕಂದಾಯ ತೆರುವ ಸಮಯ [illegible] ಬಂದ ಬೆಳೆಯನ್ನು [illegible] ಮಾರಾಟ ಮಾಡಿ ಸರಕಾರಿ ಕಂದಾಯವನ್ನು ಹೇಗೂ ಅವರು ತುಂಬಬೇಕಾಗುತ್ತದೆ ಆ ಕಾಲಕ್ಕೆ ಕಾಳು ಕಡಿಯ [illegible] ದಷ್ಟು [illegible] ಯಾವ ನ್ಯಾಯವಲ್ಲಿಯೂ [illegible] ವಿಲ್ಲ [illegible] ರೈತರ ಸಾಲದ ಹೊರ [illegible] ಯಿತು ಪಂಜಾಬ ಪ್ರಾಂತದಲ್ಲ [illegible] ಇಸ್ವಿಯಲ್ಲಿ ಸರಕಾರವು ಸಾಲದ [illegible] ಮಾಡಲು ಒಂದು ಮಂಡಳ ನೇಮಿಸಿತು ರೈತರಿಗೆ [illegible] ಕೋಟಿ ಸಾಲವಾಗಿರುವದಾಗಿ ಮಂಡಳದ ರಿಪೋರ್ಟು ಇದರ ಮೇಲಿಂದ ಇಡೀ ಹಿಂದುಸ್ಥಾನ ದೇಶದಲ್ಲಿ ಎಷ್ಟು ಸಾಲವಾಗಿರಬೇಕೆಂದು [illegible] ಕಲ್ಪಿಸಬಹುದ? ಹಿಂದುಸ್ಥಾನವು [illegible] ಪ್ರಧಾನ ದೇಶವು, ಒಕ್ಕಲತನವೇ ಇಲ್ಲಿಯ ಮುಖ್ಯ [illegible] ಒಕ್ಕಲಿಗರ ಮೇಲೆ ಈ ಪ್ರಕಾರ ಸಾಲದ ಹೊರೆ ಇರುವಾಗ [illegible] ರು ಮನಮುಟ್ಟಿ [illegible] ಬೇಸಾಯವನ್ನು ನಡಿಸುವ ಬಗೆ ಹೇಗೆ? ಅದರಿಂದ ಪ್ರಾಯಃ ಜನ ದೂರೆಯುವದಾದರೂ ಹೇಗೆ? ಸಾಲದ ಹೊರೆ ನೋಡಿ ಬೇಸಾಯಗಾರರು ಹೌಹಾರಿದ್ದಾರೆ ಅವರು ಸಂಸಾರದಲ್ಲಿ ಸ್ವಾರಸ್ಯವನ್ನೇ ಕಾಣರು, ಕಷ್ಟಸಾಗರದಲ್ಲಿ [illegible] ಮುಳುಗಿದ್ದಾರೆ [illegible] ಈ ಸ್ಥಿತಿ ಯಾರಿಗೂ ಕ್ಷೇಮಕರವಲ್ಲ ಸರಕಾರಕ್ಕಾಗಲಿ, ಸಾವಕಾರರಿಗಾಗಲಿ ಇದರಿಂದ ಕ್ಷೇಮವಿಲ್ಲ, ರಾಷ್ಟ್ರಕ್ಕೂ ಇದರಿಂದ [illegible] ದರಿಂದ ಈ ಸ್ಥಿತಿಯನ್ನು ಸುಧಾರಿಸಬೇಕಾಗಿ ಎಲ್ಲರದೂ ಒಮ್ಮತ! ಪಂಜಾಬ ಸರಕಾರವು ಸಾಲ ನಿವಾರಣೆ [illegible] ಕಾಯಿದೆಯನ್ನು ಪಂಜಾಬ ಪ್ರಾಂತಿಕ [illegible] ಕೌನ್ಸಿಲನಲ್ಲಿ ಸೂಚಿಸಿದ [illegible] ಪುಣೆಯಲ್ಲಿ ಮುಂಬಯಿ ಸರಕಾರದ ಸಹಕಾರ ಸಂಘಗಳ ರಜಿಸ್ಟ್ರಾರರಾದ ಮಿ| ಕೇ ಎಲ್ ಪಂಜಾಬಿಯವರ ಶಿಫಾರಸಿನ ಮೇರೆಗ [illegible] ಬ್ಯಾಂಕುಗಳನ್ನು ಸ್ಥಾಪಿಸಿ ರೈತರ ಸಾಲ ನಿವಾರಣೆ ಮಾಡುವ ಯೋಜನೆಯಲ್ಲಿರುವದಾಗಿ ತಿಳಿಯುತ್ತದೆ, ಪಂಡಿತ [illegible] ರೂ [illegible] ಪೂರ್ಣಸ್ವರಾಜ್ಯಪಕ್ಷದವರೂ [illegible] ಯೋಜನೆಗಳನ್ನು [illegible] ಯಿಸಿರುವರಾಗಿ—[illegible] ಈ ಯೋಜನೆಗಳ ವಿಷಯ ನಮ್ಮ ವಿಚಾರಗಳನ್ನು ಈ ಮುಂದೆ ಹೇಳುತ್ತೇವೆ

ಈ ಲೇಖ ಮುಗಿಸುವ ಮುಂಚೆ ಒಂದು ಮಾತನ್ನು ಮಾತ್ರ ಹೇಳಬೇಕಾಗಿದೆ ಸಾಲಗಾರರು [illegible] ಪದಿಂದ [illegible] ಸಾಲ [illegible] ಗುವದಿಲ್ಲ [illegible] ಪರಿಸ್ಥಿತಿಯೊಳಗಿಂದ [illegible] ವದಕ್ಕಾಗಿ ಅವರು [illegible]

ರ ಏಪತ್ತಿನ ವಿಚಾರವಿಾಡಿ ದುಡ್ಡಿನ ೧ ಒರುವ ಲಕ್ಷಣ ನೋಡಿ ಸಾಲ ಕೊಡುತ್ತಾರೆ ಸಾಲಗಾರರು ವ್ಯವಹಾರಿಕರು, ಸಾಲ ಕೊಡುವವರು ಶರಾಫ ಸಾತಕರು ಎಂಬ ಭಾವನ ಹಿಡಿಯಬೇಕು ಈ ಪ್ರಶ್ನ ವು ವಿಚಾರವಾಗಬೇಕು ಅದಕ್ಕಾಗಿ ಮಟ್ಟಿಗೆ ರೈತರ ಏಪತ್ತನ್ನು ಸುಧಾರಿಸಿ ಸಾಲಗಳನ್ನು ಪರಿಹರಿಸಲಿಕ್ಕೆ ಸಹಾಯವಾಗುವ ಯಾವದೋ ಯೋಜನೆಯು ಜಾರಿಯಾಗ ಬೇಕು ಉದಾಹರಣೆಯನ್ನು ಕೊಟ್ಟು ಬಿಡುತ್ತೇವೆ ಜರ್ಮನಿಯು ಬ್ರಿಟಿಶ ದೇಶಕ್ಕೆ, ಬ್ರಿಟಿಶರು ಅಮೇರಿಕೆಯವರಿಗೆ ಸಾಲ ಕೊಡಬೇಕಲ್ಲವೇ? ಅವರಾದರೂ ಸಾಲವನ್ನು ಬೇಗ ವಸೂಲ ಮಾಡುತ್ತಾರೆ? ಅದನ್ನೊಂದು ನೋಡಬಹುದು ಜರ್ಮನ್ ದೇಶದಲ್ಲಿ ವ್ಯಾಪಾರ-ಉದ್ದಿಮೆಗಳನ್ನು ಒಸಿ ಬ್ರಿಟಿಶ ದೇಶವು ತನ್ನ ಸಾಲವನ್ನು ವಸೂಲ ಪಡೆಯಬೇಕಾಗು ತ್ತದೆ ಅಮೇರಿಕೆಯವರು ಬ್ರಿಟಿಶರ ಅನುಕೂಲತೆ ನೋಡಿ ಸಾಲವನ್ನು ತಿರುಗಿ ಕೊಳ್ಳುತ್ತಾರೆ ಒಡ್ಡಿಯ ದರ ಕಡಿಮೆ ಮಾಡಿ ... ಯೋಜನೆ ಎಲ್ಲ ಯೋಜನೆಗಳ ಸಾರ ... ಸಾಲ ... ರಾಷ್ಟ್ರಗಳಿಗೆ ... ವಂತೆ ಸಾವಕಾರ ರಾಷ್ಟ್ರ ... ವರ್ತಿಸುವದು ! ಮಹಾಯುದ್ಧದಲ್ಲಿ ... ದೊರಕದ್ದರಿಂದ ಅಮೇರಿಕೆಯವರು ಬ್ರಿಟಿಶರಿಂದ ಸಾಲ ಕೇಳಿ ... ದು ಬ್ರಿಟಿಶ ಪತ್ರಿಕೆಗಳಲ್ಲಿ ... ನಡದಿದೆ “ನಾವು ಯುದ್ಧಾರಂಭದಿಂದ ... ಕೋಟಿ ಡಾಲರು ಸಾಲ ತೆತ್ತಿವ, ... ಕೋಟಿ ಡಾಲರು ಸಲ್ಲಿಸಿತ್ತು ಈಗ ... ಕೋಟಿ ... ಲಕ್ಷ ಸಾಲವಿದೆ ಸಾಲ ತೆತ್ತ ಬಗೆ ... ಸಾಲ ... ಫ್ರಾನ್ಸ ರಶಿಯಾ, ಇಟಾಲಿ ಮೊದಲಾದ ಮಿತ್ರ ರಾಷ್ಟ್ರಗಳಿಂದ ಒರತಕ್ಕ ... ಸಾಲವನ್ನು ... ‘ಜಾನ್ ಬುಲ್’ ಪತ್ರಿಕೆಯಲ್ಲಿ ... ಗಾರ್ಡಿನರರವರು ಸಿಟ್ಟಿನಿಂದ ಬರೆಯುತ್ತಾರೆ ಸಾ ... ನೋಡಿ ಬ್ರಿಟಿಶ ರಾಷ್ಟ್ರಕ್ಕೆ ... ದು ಗಾರ್ಡಿನರರವರು ... ದೋ ... ವನ್ನು ಸರಕಾರವು ಅನುಸರಿಸಬೇಕು ಒಕ್ಕಲತನಕ್ಕೆ ಬಾಧ ಒರದಂತೆ ಒಕ್ಕಲಿಗರಲ್ಲಿ ಸಂಸಾರದ ಪ್ರೀತಿ ಬೆಳೆಯುವಂತೆ, ಸಾವಕಾರರಿಗೆ ಸುಲಿಯದಂತೆ, ಒಕ್ಕಲಿಗರ ಪತ್ತು ಬೆಳೆಯುವಂತೆ ... ಯೋಜನೆಯಾಗಬೇಕು ಅಂದರೆ ಮಾತ್ರ ದೇಶದಲ್ಲಿ ... ಸಾವಕಾರರಿಗೆ ಸುಲಿದು ... ರಿಗ ... ಮಾಡದೋದರೆ, ರೈತರಿಗೂ ಸಾವ ಕಾರರಿಗೂ ಇರುವ ಸಂಬಂಧವು ನಷ್ಟವಾಗಿ ... ಉದಯಪುರದ ... ವರು ಮುಂಬಯಿಯ ‘... ಆಫ್ ಇಂಡಿಯಾ’ ಪತ್ರಿಕೆಯಲ್ಲಿ ನಮೂದಿಸಿದ ಸಂಗತಿ ... ದೆ ೧೯-೧೯-೧೯೦೦ನೇ ಇಸ್ವಿಯಲ್ಲಿ ... ಮಧ್ಯಪ್ರಾಂತದೊಳಗಿನ ರೈತರು ... ಸರಕಾರವು ‘... ಕನ್ಸಿಲಿಯೇಶನ್ ಬೋರ್ಡ’ ಎಂಬ ... ಏರ್ಪಡಿಸಿ, ಆ ಮಂಡ ... ವಿದ್ಯಮಾನ ಸಾವಕಾರರಿಗೆ ಸಲ್ಲತಕ್ಕ ... ರಕಮನ್ನು ನಿಷ್ಕಲ್ಲದೆ ತಗ್ಗಿಸಿ ... ದಿಂದ ರೈತರಿಗೆ ಸಾಲದಿಂದ ಬಿಡುಗಡೆ ಮಾಡಿತು ... ತ್ಕಾರದ ಪ್ರಕಾರಗಳನ್ನು ಉದಯಪುರದವರು ನಮೂದಿಸಿಲ್ಲ ... ವನ್ನು ... ದಕ್ಕಿಂತ ಹೇಳಬಿರುವದೇ ... ನಮೂದಿಸಿದ್ದಾರೆ ಅವರ ... ಹೇಳಿದರೆ, ಉತ್ತರೋತ್ತರ ಸಂಪೂರ್ಣ ... ಗೂ ... ರೈತರ ದೃಷ್ಟಿಸಂಪನ್ನತೆಯು ಮಾರ್ಗವನ್ನು ಕಲ್ಪಿಸಿ ... ಒದಲಿಂದ ಪುನಃ ರೈತರು ... ಯಲ್ಲ ಬಿದ್ದರೆ ... ಕೂಡಲು ಸರಕಾರ ... ವ್ಯವಸ್ಥೆ ಯಿರಲಿಲ್ಲ ಆದರಿಂದ ರೈತರು ... ಪ್ರಕಾರದ ... ಯಿತು ಮುಂದಿನ ಇಪ್ಪತ್ತು ... ಹೋದಲ್ಲಿದ ದೊರೆತು, ... ಸಾಲ ಕೊಡಲಿಕ್ಕಿಲ್ಲವಾಗಿ ಸಾವ ಕಾರರು ಗಟ್ಟಿಕೊಂಡರು ... ಸ್ಥಿತಿಯಾದವರು ... ಈಗಿನ ಸ್ಥಿತಿ ... ರೈತರ ... ಯಿತಾಗಿ ಉದಯಪುರದ ಮಾನ್ಯರು ವರ್ಣಿಸುತ್ತಾರೆ ... ರದ ಉಪಾಯಗಳಿಂದ ರೈತರ ಸಾಲವನ್ನು ಪರಿಹರಿಸುವದು ... ಸುಲಭವಾದ ಸಂಗತಿ ಆದ ರ ಆದರಿಂದ ರೈತರ ಕಲ್ಯಾಣಸಾಧನೆಯಾಗುವದಿಲ್ಲ ರೈತರ ... ಕಲ್ಯಾಣವಾಗುತ್ತದೆ ... ಈ ವಿಚಾರಲು ಮನಸ್ಸು ... ಸದಂತೆ ... ವ್ಯಾಪಾರವಾದಂತೆ ಉಪಾಯಯೋಜನೆ ಮಾಡಬೇಕಾಗಿ ... ಮಂಡಾನಿಯೇ ... ಈ ಕುರಿತು ನಿವೇದನೆ ಈ ... ದೆ

ಮುಂದಿನ ಸ್ಥಿತಿ ಹೇಗೆ?

[ನಿರೀಕ್ಷಕನು ಬರೆದುದು]

ಇನ್ನು ಯುದ್ಧ ತಯಾರಿಯ ಕೆಲ ವಿಷಯಗಳನ್ನು ಹೇಳಿಬಿಡುತ್ತೇನೆ. ಇಲಿಗಳು ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವ ನಿರ್ಣಯ ಕೈಕೊಂಡಿದ್ದವಂತೆ, ಅಂತೆಯೇ ಜರ್ಮನಿಗೆ ಬಿಗಿಯುವದಕ್ಕಾಗಿ ಇಂಗ್ಲಂಡ-ಫ್ರಾನ್ಸ ದೇಶಗಳು ಕಾರಸ್ಥಾನ ಮಾಡುತ್ತಿವೆ. ಕಳೆದ ವಾರ ಫ್ರಾನ್ಸ ದೇಶದ ರಾಯಭಾರಿಗಳಿಗೂ ರಶಿಯಾ ದೇಶದ ರಾಯಭಾರಿಗಳಿಗೂ ಗುಪ್ತ ಸಂಭಾಷಣ ನಡೆದು ತಹನಾಮೆ ನಡಿಯುವ ವ್ಯವಸ್ಥೆ ಜರುಗಿದೆ. ಬ್ರಿಟಿಶ, ಫ್ರಾನ್ಸ, ಇಟಾಲಿ, ಬೆಲ್ಜಿಯಮ್, ಜರ್ಮನಿ, ಝೆಕೊಸ್ಲೊವಾಕಿಯಾ ರಾಷ್ಟ್ರಗಳು ಒಕ್ಕಟ್ಟಾಗಿ ಪರಸ್ಪರ ಜಗಳಾಡದೆ ಸಮಾಧಾನದಿಂದಿರಬೇಕಾಗಿ ಈ ತಹನಾಮೆಯ ಉದ್ದೇಶ ಈಗ ಗದ್ದುಕೊಂಡ ಪ್ರದೇಶಗಳನ್ನು ಈಗಿನಂತೆ ಆಯಾ ರಾಷ್ಟ್ರಗಳ ಸ್ವಾಧೀನದಲ್ಲಿರುವಂತೆ ತಹನಾಮಾಯಾಗಬೇಕಾಗಿಯೂ ಒಂದು ಕರಾರು ಮಹಾಯುದ್ಧ ನಿಂತು ವ್ಹರ್ಸಾಲಿಸದಲ್ಲಿ ಒಪ್ಪಂದವಾದಾಗ ಜರ್ಮನಿಗೆ ಘೋರ ಅನ್ಯಾಯವಾಗಿದೆಂಬ ಸಂಗತಿ ಜಗತ್ಪ್ರಸಿದ್ಧವಿದೆ ಜರ್ಮನ್ ದೇಶದ ವಸಾಹತುಗಳೂ, ಸೀಮೆಯ ಪ್ರದೇಶವು ಒಸಹರಿಸಲ್ಪಟ್ಟವೆ ಅವನ್ನು ಕೈವಶ ಮಾಡಿಕೊಂಡನಕ ಜರ್ಮನಿಗ ಸಮಾಧಾನವಿಲ್ಲ ವ್ಹರ್ಸಾಲಿಸ ತಹನಾಮೆಯಿಂದುಂಟಾದ ಅನ್ಯಾಯವನ್ನು ಪರಿಹರಿಸಿ ಜರ್ಮನಿಯ ಮನಃಪೂರ್ತಿಸಿಕೊಂಡನಕ ಯುರೋಪ ಖಂಡದಲ್ಲಿ ಶಾಂತತೆ ನೆಲಗೊಳ್ಳಲಿಕ್ಕಿಲ್ಲವಾಗಿ ಜರ್ಮನಿಯೊಡನೆ ಬಿರೋಧವಾದ ಡಾ॥ ಬ್ರಾರ್ಸನ್‌ರವರು ದೇಶಬಾಂಧವರಿಗೆ ಸದುಪದೇಶ ಮಾಡಿ ಎಷ್ಟಕ್ಕೂ ಯುದ್ಧಪ್ರಸಂಗ ತಾಗಬೇಡಿರೆಂದು ಆಗ್ರಹದಿಂದ ಸೂಚಿಸಿದ್ದಾರೆ ಹೀಗ ಯುದ್ಧವಾದರೆ, ಯುರೋಪಿಯನ್ ಸಂಸ್ಕೃತಿಯು ವಿನಾಶ ಹೊಂದುವದಾಗಿಯೂ, ಅವರು ಗಾಬರಿಪಟ್ಟಿದ್ದಾರೆ 'ನ್ಯೂ ರಿಪಬ್ಲಿಕ್' ಎಂಬ ಪತ್ರಿಕೆಯಲ್ಲಿ ವಿಖ್ಯಾತ ಮಿ॥ ಎಚ್ ಎನ್ ಬ್ರೇಲ್ಸಫರ್ಡರವರು ಯುರೋಪ ಖಂಡದೊಳಗೆ ಕಳೆದ ೨೦ ವರ್ಷಗಳಲ್ಲಿ ನಡೆದ ಕಾರಸ್ಥಾನಗಳನ್ನೆಲ್ಲ ಸಮಾಲೋಚಿಸಿ ಎಲ್ಲರೂ ಯುದ್ಧ ತಯಾರಿಯನ್ನೇ ನಡಿಸುತ್ತಾರಾಗಿ ಸಿದ್ಧಾಂತ ಮಾಡಿದ್ದಾರೆ ಫ್ರಾನ್ಸ ದೇಶಕ್ಕೆ ಜರ್ಮನಿಯ ಭೀತಿ, ಜರ್ಮನಿಗೆ ಫ್ರಾನ್ಸ-ದೇಶದ ಭೀತಿ, ರಶಿಯಾ ದೇಶಕ್ಕೆ ಜಪಾನದ ಭೀತಿ, ಹೀಗ ಪರಸ್ಪರ ರಾಷ್ಟ್ರಗಳು ಪರಸ್ಪರ ದ್ವೇಷಭಾವವನ್ನು ತಾಳಿ ತಮ್ಮ ತಮ್ಮ ಸ್ವಾರ್ಥ ಸಾಧಿಸಲು ಹೊಂಚುಹಾಕಿಕೊಂಡಿವೆ ರಶಿಯಾ ದೇಶವು ಬ್ರಿಟಿಶ-ಫ್ರಾನ್ಸ ದೇಶಗಳೊಡನೆ ಸಂಧಿಮಾಡಿಕೊಂಡು ಜಪಾನ ದೇಶಕ್ಕೆ ಗದ್ದರಿಸಲು ಕಾರಸ್ಥಾನ ಹೂಡಿದೆ ರಶಿಯಾ ದೇಶದೊಡನೆ ಫ್ರಾನ್ಸ ದೇಶವು ಒಕ್ಕಟ್ಟಾದರೆ, ಜರ್ಮನಿಗೆ ಹಣ್ಣಿಗೆ ತರಲು ಅನುಕೂಲವಾಗುವದಾಗಿ ಫ್ರೆಂಚರ ಸಾಧನೆ ಇಂಥ ಒಪ್ಪಂದದ ಜಾಲದಲ್ಲಿ ಜರ್ಮನಿಯು ಸಿಲುಕಿಕೊಳ್ಳುವ ಬಗೆ ಹೇಗೆ? ಜಪಾನ ದೇಶದವರು ೧-೫॥ ಅಬ್ಜ ರೂಪಾಯಿಗಳನ್ನು ನೌಕಾಬಲಕ್ಕಾಗಿ ಮಂಜೂರ ಮಾಡಿದ್ದಾರೆ; ಸೈನ್ಯಕ್ಕಾಗಿ ೧ ಅಬ್ಜ ರೂಪಾಯಿಗಳು ಮಂಜೂರಾಗಿವೆ ಇದಲ್ಲದೆ, ವಿಮಾನಗಳಿಗಾಗಿ ಇನ್ನೂ ರಕಮು ಗಳು ಮಂಜೂರಾಗುತ್ತಿವೆ. ರಶಿಯಾ, ಅಮೇರಿಕಾ, ಚೀನ ದೇಶಗಳು ತಮ್ಮ ತಮ್ಮ ಪ್ರಮಾಣಿಕ ಬಳಗವನ್ನು ಬೆಳಸಲಾರಂಭಿಸಿವೆ ಆದರಿಂದ ನಾವು ಬಲಿಷ್ಠರಾಗಿದೆ ರಶಿಯಾ ದೇಶದವರು ವ್ಲಾಡಿವೋಸ್ಟಾಕ್ ಬಂದರದಲ್ಲಿ ನಮ್ಮ ಜಪಾನ ದೇಶದ ಮೇಲೆ ಒಂದು ದಾಳಿಸುವ ಪ್ರಚಂಡ ತೋಫುಗಳನ್ನು ರಚಿಸಿಟ್ಟಿದ್ದಾರೆ." ಹೀಗ ಜಪಾನ ದೇಶದ ಯುದ್ಧ ಮಂತ್ರಿಗಳ ಅಂಬೋಣ ರಶಿಯಾ ದೇಶದ ಸರಕಾರವು ಮದ್ದು-ಗುಂಡಿನ ಕಾರಖಾನೆಯವರ ಪಗಾರನ್ನು ಶೇಕಡಾ ೧೧ರಂತೆ ಬೆಳಸಿತು. ಅವರ ಇನ್ನೆಕೆಲ್ ಟಿಕ್ಕಿನ ತೆರಿಗೆಯನ್ನು ಕಡಿಮೆ ಮಾಡಿತು. ಮೇಲೆ ಹೆಚ್ಚಿಗೆ ಕೆಲಸ ಮಾಡಿ ಅವರು ಬೋನಸಗಳನ್ನು ಪಡೆಯಬಹುದಾಗಿಯೂ ಸರಕಾರ ಅನುಕೂಲತೆ ಜರ್ಮನಿಯಲ್ಲಿ ಯುದ್ಧ ತಯಾರಿ ಜರುಗಿ ನಡೆದಿದೆ ಲೋಕಸಂಖ್ಯೆಯನ್ನು ಬೆಳಸುವದಕ್ಕಾಗಿ ಸರಕಾರಿ ಕಾಮಗಾರರ ಹೆಣ್ಣುಮಕ್ಕಳು ಮದುವೆಯಾದವರಿಗೆ ಇನಾಮುಗಳನ್ನು ಹಂಚುತ್ತಿದ್ದಾರೆ ಕಳೆದ ವರ್ಷ ಸುಮಾರು ೭ ಸಾವಿರ ಮಕ್ಕಳು ಬೆಳೆಯುತ್ತಾರೆ! ಸಿಯಾಮ ದೇಶದ ಅರಸರೊಡನೆ ತಹನಾಮೆ ಮಾಡಿಕೊಂಡು ಅಲ್ಲಿಂದ ಒಕ್ಕಲು ಅಕ್ಕಿ, ರಬ್ಬರು ಮೊದಲು ಮಾಡಿ ಬೇಕಾದ ಜಿನಸುಗಳನ್ನು ಪೂರೈಸಿಕೊಳ್ಳಲು ಕಳುಹಿಸುವದಂತೆ ಜಪಾನದವರು ಬರಲಿಗ ಜರ್ಮನ್ ಸರಕಾರವು ಸಿಯಾಮ ದೇಶಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುವದಂತೆ ಈ ಪ್ರಕಾರ ಜಿನಸುಗಳನ್ನು ವಿನಿಮಯ ಮಾಡಿಕೊಳ್ಳುವ ತಹನಾಮಾಯನ್ನು ಸ್ಥಿರಪಡಿಸುವದಕ್ಕಾಗಿ ಸಿಯಾಮ ದೇಶದ ಅರಸರು ಬರ್ಲಿನ್ ಪಟ್ಟಣಕ್ಕೆ ಹೋಗುವವರಿದ್ದಾರಂತೆ ಇದಲ್ಲದೆ, ಜರ್ಮನ್ ಸಂಶೋಧಕರು ವಿಷಾರಿ ಕ್ರಿಮಿಗಳ ಶೋಧ ಮಾಡಿ ಅವುಗಳನ್ನು ವಿಮಾನದೊಳಗಿಂದ ಮಳೆಗರೆದಂತೆ ಬೇಕಾದಲ್ಲಿ ಕಡಿಸಿ ಜನರನ್ನು ನಿರ್ನಾಮ ಮಾಡಿ ವಿಜಯ ಹೊಂದುವ ರಾಕ್ಷಸೀ ಉಪಕ್ರಮದಲ್ಲಿ ತೊಡಗಿದ್ದಾರೆ. ಈ ಕ್ರಿಮಿಗಳ ಪೆಟ್ಟು ತಪ್ಪಿಸಿಕೊಳ್ಳುವದಕ್ಕಾಗಿ ಬ್ರಿಟಿಶ-ಫ್ರಾನ್ಸ ದೇಶಗಳಲ್ಲಿ ನೆಲದಡಿ ಉಗಿಬಂಡಿ ಮೊದಲಾದ ವಾಹನಗಳ ನಿರ್ಮಾಣವಾಗುವದಂತೆ ಜರ್ಮನರು ವಿಮಾನದೊಳಗಿಂದ ಎಸೆಯುವ ಕ್ರಿಮಿ ಜಾತಿಯ ನಿವಾರಣೆಗಾಗಿ ಬ್ರಿಟಿಶ ಫ್ರಾನ್ಸ-ಬೆಲ್ಜಿಯಮ್ ದೇಶಗಳು ಒಕ್ಕಟ್ಟಾಗಿ ಜರ್ಮನ್ ದೇಶದಿಂದ ಹಾರ್ಯಾಡುವ ವಿಮಾನಗಳ ಹಾದಿಯಲ್ಲಿ ಅಡ್ಡಗಟ್ಟಿ ಕೆಡವಿ ಸಂರಕ್ಷಿಸಿಕೊಳ್ಳಬೇಕೆಂಬ ಹಂಚಿಕೆಯೂ ನಡೆದಿದೆ. ವ್ಹರ್ಸಾಲಿಸ ಒಪ್ಪಂದದಿಂದ ಉಂಟಾದ ಅನ್ಯಾಯವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಜರ್ಮನಿಯು ಪರವಶನಾದಿಯ ಪ್ರಯತ್ನ-ಮಾಡದಿರನೆಂದು ವ್ಯಕ್ತವಾಗುತ್ತಿದೆ-ವಿಮಾನು ಗಳ ಹಲ್ಲೆ ತಪ್ಪಿಸಿಕೊಳ್ಳುವದಕ್ಕಾಗಿ ಬ್ರಿಟಿಶರು ಫ್ರಾನ್ಸ-ಬೆಲ್ಜಿಯಮ್ ದೇಶಗಳಲ್ಲಿ ಸೈನ್ಯವನ್ನು ಕಾಯ್ದಾದರು ಅವಶ್ಯ ಬಿದ್ದಾಗಾಗಿಯೂ, ಎಲ್ಲೆಲ್ಲಿ ಎಷ್ಟೆಷ್ಟು ಸೈನ್ಯವನ್ನಿಡಬೇಕೆಂಬದರ ಕುರಿತು ದೀರ್ಘಾಲೋಚನ ನಡೆದದಾಗಿಯೂ ಹೇಳುತ್ತಾರೆ ಫ್ರಾನ್ಸ ದೇಶಕ್ಕೂ, ರಶಿಯಾ ದೇಶಕ್ಕೂ ತಹನಾಮೆಯಾದ ಪಕ್ಷಾನೂ ನಿದೆ ಹೀಗೆ ತಹನಾಮೆಯಾದಲ್ಲಿ ಜರ್ಮನ್ ರಾಷ್ಟ್ರವು ಮತ್ತಷ್ಟು ಸಂತಪ್ತವಾಗುವ ಹಾಗಿದೆ ರಶಿಯಾ ದೇಶವು ತುರ್ಕಸ್ಥಾನ ಹಾಗು ಇರಾಣ ದೇಶಗಳೊಡನೆ ಗುಪ್ತ ತಹನಾಮೆ ಮಾಡಿಕೊಂಡದ್ದರಿಂದ ಬ್ರಿಟಿಶ ರಾಷ್ಟ್ರಕ್ಕೆ, ರಶಿಯಾ ದೇಶದ ಮೇಲೆ ಸಂಶಯವುಂಟಾಗಿದೆ ರಶಿಯಾ ದೇಶವನ್ನು ದಬ್ಬುವದಕ್ಕಾಗಿ ಜಪಾನ ದೇಶದೊಡನೆ ಸಹಕಾರ ಮಾಡಲು ಬ್ರಿಟಿಶ ದೇಶದಲ್ಲಿ ಲೋಕಮತ ಪಟಿನೆಯಾಗುತ್ತಿದೆ. ಜಪಾನ ದೇಶವು ಚೀನ ದೇಶದಲ್ಲಿ ಬೇಕಾದ ಹಾಗೆ ಸೂರೆಯ ಮಾಡಲಿ, ಆ ಗೊಡವೆ ನಾವು ಹಾಗಲಾಗದು. ಜಪಾನಿಯರಿಗೆ ಚೀನ ದೇಶದ ಆಕ್ರಮಣ ಮಾಡಗೊಡದಿದ್ದರೆ ಅವರು ಬದುಕಿ ಬಾಳ್ವೆ ಮಾಡುವ ಬಗೆ ಹೇಗ? ವರ್ಷಾವರ್ಷ ಬೆಳೆಯುತ್ತಿರುವ ಜಪಾನಿಯರಿಗೆ ಉಳುಕೊಳ್ಳಲು ಸ್ಥಳ ಬೇಡವೇ?" ಹೀಗ ರೂಢರವಿಯರ ಮೋರೆಗೀರು ಒಂದು ಲೇಖವನ್ನು ತಮ್ಮ 'ಡೇಲಿ ಮೇಲ' ಪತ್ರಿಕೆಯಲ್ಲಿ ಬರದು, ಅದನ್ನು ತಂತಿಯಿಂದ ಜಪಾನ ದೇಶಗಿನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ ಜಪಾನ ರಾಷ್ಟ್ರದ ಸ್ನೇಹಸಂಗ್ರಹಕ್ಕಾಗಿ ರೋದರವಿಯರ ಮೋರೆಗೀರು ಸುಳ್ಳು ವಿಧಾನ ಮಾಡಿರುವರಿ "ಪೀಪಲ್ಸ ಟ್ರಿಬ್ಯೂನ" ಎಂಬ ಚೀನ ರಾಷ್ಟ್ರೀಯ ಮಾಸಪತ್ರಿಕೆಯು ನಿಷೇಧಿಸಿದೆ. ರಶಿಯಾ ದೇಶಕ್ಕೂ, ಅಮೇರಿಕೆಗೂ ಮನಸ್ತಾಪವಿದೆ. ಅಮೇರಿಕೆಯವರು ರಷ್ಯಾರಿಗೆ ಕೊಟ್ಟ ಸಾಲಗಳನ್ನು ತೆರಲು ತಾವು ಒಪ್ಪದಿರಲ್ಲವಾಗಿ ರಶಿಯಾ ದೇಶದ ಸಮಾಜ ಸತ್ತಾವಾದಿ ಸರಕಾರವು ಹೇಳಿ, ಅಮೇರಿಕೆಯ ಗಂಟನ್ನೇ ನುಂಗಿವೆ ಮಿ॥ ಬ್ರೇಲ್ಸಫರ್ಡರವರು ನುಡಿದಂತೆ ಯಾವತ್ತೂ ಕಾರಸ್ಥಾನಗಳು ಗುರಿಯೊಂದೇ. ಯುದ್ಧಸಿದ್ಧತೆ. "೧ ವರ್ಷದಲ್ಲಿ ಯುದ್ಧವಾಗುವದು ಖಂಡಿತ, ಅಷ್ಟರೊಳಗ ತಾವು ಮಾಡತಕ್ಕದ್ದೇನು? ವಸಾಹತುಗಳೇನು ಮಾಡಬೇಕು? ಹಿಂದುಸ್ಥಾನವು ಏನು ಮಾಡಬೇಕು?" ಎಂಬ ಸಂಗತಿಗಳನ್ನು ಬ್ರಿಟಿಶ ಸಾಮ್ರಾಜ್ಯ ಸರಕಾರವು ಈ ಅವಧಿಯಲ್ಲಿಯೇ ನಿಶ್ಚಯ ಮಾಡಿಕೊಳ್ಳಬೇಕು ' ಹೀಗೆ ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯು ಲಂಡನಿನ ಸ್ವಂತ ಸುದ್ದಿಗಾರರು ಬರೆಯುತ್ತಾರೆ. "ಮುಂದಿನ ಯುದ್ಧದಲ್ಲಿ ಹಿಂದುಸ್ಥಾನದ ಬ್ರಿಟಿಶ ದೇಶವು ಸೇರಿದಾಗಲು ನಾವೆಷ್ಟಕ್ಕೂ ಸೇರಲಾಗದು ಬ್ರಿಟಿಶ ದೇಶಕ್ಕೆ ನೆರವಾಗಬೇಕೋ ಹೇಗ" ಎಂಬ ಪರೆಕುರಿತು ಪ್ರಜೆಗಳಿಂದ ಪ್ರತ್ಯೇಕ ಮತ ಕೊಂಡನಕ ನಿರ್ಣಯಿಸಕೂಡದು." ಹೀಗ ಕೆನಡಾ ದೇಶದ ಸೇನಾಪತಿ ಮೆಕ್ರಿಯವರು ಉದ್ಗರಿಸುತ್ತಾರೆ "ಯುದ್ಧವಾಗಲೇ ಬೇಕು, ಅದರೊಳಗೆ ಬ್ರಿಟಿಶರು ಸೇರಿಕೊಳ್ಳಲೇಬೇಕು." ಹೀಗೆ ಸಹ ಅವರ ಅಭಿಪ್ರಾಯ

ಯುದ್ಧದ ಪರಿಸ್ಥಿತಿಯ ಮೂಲಕ ಹಿಂದೀ ಪ್ರಜೆಗಳ ಮನಃಪಾಲಿಸಲು ಸಾಮ್ರಾಜ್ಯ ಸರಕಾರವು ಪ್ರಯತ್ನಪಡಲಿಕ್ಕಿಲ್ಲವೇ ? ನಿರಾಶೆಯಲ್ಲಿ ಇದೊಂದು ಆಶಾಂಕುರ

— ಮಹಾತ್ಮರು ರಾಯಪೂರಿಗೆ ಹೋದಾಗ ಸನಾತನ ಧರ್ಮಸಭೆಯ ಪ್ರತಿನಿಧಿಗಳಾದ ಶ್ರೀ॥ ಗೋವಿಂದ ಮಿ ಗಣೇಶ ದತ್ತರವರು ಮಹಾತ್ಮರಿಗೆ ಹೂಮಾಲ ಹಾಕಿ ಗಂಧಲೇಪನ ಮಾಡಿ ಸ್ವಾಗತ ಮಾಡಿದರು ಮಹಾತ್ಮರು ಕಲಕತ್ತೆಗೆ ಹೋಗುವಾಗ ಉಗಿಬಂಡಿಯಲ್ಲಿ ಅವರಿಗೆ ನಿದ್ದೆ ಮಾಡಲು ಇಂಬಾಗಲಿಲ್ಲ, ಇಡೀ ರಾತ್ರಿ ಪ್ರತಿ ಸ್ಟೇಶನಿನಲ್ಲಿ ಜನರಿಂದ ಮಹಾತ್ಮರ ಹರಿಜನ ಕಾಣಿಕೆ ಎತ್ತುವಳಿ ನಡೆಯುತ್ತಿತ್ತು

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲಿಗೆ ಬಿಸಿಲು, ರಾತ್ರಿ ಬೆಳದಿಂಗಳು, ಆಕಾಶ ಮಳೆಯಿಲ್ಲದ ರೈತರ ಗೋಳು. ಮೊನ್ನೆ ರಾತ್ರಿ ಒಂದು ಮಳೆ ಬಿತ್ತು. ನಿನ್ನೆ ಸಾಯಂಕಾಲದಿಂದ ಪುನಃ ಮಳೆ ಹಿಡಿದದ್ದರಿಂದ ಒಕ್ಕಲಿಗರಿಗೆ ಸಮಾಧಾನವಾಗಿದೆ. ಹವೆಯಲ್ಲಿ ವಿಲಕ್ಷಣವಾದ ತಂಪು ಹುಟ್ಟಿದೆ.

ಕೆಲವೆಡೆ ಪ್ಲೇಗ ಇಲಿ ಬೀಳಲಿಕ್ಕೆ ಪ್ರಾರಂಭವಾಗಿದೆ. ನಿನ್ನೆ ಪುಸ್ತಿಕೆಯಲ್ಲಿ ೧೦—೧೫ ವರ್ಷ ಪ್ರಾಯದ ಹುಡುಗಿಯೊಬ್ಬಳು ಪ್ಲೇಗಿನಿಂದ ೨-೩ ದಿನಗಳಲ್ಲಿ ತೀರಿಕೊಂಡಳು. ಜನರು ಜಾಗ್ರತೆಯಿಂದ ಇರಬೇಕು. ಸ್ವಚ್ಛತೆ ಕಾಯಬೇಕು, ಪಥ್ಯಕರ ಆಹಾರ ಕೊಳ್ಳಬೇಕು ಹೊಟ್ಟೆ ಬಿಗಿಯಾಗದ ಹಾಗೆ ನೋಡಬೇಕು, ಕಷಾಯ ಕೊಳ್ಳಬೇಕು ಮಳೆಯ ದಿನ ಏನು ಮಾಡಬೇಕು, ಸ್ಥಳ ಮಾಸ್ತರ, ಮಂಗಳೂರು ಇವರು ಪ್ಲೇಗ ಪ್ರತಿಬಂಧಕ 'ನವನಾಳ ಕಷಾಯ' ವನ್ನೊಂದು ಸೂಚಿಸುತ್ತಾರೆ (೧) ಕಹಿಬೇವಿನ ಎಲೆಬೇರು ೫ ಅಂಶ, (೨) ಕರಂಜಬೇರು (ಹೊಂಗೆ ಕಾಲಗಳು) ೩ ಅಂಶ, (೩) ಬಿಳೇ ಉತ್ರಾಣಿ ಬೇರು ೧ ಅಂಶ, (೪) ಕಲ್ಲುಸಕ್ಕರೆ ೧ ಅಂಶ (೫) ಚಿರಾಯತ (ನೆಲಬೇವು-ಬಿರಾಯತ) ೧ ಅಂಶ (೬) ಜೀರಿಗೆ ೧ ಅಂಶ (೭) ಗರುಡವಾತಾಳ ಬೇರು ೧ ಅಂಶ, (೮) ಪಿತ್ತಪಾಪಡ ಬೇರು (ಸಪ್ತಾಂಗಿ) ೧ ಅಂಶ, (೯) ಮೆಣಸು ೧ ಅಂಶ, ಹೀಗೆ ೯ ಜಿನಸುಗಳನ್ನು ಕುಟ್ಟಿ ಪುಡಿಮಾಡಿ ಅದ್ದನ್ನು ಕಷಾಯ ಮಾಡಿ ದಿನಾ ೨ ಬಾರಿ ೨ ತೊಲೆ ಕಷಾಯ ಕೊಳ್ಳಬೇಕು ಬೆಳಿಗ್ಗೆ ಎದ್ದ ಕೂಡಲೆ ಒಮ್ಮೆ, ರಾತ್ರಿ ಮಲಗುವಾಗ ಮತ್ತೊಮ್ಮೆ ಹೀಗೆ ಕೊಳ್ಳಬೇಕು. ಕಷಾಯವನ್ನು ದಿನಾ ೨ ಬಾರಿ ಕಾಸಿದರೂ ಕೆಡುವದಿಲ್ಲ. ಶ್ರೀ ಚಿತ್ರಪುರ ಸ್ವಾಮಿಗಳ ಪ್ಲೇಗ ಪತ್ರಿಕೆಯಿಂದ ಜನರಿಗೆ ಗುಣ ದೊರಕಿದೆ, ಅದನ್ನು ಉಪಯೋಗಿಸಬಹುದು. ಕಲಕತ್ತೆಯ 'ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಸಿ. ಡಿ. ಕರ್ಟಿಸ್ ಎಂಬವರು ಅಲ್ಲಾಸರಿಂದ ಮಾರ್ಚ ೧೫ನೇ ತಾರೀಖಿನ ಪತ್ರ ಬರೆದು ಪ್ಲೇಗ ಬೇನೆಯ ಮೇಲೆ ಒಂದು ಉಪಚಾರ ಸೂಚಿಸಿದ್ದಾರೆ. 'ಅರ್ಗ್ಯಾ ಪ್ರದೇಶದಲ್ಲಿ ಪ್ಲೇಗು ಹಬ್ಬಿದೆಂದು ನನಗೆ ತಿಳಿಯಿತು. ಇನಾಕ್ಯುಲೇಶನ್ ಪ್ರಚಾರ ಮಾಡಲು ಇದೇ ಸಂಧಿಯಿಂದ ನಾನು ಹಳ್ಳಿಗಳಿಗೆ ಹೋದೆನು. ಹಳ್ಳಿಗರು ಬಹುಜನರಾಗಿ ಪರಂಪರಾಗತ ಪದ್ಧತಿಯವರು, ಅವರ ಮನವೊಲಿಸಲು ನನ್ನಿಂದಾಗಲಿಲ್ಲ. 'ನಾವೇ ಬರೇ, ಸಾಮಾನ್ಯ ಉಪಾಯಗಳಿಂದ ಪ್ಲೇಗಿನವರನ್ನೆಲ್ಲ ಬದುಕಿಸಿಕೊಂಡಿದ್ದೇವೆ, ಒಬ್ಬರು ಸಹ ಪ್ಲೇಗಿನಿಂದ ಸಾಯಲಿಲ್ಲ, ಇನಾಕ್ಯುಲೇಶನ್‌ದ ಉಪದ್ರವ ನಮಗೇಕೆ?' ಎಂದರು. ನಾನು ಚೌಕಶಿ ಮಾಡಿದೆನು. ಆ ಹಳ್ಳಿಯಲ್ಲಿ ೫ ಮಂದಿ ಗಂಡಸರಿಗೆ, ೩ ಮಂದಿ ಹೆಂಗಸರಿಗೆ ಒಬ್ಬ ಹುಡುಗಿಗೆ ಪ್ಲೇಗಾಗಿತ್ತು. ಎಲ್ಲರೂ ಗುಣ ಹೊಂದಿದ್ದರು. ಇಬ್ಬರ ಕಡೆ ನಾನೇ ಸ್ವತಃ ಮಾತನಾಡಿ ರೋಗ ಲಕ್ಷಣ ಕೇಳಿಕೊಂಡೆ. ಜ್ವರ ಬರುತ್ತದೆ, ಕಣ್ಣು ಕೆಂಪಾಗುತ್ತದೆ, ಗಂಟುಗಳು ಏಳುತ್ತವೆ, ಹೀಗೆ ಅವರು ಹೇಳಿದರು. ಅಲ್ಲಿದ್ದ ಇತರರೂ ಹೀಗೆಯೇ ಹೇಳಿದರು. ಈ ರೋಗ ಪರಿಹಾರಕ್ಕೆ ಹಳ್ಳಿಯವರ ಉಪಚಾರವೇನೆಂದರೆ— "ನಾಗಫಣಿ (ಮುಳ್ಳುಗಳ್ಳಿ = *Prickly Pear*) ಯ ಎಲೆ ತಂದು ಅದರ ಎಂಟೂ ಬದಿಗಿರುವ ಮುಳ್ಳುಗಳನ್ನು ತೆಗೆಯುತ್ತಾರೆ. ಆ ಮೇಲೆ ನಟ್ಟನಡುವೆ ಅರಿಶಿನ *(Turmeric)* ಎಂಬ ಅರಿಸಿಣ ತಂದು ಚೆನ್ನಾಗಿ ಕುಟ್ಟಿ ಪುಡಿಮಾಡಿ ನಾಗಫಣಿ ಎಲೆಗೆ ಹಚ್ಚಿ ಅದನ್ನು ಒಲೆಯ ಮೇಲೆ ಹಿಡಿದು ಬಿಸಿಮಾಡುತ್ತಾರೆ, ಆ ಮೇಲೆ ಅದನ್ನು ಗಂಟಿಗೆ ಹಚ್ಚಿ ಕಟ್ಟುತ್ತಾರೆ. ೩-೪ ತಾಸುಗಳಾದ ಬಳಿಕ, ಅದನ್ನು ತೆಗೆದು ಇದೇ ಪ್ರಕಾರ ಮತ್ತೊಂದು ನಾಗಫಣಿಯ ಎಲೆಯನ್ನು ಕಟ್ಟುತ್ತಾರೆ. ೨೪ ತಾಸುಗಳಲ್ಲಿ ಗಂಟು ಕರಗುತ್ತದೆ, ಜ್ವರ ಇಳಿಯುತ್ತದೆ. ೨ ದಿವಸಗಳಲ್ಲಿ ರೋಗಿಯು ಎದ್ದು ತಿರುಗುತ್ತಾನೆ." ೧೦—೧೨ ಹಳ್ಳಿಗಳಲ್ಲಿ ನಾನು ತನಿಖೆ ಮಾಡಿದೆ, ಎಲ್ಲರೂ ಈ ಪ್ರಕಾರದ ಸಾಕ್ಷಿ ಕೊಟ್ಟರು. ಆದರಿಂದ ಉರ್ದು ಮತ್ತು ಹಿಂದೀ ಭಾಷೆಗಳಲ್ಲಿ ಹಸ್ತಪತ್ರಿಕೆಗಳನ್ನು ತಯಾರಿಸಿ ಹಂಚಿದರೆ, ಸಾವಿರಾರು ಮಂದಿಗಳ ಪ್ರಾಣ ಉಳಿದೀತು. ಇತ್ಯಾದಿ ಬರೆಯುತ್ತಾರೆ. ಪ್ಲೇಗಿನ ಮೇಲೆ ಈ ಸುಲಭ ಉಪಾಯವನ್ನು ಮಾಡಿನೋಡಬಹುದು.

ಪೋಲೀಸರಿಗೆ ಇನ್ನೂ ಗಾಂಧೀ ಟೊಪ್ಪಿಗೆಯ ಮೇಲೆ ಸಿಟ್ಟು ಹೋಗಿಲ್ಲ. ಮೊನ್ನೆ ಹಳ್ಳಿ ಹೋಗುವ ಬಿಳೇ ಟೊಪ್ಪಿಗೆಯವರ ಹೆಸರು ಕೇಳಿಕೊಂಡ ಬಳಿಕ, ಮೋಟಾರ ಬಿಡುತ್ತಾರೆ. ಇದರಿಂದೇನು ಪ್ರಯೋಜನ?

ಹೆಗಡೆ ಶಾಲೆಯೊಳಗೆ ೩ನೇ ಇಯತ್ತೆ ಕಲಿಸುತ್ತಿದ್ದ ರಾ। ಭಟ್ಟ ಮಾಸ್ತರರಿಗೆ ನಿಜಾರ್ನಕ್ಕೆ ವರ್ಗವಾಯಿತು. ಇಲ್ಲಿ ಅವರ ಬದಲಿಗೆ ಬಂದ ಮಾಸ್ತರರಿಗೆ ೩ನೇ ಇಯತ್ತೆಗೆ ಮಕ್ಕಳ ಕಲಿಸತಕ್ಕವರು ಕಾರಣ ಆದ್ದರಿಂದ ಹೆಗಡೆಯ ಶಾಲೆಯಲ್ಲಿ ಸ್ವಲ್ಪ ಗಲಿಬಿಲಿ. ರಾ। ಭಟ್ಟ ಮಾಸ್ತರರು ಯೋಗ್ಯರಿದ್ದು, ಹೆಗಡೆ ಶಾಲೆಯಿಂದ ಮುಲ್ಕಿ ಪರೀಕ್ಷೆಗೆ ಹೋದ ಇವರ ೯ ವಿದ್ಯಾರ್ಥಿಗಳಲ್ಲಿ ೮ ಜನರು ತೇರ್ಗಡೆ ಹೊಂದಿದ್ದರು. ಮುಲ್ಕೀ ಪರೀಕ್ಷೆಗೆ ಇಡೀ ಜಿಲ್ಲೆಯೊಳಗಿಂದ ೨೪೦ ಮಂದಿ ಕುಳಿತಿದ್ದರು, ಅವರಲ್ಲಿ ೮೦ ಮಂದಿ ಪಾಸಾಗಿದ್ದಾರೆ. ನಿಜಾರ್ನದಲ್ಲಿ ೩ ಇಯತ್ತೆಗೆ ವಿಕ್ಕ ವರ್ಗಗಳಿಲ್ಲ.

ಹೊನ್ನಾವರ— (ತಾ ೨೨-೭-೩೪) ಮಳೆಯ ಮೋಡವೇ ಇಲ್ಲ. ಒಕ್ಕಲಿಗರು ಚಿಂತಾಕ್ರಾಂತರಾಗಿದ್ದಾರೆ. ನಟ್ಟಿಯ ಕೆಲಸ ತಡವಾಗಿದೆ.

ಗೇರುಸೊಪ್ಪೆಗೆ ಹೋಗುವವರಿಗೆ ಈಗ ಒಳ್ಳೇ ಅನುಕೂಲ. ೩ ಸರ್ವಿಸ್ ಲಾಂಚಿನವರು ಸ್ಪರ್ಧೆಯಿಂದ ಮಾಲು ಬಿಡುತ್ತಿದ್ದಾರೆ. ಟಿಕೇಟಿನ ದರ ೧೨ ಆಣೆ ಇತ್ತು, ಅದು ೩ ಆಣೆಗೆ ಇಳಿಯಿತು, ಅದು ಕಡೆಗೆ ೧ ಆಣೆ, ಆಮೇಲೆ ಕೆಲವರು ಪುಕ್ಕಟೆ ಕರೆದೊಯ್ದ ಇದರಿಂದ ಪ್ರಯೋಜನವಿಲ್ಲ.

ಇಲ್ಲಿಯ ಆರ್ಬನ್ ಬ್ಯಾಂಕಿನ ವಾರ್ಷಿಕ ಸಭೆ ಇದೇ ಕಳೆದ ತಾ ೧೫ನೇ ಬೆಳಿಗ್ಗೆ ಕಚೇರಿಯಲ್ಲಿ ಸೇರಿತು. ಈ ವರ್ಷ ರೂ ೩೯೬ ಲಾಭವಾಗಿದೆ. ಶೇರಿನವರಿಗೆ ಶೇಕಡ ೬ ರಂತೆ ಲಾಭ ಹಂಚಬೇಕೆಂದು ಗೊತ್ತಾಯಿತು. ಕ್ಷೇಮನಿಧಿಗೆ ಸೇರಿಸಿ ಲಾಭದ ಉಳಿದ ಹಣವನ್ನು ಶ್ರೀಯುತ ರಾ। ಇಂಗ್ಲೀಷ ಸ್ಕೂಲು ಹುಡುಗರ ೩೦ ರೂಪಾಯಿ ಉಳಿದ ಹಣವನ್ನು ಇಲ್ಲಿಯ ಕನ್ನಡ ಶಾಲೆಯ ವಾಚನಾಲಯಕ್ಕೆ ಕೊಡಬೇಕಾಗಿ ಠರಾವಾಯಿತು. ಸಭೆಗೆ ಅಧ್ಯಕ್ಷರಾಗಿ ಕರೆದವರು ಡಾ। ಪ್ರೆಸಿಡೆಂಟರಾಗಬೇಕೆಂದು ಠರಾವಾಯಿತು.

ಭಟಕಳ— ಕಳೆದ ರವಿವಾರ ತಾ ೧೫ನೇಗೆ ಇಲ್ಲಿಯ ಜನರು ಸಡೆಸಿದ ಪೂಜೆ ಒಟ್ಟಿನಲ್ಲಿ ಎಸೆದ ಬಂಡಿನ ಬಾಯೊಳಗಿಂದ ಮಹಾತ್ಮರು ತಪ್ಪಿದ ಬಗ್ಗೆ ಜಗದೀಶನಲ್ಲಿ ಉಪಕಾರ ಮನ್ನಿಸಿದರು. ಹಾಗೂ ಇದೇ ಸಭೆಯಲ್ಲಿ 'ಹರಿಜನೋದ್ಧಾರ ಮಂಡಳ' ವೆಂದು ಸ್ಥಾಪನೆ ಹೊಂದಿದ ಶ್ರೀ ರಾಮಚಂದ್ರ ಶಾಸ್ತ್ರಿಯವರು ಅಧ್ಯಕ್ಷರು, ಹರಿಜನ ಶಾಲೆಯ ಶಿಕ್ಷಕರಾದ ರಾ। ಅಣ್ಣಪ್ಪ ಮಾಸ್ತರರು ಕಾರ್ಯದರ್ಶಿಗಳು. ಮಂಗಳವಾರ ಶ್ರೀ ಕಾರ್ನಾಡ ಸದಾಶಿವರಾಯರು ಹರಿಜನ ಕೇರಿಯನ್ನು ಸಂದರ್ಶಿಸಿ, ಹರಿಜನ ಬಂಧುಗಳಿಗೆ ಸ್ವಚ್ಛತೆಯ ಪಾಠಗಳನ್ನು ವಿದ್ಯಾಭ್ಯಾಸವನ್ನು ಕಲಿಸಿ ಉದ್ಧರಿಸಬೇಕಾಗಿ ಊರ ಪ್ರಮುಖರಿಗೆ ಉಪದೇಶಿಸಿದರು.

ರಾ। ಬಿಕ್ಕಣ್ಣ ಅನಂತ ಭಟ್ಟ ಇವರು ಬರೆಯುವದೇನೆಂದರೆ ೩ ತಾಸು ದಿನಗಳಲ್ಲಿಯೇ ಇಲ್ಲಿ ಮಾರಿಜಾತ್ರೆಯಾಗತಕ್ಕದ್ದಿದೆ. ಸಾವಿರಾರು ಕುರಿ-ಕೋಳಿಗಳ ಬಲಿಯಾಗುವದು. ಮೂಕ ಪ್ರಾಣಿಗಳನ್ನು ನಿರ್ದಯದಿಂದ ಕೊಲ್ಲುವದು ಶಾಸ್ತ್ರವಿಹಿತವಲ್ಲ, ಮೇಲಾಗಿ ಅಧರ್ಮವಿದ ಸುಶಿಕ್ಷಿತರೂ, ಮೇಲ್ಪಂಗ್ತಿಯ ಬ್ರಾಹ್ಮಣರೂ ಇಂಥ ಅತ್ಯಾಚಾರಗಳಿಗೆ ಎಷ್ಟಕ್ಕೂ ಉತ್ತೇಜನ ಕೊಡಲಾಗದು. ಭಟ್ಟ ಮಾರಿಕೋಣವು ವೀರಶೈವಂಧರಿಂದ ತರತರದ ಕಲ್ಪನೆಗಳಿಗಾಸ್ಪದವಾಗಿದೆ. ಹುಟ್ಟಿನಿಂದ ಪ್ರಾಣದ ಬಾ ಸಂಘದವರು ಸದ್ಯಕ್ಕೇ ಬರುವವರಿದ್ದಾರೆ. ಅವರಿಗೆ ಎಲ್ಲರೂ ನೆರವಾಗಿ ದೇವಸ್ಥಾನಗಳಲ್ಲಿ ನಡೆಯುವ ದುಷ್ಟ ಕರ್ಮವನ್ನು ತಪ್ಪಿಸಬೇಕು. ಇತ್ಯಾದಿ

ಅಂಕೋಲಾ— (ತಾ ೨೨-೭-೩೪) ಮಳೆಯಿಲ್ಲ, ಬಿಸಿಲು ಕಾಯುತ್ತಿದೆ, ಬೇಸಿಗೆ ಕಾಲದ ಹಾಗೆ !

ಶ್ರೀ ಕಾರ್ನಾಡ ಸದಾಶಿವರಾಯರು ಸೋಮವಾರ ನಮ್ಮ ಜಾ. ಕಟ್ಟಿನ್ನು ಕಾರಟಿಗೆ ಸ್ವಾಗತಿಸಿದರು ವಿಟಿಂ ಆಗಸ್ಟ ೧ನೇ ತಾರೀಖಿಗೆ ನಡೆಯುವದು.

ಶ್ರೀ ಕರಮಂಕರ ಮೊದಲಾದ ಸಿರ್ಸಿಯ ಚೌಕಶಿ ಮಂಡಳದವರು ಇಲ್ಲಿಯ ಚೌಕಶಿ ಕೆಲಸ ಮುಗಿಸಿ, ಇಲ್ಲಿಂದ ಕಾರವಾರಕ್ಕೆ ಹೋಗಿ, ಅನಾಥ ಬಾಲಕಾಶ್ರಮವನ್ನು ನೋಡಿ ಸಿದ್ಧಾಪುರಕ್ಕೆ ತೆರಳಿದರು. ಸದ್ಯದಲ್ಲಿಯೇ ನಿರಾಶ್ರಿತರಿಗೆ ಸಹಾಯ ದೊರೆಯುವ ವ್ಯವಸ್ಥೆಯಾಗುವದಾಗಿ ತಿಳಿಯುತ್ತದೆ.

ಕಾಂಗ್ರೆಸ ಕೆಲಸಗಾರರು ಕಾಂಗ್ರೆಸ ಕಮಿಟಿಯನ್ನು ಸ್ಥಾಪಿಸಿಕೊಂಡು ಸಂಘಟನವನ್ನು ಬೆಳೆಸುವ ವ್ಯವಸಾಯದಲ್ಲಿದ್ದಾರೆ,

ಕಳೆದ ರವಿವಾರ ತಾ ೧೫ನೇಗೆ ಶ್ರೀ ಸುಬ್ರಾಯ ರಾಮಚಂದ್ರಯ್ಯಾ ಹಳದೀಪುರಕರರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಯಾಯಿತು. ಮಹಾತ್ಮರು ಪುಣೆಯಲ್ಲಿ ಅತ್ಯಾಚಾರದಿಂದ ಸಂರಕ್ಷಿತ ಸಾರಿದ ಬಗ್ಗೆ ಪರಮಾತ್ಮನ ಉಪಕಾರ ಸ್ಮರಿಸುವ ಠರಾವಾಯಿತು. ಶ್ರೀ ಕಾರ್ನಾಡ ಸದಾಶಿವರಾವ, ಕೌಜಲಗಿ ಹಣಮಂತರಾವ, ದತ್ತಾತ್ರಯ ಕಾಮತರ, ರೆಡ್ಡಿಯಂತ ಪ್ರಾಗೀರ್ಸ, ಶ್ರೀ ವಿಶ್ವನಾಥ ಪ್ರಭು ಮೊದಲಾದವರು ರಾವಿನ ವೇಳೆ ಸುಶ್ರಾವ್ಯ ಭಾಷಣ ಮಾಡಿದರು.

ಸೂಚನೆ — ೧೦ನೇ ಪಾನಿನ ವೇಳೆ ಕಾರವಾರ ನಾರಾಯಣ ಪ್ರಕಟವಾದ ಸ್ಕೂಲ ಬೋರ್ಡಿನ ಹಕೀಕತನ್ನು ಓದಿ ನಂತರ ಉಳಿದ ಶ್ರುತಿಸುತ್ತದೆ.

(ಪ್ರಾಂತಿಕ ಸೇವಾ ೧೧ನೇ ಪಾನು ನೋಡಿರಿ.)

ಗೋ|ಸಾ|ಬ್ರಾ|ಸ್ಕಾಲರಶಿಪ್ ಲೀಗ,ಮುಂಬಯಿ

ಈ ಸಂಸ್ಥೆಯ ಗೌರವ ಕಾರ್ಯದರ್ಶಿಗಳು ಬರೆಯುವದೇನೆಂದರೆ — ತಾ ೮-೭ ೧೯೩೪ನೇಗೆ ಸೇರಿದ ಲೀಗಿನ ಕಾರ್ಯನಿರ್ವಾಹಕ ಮಂಡಳದಲ್ಲಿ ೬೩ ವಿದ್ಯಾರ್ಥಿಗಳಿಗೆ ರೂ ೧೮೪೮, ೧೯೩೪-೩೫ನೇ ಸಾಲಿನಲ್ಲಿ ಸ್ಕಾಲರಶಿಪ್ ಕೊಡಬೇಕಾಗಿ ನಿರ್ಣಯವಾಗಿದೆ. ಮುಂಬಯಿಯೊಳಗಿನ ೫೬ ವಿದ್ಯಾರ್ಥಿಗಳಿಗೆ ರೂ. ೧೫೯, ಕಾರವಾರದೊಳಗಿನ ೧೧ ವಿದ್ಯಾರ್ಥಿಗಳಿಗೆ ರೂ ೩೯೧, ಅಂಕೋಲೆಯೊಳಗಿನ ೧೧ ವಿದ್ಯಾರ್ಥಿಗಳಿಗೆ ರೂ ೩೦೨, ಕುಮಟೆಯೊಳಗಿನ ೧೩ ವಿದ್ಯಾರ್ಥಿಗಳಿಗೆ ರೂ ೩೧೭ ಹೊನ್ನಾವರದೊಳಗಿನ ೧೬ ವಿದ್ಯಾರ್ಥಿಗಳಿಗೆ ರೂ ೩೮೪, ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ೯ ವಿದ್ಯಾರ್ಥಿಗಳಿಗೆ ರೂ ೨೩೭, ಧಾರವಾಡ ವಿದ್ಯಾರ್ಥಿಗಳಿಗೆ ರೂ. ೧೫೦, ಸೋಲಾಪುರದೊಳಗಿನ ೬ ವರ್ಷ ವಿದ್ಯಾರ್ಥಿನಿಗೆ ರೂ ೭೫, ಹೀಗೆ ಒಟ್ಟು ರೂ ೧೮೪೮ ಮಂಜೂರಾಗಿವೆ. ಒಟ್ಟು ೧೧೩ ಅರ್ಜಿಗಳು ಬಂದಿದ್ದವು. ಶಾಲಾ ಪ್ರೂಫ್‌ಗಳಿಲ್ಲದ ಕಾರಣ ೪೦ ಅರ್ಜಿಗಳನ್ನು ಅಸ್ವೀಕರಿಸಬೇಕಾಯಿತು.

— ಬೆಂಗಳೂರಿನ ಹಳೆ ಕಂಗೇರಿಯ ಮಾರಿ ಜಾತ್ರೆಯು ಪದ್ಧತಿ ಅತ್ಯಂತ ಹೇಯವಾದುದು! ಮಾರಿಕೋಣವನ್ನು ಕಡಿದ ಬಳಿಕ, ಆ ಕೋಣದ ರಕ್ತದಿಂದ ಅನ್ನ ಕಲಿಸಿ ಪೋಟ್ ಯಾನೆ ಕೋಣ ಕೊಂದವನು ಉಣ್ಣುವದಿದೆ. ಈ ಕೋಣ ಕೊಡಿಸುವವನು ಹರಿಜನ ಕೆಲಸ. ಈ ಬಾರಿ ಅವನು ಆ ಅನ್ನವನ್ನು ಉಣ್ಣಲೊಪ್ಪಲಿಲ್ಲ, ಅದರಿಂದ ಅವನಿಗೆ ಹೊಡೆದರು, ಅವನ ಬೆಂಬಲಕ್ಕೆ ಹೋದವರಿಗೂ ಜನರು ಹೊಡೆದರು. ಹಾಗೂ ಅವನು ಉಣ್ಣಲೊಪ್ಪಲಿಲ್ಲ, ಅವನಿಗೆ ಕೊಂದುಹಾಕುವ ಭೀತಿಯು ಬಂದಿದ್ದು, ತನ್ನನ್ನು ರಕ್ಷಿಸಬೇಕಾಗಿ ಅವನು ಪೋಲೀಸರಿಗೆ ಅರ್ಜಿ ಮಾಡಿದನು. ಪೋಲೀಸರು ಕಾವಲಿಟ್ಟು ಊರು ಬಿಟ್ಟು ಅವನು ಈಗ ಬೆಂಗಳೂರಿನಲ್ಲಿ ಅಡಗುತ್ತಿದ್ದಾನೆ.

ಈಗಿನ ಪ್ರಪಂಚ

([illegible])

ಕಷ್ಟ ನಾನು ಅನುಭವಿಸಲಿಲ್ಲ ಏಕೆ? ಜೈಲಿನಲ್ಲಿ ನನಗ ದುಃಖವೇ ಒದಗಲಿಲ್ಲ ಅಪ್ಪರೆ, ಸಹಕಾರಿಗಳ ಮರಣ ವಾರ್ತೆಯಿಂದ ನನಗೆ ದುಃಖವಾಯಿತೇನೋ ಅಹುದು! ಆದರೂ, ಮರಣಪ್ರಾಪ್ತನಾದ ಪರಿಸ್ಥಿತಿ ನೋಡಿ ನನ್ನಲ್ಲಿ ಅಭಿಮಾನವೇ ಉಂಟಾಯಿತು. ನಿಮಗೆ ನನ್ನಿಂದ ಸಹಾಯ ಮಾಡಲಾಗಲಿಲ್ಲ ನಿಮ್ಮ ಕಷ್ಟಗಳನ್ನು ನಿಮ್ಮ ಜೊತೆಗಾರನಾಗಿ ಸಹಿಸಲೂ ನನಗ ಇಂಬು ದೊರೆಯಲಿಲ್ಲ, ಇದನ್ನೇ ನೆನಿಸಿ ನಾನ ಸೆರೆಮನೆಯಲ್ಲಿ ದಿನಗಳೆಯುತ್ತಿದ್ದ ನಾನೀಗ ಹೊರ ಬಿದ್ದಿನೆ ನಿಮ್ಮನ್ನು ಕಾಣಬೇಕೆಂದು ನನಗ ಉತ್ಕಂಠಿತೆ ಆದರೆ ನನ್ನೀ ಅಸ್ವಾಸ್ಥ್ಯಕ್ಕಾಗಿ ನಾನು ಕೆಲಕಾಲ ಮುಂಬಯಿಯ ಕ್ಲಿನಿಕ್ ಇರಬೇಕಾಗಿದೆ ನಾನು ನಿಮಗ ಕಾಣಬಾರೆ ಆದರಿಂದ ನನಗೆ ಮುಂಚಿನಕಿಂತ ಈಗ ಹೆಚ್ಚಿನ ವ್ಯಸನವಾಗುತ್ತದೆ ನಿಮ್ಮ ಕಡೆ ಸಮಾಚಾರವನ್ನು ನಾನು ಈಗ ಆಗಿಂದಾಗ ಕೇಳಬಲ್ಲೆ, ನಿಮ್ಮ ಕಡೆ ನನ್ನ ಹೇಳಿಕೆ ಹೇಳಬಲ್ಲೆ. ಇದೇ ನನಗೀಗ ಸಮಾಧಾನ ನಿಮ್ಮೊಳಗೆ ಒಂದು ಸೇರುವನಕ ನನಗ ಸುಖವಿಲ್ಲ ತ್ವರೆಯಾಗಿಯೇ ನಿಮ್ಮಲ್ಲಿ ಬಂದು ಸೇರುತ್ತೇನೆ. ಭಡೋಳಿಕದ ಡಾ| ಚಂದುಲಾಲ ದೇಸಾಯಿಯವರು ಜೈಲಿನಲ್ಲಿ ಕೆಲ ಕಾಲ ನನ್ನ ಜೊತೆಗಿದ್ದರು ನಿಮ್ಮ ಸಾಹಸವನ್ನು ತ್ಯಾಗವನ್ನು ನಾವು ಕೊಂಡಾಡುತ್ತಿದ್ದೆವು ನಿಮ್ಮ ಕಲ್ಯಾಣಕ್ಕಾಗಿ ಅವರು ಯಾವಾಗಲೂ [illegible] ಬಿಡುಗಡೆಯಾದಂದಿನಿಂದ ಅವರು ನಿಮಗಾಗಿಯೇ ದುಡಿಯುತ್ತಿದ್ದಾರೆ ಗುರ್ಜರ ದೇಶಕ್ಕೆ ನಿಮ್ಮ ಕಷ್ಟಗಳ ಸಂಪೂರ್ಣ ಅರಿವಿಲ್ಲ. ನಿಮ್ಮ ಕಷ್ಟ ಪರಿಹಾರಕ್ಕಾಗಿ ಅವರು ಮಾಡುತ್ತಿರುವ ಪ್ರಯತ್ನಗಳನ್ನು ಗುರ್ಜರ ದೇಶವು ಅರಿಯದು ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯಸಂಗ್ರಾಮಕ್ಕಾಗಿ ಸರ್ವಸ್ವಕ್ಕೆ ಧಾರೆಯೆರೆದು ಸಂಪೂರ್ಣ ದಾರಿದ್ರ್ಯವನ್ನು ಕೈಕೊಂಡ ಜಾಗವು ನಿಮ್ಮದೊಂದೇ ಅಲ್ಲ, ಕರ್ನಾಟಕದೊಳಗಿನ ಸಾಹಸಿಗ ಒಕ್ಕಲಿಗರೂ ತ್ಯಾಗ ಮಾಡಿದ್ದಾರೆ. ಆಸ್ತಿ ಕಳಕೊಂಡಿದ್ದಾರೆ, ಕಷ್ಟ ಸಹಿಸಿದ್ದಾರೆ, ಜಪ್ತಿಗಳನ್ನು ಮಾಡಿಸಿಕೊಂಡಿದ್ದಾರೆ, ಸೆರೆಮನೆ ಸೇರಿದ್ದಾರೆ, ಸ್ತ್ರೀ-ಪುರುಷರು ಕ್ಲೇಶಗಳ ಪರಿವೆ ಹಿಡಿಯದೆ ತ್ಯಾಗ ಮಾಡಿದ್ದಾರೆ ಇಂದಿಗೆ ಅವರೂ ಕೂಳಿಗೆ ಗತಿಯಿಲ್ಲದೆ ಬಳಲುತ್ತಿದ್ದಾರೆ ಅವರ ಕಷ್ಟಗಳನ್ನೂ, ಸಾಹಸಗಳನ್ನೂ ಕೇಳಿ ನನಗೆ ಆನಂದವೂ, ವ್ಯಸನವೂ ಒಮ್ಮೆಲೇ ಉಂಟಾಗಿವೆ. "ಕೊನೆಗೆ ಸತ್ಯವೇ ಗೆಲ್ಲುವದು, ಅಂಧಕಾರದಂತಿರುವ ಹೊಂದಿದ ಅಸತ್ಯವು ಎಷ್ಟಕ್ಕೂ ಗೆಲ್ಲದು." ಈ ಪ್ರಕಾರ ನನ್ನ ಅಂತಃಕರಣದಲ್ಲಿ ಆಗಿಂದಾಗ ಧ್ವನಿಯೇಳುತ್ತಿತ್ತು. ಗುಜರಾತಿನೊಳಗಿನ ಒಂದು ಭಗಿನಿಯರಲ್ಲರೂ ಶಾಂತತೆಯಿಂದ ನಿಶ್ಚಯ ಹಿಡಿಯಬೇಕು ಈ ನಿಶ್ಚಯವೇ ನಮ್ಮ ಪರಂಪರೆಯ [illegible]. ನಾಶವೊಂದಿದ ಮನೆಗಳಲ್ಲಿ ಪುನಃ ಕಟ್ಟಲ್ಪಡಬೇಕು, ಕಳಕೊಂಡ ಆಸ್ತಿ ಹೊಲ್ಲ ತಿರುಗಿ ಸಿಗಬೇಕು, ಸರಕಾರ ಜಪ್ತಾದ ಆಸ್ತಿ ಪುನಃ ಹಕ್ಕುದಾರರಿಗೆ ಸಿಗಬೇಕು ಕಷ್ಟಕಾಲದಲ್ಲಿ ಉಂಟಾದ [illegible] ಕಾಲಾಂತರದಿಂದ ಅಳಿದು ಹೋಗುವದು, ಆದರೆ ನೀವು ಮಾಡಿದ ಸ್ವಾರ್ಥತ್ಯಾಗವು ಹಿಂದುಸ್ಥಾನದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದು ಈ ನನ್ನ ನಂಬಿಗೆ, ಎಷ್ಟಕ್ಕೂ ಎದೆಗುಂದಬೇಡಿ, ಕಗ್ಗತ್ತಲೆಯ ಒಳಗೆ ಬೆಳಗಿನ ಅರುಣೋದಯವಾಗುವದು ಸೃಷ್ಟಿನಿಯಮವಿದೆ."

* * *

ಅಫಗಾಣ ರಾಯಭಾರಿಗಳವರ ಕಾರಭಾರ!

ಕಾಬೂಲದಿಂದ ಅಫಗಾಣಿಸ್ಥಾನದ ರಾಯಭಾರಿಗಳಾದ ಸರದಾರ ಸಲಾಹುದ್ದೀನಖಾನರವರು ಜುಲೈ ೨ನೇ ತಾರೀಖಿಗೆ ಸಿಮ್ಲಾ ಪಟ್ಟಣಕ್ಕೆ ಮರಳಿ ಬಂದಿದ್ದಾರೆ ಕಾಬೂಲದಲ್ಲಿ ಇವರು ೩ ವಾರಗಳ ತನಕ ಉಳಿದಿದ್ದರು ಅಲ್ಲಿಯ ವ್ಯವಹಾರದ ವಿಷಯ ಅವರು ನುಡಿಯುವದೇನಂದರೆ - ನಾದಿರಶಹಾರವರ ಮಗಂದಿರಾದ ಝಾಹೀರಶಹಾರವರಿಗೆ ಈ ಹಿಂದೆ ನಾನು ಬಹಳ ಸಲ ಭೆಟ್ಟಿಯಾಗಿದ್ದೇನೆ ಚಿಕ್ಕ ಹುಡುಗನೆಂದು ನನ್ನದೊಂದು ಭಾವನೆ ಇತ್ತು, ಈಗ ಅವರು ೨೦ ವರ್ಷ ಪ್ರಾಯದ ಎಳೆ ಹುಡುಗರಿದ್ದಾಗ್ಯೂ ಅಫಗಾನ ರಾಷ್ಟ್ರದ ಧುರೀಣರಾಗಲು ಅವರು ಸರ್ವಥಾ ಅರ್ಹರಿದ್ದಾರೆ, ಯಾವಾಗಲೂ ವಿದ್ಯಾವ್ಯಾಸಂಗಿಗಳು, ಅವರಿಗೆ ತತ್ವಜ್ಞಾನದ ಮೇಲೆ ವಿಶೇಷ ಪ್ರೀತಿ ಫ್ರೆಂಚ ಭಾಷೆಯನ್ನು ಇವರು ಮಾತೃಭಾಷೆಯಂತೆ ಮಾತಾಡಬಲ್ಲರು ಅನೇಕ ಫ್ರೆಂಚ ಗ್ರಂಥಗಳನ್ನೋದಿದ್ದಾರೆ. ಇಂಗ್ಲಿಷ ಭಾಷೆಯ ಜ್ಞಾನ ಅಷ್ಟಿಲ್ಲ ಪಾಶ್ಚಾತ್ಯ ಧೋರಣ ಅನುಸರಿಸಿ ದೇಶದಲ್ಲಿ ಭೌತಿಕ ಹಾಗು ರಾಷ್ಟ್ರೀಯ ಪ್ರಗತಿಯ ಪುರಸ್ಕಾರ ಮಾಡುವವರು. ಆದಾಗ್ಯೂ ಅಫಗಾಣರಿಗೆ ಇಸ್ಲಾಮ ಧರ್ಮದಲ್ಲಿಯ [illegible] ಪಾರಮಾರ್ಥ ಸಾಧನೆಯಲ್ಲಿಯೂ ಒಳ್ಳೇ ಶ್ರದ್ಧೆಯಿದೆ ಆಧಿಭೌತಿಕ ಕಲ್ಯಾಣ ಸಾಧನೆಗೆ ಹೋಗಿ ಮಾನವನು ಪರಮಾರ್ಥ ಸಾಧನೆಯನ್ನು ತೊರೆಯುವದಾಗಿಯೂ, ಭೌತಿಕ ಸುಧಾರಣೆಯು ಪರಮಾರ್ಥ ಸಾಧನೆಯ ಒಂದು ಉಪಾಯ ವೆಂದೂ ಅವರು ಎಣಿಸುತ್ತಾರೆ ಆಂತರಿಕ ರಾಜ್ಯದಲ್ಲಿ ಅವರು ತಂದೆಯವರ ಧೋರಣವನ್ನೇ ಅನುಸರಿಸುತ್ತಾರೆ ಸುಧಾರಣೆಯಾಗಬೇಕು ಎಂದು ಅವರದೂ ಅಭಿಪ್ರಾಯವಿದೆ ಆದರೆ, ಅದು ಕ್ರಮವಾಗಿ, ಸ್ಥಿರವಾಗಿ, ಸಾವಕಾಶವಾಗಿ ನಡೆದರೆ ಮಾತ್ರ ಅದರಿಂದ ಪ್ರಯೋಜನವಾಗುತ್ತದೆಂದು ಅವರ ಅಭಿಪ್ರಾಯ. ಅಫಗಾನ ದೇಶವು ಅವರಿಗೆ ಅನುಕೂಲವಿದೆ ಇವರ ಕಾರಕೀರ್ದಿಯಲ್ಲಿ ಹೊಸ್ರವೇ ದೇಶತುಂಬ ನೂತನ ಉಪಕ್ರಮಗಳಾದವು. ಅಫಗಾಣಿಸ್ಥಾನದಲ್ಲಿ ಅವಶ್ಯವಿದ್ದರೆ ಮಾತ್ರ ಉಗಿಬಂಡಿಗಳ ವಿಚಾರ ಹುಟ್ಟುವದು. ಈಗ ಯಾರಿಗೂ ಅದು ಬೇಕಾಗಿಲ್ಲ ಮೋಟಾರುಗಳಿಂದ ಅಗ್ಗವಾಗಿ, ಸುಖವಾಗಿ ಪ್ರಯಾಣ ಮಾಡಬರುತ್ತದೆ, ನನ್ನದೇ ಉದಾಹರಣೆ ಕೊಡುತ್ತೇನೆ ಬೆಳಗಿನ ೮ ಘಂಟೆಗೆ ನಾನು ಕಾಬೂಲದಿಂದ ಹೊರಟೆ, ಊಟ-ಫಲಾಹಾರ ಕೊಳ್ಳಲು ಮಧ್ಯದಲ್ಲಿ ೩ ತಾಸು ನಿಂತು ಸಂಜೆ ೮ ಘಂಟೆಗೆ ನಾನು ಪೇಶಾವರಕ್ಕೆ ತಲ್ಪಿದೆನು ೬ ತಾಸಿನಲ್ಲಿ ಕಾಬೂಲದಿಂದ ಪೇಶಾವರಕ್ಕೆ ಬರಬಹುದು ಉಗಿಬಂಡಿಗಿಂತ ಮೋಟಾರಿನಲ್ಲಿ ಸ್ವಾತಂತ್ರ್ಯವಿದೆ, ಸುಖವಿದೆ. ಪೆಟ್ರೋಲಿನ ದರ ಹಿಂದುಸ್ಥಾನಕ್ಕಿಂತ ಅಫಗಾಣಿಸ್ಥಾನದಲ್ಲಿ ೬ ಆ ಅಗ್ಗ! ಇದೇ ಬರುವ ಆಗಸ್ಟ ೧೫ನೇ ತಾರೀಖಿಗೆ ಅಫಗಾಣಿಸ್ಥಾನದಲ್ಲಿ ಸ್ವಾತಂತ್ರ್ಯೋತ್ಸವ ನಡೆಯುವದು ಆ ಸಮಯ ಅಫಗಾನ ಸರಕಾರದ ಆಶ್ರಯದಲ್ಲಿ ಅಫಗಾನ [illegible] ಸ್ಥಿತಿಯ ಚಿಂತಿಸುವ ವ್ಯಾಪಾರ ಪ್ರದರ್ಶನವನ್ನೇರ್ಪಡಿಸುವರು ಈ ಪ್ರದರ್ಶನದಲ್ಲಿ ಸ್ಥಳ ಕೊಡಲು ಹಿಂದುಸ್ಥಾನದಿಂದ ಅನೇಕ ಕಂಪನಿಗಳು ಬರಕೊಂಡಿವೆ ಇತ್ಯಾದಿ ಸಂಗತಿಗಳನ್ನು ರಾಯಭಾರಿಗಳು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು ಸ್ವಾತಂತ್ರ್ಯನಿಷ್ಠ ೨೦ ವರ್ಷ ಪ್ರಾಯದ ಎಳೆ ಹುಡುಗರೂ ಸಹ ಹೀಗೆ ದೇಶೋದ್ಧಾರ ಮಾಡಬಲ್ಲರೆಂದು ಇದರಿಂದ ವ್ಯಕ್ತವಾಗುತ್ತದೆ

* * *

ಸೈನ್ಯ ಖಾತೆಯೊಳಗಿನ ವಂಚನೆ.

ಸೈನ್ಯ ಖಾತೆಯ ಮೇಲೆ ಕಾಯದೆ ಕೌನ್ಸಿಲಿಗೆ [illegible] ಅಂಕೆ ತೀರ ಕಡಿಮೆ ಇಲ್ಲವೆಂದರೂ ಅಡ್ಡಿಯಿಲ್ಲ ಈ ಖಾತೆಯ ಲೆಕ್ಕಪತ್ರ ವರ್ಷ-ವರ್ಷಕ್ಕೆ ತಪಾಸಾಗುತ್ತದೆ ಆದಾಗ್ಯೂ, ವಂಚನೆ ಮಾತ್ರ ಇದ್ದಕ್ಕಿದ್ದಂತೆಯೇ ೧೯೩೨-೩೩ನೇ ಸಾಲಿನ ತಪಾಸಣೆ ರಿಪೋರ್ಟಿನಲ್ಲಿ ಪ್ರಕಟಗೊಂಡ ಕೆಲ ರಕಮುಗಳು ಬೋಧಪ್ರದವಿವೆ ಯುರೋಪಿಯನ್ ಸೈನಿಕರಿಗೆ ಮದುವೆ ಭತ್ತೆ ಸಿಗುತ್ತದೆ, ಈ ಭತ್ತೆ ಪಡೆಯುವ ನಿಯಮವೇನಂದರೆ. ಸೈನಿಕನು ೨೬ ವರ್ಷಕ್ಕೆ ಮಿಕ್ಕಬೇಕು, ಹೆಂಡತಿ-ಮಕ್ಕಳಿರಬೇಕು, ಹುಡುಗ ಹುಟ್ಟಿದ್ದಲ್ಲಿ ಭತ್ತೆ ಪಡೆಯಬೇಕು ಸೈನಿಕನಿಗೆ ಮದುವೆಯಾಗದ ಮುಂಚೆ ಅವನ ಹೆಂಡತಿಯು ಹುಡುಗರಿಗೆ ಭತ್ತೆ ಕೊಡುವದೂ ಅಡ್ಡಿಯಿಲ್ಲ ಈ ಭತ್ತೆ ಸಿಗುವದು ಹೆಂಡತಿ-ಮಕ್ಕಳಿಗೆ ೧೯೩೦ನೇ ಇಸ್ವಿ ಜುಲೈ ತಿಂಗಳಲ್ಲಿ ಈ ಭತ್ತೆ ಮಂಜೂರಾದ ಒಂದು ಸಂಗತಿ ತಿಳಿದುಬಂದಿದೆ. ಸೈನಿಕರಿಗೆ ೨೩ ವರ್ಷ ಪ್ರಾಯವಾಗಿದ್ದಿಲ್ಲ, ಮದುವೆಯಾಗುವ ಮುಂಚೆಯೇ ವ್ಯಭಿಚಾರದಿಂದ ಹೆಂಡತಿಗೆ ಒಂದು ಹುಡುಗ ಹುಟ್ಟಿತ್ತು ಆ ಹುಡುಗಗೂ ಭತ್ತೆ ಸಿಗುತ್ತಿತ್ತು ವಿವಾಹಿತರಾದ ಬಿಡಾರು ಭತ್ತೆ ಸಿಗುವದಿಲ್ಲ. ಸುಬೇದಾರರೊಬ್ಬರಿಗೆ ೧೯ ತಿಂಗಳ ತನಕ ಬಿಡಾರು ಭತ್ತೆ ಸಿಕ್ಕಿತು ಭತ್ತೆಬಿಲು ತಿಂಗಳ-ತಿಂಗಳಿಗೆ ಮೇಲಧಿಕಾರಿಗಳ ಸಹಿಯಿಂದ ಪಾಸಾಗುತ್ತಿತ್ತು. ಹೀಗ ಹತ್ತು ತಿಂಗಳ ತನಕ [illegible] ವಂಚನೆಯಾಯಿತೆಂದು ತಿಳಿಯಲಿಲ್ಲ ಸೈನ್ಯ ಖಾತೆಯ ಆಸ್ಪತ್ರಿಯೆಂದು ಸಿಮ್ಲಾ ಬೆಟ್ಟದ ಮೇಲಿದೆ ಈ ಆಸ್ಪತ್ರಿಯ ಲೆಕ್ಕಕ್ಕೆ ೧೯೩೧ನೇ ಇಸ್ವಿಯಲ್ಲಿ ಹೇಳಿ ಇದ್ದಲಿ ಖರ್ಚು ಬಿದ್ದಿದೆ. ಮುಂಚಿನ ವರ್ಷಕ್ಕಿಂತ ತೀರ ಹೆಚ್ಚು. ಲೆಕ್ಕ ತಪಾಸಕರು ಈ ಕುರಿತು ಸೈನ್ಯ ಖಾತೆಯ ಅಧಿಕಾರಿಗಳು ಚೌಕಸಿ ಮಾಡಬೇಕಾಗಿ ಬರೆದರು ಅನೇಕ ತಪಾಸ ಕಾಲಕ್ಕೆ ಚೌಕಸಿಯ ಪರಿಣಾಮವೇನೆಂದು ಕೇಳಲು, ಚೌಕಸಿಯಾಗಲಿಲ್ಲವಾಗಿ ತಿಳಿಸುತ್ತ ಪುನಃ ಚೌಕಸಿ ಮಾಡಬೇಕಾಗಿ ತಪಾಸಕರು ಬರೆದರು ಅಷ್ಟರಲ್ಲಿ ಆಸ್ಪತ್ರಿಯ [illegible] ಪ್ರವಾಸ ಮಾಡಬೇಕಾಗಿ [illegible] ಹೋಯಿತು. ಆಸ್ಪತ್ರಿ ಬೀಸಿತು, ಮತ್ತು ಅಲ್ಲಿ ಮಾದರಿಯ ಬೈಲರು (Ideal Boilers) ಗಳ ಸ್ಥಾಪನೆಯಾಗಿತ್ತು, ಅವು ಹಿಂದಿನ ಇದ್ದಲಿ ತಿಂದವು, ಹೀಗ ಲೆಕ್ಕಾಚಾರದ ಮೇಲಿಂದ ತಿಳಿಯಲಾ ಆ ವಿಷಯ ಅಲ್ಲಿಗೇ ಬಿಟ್ಟಿತು. ಮುಂದೆ ಮತ್ತೆ ಚೌಕಸಿ ನಡೆಯಿತು. ಆ ಬಾಯ್ಲರುಗಳ ಇದ್ದಲಿ ಉಪಯೋಗವಾಗುವದಿಲ್ಲವಾಗಿ ಯಂತ್ರಗಳನ್ನು ಹಿಡಿದವರು ತಿಳಿಸಲು, ಸಂಬಂಧಪಟ್ಟವರ ಮೇಲೆ ಈಗ ಖಟ್ಲೆ ನಡೆದಿದೆ ಇದೇ ಪ್ರಕಾರ [illegible] ವಂಚನೆಗಳನ್ನು ತಪಾಸಕರು ಪತ್ತೆಹಚ್ಚಿದ್ದಾರೆ ಸೈನ್ಯಖಾತೆಯಲ್ಲಿ ಹಣದ ಸೋರಿಕೆ ಹಿಡಿಯುವ [illegible] ತಪಾಸಕರು ಟೀಕೆ ಕೊಟ್ಟಿದ್ದಾರೆ "ತಪ್ಪು [illegible]" ಎಂದು ಬರೆದು ತಪಾಸಕರು ಸೈನ್ಯಖಾತೆಗೆ ಮೋ

ಮುಕ್ತ ಮಾಡಿದ್ದಾರೆ. "ಅಧಿಕಾರಿಗಳ ದೋಷವು ಖಾತೆಯ ದ್ರೋಹವಲ್ಲದೆ ಮತ್ತೇನು ?" ಎಂದು ಮುಂಬಯಿಯ 'ಸನ್'ಯೆಂಬ ಸಾಯಂಕಾಲಪತ್ರಿಕೆಯು ಸವಾಲು ಹಾಕಿ ಅಂದರೆ, ತಾನು ಹಣಿ ವರ್ಷಗಳಲ್ಲಿ ಖಾತೆಯ ಕಾರಭಾರವು ನಿಯಮಬದ್ಧವಾಗಿದೆ, ನಿಯಮಬದ್ಧ ಮನ್ವಂತರದಲ್ಲಿ ನಡೆಯತಕ್ಕ ಕಾರ್ಯಗಳನ್ನು ವಂಚನೆಯ ಮಾಡಿದವರನ್ನು ಸರಕಾರವು ಶಾಸನ ಮಾಡುವದಿಲ್ಲ, ಅವರ ಕಡೆಯಿಂದ ನಷ್ಟಭರಣವಾಯಿ ಮಾಡಿಕೊಳ್ಳುವದೂ ಇಲ್ಲ. ಅಪರಾಧಿ ಅಧಿಕಾರಿಗಳು ಪೆನ್ಶನಿನ ಮೇಲೆ ಹೋಗಿರುತ್ತಾರೆಂದು ಬರಾ ಬರೆದು ವಂಚನೆಗಳ ವ್ಯವಸ್ಥೆಯಾಗುತ್ತದೆ. ಪೆನ್ಶನಿಗೆ ಹೋಗುವವರಿಗೆ ವಂಚನೆ ಮಾಡಿಕೊಂಡು ಪೆನ್ಶನಿಗೆ ಹೋಗಲು ಇದೊಂದು ಲೈಸನ್ಸು. ಹಿಂದುಸ್ಥಾನ ಸರಕಾರವು, ವರಿಷ್ಠ ಕಾಯದೆ ಕೌನ್ಸಿಲಿನ ಸಭಾಸದರೂ ವಿಚಾರ ಮಾಡತಕ್ಕ ವಿಷಯವಿದು. ನಿಯಮಬದ್ಧ ಕಾರಭಾರದಲ್ಲಿ ಹೀಗೆ ಲಕ್ಷಾವಧಿ ರೂಪಾಯಿಗಳ ವಂಚನೆಯಾದರೆ ನಿಯಮವಿಲ್ಲದಾಗ ಸ್ವತಂತ್ರ ಖಾತೆಯು ಎಷ್ಟು ರಕಮುಗಳನ್ನು ವಂಚಿಸುತ್ತಿತ್ತೆಂಬ ಕಲ್ಪನೆ ಮಾಡಬೇಕು. ನಿತ್ಯ ಖರ್ಚಿಗೆ ಹಣವಿಲ್ಲವೆಂದು ಹೊಸ ಹೊಸ ತೆರಿಗೆಗಳನ್ನು ಹಾಕುವಾಗ ಸ್ವತಂತ್ರ ಖಾತೆಯಲ್ಲಿ ಈ ಪ್ರಕಾರ ಅಂದಾಧುಂದಿಯಾಗಗೊಡುವದು ಉಚಿತವೇ ?

* * *

ಮಹಾತ್ಮರ ಸುದ್ದಿಗಳು !!

ಮಹಾತ್ಮರು ಹರಿಜನೋದ್ಧಾರಕ್ಕಾಗಿ ಸಂಚರಿಸುತ್ತಿದ್ದಾರಷ್ಟೆ. ಸಿಂಧ ಪ್ರಾಂತದೊಳಗಿನ ಸಂಚಾರವನ್ನು ಮುಗಿಸಿ ಮಹಾತ್ಮರು ಪಂಜಾಬ ಪ್ರಾಂತಕ್ಕೆ ತೆರಳಿದರು. ಅಲ್ಲಿ ರೂ ೩೫ ಸಾವಿರ ೫ ದಿನಗಳಲ್ಲಿ ಒಟ್ಟು ಮಾಡಿ ಜುಲೈ ೩ ನೇ ಮಂಗಳವಾರ ದಿಲ್ಲಿ ಮಾರ್ಗವಾಗಿ ಕಲಕತ್ತೆಗೆ ತೆರಳಿದರು. ಮಹಾತ್ಮರು ಬಂಗದೇಶದೊಳಗಿನ ಇಬ್ಬಣಗಳನ್ನು ಒಟ್ಟುಗೂಡಿಸುವದಕ್ಕಾಗಿಯೇ ಅತ್ತಕಡೆ ತೆರಳಿದ್ದಾರೆ. ಜಬ್ಬಾ ಪ್ರವಾಸಿರೊಡನೆ ಮಹಾತ್ಮರು ಮುಂದಾಗಿ ಆಲೋಚನೆ ಪಡೆದು ಆ ಮೇಲೆ ಪ್ರಾಂತಿಕ ಪ್ರಮುಖರೊಡನೆ ಚರ್ಚೆ ಮಾಡಿ ಕಲಹಕಾರಣಗಳನ್ನು ಪರಿಹಾರ ಮಾಡಲುದ್ಯುಕ್ತರಾಗಿದ್ದಾರೆ. ಮಹಾತ್ಮರು ಕಲಕತ್ತೆಯಲ್ಲಿ ಜೀವನಲಾಲ ದೇಬರವರಲ್ಲಿ ಉಳಕೊಳ್ಳುವರು. ಮೊನ್ನೆ ರವಿವಾರ ತಾ. ೧ನೇಗೆ ಕಲಕತ್ತೆಯ ಮ್ಯುನಿಸಿಪಾಲಿಟಿಯವರು ಬೆಳ್ಳಿಯ ಕರಡಿಗೆಯಲ್ಲಿ ಖಾದಿಯ ಅರಿವೆಯ ಮೇಲೆ ಹರಿಜನೋದ್ಧಾರದ ಕಲ್ಪನೆ ಬರುವಂತೆ ಬಂದು ಚಿತ್ರ ಬರೆದ ಮಾನಪತ್ರವನ್ನು ಅರ್ಪಿಸುವವರಿದ್ದರು. ಲಾಹೋರದಲ್ಲಿ ಮಹಾತ್ಮರು ಕಾಣಿಕೆ ಎತ್ತುವೇಳೆ ಮಾಡಿದ ಸಂಗತಿಗಳು ಮನೋರಂಜಕವಿವೆ. ಪತ್ರಿಕಾ ಪ್ರತಿನಿಧಿಗಳು ಮಹಾತ್ಮರ ಕಡೆ ಸಂದರ್ಶನ ಪಡೆಯಹೋಗಿದ್ದರು, ಹರಿಜನ ನಿಧಿಗೆ ೫೦ ರೂಪಾಯಿ ಕೊಟ್ಟನಕ ತಾವು ಮಾತಾಡಲಾರೆವೆಂದರು. ಪ್ರತಿನಿಧಿಗಳು ಒಂದು ಉಂಗುರ, ಕೆಲ ಹಣ ಕೂಡಿಸಿ ಅಂತು ರೂ ೧೬-೧೭ ಕೂಡಿಸಿಕೊಟ್ಟರು. ಇಷ್ಟಕ್ಕೆ ಮಹಾತ್ಮರು ಮುಟ್ಟುಮುತ್ತು ನೀಗಡೆಂದರು ! ಒಬ್ಬರು ರೂ ೧೦೦ರ ನೋಟನ್ನು ಕೊಟ್ಟರು, ಮಹಾತ್ಮರು ಪರ ಇಳಿಸಲಿಲ್ಲ. ೫೦ ರೂಪಾಯಿಗಳ ರಕಮು ಪೂರ್ಣ ಯಾವನಕ ಸಂದೇಶ ಕೊಡಲಾರೆ, ಬಾಕಿ ಹಣ ನಾಳೆ ತಂದುಕೊಟ್ಟು ಸಂದೇಶ ಪಡೆಯಬಹುದೆಂದರು ! 'ಟ್ರಿಬ್ಯೂನ' ಪತ್ರಿಕಾ ಪ್ರತಿನಿಧಿಗಳು ಹೋದನಂತರ ಮಹಾತ್ಮರು ನಮಗನ್ನು ಎಲ್ಲರಿಗೂ ವಿದಾಯಕ ಕಾರ್ಯಕ್ರಮವನ್ನು ಪುರಸ್ಕರಿಸುವಂತೆ ಸಂದೇಶ ಕೊಟ್ಟರು. ಲಾಹೋರಿಗೆ ತಲ್ಪಿದೊಡನೆ ಮಹಾತ್ಮರಿಗೆ ಲೆಫ್ಟನಂಟ ಕರ್ನಲ್ ಡಾ| ಧೊಯರ್ ಹಾಗು ಸತ್ರಿಯವರು ಪರೀಕ್ಷೆ ಮಾಡಿದರು. "ನನ್ನ ದೇಹದ ಪರೀಕ್ಷೆ ಮಾಡಿದ ನೀವು ನನಗೆ ಹಣ ಕೊಡಬೇಕು !" ಹೀಗೆ ಮಹಾತ್ಮರು ಡಾಕ್ಟರರಿಗೆ ಹೇಳಿ ಅವರ ಕಡೆಯಿಂದ ಫೀ ಪಡೆದು ಹರಿಜನ ನಿಧಿಗೆ ಜಮಾ ಮಾಡಿದರು !

* * *

ಮಹಾತ್ಮರಿಗೆ ಗಡಿನಾಡಿನ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಪೀರಶಹಾನ ಶಹಾರವರೂ, ಕಾರ್ಯದರ್ಶಿಗಳಾದ ರಾಮಸಿಂಗರವರೂ ಭೆಟ್ಟಿಯಾಗಿ ಗಡಿನಾಡಿನ ಪರಿಸ್ಥಿತಿಯನ್ನು ಅವರಿಗೆ ತಿಳಿಸಿ ಹೇಳಿದರು. ಖುದಾಯಿ—ಖಿದಮತಗಾರ ಸ್ವಯಂಸೇವಕರು ಯಾವದೇ ಅತ್ಯಾಚಾರ ಮಾಡಲಿಲ್ಲ. ರಾಷ್ಟ್ರೀಯ ಸಭೆಯ ಕೈಕೆಳಗೆ ಕೊಂಗ್ರೆಸ ಶಿಪಾಯಿಯಾ। ಸ್ವಯಂಸೇವಕರು ವರ್ತಿಸಿದ್ದಾರೆ, ಹೀಗೆ ಅವರು ಪ್ರಕಟಣೆ ಹೊರಡಿಸಿದ್ದಾರೆ. ಮಹಾತ್ಮರು ೧ ತಾಸಿನ ತನಕ ಯಾವತ್ತೂ ಸಂಗತಿಗಳನ್ನು ಕೇಳಿಕೊಂಡರು. "ಗಡಿನಾಡಿಗೆ ಒಮ್ಮೆ ಬರಬೇಕೆಂದು ನನ್ನ ಅಪೇಕ್ಷೆಯಿದೆ, ಗಡಿನಾಡಿನ ಗಾಂಧಿಗಳಾದ ಖಾನ ಅಬ್ದುಲ್ಲ ಗಫೂರಖಾನರವರು ನನಗೆ ಮಗ ದೇವದಾಸನಷ್ಟೇ ಪ್ರೀತಿಯವರು. ಗಡಿನಾಡಿನ ಜನರು ಹೊಂದಿದ ಕಷ್ಟಗಳನ್ನು ಅನುಭವಿಸಿದ ತೊಂದರೆಗಳನ್ನು ನಾನೆಂದಿಗೂ ಮರೆಯಲಾರೆ. ನನ್ನ ಪ್ರೇಮ ಸಂದೇಶವನ್ನು ಗಡಿನಾಡಿನವರಿಗಲ್ಲ ತಿಳಿಸಿರಿ" ಹೀಗೆ ಮಹಾತ್ಮರು ಅವರಿಗೆ ಹೇಳಿ ಕಳುಹಿದರು. ಪೀರಶಹಾನ ಶಹಾರವರ ಸರಕಾರಿ ನಿರ್ಬಂಧದ ಬಗ್ಗೆ ತಾವು ಮುಂದೆ ಏನು ಮಾಡಬೇಕೆಂಬ ಬಗ್ಗೆ ಮಹಾತ್ಮರಿಂದ ಸಲಹೆ ಕೇಳಿಕೊಂಡಿದ್ದರು.

* * *

ನ್ಯಾಯ ಕೋರ್ಟಿನ ಸಂಭಾವನೆ.

ಜಲಂದರದೊಳಗಿನ ಸೆಶನ್ಸ ಜಜ್ಜರಾದ ಮಿ। ಕೊನೋಲಿಯಾರವರ ಅಪ್ಪಿಲದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಮೇಲೂ, ಪೋಲೀಸ ಸುಪರಿಂಟೆಂಡೆಂಟರ ಮೇಲೂ ಸಂತಪ್ತರಾಗಿದ್ದಾರೆ. ಸೆಶನ್ಸ ಕೋರ್ಟಿನಲ್ಲಿ ಒಂದು ಫೌಜದಾರಿ ಅಪೀಲಿನ ವಿಚಾರ ನಡೆದಾಗ ಸೆಶನ್ಸ ಜಜ್ಜರು ಮಿಸ್ಲಿಯಲ್ಲಿ ಹಾಜರಾದ ವರದಿ ಸ್ಪಷ್ಟನಯವೆಂತ ಅಭಿಪ್ರಾಯಪಟ್ಟು ಫೌಜದಾರಿ ಮೊಕದ್ದಮೆಯವರ ಮೇಲೆ ತಪ್ಪು ಹೊರಿಸಿ ಪೋಲೀಸ ಸುಪರಿಂಟೆಂಡೆಂಟರು ಚೌಕಶಿ ಮಾಡಬೇಕಾಗಿ ಆಜ್ಞೆ ಮಾಡಿದರು. "ತಮಗೆ ಯೋಗ್ಯ ಅಧಿಕಾರಪಟ್ಟವರ ಕಡೆಯಿಂದ ಅಪ್ಪಣೆಯಿಲ್ಲ, ಚೌಕಶಿ ಮಾಡುವದು ಆಡಳಿತೆಗೆ ಹಿತವ ವಲ್ಲ," ಹೀಗೆ ಪೋಲೀಸ ಸುಪರಿಂಟೆಂಡೆಂಟರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಬರೆದರು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಸೆಶನ್ಸ ಜಜ್ಜರಿಂದ ಬಂದ ಕಾಗದ-ಪತ್ರಗಳನ್ನು ವಿಚಾರ ಮಾಡುವದವಶ್ಯವಿಲ್ಲವಾಗಿ ಅಭಿಪ್ರಾಯಪಟ್ಟು ಪ್ರಕರಣವನ್ನು ನಿಕಾಲೆಯಲ್ಲಿ ತಂದರು, ಸೆಶನ್ಸ ಜಜ್ಜರಿಗೆ ತಮ್ಮ ನಿಕಾಲೆಯ ಸಂಗತಿ ಸಹ ತಿಳಿಸಲಿಲ್ಲ. ಮುಂದಿನ ಕ್ರಮವೇನಾಯಿತೆಂದರೆ ಚೌಕಶಿ ಮಾಡಿದ ಬಳಿಕ, ಸೆಶನ್ಸ ಜಜ್ಜರಿಗೆ ಈ ಸಂಗತಿ ತಿಳಿಯಿತು. ಸೆಶನ್ಸ ಜಜ್ಜರು ಬರೆಯುವದೇನೆಂದರೆ-- "ಈ ಕೋರ್ಟು ಈ ಜಿಲ್ಲೆಗೆ ಪ್ರಮಾಣಭೂತವಿದ್ದು, ಈ ಕೋರ್ಟಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಡಿ| ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟದ್ದು ದಾಖಲೆಗಳಿಗೆ ಸಮ್ಮತವಿಲ್ಲ. ಅವರು ವರದಿ ಸಹ ನೋಡಲಿಲ್ಲ, ಇತರ ದಾಖಲೆಗಳನ್ನೂ ವಿಚಾರಿಸಲಿಲ್ಲ. ಗುಣದೋಷಗಳ ವಿಚಾರ ಮಾಡದೆ, ಚೌಕಶಿ ಮಾಡಲು ದಕ್ಷ ಅಧಿಕಾರಸ್ಥರಿಂದ ಬರೆದು ಬರಲಿಲ್ಲವಾಗಿ ಪೋಲೀಸ ಸುಪರಿಂಟೆಂಡೆಂಟರು ಬರೆದದ್ದನ್ನೇ ಅವರು ಪ್ರಮಾಣವೆಂದು ಗ್ರಹಿಸಿದರು. ಪೋಲೀಸ ಸುಪರಿಂಟೆಂಡೆಂಟರು ಈ ಕೋರ್ಟಿಗೆ ಅಪಮಾನ ಮಾಡಿರುತ್ತಾರೆ. ಡಿ| ಮೆಜಿಸ್ಟ್ರೇಟ ಕೋರ್ಟು ಈ ಕೋರ್ಟಿಗೆ ಅಧೀನವಾಗಿದ್ದು, ಈ ಕೋರ್ಟಿನ ಅಭಿಪ್ರಾಯಕ್ಕೆ ಮನ್ನಣೆಯನ್ನೀಯದಿದ್ದದ್ದು ಅಪ್ರಶಸ್ತವಿದ್ದ, ಈ ಬಗ್ಗೆ ಯಾವದೇ ನೆವ ಸಹ ತೆಗೆದು ಬುದ್ಧಿಪೂರ್ವಕವಾಗಿ ಅವರು ಅಪಮಾನ ಮಾಡಿದ್ದಾರೆ, ಈ ಕೋರ್ಟಿಗೆ ಅವರು ತಿರಸ್ಕರಿಸಿದ್ದಾರೆ. ಏನು ಮಾಡಿದರೆಂಬ ಸಂಗತಿ ಸಹ ತಿಳಿಸಲಿಲ್ಲ. ಕಾರಭಾರಕ್ಕೆ ಇಂಥ ಚೌಕಶಿಯಿಂದ ಹಿತವಿಲ್ಲೆಂಬ ಸಂಗತಿ ನಿರಾಧಾರವಿದ್ದ ಪೋಲೀಸ ಸುಪರಿಂಟೆಂಡೆಂಟರಿಗೆ ಈ ಕೋರ್ಟಿನ ಮೇಲೆ ಆಕ್ಷೇಪ ಮಾಡಲು ಅಧಿಕಾರವಿಲ್ಲ. ಸಂಬಂಧಪಟ್ಟವರು ಹೈಕೋರ್ಟಿಗೆ ಅರ್ಜಿ ಮಾಡಬೇಕಾಗಿತ್ತು. ಇಂಥ ಚೌಕಶಿ ಮಾಡಿದ್ದಲ್ಲಿ ಕಾರಭಾರಕ್ಕೆ ಬಾಧ ತಪ್ಪುತ್ತದಾಗಿ ಹೇಳುವದರಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯ ಕೋರ್ಟುಗಳಿಗೆ ವಂಚಿಸಬಯಸುವವರಿಗೆ ಪುಟ ಕೊಟ್ಟಂತಾಗುತ್ತದೆ. ಇಂಥ ಅಪರಾಧಗಳಿಂದ, ನ್ಯಾಯಕೋರ್ಟುಗಳಲ್ಲಿ ಒದಗುವ ವಂಚನೆಗಳು ಒಳಪಟ್ಟವರಿಗೆ, ಇಂಥ ಅಪರಾಧಗಳ ಚೌಕಶಿ ಮಾಡುವದು ಅತ್ಯವಶ್ಯವಿರುವದೆಂದು ತೋರುವ ಹಾಗಿದೆ. ಹೀಗೆ ಅಲಕ್ಷ ಮಾಡಿದರ ಸ್ಥಿತಿ ಸುಧಾರಿಸದು" ಹೀಗೆ ಬರೆದು ಸೆಶನ್ಸ ಜಜ್ಜರು ತಾವೇ ಈ ಪ್ರಕರಣದ ಚೌಕಶಿ ಮಾಡಲಾರಂಭಿಸಿದ್ದಾರೆ. ಪೋಲೀಸ ಖಾತೆಯ ತಿಸ್ತು ನೋಡಿರಿ !

— ಔಂಧ ಸಂಸ್ಥಾನಿಕರಾದ ಶ್ರೀಮಂತ ಬಾಳಾಸಾಹೇಬ ಪಂತಪ್ರತಿನಿಧಿಗಳವರು ಶ್ರೀ ಕಾಶಿ ಕ್ಷೇತ್ರದೊಳಗಿನ ಹಿಂದು ವಿಶ್ವವಿದ್ಯಾಲಯಕ್ಕೆ ೧೦ ಸಾವಿರ ರೂಪಾಯಿಗಳನ್ನರ್ಪಿಸಿದ್ದಾರೆ.

— ಯುರೋಪ ಖಂಡದಲ್ಲಿ ಮಳೆಯಿಲ್ಲದೆ ಜನರು ಗೋಳಿಡುತ್ತಿದ್ದಾರೆ. ರುಮಾನಿಯಾ ಮೊದಲಾದ ದೇಶಗಳಲ್ಲಿ ಒಂದು ವಿಚಿತ್ರ ಪದ್ಧತಿಯಿಂದ ಮೇಘರಾಜನನ್ನು ಸಂತೈಸುವ ಪ್ರಕಾರ ನಡೆದದೆ. ಹುಡುಗಿಯರು ಒತ್ತಟ್ಟಲಿಯಾಗಿ ಮರದ ಟೊಂಗೆಗಳನ್ನೂ, ಎಲೆಗಳನ್ನೂ ಸುತ್ತಿಕೊಂಡು ನಾಚುಗಾಗ ಹಾಡಿ ಕುಣಿದಾಡುತ್ತ ನದಿ ಪ್ರದೇಶಕ್ಕೆ ಹೋಗಿ ಅಲ್ಲಿ ಅವನ್ನು ಒಗೆದು ಮರಳಿದರು. ಒಂದೆಡೆ ಇಬ್ಬರು ಹುಡುಗರು ಜಲದೇವತೆಗೆ ಪ್ರಸನ್ನಗೊಳಿಸುವದಕ್ಕಾಗಿ ಈ ವಿಧಾನ ಹೇಳುತ್ತ ಮೆರವಣಿಗೆ ಸಂಗಡ ಬಂದ ಪುರೋಹಿತರಿಗೆ ನದಿಯಲ್ಲಿ ಮುಳುಗಿಸಿದರು. ಸುಧಾರಿಸಿದ ಪಾಶ್ಚಾತ್ಯ ದೇಶಗಳಲ್ಲಿ ನಡೆಯುವ ಸುಧಾರಿಸಿದ ಪ್ರಕಾರಗಳಿವು !!

ವೃತ್ತಸಾರ.

— ದಾಂಡಿಯ ಹೈಕೋರ್ಟಿನಲ್ಲಿ ಭಾವನಾಂ ದವಾ ನಿಧಿಗೆ ಜಾತಿಸುವರು ಸ್ವಜ್ಞಾತಿಗಾಗಿ ೬೦೦೦ ರೂಪಾಯಿಗಳ ನೋಟು ಬಟ್ಟುಗಳನ್ನಿಟ್ಟಿದ್ದರು. ನಿಧಿಯ ಆಡಳಿತದಾರರು ೯೮ ರೂಪಾಯಿಗಳನ್ನು ಹಂಚಿಸಿದರಾಗಿ ಅಂದು ಬಂದಿದ್ದು ಹೈಕೋರ್ಟಿನಲ್ಲಿ ವ್ಯಾಜ್ಯ ನಡೆದು ವ್ಯಾಜ್ಯದ ಖರ್ಚಿಗಾಗಿ ಇಷ್ಟೇ ನಿಧಿ ಖರ್ಚಾಯಿತು!

— ಮಹಾತ್ಮರು ಅಜಮೀರಕ್ಕೆ ಹೋದಾಗ ಸನಾತನಿಗಳ ಪ್ರಮುಖರಾದ ಪಂಡಿತ ಲಾಲನಾಥ ಮೊದಲಾದವರಿಗೆ ಜೊತೆದವರ ಪಕ್ಷದಯಾಗಿದೆ ಸ್ವಯಂಸೇವಕರೊಬ್ಬರು ತಾವೇ ಅತ್ಯಾಚಾರ ಮಾಡಿದೆವಾಗಿ 'ಅರ್ಜುನ' ಎಂಬ ಹಿಂದೀ ಪತ್ರಿಕೆಗೆ ಬರೆದು ಪಶ್ಚಾತ್ತಾಪಪಟ್ಟು ಅದಕ್ಕಾಗಿ ಪ್ರಾಯಶ್ಚಿತ್ತವೇನು ಕೊಳ್ಳಬೇಕಾಗಿ ಬರೆದಿದ್ದಾರೆ? ಸಂಪಾದಕರಾದ ಪ್ರೊಫೆಸರ ಇಂದ್ರರವರು ಮಹಾತ್ಮರಿಗೆ ಬಂದು ಈ ಪಾದದೊಳಗಿಂತ ವಿಮೋಚನ ಹೊಂದಲು ಸೂಚಿಸಿದ್ದಾರೆ.

— ಹಿಂದುಸ್ಥಾನ ಸರಕಾರವು ಕ್ಷಾಮಗ್ರಸ್ತರ ಪರಿಹಾರಕ್ಕೆ ದ್ರವ್ಯಸಹಾಯ ಮಾಡಲು ನಿರ್ಧರಿಸಿದೆ. ಸುಮಾರು ೫ ಲಕ್ಷ ರೂಪಾಯಿಗಳನ್ನು ಈ ಕಾರ್ಯಕ್ಕೆ ವೆಚ್ಚ ಮಾಡಬೇಕಾಗಿ ಗೊತ್ತಾಗಿದೆ. ಪಂಜಾಬ ಸರಕಾರವು ಹಿಸ್ಸಾರ ಜಿಲ್ಲೆಯಲ್ಲಿ ಕ್ಷಾಮವು ನಿರ್ಧರಿಸಿದ್ದರಿಂದ ಒಕ್ಕಲಿಗರ ಮಂದಿಗೆ ಜೀವನದ ವ್ಯವಸ್ಥೆಯಾಗುತ್ತಾಗಿ ಬರೆದು ಕ್ಯಾನಾಲಿಗೆ ಸರಕಾರ ಪಾತ್ರತೆ ಕೊಟ್ಟಿದೆ. ಒಕ್ಕಲಿಗರು ಕಷ್ಟದಲ್ಲಿ ಬಿದ್ದಾಗ ಈ ಉಪಾಯದಿಂದ ಅವರಿಗೆ ಕೆಲಸ ವ್ಯವಸ್ಥೆಯಾಯಿತಂತೆ. ಒಟ್ಟಿನ ಮೇಲೆ ದಿನಾ ೧|| ಆಣೆಯಂತೆ ವೃತ್ತಿ ದೊರಕುತ್ತಿದೆ. ಇದರಿಂದ ಅವರು ಸ್ವಾವಲಂಬಿಗಳಾದರು, ನೀತಿವಂತರಾದರು, ಪಂಜಾಬ ಸರಕಾರವು ರಾ|| ಗಾಂಧಿಯವರಿಗೆ ಹೊಗಳಬೇಕು. ಹೀಗೆ ಕಲಕತ್ತೆಯ 'ಸ್ಟೇಟ್ಸ್‌ಮನ್' ಪತ್ರಿಕೆಯು ಹೊಗಳುತ್ತದೆ.

— ಸರದಾರ ವಲ್ಲಭಭಾಯಿ ಪಟೇಲರ ಮಗನ ಉದ್ಯಮದ ಬಗ್ಗೆ ದಾಂಡಿಯಲ್ಲಿ ಶಸ್ತ್ರಪ್ರಯೋಗವಾಯಿತು, ಅದು ಅಷ್ಟೇನು ಮಹತ್ವದ್ದಲ್ಲವಾಗಿ ಹೇಳುತ್ತಾರೆ. ಸರದಾರರು ಸ್ವೇಚ್ಛೆಯಿಂದ ಇದ್ದಾರೆ.

— ಪಂಜಾಬದೊಳಗಿನ ೩ ಪಾಯಿ—ನಿಧಿವಾಹಕರ ಸಂಸ್ಥೆಯ ಮೇಲಿನ ಬಹಿಷ್ಕಾರವನ್ನು ಸರಕಾರವು ರದ್ದುಪಡಿಸಲಿಲ್ಲ, ಅವರಿಂದ ನಿಷೇಧ ಪ್ರದರ್ಶನ ಮಾಡುವದಕ್ಕಾಗಿ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಮಿ| ಮೆಹತಾ ರವರು ತಂದ ಸೂಚನೆಯನ್ನು ಚರ್ಚಿಸಲು ಕಾಯಿದೆಯಂತೆ ೩೫ ಮಂದಿ ಸಭಾಸದರು ಪುರಸ್ಕಾರ ಮಾಡದ್ದರಿಂದ ಆ ಸೂಚನೆ ಚರ್ಚೆಗೆ ಬರಲಿಲ್ಲ. ಈಗಿನ ವರಿಷ್ಠ ಕಾಯಿದೆ ಕೌನ್ಸಿಲಿನೊಳಗಿನ ಸ್ವರೂಪವಿದು!

— ಮುಂಬಯಿಯಲ್ಲಿ ನೆರವೇರಲಿಕ್ಕಿದ್ದ ಆಲಿಸೇ ರಾಷ್ಟ್ರೀಯ ಸಭೆಯ ಅಧಿವೇಶನದ ಕರ್ತರ ಭಾರದಿಂದ ನಡೆದಿದೆ. ವರ್ಲೀ ರಿಕ್ಲಮೇಶನಿನ ಸ್ಥಳ ರಾಷ್ಟ್ರೀಯ ಸಭಾಮಂಟಪಕ್ಕಾಗಿ ಗೊತ್ತುಮಾಡಲಾಗಿದೆ. ಶ್ರೀ|| ಬುಲೇನದ ನರಿಮಾನರವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿಯೂ ಮಿ|| ಯೂಸುಫ ಮೆಹರ ಅಲ್ಲಿಯವರು ಸ್ವಯಂಸೇವಕರ ಅಧಿಪತಿಗಳಾಗಿಯೂ, ಶ್ರೀ|| ಭೂಲಾಬಾಯಿ ದೇಸಾಯಿ, ಸಯ್ಯದ ಅಬ್ದುಲ್ಲಾ ಬ್ರೆಲ್ವಿ, ಕೃಷ್ಣಾಜಿ ಪ್ರಭಾಕರ ಖಾಡಿಲಕರ, ಶ್ರೀಮತಿ ಶಾಂತಾಬಾಯಿ ಮೊದಲಾದ ಹತ್ತು ಜನರು ಉಪಾಧ್ಯಕ್ಷರಾಗಿಯೂ, ಶ್ರೀ| ಎಸ್. ಕೇ. ಪಾಟೀಲ, ಅಬೀದ ಅಲ್ಲಿ ಮೊದಲಾದ ನಾಲ್ವರು ಕಾರ್ಯದರ್ಶಿಗಳಾಗಿಯೂ, ರಾಜಾಬಹಾದ್ದೂರ ಗೋವಿಂದಲಾಲ ಪಾಳ ದಾಸ ಕರಸನದಾಸರವರು ಕೋಶಾಧಿಕಾರಿಗಳಾಗಿಯೂ ನೇಮಿಸಲ್ಪಟ್ಟರು.

— ಪಾಟ್ನಾ ಪಟ್ಟಣದಲ್ಲಿ ಶ್ರೀ|| ಅಯೋಧ್ಯಾಪ್ರಸಾದ ಎಂಬ ೬೫ ವರ್ಷದ ವೃದ್ಧರು ಆತ್ಮಹತ್ಯ ಮಾಡಿಕೊಂಡರು. ಅವರ ಬಟ್ಟೆಯೊಳಗೆ ಮಗನಿಗೆ ಬರೆದ ಒಂದು ಚೀಟಿಯಲ್ಲಿ ೩ ವರ್ಷಗಳ ಶಿಕ್ಷೆಯಾಗಿದ್ದು ಅವರಿಗೆ ಸರಕಾರವು ಅಂದಮಾನಕ್ಕೆ ಕಳುಹಿತು. ಮಗನ ವಿರಹ ತಾಳಲಾರದೆ ತಾನು ಆತ್ಮಹತ್ಯ ಮಾಡಿಕೊಳ್ಳುತ್ತೇನಾಗಿ ಡಿ|| ಮೆಜಿಸ್ಟ್ರೇಟರಿಗೂ, ಪೋಲೀಸರಿಗೂ, ಮಗನಿಗೂ ಪತ್ರ ಬರೆದಿಟ್ಟು ಗಂಗಾ ನದಿಯಲ್ಲಿ ಮುಳುಗಿ ಸತ್ತರು!

— ಪ್ರಾಮ ಪಟ್ಟಣದೊಳಗೆ ಸಂಶೋಧನೆ ಖಾತೆಯ ಕಚೇರಿ ಈಗ ಬಹುಕಾಲದಿಂದ ಇದೆ. ಈ ಅವಸರವನ್ನು ದೂರ ಮಾಡಲಿಕ್ಕೆ ೯ ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಈ ಕಚೇರಿಯನ್ನು ಈಗ ದಿಲ್ಲಿಗೆ ಒಯ್ಯಬೇಕೆಂದು ಸರಕಾರ ನಿರ್ಣಯವಾಗಿದೆ. ಅಲ್ಲಿ ಈ ಕಚೇರಿ ಕಟ್ಟಲು ೧೦ ಲಕ್ಷ ರೂಪಾಯಿ ಮಂಜೂರಾಗಿವೆ. ೯ ಲಕ್ಷಕ್ಕಿಂತ ೧೦ ಲಕ್ಷ ಕಡಿಮೆ!!

— ಸರಕಾರವು ಸತ್ಯಾಗ್ರಹ ಯುಗದಲ್ಲಿ ಜಪ್ತ ಮಾಡಿಕೊಂಡ 'ಸ್ವರಾಜ್ಯಭವನ'ವನ್ನು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ|| ಬಾಜೀರಾವ್‍ರವರಿಗೆ ಒಪ್ಪಿಸಿದೆ. ಅಲ್ಲಿದ್ದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ರೆಕಾರ್ಡ ಗದ್ದಲಿಸಿದೆ. ಪಂ|| ಜವಾಹರಲಾಲರವರು ಅಲಹಾಬಾದ ಪಂಡಿತ ಮೋತಿಲಾಲ ನೆಹರೂರವರ ಕಾಂಗ್ರೆಸ್ಸಿಗೆ ಕೊಟ್ಟಿದೆ. ಕಾಂಗ್ರೆಸ ಕಚೇರಿಯು ಸ್ವರಾಜ್ಯಭವನದ ಮನೆಯಲ್ಲಿ ತೆರೆಯಲ್ಪಡುವುದು.

— ಇಂಗ್ಲಂಡ ದೇಶದ ನಾರಯಲ್ಲಿ, ಒಮ್ಮೆ ಕಳೆದ ಪ್ರಿಟೀರಿಯಾ ದರಿದ್ರ ಕೆಲಸಗಾರರು ಮಳೆಯ ಬಗ್ಗೆ ತಮ್ಮ ತಮ್ಮ ದೇವಾಲಯಗಳಲ್ಲಿ ಪ್ರಾರ್ಥನೆ ಮಾಡಿಕೊಂಡರು. ಸ್ವಲ್ಪ ಹನಿಸಿತು, ಆದರೆ ಮಳೆ ಬೀಳಲಿಲ್ಲ. ಆದರಿಂದ ತೋಫು ಹೊಡೆದು ಮಳೆ ತರಿಸಬೇಕಾಗಿ ಪಾರ್ಲಮೆಂಟಿನಲ್ಲಿ ಗಾಳಾಪಕರೊಬ್ಬರು ಸೂಚಿಸಿದರು. 'ಯುದ್ಧಕಾಲದಲ್ಲಿ ಬಹಳ ಮದ್ದುಗುಂಡು ಹಾರಿಸಿದಾಗ ಮಳೆ ಬಿದ್ದದ್ದೇನೋ ಆಹುದು, ಆದರೆ, ಆ ಮದ್ದುಗುಂಡುಗಳಿಂದ ಮಳೆ ತರಿಸಬಹುದಾಗಿ ಇದುವರೆಗೆ ಸಿದ್ಧವಾಗಿಲ್ಲ" ಹೀಗೆ ಪ್ರಧಾನರು ಹೇಳಿದರು.

— ತ್ರಾವಣಕೋರ ಸಂಸ್ಥಾನದೊಳಗಿನ ಹರಿಜನೋದ್ಧಾರ ಪ್ರಯತ್ನಗಳು ಸ್ತುತ್ಯವು. ತ್ರಾವಣಕೋರ ಸಂಸ್ಥಾನಿಕರು ಪ್ರತಿಯೊಂದು ಹರಿಜನ ಮನೆಗೆ ೩ ಎಕರೆ ಭೂಮಿಯನ್ನು ಉಚಿತವಾಗಿ ಕೊಡಮಾಡಿದ್ದಾರೆ. ಆ ಭೂಮಿ ದಾನ ಮಾಡಲು ಅವರಿಗೆ ಹಕ್ಕಿಲ್ಲ. ಸರಕಾರಿ ಶಾಲೆಗಳಲ್ಲಿ ಹರಿಜನರಿಗೆ ಪ್ರವೇಶ ಮಾಡಿಕೊಳ್ಳಬೇಕೆಂದು ಸರಕಾರ ಆಜ್ಞೆ. ಇದಲ್ಲದೆ ಅವರಿಗೆ ಮಾಸಿಕ ವೇತನಗಳನ್ನು ಕೊಡುತ್ತಾರೆ. ಹರಿಜನರೊಳಗೆ ವಿದ್ಯಾಪ್ರಸಾರ ಮಾಡುವದಕ್ಕಾಗಿ ಪ್ರತ್ಯೇಕ ಶಾಲೆಗಳನ್ನೂ, ರಾತ್ರಿ ಶಾಲೆಗಳನ್ನೂ, ಸೇವಾಗೃಹಗಳನ್ನೂ, ಸಹಕಾರಿ ಸಂಘಗಳನ್ನೂ ಏರ್ಪಡಿಸುವ ವ್ಯವಸ್ಥೆಯಾಗಿದೆ. ಮಾದರಿಯ ವಸತಿಗೃಹವನ್ನು ಸ್ಥಾಪಿಸುವ ವಿಚಾರವು ನಡೆದಿದೆ.

— ಪರದೇಶೀ ಅರಿವೆಗಳನ್ನು ಆಮದು ಮಾಡಿ ಲಾಭ ಹೊಂದುವ ಉದ್ದೇಶದಿಂದ ಕಾಶೀವಾಸಿ ಸಂಸ್ಥಾನದ ವಾರಣಾಸಿ ಯಲ್ಲಿರುವ ೧೫ ಮಂದಿ ವರ್ತಕರು ಒಂದು ಸಿಂಡಿಕೇಟನ್ನು ಮಾಡಿದ್ದಾರೆ. ಸ್ವದೇಶ ಯುಗದೊಳಗಿನ ವಿದೇಶ ಕಾರಸ್ಥಾನವಿದು!

— ಹಿಂದುಸ್ಥಾನದಲ್ಲಿ ವ್ಯಾಪಾರ-ಉದ್ಯಮಗಳನ್ನು ಅಭಿವೃದ್ಧಿಗೊಳಿಸುವದಕ್ಕಾಗಿ ಆಮದು-ರಫ್ತು ತೆರಿಗೆಗಳನ್ನು ಕಲ್ಪಿಸುವದಕ್ಕಾಗಿ ಇತ್ತಲಾಗಿ 'ಇಂಡಿಯನ್ ಟಾರಿಫ ಬೋರ್ಡ' ಎಂಬ ಮಂಡಳ ಸ್ಥಾಪಿತವಾಗಿದೆ. ಈ ಬೋರ್ಡಿನವರು ಸಮ್ಯಕ್ಕೆ ಪ್ರಕಟಿಸಿದ ರಿಪೋರ್ಟ ಮಾಡಿಸಿದ ಇಂಗ್ಲಂಡದಿಂದ ಆಮದಾಗುವ ಉಕ್ಕಿನ ಸಾಮಾನುಗಳ ಮೇಲೆ ಟನ್ನಿಗೆ ರೂ ೨೩|| ರಂತೆ, ತಗಡುಗಳ ಮೇಲೆ ೨೫ರಂತೆ ತೆರಿಗೆ ಇತ್ತು. ಅದು ರದ್ದಾಗಬೇಕೆಂದು ಬೋರ್ಡಿನವರು ಉಕ್ಕಿನ ಸಾಮಾನುಗಳ ಮೇಲೆ ೩೫ ರಂತೆ ತೆರಿಗೆ ಇದೆ, ಅದು ೧೧ಕ್ಕೆ ಇಳಿಸಬೇಕೆಂದ ಸೂಚನೆ. 'ಪಬ್ಲಿಕ ಟಿನ್ ಪ್ಲೇಟ' ಎಂಬ ಉಕ್ಕಿನ ಮೇಲೆ ಟನ್ನಿಗೆ ರೂ ೪೦ ರಂತೆ ತೆರಿಗೆಯನ್ನು ಬ್ರಿಟೀಶರ ಉಕ್ಕಿನ ಮೇಲೆ ಹಾಕಬೇಕಾಗಿದೆಯೂ, ಬ್ರಿಟಿಶ ದೇಶದಿಂದ ಬರುವ ಈ ಉಕ್ಕಿನ ಮೇಲೆ ತೆರಿಗೆ ಇರಬಾರದಾಗಿಯೂ ಬೋರ್ಡಿನ ಠರಾವು. ಅಂದರೆ, ಹಿಂದುಸ್ಥಾನ ದೇಶವು ಬ್ರಿಟಿಶ ದೇಶದ ಮಾಲದಸ್ತೇಗೆ ತಕ್ಕ ದರ ಕೊಟ್ಟು ಅವರಿಂದಲೇ ಸರಕು ಖರೀದಿಸಿದಲ್ಲಿ ಹಿಂದುಸ್ಥಾನದ ವ್ಯಾಪಾರ-ಉದ್ಯಮ ಅಭಿವೃದ್ಧಿ ಹೊಂದುವದು ಎಂದು ಅದರ ಆಶಯವು. ಇದಕ್ಕಾಗಿ ಬ್ರಿಟಿಶರ ದೇಶದೊಳಗಿಂದ ಬರುವ ಉಕ್ಕಿನ ಸಾಮಾನು ಸಂಪೂರ್ಣ ಅಲ್ಲಿಯದು ಇರುವದಿಲ್ಲ, ಇತರ ದೇಶಗಳಿಂದ ಸರಕು ಕಳಿಸಿ ಇಂಗ್ಲಂಡ ದೇಶದಲ್ಲಿ ತಯ್ಯಾರಾದ ಉಪ್ಪು ಹದಗೊಳಿಸಲ್ಪಡುತ್ತವೆ, ಹಿಂದುಸ್ಥಾನದಲ್ಲಿ ಪರದೇಶೀ ಸಾಮಾನುಗಳು ಬರಗೊಟ್ಟಲ್ಲಿ ಈ ಸರಕುಗಳು ಅಗ್ಗವಾಗಿ ಸಿಗುತ್ತಿದ್ದವು. ಆದರೆ, ಫ್ರಾನ್ಸ, ಜರ್ಮನ್, ಝೆಕೋಸ್ಲೋವೇಕಿಯಾ ದೇಶಗಳಿಂದ ಈ ಉಕ್ಕಿನ ಸಾಮಾನುಗಳು ಬರುತ್ತಿದ್ದವು. ತನ್ನ ಮುಟ್ಟಿಗೆ ಲಕ್ಷ ಟನ್ನು ಈ ಸಾಮಾನು ಬರುತ್ತದೆ. ಬ್ರಿಟಿಶ ದೇಶಕ್ಕೆ ಈ ಉಪಾಯದಿಂದ ಎರಡು ಕಡೆ ಲಾಭ. ಹಿಂದುಸ್ಥಾನದಲ್ಲಿ ತನ್ನ ಸರಕು ಜಾಸ್ತಿ ದರದಿಂದ ಮಾರಲು ಅವಕಾಶ, ಮೇಲೆ ವಿದೇಶಗಳಿಗೆ ಅವರ ಸರಕು ಮಾರಲು ಹಿಂದುಸ್ಥಾನದ ಪೇಟೆ ತಪ್ಪಿದ್ದರಿಂದ ಆ ಸರಕುಗಳನ್ನು ಬ್ರಿಟಿಶ ದೇಶದವರು ಅಗ್ಗವಾಗಿ ಇತರ ದೇಶಗಳಿಂದ ತರಿಸಿಕೊಂಡು ಹಿಂದುಸ್ಥಾನಕ್ಕೆ ಕಳಿಸಲು ಏರ್ಪಾಟು!!

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಶೇರಿನ ದಾರರೂ, ಡಿರೆಕ್ಟರರೂ ಹಿಂದೀಯರೇ ಇದ್ದಾರೆ. ಈ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮ್ಯೂಚ್ಯುವಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆಯಲ್ಪಡಬೇಕು.

Kumta Agents—
D K NAYAK Bro.
Honavar Agent
R V PRABHU Esq

K. Padmanabha Rao & Sons.,
BELGAUM
Chief Agents for
Karnatak Districts & S M. States

ಸ್ವದೇಶೀಯ ವೃತ್ತಾಂತ.

ಕುಮಟಾ— [illegible]

[illegible]

ಹೊನ್ನಾವರ— [illegible]

[illegible]

ಭಟಕಳ— [illegible]

[illegible]

ಕಾರವಾರ— [illegible]

[illegible]

ಹುಟ್ಟಿದ ... ನೋಡಿ ... ವರ್ಷವೆಂದು ... [illegible]

...ಎಲ್ಲರೂ ... ವರ್ಷದವನಾದನು? ಎಂದು ಕೇಳುತ್ತಾರೆ ... [illegible]

...ಚಮತ್ಕಾರವಲ್ಲ ... ಇನ್ನೊಂದು ಚಮತ್ಕಾರವೇ ... [illegible]

...ಸಬ್ ಕಮಿಟಿಯ ... [illegible] ... ಎಂಥ ಆಲೆಯದು!

SıromanıUdıpıNarayanacharya

Chaukhamba, Benares City



ನಾರಾಯಣಾಚಾರ್ಯ ... [illegible] ... ಶಕೆ 1080 ಸಂ 1ಕ್ಕೆ 0-1 0 ಯಿಂದ 10 ರ ... [illegible]

ಇದು ... ಶಕೆ 32 ರ 1ಕ್ಕೆ ರೂ 0 8 0ಯಿಂದ ರೂ 100 ವರೆಗೆ ... 1ಕ್ಕೆ ರೂ 3 8 0ರಿಂದ 35ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0 ... ಕಳಿಸಿದರೆ, 1 ... ವಿಶ್ವೇಶ್ವರನ ... ಸಹ ... ಕಳಿಸಲಾಗುವದು. ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ,

ಚೌಖಾಂಬಾ, ಕಾಶೀ ಕ್ಷೇತ್ರ

|| ಶ್ರೀ ರಾಮ ಪ್ರಸನ್ನ ||

ಡಾ|| ಅಂಕಲೀಕರ, ಎಮ್ ಬಿ, (ಲಂಡನ್) ಸಂಕೇಶ್ವರ ಆಸ್ಪತ್ರಿ ಇವರು
ದಮ್ಮು ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ
ರಾಮಬಾಣ ಔಷಧವೆಂದು ಹೊಗಳಿದ--

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ- ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇವರ ಹೊರತು ಯಾವದೇ ತರದ ಜರ (ದೋಷ ...) ನಿಮೋನಿಯಾ (ವಾಯುಜ್ವರ), ಟಾಯಿಫಾಯಿಡ (ವಿಷಮಜ್ವರ) ... ಕಾಲರಾ ... ಇನ್‌ಫ್ಲುಎಂಝಾ ಸಂಧಿವಾತ, ... (ಹಡೆಯುವ ...) ... ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ ... [illegible]

... ಕಫ, ... ರಕ್ತಹೊರಬೀಳು ... ರಕ್ತಸ್ರಾವ ... ಯಾವದೇ ಕಾರಣದಿಂದ ... (ಸ್ಪ್ಲೀನ) ... ಪುಪ್ಪುಸದ ... ವಿಕಾರ, ... ಎಲ್ಲ ... ರೋಗಗಳ ಮೇಲೆ ... [illegible]

ಈ ಔಷಧದಿಂದ ... ವರ್ಷಗಳಿಂದ ... [illegible]

ನೆಗಡಿ, ಜ್ವರ ಕೆಮ್ಮು ... [illegible]

ನಡೆರತ್ನ ... "ಕಲ್ಪತರು ಕಷಾಯ" ... [illegible]

... ಮಾಸ್ತರ ... ಪಾಟೀಲ, ... [illegible]

ಕೆಮ್ಮು ... [illegible]

ಆರದೇ, ಹಂದಿ ಜ್ವರ (ಮಲೇರಿಯಾ) ದ ಮೇಲೆ ಮಿಶ್ರಣ, ... ಜಂತುನಾಶಕ ಕಷಾಯ, ಕಾಲರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೇಶಲ್ ಔಷದಗಳು ... ಸಿಗುತ್ತವೆ.

ಔಷಧೀ ದಂತಮಂಜನ

ಆವರೀವ ಹಲ್ಲುಗಳ ವಿವಿಧ ... [illegible]

ಶ್ರೀ ರಾಮಜಾಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಜಿಲ್ಲಾ ...)

☞ ಕುಮಟೆಯಲ್ಲಿ ಸಿಗುವ ಪತ್ತೆ ಕಲಬಾಗಕರ ದುಕಾನ, ಕುಮಟಾ

ಕನ್ನಡ ಕ್ರಮಿಕ ಎಳಸಂಯ ಪುಸ್ತಕ ದೊಳಗಿನ ಎರಡು ಪಾಠಗಳು

ಹೋದ ವರ್ಷದ ಸ್ಟೂಲ್ ಕಮಿಟಿಯ ಠರಾವಿನಂತೆ ಈ ಹೊಸ ವರ್ಷದ ಶಾಲೆಗಳಲ್ಲಿ ಕೆಲವು ಪುಸ್ತಕಗಳು ಬದಲಾಗಿದ್ದು ಈ ವರ್ಷ ಅಂದರೆ ೧೯೩೪ನೆಯ ವರೀಕ್ಷೆಗೆ ೧೯೩೩ನೇ ಇಸವಿಯಲ್ಲಿ ಛಾಪಿಸಿದ ಪುಸ್ತಕವನ್ನು ನೇಮಿಸಲಾಗಿದೆ ಎಂದು ಪ್ರಕಟಿಸಿ ಹೊರಟಿದೆ. ೧೯೩೩ನೆಯ ಇಸವಿಯ ಪುಸ್ತಕದಲ್ಲಿ ಮುಂಚೆ ಇದ್ದ ಎರಡು ಪಾಠಗಳನ್ನು ತೆಗೆದುಹಾಕಿ ಬೇರೆ ಎರಡು ಪಾಠಗಳನ್ನು ಸೇರಿಸಲಾಗಿದೆ. ಹಾಗೇ ಕೆಲವು ಹೊಸ ಪಾಠಗಳು ಈ ಪಾಠಗಳು ಹಾಗಿನ (೧೯೩೩ನೇ ಇಸವಿಯ) ಆವೃತ್ತಿಯ ವರೆಗೆ ಹಾಗೇ ಉಳಿದಿರುತ್ತವೆ. ಅವುಗಳೊಳಗಿನ ವಾಕ್ಯರಚನೆ ವಿಷಯ ಎಷ್ಟೋ ಕಡೆಗಳಲ್ಲಿ ಮುದ್ರಣ ದೋಷಗಳು ತಪ್ಪುಗಳು ಈ ವರೆಗೂ ಹಾಗೆಯೇ ಉಳಿದಿರುತ್ತವೆ. ಆ ತಪ್ಪುಗಳನ್ನು ತೋರಿಸಿ ಮಾಡತಕ್ಕ ದುರಸ್ತಿಯನ್ನು ಸಕಾರಣವಾಗಿ ಹೇಳಿದ ಒಂದು ಲೇಖವನ್ನು ನಾನು ಕಳೆದ ೧೯೩೩ ಜೂನ ೧೫ನೇ ತಾರೀಖಿನ ಕನ್ನಡ ಪ್ರಾಥಮಿಕ ಶಿಕ್ಷಣ ಮಾಸಿಕ ಪುಸ್ತಕದ ಸಂಪಾದಕರಿಗೆ ಪ್ರಕಟನೆಗಾಗಿ ಕಳುಹಿಸಿದ್ದೆ. ಆದರೆ ಇಂದಿನ ವರೆಗೂ ಅದು ಪ್ರಕಟವಾಗದೆ ಇರಲು ಆ ಸಂಗತಿಯನ್ನು ಅವರಿಗೆ ಪತ್ರದ ಮೂಲಕ ತಿಳಿಸಿದೆ. ಅವರು ಸಂಪಾದಕರದು ನಿರುತ್ತರ. ಆದುದರಿಂದ ಈಗ ಅವುಗಳನ್ನು ತಮ್ಮ ಪತ್ರಿಕೆಗೆ ಪ್ರಕಟನಕ್ಕಾಗಿ ಕಳುಹಿಸಿದ್ದೇನೆ. ಆ ಪುಸ್ತಕದಲ್ಲಿಯೂ ಅದರ ಹೊರಗೂ ಪ್ರಯೋಗವಾದ ತಮ್ಮ ಪತ್ರಿಕೆಯಲ್ಲಿ ಈ ಲೇಖವನ್ನು ಪ್ರಕಟಿಸಿ ಇದರ ಮೂಲಕ ನಾವು ಪ್ರಾಥಮಿಕ ಶಾಲೆಗಳಲ್ಲಿ ಓದುವ ಪ್ರೌಢ ವಿದ್ಯಾರ್ಥಿಗಳಿಗೂ ಅವರಿಗೆ ಕಲಿಸುವ ಶಿಕ್ಷಕರಿಗೂ ಉಪಕಾರ ಮಾಡಿದವರಾಗಿ ಕನ್ನಡ ಪ್ರಾಥಮಿಕ ಶಿಕ್ಷಣದ ಪರಿಪೂರ್ಣತೆಗೆ ಸಹಾಯವನ್ನು ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕಗಳಲ್ಲಿ ಕ್ರಮಿಕ ಪುಸ್ತಕಗಳ ದರ್ಜೆ ಹೆಚ್ಚಿನದು. ಅವುಗಳಲ್ಲಿ ಎಳಸಯ ಪುಸ್ತಕದ ದರ್ಜೆ ಎಲ್ಲಕ್ಕೂ ಮೇಲೆ. ಅದರಲ್ಲಿ ದೋಷಗಳು ಸ್ವಲ್ಪವೂ ಇರದ ಹಾಗೆ ವಿಚಾರಿಸಿ ಪಾಠ ರಚನೆ ಮಾಡುವವರು ಹುಡುಗರಿಗೆ ಅನುಕೂಲಕ್ಕಾಗಿ ಮಾಡಬೇಕು. ... ವಾಚಕರಿಗೂ ... ವಿಷಯ ... ಯುಕ್ತ ವಿಜ್ಞಾನ ಶಕ್ತಿಯುಳ್ಳವರಿಂದಲೇ ಅವುಗಳ ರಚನೆಯಾಗಬೇಕು ... ಬರೆದ ಕೂಡಲೆ ಹುಡುಗರ ಮನಸ್ಸಿಗೆ ಹಿಡಿಯುವಂತೆ ಸರಳವಾಗಿ ಇರುವುದು ಮತ್ತೂ ಅವಶ್ಯ. ಅದರೂ ಇವುಗಳಲ್ಲಿ ಹೊಸ ಆವೃತ್ತಿಯ ಲ್ಲಿಯೂ ತಪ್ಪುಗಳು ಉಳಿದಿರುವದು ಬಹಳ ಅಸಮಾಧಾನದ ಸಂಗತಿಯು. ಇದನ್ನು 'ಪ್ರಾಥಮಿಕ ಶಿಕ್ಷಣ' ದಂಥ ಪ್ರಾಥಮಿಕ ಶಿಕ್ಷಣದ ಸದ್ಭಾವನೆ ವಿಕಾಸಗೊಳಿಸಲು ಮಾಡಿದ ಪತ್ರಿಕೆಯಿಂದ ಪ್ರಕಾಶಕರ ಲಕ್ಷ್ಯಕ್ಕೆ ಅಗದೆ ತಮ್ಮ ಪತ್ರಿಕೆಯಲ್ಲಿ ಮುದ್ರಿಸದ ಸಲುವಾಗಿ ತಮಗೆ ತೊಂದರೆಕೊಟ್ಟು ತಮ್ಮ ಔದಾರ್ಯದ ಲಾಭ ಪಡೆಕೊಳ್ಳಬೇಕಾಯಿತು. ಇದಕ್ಕಾಗಿ ಕ್ಷಮೆ ಇರಲಿ!

೧೯೩೩ನೇ ಸಾಲಿನ ಆವೃತ್ತಿ ಪಾಠ ೩೨, ಪುಟ ೫೬ ಸಾಲು ೫ ರಿಂದ ಮುಂದೆ ಇದ್ದದ್ದು — 'ಈ ಸಾಸ್ತ್ರಜ್ಞರು ನಮ್ಮ ಕಣ್ಣಿಗೆ ಕಾಣಿಸುವಂತೆ ಹೊಳೆಯುವ ... ಗಳಲ್ಲಿ ... ನಾವು ಬಿಟ್ಟ ದೊಡ್ಡ ಆಕಾರದಿಂದ ತೋರಿಸುವಂಥ ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ನೋಡಿದರೆ ಮಾತ್ರ ಕಾಣಿಸುವಂಥ ಸೂಕ್ಷ್ಮ ಜಂತುಗಳಾಗಿರುವವು' ಈ ವಾಕ್ಯವು? ಮುಂದೆ ಹೇಳಿದಂತೆ ಇರಬೇಕು — ಈ ಶಾಸ್ತ್ರಜ್ಞರು ನಮ್ಮ ಕಣ್ಣಿಗೆ ಕಾಣಿಸುವ ಹುಳುಪುಪ್ಪಟೆಗಳಂಥವಲ್ಲ, ವಸ್ತುಗಳನ್ನು ಸಾವಿರಾರು ಪಟ್ಟು ದೊಡ್ಡ ಆಕಾರದಿಂದ ತೋರಿಸುವ ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ... ಜಂತುಗಳಾಗಿರುವವು. ಈಗಿದ್ದ ವಾಕ್ಯದಿಂದ ಇಷ್ಟು ಅರ್ಥವು ಸ್ಪಷ್ಟವಾಗುವದಿಲ್ಲ. ಪುಟ ಸದರ ಸಾಲು ೧೦ — 'ಮತ್ತು' ಎಂಬುದು ಅನವಶ್ಯಕವಾಗಿ ಬಂದದೆ. ಈ ಎರಡು ಪಾಠಗಳಲ್ಲಿ ಅಲ್ಲಲ್ಲಿ ಇದರ, ಮತ್ತು ಗಳ ಸುಳಿದಾಟವು ಹೆಚ್ಚಾಗಿದೆ. ಇದನ್ನು ಕಡಿಮೆ ಮಾಡಬೇಕು.

ಪುಟ ಸದರ, ಕೆಳಗಿನ ೩ ರಲ್ಲಿ ಕಡೆಯ ವಾಕ್ಯ— ... ಪದಾರ್ಥಗಳು ಬಹಳ ಕಾಲದ ವರೆಗೆ ಕೆಡದೆ ಉಳಿಯಬೇಕೆಂಬ ಅವನ್ನು ... ಪದಾರ್ಥಗಳಲ್ಲಿ ... ಗುಳಂಬ, ಉಪ್ಪಿನಕಾಯಿಗಳು ಈ ವರ್ಗದಲ್ಲಿ ಸೇರುವ ಪದಾರ್ಥಗಳೆಂದು ಹೇಳಿದ್ದು ಸರಿಯಲ್ಲ ... (ಉಪ್ಪಿನಕಾಯಿ) ಇವುಗಳ ವರ್ಗವನ್ನು ಹೇಳಬೇಕಿತ್ತು.

ಪುಟ ೫೭ ಸಾಲು ೩— 'ಸೈನಿಕರಿಗೆ ಬೇಕಾಗಿದ್ದ ಕಾಯಿಪಲ್ಲೆಗಳನ್ನು ಉಪಯೋಗಿಸುತ್ತಿದ್ದರು" ಎಂಬ ಅದೆ ಇಲ್ಲಿ 'ಉಪಯೋಗಿಸುತ್ತಿದ್ದರು' ಎಂಬುದರ ಬದಲು "ಪೂರೈಸುತ್ತಿದ್ದರು" "ಕೊಡುತ್ತಿದ್ದರು" ಇವುಗಳಲ್ಲಿ ಒಂದು ಬೇಕು. ತಕ್ಕ ಸ್ಥಳದಲ್ಲಿ ತಕ್ಕ ಮಾತು ಬಳಸಿದ್ದರೆ ಭಾಷೆಯು ಸುಯೋಗ್ಯ ಕಾಣುವದು.

ಪುಟ ಸದರ ಸಾಲು ೧೩, ೧೪, ೧೬ ರಲ್ಲಿ 'ಹೀಗೆ' ಎಂಬುದು ಮತ್ತೆ ಮತ್ತೆ ಬಂದು ವಾಕ್ಯಗಳ ಅಂದವೇ ಕೆಟ್ಟುಹೋಗಿದೆ. ಆ ಮೂರು ಸ್ಥಳಗಳಲ್ಲಿ 'ಹೀಗೆ' ಯನ್ನು ಬಿಟ್ಟರೆ ಅರ್ಥಕ್ಕೆ ತೊಂದರೆಯಾಗುವದಿಲ್ಲ. ವಾಕ್ಯ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಿರಿ

ಅದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕುರಿತು ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಆಹಾರ' ಕೊಡಬೇಕು. ಶ್ರೇಷ್ಠವಾದ ಆಹಾರವನ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಎಣ್ಣೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ. ರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ	೧—೦—೦
ಅಂಚೆವೆಚ್ಚ ,,	೦—೩—೦
೨ ಬಾಟ್ಲಿಗಳಿಗೆ ,,	೨—೧೨—೦
ಅಂಚೆವೆಚ್ಚ ,,	೦—೧—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

— ೦ —

೫ ಡಬಿಗೆ ರೂ.	೨—೦—೦
೧ ಬಾಟ್ಲಿಗೆ	೦—೪—೦
ಡ್ರಾಮಿಗೆ ,,	೦—೧—೦
ಅಂಚೆವೆಚ್ಚ ,,	೦—೬—೦

ಒಟ್ಟೋದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವುದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.,
POST BOX 2082 BOMBAY No 2

ಗಳಲ್ಲಿಯೂ ಗಂಭೀರತೆಯೂ ಸ್ವಾಭಾವಿಕತೆಯೂ ಉಳಿಯುತ್ತವೆ ಸಾಲು ೧೬ ರಲ್ಲಿ ‹ ಹೀಗೆ ಮುಚ್ಚುವದರಿಂದ, ಎಂಬುದರ ಬದಲು ‹ ಅದರಿಂದ ' ಎಂಬ ಒಂದೇ ಶಬ್ದ ಸಾಕು

ಸಾಲು ೧೯ ‹ ಬಾಳಿನ ಕೊನೆಗಾಗಿ ಎಂದ ಇದ್ದಲ್ಲಿ ಬಿಸಿಲಿನ ಬದಲು ' ಅಥವಾ ಬಿಸಿಲಿನ ಬದಲಾಗಿ ಎಂದು ಬೇಕು ಮೊದಲಿನಂತೆ ಇದ್ದರೆ ಬಿಸಿಲೂ ಬೇಕು, ಬೇರೆ ಸಾಧನಗಳೂ ಬೇಕು ಎಂದು ಅರ್ಥವಾಗುತ್ತದೆ ಅದು ಮುಂದಿನ ವಿವರಕ್ಕೆ ಸರಿಹೋಗುವದಿಲ್ಲ

ಸಾಲು ೩೩ — ‹ ಮಾಡಬೇಕಾಗಿರುವದು ಎಂದಲ್ಲಿ ‹ ಮಾಡಬೇಕಾಗುವದು ಎಂದು ಇರಬೇಕು ಯಾಕಂದರೆ ಬೇಕಾಗಿರುವದು, ‹ ಬೇಕಾಗುವದು ಎಂಬದರ ಅರ್ಥ ಒಂದೇ ಆಗುವದಿಲ್ಲ

ಸಾಲು ೩೭ ಒಳಿದ ಹಣ್ಣು ' ಎಂಬಲ್ಲಿಂದ ಹಿಡಿದು ಮುಂದೆ ಮುಗಿಯುವ ವರೆಗಿನ ಭಾಗದೊಳಗಿನ ವಾಕ್ಯಗಳ ಅರ್ಥವು ವಿಪರೀತವಾಗಿದೆ ಹಣ್ಣು ಒಣಗಿದಷ್ಟು ಅದರ ರುಚಿ ಹಣ್ಣುಗಳ ಕಳೆ ಏರುವದೆಂದು ಇಲ್ಲಿ ಸೂಚಿತವಾಗಿದೆ ಈ ವಿಧಾನವು ವಸ್ತುಸ್ಥಿತಿಗೆ ವಿರುದ್ಧವಾದದ್ದು ಒಣಗಿಸಿದಂತೆ ಹಣ್ಣುಗಳ ಒಣ್ಣಗಾಗಲಿ, ರುಚಿಯಾಗಲಿ ಹೆಚ್ಚುವದೆಂಬ ಸಂಗತಿ ಅನುಭವಕ್ಕೆ ಬಂದಿರುವದಿಲ್ಲ ಆದ್ದರಿಂದ ಈ ಭಾಗವು ಹೀಗೆ ಇರಬೇಕು — ‹ ಬಾಳೆಯ ಹಣ್ಣು, ಅಂಜೂರ ಮೊದಲಾದವುಗಳು ರುಚಿಕರವೂ ಚಂದವೂ ಆಗಿ ಉಳಿಯ ಬೇಕಾದರೆ ಅವನ್ನು ಪೂರ್ಣವಾಗಿ ಒಣಗಿಸಬಾರದು ಅವುಗಳ ಒಳಭಾಗದಲ್ಲಿ (ಅವುಗಳಲ್ಲಿ) ತುಸು ಮಟ್ಟಿಗೆ ಹಸಿಯನ್ನು ಉಳಿಸಿಕೊಳ್ಳಬೇಕಾಗುವದು ಎಷ್ಟು ಒಣಗಿಸಿದರೆ ಅವು ಹೆಚ್ಚು ದಿನ ಬಾಳುವವು ಎಂಬುದನ್ನು ತಿಳಿದುಕೊಳ್ಳುವಿಕ್ಕೆ ತುಸು ಬುದ್ಧಿವಂತಿಕೆಯೂ ಅನುಭವವೂ ಬೇಕು

ಮಂ ೪೩ ಪುಟ ೧೧೦ ಸಾಲು ೩–೩— ‹ ಬಿಸಿಲಿಗೆ ಒಣಗಿಸದೆ ಎಂಬುದರ ಬದಲು ‹ ಬಿಸಿಲಲ್ಲಿ ಒಣಗಿಸದೆ ಅಥವಾ ‹ ಬಿಸಿಲಿಗೆ ಹಾಕದೆ ಎಂದು ಇರಬೇಕು ಬಿಸಿಲಿಗೆ ಒಣಗಿಸದೆ ಎಂಬ ಮಾತಿನ ಪ್ರಚಾರವು ಎಲ್ಲಿಯೂ ಕೇಳಬರುವದಿಲ್ಲ

ಪುಟ ೧೧೩ — ಸಾಲು ೧ ‹ ಈ ಪದ್ಧತಿಯಿಂದಲೇ' ಎಂಬ ವಾಕ್ಯದ ಮೊದಲಿಗೆ ‹ ಮತ್ತು ' ಎಂದು ಬೇಕು

ಖಂಡ ೩, ಸಾಲು —೬— ಬಂದು ಸಣ್ಣ ತೂತು ಉಳಿ ... ಅದನ್ನು ಬೆಸೆಯುವರು ಎಂಬಲ್ಲಿ ತೂತನ್ನು ಬೆಸೆಯುವರೊ ಮುಚ್ಚಳವನ್ನು ಬೆಸೆಯುವರೊ ಎಂಬುದು ಸ್ಪಷ್ಟವಾಗಿ ತಿಳಿಯುವದಿಲ್ಲ ಆದ ಕಾರಣ ಈ ವಾಕ್ಯವನ್ನು— ಡಬ್ಬಿಯಲ್ಲಿ ಹಾಕಬೇಕಾದ ಪದಾರ್ಥಗಳನ್ನು ತುಂಬಿ ಬಂದು ಸಣ್ಣ ತೂತುಗಳುಳ್ಳ ಮುಚ್ಚಳವನ್ನು ಅದಕ್ಕೆ ಬೆಸೆಯುವರು ಎಂದು ತಿದ್ದಬೇಕು

ಸಾಲು —೧೦ ನಿಯಮಿತ ಅವಧಿಯ ವರೆಗೆ ... ' ವಾಕ್ಯದಲ್ಲಿ ಮುಂದೆ ಹೇಳಿದಂತೆ ತಿದ್ದುಪಡಿ ಆಗಬೇಕು ನಿಯಮಿತ ಅವಧಿಯ ವರೆಗೆ ಕಾಯಿಸಿದ ಬಳಿಕ ಡಬ್ಬಿಗಳನ್ನು ಹೊರಗೆ ತೆಗೆದು ಮುಚ್ಚಳಕ್ಕೆ ಇದ್ದ ತೂತನ್ನು ಮುಚ್ಚಿಬಿಡುವರು

ಸಾಲು —೧೪ — ' ಮತ್ತು ಡಬ್ಬಿಯೊಳಗಿನ ಎಂಬ ವಾಕ್ಯದ ಮೊದಲಿಗೆ ಇದ್ದ ಮತ್ತು ' ಬಿಡಬೇಕು

— ಖಂಡ ೩.—ಸಾಲು ೧— ಕೆಲಕೆಲವು ಸಾರ ಹಣ್ಣುಗಳ ... ವಾಕ್ಯವನ್ನು ಕೆಳಗೆ ತೋರಿಸಿರಂತೆ ತಿದ್ದಬೇಕು — ಕೆಲ ಕೆಲವು ಸಾರ ಹಣ್ಣುಗಳ ರಸವನ್ನು ಕಾಯಿಸುವದರ ಬದಲು ಹಣ್ಣುಗಳನ್ನೇ ಸಕ್ಕರೆಯ ಪಾಕದಲ್ಲಿ ಹಾಕಿ ಇಡುವರು " ಯಾಕಂದರೆ ... ವಾಕ್ಯದಲ್ಲಿ ಅವುಗಳನ್ನು ಎಂಬುದು ಹಣ್ಣುಗಳನ್ನು ಸೂಚಿಸುವದೋ, ರಸವನ್ನು ಸೂಚಿಸುವದೋ ತಿಳಿಯುವದಿಲ್ಲ

ಖಂಡ ೩ ವಾಕ್ಯ ೩ನೇದು— ‹ ಹೆಚ್ಚು ಸಕ್ಕರೆಯು ಇ ' ವಾಕ್ಯವು — ‹ ಸಕ್ಕರೆಯು ಅಂತಿವಾ ಹೆಚ್ಚು ದ್ರವಾಂಶದಿಂದ ಇರುವ ಪಾಕದಲ್ಲಿಯೇ ಪದಾರ್ಥವನ್ನು ಕೊಳೆಯುಗೊಡದಿರುವ ಗುಣವಿರುವದು ' ಎಂದು ತಿದ್ದಿಕೊಳ್ಳಬೇಕು. ೩ನೇ ವಾಕ್ಯವು— ಪಾಕದಲ್ಲಿ ಹುದುಗಿಟ್ಟ ಪದಾರ್ಥಗಳನ್ನು ಕಾಜ ಡಬ್ಬಿಗಳಲ್ಲಿ ತುಂಬಿ ಬಾಯಿಬಿಗಿದಲ್ಲಿ ... ತೆಗೆದರೆ ಅವು ಮತ್ತಿಷ್ಟು ಒಳ್ಳೆಯ ಸ್ಥಿತಿಯಲ್ಲಿ ಉಳಿಯುವವು ಎಂಬಂತೆ ತಿದ್ದುಪಡಿ ಯಾಗಬೇಕು

ಮುಂದಿನ ಖಂಡ– ವಾಕ್ಯ ೧ ... ' ಇದರಲ್ಲಿ ನಡುವೆ ಹಾಕಿದ ‹ ಈ ರೀತಿಯಾಗಿ ' ಎಂಬ ಶಬ್ದಗಳು ಅನವಶ್ಯಕ ವಾಕ್ಯ ೩ ‹ ಮುಂಬಯಿಯೊಳಗಿನ ... ಇದರಲ್ಲಿಯೂ ನಡುವೆ ಹಾಕಿದ ‹ ಈ ರೀತಿಯಾಗಿ ಶಬ್ದಗಳು ಅನವಶ್ಯಕ ೩ನೇ ವಾಕ್ಯದಲ್ಲಿ ಮೊದಲಿಗೆ ಇದ್ದ ‹ ಹೀಗೆ ಎಂಬುದು ಅನವಶ್ಯಕ

ಸಾಲು ೯ — ಇಂಥ ಚೆಳೆಯುಳ್ಳ ... ' ವಾಕ್ಯದಲ್ಲಿ ಮೊದಲಿಗೆ ಇಂಥ ಎಂಬುದರ ಬದಲು ... ಎಂಬುದು ಬೇಕು

ಸಾಲು ೧೦ — ... ಈ ವಾಕ್ಯದಲ್ಲಿ ‹ ಇಂಥ ಚೆಳೆಯುಳ್ಳ ' ಎಂಬ ಶಬ್ದಗಳ ಬದಲು ... ಎಂಬುದನ್ನು ಇಟ್ಟುಕೊಂಡರೆ ... ಹೆಚ್ಚು ಸ್ಪಷ್ಟವಾಗುವದಲ್ಲದೆ ವಾಕ್ಯರಚನೆ ಅಂದ ಬರುವದು

ಸಾಲು —೧೬ — ‹ ಮತ್ತು ಆ ಯಂತ್ರದ ... ವಾಕ್ಯದಲ್ಲಿ ಮತ್ತು ಎಂಬುದರ ಬದಲು ... ಎಂದಿರಬೇಕು

ಸಾಲು ೧೩— ಪೆಟ್ಟಿಗೆಯು ... ' ವಾಕ್ಯದ ಆರಂಭದಲ್ಲಿರುವ ‹ ಪೆಟ್ಟಿಗೆಯು ಎಂಬುದನ್ನು ಬಿಟ್ಟುಬಿಡಬೇಕು ಯಾಕಂದರೆ ಇದೇ ವಾಕ್ಯದಲ್ಲಿ ಮುಂದೆ ‹ ಪೆಟ್ಟಿಗೆಗಳಲ್ಲಿ ಎಂಬ ಶಬ್ದ ಉಂಟು

ಸಾಲು —೨೧— ‹ ಕರಗಿದಂತೆ' ಎಂದು ಇದ್ದಲ್ಲಿ ಕರಗಿ ಹೋದಂತೆ ಎಂದಿಟ್ಟುಕೊಳ್ಳಬೇಕು

ಪು. ೧೧೩, ಸಾಲು ೭— ವಾಕ್ಯದ ಆರಂಭದಲ್ಲಿದ್ದ ‹ ಮತ್ತು ' ... ಈ ಸ್ಥಳದಲ್ಲಿ ‹ ಕೆಲವರು ' ಎಂದು ಇಟ್ಟುಕೊಳ್ಳಬೇಕು

ಸಾಲು —೮ — ‹ ಹಾಳೆಗಳ ... ಇತ್ಯಾದಿ ವಾಕ್ಯವು ಇಲ್ಲಿ ಬಂದಿರುವ ಕಾರಣವೇ ವಾಚಕರಿಗೆ ಗೊತ್ತಾಗುವದಿಲ್ಲ ಈ ವಾಕ್ಯವು — ಹಾಳೆಗಳ ಬಹಳ ಹುಳಿಯಾದ ಹಣ್ಣು ಹಾಕುವದರಿಂದಲೂ ಅಪಾಯವಾಗುತ್ತದೆ ಎಂದಿರಬೇಕು

ಸಾಲು ೧೪— ‹ ಉಪಯೋಗವಾಗುವದಲ್ಲದೆ ' ಎಂಬದರ ಬದಲು ‹ ಅನುಕೂಲವಾಗುವದಲ್ಲದೆ ಎಂದಿರಬೇಕು

ಹೊನ್ನಾವರ, ೨೩–೭–೧೯೩೪ } V. R Prabhu

A BOON TO THE UNEMPLOYED !

Miss not this golden opportunity !!

Learn Shorthand & Typewriting (*Touch system*) by spending only Rs 17/- and better your prospects Don't waste time Enroll yourselves at the *Popular Typewriting Institution Honavar*

For particulars apply or see personally

A. M. Shanbhag.
Proprietor

ಶ್ರೀನಿವಾಸ ಎಂಡ್ ಕೋ,

ರಬ್ಬರ ಸ್ಟ್ಯಾಂಪ ಮೇಕರ್ಸ ಎಂಡ್ ಎನ್‌ಗ್ರೇವರ್ಸ, ಹೊನ್ನಾವರ.

ಈ ಕಂಪನಿಯಲ್ಲಿ ಬೇಕಾದ ನಮೂನೆಯ ಇಂಗ್ಲೀಷ ಮತ್ತು ಮರಾಠಿ ರಬ್ಬರ ಹಾಗು ಹಿತ್ತಾಳೆ ಮೊಹರುಗಳು ಉತ್ತಮವಾಗಿ ಇತರ ಕಡೆಗಿಂತ ಕಡಿಮೆ ಕ್ರಯಕ್ಕೆ ತಯಾರಾಗುವವು ಬೇಕಾದವರು ದಯಮಾಡಿ ಪತ್ರ ಬರೆಯಬೇಕು ಏಜಂಟರಾಗಲಿಚ್ಛಿಸುವವರು ಪತ್ರದಲ್ಲಿಯೇ ತಿಳಿಸುವದು

ಎ ಎಮ್. ಶ್ಯಾನಭಾಗ.
ಮೆನೇಜರ.

ಮಕ್ಕಳಿದ್ದರೆ ಮನೆ ಚಂದ!

ಮುಕ್ತಾಂಜನ ಕ್ರೀಮ | ಬಂಜೆತನದಿಂದ ಮುಕ್ತರಾಗುವಿರಿ! | ಒಂಪಸ ಬೇಡಿರಿ

ಗರ್ಭಧಾರಣ ಸಂಜೀವನಿ.

ಈ ಸನ್ಮಾನಿಸುವಂಥ ಔಷಧ ಮೂರು ಸಾರೆ ಋತುಸ್ನಾನವಾಗುವ ವರೆಗೆ ಪ್ರತಿಸಾರೆ ಮೂರು ಮೂರು ದಿವಸ ತಕ್ಕೊಂಡರ ಪುತ್ರಲಾಭವಾಗುವದು ... ಗುಳಿಗೆಗಳ ೨೦ ರೂ ೩ ... ತಿಳಿಸಬೇಕು ವಿಸ್ತಾರ ಪತ್ರಿಕೆ ನೋಡಿರಿ

ಪತ್ತೆ— **ವೈದ್ಯ ವ್ಹಿ. ಎಸ್. ಕಾಪಸೇ, ಮಿರಜ.** (S M C)

ಅಲ್ಲಲ್ಲಿ ಇಷ್ಟಿಷ್ಟು!

ಅಲಹಾಬಾದದ ಸಿವ್ಹಿಲ್ ಆಸ್ಪತ್ರಿಯ ಸುಪರಿಂಟೆಂಡೆಂಟರು ಒಂದು ಹೊಸ ನೋಟೀಸನ್ನು ಹಚ್ಚಿದ್ದಾರೆ: "ಇನ್ನು ಮುಂದೆ ಈ ಆಸ್ಪತ್ರಿಯಲ್ಲಿ ಯುರೋಪಿಯನ್‌ರಿಗೂ ಜಾತಿವಂತ ಎಂಗ್ಲೋ ಇಂಡಿಯನ್‌ರಿಗೂ ಉಪಚಾರವಾಗುವದು. ಹಿಂದೀಯರೂ, ಹಿಂದೀ ಕ್ರಿಶ್ಚನ್‌ರೂ ಉಪಚಾರದ ಬಗ್ಗೆ ಬೇರೆ ಆಸ್ಪತ್ರಿಗೆ ಹೋಗತಕ್ಕದ್ದು." ಮುಂಚೆ ಈ ಆಸ್ಪತ್ರಿಗೆ 'ಯುರೋಪಿಯನ್ ಸಿವ್ಹಿಲ್ ಆಸ್ಪತ್ರಿ' ಎಂದು ಹೆಸರಿತ್ತು, ಮತ್ತು ಯುರೋಪಿಯನ್‌ರಿಗೆ ಮಾತ್ರ ಉಪಚಾರವಾಗುತ್ತಿತ್ತು. ಈ ಬಗ್ಗೆ ಚಳವಳಿಯಾಗಿ 'ಸಿವ್ಹಿಲ್ ಆಸ್ಪತ್ರಿ' ಎಂದು ಹೆಸರಾಗಿ ಎಲ್ಲರಿಗೆ ಉಪಚಾರವಾಗಹತ್ತಿತು. ಈಗ ಪುನಃ ಹಳೇ ಪದ್ಧತಿಗೆ ಪ್ರಾರಂಭವಾಗಿದೆ. ಹೆಸರು ಮಾತ್ರ ಹೊಸದು! ಈ ಆಸ್ಪತ್ರಿಯು ಹಿಂದುಸ್ಥಾನ ಸರಕಾರದ ಖರ್ಚಿನಿಂದ ನಡೆಯುತ್ತದೆ.

***

ತ್ರಾವಣಕೋರ ಸಂಸ್ಥಾನದೊಳಗಿನ ತಿರುಕಾಕರ ದೇವಸ್ಥಾನದಲ್ಲಿ ಒಂದು ಕಂಚಿನ ನಂದಿ ವಾಹನವಿದೆ. ಈ ವಾಹನದ ಬಾಲದ ಎಡ ಪಾರ್ಶ್ವದಲ್ಲಿ ಒಂದು ರಂಧ್ರವಿದೆ, ಈ ರಂಧ್ರದೊಳಗಿಂದ ಒಮ್ಮೊಮ್ಮೆ ರಕ್ತ ಬರುತ್ತದೆ, ಅದನ್ನು ತೆಗೆದು ತ್ರಿವಾಂಡ್ರಮ್‌ದಲ್ಲಿ ಮಹಾರಾಜರಿಗೆ ಕಳಿಸುತ್ತಾರೆ, ಮಹಾರಾಜರಿಂದ ಅಪ್ಪಣೆ ಪಡೆದು ಶ್ರೀ ದೇವಸ್ಥಾನದಲ್ಲಿ ವಿಶೇಷ ಪ್ರಯೋಗಗಳನ್ನು ನಡಿಸಿದ ಬಳಿಕ, ರಕ್ತ ಬರುವದು ನಿಲ್ಲುತ್ತದೆ. ಕಳೆದ ಜುಲೈ ೧೬ನೇ ತಾರೀಖಿಗೆ ಪುನಃ ರಕ್ತ ಬಂತು. ಹೀಗೆ ರಕ್ತ ಬಂದದ್ದು ಇದು ೬ನೇ ಬಾರಿ. ಈ ಚಮತ್ಕಾರ ನೋಡಲು ಸುತ್ತು ಮುತ್ತಲಿನ ಜನರೆಲ್ಲರೂ ಹೋಗಿರುತ್ತಾರೆ. ನಂದಿವಾಹನದ ಕಥೆ ಏನೆಂದರೆ, ಆ ಕಂಚಿನ ನಂದಿಯು ಪೂರ್ವ ಕಾಲದಲ್ಲಿ ಜೀವಂತವಿತ್ತು, ರಾತ್ರಿಕಾಲದಲ್ಲಿ ಗದ್ದೆ ಬೈಲುಗಳಿಗೆ ಹೋಗಿ ಪೈರು ತಿನ್ನುತ್ತಿತ್ತು. ಒಂದು ದಿನ ಒಬ್ಬನು ನಂದಿಗೆ ಕಲ್ಲು ಹೊಡೆದು ಗಾಯ ಮಾಡಿದನು. ನಂದಿಯು ಎಂದಿನಂತೆ ರಾತ್ರಿ ದೇವಸ್ಥಾನ ಮಂಟಪದಲ್ಲಿ ಒಂದು ಮಲಗಿತ್ತು. ಮಾರನೇ ದಿನ ನಂದಿಯು ಶಿಲಾ ಮೂರ್ತಿಯಾಗಿ ಬಿಟ್ಟಾಗಿಯೂ ಆ ಘಾಯದೊಳಗಿಂದ ಈಗಲೂ ಒಮ್ಮೊಮ್ಮೆ ರಕ್ತ ಬರುತ್ತದಾಗಿಯೂ ಒಂದು ದಂತಕಥೆಯಿದೆ.

***

ವರ್ಧಾದಲ್ಲಿ ಬಿ. ಎಸ್. ಚೌಧರಿ ಎಂಬ ಮ್ಯಾಜಿಸ್ಟ್ರೇಟರಿದ್ದಾರೆ. ಇವರು ಒಳ್ಳೇ ಮಂತ್ರವಾದಿಗಳು. ಸರ್ಪವಿಷವನ್ನು ಇಳಿಸುವದರಲ್ಲಿ ನಿಷ್ಣಾತರು. ಒಂದು ದಿನ ಕೋರ್ಟಿನಲ್ಲಿದ್ದಾಗ ಒಬ್ಬ ಮುದುಕಿ ಹೆಂಗಸಿಗೆ ಹಾವು ಕಚ್ಚಿರುವದಾಗಿ ಕೇಳಿ ಕೂಡಲೆ ಮನೆಗೆ ಹೋಗಿ ಸ್ನಾನ ಮಾಡಿ ಮಂತ್ರ ಹೇಳಿ ಹಾವಿಗೆ ಹಿಡಿದು ಅದರ ವಿಷದ ಹಲ್ಲನ್ನು ಕಿತ್ತು ಹಾಕಿದರು. ಹಾಗೆಯೇ ಆಸ್ಪತ್ರಿಗೆ ಹೋಗಿ ಮಂತ್ರೋಪಚಾರದಿಂದ ಆ ಹೆಂಗಸಿಗೆ ಉಪಚರಿಸಿದರು. ಅನೇಕಾವರ್ತಿ ಇವರು ಇದೇ ಪ್ರಕಾರ ಉಪಚರಿಸಿದ್ದಾರೆ.

***

ಬಂಗಾಲ ದೇಶದ ರಾಣಾಘಾಟದಲ್ಲಿ ಶ್ರೀಮತಿ ಸಾವಿತ್ರಿರಾಣಿ ದೇವಿ ಎಂಬ ಐಶ್ವರ್ಯವಂತಳಿದ್ದಾಳೆ. ಅವಳು ೧೪ ವರ್ಷಗಳಿಂದ ಮೊಸರಿನ ಮೇಲೆ ನಿರ್ವಾಹ ಮಾಡುತ್ತಿದ್ದಾಳೆ. ಅರ್ಧ ಸೇರು ಮೊಸರನ್ನು ಅವಳು ದಿನಾ ಕೊಳ್ಳುತ್ತಾಳೆ. ಅವಳಿಗೆ ಅನ್ನ ನೋಡುವದು ಇಲ್ಲ. ತಪ್ಪಿ ಅನ್ನ ಕೊಂಡರೆ ವಾಕರಿಕೆಯಾಗುತ್ತದೆ. ಅವಳ ಆರೋಗ್ಯ ನೆಟ್ಟಗಿದೆ. ಹುಡುಗರು ಹುಟ್ಟಿರುತ್ತಾರೆ. ಅವಳ ಪ್ರಾಯ ೩೨ ವರ್ಷ.

***

ನಾಗಪುರದೊಳಗಿನ ಭಾರತ ಸೇವಕ ಸಮಾಜದವರು 'ಹಿತವಾದ' ಎಂಬ ಇಂಗ್ಲಿಷ ಪತ್ರಿಕೆಯನ್ನು ನಡಿಸುತ್ತಾರೆ. ಮಧ್ಯಪ್ರಾಂತ್ರದಲ್ಲಿ ಸಹಕಾರಿ ಪರಿಷತ್ತು ನಡದಿತ್ತು. ಪರಿಷತ್ತಿಗೆ ಹೋದ ಸಂಪಾದಕರೊಬ್ಬರನ್ನು ಕಾಣಬೇಕೆಂದು ಸಹಕಾರಿ ಖಾತೆಯ ದಿವಾಣರಾದ ಶ್ರೀ ಜಮಾದಾರರವರು ಅಪೇಕ್ಷಿಸಿದರು. ಅದರಂತೆ ಸಂಪಾದಕರು ಜಮಾದಾರರವರಿಗೆ ಕಾಣಹೋದರು. "ನನ್ನ ಮೇಲೆ ನೀವೇಕೆ ಟೀಕೆ ಮಾಡಿದಿರಿ? ನಿಮ್ಮ ಮಾಹಿತಿಯೊಂದೂ ಓದುವದಿಲ್ಲ, ನಿಮಗೆ ಪತ್ರ ಮುದ್ರಣ ಸ್ವಾತಂತ್ರ್ಯವನ್ಯಾರು?" ಮುಂತಾದ ಉದ್ಗಾರ ತೆಗೆದಾಗ, 'ಹಿತವಾದ' ಪತ್ರಿಕೆಯಲ್ಲಿ ಪ್ರಕಟವಾದ 'ಹಿತವಾದ'ಕರ್ತರು ಈ ಪ್ರಕರಣ ನಮೂದಿಸಿ ಮಂತ್ರಿಗಳು ಸ್ವಾತಂತ್ರ್ಯದೊಳಗಿನ ದಿವಾಣರು ತಿಳಿದಿರಲೆಂದೂ, ಸರಕಾರದವರಿಗೆ ದೂರು ಸಲ್ಲಿಸುತ್ತಾರೆ.

***

ಗಾಂಧಿ ರಾಜ ಪಟ್ಟಣದ ವಿದ್ಯಾರ್ಥಿ ಇಲಾಖೆಯೊಳಗಿನ ಜಿಲ್ಲೆಯಲ್ಲಿ ಪನಾಮಾ ಮಿತ್ರಕ್ಕೆ ಹುಡುಗರು ಅಲ್ಲಿಯ ಮ್ಯಾಜಿಸ್ಟ್ರೇಟರಿಂದ ಸರ್ಟಿಫಿಕೇಟು ಪಡೆಯಬೇಕಾಗಿದೆ. ಆದರಂತೆ ಗಾಂಧಿ ಎಂಬ ಹೆಸರಿನ ಹುಡುಗನೊಬ್ಬನು ಸರ್ಟಿಫಿಕೇಟು ಬೇಡಹೋದನು. 'ನಿನಗೆ ಆ ಹೆಸರು ಯಾರು ಇಟ್ಟರು?' ಎಂದು ಮ್ಯಾಜಿಸ್ಟ್ರೇಟರು ಕೇಳಿದರು. 'ನನ್ನ ತಂದೆ,' ಎಂದು ಆ ವಿದ್ಯಾರ್ಥಿಯು ನುಡಿದನು. 'ಹಾಗಾದರೆ ಎಂದು ನಿನ್ನ ತಂದೆ ನಿನಗೆ ಆ ಹೆಸರಿಟ್ಟನು? ಆತನು ರಾಷ್ಟ್ರೀಯ ಸಂಘದವನೋ?' ಹೀಗೆ ಮ್ಯಾಜಿಸ್ಟ್ರೇಟರು ಕೇಳಿದರು. ಗಾಂಧಿಯು ಬೆಪ್ಪಾಗಿ ನಿಂತನು! 'ಗಾಂಧಿಗೆ ಏನೂ ಫೀ ಕಡಿಮೆಯಾಗಲಾರದು, ಬೇಕಾದರೆ ಶಾಲೆಯು ಕಡೆ ಹೋಗು!' ಎಂದು ಹೇಳಿ ಕಳುಹಿದರು. ತಂದೆಗೆ ಯಾವತ್ತೂ ಸಂಗತಿ ತಿಳಿಯಿತು. ಆತನು ಹೋಗಿ ಮ್ಯಾಜಿಸ್ಟ್ರೇಟರ ಒಳ ಹೊಕ್ಕೊಂಡನು. ಆದಾಗ್ಯೂ ನಿಷ್ಠುರ ಮ್ಯಾಜಿಸ್ಟ್ರೇಟರಿಗೆ ಕರುಣ ಹುಟ್ಟಲಿಲ್ಲ.

***

ಕಲಕತ್ತೆಯಲ್ಲಿ ಒಂದು ಸಣ್ಣ ಗಡಿಬಿಡಿ! ಹ್ಯಾಕೋರ್ಟಿನ ನ್ಯಾಯಮೂರ್ತಿಗಳು ಕೋರ್ಟಿಗೆ ಬರುವದಿಲ್ಲ, ರಜೆಯನ್ನೂ ಕೊಳ್ಳುವದಿಲ್ಲ, ಮನೆಯಲ್ಲಿ ನಡೆಯುತ್ತಾರೆ. ಈ ಕುರಿತು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರಶ್ನೋತ್ತರಗಳಾದವು. ಹ್ಯಾಕೋರ್ಟಿನ ಅಂತಃಕಾರಭಾರದಲ್ಲಿ ಹಿಂದುಸ್ಥಾನ ಸರಕಾರವು ಕೈಹಾಕಬಯಸುವದಿಲ್ಲವಾಗಿ ಕಳೆದ ಮೇ ತಿಂಗಳಲ್ಲಿ ನಡೆದ ವರಿಷ್ಠ ಕಾಯಿದೆ ಕೌನ್ಸಿಲಿನ ದಿಲ್ಲಿಯ ಅಧಿವೇಶನದಲ್ಲಿ ಹಿಂದುಸ್ಥಾನ ಸರಕಾರದಿಂದ ಉತ್ತರ ದೊರಕಿತು. ಈ ಪ್ರಶ್ನೋತ್ತರಗಳನ್ನು ಕಲಕತ್ತೆಯ ಹ್ಯಾಕೋರ್ಟಿಗೆ ಹಿಂದುಸ್ಥಾನ ಸರಕಾರವು ಕಳಿಸಿದೆ. ಆದಾಗ್ಯೂ ಸ್ಥಿತಿ ಸುಧಾರಿಸಲೊಲ್ಲದು. ನ್ಯಾಯಮೂರ್ತಿ ಕನಲಿಫೋರವರು ಅಸ್ವಾಸ್ಥ್ಯದ ಸಲುವಾಗಿ ಹೈಕೋರ್ಟಿಗೆ ಹೋಗುವದಿಲ್ಲ; ಮನೆಯಲ್ಲೇ ಕೂತುಕೊಂಡು ಸಂಬಳ ಪಡೆಯುತ್ತಾರೆ. ಆದರೆ, ಕೋರ್ಟಿನಲ್ಲಿ ಗೈರಹಾಜರ ಇದ್ದ ದಿನ ಸರಕಾರಿ ಮೇಜವಾನಿಗೆ ಹೋಗಿದ್ದರು. 'ಇದು ಹೇಗೆ?' ಎಂದು ಕಲಕತ್ತೆಯ 'ಅಮೃತ ಬಝಾರ ಪತ್ರಿಕೆ'ಯ ಪ್ರಶ್ನೆ.

***

ಹರಿಜನ ಸಂಚಾರದ ಸಮಯ ಮಹಾತ್ಮರು ಪರಿವಾರ ಕೊಂಡು ಹೋಗುತ್ತಾರೆ. 'ಇಷ್ಟು ಪರಿವಾರವೇಕೆ?' ಎಂದು ಮಹಾತ್ಮರಿಗೆ ಕಾಶೀವಾಡದಲ್ಲಿ ಒಬ್ಬ ಎಳೆ ಹುಡುಗನು ಕೇಳಿದನು. 'ನಾನು ವೃದ್ಧನಿದ್ದೇನೆ, ಒಂದು ಪೈ ಸಹ ನಿರರ್ಥಕವಾಗಿ ಖರ್ಚು ಮಾಡಲಾರೆ. ಇಷ್ಟೊಂದು ಶೀಘ್ರ ಖಂಡಿತವಾಗಿ ತಿಳಿಯತಕ್ಕದ್ದು ಯಾವದೊಂದು ಪತ್ರ ಬಂದಾಗ್ಯೂ, ಅದನ್ನು ಕಸದ ಬುಟ್ಟಿಯಲ್ಲಿ ಹಾಕುವ ಮುಂಚೆ ಅದಕ್ಕೆ ಹಚ್ಚಿದ ಗುಂಡುಸೂಜಿಯನ್ನು ತೆಗೆದು ಇಡುತ್ತೇನೆ. ಬರೆಯದೆ ಇದ್ದ ಕಾಗದ ತುಂಡನ್ನು ಸಹ ತೆಗೆದಿಟ್ಟುಕೊಳ್ಳುತ್ತೇನೆ. ಕೆಲ ಜೊತೆಗಾರರು ತಮ್ಮ ಖರ್ಚನ್ನು ತಾವೇ ಸಹಿಸುತ್ತಾರೆ, ಕೆಲವರ ಖರ್ಚನ್ನು ಒಬ್ಬ ಗೆಳೆಯರು ಕೊಡುತ್ತಾರೆ' ಹೀಗೆ ಮಹಾತ್ಮರು ಉತ್ತರ ಕೊಟ್ಟರು.

***

ಆಡಿನ ಹಾಲು ಬಹಳ ಹಿತಕರವಾಗಿರುವದಾಗಿ 'ಗುಡ್ ಹೆಲ್ತ' ಎಂಬ ಆರೋಗ್ಯ ಪತ್ರಿಕೆಯಲ್ಲಿ ಆಯ್. ಟಿ. ಬ್ಲೆಲೋಕ್ ಎಂಬವರು ಬರೆಯುತ್ತಾರೆ. ಶಿಶುಗಳಿಗೆ ಈ ಹಾಲು ಕೊಟ್ಟರೆ ಬಹಳ ಹಿತಕರ. ಈ ಹಾಲಿನಲ್ಲಿ ಲೋಹದ ಅಂಶವಿದೆ, ಅದರಿಂದ ರಕ್ತ ತುಂಬಲಿಕ್ಕೆ ಅನುಕೂಲವಾಗುತ್ತದೆ, ಇದು ಸುಲಭವಾಗಿ ಜೀರ್ಣವಾಗುತ್ತದೆ, ಆಕಳ ಹಾಲಿಗಿಂತ ಎಷ್ಟೋ ಪಾಲು ತ್ವರೆಯಿಂದ ಇದು ಜೀರ್ಣವಾಗುತ್ತದೆ, ಆಕಳ ಹಾಲಿಗಿಂತ ಈ ಹಾಲಿನಲ್ಲಿ ಹೆಚ್ಚಿನ ವೃತಸ್ನಶಕ್ತಿಯಿದೆ, ಇದರೊಳಗೆ ಇಮ್ಮಡಿ ಉಪ್ಪಿನ ಅಂಶವಿದೆ. ಆಡು, ಅದರ ದೇಹಪ್ರಮಾಣದ ಮಾನದಿಂದ ಹೆಚ್ಚು ಹಾಲು ಕೊಡುತ್ತದೆ. ಇದಕ್ಕೆ ಸಾಕಲಿಕ್ಕೆ ವಿಶೇಷ ಖರ್ಚಿಲ್ಲ. ಆಕಳ ಹಾಲಿಗಿಂತ ಈ ಹಾಲಿನಲ್ಲಿ ಆಹಾರದ ಅಂಶವು ಹೆಚ್ಚಿದೆ. ಆದರಿಂದ ಇದನ್ನೇ ಹೆಚ್ಚಿಗೆಯಾಗಿ ಉಪಯೋಗಿಸಬೇಕೆಂದು ಬ್ಲೆಲೋಕ್‌ರವರ ಅಭಿಪ್ರಾಯ.

***

ಮುಂಬಯಿ 'ಟೈಮ್ಸ' ಪತ್ರಿಕೆಯೊಳಗಿನ ಸುದ್ದಿ ಗ್ರಾಮೋದ್ಧಾರ ಚಳವಳಿಯ ಸುಲಭ ಉಪಾಯ! ರಾಜಾಹಳ್ಳಿಯೊಳಗಿನ ಕಲೆಕ್ಟರರು ತಮ್ಮ ಬಂಗ್ಲೆಯ ಪ್ರಾಕಾರದಲ್ಲಿ ಹಣ್ಣು-ಹಂಪಲಗಳ ಗಿಡಗಳನ್ನು ಹಚ್ಚಿ ಗ್ರಾಮೋದ್ಧಾರ ಚಳವಳಿಗೆ ಉತ್ತೇಜನ ಕೊಟ್ಟಿರುತ್ತಾರಾಗಿ ಸುದ್ದಿಗಾರರ ಅಂಬೋಣ. ಕಲೆಕ್ಟರರು ಪಡೆಯುವ ಪಗಾರದಿಂದ ಗ್ರಾಮಜನರಿಗೆ ಉಪಕಾರವಾಗುತ್ತದೆಂದು ಹೇಳಲಿಕ್ಕೂ ಪ್ರತ್ಯವಾಯವಿಲ್ಲ.

***

ಹಿಂದುಸ್ಥಾನದಲ್ಲಿ ರೈತರಿಗೆ ಅಂತು ೯೦೦ ಕೋಟಿ ರೂಪಾಯಿ ಸಾಲವಿರುವದಾಗಿ ಸಿಮ್ಲಾದಲ್ಲಿ ನಡೆಯುತ್ತಿರುವ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಹಿಂದುಸ್ಥಾನ ಸರಕಾರದ ಪರವಾಗಿ ೧೮। ವಾಜ

ಹಾಯದವರು ಹೇಳಿದರು. ಇದರಲ್ಲಿ ೨೦ ಕೋಟಿ ರೂಪಾಯಿ ಸಾಲ ಮುಂಬಯಿ ಇಲಾಖೆಯದಾಗಿರುತ್ತದೆ.

***

ಕಾಠೇವಾಡದೊಳಗಿನ ಸಂಸ್ಥಾನಗಳಲ್ಲಿ ಸಂಸ್ಥಾನಿಕರ ರಾಜ್ಯಾರೋಹಣ ಉತ್ಸವಗಳನ್ನು ಜನರ ಖರ್ಚಿನಿಂದ ನಡಿಸುವ ಲೋಕಕಂಟಕ ಪದ್ಧತಿಯಿದೆ. ಗೋಂಡಲ ಮತ್ತು ಲಿಮಡಿ ಈ ಸಂಸ್ಥಾನಗಳಲ್ಲಿ ಸದ್ಯಕ್ಕೆ ರಾಜ್ಯಾರೋಹಣ ಉತ್ಸವಗಳಾಗಲಿಕ್ಕಿವೆ. ಇದಕ್ಕಾಗಿ ಅಲ್ಲಿಯ ಮುಖ್ಯ ಪ್ರಧಾನರಿಂದ ಪೇದೆಗಳ ವರೆಗಿನ ಸರಕಾರಿ ನೌಕರರು ತಮ್ಮ ೨ ತಿಂಗಳ ಸಂಬಳ ಕೊಡಬೇಕು. ಮಧ್ಯಮ ಸ್ಥಿತಿಯ ಜನರು ರೂ. ೧೧, ೨೫, ೫೧, ಹೀಗೆ ಕಾಣಿಕೆ ಕೊಡಬೇಕು. ಇತರ ಉದ್ದಿಮೆಯವರು ಸ್ಥಳಿಕ ಅಧಿಕಾರಿಗಳು ನಿಶ್ಚಯಿಸಿದಷ್ಟು ಹಣ ಕೊಡಬೇಕು. ಒಕ್ಕಲಿಗರು ತೀರ್ವೆಯ ಅಷ್ಟಮಾಂಶ ಹಣ ಕೊಡಬೇಕು. ಇದು ಗೋಂಡಲ ಸಂಸ್ಥಾನಿಕರ ಅಪ್ಪಣೆ. ಲಿಮಡಿ ಸಂಸ್ಥಾನದವರು ೨ ಲಕ್ಷ ರೂಪಾಯಿಗಳ ಸೋಡ್ತಿ ತೆಗೆದಿದ್ದಾರೆ. ಅದಕ್ಕೆ ಪ್ರಜೆಗಳು ವರ್ಗಣಿ ತೆರಬೇಕು. ಈ ಹಣದಿಂದ ಸಂಸ್ಥಾನಿಕರ ಹೆಸರಲ್ಲಿ ಒಂದು ಸಂಕ ಕಟ್ಟಿ ಮಹಾರಾಜರ ರಾಜ್ಯಾರೋಹಣ ರೌಪ್ಯ ಮಹೋತ್ಸವವನ್ನು ನೆರವೇರಿಸಬೇಕಾಗಿ ಗೊತ್ತಾಗಿದೆ.

***

ಕೊಲ್ಹಾಪುರದೊಳಗಿನ ಒಂದು ಚಮತ್ಕಾರ! ಸೌ| ಆನಂದೀಬಾಯಿ ಮುಝುಮದಾರ ಇವಳು ನಿದ್ರೆ ಹೋದನೆ ಮಲಗಿದ್ದವಳು ಮಧ್ಯರಾತ್ರಿ ಸಮಯ ಕಾಣೆ! ಶಿಶುವು ಚೀರಿತು. ಮನೆಯವರು ಎದ್ದರು, ನೋಡಿದರೆ ತಾಯಿ ಕಾಣೆ! ಹುಡುಕಿದರು, ಹುಡುಕಿದರು. ಮಹಾಲಕ್ಷ್ಮೀ ದೇವಸ್ಥಾನದೊಳಗಿನ ಪ್ರಾಕಾರದ ಹೌದಿನೊಳಗಿಂದ 'ನಾರಾಯಣ, ನಾರಾಯಣ' ಎಂಬ ಶಬ್ದ ಬರುತ್ತದೆ. ಅಲ್ಲಿ ಹೋಗಿ ನೋಡಿದರೆ, ಸೌ| ಆನಂದೀಬಾಯಿಯವರು! ಬಹು ಪ್ರಯಾಸದಿಂದ ಆವಳಿಗೆ ಹೊರತೆಗೆದರು. ಆವಳು ತಾನು ನೀರಿನಲ್ಲಿ ಮುಳುಗಿಕೊಂಡಿದ್ದಾಗ್ಯೂ, ಕೂಂಟಲದ ಮೇಲ್ಭಾಗವು, ಸೀರೆಯೂ ಒದ್ದೆಯಾಗಿದ್ದಿಲ್ಲ. ಹಣೆಯ ಮೇಲಿನ ಕುಂಕುಮ ಸಹ ಇದ್ದಕ್ಕಿದ್ದ ಹಾಗೇ ಇತ್ತು. ತಾನು ಇಲ್ಲಿ ಹೇಗೆ ಬಂದೆ? ಎಂಬ ಸಂಗತಿ ಸಹ ತನಗೆ ತಿಳಿಯಲಿಲ್ಲವಾಗಿ ಆವಳು ನುಡಿದಳು. ವಿಚಿತ್ರ ಲೀಲೆ!

***

ಮದ್ರಾಸ ಇಲಾಖೆಯೊಳಗೆ ಶಾರದಾ ಕಾನೂನಿನ ಪುನರಾಲೋಚನೆಯಾಗಬೇಕಾಗಿ ಸುದ್ದಿಗಳು ಇತ್ತಿತ್ತ ಹೊಳೆಯುತ್ತಿರುವಾಗ ಮದ್ರಾಸದೊಳಗಿನ ಸುಧಾರಕ ಮಂಡಳದವರೊಡನೆ ಒಬ್ಬ ಮುದುಕನು ತನ್ನ ಕಷ್ಟ ಹೇಳಿಕೊಂಡನು. ಶಾರದಾ ಕಾನೂನನ್ನು ಉಲ್ಲಂಘಿಸಿ ನೂರಾರು ಮದುವೆಗಳಾದವು; ಸರಕಾರವು ಅವರಿಗೆ ಏನು ಶಾಸನ ಮಾಡಿದೆ? ವಧುಗಳ ಪ್ರಾಯ ೮-೧೦ ವರುಷ, ವರರ ಪ್ರಾಯ ೧೪-೧೬ ವರುಷ, ಹೀಗೆ ಯಾವ ಪಟ್ಟಣದಲ್ಲಿ ಅನೇಕ ಮದುವೆಗಳಾದವು. ಕಾಯಿದೆಗೆ ಮರ್ಯಾದೆ ಕೊಡುವವರಿಗೆ ಮಾತ್ರ ಕಷ್ಟ. ನನ್ನದೇ ಸಂಗತಿ ಹೇಳುತ್ತೇನೆ. ೧೪ ವರ್ಷವಾಗದ್ದರಿಂದ ನಾನು ನನ್ನ ಮಗಳ ಮದುವೆ ಮಾಡಲಿಲ್ಲ. ಈಗ ಆವಳಿಗೆ ಮದುವೆಯಾಗುವದೇ ಕಷ್ಟವಾಗಿದೆ. ಪ್ರಾಯಕ್ಕೆ ಬಂದದ್ದರಿಂದ ಮದುಮಗಂದಿರು ಸಿಗುವದಿಲ್ಲ, ಕಂಡಕಂಡಲ್ಲಿ ನನಗೆ ಟೀಕೆ ಮಾಡುವವರೇ. ಪ್ರಾಯಕ್ಕೆ ಬರುವ ಮುಂಚೆತವಾಗಿಯೇ ಹುಡುಗಿಯರಿಗೆ ಮದುವೆಯಾಗಬೇಕು," ಇತ್ಯಾದಿ. ಈ ಸಂಗತಿ 'ಮದ್ರಾಸ ಮೇಲ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ನೆಲ್ಲೂರ ಜಿಲ್ಹೆಯಲ್ಲಿ ಶಾರದಾ ಕಾನೂನಿನನ್ವಯ ನಡೆಯುವವರ ಮೇಲೆ ಕಾವಲಿಡುವದಕ್ಕಾಗಿ 'ವ್ಹಿಜಿಲನ್ಸ ಎಸೋಸಿಯೇಶನ್' ಎಂಬದೊಂದು ಸಂಸ್ಥೆಯಿದೆ. ಈ ಸಂಸ್ಥೆಯ ಕಾರ್ಯಕಾರಿ ಮಂಡಳದವರು ಒಂದು ಗುಪ್ತ ಸಭೆ ಸೇರಿಸಿ ವಿವಾಹ ವಯಸ್ಸನ್ನು ೭ ವರ್ಷದಿಂದ ಇಳಿಸಬೇಕಾಗಿ ನಿರ್ಣಯಿಸಿದ್ದಾರಂತೆ. ೧೨ ವರ್ಷಕ್ಕೆ ಮಿಕ್ಕ ಮದುವೆಯಾದ ಸಂದರ್ಭದಲ್ಲಿ ಸಂಸ್ಥೆಯವರು ಸರಕಾರದ ವಿದ್ಯಮಾನ ಶಾರದಾ ಕಾನೂನಿನನ್ವಯ ಖಟ್ಲೆ ಮಾಡಲು ಪ್ರವೃತ್ತರಾಗಬಾರದಾಗಿಯೂ ನಿರ್ಣಯಿಸಿರುವರಂತೆ. ಶಾರದಾ ಕಾನೂನಿನ ಗಡ್ಡಲದ ಮೂಲಕ ಸರಕಾರಿ ನೌಕರರು ತಿರುವಣಕೂರ ಸಂಸ್ಥಾನದ ಸೀಮೆಗೆ ಒಳಪಟ್ಟ ನಾಗರಕೋಯಿಲ, ಕ್ವಿಲೋನ, ಪದ್ಮನಾಭಪುರಮ್ ಮೊದಲಾದ ಗ್ರಾಮಗಳಲ್ಲಿ ಹೋಗಿ ಮದುವೆ ಮಾಡಲಾರಂಭಿಸಿದ್ದಾರೆ. ವೈಷ್ಣವ ದೇವಸ್ಥಾನಗಳಲ್ಲಿ ಯಾರಿಗೂ ಗೊತ್ತಾಗದಂತೆ ಮದುವೆಗಳಾಗಹತ್ತಿವೆ. ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರು ಯಾವತ್ತೂ ಸಂಗತಿಗಳ ವಿಚಾರ ಮಾಡಿ ವಧೂ-ವರರ ವಯೋಮಾನವನ್ನು ಇಳಿಸುವ ವಿಚಾರ ಮಾಡಬಹುದು

***

ಅಫಘಾಣಿಸ್ಥಾನದೊಳಗಿನ ನ್ಯಾಯ ನಿರ್ಣಯದ ಒಂದು ವಿಚಿತ್ರ ಸಂಗತಿ! ಅಫಘಾಣಿಸ್ಥಾನದಲ್ಲಿ ಒಬ್ಬನು ಕಳವು ಮಾಡಿದನು. ಅದಕ್ಕಾಗಿ ಅವನ ಒಂದು ತೋಳು ಮೆಜಿಸ್ಟ್ರೇಟರ ಹುಕುಮಿನಂತೆ ಕಡಿಯುತೆಗೆಯಲ್ಪಟ್ಟಿತು. ಆದಾಗ್ಯೂ ಆತನು ಕಳವಿನ ಚಟ ಬಿಡಲಿಲ್ಲ. ದಿಲ್ಲಿಗೆ ಬಂದನು, ದಿಲ್ಲಿಯಲ್ಲಿ ಕಳವು ಮಾಡಿದನು. ಮೆಜಿಸ್ಟ್ರೇಟರು ಇನ್ನೊಂದು ತೋಳು ಎಲ್ಲಿ ಹೋಯಿತೆಂದು ಕೇಳಲು, ಆತನು ಅಫಘಾಣಿಸ್ಥಾನದೊಳಗಿನ ಕಥೆ ಹೇಳಿದನು. ಕೆಲವರು ಇಲ್ಲಿಯ ನಮೂನೆ ನೋಡಿ ಬೆರಗಾದರು. ಕೆಲವರು ಕೈಯನ ನಿರ್ಧಾರ ನೋಡಿ ಬೆಪ್ಪಾದರು.

***

ಪಟಿಯಾಲಾ ಮಹಾರಾಜರಿಗೆ ನಾಯಿಗಳ ಮೇಲೆ ಬಹಳ ಪ್ರೀತಿ. ತರತರದ ನಾಯಿಗಳನ್ನು ಅವರು ಸಾಕಿರುತ್ತಾರೆ. ನಾಯಿಗಳಿಗಾಗಿ ಅವರು ಒಂದು ದೊಡ್ಡ ಖಾತೆಯನ್ನೇ ಏರ್ಪಡಿಸಿರುತ್ತಾರೆ. ವರ್ಷಾಸನ ೧ ಲಕ್ಷ ರೂಪಾಯಿಗಳು ಈ ಖಾತೆಗೆ ಖರ್ಚಾಗುತ್ತವೆ. ನಾಯಿಗಳ ಮದುವೆ ಸಮಾರಂಭಗಳೂ, ಮೆರವಣಿಗೆಗಳೂ ನಡೆಯುತ್ತವೆ! ನಾಯಿಗಳಿಗೆ ಮುತ್ತು-ರತ್ನಾದಿಗಳಿಂದ ಶೃಂಗರಿಸಿ ವಾದ್ಯಘೋಷದೊಡನೆ ಸಂಭ್ರಮದ ಮೆರವಣಿಗೆಗಳಾಗುತ್ತವೆ. ಒಂದು ದಿನ ಶೃಂಗರಿಸಿದ ನಾಯಿ ಮೆರವಣಿಗೆಯೊಳಗಿಂದ ಓಡಿ ಪಲಾಯನ ಮಾಡಿತು! ಕಾವಲುಗಾರರು ಗಾಬರಿಗೊಂಡು ನಾಯಿಯ ಹಿನ್ನಿಗೆ ನಾಯಿಯಂತೆ ಓಡಿಹೋಗಿ ಆ ನಾಯಿಯನ್ನು ಹಿಡಿತಂದರು. ಏನು ಮರುಳು! ಈ ಮರುಳಿಗೆ ಹಣ ಎಲ್ಲಿಂದ ಬರುತ್ತದೆ?

***

ಬಿಹಾರದೊಳಗಿನ ಭೂಕಂಪಗ್ರಸ್ತರಿಗೆ ನೆರವಾಗುವದಕ್ಕಾಗಿ ರಾಷ್ಟ್ರೀಯ ಸಭೆಯವರು 'ಬಾಬು ರಾಜೇಂದ್ರ ಪ್ರಸಾದ ಫಂಡ' ಎಂಬ ನಿಧಿಯನ್ನೇರ್ಪಡಿಸಿದರು, ಸರ್ವಾಧಿಪತಿಗಳು 'ವ್ಹಾಯಸರೊಯ್ಸ ಅರ್ಥಕ್ವೇಕ ರಿಲೀಫ ಫಂಡ' ಎಂಬ ನಿಧಿಯನ್ನೇರ್ಪಡಿಸಿದರು. ರಾಜೇಂದ್ರ ಪ್ರಸಾದ ಫಂಡಿಗೆ ಜನರಿಂದ ಹಣ ಕೂಡದಂತೆ ಸರಕಾರದವರು ಕಾರಸ್ಥಾನಗಳನ್ನು ನಡಿಸಿದ್ದು ಇವು ಕಳೆದ ಎಪ್ರಿಲ್-ಮೇ ತಿಂಗಳಲ್ಲಿ ನಡೆದ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಬೈಲಿಗೆ ಬಂದವು. ಸರಕಾರದವರು ಅವುಗಳನ್ನು ಪ್ರಕಟವಾಗಿ ಪರಿಹರಿಸಿದರು ಮತ್ತು ಸರ್ವಾಧಿಪತಿಗಳ ಫಂಡಿಗೆ ಇರುವ ಯಾವತ್ತೂ ಅನುಕೂಲತೆಗಳನ್ನು ರಾಜೇಂದ್ರ ಬಾಬು ಫಂಡಿಗೂ ಕೊಡಬೇಕಾಗಿ ನಿರ್ಣಯಿಸಿತು. ಆದಾಗ್ಯೂ, ಮನಸ್ಸಿನಲ್ಲಿ ಕೊಂಕು ಇದ್ದೇ ಇದೆ. ರಾವಳಪಿಂಡಿ ಮ್ಯುನಿಸಿಪಾಲಿಟಿಯವರು ಬಿಹಾರದೊಳಗಿನ ಭೂಕಂಪಗ್ರಸ್ತರಿಗಾಗಿ ೧೫೦೦ ರೂಪಾಯಿಗಳನ್ನು ಮಂಜೂರ ಮಾಡಿ ಅರ್ಧ ರಕಮನ್ನು ಸರ್ವಾಧಿಪತಿಗಳ ಫಂಡಿಗೂ, ಅರ್ಧ ರಕಮನ್ನು ಬಾಬು ರಾಜೇಂದ್ರ ಫಂಡಿಗೂ ಕೊಡಬೇಕಾಗಿ ನಿರ್ಣಯಿಸಿದರು. ಒಂದೇ ಠರಾವಿನಿಂದ ಈ ರಕಮು ಮಂಜೂರಾಗಿತ್ತು. ಪಂಜಾಬ ಸರಕಾರವು ಬಾಬು ರಾಜೇಂದ್ರ ಪ್ರಸಾದರ ಫಂಡಿಗೆ ಕೊಡಮಾಡಿದ ೭೫೦ ರೂಪಾಯಿಗಳ ಪಟ್ಟಿಯನ್ನು ತಿರಸ್ಕರಿಸಿದೆ. ಆ ಠರಾವು ಆಕ್ರಮವೆಂದೂ ಅಭಿಪ್ರಾಯಪಟ್ಟಿದೆ. ಪಂಜಾಬ ಸರಕಾರದ ಸವತಿ ಮತ್ಸರವೆ ಮಾದರಿಯಿದು!

***

ಮಿ| ಹೊರ್ನಿಮನ್‌ರವರು ತಮ್ಮ 'ಬೊಂಬೇ ಸೆಂಟಿನಲ್' ಎಂಬ ನಿತ್ಯಪತ್ರಿಕೆಯಲ್ಲಿ 'ಸಟ್ಟಾ'ದ ಜೂಗಾರು ಮಂದಿಗಳ ಮೇಲೆ ಲೇಖಮಾಲೆ ಬರೆದು ಪೋಲೀಸರ ಕಿವಿ ಹಿಂಡುತ್ತಿದ್ದರು. ಪೋಲೀಸರ ಸಂಬಳಗಸ್ತರೊಬ್ಬರು ಗುಪ್ತ ಬಾತ್ಮೀದಾರನ ಸೋಗು ಹಾಕಿಕೊಂಡು ಹೊರ್ನಿಮನ್‌ರ ಕಡೆ ಹೋಗಿ, ಆ ವಿಷಯದ ಕೆಲವು ವಾರ್ತೆ ಕೊಟ್ಟರು. 'ತಾವು ಎಪ್ರಿಲ್ ೨೮ನೇ ತಾರೀಖಿಗೆ ಆತ್ಮಕಡೆ ನೋಡಬೇಕು ವಿನಂತಿದ್ದೇನಾಗಿ' ಮಾತಿನ ಭರದಲ್ಲಿ ಮಿ| ಹೊರ್ನಿಮನ್‌ರು ಅವರ ಕಡೆ ಉದ್ಗರಿಸಿದರು. ಈ ಸಂಗತಿ ಪೋಲೀಸರಿಗೆ ತಿಳಿಸಿ ತಿಪರು ಅತ್ತ ಹೋದ ಸಮಯ ಜೂಗಾರು ಮಂದಿ ಹಿಡಿಯುವ ನೆವದಿಂದ ಪೋಲೀಸರು ಅವರಿಗೂ, ಅವರ ಜೊತೆಗೆ ಹೋದ ಅವರ ಕಾರ್ಯಕರ್ತರಿಗೂ, ಇತರ ೧೨೦ ಜನರಿಗೂ ಹಿಡಿದರು. ಆ ಬಗ್ಗೆ ಮಿ| ಹೊರ್ನಿಮನ್‌ ಮೊದಲಾದವರ ಮೇಲೆ ಖಟ್ಲೆ ನಡೆದು, ಕಳೆದ ೨೯ನೇ ತಾ|| ದಿಗೆ ಎಲ್ಲರೂ ದೋಷಮುಕ್ತರಾಗಿ ಬಿಡುಗಡೆಯಾಗಿದ್ದಾರೆ. ಪೋಲೀಸರ ಆಶ್ರಯದಲ್ಲಿಯೇ ಈ ಮಂದಗಳು ನಡೆಯುತ್ತವೆಂಬ ಮಿ| ಹೊರ್ನಿಮನ್‌ರ ವಿಧಾನವನ್ನು ಮೆಜಿಸ್ಟ್ರೇಟರು ವಿಚಾರ ಮಾಡುವದವಶ್ಯವಿಲ್ಲವಾಗಿ ತೀರ್ಪಿನಲ್ಲಿ ಬರೆದಿದ್ದಾರೆ. ಮಿ| ಹೊರ್ನಿಮನ್‌ರು ಅಲ್ಲಿ ಸ್ಥಳಿಕ ತಪಾಸ ಮಾಡಹೋಗಿದ್ದರಾಗಿಯೂ, ಪೋಲೀಸರು ಅವರ ಕೊರಳಪಟ್ಟಿ ಎಳೆದು ಧಕ್ಕಾ ಬುಕ್ಕಿ ಕೊಟ್ಟರಾಗಿಯೂ, ಅವರಿಗೆ ಸ್ವಂತ ಜಾಮೀನಿಂದ ಬಿಡ ಸಹ ಪ್ರತಿಕೂಲಿಸಲಿಲ್ಲವಾಗಿಯೂ, ಅಲ್ಲದೆ ಅವರಿಗಲ್ಲ ೫-೫ ರೂಪಾಯಿ ಜಾಮೀನಿನ ಮೇಲೆ ಬಿಟ್ಟು, ಹೊರ್ನಿಮನ್‌ರಿಗೆ ಮಾತ್ರ ರೊಖ ರೂ ೫೦೦ ಕೊಡಬೇಕಾಗಿ ಪೋಲೀಸರು ಹೇಳಿದ್ದು ಅನ್ಯಾಯವೆಂದೂ, ಮಿ| ಹೊರ್ನಿಮನ್‌ರು ದೊಡ್ಡ ಮನುಷ್ಯರಿದ್ದದರಿಂದ ಪೋಲೀಸರು ರೂ ೫೦೦ರ ರೊಖ ಕೇಳಿ ಅವರ ದೊಡ್ಡಸ್ತಿಕೆಯನ್ನು ಮಾನ್ಯ ಮಾಡಿದರಾಗಿ ಸರಕಾರಿ ವಕೀಲರು ಪ್ರತಿಪಾದಿಸಿದ್ದು ಹಾಸ್ಯಾಸ್ಪದವಾಗಿಯೂ ಮೆಜಿಸ್ಟ್ರೇಟರು ತೀರ್ಪಿನಲ್ಲಿ ಬರೆಯುತ್ತಾರೆ. ಕೇತಪಾಲನ ಕಲ್ಪನಾಗುವ ಪ್ರಸಂಗವಿದು

ಯುದ್ಧವಾಗದೇ?

[ನಿರೀಕ್ಷಕನು ಬರೆದುದು.]

'ಯುದ್ಧವಾಗದೇ?' ಎಂಬ ಪ್ರಶ್ನೆಯೊಕ? ಯುದ್ಧವಾಗುವದೆಂದು ನಾನೀಗ ಹೇಳಬಲ್ಲೆ. ಯುದ್ಧ ವಾರ್ತೆ ಬೇಕು, ಎಂಬುದಾಗಿ ಈಗ ಎಲ್ಲರ ವಿಷಯಕವಾಗಿ ಪತ್ರಿದೆ. ಕಳೆದ ವಾರ ತಾರೀಖಿನ ಆಸ್ಟ್ರಿಯಾ ದೇಶದಲ್ಲಿ ಅದ್ಭುತ ಪ್ರಕರಣಗಳು ಅನಪೇಕ್ಷಿತವಾಗಿ ನಡೆದವು. ತೋರಗಾಣಿಕ ಜರ್ಮನ್-ಇಟಾಲಿ ದೇಶದ ಸರ್ವಸತ್ತಾಧಿಕಾರಿಗಳಾದ ಹೆರ್ ಹಿಟ್ಲರ್ ಹಾಗು ಸಿನ್ಯೋರ ಮುಸೋಲಿನಿಯವರು ಸಂಘನದ ಮಾತುಕಥೆಗಳನ್ನು ವೆನಿಸ ಪಟ್ಟಣದಲ್ಲಿ ಗುಪ್ತವಾಗಿ ಒರಗಿಸಿ ಒಕ್ಕಟ್ಟಾದರೆಂಬುದೊಂದು ವರ್ತಮಾನವು ಆ ಭಾವನೆ ಕಳೆದ ವಾರ ಒಯುಲಾಗಿ ಹಿಟ್ಲರರ ನಾಝಿ ಪಕ್ಷದ ಪ್ರಮುಖರ ಮುಸೋಲಿನಿಯವರ ಪಸಿಸ್ಟ ಪಂಥದ ಪ್ರಮುಖರ ನಾಸಿಸ್ಟರು ಬಹುತರವಾಗಿ ರಾಜಸತ್ತಾವಾದಿಗಳು ನಾಝಿಯವರು ಸಮಾಜಸತ್ತಾವಾದಿಗಳು ಆಸ್ಟ್ರಿಯಾ ದೇಶದಲ್ಲಿ ಸಮಾಜಸತ್ತಾ ದಸ್ತು ರಾಜಸತ್ತಾವಾದವೂ ರಾಜ್ಯದ ಕ್ಷುವೆ ಸಮಾಜಸತ್ತಾವಾದಿ ಪ್ರಮುಖರಿಗೆ ನಿರ್ದಯ ದಿಂದ ಕೊಲ್ಲಲಾಗಿ ಡಾ| ಡೊಲ್ಫಸ್‌ರವರು ಆಸ್ಟ್ರಿಯಾ ದೇಶದ ಸರ್ವ ಸೂತ್ರಗಳನ್ನು ಸ್ವಾಧೀನಪಡಿಸಿಕೊಂಡು ಸರ್ವಸತ್ತಾಧಾರಿಗಳಾದರು. ನಾಝಿ ಪಕ್ಷದವರು ರಾಜ್ಯಭಾರವನ್ನು ಸ್ವವಶ ಮಾಡಿಕೊಳ್ಳಲು ಯತ್ನಿಸುತ್ತ ಕೊಂಡು ಹತ್ತಿಕೊಂಡಿದ್ದಾರೆ. ಆಸ್ಟ್ರಿಯಾ ದೇಶದ ಪರಿಸ್ಥಿತಿಯಲ್ಲೊಂದು ವಿಶೇಷವಿದೆ. ಉತ್ತರ ಪಾರ್ಶ್ವದಲ್ಲಿ ಜರ್ಮನಿ, ಪಶ್ಚಿಮ ಪಾರ್ಶ್ವದಲ್ಲಿ ಇಟಾಲಿ ಹೀಗೆ ರಾಷ್ಟ್ರ ಇದ್ದು ಆಸ್ಟ್ರಿಯಾ ದೇಶದ ಮನಸ್ಸಾಗಲಿಕ್ಕೆ ನಾಡಲು ಜರ್ಮನಿಯೂ, ಇಟಾಲಿಯೂ ಯತ್ನಗಳೂ ಕಾರಸ್ಥಾನ ಹೂಡುತ್ತಿರುತ್ತವೆ. ಆಸ್ಟ್ರಿಯಾ ದೇಶವು ಜರ್ಮನಿಯ ಕಡೆ ಒಲಿದರೆ, ಜರ್ಮನಿಯು ಪ್ರಬಲವಾಗುವದಲ್ಲದೆ, ಇಟಾಲಿಯಲ್ಲಿ ಈರ್ಷ್ಯ ಸೇರಿ ದಂಡೆತ್ತಿ ಬರಬಹುದೆಂದು ಇಟಾಲಿಗೆ ಭೀತಿ. ಇಟಾಲಿಯೂ ಆಸ್ಟ್ರಿಯಾ ದೇಶವೂ ಒಕ್ಕಟ್ಟಾದರೆ ಜರ್ಮನ್ ದೇಶದ ಮೇಲೆ ಸ್ವಾರಿಯಾಗಬಹುದೆಂದು ಜರ್ಮನಿಗೆ ಭೀತಿ. ಹಿಟ್ಲರ-ಮುಸೋಲಿನಿ ಸಂಘಟನದಲ್ಲಿ ಇತ್ತಟ್ಟಿನವರು ಆಸ್ಟ್ರಿಯಾ ದೇಶದ ಸ್ವಾತಂತ್ರ್ಯಪಾಲನಕ್ಕೆ ನೆರವಾಗಬೇಕೆಂದು ಗೊತ್ತಾಗಿತ್ತಾಗಿ ಹೇಳುತ್ತಾರೆ. ಆದರೆ, ಕಳೆದ ತಾರೀಖಿನಲ್ಲಿ ಆಸ್ಟ್ರಿಯಾ ದೇಶದ ರಾಜಧಾನಿಯಾದ ವ್ಹಿಯೆನ್ನಾ ಪಟ್ಟಣದಲ್ಲಿ ಪ್ರಧಾನ ಮಂಡಳದ ಸಭೆ ಸೇರಿದಾಗ ೧೦೦—೧೫೦ ನಾಝಿ ಪ್ರಮುಖರು ಪೋಲೀಸ ಪ್ರಮುಖರ ವೇಷದಿಂದ ಒಳಸೇರಿ ಗುಂಡುಹಾರಿಸಿದರು, ಕೆಲವರಿಗೆ ಸರಹಿಡಿದರು. ಗುಂಡಿನ ಪೆಟ್ಟಿಗೆ ಡಾ| ಡೊಲ್ಫಸ್‌ರವರು ಒಲಿಬಿದ್ದರು. ಮರಣ ಸಮಯ ಅವರ ಬಳಿ ಯಾವ ಪ್ರಮುಖರೂ ಇರಲಿಲ್ಲ. "ಹೆಂಡರು-ಮಕ್ಕಳಿಗೆ ಜೋಪಾನ ಮಾಡಿರಿ," ಎಂದು ಅವರು ಉದ್ಗರಿಸಿ ಪ್ರಾಣಬಿಟ್ಟರಂತೆ! ಕೂಡಲೆ ಡಾ| ಡೊಲ್ಫಸ್‌ರವರ ಪಕ್ಷದವರು ಸೈನ್ಯ ಕಳುಹಿಸಿ ನಾಝಿಯೊಂಬಿಗರನ್ನು ಸೆರೆಹಿಡಿದಿಟ್ಟಿದ್ದಾರೆ, ಇನ್ನೂ ಸೆರೆ ಹಿಡಿಯುವ ಕ್ರಮ ನಡೆದಿದೆ. ಸಂಕಲ್ಪದಂತೆ ನಾಝಿ ಪಕ್ಷದವರು ಗೆಲ್ಲಲಿಲ್ಲ, ಸೋತರು. ಆದರಿಂದ ಸದ್ಯಕ್ಕೆ ಶಾಂತತೆ ಕಾಣ ಸ್ವದ. ಆದರೆ ಶಾಂತ ವಾತಾವರಣವು ಒಳಗೆ ಕುದಿಯುತ್ತಿದ್ದು ಈಗನ ಹೇಳಲಾಗದು.

ಆಸ್ಟ್ರಿಯಾ ದೇಶದೊಳಗಿನ ಗೊಂದಲ ಕೇಳಿ ಇತರ ಯುರೋಪಿನಲ್ಲಿ ಗಡಿಬಿಡಿಯಾಗಿದೆ. ಇಟಾಲಿ ತನ್ನ ಸೈನ್ಯ ರೋಮ ಪಟ್ಟಣದಲ್ಲಿದ್ದ ಡೊಲ್ಫಸ್‌ರವರಿಗೂ ಪರಿವಾರದವರಿಗೂ ಮರಣದ ವರ್ತಮಾನ ತಿಳಿಯಿತು. ಡಾ| ಡೊಲ್ಫಸ್‌ರವರ ಮರಣದ ತರುವಾಯ ಮುಸೋಲಿನಿಯವರು ತಮ್ಮ ಗಡಿಯ ಬಳಿಗೆ ಸೈನ್ಯ ಪಥಕಗಳನ್ನು ರವಾನಿಸಿದರು. ಪ್ರಸಂಗದಲ್ಲಿ ಏಕಾಏಕಿಯಾಗಿ ನಿಲ್ಲಲು ಅವರು ಸಿದ್ಧತೆಗಳನ್ನು ಮಾಡಿದ್ದರೆ ಫ್ರಾನ್ಸ ಮತ್ತು ಬ್ರಿಟಿಶ ದೇಶ ಕೂಡಲೆ ಅವರು ಆಲೋಚನ ಮಾಡ ಹತ್ತಿದ್ದರು.

ಜರ್ಮನಿಯ ಹಿಟ್ಲರರ ವಿಷಯ ಸ್ವದೇಶದಲ್ಲಿ ದೊರೆತಿಲ್ಲ. ... ಬರ್ಲಿನ್ ಪಟ್ಟಣದಿಂದ ಮ್ಯುನಿಚ್ ಪಟ್ಟಣಕ್ಕೆ ವಿಮಾನ ಮಾರ್ಗವಾಗಿ ಹೋಗಿ ... ಈಗ ... ಸರಕಾರದ ... ಆಸ್ಟ್ರಿಯಾ ದೇಶದೊಳಗಿನ ಪ್ರಕರಣದಿಂದ ಹಿಟ್ಲರರ ಅಸ್ಥಿರತೆ ಹೆಚ್ಚಿಗೆ ಬಂದಿದೆ. ಈ ಪರಮಾತನ ಪ್ರತಿಕೂಲನ ಇಟಾಲಿ ದೇಶ ... ಮಾಡುವ ಪ್ರಸಂಗ ಬಂದಿದೆ. ಯುರೋಪ ಖಂಡದ ಸ್ವದೇಶದ ಭದ್ರತೆಯ ... ಮಾಡುವದಕ್ಕಾಗಿ ಫ್ರಾನ್ಸ ದೇಶದ ಪರರಾಷ್ಟ್ರೀಯ ಖಾತೆಯ ಪ್ರಧಾನರಾದ ಮುಸ್ಯು ಬಾರ್ಥೋರವರು ಮುಖ್ಯ ಮುಖ್ಯ ರಾಷ್ಟ್ರಗಳಲ್ಲಿ ಸಂಚರಿಸಿ ಬರುತ್ತಿದ್ದರು. ಜರ್ಮನಿಯನ್ನೂ ಈ ಕರಾರಿನಲ್ಲಿ ಸೇರಿಸಿಕೊಳ್ಳಬೇಕು, ವ್ಹರ್ಸಾಯಿಲಿಸ ತಹನಾಮೆಯೊಳಗಿನ ಕಲ ಪ್ರತಿಬಂಧ ನಿವಾರಿಸಿ ಸೈನ್ಯ ಬೆಳೆಸಲು ಅನುಕೂಲತೆ ಮಾಡಿಕೊಡುತ್ತೇವೆ ಎಂದು ಜರ್ಮನಿಗೆ ಆಶೆ ತೋರಿಸಿದರಂತೆ. ಜಪಾನ ದೇಶದೊಡನೆ ಯುದ್ಧವಾಗುವ ಪ್ರಸಕ್ತಿಯಲ್ಲಿ ಬೆಂಬಲಕ್ಕೆ ಹವ ಬೇಕೆಂದು ರಶಿಯಾ ದೇಶಕ್ಕೆ ರಾಷ್ಟ್ರಸಂಘದಲ್ಲಿ ಸೇರಿಕೊಳ್ಳುವ ಒಂದು ಹಂಚಿಕೆಯು ನಡೆದಿದೆ. ಜರ್ಮನಿಯು ಸೇರಿಕೊಳ್ಳದೆ ಮುರಿದು ಫ್ರಾನ್ಸ ದೇಶಕ್ಕಾಗಿ ಒಂದರೆ ರಶಿಯಾ ದೇಶವು ಜರ್ಮನಿಯ ಮೇಲೆ ದಂಡೆತ್ತಿ ಹೋಗಿ ಫ್ರಾನ್ಸ ದೇಶಕ್ಕೆ ಸಹಾಯ ಬೇಕಂದಿದೆ. ಈ ಪ್ರಕಾರ ಬಾರ್ಥೋರವರ ಸರ್ವರಾಷ್ಟ್ರೀಯ ಕಾರಸ್ಥಾನವಿದ್ದಾಗ್ಯೂ ಪ್ರತ್ಯಕ್ಷ ಯುದ್ಧದ ಸಮಯ ಯಾರ್‍ಯಾರು ಯಾವ ಯಾವ ಪಕ್ಷಕ್ಕೆ ಸೇರುತ್ತಾರೆಂದು ಇದೀಗಲೇ ಹೇಳಬಾರದು.

ರಶಿಯಾ ದೇಶದೊಳಗಿನ ಕಾರಸ್ಥಾನಗಳೇ ಬೇರೆ. ಬ್ರಿಟಿಶ, ಫ್ರಾನ್ಸ, ಇಟಾಲಿ ಈ ರಾಷ್ಟ್ರಗಳ ಮೇಲೆ ರಶಿಯಾದೇಶಕ್ಕೆ ನಂಬಿಗೆಯಿಲ್ಲ. ಈ ಮೂರೂ ರಾಷ್ಟ್ರಗಳು ಒಕ್ಕಟ್ಟಾಗಿ ಭೂಮಧ್ಯ ಸಮುದ್ರದೊಳಗಿಂದ ದಾರ್ಡನೆಲ್ಸ ಸಾಮುದ್ರಧುನಿಯ ಮಾರ್ಗದಿಂದಲೂ ಉತ್ತರ ಸಮುದ್ರದ ಮಾರ್ಗದಿಂದಲೂ, ಜಪಾನ ದೇಶದ ಪಕ್ಷಪಾತಿಯಾಗಿ ತಮ್ಮ ಮೇಲೆ ಸಾಗಿ ಬರಬಹುದೆಂದ ರಶ್ಯರಿಗೆ ಸಂದೇಹ ಬಂದಿದೆ. ಈ ಧೋರಣವನ್ನಿಟ್ಟು ರಶ್ಯರು ತಮ್ಮ ಹೆಜ್ಜೆಗಳನ್ನು ಸರಿಪಡಿಸುತ್ತಿದ್ದಾರೆ. ತುರ್ಕಸ್ಥಾನದ ಪಾರ್ಲಿಮೆಂಟಿನ ಪ್ರಮುಖ ಸಭಾಸದರು ಸದ್ಯಕ್ಕೆ ರಶಿಯಾ ದೇಶದ ರಾಜಧಾನಿಯಾದ ಮೊಸ್ಕೊ ಪಟ್ಟಣಕ್ಕೆ ಹೋಗುವವರಿದ್ದಾರಾಗಿ ಪ್ರಕಟವಾಗಿದೆ. ತುರ್ಕಸ್ಥಾನದ ದಾರ್ಡನೆಲ್ಸ ಸಾಮುದ್ರಧುನಿಯ ಪ್ರದೇಶಗಳಲ್ಲಿ ತುರ್ಕಸ್ಥಾನವು ಕೋಟೆ-ಕೊತ್ತಲಗಳನ್ನು ನಿರ್ಮಿಸಬಾರದೆಂದು ವ್ಹರ್ಸಾಯಿಲಿಸ ತಹನಾಮೆಯಲ್ಲಿ ಬರೆದಿದೆ. ಅದನ್ನು ತಿದ್ದುಪಡಿ ಮಾಡಿಕೊಳ್ಳುವದಕ್ಕಾಗಿ ತುರ್ಕಸ್ಥಾನವು ಹತ್ತು ೧—೨ ವರ್ಷಗಳಿಂದ ಪ್ರಯತ್ನಪಡುತ್ತಿದೆ. ರಾಷ್ಟ್ರಸಂಘವು ನಿರ್ಬಲವಾದ್ದರಿಂದಲೂ, ವ್ಹರ್ಸಾಯಿಲಿಸ ತಹನಾಮೆಯಂತೆ ರಾಷ್ಟ್ರಸಂಘದಲ್ಲಿ ನಂಬಿಕೊಂಡಿದ್ದ ತುರ್ಕಸ್ಥಾನಕ್ಕೆ ನಷ್ಟವಾಗುವದೆಂದೂ, ಈ ಸಾಮುದ್ರಧುನಿಗಳನ್ನು ಕಾಪಾಡಿಕೊಳ್ಳದಿದ್ದರೆ ತುರ್ಕಸ್ಥಾನಕ್ಕೆ ಅಪಾಯವಿರುವದೆಂದೂ, ರಶಿಯಾದ ಲಿಟ್‌ವಿನೋಫ್ ರವರು ಅಭಿಪ್ರಾಯ ಪಟ್ಟು ವ್ಹರ್ಸಾಯಿಲಿಸ ತಹನಾಮೆಯೊಳಗಿನ ಪ್ರತಿಬಂಧನನ್ನು ದೂರಪಡಿಸಲು ರಾಷ್ಟ್ರಸಂಘಕ್ಕೆ ಅರ್ಜಿ ಮಾಡಿಕೊಂಡಿದ್ದಾರೆ. ದಾರ್ಡನೆಲ್ಸ ಸಾಮುದ್ರಧುನಿಯನ್ನು ಭದ್ರಗೊಳಿಸಲು ತುರ್ಕಸ್ಥಾನಕ್ಕೆ ಅಂಬು ಗೊಟ್ಟಲ್ಲಿ ರಶಿಯಾ—ತುರ್ಕಸ್ಥಾನ ದೇಶಗಳು ಒಕ್ಕಟ್ಟಾಗಿ ಬ್ರಿಟಿಶಾದಿ ಮಿತ್ರರ ಹಡಗುಪಡೆಗಳಿಗೆ ಕಪ್ಪು ಸಮುದ್ರದಲ್ಲಿ ನಿಂತು ರಶಿಯಾ ದೇಶದ ಮೇಲೆ ಸಾಗಿ ಹೋಗಲು ಪ್ರತಿಬಂಧವಾಗುತ್ತದೆ. ತುರ್ಕಸ್ಥಾನದೇಶವು ತಟಸ್ಥ ವೃತ್ತಿ ತಳೆದಾಗ್ಯೂ, ಯುದ್ಧಕಾಲಕ್ಕೆ ಕಪ್ಪು ಸಮುದ್ರದಲ್ಲಿ ಹಡಗುಪಡೆಗಳು ಸೇರಿದ ಬಳಿಕ, ತುರ್ಕಸ್ಥಾನ ಸರಕಾರವು ಸಮುದ್ರಧುನಿಯ ಮಾರ್ಗವನ್ನು ಮುಚ್ಚಿಬಿಟ್ಟಲ್ಲಿ ಕಪ್ಪು ಸಮುದ್ರ ಸೇರಿದ ಹಡಗುಪಡೆಗಳು ಆ ಸಮುದ್ರದಲ್ಲಿ ಬಿದ್ದು ಸಾಯುವದೇ. ಆದರಿಂದ ತುರ್ಕಸ್ಥಾನಕ್ಕೆ ಸ್ವಾತಂತ್ರ್ಯ ಕೊಡಲು ಬ್ರಿಟಿಶಾದಿ ರಾಷ್ಟ್ರಗಳು ತಯಾರಿಲ್ಲ. ತುರ್ಕಸ್ಥಾನದ ಒರಿಕೆಯನ್ನು ಲಕ್ಷ್ಯ ಮಾಡದವರಾದರೂ ಕಷ್ಟವೇ. ದಕ್ಷಿಣ ಪಾರ್ಶ್ವವನ್ನು ಸುರಕ್ಷಿತ ಮಾಡಿಕೊಳ್ಳುವದಕ್ಕಾಗಿ ನಡೆಸಿದ ರುಶ್ಯರ ಕಾರಸ್ಥಾನದ ರೂಪವಿದು.

ಬ್ರಿಟಿಶರು ರಶಿಯಾ ದೇಶದ ತುರ್ಕಸ್ಥಾನದೊಳಗಿನ ಕುಹಕಗಳಿಗೆ ಇದಿರಾಗುವದಕ್ಕಾಗಿ ಚೀನ ದೇಶದೊಳಗಿನ ನಗರಗಳ ಪ್ರದೇಶದಲ್ಲಿ ಕಲಹಗಳನ್ನೆಬ್ಬಿಸಿದ್ದಾರೆ. ಕಾಶಗರದಲ್ಲಿ ಮುಸಲ್ಮಾನರಿಗೂ, ಚೀನಿಯರಿಗೂ ಈಗ ಜಗಳ ನಡೆದಿದ. ಕಾಶಗರ—ಚೀನೀ ಪ್ರದೇಶಗಳು ಬ್ರಿಟಿಶರಿಗೆ ಪ್ರಸನ್ನವಾದರೆ ರಶಿಯಾದೇಶದ ಮೇಲೆ ಸಾಗಿಹೋಗಲು ಒಂದು ಮಾರ್ಗವಾದಂತಾಯಿತು. ಟಿಬೇಟ ದೇಶದ ದಿಲಾಯಿಲಾಮಾರವರು ಬ್ರಿಟಿಶರ ಪಕ್ಷಪಾತಿಗಳು. ಇತ್ತಲಾಗಿ ಅವರು ತೀರಿಕೊಂಡು ತಾಶಿ ಲಾಮಾರವರು ಟಿಬೇಟದ ಅಧಿಪತಿಗಳಾದ್ದರಿಂದ ಬ್ರಿಟಿಶರ ವ್ಯಾಸಕ್ಕೆ ಸ್ವಲ್ಪ ತೊಂದರೆಯಾಗಿದೆ. ತಾಶಿ-ಲಾಮಾರವರು ರಶಿಯಾ ದೇಶದ ಪಕ್ಷಪಾತಿಗಳು. ಇರಾಣ ದೇಶಕ್ಕೂ ತುರ್ಕಸ್ಥಾನ ದೇಶಕ್ಕೂ ಗಡಿತನದ ಒಪ್ಪಂದವಾದ

ವಾರ್ತೆಯಿದೆ. ಇದರಿಂದ ರಶಿಯಾ ದೇಶಕ್ಕೆ ಒಳಿತಿಕ್ಕುವಂತೆ ಗುತ್ತದೆ. ಮಧ್ಯ ಏಶಿಯಾ ಖಂಡದೊಳಗಿನ ರಾಜಕಾರಣದಲ್ಲಿ ಬ್ರಿಟಿಶರಿಗಿಂತ ರಶ್ಯರಿಗೆ ಅನುಕೂಲತೆ ಹೆಚ್ಚು. ಬ್ರಿಟಿಶ ಪಕ್ಷಪಾತಿಗಳು ಮಧ್ಯ ಏಶಿಯಾ ಖಂಡದಲ್ಲಿ ದೊರಕುವದು ಕಠಿಣ.

ರಶಿಯಾ ದೇಶವು ಚೀನ ದೇಶದಲ್ಲಿ ನಡಿಸಿದ ಮನ ಪ್ರೊಳಿಸುವ ಪ್ರಯತ್ನಗಳಿಂದ ಜಪಾನ ದೇಶಕ್ಕೆ ಹೊಟ್ಟೆಶೂಲಿಯ ಹಿಡಿದಿದೆ. ಚೀನ ದೇಶದೊಳಗಿನ ಮಂಗೋಲ್ಯಾನರಿಗೆ ರಶಿಯಾ ದೇಶದವರು ಶಸ್ತ್ರಾಸ್ತ್ರಗಳನ್ನೂ, ಮದ್ದು-ಗುಂಡುಗಳನ್ನೂ, ಯುದ್ಧೋಪಯೋಗಿ ಸಾಧನಗಳನ್ನೂ ಪೂರೈಸಿ ತಮ್ಮ ವ್ಯಾಪಾರದ ಭದ್ರತೆಯನ್ನು ಸಾಧಿಸುವದಲ್ಲದೆ, ಪ್ರತಿಷ್ಠೆಯನ್ನೂ ಬೆಳೆಸುತ್ತಿದ್ದಾರೆ. ಜಪಾನ ದೇಶದ ರಾಯಭಾರಿಗಳಾದ ಮಿ| ಹಿರೋತಾರವರಿಗೂ ರಶಿಯಾ ದೇಶದ ರಾಯಭಾರಿಗಳಾದ ಮಿ| ಯುರೇನೇವರವರಿಗೂ ಜಪಾನ ದೇಶದ ರಾಜಧಾನಿಯಾದ ಟೋಕಿಯೋದಲ್ಲಿ ೪ ತಾಸುಗಳ ತನಕ ಕಳೆದ ತಿಂಗಳಲ್ಲಿ ಸಂಭಾಷಣ ನಡೆಯಿತಂತೆ. 'ರಶಿಯಾ ದೇಶವು ಜಪಾನ ದೇಶದೊಡನೆ ಯುದ್ಧ ಮಾಡಬಯಸುತ್ತದೇನು?' ಎಂದು ಹಿರೋತಾರವರು ಮಿ| ಯುರೇನೇವರವರಿಗೆ ನಿರ್ದಾಕ್ಷಿಣ್ಯದಿಂದ ಕೇಳಿದರಂತೆ. ಮಿ| ಯುರೇನೇವರವರಿಗೆ ಎದೆಹಾರಿದಂತಾಯಿತು. ಜಪಾನ ದೇಶದೊಡನೆ ರಶಿಯಾದೇಶವು ಯುದ್ಧ ಮಾಡಬಯಸುವದಿಲ್ಲವಾಗಿ ಅವರು ಹೇಳಿದರು. 'ಇತ್ತಿಟ್ಟನಲ್ಲಿ ಯುದ್ಧವಾಗುವ ಲೋಕವಾರ್ತೆಯಿದೆ,' ಎಂಬುದಾಗಿ ಮಿ| ಹಿರೋತಾರವರು ಕೇಳಲು, ಇದು ನಿಜವಲ್ಲವಾಗಿ ರಶಿಯಾ ದೇಶದ ರಾಯಭಾರಿಗಳು ಉದ್ಗರಿಸಿದರು. ಮೇಲ್ಕಾಣಿಸಿದಂತೆ ೪ ಘಂಟೆ ತನಕ ಮಾತು-ಕಥೆ ನಡೆದಾಗ್ಯೂ ಇತ್ತಿಟ್ಟನಲ್ಲಿಯೂ ಸಮಾಧಾನವಾಗಲಿಲ್ಲವಾಗಿ ಲಂಡನ 'ಡೇಲಿ ಎಕ್ಸಪ್ರೆಸ್' ಪತ್ರಿಕೆಯ ಟೋಕಿಯೋ ಸುದ್ದಿಗಾರರ ವಾರ್ತೆ. ರಶಿಯಾ ದೇಶದವರು ಇಂಗ್ಲೆಂಡ ಆಘಾತದಿಂದ ಒನೆಗಾ ಸರೋವರದ ವರೆಗೆ ಒಂದು ದೊಡ್ಡ ಕಾಲುವೆ ಅಗಿದು ಅಲ್ಲಿಂದ ಸ್ಟೇಲಿನ್ ಕಾಲುವೆಯ ಮಾರ್ಗವಾಗಿ ಉತ್ತರ ಮಹಾಸಾಗರದೊಳಗಿಂದ ಬೆಹರಿನ್ ಸಾಮುದ್ರಧುನಿಯ ಮಾರ್ಗವಾಗಿ ಪಸಿಫಿಕ್ ಮಹಾಸಾಗರದಲ್ಲಿ ಹಡಗು ಪಡೆಗಳನ್ನು ಒಯ್ದು ಜಪಾನ ದೇಶಕ್ಕೆ ಇದಿರಾಗಲು ತಯಾರಿ ನಡಿಸಿದ್ದಾರೆ. ಇಂಗ್ಲೆಂಡ ಆಘಾತದಿಂದ ಒನೆಗಾ ವರೆಗಿನ ಕಾಲುವೆ ಆರೇ ತಿಂಗಳಲ್ಲಿ ತಯಾರಾಯಿತು. ಈ ಕಾಲುವೆಯಿಂದಲೂ ಈ ಹೊಸ ಕಡಿಸಿದ ಸ್ಟಾಲಿನ್ ಕಾಲುವೆಯಿಂದಲೂ ಹಡಗುಪಡೆಗಳ ಮಾರ್ಗವು ಬಹು ಸಮೀಪವಾಗಿದೆ. ಪೆಸಿಫಿಕ್ ಮಹಾಸಾಗರಕ್ಕೆ ಮುಂಚಿನ ತೃತೀಯಾಂಶ ಅವಧಿಯಲ್ಲಿ ಹಡಗುಪಡೆಗಳನ್ನು ಕಳಿಸಬಹುದು. ನೇರಾಗಿ ಯುದ್ಧದ ಹಡಗುಪಡೆಗಳು ಸೈಬೀರಿಯಾ ದೇಶದ ಉತ್ತರ ದಂಡೆಗುಂಟ ಹೋಗುವದರಿಂದ ಹಾದಿಯ ಮೇಲೆ ಬೇಕಷ್ಟು ಅನ್ನಸಾಮಗ್ರಿಯನ್ನೂ, ಇತರ ಸಾಮುಗ್ರಿಗಳನ್ನೂ ಪೂರೈಸಿಕೊಳ್ಳಬರುತ್ತದೆ. ಉತ್ತರ ಮಹಾಸಾಗರದೊಳಗಿನ ಭಾಗದಲ್ಲಿ ೬ ತಿಂಗಳು ಬರ್ಫದ ಭಯವಿಲ್ಲವಾಗಿ ಮೊಸ್ಕೋ ವಿಶ್ವವಿದ್ಯಾಲಯದೊಳಗಿನ ಶೋಧಕರೊಬ್ಬರು ಕಂಡುಹಿಡಿದಿದ್ದಾರೆ. ಈ ಪ್ರಕಾರ ರಶಿಯಾ ದೇಶವು ಯುದ್ಧದ ತಯಾರಿಯನ್ನು ನಡಿಸಿದೆ.

ಜಪಾನ ದೇಶದ ರಾಯಭಾರಿಗಳು ಅಮೇರಿಕೆಯ ಅಧ್ಯಕ್ಷರಾದ ರೂಜ್ವೆಲ್ಟರವರೊಡನೆ ಸಖ್ಯಕ್ಕೆ ಮಾತಾಡುತ್ತಿದ್ದಾರೆ. ರೂಜ್ವೆಲ್ಟರವರು ವಿಶ್ರಾಂತಿಗಾಗಿ ಹವಾಯಿ ಪಟ್ಟಣಕ್ಕೆ ಹೋದ ಸಮಯ ಅಲ್ಲಿ ಮಾತು-ಕಥೆ ನಡೆಯುವದಾಗಿ ಪ್ರಕಟವಾಗಿದೆ. ರಶಿಯಾ ದೇಶದೊಡನೆಯ ದ್ವೇಷ ಗವೆಪ್ರಸಕ್ತಿಯಲ್ಲಿ ಅಮೇರಿಕೆಯವರ ಬೆಂಬಲ ದೊರೆಯುವದಕ್ಕಾಗಿ ಜಪಾನದೇಶವು ಸಂಧಾನ ಮಾಡಬಯಸುತ್ತದೆ. ರಶಿಯಾ ದೇಶದ ಸಮಾಜಸತ್ತಾವಾದಿ ಸರಕಾರವು ಅಮೇರಿಕೆಯ ಸಾಲಗಳನ್ನು ಸಂಪೂರ್ಣವಾಗಿ ನಿರಾಕರಿಸಿದ್ದರಿಂದ ಅಮೇರಿಕ ರಶಿಯಾ ದೇಶದೊಡನೆ ಸಿಟ್ಟು! ರಶಿಯಾ ದೇಶವು ರಾಷ್ಟ್ರಸಂಘದಲ್ಲಿ ಸೇರಿಲ್ಲ. ಇನ್ನು ತನಕ ಸಂಘದ ಹೊರಗೆ ನಿಂತು ನೋಡುತ್ತಿದೆ. ಜಪಾನ-ಅಮೇರಿಕಾ ರಾಷ್ಟ್ರಗಳು ರಾಷ್ಟ್ರಸಂಘದ ಸಭಾಸದರು. ಹೀಗೆ ಋಣಾನುಬಂಧವಿರುವದರಿಂದ ಜಪಾನ-ಅಮೇರಿಕಾ ದೇಶಗಳೊಳಗೆ ರಶಿಯಾದೇಶದ ವಿರುದ್ಧ ತಹನಾಮೆಯಾಗಬಹುದಾಗಿ ಹೇಳುತ್ತಾರೆ.

ಈ ವಿವರದಿಂದ ಈಗಿನ ಸ್ಥಿತಿಯು ಗ್ರಹಿಕೆಯಾಗುವಂತಿದೆ. ಪ್ರತಿಯೊಬ್ಬರಿಗೂ ಶಾಂತಿ ಬೇಕು, ಒಪ್ಪಂದ ಬೇಕು, ಆದರೆ ಯಾರಿಗೂ ಯಾರ ಮೇಲೂ ನಂಬಿಗೆಯಿಲ್ಲ. ಒಬ್ಬರಿಗೆ ಮತ್ತೊಬ್ಬರ ಭೀತಿ, ಮತ್ತೊಬ್ಬರಿಗೆ ಇನ್ನೊಬ್ಬರ ಭೀತಿ, ಗರಯರಿಂದು ಮಾತಾಡುತ್ತಿರುವಾಗಲೂ ಮತ್ಸರಭಾವವಾಗಲಿ, ದ್ವೇಷಭಾವವಾಗಲಿ ಬೆನ್ನು ಬಿಡದು. ಇಂದಲ್ಲಿ ಸಮಸ್ತರಿಗೆ ಹಿತಕರವಾದ ಸಂಧಾನವಾಗುವ ಬಗೆ ಹೇಗೆ? ಫ್ರಾನ್ಸ ದೇಶದ ಹಿತ ಸಾಧಿಸಹೋದರೆ, ಜರ್ಮನಿಗೆ ತಲಶೂಲಿ; ಜರ್ಮನಿಯ ಹಿತ ಸಾಧಿಸಿದರೆ ಇಟಾಲಿಗೆ ಹೊಟ್ಟೆ ಶೂಲಿ, ರಶಿಯಾ-ಜಪಾನ ದೇಶದ ರಾಯಭಾರಿಗಳು ಸಂಧಾನದ ಮಾತು-ಕಥೆ ಮಾಡುವಾಗ ಯುದ್ಧದ ಬೆದರಿಕೆ ಹಾಕುತ್ತಾರೆ. ಬ್ರಿಟಿಶ ದೇಶದವರು ಶಾಂತಿಸ್ವಸ್ತಿಯ ಸೋಗು ಹಾಕಿಕೊಂಡು ತಮ್ಮ ಕಾರಸ್ಥಾನಗಳನ್ನು ಪಟ್ಟಿಲ್ಲದೆ ಸಾಧಿಸುತ್ತಿದ್ದಾರೆ. ಕಣ್ಣುಕಟ್ಟಿ ಹಾಲು ಕುಡಿದಂತೆ ಈ ಪ್ರಕಾರಗಳು ಸಾಗಿವೆ. ಆದಾಗ್ಯೂ ಒಂದಿಲ್ಲೊಂದು ದಿನ ಒಳ್ಳೆ ಪ್ರಕಟವಾಗಲೇ ಬೇಕು. ಆಸ್ಟ್ರಿಯಾ ದೇಶದೊಳಗಿನ ರಾಜ್ಯಕ್ರಾಂತಿಯ ಪ್ರಯತ್ನ ನೋಡಿದ್ದಲ್ಲಿ ಸದ್ಯದಲ್ಲಿಯೇ ಯುದ್ಧವಾಗುವದೆಂದೂ ಒಳಕಾರಸ್ಥಾನಗಳೆಲ್ಲ ಹೊರಬೀಳುವವೆಂದೂ ನಮ್ಮ ಅಂಬೋಣ. ಲಂಡನಿನಲ್ಲಿ ತಾ ೨೩ನೇ ಸೋಮವಾರ ರಾತ್ರಿ ವಿಮಾನ ಸಂಗ್ರಾಮದ ತಾಲೀಮಾಯಿತು. ೨೦೦ ವಿಮಾನಗಳು ಲಂಡನಿನ ಮೇಲೆ ಹಾರಿಬಂದರೆ ಸರಕಾರವು ಹ್ಯಾಗೆ ರಕ್ಷಣ ಮಾಡಿಕೊಳ್ಳಬಲ್ಲದೆಂಬದರ ಪ್ರಯೋಗ ನಡೆಯಿತು. ಈ ಪ್ರಯೋಗದಲ್ಲಿ ಯಶಸ್ಸು ದೊರಲಿಲ್ಲವಾಗಿಯೂ, ವಿಮಾನಗಳ ಹಲ್ಲೆಯಿಂದ ಲಂಡನ್ ಪಟ್ಟಣ ರಕ್ಷಣೆ ಮಾಡುವದು ಕಠಿಣವೆಂದೂ 'ಕ್ಯೂರಿಯರ' ವಾರ್ತಾವಾಹಕರ ವಾರ್ತೆ. ಹೊಸಕ್ಯೆಯ ರಂಕರ ಶಾಸ್ತ್ರಿಗಳು ಸಪ್ತಗ್ರಹ ಯೋಗ, ಪೌರ್ಣಿಮೆಯ ಚಂದ್ರಗ್ರಹಣ ಮೊದಲಾದ ಯೋಗಗಳಿಂದ ಯುದ್ಧ ಸಂಭವಿಸುವದಾಗಿ ಮಾಡಿದ ಭವಿಷ್ಯವು, ನಡೆಯುವ ಘಟನೆಗಳೂ ಸರಿಹೋಗುತ್ತವೆ. 'ಇಂಟರನೆಶನಲ್ ನ್ಯೂಸ ಸರ್ವಿಸ' ಎಂಬ ಆಂತರರಾಷ್ಟ್ರೀಯ ವಾರ್ತಾವಾಹಕ ಸಂಸ್ಥೆಯ ಯುರೋಪಿಯನ್ ಶಾಖೆಯ ಪ್ರಮುಖರಾದ ಮಿ|| ಎಚ್ ಆರ್ ನಿಕರಬೋಕರರವರು (*Will war come in Europe?*) ಯುರೋಪ ಖಂಡದಲ್ಲಿ ಯುದ್ಧ ಒದಗುವದೇ? ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಯುದ್ಧ ಶಾಸ್ತ್ರಜ್ಞ ಲಿಕ ಪರರಾಷ್ಟ್ರೀಯ ಪ್ರಧಾನ ಪ್ರಮುಖರ ಅಭಿಪ್ರಾಯಗಳ ಮಧ್ಯ-ಯುರೋಪ ಖಂಡದ ಪರಿಸ್ಥಿತಿಯನ್ನು ಸಮಾಲೋಚಿಸಿ ಝೆಕೋಸ್ಲೋವಾಕಿಯಾದ ಪರರಾಷ್ಟ್ರ ಮಂತ್ರಿಗಳಾದ ಡಾ| ಬೆನೆಶರವರು 'ಫಿಫ್ಟಿ-ಫಿಫ್ಟಿ' ಅಂದರೆ ಯುದ್ಧವಾಗಲಿ ಅಥವಾ ಯುದ್ಧ ಸಂಭವಿಸುವದಾಗಿ ಅಭಿಪ್ರಾಯಪಟ್ಟಿದ್ದಾರೆ. 'ಒಂದು ವರ್ಷದ ಹಿಂದೆ ಆಗಲೇ ಇಷ್ಟರಲ್ಲಿಯ ಪ್ರಯೋಗವಿಕ್ಕಿಲ್ಲವಾಗಿ ನಾನು ಒಂದಿಷ್ಟು ಈ ಹೊತ್ತು ಆ ಅಭಿಪ್ರಾಯವನ್ನು ಹೇಳುವೆ?' ಹೀಗೆ ಫ್ರೆಂಚ ಪ್ರಧಾನರಾದ ಎಮ್ ಬಾರ್ಥೋರವರು ನುಡಿಯುತ್ತಾರೆ. ಅಂದ ಬಳಿಕ, 'ಯುದ್ಧವಾಗದೇ?' ಎಂಬ ಪ್ರಶ್ನೆ ಉಳಿಯುತ್ತಿಲ್ಲ?

ವೃತ್ತಸಾರ.

— ಶ್ರೀ ಕಾಶಿ ಕ್ಷೇತ್ರದಲ್ಲಿ ಶುಕ್ರವಾರ ತಾ ೨೭ನೇ ಬೆಳಗಿನ ೯ ಘಂಟೆಗೆ ಸರದಾರ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಸೇರಿತು. ಶ್ರೀ| ರಾಜಗೋಪಾಲಾಚಾರ್ಯರವರೂ, ಡಾ| ಸಯ್ಯದ ಮಹಮೂದ, ಮೌ| ಅಬುಲ ಕಲಮ್ ಆಝಾದ, ಶ್ರೀ| ಜಯರಾಮದಾಸ ದೌಲತರಾಮ, ಬಾಬು ರಾಜೇಂದ್ರ ಪ್ರಸಾದರವರೂ ಹಾಜರಿದ್ದರು. ಪಂಡಿತ ಮದನಮೋಹನ ಮಾಲವೀಯ ಹಾಗು ಶ್ರೀ| ರಾಜಗೋಪಾಲಾಚಾರ್ಯರವರು ನಿಮಂತ್ರಣದ ಮೇರೆಗೆ ಹಾಜರಿದ್ದರು. ಜಾತಿ ನಿರ್ಣಯದ ಕುರಿತು ಪಂ| ಮಾಲವೀಯರವರಿಗೂ, ಕಾಂ| ಕಾರ್ಯಕಾರಿಮಂಡಳಕ್ಕೂ ಉಂಟಾದ ಮತಭೇದವನ್ನು ಈ ಸಭೆಯಲ್ಲಿ ಎತ್ತರಿಸಿ ಬಗೆಹರಿಸುವದು. ಪಂಡಿತ ಜವಾಹರಲಾಲ ಹಾಗು ಖಾನ ಅಬ್ದುಲ್ಲ ಗಫೂರಖಾನರವರ ಬಿಡುಗಡೆಯ ಬಗ್ಗೆ ಕೊಂಗ್ರೆಸ ಕಾರ್ಯಕಾರಿ ಮಂಡಳ ಪ್ರಕಟಿಸಬೇಕಾದ ಅಭಿಪ್ರಾಯಗಳ ವಿಚಾರವಾಗುವದು. ಮಹಾತ್ಮರು ಶ್ರೀ ಕಾಶಿಕ್ಷೇತ್ರಕ್ಕೆ ಗುರುವಾರ ಮಧ್ಯರಾತ್ರಿ ತಲ್ಪಿದರು. ಬಹು ದಣಿದಿದ್ದರಾಗಿ ಮುಖಚರ್ಯೆ ನೋಡಿದವರು ಬರೆಯುತ್ತಾರೆ.

— ಪುಣೆಯಲ್ಲಿ ಸ್ವಾಮಿ ಜೀವನರತ್ನಂ ಎಂಬ ಕ್ರಿಶ್ಚನ ಸಾಧುಗಳು ಬಂದಿದ್ದಾರೆ. ಇವರು ದೊಡ್ಡ ಚಿತ್ರಕಾರರಾಗಿದ್ದರು. ಒಂದೇ ಸಮಯ ನಾಲ್ಕೈದು ಚಿತ್ರಗಳನ್ನು ಅವರು ತೆಗೆಯಬಲ್ಲರು. ಕಣ್ಣುಕಟ್ಟಿ ಎರಡೂ ಕೈಗಳಿಂದ ಎರಡು ಚಿತ್ರಗಳನ್ನು ಒಮ್ಮೆಲೆ ತೆಗೆಯಬಲ್ಲರು. ಇವರಿಗೆ ದರ ಮಹಾ ೨೦೦ ರೂಪಾಯಿನ ಪಗಾರು ಇಂಗ್ಲಂಡದಲ್ಲಿ ಸಿಗುತ್ತಿತ್ತು. ೭-೮ ವರ್ಷಗಳ ಹಿಂದೆ ಇವರಿಗೆ ಸಾಕ್ಷಾತ್ಕಾರವಾಯಿತಂತೆ. ಇಲ್ಲಿ ಬಂದು ಕ್ರಿಸ್ತ ಧರ್ಮೋಪದೇಶ ಮಾಡಲಾರಂಭಿಸಿದ್ದಾರೆ. ಇವರು ಇಂಗ್ಲಿಷ, ಸಂಸ್ಕೃತ, ತೆಲುಗು ಮಂತ್ರಗಳನ್ನು ಉಚ್ಚರಿಸಿ, ಎಷ್ಟೋ ಹಟ್ಟಿ ಜನರ ರೋಗಗಳನ್ನು ಗುಣಪಡಿಸುತ್ತಾರೆ. ಇವರ ವಯಸ್ಸು ೪೫ ವರ್ಷ. ಮೂಲ ಭಾಷೆ ತೆಲುಗು. ಯೇಸು ಕ್ರಿಸ್ತನ ಮೇಲೆ ನಂಬಿಗೆಯುಳ್ಳವರು ಮಾತ್ರ ತಮ್ಮ ಉಪಚಾರದಿಂದ ಗುಣಹೊಂದುತ್ತಾರಾಗಿ ಅವರ ಅಂಬೋಣ.

— ಈ ಬಾರಿ ಆಷಾಢ ಏಕಾದಶಿಗೆ ಸುಮಾರು ೨ ಲಕ್ಷ ಯಾತ್ರಿಕರು ಸೇರಿದ್ದರು. ಈ ವರ್ಷ ಶ್ರೀ ವಿಠೋಬ ದೇವರ ಕೃಪೆಯಿಂದ ಕೊಲೆರಾ, ಪ್ಲೇಗು, ಬೇನೆಗಳಿಲ್ಲದೆ ಉತ್ಸವವು ಸುಖದಿಂದ ನೆರವೇರಿತು.

ಸ್ಥಾನಿಕ ವೃತ್ತಾಂತ.

ಕುಮಟಾ— ಒಳ್ಳೇ ಮಳೆ ಬೀಳುತ್ತದೆ, ಜುಲೈ ... ಈ ವಾರದಲ್ಲಿ ೧೩-೦೩ ಇಂಚು ಮಳೆ, ಈ ವರೆಗೆ ೮೦.೫೦ ಇಂಚು ಮಳೆಯಾಯಿತು.

ಇಲ್ಲಿಯ ರಾ। ಗೋವಿಂದ ಸುಬ್ರಾಯ ಪ್ರಭು ಇವರು ಇಲ್ಲಿಯ ಕೆನರಾ ಎಜ್ಯುಕೇಶನ್ ಸೊಸೈಟಿಯ ಟ್ರಸ್ಟಿ ... ಮೇಲೆ ಮಾಡಿದ ಫಿರ್ಯಾದಿಯು ಫೂರ್ವ ... ಕೃತದಲ್ಲಿ ಕಳೆದ ಬುಧವಾರ ಸಂಜೆ ಒಂದು ಅನಪೇಕ್ಷಿತ ಪ್ರಕಾರವಾಯಿತು. ಫಿರ್ಯಾದಿಯು ಲೆಕ್ಕ ತಪಾಸು ಮಾಡುವಾಗ, ಆರೋಪಿ ಶ್ರೀ ... ನ್ನಾಥಪ್ಪ ... ವೈದ್ಯರು ಹಾಜರ ಮಾಡಿದ ಲೆಕ್ಕದ ಪುಸ್ತಕಗಳೊಳಗಿಂದ ಕೆಲವು ರಶೀತಿಗಳ ಹಾಳೆಗಳನ್ನು ಒಂದು ಡ್ರಾಯರಲ್ಲಿ ಇಟ್ಟುಕೊಂಡರು. "ಫೋರ್ಜ ಲೆಕ್ಕ ಇನ್ನೂ ಹಾಜರಾಗಲಿಲ್ಲ, ಸುಳ್ಳು ಲೆಕ್ಕ ತಯಾರ ಮಾಡುವ ಸಂಭವ ಇರುತ್ತದೆ, ಹೀಗೆ ಹಾಜರಾದ ಲೆಕ್ಕದ ಪುಸ್ತಕಗಳಿಂದ ಹಾಳೆಗಳನ್ನು ತೆಗೆಯಲಿಕ್ಕೆ ಆರೋಪಿಗೆ ಹಕ್ಕಿಲ್ಲ, ನನ್ನ ಆಕ್ಷೇಪವಿದೆ, ನಾನು ಈ ಕುರಿತು ಅರ್ಜಿ ಕೊಡುತ್ತೇನೆ,' ಹೀಗೆ ಫಿರ್ಯಾದಿಯು ಆಕ್ಷೇಪ ತಾಳಲು, ಮೆಜಿಸ್ಟ್ರೇಟರು ಹ್ಯಾಂಡ ... ರಶೀತಿಗಳನ್ನು ತಿರುಗಿ ಕೊಂಡು ತಮ್ಮ ವಶದಲ್ಲಿ ಇಟ್ಟುಕೊಂಡರು. ಇವನ್ನು ... ಇರುವದಕ್ಕಾಗಿ ಮಾಡಿದ ಅರ್ಜಿಯನ್ನು ... ತಂದ ಕಾರಣದ ಮೇಲಿಂದ ಮೆಜಿಸ್ಟ್ರೇಟರು ತಿರಸ್ಕರಿಸಿದರಾಗಿಯೂ, ಫಿರ್ಯಾದಿಯು ವಾರಸೋದಿವಸದ ಈ ಸಂಗತಿಗಳನ್ನು ನಮೂದಿಸಿ ಕಾರವಾರಕ್ಕೆ ಹೋಗಿ ಸಬ್‌ಡಿವಿಜನಲ್ ಕೋರ್ಟಿನಲ್ಲಿ ಅರ್ಜಿ ದಾಖಲು ಮಾಡಿದರಾಗಿಯೂ ತಿಳಿಯುತ್ತದೆ.

ಕುಮಟಾ ತಾಲೂಕ ಕಚೇರಿಯಲ್ಲಿ ಸಿಕ್ಯುರಿಟಿ ಬಗ್ಗೆ ಹಾಜರ ಮಾಡಿದ ಸ್ಟಾಂಪುಗಳು ಕಾಣದಾದ್ದರಿಂದ ಬಾಕೀ ನಡೆದ ಒಬ್ಬ ಕಾರಕೂನರಿಗೆ ಸಾಪೆಗೆ ವರ್ಗವಾಯಿತು ಒಬ್ಬ ಪಟ್ಟೇವಾಲಾ ಈ ಪ್ರಕರಣದಲ್ಲಿ ಸಿಲುಕಿರುವರಂತೆ!

ರಾ। ಮಹಾಬಳೇಶ್ವರ ಗಣಪತಿ ಭಟ್ಟ ಗೋಕರ್ಣ ಇವರಿಗಿದ್ದ ಪ್ರೀಸ್ಕ್ರಿಪ್ಶನ್ ರೋವಿ ಲೈಸನ್ಸು ರದ್ದಾಗಿದೆ ೧೮೩೭ನೇ ಇಸ್ವಿಯಿಂದ ಇವರ ಮನೆತನಕ್ಕೆ ಆ ರೋವಿ ಲೈಸನ್ಸು ಇದ್ದಂತೆ. ಈಗಲೇ ಅದು ರದ್ದಾಗುವ ಕಾರಣವೇನು? ಗೋಕರ್ಣ ಮುನಿಸಿಪಾಲಿಟಿಗೂ, ಕಲೆಕ್ಟರರಿಗೂ ಜಿಲ್ಲಾ ಪೋಲೀಸ ಚೀಫರ ವಶದಲ್ಲಿಯ ಕರಿಯ ನಡೆದ ಪ್ರಕರಣಕ್ಕೂ ಇದಕ್ಕೂ ಕೆಲವರು ಸಂಬಂಧ ಹಚ್ಚುತ್ತಾರೆ. ರಾ। ಮಹಾಬಳೇಶ್ವರ ಭಟ್ಟರು ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷರಿರುತ್ತಾರೆ.

ಹೊನ್ನಾವರ— ಇತ್ತೀಚಿಗೆ ಮಳೆ ಚನ್ನಾಗಿ ಬೀಳುತ್ತದೆ.

ಇಲ್ಲಿಯ ಕನ್ನಡ ಶಾಲೆ ಇಮಾರತು ಜೀರ್ಣವಾಗಿದೆ. ಹೊಸ ಶಾಲೆ ಯಾವಾಗ ಕಟ್ಟುತ್ತಾರೆ ನೋಡಬೇಕು. ಇಲ್ಲಿಯ ಪ್ರಾಥಮಿಕ ವಿದ್ಯಾರ್ಥಿಗಳು, ಸ್ಕೂಲ ಬೋರ್ಡಿಗೆ ಹರಕೆ ಹೊತ್ತರೆ ಒಳ್ಳೇ ಶಾಲೆ! ಮುಂಜಾನೆ ಬಂದ ವಿದ್ಯಾರ್ಥಿಗಳಿಗೆ ಸಂಜೆಗೆ ಸೂಟಿ! ಸಂಜೆಗೆ ಬಂದ ವಿದ್ಯಾರ್ಥಿಗಳಿಗೆ ಮುಂಜಾನೆ ಸೂಟಿ! ಹುಡುಗಿಯರ ಶಾಲೆಯು ಶ್ರೀ ... ಈ ಕನ್ನಡ ಈ ಪ್ರಶ್ನೆ ... ಇದೇ ಬಗೆಯ ಆಗಸ್ಟ ತಿಂಗಳಿನಿಂದ ಹುಡುಗರಿಗೆ ಸಹ ಈ ಸುಧಾರಣೆಯಾಗುವ ಹಾಗಿದೆ. ಇನ್ನು ಮುಂದೆ ಗೊಂಡ ಗಿಯರಿಗೆ ಶಾಲೆಯಲ್ಲಿ ಸೇರಿಸಿಕೊಳ್ಳದಂತೆ ಸ್ಕೂಲ ಬೋರ್ಡಿನ ಫರ್ಮಾನು ಹೊರಟಿರುವದಂತೆ. ಇದೆಂಥಾ ಸಕ್ತಿಯ ಆಜ್ಞೆ ... ಅದೂ ನಮ್ಮಂಥ ಸ್ಕೂಲ ಬೋರ್ಡು ... ಡೆಮೋಕ್ರಸಿ ಕಾರಭಾರ!! ಮ್ಯುನಿಸಿಪಾಲಿಟಿಯು ಬೋರ್ಡಿಗೆ ಗ್ರಾಂಟು ಕೊಡ ತ್ತಿರುವಾಗ ಈ ಪ್ರಕಾರಗಳನ್ನೆಲ್ಲ ಕಣ್ಮುಚ್ಚಿ ನೋಡುವ ಬಗೆ ಹೇಗೆ?

ನಾಳೆ ಜರುಗುವ ಬಸ್ ತಾರೀಖಿನೊಳಗೆ ಮ್ಯುನಿಸಿಪಾಲಿಟಿಯು ಇಲೆಕ್ಷನಿನಲ್ಲಿ ಉಮೇದ್ವಾರರಾಗಿ ನಿಲ್ಲುವವರು ಅರ್ಜಿ ಕೊಡತಕ್ಕದ್ದು. ಸಾರ್ವಜನಿಕ ಕಾರ್ಯದ ಗ್ರಹಿಕೆ ಇದ್ದ ಇವಾಬದಾರ ಗೃಹಸ್ಥರೇ ಉಮೇದ್ವಾರರಾಗಿ ನಿಲ್ಲಿಸುವ ವ್ಯವಸ್ಥೆಯಾಗತಕ್ಕದ್ದು.

ಭಟಕಳ— ಠಕ್ಕರ ಬಾಪ್ಪ ಇವರು ಇಲ್ಲಿಯ ಹರಿಜನ ಸಂಘದ ವಿಷಯ ತಿಳಿಸುವದೇನೆಂದರೆ - ತಾ. ೧೫ ನೇಗೆ ಭಟಕಳ ಕಸಬೆಯ ದೇವಸ್ಥಾನದ ಸಭೆ ಸೇರಿತ್ತು. ಭಟಕಳ ಪೇಟೆಯ ಬಗ್ಗೆ ಒಂದು ಹರಿಜನ ಸಂಘ ಸ್ಥಾಪನೆಯಾಗಿದೆ. ಈ ಸಂಘಕ್ಕೆ ಹರಿಜನರೆಂತ ಹೇಳಿಸಿಕೊಳ್ಳುವವರೂ, ಹರಿಜನ ಕಾರ್ಯಕ್ಕೆ ಸಹಾನುಭೂತಿಯುಳ್ಳವರೂ ವರ್ಷಕ್ಕೆ ೪ ಆಣೆ ವರ್ಗಣಿ ಕೊಟ್ಟು ಸಭಾಸದರಾಗಬೇಕು. ಶ್ರೀ ... ಕರ್ನಾಟಕ ಹರಿಜನರಿಗೆ ... ಉದರ ಪ್ರಮುಖರು ಕಾರ್ಯದರ್ಶಿಗಳು ಇತ್ಯಾದಿ.

ಹಳಿಯಾಳ— (ತಾ. ೨೭-೭-೧೯೩೪) ಈಗ ೮-೧೦ ದಿವಸಗಳಿಂದ ಮಳೆಯಿಲ್ಲ. ರೈತರು ಮಳೆಯನ್ನೇ ನಿರೀಕ್ಷಿಸುತ್ತಿದ್ದಾರೆ. ಈ ಹಿಂದ ಬಿದ್ದ ಮಳೆ ಬ್ಯಾಸಾಯಕ್ಕೆ ಸರಿಯಾಗಿ ಬೀಳದೆ ಅನೇಕ ಭೂಮಿಗಳು ಬಂಜರು ಬಿದ್ದವು. ಕೆಲ ಭೂಮಿಗಳಲ್ಲಿ ಭತ್ತದ ಸಸಿ ಜೊತೆಗೆ ಹುಲ್ಲು ಹುಟ್ಟಿ ಗದ್ದೆ ಹಾಳು ಮಾಡುತ್ತಿದೆ. ಅವು ಸಹ ಬಂಜರ ಬಿದ್ದಂತೆಯೇ. ಸರಿ, ಕಳೆದ ವರ್ಷವೇ ಸ್ಥಿತಿ ಈ ವರ್ಷ ಬಂದಿಕ್ಕಿದೆ. ಬಂಜರು ಬಿದ್ದ ಭೂಮಿಗಳ ರೆವೆನ್ಯೂ ಸಹ ಹೋದ ವರ್ಷ ಪೂರ್ಣ ಸೂಟು ಕೊಟ್ಟಿದ್ದಿಲ್ಲ. ಸಕಾಲದಲ್ಲಿ ಸರಕಾರಕ್ಕೆ ಭೂಮಿ ಬಂಜರು ಬಿದ್ದ ಸಂಗತಿ ತಿಳಿಸಿದ್ದಿಲ್ಲವಂತೆ. ಈ ವರ್ಷವಾದರೂ ಜನರು ಜಾಗೃತರಾಗಿ ಸಕಾಲದಲ್ಲಿ ಅರ್ಜಿ ಮಾಡಿಕೊಂಡರೆ ತೀರ್ವೆ ಕಡಿತವಾಗಬಹುದು ... ತಪ್ಪೀತು.

ಕಾರವಾರ— (ತಾ. ೨೫-೭-೩೪) ಈದಿನ ಇಲ್ಲಿ 'ಜಿಲ್ಲಾ ಹರಿಜನ ಸಂಘ' ರಚನೆಯಾದ ಸಂಗತಿ ತಿಳಿದದ್ದರಿಂದ, ಈ ಮುಂಚೆ ಪ್ರಕಟವಾದಂತೆ, ಇಲ್ಲಿ ತಾ. ೨೩ ನೇಗೆ ಸಂಘ ಸ್ಥಾಪನೆಯ ಕುರಿತು ಸಭೆ ಸೇರಲಿಲ್ಲವಾಗಿ ಈ ತಾಲೂಕಿನ ಹರಿಜನ ಸೇವಕ ಸಂಘದ ಗೌ। ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇಲ್ಲಿಯ ಮ್ಯುನಿಸಿಪಾಲಿಟಿಯ ಚುನಾವಣೆಗೆ ರಾ। ಲಿಂಗಪ್ಪ ನಾಯಕ ಶಂಕರ ... ಇವರು ಉಮೇದವಾರರಾಗಿ ನಿಂತಿರುತ್ತಾರೆ. ಕೊಂಗ್ರೆಸ ಜನರಿಗೆ ಮಾತ ಕೊಟ್ಟು ಕಣದಿಂದ ... ಪ್ರತಿಸ್ಪರ್ಧಿ ಉಮೇದವಾರರಿಲ್ಲ ... ಸ್ಪರ್ಧೆ ಸಾಧಿಸಲಾರರೆಂದು ತಿಳಿಯುತ್ತದೆ. ಹೀಗೆ ... ರಾ। ಲಿಂಗಪ್ಪ ಹರಿಕಂತ್ರ ಇವರು ಬಹಳ ಜಾತಿಯಲ್ಲಿ ... ಕಾಂಗ್ರೆಸಿನ ಸೇವೆಯಿಂದ ಮ್ಯುನಿಸಿಪಾಲಿಟಿಯ ಸಭಾಸದರಾಗಲು ಅರ್ಹರಿದ್ದಾರೆ. ರಾಷ್ಟ್ರೀಯ ಪ್ರವೃತ್ತಿಯವರು ಇವರಿಗೇ ಮತ ಕೊಡಬೇಕಾಗಿ ನಾಗರಿಕರ ಸೂಚನೆ.

ಅಂಕೋಲಾ— 'ಇಲ್ಲಿಯ ಮೋಟರ ಸರ್ವಿಸ್ ... ಕಾರವಾರ ಫಸ್ಟ್ ಕ್ಲಾಸ ಕೋರ್ಟಿನಲ್ಲಿ ನಾಲ್ಕು ಅರ್ಜಿ ದಾಖಲು ಮಾಡಿರುತ್ತಾರೆ.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಮಾರುವದಿದೆ.

ಕ್ರಿಯಕ್ಕೆ ಕೊಡುವವರಿಗೆ ಸುಸಂಧಿ! ರೆಮಿಂಗ್ಟನ್ ಟೈಪರೈಟರ್ ನಂ ೧೦ ಚಲೋ ಸ್ಥಿತಿಯಲ್ಲಿದ್ದು ಉತ್ತಮ ಕೆಲಸ ಕೊಡುವಂಥ ಮಶೀನು ಮಾರತಕ್ಕದ್ದಿರುತ್ತದೆ. ವಿಶಯಸ ಇದ್ದವರು ಕೆಳಗೆ ಬರೆದ ಪತ್ತೆಗೆ ಪತ್ರವ್ಯವಹಾರ ಮಾಡಬಹುದು ಯಾ ಸಮಕ್ಷ ಭೆಟ್ಟಿಯಾಗಿ ಬೇಕಾದ ಮಾಹಿತಿ ಪಡೆಯಬಹುದು.

Mangesh Shivarao Muzumdar,
"Sunder Lodge" Kakarmath,
Po ANKOLA, Dt. N Kanara

ಸ್ಕೂಲ ಬೋರ್ಡು.

ಆಫೀಸ ಇಮಾರತಿನ ಚರ್ಚೆ

[ಕಳೆದ ೩೦ರ ಕಾರವಾರ ಸದರಿನಲ್ಲಿ ಪ್ರಕಟವಾದ 'ವಿನಾನಂದ ವಿಪ್ರ' ರ ಲೇಖಕ್ಕೆ ಕಾರಣವಾದದಿಂದ ರಾ। ಗಣಪತರಾವ ಬೈಂದೂರಕರವರು ತಾ. ೨೬-೭-೩೪ನೇಗೆ ಉತ್ತರ ಬರೆದು ಕಳಿಸಿರುತ್ತಾರೆ. ಆ ಪತ್ರವು ಇಂಗ್ಲಿಷಿನಲ್ಲಿದೆ. ಅದರ ಮುಖ್ಯಾಂಶ ಇದರಡಿ ಕನ್ನಡಿಸಲಾಗಿದೆ. ಈ ಪತ್ರದ ನಕಲನ್ನೊಂದು 'ವಿನಾನಂದ' ವಿಪ್ರರಿಗೆ ಕಳುಹಿ ಅವರಿಂದ ಬಂದ ಉತ್ತರ ಇದರಡಿ ಪ್ರಕಟಿಸಲ್ಪಟ್ಟಿದೆ. ಸಂ]

(೧)

ತಾ. ೨೨-೭-೩೪ನೇ 'ವೃತ್ತ'ದ ಸಂಚಿಕೆಯ ಸ್ಥಾನಿಕ ವೃತ್ತಾಂತದ ಕಾರವಾರ ಸದರಿನಲ್ಲಿ ಜಿಲ್ಲಾ ಸ್ಕೂಲ ಬೋರ್ಡಿನ ಆಡಳಿತೆಯನ್ನೂ, ಆಫೀಸಿಗಾಗಿ ಸಂಕಲ್ಪಿಸಿದ ಇಮಾರತನ್ನೂ ಟೀಕಿಸಿ ಒಂದು ಲೇಖ ಪ್ರಕಟವಾಗಿದೆ. ಆ ಲೇಖದೊಳಗಿನ ವಿಧಾನಗಳು ಸಂಪೂರ್ಣ ಸುಳ್ಳಿದ್ದು ದ್ವೇಷಭಾವದಿಂದ ಬರೆಯಲ್ಪಟ್ಟಿವೆ. ಮೇಲಾಗಿ ಕಾಲ್ಪನಿಕವಾದ ಉಪಯೋಗಿಸಿದ ವಿಧಾನಗಳಿಗೆ ಈ ಕೆಳಗಿನಂತೆ ಉತ್ತರವಿದೆ.

೧ನೇ ಆಕ್ಷೇಪ— ರೂ ೩೦೦೦ ದಷ್ಟು ಅಲ್ಪ ಕಿಮ್ಮತ್ತಿಗೆ ಇಮಾರತು ಕೊಡಮಾಡಿದಾಗ್ಯೂ ಕಷ್ಟ ವ್ಯಾಪಾರಿಯವರು ಅದನ್ನು ಕೊಳ್ಳಲೊಪ್ಪಿದ್ದಿಲ್ಲ. ಇದಕ್ಕೆ ಉತ್ತರ — ಕಸ್ಟಮ್ಸ ಖಾತೆಯವರು ಈ ಇಮಾರತು ಕೊಳ್ಳುವದಕ್ಕಾಗಿ ನನ್ನ ಕಡೆ ಎಂದೂ ಪ್ರಸ್ತಾಪಿಸಿದ್ದಿಲ್ಲ. ಅವರಿಗೆ ಕ್ರಯಕ್ಕೆ ಕೊಡಮಾಡಿದ್ದೂ ಇಲ್ಲ. ಪ್ರಕಟವಾದ ಸಂಗತಿ ನಿರಾಧಾರವಿದೆ.

೨ನೇ ಆಕ್ಷೇಪ— ಈ ಇಮಾರತು ಮಣ್ಣುಗೋಡೆಯದಾಗಿದ್ದು ಜೀರ್ಣ ಸ್ಥಿತಿಯಲ್ಲಿದೆ. ಇದಕ್ಕೆ ಉತ್ತರ — ಸ್ಕೂಲ ಬೋರ್ಡಿನವರೂ, ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರೂ ಈ ವಿಷಯ ಕೇಳಿದಾಗ ನಾನು ತಾ. ೧೭-೬-೧೯೩೪ನೇಗೆ ಪತ್ರ ಬರೆದು ತಿಳಿಸಿದ್ದೇನೆಂದರೆ — ಕೆಲ ಗೋಡೆಗಳು ಸಂಪೂರ್ಣವಾಗಿ ಕಲ್ಲುಗಳಿಂದ ಕಟ್ಟಿದ್ದಿವೆ, ಕೆಲ ಗೋಡೆಗಳು ಮಣ್ಣಿನವು, ಕಂಬಗಳೆಲ್ಲ ಕಲ್ಲಿನವು, ನೆಲಗಟ್ಟು ಸಂಪೂರ್ಣವಾಗಿ ಕರಿಕಲ್ಲಿನದು. ಈ ಇಮಾರತಿನ ಬದ್ರತೆ ನಿರ್ಣಯಿಸುವ ಅಧಿಕಾರ ಸ್ಕೂಲ ಬೋರ್ಡಿನದು. ಅವರು ವಿಚಾರಮಾಡಿ ಈ ರಕಮು ಮಂಜೂರ ಮಾಡಿರುತ್ತಾರೆ.

೩ನೇ ಆಕ್ಷೇಪ— ಮುಂಚೆ ರೂಪಾಯಿ ೯೦೦೦ ಕ್ಕೆ ಇಮಾರತು ಕೊಡಮಾಡಿತ್ತು, ಕೆಲ ಬಿಕ್ರೀನ ರಕಮು ಬಿಟ್ಟಿರುವದಾಗಿ ಹೇಳಿ ರಕಮು ರೂಪಾಯಿ ೧೦ ಸಾವಿರಕ್ಕೆ ಬೆಳೆಸಲಾಯಿತು. ಇದಕ್ಕೆ ಉತ್ತರ — ಈ ಇಮಾರತು ಮತ್ತು ಹಿತ್ತಲು ಸ್ಕೂಲ ಬೋರ್ಡಿಗೆ ಎಂದೂ ರೂ ೯೦೦೦ಕ್ಕೆ ಕೊಡಮಾಡಿದ್ದಿಲ್ಲ. ಈ ಕುರಿತು ಬರೆದದ್ದೆಲ್ಲ ಅಸಂಬದ್ಧವಿದೆ. ಸ್ಕೂಲ ಬೋರ್ಡಿನವರು ಇದನ್ನು ಕೂಡಲೆ ಅಲ್ಲಗಳೆಯುವರು. ಸತ್ಯಸ್ಥಿತಿಯೇನೆಂದರೆ - ಈ ಇಮಾರತು ರೂ ೧೫೦೦೦ಕ್ಕೆ ಕೊಡಮಾಡಿತ್ತು. ಚೆಂಬರ್ಸನ್‌ರ ಹೇಳಿಕೆಯಂತೆ ವ್ಯಾಪಾರ ಮಂದಿ ಹಾಗು ಜೀರ್ಣ ಸ್ಥಿತಿ (*trade depression and deteriora-tion*)ಗಳ ಮೂಲಕ ಶೇಕಡಾ ೧೦ರಂತೆ ಕಡಿಮೆ

ಮಾಡಲ್ಪಟ್ಟು, ರೂ ೧೦,೭೫೦ ರಕಮು ದರ್ಶ್ಯಾಸಿತ್ತು. ಈ ಆಸ್ತಿಯ ವರ್ಣನೆ— ೧೭ ಗುಂಟೆ ಕ್ಷೇತ್ರ, ಸಮುದ್ರ ದಂಡೆಗುಂಟ ಇರುವ ಇಮಾರತುಗಳ ಎರಡನೇ ಸಾಲಿನಲ್ಲಿದೆ ೨ ವಾಸ್ತವ್ಯದ ಮನೆಗಳೂ, ದೌಚಕೂಪಗಳ ಸಹಿತ ೫ ಉಪಗೃಹಗಳೂ, ೨ ಬಾವಿಗಳೂ ಇವೆ. ಸುತ್ತಲೂ ೫೦೦ ಅಡಿ ಪಾಗಾರು ಇದೆ ಮೇಲೆ ಕಾಯಿ ಹಿಡಿಯುವ ೩೩ ತೆಂಗಿನ ಮರಗಳೂ, ೪ ಕಲಮು ಮಾವಿನ ಮರಗಳೂ, ೧ ಚಿಕ್ಕುಮರವೂ ಇವೆ ಚಿಕ್ಕು ಮರದಿಂದ ಪ್ರತಿ ವರ್ಷ ೨೦೦೦ ಕಾಯಿ ಸಿಗುತ್ತವೆ ಈ ಯಾವತ್ತೂ ಆಸ್ತಿಗೆ ಕೂಡಿ ವಿಕ್ರಯ ಹೇಳಿದ್ದು, ಇಮಾರತಿಗೆ ಮಾತ್ರ ರೂ ೩೮೦೦ ಹಿಡಿದದೆ

೪ನೇ ಆಕ್ಷೇಪ— ಈಗ ಸ್ಕೂಲ ಬೋರ್ಡ ಆಫೀಸ ಇರುವ ಇಮಾರತು, ಪಕ್ಕಾ ಇಮಾರತ್ತಾಗಿದ್ದು ಚಿತಿದಮನ್‌ದವಕ್ಷಕ್ಕೆ ಅವರ ಮೇಲೆ ಪ್ರೀತಿ ಇಲ್ಲದ್ದರಿಂದ ಅದು ಬಿಟ್ಟಿದೆ. ಇದಕ್ಕೆ ಉತ್ತರ — ಯುಕ್ತ ಕಂಡ ಇಮಾರತನ್ನು ಕೊಳ್ಳಲು ಸ್ಕೂಲ ಬೋರ್ಡಿಗೆ ಸ್ವಾತಂತ್ರ್ಯವಿದೆ. ಈಗಿನ ಇಮಾರತನ್ನು ೧ ವರ್ಷದ ವರೆಗೆ ಉಪಯೋಗಿಸಿ ಅದನ್ನು ಬಿಟ್ಟು, ಬೇರೆ ಇಮಾರತು ಹಿಡಿಯ ಬೇಕಾದರೆ, ಆ ಇಮಾರತು ಅಯೋಗ್ಯವೆಂದು ತಾನೇ ಸಿದ್ಧವಾಗುತ್ತದೆ. ಸ್ಕೂಲ ಬೋರ್ಡಿನವರು ಯಾವತ್ತು ವಿಚಾರ ಮಾಡಿ ಬಹುಮತದಿಂದ ಈ ಇಮಾರತು ಕೊಳ್ಳುವ ನಿರ್ಣಯ ಮಾಡಿದ್ದರಿಂದ ಸದ್ಯ ಇಮಾರತು ಎಲ್ಲದರಿಗಿಂತಲೂ ಶ್ರೇಷ್ಠವೆಂದು ಸಿದ್ಧವಾಗುತ್ತದೆ ಚೇರಮನ್ ಪಕ್ಷದವರ ಪ್ರೀತಿಯಿಂದ ಸದ್ಯ ಇಮಾರತು ಕೊಳ್ಳುವ ನಿರ್ಣಯವಾಯಿತಾಗಿ ಲೇಖಕರ ಅಭಿಪ್ರಾಯವಿದ್ದರೆ, ಲೇಖಕರು ಆ ಪಕ್ಷದ ವಿರೋಧಕರೆಂದು ಸ್ಪಷ್ಟವಾಗುತ್ತದೆ ಇಂಥ ಅಭಿಪ್ರಾಯ ಪೂರ್ವಗ್ರಹ ದೂಷಿತವೆಂಬುದು ನಿರ್ವಿವಾದವು

(೨)

ಇದಕ್ಕೆ 'ಶಿವಾನಂದ ಶಿಷ್ಯ' ರು ಬರೆದ ಸವಿಸ್ತರ ಪತ್ರದ ತಾತ್ಪರ್ಯವೇನಂದರೆ—

ರಾ| ಗಣಪತರಾಯರು ಬರೆದ ಪತ್ರವನ್ನೋದಿದೆನು ಅವರು ಸ್ಕೂಲ ಬೋರ್ಡಿನ ವಕೀಲಿ ನಡಿಸುತ್ತಾರೆ ಆ ಕುರಿತು ಸ್ಕೂಲ ಬೋರ್ಡಿನಿಂದ ಉತ್ತರ ಬಂದ ಬಳಿಕ ಉತ್ತರ ಕೊಟ್ಟೇನು

೪ನೇ ಆಕ್ಷೇಪಕ್ಕೆ ಅವರು ಕೊಟ್ಟ ಉತ್ತರ ತೀರ ಹಾಸ್ಯಾಸ್ಪದವಿದೆ ಸ್ಕೂಲ ಬೋರ್ಡಿನವರು ಏನೂ ಮಾಡಿದಾಗ್ಯೂ ಅದಕ್ಕೆ ಆಕ್ಷೇಪ ಮಾಡಲು ಯಾರಿಗೂ ಅಧಿಕಾರವಿಲ್ಲವೆಂಬ ಅವರ ತತ್ವವನ್ನು ಯಾರೂ ಒಪ್ಪರು ಅವರು ಮೊಳ್ಕಂಡ ಆಸ್ತಿಯನ್ನು ಕಸ್ತನ್ನು ಬಾತಿಯವರಿಗೆ ರೂ. ೫೦೦೦ಕ್ಕೆ ಕೊಡಲಾಡಿದ್ದಿಲ್ಲವೆಂಬ ಸಂಗತಿ ನಿಜವೆಂದು ನಾನು ಒಪ್ಪುತ್ತೇನೆ. ತನ್ನನ್ನು ಬಾತಿಯವರು ಹೊನ್ನಾವರದಲ್ಲಿ ಒಂದು ಇಮಾರತನ್ನು ಕೊಳ್ಳಮಾಡಿದ್ದರು; ಅದು ಮಣ್ಣು ಗೋಡೆಯದೆಂತ ಬಿಟ್ಟರು; ಎಂಬುದೊಂದು ವಾರ್ತೆ ಕೇಳಿದ್ದೆ ಮುಕ್ಕಾಮಿನ ಭೇದ ತಿಳಿಯದೆ ಹಾಗೆ ಬರದುಹೋಯಿತು ಅದರೆ, ಮುದುಕರು ತಮ್ಮ ಜಾಹೀರಾತನ್ನು ಮಾತ್ರ ಸಂಪೂರ್ಣವಾಗಿ ಮರತಂತೆ ತೋರುತ್ತದೆ! ಆ ಜಾಹೀರಾತನ್ನು ಈ ಕೆಳಗೆ ಕೊಟ್ಟುಬಿಡುತ್ತೇನೆ ಅದರ ಮೇಲಿಂದ ತಪ್ಪು ಆಧಾರವಿತ್ತೋ ಇಲ್ಲವೋ? ಎಂಬ ಸಂಗತಿ ತಿಳಿಯಬಹುದು. ಈ ಜಾಹೀರಾತಿನ ಮಜಕೂರವನ್ನು ಇಂಗ್ಲಿಷಿನಲ್ಲೇ ಪ್ರಕಟಿಸಬೇಕಾಗಿ ವಿನಂತಿ. ಈ ಜಾಹೀರಾತಿಯಲ್ಲಿ ವರ್ಣಿಸಿದ 'ಸುಂದರ ಲಾಜ್' ಆಸ್ತಿಯೇ ಈಗ ಸ್ಕೂಲ ಬೋರ್ಡಿಗೆ ಕೊಡಲ್ಪಟ್ಟಿದ್ದು, ಇದನ್ನು ಕಟ್ಟಿಸಿದ್ದು ೧೯೦೭ರಲ್ಲಿ. ತಾ ೧೬-೬-೧೯೧೫ನೇದಕ್ಕೆ ಜಾಹೀರಾತು ಹೊರಡಿಸಿ ರೂ ೫೭೭೫ಕ್ಕೆ ಈ ಆಸ್ತಿಯನ್ನು ಅವರು ಮಾರಬಯಸಿದ್ದರು ಆಗಿನ ಆಸ್ತಿಯ ವರ್ಣನೆ ಈಗಿನ ಆಸ್ತಿಯ ವರ್ಣನೆಗಿಂತ ನಯನಮನೋಹರವಿದೆ 'ಎರಡು ಕೌಟ ಕೂಪಗಳಿವೆ, ೩೦ ತೆಂಗಿನ ಮರಗಳಿವೆ, ಅನೇಕ ಕಲಮು ಮಾವಿನ ಮರಗಳಿವೆ, ಎರಡು ಚಿಕ್ಕು ಮರಗಳಿವೆ, ತರತರದ ಹಣ್ಣು-ಹಂಪಲಗಳ ಗಿಡಗಳಿವೆ, ಆಸ್ತಿಯಿದ್ದ ಸ್ಥಳ ಯುರೋಪಿಯನ್‌ರಿಗೂ, ಹಿಂದೀಯರಿಗೂ ಪ್ರಶಸ್ತವಾದದ್ದು ಬೇಕಾದವರು ಸಪ್ಟಂಬರ ೩೦ನೇ ತಾರೀಖಿನೊಳಗಾಗಿ ಬರೆದುಕೊಳ್ಳಬೇಕು." ಇತ್ಯಾದಿ ವರ್ಣನೆ ಮಾಡಿದ್ದರು ೧೯೧೫ನೇ ಇಸ್ವಿಗಿಂತ ೧೯೧೪ನೇ ಇಸ್ವಿಯಲ್ಲಿ ಇಮಾರತು ಮತ್ತೂ ಪಕ್ವವಾಯಿತೋ. ಜೀರ್ಣವಾಯಿತೋ? ಕೆಲ ಗೋಡೆಗಳು ಮಣ್ಣಿನವೆಂದು ರಾ| ಬೈಂದೂರರೇ ಒಪ್ಪುತ್ತಾರೆ, ಇಂದ ಬಳಿಕ ನಾನು ಮತ್ತೇನು ಹೇಳುವದು? ಸ್ಕೂಲ ಬೋರ್ಡಿಗೆ ಇಮಾರತು ಮಾತ್ರ ಬೇಕಲ್ಲದೆ, ಹಿತ್ತಲು-ತೆಂಗಿನಮರ, ಮಾವಿನ ಮರ ಚಿಕ್ಕು ಗಿಡ ಇವುಗಳ ಗೊಡವೆ ಏಕೆ? ಇವುಗಳ ಉಸಾಬರಿ ಮಾಡುವವರ್ಯಾರು? ಆಸ್ತಿ ಮಾಡಲಿಕ್ಕೆ ಸ್ಕೂಲ ಬೋರ್ಡಿನ ಸ್ಥಾಪನೆಯಾಗಿಲ್ಲ. ಇದನ್ನು ರಾ| ಬೈಂದೂರರು ಹ್ಯಾಗೆ ಮರೆಯುತ್ತಾರ?

ಒಂದು ಮಾತನ್ನು ರಾ| ಬೈಂದೂರರು ಹೇಳುವರು 'ಸುಂದರ ಲಾಜ್'ನ ಒಂದು ಪಾರ್ಶ್ವದಲ್ಲಿ ಸ್ಕೂಲ ಬೋರ್ಡಿನ ವ್ಹಾಯ್ಸ್ ಚೇರಮನ್‌ರ ವಾಸ್ತವ್ಯವಿದ್ದು ಅವರಿಗೆ ತಮ್ಮ ಇಮಾರತಿನ ಯಾವತ್ತು ಸಂಗತಿ ಗೊತ್ತಿದೆ. ಸ್ಕೂಲ ಬೋರ್ಡ ಕಚೇರಿಗೆ ಈಗಿನ ಇಮಾರತಿಗಿಂತ 'ಸುಂದರ ಲಾಜ್' ಹೆಚ್ಚಿನ ಅನುಕೂಲತೆಯದೆಂದು ಅವರು ತಮ್ಮ ಸ್ವಾನುಭವ ಹೇಳಬಹುದು. ಹೀಗೆ ತರ್ಕಿಸಿದ್ದರೆ ನಾನು ನಿರುಪಾಯನಾಗಿದ್ದೆ. ಇತ್ಯಾದಿ

(೩)

ಜಾಹೀರಾತು

A Rare Opportunity !

Very Valuable Property

Offered for sale !!

The plot measuring ½ acre situated in the 2nd line near the seabeach Karwar with 'Sunder Lodge', and the cottage the two buildings with their compound containing 30 cocoanut trees and several grafted mango trees, and other useful fruit-yielding trees, 2 chiku grafts and 2 latrines The best in Karwar

The cost of the whole property is Rs. 5775/–

T[illegible] be liked by both Europeans and Indians

Intending purchasers are requested to send in their offers to the undersigned. Offers will be received *till 30th September next*

Bombay, 16-6-1915

Baindur Ganapatrao,
Head Clerk,
Crown side,
H M High Court, Bombay

ಮಾರುವದಿದೆ!

ಕುಮಟಾ ಕಸಬಯೊಳಗಿನ ಒಳ್ಳೇ ಕೇರಿಯಲ್ಲಿರುವ ಮನೆ ಕಂಪೌಂಡ ಸಹಿತ ಮಾರಾಟ ಮಾಡತಕ್ಕದ್ದವ ಮನೆ ಹತ್ತು ಅರ್ಧ ಎಕ್ರೆ ಇರುತ್ತದೆ ಮನೆ ಇಮಾರತು ಭವ್ಯವಾದದ್ದಿರುತ್ತದೆ ಖಾಯಿಸ ಇದ್ದವರು ಬಾಕಿ ವಿವರಗಳ ಬಗ್ಗೆ ಈ ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳತಕ್ಕದ್ದು.

ಕುಮಟಾ ೨೯-೭-೧೫ | X c/o M P DIVGI, LL B PLEADER, KUMTA

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ನಿಯಮಗಳೂ ಬಹಳ ಸೋಯಿದ್ದವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಕಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರವಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents – D.K NAYAK Bros
Honnavar Agent - R V PRABHU Esq

K. PadmanabhaRao & Sons.,
BELGAUM
Chief Agents for
Karnatak Districts & S M States

'ಕಲ್ಪಿತ ಕಳವಿನ ಕಥೆ'

ಸುಳ್ಳು ಫಿರ್ಯಾದಿಯ ಬಗ್ಗೆ

ರೂ ೫೦೦ರ ದಾವೆ

ಕಳೆದ ಜನವರಿ ತಿಂಗಳಲ್ಲಿ ಕುಮಟಾದ ಕೋರ್ಟಿನಲ್ಲಿ ಒಂದು ದಾವೆಯು ಇತ್ಯರ್ಥವಾಯಿತು. ವಾದಿ ಅನಂತ ಮಂಗೇಶ ಭಟ್ಟ ಸಾ|| ಭಟಕಳ ಇವರ ಮೇಲೆ ಯೋಗ್ಯ ಕಾರಣವಿಲ್ಲದೆ ಕಳವಿನ ಖಟ್ಲೆ ಹಾಕಿ, ಅವರಿಗೆ ಶಾರೀರಿಕ ಮಾನಸಿಕ ಯಾತನೆ ಕೊಟ್ಟ ಬಗ್ಗೆ ಪ್ರತಿವಾದಿಯಾದ (೧) ರಾಮರಾವ ಮಂಗೇಶರಾವ್ [illegible] (೨) ಕಲ್ಯಾಣಿಬಾಯಿ ಕೋಂ ರಾಮರಾವ ಸಾ|| ಭಟಕಳ ಇವರು ವಾದಿಗೆ ರೂ ೫೦೦ ಲುಕ್ಸಾನು ತೆರಬೇಕೆಂದು ಕೋರ್ಟಿನ ಹುಕುಮಾಗಿರುತ್ತದೆ. (೩)ನೇ ಪ್ರತಿವಾದಿ ಗಿರಿಜಾಬಾಯಿ ಕೋಂ ನಾರಾಯಣ ಇವರ ಮೇಲೆ ಡಿಕ್ರಿಯಾಗಿಲ್ಲ.

ಸದರಿ ದಾವೆಗೆ ಕಾರಣವಾದ ಕಳವಿನ ಖಟ್ಲೆಯ ಹಕೀಕತು ಬೋಧಪ್ರದವಾಗಿರುವದರಿಂದ ಅದರ ಸಾರಾಂಶವನ್ನು ನಾವು ಈ ಕೆಳಗೆ ವಿವರಿಸಿದ್ದೇವೆ.

ಭಟಕಳದಲ್ಲಿ ಸಾಗರದ ದೇವಸ್ಥಾನವೆಂಬ ದೇವಸ್ಥಾನವಿದೆ. ವಾದಿ ಅನಂತ ಭಟ್ಟರ ತಂದೆಯವರು ಆ ದೇವಸ್ಥಾನದ ಅರ್ಚಕರು. ವಿದ್ವಾಂಸ ಸರಸ್ವತೀಬಾಯಿ ಎಂಬುವರು ಸದ್ರಿ ದೇವಸ್ಥಾನದಲ್ಲಿ ವಾಸ್ತವ್ಯ ಮಾಡಿಕೊಂಡಿದ್ದು ದಿವ್ಯ ದೇವತಾ ಉಪಾಸನೆಗಳ ಶಕ್ತಿಯಿಂದ 'ಸಂತಿಣೀ' ಎಂದು ಖ್ಯಾತಿ ಹೊಂದಿರುತ್ತಾರೆ. ಸರಸ್ವತೀಬಾಯಿಯವರ ಶಿಷ್ಯ ವೃಂದವು ದೊಡ್ಡದು. ಅನೇಕ ಸ್ತ್ರೀ ಪುರುಷರು ಅವರ ಶಿಷ್ಯವರ್ಗದಲ್ಲಿ ಸೇರಿರುತ್ತಾರೆ. ನಾಗರದ ದೇವಸ್ಥಾನದ ಸಂಪೂರ್ಣ ಆಡಳಿತವು ಅವರಿಗೆ ಒಪ್ಪಿಸಲ್ಪಟ್ಟಿದೆಂದು ಸರಸ್ವತೀಬಾಯಿಯವರ ಅಂಬೋಣವಾದರೆ ಅರ್ಚಕರು ಆ ಅಧಿಕಾರವನ್ನು ಒಪ್ಪಿಗೆಯಿಸುತ್ತಿರಲಿಲ್ಲ. ಅರ್ಚಕರಿಗೂ ಸರಸ್ವತೀಬಾಯಿಯವರ ಶಿಷ್ಯವರ್ಗದವರಿಗೂ ಜಗಳವಿತ್ತು. ಸ್ವಾಮಿ ಸೇವೆ ಮಾಡುವ ಶಿಷ್ಯ ವರ್ಗದ ಜನ ಪ್ರತಿವಾದಿ ಸರಸ್ವತೀಬಾಯಿಯವರ ಪಕ್ಷಗಾರರು ಒಬ್ಬರಾಗಿರುತ್ತಾರಂತೆ. ಅವರು ಸಹ ಸರಸ್ವತೀಬಾಯಿಯವರ ಕೂಡ ದೇವಸ್ಥಾನದಲ್ಲೇ ಇರುತ್ತಾರೆ.

೧೯೪೩ನೇ ಇಸ್ವಿಯ ಮಾರ್ಚ ತಿಂಗಳಲ್ಲಿ ಸದರಿ ದೇವಸ್ಥಾನದಲ್ಲಿ ದತ್ತ ಜಯಂತೀ ಉತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ದಿನಾಂಕ ೧೦ ತಾರೀಖು ಜಯಂತಿಯ ದಿನ! ಆ ದಿನ ರಾತ್ರಿ ದೇವರ ಎದುರು 'ಪುಂಡಲೀಕ' ನಾಟಕದ ಪ್ರಯೋಗವಾಯಿತು. ಉತ್ಸವಕ್ಕೂ, ನಾಟಕಕ್ಕೂ ಬಹಳ ಜನ ಕೂಡಿದ್ದರು. ಎರಡನೇ ಪ್ರತಿವಾದಿ ಕಲ್ಯಾಣಿಬಾಯಿಯ ಮಗಳಾದ ರುಕ್ಮಿಣಿಬಾಯಿ ಎಂಬುವಳು ಜನರ ಗಲಾಟೆ ಸಾಕು ಸಾಕಾಗಿ, ಪಾದಿಯ ಮನೆಯ ಜಗಲಿಯ ಮೇಲೆ ಹೋಗಿ ಮಲಗಿದಳು. ಮಲಗುವಾಗ ಕೊರಳಲ್ಲಿ ಒಂದು ಚಿನ್ನದ ಸರವಿತ್ತು. ಮರುದಿವಸ ಬೆಳಿಗ್ಗೆ ಏಳುವಾಗ ಸರ ಕಾಣಲಿಲ್ಲ! ೧-೨ನೇ ಪ್ರತಿವಾದಿಗೆ ಆ ಸುದ್ದಿ ತಿಳಿಯಿತು. ಅವರು ಅದನ್ನು ಹೊರಗೆಡಹಲಿಲ್ಲ! ಜಯಂತ್ಯುತ್ಸವಕ್ಕೆ ನೆರೆದ ಜನರಲ್ಲಿ ವಿನಾಕಾರಣ ಕ್ಷೋಭವುಂಟಾಗುವದೆಂಬ ಭೀತಿಯಿಂದ ಆ ಸುದ್ದಿಯನ್ನು ಗುಪ್ತವಾಗಿಟ್ಟರಂತೆ! ತಾ ೨೫, ೨೬ ಹೀಗೆ ಎರಡು ದಿನಗಳು ಕಳೆದವು! ೨೭ರಂದು ಶಿಕ್ಷೆಗೆ ವಾದಿ ಅನಂತ ಭಟ್ಟರು ಮರುದಿವಸ ಕಾರವಾರದಲ್ಲಿ ಕೂಡಲಿಕ್ಕಿದ್ದ "ಕರ್ನಾಟಕ ಸಾಹಿತ್ಯ ಪರಿಷತ್ತಿ"ಗೆ ಹೋಗಲು ಸಿದ್ಧರಾದರು. ಕೂಡಲೇ ವಸತಿ ಹಿಡಿಯುವ ಮುಂಚೆ ೧ನೇ ಪ್ರತಿವಾದಿ ರಾಮರಾಯರು ಪೋಲೀಸರಿಗೆ ಕಳವಿನ ವರ್ತಮಾನ ಕೊಟ್ಟು, ಅವರ ಕಡೆಯಿಂದ ವಾದಿ ಅನಂತ ಭಟ್ಟರ ಮನೆ

ಶೋಧಿಸಿದರು. ಝಡ್ತಿಯಲ್ಲಿ ಏನೂ ಸಿಗಲಿಲ್ಲ. ಅನಂತ ಭಟ್ಟರು ಕಾರವಾರಕ್ಕೆ ಹೋದರು. ನಾಟಕದಲ್ಲಿ ಸ್ತ್ರೀ ವೇಷ ಮಾಡಿದ ಅಗ್ನಿ ಎಂಬುವ್ಯಕ್ತಿಯನ್ನೂ ಝಡ್ತಿ ಮಾಡಲಾಯಿತು. ಅಲ್ಲೂ ಕಳವಿನ ವಸ್ತುವು ಸಿಗಲಿಲ್ಲ. ಅನಂತ ಭಟ್ಟರ ಸಹೋದರರಾದ ರಾಮಕೃಷ್ಣ ಭಟ್ಟರು ಬೈಂದೂರಿಗೆ ಹೋಗುತ್ತಿದ್ದರು. ಅವರಿಗೆ ಹಾದಿಯ ಮೇಲೇ ಹಿಡಿದು ಪೋಲೀಸ ಕಚೇರಿಗೆ ಒಯ್ದರು. ಸ್ಟೇಶನದಾರರು ಆಗ ಗುಪ್ತ ಜಾಗೆಯ ಶೋಧಕ್ಕೆಂದು ದೇವಸ್ಥಾನಕ್ಕೆ ಹೋಗಿದ್ದರು. ಅವರು ಬಂದು ೯|| ಘಂಟೆಗೆ ರಾಮಕೃಷ್ಣ ಭಟ್ಟರಿಗೆ ಬಿಟ್ಟು ಕೊಟ್ಟರು. ಅದೇ ೧೦ ಘಂಟೆಗೆ ರಾಮಕೃಷ್ಣ ಭಟ್ಟರು ಕಳವಿಗೆ ಹೋದ ಸರವನ್ನು ರುಕ್ಮಿಣಿಬಾಯಿಯ ಬಿಡಾರದಲ್ಲಿ ರುಕ್ಮಿಣಿಬಾಯಿಯು ತಲೆಗಿಂಬಿನಡಿಗೆ ಚೆಲ್ಲಿ ನಡೆದರೆಂತ ಪೊಲೀಸ ವರ್ತಮಾನ ಬಂತು! ಇದೇ ಎಂತ ಪಂಚನಾಮೆಗಳಾದವು! ದೇವಸ್ಥಾನದ ಹಿಂಬದಿಗೆ ಒಂದು ಕೊಂಡವನ್ನು ಕೆದರಿ, "ಕ್ಲಿ" ಬ್ಯಾಂಡ್ಸ್ ಸರಗಳನ್ನು ತೆಗೆದುಕೊಂಡು ಹಿಂಬದಿಯ ಬಾಗಿಲಿನಿಂದ ಒಳಗೆ ನಡೆದು ರುಕ್ಮಿಣಿಬಾಯಿಯು ಹಾಸಿಗೆಯ ಮೇಲೆ ಸರಗಳನ್ನು ಬೀಸಾಟಿ ರಾಮಕೃಷ್ಣ ಭಟ್ಟರು ಓಡಿಹೋದರಾಗಿ ಹೇಳಲಾಯಿತು. ಅದರಂತೆ ಹೊಂಡದ ಪಂಚನಾಮೆ ಬರೆಯಲಾಯಿತು. ಪುನಃ ಪೋಲೀಸರ ತಪಾಸು ನಡೆದು ಯಾವುದೂ ಇಲ್ಲ ಎಂದಾಗ ರಾಮಕೃಷ್ಣ ಭಟ್ಟರು ಸರ ಹಿಡಿಯಲ್ಪಟ್ಟರು. ಭಟಕಳ ಪೇಟೆ ಮಹಾಲಕರಿಗೂ ಸಿ. ಸಾಡಕರ್ಣಿಯವರ ಎದುರು ಖಟ್ಲೆ ನಡೆಯಿತು. ಜನವರಿ ತಾ ೯ಕ್ಕೆ ರಾಮಕೃಷ್ಣ ಭಟ್ಟರ ಮೇಲೆ ಚಾರ್ಜ ಸಹ ಇಡಲ್ಪಟ್ಟಿತು.

ಪೋಲೀಸರ ಮೂಲ ಚಾರ್ಜಿನಲ್ಲಿ ಅನಂತ ಭಟ್ಟರ ಮೇಲಾಗಲಿ ಅಪ್ಪಣ್ಣ ಭಟ್ಟರ ಮೇಲಾಗಲಿ ಗುಪ್ತಿಯ ಪ್ರಮಾಣವಾಗಿ ಶಕ್ಯವೆಂದು ತಿಳಿದುಬಂದಿದ್ದಿಲ್ಲ. ಇದ್ದರಿಂದ ಅವರ ಮೇಲೆ ಪೋಲೀಸರು ಖಟ್ಲೆ ಮಾಡಿದ್ದಿಲ್ಲ. ಜನವರಿ ತಾ ೯ಕ್ಕೆ ಮೆಜಿಸ್ಟ್ರೇಟರ ಮುಂದೆ ಬಂದಾಗ ಪ್ರಾ| ರಾಮರಾಯರೂ ಪ್ರಾ| ಕಲ್ಯಾಣಿಬಾಯಿಯೂ ಅನಂತ ಭಟ್ಟ ಹಾಗೂ ಅಪ್ಪಣ್ಣ ಭಟ್ಟರ ಮೇಲೆ ಸ್ಪೆಶಲ ಕಳ್ಳರೆಂದು ಆಪಾದಿಸಿ ಕೇಸು ಆಗ ಪೋಲೀಸರು ಅವರ ಮೇಲೂ ಖಟ್ಲೆ ಮಾಡಬೇಕೆಂದು ಅರ್ಜಿ ಮಾಡಿದರು. ಮೆಜಿಸ್ಟ್ರೇಟರು ಸಹ ಅದಕ್ಕೆ ಒಪ್ಪಿ ಕೂಡಲೆ ವಾರಂಟುಗಳನ್ನು ಕೊಟ್ಟರು! ಪೋಲೀಸರು ಅನಂತ ಭಟ್ಟರಿಗೆ ಕೈಕೋಳ ಹಾಕಿದರು, ಕೈಗಳಿಗೆ ಬೇಡಿ ಹಾಕಿ, ಸೊಂಟಕ್ಕೆ ಹಗ್ಗ ಕಟ್ಟಿ ಅವರನ್ನು ಪೇಟೆಯೊಳಗಿಂದಲೂ ಸರಸ್ವತೀ ಜಾತ್ರೆಯವರ ಕೇರಿಯೊಳಗಿಂದಲೂ ಮೆರೆಸಿದರು! ಮೆಜಿಸ್ಟ್ರೇಟರಾದ ಮಿ. ನಾಡಕರ್ಣಿಯವರು ಅನಂತಭಟ್ಟರಿಗೆ ಜಾಮೀನಿನ ಮೇಲೆ ಬಿಡಕೊಡಲಿಲ್ಲ! ಭಟ್ಟರು ಸೆಶನ್ಸ ಕೋರ್ಟಿಗೆ ಅಪೀಲು ಮಾಡಿ, ಅಲ್ಲಿಂದ ಜಾಮೀನ ಮೇಲೆ ತಮ್ಮ ಬಿಡುಗಡೆ ಮಾಡಿಕೊಂಡರು. ಅಂತು ಎಂಟು ದಿವಸ ಅವರಿಗೆ ಪೋಲೀಸ ಠಾಣೆಗಳ ಠಾಣೆ ಲಾಕ್ ಅಪ್ (Lock up) ಕೊಳ್ಳಬೇಕಾಯಿತು! ಅನಂತ ಭಟ್ಟರು ಅಷ್ಟಕ್ಕೇ ತಡೆಯಲಿಲ್ಲ. ಮಿ| ನಾಡಕರ್ಣಿಯವರು ಸರಸ್ವತೀಬಾಯಿಯವರ ಪಕ್ಷಪಾತವರೆಂತಲೂ ತಮಗೆ ನ್ಯಾಯ ದೊರಕಲಿಕ್ಕಿಲ್ಲವೆಂತಲೂ ಕಾರಣಗಳನ್ನು ತೋರಿಸಿ ತಮ್ಮ ಮೇಲಿನ ಖಟ್ಲೆಯನ್ನು ಬೇರೆ ಕೋರ್ಟಿಗೆ ವರ್ಗ ಮಾಡಬೇಕಾಗಿ ಡಿ|| ಮೆಜಿಸ್ಟ್ರೇಟರಿಗೆ ಮನವಿ ಮಾಡಿದರು. ಖಟ್ಲೆ ವಿಚಾರಕ್ಕೆ ಸ್ವೀಕಾರ ಆಗುವ ಮುಂಚೆಯಾಗಿಯೇ "ಅನಂತ ಭಟ್ಟರು ಗುಪ್ತಿಯಲ್ಲಿ ಶಾಮೀಲ ಇದ್ದರೆಂಬ ಬಗ್ಗೆ ಸಾಕಷ್ಟು ಪುರಾವೆಯಿದೆ" ಎಂದು ಮೆಜಿಸ್ಟ್ರೇಟ ಮಿ| ನಾಡಕರ್ಣಿಯವರು ಬರೆದದ್ದು ನೋಡಿ ಆ ಕಾಲದ ಡಿ|| ಮೆಜಿಸ್ಟ್ರೇಟರಾದ ಮಿ|| ಶ್ರೀಯುತರು ಇದೇ ಖಟ್ಲೆಯನ್ನು ಕುಮಟೆಯ ರೆಸಿಡೆಂಟ ಮೆಜಿಸ್ಟ್ರೇಟರ ಕಡೆಗೆ ವರ್ಗ ಮಾಡಿದರು.

ಮುಂದೆ ಕ್ರಮದಂತೆ ಖಟ್ಲೆ ನಡೆಯಿತು. ಇದು ಪೋಲೀಸ ಖಟ್ಲೆಯಾಗಿದ್ದಾಗ್ಯೂ, ಪ್ರತಿವಾದಿ ರಾಮರಾಯರೂ ಅವರ ಸಂಗಡಿಗರೂ ತಮ್ಮ ಪರವಾಗಿ ವಕೀಲರನ್ನು ಕೊಟ್ಟು ಖಟ್ಲೆಯನ್ನು ತಾವೇ ಸ್ವತಃ ನಡಿಸಿದರಂತೆ! ಫಿರ್ಯಾದಿ ಪರವಾಗಿ ರಾಮರಾಯ, ಕಲ್ಯಾಣಿಬಾಯಿ, ಗಿರಿಜಾಬಾಯಿ, ರಘುವೀರ, ಸುಬ್ರಾಯ ಶಾಂತಪ್ಪ ವಗೈರೆ ಜನರ ಸಾಕ್ಷಿಗಳಾದವು. ಮೆಜಿಸ್ಟ್ರೇಟರಾದ ಮಿ| ಹೆಮ್ಮನವರ ಇವರು ಫಿರ್ಯಾದಿಯ ಪುರಾವೆಯನ್ನು ನಂಬಲಿಲ್ಲ. (೧) ರುಕ್ಮಿಣೀಬಾಯಿಯ ಸರವು ಕಳವಿಗೆ ಹೋದದ್ದು ನಿಜವೋ? (೨) ಆರೋಪಿಗಳು ಆ ಸರವನ್ನು ಕದ್ದರೆಂದು ಪುರಾವೆಯಿಂದ ಸಿದ್ಧವಾಗುತ್ತದೋ? ಹೀಗೆ ಮೆಜಿಸ್ಟ್ರೇಟರು ಎರಡು ಮುದ್ದೆಗಳನ್ನು ಪರ್ಯಾಲೋಚಿಸಿ, ಕಳವಾದದ್ದೆಂಬುದೇ ತಮಗೆ ಖಾತ್ರಿಯಾಗಲಿಲ್ಲವೆಂತಲೂ ಆರೋಪಿಗಳು ಕಳವು ಮಾಡಿದರೆಂಬ ಪುರಾವೆಯಾಗಿಲ್ಲವೆಂತಲೂ, ನಿರ್ಣಯ ಮಾಡಿ, ಆರೋಪಿಗಳ ಮೇಲೆ ಆರೋಪ ಸಹ ಹೊರಿಸದೇ ಅವರಿಗೆ ಬಿಟ್ಟುಕೊಟ್ಟರು.

ಗುಪ್ತಿಯಾದದ್ದೆಂಬ ದಿನ ಇಡೀ ರಾತ್ರಿ ದೇವಸ್ಥಾನದಲ್ಲೂ ಅರ್ಚಕರ ಜಗಲಿಯ ಮೇಲೂ ದೀಪಗಳು ಉರಿಯುತ್ತಿದ್ದವು. ರಾತ್ರಿ ೩ ಘಂಟೆ ತನಕ ರುಕ್ಮಿಣಿಬಾಯಿಯು ಮಲಗಿದ ಜಾಗೆಯ ಸಮೀಪ ಜನರು ತಿರುಗಾಡುತ್ತಿದ್ದರು. ೫ ಘಂಟೆಗೆ ಅನಂತ ಭಟ್ಟರ ತಂದೆ ತಾಯಿಗಳು ಜಗಲಿಯ ಬಾಗಿಲುಗಳನ್ನು ಇಕ್ಕಿ ಮಲಗಲಿಕ್ಕೆ ಮನೆಯೊಳಗೆ ಹೋದರು. ಹೀಗೆ ಕಲ್ಯಾಣಿಬಾಯಿಯೇ ತಮ್ಮ ಜಬಾನಿಯಲ್ಲಿ ಹೇಳುತ್ತಿರುವದರಿಂದ, ಮೆಜಿಸ್ಟ್ರೇಟರು, ೫ ಘಂಟೆಯ ಪೂರ್ವದಲ್ಲಿ ಕಳವು ಮಾಡುವ ಸಂಭವವು ಇಲ್ಲವೆಂತಲೂ ಆ ಮೇಲೆ ಮನೆಯ ಹೊರಗೆ ದೇವಸ್ಥಾನದಲ್ಲಿದ್ದ ಆರೋಪಿತರು ಕಳವು ಮಾಡುವದು ಅಶಕ್ಯವೆಂತಲೂ ಅಭಿಪ್ರಾಯಪಟ್ಟಿರುತ್ತಾರೆ. ಅನಂತ ಭಟ್ಟ ಮತ್ತು ಅಪ್ಪಣ್ಣ ಭಟ್ಟರ ವಿರುದ್ಧ "ಎಳ್ಳಷ್ಟು ಸಹ ಪುರಾವೆಯಿಲ್ಲ"ವಾಗಿ ಅವರು ಬರೆದಿರುತ್ತಾರೆ. ಸಾಕ್ಷಿಗಾರರ ಪುರಾವೆ ನೋಡಿದರೆ ಒಂದಕ್ಕೊಂದು ಮೇಳವಿಲ್ಲ! ಒಂದೇ ಸಾಕ್ಷಿಗಾರನು ಬಟಕಳ ಮೆಜಿಸ್ಟ್ರೇಟರ ಮುಂದೆ ಒಂದು ಹೇಳಿದರೆ, ಕುಮಟೆಯ ಮೆಜಿಸ್ಟ್ರೇಟರ ಮುಂದೆ ಇನ್ನೊಂದು ಹೇಳುತ್ತಾನೆ. ಇಂಥ ಸಾಕ್ಷಿ-ಪುರಾವೆಯನ್ನು ಮೆಜಿಸ್ಟ್ರೇಟರು ಹೇಗೆ ನಂಬುವರು? ಅಂತೂ ಕೊನೆಗೆ ಆರೋಪಿತರು ನಿರ್ದೋಷಿಗಳೆಂದು ನಿರ್ಣಯವಾಯಿತು!

ಮೇಲೆ ಹೇಳಿದಂತೆ ತಮ್ಮ ಮೇಲೆ ಸುಳ್ಳು ಆರೋಪ ಹೊರಿಸಿ ತಮ್ಮ ಮೇಲೆ ಪ್ರತಿವಾದಿಗಳು ಖಟ್ಲೆ ಮಾಡಿಸಿದರೆಂತಲೂ, ಸರಸ್ವತೀಬಾಯಿಯವರೂ ಮೆಜಿಸ್ಟ್ರೇಟ ಮಿ|| ನಾಡಕರ್ಣಿಯವರೂ ಸಂಗನಮತ ಮಾಡಿ ತಮ್ಮ ಮೇಲೆ ಖಟ್ಲೆ ಮಾಡಿಸಲಿಕ್ಕೆ ಪ್ರೋತ್ಸಾಹಿಸಿದರೆಂತಲೂ ವಾದಿ ಅನಂತ ಭಟ್ಟರ ತಕ್ರಾರು ಇರುತ್ತದೆ. ಅನಂತ ಭಟ್ಟರಿಗೆ ಖಟ್ಲೆಯ ಕೆಲಸಕ್ಕೆ ರೂ ೩೦೦ ಖರ್ಚು ಬಂತಂತೆ. ಅದರಂತೆ ಅವರು ಬೇಡಿಕೆಯ ಬಗ್ಗೆ ೩೦೦ ಮತ್ತು ಕಾಯಿಕ-ಮಾನಸಿಕ ಯಾತನೆಗಳ ಬಗ್ಗೆ ರೂ ೨೦೦ ಇಗೆ ರೂ ೫೦೦ ಲುಕ್ಸಾನು ಬೇಡಿ ದಾವೆ ಮಾಡಿದ್ದರು. ಕೋರ್ಟಿನವರು ಮ್ಯಾಜಿಸ್ಟ್ರೇಟರ ಡಿವರ್ಸ್ಸೇ ಎತ್ತಿ ಹಿಡಿದು ಒಪ್ಪಿದಂತೆ ಫೈಸಲ ಮಾಡಿದ್ದಾರೆ.

ಈ ತೀರ್ಪಿನ ವಿರುದ್ಧ ಕಾರವಾರದ ಡಿ| ಕೋರ್ಟಿನಲ್ಲಿ ಅಪೀಲು ದಾಖಲಾಗಿರುತ್ತದೆ.

ರಾ| ಅನಂತ ಭಟ್ಟರು ಉತ್ಸಾಹಿ ಸಾಹಿತ್ಯ ಸೇವಕರಿರುತ್ತಾರೆ.

— ಮಹಾತ್ಮರ ಪ್ರಕೃತಿ ನೆಟ್ಟಗಿಲ್ಲ ರಕ್ತಾಭಿಸರಣವು ಪ್ರಾಪ್ತ ಪಟ್ಟಿರುವುದು. ಕಲಕತ್ತೆಯ ಡಾ|| ಬಿ. ಸಿ. ರಾಯ್ ಹಾಗು ವಿಧಾನಚಂದ್ರ ರೊಯ್ ರವರು ತಪಾಸಿ ಮಾಡಿ ಮಹಾತ್ಮರಿಗೆ ವಿಶ್ರಾಂತಿ ಕೊಳ್ಳ ಹೇಳಿದ್ದಾರೆ. ಕಾಂಗ್ರೆಸ ಅಧ್ಯಕ್ಷರಾದ ಪಂ|| ಜವಾಹಿರಲಾಲ ನೆಹರೂರವರೂ ಹೀಗೇ ಅಭಿಪ್ರಾಯಪಟ್ಟಿರುತ್ತಾರೆ. ವರ್ಧಾದಲ್ಲಿ ಉಪವಾಸವ್ರತ ಮುಗಿದ ಬಳಿಕ ಮಹಾತ್ಮರು ವಿಧಾಯಕ ಕಾರ್ಯಕ್ರಮದ ಯೋಜನೆಯನ್ನು ತಯಾರಿಸಿ ಪುರಸ್ಕರಿಸುವವರಾಗಿ ಪ್ರಕಟವಾಗಿದೆ.

ವೃತ್ತಸಾರ.

—ಯಾರಿಗೂ ಮಾನಪತ್ರ ಕೊಡಬಾರದಾಗಿ ಬಡೋದೆಯ ಸಂಸ್ಥಾನಿಕರು ಫರ್ಮಾನನ್ನು ಹೊರಡಿಸಿದ್ದಾರೆ.

— ಬಂಗಾಲ ಇಲಾಖೆಯಲ್ಲಿ ವಿಚಾರವಿಲ್ಲದೆ ೨೦೦೦ ಮಂದಿಗಳು ಸೆರೆಮನೆಯಲ್ಲಿ ಬದ್ಧರುತ್ತಾರಾಗಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಹೇಳೋಣಾಯಿತ

— ಹಿಂದುಸ್ಥಾನ ಸರಕಾರದ ಅಪ್ಪಣೆಯಂತೆ ಪ್ರಾಂತಿಕ ಸರಕಾರದವರು ಗುಪ್ತ ಪೋಲೀಸ ಖಾತೆಯ ವಿದ್ಯಮಾನ ಚಳವಳಿಗಾರರ ಚರಿತ್ರ ಗ್ರಂಥವನ್ನೊಂದು ತಯಾರಿಸಲಾರಂಭಿಸಿದ್ದಾರಂತೆ ಈ ಗ್ರಂಥದ ಮೇಲಿಂದ ಯಾವ ಯಾವ ಪ್ರಸಂಗದಲ್ಲಿ ಯಾರ್‍ಯಾರಿಗೆ ಎಲ್ಲೆಲ್ಲಿ ಕಳಿಸಬೇಕೆಂಬ ಸಂಗತಿ ಸರಕಾರಕ್ಕೆ ತಿಳಿಯಬೇಕೆಂತೆ ರಶಿಯಾ ದೇಶದಲ್ಲಿ ಝಾರರ ನಿರಂಕುಶ ಕಾರಭಾರ ನಡೆದಾಗ ರಶಿಯಾ ಸರಕಾರವು ಇದೇ ಪ್ರಕಾರ ಒಂದು ಗ್ರಂಥ ತಯಾರಿಸಿತ್ತಂತೆ ಇತ್ಯಾದಿ ವಾರ್ತೆಯನ್ನು ದಿಲ್ಲಿಯ 'ಹಿಂದುಸ್ಥಾನ ಟೈಮ್ಸ್' ಪತ್ರಿಕೆಯು ಪ್ರಕಟಿಸುತ್ತದ

— ಆಸಾಮದಲ್ಲ ನೆರೆಕಟ್ಟಿ ೧೫ ಸಾವಿರ ಮನೆಗಳು ನಿರಾಶ್ರಿತವಾಗಿವೆ ಬೆಳೆ, ದನಕರು ನಾಶವಾದ ಲೆಕ್ಕವೇ ಇಲ್ಲ ಈ ಪ್ರಕಾರ ಸರಕಾರ ಪ್ರಕಟಣೆ ಚಿರಾಪುಂಜಿಯಲ್ಲಿ ೩ ದಿನಗಳಲ್ಲಿ ೬೨ ಇಂಚು ಮಳೆ ಬಿತ್ತು ಅದರಿಂದ ನದಿಗಳಿಗೆ ಒಮ್ಮೆಲೇ ನೆರೆ ಕಟ್ಟಿ ಈ ಪ್ರಕಾರವೊದಗಿತಾಗಿ ಸರಕಾರಿ ಪ್ರಕಟಣೆ

— ಪಂಜಾಬದೊಳಗಿನ ಕೊಂಗ್ರೆಸ ಕೆಲಸಗಾರರಲ್ಲಿ ಅನಾವಶ್ಯಕವಾದ ಮತ್ಸರವುಂಟಾಗಿ ಕಲಹವುಂಟಾದ್ದರಿಂದ ಅಲ್ಲಿಯ ಡಾ॥ ಸೈಫುದ್ದೀನ ಕಿಚಲೂರವರು ಉಪೋಷಣ ಮಾಡತೊಡಗಿದ್ದಾರೆ ಸ್ವಾಮಿ ಆನಂದಾನಂದರವರೂ ಅದೇ ಕಾರಣದ ಮೂಲಕ ಉಪೋಷಣ ಮಾಡಹತ್ತಿದ್ದಾರೆ. ಡಾ। ಕಿಚಲೂರವರು ೭ ದಿನಗಳ ತನಕ ಉಪವಾಸ ಮಾಡುವರು ಸ್ವಾಮಿ ಆನಂದಾನಂದವರು ಪ್ರಾಣಾಪಹಾರವಾಗುವ ತನಕ!!

— ಅಂದಮಾನಕ್ಕೆ ಹದ್ದುಪಾರು ಮಾಡಿದ ರಾಜಕೀಯ ಕೈದಿಗಳು ಉಪೋಷಣ ಮಾಡುತ್ತಾರಾಗಿಯೂ, ಅವರಿಗೆ ಅಲ್ಲಿ ಸರಿಯಾಗಿ ನಡಿಸಿಕೊಳ್ಳುವದಿಲ್ಲವಾಗಿಯೂ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಬಂಗಾಲದ ಸಭಾಸದರು ಉದ್ಗರಿಸಿದರು ಹಿಂದುಸ್ಥಾನ ಸರಕಾರವು ಇದು ಬರೇ ತರ್ಕವೆಂದು ತಿರಸ್ಕರಿಸಿದೆ.

SiromaniUdipiNarayanacharya,

CHAUKHAMBA, BENARES CITY

SUN ... CENARES CITY

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿಕೊಳ್ಳಿರಿ 108ರ ಸರ 1ಕ್ಕೆ 0–6 0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32 ದರ 1ಕ್ಕೆ ರೂ 0 9 0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8 0ರಿಂದ 35ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ಸ್ಟ್ಯಾಂಪು ಕಳಿಸಿದರೆ, 1ಕಾಪಿ ನಕ್ಷೆ, 1 ವಿಜ್ಞಾಪತ್ರದ ಪರ ನಮ್ಮ ... ಗು ಸಹ ಇನಾಂ ಕಳಿಸಲಾಡೀತು ಪತ್ತೆ—

ಶಿರೋಮಣಿ ನಾರಾಯಣಾಚಾರ್ಯ,

ಚೌಖಾಂಬಾ, ಕಾಶೀ ಕ್ಷೇತ್ರ,

॥ ಶ್ರೀರಾಮ ಪ್ರಸನ್ನ ॥

ಡಾ। ಅಂಕಲೀಕರ, ಎಮ್ ಡಿ, (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ– ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾಯುಜ್ವರ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಎಂಝಾ ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇತ್ತಿವೆ ಹಿಂದಿನಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಥಂಡಿಯಿಂದ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿ ಬೀಳೋಣ, ರಕ್ತಹೊರಕಡೆ, ಅತಿಸಾರ, ತಂಬಾಕು ತಲೆಗೇರೋಣ, ವಾಂತಿಯಾಗೋಣ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಫುಪ್ಫುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಎಲ್ಲ ತರದ ... ಸ್ತ್ರೀಯರ ಮುಟ್ಟುದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ ಅನುಭವಸಿದ್ಧ, ಖಾತ್ರಿದಾಯಕ ಸಿದ್ಧೌಷಧವಿರುತ್ತದೆ ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟ, ರುಚಿಕರವಿರುವದು. ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕ್ಕೊಳ್ಳುವರು ಇದು ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು ಮತ್ತು ಯಾವದೇ ಕಾರಣದಿಂದ ಉಂಟಾದ ಉದಾಸೀನತೆಯನ್ನು ಕಳೆದು ಮನಸ್ಸು ಆನಂದಿತ ಮಾಡುವದು ಹಾಗೂ ಜಗತ್ತು ರಮಣೀಯವಾಗಿ ತೋರುವದು

ಈ ಔಷಧದಿಂದ ೨೦–೨೫ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧವಿಲ್ಲೆಂದು ನಿರಾಶೆಪಡುವ ಕಾರಣವಿಲ್ಲದಂತಾಗಿದೆ ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿ ಈ ತನಕ ಸಾವಿರಾರು ಜನರು ರೋಗಮುಕ್ತರಾಗಿರುವರು ನಿರಾಶೆಯಿಂದ ದುಃಖಪಡುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣಪಡೆಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸಲ್ಪಟ್ಟಿರುವದು ಇದನ್ನು ಹಳ್ಳಿಗರು ಹಾಗೂ ಶಹರವಾಸಿಯರು ಬರೂರ ತಮ್ಮ ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು

ನೆಗಡಿ, ಜ್ವರ, ಕೆಮ್ಮು ಬರುವ ಹೊತ್ತಿನಲ್ಲಿ ಜನರು ನಿಷ್ಕಾಳಜಿಯಿಂದ ೨ ೩ ದಿವಸ ಹಾಗೇ ಮೈಮೇಲೆ ತೆಗೆಯುತ್ತಾರೆ. ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗುವ ಸಂಭವವಿರುತ್ತದೆ ಆ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿನದಿಂದ ಶುರು ಮಾಡಿ ಮೂರು ತಿಂಗಳು ತನಕ ಚಾಲು ಇಟ್ಟರೆ ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ತರತರ ನಿಯಮ ಗರ್ಭಿಣಿ ಹೆಂಗಸರಿಗೆ ಸಹ ಇದನ್ನು ಕೊಡಲು ಅಡ್ಡಿಯಿಲ್ಲ ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ನಟರತ್ನ ಬಾಲಗಂಧರ್ವ, ತಾ ೩–೫–೩೩ ಮು॥ ಬೆಳಗಾಂವ – "ಕಲ್ಪತರು ಕಷಾಯದ ಅನುಭವವನ್ನು ನಾನು ಹಾಗೂ ಗುರು–ಬಂಧು ಮಾಸ್ತರ ಕೃಷ್ಣರಾವ್ ಇವರೂ ತಕ್ಕೊಂಡಿರುವೆವು ನಮಗೆ ಇದರ ಅನುಭವವು ಬಹಳ ಉತ್ತಮ ಬಂದಿರುವದು ಈಗ ಅವಶ್ಯ ನಮ್ಮ ದೇಶೀ ಔಷಧವು ಉಪಯೋಗಿಸುವ ಕಾಲವು ಇರುವದು. ಆ ದೃಷ್ಟಿಯಿಂದ ನಮಗೆ ಈ ಉತ್ತಮ ಔಷಧವು ಸಿಕ್ಕಿದ್ದು ಭಾಗ್ಯವೇ ಸರಿ ಇದರ ಉಪಯುಕ್ತತೆಯು ಬಹಳ ಚನ್ನಾಗಿರುವದರಿಂದ ನಮ್ಮ ಬಂಧು–ಭಗಿನಿಯರು ಭಕ್ತಿ–ವಿಶ್ವಾಸದಿಂದ ಈ ಔಷಧ ತೆಗೆದುಕೊಂಡು ಗುಣ ಪಡೆಯಬೇಕೆಂದು ಕಳಕಳಿಯ ವಿನಂತಿ ಮಾಡುತ್ತೇವೆ. ಈ ಔಷಧವನ್ನು ಶೋಧಿಸಿ ತೆಗೆದು ಒಳ್ಳೇ ಉಪಕಾರದ ಕೆಲಸ ಮಾಡಿದ್ದಾರೆ ಇವರ ಹೊರತು ಮಾಸ್ಟರ್ ವಿ. ದ. ಪಾಗನೀಸ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ

ಕಿಮ್ಮತ್ತು – ೧ರತ ಬಾಟ್ಲಿಗೆ ರೂ. ೨॥, ಅರ್ಧರತ್ತ ಬಾಟ್ಲಿಗೆ ರೂ ೧॥, ೧ ರತ್ತ ಬಾಟ್ಲಿಗೆ ೧೩ ಆಣೆ.

ಇವಲ್ಲದೇ, ಥಂಡಿ ಜ್ವರ (ಮಲೇರಿಯಾ) ದ ಮೇಲೆ ಮಿಶ್ರಣ, ಶೌಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕೊಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೇಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ

ಔಷಧೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು ಮುರಿಗಳ ರೋಗ ಮುಂತಾದವುಗಳು ನಾಶಿಯಾಗುತ್ತವೆ. ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೫

ಶ್ರೀರಾಮಆಯುರ್ವೇದಿಕಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

☛ ಕುಮಟೆಯಲ್ಲಿ ಸಿಗುವ ಪತ್ತೆ:— ಕಲಭಾಗಕರ ದುಕಾನ, ಕುಮಟಾ.

ಬಾಂಧವರೇ, ಅಭಕ್ಷ್ಯ ಭಕ್ಷಣ, ಅಪೇಯ ಪಾನಗಳನ್ನು ತ್ಯಜಿಸಿರಿ.

ಪುಣೆಯಲ್ಲಿ ಮಹಾರಾಷ್ಟ್ರೀಯ ಮಂಡಳದ ವಿದ್ಯಮಾನ ಔಂಧ ಸಂಸ್ಥಾನದ ವಯೋವೃದ್ಧ, ಜ್ಞಾನವೃದ್ಧ ಅಧಿಪತಿಗಳಾದ ಶ್ರೀಮಂತ ಭವಾನರಾವ ಊರ್ಫ್ ಬಾಳಾಸಾಹೇಬ ಪಂತ ಪ್ರತಿನಿಧಿಗಳವರು "ಶಾರೀರಿಕ ಹ್ರಾಸವು, ವ್ಯಾಯಾಮವು" ಎಂಬ ವಿಷಯದ ಮೇಲೆ ತಾ: ೭-೭-೧೯೩೫ನೇ ಶನಿವಾರ ಬೋಧಪ್ರದವಾದ ಉಪನ್ಯಾಸ ಮಾಡಿದರು. ಶ್ರೀಮಂತರ ಉಪನ್ಯಾಸದೊಳಗಿನ ಮುಖ್ಯಾಂಶವೇನಂದರೆ:— ಜಗತ್ತಿನಲ್ಲಿ ಮನುಷ್ಯ ಪ್ರಾಣಿಯು ಸುಖಪ್ರಾಪ್ತಿಗಾಗಿ ತಳಮಳಿಸುತ್ತಾನೆ, ಅದಕ್ಕಾಗಿ ಯಾವತ್ತು ಪರಿಶ್ರಮವನ್ನು ಆತನು ಮಾಡುತ್ತಿರುತ್ತಾನೆ ನಿಜವಾದ ಸುಖವು ದೇಹಾರೋಗ್ಯದಲ್ಲಿದೆ ವಿದ್ಯೆ, ವೈಭವ, ಯೌವನ ಇವೆಲ್ಲ ಸುಖ ಕೊಡುವ ಸಾಧನಗಳು ಈ ಸಾಧನಗಳಿಂದ ಸಿಗುವ ಸುಖೋಪಭೋಗ ಹೊಂದಲು ಉತ್ತಮ ಆರೋಗ್ಯವಿದ್ದರೆ ಮಾತ್ರ ಸಂಭವವಾಗುವದು. ಹೊಟ್ಟೆಶೂಲಿಯಿಂದಾಗ ಮನೋಹರ ಸೃಷ್ಟಿಸೌಂದರ್ಯದಿಂದ ಸುಖ ಸಿಗದು ಜ್ವರಗ್ರಸ್ತನಿಗೆ ಮಿಷ್ಟಾನ್ನವು ವಿಷಪ್ರಾಯವಾಗುತ್ತದೆ ಆರೋಗ್ಯದ ಅಭಾವದಲ್ಲಿ ಎಂಥ ಸಂಪತ್ತಿಯಿದ್ದರೂ ಇಲ್ಲದಂತೆಯೇ. ಸರಿ ಉತ್ತಮ ಆರೋಗ್ಯ ಸಂಪಾದಿಸುವ ಸಾಧನಗಳಾವವು? ಸೂರ್ಯಪ್ರಕಾಶ, ಸ್ವಚ್ಛ ಹವೆ, ಸಾತ್ವಿಕ ಆಹಾರ, ನಿಯಮಿತ ವ್ಯಾಯಾಮ, ಇವನ್ನು ಮನುಷ್ಯನು ಸಂಗ್ರಹಿಸಿಟ್ಟುಕೊಂಡರೆ ಆತನಿಗೆ ಜಗತ್ತಿನಲ್ಲಿ ಜೀವನ ಸುಖಸಂಪದವನ್ನು ನರಸ್ಥಿತಿಗನುರೂಪವಾಗಿ ಉಪಭೋಗಿಸ ಸಿಕ್ಕೀತು. ಪಂಜರಸ್ಥ ಗಿಳಿ ಅಥವಾ ಕೊಟ್ಟಿಗೆಯಲ್ಲಿ ಕಟ್ಟಿದ ಜಾನುವಾರಗಳಿಗೆ ವ್ಯಾಯಾಮವೆಲ್ಲಿ ಸಿಗುತ್ತದೆಂದು ಯಾರೂ ಕೇಳಬಹುದು. ಆದರೆ, ಅವುಗಳ ಪ್ರಕೃತಿ ಸ್ವಲ್ಪವಾದರೂ ಕೆಟ್ಟಿಲ್ಲ ಅವು ಅನ್ನಸ್ವೀಕಾರ ಮಾಡುವದಿಲ್ಲ ಇದನ್ನು ನೀವು ಮರೆತುಬಿಡುತ್ತೀರಿ ನೀವು ಹಾಗೆ ಮಾಡುತ್ತೀರೇನು? ಡಾಕ್ಟರ ಜನರಾದರೂ ಏನು? ಔಷಧವು ಕೊಡುತ್ತಾರೆ ಬೇಕಾದ್ದನ್ನು ತಿನ್ನ ಹೇಳುತ್ತಾರೆ, ಸರಿ. ಇಲ್ಲವಾದರೆ ರೋಗವು ಸ್ವೈರ ಮೂಲವಾಗಿ ಅವರಿಗೆ ಪ್ರಾಪ್ತಿಯಾಗುವ ಬಗೆ ಹೇಗೆ? ನಮ್ಮ ಕಡೆ ರೋಗಗ್ರಸ್ತರ್ಯಾರಾದರೂ ವಿಚಾರಿಸಿದ್ದಲ್ಲಿ, ಮುಂಚೆ ೧೫ ದಿನ ಲಂಘನ ಮಾಡೆಂದು ನಾವು ಹೇಳುತ್ತೇವೆ ಜಗತ್ತಿನೊಳಗಿನ ವ್ಯವಹಾರವಾದರೂ ಶಾರೀರಿಕ ಹ್ರಾಸಕ್ಕೇ ಅನುಕೂಲವಿದೆ ಮುಂಚೆ ನಡಕೊಂಡು ಅಥವಾ ಕುದುರೆ ಸವಾರರಾಗಿ ನಾವು ಪ್ರಯಾಣ ಮಾಡುತ್ತಿದ್ದೆವು ಈಗ ಮೋಟಾರಿನ ಹೊರತು ನಾವು ಕಾಲು ತೆಗೆಯುವದಿಲ್ಲ ನಮ್ಮದೇ ಸಂಗತಿ ಕೇಳಿಕೊಳ್ಳಿ ನಮ್ಮ ನಿವಾಸಸ್ಥಾನ ಇಲ್ಲಿಂದ ಬಹು ದೂರವಿಲ್ಲ ನಡಕೊಂಡು ಬರಲಿಕ್ಕೆ ನಮಗೇನಾಗುತ್ತದೆ? ಆದಾಗ್ಯೂ ನಮಗೆ ಮೋಟಾರು ಬೇಕು ಅದರಿಂದ ಶರೀರದ ವ್ಯಾಪಾರಗಳಲ್ಲಿ ಮಾಂದ್ಯವುಂಟಾಗುತ್ತದೆ ಈಗಿನ ಯಾಂತ್ರಿಕ ಸಂಚಾರದ ಯುಗದಲ್ಲಿ ಕೂಲಿಕಾರರಿಗೆ ಯಾ ಒಕ್ಕಲಿಗರಿಗೆ ಬೇಕಷ್ಟು ವ್ಯಾಯಾಮವಾಗುವದಿಲ್ಲ ಕಮ್ಮಾರನು ಕಬ್ಬಿಣವನ್ನು ಬಡಿಯುತ್ತಿರುವಾ ಆತನ ವಿಶಿಷ್ಟ ಸ್ನಾಯುಗಳಿಗ ಮಾತ್ರ ವ್ಯಾಯಾಮ ಸಿಗುತ್ತದ, ಬಾಯಿ ತೆರೆದು ಆತ ಕೆಲಸ ಮಾಡುತ್ತಿರುವ ಮೂಲಕ ಶ್ವಸನ ಕ್ರಿಯೆಗೆ ತೊಂದರೆಯಾಗುತ್ತದೆ ಇಂಥ ಶ್ರಮ ವ್ಯವಸಾಯಗಳಿಂದ ನಿಜವಾದ ಆರೋಗ್ಯ ಪ್ರಾಪ್ತವಾಗುವದಿಲ್ಲ ಫುಪ್ಫುಸ, ಶ್ವಸನೇಂದ್ರಿಯ, ಹೊಟ್ಟೆ, ಕರಳು, ಪಚನೇಂದ್ರಿಯ, ಸ್ನಾಯುಗಳು, ಬೆನ್ನೆಲುವು ಇವುಗಳಿಗೆಲ್ಲ ವ್ಯಾಯಾಮ ಸಿಗಬೇಕು ಇಂಥ ವ್ಯಾಯಾಮವೊಂದೇ ಪದ್ಧತಿಯಿಂದ ಸಾಷ್ಟಾಂಗ ನಮಸ್ಕಾರ ಹಾಕುವದು. ಆದರೆ, ಈ ಕಡೆ ಯಾರೂ ಲಕ್ಷ್ಯ ಕೊಡುವದಿಲ್ಲ.

ಇಡೀ ಜಗತ್ತಿನ ಆರೋಗ್ಯವೇ ಕೆಟ್ಟಿದೆ ಡಾಕ್ಟರ-ವೈದ್ಯರ ಸಂಖ್ಯ ವಿಪರೀತ ಬೆಳೆದದ್ದೇ ಇದಕ್ಕೆ ಕಾರಣ. ಡಾಕ್ಟರರೊಬ್ಬರು ಬಿಟ್ಟವರಿ ೧೫ ಹೊಸ ರೋಗಗಳು ಹುಟ್ಟುವವೆಂದು ನಿಸ್ಸಂದೇಹವಾಗಿ ಹೇಳಬಹುದು. ಇಂಪ್ಲುಯೆಂಜಾ ಬೇಡವು, ಅದರ ಜೊತೆಗೆ ರೋಗಗಳು ಬೇರಿವೆ ಈಗೊಂದು ಹೊಸ ರೋಗ ಬಂದಿದೆ 'ಮಿಸಿಂಗ ವೈಟಿಸ್' ನಮ್ಮ ಹಿರಿಯರು ಈ ರೋಗದ ಹೆಸರು ಕೇಳಿದ್ದಿಲ್ಲ ಲೋಕದಲ್ಲಿ ರೋಗಜಂತುಗಳಿರಬಹುದು ಆ ಜಂತುಗಳ ಪ್ರತಿಕಾರ ಮಾಡುವ ಸಾಮರ್ಥ್ಯ ಈ ನಮ್ಮಲ್ಲಿಲ್ಲ ಆದಕಾರಣ ಸಾರ್ವತ್ರಿಕ ಆರೋಗ್ಯ ಕೆಟ್ಟಿರುವದೆಂದು ನಾವು ಹೇಳಿದೆವು ನಮ್ಮ ವರ್ತಮಾನ ಪತ್ರಗಳನ್ನೇ ನೋಡಿರಿ, ಔಷಧಗಳ ಜಾಹೀರಾತುಗಳಿಂದ ಅವು ತುಂಬಿರುತ್ತವ ಕೆಲಕೆಲವು ಜಾಹೀರಾತುಗಳ ಧಾರ್ಷ್ಟ್ಯವನ್ನು ನೋಡಿದರೆ ವರ್ತಮಾನಪತ್ರಕ್ಕಿಂತ ಜಾಹೀರಾತುಗಳೇ [illegible]ವೆನಿಸುತ್ತವೆ ಎನಿಮಿಯಾ ಊರ್ಫ ರಕ್ತ ಕೊರತೆಯು ರೋಗವು ನಮ್ಮ ಹೆಂಗಸರ ಬೆನ್ನು ಹಿಡಿದು ಮದುವೆಯು ಪ್ರಾಪ್ತವಿಲ್ಲ ಸರಕ್ತರಾಗಿದ್ದ ಹುಡುಗಿಯರು [illegible] ಹುಟ್ಟುವ ಪ್ರಸಂಗ ಈ [illegible] ಸಿಗುವ ತಾಯಿಯ ಮೊಲೆ [illegible] ಅಷ್ಟಿದ್ದ', 'ಎನಲ್‌ಪ್ಯಾನ, [illegible] ಬಹು' ತಾಯಿ ಮಾತ್ರ ಕ್ರಮವಾಗಿ ಸೊರಗುತ್ತಿರುತ್ತಾಳೆ. ಹಸಿ-ಹಾಲು ಶಿಶುವಿಗೆ ಸಿಗದು. ನಾವು ಚಿಕ್ಕವರಿದ್ದಾಗ ಈ ಸ್ಥಿತಿಯಿರಲಿಲ್ಲ. ೧೦-೧೦ ತಿಂಗಳಾದರೂ ಎಲ್ಲರಿಗೆ ತಾಯಿಯ ಮೊಲೆಹಾಲೇ! "ಬಾಬುರಾವ್, ನೀನು ೨ ವರ್ಷಗಳ ತನಕ ನನ್ನ ಮೊಲೆಹಾಲು ಕುಡಿಯುತ್ತಿದ್ದೆ!" ಹೀಗೆಂದು ನನ್ನ ಮಾತೋಶ್ರೀಯವರು ನನಗೆ ಚೇಷ್ಟೆ ಮಾಡುತ್ತಿದ್ದರು ಈಗ ೩ ದಿನವಾದರೂ ಶಿಶುವಿಗೆ ತಾಯಿಯ ಮೊಲೆಹಾಲು ಸಿಗುವದು ಕಠಿಣ ಪ್ರಸೂತಿಯಾದೊಡನೆ ತಲೆಗಿಂಬಿನ ಒಬ್ಬ ಡಾಕ್ಟರರು, ಕಾಲ ಬಳಿ ಮತ್ತೊಬ್ಬ ಡಾಕ್ಟರರು, ಹೀಗಿದೆ ಅವಸ್ಥೆ ಅದೇ ಅಜ್ಜಿಯ ಕಡೆ ನೋಡಿರಿ, ಅವಳು ಗಟ್ಟಿಗಳು! ಜಗತ್ತಿನ ಆರೋಗ್ಯ ಕೆಟ್ಟದೇನೋ ನಿಜ! ನಮ್ಮಾ ಭರತಭೂಮಿಯ ಆರೋಗ್ಯವಂತು ವಿಶೇಷ ಕೆಟ್ಟಿದೆ ಆಯುರ್ಮರ್ಯಾದೆಯು ಇತ್ತಿತ್ತ ೨೩ ವರ್ಷಕ್ಕೆ ಬಂದು ತಲ್ಪಿದೆ. ಭಾವೀ ಆಧಾರಭೂತ ಎಳೆ ಹುಡುಗರು ಮೃತ್ಯುವಿನ ತೊಟ್ಟಿಲಲ್ಲಿ ಕಾಲಿಟ್ಟಾಗ ನಾವು ಹಿರಿಯರು ಯಾರ ಕಡೆ ನೋಡಿ ಸಮಾಧಾನಪಡುವದು? ಭಾರತೀಯ ಮಹಾಯುದ್ಧದ ಸಮಯ ಯೌವನಸ್ಥನೆಂದು ವರ್ಣಿಸಲ್ಪಟ್ಟ ಅರ್ಜುನನ ಪ್ರಾಯವು ಎಂಭತ್ತು ವರ್ಷ! ಶ್ರೀಕೃಷ್ಣನ ಪ್ರಾಯ ನೂರಾಇಪ್ಪತ್ತು ವರ್ಷ!! ಈಗಿನ ನಮ್ಮ ಹುಡುಗರು ೩೦ ವರ್ಷವಾದೊಡನೆ "ಮುಗಿಯಿತು ಈಗ ನಮ್ಮದೆಲ್ಲ!" ಹೀಗೆ ನಿರಾಶರಾಗಿ ನುಡಿಯುತ್ತಾರೆ ಮಗನಿಗೆ ಆಯಿತೇನು? ೩೦ ವರ್ಷವಾಗುವಷ್ಟರಲ್ಲಿ ಕಲ್ಲು ತೀಕಬೇಕು ಯಾಕೆ? ಪಾಯೋರಿಯಾ ರೋಗವಾಗಿದೆ! ನೋಡಿರಿ, ನನ್ನ ಹಲ್ಲುಗಳು, ಈಗಲೂ ಹಾಗುಂಟೆಂದು!! ಪಟ್ಟಣದ ಪ್ರತಿಯೊಂದು ಮಗ್ಗಲಲ್ಲಿ ೧೨-೧೦ ದಂತವೈದ್ಯರು ಬಮಟಿಗೆ ಕೊಂಡು ಸಿದ್ಧರಾಗಿ ಕೂಡ್ರುವರು! ಮನುಷ್ಯನು ಮೊದಲಿನ ೨೫ ವರ್ಷಗಳನ್ನು ಶಿಕ್ಷಣ ಸಂಪಾ

ನಿಮ್ಮ ತಯಾರಿಯಿದೆಯೋ?



ನೆಲಗಡ್ಲೆ ಬಿಡ್ಡೆ ತೆಗೆಯುವ ಹಂಗಾಮು ತೀರ ಸಮೀಪಿಸಿ ಬಂದಿದೆ ಆದರಿಂದ ನೀವು ನಿಮ್ಮ ನೆಲಗಡ್ಲೆ ಯಂತ್ರವನ್ನು ಈಗಲೇ ತರಿಸಿಟ್ಟುಕೊಂಡಲ್ಲಿ ಹಂಗಾಮು ಶುರುವಾದ ಪ್ರಥಮ ದಿವಸದಿಂದಲೇ ಕೆಲಸ ಮಾಡಲನುಕೂಲವಾಗುವದು ಆದರಿಂದ ನೀವು ಯಾವ ಯಂತ್ರವನ್ನು ಕೊಂಡುಕೊಳ್ಳುವಿರಿ?

ಖಾತ್ರಿಯಾಗಿ ಎಲ್ಲಕಡೆಯಲ್ಲೂ ಪ್ರಸಿದ್ಧವಾದ-

ಕಿರ್ಲೋಸ್ಕರ 'ಕಲ್ಯಾಣ' ನೆಲಗಡ್ಲೆಯಂತ್ರವನ್ನೇ.

ಈ ಯಂತ್ರವು ಸಂಪೂರ್ಣವಾಗಿ ಸುಧಾರಿಸಲ್ಪಟ್ಟು ನಡಿಸಲಿಕ್ಕೆ ಸುಲಭವಿದೆ ಬಂಡವಲು ಸಹ ಹೆಚ್ಚು ಬೇಕಾಗಿಲ್ಲ ತುಂಬಾ ಲಾಭ ಸಿಗುತ್ತದೆ ವಿವರದ ಬಗ್ಗೆ ಈ ಕೆಳಗಿನ ಪತ್ತೆಗೆ ಬರೆಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಕಿರ್ಲೋಸ್ಕರವಾಡಿ.

ಯಂತ್ರ ಸಿಗುವ ಪತ್ತೆ:

ಪೆರಿ ಎಂಡ್ ಕೋ, ಲಿಮಿಟೆಡ್, ಮೌಂಟ ರೋಡ, ಮದ್ರಾಸ

ಸರ್ವರಿಗೆ ಸರ್ವತ್ರಸಾಧ್ಯ ಸಾಷ್ಟಾಂಗ ನಮಸ್ಕಾರ ಹಾಕಿ ದೃಢಕಾಯರಾಗಿರಿ.

ವಿದ್ಯಾರ್ಥಿ ಸಂಸಾರ ನಡೆಸಲರ್ಹನಾಗಲು ಕಲಿಯುತ್ತಾನೆ ಮುಂದೆ ೩೦ ವರ್ಷ ಸಂಸಾರ ನಡೆಸಲರ್ಹನಾಗುತ್ತಾನೆ. ಹೀಗೆ ೫೦ ವರ್ಷ, ಕಳೆದ ಬಳಿಕ, ದೇಶಕಾರ್ಯ ಯಾ ಸಮಾಜಕಾರ್ಯ ಮಾಡಲು ಆತನು ಸ್ವತಂತ್ರನು. ಆದರೆ, ನಮ್ಮ ಆಯುರ್ಮರ್ಯಾದೆ ೫೦ ವರ್ಷಕ್ಕೆ ಮಿಕ್ಕುವದಿಲ್ಲ. ಇಂಥ ಬಳಿಕ, ದೇಶಸೇವೆಲ್ಲಿ? ಸಮಾಜಕಾರ್ಯವಲ್ಲಿ? ವಿಚಾರವಂತರು ವಿಚಾರ ಮಾಡಿ ಹೊಸ ಪೀಳಿಗೆಯವರಿಗೆ ಮಾರ್ಗದರ್ಶಕರಾಗಬೇಕು.

ನಮಗೆ ಕಾಣುವ ಶಾರೀರಿಕ ಹ್ರಾಸದ ಕಾರಣಗಳೆಂದರೆ— (೧) ಚಹಪಾನದಿಂದ ಸರ್ವತ್ರ ನಾಶವಾಗಿದೆ. ಚಿಕ್ಕಂದಿನಿಂದ ಶರೀರವು ದುರ್ಬಲವಾಗಲು ಇದರಿಂದಲೇ ಒಳ್ಳೆ ಸಹಾಯವಾಗುತ್ತಿದೆ. ನಮ್ಮೀ ಸಮಾಜದಲ್ಲಿ ಚಹಪಾನವು ಆಳವಾಗಿ ಪ್ರಸಾರಗೊಂಡಿದೆ. ಚಹದ ದಾಂತು ಎಲ್ಲಿಯೂ ನಿರ್ಬಂಧವಾಗುವದಿಲ್ಲ. ನೀವು ಯಾವ ಅನುಕರಣ ಮಾಡಿ ಚಹದ ಚಟವನ್ನು ಹಚ್ಚಿಕೊಂಡಿರೋ ಅವರಾದರೂ ಏನು ಮಾಡುತ್ತಾರೆ ನೋಡಿರಿ! ಇಂಗ್ಲಿಷರು ಕಂಡ ಕಂಡಾಗ ಚಹ ಕೊಳ್ಳುವದಿಲ್ಲ. ಕೊಡುವದೂ ಇಲ್ಲ" ನಿಮಂತ್ರಣವಿದ್ದ ಹೊರತು ಒಬ್ಬರ ಮನೆಯಲ್ಲಿ ಮತ್ತೊಬ್ಬರು ಚಹ ಕೊಳ್ಳುವದಿಲ್ಲ! ಕಾರಣಾಂತರದಿಂದ ಚಹ ಕೊಳ್ಳುವಾಗ ಯಾರಾದರೊಬ್ಬರು ಬಂದರೆ ಆತನಿಗೆ ಹೊರ ಕುಳ್ಳಿರಿಸಿ ಇವರು ಒಳಹೋಗಿ ಚಹ ಕುಡಿದುಬರುತ್ತಾರೆ. ಇದರಿಂದ ಯಾರಿಗೂ ಕೆಡಕೆನಿಸುವ ಕಾರಣವಿಲ್ಲ. ಈ ಪ್ರಕಾರ ನಿಯಮಿತತೆ ಇರುವ ಮೂಲಕ ಚಹಪಾನದಿಂದ ಅವರಿಗೆ ಅಷ್ಟು ಕೆಡಕಾಗಲಿಲ್ಲ. (೨) ಚಿವಡಾ, ಭಜಿ, ಮಿಸಳ ಇವು ಭಕ್ಷ್ಯಭಕ್ಷ್ಯಗಳು; ಇವನ್ನು ಎಲ್ಲರೂ ಬಹು ಪ್ರೀತಿಯಿಂದ ತಿನ್ನುತ್ತಾರೆ. ಬಾಲಕನಿಂದ ಮುದುಕರವರೆಗೂ ಸಹ ಇವನ್ನು ತಿನ್ನುತ್ತಾರೆ. ಶಾಲಾಧಿಕಾರಿಗಳೂ, ಶಿಕ್ಷಕರೂ ಈ ಅಂಗಡಿಗಳು ಶಾಲೆಯ ೧ ಮೈಲು ಪ್ರಾಕಾರದಲ್ಲಿ ಆಗದಂತೆ ಪ್ರಯತ್ನ ಮಾಡಬೇಕು. (೩) ನಾಟಕ, ಸಿನಮಾ ಕಾದಂಬರಿಗಳಿಂದ ಕಾಮೋತ್ತೇಜಕ ಹಾಗು ಅಶ್ಲೀಲ್ಯ ಸಂಗತಿಗಳ ಗೂಡವನೆ ಹೋಗಬಾರದು. ಶಾರೀರಿಕ ಹ್ರಾಸವಾಗಲು ಇವು ಸಹ ಪ್ರಮುಖ ಕಾರಣಗಳು. ನಾಟಕ-ಸಿನೆಮಾಗಳಿಂದ ಜಾಗರಣವಾಗುವದಲ್ಲದೆ, ಅಲ್ಲಿ ಕಂಡುಬರುವ ಅಶ್ಲೀಲ ಪ್ರಕಾರಗಳಿಂದ ಬಾಲ್ಯಕಾಲದಲ್ಲೇ ಕಾಮೋದ್ದೀಪನವಾಗಿ ಹುಡುಗರು ದುರ್ಬಲರಾಗುತ್ತಿದ್ದಾರೆ. ಹೊಸ ನೀತಿಯನ್ನು ಕಲಿಸುವದಕ್ಕಾಗಿ ಅಸಭ್ಯ ಕಥೆಗಳನ್ನು ಹೇಳುವ ಎಂದಾರ್—ವರದಾನ ಮಾಲೆಗಳಿಂದ ಈಗಿನ ತರುಣ ಪೀಳಿಗೆಗೆ ಸುರಾಹಾಲಾ ಯಮುನೆಡೆ ಎಳೆದೊಯ್ಯುತ್ತಾರೆ. (೪) ಈಗಿನ ಶಿಕ್ಷಣದಿಂದ ಮನಸ್ಸು ದುರ್ಬಲವಾಗುತ್ತದೆ, ಈ ಶಿಕ್ಷಣವು ಸಂಸಾರಕ್ಕೆ ನಿಷ್ಪ್ರಯೋಜಕವಿದೆ. ಬ್ರಿಟಿಶ ಹಿಂದುಸ್ಥಾನದಲ್ಲಿಯಂತು ಈ ಕುರಿತು ಇವಕ್ಕೂ ಹೆಚ್ಚಿಗೆ ಮಾತಾಡಬಾರದಾರೆವು. ಮಾತಾಡುವಂಥ ಸಂಗತಿಗಳನೇಕವಿವೆ. ೫೦ ರೂಪಾಯಿ ಸಂಬಳದ ಒಂದು ಸ್ಥಳಕ್ಕಾಗಿ ೨೦೦ ಗ್ರ್ಯಾಜ್ಯುಏಟರು ನಮ್ಮ ಕಡೆ ಅರ್ಜಿ ಮಾಡಿದರು. ತಿಂಗಳು ಶಿಕ್ಷಣ ಪಡೆದ ಬಡಿಗರಾಗಲಿ, ಕಲ್ಲು ಕುಟ್ಟುವವನಾಗಲಿ ಇದಕ್ಕಿಂತ ಹೆಚ್ಚು ಸಂಪಾದನೆ ಮಾಡಬಲ್ಲನು. ಈ ಶಿಕ್ಷಣಕ್ಕಾಗಿ ವೆಚ್ಚವಾಗುವ ಹಣ ಹಾಗು ಹಾಳಾಗುವ ಆಯುಷ್ಯ, ಇವುಗಳ ಲೆಕ್ಕ ಮಾಡಿದ್ದಲ್ಲಿ ನಮಗೆ ಸಿಗುವ ಪ್ರತಿಫಲ ಒಂದು ಶತಾಂಶವಾಗದು. ಇಂಥ ಅನಾವಶ್ಯಕ ಶಿಕ್ಷಣವು ನಮ್ಮ ಮಕ್ಕಳಿಗೆ ಕೊಡಲ್ಪಡುತ್ತದೆ. ಅದರ ಜೊತೆಗೆ ಚಹ-ಕಾಫಿ, ಚಿವಡಾ-ಭಜಿ, ನಾಟಕ-ಸಿನೆಮಾ ಮತ್ತು ಮಾಸಿಕಗಳು, ಇವುಗಳೊಳಗಿಂದ ನಮ್ಮ ಎಳೆ ಹುಡುಗರು ತಳೆಯುತ್ತಿರುವ ಬಗೆ ಹೇಗೆ? ಇಲ್ಲಿ ಚಿಕ್ಕ ಮಕ್ಕಳ ಶಾಲೆಗಳನ್ನು ನಾವು ನೋಡಿದೆವು. ಅವು ಕೋಳಿಗೂಡಿನಂತಿವೆ. ಯಾವದೇ ಬದಿಯಿಂದ ಗಾಳಿ ಬರುವಂತೆ ಪೂರ್ಣ ವ್ಯವಸ್ಥೆಯಿದೆ. ನಮ್ಮ ಸುದೈವದಿಂದ ಮಹಾರಾಷ್ಟ್ರೀಯ ಮಂಡಳದಂಥ ಸಂಸ್ಥೆಗಳಿವೆ. ಅದರಿಂದ ಕೆಲವಟ್ಟಿಗೆ ಬೇಕಾದ್ದು ಗಾಳಿಯೂ ಸಿಗುತ್ತಿದೆ. ಆದರೆ, ಇದು ಎಷ್ಟು ಜನರಿಗೆ? ಪಟ್ಟಣದ ಅನೇಕ ಭಾಗಗಳಲ್ಲಿ ಹೊಲಸು ತುಂಬಿಕೊಂಡಿದೆ, ಹವೆ ಸರಿದಾಡುವದಿಲ್ಲ. ಆರೋಗ್ಯ ಸುಧಾರಣೆಗಾಗಿ ವಿಚಾರವಂತರೆಲ್ಲರೂ ಪ್ರಯತ್ನಪಡತಕ್ಕದ್ದು. ತಾತ್ಪರ್ಯವೇನೆಂದರೆ— ಅನ್ನ, ನೀರು, ಹವೆ ಇವುಗಳಂತೆಯೇ ವ್ಯಾಯಾಮದ ದಾರಿಗೆ ಅವಶ್ಯವಿದೆ. ನಿಯಮದಿಂದ ವ್ಯಾಯಾಮ ಮಾಡುವಂತೆ ಮಕ್ಕಳ ಮನವೊಲಿಸುವದು ಶಾಲೆಯಂದಿರ ಕರ್ತವ್ಯವಿದೆ. ತಾವು ಸ್ವತಃ ವ್ಯಾಯಾಮ ಮಾಡಿ ಹುಡುಗರಿಗೂ ವ್ಯಾಯಾಮ ಕಲಿಸಹತ್ತಬೇಕು.

ಸಂಸಾರದಲ್ಲಿ ಸೇರಿದ ಕೂಡಲೆ ನಮ್ಮ ಎಳೆ ಹುಡುಗರು ಒಬ್ಬರ ಹಿಂದೊಬ್ಬರು ಸಾಯಹತ್ತುತ್ತಾರೆ, ಇದಿಂದಿನ ನಮ್ಮ ಸಮಾಜದ ಸ್ಥಿತಿ. ಅದಕ್ಕೆ ನಾವು ಉಪಾಯಯೋಜನೆ ಮಾಡದಿದ್ದರೆ, ನಮ್ಮಷ್ಟು ಮೂರ್ಖರು ಜಗತ್ತಿನಲ್ಲಿರಲಿಕ್ಕಿಲ್ಲ. ಆದ್ದರಿಂದ ನಮಗೆ ನಿಯಮಿತ ವ್ಯಾಯಾಮದಿಂದ ಸಿಕ್ಕಿದ ಅನುಭವದ ಮೇಲಿಂದ ನಾವು ಹೇಳುವದೇನೆಂದರೆ— 'ನೀವು ಈ ವ್ಯಾಯಾಮ ಕೈಕೊಳ್ಳಿರಿ ಮತ್ತು ನಮ್ಮಂತೆಯೇ ಆರೋಗ್ಯಸಂಪನ್ನರಾಗಿರಿ' ಆಟಾಲಿಸ್ಕೃಥರಿಗಲ್ಲ ಕೈಜೋಡಿಸಿ ನಾವು ಈ ವಿನಂತಿ ಮಾಡಿಕೊಳ್ಳುತ್ತೇವೆ. ಕಳೆದ ೩೦ ವರ್ಷಗಳಲ್ಲಿ ಸಾಮಾನ್ಯ ಕೈತ್ಯವಾಗಲಿ, ಕೆಮ್ಮಾಗಲಿ ನಮ್ಮ ಸುತ್ತುಮುತ್ತು ಸುಳಿಯಲಿಲ್ಲ. ಈ ವ್ಯಾಯಾಮವನ್ನು ಯಾವದೇ ತರಗತಿಯ, ಯಾವದೇ ವಯಸ್ಸಿನ ಸ್ತ್ರೀ-ಪುರುಷರು ಕೊಳ್ಳಬಹುದು. ಇದಕ್ಕಾಗಿ ಹೇಳಿ ಸರ ಹೆಚ್ಚು ಖರ್ಚಾಗುವದಿಲ್ಲ. ದಿನಾ ೨೦ ಮಿನಿಟು ಸಾಷ್ಟಾಂಗ ನಮಸ್ಕಾರ ಹಾಕಿರಿ, ನಿಯಮದಿಂದ ಈ ವ್ಯಾಯಾಮ ಮಾಡಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸುತ್ತದೋ ಇಲ್ಲವೋ ನೋಡಿರಿ! ಕುಸ್ತಿಯ ವ್ಯಾಯಾಮವನ್ನು ನಾನು ೩೫ ವರ್ಷಗಳತನಕ ಕೊಂಡಿದ್ದೇನೆ, ಈಗಲೂ ನಾನು ಕುಸ್ತಿ ಮಾಡಬಲ್ಲೆ. ಆದರೆ, ಆ ವ್ಯಾಯಾಮವು ಎಲ್ಲರಿಗೂ ಸಾಧ್ಯವಿಲ್ಲ. ಕೆಲವರು ಟೆನಿಸ್ ಆಡಿ ವ್ಯಾಯಾಮ ಕೊಳ್ಳುತ್ತಾರೆ. ಅದರಿಂದ ಸರ್ವಾಂಗವ್ಯಾಯಾಮವಾಗುವದಿಲ್ಲ, ಮೇಲಾಗಿ ಖರ್ಚೆಷ್ಟು! ನಮ್ಮ ಆಪ್ತ ಸಾಹೇಬರವರು, ಚಂದವರೆ ನಮ್ಮ ಮಗಂದಿರು ಸದ್ಯಕ್ಕೆ ವಿಲಾಯತಿಯಲ್ಲಿದ್ದಾರೆ, ಕೆಲ ದಿನಗಳಲ್ಲಿಯೇ ತಿರುಗಿ ಬರುವರು. ಅವರೂ ನಾವು ಕೂಡಿ ಮಹಾಬಳೇಶ್ವರಕ್ಕೆ ಹೋಗಿದ್ದೆವು. "ಅಪ್ಪಾ, ನಾನು ಯುರೋಪಿಯನ್ ಜಿಮಖಾನೆಗೆ ಟೆನಿಸ್ ಆಡ ಹೋಗುತ್ತೇನೆ" ಎಂದು ಅವರು ಹೇಳಿದರ ಮೇರೆಗೆ, ಒಂದ ದಿನ್ನಲು 'ಟಿಕಿಟ' ತೆಗೆಸಿಕೊಂಡರೆ ಹೇಳಿದರು. ೧೫ ರೂಪಾಯಿ ಕೊಟ್ಟು 'ಟಿಕಿಟ' ತೆಗೆಸಿಕೊಟ್ಟೆ. ಆಡಿ ಸಾಯಂಕಾಲ ಮನೆಗೆ ಬಂದರು. ಸಾಯಂಕಾಲ ಅವರು ನಮ್ಮ ಕಡೆ ಮಾತಾಡುವದಿಲ್ಲ. 'ಊಟದ ಹೊತ್ತಿಗೆ ನಾವು ಕರೆದರೂ, ತಲೆ ಕೆಳಗೆ ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ಏನಾಯಿತೆಂದು ಕೇಳಲು, 'ಬ್ಯಾಟ್' ಮುರಿದುಹೋಯಿತೆಂದು ಹೇಳಿದರು. "ಒಳ್ಳೇದಾಯಿತು, ಮುರಿದರೆ ಮುರಿದು ಹೋಗಲಿ" ಎಂದು ನಾವು ಹೇಳಿದ್ದಾಯಿತು. ಮಾರನೇ ದಿನ "ಪುನಃ ಹೊಸ 'ಬ್ಯಾಟ್' ತರಲೇನು?" ಎಂದು ಅವರು ಕೇಳಿದರು. "ನಿನ್ನ ತಂದೆ ಸಂಸ್ಥಾನದ ಅಧಿಪತಿಯಿದ್ದಾಗ್ಯೂ ದಿನಾ ೮೫ ರೂಪಾಯಿಗಳ 'ಬ್ಯಾಟ್' ತಂದರೆ ಶೋಭಿಯಿದೆಯೇ? ನಮ್ಮ ಹಣ ಯಾರದು, ಪ್ರಜೆಗಳದಲ್ಲವೇ? ಹೀಗೆ ಉಳಿಸಿಟ್ಟ ನಾವು ಖರ್ಚ ಮಾಡುತ್ತಿದ್ದರೆ ನಮಗೆ ಕೇಳುವವರಿದ್ದಾರಲ್ಲವೇ? ಇಂಥ ಆಟದಿಂದ ಏನು ಪ್ರಯೋಜನ? ಶರೀರಸಂವರ್ಧನಕ್ಕಾಗಿ ಹುಡುಗರು ಕುಸ್ತಿ—ಮಲಕಂಬ ಮೊದಲಾದ ವ್ಯಾಯಾಮಗಳನ್ನು ಕೊಳ್ಳಬೇಕು. ಕೆಲ ವರ್ಷ ಕೊಂಡ ಬಳಿಕ ಮತ್ತೆ ಕೊಳ್ಳುವದವಶ್ಯವಿಲ್ಲವಾಗಿ ತಿಳಿಯಕೂಡದು. ಅನ್ನ—ನೀರು ಕೊಳ್ಳುವ ತನಕ ವ್ಯಾಯಾಮವನ್ನು ಕೊಳ್ಳುತ್ತಿರಬೇಕು. ಕುಸ್ತಿ-ಮಲಕಂಬ ಮೊದಲಾದ ವ್ಯಾಯಾಮವನ್ನು ಎಲ್ಲರಿಗೂ, ಯಾವತ್ತು ಪ್ರಸಂಗಗಳಲ್ಲಿ ಕೊಳ್ಳಬರುವದಿಲ್ಲ. ಸಾಷ್ಟಾಂಗ ನಮಸ್ಕಾರದ ವ್ಯಾಯಾಮವನ್ನು ಬೇಕಾದಲ್ಲಿ ಯಾವದೇ ಸಾಧನವಿಲ್ಲದೆ ಕೊಳ್ಳಬರುತ್ತದೆ. ಸಾಷ್ಟಾಂಗ ನಮಸ್ಕಾರದ ಮೊದಲನೇ ಪಾಠವನ್ನು ನಮ್ಮ ಮನಸ್ಸಿಗೆ ಕಲಿಸಿದವರು ದ ತ್ರ್ಯಂಬಕ ಸರ್ ಗಂಗಾಧರರಾವ ಪಟವರ್ಧನ ಮಿರಜಕರ (ಮಿರಜ ಸಂಸ್ಥಾನಾಧಿಪತಿ) ಇವರು ಕಲಿಸಿಕೊಟ್ಟರು. ಅದರಂತೆ ನಾವು ಕಳೆದ ೩೭ ವರ್ಷಗಳಿಂದ ನಮಸ್ಕಾರ ಹಾಕುತ್ತಿದ್ದೇವೆ. ನಮಸ್ಕಾರ ವ್ಯಾಯಾಮದಿಂದ ಮನೋವ್ಯಾಪಾರಕ್ಕೆ ಚಾಲನೆ ಸಿಗುತ್ತದೆ. ಇತರ ಆಟವನ್ನಾಗಲಿ, ವ್ಯಾಯಾಮವನ್ನಾಗಲಿ, ನಮ್ಮ ಯಾವತ್ತು ಲಕ್ಷ್ಯವು ವಿಜಯಸಂಪಾದನೆಯ ಕಡೆಗೇ ಕೇಂದ್ರಿಕೃತವಾಗುತ್ತದೆ. ನಮಸ್ಕಾರದ ವ್ಯಾಯಾಮದಲ್ಲಿ ಇಂತಹದೇನಿಲ್ಲ. ಪ್ರತ್ಯೇಕ ಹುಂಕಾರದೊಡನೆ ನೂತನ ಸಾಮರ್ಥ್ಯವನ್ನೇ ನಾವು ಸಂಪಾದಿಸುತ್ತೇವೆಂಬ ಭಾವನೆಯುಂಟಾಗುತ್ತದೆ. ಬೇಕಾದ ಆಟ ಆಡಿರಿ, ಆದರ ಸಾಷ್ಟಾಂಗ ನಮಸ್ಕಾರ ಮಾತ್ರ ಎಷ್ಟಕ್ಕೂ ಬಿಡಬೇಡಿರಿ. ಅಂದರೆ ನಿಮ್ಮ ಆರೋಗ್ಯಸುಧಾರಣೆಯಾಗಲೇ ಬೇಕು. ನಮ್ಮ ಅನುಭವದ ಮೇಲಿಂದ ನಾವು ನಿಮಗೆ ಗ್ಯಾರಂಟಿ ಕೊಡಲಿಕ್ಕೂ ಸಿದ್ಧರಿದ್ದೇವೆ. ಈ ವ್ಯಾಯಾಮವನ್ನು ಎಲ್ಲರೂ ಕೂಡಿ ಕೊಳ್ಳಬಹುದು, ಒಬ್ಬೊಂಟಿಗರೂ ಕೊಳ್ಳಬಹುದು. ನಾವು ಒಮ್ಮೊಮ್ಮೆ ಒಬ್ಬೊಂಟಿಗರಾಗಿ ವ್ಯಾಯಾಮ ಕೊಳ್ಳುತ್ತೇವೆ, ಕೆಲವು ಪ್ರಸಂಗಗಳಲ್ಲಿ ರಾಣಿಸಾಹೇಬ, ಯುವರಾಜ ಮೊದಲಾದವರೆಲ್ಲ ಕೂಡಿ ಕೊಳ್ಳುತ್ತೇವೆ. ಈ ವ್ಯಾಯಾಮದಿಂದ ಒಬ್ಬ ವೃದ್ಧ ಸ್ತ್ರೀಯ ಉದರರೋಗ ಪರಿಹಾರವಾಯಿತೆಂದು ನಮ್ಮ ರಾಣಿಸಾಹೇಬರಿಗೆ ಒಬ್ಬಳ ಪತ್ರ ಬಂದಿದೆ. ನಮ್ಮ ಕಡೆಗೆ ಇಂಥ ಅನೇಕ ಪತ್ರಗಳು ಬಂದಿವೆ. ಆದ್ದರಿಂದ ನಿಮಗೆಲ್ಲರಿಗೆ ವಿನಂತಿ ಮಾಡಿಕೊಳ್ಳುವದೇನೆಂದರೆ— 'ಆರೋಗ್ಯಸಂಪಾದನೆಗಾಗಿ ನೀವು ಎಲ್ಲರೂ ಸಾಷ್ಟಾಂಗ ನಮಸ್ಕಾರದ

ಶ್ರೀ ಕಾಶಿ ಕ್ಷೇತ್ರದೊಳಗಿನ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆ.

ಜಾತಿಪ್ರತಿನಿಧಿತ್ವ ನಿರ್ಣಯದ ಬಗ್ಗೆ ಘನಘೋರ ಚರ್ಚೆ.

ಈ ವರ್ಷದ [illegible] ಕೌನ್ಸಿಲಿನ [illegible] ಅನುಸರಿಸಬೇಕಾದ ಮಾರ್ಗದ [illegible] ಕ್ಷೇತ್ರದಲ್ಲಿ ಕೊಡಲಿಕ್ಕೆ ಕಾರ್ಯಕಾರಿ ಮಂಡಳಿಯು ಪ್ರತಿನಿಧಿ ಜಾತಿ ವಿಷಯ [illegible] ಯ ಕುರಿತು ಕೊನೆಯ ನಿರ್ಣಯ ಮಾಡುವ ಮಹತ್ವದ ವಿಷಯವಿತ್ತು. ಸದರಿ ಪ್ರಶ್ನೆಯನ್ನು ಇತ್ಯರ್ಥಪಡಿಸುವದರಲ್ಲಿ ಮಹಾತ್ಮರು ಸಮಾಜವನ್ನು [illegible] ಯಿಸುವರೋ? ಅಥವಾ ಅದನ್ನು ಧಿಕ್ಕರಿಸಿದ ಅಣೇ ಮಾಲವೀಯರಂಥಹ ಕಾಂಗ್ರೆಸ್ಸಿನ ಹಿರಿಯರನ್ನೂ, ದಕ್ಷ ಕಾರ್ಯಕರ್ತರನ್ನೂ, ಹಿಂದು ಮಹಾಸಭೆಯವರನ್ನೂ ದೂರ ಮಾಡುವರೋ? ಇಂಥ ಇಕ್ಕಟ್ಟಿನ ಪ್ರಸಂಗದೊಳಗಿಂದ ಕಮಿಟಿಯವರು ಯಾವ ಮಾರ್ಗವನ್ನು ಯೋಜಿಸುವರು? ಎಂದು ಎಲ್ಲರೂ ಕೇಳುತ್ತಿದ್ದರು. ಸರ್ವಸಮ್ಮತವಾದ ಯಾವದಾದರೂ ಯೋಜನೆಯು ಹೊರಬೀಳಬಹುದೆಂತ ಜನತೆಗೆ ಆಶೆಯಿತ್ತು. ಆದ್ದರಿಂದಲೇ ಅಖಿಲ ಭರತಖಂಡವು ಕಾಶೀಕ್ಷೇತ್ರದ ಕಡೆಗೆ ತನ್ನ ಕಣ್ಣುಗಳನ್ನು ತಿರುಗಿಸಿತ್ತು.

ಕಳೆದ ತಾ. ೨೭ನೇ ಬೆಳಗಿನ ೮ ಘಂಟೆಗೆ ಕಮಿಟಿಯ ಸಭೆಗೆ ಪ್ರಾರಂಭವಾಯಿತು. ಮೊನ್ನೆ ಮೊನ್ನೆ ಬಿಡುಗಡೆ ಹೊಂದಿದ ಸರದಾರ ವಲ್ಲಭಭಾಯಿ ಪಟೇಲರು— ರಾಷ್ಟ್ರೀಯ ಸಭೆಯ ಅಧ್ಯಕ್ಷರು — ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಗಾಂಧೀಜಿಯವರ ನಂತರ ವಲ್ಲಭಭಾಯಿಯವರು [illegible] ಕಮಿಟಿಯಲ್ಲಿ ಬಂದದ್ದು ಇದೇ ಮೊದಲನೇ ಸಲ. ಮಹಾತ್ಮರಿಗೂ ವಲ್ಲಭಭಾಯಿಯವರಿಗೂ ಕಳೆದ ೧|| ವರ್ಷ ಯಿಂದ ಭೆಟ್ಟಿಯಾಗಿರಲಿಲ್ಲ. ಈಗ ಬಹಳ ಪ್ರೇಮದಿಂದ ಪರಸ್ಪರರನ್ನು [illegible] ಮಾಡಿದರು. ಎಲ್ಲರೂ ಸರದಾರರ [illegible] ಕೇಳುತ್ತಿದ್ದರು.

ಕಮಿಟಿಯ ಸಭೆಗೆ ಮಹಾತ್ಮಾ ಗಾಂಧಿ, [illegible] ಬಾಬು ರಾಜೇಂದ್ರ ಪ್ರಸಾದ, [illegible] ಶ್ರೀ ಜಮನಾಲಾಲ ಬಜಾಜ, ಶ್ರೀ ಮಾಧವರಾವ ಅಣೆ, [illegible] ಪಂಡಿತ ಮಾಲವೀಯ [illegible] ಆಮಂತ್ರಣದ ಮೇರೆಗೆ ಬಂದಿದ್ದರು.

[illegible]

ಚರ್ಚೆ ಮಾಡಲು [illegible] ಸ್ಥಿತಿಯ ನಡೆಯಿತು. ಯಾವದೇ [illegible] ತ್ತದೆ. [illegible] ರಂತೆ [illegible] ಲೋಕಪ್ರತಿನಿಧಿ ಸಭೆಯು ಕಡ್ಡಾಯವಾಗಿ ತಿರಸ್ಕರಿಸುವದು ಕರ್ತವ್ಯ ಎಂದು ಸಭೆಯು ಸಾಧ್ಯವಾದಷ್ಟು ಒಮ್ಮತೆಯಲ್ಲಿ ಜಾತಿವಿಷಯಕ ಪ್ರಶ್ನೆಯ ಬಗ್ಗೆ ಐಕ್ಯಮತ್ಯವಿಲ್ಲೆಂದು ರಾಷ್ಟ್ರೀಯ ಸಭೆಯಂಥ ಲೋಕಪ್ರತಿನಿಧಿ ಸಂಸ್ಥೆಯು ಉದಾಸೀನ ವೃತ್ತಿಯನ್ನು ತಾಳುವದು ಸಮಂಜಸವಲ್ಲ. ಕೇವಲ ಒಂದು ತತ್ವವನ್ನು ವ್ಯಕ್ತ ಮಾಡುವದು ರಾಷ್ಟ್ರೀಯ ಸಭೆಯ ಕೆಲಸವಲ್ಲ. ಈ ತರಹ ರಾಷ್ಟ್ರೀಯ ಸಭೆಯು ಲೋಕಮತಕ್ಕೆ ರೂಪ [illegible] ಯನ್ನು ಕೊಟ್ಟು ಅದಕ್ಕೆ ಮಾರ್ಗ ತೋರಿಸಿಕೊಡುವ ಕಾರ್ಯವನ್ನು ಮಾಡಿದೆ. ಅನ್ಯಾಯ್ಯ ಹಾಗು ರಾಷ್ಟ್ರಘಾತಕವೆಂದು ಕಂಡ ಸಂಗತಿಗಳನ್ನು ನಿರ್ಭೀಡತ್ವದಿಂದ ತಿರಸ್ಕರಿಸಿದೆ. ನ್ಯಾಯ್ಯ ಹಾಗೂ ರಾಷ್ಟ್ರಹಿತಪೋಷಕವೆಂದು ಕಂಡ ಯೋಜನೆಗಳನ್ನು ನಿರ್ಭಯತನದಿಂದ ಪುರಸ್ಕರಿಸಿದೆ. ಜಾತಿ- ಪ್ರತಿನಿಧಿತ್ವದ ಪ್ರಶ್ನೆಯು [illegible] ಬೇರುವದಿಲ್ಲ. ಹೀಗೆ ಈ ಸೂಚನೆಯನ್ನು ಪಾರ್ಲಿಮೆಂಟರಿ ಮಂಡಳದ ನಿರ್ಣಯ ಸ್ಥಿರಪಡಿಸಲ್ಪಟ್ಟರೆ, ಜಾತಿವಿಷಯಕ ಪ್ರಶ್ನೆಗೆ ವಿರೋಧಿಸಲಿಕ್ಕೆ ಕಾಂಗ್ರೆಸ್ಸಿನ ಪರವಾಗಿ ಆರಿಸಿ ಬಂದ ಕೌನ್ಸಿಲುಸದಸ್ಯರಿಗೆ ಸ್ವಾತಂತ್ರ್ಯವಿರದು. ಪ್ರಕೃತ ಪ್ರಶ್ನೆಯೊಳಗಿನ ಯೋಜನೆಯು ಬಹಳ [illegible] ಯೋಜನೆಯನ್ನು ಸೂಚಿಸಲಿಕ್ಕೂ ಅಧಿಕಾರವಿರದು. ಇಂತು ಲೋಕಮತಕ್ಕೆ ಮಾನ್ಯವಾದ ಯೋಜನೆಯಿದು ಎಂದು ಹೇಳಿ, [illegible] ವರೂ, ಅವರ ಬದಲು ಬೇರೆ ಹೊಸ ರಾಜ್ಯಯೋಜನೆಯಲ್ಲಿ ಅದನ್ನೇ ಇಡಬೇಕೆಂದು ಹಾಗೆ ಸೂಚಿಸಬಹುದು. ಆದ್ದರಿಂದ ತಟಸ್ಥವೃತ್ತಿಯನ್ನು ಬಿಟ್ಟು ಜಾತೀಯ ನಿರ್ಣಯವನ್ನು ಆಮೂಲಾಗ್ರ ತಿರಸ್ಕರಿಸುವದೇ ಕಾರ್ಯಕಾರಿ ಮಂಡಳದ ಕರ್ತವ್ಯವು. ಹಾಗೆ ಮಾಡದಿದ್ದರೆ ಕಮಿಟಿಯು ಹಿಂದು ಮತ್ತು ಶೀಖ ಸಮಾಜಗಳ ದ್ರೋಹಕ್ಕೆ ಕಾರಣವಾಗುವದು" ಎಂಬುದೇ ಅಣೆ-ಮಾಲವೀಯರ ಹೇಳಿಕೆಯ ಸಾರ.

ತಾರೀಖು ೨೮ರ ಮುಂಜಾನೆ ಮತ್ತು ಸಂಜೆ ಇದೇ ವಿಷಯದ ಚರ್ಚೆ ನಡೆಯಿತು. ಜಾತೀಯ ನಿರ್ಣಯದ ವಿರೋಧಕ್ಕೆ ಬಂದಾಗ ಕೌನ್ಸಿಲಿನೊಳಗಿನ ಹಿಂದು ಸಭಾಸದರಿಗೆ ಮತಸ್ವಾತಂತ್ರ್ಯವನ್ನಾದರೂ ಕೊಡಬೇಕೆಂದು ಪಂಡಿತ ಮಾಲವೀಯರವರು ಪ್ರತಿಪಾದಿಸಿದರಂತೆ. ಹಾಗೆ ಸ್ವಾತಂತ್ರ್ಯ ಕೊಟ್ಟಲ್ಲಿ ರಾಷ್ಟ್ರಸಭೆಯ ಶಿಸ್ತಿಗೆ ವಿರೋಧ ಬರುವದೆಂದು ಮಹಾತ್ಮರು [illegible] ಆ ಸೂಚನೆ ತಿರಸ್ಕರಿಸಲ್ಪಟಿತು. ಅಣೆ-ಮಾಲವೀಯರಿಬ್ಬರಿಗೆ ಬೇಕಾದರೆ ಮತಸ್ವಾತಂತ್ರ್ಯ ಕೊಡಲಿಕ್ಕೆ ಮಹಾತ್ಮರು ಒಪ್ಪಿಕೊಂಡರಂತೆ! ಇಷ್ಟರಿಂದ ಪಂಡಿತಜಿಯವರಿಗೆ ಸಮಾಧಾನವಾಗಲಿಲ್ಲ. ಇಂತೂ ತಾ. ೨೯ಕ್ಕೆ ರಾತ್ರಿ ಸಂಭಾಷಣೆ ಮುಗಿದುಹೋಯಿತು. ಮುಂದೆ ಮುಂಬಯಿ ಯೋಗ್ಯ ನಿರ್ಣಯವೇ ಸ್ಥಿರವಾಯಿತು! ಅಣೇ ಮಾಲವೀಯರವರು ಪಾರ್ಲಿಮೆಂಟರಿ ಬೋರ್ಡಿನ ಸಭಾಸದತ್ವಕ್ಕೆ ರಾಜೀನಾಮೆ ಸಹ ಕೊಟ್ಟುಬಿಟ್ಟರು!

ತಾ. ೩೦ಕ್ಕೆ ಪಾರ್ಲಿಮೆಂಟರಿ ಬೋರ್ಡಿನವರು ತಯಾರಿಸಿದ ಚುನಾವಣೆಯ ಜಾಹೀರನಾಮೆಯು ಮಂಜೂರ ಆಯಿತು. ಜಾಹೀರನಾಮೆಯನ್ನು ಸ್ವೀಕರಿಸುವಾಗ ಮಹಾತ್ಮರು ಹೃದಯಸ್ಪರ್ಶಿ ಭಾಷಣ ಮಾಡಿದರಂತೆ ವಾರ್ತಾವಾಹಕರು ತಿಳಿಸುತ್ತಾರೆ. ಮಹಾತ್ಮರು ತಮ್ಮ ಭಾಷಣದಲ್ಲಿ [illegible] ಮಂಡಳಿಗಳಿಗೆ ಅನುಸರಿಸಬೇಕಾದ ಧೋರಣವನ್ನು ಸ್ಪಷ್ಟ ಮಾಡಿದರಾಗಿಯೂ [illegible] ಮಹಾತ್ಮರ ಭಾಷಣದ ಸಾರಾಂಶ [illegible] ಕೊಟ್ಟಿದೆ.

ಸಮಾಜಸತ್ತಾವಾದಿ ಪಕ್ಷದ ಕೆಲ ಮುಖಂಡರು ಮಹಾತ್ಮರನ್ನು ಕಂಡು, ಕಾರ್ಯಕಾರಿ ಕಮಿಟಿಯು ತಮ್ಮ ಕಾರ್ಯಕ್ರಮವನ್ನು ಅಂಗೀಕರಿಸುವಂತೆ ಪ್ರಯತ್ನ ಮಾಡಬೇಕಾಗಿ ಕೇಳಿಕೊಂಡಿದ್ದರು. ಆಗ ಮಹಾತ್ಮರು " ನೀವು ಕಾರ್ಯಕಾರಿ ಕಮಿಟಿಯ ಮೇಲೆ, ನಿಮ್ಮ ಕಾರ್ಯ ಪ್ರಭಾವ [illegible] ವದೇ ನಿಮಗೆ [illegible]! ಇದನ್ನು ಸಂಯುಕ್ತ ರಾಷ್ಟ್ರೀಯ ಸಭೆಯು ನಿರ್ಣಯವನ್ನು ನೀವು ಮನ್ನಿಸಬೇಕು, [illegible] ರಾಷ್ಟ್ರೀಯ ಸಭೆಯಲ್ಲಿ ಇಬ್ಬಣಗಳನ್ನು ಮಾಡಲಿಕ್ಕೆ ಯತ್ನಿಸ

ರಾಷ್ಟ್ರೀಯ ಸಭಾಭಿಮಾನಿಗಳು ಪಾಲಿಸಬೇಕಾದ ರಾಷ್ಟ್ರಾಜ್ಞೆಗಳು.

ಬಾರದು ಅನಿಸ್ಸಿದಿದ್ದರೆ ನೀವೇ ರಾಷ್ಟ್ರೀಯ ಸಭೆಯ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಳ್ಳಬಹುದು ನಾವು ಹಿಂಜರಿಯುತ್ತೇವೆ, ಎಂದು ಹಿಂದೆ-ತೆಗೆದ ಉತ್ತರ ಕೊಟ್ಟರು. ಸಮಾಜ ಸತ್ತಾವಾದಿಗಳು ಈ ಮಾತಿಗೆ ಆಶ್ಚರ್ಯಚಕಿತರಾದರು. ಕೊನೆಗೆ ಮಹಾತ್ಮರ 'ನಿಮ್ಮ ಧೋರಣವನ್ನು ಕಮಿಟಿಗೆ ತಿಳಿಸಿ ನಿಮ್ಮ ಕಾರ್ಯಕ್ರಮದ ಬಗ್ಗೆ ಕಮಿಟಿಯ ಅಭಿಪ್ರಾಯವನ್ನು ಸ್ಪಷ್ಟಗೊಳಿಸುವೆನು!' ಎಂದು ಅವರಿಗೆ ಆಶ್ವಾಸನ ಕೊಟ್ಟರು. ಆ ಮೇರೆಗೆ ಕಮಿಟಿಯವರು ಸಮಾಜ ಸತ್ತಾವಾದದ ಕಾರ್ಯಕ್ರಮವನ್ನು ಪರ್ಯಾಲೋಚಿಸಿ ಒಂದು ಠರಾವನ್ನು ಮಾಡಿದರು.

ಸ್ವದೇಶೀಯ ವ್ಯಾಖ್ಯೆಯ ಬಗ್ಗೆ ಲೋಕದಲ್ಲಿ ಉಂಟಾದ ಭ್ರಮೆಯನ್ನು ದೂರಪಡಿಸಲಿಕ್ಕೆ ಒಂದು ಠರಾವಾಗಿರುತ್ತದೆ. ಹೀಗೆ ನಾಲ್ಕು ದಿವಸ ವರೆಗೆ ಸಭೆಗೂಡಿ ಕಮಿಟಿಯು ಈ ಕೆಳಗೆ ಕೊಟ್ಟ ಠರಾವುಗಳನ್ನು ಕೈಕೊಂಡಿದೆ.

ಕಾರ್ಯಕಾರಿ ಮಂಡಳದ ಠರಾವುಗಳು

ಖಾಸಗಿ ಆಸ್ತಿಯ ಸ್ಥಿರತೆ:

ವರ್ಗ-ಕಲಹಕ್ಕೆ ವಿರೋಧ

(೧) ದೇಶದಲ್ಲಿ ಬೇರೆ ಬೇರೆ ವಿಚಾರಸರಣಿಯವರು ತಮ್ಮ ತಮ್ಮ ಸಂಘಗಳನ್ನು ಸ್ಥಾಪಿಸುತ್ತಿದ್ದದು ಕಮಿಟಿಗೆ ಮಾನ್ಯವಿದೆ. ಆದರೆ ಕೆಲವು ಜನರು ನ್ಯಾಯಂಕರ ಖಾಸಗಿ ಆಸ್ತಿಯನ್ನು ಸರಕಾರ ಜಪ್ತ ಮಾಡಿ ಒಡಬಹುದೆಂದು ಕೊಡಬೇಕಾಗಿಯೂ, ಧನಿಕರ ವಿರುದ್ಧ ಕೂಲಿಯಾಳುಗಳನ್ನು, ಜಮೀನದಾರರ ವಿರುದ್ಧ ರೈತರನ್ನು ಎಬ್ಬಿಸಿಕೊಟ್ಟು ಧನಿಕ ರೈತ-ಕೂಲಿಕ ದರ ವರ್ಗ-ಕಲಹವನ್ನುಂಟುಮಾಡಬೇಕೆಂತಲೂ, ನಿಶ್ಚಿತವಾಗಿ ಒಡೆಬಡಿಸುವದನ್ನು ಕಂಡ ಕಮಿಟಿಗೆ ಬೇಸರ ಒಂದಿದೆ. ಇಂಥ ಅತ್ಯಾಚಾರಿ ತತ್ವಗಳಿಗೆ ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಸ್ಥಳವಿಲ್ಲ. ಯೋಗ್ಯ ಕಾರಣವಿಲ್ಲದೆ ಯಾ ನಷ್ಟ ಭರಪಾಯಿ ಮಾಡದೆ ಖಾಸಗಿ ಸಂಪತ್ತಿಯನ್ನು ಕೈವಶ ಮಾಡಿಕೊಳ್ಳಲಿಕ್ಕೆ ರಾಷ್ಟ್ರೀಯ ಸಭೆಯು ಒಪ್ಪಲಾರದು. ಬೇರೆ ಬೇರೆ ವರ್ಗಗಳಲ್ಲಿ ವೈಮನಸ್ಯವುಂಟು ಮಾಡಲಿಕ್ಕೂ, ರಾಷ್ಟ್ರೀಯ ಸಭೆಯು ಸಮ್ಮತಿಸಲಾರದು. ರಾಷ್ಟ್ರೀಯ ಸಭೆಯ ಧೋರಣವು ಕರಾಚಿ ಅಧಿವೇಶನದ ದಕ್ಷಿಣ ..., ... ಇದ್ದ ಆಗೋಸ್ತ ತಿಂಗಳಲ್ಲಿ ಮುಂಬಯಿಯಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಗೊತ್ತುವಳಿಯಲ್ಲಿಯೂ ನಿಶ್ಚಿತವಾಗಿರುತ್ತದೆ. ಕೊಂಗ್ರೆಸ್ಸಿನ ಅನುಯಾಯಿಗಳು ಅದನ್ನು ಮನಸಿನಲ್ಲಿಡಬೇಕು. ಒಡೆಯರಿಗೆ ಕಷ್ಟ ಕೊಡದೆ ತಮ್ಮ ಖಾಸಗಿ ಸಂಪತ್ತಿಯನ್ನು ಎಲ್ಲರೂ ಉಪಯೋಗಿಸಬೇಕಾಗಿಯೂ, ಧನಿಕರೂ ಕೂಲಿಕಾರರೂ ಮಾಡುವವರೂ ಪರಸ್ಪರ ಪ್ರೇಮ-ವಿಶ್ವಾಸದಿಂದ ನಡೆಸಬೇಕಾಗಿಯೂ ಕಮಿಟಿಯ ಅಭಿಪ್ರಾಯವಿರುತ್ತದೆ.

ಈ ರೀತಿ ಮುಂಬಯಿಯಲ್ಲಿ ಕೂಡಿದ ಕಮಿಟಿಯ ಸಭೆಯೊಳಗೆ ಠರಾವಾಗಿತ್ತು. ಈ ಠರಾವಿನಿಂದ ಹೊಸದಾಗಿ ಜನ್ಮವೆತ್ತಿದ ಸಮಾಜ ಸತ್ತಾವಾದಿಗಳ ಸಂಗಡಕ್ಕೂ ಅವರ ಕಾರ್ಯಕ್ರಮಕ್ಕೂ ಅನ್ಯಾಯವಾಗಿದೆಯೆಂದು ಪತ್ರಗಳು ಬಂದಿರುತ್ತವೆ. ಆದರೆ, ತಮ್ಮ ಠರಾವಿನಿಂದ ಆ ಸಂಗಡದ ಮೇಲಾಗಲಿ ಅವರ ಕಾರ್ಯಕ್ರಮದ ಮೇಲಾಗಲಿ ಟೀಕೆ ಮಾಡುವ ಉದ್ದೇಶವು ಕಮಿಟಿಯವರದಿದ್ದಿಲ್ಲ. ಆ ಠರಾವಿನಲ್ಲಿ ಹೇಳಿದಂತೆ ನಿರರ್ಗಲ ಪ್ರಲಾಪ ಮಾಡುವ ಕೆಲ ವ್ಯಕ್ತಿಗಳನ್ನುದ್ದೇಶಿಸಿಯೇ ಕಮಿಟಿಯು ಆ ನಿರ್ಣಯವನ್ನು ಕೈಕೊಳ್ಳಬೇಕಾಯಿತು.

ಶ್ರೀ| ಅಣೇಯವರ ರಾಜಿನಾಮೆ.

(೨) ಶ್ರೀ| ಅಣೇಯವರು ಉದಾತ್ತ ಭಾವನೆಯಿಂದ ಪ್ರೇರಿತರಾಗಿ ಕೊಟ್ಟ ರಾಜೀನಾಮೆಯನ್ನು ಕಮಿಟಿಯು ವ್ಯಸನಪಟ್ಟು ಸ್ವೀಕರಿಸುತ್ತದೆ. ಶ್ರೀಯುತರು ಈ ವರೆಗೆ ಕಮಿಟಿಗೆ ಮಾಡಿದ ಮಹತ್ವದ ಸಹಾಯದ ಬಗ್ಗೆ ಕಮಿಟಿಯು ಅವರ ಆಭಾರ ಮನ್ನಿಸುತ್ತದೆ.

'ಸ್ವದೇಶಿ' ಎಂದರೇನು?

(೩) ಸ್ವದೇಶಿ ತತ್ವದ ಬಗ್ಗೆ ರಾಷ್ಟ್ರೀಯ ಸಭೆಯ ಧೋರಣದಿಂದ ಭ್ರಮೆಯುಂಟಾಗಿರುತ್ತದ್ದರಿಂದ ತಮ್ಮ ಧೋರಣವನ್ನು ಮತ್ತೊಮ್ಮೆ ಸ್ಪಷ್ಟೀಕರಿಸುವದು ಕಮಿಟಿಗೆ ಅವಶ್ಯವೆನಿಸುತ್ತದೆ. ಕಳೆದ ಕಾಯಿದೆ ಭಂಗದ ಚಳವಳಿಯಲ್ಲಿ ಆದದ್ದಾಯಿತು, ಈ ಮುಂದೆ ಕೊಂಗ್ರೆಸ ಸಭೆಗಳಲ್ಲಾಗಲಿ ಕೊಂಗ್ರೆಸ್ಸಿನವರ ಪ್ರದರ್ಶನಗಳಲ್ಲಾಗಲಿ, ಖಾದಿ-ಗಿರಣಿಯ ಬಟ್ಟೆಗಳ ಹೋರಾಟ ನಡೆಯಬಾರದು. ರಾಷ್ಟ್ರೀಯ ಸಭೆಯು ಅನುಮೋದಿಸಿದ ಖಾದಿಯನ್ನೇ ಉಪಯೋಗಿಸತಕ್ಕದ್ದು ಪುರಸ್ಕರಿಸತಕ್ಕದ್ದು.

ಚಿಕ್ಕ-ಪುಟ್ಟ ಉದ್ಯೋಗಗಳಿಗೆ ಸಹಾಯ

ರಾಷ್ಟ್ರೀಯ ಸಭೆಯು ಆದಿಪತ್ಯದಲ್ಲಿ ಸ್ಥಾಪಿತ ಪುರಸ್ಕಾರ ಮಾಡುವ ಸಂಸ್ಥೆಗಳು ಈ ಮುಂದೆ ಊರ್ಜಿತ ಸ್ಥಿತಿಯಿಂದಲೇ ಅಭಿವೃದ್ಧಿಗೊಳ್ಳುವಂಥ, ಚಿಕ್ಕ-ಪುಟ್ಟ ಉಪಯುಕ್ತ ದೇಶೀಯ ಕೈಗಾರಿಕೆಗಳನ್ನೇ ಪುರಸ್ಕರಿಸಬೇಕು. ಆ ಕೈಗಾರಿಕೆಯವರು ತಾವು ತಮ್ಮ ವಸ್ತುಗಳ ಬೆಲೆಯನ್ನು ನಿಶ್ಚಯಿಸುವದರಲ್ಲಿ, ಕೂಲಿಯಾಳುಗಳ ಕೂಲಿ ಠರಾಯಿಸುವದರಲ್ಲಿ ಕೂಲಿಕಾರರ ಹಿತ ರಕ್ಷಣ ಮಾಡುವವರಲ್ಲಿ ರಾಷ್ಟ್ರೀಯ ಸಭೆಯ ಸಲಹೆಯಂತೆ ನಡೆಯುವವರಾಗಿರಬೇಕು.

ಇತರ ದೇಶೀಯ ಅವಶ್ಯಕ ಮುಖ್ಯ ದೇಶೀಯ ವಸ್ತುಗಳನ್ನೇ ಉಪಯೋಗಿಸಬೇಕಾಗಿ ರಾಷ್ಟ್ರೀಯ ಸಭೆಯು ಈ ವರೆಗೆ ಹೇಳಿಕೊಡುತ್ತಿರುವ ತತ್ವದಲ್ಲಿ ಅಡ್ಡಿಪಡಿಯಾಯಿತೆಂದು ತಿಳಿಯಬಾರದು. ಸರಕಾರಿ ಸಹಾಯವನ್ನು ಪಡೆಯುತ್ತಿರುವ ಯಾ ಪಡೆಯಬಹುದಾದ ದೊಡ್ಡ ದೊಡ್ಡ ಕಾರಖಾನೆಗಳಿಗೂ, ಉದ್ಯೋಗಗಳಿಗೂ ರಾಷ್ಟ್ರೀಯ ಸಭೆಯವರು ಸಹಾಯವನ್ನೀಯುವದು ಅವಶ್ಯವಿಲ್ಲೆಂದು ಸೂಚಿಸುವದೇ ಕಮಿಟಿಯ ಉದ್ದೇಶವಾಗಿರುತ್ತದೆ.

ಕೊಂಗ್ರೆಸ ಆಜ್ಞೆಯ ಭಂಗ.

(೪) ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಪೂರ್ಣವಿಶ್ವಾಸವಿಲ್ಲದವರು ಕಾರ್ಯಕಾರಿಮಂಡಲಗಳಲ್ಲಿ ಆರಿಸಿಬರಲು ಬಯಸಿದ್ದಲ್ಲಿ ಇಂಥವರು ತಾವು ಕಾರ್ಯವಾಹಕರಿರುವ ತನಕ ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನೇ ಪುರಸ್ಕರಿಸಬೇಕು, ರಾಷ್ಟ್ರೀಯ ಸಭೆಯ ಆಜ್ಞೆಯಂತೆ ನಡೆಸಬೇಕು. ಹಾಗಿಲ್ಲದೆ ಕಾರ್ಯವಾಹಕ ಅಧಿಕಾರಗಳನ್ನು ಆಕ್ರಮಿಸಿಕೊಂಡು, ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ವಿರುದ್ಧ ಪ್ರಚಾರ ಮಾಡುವವರು ಹಾಗು ವರ್ತನ ಮಾಡುವವರು ಆಜ್ಞಾಭಂಗದ ದೋಷಕ್ಕೆ ಗುರಿಯಾಗುವರು. ಶಿಸ್ತುಭಂಗ ಮಾಡಿದ ಬಗ್ಗೆ ಅವರ ಮೇಲೆ ಕ್ರಮ ನಡೆಸಲಾದೀತು.

ಚುನಾವಣೆಯ ಅಕ್ರಮಗಳು

(೫) ಕೊಂಗ್ರೆಸ ಸಂಸ್ಥೆಗಳ ಚುನಾವಣೆಗಳಲ್ಲಿ ಅತಿಕ್ರಮಗಳಾಗುತ್ತಿದ್ದುದನ್ನು ನೋಡಿ ಕಮಿಟಿಗೆ ಬಹಳ ವ್ಯಸನವಾಗುತ್ತದೆ. ಈ ಅತಿಕ್ರಮಗಳಿಂದ ಚುನಾವಣೆಗಳು ಸಹ ಅಕ್ರಮವಾಗುವ ಸಂಭವವಿದೆ. ಕೆಲವೆಡೆ ಉಮೇದವಾರರು ತಾವೇ ಕೈಯೊಳಗಿಂದ ವರ್ಗಣಿ ಕೊಟ್ಟು ತಮಗೆ ಮತ ಕೊಡುವಂಥ ಜನರಿಗೆ ಸಭಾಸದರನ್ನಾಗಿ ಮಾಡುತ್ತಾರೆಂದು ಕೇಳಿಬರುತ್ತದೆ. ರಾಷ್ಟ್ರೀಯ ಸಭೆಯ ಕಾರ್ಯದ ಮೇಲೆ ಆಸಕ್ತಿಯಿಂದ ಸಭಾಸದರಾಗುವವರನ್ನಾಗಿ ಮತ್ತು ಅವರ ಕರೆಯಿಂದ ಆದಷ್ಟು ರಾಷ್ಟ್ರಕಾರ್ಯ ಮಾಡುವವರನ್ನಾಗಿ ಜನರಿಗೆ ಸಭಾಸದರನ್ನಾಗಿ ಸೇರಿಸಿಕೊಳ್ಳತಕ್ಕದ್ದು ಹೊರತು, ಮತಸಂಗ್ರಹಕ್ಕಾಗಿ ಸಭಾಸದರನ್ನು ಮಾಡುವದು ಎಂದಿಗೂ ಯುಕ್ತವಲ್ಲ. ಇನ್ನು ಕೆಲವೆಡೆಗಳಲ್ಲಿ ಮತ ಕೊಡುವವರು ಚುನಾವಣೆಯ ಕಾಲಕ್ಕೆ ಮಾತ್ರ ಖಾದಿ ಧರಿಸುತ್ತಾರೆಂದು ದೂರು ಕೇಳುತ್ತದೆ. ನಿಯಮದಂತೆ ಯಾವಾಗಲೂ ಖಾದಿ ತೊಟ್ಟುಕೊಳ್ಳುವವರೇ ಮತಾಧಿಕಾರಕ್ಕೆ ಪಾತ್ರರು, ಇಂಥ ಅನಾಚಾರಗಳಿಂದ ಖಾದಿ-ಧಾರಣದ ನಿಯಮದ

(೭ ನೇ ಪಾನಿನ ಮೇಲೆ ಮುಂದರಿಸಿದೆ)

ಸುಲಭ ಕ್ರಯ! ಡಾಕ್ಟರ ಜೀ. ಕೆ. ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದ ಬಳಿಕ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆಸೋಪು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೇ ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಮಾಡಿದರೆ ಬಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಯಾದರಿ ಕೇಸ ಪ್ರತ್ಯೇಕ ಕಳಿಸಲಾದೀತು.

ಬಾಟ್ಲಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ಆಣೆ ಡಜನ್ ೧ ಕ್ಕೆ ರೂ. ೩-೮-೦ ವಿ ಪಿ ೦-೫-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ| ಬಾ ೫೧೦, ಪಾರ್ಕಟೌನ್, ಮದ್ರಾಸ.

ಹೆ| ವಾ| ಹಿಂಡೆನ್ಬರ್ಗರು.

[ನಿರೀಕ್ಷಕನು ಬರೆದುದು.]

ಜರ್ಮನಿಯ ' ರೀಶ ' ಯೆಂಬ ಪಾರ್ಲಿಮೆಂಟಿನ ಅಧ್ಯಕ್ಷರಾದ ಹಿಂಡೆನ್‌ಬರ್ಗರವರು ಗುರುವಾರ ಬೆಳಿಗ್ಗೆ ೯ ಘಂಟೆಗೆ ತೀರಿಕೊಂಡರು. ಆಸ್ಟ್ರಿಯಾ ದೇಶದೊಳಗಿನ ಡಾ| ಡೊಲ್ಫಸ್‌ರವರ ಕೊಲೆಯಾದ ಮರುವಾರವೇ ಹಿಂಡೆನ್‌ಬರ್ಗರ ದೇಹಾವಸಾನವಾಗಿದೆ. ಆಸ್ಟ್ರಿಯಾ ದೇಶದೊಳಗೆ ಇನ್ನೂ ಸಂಪೂರ್ಣವಾಗಿ ಶಾಂತಿ ನೆಲೆಗೊಂಡಿಲ್ಲ, ಯುರೋಪ ಖಂಡದಲ್ಲಿ ನಡೆದ ಗಡಿಬಿಡಿ ಇನ್ನೂ ಸಮಾಧಾನವಾಗಿಲ್ಲ. ನಾಝಿ ಪಕ್ಷದ ಕೊಲೆಗಡಕರಿಗೆ ವಿಚಾರದ ಶಾಸ್ತ್ರ ಮಾಡಿ ಗಲ್ಲಿಗೇರಿಸಲಾಯಿತು. ಸುಮಾರು ಸಾವಿರಕ್ಕೆ ಮಿಕ್ಕಿ ನಾಝಿ ಪ್ರಮುಖರು ಸೆರೆಬಿದ್ದಿದ್ದಾರೆ. ಜರ್ಮನಿಯ ಸರ್ವಸತ್ತಾಧಾರಿಗಳಾದ ಹಿಟ್ಲರರು ಆಸ್ಟ್ರಿಯಾದೊಳಗಿನ ದೊಂಬಿಗೂ, ತಮಗೂ ಸಂಬಂಧವಿಲ್ಲೆಂದು ಪ್ರಕಟಿಸಿದಾಗ್ಯೂ ಹಿಟ್ಲರರ ಮೇಲೆ ಒಬ್ಬರಿಗೂ ನಂಬಿಗೆಯಿಲ್ಲ. ಆಸ್ಟ್ರಿಯಾ ದೇಶದೊಳಗಿನ ದೊಂಬಿಯಲ್ಲಿ, ಆಸ್ಟ್ರಿಯಾ ದೇಶಕ್ಕೆ ಕಳುಹಿದ ಜರ್ಮನ್ ರಾಯಭಾರಿಗಳ ಅಂಗವಿದೆಂದು ಜನರ ಗ್ರಹಿಕೆಯಾಗಿದೆ. ಇದರಿಂದ ಹಿಟ್ಲರರು ಲೋಕಲಜ್ಜೆಗಾಗಿ ಅವರಿಗೆ ಕರೆಸಿಕೊಂಡು ವಾನ್ ಪೊಪೆನ್‌ರವರಿಗೆ ತಮ್ಮ ಸರಕಾರದ ಪ್ರತಿನಿಧಿಗಳಾಗಿ ಕಳುಹಿದರು. ಆಸ್ಟ್ರಿಯಾ ಸರಕಾರವು ಇದಕ್ಕೊಪ್ಪುವದಿಲ್ಲ. ಜರ್ಮನ್ ಸರಕಾರವು ಆಸ್ಟ್ರಿಯಾ ದೇಶದ ಸ್ವಾತಂತ್ರ್ಯದಲ್ಲಿ ಕೈಹಾಕಲಿಕ್ಕಿಲ್ಲವಾಗಿ ಹೇಳದು ಬರಕೊಟ್ಟಲ್ಲದೆ ವಾನ್ ಪೊಪೆನ್ ರಾಯಭಾರಿಗಳಿಗೆ ಆಸ್ಟ್ರಿಯಾ ದೇಶದಲ್ಲಿ ಪ್ರವೇಶ ಸಿಗಲಿಕ್ಕಿಲ್ಲವಾಗಿ ಆಸ್ಟ್ರಿಯಾ ಸರಕಾರದ ಅಂಬೋಣ. ಆಸ್ಟ್ರಿಯಾ ದೇಶದೊಳಗಿನ ನಾಝಿಗಳಿಗೂ, ಜರ್ಮನಿಗೂ ಇಷ್ಟ ಸಂಬಂಧ ತೊಡರಿಸಲ್ಪಡಬೇಕೆಂದೂ ಆಸ್ಟ್ರಿಯಾ ನಾಝಿಗಳಿಗೆ ಜರ್ಮನಿಯಿಂದ ಬಾಂಬು-ಹಣಗಳ ಪೂರೈಕೆಯಾಗಬಾರದೆಂದೂ ಆಸ್ಟ್ರಿಯಾ ಸರಕಾರದ ಅಂಬೋಣ. ಆದರಿಂದ ವಾನ್ ಪೊಪೆನ್‌ರವರು ಇನ್ನೂ ಬರ್ಲಿನ್‌ದಲ್ಲಿಯೇ ಉಳಿಯಬೇಕಾಗಿದೆ. ಆಸ್ಟ್ರಿಯಾ ದೇಶದ ಸ್ವಾತಂತ್ರ್ಯವೆಂದರೆ, ಜರ್ಮನ್ ದೇಶದ ಕೊರಳ ಕುಂಟೆ. ಆಸ್ಟ್ರಿಯಾ-ಹುಂಗೇರಿ ರಾಷ್ಟ್ರದವರೂ, ಪೋಲಂಡ, ಸ್ವಿಝರ್ಲಂಡ ದೇಶದವರೂ, ಈಗಿನ ಇಟಾಲಿಯ ಉತ್ತರ— ಪೂರ್ವ ಗಡಿನಾಡಿನೊಳಗಿನವರೂ ಒಂದೇ ಜರ್ಮನ್ ವಂಶದವರು. ಈ ಯಾವತ್ತೂ ಜರ್ಮನರಿಗೆ ಒಟ್ಟು ಮಾಡಿ ಯುರೋಪ ಖಂಡದಲ್ಲಿ ಬಲಾಢ್ಯರಾಗಲು ಜರ್ಮನಿಯ ಹಿಟ್ಲರರು ನಾಝಿ ಪಕ್ಷದ ಪರವಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಜರ್ಮನ್‌ರ ಐಕ್ಯವಾಗಬಾರದೆಂಬುದರಿಂದಲೇ ಮಿತ್ರ ರಾಷ್ಟ್ರಗಳು—ಆಸ್ಟ್ರಿಯಾ-ಹುಂಗೇರಿ ಪ್ರದೇಶವನ್ನು ' ಜನವಾ-ಪ್ರೊಟೊಕೊಲ ' ಎಂಬ ಒಪ್ಪಂದದಂತೆ ತುಂಡರಿಸಿ ಕೆಲ ಭಾಗವನ್ನು ಇಟಾಲಿಗೆ ಸೇರಿಸಿದರು. ಹಂಗೇರಿಯನ್ನು ಪೃಥಕ್ಕರಿಸಿದರು. ಝೆಕೊಸ್ಲೊವಾಕಿಯಾ, ಯುಗೊಸ್ಲೇವಿಯಾ, ಹೀಗೆ ಹೊಸ ರಾಷ್ಟ್ರಗಳನ್ನು ನಿರ್ಮಿಸಿ ಆಸ್ಟ್ರಿಯಾ ದೇಶದ ವ್ಯಾಪ್ತಿಯನ್ನು ನಿಯಂತ್ರಿಸಿದರು. ಆಸ್ಟ್ರಿಯಾದೇಶದ ಸ್ವಾತಂತ್ರ್ಯವೆಂದರೆ ಆಸ್ಟ್ರಿಯಾ ದೇಶವು ಜರ್ಮನಿಯೊಡನೆ ಸೇರಕೂಡದು, ಬ್ರಿಟಿಶ-ಫ್ರಾನ್ಸ-ಇಟಾಲಿ ದೇಶಗಳ ತಂತ್ರದಂತೆ ನಡೆಯತಕ್ಕದ್ದು. ಡಾ| ಡೊಲ್ಫಸ್‌ರವರು ಈ ತಂತ್ರದೋಗಿಸಿದರು. ಆದರಿಂದಲೇ ನಾಝಿಯವರು ಅವರಿಗೆ ಕೊಂದರು. ಡಾ| ಡೊಲ್ಫಸ್‌ರವರ ಕೊಲೆಯಿಂದ ಉಂಟಾದ ಗೊಂದಲ ತಣ್ಣಗಾಗುವ ಪೂರ್ವದಲ್ಲಿಯೇ ಜರ್ಮನಿಯ ಅಧ್ಯಕ್ಷರಾದ ಹಿಂಡೆನ್‌ಬರ್ಗರು ತೀರಿಕೊಂಡರು. ಹಿಟ್ಲರರು ಚಾನ್ಸಲರ ಯಾನೆ ಪ್ರಧಾನ ಮಂಡಳದ ಅಧಿಪತಿಗಳಾಗಿದ್ದರೂ, ಹಿಂಡೆನ್‌ಬರ್ಗರಿಗೆ ಅವರು ಬಗ್ಗಿ ನಡೆಯಬೇಕಾಗಿತ್ತು. ಹಿಂಡೆನ್‌ಬರ್ಗರು ಹಿಟ್ಲರರಿಗೆ ಕಡಿವಾಣವಾಗಿ ದ್ದರು. ಆ ಕಡಿವಾಣ ಕಳೆದ ವಾರ ದೂರವಾಯಿತು. ಹಿಟ್ಲರರು ಮಂತ್ರಿಮಂಡಳವನ್ನು ಬಗಲಿಗೆಯಿಂದ ಸೇರಿಸಿಕೊಂಡು ತಾವೇ ಅಧ್ಯಕ್ಷರೆಂದೂ ಸೇನಾಪತಿಗಳೆಂದೂ ಪ್ರಕಟಿಸಿ ಘೋಷಿಸಿದ್ದಾರೆ. ಶಾಸನದಂತೆ ಹಿಂಡೆನ್‌ಬರ್ಗರ ಅಧಿಕಾರದಲ್ಲಿ ಬೇರೊಬ್ಬರು ಅಧ್ಯಕ್ಷರಾಗಿ, ಆ ಬಳಿಕ ಇಲೆಕ್ಷನು ನಡೆದು ಇಲೆಕ್ಷನ್ ಪರಿಣಾಮದಂತೆ ಹಿಟ್ಲರರಾಗಲಿ, ಬೇರೊಬ್ಬರಾಗಲಿ ಅಧ್ಯಕ್ಷರಾಗಬೇಕಾಗಿತ್ತು. ಹಿಟ್ಲರರು ರಾಜ್ಯಘಟನೆಯನ್ನು ಉಲ್ಲಂಘಿಸಿ ಸರ್ವಸತ್ತಾಧಾರಿಗಳಾಗಿದ್ದಾರೆ. ಇಲೆಕ್ಷನು ಇದೇ ಬರುವ ಆಗಸ್ಟ ೧೯ನೇ ತಾರೀಖಿಗೆ ನಡೆಯುವದಾದರೂ ಈ ಹೊತ್ತಿಗೆ ಜರ್ಮನಿಯಲ್ಲಿ ಹಿಟ್ಲರರಿಗೆ ಎದುರಾಗಿ ಸ್ಪರ್ಧಿಸುವ ಪಕ್ಷ ಯಾವುದೂ ಇಲ್ಲ. ಹಿಂಡೆನ್‌ಬರ್ಗರ ಉತ್ತರಾಧಿಕಾರಿಯಾಗಿ ತಾವು ಅಧಿಕಾರ ಗ್ರಹಿಸುತ್ತೇವೆಂಬ ಠರಾವನ್ನು ಪ್ರಕಟಿಸಿದ ಬಳಿಕ ಹಿಟ್ಲರರು ಒಂದು ಪತ್ರಿಕೆಯನ್ನು ಹೊರಡಿಸಿದರು. ಇಷ್ಟು ನಿರಂಕುಶ, ಸ್ವೇಚ್ಛಾಚಾರಿ ಹಿಟ್ಲರರು ಈ ಜರ್ಮನಿಯ ಪ್ರಜೆಗಳ ಒಪ್ಪಿಗೆ ಪಡೆಯುವದೇನು? ಗುತ್ತಿದೆಂದು ಯಾರಿಗೂ ತಿಳಿಯದ ಮಾತು.

ಇಟಾಲಿಯು ಗಡಿನ ಮೇಲೆ ಸೈನ್ಯ ರಾಶಿಯನ್ನಿಟ್ಟಿದೆ. ಪೋಲಂಡ, ಝೆಕೊಸ್ಲೊವಾಕಿಯಾ ದೇಶಗಳು ಎಚ್ಚರದಿಂದ ನೋಡುತ್ತಿವೆ. ಪ್ರೆಸಿಡೆಂಟ್ ಹಿಂಡೆನ್‌ಬರ್ಗರ ಕಟ್ಟಿಸಿ ಮುಂದಿನ ಯುದ್ಧ ತಯಾರಿ ಮಾಡುತ್ತಿದ್ದಾರೆಂದು ಸನಿಹದಲ್ಲಿನ ಹೇಳಿಕೆ. ಪಕ್ಷದ ' ಡೇಲಿ ಹೆರಲ್ಡ ' ಪತ್ರಿಕೆಯು ರಾಜಕೀಯ ಸ್ನೇಹಿತರ ' ಕಾದಾಡುವ ನ್ಯಾಯ ' (Fighting fair) ಎಂಬ ಲೇಖನದಲ್ಲಿ ಪ್ರತಿಪಕ್ಷದವರು ಸಮ್ಮತಿಸುವ ಯೋಗ್ಯವಿಲ್ಲದ ಅವಕಾಶ ದೊರೆಯದಂತೆ ನೋಡಿಕೊಳ್ಳುವದಾದರೆ, " ಜನರಲ್ ಹಿಟ್ಲರ್ ಗಳ ಶಕ್ತಿಯಿಂದ ಲಂಡನ್ ಪಟ್ಟಣವನ್ನು ರಕ್ಷಿಸಿಕೊಳ್ಳಬೇಕಾದರೆ ಫ್ರಾನ್ಸ, ಬೆಲ್ಜಿಯಂ, ಹಾಲಂಡ ಈ ದೇಶಗಳೊಡನೆ ಸಹಕಾರ ಮಾಡಬೇಕು. ಒಂದರ ಮಾತ್ರ ಬಲವಿರುವದೆ " ಹೀಗಿದೆ. ಮುಖ್ಯ ಪ್ರಧಾನರಾದ ಮಿ. ಬಾಲ್ಡ್ವಿನ್‌ರವರು ಬ್ರಿಟಿಶ ದೇಶದ ಆಕಾಶ ಸರಹದ್ದು ಫ್ರಾನ್ಸ ದೇಶದಲ್ಲಿದೆಂದು ಪಾರ್ಲಿಮೆಂಟಿನಲ್ಲಿ ನುಡಿದರು. ಇದರ ಮೇಲಿಂದ ಮುಂದಿನ ಲಕ್ಷಣಗಳ ಕಲ್ಪನೆ ಒಂದೀತು. ಬ್ರಿಟಿಶ ಸರಕಾರವು ಶಸ್ತ್ರಸನ್ಯಾಸ ಯಾಗದಲ್ಲಿ ಯುದ್ಧ ವಿಮಾನಗಳನ್ನು ಏರ್ಪಡಿಸಿ ಯುದ್ಧ ತಯಾರಿಯನ್ನೇ ನಡೆಸುತ್ತಿರುವದಾಗಿ ಪಾರ್ಲಿಮೆಂಟಿನೊಳಗಿನ ಮಜೂರಕಾರ ಪಕ್ಷದ ಸಭಾಸದರು ಆಕ್ಷೇಪಿಸಿದ್ದರು. ಆ ಕಾರ್ಯಕ್ರಮಕ್ಕೆ ತದನಂತರದ ಠರಾವು ಪ್ರಚಂಡ ಬಹುಮತದಿಂದ ತಿರಸ್ಕರಿಸಲ್ಪಟ್ಟಿದೆ. ಇದರ ಮೇಲಿಂದ ಬ್ರಿಟಿಶರ ಮನೋರಚನೆಯು ಕಲ್ಪನೆಯಾಗುವಂತಿದೆ. ಇಟಾಲಿ—ಫ್ರಾನ್ಸ ದೇಶಗಳಲ್ಲಿಯೂ, ಆಸ್ಟ್ರಿಯಾ ದೇಶದಲ್ಲಿಯೂ ಮುಸೊಲಿನಿಯವರ ' ಫೆಸಿಝಮ್ ' ಸಂಪ್ರದಾಯವೇ ಪ್ರಚಾರವಾಗುತ್ತಿದೆ. ಡಾ| ಡೊಲ್ಫಸ್‌ರವರ ತರುವಾಯ ಘಟಿಸಲ್ಪಟ್ಟ ಆಸ್ಟ್ರಿಯಾ ದೇಶದ ಪ್ರಧಾನ ಮಂಡಳದಲ್ಲಿ ಫೆಸಿಸ್ಟರಿಗೇ ಹೆಚ್ಚಾಗಿ ಸೇರಿಸಿಕೊಳ್ಳಲ್ಪಟ್ಟಿದೆ. ಫ್ರಾನ್ಸ ದೇಶದಲ್ಲಿ ಸೈನಿಕರ ಬೆಂಬಲಕ್ಕೆ ಸ್ವಯಂಸೇವಕರಿಗೆ ದಾಖಲಪಡಿಸಿಕೊಂಡು ಸೈನ್ಯ ಶಿಕ್ಷಣ ಕೊಡುವದಕ್ಕಾಗಿ ಹೊಸ ಕಾಯಿದೆಯ ಏರ್ಪಾಟಾಗುತ್ತಿದೆ. ರುಶ್ಯರು ಯುದ್ಧಹಡಗಗಳನ್ನು 'ಸ್ವಸಂರಕ್ಷಣೆಕ್ಕಾಗಿ ' ಕಟ್ಟಲಾರಂಭಿಸಿದ್ದಾರೆ. ಇದೆಲ್ಲದರ ಪರಿಣಾಮ ಪುನಃ ಯುದ್ಧ ಸಿದ್ಧತೆ! ಹಿಂಡೆನ್‌ಬರ್ಗರ ನಿಧನದಿಂದ, ಹಿಟ್ಲರರ ಸರ್ವಸತ್ತಾಸ್ವೀಕಾರದಿಂದ ಯುರೋಪ ಖಂಡದ ವಾತಾವರಣದಲ್ಲಿ ಅನಪೇಕ್ಷಿತವಾದ ಸ್ಥಿತ್ಯಂತರಗಳು ಒದಗಲಿಕ್ಕಿವೆ. ಹಿಂಡೆನ್‌ಬರ್ಗರು ಮಹಾಯುದ್ಧ ಪ್ರಾರಂಭವಾದ ತಾರೀಖಿಗೇ ತೀರಿಕೊಂಡಿದ್ದಾರೆ. ಇದರ ಇಂಗಿತವೇನಿರಬಹುದೆಂದು ವಾರ್ತಾಹರರ ಸೂಚಕ ಪ್ರಶ್ನೆ. ನೋಡುವ, ಏನಾಗುತ್ತದೆಂದು!

ಪಂಡಿತ ಮದನಮೋಹನ ಮಾಲವೀಯರವರೂ, ಶ್ರೀ| ಅಣೆಯವರೂ ಹೊಸ ರಾಷ್ಟ್ರೀಯ ಪಕ್ಷ ಸ್ಥಾಪನೆ ಮಾಡಿ ಇಲೆಕ್ಷನು ನಡಿಸುವರು. ರಾಷ್ಟ್ರೀಯ ಸಭೆಯವರ ಮತ್ತು ಮಹಾತ್ಮರ ಅನುಮತಿ ಪಡೆದು ಅವರು ತಮ್ಮ ಕಾರ್ಯ ನಡಿಸುವರಂತೆ.

ಸದ್ಯಕ್ಕೆ ಕಲಕತ್ತೆಯ ಹ್ಯಾಕೋರ್ಟಿನವರು ಶಾರದಾ ಕಾನೂನಿನ ಕುರಿತು ಒಂದು ನಿರ್ಣಯ ಕೊಟ್ಟಿದ್ದಾರೆ. ಈಸ್ಟ ಇಂಡಿಯಾ ಕಂಪನಿಗೆ ಸನ್ ೧೮೦೦ ಹಾಗು ೧೮೫೮ನೇ ಸಾಲುಗಳಲ್ಲಿ ಕೊಟ್ಟ ಪಾರ್ಲಿಮೆಂಟಿನ ಸನದುಗಳಂತೆ ಶಾರದಾ ಕಾನೂನು ರದ್ದಾಗುತ್ತದಾಗಿಯೂ ಆ ಕಾನೂನುಗಳನ್ನು ತಿದ್ದುಪಡಿ ಮಾಡುವತನಕ ಬಂದುಗಳಿಗೆ ಬೇಕಾದ ವಯಸ್ಸಿನಲ್ಲಿ ಮಕ್ಕಳ ಮದುವೆ ಮಾಡಬರುತ್ತದಾಗಿಯೂ ನ್ಯಾಯಮೂರ್ತಿ ಬಿ ಎಸ್. ಮಿತ್ರ ಹಾಗು ಎಸ್. ಕೆ. ಘೋಷರವರ ಅಂಬೋಣ. ಬಾರಿಸಾಲ ಜಿಲ್ಹೆಯ ವಸಂತ ಕುಮಾರದಾಸ ಎಂಬವರು ತಮ್ಮ ೧೧ ವರ್ಷದೊಳಗಿನ ಮಗಳಿಗೆ ಮದುವೆ ಮಾಡಿದ ಬಗ್ಗೆ ಆದ ಶಿಕ್ಷೆಯ ವಿರುದ್ಧ ಮಾಡಿದ ಅಪೀಲಿನ ತೀರ್ಪಿದು.

Siromani Udipi Narayanacharya,
CHAUKHAMBA BENARES CITY.

ಮಾಹಾಶಯರೇ ರುದ್ರಾಕ್ಷಿ ಸ್ವತಃ ಪ್ರತ್ಯಕ್ಷವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿಕೊಳ್ಳಿರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇರು. ಸಣ್ಣದಾಗುತ್ತ ಬರುತ್ತ ಪ್ರಿಯ ಕಟ್ಟುವದು. ಕಂಠಿ ಸರ 32 ಮಣಿಯ ರೂ 0 8 0 ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ 3 8 0 ಯಿಂದ 500 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1-0 ಸ್ಟಾಂಪು ಕಳಿಸಿರಿ, 1ರಾಶಿ ನಕ್ಷೆ. 1 ಪಿತ್ತೇಶ್ವರನ ಪದ ನಮ್ಮ ಕಡೆಯಾಗು ಸಹ ಇನಾಂ ಕಳಿಸಲಾಗುತ್ತದೆ. ಪತ್ತೆ—
ಶಿರೋಮಣಿ ನಾರಾಯಣಾಚಾರ್ಯರ್,
ಚೌಖಂಬಾ, ಕಾಶೀ ಕ್ಷೇತ್ರ

(ಸಂಪಾದಕೀಯ ಮುಂದರಿದದ್ದು)

ಉದ್ದೇಶವೇ ಈಗ ಹೊಂದುತ್ತಿದ್ದ ಆದ್ದರಿಂದ ಚುನಾವಣೆಯಲ್ಲಿ ಸ್ಪರ್ಧಿಸುವ ಮಾಡುವವರು ಯಾರಾಗಲಿ ಜಾತಿಯನ್ನು ಜಾಡಿಸುವವರ ಮತಗಳನ್ನಷ್ಟೇ ಏಕೆ ಆಸ್ಪಿರ ಮತಗಳನ್ನು ತಿರಸ್ಕರಿಸಬೇಕು

ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಜಾಹೀರನಾಮೆ.

ಬರುವ ಚುನಾವಣೆಯಲ್ಲಿ ಕೊಂಗ್ರೆಸ ಉಮೇದವಾರರಿಗೆ ಮತ ಕೊಟ್ಟು ಆರಿಸಿಕೊಡಬೇಕಾಗಿ ಮತದಾರರಿಗೆ ಬೋರ್ಡು ಆರಿಕೆ ಮಾಡುತ್ತಿದ್ದ ರಾಷ್ಟ್ರೀಯ ಸಭೆಯ ಧೋರಣವು ಈಗ ಪ್ರಕಟವಾಗಿದೆ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ಕೆಳಗೆ ಕೊಟ್ಟಂತೆ ನಮಗ ಮಾರ್ಗ ಕಾಣಿಸಿಕೊಟ್ಟಿದೆ.

"ಶ್ವೇತ ಪತ್ರಿಕೆ"ಯು ಭಾರತೀಯರ ಮನೋಗತದ ಪ್ರತಿಬಿಂಬವಲ್ಲ ಬಹುತರವಾಗಿ ಯಾವತ್ತು ರಾಜಕೀಯ ಪಕ್ಷೋಪಪಕ್ಷಗಳು ಆ ಯೋಜನೆಯನ್ನು ಧಿಕ್ಕರಿಸಿವೆ ರಾಷ್ಟ್ರೀಯ ಸಭೆಯ ಧ್ಯೇಯಕ್ಕೂ ಶ್ವೇತಪತ್ರಿಕೆಯ ಯೋಜನೆಗೂ ಅಜಗಜಾಂತರವಿದ ನಮ್ಮ ಧ್ಯೇಯಸಾಧನೆಯ ಮಾರ್ಗದಲ್ಲಿ ಅದರಿಂದ ತೊಡಕುಗಳುಂಟಾಗಿವೆಯೆಂದು ಹೇಳಬಹುದು.

ಶ್ವೇತಪತ್ರಿಕೆಯನ್ನು ಟೀಕಿಸುವ ಇದರ ಬದಲು ಪ್ರಾಯಕ್ಕೆ ಬಂದ ಸ್ತ್ರೀ-ಪುರುಷರು ಆರಿಸಿಕೊಟ್ಟ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ *(Constituent Assembly)* ತಯಾರಿಸಿದ ರಾಜ್ಯಕಾರಭಾರದ ಯೋಜನೆಯನ್ನು ಪ್ರಚುರಗೊಳಿಸುವತನಕ ನಮಗ ಸಮಾಧಾನವಿಲ್ಲ ಅಲ್ಪಸಂಖ್ಯಾಕ ದೊಡ್ಡ ದೊಡ್ಡ ಸಮಾಜಗಳಿಗೆ ಅವಶ್ಯವೆಂದು ಕಂಡುಬಂದಲ್ಲಿ ಆ ಆ ಸಮಾಜಗಳು ತಂತಮ್ಮ ಜನರೊಳಗಿಂದಲೇ ಕೌನ್ಸಿಲುಗಳಿಗೆ ಪ್ರತಿನಿಧಿಗಳನ್ನು ಆರಿಸಿಕೊಡಬಹುದು

ಶ್ವೇತಪತ್ರಿಕೆಯು ಮೂಲೆಗೆ ಬಿದ್ದಂದರೆ ಅದರ ಕೂಡ ಮುಖ್ಯ ಪ್ರಧಾನರು ಕೊಟ್ಟ ಜಾತಿ ಪ್ರಾತಿನಿಧ್ಯದ ನಿರ್ಣಯವು ತಾನಾಗಿಯೇ ರದ್ದಾಗುತ್ತದೆ. ಅಲ್ಪಸಂಖ್ಯಾಕ ಸಮಾಜದ ಪ್ರತಿನಿಧಿಗಳು ಯಾವ ಬಗೆಯಿಂದ ಆರಿಸಿಬರಬೇಕೆಂಬವನ್ನೂ, ಅಲ್ಪಸಂಖ್ಯಾಕ ಸಮಾಜಗಳ ಹಿತರಕ್ಷಣೆ ಯಾವ ರೀತಿ ಮಾಡಬೇಕೆಂಬದನ್ನೂ ಪ್ರಜಾಪ್ರತಿನಿಧಿ ಸಭೆಯೇ ನಿರ್ಧರಿಸುವದು

ಜಾತಿ ಪ್ರಾತಿನಿಧ್ಯದ ನಿರ್ಣಯದ ಕುರಿತು ಬೇರೆ ಬೇರೆ ಮತಭೇದಗಳಿರುವ ಕಾರಣ, ಆ ಬಗ್ಗೆ ರಾಷ್ಟ್ರೀಯ ಸಭೆಯ ಅಭಿಪ್ರಾಯವನ್ನು ವ್ಯಕ್ತ ಮಾಡುವದು ಅವಶ್ಯವಿದೆ ರಾಷ್ಟ್ರೀಯ ಸಭೆಯು ಯಾವತ್ತು ಸಮಾಜಗಳ ಪ್ರತಿನಿಧಿಯೆಂದು ಹೇಳಿಸಿಕೊಳ್ಳುತ್ತಿದೆ ಆದುದರಿಂದ ಜಾತಿ ನಿರ್ಣಯದ ಬಗ್ಗೆ ರಾಷ್ಟ್ರದಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳು ಕಂಡುಬರುತ್ತಲಿದ್ದುದರಿಂದ, ಆ ಮತಭೇದಗಳಿರುವ ತನಕ ರಾಷ್ಟ್ರೀಯ ಸಭೆಯು ಆ ನಿರ್ಣಯವನ್ನು ಸ್ವೀಕರಿಸುವದೂ—ಇಲ್ಲ, ತಿರಸ್ಕರಿಸುವದೂ ಇಲ್ಲ ಆದಾಗ್ಯೂ ರಾಷ್ಟ್ರೀಯತ್ವಕ್ಕೆ ವಿರುದ್ಧವಾಗಿರುವ ಯಾವದೇ ಯೋಜನೆಯನ್ನು ರಾಷ್ಟ್ರೀಯ ಸಭೆಯು ಪುರಸ್ಕರಿಸದು. ರಾಷ್ಟ್ರೀಯತ್ವದ ಮೇಲೆ ಆಧರಿಸಿದ ಯೋಜನೆಯ ಅಭಾವದಲ್ಲಿ, ಸರ್ವಸಮ್ಮತವಾದ ಯೋಜನೆಯನ್ನು ಸ್ವೀಕರಿಸಲಿಕ್ಕೆ ರಾಷ್ಟ್ರೀಯ ಸಭೆಯು ಬದ್ಧೀಕೃತವಾಗಿದೆ ಎರ್ಥಾತ್ ಸರ್ವಸಮ್ಮತವಾಗದಿರುವ ಯೋಜನೆಯನ್ನು ರಾಷ್ಟ್ರೀಯ ಸಭೆಯು ತಿರಸ್ಕರಿಸುವದೇ ಸರಿ.

ರಾಷ್ಟ್ರೀಯತ್ವದ ದೃಷ್ಟಿಯಿಂದ ಜಾತಿ ನಿರ್ಣಯವು ಬಹಳ ಅಸಮಾಧಾನಕರವಿರುವದೆಂಬ ಮಾತು ತೀರ ಸ್ಪಷ್ಟವಿದೆ. ಮೇಲಾಗಿ ಅದರಲ್ಲಿ ಬೇರೆ ಅನೇಕ ಕುಂದು-ಕೊರತೆಗಳೂ ಉಂಟು.

ಸದರಿ ಜಾತಿ ನಿರ್ಣಯದ ಊಣತ್ವವು ತಪ್ಪಿಸುವದಾದರೆ ಸಾಮ ಒಮ್ಮತನ್ನಿನಿಂದ ವಿಚಾರ ಮಾಡಿ ಸರ್ವಮಾನ್ಯ ಯೋಜನೆಯನ್ನು ತಯಾರಿಸಬೇಕು ಅದು ಕೇವಲ ಖಾಸಗಿ ಪ್ರಶ್ನೆಯಿದ್ದು, ಆ ಬಗ್ಗೆ ಬ್ರಿಟಿಶ ಸರಕಾರದ ಇಲ್ಲವೆ ಬೇರೆ ಯಾವದೇ ಪರಕೀಯರ ಸಹಾಯವನ್ನು ತಕ್ಕೊಳ್ಳುವದು ಅವಶ್ಯವಿಲ್ಲ"

ಈ ಜಾಹೀರನಾಮೆಯಲ್ಲಿ ಜಾತಿ ನಿರ್ಣಯದ ಸಂಬಂಧವಾಗಿ ಮಾಡಿದ ವಿವರಣೆಯ ಮೇಲೆ ಬಹಳೇ ಅನುಕೂಲ-ಪ್ರತಿಕೂಲ ಟೀಕೆಯಾಗಿದೆ ಆ ನಿರ್ಣಯವು ಸ್ವತಃ ಸಮಾಧಾನಕರವಿಲ್ಲವೆಂಬುದು ನಿಜ ಆದರೆ ಅದು ಬಹುಸಂಖ್ಯಾಕ ಮುಸಲ್ಮಾನರಿಗೆ ಇಷ್ಟವಾಗಿರುವದರಿಂದ ರಾಷ್ಟ್ರೀಯ ಸಭೆಯು ಅದನ್ನು ತಿರಸ್ಕರಿಸಲಾರದು ಹಿಂದು ಮತ್ತು ಶೀಖ ಸಮಾಜಗಳು ವಿರೋಧಿಸುವದರಿಂದ ಅದನ್ನು ಸ್ವೀಕರಿಸಲೂ ಬರುವದಿಲ್ಲ. ಯಾವಾಗಲೂ ಶಾಂತಿ ಮತ್ತು ಐಕ್ಯ ತತ್ವಗಳನ್ನು ಸಾಧಿಸುತ್ತಿರುವ ರಾಷ್ಟ್ರೀಯ ಸಭೆಗೆ ಇನ್ನೊಂದು ಮಾರ್ಗ ಹಿಡಿಯಲಿಕ್ಕೆ ಸಾಧ್ಯವಿಲ್ಲ ಭರತ ಖಂಡದೊಳಗಿನ ಬೇರೆ ಬೇರೆ ಸಮಾಜಗಳು ಪರಸ್ಪರ ನ್ಯಾಯದಿಂದಲೂ, ನೀತಿಯಿಂದಲೂ ವರ್ತಿಸುವರಾಗಿಂಬ ರಾಷ್ಟ್ರೀಯ ಸಭೆಯ ನಂಬಿಗೆ. ಆದ್ದರಿಂದ ಕೊಂಗ್ರೆಸ ಪಕ್ಷದವರು ನೂತನವಾದ ಸರ್ವಸಮ್ಮತ ಯೋಜನೆಯನ್ನೇ ತಯಾರಿಸಲಿಕ್ಕೆ ಯತ್ನ ಮಾಡತಕ್ಕದ್ದು. ಪರಸ್ಪರ ಸಹಾಯದಿಂದ ಈ ಕಾರ್ಯ ಸಾಧ್ಯವಾಗದು ಇನ್ನೊಂದು ಸಂಗತಿಯನ್ನು ಜನರು ಮರೆಯಲಾಗದು ಶ್ವೇತಪತ್ರಿಕೆಯು ನಾಶವಾದರೆ ಶ್ವೇತ ಪತ್ರಿಕೆಯ ಸಲುವಾಗಿಯೇ ತಯಾರಿಸಲ್ಪಟ್ಟ ಜಾತಿ ನಿರ್ಣಯವೂ ತಾನಾಗಿ ನಾಶವಾಗುವದು. ಜಾತಿ ನಿರ್ಣಯವು ರಾಷ್ಟ್ರ ಹಿತವಿಘಾತಕವಾದರೆ ಶ್ವೇತ ಪತ್ರಿಕೆಯು ಅದಕ್ಕೂ ಘಾತಕವಾದದ್ದು ಆದ್ದರಿಂದ ಕೊಂಗ್ರೆಸ ಜನರು ಶ್ವೇತಪತ್ರಿಕೆಯನ್ನೇ ಧಿಕ್ಕರಿಸಿ ಲೋಕಪ್ರತಿನಿಧಿಗಳ ಸಭೆ ಸೇರಿಸಲಿಕ್ಕೆ ಸಾಮ್ರಾಜ್ಯ ಸರಕಾರಕ್ಕೆ ಒತ್ತಾಯ ಮಾಡತಕ್ಕದ್ದು

ಹಿಂದುಸ್ಥಾನಕ್ಕೆ ಪೂರ್ಣ ಯಾ ಅಂಶತಃ ಸ್ವಾತಂತ್ರ್ಯ ಕೊಡುವ ಉದ್ದೇಶದಿಂದ ಶ್ವೇತಪತ್ರಿಕೆಯು ತಯಾರಾಗಿಲ್ಲ ಬಹಳೇ ಹಿರಿದಾದ ಪ್ರಾಂತಿಕ ಸಂಸ್ಥೆಗಳನ್ನಷ್ಟು ಕೊಡುವದು. ಈ ಸಂಸ್ಥೆಗಳ ಕೈಯಲ್ಲಿ ನಿಜವಾದ ಅಧಿಕಾರವಿರಲಿಕ್ಕಿಲ್ಲ ನಿಜವಾದ ಸತ್ತೆಯು ಪರಕೀಯರ ಕೈಯಲ್ಲೇ ಉಳಿಯುವದು ಶ್ವೇತ ಪತ್ರಿಕೆಯಲ್ಲಿ ಅಂತರ್ಭೂತವಾಗಿರುವ ಸಂರಕ್ಷಕ ಕಲಮುಗಳಿಂದ ಭಾರತೀಯರ ಹಿತರಕ್ಷಣೆಯಾಗುವ ಬದಲು, ದೇಶದ ಆರ್ಥಿಕ ಪ್ರಗತಿ ಕುಗ್ಗುವದು, ಜನತೆಯ ದಾರಿದ್ರ್ಯಕ್ಕೆ ಕಳೆಯೇರುವದು ಬ್ರಿಟಿಶ ಜನರ ಕೈಯಲ್ಲಿರುವ ಸತ್ತೆ ದೃಢವಾಗುವದು ಪ್ರಾಂತಿಕ ಸರಕಾರಗಳಲ್ಲಿ ನಮಗೆ ಸ್ವಾಯತ್ತತೆ ಕೊಟ್ಟಿದೆಯೆಂದು ಯಾರ್ಯಾದರೂ ಹೇಳ್ಯಾರು, ಆದರೆ ಈ ಸ್ವಾಯತ್ತತೆಯು ಸುತ್ತಲೂ ಹಾಕಿದ ನಿಯಂತ್ರಣಗಳ ಬೇಲಿಯ ಮೂಲಕ ಅದೊಂದು ಸ್ವಾಯತ್ತತೆಯ ಬರೇ ಸೋಗಾಗಿ ಪರಿಣಮಿಸಿದೆ ಆದ್ದರಿಂದಲೇ ಬಹುತರವಾಗಿ ಎಲ್ಲ ಪಕ್ಷಗಳು ಶ್ವೇತಪತ್ರಿಕೆಯನ್ನು ಧಿಕ್ಕರಿಸಿವೆ. ಹಾಗಾದರೆ ಮುಂದೇನು? ರಾಷ್ಟ್ರೀಯ ಸಭೆಯು ರಾಷ್ಟ್ರದ ಪ್ರತಿನಿಧಿಯೆಂದು ನಾವು ನಂಬುತ್ತಿದ್ದಾಗ್ಯೂ ಸರಕಾರದವರು ಅದನ್ನು ಒಪ್ಪುವದಿಲ್ಲ ಕೊಂಗ್ರೆಸ್ಸು ಒಂದು ಬರೇ ಬಲಾಢ್ಯ ರಾಜಕಾರಣ ಪಕ್ಷವೆಂಬತೇ ಸರಕಾರದ ವಾದವೆಯಿದೆ. ಬರುವ ಚುನಾವಣೆಗಳಲ್ಲಿ ದಾಖಲಾಗುವ ಮತಗಳ ಸಂಖ್ಯೆಯ ಮೇಲಿಂದಲೂ ಅದು ಕೆಲಮಟ್ಟಿಗೆ ಕಂಡುಬರುವಂತಿದೆ. ರಾಷ್ಟ್ರೀಯ ಸಭೆಯ ಪ್ರಾಧಾನ್ಯವು ಸಿದ್ಧವಾದನಕ ರಾಷ್ಟ್ರೀಯ ಸಭೆಯವರು ತಯಾರಿಸಬಹುದಾದ ರಾಜ್ಯಕಾರಭಾರದ ಯೋಜನೆಯನ್ನು ಸರಕಾರದವರು ಎಂದಿಗೂ ಮನ್ನಿಸಲಿಕ್ಕಿಲ್ಲ. ಆದ್ದರಿಂದ ಈ ಕೊಂಗ್ರೆಸ ಕಾರ್ಯಕಾರಿ ಮಂಡಳವು ಪ್ರಜಾ-ಪ್ರತಿನಿಧಿ ಸಭೆಯ ಸೂಚನೆಯನ್ನು ಮುಂದೊಡ್ಡಿದೆ ಮತದಾರರು ತಮ್ಮ ಪ್ರತಿನಿಧಿಗಳನ್ನು ಆರಿಸಿಕೊಟ್ಟರೆ, ಅಂಥ ಸಭೆಯು ಏರ್ಪಡಿಸಬಹುದೆಂದು ನಮಗೆ ತೋರುತ್ತದೆ ನಾವು ಶ್ವೇತಪತ್ರಿಕೆಯನ್ನು ಧಿಕ್ಕರಿಸಿ, ಪ್ರಜಾ-ಪ್ರತಿನಿಧಿಗಳ ಸಭೆಯನ್ನು ಬೇಡಿದರೆ, ಬ್ರಿಟಿಶ ಸರಕಾರವು ಮಾಡಿದ ಯೋಜನೆಯಿಂದಲೂ ಅದರ ಕಾರಭಾರದಿಂದಲೂ ನಾವು ಸಂತುಷ್ಟರಾಗಿದ್ದೇವೆಂದು ಜಗತ್ತಿಗ ಸಾರಲಿಕ್ಕೆ ಅಧಿಕಾರಿಗಳಿಗೆ ಮಾರ್ಗವಿರಲಿಕ್ಕಿಲ್ಲ ಕೊಂಗ್ರೆಸ ಉಮೇದವಾರರಿಗೆ ಕೊಟ್ಟ ಪ್ರತಿಯೊಂದು ಮತವು ಶ್ವೇತಪತ್ರಿಕೆಯ ವಿರುದ್ಧ ಕೊಟ್ಟ ಮತವೆಂತಲೇ ಎಣಿಕೆಯಾಗುವದು ರಾಷ್ಟ್ರೀಯ ಸಭೆಯ ಪ್ರತಿನಿಧಿಗಳು ದಬ್ಬಾಳಿಕೆಗೆ ಅನುಕೂಲವಿರುವ ಸಕಲ ಕಾಯಿದೆ-ಕಾನೂನುಗಳನ್ನು ರದ್ದುಪಡಿಸಲಿಕ್ಕೆ ಹಣಗಾಡ ವರು ಹಿಡಿದರ ಆಸ್ತಿ-ಪಾಸ್ತಿಗಳನ್ನು ಅವರವರಿಗೆ ಕೊಡಿಸಲಿಕ್ಕೂ ಯತ್ನಿಸುವರು. ಸರಕಾರವು ಗಡಿನಾಡಿನಲ್ಲಿ ಕೈಕೊಂಡ ಕಠೋರ ವೃತ್ತಿಯ ಸಮಾಚಾರವನ್ನೂ ಅವರು ಕೊಳ್ಳುವರು

ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಸಾಧಿಸುವದಾದರೆ ನಾವು ಕೌನ್ಸಿಲು ಹೊರಬದಿಗೇ ಹೋರಾಡಬೇಕು ಮತ್ತು ರಚನಾತ್ಮಕ ಕಾರ್ಯದಿಂದಲೇ ನಮ್ಮ ಕಾರ್ಯಭಾಗವಾಗಬೇಕು

ಬಹುಜನಸಮಾಜದ ಗೋಳು ತೀರಬೇಕಾದರೆ, ರಾಜಕೀಯ ಸ್ವಾತಂತ್ರ್ಯದ ಸಂಗಡ ಆರ್ಥಿಕ ಸ್ವಾತಂತ್ರ್ಯವೂ ಬೇಕು. ಅರೆಹೊಟ್ಟೆ ಉಂಡು ಬಾಳುತ್ತಿರುವ ಲಕ್ಷಾವಧಿ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು. ಈ ಕುರಿತು ಕರಾಚಿಯ ರಾಷ್ಟ್ರೀಯ ಸಭೆಯು ಹಾಕಿಕೊಟ್ಟ "ಮೂಲಭೂತ ಹಕ್ಕುಗಳ ಹಾಗು ಆರ್ಥಿಕ ಸುಧಾರಣೆಯ ಯೋಜನೆ"ಯಂತೆಯೇ ಕೊಂಗ್ರೆಸ ಪಕ್ಷವು ತನ್ನ ಧೋರಣವನ್ನಿಡುವದು.

ಇವನ್ನೆಲ್ಲ ಲಕ್ಷದಲ್ಲಿಟ್ಟು, ಮತದಾರರೆಲ್ಲರೂ ಕೊಂಗ್ರೆಸ ಉಮೇದ್ವಾರರಿಗೇನೇ ಮತಕೊಟ್ಟು, ತಾವು ರಾಷ್ಟ್ರೀಯ ಸಭೆಯ ಕಾರ್ಯಕ್ಕೆ ಬೆಂಬಲ ಕೊಡುವರೆಂತಲೂ ಈಗಣ ಅಧಿಕಾರಿಗಳ ನಿರಂಕುಶ ಕಾರಭಾರವನ್ನು ಧಿಕ್ಕರಿಸುವವರೆಂತಲೂ ಸ್ಪಷ್ಟವಾಗಿ ತೋರಿಸಿ ಕೊಡುವರಾಗಿ ನಮ್ಮ ನಂಬಿಗೆಯಿದೆ

ಮಾರುವದಿದೆ!

ಕುಮಟಾ ಕಸಬೆಯೊಳಗಿನ ಬಳ್ಳೇ ಕೇರಿಯಲ್ಲಿರುವ ಮನೆ ಕಂಪೌಂಡ ಸಹಿತ ಮಾರಾಟ ಮಾಡತಕ್ಕದ್ದಿದೆ ಮನೆ ಹಿತ್ತಲು ಅರ್ಧ ಎಕ್ರೆ ಇರುತ್ತದೆ ಮನೆ ಇಮಾರತು ಭವ್ಯವಾದದ್ದಿರುತ್ತದೆ ಖರೀದಿ ಇಚ್ಛೆಯವರು ಬಾಕಿ ವಿವರಗಳ ಬಗ್ಗೆ ಈ ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳತಕ್ಕದ್ದು.

ಕುಮಟಾ, ೨೯-೭-೪೬ | X c/o M P DIVGI, LL B. PLEADER, KUMTA

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

ಕಳೆದ ಮಂಗಳವಾರ [illegible]

[illegible]

ಬಟ್ಕಳ— [illegible]

[illegible]

ಈ ಪತ್ರಿಕೆಯ ವ ಹಲಿಕ ವ್ಯಾಸಂಗದಿಂದ ಸಿ ಆಗಿದೆ, ಪ್ಲೆಗ ಯ ಸಾಲ! ಆರೋಗ್ಯ ಎಂಗ್ಲೋ— ಸುರ ಕಾಲೆಗೆ ಗ್ರಂಟು ಕೊಡಲಿಕ್ಕೆ ತೊಂದರೆಯಲ್ಲ ೧೯೩೩-೩೪ನೇ ಸಾಲಿನ ಗ್ರಂಟು ಇಳಿದ ಜನರ ಬೆಂಗಳ್ಳ ಕೊಟ್ಟಿತು! ೧೯೩೪-೩೫ನೇ ಇಸ್ವಿಯ ಗ್ರಂಟು ಕೊಡಬೇಕೆಂದು ಮೊನ್ನೆ ೧೯ನೇ ತಾರೀಖಿನ ಸಭೆಯಲ್ಲಿ ಠರಾವು ಮಾಡಿದೆ ಎಂಗ್ಲೋ-ಕಾನಡ ಶಾಲೆಗೆ ದ್ರವ್ಯಸಹಾಯ ಮಾಡುವದು ವ್ಯಾಸಿಸಿಪಾಲಿಟಿಯ ಪ್ರಥಮ ಕರ್ತವ್ಯವಲ್ಲ ರಸ್ತೆಯ ದುರುಸ್ತು, ಆರೋಗ್ಯ ಪಾಲನ, ಪ್ರಾಥಮಿಕ ಶಿಕ್ಷಣ ಮೊದಲಾದ ಕೆಲಸಗಳನ್ನು ಚನ್ನಾಗಿ ನಡಿಸಿ, ಹಣ ಉಳಿದರೆ ಮಾತ್ರ ಬೇರೆ ಕಾರ್ಯಕ್ಕೆ ಕೊಡಬಹುದು ಮತ್ತೆ ಜನರು ಮೊದಲಿನ ಕರ ಉದ್ದನ್ನ ಕೊಟ್ಟನ್ನ ಬರಿಸಿ ನಡೆಯುತ್ತಾರೆಂದು, ೩ ವರ್ಷ ಆಯಿತು ವಿಕಿ ಒಟ್ಟಿಗೆ ಗತಿಯಿಲ್ಲದವನಿಗೆ ಘಾಸಿಗಳಂತೆಯೇ ಬಿದ್ದನ್ನ ಕೇಳು ಧರಿಸುವ ಒಳತಂಟು ಯಾರ ನೇಕೆ? ಹೊಸ ಇಲೆಕ್ಷನು ಇದೇ ಬರುವ ತಾ ೧೫ನೇ ಹಿಂದು ವಾರಗಳಲ್ಲಿ ಇಲೆಕ್ಷನಿನ ಪೊಲಿಂಗ ನಡೆಯುವಂತೆ ೫ ಜನ ಸ್ಥಾನದನ್ನು ಗೊತ್ತುಮಾಡಲಾಗಿತ ಇವರೆಗೆ ಶ್ರೀ ಹನುಮಂತ ವೇದಸ್ಥನವರು ಸದಸ್ಯರೂ ಈ ಕೆಳಗಿನಂತೆ ೫ ಜನರು ಸ್ಪರ್ಧಿಸುವರೆಂದು ನಿಶ್ಚಯಿಸಿರುತ್ತದೆ (೧) ನಾಗಪ್ಪ ಮಾವಿನ ಸಜು ತ (೨) ಕೃಷ್ಣಾ ರಂಜನಾಥ ಬಾಡೆ (೩) ಪಂಕಟ್ರಮಣ ಎನ್ ಭಟ್ಟಕರ, (೪) ಉಗ್ರಪ್ಪ ಗಣ ವ್ಯ ಶೆಟ್ಟಿ, (೫) ಗಣಪತಿ ಕೂಲ್ಲ ಬಟಕರ ಜನರು ಯೋಚಿಸಿದ ಹಿತಿಯೂ ಯೋಗ್ಯರನ್ನೇ ಆರಿಸಿ ಪೋಲಿಂಗ ವೇಳಾಪತ್ರ ಗಾಡಿದ ಕಡೆ ಲೂ ಬರು ಸಮಯ ಬಾಲಕರ ಹರಕ ಪ್ರಾರ ಆರೋಗ್ಯ, ಕಲದಲ್ಲು ಉದೇ ದ್ವಾರಗಳ ನಿಲ್ಲುವರಂತೆ ಇಲೆಕ್ಷನು ನಡೆಯುವದಂತೆ

ಅಂಕೋಲಾ— (ತಾ ೧-೮ ೧೯೩೪) ಪ ಲ ಮೀಲಾತ್ತಿದೆ ಇಲ್ಲಿ ಪೇಟೆಯ ಕೆಲವು ಅಂಗಡಿಗಳು ಇಲಿ ಬೀಳುತ್ತಿವೆ ಪೇಟೆಯ ನೆರೆ ಹರಡಿಯಲ್ಲಿದ್ದ ಮನೆಗಳಲ್ಲಿಯೂ ಇಲಿ ಬೀಳುತ್ತಿವೆ ೮-೪ ದಿವಸ ಹಿಂದೆ ಒಂದು ಪ್ಲೇಗ ಮರಣವಾಯಿತು, ದನಗಳ ರೋಗವಿದೆ ಅಂತು ಕ್ಷೇಮವಿಲ್ಲ

ಇಲ್ಲಿ ಕೋರ್ಟ ಸ ಗಾರ ಸದರನ್ನು ಮಾಡಿಸುವ ಕೆಲಸ ನಡೆದಿದೆ ಇದಕ್ಕೆ ೧೩೦ ಕ್ಕಿ ವಿಕ್ರಿ ಸಾಕ್ಷವಾದರಂತೆ

ಕಾರವಾರ— ಬೈತಕೋಲದಲ್ಲಿ ಇಲಿ ಸಾಯುತ್ತಿವೆ ೩ ಪ್ಲೇಗ ಮರಣಗಳಾದವು ಊರ ಜನರು ಓಡಿ ಹೋಗಲಿಕ್ಕೆ ಇಲಿ ಬೀಳುತ್ತಿರುವದಾಗಿ ವಾರ್ತೆಯಿದೆ

ನಂದನಗದ್ದಾ ದ ರೆಯ ಕೇದಾರ ಪೋನಪ್ಪ ಈತನ ಮೇಲೆ ನಡೆದ ಖಟ್ಲೆಯಲ್ಲಿ ಸೆಶನ ಜಜ್ಜರು ೩॥ ವರ್ಷಗಳ ಸಕ್ತ ಮಜುರಿ ಶಿಕ್ಷೆ ವಿಧಿಸಿದ್ದು ಜಜ್ಜರು ನಿಂಗಪ್ಪನ ಚಿಕ್ಕತಾಯಿಯ ದಾಗಿನನ್ನು ಪೋನಪ್ಪನು ಮಾರಾಟ ಮಾಡಿಕೊಳ್ಳಬಯಸಿದ್ದನು, ಅದಕ್ಕೆ ನಿಂಗಪ್ಪನು ಒಪ್ಪ

ಇಲ್ಲ ಆದರಿಂದ ಧಾನ್ಯ ತುಂಬಿದ ಗಾಡಿಕ್ಕೆ ಬೆಂಕಿ ಹಾಕಿದನು ಅಪ್ಪರೊಳಗೆ ಆತನು ಓಡಿಹೋದ ದ್ದರಿಂದ ಹಾನಿ ತಪ್ಪಿತು ಖಟ್ಲೆ ವಿಚಾರಣೆಯಾಗುವ ಕಾಲಕ ಪೋನಪ್ಪ ಕಾರವಾರ ಜ್ಯುಡಿಶಲ್ಲಿಟ್ಟಿದ್ದರು, ಪೋನಪ್ಪನು ಊರಲ್ಲಿ ಇ ಕೆ ಕೆಂದು ಪತ್ರಪತ್ರ ಮಾಡಿಕೊಳ್ಳಲಿಚ್ಛಿಸಿದನು ಈ ಬಗ್ಗೆ ಮೊಕದ್ದಮೆಯ ವಿಚಾರ ನಡಿಸಿ ೫ ವರುಷ ಶಿಕ್ಷೆ ವಿಧಿಸಲಾಗಿದೆ ಹೆಬ್ಬಾ—ಹೆಬ್ಬು—ಮಣ್ಣು ಇವುಗಳ ದ ರಕ್ಷಣೆ ಕೈ!

(ತಾ ೨೯ ೭-೩೪) ದಿವಿವಾಣ ಆದರ್ಶ ೪ ತಂಕ್ಷ ಣ ಇ ಜಿಲ್ಲೆಯ ಕರ್ನಾಟಕ ಸಂಘದ ತರ್ಫಿಂದ ತ ಒಂದು ಕೆಂಗಳ ಸಭೆಯು ನಡೆ ಇಡಿತ್ತು ಸಭೆಯಲ್ಲಿ ಅತ್ತಾ ಕರ್ನಾಟಕಕ್ಕೆಂದು ರಂಗಮಂದಿರವಲ್ಲಿ ಸ್ವದೇಶೀಯಗಳಿಕ್ಕಿದ್ದ ಸಾಹಿತ್ಯ ಪರಿಷತ್ತಿನ ಶಾಖೆಯನ್ನು ಕಾರು ಕು ನೇ ನಿಶ್ಚಯಿಸಿತು ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಳನ್ನ ಜಿಲ್ಲಾ ತಾ ಲೂಕು ಕೇಂದ್ರಗಳಲ್ಲಿ ಸಾಹಿತ್ಯ ಸಂಘಗಳನ್ನೇರ್ಪಡಿಸಿ ಬೇಕು ಪರೆ ಪರಿಷತ್ತಿನ ಅಂಗ ಸಂಸ್ಥೆ ಆಗಿ ನೀಡಿದಾಪ ವೆಂದು ನಿರ್ಧರಿಸಲಾಗಿದೆ ಇಂದ ಕನ್ನಡ ಸಾಹಿತ್ಯಕ್ಕಾಗಿದೆ ಅಲ್ಲಿವರೆಂದ ಇಂದ ರಾಷ್ಟ್ರಗಳನ್ನ ಒಂದು ಮಾಡಲು ಪರಿಷತ್ತಿನವರು ಬಾಧ್ಯತೆಯನ್ನ ಕೇಳಿದರೆಂದು ತೀರ್ಮಾನಿಸಲಾಯಿತು ಈ ಸಭೆ ಶ್ರೀ ಕಾರವಾರ ತಾಲೂಕು ಗ ಸಮ್ಮತಿ ಒದ್ದಿತು ಇ ಅದರ ಬೆಂಬಲವನ್ನು ಏರ್ಪಡಿಸಬೇಕೆಂದು ಗೊತ್ತಾಗಿದೆ ಕ್ಷ.

ತಾ ೩೦-೭-೩೪ನೇಗ ಓದುವ ಸ ಪ್ಪಿಗಾರರ ಒಡೆಯರ ಪದೇಸಂದರ — ಶುಕ್ರವಾರ ದಿನ ಪ್ರಯ ಪೂಜಾ ಇರು ವ ಅದಕೆ ಎಂಬ ಈ ತ ಲ ಕೊನೆ ಗಿನ ಹಬ್ಬವನ್ನ ರಾಯರು ಸ್ವಾಮಿ ಯವರ ಪಟ್ಟ ಶಿಷ್ಯರ ಕಲ್ಯಾಣ ಸ್ವಾಮಿಯವರ ಪ್ರತ್ಯಕ್ಷದ ಉತ್ಸವನ್ನು ಈ ವರ್ಷ ಜರಗಿಸಬೇಕೆಂದು ಒಲಿದು ಪ್ರತಿಜ್ಞೆ ಮಾಡಿ ಕೆಲವು ತರುಣ ಸಮಾಜ ಸೇವಕರು ನಿಶ್ಚಯಿಸಿದರು ಈ ಯುವಕರ ಪ್ರಯತ್ನದಿಂದ ಶ್ರೀ ಉತ್ಸವ ಜರಗಿ ಜನಗಳೇ ಇವರು ಕೂಡಿದ ತಾ ೧೯ರಿಂದ ತಾ ೩೦ರ ವರೆಗೆ ವ್ಯಾಖ್ಯಾನ ಪ್ರವಚನ, ಭಜನೆ, ಕೀರ್ತನ ಇತ್ಯಾದಿ ಕಾರ್ಯಕ್ರಮಗಳಿಂದ ಉತ್ಸವದ ಸಂಭ್ರಮವನ್ನು ವಿಜೃಂಭಣೆಯಿಂದ ನೆರವೇರಿಸಿದರು ಈ ನಿವಾರ ಮಾಡಿದ್ದರು ಸ್ಥಳಿಕ ಜನರ ಸಹಾಯದಿಂದ, ಇಲ್ಲಿಯ ಶ್ರೀ ಸನಾತನ ವೇದಸ್ಯನವರಲ್ಲಿ ಅದರ ಸಿಂಪಾಲಕ (ಟ್ರಸ್ಟಿ)ರ ಅನುಮತಿ ಪಡೆದು, ಈ ಉತ್ಸವವನ್ನು ನೆರವೇರಿಸಲು ಕಾರವಾರ ತಾಲೂಕಿನ ಎಲ್ಲ ಹಿಂದು ಬಂಧು-ಭಗಿನಿಯರೂ ಅವರು ಆಮಂತ್ರಣಪತ್ರಿಕೆ ಕಳಿಸಿದ್ದರು ಈ ಆಮಂತ್ರಣ ಪತ್ರಿಕೆಯಲ್ಲಿ ಮಾಡಿಕೊಂಡಿತು 'ಎಲ್ಲ ಹಿಂದು' ಜನರಿಗೆ ಉತ್ಸವ ತೆಗೆದಿರಲು, ಆದರಲ್ಲಿ ಅಸ್ಪೃಶ್ಯರು ಬರಬೇಕೆಂತ ಬಿದ್ದು ಉತ್ಸವದಲ್ಲಿ ಈ ಪ್ರಕಾರ ಎಲ್ಲ ಸದ್ಧತ ಆಗ ಬ— ಎಲ್ಲ ಹಿಂದು ಜನರಿಗೆ ಆಮಂತ್ರಣವನ್ನಿತ್ತರು

ರಿಂದ ವೇದಸ್ಥ—ರೊಳಗೆ ಅಸ್ಪೃಶ್ಯರೂ ಬರುವರು, ಅದರಿಂದ ಊರ ಸೃಷ್ಟಿಯುಳಿಗೂ ಊರ ಜನರಿಗೂ ಸಮ್ಮತ ವಿಲ್ಲದ ಸಂಗತಿಯು, ಎಂತ ಸಿರ್ವ ಟ್ರಸ್ಟಿಯರು ಅಂದು, ಕಮ್ಯ ಅನುಮತಿಯ ಪತ್ರವನ್ನು ಒಮ್ಮೆಲೇ ಹಿಂತೆಗೆದುಕೊಂಡರು (ಅವರೇ ಹೆದರಿಕೆಗೆ ಕಾರಣವೆ ನಂದರೆ — ಶ್ರೀ ಓಂಗಲೇ ಇವರು ಕಲ ತಿಂಗಳ ಹಿಂದೆ ಕಾರವಾರ ಹಿಂದು ಸಭೆಯ ಪರವಾಗಿ ಅಸ್ಪೃಶ್ಯತಾನಿವಾರಣಾದ ಕಾರು ಪ್ರಚಾರ ಕರ್ಯ ಮಾಡಿದ್ದರು ನೆನಪು ಅವರಿಗೆ ಬಿಗಿ ಹೋಗಿ ತೋರ ಕ್ಷೆ) ಇದರ ಮಾಲಿಕ, ಉತ್ಸವದಲ್ಲಿ ಭಾಗ ತೆಗೆದ ಕೊಳ್ಳುವರೆಂದು ಹಿಡಿದು ಜಾತಿಭೇದದ ಹಿಡಿದ ಆಳ ಅನೇಕ ಮಂದಿಗಳೇ ಹಿಂಜರಿಯಹತ್ತಿದರು, ಆದರೆ ಇವರ ಮಾಲಿಕ ದೈವ ಗಾಮಂಠವೆ ಈ ಲೇಖಕರು ಕಾಯ ಕರ್ತ್ರಾಮವನ್ನು ನಿರ್ವಿಘ್ನವಾಗಿ ಸಾಂಗ ಮಾಡಿದ್ದು ಶೋಭಾಸ್ಪದವೇ ಸರಿ ವೇದಸ್ಥ ನವರೊಳಗೆ ಉತ್ಸವವನ್ನ ಮಾಡಬಲಿಕ್ಕಾಗದ್ದರಿಂದ ಅದರ ತ ಎಂಬುದು ದೇವಾಂಗಣದಲ್ಲಿಯೂ ಬೇರೆ ಕಡೆಗೂ ಅದನ್ನು ಜರುಗಿಸಬೇಕಾಯಿತು

ಕೀರ್ತನವನ್ನು ಶ್ರೀ ಓಂಗಲೇ ಇವರು ಸ್ವತಃ ಸುಬ್ಬ ವಿವೆಸಗಳವರೆಗೆ ಹಾಗೂ ಶ್ರೀ ರಾಮಚಂದ್ರ ಕಾಂಬಳೇ ಇವರು ವ ತಾ ದಿವಸ ಮಾಡಿದರು ಶ್ರೀ ಪಾಂಗ ನಿಗ ರಿಕ ಮು ಸಾವೇಕರ ಮತ್ತು ಶ್ರೀ ರಾವ ದಾಸ ಸಾವ ರಸಾವೇಕರ ಇವರು ರಂಗದ ಪಟ್ಟಿಗೆ ರಾಕ್ಷ ಕಲರೆ ಓದಿ ಕಾರ್ಯಕ್ರಮವನ್ನು ಯಶಸ್ವಿಯನ್ನಾಗಿ ಮಾಡಿದರು ಸಹ ಧರ್ಮ ಬಾಂಧವರೊಳಗಿಂದ ಪ್ರವಚನವನ್ನ ಶ್ರೀ ಎಸ್ ಎಲ್ ಸಾವೇಕರ ಇವರು ಚನ್ನಾಗಿ ನೆರವೇರಿಸಿದರು ರ ಮ ಸಾವೇಕರ ಎಂಬ ಮಾತ ಗನುಕಸ್ತ ಇಂಪಾದ ಧ್ವನಿಯಿಂದ ಗಾನ ಮಾಡಿ ಎಲ್ಲವರನ್ನೂ ತಲೆದೂಗಿಸಿದನು

ಆದರೆ ಈ ಉತ್ಸವದಲ್ಲಿ ಘಟಿಸಿದ ಒಂದು ನಿಂದ್ಯ ಪ್ರಕಾರವೇನಂದರೆ — ವಿರೋಧಿ ಪಕ್ಷದವರು ಬಿಡ್ಡ ಲ್ಲ ಹುಚ ಹವ ಗಾಡಿಗೆ ಬೇಕಾತ ಸರೆಯ ಕ ಡಿ ಆವನ್ನು ಅ ನ್ನದಲ್ಲಿ ಉತ್ಸವದ ಜಾಗೆ ಕಳುಹಿಸಿದರು ಸಾರ್ವಜನಿಕ ಉತ್ಸವದಲ್ಲಿ ಬಾಗವನ್ನು ವಹಿಸುವ ಸ್ವಾತಂತ್ರ ಮಾತವನ್ನು ಈ ರೀತಿ ಹರಿಜನರು ವಿವಿದ ಕ್ಕೆ ಕಸಿಯುವ ಬಳಸಲು ಆದಾಗಿತ್ತ ಆದರೆ ಕಲ ಬೇರೆ ಸ್ಪೃಶ್ಯರಾದ ಹರಿಜನ ಬಂಧುವರೂ ಈ ಉತ್ಸವದಲ್ಲಿ ಪ್ರತ್ಯಕ್ಷವಾಗಿ ಸಹಾಯಿಗಳಾಗಿದ್ದರು ಕೊನೆಗ ದಾರ ಬೀದಿಯ ಕಾರ್ಯಕ್ರಮಾದ ಅದೇ ವೇಳೆಯಲ್ಲಿ ಮೇಲ ಪಾಂಜನ ಕ್ಷವೆಯಾದ ತಂಬಿರು ಸಾಧ್ಯವಾದ ಸಂಗತಿ. ಕೊನೆಯ ದಿವಸ ದೊಡ್ಡ ಮೆರವಣಿಗೆಯನ್ನ ತೆಗೆದು ಈ ಸಮಾರಂಭವನ್ನು ಬಾಲಕರು ಸಾಂಗ ಮಾಡಿದರು ಆದರೆ ವೇಲ ಸಮಾಪ್ತಿಸಿದ ಪ್ರಕಾರ ಕಲ ವಿಘ್ನ ಕಂಟಕಾನ್ವಿ ಜನರ ಪ್ರಯತ್ನಗಳು ವ್ಯರ್ಥ ನೆಲಕ್ಕುರುಳಿ ಆವರು ಸಗಿಗೆಡಾದರು ಸರಿ!

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ. **1908**

ಈ ಕಂಪನಿಯು ಪ್ರೀಮಿ—ಹಿಂದಿನ ಇದ್ದು, ಇದರ ಕಂತಿನ ದರಗಳೂ, ಶರ್ತಗಳೂ ಬಹಳ ಸೋಯಿಯ ವ್ವ ಇವೆ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು

Kumta Agents— D.K NAYAK Bros
Honavar Agent R V PRABHU Esq

K. Padmanabha Rao & Sons.,
BELGAUM
Chief Agents for Karnatak Districts & S M States

ತ್ವರೆಮಾಡಿರಿ! ತ್ವರೆ ಮಾಡಿರಿ!!

ಮಾರುವದಿದೆ.

ಕ್ರಯಕ್ಕೆ ಕೊಳ್ಳುವವರಿಗೆ ಸುಸಂಧಿ! ರವಿ ಂಗ್ಟನ್ ಟ್ರೈವಂಟೈಟರ ನಂ ೧೦ ಚಾಲೂ ಸ್ಥಿತಿಯಲ್ಲಿದ್ದು ಉತ್ತಮ ಕೆಲಸ ಕೊಡುವಂಥ ಮಶೀನು ಮಾರತಕ್ಕದ್ದಿರುತ್ತದೆ ಅಪೇಕ್ಷೆ ಇದ್ದವರು ಕೆಳಗಿನ ವಿ ಪತ್ತೆಗೆ ಪತ್ರವ್ಯವಹಾರ ಮಾಡಬಹುದು ಯಾ ಸಪ್ರತ್ಯಕ್ಷ ಭೆಟ್ಟಿಯಾಗಿ ಬೇಕಾದ ಮಾಹಿತಿ ಪಡೆಯಬಹುದು

Mangesh Shivarao Muzumdar,
'Sundar Lodge" Kalarmath,
Po ANKOLA. Dt N Kanara

ಅಲ್ಲಲ್ಲಿ ಇಷ್ಟಿಷ್ಟು!

ಕತೆಗಾರರಿಗೊಂದು ಸುಸಂಧಿ.

ಸಾಹಿತ್ಯ ಸೇವೆಯನ್ನೇ ಗುರಿಯನ್ನಾಗಿಟ್ಟುಕೊಂಡು ಉತ್ಸಾಹದಿಂದ ಕೆಲಸ ಮಾಡುತ್ತಿರುವ ಸಂಘಗಳಲ್ಲಿ ಗದಗಿನ ಕಿರಿಯರ ಪ್ರಪಂಚ'ವು ಒಂದು. ಅವರು ತಮ್ಮಲ್ಲಿ ಗ್ರಂಥಮಾಲೆಯನ್ನು ಪ್ರಾರಂಭಿಸಿ ಈ ವರೆಗೆ ಹತ್ತು ಪುಸ್ತಕಗಳನ್ನು ಹೊರಡಿಸಿರುವರು. ಈಗ ಅವರು ಕರ್ನಾಟಕದೊಳಗಿನ ಕತೆಗಾರರ ಸಣ್ಣ ಕತೆಗಳ ಸಂಗ್ರಹವೊಂದನ್ನು ಬರುವ ವಿಜಯದಶಮಿಗೆ ಹೊರಡಿಸಬೇಕೆಂದು ನಿರ್ಧರಿಸಿರುವರು. ಅನಾಯಾಸವಾಗಿ ಸಿಕ್ಕಿದ ಈ ಸಂಧಿಯನ್ನು ಆ ಕನ್ನಡ ಪ್ರಸಿದ್ಧ ಲಘುಕಥಾಲೇಖಕರು ಕಳೆದುಕೊಳ್ಳಬಾರದೆಂದು ಸೂಚಿಸುತ್ತೇವೆ. ಅವರು ತಮ್ಮ ಕತೆಗಳನ್ನು ಆಗಸ್ಟ ೩೧ನೇ ತಾರೀಖಿನ ಒಳಗಾಗಿ ತಲುಪುವಂತೆ ಕಳಿಸಿಕೊಡಬೇಕು. ಕತೆಯು ಸ್ವತಂತ್ರವಾಗಿದ್ದು ಅದು ಪರೀ ಪ್ರಕಟವಾಗದೆ ಇರಬೇಕಲ್ಲದೆ, ಅದನ್ನು ಸಂಕ್ಷೇಪವಾಗಿ ಸಾಮಾಜಿಕ ದೋಷಗಳನ್ನು ಹೊರಹೊಮ್ಮುವಂಥದು ಇಲ್ಲವೆ ಆದರ್ಶ ಜೀವನವೊಂದರ ಚಿತ್ರವನ್ನು ಕೊಡುವದಾಗಿರಬೇಕು. ಅವರು ಪ್ರಕಟಿಸಿದ ಕಾವ್ಯ ಸಾಮ್ರಾಜ್ಯದಲ್ಲಿ ಆ ಕನ್ನಡದೊಳಗಿನ ಹೆಸರಾದ ಎಷ್ಟೋ ಕತೆಗಾರರಿಂದ ಇಷ್ಟರಲ್ಲಿಯೇ ಕತೆಗಳು ಬರಬಹುದೆಂದು ನಂಬಬಹುದಾಗಿದೆ.

— ಎಮ್. ಎಸ್.

ಉತ್ತರ ಕರ್ನಾಟಕಕ್ಕೆ ಸಾಹಿತ್ಯ ಪರಿಷತ್ತಿನ ಶಾಖೆ!!!

ಕನ್ನಡ ವಾಙ್ಮಯದ ಏಳ್ಗೆಗಾಗಿ ಸ್ಥಾಪಿತವಾಗಿ ಅನೇಕ ವರ್ಷಗಳಿಂದ ಕೆಲಸಮಾಡುತ್ತಿರುವ ಬೆಂಗಳೂರಿನೊಳಗಿನ ಕರ್ನಾಟಕ ಸಾಹಿತ್ಯಪರಿಷತ್ತು ಅಖಿಲ ಕರ್ನಾಟಕದ ಸಂಸ್ಥೆ. ಅದರ ಚಟುವಟಿಕೆಗಳ [illegible] ವಾಗಿ ಸಾಹಿತ್ಯ ಸೇವೆಗಾಗಿ ಈಗೀಗಲೇ [illegible] ಕರ್ನಾಟಕ ಸಂಘಗಳು ಬೇರೆಬೇರೆ ಕಡೆ [illegible] ಸಂಸ್ಥೆಗಳಾಗಿ ನೆಲೆ ನಿಂತಿವೆ. ಇತ್ತೀಚೆಗೆ ಇವುಗಳಲ್ಲಿ ನಮ್ಮ ಜಿಲ್ಲೆಯ ಕರ್ನಾಟಕ ಸಂಘವೂ ಒಂದು.

ಮಾತೃಸಂಸ್ಥೆಯಾದ ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ವಸಂತ ಸಾಹಿತ್ಯೋತ್ಸವವು ಜರುಗಿದಾಗ ಅಲ್ಲಿ ಕೇಂದ್ರ ಸಂಸ್ಥೆಯು ನಿಶ್ಚಯಿಸಿದ ಹಾಗೆ ಧಾರವಾಡದಲ್ಲಿ ಅದರ ಶಾಖೆಯೊಂದನ್ನು ಉತ್ತರ ಕರ್ನಾಟಕಕ್ಕಾಗಿ ತೆರೆಯಬೇಕೆಂದು ಧಾರವಾಡದೊಳಗಿನ ಕೆಲ ಸಾಹಿತಿಗಳು ಯೋಚಿಸುತ್ತಿರುವುದು ನಮಗೆ ಕೇಳಬಂದಿದೆ. ಇಂಥ ಶಾಖೆಗಳ ಸ್ಥಾಪನೆಯಿಂದ ಕೇಂದ್ರ ಸಂಸ್ಥೆಯ ಮಹತ್ವವು ಹೆಚ್ಚುವದಾಗಲೇ ಬೇಕು. ಏಕೀಕರ್ನಾಟಕದ ದೃಷ್ಟಿಯಿಂದಲೂ ಇಂಥ ಶಾಖೆಗಳನ್ನು ಹೊರಡಿಸುವದು ಇಷ್ಟವೆನ್ನಿಸುವದು. ಸಾಹಿತ್ಯ ಸಾಮ್ರಾಜ್ಯದಲ್ಲಿ ಉತ್ತರ ಕರ್ನಾಟಕವೆಂದು ಬೇರ್ಪಡಿಸುವದು ವಿಶೇಷ ತಕ್ಕದ್ದು. ಉತ್ತರ ಕರ್ನಾಟಕಕ್ಕೆ ಸಾಹಿತ್ಯ ಪರಿಷತ್ತಿನ ಶಾಖೆಯೊಂದು ಬೇಕಾದರೆ, ನಾಳೆ ದಕ್ಷಿಣ ಕರ್ನಾಟಕದವರು ತಮಗೊಂದು ಶಾಖೆ ಬೇಕೆಂದು ಯಾಕೆ ಬೇಡಬಾರದು? ಇನ್ನು ಕೆಲ ದಿನಗಳಲ್ಲಿ ಪೂರ್ವ ಕರ್ನಾಟಕ, ದಕ್ಷಿಣ ಕರ್ನಾಟಕ ಹೀಗಾದ ಮೇಲೆ ಏಕೀಕರ್ನಾಟಕದ ಪಾಡೇನು? ಆ ಮಾತೃಸಂಸ್ಥೆ ಏನಾಗಬೇಕು? ಹೀಗೆ ಉತ್ತರ ದಕ್ಷಿಣ–ಪೂರ್ವ–ಪಶ್ಚಿಮ ಕರ್ನಾಟಕಗಳೆಂದು ಖಂಡಗಳನ್ನು ಕಲ್ಪಿಸುವದು ಕರ್ನಾಟಕದ ಏಕೀಕರಣದ ಕಲ್ಪನೆಗೆ ಪ್ರತಿಕೂಲ ಮಾರ್ಗದಲ್ಲಿರುವ ಬಂಡೆಗಲ್ಲುಗಳೆಂದೇ ಹೇಳಬೇಕು.

ಈ ಉದ್ದೇಶದಲ್ಲಿ ಮತ್ತೊಂದು ಸಂದೇಹಕ್ಕೆ ಆಸ್ಪದವಿದೆ. ಧಾರವಾಡದೊಳಗಿನ ಕೆಲ ಸಾಹಿತಿಗಳು ಇದೇ ಉತ್ತರ ಕರ್ನಾಟಕದ "ವಿದ್ಯಾವರ್ಧಕ ಸಂಘ"ವನ್ನು ಧಾರವಾಡದಲ್ಲಿಯೇ ಸ್ಥಾಪಿಸಿ, ಇತರ ಜಿಲ್ಲೆಗಳ ಮೇಲೆ ಉಪಕಾರ(?) ಮಾಡಿದ್ದಕ್ಕೆ ಹೊಂದಿಕೊಳ್ಳುವದರ ಬಗ್ಗೆ ಸಂದೇಹ ಬಂದರೆ? ಉತ್ತರ ಕರ್ನಾಟಕಕ್ಕೆ ಸಾಹಿತ್ಯಭಂಡಾರವನ್ನು ಒದಗಿಸಿ ಕೊಡುವುದು ಆಗುವದೇ? ಹಾಗಿಲ್ಲದಿದ್ದರೆ ಆ ವಿದ್ಯಾವರ್ಧಕ ಸಂಘವು ಧಾರವಾಡದವರ ಸ್ವಂತಕ್ಕೆ ಹೋಗದೆ ನಮ್ಮ ಜಿಲ್ಲೆಗಳ ಸಾಹಿತ್ಯ ಪ್ರ[illegible] ಕೇಂದ್ರ ಸಂಸ್ಥೆಯಾದ ಬೆಂಗಳೂರಿನ ಸಾಹಿತ್ಯ ಪರಿಷತ್ತಿಗೆ ಅಧೀನವಾಗಿ ಆ ಕೆಲಸ ಮಾಡುವ ರೀತಿಯಿಂದಲೂ ಹೊಸ್ತಿಲ ದಾಟದಿರುವುದು ವಿಹಿತ.

ಕೇಂದ್ರ ಸಂಸ್ಥೆಯು ಬಲವನ್ನು ಕುಗ್ಗಿಸುವ ಇಂಥ ಶಾಖೆಗಳಿಗೆ ಸಾಹಿತ್ಯ ಪರಿಷತ್ತಿನವರೂ ಮಾನ್ಯತೆಯನ್ನು ಕೊಡಬಾರದೆಂದು ನಮ್ಮ ಸವಿನಯ ವಿನಂತಿ. ಹಾಗೆ ಮಾಡಿದ ಮೇಲೆ ತಮ್ಮ ಕಾಲು ಮೇಲೆ ತಾವೇ ಕಲ್ಲೆಸೆದುಕೊಂಡಂತಾಗುವುದು. ಆದ್ದರಿಂದ ಸಾಹಿತ್ಯ ಸಮ್ಮೇಲನದಲ್ಲಿ ಹೇಳಿದಂತೆ ಜಿಲ್ಲೆ ಕರ್ನಾಟಕ ಸಂಘಗಳು ಸ್ವತಂತ್ರವಾಗಿ ಬೇಕಾದರೆ ಪರಿಷತ್ತಿನ ಅಂಗ ಸಂಸ್ಥೆಗಳಾಗಿ ನಿಲ್ಲಲಿ.

— ಎಮ್. ಎಸ್.

*

ಹಾಲೆಂಡ ದೇಶದಲ್ಲಿ ಒಂದು ಹೊಸ ವಿಮಾನದ ಪ್ರಯೋಗ ನಡೆದಿದೆ. ಪೀಯೆಲ್ ಫ್ಲೈಯಿಂಗ ಕಾರ ಎಂದು ಇದರ ಹೆಸರು. ಈ ವಿಮಾನದಲ್ಲಿ ಕೂತ ಬಳಿಕ ಗಳಲ್ಲಿ ಮೋಟರು ಇರುವದರಿಂದ ಹಿಂದು ಮುಂದಕ್ಕೆ ಓಡಿಸಬಹುದು. ಇದನ್ನು ಹಾಲೆಂಡ ದೇಶದ ವಿಮಾನ ಶಾಸ್ತ್ರಜ್ಞರಿಂದ ಧನಿ ಪ್ರೊಕರ ಇವರು ರಚಿಸಿದ್ದು, ಇದು ಬಹು ದೊಡ್ಡ ವಿಶೇಷ ವಿಮಾನದ ಒಂದೆಂದು ಲಕ್ಷ್ಯ ೧೧೦ ಅಡಿ ಎತ್ತರದಿಂದ ಇದರ ಬಾಲಕ್ಕೆ ಇನ್ [illegible] ವಿಮಾನ ಹಾರುವ ಪ್ರಯೋಗ ಮಾಡಬಲ್ಲದು. ಮುಂದಿನ ಪ್ರಯಾಣಕರಿಗೆ ನಿಲುಕಾಗುವ ವ್ಯವಸ್ಥೆಯಿದೆ. ವಿಮಾನದ ಕೋಣೆಯಲ್ಲಿ ನಿದ್ದೆ ಮಾಡುವ ಯಂತ್ರದ ಸಹಾಯದಿಂದ ಕೆಳಗಿಳಿಯುವ ಏರ್ಪಾಡಾಗಿದೆ. ಈ ವಿಮಾನವು ತಾಸಿಗೆ ೬೦೦ ಮೈಲುಗಳ ವೇಗದಿಂದ ಹಾರುವದಲ್ಲದೆ ಹಗುರಾದ ಮಾರ್ಗ ಪ್ರವಾಸ ಮಾಡಬಲ್ಲದು. ಈ ವಿಮಾನದ ಸಂಶೋಧಕರಿಗೆ ಈ ವಿಮಾನದಿಂದ ಹಣ್ಣಾಗಲು ಕಾಲಾವಕಾಶ ಹತ್ತಿದೆ.

*

ಮಹಾತ್ಮರು ಉಪೋಷಣವನ್ನು ನಾಳೆ ಏಳನೇ ತಾರೀಖಿನಿಂದ ೧೪ನೇ ತಾರೀಖಿನ ವರೆಗೆ ವಾರ್ಧಾದೊಳಗಿನ ಸತ್ಯಾಗ್ರಹ ಆಶ್ರಮದಲ್ಲಿ ನಡೆಸುವರು. ನನಗೆ ವಿಶ್ರಾಂತಿ ಬೇಕು. ಒಳ್ಳೆ ಆರೋಗ್ಯಕ್ಕೆ ಒಂದು ಉಪವಾಸ ಕೊಡ ಬೇಕು, ವಿಶ್ರಾಂತಿ ದೊರೆಯಲು ಕಾರ್ಯ ಬಿಟ್ಟು ಏಳು ದಿವಸ ಉಪವಾಸದಿಂದ ದಿನ ಕಳೆಯಬೇಕು. ಇದರಿಂದಲೇ ನನಗೆ ಶಕ್ತಿ ಬರುವದು. ಹೀಗೆ ಮಹಾತ್ಮರು ಪ್ರಕಟಿಸಿದ್ದಾರೆ.

*

ಪಂಚಮ ಜಾರ್ಜ ಬಾದಶಹರು ಪಟ್ಟವನ್ನೇರಿ ಇದೇ ಬರುವ ಗುರುವಾರಕ್ಕೆ ಇಪ್ಪತ್ತೈದು ವರ್ಷಗಳಾಗುತ್ತವೆ. ಈ ಸಮಯದಲ್ಲಿ ಜ್ಯುಬಿಲೀ ಮಹೋತ್ಸವವನ್ನು ನೆರವೇರಿಸಬೇಕೆಂದು ಗೊತ್ತಾಗಿದೆ. ಅನಾವಶ್ಯಕವಾಗಿ ಖರ್ಚು ಮಾಡಲಾಗದೆ ನಮ್ಮನ್ನಾಳುವ ಜಾರ್ಜ ಭೂಪಾಲರ ಅಪ್ಪಣೆ. ಆ ದಿನ ಬೇರೆ ಕಡೆಗಳಲ್ಲಿ ನಡೆಯುವ ರಾಜ ಬಾದಶಹರು ಸೇವೆಗೆ ಭೂಲ ಇಂಗ್ಲೆಂಡದ ಈ ಸಮಾರಂಭಕ್ಕೆ ಬರುವರು. ಸಾಮ್ರಾಜ್ಯದ ಪ್ರಜಾಜನರಿಗೆಲ್ಲ ರಾಜನಿಷ್ಠೆ ತೋರಿಸುವದಕ್ಕಾಗಿ ಬಂದಿರುವ ಸಂದರ್ಭದಲ್ಲಿ ಮೋಜು ಮಾಡಿ ಆ ಮೇಲೆ ಕಳೆಯುವದು. ಆ ದಿನ ಪ್ರಮುಖ ಸಂಸ್ಥಾನಿಕರು ಕೊಡಲ್ಪಡುವವು. ಇದಕ್ಕಾಗಿ ಕೆನಡಾ, ಆಸ್ಟ್ರೇಲಿಯಾ, ನ್ಯೂಝೀಲಂಡ, ದಕ್ಷಿಣ ಆಫ್ರಿಕಾ ಮುಂತಾದ ಡೊಮಿನಿಯನ ಮೊದಲಾದ ಸಾಮ್ರಾಜ್ಯಾಂಗ ದೇಶಗಳಿಂದ ಈ ಸಮಾರಂಭಕ್ಕೆ ಪ್ರತಿನಿಧಿಗಳನ್ನು ಕಳಿಸಲು ನಿಮಂತ್ರಣಗಳು ಹೋಗಿವೆ. ಈಗಿನ ಪರಿಸ್ಥಿತಿಯಲ್ಲಿ ಪ್ರತಿನಿಧಿಗಳನ್ನು ಈ ಸಮಾರಂಭಕ್ಕೆ ಕಳಿಸುವದು ಅಸಾಧ್ಯವೆಂದು ಐರಿಶ ಫ್ರೀಸ್ಟೇಟ ಸರಕಾರವು ಉತ್ತರ ಕಳಿಸಿದೆ. ಈ ದೇಶ ಬಿಟ್ಟು ಉಳಿದವುಗಳಲ್ಲಿ ಹಿಂದುಸ್ತಾನ ದೇಶದ ಪ್ರಧಾನರ ಅಂಬೇಡ್ಕರ ಮೊದಲಾದವರೆಲ್ಲರೂ ನಿಮಂತ್ರಣವನ್ನಂಗೀಕರಿಸಿದ್ದಾರೆ. ಹಿಂದುಸ್ತಾನ ಸರಕಾರದ ಪ್ರತಿನಿಧಿಗಳ ಕುರಿತು ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳೊಡನೆ ಆಲೋಚಿಸಿ ವ್ಯವಸ್ಥೆಯಾಗಬೇಕಿದೆ. ಈ ಸಮಯ ಮಹಾಶಯರುಗಳ ಪ್ರಧಾನ ರೊಡನೆ ಸಾಮ್ರಾಜ್ಯ ಸಹಕಾರವು ವಿಚಾರವಿನಿಮಯ ಮಾಡುವದಾಗಿಯೂ ಈಗಿನ ಮುಖ್ಯ ಪ್ರಧಾನರಾದ ಮಿ। ಚೆಂಬರ್ಲೇನರವರು ಪಾರ್ಲಿಮೆಂಟಿನಲ್ಲಿ ನುಡಿದರು. ಆಗಸ್ಟ ೧ನೇ ತಾರೀಖಿನಿಂದ ಪಾರ್ಲಿಮೆಂಟಿಗೆ ರಜೆ. ಅಕ್ಟೋಬರ ೩೦ನೇ ತಾರೀಖಿಗೆ ಪುನಃ ಪಾರ್ಲಿಮೆಂಟಿನ ಸಭೆಯಾಗುವದಿದೆ. ಚಕ್ರವರ್ತಿ ಪಂಚಮ ಜಾರ್ಜರ ರಜತ ಮಹೋತ್ಸವದೊಳಗಾಗಿ ಹಿಂದುಸ್ತಾನ ಸರಕಾರದ ಹೊಸ ರಾಜ್ಯಘಟನೆಯು ಕಾನೂನು ಆಗಿ ಅದು ಜಾರಿಯಲ್ಲಿ ಬರುವದಾಗಿ ಒಂದು ಪತ್ರದ ಹೈಕೋರ್ಟಿನ ನ್ಯಾಯಾಧೀಶರಿಗೆ ನಮ್ಮ ಸಂಯುಕ್ತ ಪರೀಕ್ಷೆಗಳು ಹೊಂದುವವೆಂದು ಹೇಳುತ್ತಾರೆ.

*

ಕರಾಚಿಯ ಡಾ। ಕಿಚಲೂರವರು ಕಳೆದ ಸೋಮವಾರ ಉಪೋಷಣ ಮಾಡಿದರು. ಡಾ। ಕಿಚಲೂರವರ ತೂಕವು ೩೦ ರತ್ತಲು ಕುಗ್ಗಿತು. ಒಳಗೆ ಸೋರಿಗಿದ್ದರೆ ಅವರ ಉಪೋಷಣದಿಂದ ಕಾಂಗ್ರೆಸ ಕಾರ್ಯಕರ್ತರಲ್ಲಿ ಸ್ವಲ್ಪ ಜಾಗೃತಿಯಾದ ಬಗ್ಗೆ ಅವರಿಗೆ ಸಂತೋಷವಾಯಿತು. ಕಾಂಗ್ರೆಸ ಕಾರ್ಯಕರ್ತರು ಅನಾವಶ್ಯಕವಾಗಿ ಕಾದಾಡದೆ ನಡೆಸುವ ಮೇಲಾಟ ಮಾಡಿ ಕಾಂಗ್ರೆಸ ಕಾರ್ಯಕ್ರಮದಲ್ಲಿ ತುಚ್ಛ ಪ್ರವೃತ್ತಿ ಹುಟ್ಟಿಸಿದ್ದರಿಂದ ಡಾ। ಕಿಚಲೂರವರು ಉಪೋಷಣ ಮಾಡಿದ್ದರು.

*

ಮುಂಬಯಿಯ ಪ್ರಸಿದ್ಧ ಐಶ್ವರ್ಯವಂತರಾದ ಸರ್ ಕಾವಸಜಿ ಜಹಾಂಗೀರರವರು ಜಪಾನದಲ್ಲಿ ಗುರುವಾರ ತಾ ೨೬ನೇಯ ತಾರೀಕರಂದು ನಿಧನ ಸಮಯದಲ್ಲಿ ಇವರ ವಯಸ್ಸು ೮೧ ವರುಷ. ಇವರು ತಮ್ಮ ಪಾರಸೀ ಸಮಾಜಕ್ಕೂ ಇತರ ಸಾರ್ವಜನಿಕ ಕಾರ್ಯಗಳಿಗೂ ತುಂಬ ದಾನ ಮಾಡಿರುತ್ತಾರೆ. ಇಂಗ್ಲಂಡದಲ್ಲಿಯೂ ಯುರೋಪ ಖಂಡದಲ್ಲಿಯೂ ಇವರು ದಾನ ಮಾಡಿರುತ್ತಾರೆ. ಇವರು ಪ್ರಖ್ಯಾತ ರೆಡಿ ಮನಿ ಕುಟುಂಬದವರು. ಯೌವನ ಕಾಲದಲ್ಲಿ ಬೇಕಾದಷ್ಟು ಹಣ ಇವರು ಪಡೆದಿದ್ದುದರಿಂದ ಇವರಿಗೆ "ರೆಡಿ ಮನಿ" ಎಂದು ಹೆಸರು ಬಿದ್ದಿತು. ಮುಂಬಯಿ ವಿದ್ಯಾಲಯದ ಪೋಷಕರು ಇವರೇ! ಬೆಂಗಳೂರಿನ ಇಂಡಿಯನ ಇನ್‌ಸ್ಟಿಟ್ಯೂಟ ಆಫ ಸಾಯನ್ಸ ಸಂಸ್ಥೆಗೆ ಸಹಾಯಕರು ಇವರು. ಮುಂಬಯಿಯೊಳಗಿನ ಸರ್ ಕಾವಸಜಿ ಜಹಾಂಗೀರ ಕನ್ನಡ ಆಸ್ಪತ್ರೆಗೆ ಇವರು ೧೫ ಲಕ್ಷ ರೂಪಾಯಿ ದಾನ ಮಾಡಿದ್ದರೆ. ಸರ್ ಕಾವಸಜಿ ಜಹಾಂಗೀರ ಸಭಾಮಂದಿರ ಕಟ್ಟಲು ಇವರು ೪ ಲಕ್ಷ ರೂಪಾಯಿ ಕೊಟ್ಟಿದ್ದರೆ. ಈ ರೀತಿ ಅವರು ೩೧ ಲಕ್ಷ ರೂಪಾಯಿಗಳನ್ನು ದಾನ ಮಾಡಿದ್ದಾರೆ. ಪಾರಸೀ ಸಮಾಜದ ಅಧ್ಯಕ್ಷರಾಗಿ ಇವರು ಸ್ವಸಮಾಜಕ್ಕೆ ಮಾಡಿದ ಸೇವೆಯು ಚಿರಸ್ಮರಣೀಯವಿದೆ. ಇವರ ಮಗಂದಿರು ಇವರಂತೆಯೇ ರಾಜನಿಷ್ಠರಿದ್ದು ಸಾರ್ವಜನಿಕ ಸೇವೆಯಲ್ಲಿ ಪ್ರಮುಖರಿದ್ದಾರೆ. ಗಾಂಧಿ–ಇರ್ವಿನ್ ಒಪ್ಪಂದದ ಕಾಲದಲ್ಲಿ ಇವರ ಮಗಂದಿರು ಮಧ್ಯಸ್ಥರಾಗಿ ಕೆಲಸ ಮಾಡಿದ ಹಕೀಕತು ಸುಪ್ರಸಿದ್ಧವಿದೆ. ಇವರು ತೀರಿಕೊಂಡವರ ಉತ್ತರಾಧಿಕಾರಿ ಉತ್ತರಕ್ರಿಯೆಯ ಸಮಯ ಪಾರಸೀ ಸಮಾಜದ ಉನ್ನತಿಗಾಗಿ ಎಷ್ಟು ಪ್ರಸಂಗ ೧ ಲಕ್ಷ ರೂ. ಗಳನ್ನು ಕೊಟ್ಟರು. ಇವರ ತಾಯಂದಿರು ಇದೇ ಕಾರಣಕ್ಕಾಗಿ ದತ್ತಿಗಳ ಪ್ರತ್ಯೇಕ ೧ ಲಕ್ಷ ರೂಪಾಯಿ ಅರ್ಪಿಸಿರುತ್ತಾರೆ.

*

ಪುಣೆ ಜಿಲ್ಲೆಯೊಳಗಿನ ಒಂದು ದ್ವಿತೀಯ ಮಾರ್ಕೆಟ್ ನಿಂದ ಹೊರಟ [illegible] ಕ್ಕೂದೆ ೩೦ ವರ್ಷದ ಒಬ್ಬ ಹೆಂಗಸು ಇಬ್ಬರು ಮಕ್ಕಳನ್ನು ಕರೆತಂದು ಒಂದು ಬಾವಿಯಲ್ಲಿ ತಂಗಿಕೊಂಡಿದ್ದಳು. ಹಸಿವೆಯ [illegible] ಮಕ್ಕಳ ಗೋಳು ಕೇಳಲಾರದೆ ಅವಳು ಪ್ರಾಣತ್ಯಾಗ ಮಾಡಿದಳು! ಒಂದು ೬ ತಿಂಗಳ ಹಸುಗೂಸು ಇನ್ನೊಂದು ೩ ವರ್ಷದ ಮಗು! ಆ ಮುದ್ದು ಕೂಸಿನ ಮುಖ ನೋಡಿ ಒಬ್ಬ ಬಿಕ್ಷುಕ [illegible] ಅದೇನು ಗೊತ್ತಿಲ್ಲ ಹಾಗು ಅದು ರವದ ಮೊಲೆಗಳನ್ನು ಚೀಪುತ್ತಿತ್ತು. ಏನವಸ್ಥೆಯಿದು! ದಾರಿಯ ಒಬ್ಬ ಪುರುಷ್ಯಕ್ಕರು ಇದನ್ನು ನೋಡಿ ಆ ಮಕ್ಕಳಿಗೆ ತಮ್ಮ [illegible] ಕರೆದೊಯ್ದರಂತೆ ಮುಂದಿನ ಸಂಸ್ಕಾರಕ್ಕಾಗಿ ಪ್ರೇತವನ್ನು ಆಸ್ಪತ್ರೆಗೆ ಕಳುಹಿಸಿದ ವಾರ್ತೆ.

ಪುಣೆ ಜಿಲ್ಲೆಯೊಳಗಿನ ತಾಲೂಕಿನ ಎಂಬ ಗ್ರಾಮದೊಳಗಿನ [illegible] ಗಂಡ ಹೆಂಡತಿಗೆ ಜಗಳ ಹತ್ತಿತ್ತು. ಗಂಡನು ಆಕೆಗೆ ಅನ್ನ ವಸ್ತ್ರ ಕೊಡುವದಿಲ್ಲವಾಗಿ ಹೆಂಡತಿಯು ದೂರು ಕೊಟ್ಟ ಮಾತಿನಿಂದ ಗಂಡನಿಗೆ ಸಿಟ್ಟು ಬಂದು ಬೇಸರಪಟ್ಟು ಹೆಂಡತಿಯ [illegible] ವರ್ಷ ಪ್ರಾಯದ ಮಗನನ್ನು ಕರಕೊಂಡು ತಂದೆಯ ಮನೆಗೆ ಹೋದಳು. [illegible] ನೀರು ಎಂಬಂತೆ ಅಲ್ಲಿಯ [illegible] ಗಂಡನಿಗೆ ಬಿಟ್ಟು ಹೋಗಲಿಲ್ಲ. ಮನೆ ಅವಳ ಗಂಡನ ಮನೆಗೆ ಕಳಿಸಿದರು. ಹಾದಿಯಲ್ಲಿ ಹಸಿವೆಯಿಂದ ತಳಮಳಿ ಮಗನನ್ನು ಬಾವಿಯಲ್ಲಿ ಎಸೆದು ತಾನೂ ಪ್ರಾಣತ್ಯಾಗ ಮಾಡಿದಳು!

[illegible] ಗ್ರಾಮದಲ್ಲಿ ಒಬ್ಬಳು ಹಸಿವೆಯಿಂದ ತಳಮಳಿ ಬಾವಿಯಲ್ಲಿ ಬಿಗಿದಳು. ದಾರಿಯ ಒಬ್ಬ ಮನುಷ್ಯ ಅವನ್ನು ನೋಡಿದನು. ಅವಳ ಹೊಟ್ಟೆಗೆ [illegible] ಸರಕಾರದ [illegible] ಮಾಡಿದನು. [illegible] ಹೆಂಗಸು [illegible] ಮುಂತಾದ ಮೂಲಕ ದ್ಯಾಸ ಕಟ್ಟಿಸ್ಸೀ ಬಿಟ್ಟಳು. ಹೆಚ್ಚು ವಿಸ್ತಾರದ ಅಸ್ತಿ.

ಇದಲ್ಲದೆ [illegible] ಶ್ರೀ ಕಾಂ. ಕ್ರೀಶ್ನ ಮಹಾಶಯರು ಈ ವರ್ಷದ ಶ್ರೀ ಅಷ್ಟಮಿಯಿಂದ ಉಪವಾಸ ಮಾಡುವದರಿಂದ ಎಲ್ಲರೂ ಉಪವಾಸ ಮಾಡಬೇಕೆಂದು ಪಂಡಿತ ಮದನ ಮೋಹನ ಮಾಲವೀಯರು ಪ್ರಕಟಿಸಿರುವರು. ಪಂಡಿತ ಮಾಲವೀಯರು ಈ ಮಹಾತ್ಮರ ಉಪವಾಸದ ಸುದ್ದಿ ತಿಳಿದು ಎಲ್ಲರೂ ಉಪವಾಸ ಮಾಡಬೇಕೆಂದು ಬರೆದಿದ್ದಾರೆ— ಎಂಬ ಕೋಟೆಗೆ ಏಕ್ಕಿ [illegible] ಹಿಂದು ದರ್ಮಾನುಯಾಯಿಗಳೆಲ್ಲ ಆದರ ಮಹಾತ್ಮರಂತೆ ಶ್ರೀಕೃಷ್ಣ [illegible] ಹರಿಜನರು ಹಿಂದು ಸಮಾಜಕ್ಕೆ ಒಪ್ಪಿದವರು. ಸನಾತನ ದರ್ಮಾನುಯಾಯಿಗಳು ವೇದ—ಪುರಾಣಗಳಲ್ಲಿಯ [illegible] ಸಂಗತಿಯು ಉಲ್ಲೇಖಿಸಿದೆ. ಹರಿಜನರ ಸಾಮಾಜಿಕ ಧಾರ್ಮಿಕ ಉನ್ನತಿ ಮಾಡಲು ಸನಾತನಿಗಳೆಲ್ಲರೂ ಧರ್ಮಶಾಸ್ತ್ರದಂತೆ ಬದ್ಧರಿದ್ದಾರೆ. ಹರಿಜನರ ಉದ್ಧಾರ ಮಾಡಿ ಅವರು ಹಿಂದು ಸಮಾಜದಲ್ಲಿ [illegible] ಮಹಾತ್ಮರು ಕಳೆದ ೧೬ ವರ್ಷಗಳಿಂದ [illegible] ಸಂಗತಿಯನ್ನು ಯೋಜನೆಯಲ್ಲಿ [illegible] ಸನಾತನಿಗಳು ಧರ್ಮಶಾಸ್ತ್ರದಂತೆ ನಡೆಯಲು ಒಪ್ಪದಿದ್ದರೆ [illegible] ಇಲ್ಲ. ಸನಾತನ ಧರ್ಮಶಾಸ್ತ್ರ ಪಂಡಿತರು [illegible] ಹರಿಜನರು [illegible] ದೇವಾಲಯಗಳಲ್ಲಿ ಪ್ರವೇಶ ಕೊಟ್ಟಿದ್ದಾರೆ [illegible] ಪ್ರತಿಬಂಧ ವಿರಲಿಕ್ಕಿಲ್ಲ. ಆದರೆ ಅದಕ್ಕಾಗಿ ದೇವಾಲಯ ಪ್ರವೇಶ [illegible] ಆಗಕೂಡದಿಲ್ಲ. ಕಾಯಿದೆಯ ಬಲಾತ್ಕಾರವು ಈ ಸಮಾಜ ಸುಧಾರಣೆಯಲ್ಲಿ ಸಲ್ಲದು. [illegible] ದರ್ಮಾನಿಷ್ಠ ಶಾಸ್ತ್ರಗಳ ಅಭಿಪ್ರಾಯ ಪಡೆದು ಲೋಕಮತವನ್ನು ಪಡೆದು ಹರಿಜನರ ಉದ್ಧಾರ ಮಾಡಬೇಕು. ಇದೇ ಮೊದಲಾದ [illegible] ಸಾಮಾಜಿಕ ಪ್ರಶ್ನೆಗಳ ಮೇಲೆ ನನಗೂ, ಮಹಾತ್ಮರಿಗೂ ಮತಭೇದವಿದೆ. ಆದರೆ ಅವರಷ್ಟು ನಿರ್ಮಲ ಚಾರಿತ್ರ್ಯದ ಶೀಲವಂತರು ನಿಷ್ಕಲ್ಪ ದೇಶಾಭಿಮಾನಿಗಳೂ, ಲೋಕಸೇವಕರು ಬೇರೆ ಯಾರೂ ಇಲ್ಲ. ಆದ್ದರಿಂದ ನಾನವರನ್ನು [illegible] ಮನ್ನಿಸುತ್ತೇನೆ. ಮಹಾತ್ಮರು ನನ್ನ ಮಾತನ್ನು ಪ್ರೀತಿಯಿಂದಲೂ, ಆದರದಿಂದಲೂ, ನಿರಾಕಾರದಿಂದಲೂ ತಿಳಿದು ಅವರನ್ನು ನಮ್ಮ ಸಂಕಲ್ಪಕ್ಕನುಕೂಲವಾಗುವಂತೆ ಒಲಿಸಿಕೊಳ್ಳಬೇಕು. ಮಹಾಜನರೆಲ್ಲರೂ ಗಾಂಧಿಜಿಯವರು ಸನಿಷ್ಟ ಹಿಂದು ದೇಶದ, ಹಿಂದು ಸಮಾಜದ ನಿಜವಾದ ಹಿತಚಿಂತಕರೆಂದು ಮರೆಯಲಾಗದು. ಅಂಥ ಶ್ರೇಷ್ಠ ಪುರುಷರನ್ನು ಮಮತೆಯಿಂದ ಕಾಪಾಡಿಕೊಳ್ಳಬೇಕು" ಇತ್ಯಾದಿ ಪಂಡಿತ ಮಾಲವೀಯರವರು ತಮ್ಮ ಶ್ರೀ ಕಾಂ. ಕ್ರೀಶ್ನ ಮಹಾತ್ಮರಿಗೆ ಬರೆದಿರುವ ಪತ್ರದಲ್ಲಿ [illegible] ವರ್ಣಿಸಿರುವರು. ಇದೇ ಉಪವಾಸ ಯಿಂದ ಸಮಸ್ತ ಲೋಕಸಮುದಾಯಕ್ಕೂ, ದೇಶಬಾಂಧವರಿಗೂ [illegible] ಸೂಚಿಸುವುದಲ್ಲವೇ?

ಮೀನುಕಣ್ಣಿಗೆ (Corn) ಮದ್ದು

ಪತ್ರ್ಯ ವಿಲ್ಲಿ ಸ್ವಲ್ಪ ಕಾಲದಲ್ಲಿ ಗುಣಪಡಿಸುತ್ತೇವೆ ಸ್ಟಾಂಪು ಯಿಂದ ವರ್ಜ ಹಚ್ಚು

ಕಲಬಾಗ ಗಂಗಾಧರ ಎಂಡ್ ಸನ್ಸ್,
ಕುಮಟಾ, (ಕಾರವಾರ)

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಿರಿ

ಅನೇಕ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ನಿಲ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕೂದಲು ಲಕ್ಷಕೊಡಬೇಕು. ಕೂದಲುಗಳನ್ನು ಅಚ್ಚುಕಟ್ಟು ಮಾಡಿದರೆ, ಅವು ಬಾಡುವದು ಮತ್ತು ಉದುರುವವು. ನೀವು ಅವಕ್ಕೆ ಒಳ್ಳೇ 'ಕೂದಲನ್ನು' ಪೋಷಿಸುವ ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮ ಲಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರತು ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ದಟ್ಟವಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ ಅಥವಾ ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ		೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೨—೦
ಅಂಚವೆಚ್ಚ	,,	೦—೧೦—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

೧ ಬಾಟಲಿಗೆ ರೂ		೨— —೦
೧ ಬಾಟಲಿಗೆ	"	೧—೮—೦
ಡ್ರಾಮಿನ	,,	೦—೧೨—೦
ಅಂಚೆವೆಚ್ಚ	,	೦—೬—೦

ಒಟ್ಟೋದಿಲ್ ಬಹಾರ ಕೇಳಲಿಕ್ಕೆ ಮರಿಯಬೇಡಿರಿ!



"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಕೆಡುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ!

THE ANGLO INDIAN DRUG & CHEMICAL CO.,
POST BOX 2082 BOMBAY No 2

ಶ್ರೀ

'ದಶಮೂಲಾರಿಷ್ಟ.'

'ದಶಮೂಲಾರಿಷ್ಟ'

ಇದು ಪುರಾತನವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡುಬರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವತ್ತೊಂದು ವನಸ್ಪತಿಗಳನ್ನೂ ನಮ್ಮಲ್ಲಿ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಅದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಹೆಚ್ಚು ಬಲವತ್ತರವಾಗಿರುತ್ತದೆ.

ಈ ಔಷಧದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸುಧಾರಿಸಿ ಎಂಥ ಅಶಕ್ತನಿದ್ದರೂ ಶರೀರದಲ್ಲಿ ತೇಜಸ್ಸನ್ನು, ಶಕ್ತಿಯನ್ನೂ ಉಂಟು ಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ಪಾಂಡು) ಇವುಗಳಿಂದ ರೋಗ, ಶ್ವಾಸ, ಕಂಠರೋಗ, ಕ್ಷಯವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಇವೇ ಮುಂತಾದ ರೋಗಗಳುಳ್ಳವರಿಗೆ, ಮುಖ್ಯವಾಗಿ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳು, ನರಗಳ ವಿಕಾರ ಹಾಗೂ ಯಾವದೇ ತರದ ವಾಯು ವಿಕಾರದಿಂದ ಉತ್ಪನ್ನವಾದ ರೋಗಗಳಿಗೆ ಅತ್ಯಂತ ಗುಣಕಾರಿಯಾಗಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ.— ಪ್ರಸೂತಿಯ ನಂತರ (ದಿನ ಮರೆಯದೆ) ಒಂದೊಂದು ಚಮಚೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಬಾರದೆ ಆಗವೆ ಮೊದಲಿನಂತೆ ನವಚೈತನ್ಯವುಳ್ಳವರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡಲಾಗುವದು. ದರದ ಪತ್ರಕ್ಕಾಗಿ ಬರೆಯಬೇಕು.

೧೨ ಔಂಸ ಬಾಟ್ಲಿಗೆ ರೂ ೧—೦—೦
,, ಬಾಟ್ಲಿ ರೂ ೬—೦—೦
,, ಬಾಟ್ಲಿ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಾರಿಷ್ಟ, ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಶಿವಲ್ಯಾಸವ, ಪ್ರನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ— ಕುಮಟಾ. (ಉ ಕನ್ನಡ.)

|| ಶ್ರೀ ರಾಮ ಪ್ರಸನ್ನ ||

ಡಾ। ಅಂಕಲೀಕರ ಎಮ್.ಡಿ., (ಅಮೇರಿಕ) ಸಂಕೇಶ್ವರ ಆಸ್ಪತ್ರಿ ಇವರು
ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ
ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾಯುಜ್ವರ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಯೆಂಝಾ, ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇದ್ದವೆ ಶೀತದಿಂದ ಸಂಭವಿಸುವ ಬಾಣಂತ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಧಂಟಿಯ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿರೋಗ, ರಕ್ತಹೊರಕಡೆ, ಅತಿಸಾರ, ತಲೆಶೂಲೆ, ಶಲೆರೋಗ, ನಾಂತಿಯಾಗುವದು, ಯಾವದೆ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಪುಪ್ಪುಸ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಬಿಳಿ ಕೆಂಪ ಸೆರಗು, ಸ್ತ್ರೀಯರ ಮುಟ್ಟುದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ ಅನುಭವಸಿದ್ಧ, ಖಾತ್ರಿಯಾದ ಔಷಧವಿರುತ್ತದೆ. ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟ, ರುಚಿಕರವಿರುವದು. ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕ್ಕೊಳ್ಳುವರು. ಇದು ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು ಮತ್ತು ಯಾವದೇ ಕಾರಣದಿಂದ ಉಂಟಾದ ಉದಾಸೀನತೆಯನ್ನು ಕಳೆದು ಮನಸ್ಸು ಆನಂದಿತ ಮಾಡುವದು ಹಾಗೂ ಶರೀರ ಬಲವಾಗಿ ತೋರುವದು.

ಈ ಔಷಧದಿಂದ ೨೦ ೨೫ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ ಮೇಲೆ ಔಷಧಸಿಕ್ಕದೆ ನಿರಾಶೆಪಡುವ ಕಾರಣವಿಲ್ಲದಂತಾಗಿದೆ. ಈ ಔಷಧ ಉಪಯೋಗ ಮಾಡಿಕೊಂಡು ರೋಗವು ಹತ್ತಿರಗಿಲ್ಲ. ಈ ವರೆಗೆ ಸಾವಿರಾರು ಜನರು ರೋಗಮುಕ್ತರಾಗಿರುವರು. ನಿರಾಶೆಯಿಂದ ಬಳಲುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣವಾಗಲೆಂದು ಈ ಔಷಧ ಜಾಹೀರಾತು ಪ್ರಕಟಿಸಲ್ಪಟ್ಟಿರುವದು. ಇದನ್ನು ಹಳ್ಳಿಗರು ಹಾಗೂ ಶಹರವಾಸಿಗಳು ಒಂದು ಸಲ ಸುಪ್ರಸಿದ್ಧದಲ್ಲಿ ಇಟ್ಟುಕೊಳ್ಳತಕ್ಕದ್ದು.

ನೆಗಡಿ, ಜ್ವರ, ಕೆಮ್ಮು ಇವು ಆದ ಕೂಡಲೆ ಜನರು ನಿಷ್ಕಾಳಜಿಯಿಂದ ೨ ೩ ದಿವಸ ಹಾಗೇ ವ್ಯರ್ಥ ಕಳೆಯುತ್ತಾರೆ. ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗಿ ಸಂಭವಿಸುತ್ತದೆ. ಈ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ ಮುಂದಿನ ತ್ರಾಸು ತಪ್ಪುವದು. ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವಸದಿಂದ ಕರು ಮೂರು ತಿಂಗಳು ತನಕ ಬಾಲು ಇಡುವದು. ಹುಡುಗರಿಗೆ ಜ್ವರ ಔಷಧವು ಕೊಡುವ ಗಂಟಲು ಚಿಕ್ಕಮಕ್ಕಳ ಶರೀರ ನಿರೋಗಿ ಇರುತ್ತದೆ. ಗರ್ಭಿಣಿ ಹೆಂಗಸರಿಗೆ ಕೂಡ ಇದರ ಉಪಯೋಗ ಆಗುವ ಕಾಲ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ವಿ. ದ. ಸಾಂಗಲೀಕರ, ಮ್ಯೂಝಿಕ್ ಟೀಚರ, ಮುಂಬಯಿ— ಬರೆದಿರುವದು. ನನ್ನ ಧ್ವನಿಯು ಪ್ರವಾಸದ ಆಯಾಸದಿಂದ ಹಾಗೂ ಗಾಯನದ ಪ್ರೋಗ್ರಾಮಿನ ಮೂಲಕ ಬಹಳ ದಣಿದುಹೋಗಿತ್ತು. ಆಗ ನಾನು ತಮ್ಮ "ಕಲ್ಪತರು ಕಷಾಯ"ವನ್ನು ತಕ್ಕೊಂಡೆನು. ಅದರಿಂದ ನನ್ನ ಧ್ವನಿಯು ಮೊದಲಿನಂತೆ ಆಗಿ ನಾನು ಒಳ್ಳೇ ಸ್ವರದಿಂದ ನನ್ನ ಆರು ತಾಸಿನ ಪ್ರೋಗ್ರಾಮದಲ್ಲಿ ಯಾವದೇ ತರದಿಂದ ದಣಿವಿಲ್ಲದೆ, ದೇವರು ಕೊಟ್ಟ ಗಾಯನ ಕಲೆಯಿಂದ ಹಾಡತೊಡಗಿದೆನು. ಸದ್ರಿ ಔಷಧವು ನಮ್ಮಲ್ಲಿಯ ಸಣ್ಣ ಹುಡುಗರಿಗೆ ಗಂಟಲ ಮೇಲೆ ಉಪಯೋಗಿಸಿದೆನು. ಅದು ಉಪಯೋಗಿಸಿದ ೨—೩ ದಿವಸಗಳಲ್ಲಿಯೇ ಪೂರ್ಣ ಗುಣವಾಯಿತು.

ಕಿಮ್ಮತ್ತು: ೧ ರತ್ತಲ ಬಾಟ್ಲಿಗೆ ರೂ. ೨॥ ಅರ್ಧ ರತ್ತಲ ಬಾಟ್ಲಿಗೆ ರೂ ೧॥, ೧ ರತ್ತಲ ಬಾಟ್ಲಿಗೆ ೧೪ ಆಣೆ

ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ.

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು-ಮಾರ್ಗಗಳ ರೋಗ ಮುಂತಾದವುಗಳು ನಾಶಿಯಾಗುತ್ತವೆ. ಈ ಔಷಧವನ್ನು ದಿನಾ ಉಪಯೋಗ ಮಾಡುವದರಿಂದ ಹಲ್ಲುಗಳಿಗೆ ಶಕ್ತಿ ಬರುತ್ತದೆ. ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೩

ಇದಲ್ಲದೆ, ಹಂದಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶೌಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕೊಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀ ರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

☞ ಕುಮಟೆಯಲ್ಲಿ ಸಿಗುವ ಪತ್ತೆ— ಕಲಬಾಗಕರ ದುಕಾನ, ಕುಮಟಾ.

ಇದನ್ನು ಪಾಂಡುರಂಗ ಕಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg No. B. 1270. Monday, 13th August, 1934.

ವರ್ಷ ೧೭

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು ರೂಪಾಯಿ 2-1-0.

ಮನಿಯಾರ್ಡರಿನಿಂದ ರೂ. 3-1-0

ವ್ಹಿ. ಪಿ. ಟಪಾಲವೆಚ್ಚ ಸಹಿ ರೂಪಾಯಿ 3-4-0

ಬಿಡಿ ಸಂಚಿಕೆಗೆ 0-1-0

ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

सर्पादिहितकर्ता (?) ... लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೮

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೨ ಏಮ್ ಉದ್ದ) ೮ ಸಾಲುಗಳವರೆಗೆ ರೂ 1-0-0

೮ ನಂತ್ರ ಪ್ರತಿಸಾಲಿಗೆ 0-2-0.

ಶಿರ್ಷಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಟೀಕೆ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೩ ಮಾಹೆ ಅಗಸ್ಟ ಸನ್ ೧೯೩೪ನೇ ಇಸವಿ.)—

ಪ್ರೆಸಿಡೆನ್ಸಿ ವಿಮಾ ಕಂಪನಿಯ

ಅಪೂರ್ವ ಸವಲತ್ತು!!

ದಿ ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಶ್ಯೂರನ್ಸ ಕಂಪನಿ, ಲಿ. ಕ್ಯಾ.

ಹೆಡ್ ಆಫೀಸ - ಯೋರ್ಕ ಬಿಲ್ಡಿಂಗ, ಮುಂಬಯಿ.

ಇದರ ಆಡಳಿತೆ ಸಂಪೂರ್ಣವಾಗಿ ಹಿಂದೀ ಜನರ ಕೈಯಲ್ಲಿದೆ. ಆಡಳಿತೆಯ ಖರ್ಚು ಎಲ್ಲ ಕಂಪನಿಗಿಂತಲೂ ಕಡಿಮೆ. ಈ ಕಂಪನಿಯು ಹೊರಡಿಸಿದ ಪ್ರೊಫಿಟಶೇರಿಂಗ ಪಾಲಿಸಿ ... ಲೋಕಪ್ರಿಯವಾಗಿದೆ. ಇದಕ್ಕೆ ಲೋಕಪ್ರಿಯತ್ವವು ದಿನಾ ದಿನಾ ಹೆಚ್ಚುತ್ತಲಿದೆ.

ಸರಕಾರದ ಮನ್ನಣೆಯುಳ್ಳ ಏಕ್ಚುಅರಿಯವರು ಈ ಕಂಪನಿಯ ಲೆಕ್ಕ ತಪಾಸಣೆ ಮಾಡುತ್ತಾರೆ. ಆದರಿಂದ ಇಡೀ ಹಿಂದುಸ್ಥಾನದಲ್ಲಿ ಈ ಕಂಪನಿಯು ಭದ್ರತೆ ಖ್ಯಾತಿಗೊಂಡಿದೆ. ಎಕ್ಚುಅರಿಗಳಾದ ಶ್ರೀ. ಜಿ ಎಸ್ ಮರಾಠೆಯವರು ತಮ್ಮ ರಿಪೋರ್ಟಿನಲ್ಲಿ ಬರೆಯುವದೇನಂದರೆ— ಫ್ಲೆಕ್ಸಿಬಲ್ ಮಾಡಿ ಬೋನಸ್ ಹಂಚುವ ವ್ಯವಸ್ಥೆ ಇರುವ ಕಂಪನಿ ಇಡೀ ಹಿಂದುಸ್ಥಾನದಲ್ಲಿ ಇದೊಂದೇ! ಹೊರತು ಬೇರೆ ಕಂಪನಿಯಿಲ್ಲ

ಈ ಕಂಪನಿಯಲ್ಲಿ ಎಲ್ಲ ತರದ ವಿಮಾ ಇಳಿಸುವ ಏರ್ಪಾಡಿದೆ. ಡಾಕ್ಟರರ ತಪಾಸಣೆಯ ನಿರ್ಬಂಧವಿಲ್ಲ. ಪ್ರತಿ ತಿಂಗಳಿಗೆ ೮ ಆಣೆ, ೧ ರೂಪಾಯಿ, ೨ ರೂಪಾಯಿಗಳ ತನಕ ತುಂಬುವ ಅನುಕೂಲತೆಯಿದೆ. ಕೀರ ಬಡವರು ಸಹ ವಿಮಾ ಇಳಿಸಬಹುದು.

ಉತ್ತರ ಕನ್ನಡ ಜಿಲ್ಲೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ನಂಬಿಗಸ್ಥ ಏಜಂಟರು ಬೇಕು. ಏಜನ್ಸಿಯ ನಿಯಮಗಳ ಬಗ್ಗೆ ಹೆಡ್ ಆಫೀಸಿಗೆ ಯಾ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

ಎಮ್. ಪಿ. ರೇವಣಕರ ಹಳದೀಪುರ,

ಉತ್ತರ ಕಾನಡಾ ಜಿಲ್ಲೆಯ ಆರ್ಗನೈಝರರು.

ಪೋ. ಕುಮಟಾ. (ಉತ್ತರ ಕನ್ನಡ)

The Canara Industrial & Banking Syndicate, Ltd.

ದಿ ಕನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office — [illegible] and Nivas, UDIPI

[illegible] — Udipi, Bangalore City, Mangalore, [illegible], Cannanore, Brahmavar, [illegible], Karwar, Hubli, Belgaum, Sirsi, Kumta, Hungarkatta, Coondapur & Ankola. Our Agencies.

Figures as at 30th June, 1934.

Authorised Capital (ಅಧಿಕೃತ ಮೂಲಧನ)	Rs. 5 00 000
Subscribed Capital (ಜಂಪಾ ಆರ್ಜಿಸಿದ್ದು)	Rs. 1,29,700
Paid-up " (ತೆತ್ತು ಬಂದದ್ದು)	... 59,700
Reserve Fund (ರಿಝರ್ವ ಫಂಡು)	. 30,500
Total Deposits (ಒಟ್ಟು ಠೇವಣಾತಿಗಳು)	. 10 36,367-15-9

☞ Deposits are received at favourable rates of interest
Bills collected, drafts issued and
every description of Banking business transacted

For further particulars please apply to —

Kumta, T. RANGA PAI,
13—7—1934. Agent at KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಶ್ಯೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

ಸಂಪೂರ್ಣ ಹಿಂದೀ ಕಂಪನಿ— ೧೯ ವರ್ಷಗಳಿಂದ ನಡೆದು ಬಂದದ್ದು.

ಹೆಡ್ ಆಫೀಸು - ಎಲ್ಫಿನ್‌ಸ್ಟನ್ ಸ್ಟ್ರೀಟ, ಫೋರ್ಟ, ಮುಂಬಯಿ.

೧೯೩೧, ಇನ್ನೊಂದು ಹೊಸದಾದ ವರ್ಷ.

ಈ ವರ್ಷದಲ್ಲಿ ... ಹಿಂದಿಗಿಂತ ... ಹೆಚ್ಚಿನ ವಿಮಾ ಇಳಿಸಲಾಯಿತು.

ಕಂಪನಿಯು ಹೆಚ್ಚೆಚ್ಚಾಗಿ ಲೋಕಪ್ರಿಯವಾಗುತ್ತಿದೆ— ಇದು ಜನರ ನಂಬಿಗೆಯ ಸಾಕ್ಷಿ

ವಿಮೆದಾರರಿಗೆ ತುಂಬಾ ಭದ್ರತೆಯಿದೆ, ಸಂಪೂರ್ಣವಾದ ರಕ್ಷಣೆಯಿದೆ

ಕಂಪನಿಯವರು ಹೊಸ ಹೊಸ ಯೋಜನೆಗಳನ್ನು ಕಲ್ಪಿಸಿದ್ದಾರೆ— ಸ್ತ್ರೀಯರೂ ವಿಮಾ ಇಳಿಸಬಹುದು

ಇಂಥ ದಿನೇ ದಿನೇ ಪ್ರಗತಿ ಹೊಂದುತ್ತಿರುವ ವಿಮಾ ಕಂಪನಿಯ

ಏಜನ್ಸಿ ಕೊಳ್ಳುವದರಿಂದ ಜನಗಳಿಗೆ ಬಹು ಲಾಭವಿದೆ

ವಿಶೇಷ ಮಾಹಿತಿಯ ಬಗ್ಗೆ ಬರೆಕೊಳ್ಳಬೇಕಾದ ಪತ್ತೆ—

ಸ್ಥಾನಿಕ ಮುಖ್ಯ ಏಜಂಟರು:—

ಪಿ. ಎಚ್. ಶ್ಯಾನಭಾಗ ಎಂಡ್ ಬ್ರದರ್ಸ, ಕುಮಟಾ. (ಉ ಕನ್ನಡ) ಅಥವಾ ದಿ ಮೆನೇಜರ, ಹೆಡ್ ಆಫೀಸು.

ವಿವಿಧ ಸಂಗ್ರಹ.

ಪೈಗಂಬರರ ಹಾದಿಯ ಭಕ್ತಿ.

ರಾಣಪುರ(ಗುಜರಾಥ)ದೊಳಗಿನ 'ಜ್ಯೋತಿ' ಪತ್ರಿಕೆಯಲ್ಲಿ ಇಸ್ಲಾಮ ಧರ್ಮಸಂಸ್ಥಾಪಕರ ಹಾದಿಯ ಪ್ರೀತಿ ಪ್ರಕಟವಾಗಿದೆ. ಪೈಗಂಬರರು ಪರದೇಶಿ ಬಟ್ಟೆಗೆ ಎಂದೂ ಸ್ಪರ್ಶ ಮಾಡುತ್ತಿದ್ದಿಲ್ಲ ಯಾವಾಗಲೂ ಸ್ವದೇಶಿ, ಕೈನೆಯ್ಗೆಯ ಖಾದಿಯನ್ನೇ ಉಪಯೋಗಿಸುತ್ತಿದ್ದರು. ಒಮ್ಮೆ ಇಸ್ಲಾಮ ಧರ್ಮದ ಉಸ್ಮಾನರು ಒಮ್ಮೆ ಯಾತ್ರೆಗೆ ಹೊರಟರು, ಆ ಸಮಯದಲ್ಲಿ ಸರದಾರರು ಜರತಾರಿ ಬಟ್ಟೆಗಳನ್ನು ಧರಿಸಿಕೊಂಡು ಅವರ ಭೆಟ್ಟಿಗೆ ಬಂದರು. ಉಸ್ಮಾನರು ಸಿಟ್ಟಿಗೆದ್ದು ತಮ್ಮ ಉಡಿಗೆ ತೊಡಿಗೆಗಳನ್ನು ತೋರಿಸಿ, ಅದರ ಹಾಗೆ ಖಾದಿಯ ಉಡಿಗೆ-ತೊಡಿಗೆಗಳನ್ನು ಧರಿಸುವದು ತರವಲ್ಲವೆಂದೂ, ಪೈಗಂಬರರ ಸಾದಾ ಜೀವನಕ್ರಮವನ್ನು ಸ್ವೀಕರಿಸಬೇಕೆಂದೂ ಬುದ್ಧಿ ಹೇಳಿದರಂತೆ. ಮುಸಲ್ಮಾನ ಸಂತರು ಯಾವಾಗಲೂ ತಾವು ತಯಾರಿಸಿದ ಖಾದಿಯನ್ನೇ ಧರಿಸುತ್ತಿದ್ದರು. ಪರರು ತಯಾರಿಸಿದ ಬಟ್ಟೆಯನ್ನು ಧರಿಸುವದು ಪಾಪವೆಂದು ಅವರು ಎಣಿಸುತ್ತಿದ್ದರಂತೆ.

* *

ಶ್ರೇಯಸ್ಕರ ಆಹಾರವಾವುದು ?

ಶಾಕಾಹಾರವೇ!

ಮುಂಬಯಿಯ ವರ್ತಮಾನಪತ್ರಗಳಲ್ಲಿ ಈಗ ಬಹಳ ದಿವಸಗಳಿಂದ ವನಸ್ಪತ್ಯಾಹಾರವು ಶ್ರೇಯಸ್ಕರವೋ, ಮಾಂಸಾಹಾರವು ಶ್ರೇಯಸ್ಕರವೋ? ದೇಹದ ಬೆಳವಣಿಗೆಗೂ, ಮಾನಸಿಕ ಉನ್ನತಿಗೂ ಯಾವದು ಹಿತಕರವಾದದು? ಎಂಬ ಚರ್ಚೆ ನಡೆಯುತ್ತಿದೆ. 'ಮುಂಬಯಿ ಕ್ರಾನಿಕಲ್' ಪತ್ರಿಕೆಯಲ್ಲಿ ಬಂದಿರುವ ಈ ಕುರಿತು ಉದ್ಭವಿಸಿದ ಲೇಖಗಳನ್ನು ಪ್ರಕಟಿಸುತ್ತಿದ್ದಾರೆ. ನಾಂಡ್ರೆಯೊಳಗಿನ ಡಾ| ಜೀ. ಕೆ. ದಾಜಿ, ಎಲ್. ಎಮ್. ಎಂಡ ಎಸ್. ರವರು ಪ್ರಕಟಿಸಿದ ಪತ್ರದಲ್ಲಿ, ಮನುಷ್ಯನು ಹಾಲು ಮತ್ತು [illegible] ಸುವವರು ವನಸ್ಪತ್ಯಾಹಾರಿಗಳಿಂದು ಹೇಳಬಹುದು, ತತ್ತಿ ತಿನ್ನುವವರೂ ವನಸ್ಪತ್ಯಾಹಾರಿಗಳಲ್ಲಿ ಸೇರ್ಪಡುವಂತೆ ವನಸ್ಪತ್ಯಾಹಾರದಲ್ಲಿ ಇವರದಕ್ಕೆ ಸ್ಥಾನವಿದೆ. ಆದರೆ, ರೋಗಿಯ ಚಿಕಿತ್ಸೆಯಲ್ಲಿ ತತ್ತಿ ವನಸ್ಪತ್ಯಾಹಾರವಾಗಿದೆ. ಪೌರ್ವಾತ್ಯರಲ್ಲಿ ಹಾಲು ಪವಿತ್ರವೆಂದೆನಿಸುತ್ತದೆ. ಆರೋಗ್ಯಕ್ಕೆ ವನಸ್ಪತ್ಯಾಹಾರವು ಶ್ರೇಯಸ್ಕರವಿದೆ, ಎಂಬುದಕ್ಕೆ ಅವರು ಮುಂಬಯಿಯ ಡಾ| ಆಲೆಕ್ಸಾಂಡರ ಹೇಗ, ಎಮ್. ಎ. ಎಮ್. ಡಿ., ಎಫ್. ಆರ್. ಸಿ. ಪಿ. ಇವರು ಬರೆದ 'ಯುರಿಕ್ ಎಸಿಡ್ ಎಂಡ್ ನ್ಯಾಚರಲ್ ಆಫ್ ಡಿಸೀಜ' ಎಂಬ ಗ್ರಂಥದಲ್ಲಿ ಯುರಿಕ್ ಆಮ್ಲವೆಂಬಲ್ಲಿ ತರತರದ ರೋಗಗಳುಂಟಾಗುತ್ತವೆಂದು ಪ್ರತಿಪಾದಿಸಿದ್ದಾರೆ. ಮಾಂಸದಲ್ಲಿ ಯುರಿಕ್ ಆಮ್ಲವಿದೆ, ಆದರಿಂದ ಮಾಂಸಾಹಾರಿಗಳಿಗೆ ರೋಗದ ಭಯವಾಗುವದು ಹೆಚ್ಚು. ತತ್ತಿ, ಹಾಲು, ಗೋದಿ, ಅಕ್ಕಿ, ಕಡಲೆ, ಜವೆ, ಹೊಲಿಗೆ ಮೊದಲಾದ ಜೀನಸುಗಳಲ್ಲಿ ಯುರಿಕ್ ಆಮ್ಲವಿರುವದಿಲ್ಲ. ವನಸ್ಪತ್ಯಾಹಾರಿಗಳು ಉಪಯೋಗಿಸುವ ಬಟಾಣಿ, ಅವರೆ ಮುಂತಾದ ಧಾನ್ಯಗಳಲ್ಲಿ ಯುರಿಕ್ ಆಮ್ಲದ ಅಂಶವಿದೆ. ಅವನ್ನು ವನಸ್ಪತ್ಯಾಹಾರಿಗಳು [illegible] ಉಪಯೋಗಿಸುವದರಿಂದ ರೋಗ ಬರುವದಿಲ್ಲ. ವನಸ್ಪತ್ಯಾಹಾರಿಗಳು ಮಾಂಸಾಹಾರಿಗಳಿಗಿಂತ ಹೆಚ್ಚು [illegible] ಹಾಲು, ಹಣ್ಣು, ಕಾಯಿಪಲ್ಲೆ [illegible] ವನಸ್ಪತ್ಯಾಹಾರಿಗಳಲ್ಲಿ [illegible] ಇವರ ಆಯುಷ್ಯವು ಬಹಳ ದೀರ್ಘವಾಗುತ್ತದೆ. ಇದು ವನಸ್ಪತ್ಯಾಹಾರದ ಶ್ರೇಯಸ್ಕರತೆಯನ್ನು ತೋರಿಸುತ್ತದೆ ಎಂದು ದಾಜಿಯವರು ಬರೆಯುತ್ತಾರೆ.

* *

ಆರೋಗ್ಯರಕ್ಷಣ ಸಲಹೆಗಳು

ಡಾ| ದಾಜಿಯವರು ಬರೆದ ಇನ್ನೊಂದು ಪತ್ರದಲ್ಲಿ ತಮ್ಮ ವ್ಯವಹಾರಿಕ ಅನುಭವದಿಂದ, ಬಹು ಸಮಯದಿಂದ ಸ್ಥಾಪಿಸಲ್ಪಟ್ಟ ಕ್ರಮಗಳನ್ನು, ಒಡನೆಯೇ ಪ್ರಯೋಜನಕಾರಿಯಾದ ಮುಖ್ಯ ಮುಖ್ಯ ತಿಳುವಳಿಕೆಗಳನ್ನು ಕೊಟ್ಟಿದ್ದಾರೆ. [illegible] — 'ನಮ್ಮ [illegible] [illegible] ಉತ್ತರವು ಇದ್ದರೆ, [illegible] [illegible]

ನಮೂನೆ ತಿನ್ನುವವರು [illegible] [illegible] [illegible]

ಕಷ್ಟಪಟ್ಟವನು. ಚಕಿತನಾಗಿ "ನಿಮ್ಮ ಆಹಾರವೇನು?" ಎಂದು ನಾನು ಅವರಿಗೆ ಕೇಳಿದೆ. ಅದಕ್ಕವರು ಉತ್ತರ ಕೊಟ್ಟದ್ದೇನಂದರೆ.— 'ನಾನೊಂದೇ ಬಾರಿ ಊಟ ಮಾಡುತ್ತೇನೆ, ಹಾಲು-ನೀರಿನ ಹೊರತು ಬೇರೆ ಏನನ್ನೂ ಕೊಳ್ಳುವದಿಲ್ಲ. ಆ ನನ್ನ ಆಹಾರವೇ ಸಂಪತ್ತು — ರೊಟ್ಟಿ ಮತ್ತು ತರಕಾರಿ. ಇಂದು ಊಟ ಮಾಡಿದ ಬಳಿಕ ನಾಳೆಗೆ ನಡುಮಧ್ಯದಲ್ಲಿ 'ಕುಡಿಯುವದು ಬೇಕಾದಷ್ಟು ನೀರು. ತಿಳಿ-ನೀರು!"

ಇದರ ಮೇಲಿಂದ ಡಾ| ದಾಜಿಯವರು ಕೆಳಗಿನ ಸೂಚನೆಗಳನ್ನು ಕೊಟ್ಟು ಇವನ್ನು ಅನುಸರಿಸಿದರೆ ಚೈತನ್ಯವೂ, ಆರೋಗ್ಯವೂ, ದೀರ್ಘಾಯುಷ್ಯವೂ ಪ್ರಾಪ್ತವಾಗುತ್ತವೆಂದು ಬರೆದಿದ್ದಾರೆ — (೧) ಸರಳ ಜೀವನ, ಉಚ್ಚ ವಿಚಾರ, ಜೈಲು ಪ್ರಸಂಗಗಳಲ್ಲಿ ತುಂಬಾ ನ್ಯಾಯವು. (೨) ದಿನಾ ೨ ಸಲ ಹೊಟ್ಟೆತುಂಬ ಊಟ, ಒಂದು ಸಲ ಹಾಲು ಸಕ್ಕರೆಯುಳ್ಳ ಚಹ (ಸಹಾಯದಿಂದ ಕೆಲ್ಸಕ್ಕಾಗದು), (೩) ಮಸಾಲೆ ಜೀನಸು, ಹುಳಿ, ಖಾರ, ಮದ್ಯ, ಹಿಂಡಾಯಿಗಳನ್ನು ಸೇವನ ಮಾಡಬಾರದು. (೪) ಬೇಗನೆ ಎದ್ದು ಹೋಗಿ ನಸುಕಿನ ಹವಾ ಸೇವನೆಗಾಗಿ ಹೋಗಬೇಕು, ಒಳ್ಳೇ ವಿಚಾರ ಮಾಡಬೇಕು, ಒಳ್ಳೇ ಮಾತಾಡಬೇಕು, ಒಳ್ಳೇ ಕೆಲಸಕ್ಕೆ ಕೈ ಹಚಬೇಕು, (೫) ಎಲ್ಲರ ಮೇಲೆಯೂ ಪ್ರೀತಿಸಬೇಕು, ಯಾರಿಗೂ ದ್ವೇಷಿಸಬಾರದು, ನಮ್ಮ ಕರ್ಮದ ಫಲವನ್ನು ನಮ್ಮ ಮೇಲೆ ಒಪ್ಪಿಸಿ ಅದರಿಂದ ತಕ್ಕ ಬೋಧ ಪಡೆಯಬೇಕು (೬) ವ್ಯಾಸ ಮಾಡಬೇಕು, ಸಮಸ್ತ ದೇಶಕಲ್ಯಾಣಚಿಂತನ ಮಾಡುವಂತೆ ಬುದ್ಧಿ ಕೊಡೆಂದು ದೇವರಲ್ಲಿ ಪ್ರಾರ್ಥಿಸಬೇಕು, ಅನ್ನ-ನೀರು ಬೇಡುವವರಿಗೆ ದಯೆ [illegible] ಮಾಡಬೇಕು. [illegible] ಡಾ| ದಾಜಿಯವರು ಹೇಳಿದ ಈ ನಿಯಮಗಳು [illegible] ಸಾಧ್ಯವಿವೆ. ಇವನ್ನು ಎಲ್ಲರೂ ಕೇವಲ [illegible] ಅನುಸರಿಸಿದರೆ, ಒಳಿತಾಗುವದು.

* *



ನಿಮ್ಮ ತಯಾರಿಯಿದೆಯೋ?

ನೆಲಗಡ್ಲೆ [illegible] ಬಿಡಿಸುವ [illegible] ಯಂತ್ರವನ್ನು [illegible] ಕೊಳ್ಳುವವರು [illegible] ಈ ಯಂತ್ರವನ್ನು ಕೊಂಡುಕೊಳ್ಳಿರಿ.

ಖಾತ್ರಿಯಾಗಿ ಎಲ್ಲಕಡೆಯಲ್ಲೂ ಪ್ರಸಿದ್ಧವಾದ-

ಕಿರ್ಲೋಸ್ಕರ 'ಕಲ್ಯಾಣ' ನೆಲಗಡ್ಲೆ ಯಂತ್ರವನ್ನೇ

ಈ ಯಂತ್ರವು ಸಂಪೂರ್ಣವಾಗಿ ಸುದೃಢವಿದ್ದು ನಡಿಸಲಿಕ್ಕೆ ಸುಲಭವಿದೆ. ಬಂದವಲು ಸಹ ಹಚ್ಚಬೇಕಾಗಿಲ್ಲ. ಹೆಚ್ಚಿನ ವಿವರ ಬೇಕಾದರೆ ಈ ಕೆಳಗಿನ ಪತ್ತೆಗೆ ಬರೆಯಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ.

ಯಂತ್ರ ಸಿಗುವ ಪತ್ತೆ:

ಪೆರಿ ಎಂಡ್ ಕೋ., ಲಿಮಿಟೆಡ್, ಮೌಂಟ ರೋಡ, ಮದ್ರಾಸ.

ಒಕ್ಕಲಿಗರ ದೈನ್ಯಾವಸ್ಥೆ.

ಮದ್ರಾಸ ಇಲಾಖೆಯಲ್ಲಿ ಆರೋಗ್ಯ ಇಲಾಖೆಯ ಡೈರೆಕ್ಟರರಾಗಿದ್ದ ಲೆಫ್ಟನೆಂಟ ಕರ್ನಲ್ ಡಾ| ಆರ್. ಡಿ ಪರ್ಬರವರ ಪ್ರೇರಣೆಯ ಮೇರೆಗೆ ಮದ್ರಾಸ ಪಟ್ಟಣದ ಸಮೀಪದಲ್ಲಿಯ ತಿರುವಳ್ಳೂರ ಒಳಿಯ ೧೧ ಮಾದರಿಯ ಗ್ರಾಮಗಳಲ್ಲಿ ಹಳ್ಳಿಗರ ಪರಿಸ್ಥಿತಿಯ ಕುರಿತು ನಡಿಸಿದ ಚೌಕಶಿ ರಿಪೋರ್ಟ ಪ್ರಕಟವಾಗಿದೆ. ಮದ್ರಾಸ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾದ ಡಾ| ಪಿ. ಜೇ ಥಾಮಸ್‌ರವರ ನೇತೃತ್ವದಲ್ಲಿ ಸಂಶೋಧನ ವಿದ್ಯಾರ್ಥಿಗಳಾಗಿದ್ದ ಶ್ರೀ| ಗೋಪಾಲರಾಯರು ಈ ಚೌಕಶಿ ನಡಿಸಿದರು. ಈ ಚೌಕಶಿ ಕ್ರಮದಲ್ಲಿ ಮದ್ರಾಸ ಸರಕಾರದ ಯಾವತ್ತು ಇಲಾಖೆಯವರು ಸಹಾಯ ಮಾಡಿದ್ದಾರೆ, ಲೋಕಲ್ ಬೋರ್ಡಿನವರೂ ನೆರವಾಗಿದ್ದಾರೆ. ಆ ರಿಪೋರ್ಟಿನೊಳಗಿನ ಮುಖ್ಯಾಂಶವೇನೆಂದರೆ— ಒಂದು ಕುಟುಂಬದಲ್ಲಿ ಸರಾಸರಿ ೫ ಜನರಿರುತ್ತಾರೆಂದು ಹಿಡಿಯಬಹುದು. ಈ ಕುಟುಂಬದ ವರ್ಷಾಸನದ ಉತ್ಪನ್ನ ರೂ. ೬೦ ಕ್ಕೆ ಮಿಕ್ಕದು, ರೂ ೨೫ ಕ್ಕೆ ಕುಗ್ಗದು. ಬಹುತರವಾಗಿ ರೂಪಾಯಿ ೩೫ ಉತ್ಪನ್ನ ಇರುವ ಕುಟುಂಬಗಳೇ ಅರ್ಧಕ್ಕಿಂತ ಹೆಚ್ಚು. ಬಡತನ ಹಾಗು ಉತ್ಪನ್ನದ ಅಭಾವ, ಇವೇ ಗ್ರಾಮೋದ್ಧಾರದೊಳಗಿನ ಎಡರುಗಳು. ಇದಕ್ಕಾಗಿಯೇ ಎಲ್ಲರೂ ಪ್ರಯತ್ನಿಸಬೇಕು. ಹಳ್ಳಿಗರ ಸಂಪದಭ್ಯುದಯದ ಯೋಜನೆಯೇ ಗ್ರಾಮೋದ್ಧಾರದ ಯೋಜನೆಯಾಗಿ ಪರಿಣಮಿಸಿದೆ. ಬಡತನಕ್ಕೆ ಕಾರಣವಾದ ನಿರರ್ಥಕ ನಷ್ಟ ಕಾರಣಗಳನ್ನು ಪರಿಶೋಧಿಸಿ ಅವನ್ನು ನಿವಾರಿಸಬೇಕು ಮತ್ತು ಆದಾಯವನ್ನು ಬೆಳೆಸಬೇಕು. ಎಲ್ಲ ಗ್ರಾಮಗಳಲ್ಲಿ ಒಂದೇ ಕ್ರಮ ನಡಿಸಬರದು. ಗ್ರಾಮ ಭೇದದಂತೆ ಉಪಾಯಗಳಾದರೂ ಭಿನ್ನವಾಗಿರಬೇಕು. ಬೇಸಾಯವು ಪುರಾತನ ಕಾಲದಂತೆ ನಡೆದುಬಂದಿದೆ. ಒಕ್ಕಲಿಗರು ಸುಧಾರಿಸಿದ ನೇಗಿಲುಗಳನ್ನಾಗಲಿ, ಬೀಜಗಳನ್ನಾಗಲಿ ಉಪಯೋಗಿಸುವದಿಲ್ಲ. ಅವರಿಗೆ ಸುಧಾರಿಸಿದ ಪದ್ಧತಿಯ ಮೇಲೆ ಒಂದು ಪ್ರಕಾರದ ಬೇಸರವಿದೆ. ದನಗಳ ಕಡೆಯಿಂದ ಒಕ್ಕಲಿಗರು ದುಡಿಸಿಕೊಳ್ಳುವದಿಲ್ಲ, ಗೊಬ್ಬರಕ್ಕಾಗಿಯೇ ಅವನ್ನು ಪೋಷಿಸುತ್ತಾರೆ. ಬೇಸಾಯದಿಂದ ತಕ್ಕಷ್ಟು ಪ್ರತಿಫಲ ಸಿಗುವದಿಲ್ಲ. ಒಕ್ಕಲತನದಿಂದ ಪ್ರತಿಫಲ ಸಿಗುವಂತೆ ಸ... ನೆ ಮಾಡಿದನಕ ಗ್ರಾಮೋದ್ಧಾರವಾಗದು. ಕೂಲಿ-ಕೆಲಸಗಾರರಿಗೆ ತಕ್ಕಷ್ಟು ಕೂಲಿ ಸಿಗುವದಿಲ್ಲ. ಒಂದೊಂದು ಗ್ರಾಮದಲ್ಲಿ ಒಂದೊಂದು ನಮೂನೆಯ ಕೂಲಿ, ಒಂದೊಂದು ಪ್ರಾಯಕ್ಕೆ ಒಂದೊಂದು ಕೂಲಿ, ಒಂದೊಂದು ಬೆಳೆಗೆ ಒಂದೊಂದು ತರದ ಕೂಲಿ. ಶ್ರೀ| ಗೋಪಾಲರಾಯರ ಚೌಕಶಿ ಮಂಡಳದವರು ೨೫೦ ಮನೆಯವರ ಆದಾಯ-ವೆಚ್ಚವನ್ನು ತಪಾಸ ಮಾಡಿದರು. ವೆಚ್ಚದ ಬಾಕಿಯಲ್ಲಿ ಶಿಕ್ಷಣ ಖರ್ಚು, ಮನೋರಂಜನ ಖರ್ಚು ಇರಲಿಲ್ಲ. ಅನೇಕರು ಹೇಗೂ ಮಾಡಿ ಊಟ ಮಾಡಿಕೊಂಡಿದ್ದಾರೆ, ಅನೇಕರು ವರ್ಷದಲ್ಲಿ ೬ ತಿಂಗಳು ಅರೆಹೊಟ್ಟೆ ಉಂಡು ಕಾಲಕ್ಷೇಪ ಮಾಡುತ್ತಿದ್ದಾರೆ. ಹಲವರು ಹೊಟ್ಟೆಪಾಡಿಗಾಗಿ ತಮ್ಮ ಗುಡಿಸಲುಗಳನ್ನೂ, ದನಗಳನ್ನೂ ಒತ್ತಿ ಕೊಟ್ಟಿರುತ್ತಾರೆ. ಸಾಲ ಕೊಂಡವರು ಪುನಃ ಸಾಲ ಕೊಂಡು ಸಾಲ ತೀರಿಸುತ್ತಾರೆ. ಲೆಫ್ಟನೆಂಟ ಕರ್ನಲ್ ಪರ್ಬರವರು ತಯಾರಿಸಿದ ಗ್ರಾಮೋದ್ಧಾರ ಯೋಜನೆಯಂತೆ ಈ ಚೌಕಶಿ ಕ್ರಮ ನಡೆಯಿತು. ಅಮೇರಿಕೆಯ ಕೋಟ್ಯಾಧೀಶರಾದ ರಾಕ್‌ಫೆಲ್ಲರರವರು ಜಗದುದ್ಧಾರಕ್ಕಾಗಿ ಕೋಟ್ಯಾವಧಿ ರೂಪಾಯಿಗಳ ಒಂದು ನಿಧಿಯನ್ನೇರ್ಪಡಿಸಿದ್ದಾರೆ, 'ರಾಕ್‌ಫೆಲ್ಲರ ಫೌಂಡೇಶನ್' ಎಂದು ಅದರ ಹೆಸರು. ಈ ನಿಧಿಯ ಮದ್ರಾಸ ಶಾಖೆಯವರೇ ಈ ಚೌಕಶಿ ಕ್ರಮದಲ್ಲಿ ನೆರವಿತ್ತರು. ಆದರಿಂದ ರಿಪೋರ್ಟಿನ ಪ್ರತಿ ಅಮೇರಿಕೆಯೊಳಗಿನ 'ರಾಕ್‌ಫೆಲ್ಲರ ಫೌಂಡೇಶನ್' ಸಂಸ್ಥೆಯವರಿಗೆ ಕಳಿಸಲಾಗಿದೆ.

* *

ವಂಗ ಸರಕಾರದ ಗ್ರಾಮೋದ್ಧಾರ ಯೋಜನೆ.

ಬಂಗಾಲದಲ್ಲಿ ಒಕ್ಕಲಿಗರಿಗೆ ೧೦೦ ಕೋಟಿ ರೂಪಾಯಿ ಸಾಲವಿದೆ. ಈಗಿನ ಆರ್ಥಿಕ ಮುಗ್ಗಟ್ಟಿನಲ್ಲಿ ಸಾಲಿನ ದರ ಒಮ್ಮೆಲೇ ಕುಸಿದು ಬಿತ್ತು. ಆದರಿಂದ ಒಕ್ಕಲಿಗರಿಗೆ ಸಾಲ ತೆರುವದು ತೀರ ಕಷ್ಟವಾಗಿದೆ. ಸಾವಕಾರರು ಈ ಪರಿಸ್ಥಿತಿಯಲ್ಲಿ ಕೃಷೀಕರಿಗೆ ರಕಮು ಸಾಲ ಕೊಡಲಿಕ್ಕೆ ತಯಾರಾಗಿದ್ದಾರೆ. ಈ ಸಂಧಿಯ ಲಾಭ ಪಡೆಕೊಂಡು ಒಕ್ಕಲಿಗರಿಗೆ ಸಾಲದಿಂದ ಬಿಡುಗಡೆ ಮಾಡಬೇಕಾಗಿ ಬಂಗಾಲ ಸರಕಾರದ ಯೋಜನೆಯಿದೆ. 'ಲೆಂಡ ಮಾರ್ಗೇಜ ಬೇಂಕು'ಗಳನ್ನು ಸ್ಥಾಪಿಸಿ ಅವುಗಳ ದ್ವಾರಾ ಕಡಿಮೆ ಬಡ್ಡಿ ದರದಿಂದ ಸಾಲ ತೆಗೆದು ಅದನ್ನು ಒಕ್ಕಲಿಗರಿಗೆ ಕೊಟ್ಟು ಸಾವಕಾರರ ಸಾಲದೊಳಗಿಂದ ಬಿಡುಗಡೆ ಮಾಡುವದಿದೆ. ಈ ಸಾಲವನ್ನು 'ಲೆಂಡ ಮಾರ್ಗೇಜ ಬೇಂಕು'ಗಳಿಗೆ ಸಣ್ಣ ಸಣ್ಣ ವಾರ್ಷಿಕ ಕಂತುಗಳಿಂದ ಒಕ್ಕಲಿಗರು ತೀರಿಸತಕ್ಕದ್ದಿದೆ. ಒಕ್ಕಲತನದಿಂದ ಒಕ್ಕಲಿಗರ ಸಂಸಾರ ಖರ್ಚು ಸಾಗಿ ಉಳಿದ ಉಳಿತಾಯವು ಸಾಲ ನಿವಾರಣೆಗೆ ಸಾಕಾದರೆ ಮಾತ್ರ ಈ ಯೋಜನೆಯಿಂದ ಒಕ್ಕಲಿಗರಿಗೆ ಲಾಭವಾಗುವದೆಂದೂ, ಇಲ್ಲದಿದ್ದರೆ ಸಾವಕಾರರ ಸ್ಥಳದಲ್ಲಿ 'ಲೆಂಡ ಮಾರ್ಗೇಜ ಬೇಂಕಿ'ನ ರೂಪದಿಂದ ಪುನಃ ಸಾವಕಾರರ ಸ್ಥಾಪನೆಯಾದಂತಾಗುವದೆಂದೂ ವರ್ತಮಾನಪತ್ರಗಳ ಟೀಕೆ. ಒಕ್ಕಲತನದಿಂದ ಒಕ್ಕಲಿಗರಿಗೆ ಲಾಭ ಸಿಗುವಂತೆ ಏರ್ಪಾಟು ಮಾಡಿದನಕ ಇಂಥ ಯೋಜನೆಗಳಿಂದ ತಕ್ಕಷ್ಟು ಲಾಭವಿಲ್ಲವಾಗಿಯೂ ಹೇಳುತ್ತಾರೆ. ಬಂಗಾಲ ಸರಕಾರವು ದ್ಯಾಗ ಸುಧಾರಣೆ ಮಾಡತ್ತದೆಂದು ನೋಡಬೇಕು.

* *

ಗ್ರಾಮೋದ್ಧಾರ ಶಿಕ್ಷಣದ ಮಾದರಿ.

ಈಗ ದಿನದಿನಕ್ಕೆ ಗ್ರಾಮೋದ್ಧಾರ ಯೋಜನೆಗಳ ಚರ್ಚ ನಡದಿದೆ. ಈ ಸಮಯ ಡೆನ್ಮಾರ್ಕ ದೇಶದೊಳಗಿನ ಗ್ರಾಮೋದ್ಧಾರದ ಯೋಜನೆಯನ್ನು ವಿಚಾರಿಸಬಹುದು. ಡೆನ್ಮಾರ್ಕ ದೇಶವು ಹಿಂದುಸ್ಥಾನ ದೇಶದಂತೆ ಬೇಸಾಯಪ್ರಧಾನ ದೇಶವೇ. ಮುಂಚೆ ಅಂದರೆ ೧೮೬೪ನೇ ಇಸ್ವಿಯ ವರೆಗೆ ಈ ದೇಶದೊಳಗಿನ ಒಕ್ಕಲಿಗರು ತೀರ ನಿಕೃಷ್ಟಾವಸ್ಥೆಯಲ್ಲಿದ್ದರು. ಆ ವರ್ಷದಲ್ಲಿ ಗ್ರುಂಡ್‌ವಿಗ್ ಎಂಬ ಸಾಮಾನ್ಯ ಕವಿಗಳೂ, ತತ್ವಜ್ಞಾನಿಗಳೂ ಒಕ್ಕಲಿಗರಿಗಾಗಿ ಹೊಸ ಶಿಕ್ಷಣಕ್ರಮವನ್ನು ತಯಾರಿಸಿದರು. ಹೊಲಮನೆಗಳಲ್ಲಿ ಸಾಗುವಳಿ ನಡಿಸುವದೊಂದೇ ಹೊರೆಯಾಗಿರದೆ, ಅದಕ್ಕೆ ಪೋಷಕವಾಗಿ ಹಾಲಿನ ವ್ಯಾಪಾರ, ಕೋಳಿಗಳ ಪೈದಾಸ್ತು ಮೊದಲಾದ ವ್ಯವಸಾಯಗಳನ್ನು ಇವರು ಒಕ್ಕಲಿಗರಿಗೆ ತೋರಿಸಿಕೊಟ್ಟರು. ಸಹಕಾರದ ಆಶ್ರಯದಿಂದ ಒಕ್ಕಲಿಗರಿಗೆ ಹಣವನ್ನಷ್ಟು ಪೂರೈಸಿ ನಿಲ್ಲದೆ, ಒಕ್ಕಲಿಗರಿಗೆ ತಮ್ಮ ಉದ್ದಿಮೆಯಲ್ಲಿ ಒದಗುವ ತೊಡಕುಗಳನ್ನು ಪರಿಹರಿಸುವ ಹಾಗು ಸರಕು ಪೂರೈಸುವ ವ್ಯವಸ್ಥೆಯನ್ನೂ ಮಾಡಿದರು. ಸರಕುಗಳನ್ನು ಸಂತೆಗಳಿಗೆ ಕಳಿಸುವದಕ್ಕಾಗಿ ಮಾರ್ಗ, ಮೋಟರು, ಟ್ರಾಮ್ ಮೊದಲಾದ ವಾಹನ ಸೌಕರ್ಯಗಳ ಏರ್ಪಾಟಾಗಿದೆ. ಒಕ್ಕಲಿಗರು ಮನೆಯಲ್ಲಿಯೇ ಉಳಿದು ಒಕ್ಕಲತನ ಹಾಗು ಉದ್ದಿಮೆಗಳನ್ನು ನಡಿಸಿ ಸಂಪಾದನೆ ಮಾಡುವಂತೆ ಔದ್ಯೋಗಿಕ ಶಾಲೆಗಳ ಏರ್ಪಾಟು ಸಹ ಆಗಿರುತ್ತದೆ. ಇದರಿಂದ ಡೆನ್ಮಾರ್ಕ ದೇಶದಲ್ಲಿ ಒಕ್ಕಲಿಗರೆಲ್ಲರೂ ಐಶ್ವರ್ಯವಂತರಾಗಿದ್ದಾರೆ. ಇದೀಗ ಯುರೋಪ ಖಂಡದೊಳಗೆ ಹೆಚ್ಚಿನ ಹಾಲಿನ ಪದಾರ್ಥ, ಕೋಳಿ-ತತ್ತಿ ಮೊದಲಾದವುಗಳ ಪೂರೈಕೆಯಾಗುತ್ತಿದೆ. ಜಪಾನ ದೇಶದಲ್ಲಿಯೂ ತಕ್ಕಮಟ್ಟಿಗೆ ಇದೇ ವ್ಯವಸ್ಥೆ. ಅಲ್ಲಿ ೧೨೦೦೦ಕ್ಕೆ ಮಿಕ್ಕ ಔದ್ಯೋಗಿಕ ಶಾಲೆಗಳಲ್ಲಿ ೧೩ ೨೦ ಲಕ್ಷ ವಿದ್ಯಾರ್ಥಿಗಳು ಅಲ್ಲಿ ಕಲಿಯುತ್ತಿದ್ದಾರೆ. ಒಕ್ಕಲತನಕ್ಕೆ ಪೋಷಕವಾದ, ಅನುಕೂಲವಾದ ಶಿಕ್ಷಣ ಕ್ರಮವನ್ನು ತಯಾರಿಸಿ ಅದನ್ನು ಪ್ರಚಾರಗೊಳಿಸಿದರೆ ಮಾತ್ರ ಒಕ್ಕಲಿಗರ ಉದ್ಧಾರವಾಗುವದು. ಅದನ್ನು ಬಿಟ್ಟು, ನೌಕರಿಗೆ ಉಚಿತವಾದ ಶಿಕ್ಷಣದಿಂದ ಒಕ್ಕಲಿಗರ ಸಂಪದಭ್ಯುದಯವಾಗುವ ಬಗೆ ಹೇಗೆ? ಸರಕಾರವೂ, ಸಹಕಾರಿಗಳೂ, ಶಿಕ್ಷಣ ಇಲಾಖೆಯವರೂ ಒಕ್ಕಟ್ಟಾಗಿ ವಿಚಾರ ಮಾಡತಕ್ಕ ವಿಷಯವಿದು.

* *

ಕಲಹಕಾರಣವ್ಯಾವುದು ? ದುಡ್ಡು!!

ಇಂಗ್ಲಂಡ ದೇಶದ ಬರ್ಮಿಂಘಮ್‌ದಲ್ಲಿ ಜೂನ ತಿಂಗಳಲ್ಲಿ 'ರಾಷ್ಟ್ರೀಯ ಶಾಂತತಾ ಪರಿಷತ್ತು' ಸೇರಿತ್ತು. ಶಾಂತಿಸ್ಥಾಪನೆಯ ಉಪಾಯಗಳನ್ನು ಎಲ್ಲರೂ ಚರ್ಚಿಸಿದರು. ಯಾವ ಉಪಾಯದಿಂದ ಶಾಂತಿ ಸ್ಥಾಪಿಸಬಹುದು? ಎಂಬವರ ಕುರಿತು ಐಕ್ಯಮತ್ಯವಾಗಲಿಲ್ಲ. ಮೂಲ ತತ್ವದಲ್ಲಿಯೇ ಮತಭೇದವಾಯಿತು. ಪಾರ್ಲಮೆಂಟಿನ ಸಭಾಸದರಾದ ಮಿ| ಪೊನ್ಸ್ಬೀ ಮೊದಲಾದವರು ರಾಜಕಾರಣಗಳೇ ಕಲಹಕಾರಣವೆಂದರು; ಆರ್ಥಿಕ ವ್ಯವಸ್ಥೆಯೇ ಕಲಹಕಾರಣವೆಂದು ಮಿ| ಎಚ್ ಎನ್ ಬ್ರೇಲ್ಸಫರ್ಡರವರು ಪ್ರತಿಪಾದಿಸಿದರು. ಮಿ| ಬ್ರೇಲ್ಸಫರ್ಡರವರ ವಿಚಾರಸರಣಿ ಬೋಧಪ್ರದವಿದೆ. ಶಾಂತಿಸ್ಥಾಪಕರ ಪರಿಷತ್ತಿನಲ್ಲಿ ಮತಭೇದವಾದರೂ ಯಾವತ್ತು ಕಾರ್ಯಕ್ರಮ ಶಾಂತತೆಯಿಂದಲೇ ನಡೆಯಿತು. ಮಿ| ಬ್ರೇಲ್ಸಫರ್ಡರವರು ನುಡಿದದ್ದೇನಂದರೆ—"ದುಡ್ಡಿನ ದುರಾಶೆಯಿಂದಲೇ ಯುದ್ಧಗಳಾದವು. ಹಣದ ಅಡಚಣೆಯೇ ಈಗ ಲೋಕದಲ್ಲಿ ಕಲಹಕ್ಕೆ ಕಾರಣ. ನಿಮ್ಮ ಮನೆಯಲ್ಲಿ ಹಣದ ಅಡಚಣೆಯಿಲ್ಲದೆ ಸಮಾಧಾನವಿದೆಯೇ? ಇದಿಲ್ಲ ಮಹಾಯುದ್ಧವು ೧೯೧೪ನೇ ಇಸ್ವಿಯಲ್ಲಿ ಒದಗಿರದಿದ್ದರೆ ಮುಂದಾದರೂ ಒದಗುತ್ತಿತ್ತು. ೧೯೧೭ ನೇ ಇಸ್ವಿಯಲ್ಲಿ ಕೂಲಿಕಾರರು ಸಂಪು ಮಾಡದಿದ್ದರೆ ಮುಂದಾದರೂ ಅವರು ಮಾಡುತ್ತಿದ್ದರು. ಈಗ ಜಗತ್ತಿನೊಳಗಿನ ಶಾಂತಿಯನ್ನು ಭಂಗ ಮಾಡುವವರು ಇಬ್ಬರು— ಜರ್ಮನರೂ, ಜಪಾನಿಯರೂ! ಮಧ್ಯ ಯುರೋಪಖಂಡದಲ್ಲಿ ಜರ್ಮನಿಯ ಪ್ರಾಬಲ್ಯ ಸ್ಥಾಪಿಸಿ ಸ್ವತಂತ್ರ ಆರ್ಥಿಕ ಸಾಮ್ರಾಜ್ಯ ಸ್ಥಾಪಿಸಲು ಜರ್ಮನರು ಕಲ್ಪಿಸಿದ್ದರು. ಈಗಲೂ ಇದೇ ಹವ್ಯಾಸವಿದೆ. ಪಶ್ಚಿಮ ಜರ್ಮನ ದೇಶದ

ಸ್ಥಿಯೂ [illegible] ಪ್ರಮಾಣ [illegible] ಕಪ್ರ [illegible] ಬಡಬಾ [illegible] ಪಾಗುವ [illegible] ರಕ್ಷ [illegible] ಸಾಮ್ರಾಜ್ಯ [illegible] ದವನ್ನು [illegible] ನಾವೇಕೆ [illegible] ಸಾಮ್ರಾಜ್ಯ [illegible] ಹಿಂದುಸ್ಥಾನದಲ್ಲಿ [illegible] ಇದು [illegible] ಸಾಹುಕಾರ [illegible] ಪಕ್ಕೆ [illegible]

ದೆಮನ್ನು ರಕ್ಷ ಪಡಿಸಲು ವ್ಯಾಪಾರಾಯರಿಗೆ ಸರ್ವಾಧಿಕಾರ ಕೊಡಬೇಕಾಗಿದೆ. ಈ ಜಗತ್ಸಾಂಸಜಗಳ್ಯಾ ಪು? ಹಿಂದುಸ್ಥಾನದ ಸಾಲಗಳೆಲ್ಲ ಲಂಡನಿನಲ್ಲಿ ಕೊಟ್ಟಿದ್ದಾರೆ. ಅದರಿಂದ ಲಂಡನಿನ ಸಾವಕಾರರೆಂದು ಸಮಾಧಿಸುವ ಬದಲು, ವಿನಯಭಾವದಿಂದ ಜಗತ್ತಿನ ಉಪಕಾರಕರೆಂಬ ವ್ಯಾಪಕ ಉಲ್ಲೇಖ ಮಾಡಿಕೊಂಡಿದ್ದಾನೆ. ಹಿಂದೀ ಜನಾಂಗದ ಕಲ್ಯಾಣದ ಇಚ್ಛೆಗಿಂತ ಲಂಡನ್ ಸಾಪಕಾರರ ಜಪ್ತತೆಯ ವಿಚಾರದಿಂದಲೇ ಸ್ಥಾಂಕಪತ್ರಿಕೆಯ ಕಲ್ಪನೆಯಾಗಿದೆಂದು ಆಗ ಬಹಿರಂಗವಾಗಿ ಅನೇಕರು ಹೇಳುತ್ತಿದ್ದರು. ಈ ತತ್ವವು ಜಾಣತನದ್ದೋ, ದಡ್ಡತನದ್ದೋ? ಎಂಬುದು ಚರ್ಚೆಯ ವಿಷಯವಲ್ಲ. ಈ ತತ್ವದಂತೆ ನಾವು ಹಿಂದುಸ್ಥಾನದಲ್ಲ ಆಡಳಿತ ನಡಿಸಬೇಕಾದರೆ ನಮಗೆ ಸ್ವನ್ಯಾಧಿಕಾರ ಬೇಕು, ಸ್ವಸ್ಥ ಬಲ ಬೇಕು. ಆತ್ತರದೊಳಗಿಂದ ಪರದೇಶದವರ ಮಾಲ ಬಾರದಂತೆ ಹಾಕಿಸುವ ಅಧಿಕಾರವಿರಬೇಕಾಗಿ. ಜಿನೆವ ದಲ್ಲಿ ಮಿ, ಮೆಕಡೋನಲ್ಡ್ ರವರು ಒಪ್ಪಿದ್ದು ತ್ತಿದ್ದಾರೆ. ಇಂದ ಅಧಿಕಾರವಿಷ್ಟ ದೊರತು ರ? ಗಾಂಧಿಯವರಿಗೆ ಪಕ್ಕನೆ ಕರಹಿಡಿಯ ಸರಮನೆ ಗಟ್ಟಿಬರದು. ಇವರ ಮಾಲಿಂದ ದುಡ್ಡಿನ ಸಂಬಂಧದ ಪ್ರತಿಕೆಯಾಗುತ್ತದಲ್ಲವೇ? ಸಾಮ್ರಾಜ್ಯದೊಳಗಿನ ಸರಕುಗಳಿಗೆ ಪ್ರೋತ್ಸಾಹನ ಕೊಡಬೇಕೆಂದು 'ಇಂಪೀರಿಯಲ್ ಪ್ರಿಫರನ್ಸ' ಎಂಬವೊಂದು ತತ್ವವಿದೆ. ಸಾಮ್ರಾಜ್ಯಾಂತರ್ಗತ ಆಸ್ಟ್ರೇಲಿಯಾದೊಳಗೆ ಬೆಳೆಯುವ ಸೇಪು-ಹಣ್ಣುಗಳನ್ನೇ ನಾವು ಕೊಂಡು ಕೊಳ್ಳಬೇಕು. ಕೆಲಿಫೋರ್ನಿಯಾದಿಂದ ಬಂದ ಹಣ್ಣುಗಳನ್ನು ಕೊಂಡುಕೊಳ್ಳಕೂಡದು ಯಾಕೆ? ಆಸ್ಟ್ರೇಲಿಯಾ ದೇಶವು ಲಂಡನಿನೊಳಗಿನ ಸಾವಕಾರರಿಗೆ

ಸಾಲ ತೆರಬೇಕು. ಸಾಮ್ರಾಜ್ಯವೆಂದರೆ ವ್ಯಾಪಾರವೆಂದು ಚೆಂಬರಲೇನರವರು ನುಡಿಯುತ್ತಿದ್ದರು. ಸಾಮ್ರಾಜ್ಯವೆಂದರೆ ಸಾಲವೆಂದು ಹೇಳುವದು ಹೆಚ್ಚು ಸ್ಥಿತಿಯ ನಿದರ್ಶಕವಾದೀತು. ಶಾಂತತೆ ಯಾ ಯುದ್ಧ ಪ್ರಸಂಗಕ್ಕೆ ರಾಜಕೀಯ ಪದ್ಧತಿಗಿಂತ ಆರ್ಥಿಕ ಸ್ಥಿತಿಯನ್ನೇ ವಿಚಾರಿಸುವದು ಲೇಸು. ಆರ್ಥಿಕ ಸ್ಥಿತಿಯ ಮೂಲಿಂದಲೇ ರಾಜಕೀಯ ಅವಸ್ಥಾಂತರಗಳುಂಟಾಗುತ್ತವೆ. ಶಾಂತಿ ಸ್ಥಾಪಕರು ಈಗಿನ ಕಾಲದ ಆರ್ಥಿಕ ಪದ್ಧತಿಯ ವಿಚಾರ ಮಾಡಿ ಉಪಾಯಗಳ ಶೋಧನೆ ಮಾಡಬೇಕು. ಈಗಿನ ಔದ್ಯೋಗಿಕ ಪದ್ಧತಿಯಲ್ಲಿ ಅಧಿಕವಾಗಿರುವ ಲಾಭ ಪಡೆಯುವ ಉದ್ದೇಶವೇ ಯುದ್ಧ ಕಾರಣವಿದೆ. ಕೂಲಿಕಾರರಿಗೆ ಕನಿಷ್ಠ ಸಂಬಳ ಕೊಡಬೇಕು, ಪರದೇಶಗಳಿಗೆ ಸರಕು ಕಳಿಸಲು ತುಂಬಾ ಇಂಬಿರಬೇಕು, ತಮ್ಮ ಸರಕು ವಿಕ್ರಿಯಾಗುವ ದೇಶದಲ್ಲಿ ಪರಸ್ಥರ ಸರಕು ಸೇರದಂತೆ ಜಕಾತ ಕೋಟೆಗಳನ್ನು ಕಟ್ಟಿಸಬೇಕು ಮತ್ತು ಲಾಭ ತಿನ್ನಬೇಕು. ಆದರಿಂದ ನಮ್ಮ ಆರ್ಥಿಕ ಪದ್ಧತಿಯಲ್ಲೇ ತಿದ್ದುಪಡಿಯಾಗಬೇಕು. ಜೀವನೋಪಾಯದ ಒದಗನದಲ್ಲಿಯೂ ಬದಲಾವಣೆಯಾಗಬೇಕು. ಮತ್ತೊಂದು ಯುದ್ಧವಾದರೆ ಪಾಶ್ಚಾತ್ಯ ಸಂಸ್ಕೃತಿಯೇ ಅಳಿಯುವದೆಂದು ಕೆಲವರು ಹೇಳುತ್ತಾರೆ. ಅದಕ್ಕೆ ನಾನೊಪ್ಪುವದಿಲ್ಲ. ಯುದ್ಧ ಕಾರಣಗಳ ಮೂಲವನ್ನು ಪರಿಶೋಧಿಸಲು ನಮ್ಮೊಳಗಿನ ವಿಚಾರವಂತರು ಧೈರ್ಯಬಡುವದಿಲ್ಲ. ಆಂದ ಮಾನಸಿಕ ಹೇಡಿತನವು ಈ ಯುದ್ಧದಿಂದ ನಿರ್ನಾಮವಾಗವದು."

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಿರಿ.

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಕ ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚನ್ನ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯು ಹೊಳೆದು ಹೋಗುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಂತ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಿಲ್ಲರೆ ಅಂಗಡಿಕಾರರಲ್ಲಿ
ಈ ಕೈಂಲ ದೊರೆಯುತ್ತದೆ
ಅಥವಾ
ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೨—೦
ಅಂಚವೆಚ್ಚ	,,	೦—೨—೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ

೨ ಔಂಸಿಗೆ	ರೂ.	೨—೧—೦
೩ ಔಂಸಿಗೆ	"	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ ದಿಲ್ ಬಹಾರ
ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವದು?

ಒಟ್ಟೋ ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಧಾರಣ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತದೆ. ಇದರಿಂದ ಹೂವಿನ ಸಹಜ ಪರಿಮಳವು ಕೆಡುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮುನ್ನದ ಸ್ಪರ್ಧಿಯಿಲ್ಲ.

THE ANGLO INDIAN DRUG & CHEMICAL CO.,
POST BOX 2082. **BOMBAY No 2**

ಈಗಿನ ಪ್ರಪಂಚ.

ಮಹಾತ್ಮರ ಉಪೋಷಣ ಕಾರಣ

ಮಹಾತ್ಮರು ವರ್ಧಾದಲ್ಲಿನ ಸತ್ಯಾಗ್ರಹ ಆಶ್ರಮದಲ್ಲಿ ಆಗಸ್ಟ ೭ ನೇ ತಾರೀಖು ಮಂಗಳವಾರ ಬೆಳಗಿನ ಜಾವದಿಂದ ತಮ್ಮ ಉಪೋಷಣ ವ್ರತಕ್ಕೆ ಪ್ರಾರಂಭಿಸಿದರು. ಮುಂಜಾನೆ ೬ ಘಂಟೆಗೆ ಮಹಾತ್ಮರು ಎದ್ದು ಉಪೋಷಣ ಕಾರಣವನ್ನು ಸಂಕ್ಷೇಪದಿಂದ ಒಳಗೊಂಡಿದ್ದ ಗೀತೆಯೊಂದಿಗೂ ಆಶ್ರಮಕ್ಕೂ ನಿವೇದಿಸಿ, ಈ ವಾರದಲ್ಲಿ ಎಲ್ಲರೂ ಆತ್ಮನಿರೀಕ್ಷಣೆ ಮಾಡಿ ಆತ್ಮಶುದ್ಧಿಯನ್ನು ಸಾಧಿಸಬೇಕೆಂದರು. "ನಾನು ಆರೋಗ್ಯನಿಷ್ಠನೇ, ಉಪೋಷಣ ವ್ರತವನ್ನು ಶಾಂತಿಯಿಂದ ಪಾರಗಾಣಿಸುವೆನೆಂದು ನಾನು ಹೇಳುತ್ತ ಮುಂತಾಗಿ ನನ್ನ ಸಂಗಡ ಬರುವವರಿಗೆ ಸಹ ನನ್ನಿಂದಾಗದು, ಉಪೋಷಣದಿಂದ ನನಗ ಕಷ್ಟವಾಗುವದು, ಆದರಿಂದ ಎಲ್ಲರೂ ನನಗಾಗಿ ಪರಮಾತ್ಮನ ಪ್ರಾರ್ಥನೆ ಮಾಡತಕ್ಕದ್ದು" ಈಗ ಮಹಾತ್ಮರು ನುಡಿದು ೫ ಘಂಟೆಗೆ ಜೇನುತುಪ್ಪ ಹಣ್ಣು ಹಂಪಲಗಳ ರಸ, ಆಡಿನ ಹಾಲು ಕೊಂಡರು. ಕೆಲ ಹೊತ್ತು ನೂಲು ೬ ಘಂಟೆ ಉಪೋಷಣ ವ್ರತ ಪ್ರಾರಂಭವಾಯಿತಾಗಿ ತಿಳಿಸಿದರು. ನಾಳೆ ಮಂಗಳವಾರ ೬ ಘಂಟೆಗೆ ಮಹಾತ್ಮರ ಉಪೋಷಣವು ಆರಂಭವಾಗುತ್ತದೆ. ಮಹಾತ್ಮರು ಉಪೋಷಣ ಪ್ರಾರಂಭವಾಗುವ ದಿವಸ ಮುಂಚಿತವಾಗಿ ಒಂದು ಪ್ರಕಟಣೆ ಹೊರಡಿಸಿದ್ದಾರೆ. ಅದೇನಂದರೆ — 'ನಾನೀಗ ನಾನು ಉಪೋಷಣ ಸಪ್ತಾಹಕ್ಕೆ ಪ್ರಾರಂಭಿಸುತ್ತೇನೆ. ಈ ಸಮಯ ಹರಿಜನಸೇವಕರಲ್ಲಿಯೂ ಸ್ವತಃ ಆತ್ಮಶುದ್ಧಿಯನ್ನು ಸಾಧಿಸಿ ತಮ್ಮ ಕಾರ್ಯವನ್ನು ಏಕಾಗ್ರಚಿತ್ತದಿಂದ ನಡಿಸಬೇಕಾಗಿ ನನ್ನ ಇಚ್ಛೆಯಿದೆ. ನಿಷ್ಠಾವಂತ ಸೇವಕರು ಆತ್ಮಶುದ್ಧಿಯಿಂದಲೂ, ಪ್ರಾಮಾಣಿಕತನದಿಂದಲೂ ಅಸ್ಪೃಶ್ಯತಾ ರಾಕ್ಷಸನನ್ನು ಕೊಲ್ಲಲು ಸತತೋದ್ಯೋಗ ಮಾಡಿದ್ದರೆ ಆತನ ನಾಶವಾಗದಿರಲಿಕ್ಕಿಲ್ಲ. ಪ್ರತಿಯೊಬ್ಬರಿಗೂ ಪ್ರಾಯಶ್ಚಿತ್ತದ ಪ್ರಸಂಗದಲ್ಲಿ ಉಪವಾಸ ಮಾಡುವ ಹಕ್ಕಿಲ್ಲ. ಶ್ರದ್ಧೆಯಿಲ್ಲದೆ ಮಾಡಿದ ಉಪವಾಸದಿಂದ ಅನರ್ಥವಾಗುತ್ತದೆ. ಅಧಿಕಾರಿ ಪುರುಷರು ಶಾಸನಾರ್ಥಿಕ ಉಪಾಯಗಳನ್ನು ಪ್ರಯೋಗಿಸದಿದ್ದರೆ ಅಪಾಯವಾಗುತ್ತದೆ. ರಾಷ್ಟ್ರೀಯ ಸಭೆಯವರಿಗೂ, ರಾಷ್ಟ್ರೀಯ ... ನಾನು ಈ ಮೂಲಕ ಒಂದು ಮುಂಜಾಗ್ರತೆ ಕೊಡುತ್ತೇನೆ. ಉಪೋಷಣ ಸಪ್ತಾಹದಲ್ಲಿ ನಾನು ಅವರನ್ನೇ ನೆನಿಸುತ್ತಿರುವೆನು. ಕಳೆದ ಎಂಟು ವರ್ಷದಿಂದ ನನಗೆ ಅವರದೇ ಚಿಂತೆ! ಕೊಂಗ್ರೆಸ್ ಇಲೆಕ್ಷನಗಳ ಸಮಯ ಕೆಲವರು ನಡಿಸಿದ ದ್ವೇಷ ಮತ್ಸರ, ಮತಸಂಗ್ರಹಕ್ಕಾಗಿ ಕೊಂಗ್ರೆಸ ಸೇವಕರು ನಡಿಸಿದ ಮೋಸದ ಅತಿಕ್ರಮಗಳು, ಹಿಂದೂಸ್ತಾನದ ಬಡವರ ಹಣವನ್ನು ದುರುಪಯೋಗ ಮಾಡಿ ನಡಿಸಿದ ಪ್ರಕಾರಗಳು, ಇವುಗಳಿಂದ ನನಗೆ ಬೇಸರವುಂಟಾಗಿದೆ. ಸತ್ಯ ಸ್ವರೂಪಿ ಅಹಿಂಸೆಯಿಂದ ನಡೆಯಬೇಕೆಂದು ಪಟ್ಟಿಸಿದ್ದ ನಿಯಮ ಇದೆ, ಆದಾಗ್ಯೂ ಕೆಲ ಪ್ರಾಂತಗಳಲ್ಲಿ ಇಲೆಕ್ಷನಿನ ಸಮಯ ಇವೆಲ್ಲಯೂ ಕಾಣಲಿಲ್ಲವೆಂತೆ ನನ್ನ ಉಪೋಷಣಕ್ಕೂ, ನೂಲುವ ವರ್ತನಕ್ಕೂ ಸಂಬಂಧವಿಲ್ಲ. ಆದಾಗ್ಯೂ ರಾಷ್ಟ್ರೀಯ ಸೇವಕರು ನನಗುಂಟಾದ ಚಿಂತೆಯನ್ನು ನನಗೆ ಆತ್ಮನಿರೀಕ್ಷಣೆ ಮಾಡಿ ರಾಷ್ಟ್ರೀಯ ಸಭೆಯನ್ನು ಪ್ರಾಮಾಣಿಕವಾಗಿ ನಡೆಸಬೇಕು. ಮತ್ತು ರಾಷ್ಟ್ರೀಯ ಸಭೆಯ ಉದಾತ್ತ ಧ್ಯೇಯದ ಪ್ರತಿಬಿಂಬವಾಗಿ ಕಾಣಬೇಕು. ರಾಷ್ಟ್ರೀಯ ಸಭೆಯೊಳಗಿನ ಕಲ್ಮಷವೆಲ್ಲ ದೂರವಾಗಲೆಂದು ನಾನು ಪ್ರಾರ್ಥಿಸುತ್ತೇನೆ. ರಾಷ್ಟ್ರೀಯ ಸಭೆಯೆಂದರೆ, ಹಿಂದುಸ್ತಾನದೊಳಗಿನ ಸರ್ವಶ್ರೇಷ್ಠ ಸಂಸ್ಥೆ, ಅಸ್ಪೃಶ್ಯತಾ ನಿವಾರಣೆಯೂ ಈ ಸಂಸ್ಥೆಯ ಧ್ಯೇಯವಿದೆ. ಆದರಿಂದ ಈ ಸಂಸ್ಥೆಯನ್ನು ನಿರ್ಮಲಗೊಳಿಸಿದರೆ ಹರಿಜನೋದ್ಧಾರಕ್ಕೂ ಅನುಕೂಲವಾಗುವದು. ಕಟ್ಟಕಡೆಗೆ ನಾನು ವಿದೇಶಗಳಲ್ಲಿರುವ ಮಿತ್ರರು ಗೆಳೆಯರು ಈ ತಪಶ್ಚರ್ಯದ ಅತೀವ ಗದ್ದಲವನ್ನೇ ಮಾಡಬಾರದಾಗಿ ಪ್ರಾರ್ಥಿಸುತ್ತೇನೆ."

*

ಕೌನ್ಸಿಲು ಪ್ರವೇಶವೇಕೆ? ಮಹಾತ್ಮರ ವಿಚಾರ

ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಜನಾವಣೆಯ ಜಾಹೀರನಾಮೆಯನ್ನು ಕೊಂಗ್ರೆಸ ಕಾರ್ಯಕಾರಿ ಮಂಡಲದ ಒಪ್ಪಿಗೆಯ ಬಗ್ಗೆ ಕೊಂಗ್ರೆಸ ಕಾರ್ಯಕಾರಿ ಮಂಡಳದಲ್ಲಿ ಪುರಸ್ಕರಿಸುವಾಗ ಮಹಾತ್ಮರು ನುಡಿದದ್ದೇನೆಂದರೆ — "ಪಾರ್ಲಿಮೆಂಟರಿ ಬೋರ್ಡಿನ ಸಂಬಂಧ ಜನತೆಯಲ್ಲಿ ಹುಟ್ಟಿಕೊಂಡ ಒಂದು ತಪ್ಪು ತಿಳುವಳಿಕೆಯನ್ನು ನಿರಾಕರಿಸುವದಗತ್ಯ. ಕೌನ್ಸಿಲುಗಳಲ್ಲಿ ಪ್ರವೇಶ ಮಾಡಿ, ಅವನ್ನು ಹಸ್ತಗತ ಮಾಡಬೇಕೆಂಬ ವಿಚಾರಸರಣಿಯು ಕೊಂಗ್ರೆಸ ಪಕ್ಷದಲ್ಲಿ ಪ್ರಬಲವಾಗಿ ಹೋಗಿಯದೆ. ಹಳೇ ಸ್ವರಾಜ್ಯ ಪಕ್ಷದವರಂತೆ ಕೌನ್ಸಿಲುಗಳಲ್ಲಿ ಕೇವಲ ವಿಧ್ವಂಸಕ ಕಾರ್ಯವನ್ನಷ್ಟೇ ಮಾಡುವದು ನಮ್ಮ ಪ್ರಸ್ತುತ ಧ್ಯೇಯವಲ್ಲ. ಕೌನ್ಸಿಲುಗಳ ಮೂಲಕ ಪ್ರಾತಿನಿಧಿಕತೆಯನ್ನು ದಿಕ್ಕರಿಸಬೇಕು, ಪ್ರಜಾಪ್ರತಿನಿಧಿಗಳ ಸಭೆಯನ್ನು ಕರೆಯಿಸಲು ಒತ್ತಾಯಪಡಿಸಬೇಕು, ದಬ್ಬಾಳಿಕೆಯ ಕಾನೂನುಗಳನ್ನು ರದ್ದು ಪಡಿಸಬೇಕು ಮತ್ತು ಸಾಧ್ಯವಿದ್ದಷ್ಟರ ಮಟ್ಟಿಗೆ ರಾಷ್ಟ್ರೀಯ ಸಭೆಯ ಸಂಘಟನದ ಕಾರ್ಯಕ್ಕೂ ರಾಷ್ಟ್ರಹಿತದ ಇತರ ಕಾರ್ಯಗಳಿಗೂ ನೆರವಾಗಬೇಕೆಂಬುದೇ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉದ್ದೇಶವಾಗಿರುತ್ತದೆ. ಹಳೇ ಸ್ವರಾಜ್ಯ-ಪಕ್ಷದವರು ಮಾಡಿದ ಕೆಲಸವು ಸ್ತುತ್ಯವೇ ಸರಿ. ಅವರ ಕೌನ್ಸಿಲುಗಳಲ್ಲಿ ಬಹಳ ಕೆಲಸ ಮಾಡಿರುತ್ತಾರೆ. ಸ್ವರ್ಗೀಯ ಪಂಡಿತ ಮೋತಿಲಾಲ ನೆಹರೂರವರು ಮಾಡಿದ ಪ್ರತಿಯೊಂದು ನಡೆವಳಿಕೆಯು ರಾಷ್ಟ್ರೀಯ ಹಿತ ಸಾಧನೆಯ ... ಮಾಡುವಂಥದಿದ್ದು. ಆ ಬಗ್ಗೆ ರಾಷ್ಟ್ರವು ಎಂದಿಗೂ ನಾಚಿಕೆಪಡುವ ಕಾರಣವಿಲ್ಲ. ರಾಷ್ಟ್ರೀಯ ಸಭೆಯವರು ಕೌನ್ಸಿಲುಗಳಲ್ಲಿ ಬಹುಸಂಖ್ಯಾತರಾಗುವ ಸಂಭವವಿರುತ್ತದಲ್ಲವೇ, ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಆ ಬಗ್ಗೆ ಚಿಂತಿಸುವ ಮಹತ್ವವಿಲ್ಲ. ಅಲ್ಪಸಂಖ್ಯಾಕರಾದಾಗ್ಯೂ ಪಾಸಾಗಿಸಿ ಕೊಡುವ ಜನರ ಹಿಂಬಲವೇ ಅವರ ಕಾರ್ಯದ ಪ್ರತಿಷ್ಠೆಯು ಅವಲಂಬಿಸಿರುವದು. ಶ್ರೀ ಸತ್ಯಮೂರ್ತಿಗಳ ಉದಾಹರಣೆಯನ್ನೇ ತಕ್ಕೊಳ್ಳಿರಿ. ಅವರು ಒಬ್ಬೊಂಟಿಗರೇ ಕೌನ್ಸಿಲಿಗೆ ಹೋದಾಗ್ಯೂ ಕೌನ್ಸಿಲಿನಲ್ಲಿ ಅವರು ಮಹತ್ವದ ಕಾರ್ಯ ಮಾಡಿ ತೋರಿಸಬಲ್ಲರು. ಅಧಿಕಾರಿಗಳೂ ರಾಷ್ಟ್ರೀಯ ಸಭೆಯ ಹಿಂದಿನ ಅನುಭವದಿಂದ ಜಾಣರಾಗಿದ್ದಾರೆ. ರಾಷ್ಟ್ರೀಯ ಸಭೆಯ ಪ್ರತಿನಿಧಿಗಳು ಕೌನ್ಸಿಲುಗಳಲ್ಲಿ ಇರಲು ಪ್ರತಿ ಸತ್ಯಾಗ್ರಹ ಸಮರದ ಬಿಕ್ಕಟ್ಟು ಘಟಿಸಿದ ಅನೇಕ ಸಂಗತಿಗಳು ಘಟಿಸುತ್ತಿದ್ದಿಲ್ಲ. ರಾಷ್ಟ್ರೀಯ ಸಭೆಯವರಿಗೆ, ಕಾರಣ ಮುಂದಿನವರಾಗಲಿ "ದಾರಿಗಳ್ಳರು" ಎಂದು ಆಜ್ಞೆ ಹೊರಡಿಸಿದ ಕೂಡಲೇ ನಮ್ಮ ಪ್ರತಿನಿಧಿಗಳು ಹೊರಬಿದ್ದು ಬರುವರೆಂದು ನನಗೆ ನಂಬಿಕೆಯಿದೆ. ಆದರೆ ನಮ್ಮ ಬಲವತ್ತರದ ಕಾರಣವಿಲ್ಲದೆ ಹೊರಬಿದ್ದು ಬರಲಿಕ್ಕೆ ಕೌನ್ಸಿಲುಗಳಲ್ಲಿ ಹೋದವರ ಸ್ವಂತ ಒಪ್ಪಿಗೆಯಿಲ್ಲದೆ, ಅವರಿಗೆ ಹೊರಬೀಳುವದು ಯುಕ್ತವಾಗದು. ಪುನಃ ನಾವು ಸತ್ಯಾಗ್ರಹ ಸಮರವನ್ನು ಹೂಡುವ ಪ್ರಸಂಗ ಬಂದರೂ ನಾವು ನಮ್ಮ ಪ್ರತಿನಿಧಿಗಳನ್ನು ಹೊರಗೆ ಕರೆಯಕೂಡದು. ನಾವು ಬಂದು ಕೆಲ ಜನರು ಸತ್ಯಾಗ್ರಹದಲ್ಲಿ ಹೋದಾಗ, ಕೌನ್ಸಿಲು ಕೆಲಸಕ್ಕೆ ಒಂದು ಬಾಧೆ ಬರದಷ್ಟಾದರೂ ನಾವು ಬಿಟ್ಟುಬಿಡಬಹುದಲ್ಲವೇ? ಪ್ರತ್ಯಕ್ಷಕ್ಕೆ ಸರಕಾರವು ಒಂದರ ಹಿಂದೊಂದು ವಿಧವು ಕಟ್ಟಳೆಗಳನ್ನು ಮಾಡಹತ್ತಿದೆ. ಮೊನ್ನೆಯ ಬಂಗಾಲ ಕ್ರಿಮಿನಲ್ ಲಾ ಎಮೆಂಡಮೆಂಟ ಬಿಲ್ಲೇ ಸಾಕ್ಷಿಯು. ಮದ್ರಾಸ ಕೌನ್ಸಿಲುಗಳೊಳಗಿನ ಲೋಕಪ್ರತಿನಿಧಿಗಳ ಬೆಂಬಲದಿಂದಲೇ ತಾವು ಈ ಕಾಯಿದೆ ಮಾಡುತ್ತೇವಾಗಿ ಅಧಿಕಾರಿಗಳು ಜಗತ್ತಿಗೆ ಸಾರುತ್ತಿರುವರು. ರಾಷ್ಟ್ರೀಯ ಸಭೆಯವರು ಸರಕಾರಕ್ಕೆ ಇನ್ನು ಇಂಥ ಸಾಕು ನಡಿಸಗೊಡರು. ಈ ಜಾಹೀರನಾಮೆಯು ಪಾರ್ಲಿಮೆಂಟರಿ ಬೋರ್ಡಿನ ಪರವಾಗಿ ಪ್ರಕಟವಾಗುವದು. ಕಾಲಕಾಲಕ್ಕೆ ರಾಷ್ಟ್ರೀಯ ಸಭೆಯ ಮಹಾ ಸಭೆ ಕೂಡುವ ಧೋರಣವನ್ನೇ ಅವಲಂಬಿಸಿ, ಬೋರ್ಡಿನವರು ರಾಷ್ಟ್ರೀಯ ಸಭೆಯ ಅಂಕೆಯಲ್ಲೇ ಇರುವರು.'

ಮೀನುಕಣ್ಣಿಗೆ (Corn) ಮದ್ದು

ಹತ್ತಾಣೆ ಪಿಲ್ಲಿ ಸ್ಟಾಂಪು ಕಳಿಸಿದರೆ ವ ಸುತ್ತೇವೆ. ಪ್ಲಿ. ೭ ಯಿಂದ ಖರ್ಚ ಹೆಚ್ಚು.

ತಲಬಾಗ ಗಂಗಾಧರ ಎಂಡ್ ಸನ್ಸ್, ಕುಮಟಾ, (ಕಾರವಾರ)

Siromani Udipi Narayanacharya

CHAUKHAMBA BENARES CITY

SUN & CO BENARES CITY

ಮಹೇಶ್ವರೀ, ರುದ್ರಾಕ್ಷಿ ... ಸ್ವನಾದ ... ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದೆ. ಸ್ವಚ್ಛವಾಗುತ್ತ ಜಗತ್ತ ಪ್ರಿಯ ಕಟ್ಟಿದ ಕಂಠಿ ಸರ 32 ಪರಿ 1ಕ್ಕೆ ರೂ 0 8 0 ಯಿಂದ ರೂ. 100 ವರೆಗೆ ಗೌರಿಶಂಕರ 1ಕ್ಕೆ ರೂ 3 8 0 ಯಿಂದ 35ರ ವರೆಗೆ ಮತ್ತು ದೇವ ಪಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0 ಸ್ಟಾಂಪು ಕಳಿಸಿದರೆ, 1 ನಕ್ಷೆ 1 ವಿಶ್ವೇಶ್ವರನ ಫೋಟೋ ವನ್ನು ಕಳಿಸಲಾಗುವದು ಹಾಗು ... ತಿಳಿದುಕೊಳ್ಳಿ.

ಶಿರೋಮಣಿ ನಾರಾಯಣಾಚಾರ್ಯ

ಚೌಕಂಬಾ, ಕಾಶೀ ಕ್ಷೇತ್ರ

ಸತ್ಯಾಗ್ರಹದಲ್ಲಿ ನಮ್ಮ ಜಿಲ್ಲೆಯೊಳಗೆ ಕಷ್ಟ-ನಷ್ಟಪಟ್ಟ ವರದಿ.

ಒಂದು ಲಕ್ಷ ರೂಪಾಯಿ ಬೇಕು.

ರೈತರ ಕಷ್ಟನಿವಾರಕ ಮಂಡಳಿಯ ವರದಿ.

[ಕರ್ನಾಟಕ ವಾರ್ತಾನಿಲಯ, ಧಾರವಾಡ]

[illegible]

ಕರನಿರಾಕರಣ ಸತ್ಯಾಗ್ರಹ [illegible] ನಡೆದ [illegible] ಬಡತನದಲ್ಲಿ ಬಿದ್ದಿರುವ [illegible] ರೈತರ ಗೋಳನ್ನು [illegible] ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು [illegible] ರೈತರ ಕಷ್ಟ ನಿವಾರಕ [illegible] ಶ್ರೀ [illegible] ಹುಬ್ಬಳ್ಳಿ [illegible] ಹೊಸಪೇಟೆ, [illegible] ಎಸ್. ಆರ್. [illegible] ಗಿರಿಯವರು ಆರಿಸಿದರು.

ಈ ಸಮಿತಿಯು ಶ್ರೀ [illegible] ಹುಬ್ಬಳ್ಳಿ, ಶ್ರೀ [illegible] ಶ್ರೀ ಎಸ್. [illegible] ಮೊದಲಾದ ಈ ಜನರು [illegible] ಅಂಕೋಲಾ [illegible] ಜಿಲ್ಲೆಯ [illegible] ದ ರೈತರ ಹತ್ತಿರ ಈಗಿರುವ ದಾಖಲೆಗಳನ್ನು [illegible] ಮುಂತಾದ [illegible] ತಂದಿರುವರು. ಸರಕಾರವು ಜಪ್ತಿಮಾಡಿದ ಹೊಲಗಳನ್ನು [illegible] ಈ ಸಮಸ್ಯೆಯ ವಿಷಯದಲ್ಲಿ ಆಗಸ್ಟ ೨೯ನೇ ತಾರೀಖಿನ ದಿನ ಕೂಡಿದ ಕಷ್ಟನಿವಾರಕ ಸಮಿತಿಯ ಸಭೆಯಲ್ಲಿ ತಮ್ಮ ವರದಿಯನ್ನು ಸಾದರಪಡಿಸಿದರು. ಈ ಸಮಿತಿಯವರು ಅದನ್ನು ಲಕ್ಷ್ಯಪೂರ್ವಕವಾಗಿ ವಿಚಾರ ಮಾಡಿ ಕೆಳಗಿನಂತೆ ಪ್ರಕಟಣೆಯನ್ನೂ ವಿನ್ನಹವನ್ನೂ ಪ್ರಕಟಿಸಿರುವರು —

'ಅಂಕೋಲಾ ಸಿದ್ದಾಪುರ ತಾಲೂಕುಗಳ ಸಂಕಟಗ್ರಸ್ತ ರೈತರ ವಿಷಯವಾಗಿ ಜುಲೈ [illegible] ನೆಯ ತಾರೀಖಿನ ದಿವಸ ಒಂದು ಪ್ರಕಟನೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದೆವು. ಅಲ್ಲಿಯ ಸರ್ವಸಾಧಾರಣ ಸ್ಥಿತಿಯನ್ನು ಗೊತ್ತುಮಾಡಿಕೊಡುವುದು ಅಲ್ಲಿಗೆ ಹೋಗಿ ಪ್ರತ್ಯಕ್ಷವಾಗಿ ನೋಡಿಕೊಂಡು ವಿಚಾರಿಸಿದ ಬಳಿಕ ಅಲ್ಲಿಯ ರೈತರ ಗೋಳಾಟವು ಇನ್ನೂ ಹೃದಯದ್ರಾವಕ ವಿರುತ್ತದೆಂದೂ ಅದರ ವ್ಯಾಪ್ತಿಯು ಒಹಳ ವಿಶಾಲವಾಗಿರುವದೆಂದೂ ಸಮಿತಿಯವರಿಗೆ ಕಂಡುಬಂದಿತು. ಆ ವಿಷಯದಲ್ಲಿ ಹೆಚ್ಚಿನ ಸಂಗತಿಗಳನ್ನು ಪ್ರಕಟಿಸುವದು ಈಗ ಸಾಧ್ಯವಾಗಿದೆ —

ಅಂಕೋಲಾ: ಸಾಮಾನ್ಯ ವರ್ಣನೆ

ಅಂಕೋಲಾ ತಾಲೂಕು ಕಾರವಾರ ಜಿಲ್ಲೆಯೊಳಗಿನ ಸಮುದ್ರ [illegible] ಇಲ್ಲಿ ಮಾಡಲು [illegible] ಈಗ ೨೦ ವರ್ಷಗಳಿಂದ [illegible] ನ್ಯಾಯಮಾಗಿ [illegible] ಇವೆ ಸುಮಾರು [illegible] ನಾಗರಿಕರು ತಮ್ಮ [illegible] ಮಾಡಿಕೊಳ್ಳುವ ರೈತರ [illegible] ಕರನಿರಾಕರಣ ಸತ್ಯಾಗ್ರಹದಲ್ಲಿ [illegible] ಪಟ್ಟಿಕೆಯ ನಾಡವರಿಗೆ ಒಕ್ಕಲಿಗರು [illegible] ಹೊರತು ಬೇರೆ ಉದ್ಯೋಗ [illegible] ಕಟ್ಟಿಕೊಳ್ಳಲಿಕ್ಕೆ ಬೇರೆ ಸಾಧನಗಳಿಲ್ಲ [illegible] ದವಳ್ಳಿಯಾಗಲಿ ಯಾವ [illegible] ಗಾತ್ರವು ಇಷ್ಟರಿಂದ ಅವರು ತಮ್ಮ [illegible] ಭೂಮಿಯ [illegible] ಜಿಲ್ಲೆಗಳನ್ನು ಕಮಗ [illegible] ಸಂಗ್ರಹಿಸಿಕೊಂಡು ಹೆಚ್ಚಿನವನ್ನು [illegible] ಮಾಡು [illegible]

[illegible] ಯ ಕರನಿರಾಕರಣೆಯ ಒಂದೊಂದು ಸುಮಾರು ೮೦೦ ರೈತರು ಭಾಗ ತೆಗೆದುಕೊಂಡರು. [illegible] ಒಪ್ಪಂದವಾದುದರಿಂದ ಹೋರಾಟವು [illegible] ನ್ಯಾಯ ದೊರೆಯಲಿಲ್ಲ [illegible] ದಲ್ಲಿ ೬೦ ಕ್ಕಿಂತಲೂ ಹೆಚ್ಚು ರೈತರು ಕರನಿರಾಕರಣ ಚಳವಳಿಯಲ್ಲಿ ಭಾಗ ತೆಗೆದುಕೊಂಡರು. ಜಂಗಮ ಮಾಲಿನ ಜಪ್ತಿಯಲ್ಲಿ ದನಕರುಗಳೂ ಉಳಿಯಲಿಲ್ಲ. ಭೂಮಿಗಳು ಸರಕಾರಜಮಾ ಆದವು, ಮಾರಲ್ಪಟ್ಟವು. ಕೆಲಿಗೆ ತೆರಬೇಕಾಗಿದ್ದ ಹೊಲಗಳಲ್ಲಿ ಕಟ್ಟಿದ ಮನೆಗಳೂ ಮಾರಾಟವಾದವು. ಸುಮಾರು ೧೧೦ ಜಪ್ತಿಗಳಾದವು. ಒಪ್ಪಾಸ್ತಿಗಳ ಒಟ್ಟು ಬೆಲೆ ರೂ ೩೨೦೦೦. ಸರಕಾರ ಜಮಾ ಆದ ಹಾಗು ಮಾರಲ್ಪಟ್ಟ ಭೂಮಿ ೫೦೦ ಎಕರೆಗೆ ಮಿಕ್ಕಿದೆ. ಈಗಿನ ಇಳಿತಾಯ ಧಾರಣೆಯಂತೆಯಾದರೂ ಅದರ ಬೆಲೆ ೬೩೩೩೬೦೦೦ ರೂಪಾಯಿಯಾಗುವದು ೫೫೩೦೦೦ ರೂಪಾಯಿ ಬೆಲೆ ಬಾಳುವ ೯೦ ಮನೆಗಳು ಸರಕಾರ ಜಮಾ ಮಾಡಲಾಗಿವೆ.

ಕಳೆದ ಮೂರು ವರ್ಷಗಳು.

ಕಳೆದ ಮೂರು ವರ್ಷಗಳಲ್ಲಿ (೧೯೩೦-೩೧-೩೨ ಇಸ್ವಿ) ಈ ರೈತರು ಮೆಲ್ಲ ಮೆಲ್ಲನೆ ದಾರಿದ್ರ್ಯದ ಪರಮಾವಧಿಗಿಳಿದರು. ಒವರಲ್ಲಿ ಸಂಗ್ರಹವೇನೂ ಇಲ್ಲದ್ದರೂ ಉದ್ಯೋಗ ಬಂಧಮುಕ್ತರಿಂದ ತಮ್ಮ ಕೊರತೆಗಳನ್ನು ನೀಗಿಸಿಕೊಳ್ಳುತ್ತಿದ್ದರು. ಅವರ ಭೂಮಿಗಳು ೧೯೩೨ರ ಮಧ್ಯಕಾಲದಲ್ಲಿ ಸರಕಾರಜಮಾ ಮಾಡಲ್ಪಟ್ಟ ಬಳಿಕ ಅವುಗಳನ್ನು ಬಿತ್ತಗೊಡಲಿಲ್ಲ. ಇವರಲ್ಲಿದ್ದ ಆಸ್ತಿಯ ಅಲ್ಪಸ್ವಲ್ಪ ಸಂಗ್ರಹದಿಂದಲೇ ಒವರು ಬಾಳ್ವೆ ನಡಿಸಿದರು. ೧೯೩೩ರಲ್ಲಿ ಒವರು ಕೆಲವರು ಇಷ್ಟ ಬಿದ್ದವನ್ನು ಒಡವೆಗಳನ್ನು ಒತ್ತೆಯಿಟ್ಟು, ಕೆಲವರು ಮಾರಿ ಜೀವಿಸಿದರು. ಒಡೆಷ್ಟು ದಿನ ಸಾಗೀತು? ೧೯೩೩ರ ಆರಂಭದಲ್ಲಿ ಸಾಹುಕಾರರು ಕಟ್ಟುನಿಟ್ಟು ಮಾಡಿದವರು ಒದುಕಿ ಎ ಬೇಡವಕ್ಕೆ ಒಕ್ಕಿಯ ಪಾತವನ್ನು (ಅಕ್ಕಿ ರೂಪದಲ್ಲಿಯೇ ಬಡಿ ಸಹಿತವಾಗಿ ತರಬೇಕೆಂಬ ಕರಾರಿನ ಅಕ್ಕಿಯ ಸಾಲ) ತೆಗೆದುಕೊಳ್ಳಬೇಕಾಯಿತು. ಇವಲ್ಲ ಪ್ರಸಂಗಗಳಲ್ಲಿ ಅವರಿಗೆ ಒಂದಿಷ್ಟು ಸಹಾಯವು ದೊರೆಯಿತಾದರೂ ಅದು ಅತ್ಯಲ್ಪವಾದುದರಿಂದ ಕಷ್ಟ ತೃಪ್ತಿಕರವಾಗಲಿಲ್ಲ. ಮೊದಲಿನ ಜೂನ ತಿಂಗಳಲ್ಲಿ ಅವರಲ್ಲಿ ಕೆಲವರು ಹೊಸ ಭೂಮಿಗಳನ್ನು ಗೇಣು ಮಾಡಿದರು.

ಚಳವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ರೈತರಿಗೆ ಅತ್ಯಂತ ತ್ರಾಸವಾದುದು ಸ್ವಾಭಾವಿಕವು. ಇಂಥ ರೈತರಿಗೆ ಕಂದ ಇದರಿಂದ ಪರರಾಗಿ ಬಾಳಿಯಲ್ಲ. ತಾಲೂಕಿನಲ್ಲಿ ಹೆಚ್ಚಿನ ಪೋಲೀಸರನ್ನು ನೇಮಿಸುವ್ದಕ್ಕಾಗಿ ೩೫೦೦೦ ರೂಪಾಯಿ ಪ್ಯುನಿಟಿವ್ ಟ್ಯಾಕ್ಸನ್ನು, ಸರಕಾರಜಮಾ ಆದ ಭೂಮಿಯಲ್ಲಿಯ ಪೈರು ನಾಶ ಮಾಡಿದರೆಂಬ ಆರೋಪಕ್ಕಾಗಿ ಹೇರಿದ ದಂಡವನ್ನೂ ಅವರು ತೆರಬೇಕಾಯಿತು.

ಸರಕಾರಜಮಾ ಆದ ಹೊಲಮನೆಗಳು

ಕರನಿರಾಕರಣೆ ಮಾಡಿದ ೪೦೦ ರೈತರಲ್ಲಿ ೨೫೦ ಜನರ ಕಂದಾಯವನ್ನು ಒವರ ಜಂಗಮಾಸ್ತಿಯ ಜಪ್ತಿಯಿಂದ ವಸೂಲ ಮಾಡಿದರು. ಇವರಲ್ಲಿ ಕೆಲ ತೊಂದರೆಯು ಬಹಳವಾಗಿದ್ದು ಸ್ವಲ್ಪ ಮಟ್ಟಿಗೆ ಒವರ [illegible] ಸಹಾಯ ಮಾಡಬೇಕಾಗಿದೆ. ಎಲ್ಲವನ್ನೂ ಕಳಕೊಂಡ ರೈತರ ಸಂಖ್ಯೆ ೧೫೦. ಅದರಲ್ಲಿ ೪೧ ಜನರು ಮನೆಗಳನ್ನೂ ಕಳೆದುಕೊಂಡಿರುವರು. ಅವರಲ್ಲಿ ಕೆಲವರು ಈಗ ತಮ್ಮ ಮನೆಗಳನ್ನು ಕೊಂಡವರ ಒಪ್ಪಿಗೆಯಿಂದ ತಮ್ಮ ಹಳೆ ಮನೆಗಳಲ್ಲಿಯೇ ಮಳೆಗಾಲದ ಆರಂಭದಿಂದ ಇರತೊಡಗಿದ್ದಾರೆ. ಉಳಿದವರ ಗ್ರಾಮದ ಒಕ್ಕಲಿಗರಿಗೆ ಹೊಲಮನೆಗಳಿಲ್ಲವು. ಇದ್ದವು ಅವೆಲ್ಲ ಸರಕಾರಜಮಾ ಆಗಿ ಮಾರಲ್ಪಟ್ಟದ್ದರಿಂದ ಅವರೀಗ ನಿರಾಶ್ರಿತರಾಗಿರುತ್ತಾರೆ. ಧೋ ಮಳೆ ಎಂದು ಸುರಿಯುತ್ತಿರುವ ಮಳೆಯಲ್ಲಿ ತೆಂಗಿನ ಗರಿ [illegible] ಆದವು ಗುಡಿಸಲುಗಳಲ್ಲಿ ಒಬ್ಬರನ್ನ ಆರು ಏಸು ತಿಂಗಳ ಕಾಲ ಕಳೆಯಬೇಕಾಗಿದೆ. ವಾಸ್ತವಿಕ ಬಗ್ಗೆ ವಿಚಾರ ಮಾಡಿದರೆ ಇವರ ಕೆಲವು ರೈತರ [illegible] ಟವೂ ಇಷ್ಟೇ ಅನುಕಂಪನೀಯವಾಗಿದೆ. ಒವರ ಸ್ಥಿತಿಯು ಈ ವರ್ಷದ ಸುಗ್ಗಿಯ ತರುವಾಯದಲ್ಲಿಯೂ ಸುಧಾರಿಸಬಹುದು. ಒದರ [illegible] ಒವರು ಬರುವ ಸುಗ್ಗಿ ವರ್ಷದವರೆಗೂ ಸಾಗಬೇಕಾಗಲಿ ಇದು ಅಲ್ಲಿಯ ರೈತರು ಮುಂದೆ ಸಾಧಿಸಬೇಕೆಂಬುದನ್ನು [illegible] ಆರ್ಥಿಕ ಪರಿಸ್ಥಿತಿಯ ಮೂಲಕ [illegible] ಯಲ್ಲಿದ್ದರೆ ಅವರು ತಮಗೊದಗಿದ ಎಲ್ಲ ಸಂಕಟಗಳನ್ನು ಸಂತೋಷದಿಂದ ಸಹಿಸಿದರೆ [illegible] ಆದರೆ ಈ ವರ್ಷವು

೮೦೦ ಮಂದಿ ಸತ್ಯಾಗ್ರಹಿಗಳು: ಕಳಕೊಂಡ ಭೂಮಿ ೨೦೦೦ ಎಕರೆ.

ಇವರ ಕಟ್ಟುವರಲ್ಲಿಯೂ ಕಟ್ಟುವಾಗಿದ್ದ ಮೂಪ್ಪ ಇಲ್ಲದ ವರ ಕರುಗಳು ಸತ್ತವು. ಈಗ ಬಿತ್ತಿರುವ ಬೆಳೆಯು ಕೈಗೆ ಬರುವ ವರೆಗೆ ಹೋರಾಡುವವರು ಒದಗಿಸುವ ಸಹಾಯದ ಹೊರತು ಅವರ ಉಪಜೀವನಕ್ಕೆ ಬೇರೊಂದು ಮಾರ್ಗವಿರುವದಿಲ್ಲ.

ತೀರ ಕಷ್ಟಕ್ಕೊಳಗಾದ ಹಳ್ಳಿಗಳು

ಈ ತಾಲೂಕಿನಲ್ಲಿ ಎಲ್ಲಕ್ಕೂ ಹೆಚ್ಚು ಕಷ್ಟಕ್ಕೆ ಗುರಿಯಾದ ಹಳ್ಳಿ ಉಂಬಳವು. ಈ ಊರಿನ ಜಂಗಮಾಸ್ತಿಯ ಹಾನಿ ವಿಶೇಷವಾಗಿದೆ. ಇಲ್ಲಿಯ ಭತ್ತದ ಗದ್ದೆಗಳು ತಾಲೂಕಿನಲ್ಲಿಯೆ ಬೆಳೆಯುಳ್ಳ ಭೂಮಿಗಳಲ್ಲಿ ಎಣಿಸಲ್ಪಡುತ್ತವೆ. ಸ್ಥಾವರ ಆಸ್ತಿಯನ್ನು ಕಳಕೊಂಡ ಒಂಬತ್ತು ಮನೆತನಗಳು ೪೦ ಸಾವಿರ ರೂಪಾಯಿ ಬೆಲೆಬಾಳುವ ೫೦ ಎಕರೆ ಭೂಮಿಯನ್ನು ಕಳೆದುಕೊಂಡವು. ಇವರಿಗೀಗ ತಮ್ಮದೆಂಬ ತುಂಡು ನೆಲವೂ ಇಲ್ಲ. ಅವರನ್ನು ಮನೆಯಿಂದ ಹೊರಗೆ ಹಾಕಿದ್ದಾರೆಂಬುದು ಒಳ್ಳೇದೆ, ಅವರಿಗೆ ರಿಪೇರಿಗೆ ಕೂಡ ಅವರಿಗೆ ಅವಕಾಶ ಕೊಟ್ಟಿದ್ದಿಲ್ಲ. ಈ ಒಂಬತ್ತು ಮನೆಗಳೆಲ್ಲ ಹಾಳಾಗಿ ಹೋಗಿವೆ. ಹೊರಗೆ ಹಾಕಲ್ಪಟ್ಟ ಒಕ್ಕಲಿಗರು ತಂಗಿನ ಗರಿಯ ಗುಡಿಸಲುಗಳಲ್ಲಿ ವಸವಾಗಿದ್ದಾರೆ. ಈ ಹಳ್ಳಿಗರು ಬಿಡಾರಮಾಡುವರ ಹೊಲಗಳನ್ನು ಆಶ್ರಯಿಸಿ ಕರಿಣ ಜೀವಿಸುತ್ತಿದ್ದಾರೆ. ಈ ಹಳ್ಳಿಗರಿಗೆ ಒಬ್ಬರಲ್ಲಿ ಮೇಯಿಸಲು ಹೋದರೂ ಕೇಳುವವರಿಲ್ಲ.

ಇವರ ತರುವಾಯ ಗೋಳಿ ಸುವರ್ಣ. ಈ ತಾಲೂಕಿನ ಬರುವಂತ ಹಳ್ಳಿಗಳಲ್ಲಿ ಇದು ಗಣನೆಯಾಗುತ್ತಿತ್ತು. ಅಲ್ಲಿಯ ೧೯ ಕೈತೋಟಗಳ ೬೩ ರೈತರು ತಮ್ಮ ಆಸ್ತಿಯನ್ನು ಕಳೆದುಕೊಂಡಿದ್ದಾರೆ. ಇವರ ಮನೆಗಳು ಸಂಕರ ಜನಾತರುದರಿಂದ ಹಾಳಾದವು. ಅವರು ತಮ್ಮ ಮನೆಗಳನ್ನು ಬಿಟ್ಟು ಹೋಗಬೇಕಾಯಿತು. ಈಗ ಇವರ ಮನೆಗಳನ್ನು ಕೊಂಡವರು ಇವರನ್ನು ಒಳಹೊಗದಂತೆ ಕಟ್ಟು ಹಿಡಿದಿರುವರಿಲ್ಲ.

[illegible] ವರೆಗೆ ಇಲ್ಲಿ [illegible] ಬೆಲೆ ಬಾಳುವ ೧೬೬ ಎಕರೆ ಭೂಮಿ ಮತ್ತು [illegible] ಕೊಂಡಿದ್ದಾರೆ. ಈ ಹಳ್ಳಿಯ ಭೂಮಿಯ ಸಲುವಾಗಿ ಸಹದಿದ್ದ ಇವರ ಹೊರತು [illegible] ಕುಲವಾರರು ಕರನಿರಾಕರಣ ಚಳವಳಿಗೆ ಮಾಡಿದವರು. ಅವುಗಳಲ್ಲಿ ಹಿಚಕಡ ಕಣಗಿಲ ಇವುಗಳು ಮುಖ್ಯವಾಗಿವೆ.

ಅವರಲ್ಲಿ ಕಲವರು ಬಡ್ಡಿಯ ಕೂರತೆಯಲ್ಲಿದ್ದಾರೆ. ಹೊಟ್ಟೆಗಂತೂ ಅಕ್ಕಿ ಜೋಳ ಕೊಡುವ ದಯಾಳರೂ ಎಲ್ಲರಿಗೂ ಕೂಡುವದವರ್ಯ. ಆಶ್ಚರ್ಯದ ಹಿಂದೆ ಆರ್ಥಿಕ್ಯಂತ ಹೆಚ್ಚು ಜನರಿಗೆ ಊಟವು ಇನಗಳಿಲ್ಲ. ಬೆಳ್ಳಿಗಳು ಬೀಜಗಳಲ್ಲಿ ಇವರೆಲ್ಲರಿಗೂ ಒಕ್ಕಲುತನವು ಭಕ್ತಿಪ್ರೇ ಈಗಲೂ ಸ್ವಂತ ಪರಿಶ್ರಮದಿಂದ ಒಕ್ಕಲುತನ ಮಾಡಲು ಸಿದ್ಧರಿದ್ದಾರೆ. ಈಗ ಇವರಿಗೆ ಬೇಕಾದ ಸಹಾಯವೆಂದರೆ ಸಲುವ ಕರಾರುಗಳಿಂದ ಭೂಮಿಯು, ಒಕ್ಕಲುತನದ ಸಾಧನಗಳು ಈ ರೀತಿಯಾದವಲ್ಲಿ ಸಾರ್ವಜನಿಕ ಸಹಾಯವು ಅವಶ್ಯವಾಗಿದೆ.

ಸಿದ್ದಾಪುರ: ಸಾಮಾನ್ಯ ವರ್ಣನೆ

ಸಿರಸಿ-ಸಿದ್ದಾಪುರ ಯಲ್ಲಾಪುರ ತಾಲೂಕುಗಳು ಉತ್ತರ ಕನ್ನಡ ಜಿಲ್ಹೆಯ ಘಟ್ಟದಮೇಲಿನ ಅಲ್ಲಿಯ ಮುಖ್ಯ ಬೆಳೆಗಳು ಅಡಿಕೆ, ಯಾಲಕ್ಕಿ, ಮೆಣಸುಗಳು, ಒಂದಾನೊಂದು ಕಾಲಕ್ಕೆ ಅಭಿವೃದ್ಧಿಯಿಂದಿ ' ದಿನಂತಿ ಕೆಯನ್ನಿ ಮರೆಯುತ್ತಿದ್ದ ಈ ತಾಲೂಕುಗಳು ಈಗ ಬಹಳ ಕೆಟ್ಟ ಸ್ಥಿತಿಯಲ್ಲಿವೆ. ಇದರ ಕೆಲವು ಕಾರಣಗಳನ್ನು ಸರಕಾರಿ ಸರ್ವೆ ಆಫೀಸರರ ದ ಹಿ| ಹೊರಿನ್ನವು ವರ್ಷ ರಿಪೋರ್ಟಿನಲ್ಲಿ ಕೊಟ್ಟಿರುತ್ತಾರೆ. ಈ ಮೂರರ ತಾಲೂಕುಗಳು ೧೯೩೦ನೆಯ ಇಸವಿಯ ಕರನಿರಾಕರಣ ಚಳವಳಿಯಲ್ಲಿ ಭಾಗ ತೆಗೆದುಕೊಂಡವು. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚು ಕಷ್ಟ ಅನುಭವಿಸಿದಂತದ್ದು ಸಿದ್ದಾಪುರ ತಾಲೂಕು.

ಯಲ್ಲಾಪುರ ವರದಿಗಳಂತೆ ಸಿದ್ದಾಪುರವಾದರೂ ಅರಣ್ಯ ಪ್ರದೇಶ. ಇಲ್ಲಿ ಮಳೆಯು ಬಹಳ ಸುರಿಯುವದು. ಸಾಗುವಳಿ ಭೂಮಿ ೧೦೦ ಕ್ಕೆ ೧೭ ರಷ್ಟು ಮಾತ್ರ, ಉಳಿದದ್ದೆಲ್ಲ ಕಾಡು ಪ್ರಾಣಿಗಳ ವಾಸದ ಪಟ್ಟಣವಾಗಿದೆ. ಸಿದ್ದಾಪುರ ತಾಲೂಕಿನ ಜನವಸತಿಯು ಇಸ್ಸ್ ೧೯ ಇದು ಕಂದರಗಳಲ್ಲಿಯೂ ಗುಡ್ಡಗಳ ಮೇಲೆಯೂ ಕಟ್ಟಲ್ಪಟ್ಟ ೧೯೦ ಹಳ್ಳಿಗಳಲ್ಲಿ ಹಬ್ಬಿದೆ. ಒಟ್ಟು ಭೂಕಂದಾಯವು ೧,೬೦ ಲಕ್ಷ ರೂ. ಹಳ್ಳಿಗಳ ಜನವಸತಿಯು ಕೆಲ ಕೆಲ ಬಂದಿದ್ದ ಮೇಲೆ ಕೆಲವು ಮನೆತನದವರು ಗುಂಪಾಗಿ ಕೂಡಿಕೊಂಡಿರುವಂತೆ ಕಂಡುಬರುವದು. ಒಂದು ಉತ್ತಮವಾದ ಅಡಿಕೆಯ ತೋಟವನ್ನು ಬೆಳೆಸಬೇಕಾದರೆ ೧೦ ವರ್ಷ ಪರಿಶ್ರಮಪಡಬೇಕಾಗುವದು. ಇದ್ದಾಗ್ಯೂ ಕೆಲವು ವರ್ಷ ಅದರ ಕಡೆಗೆ ದುರ್ಲಕ್ಷ ಮಾಡಿದರೆ ಅದು ಕೂಡಲೇ ಕೆಟ್ಟುಹೋಗುವದು. ಇಡೀ ವರ್ಷ ಬಿಡಿಕೆಯು ತೋಟದಲ್ಲ ಬಿದಿಂದ್ಲೆಂದು ಬಗೆಯ ಮ೧೮ ಇದ್ದು ಇರುತ್ತದೆ. ಮುಖ್ಯ ರೋಗದ ಬೆಳೆಯಿಂದರೆ ಈ ಅಡಿಕೆಯದು. ಒಮ್ಮೆಲೇ ಬಿಡಿಕೆಯು ಬೆಲೆ ಇಳಿದದ್ದರಿಂದ ಬೇರೆ ಸಸ್ಯಗಳ ದು ಮಹತ್ವದಿಂದ ಬೆಳೆದು ಆಶ್ರಯ ಕಷ್ಟ ಸಹಿಸಬೇಕಾಯಿತು. ಅದೇ ಸಮಯದ ೧೯೩೦ ನೇ ರಲ್ಲಿ ಆರ್ಥಿಕ ಕರನಿರಾಕರಣ ಆಂದೋಲನದಲ್ಲಿ ಹೊಕ್ಕಂದ ಹೋಂದಿತು. ಅವರು ಸರ್ಕಾರ ದವರು ಸಿಟ್ಟಿ ಮಾಡಿದ್ದರು. ಆದು ಬಿಟ್ಟಿದರೆ ಸಾಕಷ್ಟು ಇರಲಿಲ್ಲ.

ಸ್ಥಾವರ-ಜಂಗಮ ಆಸ್ತಿಗಳಲ್ಲಾದ ಹಾನಿ

೧೯೩೦ ನೇ ಇಸವಿಯ ಕರನಿರಾಕರಣ ಚಳವಳಿಯಲ್ಲಿ ಈ ಹಳ್ಳಿಯಲ್ಲಿಯ ೬೦೦ ಜನರು ತಮ್ಮ ಸ್ಥಾವರ ಜಂಗಮ ಆಸ್ತಿಗಳನ್ನು ಕಳಕೊಂಡರು. ಅವರು ಒಟ್ಟು ಬೆಲೆ ೬,೨೦೦೦ ರೂಪಾಯಿಯಷ್ಟು ಮೌಲ್ಯ ಮಾಡಲಾಗಿದೆ. ನಾಲ್ಕು ಲಕ್ಷ ಬೆಲೆ ಬಾಳುವ ೧೯೦೦ ಎಕರೆ ಭೂಮಿಯು ಸರಕಾರ ಜಪ್ತಿ ಮಾಡಲ್ಪಟ್ಟಿದೆ. ಮನೆಯಲ್ಲಿಯ ಎಲ್ಲ ವಸ್ತುಗಳನ್ನು ಒಡೆದು ಶಿಕ್ಷೆ ವಿಧಿಸಿದ್ದರಿಂದ ಎಷ್ಟೋ ಮನೆತನಗಳಲ್ಲಿ ದುಡಿದು ತರುವವರೇ ಇಲ್ಲದಂತಾಯಿತು. ಇದಕ್ಕಾಗಿ ಕರ್ತೃತ್ವ ಮನೆ ಎಂಬ ಮನೆತನದ ಸ್ತ್ರೀಯನ್ನು ಉದಾಹರಿಸಬಹುದು. ಆ ಮನೆತನದ ನಾಲ್ವರು ಗಂಡಸರನ್ನೂ ಏಕಕಾಲಕ್ಕೆ ಹೆಂಗಸರನ್ನೂ ಬಿಡಿಯೊಯ್ದದ್ದರಿಂದ ಮನೆಯಲ್ಲಿ ಒಬ್ಬಳೇ ಹಣ್ಣುಮುದುಕಿ ಜಂಗಮ ವಸ್ತುಗಳನ್ನು ಜಪ್ತಿ ಮಾಡಿ ಭೂಕಂದಾಯವನ್ನು ವಸೂಲ ಮಾಡಿಕೊಂಡ ಬಳಿಕ, ೧೦೦ ಮನೆತನಗಳು ಬಿಟ್ಟ ಸ್ಥಾವರ ಆಸ್ತಿಗಳನ್ನು ಜಪ್ತು ಮಾಡಿ ಅದರಲ್ಲಿ ಬಹುಭಾಗ ಈಗ ಏರದನೆಯವರ ಪಾಲಾಗಿದ್ದಾರೆ. ಎಲ್ಲ ಹೊಲಗಳನ್ನೂ ಕೆಲವು ಪ್ರಸಂಗಗಳಲ್ಲಿ ಮನೆಗಳನ್ನು ಕಳೆದುಕೊಂಡ ಬ್ರಾಹ್ಮಣರಿಗೆ ಹೋದ ವರ್ಷಗಳ ಒದೆಳಕಸ ದಾಯಕರಾದವು. ೧೯೩೩ ನೆಯ ಇಸವಿಯ ಜನೆಯನ್ನು ಸರಕಾರದವರು ಜಪ್ತಮಾಡಿದರು. ಪತ್ನಿ ಕೈಕರು ತಮಗೆ ಒಂದೇ ಒಂದಾದ ಹಾಗೂ ಯೂ ಸ ಧನವನ್ನು ಕಳೆದುಕೊಂಡರು. ಹೋದ ವರ್ಷದ-ಬಾ ಗವನ್ನು ಜವಸದ ಕಲಿಗಾಗವನ್ನು ಜನರು ತಮ್ಮ ಜಂಗಮ ಆಸ್ತಿಯನ್ನು ಮಾರಿ ಕೊಟ್ಟರು. ಹಿಡಿಯವರು ಕೈಗಡದಿಂದ ಸಾಲ ತಂದರು. ಈ ಮನೆ ತನಗಳಿಗೆ ಸಹಾಯವನ್ನೊಂದಿಷ್ಟು ಒದಗಿಸಿದರೂ ಅದು ಅತ್ಯಲ್ಪವಾಗಿದ್ದಿತು. ಅನಾಹುತದ ಕಷ್ಟದಲ್ಲಿ ದಿನಗಳನ್ನವರು ಸಾಗಿಸಿದರು. ಸರಕಾರದ ಕರದ ಅಂದಿನಿಂದ ಒದಗಿದ ಆರ್ಥಿಕ ಪರಿಸ್ಥಿತಿಯು ಮುಕ್ಕ ಮನೆಯಲ್ಲಿಯ ದುಡಿದು ತರುವ ಜನರ ಇಂದಿನ ಮನ್ನೋದು ಕಾರಣವಾಯಿತು. ೧೯೩೦ರಲ್ಲಿಯೇ ಎಷ್ಟೋ ಜನರ ಬೆಳೆಯು ನಿಷ್ಕರಿಗವಾಗಲ್ಪಟ್ಟಿತು.

(ಮುಂದುವರಿಯುವದು.)

ಮಹಾತ್ಮರ ಪ್ರಕೃತಿ!

ಉಪವಾಸ ಪೂರ್ತಿಕ್ಕಿಂತ ಮಹಾತ್ಮರ ನಾಡಿಯ ಎಡತ ಸುಧಾರಿಸಿದ ದಿನದ ರಾತ್ರಿ ಮಹಾತ್ಮರ ಪ್ರಕೃತಿ ಸಮಾಧಾನಕರವಿದ್ದ ಸುದ್ದಿಯಿದೆ. ನಾಡಿ ೭೭, ಉಷ್ಣತೆ ೯೮, ತೂಕ ೯೭ ಪೌಂಡು. ಆದರೆ ಪತ್ರಿಕೆಯಲ್ಲಿ ಮೂತ್ರದಲ್ಲಿ 'ಎಸೆಟೋನ' ಅಂಶದ ಪ್ರಮಾಣ ಹೆಚ್ಚು. ಯಾರೂ ಗಾಬರಿಯಾಗುವ ಕಾರಣವಿಲ್ಲ. ಮಹಾತ್ಮರು ಉಲ್ಲಸಿತರಿದ್ದಾರೆ. ಆಪ್ಯಾಯನ ಪ್ರತಿದಿನ ಸುಧಾರಿಸಬಹುದೆಂದು ಡಾಕ್ಟರರ ಅಭಿಪ್ರಾಯ.

ಜಾಹೀರ ವಿನಂತಿ.

ಶಿರಸಿ ಶ್ರೀ ಮಾರಿಕಾಂಬಾ ದೇವಸ್ಥಾನದ ವ್ಯಾಕ್ತೀ ವತಿಯಿಂದ ಇದರ ಮೂಲಕ ತಿಳಿಸುವದೇನಂದರೆ —

ಕಟ್ಟಿದ ಕಳಗಿನ ತಾಲೂಕಗಳ ಹಳ್ಳಿಗಳಲ್ಲಿ ಯಾರೂ ಬಟ್ಟ ಗೃಹಸ್ಥರು ತಾನು ಶಿರಸಿ ಶ್ರೀ ಮಾರಿಕಾಂಬಾ ದೇವಸ್ಥಾನದ ವತಿಯಿಂದ ಕಾಣಿಕೆ ವಗೈರೆ ವಸೂಲ ಮಾಡುವರೆಂದು ಹೇಳಿ ಅಜ್ಞಾತ ಜನರಿಂದ ಕಾಣಿಕೆ ವಗೈರೆ ಎತ್ತುತ್ತಾರೆಂತ ವರ್ತಮಾನ ಸಿಕ್ಕಿದ್ದರಿಂದ ನಾವು ಜಾಹೀರ ಮಾಡುವದೇನೆಂದರೆ — ಶ್ರೀ ದೇವಸ್ಥಾನದ ವತಿಯಿಂದ ಕಾಣಿಕೆ ವಗೈರೆ ವಸೂಲ ಮಾಡುವದಕ್ಕಾಗಲೀ, ಇತರೇ ಕಾರಣಕ್ಕಾಗಲೀ ಯಾರೊಬ್ಬನನ್ನೂ ಕಳಿಸಿದ್ದ ಇರುವದಿಲ್ಲ. ಹಾಗೆ ವಸೂಲ ಮಾಡುವವನ ವತ್ತೆ ಅವನ ಸುತ್ತು ಎನು ವಿಧ್ವಂಸ ಸಹಿತ ಹೇಳುವ ಹಾಗೆ ಇದ್ದರೆ ನಮಗೆ ಅವನ ವತ್ತೆ ವಗೈರೆ ತಿಳಿಸಿದ್ದಲ್ಲಿ ಆ ಬಗ್ಗೆ ನಾವು ತುಂಬಾ ಆಭಾರಿಯಾಗುವೆವು. ಮತ್ತು ಇನ್ನು ಮುಂದೆ ಯಾರಾದರೂ ವಸೂಲ ಮಾಡುವದು ಕಂಡು ಬಂದಲ್ಲಿ ಶ್ರೀ ದೇವಸ್ಥಾನದ ಮೊಹರು ಮತ್ತು ಮೋಕ್ತೇಸರರ ಸಹಿ ಇರುವ ಪಾವತಿ ಯಾರೊಬ್ಬರೂ ಇಲ್ಲದೆ ಏನೊಂದು ಕೊಡಬಾರದಾಗಿ ವಿನಂತಿ ಇದೆ.

ಶಿರಸಿ, ತಾ. ೧೧-೮-೩೪. ತಮ್ಮ ವಿಧೇಯ

ರಾಮಕೃಷ್ಣರಾವ ವೆಂಕಟ್ರಾವ ಭಾಕಪ್ಪನವರ

ಮೋಕ್ತೇಸರರು, ಶ್ರೀ ಮಾ. ದೇವ, ಶಿರಸಿ.

ಸ್ಥಾನಿಕ ವೃತ್ತಾಂತ.

ಕುಮಟೆ— [illegible]

[illegible]

ಹೊನ್ನಾವರ— (ತಾ ೧೧–೮–೧೯೩೪) [illegible]

[illegible]

ಒಂದು ದಿವಸ, ಮತ್ತೊಂದು ಸರ್ವಿಸಿನವರು ಮುಂದಿನ [illegible]

[illegible]

ಭಟಕಳ— (ತಾ. ೧೦ ೮-೩೪) ಇಂದು ಇಲ್ಲಿಯ ನಾಗಜಾತ್ರೆ ಉತ್ಸವ ಪ್ರತಿವರ್ಷಕ್ಕಿಂತ ಸಂಭ್ರಮದಿಂದ ಜರುಗಿತು. ನಾಗಜಾತ್ರೆಯಲ್ಲಿ ಪ್ರಾಣಿಹಿಂಸೆಯಾಗದಂತೆ ಸದರ ದೇವಸ್ಥಾನದವರಿಗೆ ಮುಲ್ಕಿಯಿಂದ ಶ್ರೀ ಜೋಶಿಯವರು ಬಂದು ಕೀರ್ತನ-ವ್ಯಾಖ್ಯಾನಗಳನ್ನು ಕೊಟ್ಟು ಧರ್ಮ ಪ್ರವೃತ್ತಿಗೆ ವಿರೋಧವಾದ ಪೈಶಾಚಿಕ ಕೃತ್ಯಗಳನ್ನು ನಿಲ್ಲಿಸಲು ಬೋಧಿಸಿದರು. ತಾ. ೩ನೇ ಮಂಗಳವಾರ ರಾತ್ರಿ ಶ್ರೀ ದೇವಿಯು ಆವೇಶ ಬಂದಾಗ ಪ್ರಾಣಿಬಲಿ ಕೊಡಬಾರದೆಂದು ಭಟ್ಟರಿಗೆ ಶ್ರೀ ದೇವಿ ಕಟ್ಟಪ್ಪಣೆ ಮಾಡಿತು. ಅದರಿಂದ ವಾರ್ಷಿಕೋತ್ಸವ ಪ್ರತಿವರ್ಷವು ನಾಗರಿಗೆ ಕರುವ ಹರಕೆಯ ಹಾಗೆ ಯಾರೂ ಪ್ರಾಣಿಬಲಿ ಕೊಡಲಿಲ್ಲ, ಹಾಗೆಯೇ ದಿನ ಪೂ ಪ್ರಾಣಿಬಲಿಯಾಗಲಿಲ್ಲ. ಗುರುವಾರ ಮಾತ್ರ ಅನವಶ್ಯಕವಾಗಿ ಹಿಂಸೆಯಾಗ ಬಾರದೆಂದು ದೇವರ ಸಂಘದವರು ಮಾಡಿದ ಸದ್ಬೋಧೆಯಿಂದ ಜನರು ಸ್ವ-ಹಿ-ತೋಳಗಳ ಬಲಿದಾನ ಮಾಡದೆ ತಿರುಗಿ ಕೊಂಡೊಯ್ದರು. ಹಿಂಸಾಪ್ರಿಯರಿಗೆ ಇದರಿಂದ ಸಮಾಧಾನವಾಗದೆ ಅವರು ಪ್ರಾಣಿಬಲಿ ಕೊಡಲಿಕ್ಕೆ ದುರುಪದೇಶ ಮಾಡಿದರು. ಅವರ ಉಪದೇಶಕ್ಕೆ ಬಲಿಬಿದ್ದು ಕೆಲವರು ಹಿಂಸೆ ಮಾಡಿದರು. ಮಾರಿಗುಡಿಯ ಮುಂದೆ ಕೋಳಿಗಳನ್ನು ೪-೫ ಬಿಟ್ಟು ಕೊಟ್ಟು ಬಂದು ಕಾರಿಗೆ ಬೂಡರು ಬಿಡ್ಡದಲ್ಲಿಯೇ ದರವನ್ನು ಚೆಲ್ಲಿಕೊಟ್ಟದ್ದನು ಕೆಲ ಬ್ರಾಹ್ಮಣ ಸ್ವಪ್ನ-ಪ್ರಿಯರು ಆ ವೇಳೆಗೆ ಶ್ರೀ ದೇವಿಗೆ ಧೂ-ಪುಷ್ಪಗಳನ್ನರ್ಪಿಸಿ ಸಂತತಿ-ಸಂಪತ್ತಿ ಬೇಡಿಕೊಳ್ಳುವ ನೋಟ ನೋಡಿ ತೀರ ಅಸಹ್ಯವೆನಿಸಿತು. ಕೆಲ ಹರಿಜನರು ಇವತ್ತು ಮುಂದಾದರು ಗ್ರಾಮ ದೇವಸ್ಥಾನದಲ್ಲಿ ಪ್ರವೇಶ ಕೊಡ ತ್ತಿದ್ದರೆ ನಾವು ಪ್ರಾಣಿರಕ್ಷಣೆ ಮಾಡುತ್ತೇವೆ, ಇಲ್ಲದಿದ್ದರೆ ಹಿಂಸೆ ಮಾಡುವದೇ ಸರಿ, ಎಂದು ಹೇಳಿ ಹರಿಜನ ಬೋರ್ಡಿನ ಸಭಾಸದರ ನೇತೃತ್ವದಲ್ಲಿ ಕಾರಿ-ಕೋಣಗಳಿಗೆ ನಿರ್ಧಾರವಾಗಿ ಬಲಿಕೊಟ್ಟರು. ಜೀವದಯಾ ಸಂಘದವರ ಇಂಥ ದರೋ ಹಾಗೆ ಬಲಿಕೊಡಬಾರದಾಗಿ ಸಂಗೊಳ್ಳಿ ಬೇಡಿಕೊಂಡಾಗ್ಯೂ ಕಿವಿಗೊಡಲಿಲ್ಲ. ತಾ. ೩ನೇಗೆ ಸೇರಿದ ಹರಿಜನ ಬೋರ್ಡಿನ ಸಭೆಯಲ್ಲಿ ಪ್ರಾಣಿಹಿಂಸೆ ಮಾಡಬಾರದೆಂದು ಠರಾವಾಗಿತ್ತು. ಅದೂ ಸಹ ಉಲ್ಲಂಘಿಸಲ್ಪಟ್ಟಿದೆ. ಜೀವ ದಯಾ ಸಂಘದ ಪರವಾಗಿ ಮುಲ್ಕಿಯಿಂದ ಶ್ರೀ ಕೇಶವ ಪ್ಪನವರೂ, ಕೀರ್ತನಕಾರರಿಂದ ಶ್ರೀ ಮೊಮ್ಮಕಾ ನಾಯ ರಾಜರೂ ಬಂದಿದ್ದರು. ಇವರ ಪರಿಶ್ರಮ ದಿಂದಲೇ ಈ ಬಾರಿಯ ನಾಗಜಾತ್ರೆಯಲ್ಲಿ ಮುಕ್ಕಾಲು ಪಾಲು ಪ್ರಾಣಿಬಲಿ ಕಡಿಮೆಯಾಯಿತು.

ಮೋಲೀಸರು ೫-೬ ಕಳವಿನ ಪತ್ತೆ ಮಾಡಿದ್ದಾರೆ. ಇನ್ನೂ ಬಂದೆರಡು ಕಳವುಗಳ ಪತ್ತೆಯಾಗುವದಿದೆ. ಫೌಜದಾರರು [illegible] ಕ್ರತೆಯಿಂದ ದುಡಿದಲ್ಲಿ ಇವೂ ಸಹ ಪತ್ತೆಯಾಗಬಹುದು.

ಇಲ್ಲಿಯ ಕೆಲ ಯುವಕರು ಹೊಸ ಉಪಕ್ರಮವನ್ನು ಮಾಡಲಾರಂಭಿಸಿದ್ದಾರೆ. ನಾಳೆ ರವಿವಾರದಿಂದ ಸ್ನಾನ ಮಾಡಕ್ಕೆ ಪ್ರಾರಂಭ. ಇಡೀ ಶ್ರಾವಣ ಮಾಸದಲ್ಲಿ ಶ್ರೀ ಹನುಮಂತ ದೇವಸ್ಥಾನದಲ್ಲಿ ೧ ಲಕ್ಷ ನಮಸ್ಕಾರ ನಮ ಸ್ಕಾರ ಮಾಡುವ ಸಂಕಲ್ಪ ಮಾಡಿದ್ದಾರೆ. ಇದರಲ್ಲಿಯೂ ನೆರವಾಗಬೇಕು.

ಶಿರಸಿ— ಕಾನಡಾ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿಗಳಾದ ರಾ। ವಿಠ್ಠಲ ಅನಂತ ಹೆಗ್ಗಡೆಯವರು ತಾ ೩-೮-೧೯೩೪ರಂದು ಬರೆದ ಪತ್ರವೇನೆಂದರೆ:– ಜಿಲ್ಲಾ ಹರಿಜನ ಸೇವಕ ಸಂಘ ಸ್ಥಾಪಿಸುವದಕ್ಕಾಗಿ ಏಪ್ರಿಲ್-ಮೇ ತಿಂಗಳುಗಳಲ್ಲಿ ಎರಡು ಸಭೆ ಸೇರಿಸಿತ್ತು. ಯಾರೂ ಬರಲಿಲ್ಲ. ಆದರಿಂದ ಕೆಲವು ತಾಲೂಕಿನವರು ಹರಿಜನೋದ್ಧಾರದ ಯೋಜನೆಯನ್ನು ತಯಾರಿಸಿ ಪ್ರಾಂತಿಕ ಬೋರ್ಡಿಗೆ ಕಳಿಸಿದ್ದರು. ಜಿಲ್ಲಾ ಬೋರ್ಡಿನ ರಚನೆಯಾದ ಹೊರತು ಯಾವದೇ ಯೋಜನೆ ವಿಚಾರ ಮಾಡಲಿಕ್ಕಿಲ್ಲವಾಗಿ ಪ್ರಾಂತಿಕ ಬೋರ್ಡು ಅಭಿಪ್ರಾಯಪಟ್ಟಿತು. ಪ್ರಾಂತಿಕ ಬೋರ್ಡಿನ ಅಧ್ಯಕ್ಷರು ತಮಗಿದ್ದ ಅಧಿಕಾರದಂತೆ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಿಗೆ ನೇಮಿಸಿದರು. ಅಧ್ಯಕ್ಷ-ಕಾರ್ಯದರ್ಶಿಗಳ್ಬರು ಈ ಕೆಳಗಿನಂತೆ ಸಭಾಸದರನ್ನು ನೇಮಿಸಿದ್ದಾರೆ ರಾ। (೧) [ಶಿ] ಕೆಳಗಿನಮನೆ ನಾರಾಯಣ ಕೇಶವ (ಅಧ್ಯಕ್ಷ), (೨) ವಾಸುದೇವರಾವ ದುರ್ಗಾ ಧೀಕಪ್ಪ, (೩) ಕೆಳಗಿನಮನೆ ಬಾಳಕೃಷ್ಣ ಸೋಂದೆ, (೪) ತಿಮ್ಮಪ್ಪ ಮಂಜಪ್ಪ ಹೆಗಡೆ ಹೋಲಿನಸರ, (೫) ವಿಠ್ಠಲರಾವ ಅನಂತ ಹೆಗ್ಗಡೆ (ಕಾರ್ಯದರ್ಶಿ), (೬) [ಕಾರವಾರ] ಸಾಬ್ರುವ ದತ್ತಾತ್ರಯ ನಾಡಕರ್ಣಿ, (೭) ಸುಬ್ರುವ ರಾಮಚಂದ್ರಯ್ಯ ಹಳದೀಪುರಕರ, (೮) [ಅಂಕೋಲಾ] ರೆವ್ಹರೆಂಡ ಫಾದರ ಪಿ. ಟಿ ಪ್ಲಾಗೀರಸ, (೯) [ಹೊನ್ನಾವರ] ಶಿವರಾಮ ರಾಮಾ ಶಾಸ್ತ್ರಿ, (೧೦) [ಸಿದ್ದಾಪುರ] ಗಣಪತಿ ವಿಶ್ವನಾಥ ಸಿದ್ಧೇಶ್ವರ, (೧೧) [ಕುಮಟಾ] ನರಸಿಂಹ ಗೋವಿಂದ ಶಾನಭಾಗ, (೧೨) [ಭಟಕಳ] ರಾಮಚಂದ್ರ ನಾರಾಯಣ ಶಾಸ್ತ್ರಿ. ಈ ಪ್ರಕಾರ ಜಿಲ್ಲಾ ಸಂಘದ ಸ್ಥಾಪನೆಯಾಗಿದೆ. ಹರಿಜನೋದ್ಧಾರ ಕಾರ್ಯದಲ್ಲಿ ಆಸಕ್ತಿಯುಳ್ಳವರು ತಮ್ಮ ತಮ್ಮ ತಾಲೂಕುಗಳಲ್ಲಿ ಸಂಘಗಳನ್ನೇರ್ಪಡಿಸತಕ್ಕದ್ದು. ಜಿಲ್ಲಾ ಸಂಘ ತಾಲೂಕು-ಸಂಘಗಳಿಗೆ ಸಹಾಯ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಾದವರು ಕಾರ್ಯದರ್ಶಿಗಳ ಕಡೆ ಬರೆಕೊಳ್ಳಬೇಕು. ಇತ್ಯಾದಿ.

ಅಂಕೋಲಾ— (ತಾ. ೧೦-೮ ೧೯೩೪) ಸತ್ಯಾಗ್ರಹದಲ್ಲಿ ನಷ್ಟಪಟ್ಟವರಿಗೆ ಸಹಾಯ ಕೊಡುವದಕ್ಕಾಗಿ ಸದ್ಯಕ್ಕೆ ರೂ ೧೦೦೦ ಸಾವಿರ ಬಂದಿರುವದಾಗಿ ತಿಳಿಯುತ್ತದೆ. ಕೊಂಗ್ರೆಸ ಕಾರ್ಯಕರ್ತರು ಯೋಗ್ಯ ಯೋಗ್ಯತೆಯ ವಿಚಾರ ಮಾಡಿ ಪ್ರತ್ಯಕ್ಷವಾಗಿ ನೀಡುವರು. ಇಲ್ಲಿ ಸಾವಿರ ರೂಪಾಯಿ ಹಂಚಿಕೆ ಕೊಂಗ್ರೆಸ ಸಭಾಸದರಾಗಿ ತಿಳಿಯುತ್ತದೆ.

ಶ್ರೀ ಕಾರ್ನಾಡ ಸದಾಶಿವರಾಯರ ಮೇಲಿನ ಬಿಟ್ಟಿಯ ವಿಚಾರ ಅವರ ಅಪೇಕ್ಷೆಯು ಮೇರೆಗೆ ತಾ ೩೦ ನೇಗೆ ಇಟ್ಟಿದೆ. ಶ್ರೀ ಸದಾಶಿವರಾಯರು ಜಾಮೀನಿಸಿದ ಕೃಷಿ ಯೋಜನೆ ಉತ್ತರಾರ್ಧವೇನೆಂದರೆ — ಹಿಲ್ಲೂರಿ ಕಾಲಿಯ ವರ ದಕ್ಷಿಣ ಪತ್ರದ ಮೊದಲಿನ ಬಾಗವನ್ನು ಬುದ್ಧಿಪೂರ್ವಕವಾಗಿ ಬಿಟ್ಟಿದ್ದಾರೆ. ಅದು ಹಾಜರಾಗಿದ್ದಲ್ಲಿ ಆ ಪತ್ರದ ಮೇಲಿನ ತಾರೀಖು ಮತ್ತು ಪತ್ರ ಬರೆದ ಕಾರಣ ತಿಳಿಯುತ್ತಿತ್ತು. ಆ ಪತ್ರ ೧೯೩೩ನೇ ಇಸ್ವಿ ಮೇ ತಿಂಗಳ ಸುಮಾರಿನಲ್ಲಿ ಬರೆದದ್ದು. ಮಹಾತ್ಮರ ಉಪವಾಸದ ಮೂಲಕ ಆ ಕಾಲದಲ್ಲಿ ಸತ್ಯಾಗ್ರಹ ಕಡು ಕೊಂಡಿತ್ತು. ಮುಂದೆ ಸಾರ್ವಜನಿಕ ಸತ್ಯಾಗ್ರಹಕ್ಕೆ ಸಪ್ಪೆ ಸ್ಥಾನ ಕವೆಬಿತ್ತು. ಕನ್ನಡ ಜಿಲ್ಲೆಯೊಳಗಿನ ಕೆಲ ತಾಲೂಕುಗಳಲ್ಲಿ ಒಕ್ಕಲಿಗರನೇಕರು ಮನೆಮಾರು ಕಳ ಕೊಂಡು ದಿಕ್ಕಿಲ್ಲದವರಾಗಿದ್ದರು. ಆದರಿಂದ ಅವರಿಗೆ ನೆರವಾಗುವ ವಿಷಯ ವಿಚಾರವಾಗುತ್ತಿತ್ತು. ಅಲ್ಲಿಯ ವಸ್ತುಸ್ಥಿತಿಯನ್ನು ಅರಿತುಕೊಂಡು ಸಹಾಯದ ಪರಿಮಾಣವನ್ನು ತಿಳಕೊಳ್ಳುವದಕ್ಕಾಗಿ ಶ್ರೀ ಜಯರಾಮದಾಸ ದೌಲತರಾಮರವರು ಇಲ್ಲಿ ಬರತಕ್ಕವರಿದ್ದರು. ಸಂಬಂಧದ ಕರ್ನಾಟಕದ ಮಾಹಿತಿ ಪಡಕೊಳ್ಳುವದಕ್ಕಾಗಿ ನಾನು ಈ ಪತ್ರ ಬರೆದಿದ್ದೆ. ಪತ್ರದ ಕೊನೆಗೆ ವ್ಯಕ್ತಿಗಳ ಮಾಹಿತಿ ಕಳುಹಬೇಕೆಂದು ಕೇಳಿತ್ತು. ಪತ್ರದ ಪ್ರಸ್ತಾವನೆಯಲ್ಲಿ ಪತ್ರ ಬರೆದಿರುವ ಉದ್ದೇಶವು ಆಡಕವಾಗಿತ್ತು. ಅದನ್ನು ಹಾಜರಪಡಿಸದೆ ಮಾಡಿದ ಈ ಬುದ್ಧಿ ಕಾಯಿದೆಯಂತೆ ನಡೆಯಲಾರದು. ಪತ್ರ ಬರೆದ ಕಾಲಕ್ಕೆ ಬೇಕಾಯದೇಶಿರ ಸಂಸ್ಥೆಯ ಕಾರ್ಯವು ನಡೆಯುತ್ತಿತ್ತಾಗಿ ಘಟನಾವಳಿ ಕಡೆಯಿಂದ ಸಿದ್ಧವಾಗಲಿಲ್ಲ. ಬೇಕಾಯಿದೇಶಿರ ಸಂಘಕ್ಕೆ ನಾನು ಪ್ರೋತ್ಸಾಹ ಕೊಡಲಿಲ್ಲ. ನಾನು ನಿರಪರಾಧಿಯಿದ್ದೇನೆ. ಇತ್ಯಾದಿ. ಹಾಜರಾದ ಕಾಗದದ ಭಾಗದಲ್ಲಿ ಶ್ರೀ ಸದಾಶಿವರಾಯರು ಬರೆದದ್ದೇನೆಂದರೆ — ಶ್ರೀ ಜಯರಾಮ ದಾಸರವರು ಸದ್ಯಕ್ಕೆ ನಸ್ಟ್ರುತನೆ ನಮ್ಮ ಪ್ರಾಂತದಲ್ಲಿ ಆಗಮಿಸುವವರಿದ್ದಾರೆ. ಮುಂದಿನ ಪತ್ರದಲ್ಲಿ ನಿಮಗೆ ತಿಳಿ ಸುತ್ತೇನೆ. ಪ್ರವಾಸದ ರಾಮದಾಸರಿಗೆ ನಾನು ಕೊಡಬೇ ಕಾಗಿರುವ ಸತ್ಯಾಗ್ರಹ ಕ್ಷೇತ್ರದೊಳಗಿನ ಜನವರ್ತ ಮಾಹಿತಿ ಕೊಟ್ಟು ಅವರಿಗೆ ಕಾರಲೆ ಇತ್ತ ಕಡೆ ಕಳಿಸಿ ಅವರಿಗೆ ಮಾಹಿತಿಯ ಕಾದ ವಿಷಯಗಳ್ಯಾವವೆಂದರೆ – (೧) ಮೂರಾರು ತಾಲೂಕುಗಳಲ್ಲಿ ಕೂಡಿ ಈ ತಿಂಗಳೊಳಗೆ ಕರನಿರಾಕರಣೆ ಮಾಡಿದ ಖಾತೆದಾರರ ಸಂಖ್ಯೆ (೨) ಜಪ್ತಿ ಪ್ರದೇಶದೊಳಗಿನ ಸ್ಥಿತಿ (೩) ಅಂಕೋಲೆಯೊಳಗಿನ ಇತ್ತೀಚಿನ ಪರಿಸ್ಥಿತಿ (೪) ಸತ್ಯಾಗ್ರಹಿಗಳ ಹಾಗು ಜನರ ಈಗಿನ ಪ್ರವೃತ್ತಿ, (೫) ರಾಜಾರಾಮ ವಸೂಲಿಗಾಗಿ ಪೋಲೀಸರು ಮತ್ತು ಅಧಿಕಾರಿಗಳು ಸತ್ಯಾಗ್ರಹ ಪ್ರದೇಶದಲ್ಲಿ ನಡೆಸಿದ ಅತಿಕ್ರಮಗಳ ಸಂಪೂರ್ಣ ವರ್ಣನೆ (ನಡೆದಂತೆ), (೬) ಜುಲೈ ಪೋಲೀಸರು ವಿವಿಧ ತಾಲೂಕುಗಳಲ್ಲಿ ನಡೆಸಿದ ದೂಷಣಕ್ಕೆ ಕೆಲಸ ಮಾಡಲಾಗಿರುವ ಯಾವ ತಪ್ಪು ವಿವರ ಕೊಟ್ಟು ಶ್ರೀ ರಾಮದಾಸರಿಗೆ ಕಳಿಸಬೇಕು. ನಮ್ಮ ಸಹಾಯಕರು ವಿವರ ಕಳಿಸಬೇಕಾಗಿ ನನಗೆ ಬಹಳ ಒತ್ತಾಯ ಮಾಡುತ್ತಿದ್ದಾರೆ. ಅವರೊತನೆ ವ್ಯವಹಾರ ನಡೆಸುವದು ಎಷ್ಟು ಕಷ್ಟಪ್ರದವೆಂದು ನಿಮಗೆ ಗೊತ್ತಿದೆ. ಅವರು ಬೇಗ ಮಾಡುವದು ಕಷ್ಟವಿಲ್ಲ. ಇನ್ನು ಮುಂದೆ ಯಾವತ್ತು ಹುಕುಮುಗಳನ್ನೂ, ಮಾಹಿತಿಯನ್ನು ನೇರವು ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯಿಂದ ಪಡೆಯತಕ್ಕದ್ದೆಂಬುದನ್ನು ಲಕ್ಷದಲ್ಲಿಡಿರಿ. ಇತರರ ಹೇಳಿಕೆಯಂತೆ ನಡೆದರೆ ಅದಕ್ಕೆ ನಾನು ಜವಾಬುದಾರನಲ್ಲ. ನಮ್ಮ ಪ್ರಾಂತದಲ್ಲಿ ನಡೆಯುವ ದೂಷಣಪ್ರಕಾರಗಳಿಗೆ ಶ್ರೀ ಜಯರಾಮದಾಸರು ನನಗೆ ಜವಾಬುದಾರ ಹಿಡಿಯುತ್ತಾರೆ. ಹೆಚ್ಚಿನ ಸಂಗತಿ ಮುಂದಿನ ಪತ್ರದಲ್ಲಿ ನಿಮ್ಮ ಸ್ನೇಹಿತ- ಸದಾಶಿವರಾವ್ ಕಾರ್ನಾಡ

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ೧ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ



ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ– ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಹೊಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಲ್ಲಷ್ಟು ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷದವಾಗಿ ಉಪಯೋಗಿಸುತ್ತಾರೆ. ನಕಲಿ ಸೀಸೆ ಪ್ಯಾಕೆಟ ಕಳಿಸಲಾಗದು.

ಬುಡ್ಡಿ ಬಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ. ಡಜನ್ ೧ಕ್ಕೆ ರೂ. ೩-೮-೦ ವಿ ಪಿ ೦ ೯-೦. ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ। ಬಾ ೫೧೦, ಮಾರ್ಕೆಟ ಟೌನ, ಮದರಾಸ.

ವಾಙ್ಮಯ ವಿಹಾರ— ೮

ಕಾವ್ಯಸಾಮ್ರಾಜ್ಯ.

(ಗ್ರಂಥ ಪರಿಚಯ)

ಶ್ರೀ ಹನುಮಂತರಾವ ಮಾಂಜರೇಕರ, ಬಿ ಏ

ಕನ್ನಡ ಸಾಹಿತ್ಯದಲ್ಲಿ ಹೊಸಗವನಗಳ ಹೊನಲು ಹರಿಯಹತ್ತಿ ಈಗ ಸುಮಾರು ಕಾಲುಶತಮಾನವಾಗಿರಬಹುದು. ಇಷ್ಟು ಅಲ್ಪಾವಧಿಯಲ್ಲಿಯೇ ಈ ಸಾಹಿತ್ಯ ರೀತಿಯು ಜನಾದರವನ್ನು ಪಡೆದಿದೆಯಾದರೂ ಇನ್ನೂ ಅಸಮಾಧಾನವನ್ನು ತೋರುವ ಪಂಗಡವೊಂದಿದೆ. ಈ ಪಂಗಡವು ಕಾಲ ಸರಿದಂತೆ ಕಿರಿದಾಗಬಹುದೆಂದು ಕಾವ್ಯಸಮ್ಮೇಲನಗಳನ್ನು ನೋಡಿದವರು ಹೇಳದಿರಲಾರರು.

ಹಳಗನ್ನಡ ಕಾವ್ಯ ಸಾಹಿತ್ಯವು ಕೇವಲ ಸಂಸ್ಕೃತ ಬಾಂಧವ್ಯದಿಂದಲೇ ಬೆಳೆಯಿತೆಂಬ ಮಾತನ್ನು ಒಪ್ಪದವರು ಈಗ ಇಂಥ ಹಳೆಯ ಪ್ರಾಚೀನ ಕವಿಗಳಲ್ಲಿ ಸ್ವತಂತ್ರವಾದ ಪ್ರತಿಭೆಯೇ ಇರಲಿಲ್ಲವೆಂದು ಹೇಳಲಾರರು. ಇಂದಿನ ಸಾಹಿತ್ಯವು ಇಂಗ್ಲೀಷ ಸಾಹಿತ್ಯದ ಸಂಪರ್ಕದಿಂದ ನವಚೇತನವನ್ನು ಪಡೆದಿದೆ. ಕನ್ನಡದಲ್ಲಿಲ್ಲದ ಹೊಸ ಹೊಸ ಸಾಹಿತ್ಯ ಪ್ರಕಾರಗಳು ಅದರ ಸಂಸರ್ಗದಿಂದಲೇ ಹುಟ್ಟಿ ಬೆಳೆದಿವೆಯೆನ್ನಬಹುದು. ಅವುಗಳಲ್ಲಿ ಹೆಚ್ಚಾಗಿ ಬೆಳೆದವುಗಳೆಂದರೆ ಭಾವಗೀತಗಳು. ಇಂದಿನ ಹಿರಿ ಕವನಗಳು ಇಂಗ್ಲೀಷ ಮಾದರಿಯ ಅನುಕರಣದವುಗಳಲ್ಲವಾದರೂ ಬಂಗಾಲಿ ಕವಿಗಳಂತೆ ನಮ್ಮ ಕನ್ನಡ ಕವಿಗಳು ತಮ್ಮದೇ ಆದ ಒಂದು ಸ್ವತಂತ್ರ ಮಾರ್ಗವನ್ನು ಅನುಸರಿಸಿಕೊಂಡಿಲ್ಲವೆಂದೇ ಹೇಳಬೇಕಾಗಿದೆ.

ಕರ್ನಾಟಕದಲ್ಲಿ ನವಚೇತನವು ತೋರುತ್ತಿದ್ದ ಈ ಕಾಲದಲ್ಲಿ ಸಾಹಿತ್ಯ ಸೇವೆಗೆಂದು ಹೊರಟ ಅನೇಕ ಸಂಘಗಳು ಜಿಲ್ಲೆಯ ಉತ್ಸಾಹದಿಂದ ಕೆಲಸ ಮಾಡುತ್ತಿವೆ. ಇವು 'ಗೀತ ಗೋವಿಂದ', 'ಶ್ರೀ ಕೃಷ್ಣನ ಕಣ್ಣುಬೆಳದಿಂಗಳು' ಕೊಳಲಿನ ಇಂಪು ಹಾಡಿ ಎಡೆಬಿಡದೆ ಎಡೆಯಲ್ಲಿ ಇರುವ ಉಡುಪಿ ಕ್ಷೇತ್ರದ ಕಿರಿಯರ ಪ್ರಪಂಚವು ಅವುಗಳಲ್ಲೊಂದು. ಕಿರಿಯರ ತೊದಲ್ನುಡಿ ಗ್ರಂಥಮಾಲೆಯನ್ನು ಹೊರಡಿಸಿ ಈಗಾಗಲೇ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿರುತ್ತದೆ. "ಕಾವ್ಯಸಾಮ್ರಾಜ್ಯ"ವು ಅವರ ಮಾಲೆಯ ಐದನೆಯ ಮಣಿ. ಎಲ್ಲ ಕರ್ನಾಟಕದ ಆಧುನಿಕ ಕವಿಶ್ರೇಷ್ಠರ ಬಿಡಿ ಕವನಗಳ ಸಂಚಯ ಇದಿದೆ ಅದರಲ್ಲಿ.

ಈ ಮೊದಲು ಕೆಲವು ಕವನಸಂಗ್ರಹಗಳು ಪ್ರಸಿದ್ಧವಾಗಿದ್ದರೂ ಕಾವ್ಯಸಾಮ್ರಾಜ್ಯವು ಒಂದು ರೀತಿಯಲ್ಲಿ ವಿಶೇಷವಾಗಿದೆ. ಶ್ರೀ ಮಾನ್ ಪಂಜೆ ಮಂಗೇಶರಾಯರಿಂದ ಸಂಪಾದಿಸಲ್ಪಟ್ಟ ಮೂರು ಪದ್ಯ ಪುಸ್ತಕಗಳು ಕೇವಲ ವಿದ್ಯಾರ್ಥಿಗಳಿಗೋಸ್ಕರವಿದ್ದು ಅವುಗಳಲ್ಲಿ ಇತ್ತೀಚೆಗೆ ಪ್ರಸಿದ್ಧರಾದವರ ಪದ್ಯಗಳಿಲ್ಲ. ಶ್ರೀ ಕೆ ವಿ ಪುಟ್ಟಪ್ಪ, ಪೇಜಾವರ ಸದಾಶಿವರಾವ್ ದಿನಕರ ದೇಸಾಯಿ, ರಾಜರತ್ನಂ ಮೊದಲಾದವರ ಕವಿತೆಗಳು ಒಂದಿಲ್ಲ. "ಕಿರಿಯರ ಕಾಣಿಕೆ" ಯಲ್ಲಿ ಕಿರಿಯರು ಕಟ್ಟಿದ ಕವನಗಳಷ್ಟೇ ಇವೆ. "ಅಲರು", "ಪಕ್ಷಿ ಹಾರುತಿದೆ" ಇವುಗಳು ಅನುಕ್ರಮವಾಗಿ ಮಂಗಳೂರಿನ ಮಿತ್ರಮಂಡಲಿಯೊಳಗಿನ ಹಾಗೂ ಧಾರವಾಡದ ಗೆಳೆಯರ ಗುಂಪಿನೊಳಗಿನ ಕವಿಗಳ ಕವಿತೆಗಳನ್ನು ಮಾತ್ರ ಒಳಗೊಂಡಿವೆ. "ಕಾವ್ಯ ಸಾಮ್ರಾಜ್ಯ"ದಲ್ಲಿ ವಿಸ್ತೃತ ಕರ್ನಾಟಕದೊಳಗಿನ ಬಹಳ ಎಲ್ಲ ಪ್ರಮುಖ ಕವಿಗಳ ಕವನಗಳ ಐಕ್ಯದೊಂದನ್ನು ತೋರುವ ಪ್ರಯತ್ನವು ಮಾಡಲಾಗಿದೆ. ವ್ಯಾಪಕವಾದ ಈ ದೃಷ್ಟಿಯನ್ನಿಟ್ಟುಕೊಂಡದರಿಂದಲೇ ಕೆಲವು ಪ್ರಸಿದ್ಧರಾಗಿರುವ ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಡಿ ವಿ ಗುಂಡಪ್ಪನವರ ಒಂದು ಕವನವು ಇದರಲ್ಲಿ ಹಾಗೆಯೇ ಹಿರಿಯ ಪು ತಿ ನರಸಿಂಹಾಚಾರ್ಯ, ಪ್ರಳಯ ತಾಂಡವದ ಜಿ ಪಿ ರಾಜರತ್ನಂ, ವೇದಮೂರ್ತಿ ಎಲ್ ಗುಂಡಪ್ಪ, ಇವರ ಕವಿತೆಗಳು ದೊರಕದೆ ಇದರಲ್ಲಿ ಬಂದಿಲ್ಲ. ಈ ಕುಂದ ಗಳನ್ನು ಮುಂದಿನ ಪ್ರಸ ಈ ಸಂಗ್ರಹವು ಅಪೂರ್ವವಾಗಿ ಪ್ರಕಟಿಸಿದರೆ ಹೊರ ಬರಿಸುತ್ತದೆಂದು ನಿಸ್ಸಂದೇಹವಾಗಿ ಹೇಳಬಹುದು.

ಕವಿತೆಗಳನ್ನು ಆರಿಸುವುದರಲ್ಲಿ ಪಕ್ಷಪಾತಿಯಾದ ಆದರ ಗುಣವನ್ನು ಇಟ್ಟುಕೊಂಡಿರುವರೋ ಏನೆಯೋ "ಆಧುನಿಕ ಕರ್ನಾಟಕದಲ್ಲಿ ನವಿ ಗವನಗಳ ಸಗ್ಗಿಯಾಗಬೇಕು, ಆಧುನಿಕ ಕನ್ನಡ ಪರಿಚಯವನ್ನು ಜನತೆಗೆ ಮಾಡಿಸಿಕೊಡಬೇಕು, ಆ ಸಾಹಿತ್ಯ ಭಕ್ತರ ಪ್ರವೃತ್ತಿಯನ್ನು ಬಹುಜನರು ಅನುಸರಿಸುವಂತೆ ಅವರ ಒಂದೊಂದು ಕವನಗಳನ್ನು (?) ಆಯ್ದು ಒಂದೇ ಕಾವ್ಯಮಾಲಿಕೆಯಲ್ಲಿ ಪೋಣಿಸಬೇಕು" ಎಂಬ ಹಿರಿ ಬಯಕೆಯು ಆಯಿತು ಸಮಾಗ ಎಂದು ಸಂಪಾದಕರ ಗಳ ಕವನ ಒಸ್ಸಪದದಲ್ಲಿ ಹೇಳಿಕೊಂಡಿದ್ದಾರೆ. ಈ ಸಂಗ್ರಹದೊಳಗಿನ ಪದ್ಯಗಳು ಕೆಲವು ಆಯಾ ಕವಿಗಳ ಕಾವ್ಯ ಸೀಮೆಯ ಪ್ರಾತಿನಿಧಿಕಗಳಲ್ಲವೆನಿಸುತ್ತದೆ. ಆರಿಸುವುದರಲ್ಲಿ ಪಿನ್ನಾದ ದೃಷ್ಟಿ ತೋರಿದ್ದಕ್ಕಾಗಿ ಎಡೆಮಾಡಿಯೊಂದು ನಾನು ಒಪ್ಪುತ್ತೇನೆ. ಆದರೂ ಶ್ರೇಷ್ಠ ಕವಿಗಳ 'ಕಲ್ಕಿ', 'ಪ್ರೇಮದ ಮಾತು' ಸೇರು, ಬೇಂದ್ರೆಯವರ 'ಕನಸಿನೊಳಗೊಂದು ಕಣಸು' 'ಮೂವತ್ತು ಮೂರು ಕೋಟಿ ಪದರ ಬೆನ್ನರ' 'ಮಧುರ ಗೀತ' ಇವುಗಳಲ್ಲಿ ರಾಜರತ್ನಂ ಅವರ ತುಂಡು ಪದ್ಯ ಬರೆದುಕೊಂಡಿವೆ ಕವಿತೆಗಳನ್ನು ಕಾವ್ಯ ಸಾಮ್ರಾಜ್ಯದಲ್ಲಿ ಸೇರಿಸಬಹುದಾಗಿತ್ತೆಂದು ನಮಗನಿಸುತ್ತದೆ.

ಕಾವ್ಯಸಾಮ್ರಾಜ್ಯದಂಥ ಸಂಗ್ರಹಗಳ ಸಂಪಾದಕರು ಶ್ರೀಮಾನ್ ಎ ನ ಕೃಷ್ಣರಾಯರಿಂದ ಸಂಪಾದಿತವಾದ ಕಾವ್ಯದ ಬಿಲ್ಲೆ ಆದರ್ಶವೆಂದು ಇಟ್ಟುಕೊಳ್ಳಬೇಕಾದದೆಂದು ಇಲ್ಲಿ ಸೂಚಿಸಬಯಸುತ್ತೇನೆ. ಈ ಕಾವ್ಯಸಂಗ್ರಹವು ಅಯ್ಕೆಗಾರರಿಗೊಂದು ಮಾದರಿಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅದರಲ್ಲಿ ಶ್ರೀ ಎ ನ ಕೃಷ್ಣರಾಯರು ಕೊಟ್ಟಂತೆ ಪ್ರಸ್ತುತದ ಸಂಗ್ರಹದಲ್ಲಿಯೂ ಆಧುನಿಕ ಕಾವ್ಯಸಾಹಿತ್ಯದ ಚರಿತ್ರೆಯ ಸ್ಥೂಲಗೊಂಡ ವಿಸ್ತೃತವಾದ ಪ್ರಸ್ತಾವನೆ, ಆಯಾ ಕವಿಗಳ ಅಲ್ಪ ಪರಿಚಯ, ಅವರ ಕಾವ್ಯಧೋರಣೆಯ ರೀತಿ ನೀತಿ ವಿಶೇಷ ವೈಶಿಷ್ಟ್ಯಗಳು ಇದುವರೆಗೆ ಪ್ರಕಟವಾದ ಆಯಾ ಕವಿಗಳ ಕವನಸಂಗ್ರಹಗಳ ನಾಮನಿರ್ದೇಶ ಮೊದಲಾದವುಗಳನ್ನು ಇದರಲ್ಲಿ ಕೊಟ್ಟಿದ್ದರೆ ಸಂಪಾದಕರ ಕಾರ್ಯವು ಪೂರ್ಣವಾಗುತ್ತಿತ್ತು. ಇದರಲ್ಲಿ ಅನುಕ್ರಮಣಿಕೆಯನ್ನು ಸಹ ಸರಿಯಾಗಿ ಕೊಟ್ಟಿಲ್ಲ! ಬೇಸರ.

ಕಾವ್ಯಸಾಮ್ರಾಜ್ಯವು ತಳಿರ ವಿತರಣೆಯಲ್ಲಿ ಅಂದವಾಗಿ ಮುದ್ರಿತವಾಗಿದೆ. ಅದರ ಬಾಹ್ಯಾಂಗವು ನಯನ ಮನೋಹರವಾಗಿರುವಂತೆಯೇ ಅಂತರಂಗವೂ ಚೇತೋಹಾರಿಯಾಗಿದೆ. ಉತ್ತಮವಾದ ಎಂಟಿಕ್ ಕಾಗದದ ಮೇಲೆ ಅಚ್ಚಾಗಿ ೧೩೦ ಪುಟಗಳುಳ್ಳ ಈ ಪುಸ್ತಕಕ್ಕೆ ಪರಿಸರದ ಆಸೆಯೊಂದರೆ ಬೆಲೆ ಕಡಿಮೆ. ಕನ್ನಡ ಸಾಹಿತ್ಯದ ಆಚಾರ್ಯ ಪುರುಷರಾದ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರ ಮುನ್ನುಡಿಯಿಂದ ಗ್ರಂಥವು ಅಲಂಕೃತವಾಗಿದೆಯೆಂದ ಮೇಲೆ ಅದು ಸರ್ವಮಾನ್ಯವಾದುದೆಂದು ಬೇರೆ ಹೇಳಬೇಕೇ?

ಪ್ರಸ್ತುತದ ಸಂಗ್ರಹದಲ್ಲಿ ಕರ್ನಾಟಕದೊಳಗಿನ ೩೫ ಕವಿಗಳು ಬರೆದ ೬೦ ಕವನಗಳಿವೆ. ಇದು ಬರೇ ಸಂಗ್ರಹವಾದ ಕಾರಣ ಕವನಗಳನ್ನು ಪರೀಕ್ಷಿಸಿ ವಿಮರ್ಶಿಸುವುದು ಬಹು ಕಷ್ಟ. ಆದರೂ, ಕೆಲವು ಕವನಗಳ ಗೀತೆಯನ್ನು ನೋಡಿಕೊಂಡರಿದ್ದಲ್ಲಿ ಪುಸ್ತಕಾವಲೋಕನವು ಅಪೂರ್ಣವಾಗಬಹುದಲ್ಲವೇ?

ಶ್ರೀಮಾನ್ ಕಡೆಂಗೋಡ್ಲು ಶಂಕರ ಭಟ್ಟರು ಆಧುನಿಕ ಕನ್ನಡ ಕವಿ ಕಾಲದಲ್ಲಿ ಮೊದಲನೆಯ ಪಂಕ್ತಿಗೆ ಸೇರಿದವರು, ಮೇಲಾಗಿ ರಾಷ್ಟ್ರೀಯ ವೃತ್ತಿಯುಳ್ಳವರು. ಈ ಸಂಗ್ರಹದಲ್ಲಿ ಬಂದ ಅವರ "ಕಹಳೆ" ಎಂಬ ಕವನವನ್ನೋದಿದರೆ ವೀರರಸ ರೋಮರೋಮದಲ್ಲಿ ಹೊಮ್ಮುವುದು. ಸ್ವಾತಂತ್ರ್ಯ ಸಮರದಲ್ಲಿ ನಮಗೆಲ್ಲರಿಗೂ ಚಿರಪರಿಚಿತವಾದ ಕಹಳೆಯಿದು.

ಇಂದಿನಾವೇಶವಿದು! ಹಿಂದಿನಾ ಪರಿಯಲ್ಲ,
ಒಡೆತನಕೆ ತಲೆಬಾಗಿ ಮುರುಟಲಿಹುದಲ್ಲ,
ರಾಜಪದ ಪೀಠಕ್ಕೆ ಹಸೆಯ ಹಚ್ಚುವುದಲ್ಲ,
ಒಡೆತಕ್ಕೆ ಮೈಬಾಚಿ ಹುದಿಯುಬ್ಬುವುದಲ್ಲ

* * * *

ಎಂದು ಸಿಡಿಗುಂಡ ಮಳ್ಳಿಗೆಯಂತೆ ಮೆರಿಸುವರು,
ಹೊಡೆಯುವ ಕತ್ತಿಗೆ ಕೊರಳನ್ನೊಡ್ಡುವರು,
ವ್ಯಾಕ್ಯವಿನ ದಾಡೆಗಳ ಕ್ಕೈಕೊಂಕಿ ಕಳಚುವರು,
ಅಯ್ಯಯ್ಯೋ! ಇವರಾರಿಂದು ತಡೆಯುವರು?

ಅವರ ಈ ಸಾಲುಗಳಲ್ಲಿ ವೀರ ಸತ್ಯಾಗ್ರಹಿಯ ಚಿತ್ರವೊಂದನ್ನು ಕಾಣಬಹುದಲ್ಲವೇ?

ಕನ್ನಡದಲ್ಲಿ ಲಘುಕಥಾ ವಾಙ್ಮಯದ ಜನಕರಾದ ಶ್ರೀನಿವಾಸರು "ನಮ್ಮಾಂಬೆ" ಎಂಬ ಕವನದಲ್ಲಿ ಕನ್ನಿಕೆಯ ಜೀವನ ವೃತ್ತಾಂತವೊಂದನ್ನು ಮನಂಗೊಳ್ಳುವಂತೆ ಚಿತ್ರಿಸಿರುವರು. *Whenever one of us speaks from the depths of his heart in order to free his own self, his voice liberates at the same time thousands of silent voices* ಎಂದು ರೋಮೈನ ರೋಲಾಂಡರವರು ಒಂದು ಸನ್ನಿವೇಶದಲ್ಲಿ ಹೇಳಿದಾರು. ಶಾಸ್ತ್ರಿಯವರ 'ನಮ್ಮಾಂಬೆ'ಗೆ ತುಂಬಾ ಅನ್ವಯಿಸುತ್ತದೆ. ನಾಯಿ ಸಾಕಿದವರೆಲ್ಲರೂ ಅದನ್ನೊಮ್ಮೆ ಓದಿ ನೋಡಬೇಕೆಂದು ಒತ್ತಿ ಹೇಳದಿರಲಾರೆನು. ಶ್ರೀನಿವಾಸರು ಹೋದ ಹಾದಿಯಲ್ಲಿಯೇ ನಡೆಯುತ್ತಿರುವ ಶ್ರೀ ಕೇ ಗೋಪಾಲಕೃಷ್ಣರಾಯರು ಕತೆಗಳಿಗೆ ಕಾವ್ಯರೂಪವನ್ನು ಕೊಟ್ಟು ಬರೆಯುವುದರಲ್ಲಿ ತುಂಬಾ ಕುಶಲರು. ಇವರ 'ಸೋಗದಷ್ಟಿಯ ವೀರ ನಾಯಕ'ನೆಂಬ ಕವನವು ರಸಿಕರ ಮೆಚ್ಚುಗೆಯನ್ನು ಪಡೆದಿದೆ. ಕಾವ್ಯಸಾಮ್ರಾಜ್ಯದಲ್ಲಿ ಪ್ರಸಿದ್ಧ ಮಾಡಿದವರ 'ನಮಸ್ಕಾರ ನಂಜನೆಂಬ ಕಾವ್ಯಾಂಶವು ಓದುಗರನ್ನು ಕರುಣಾರಸದಲ್ಲಿ ಲೀನಿಸುವುದು.

ಮಂಗಳೂರಿನ ಮಿತ್ರ ಮಂಡಲಿಯ ಶ್ರೀಮಾನ್ ಪೇಜಾವರ ಸದಾಶಿವರಾಯರು ತಮ್ಮ "ಮ್ಯಾಯಕದ ಮಸಣ"ದಲ್ಲಿ

ಜಗದ ವಿಭವಗಳೆಲ್ಲ ಭೀಕರ
ಕೆರೆಯ ಕೊರಕಕ ಸಿಗುವವು

* * * *

ದೀನ ಧನಿಕರ ಭೇದವೆಣಿಸದೆ
ಸಾವ ಸವತೆಯ ತರುವವು!

ಎಂದು ಹಾಡಿದಾಗ "*Death the Leveller*" ಎಂಬ ಕವನದೊಳಗಿನ ವಿಚಾರಗಳನ್ನು ಕನ್ನಡಿಗರಿಗೆ ಅರ್ಪಿಸುತ್ತಾರೋ ಏನೋ ಎಂಬಂತೆ ಭಾಸವಾಗುತ್ತದೆ. ಆದರೆ ಅದನ್ನು ಮುಂದಕ್ಕೆ ಓದುತ್ತ ಹೋದ ಹಾಗೆ ಹೊಸ ಹೊಸ ಭಾವಗಳನ್ನು ಕಾಣಬಹುದಾಗಿದೆ.

ಮಸಣವೆಂಬುದು ದಾರಿ ತೋರದ
ಮಾಯದರಮನೆಯಾಗಿದೆ!
ಯಾತ್ರೆಗೆದ್ದಿಹ ಜನರು ಕಂಡುವ—
ಧರ್ಮಚಕ್ರದ ಹಾಗಿದೆ
ಮಡಿದ ಮಾನವ ಕಾಲವು ಕಾಡುವ
ಪಟದ ಮಂಟಪವಾಗಿದೆ
ಲೋಕದಿಂದಲಿ ನಾಕ—ನರಕಕೆ
ಸಂಕ ತೂಗಿದ ಹಾಗಿದೆ

ಶ್ರೀಮಾನ್ ತೀ ನಂ ಶ್ರೀಕಂಠಯ್ಯನವರು "ಪ್ರೇಮ್ಯ ಭ್ಯವನ"ದಲ್ಲಿ 'ಸರಸನ್ಯತ್ಯನ ಪ್ರೇಮ' ಎಂಬ ಪ್ರಶ್ನೆಯನ್ನು ಎತ್ತಿ 'ಬೀಷಣ ಭೈರವನ ತಾಂಡವವನು

ಎಂದು ತಾವೇ ಅದನ್ನು ಉತ್ತರವನ್ನಿತ್ತಿರುವರು ಕವಿಗಳು ಇದರಂತೆ ಚಿತ್ರಿಸಿ ಒಬ್ಬ ಕಲ್ಲಿಗೆ ಬೆರಗುಗೊಂಡು ನಿಂಗದಂತೆ ತಾವು ನಲಿಸುವ ಆಲೋಕ ಒಲ್ಲದನ್ನು ನಾವು ನವ್ಯ ಸುಕ್ಷೇತ್ರ ಕಾಣುವುದ ಪ್ರೇಮ ಪ್ರೇಮದ ವೈಭವ ಕವಿತೆಗೆ ಕವಿಯು ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾನೆ

"ನಿಮ್ಮ ಕಲ್ಲಿನ ಪ್ರೇಮ ಕವನವು
ನಿತ್ಯ ಕರ್ಪೂರ ಬಿಗಿದು
ನಮ್ಮದಿಯಾಗಿ ಸಾಗಿಸುವ ಮಾರ್ಗದ
ಶಾಂತಿಯನು ನೀನರಿಯದೆ —
ಬಳಿ ನಿಂತಿರುವೆಂಬ ಬಾಳ
ಬೆಳೆವ ಬಿಟ್ಟು ನಾ ೧೮ ಮುಟ್ಟಿಸಿ,
ಹಿರಿದ ಬಿಡುವಿನ ಗಾಂಭೀ ಸವಸ,
ಸಾವೇ ಬಿಸಿನ್ನಿಸಾಮನು
ಕರೆಗೆ ಸರಿಮನ್ನಿಕ್ಕುವನು ಕಳುಹಿ
ಒಡೆದು ಸಲ್ಲಾ ಜೀವಿಬಾಳನು,
ಕೆಡಹುವನು ತಳವಿಲ್ಲದಳಲಿನ
ಕಡಲದಲಿ ಉಳಿದವನು —

ಈ ಕವಿತೆ ಓದಿ ತಾಳಿದ ತತ್ತ್ವಬೋಧವನ್ನು ಕಾಣಬಹುದು

ಪರಕವಿಗಳಿಂದ ಶ್ರೀಮಾನ್ ಕೇ ವಿ ಪುಟ್ಟಪ್ಪನವರ ಹೊಸದಾದ "ನೇಗಿಲಯೋಗಿ" ಎಂಬ ಕವನವು ಈ ಸಂಗ್ರಹದಲ್ಲಿ ಅಡಕವಾಗಿದೆ ಅದಲ್ಲದೆ ಅವರ "ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ?" ಎಂಬ ಇನ್ನೊಂದು ಕವನವು ಇದರಲ್ಲಿ ಬಂದಿದೆ ಅದರಲ್ಲಿ ಇಂದಿನ ಜನ ಜೀವನ ಕಳವಳದ ಬಾಳುವೆಯನ್ನು ಕಾಣಬಹುದಾಗಿದೆ 'ಬಂಧನದಲ್ಲಿರುವ ಎಮ್ಮ ಕೊರಳಿನಲ್ಲಿ ಸಾವಿಗಿರುವ ವರದಲ್ಲಿ ಬಾಳುತ್ತ ನಿಂತಿರುವ ನಾನು ವನಿಷ್ಟದಲ್ಲಿ ಪ್ರಕೃತಿ ಕಟ್ಟಿಕೊಳ್ಳಲಾಗುವದೆಂದು ನಾಮ್ಮನಿಸಿದರೆ ಶಾಸ್ತ್ರ ನಮ್ಮದೇನು ' ಎಂಬ ಪ್ರಶ್ನೆಯನ್ನು ಸನಾತನಿಗಳ ಮುಂದೊಡ್ಡಿ,

ಅಂತು ಮನ ತಾನು ಹೇಳಲಾರದ್ಯಾಯ್ಯೋ,
ಜೀವದ್ದರವನನೂ ಕಾಣ್ಣದೊಳ ಸಾತ್ತಿ
ಸ್ವರ್ಗ ಹೋಗಲಿ ಎತ್ತ ನಂಕ ಬಂಧನ ಒರಲಿ,
ಎದೆಯ ದ್ವಾರ ವಾಣಿ ಜಿನುಗುತ್ತಿ '

ಎಂದು ಸಾರುತ್ತ ಕತ್ತಲೆ ಪುಟ್ಟಪ್ಪನವರು 'ಸಂಕ್ಷೋಭೆಯ ಸಾಹಿತ್ಯ' (*Literature of Revolt*) ವನ್ನು ನಿರ್ಮಾಣ ಮಾಡತ್ತಿರ ಪ್ರಥಮ ಕನ್ನಡಿಗರ ಮಹದ್ಭಾಗ್ಯವೆಂದು ನಾನು ಎಣಿಸಿದ್ದೇನೆ

ಶ್ರೀನಿವಾಸ ಮಂಜೇಶ್ವರ ಗೋವಿಂದ ಪೈ ಅವರು ಕನ್ನಡ ಕಾವ್ಯ ಸಾಹಿತ್ಯದಲ್ಲಿ ಒಂದೂ ಅಂದ ನಂಬಿಕೆಯನ್ನು ಹೊತ್ತಿಸಿರುವರು ಅವರ ಮಿಂಚುಳ್ಳಿ ಶ್ರೇಷ್ಠ ತರಗತಿಗೆ ಸೇರದ ಕಲ್ಪಟ್ಟಾಗಿದೆ ಇಂಗ್ಲಿಷ ಕಾವ್ಯ ಸಾಹಿತ್ಯದಲ್ಲಿ ಶೆಲ್ಲಿ ಕವಿಯ "Skylark"ಕ್ಕೆ ಯಾವ ಸ್ಥಾನವಿದೆಯೋ ಅದೇ ಸ್ಥಾನವನ್ನು ಗೋವಿಂದ ಪೈಯವರ 'ಮಿಂಚುಳ್ಳಿ'ಯು ಕನ್ನಡ ಸಾಹಿತ್ಯದಲ್ಲಿ ಪಡೆಯುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಶ್ರೀ ಎಂ ಆರ್ ಶ್ರೀನಿವಾಸಮೂರ್ತಿಯವರು 'ಒಂದು ಕಾಗದ'ದಲ್ಲಿ ಹೆಂಗಸರಿಗೆ ಇಂದಿನ ವಿವಾಹ ಪದ್ಧತಿಯಲ್ಲಿ ಹೇಗೆ ಅನ್ಯಾಯವಾಗುತ್ತದೆಯೆಂಬುದನ್ನು ತೋರಿಸಿ ಕೊಟ್ಟಿರುವರು ಕೋರನ್ನರ್ ಅವರು "ಅದ್ವೈತ" ಎಂಬ ಕವನದಲ್ಲಿ 'ದೇವನು ಎಲ್ಲಿಹ? ಸ್ವರ್ಗವು ಎಲ್ಲಿದೆ? ಇಲ್ಲಿಯೋ? ಎಲ್ಲಿಯೋ? ಮೇಲೆಯೊ' ಎಂದು ಕೇಳಿ ಸ್ವರ್ಗವು ಇಲ್ಲೇ ಇದೆಯೆಂದು ಸಮುದ್ರ ತೀರದ ಕಾರ್ಮಿಕರ ಬಡಜೀವನದ ಒಂದು ಸುಂದರ ಸಂಸಾರದ ಚಿತ್ರವನ್ನು ಚಿತ್ರಿಸಿ ತೋರಿಸಿರುವರು ಈ ಕವನವ ನ್ನೋರ್ವ ಮೇಲಿಂದ ಮೇಲೆ ಓದಬೇಕೆಂದೆನ್ನಿಸುತ್ತದೆ ನಾನು ಅದನ್ನು ಪುನಃ ಪುನಃ ಓದಿ ಹರ್ಷಿತನಾಗಿದ್ದೇನೆ "ಭರತಾರ್ಪಣ"ದಲ್ಲಿ ಶ್ರೀ ಸರೋಜಿನಿ ಕೃಷ್ಣಾಬಾಯಿಯವರು ಶಾಂತಿನಿಕೇತನದಲ್ಲಿ ರಂಗಪ್ರಪಂಚದ ವೈಭವದ ರವೀಂದ್ರನಾಥ ಹಾಗೂ ಒಬ್ಬ ಭಾರತೀಯ ಹಿರಿಯ ಜೀವಿಗೆ ಬರೆದ ದೀರ್ಘ ಪತ್ರಿಕಾ ಕವನವನ್ನು ಬರೆದಿರುವರು

ಇವರಿಗೆ ಹೊರತಾಗಿ ಶ್ರೀ ಜಯದೇವಿತಾಯಿ ಲಿಗಾಡೆ, ರಾಜರತ್ನಂ, ಆದಿತ್ಯ ಶ್ರೀ, ವಿ ಸಿ, ಶ್ರೀ ಗೋಕಾಕ ಮೊದಲಾದವರ ಕವನಗಳೂ ಕಾವ್ಯಸಾಮ್ರಾಜ್ಯದಲ್ಲಿ ಬಂದಿವೆ ಶ್ರೀ ಎಮ್ ಎಸ್ ಕಾಮತ್ ಅವರ 'ಪ್ರಾರ್ಥನೆ'ಯೂ ಅವರೇಳಗಿನ ಚಂದದ ಗೀತವು

ಉತ್ತರ ಕನ್ನಡ ಜಿಲ್ಲೆಯು ರಾಜಕೀಯ ಕ್ಷೇತ್ರದಲ್ಲಿ ಮುಂದರಿಯುತ್ತಿರುವಂತೆ ವಾಙ್ಮಯಾಂಗಣದಲ್ಲಿಯೂ ತನ್ನ ಸ್ಥಾನವನ್ನು ಪಡೆಯಲು ಪ್ರಯತ್ನಿಸುತ್ತಿದೆಯೆಂದು ಹೇಳಬಹುದು ಕಾವ್ಯಸಾಮ್ರಾಜ್ಯದಲ್ಲಿ ನವ್ಯ ಪದ್ಧತಿ ಕವಿಗಳ ಹೊಸ ಕವಿತೆಗೆ ಎಡೆಗೊಟ್ಟಿದೆ ನಮ್ಮ ಜಿಲ್ಲೆಯ ಜನರ ಲಕ್ಷ್ಯವನ್ನು ಸೆಳೆಯುವಂತೆ ಸಣ್ಣ ಕವಿತೆಗಳನ್ನು ಬರೆದವರಲ್ಲಿ ಶ್ರೀಮಾನ್ ದಿನಕರ ದೇಸಾಯಿ ಯವರು ಮೊದಲಿಗರು ಇವರ ಕೈಲವಾಗಿಯೇ ಅವರು ಕಾರವಾರದಲ್ಲಿ ಜರುಗಿದ ಕವಿ ಸಮ್ಮೇಳನಕ್ಕೆ ಸ್ವಾಗತಾಧ್ಯಕ್ಷರಾಗಿದ್ದರು ಕಾವ್ಯಸಾಮ್ರಾಜ್ಯದಲ್ಲಿ ಇವರ ಎರಡು ಕವನಗಳು ಬಂದಿವೆ 'ತರುಣರ ದಸರೆ'ಯಲ್ಲಿ ಅವರು ಇಂದಿನ ತರುಣರ ಆಕಾಂಕ್ಷೆಗಳನ್ನು ಬೇಗ ಪ್ರತಿಬಿಂಬಿಸುವದನ್ನು ತಿಳಿಕೊಳ್ಳಲಿಕ್ಕೆ ಆ ಕವನವನ್ನು ಓದಿಯೇ ಬೇಕು 'ದೀನನಗಿಂತ ದೇವ ಬಡವ' ಎಂಬ ಕವನದಲ್ಲಿ ಹೇಗೆ ಎಂದು ಗುಡಿಯನ್ನೊಂದು ಕಟ್ಟಿ ಹರಿಯ ಒಲುಮೆ ಪಡೆದು ಪ್ರತ್ಯಾಗ ಸಲ್ಲಿಸುವವರನ್ನು ಕುರಿತು—

ಕಲಿಯ ನಿತ್ಯದಾನವನ್ನು
ಮರೆತ ಬಿಟ್ಟೆಯಾ!
ಜಗಕೆ ಗಾಳಿ ಬಾಳಿಗೆ ಬೆಳಕ,
ಕಟ್ಟಿಬಿಟ್ಟೆಯಾ!
ದೀನಗೊಂದು ಗುಡಿ ಸಾಕು
ದೇವಗೊಂದು ವಿಶ್ವ ಬೇಕು
ಮಣ್ಣು, ಹುಲ್ಲು ಸಣ್ಣ ಬಿದಿರು,
ಬಡವಗದುವೆ ಚೆನ್ನ ಗೂಡು,
ಹರಿಗೆ ಎಂದು ಗುಡಿಯೊಂದು
ಕಟ್ಟಿಕೊಂಡೆಯಾ!
ದೀನಗಿಂತ ದೇವ ಬಡವ—
ನೆಂದು ಬಗೆದೆಯಾ!

ಎಂದು ಪ್ರಶ್ನಿಸಿರುವರು

ಶ್ರೀಮಾನ್ ಗಣೇಶ ರಾವ ಯಾಜಿಗಳು (ಮಾಸ್ತಿಯವರಿಗಿಂತ ಒಳ್ಳೆ ಹಾಲು ಉತ್ತಮವಾದ ಅನೇಕ ಕವಿತೆಗಳನ್ನು ರಚಿಸಿದ್ದಾರೆ ಬಹಳ ಅವುಗಳಲ್ಲಿ ಕೆಲವನ್ನು ಅವರು ಸ್ವತಃ ನನಗೆ ಓದಿ ಹೇಳಿದರು ಉಳಿದವುಗಳನ್ನು ನಾನು ಸ್ವತಃ ಓದಿದ ಕೂಡಲೆ ಓದಿ ಆನಂದಪಟ್ಟೆ ಭಾವಾತ್ಮಕತೆ ಬಾವಗಾಂಭೀರ್ಯ ಅವರ ಕವಿತೆಗಳ ವೈಶಿಷ್ಟ್ಯವೆನ್ನಬಹುದು ಅವು ಇನ್ನೂ ಅಪ್ರಕಟಿತವಾಗಿವೆ ಇದ್ದುದು ನಮ್ಮ ದುರ್ದೈವ ಅವು ಬೆಳಕಿಗೆ ಬರುವಂತೆ ಮಾಡುವುದು ಕನ್ನಡಿಗರ ಕರ್ತವ್ಯ ನಮ್ಮ ಜಿಲ್ಲೆಯಲ್ಲಿ ಮಾಸ್ತಿಗಲ್ಲುಗಳು ಎಲ್ಲೆಲ್ಲಿಯೂ ಕಾಣಬರುತ್ತವೆ ಅವುಗಳನ್ನು ನೋಡಿ ಮಾಸ್ತಿಯಲ್ಲಿ ನಡೆದ ಘಟನೆಗಳನ್ನು ಕವಿಗಳು 'ಮಾಸ್ತಿ'ಯಲ್ಲಿ ಚಿತ್ರಿಸಿದ್ದಾರೆ ಇದು ರಂಗ ಪಯಣಿಗನ Ode ಎಂಬ ಕವಿತಾ ವಿಶೇಷಕ್ಕೆ ಸಾದೃಶವಾಗಿ ತೋರುತ್ತದೆನ್ನಬಹುದು

ಪಡೆಯೋಗೆ ನೀನು
ವಿರಹಶಿಖಿಯೊಡನೆ ಚಿತೆಯೇರಲನುವಾದೆ?
ಹಸುಗೂಸುಗಳ ಬಂದು—'ಅಮ್ಮ ಅಮ್ಮ' ಎಂದು
ಕರೆಯಲಿಲ್ಲವೆ,—'ಅಮ್ಮ ಹಾಲನುಣಿಸೆಂದು?
ಎಲ್ಲಿಗ್ಹೋಗುವದಮ್ಮ? ಏಕೆ ಹೋಗಬೇಕಮ್ಮ'
ಅಪ್ಪ ಬರುವನು ಇಂದು ಹೋಗಬೇಡಮ್ಮ'
ಎಂದು ಅಳಲಿಲ್ಲವೇ? ಯಾರು ತಡೆದಿಲ್ಲವೆ?

ಇವರ ಎಲ್ಲ ಕವನಗಳೂ ಇಷ್ಟು ಸುಲಭವಾದ ಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪಂಡಿತರಲ್ಲದವರೂ ಓದಿ ಅವುಗಳನ್ನು ಗ್ರಹಿಸಬಹುದು

ಹಾಂಗೆಯೇ ಶ್ರೀಮಾನ್ ದೇವೇಂದ್ರ ಶೆಣೈ ಯವರು ಉ ಕನ್ನಡದಲ್ಲಿ ಉದಯಿಸುತ್ತಿರುವ ಇನ್ನೊಬ್ಬ ಕವಿಗಳು ಅವರು ಕೆಲವು ಸಣ್ಣ ಕತೆಗಳನ್ನು ಬರೆದಿದ್ದಾರೆ ಇವರ ಬರಹಗಳ ರೀತಿಯನ್ನು ನೋಡಿದರೆ ಅವರ ಕಡೆಯಿಂದ ನಾವು ಬಹಳ ಅಪೇಕ್ಷಿಸಬಹುದಾಗಿದೆ ಬನದ ಬಿರುಸಿನಲ್ಲಿ ಸಿಲುಕಿರುವ ಅವರ 'ಬನದ ಕುಸುಮ'ಗಳ ಪಾಡನ್ನು ನೋಡಿ ನೋಡಿ ಮರುಗಿರುವರು

ಯಾರ ಪೂರಿ ಕಾದಿದ್ದು ಕಾಯ್ದು,
ವಿಫಲವಾಗಿ ಮನದಿ ನೊಂದ,
ಮುಂದೆ ಬಾಳು ಸಲ್ಲದೆಂದು,
ಬಾಡಿ ಬೀಳುವೆ.
* * * *
ಯಾವ ಕಂಡು ನಿನ್ನೊಲಿದುದು
ಚೆನ್ನ ಕುಸುಮವೇ!
ತುಂಬಿ ಬಂಡೆದೆಗಳು ಹಸಿದು
ಮ್ಯಾದು ಎಂಬ ಹೆಸರಿಗೆ ವಿ ಡಿದು
ಮಾತ್ರದಾಂಬಿಗರಾನ ಕಡೆದು
ವನದಿ ಮೊರೆಯುವೆ?
ಇದರೇನಕ್ಕಸ್ತ್ರವಿಯುತ
ಗಾಳಿ ಮರುಗುವ

ಹಾಗೆಯೇ ಮುಂದಕ್ಕೆ ಹೋಗುತ್ತ ಬಡನಾದಿದ ಎಲರು ಇಂದು ಕೃತಕವಾಯಿತೇ!' ಎಂದು ಕೇಳಿದ್ದಾರೆ ಇದ ನ್ನೋದಿ ನಮ್ಮ ಸಮಾಜದಲ್ಲಿ ಬಡನಾಡಿದ ಎಂಥೇ ಚಿತ್ರ ಮಾದ ಅನೇಕ ಬನದ ಕುಸುಮಗಳನ್ನು ನಾವು ನೆನೆಯ ಬಹುದಾಗಿದೆ ಭಾವಗಾಂಭೀರ್ಯದಲ್ಲಿಯೂ ಕಲ್ಪನೆಯ ನವೀನತೆಯಲ್ಲಿಯೂ ಅವರ 'ಜಗನ್ಮಾತೆ' ಎಂಬ ಇನ್ನೊಂದು ಕವಿತೆಯು 'ಬನದ ಕುಸುಮ'ವನ್ನು ಮಿರಿದೆ

"ಮುಗಿಲು" ಎಂಬ ಕವನಸಂಗ್ರಹದ ಲೇಖಕರಾದ ಶ್ರೀ ಸ ಪ ಗಾಂವಕಾರ ಅವರ 'ರೈತರ ಗೋಳು' ಎಂಬ ಕವಿತೆಯೂ, ಶ್ರೀ ರಘುಪತಿ ಶೇಣ್ವೀಯವರ 'ಬಲಿದಾನ' ಎಂಬ ಪದ್ಯವೂ ಕಾವ್ಯಸಾಮ್ರಾಜ್ಯದಲ್ಲಿ ಬಂದಿವೆ 'ರೈತರ ಗೋಳು' ಎದೆ ಬಿರಿಯುವಂತೆ ಬರೆಯಲ್ಪಟ್ಟಿದೆ ಅದರಲ್ಲಿ ಕಾವ್ಯಾಂಶವೆಷ್ಟರ ಮಟ್ಟಿಗೆ ಇದೆ ಎಂಬ ಬಗ್ಗೆ ನಾನು ಸಂದೇಹ ಗೊಂಡಿದ್ದೇನೆ 'ಬಲಿದಾನ'ದಲ್ಲಿ ಭಾರತಾಂಬೆಗಾಗಿ 'ಪ್ರಾಣಪುಷ್ಪ'ವನ್ನು ನೀಡಲು ಕವಿಯು ಹಂಬಲಿಸಿದ್ದಾನೆ

ಮುನ್ನುಡಿಯಲ್ಲಿ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಬರೆದಂತೆ "ಸತ್ಪ್ರಸಾದ, ಪ್ರಕೃತಿಯ ಬೆಂಗವಲ್ಲದು ಒಲುಮೆ ಸಾಯಸೇವೆ ನೀರಗೆಸಕು ಭಕ್ತಿಯು ದಾಹಿತ, ದಯೆ, ವಿಶ್ವನೋಟ್ಟು, ಹೊಸ ಹುಟ್ಟಿನ ಹೊಸ ಸೃಷ್ಟಿಯ ಜನ್ಮ' ಇವೆಲ್ಲವುಗಳನ್ನು ನಾವು ಕಾವ್ಯಸಾಮ್ರಾಜ್ಯದಲ್ಲಿ ಕಾಣಬಹುದು ಇಂಥದ ಉತ್ತಮ ಗ್ರಂಥವನ್ನು ಒದಗಿಸಿಕೊಟ್ಟುದಕ್ಕಾಗಿ ಕನ್ನಡಿಗರು ಕಿಣಿಯವರ ಪ್ರಸಂಶಕ್ಕೆ ಋಣಿಗಳು ಅದನ್ನು ಎಲ್ಲರೂ ಕೊಂಡು ಓದಿ ಆನಂದಪಡಬೇಕು [ಪುಸ್ತಕವು ಸಿಗುವ ಸ್ಥಳ - ಕಿಣಿಯವರ ಪ್ರಕಾಶ ಬಂದಾಕಿ]

ಮಾರುವದಿದೆ!

ಕುಮಟಾ ಕಸಬೆಯೊಳಗಿನ ಒಬ್ಬರ ಕೇರಿಯಲ್ಲಿ ರುವ ಮನೆ ಕಂಪೌಂಡ ಸಹಿತ ಮಾರಾಟ ಮಾಡತಕ್ಕದ್ದಿದ ಮನೆ ಬಿಲ್ಲ ಒಪ್ಪ ಎಕ್ರೆ ಇರುತ್ತದೆ ಮನೆ ಇವಾದಕಿ ಬಳ್ಳಾವಳ್ಳಿರುತ್ತದೆ ಖರೀದಿಸ ಇಚ್ಛಿಸುವರು ಬಿ ಕೆ ಮವರ ಬಗ್ಗೆ ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳತಕ್ಕದ್ದು.

ಕುಮಟಾ, ೨೯-೭ ೩೪ | X c/o M P DIVGI, LL B PLEADER, KUMTA

ರೈತರ ಕಷ್ಟನಿವಾರಣಾ ವರದಿ.

(ಕಳೆದ ಸಂಚಿಕೆಯಿಂದ ಸಮಾಪ್ತಿ)

ನಿರಾಶ್ರಿತ ಮನೆತನಗಳು

ಕರ್ನಾಟಕದಲ್ಲಿಯ ಜಪ್ತಿಯನ್ನು ಕೈಕೊಂಡ ೬೦ ಮನೆತನಗಳಲ್ಲಿ ೩೦೦ ಜನರ ಭೂಕಂಪಗಳನ್ನು ಅವರ ಜಂಗಮ ಸ್ಥಿರ ಒಟ್ಟಿನಿಂದ ಸಾಲ ಮಾಡಲಾಯಿತು. ಹಾಗೆಯೇ ಸರಕಾರ ಮಾ ಆಗ ೧೬೦ ಮನೆತನಗಳಲ್ಲಿ ಕೆಲವರು ಎರಡನೆಯವರ ಹೊಲಗಳಲ್ಲಿ ಕೂಲಿ ಮಾಡಿ ಒತ್ತಾಯದಿಂದ ಹೇಗೋ ಜೀವಿಸುತ್ತಿದ್ದರು. ಉಳಿದ ಎಷ್ಟೋ ಜನರು ತಮ್ಮ ಎಲ್ಲವನ್ನೂ ಪೂರ್ಣವಾಗಿ ಕಳೆದುಕೊಂಡರು. ಒಬ್ಬೊಬ್ಬರು ಮನೆಗಳನ್ನು ಕಟ್ಟಿದ ಕೂಡಲೇ ಅವರಿಗೆ ಈ ಹೊಲಗಳಲ್ಲಿ ಕೂಲಿಯ ಸಾಧನಗಳಿಂದ ಹೊಟ್ಟೆ ಹೊರೆಯುವ ಯಾವ ಮಾರ್ಗವೂ ಉಳಿದಿರುವದಿಲ್ಲ. ಎಷ್ಟೋ ಪ್ರಸಂಗಗಳಲ್ಲಿ ಗೇಣಿಗೆ ಮಾಡಲು ಭೂಮಿ ಸಿಗುವದಿಲ್ಲ. ಈ ಮನೆತನದವರು ಎಲ್ಲಿಗೆ ಹೋಗಬೇಕು? ಆಶ್ಚರ್ಯ ಪಡುವ ಇವರೆಲ್ಲ ೬೦ ಮನೆತನದವರು ತಮ್ಮ ಊರನ್ನೇ ಬಿಟ್ಟು ತಮಗೆ ಹೊಂದದ ಮೈಸೂರ ಪ್ರಾಂತದಲ್ಲಿ ಕೃಷಿ ಭೂಮಿಯನ್ನು ಹುಡುಕುತ್ತ ನಾಶ ಆಗದ ಹೋಗಬೇಕಾಯಿತು. ಈ ಜನರ ಬದ್ದಪ್ಪನೇ ಅಂಟಿಕೊಂಡು ಕಾಡದ ಸ್ಥಿತಿ ವಿವರ ಆಗಿದ್ದರೂ ಇವರಲ್ಲಿ ಕೆಲವರು ತಮ್ಮ ಮನೆ ಮಾರುಗಳನ್ನು ತ್ಯಾಗಮಾಡಿ ಶಹರಗಳಿಗೆ ಹೋಗುತ್ತಿದ್ದಾರೆ. ಇನ್ನು ಕೆಲ ಮನೆತನಗಳು ಹಿಂದಿರುಗುವದೇ ಬಯಸಿದೆ. ಆ ಮನೆತನದವರು ಉದ್ಯೋಗಗಳನ್ನು ಹುಡುಕುತ್ತಿದ್ದರೂ ಏನೂ ಸಿಕ್ಕಲೊಲ್ಲದು.

೧೬೦ ಮನೆತನಗಳ ಸಮಸ್ಯೆ ಮಹತ್ವದ್ದಿದ್ದರೂ ಇತರ ನಿರಾಶ್ರಿತರಾದವರ ಪ್ರಶ್ನೆ ಮುಖ್ಯವಾದುದಾಗಿದೆ. ಅವರಿಗೆ ಬೇಕಾದ ಸಾಧನವೇ ಇಲ್ಲದಾಗಿದೆ. ಒತ್ತಾಯದಿಂದ ಕಾಲ ಕಳೆಯುವ ಮನೆತನದ ದೊಡ್ಡದು ವರದಿ ಬಂದಿದೆ. ಕೆಲವು ಮನೆತನಗಳು ಬೇಸರದಿಂದ ಕಷ್ಟ ಪಡುತ್ತಿವೆ. ಈ ನಿರಾಶ್ರಿತ ಮನೆತನದವರ ಸ್ಥಿತಿಯು ಹೃದಯದ್ರಾವಕವಿದೆ.

ಕಷ್ಟಮಯ ಪರಿಸ್ಥಿತಿಯು ಎಲ್ಲ ಕಡೆಗೂ ಇದ್ದು ದಾರವಾಡ ಹೊರೂರ ಭಾಗದಲ್ಲಿ ಅದು ವಿಶೇಷವಾಗಿತ್ತು. ಈ ಭಾಗವು ಮಳೆಗಾಲದಲ್ಲಿ ತುಂಬ ಹರಿಯುವ ಹೊಳೆ-ಹಳ್ಳಗಳಿಂದ ಇತರ ಪ್ರದೇಶದಿಂದ ಕಡಿದ ಹೋದಂತಾಗಿದೆ. ಒಕ್ಕಲಿಗರಿಗೆ ಪಟ್ಟಣದಿಂದ ಸಹಾಯಕ್ಕಿಯನ್ನು ಒಯ್ಯುವದಕ್ಕೂ ಕಷ್ಟವಾಗಿದೆ. ಈ ಎಲ್ಲ ಮನೆತನದವರಿಗೆ ಅವರು ತಮ್ಮ ಹೊಟ್ಟೆಯನ್ನು ತಾವು ತುಂಬಿಕೊಳ್ಳಲಿಕ್ಕೆ ಶಕ್ತರಾಗುವವರೆಗೆ ಸಹಾಯವನ್ನು ಕೊಡುವದು ಅವಶ್ಯವಿದೆ. ಹಾಗೂ ಅವರಿಗೆ ತಾತ್ಕಾಲಿಕ ನಿವಾಸ ವ್ಯವಸ್ಥೆಯನ್ನು ಮಾಡಬೇಕಾಗಿದೆ.

ಬನ್ನೂರ.

ಇದೊಂದು ನಮ್ಮ ಒಡನಾಡಿಗಳ ನಿರಾಶ್ರಿತತೆಯ ಕಷ್ಟಮಯ ಸ್ಥಿತಿಯ ವರ್ಣನಾರಹಿತವಾದ ಯಥಾರ್ಥ ಚಿತ್ರವಿದೆ. ಹಿಂದೊಮ್ಮೆ ಧನಿಕರೂ ಬೆಳ್ಳಗೆ ಪಡೆದವರೂ ಆದ ಎಷ್ಟೋ ಜನರು ಇಂದು ಅಸ್ಥಿರವಾದ ಆರ್ಥಿಕ ಸ್ಥಿತಿಯೊಡನೆ ಹೊಟ್ಟೆಗಾಗಿ ಹೋರಾಡುವ ಹಾಗಾಗಿದೆ. ಹಿಂದೊಮ್ಮೆ ಸ್ವತಂತ್ರರಾಗಿ ಬದುಕುತ್ತಿದ್ದವರೂ ಅದೇ ಅನೇಕ ರೈತರು ಹೊಲ-ಮನೆಗಳನ್ನು ಕಳೆದುಕೊಂಡು ಬಿಕ್ಕಿದ ಆಲಸ್ಯದಲ್ಲಿ ಕಾಲಕಳೆಯ ಬೇಕಾಗಿದೆ. ತಂದೆ-ತಾಯಿಗಳಿಗೆ ತಮ್ಮ ಮಕ್ಕಳು ಕಂಡು ಕಾತರತೆಗಳನ್ನು ಹೋಗಲಾಡಿಸುವದರಿಂದ ವಿವಶರಾಗಿ, ಕಾರಾಗಾರಗಳಲ್ಲಿ ದನ ಬಿಟ್ಟ ಪ್ರವಚನರು ತಮ್ಮ ಹುಡುಗರನ್ನು ಕಂಡೊಯ್ದಿದ್ದಾರೆ. ತಮ್ಮ ಆಯುಷ್ಯದಲ್ಲಿಯ ಸ್ವಾಭಾವಿಕವಾದ ಹವ್ಯಾಸಗಳಿಗೆ ಇವರು ಮರಳಿ ಬರಬೇಕಾದರೆ ಈ ಎಲ್ಲ ಮನೆತನದವರಿಗೂ ಯೋಗ್ಯವಾದ ಸಹಾಯದಾರಿಕೆ ಬೇಕು.

ಕಷ್ಟಕ್ಕೀಡಾದ ಜನರನ್ನು ನೋಡಲಿದ್ದ ಸ್ಥಿತಿಗತಿಯವರಂದರ ಕಷ್ಟಕ್ಕಂತ ಆಶಕ್ಯವೇ. ಹೀಗೆಂದರೆ ಇವು ಬಿಕ್ಕಟ್ಟಿನ ಜಾಗಾಯಿಗಳ ಕೆಲಸ. ಸಮಿತಿಯವರು ಜಾಗ ವಹಿಸಿದರ ನಿರಾಶ್ರಿತ ರೈತರಿಗೆ ತಮ್ಮ ಪ್ರದೇಶದ ತಮ್ಮ ಪ್ರಪಂಚವನ್ನು ಸಾಗಿಸಿಕೊಳ್ಳುವಂತೆ ಏನಾದರೂ ವ್ಯವಸ್ಥೆ ಮಾಡಿಕೊಡುವ ಮನಃಪೂರ್ವಕದ ಪ್ರಯತ್ನ ಎಂದರೆ ಈ ವರ್ಷದ ಬೆಳೆಯು ಅವರ ಕೈಸೇರುವವರೆಗೆ ಅವಶ್ಯವಿದ್ದಲ್ಲಿ ಅನ್ನ ವಸ್ತ್ರದ ಸಹಾಯ, ಕೆಲವರಿಗೆ ಆರೋಗ್ಯದ ಮಾರ್ಗನ್ನು ಬೋಧಿಸುವದು ಬೇರೆ ಕೆಲವರಿಗೆ ದನಗಳನ್ನು ಬೀಜವನ್ನು ಪೂರೈಸುವದು, ಸರ್ವಸ್ವವನ್ನು ಕಳೆದುಕೊಂಡು ದುಡಿದ ಹಾಕುವವರೂ ಇಲ್ಲದೆ ಇನ್ನು ದುಡಿಯುವವರಿಗೆ ಯೋಗ್ಯ ಹಾಕುವದು, ಇತ್ಯಾದಿ. ಇದಕ್ಕೆಲ್ಲ ರೊಕ್ಕ ಬೇಕು. ಅದೂ ಯೋಗ್ಯವಾದ ಪ್ರಮಾಣದಲ್ಲಿ ಬೇಕು. ದಾನ ಲಕ್ಷ್ಯಗಳಿಂತ ಕಡಿಮೆ ಇಲ್ಲ.

ಇದು ಕಾರ್ಯಕರ್ತರಾದ ಉಜ್ವಲವಾದ ಉತ್ಸಾಹದ ಮುಖ್ಯಸ್ಥನ ಕಳವಳ ಈ ಬಾರಿ ಬೂಡ ಬೆಂಬಲದಲ್ಲಿ ಸಂದೇಹವಿಲ್ಲ. ಆದರೂ ಕರ್ನಾಟಕವೇ ಇದನ್ನು ಹೊರಬೇಕಾಗಿದೆ. ಇಂತಹ ಹೊತ್ತಿನಲ್ಲಿ ಮುಂದೆ ಬಂದು ವ್ಯಕ್ತಿಯಿಲ್ಲದವರಿಗೆ ಒಟ್ಟಿಯನ್ನು ಬಿಟ್ಟಿರುವ ಗಣನಿಯನ್ನು ಹೊಂದುವರಿಗೆ ಬಾಳ್ವೆಯನ್ನು, ಅನ್ನ ಇಲ್ಲದವರಿಗೆ ಸಹಾಯವನ್ನೂ ಒದಗಿಸುವದು ಪ್ರತಿಯೊಬ್ಬ ಕರ್ನಾಟಕಸ್ಥನ ಪವಿತ್ರವಾದ ಕರ್ತವ್ಯಕರ್ಮವಾಗಿದೆ. ಮೊನ್ನೆ ಮೊನ್ನೆ ಕರ್ನಾಟಕಸ್ಥರು ಹಿಂದುಳಿದ ಪರಿಜನ ಬಾಂಧವರ ಕಾರ್ಯಕ್ಕೆ ಮುಕ್ತಹಸ್ತದಿಂದ ಸಹಾಯ ಮಾಡಿದ್ದಾರೆ, ಭೂಕಂಪದಿಂದ ಬಳಲುವ ಬಿಹಾರ ಜನರ ಮೊರೆಯನ್ನು ಕೇಳಿದ್ದಾರೆ, ಎಂದ ಬಳಿಕ ತಮ್ಮ ಮನೆಯವರಾದ ನಿರಾಶ್ರಿತರಾದ ಒಡನಾಡಿಗಳ ಕೂಗನ್ನು ಕೇಳಲಾರರೇ? ಕರ್ನಾಟಕವು ತನ್ನ ಕರ್ತವ್ಯವನ್ನು ತಾನು ಮಾಡಿತೆಂದರೆ ನೆರವೊರೆಯುವರು ದಾನಶೂರ ಸ್ವಭಾವದಿಂದ ಮುಂದುವರಿಯದಿರುವರೇ?

ಉತ್ತರ ಕನ್ನಡ ಜಿಲ್ಲೆಯ ಬಡ ಅನಾಥರಾದ ರೈತರ ಕರೆಯು ಪ್ರತಿಯೊಬ್ಬ ಸ್ತ್ರೀ-ಪುರುಷನ ಹೃದಯಕ್ಕೆ ತಾಗುವದೆಂದು ಸಮಿತಿಗೆ ನಂಬಿಗೆಯುಂಟು. ನಾವು ವಿಲಾಸದಲ್ಲಿ ಎಷ್ಟೋ ವೆಚ್ಚ ಮಾಡುತ್ತೇವೆ. ಕಿಸೆಯಲ್ಲಿ ಕೈಹಾಕಿದೊಡನೆ ಕಾರವಾರದ ನಮ್ಮ ಬಡರೈತರನ್ನು ಜ್ಞಾಪಕಕ್ಕೆ ತರುವಾದ ಹಿತರಿಗಾಗಿ ಒಂದೊಂದು ಪೈಯನ್ನು ಕೂಡಿಹಾಕುವಾ. ರೈತರ ಸಹಾಯಕ್ಕಾಗಿ ಕೊಟ್ಟ ಪ್ರತಿಯೊಂದು ಪೈಯೂ ಉತ್ಕೃಷ್ಟವಾದ ಪ್ರಾಣದಯಾ ಕಾರ್ಯಕ್ಕೆ ಸಲ್ಲುತ್ತದೆ. ಕಷ್ಟನಿವಾರಕ ಸಮಿತಿಯು ಈ ಉದಾರ ಕಾರ್ಯದಲ್ಲಿ ಎಲ್ಲ ವರ್ಗದ ಎಲ್ಲ ಜಾತಿಯ ಐಕ್ಯವನ್ನು ಕೋರುತ್ತದೆ. ಸುಶಿಕ್ಷಿತರಾದ ಶಾಂತವೀರರದು ಬವಣೆ ಸೌಮ್ಯ ಮಾಡುವದರಲ್ಲಿ ಸಮಿತಿಗೆ ಯಶಸ್ಸು ಸಿಗುವದೆಂದು ನಂಬಿಗೆಯಿದೆ.

ಮಾರುವದಿದೆ!

ಕುಮಟಾ ಕಸಬಯೊಳಗಿನ ಒಳ್ಳೇ ಸ್ಥಳದಲ್ಲಿರುವ ಮನೆ ಕಂಪೌಂಡ ಸಹಿತ ಮಾರಬೇಕಾದದ್ದಿದೆ. ಮನೆ ಹಿತ್ತಲ ಅರ್ಧ ಎಕ್ರೆ ಇರುತ್ತದೆ. ಮನೆ ಇಮಾರತು ಭವ್ಯವಾದದ್ದಿರುತ್ತದೆ. ಅಪೇಕ್ಷಿಸ ಇದ್ದವರು ಬಾಕಿ ವಿವರಗಳ ಬಗ್ಗೆ ಈ ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳತಕ್ಕದ್ದು.

ಕುಮಟ ೨೯-೭-೩೫	X c/o M P DIVGI, LLB PLEADER, KUMTA

ವಿಜಯನಗರಂ ಡಾ॥ ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಮತ್ತು ಸ್ಪ್ಲೀನ್ ಔಷಧಗಳು.

ಒಬ್ಬ ಪ್ರಸಿದ್ಧ ಡಾಕ್ಟರರ ಅಭಿಪ್ರಾಯ —

"ಕಳೆದ ಹತ್ತು ವರ್ಷಗಳ ವೈದ್ಯಕೀಯ ಅನುಭವದ ಆಧಿಕಾರ ದಾನೆಯಿಂದ ಹೇಳುವದೇನಂದರೆ — ಶಿರೋಮಣಿ ಪ್ರವೀಣ ಡಾ॥ ಜಮ್ಮಿಯವರ ಲಿವರ ರೋಗದ ನಿವಾರಕ ಔಷಧಿಯು ಅತ್ಯಂತ ಫಲದಾಯಕವಾದುದು. ಇದರ ಪ್ರಚಾರದಿಂದ ಮಕ್ಕಳ ಮೃತ್ಯು ಸಂಖ್ಯೆಯು ೧೦೦ಕ್ಕೆ ೯೦ರಂತೆ ಕಡಿಮೆಯಾಗಿದೆ!"

(ರುಜು) ಡಾ। ಟಿ. ಕೆ. ನಟೇಶನ್,

— ಮಕ್ಕಳ ಭಯಂಕರವಾದ ಲಿವರ್ ರೋಗವನ್ನು ನಿವಾರಿಸಿ ಆರೋಗ್ಯವಂತರನ್ನಾಗಿಯೂ, ಆನಂದಭರಿತರನ್ನಾಗಿಯೂ ಮಾಡುವದು. ಅಂಗಡಿಗಳಲ್ಲಿ ದೊರಕುವ ಬೇರೆ ಮದ್ದುಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ!

ಜಮ್ಮಿ ವೆಂಕಟರಮಣಯ್ಯ. ಮೈಲಾಪುರ, ಮದ್ರಾಸ.

ಸೋಲ ಏಜಂಟ —

ಡಿ. ಎನ್. ಕೋಳಿವಾಡಕರ್, ಕುಮಟಾ. (ಉ ಕ)

ಈಗಿನ ಪ್ರಪಂಚ.

ಅಮೇರಿಕೆಯವರ ಖಾದಿ ಭಕ್ತಿ!

ರೂಜುವೆಲ್ಟರವರು ಈ ಜಗತ್ತಿನಲ್ಲಿ ಪ್ರಸಿದ್ಧ ರಿದ್ದಾರೆ. ಅಮೇರಿಕಾ ರಾಷ್ಟ್ರದ ಸರ್ವಾಧಿಕಾರಿ ಅಧ್ಯಕ್ಷರಿವರು ಇವರು ಸ್ವತಃ ಕೋಟ್ಯಾಧೀಶರು. ಜಗತ್ತಿನೊಳಗಿನ ವ್ಯವಸ್ಥೆಯನ್ನು ಪುನರ್ಘಟಿಸಿ ಬಡವರ ತಕ್ಕ ರಾಷ್ಟ್ರಗಳಿಗೆ ಹಿತವಾಗುವಂತೆ ಏರ್ಪಾಟ ಮಾಡಲು ಇವರು ಹವಣಿಸುತ್ತಿದ್ದಾರೆ. ಇಂಥ ಜಗತ್ಪ್ರಸಿದ್ಧ ಪುರುಷರ ಪಯೋವೃದ್ಧ ಮಾತೋಶ್ರೀಯವರು ಸದ್ಯಕ್ಕೆ ಇಂಗ್ಲಂಡ, ಸ್ಕಾಟಲಂಡ, ಫ್ರಾನ್ಸ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಪ್ಯಾರೀಸದಲ್ಲಿದ್ದಾಗ ಒಬ್ಬ ಪತ್ರಿಕೆಕಾರರ ಬಳಿ ಅವರು ನುಡಿದದ್ದೇನಂದರೆ "ಪುರಾತನ ಕಾಲದ ಸ್ತ್ರೀಯರಂತೆ ನೂಲಬೇಕು, ನೇಯಬೇಕು, ಎಂದು ನನಗನಿಸುತ್ತದೆ. ಇಂಗ್ಲಂಡಕ್ಕೆ ಹೋದಾಗ ನಾನೊಂದು ಕ್ರ್ಯಾಟ ಕೊಂಡ ನೂಲಗಲಿಸ ಪ್ರವಾಸ ಮಾಡಿದ, ಸೆಪ್ಟಂಬರ ತಿಂಗಳಲ್ಲಿ ನೂಲುವದೆಂದು. ಪುರಾತನ ಕಲ ಸ್ತ್ರೀಯರು ತಮ್ಮ ಕೈಗಳನ್ನು ಯಾವಾಗಲೂ ಹೆಚ್ಚಾಗಿ ಉಪಯೋಗಿಸಬೇಕು ಕೈಯಿಂದ ಹೊಲಿಯಬೇಕು, ಕಲಸ ಮಾಡಬೇಕು. ಅವರ ಕೈಗಳು ಉದ್ಯೋಗದಲ್ಲಿದ್ದರೆ ಅವರಿಗೆ ಸಿಗರೇಟು ಸೇದುವ ವ್ಯಸನ ಹತ್ತದ. ಅವರ ಮಾನಸಿಕ ಶಕ್ತಿ ಬೆಳೆಯುವದು ಯಾಕಂದರೆ ಕೈಗಳು ಉದ್ಯೋಗದಲ್ಲಿ ತೊಡಗಿರುವಾಗ ಮನಸ್ಸಾದರೂ ಉದ್ಯೋಗದಲ್ಲಿ ತೊಡಗಿರುತ್ತದೆ. ಇಂಗ್ಲಂಡದಲ್ಲಿ ಕೈನೂಲಿನ, ಕೈನೆಯ್ಗೆಯ ಕೆಲ ಕಂಬಳಿಗಳನ್ನು ನಾನು ನೋಡಿದೆ, ಅವು ಬಹು ಸೊಗಸಾಗಿದ್ದವು. ಈಗ ಇಂಥ ಕಂಬಳಿಗಳನ್ನು ಮಾಡಬೇಕೆಂದು ನನಗೆ ಹವ್ಯಾಸವುಂಟಾಗಿದೆ" ಅಧ್ಯಕ್ಷರಾದ ರೂಝವೆಲ್ಟರವರ ಮಾತೋಶ್ರೀಯವರಾದ ಮಿಸೆಸ್ ಸಾರಾ ಡಿಲೆನೋ ರೂಝವೆಲ್ಟರವರು ನುಡಿದ ವಚನಗಳನ್ನು ಅನುಭವಿಗಳನ್ನು ಸಮಸ್ತ ಸ್ತ್ರೀಯರು ಲಕ್ಷದಲ್ಲಿಟ್ಟು ಸುಧಾರಿಸಿದರೆ ಹಿಂದುಸ್ಥಾನದಲ್ಲಿ ಬೇರೂರಿಕೊಂಡ ದಾರಿದ್ರ್ಯವು ಬಹುಮಟ್ಟಿಗೆ ದೂರವಾಗುವದು. ಮಹಾತ್ಮರಿಗೆ ಖಾದಿಯ ಮರುಳು ಹತ್ತಿದೆಂದು ಉಪಹಾಸ್ಯ ಮಾಡುವವರು ಈ ವಾರ್ತೆಯನ್ನು ದೀರ್ಘವಾಗಿ ಆಲೋಚಿಸಿ ಸ್ವಕಲ್ಯಾಣ ಸಾಧಿಸಿಕೊಳ್ಳತಕ್ಕದ್ದು.

ಮಹಾತ್ಮರ ಉಪೋಷಣ ವ್ರತದ ಕಥೆ

ಮಹಾತ್ಮರು ಹರಿಜನೋದ್ಧಾರದ ಕಾರ್ಯಕ್ರಮ ಮುಗಿಸಿ ವರ್ಧೆಯೊಳಗಿನ ಸತ್ಯಾಗ್ರಹಾಶ್ರಮದಲ್ಲಿ ಪುರಸ್ಕರಿಸಿದ—ಉಪೋಷಣ ವ್ರತವು—ಜಗದೀಶನ ಕೃಪೆಯಿಂದ ಪಾರಗಂಡಿದ್ದು ಮಹಾತ್ಮರು ಕ್ಷೇಮದಿಂದ ಪಾರಾಗಿದ್ದಾರೆ. ಮಹಾತ್ಮರು ಮಾಡಿದ ಒಂದು ಸಪ್ತಾಹದ ಉಪೋಷಣದ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಕೊಳ್ಳುವದುಚಿತ. ಮಂಗಳವಾರ ತಾ ೭ನೇಗೆ ಮಹಾತ್ಮರು ೪ ಪಂಟೆಗೆ ಎದ್ದು ಆಶ್ರಮ-ಭಜನಾವಳಿಯೊಳಗಿನ ಪದ್ಯಗಳನ್ನು ಹಾಡಿ ಮೊಟ್ಟಮೊದಲು ಈಶ ಪ್ರಾರ್ಥನ ಮಾಡಿದರು. ಆ ಮೇಲೆ ಶ್ರೀಯುತ ಮಹಾದೇವ ದೇಸಾಯಿಯವರು ಗೀತೆಯೊಳಗಿನ ಕೆಲ ಶ್ಲೋಕಗಳನ್ನು ಹಾಡಿದರು. ಮಹಾತ್ಮರು ಕೆಲ ಹೊತ್ತು ಮಾತನಾಡಿ ೬ ವರೆ ಘಂಟೆಗೆ ಜೇನು ತುಪ್ಪ, ಹಣ್ಣು-ಹಂಪಲಗಳ ರಸ, ಆಡಿನ ಹಾಲು ಕೊಂಡರು. ಪುನಃ ಸುತ್ತು ಸರಿಯಾಗಿ ೭ ಘಂಟೆಗೆ ಉಪೋಷಣಕ್ಕೆ ಪ್ರಾರಂಭಿಸಿದ ಸಂಗತಿ ಈ ಹಿಂದೆಯೇ ಪ್ರಕಟವಾಗಿದೆ. ಅದೇ ದಿನ ಬೆಳಗಿನ ೯ ಘಂಟೆಗೆ ಡಾ ಖರೆ, ಶಿರ್ಲೇಕರ ಹಾಗು ಸಿವಿಲ್ ಸರ್ಜನರಾದ ಸಹಾನಿಯವರು ಮಹಾತ್ಮರ ತಪಾಸ ಮಾಡಿದರು. ಆ ಕಾಲಕ್ಕೆ ಮಹಾತ್ಮರ ನಾಡಿಯ ಒಡೆತ ನಿಮಿಷಕ್ಕೆ ೬೦ ಇತ್ತು, ಉಷ್ಣತೆಯು ೯೭ ಡಿಗ್ರಿ ಇತ್ತು. ಹೃದಯದ ಬಡಿತವು ಸ್ಪಷ್ಟವಾಗಿ ಕೇಳುತ್ತಿದ್ದಿಲ್ಲ. ಈ ರೋಗದ ತಡೆಯುವಿಕೆಗೆ ಸಾಧ್ಯ ಅವರಿಗೆ ಹೇಳಿದ್ದು ಅವರು ಬಂಜರಿಯುವದಸಾಧ್ಯವೆಂದರು. ಗಾಂಧಿಜಿಯವರ ಮನಃಶಕ್ತಿ ಪ್ರಬಲವಾದದ್ದು. ಅವರ್ದ ಪ್ರೊದಗಲಕ್ಕಿಲ್ಲವಾಗಿ ನಮ್ಮ ಸಂಚಿಗೆ ಮಹಾತ್ಮರಿಗೆ ಕಾಯಿಕ ಮಾನಸಿಕ ಸಂಪೂರ್ಣ ವಿಶ್ರಾಂತಿ ಬೇಕು" ಹೀಗೆ ಡಾಕ್ಟರರು ಅಭಿಪ್ರಾಯಪಟ್ಟರು. ಆದಾಗ್ಯೂ, ಮಹಾತ್ಮರು ಪತ್ರ ಬರೆಯುತ್ತಿದ್ದರು, ಓದುತ್ತಿದ್ದರು. ಕಾಕಾ ಕಾಲೇಲಕರರವರು ರಾಮಾಯಣ ಓದಿ ಹೇಳುತ್ತಿದ್ದರು. ಮಹಾತ್ಮರು ಅದನ್ನು ಮನಃಪೂರ್ವಕವಾಗಿ ಕೇಳುತ್ತಿದ್ದರು. ಮಹಾತ್ಮರು ಸಮಾಜಸತ್ತಾವಾದದ ಪುಸ್ತಕವನ್ನು ಓದಿಕೊಂಡು ಆ ವಾದದ ತತ್ವ ತಿಳಿಕೊಳ್ಳಲೆತ್ನಿಸಿದರು. ಮಂಗಳವಾರ ಮಹಾತ್ಮರಿಗೆ ಒಳ್ಳೇ ನಿದ್ರೆ ಬಿತ್ತು. ಅವರ ಹೃದಯದ ಬಡಿತವು ಒಳ್ಳೇ ಸುಧಾರಿಸಿತು. ಮಾರನೇ ದಿನ ಡಾಕ್ಟರರು ಪುನಃ ತಪಾಸ ಮಾಡಿದರು. ನಾಗಪುರದಿಂದ ಡಾ॥ ಒರೇಯವರು ಇಲ್ಲಿಗೊಂದು ಪ್ರಾಣವಾಯುವಿನ ಬಟ್ಲಿಯೊಂದನ್ನು ತಂದಿಟ್ಟುಕೊಂಡಿದ್ದರು. ವಿಶ್ರಾಂತಿ ಪಡೆಯಬೇಕೆಂದು ಡಾಕ್ಟರರು ಹೇಳುತ್ತಿದ್ದಾಗ್ಯೂ ಮಹಾತ್ಮರು ಸ್ವತಃ ನಡಕೊಂಡು ಬಚ್ಚಲಿಗೆ ಹೋಗಿ ತಮ್ಮ ಕೆಲಸ ಮುಗಿಸಿಕೊಳ್ಳುತ್ತಿದ್ದರು. ಮುಂಜಾನೆ ಸಂಜೆ ತಮ್ಮ ಒಳಯಲ್ಲಿಯೇ ಪ್ರಾರ್ಥನ ನಡೆಯುತ್ತಿರಬೇಕಾಗಿ ಅವರು ಅಗ್ರಹ ಮಾಡಿದ ಮೇರೆಗೆ ಅವರ ಬಳಿ ಪ್ರಾರ್ಥನೆ ನಡೆಯುತ್ತಿತ್ತು. ಗುರುವಾರ ಮಹಾತ್ಮರ ಪ್ರಕೃತಿಯನ್ನು ಡಾಕ್ಟರರು ತಪಾಸ ಮಾಡಿದರು. ಹಾಲಬರಿಗೊಳ್ಳುವ ಕಾರಣವಿಲ್ಲೆಂದೂ, ಉಪೋಷಣ ವ್ರತದೊಳಗಿಂದ ಅವರು ಸುರಕ್ಷಿತ ಪಾರಾಗುವರೆಂದೂ ಡಾಕ್ಟರರು ಅಭಿಪ್ರಾಯಪಟ್ಟರು. ಒಮ್ಮೆ ಅವರು ಕಾಂದರು, ಆದರೆ, ಅದರಿಂದ ಅವರಿಗೆ ಅಶಕ್ತಿಯಾಗಲಿಲ್ಲ. ಯಾವಾಗಲೂ ನಗುತ್ತಿದ್ದರು. ಶುಕ್ರವಾರ ಉಪವಾಸದ ೪ನೇ ದಿನ. ಆ ದಿನ ಮಹಾತ್ಮರ ಪ್ರಕೃತಿಯಲ್ಲಿ ವಿಶೇಷ ಹೆಚ್ಚು-ಕಡಿಮೆಯಾಗಬಹುದೆಂದು ಡಾಕ್ಟರರು ಚಿಂತಾತುರರಾಗಿದ್ದರು. ಆ ದಿನ ಮಹಾತ್ಮರ ಪ್ರಕೃತಿ ಕೆಡಲಿಲ್ಲ. ಮಹಾತ್ಮರು ಓದುತ್ತಿದ್ದರು, ಆದಾಗ್ಯೂ ಹೃದಯ ಚಲನೆಯಲ್ಲಿ ವ್ಯತ್ಯಾಸವಾಗಲಿಲ್ಲ. ಡಾಕ್ಟರರು ಹಾಸಿಗೆ ಬಿಟ್ಟು ಏಳಬಾರದಾಗಿ ಕಟ್ಟಪ್ಪಣೆ ಮಾಡುತ್ತಿದ್ದಾಗ್ಯೂ ಮಹಾತ್ಮರು ಕೇಳುತ್ತಿದ್ದಿಲ್ಲ. ಶನಿವಾರ ಮಹಾತ್ಮರ ಪ್ರಕೃತಿ ಸ್ವಲ್ಪ ಕಳವಳದಂತೆ ಭಾಸವಾಯಿತು. ಮೂತ್ರದಲ್ಲಿ ಎಸಿಟೋನ ಅಂಶ ಹೆಚ್ಚು ಹೋಗ ಹತ್ತಿತು. ಆರಂಭಿಸಿತ್ತು. ಮುಂಬಯಿಯಿಂದ ಡಾ॥ ಜೀವರಾಜ ಮೆಹತಾ ಹಾಗು ಕಲಕತ್ತೆಯಿಂದ ಡಾ॥ ಬಿಧನಚಂದ್ರ ರಾಯ್‌ರವರನ್ನು ಕರಕಳಿಸಬೇಕೆಂದು ಶ್ರೀ॥ ಮಹಾದೇವಭಾಯಿಯವರು ಕೇಳಲು, ಮಹಾತ್ಮರು ಇದು ದೊಡ್ಡತನವೆಂದರು! "ಎಸಟೋನ" ಅಂಶ ನೋಡಿ ಡಾಕ್ಟರರು ಭೀತಿಪ್ರದರ್ಶನ ಮಾಡಲು, "ಭೀತಿಪಡುವ ಕಾರಣವಿಲ್ಲ, ಇದರೊಳಗೆ ನೂತನವಾದದ್ದೇನಿಲ್ಲ, ನನಗೆ ಅಶಕ್ತಿಯುಂಟಾಗಿಲ್ಲ, ನಾನು ಬಾಕಿ ಉಳಿದ ನಿದ್ದೆಯನ್ನಲ್ಲ ಈಗ ನಿವಾರಿ ಮಾಡಿಕೊಳ್ಳುತ್ತಿದ್ದೇನೆ," ಹೀಗೆ ಮಹಾತ್ಮರು ನಗೆಮೊಗದಿಂದ ನುಡಿದರು. ಸೋಮವಾರ ಮಹಾತ್ಮರ ಪ್ರಕೃತಿ ನೋಡಿ ಡಾ॥ ಸಹಾನಿ ಶಿರ್ಲೇಕರರವರು ಬಹು ಆನಂದಪಟ್ಟರು. 'ಎಸಟೋನ' ಅಂಶದ ಪರಿಮಾಣ ಕಡಿಮೆಯಾಗಿತ್ತು. ಡಾಕ್ಟರರ ಕಡೆ ಮಹಾತ್ಮರು ಚೇಷ್ಟೆ ಮಾಡುತ್ತಿದ್ದರು. ರವಿವಾರ



ನಿಮ್ಮ ತಯಾರಿಯಿದೆಯೇ?

ನೆಲಗಡ್ಲೆ ಸಿಪ್ಪೆ ತೆಗೆಯುವ ಹಂಗಾಮು ಈರ ಸಮೀಪಿಸಿ ಬಂದಿದೆ. ಅದರಿಂದ ನೀವು ನಿಮ್ಮ ನೆಲಗಡ್ಲೆ ಯಂತ್ರವನ್ನು ಈಗಲೇ ತರಿಸಿಟ್ಟುಕೊಂಡಲ್ಲಿ ಹಂಗಾಮು ಶುರುವಾದ ಪ್ರಥಮ ದಿವಸದಿಂದಲೇ ಕೆಲಸ ಮಾಡಲಿಕ್ಕೆ ಅನುಕೂಲವಾಗುವದು. ಆದರಿಂದ ನೀವು ಯಾವ ಯಂತ್ರವನ್ನು ಕೊಂಡುಕೊಳ್ಳುವಿರಿ?

ಖಾತ್ರಿಯವಾಗಿ ಎಲ್ಲಕಡೆಯಲ್ಲೂ ಪ್ರಸಿದ್ಧವಾದ

ಕಿರ್ಲೋಸ್ಕರ 'ಕಲ್ಯಾಣ' ನೆಲಗಡ್ಲೆಯಂತ್ರವನ್ನೇ.

ಈ ಯಂತ್ರವು ಸಂಪೂರ್ಣವಾಗಿ ಸುಧಾರಿಸಿದ್ದಿದ್ದು ನಡಿಸಲಿಕ್ಕೆ ಸುಲಭವಿದೆ. ಒಂದವಾಲು ಸಹ ತಪ್ಪು ಮಾಡಾಗಿಲ್ಲ ತುಂಬಾ ಲಾಭ ಆಗುತ್ತದೆ. ವಿವರದ ಬಗ್ಗೆ ಈ ಕೆಳಗಿನ ಪತ್ತೆಗೆ ಬರೆಯಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ.

ಯಂತ್ರ ಸಿಗುವ ಪತ್ತೆ -

ಪೆರಿ ಎಂಡ್ ಕೋ, ಲಿಮಿಟೆಡ್, ಮೌಂಟ ರೋಡ, ಮದ್ರಾಸ.

ಮಹಾತ್ಮರು ೧೩ ತಾಸು ನಿದ್ದೆ ಮಾಡಿದರು. ನೀರು ಕೊಳ್ಳಲು ೪ ಬಾರಿ ಮಾತ್ರ ಮಹಾತ್ಮರು ಎದ್ದಿದ್ದರು. ರವಿವಾರ ಅವರು ೬೦ ಔನ್ಸ ನೀರು ಕುಡಿದರು. ಈ ಉಪವಾಸದಲ್ಲಿ ಅವರು ಇಷ್ಟು ನೀರು ಕೊಂಡದ್ದು ಅಂದೇ. ಮಹಾತ್ಮರ ಪ್ರಕೃತಿ ನೋಡಿ ಎಲ್ಲರಿಗೆ ಸಂತೋಷವಾಯಿತು. ಸೋಮವಾರ ಬೆಳಿಗ್ಗೆ ಮಹಾತ್ಮರು ಅಲ್ಲಿದ್ದ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದ್ದೇನಂದರೆ — "ನಾಳೆ ಉಪೋಷಣ ಪಾರಣದ ಸಮಾರಂಭಕ್ಕೆ ನೀವು ವರ್ತಮಾನಪತ್ರದ ಭೂತ *(Press devils)* ಗಳು ಬರಕೂಡದು!" ಸೋಮವಾರ ಬೆಳಿಗ್ಗೆ ಮಹಾತ್ಮರಿಂದ ಎದ್ದು ಕೂಡಲಾಗಲಿಲ್ಲ. ಮಂಚದ ಮೇಲೆ ಮಲಗಿಕೊಂಡಲ್ಲೇ ಪ್ರಾರ್ಥನೆ ಮಾಡಿದರು. ಸೋಮವಾರ ರಾತ್ರಿ ಮಹಾತ್ಮರಿಗೆ ಬಹು ಕಷ್ಟವಾಯಿತು. ಆಗಿಂದಾಗ ಮಹಾತ್ಮರಿಗೆ ವಾಕರಿಕೆಯು ಬರುತ್ತಿತ್ತು. ಮಹಾತ್ಮರು ಬಹಳ ಅಶಕ್ತರಾದರು. ಅವರಿಂದ ಮಾತಾಡಲಾಗಲಿಲ್ಲ. ರಕ್ತ ಪರೀಕ್ಷಣದ ಒತ್ತಡ ೧೪೦ಕ್ಕೆ ಏರಿತು. ಅದರಿಂದ [illegible] ಚಿಂತೆ ತಲೆದೋರಿತು. ಮಹಾತ್ಮರ ಧರ್ಮಪತ್ನಿಯರಾದ ಸೌ। ಕಸ್ತೂರಬಾಯಿಯವರು [illegible] ಉಪೋಷಣ ಪ್ರಾರಂಭದಿಂದ ಅವರ [illegible] ಉಪೋಷಣವೇ! ಹಣ್ಣು ಹಂಪಲಗಳನ್ನು ತಿಂದು ದಿನಗಳೆದರು. ಯಾವಾಗಲೂ ಅವರ ಪಕ್ಕದಲ್ಲೇ [illegible] ಶುಶ್ರೂಷೆ ಮಾಡುತ್ತಿದ್ದರು. ಸೋಮವಾರ ರಾತ್ರಿ [illegible] ಮಂಗಳವಾರ ಬೆಳಗಾಯಿತು. ಮಹಾತ್ಮರ ಉಪೋಷಣದ ಅವಧಿ ತೀರಿತೆಂದು ಎಲ್ಲರಿಗೂ ಆನಂದವೇ ಆನಂದ.

ಕಳೆದ ಬುಧವಾರ ಮಧ್ಯ ನ್ಯಾಯವಿಧಾಯಕ ಸಭೆಯಲ್ಲಿ ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳ ಭಾಷಣವಾಯಿತು ಈ ಭಾಷಣದಲ್ಲಿ ವಿಲಿಂಗಡನ್ ದೊರೆಗಳು ರಾಜ್ಯಸುಧಾರಣೆಯ ಸೂಚನೆ ಕೊಡುವರೆಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಹೊಸದೇನಿಲ್ಲ ಇಂಗ್ಲಂಡದಿಂದ ದೊರೆಗಳು ಮರಳಿ ಒಂದ ೧೦-೧೨ ದಿನಗಳಲ್ಲಿಯೇ ಈ ಭಾಷಣವಾಗುವದಿದ್ದದರಿಂದ ಆಶಾವಾದಿಗಳು ಬಹಳ ಆಶೆ ಮಾಡಿದ್ದರು. ರಾಜ್ಯ ಸುಧಾರಣೆಯ ಯಾವದೇ ಸುದ್ದಿ-ಸುಳಿವು ಭಾಷಣದಲ್ಲಿ ಸಿಗಲಿಲ್ಲ; ಔಪಚಾರಿಕ ಮಾತು-ಕತೆಯನ್ನೇ ನಡೆಯಿತು ಸರ್ವಾಧಿಪತಿಗಳು ನುಡಿದದ್ದೇನಂದರೆ:— ಕಳೆದ ೪ ವರ್ಷಗಳಲ್ಲಿ ಬೇರೆ ಬೇರೆ ಕಾಯಿದೆಗಳನ್ನೇರ್ಪಡಿಸಿಕೊಳ್ಳಲು ಸಭಾಸದರು ನೆರವಾದರು, ಅಧ್ಯಕ್ಷರು ಸಹಾಯ ಮಾಡಿದರು, ಇದಕ್ಕಾಗಿ ಅವರೆಲ್ಲರಿಗೆ ನಾನು ಅಭಿನಂದಿಸುತ್ತೇನೆ. ವಿದೇಶಗಳೊಡನೆ ನಮ್ಮ ವ್ಯವಹಾರ ಗೆಳೆತನದ್ದಿದೆ. ಲಿಂಕಶಾಯರದ ವರ್ತಕರೊಡನೆ ವ್ಯಾಪಾರಿ ತಹನಾಮೆ ಮಾಡಿಕೊಂಡು ಬ್ರಿಟಿಶ-ಹಿಂದುಸ್ಥಾನ ದೇಶಗಳೊಡನೆ ಸ್ನೇಹಭಾವ ಅಭಿವೃದ್ಧಿಗೊಳಿಸಲು ಪ್ರಯತ್ನವಾಗಿದೆ ಇದರಂತೆಯೇ ಇನ್ನು ಬೇರೆ ಬೇರೆ ರಾಷ್ಟ್ರಗಳೊಡನೆ ತಹನಾಮೆಯಾಗುವದವಶ್ಯ ವ್ಯಾಪಾರ ಬೆಳೆಸುವದಕ್ಕಾಗಿ ಪರದೇಶಗಳಲ್ಲಿ ಟ್ರೇಡ ಕಮಿಶನರರ ನೇಮಣೂಕಾಗುವದು. ಚಕ್ರವರ್ತಿ ಪಂಚಮ ಜೋರ್ಜರ ರೌಪ್ಯ ಮಹೋತ್ಸವಕ್ಕಾಗಿ ನನಗ ನಿಮಂತ್ರಣ ಬಂದಿದೆ, ಹಿಂದುಸ್ಥಾನ ಸರಕಾರದ ಪರವಾಗಿ ಪ್ರತಿನಿಧಿಗಳನ್ನು ಕಳಿಸಬೇಕು; ಸಂಸ್ಥಾನಿಕರೂ, ಪ್ರಜೆಗಳೂ ಉತ್ಸವ ಕಾರ್ಯಕ್ರಮವನ್ನು ರಾಜನಿಷ್ಠೆಯಿಂದ ಪಾರಗಾಣಿಸಬೇಕು. ಸತ್ಯಾಗ್ರಹಕ್ಕೀಗ ತಡೆಬಿದ್ದಿದೆ. ಜನರಲ್ಲಿ ಸದ್ಬುದ್ಧಿ ತಲೆದೋರಿದೆ ಅವರು ಸತ್ಯಾಗ್ರಹದ ನಿಷ್ಫಲ ಕಾರ್ಯಕ್ರಮವನ್ನು ತೊರೆಯುವರು, ನೀವು ಪ್ರಜಾಪ್ರತಿನಿಧಿಗಳು; ಲೋಕಮತವನ್ನೇ ನೀವು ಕೌನ್ಸಿಲುಗಳಲ್ಲಿ ಪ್ರತಿಪಾದಿಸುತ್ತೀರಿ ಇಂಗ್ಲಂಡಕ್ಕೆ ಹೋದಾಗ ನಾನು ಪಾರ್ಲಿಮೆಂಟಿನ ಸಭಾಸದರೊಡನೆ ಮಾತನಾಡಿದೆ, ಗಂಡಸರೊಡನೆ-ಹೆಂಗಸರೊಡನೆ ಮಾತನಾಡಿದೆ ಅವರೆಲ್ಲರಿಗೆ ಹಿಂದುಸ್ಥಾನದ್ದೇ ಚಿಂತೆ ಹಿಂದುಸ್ಥಾನದಲ್ಲಿ ರಾಜ್ಯಸುಧಾರಣೆಯಾಗಿ ಕಲ್ಯಾಣವಾಗಬೇಕೆಂದು ಅವರೆಲ್ಲರೂ ಬಯಸುತ್ತಾರೆ ಜ್ವೈಂಟ ಪಾರ್ಲಿಮೆಂಟರಿ ಕಮಿಟಿಯವರು ೨-೩ ತಿಂಗಳು ದುಡಿದು ಹಿಂದುಸ್ಥಾನಕ್ಕಾಗಿ ರಾಜ್ಯಸುಧಾರಣೆಯ ಹೊಸ ಯೋಜನೆ ತಯಾರಿಸುತ್ತಿದ್ದಾರೆ ಅವರು ಪ್ರಾಮಾಣಿಕತನದಿಂದಲೂ, ಹಿಂದುಸ್ಥಾನದ ಕಲ್ಯಾಣೇಚ್ಛೆಯಿಂದಲೂ ಪರಿಶ್ರಮ ಮಾಡುತ್ತಿದ್ದಾರೆಂದು ನಾನು ನಿಮಗೆ ಆಶ್ವಾಸನ ಕೊಡಬಲ್ಲೆ. ಹೊಸ ರಾಜ್ಯಘಟನೆಯ ಕಾನೂನು ಪಾರ್ಲಿಮೆಂಟಿನಲ್ಲಿ ಪಾಸಾಗುವದೇ ತಡ, ರಾಜ್ಯಕರ್ತರ ಸಂಕಲ್ಪದಂತೆ ನಾನು ಅದನ್ನು ಕೂಡಲೆ ಅಮಲಿನಲ್ಲಿ ತರಲು ಪ್ರಯತ್ನಪಡುವೆನು, ಸಾಮ್ರಾಜ್ಯದೊಳಗಿನ ಪ್ರಜಾಜನರೆಲ್ಲರೂ ಒಮ್ಮನಸ್ಸಿನಿಂದ ಸಹಕಾರ ಮಾಡಿ ಪರಸ್ಪರ ಕಲ್ಯಾಣ ಮಾಡಿಕೊಳ್ಳಬೇಕು. ಹೀಗೆ ೧ ಘಂಟೆಯ ತನಕ ಭಾಷಣ ಮಾಡಿದರು.

— ಸೌ|| ಕಮಲಾ ನೆಹರೂರವರ ಪ್ರಕೃತಿ ನೆಟ್ಟಗಿಲ್ಲ, ಪುನಃ ಕೆಟ್ಟಿದೆ ಗುರುವಾರ ಇಡೀ ರಾತ್ರಿ ಸೌ|| ಯವರಿಗೆ ನಿದ್ದೆಹತ್ತಲಿಲ್ಲ.

— ಮಹಾತ್ಮರ ಪ್ರಕೃತಿ ಈಗ ಒಳ್ಳೇ ಸುಧಾರಿಸಿದೆ. ಮಹಾತ್ಮರ ತೂಕ ಈಗ ೧೦೦ ರತ್ತಲಾಗಿದೆ ವರ್ಧಾದಲ್ಲಿ ಕೋಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಹಾಗು ಕೋಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಇದೇ ತಾ. ೮ನೇಗೆ ಸೇರಲಿಕ್ಕಿದೆ.

ಜಾಹೀರ ಪತ್ರ.

ಡಿ|| ಸ್ಕೂ| ಬೋ| ಕಾನಡಾರವರು ಈ ಕೆಳಗೆ ಬರೆದಂತೆ ಶಿಕ್ಷಕಿಯರನ್ನು ಗಂಡು ಹುಡುಗರ ಶಾಲೆಯೊಳಗೆ ನೇಮಿಸಬೇಕೆಂತಾ ಮಾಡಿರುತ್ತಾರೆ. ಈ ಬಗ್ಗೆ ಯಾರಾದರೂ ಅಭಿಪ್ರಾಯ ಕೊಡುವದಿದ್ದರೆ ತಮ್ಮ ಅಭಿಪ್ರಾಯವನ್ನು ನಮ್ಮ ಕಡೆಗೆ ತಾ. ೧೫—೯—೧೯೩೪ರ ಒಳಗಾಗಿ ಕಳುಹಿಸಬೇಕು.

ಶಿಕ್ಷಕಿಯರನ್ನು ಗಂಡು ಹುಡುಗರ ಶಾಲೆಯಲ್ಲಿ ನೇಮಿಸುವ ಬಗ್ಗೆ ಯೋಜನೆ—

(೧) ಗಂಡುಹುಡುಗರ ಶಾಲೆಯಲ್ಲಿ ನಾಪಾಸಿದ್ದ ಶಿಕ್ಷಕಿಯರನ್ನು ನೇಮಿಸಬಾರದು.

(೨) ಗಂಡನು ಶಿಕ್ಷಕನಿದ್ದ ಶಿಕ್ಷಕಿಯರಿಗೆ ಇಬ್ಬರು ಮಾಸ್ತರರಿದ್ದ ಶಾಲೆಗಳಲ್ಲಿ ಅದವಾ ಕ್ಲಾಸುಗಳಲ್ಲಿ ಗಂಡನನ್ನು ಹೆಡ್‌ಮಾಸ್ತರನಂತೆ ಮತ್ತು ಹೆಂಡತಿಯನ್ನು ಅಸಿ|| ಶಿಕ್ಷಕಿಯಂತೆ ನೇಮಿಸಬಹುದು.

(೩) ಒಬ್ಬರೇ ಮಾಸ್ತರರಿದ್ದ ಕ್ಲಾಸುಗಳಿಗೆ ಶಿಕ್ಷಕಿಯನ್ನು ನೇಮಿಸಬಹುದು ಮತ್ತು ಗಂಡನಿಗೆ ಮುಖ್ಯ ಶಾಲೆಯಲ್ಲಿ ನೇಮಿಸಬಹುದು.

(೪) ೪೫ ವರುಷಕ್ಕಿಂತ ಹೆಚ್ಚಿನ ವಯಸ್ಸಾದ ಶಿಕ್ಷಕಿಯರಿಗೆ ಗಂಡು ಹುಡುಗರ ಶಾಲೆಯಲ್ಲಿ ನೇಮಿಸಬಹುದು. ಆದರೆ ಅಂಥವರ ಗಂಡಂದಿರು ಶಿಕ್ಷಕರಿದ್ದರೆ ಅವರಿಗ ಅದೇ ಶಾಲೆಯಲ್ಲಿ ನೇಮಿಸಬೇಕು

(೫) ಗಂಡು ಹುಡುಗರ ಶಾಲೆಯಲ್ಲಿ ಶಿಕ್ಷಕಿಯರಿಗ ಬಿಗಿನ್ ಇಯತ್ತೆ, ೧ನೇ ಇಯತ್ತೆ ಮತ್ತು ೨ನೇ ಇಯತ್ತೆಗಳನ್ನು ಮಾತ್ರ ಕಲಿಸಲಿಕ್ಕೆ ಕೊಡಬೇಕು.

(೬) ಗಂಡ ಇದ್ದ ಶಿಕ್ಷಕಿಯರು ಗಂಡು ಹುಡುಗರ ಶಾಲೆಯಲ್ಲಿ ಕೆಲಸ ಮಾಡಲಿಕ್ಕೆ ಕಬೂಲಿದ್ದರೆ ಅವರ ವಯಸ್ಸು ೪೫ ವರುಷಕ್ಕಿಂತ ಕಡಿಮೆ ಇದ್ದರೆ ಗಂಡು ಹುಡುಗರ ಶಾಲೆಯಲ್ಲಿ ನೇಮಿಸಬಾರದು

(೭) ಶಿಕ್ಷಕಿಯರನ್ನು ಒಬ್ಬರೇ ಮಾಸ್ತರರಿದ್ದ ಶಾಲೆಗೆ ವಯಸ್ಸಿನ ನಿರ್ಬಂಧವಿಲ್ಲದೆ ನೇಮಿಸಬಹುದು. ಆದರೆ ಅವರು ಗಂಡ ಇಲ್ಲದವರಿರಬೇಕು ಇಲ್ಲವೆ ಗಂಡ ಇದ್ದರೆ ಅಂಥ ಶಾಲೆಯಲ್ಲಿ ಕೆಲಸ ಮಾಡಲಿಕ್ಕೆ ಕಬೂಲಿರಬೇಕು

ಕಾರವಾರ, ೩೧-೮-೧೯೩೪

M. D. KARKI,
ಚೆಅರಮನ್,
ಡಿ|| ಸ್ಕೂಲ ಬೋರ್ಡ,
ಕಾನಡಾ.

ಯುದ್ಧ ಯಾರಿಗೂ ಬೇಡ!

[ನಿರೀಕ್ಷಕರು ಬರೆದುದು :]

" ಯುದ್ಧ ಯಾರಿಗೂ ಬೇಡ, ಆದರೆ ಕ್ಷಣಾರ್ಧದಲ್ಲಿ ಯುದ್ಧ ಪ್ರಾರಂಭವಾಗಬಹುದು. ನಾವು ಇಂದೇ ಯುದ್ಧ ತಯಾರಿ ನಡಿಸಬೇಕು, ಈ ಹೊತ್ತೇ ಯುದ್ಧದ ತಯಾರಿ ನಡಿಸಬೇಕು, ನಾಳೆಯಲ್ಲ. ಕಳೆದ ಜುಲೈ ತಿಂಗಳಲ್ಲಿ ಯುದ್ಧವಾಗುವ ಸಂಭವವಿತ್ತು; ತತ್ಪರತೆಯಿಂದ ನಾವು ಸೈನ್ಯ ಕಳುಹಿದೆವು, ಅದರಿಂದ ಯುದ್ಧಕ್ಕೆ ತಡೆಬಿತ್ತು. ಬಾಹುಬಲವಿದ್ದವರೇ ಈಗಿನ ದಿನಮಾನದಲ್ಲಿ ಗೆಲ್ಲುತ್ತಾರೆ, ದುರ್ಬಲರು ಸೋಲುತ್ತಾರೆ. ಯುದ್ಧದ ಕರೆ ಬಂದೊಡನೆ ಇಟಾಲಿಯನರೆಲ್ಲರೂ ಒಂದೇ ರಾಷ್ಟ್ರಪುರುಷನೋಪಾದಿಯಲ್ಲಿ ಅದನ್ನು ಮನ್ನಿಸಿ ಮುಂದಾಗಬೇಕು. ಇಟಾಲಿಯನರೆಲ್ಲರಲ್ಲಿ ಯುದ್ಧ ಪ್ರವೃತ್ತಿಯನ್ನು ಬೆಳಸಬೇಕು " ಈ ಪ್ರಕಾರ ಇಟಾಲಿಯ ಸರ್ವಸತ್ತಾಧಿಕಾರಿಗಳಾದ ಸಿನೊರ ಮುಸೋಲಿನಿಯವರು ಕಳೆದ ತಿಂಗಳ ೨೫ನೇ ತಾರೀಖಿಗೆ ಬೋಲ್ಜನ್‌ದಲ್ಲಿ ಸೇರಿದ ಸೇನಾಪತಿಗಳ ಸಭೆಯಲ್ಲಿ ಉದ್ಗರಿಸಿದಂತಾಗಿ ಪ್ರಕಟವಾಗಿದೆ. ಮುಸೋಲಿನಿಯವರೆಂದರೆ, ಸಾಮಾನ್ಯ ಪುರುಷರಲ್ಲ, ಇಟಾಲಿಯಲ್ಲಂತೂ ಅವರು ಹೇಳಿದ್ದೇ ಪೂರ್ವದಿಶೆ. ಮಧ್ಯ ಯುರೋಪ ಖಂಡದಲ್ಲಿ ರಾಜಕಾರಣ ಸೂತ್ರಗಳನ್ನು ಅವರೇ ನಡಿಸುತ್ತಾರೆ. ಬ್ರಿಟಿಷ-ಫ್ರಾನ್ಸ ಮೊದಲಾದ ರಾಷ್ಟ್ರಗಳು ಮಧ್ಯ ಯುರೋಪ ಖಂಡದೊಳಗಿನ ಶಾಂತಿಪಾಲನದ ಜವಾಬದಾರಿಯನ್ನು ಅವರಿಗೆ ಒಪ್ಪಿಸಿಬಿಟ್ಟಿವೆ. ಆಸ್ಟ್ರಿಯಾ ದೇಶದೊಳಗಿನ ಸರ್ವಸತ್ತಾಧಿಕಾರಿಗಳಾದ ಡಾ|| ಡೊಲ್ಫಸ್‌ರವರ ಕೊಲೆಯಾದಂದಿನಿಂದ ಆಸ್ಟ್ರಿಯಾ ದೇಶದಲ್ಲಿ ಸ್ವಾಸ್ಥ್ಯವಿಲ್ಲ. ಆ ದೇಶದೊಳಗಿನ ಅಧಿಸತ್ತೆಕ್ಕಾಗಿ ಇತ್ತ ಮುಸೋಲಿನಿಯವರೂ, ಅತ್ತ ಹಿಟ್ಲರರೂ ಕಾರಸ್ಥಾನ ಹೂಡಿದ್ದಾರೆ. ಮಹಾಯುದ್ಧ ಒಪ್ಪಂದ ಕಾಲದಲ್ಲಿ ಮಿತ್ರ ರಾಷ್ಟ್ರಗಳು ಆಸ್ಟ್ರಿಯಾ ದೇಶವನ್ನು ಒಡೆದು ತುಂಡು ತುಂಡು ಮಾಡಿದಾಗ್ಯೂ ಆಸ್ಟ್ರಿಯಾ ದೇಶದ ರಾಜಕೀಯ ಮಹತ್ವಕ್ಕೆ ಕುಂದು ಬರಲಿಲ್ಲ. ಯುದ್ಧ ಕಾಲದಲ್ಲಿ ಜರ್ಮನ್ ಪಕ್ಷಪಾತಿಯಾದ ಹೆಪ್ಸಬರ್ಗ ಮನೆತನದ ಅರಸರಿಗೆ ಪದಭ್ರಷ್ಟ ಮಾಡಿತ್ತು. ಪುನಃ ಅದೇ ಮನೆತನದವರಿಗೆ ರಾಜ್ಯಾಧಿಕಾರ ಕೊಡಬೇಕೆಂಬ ಕಾರಸ್ಥಾನಗಳು ನಡೆದಿವೆ. ಮುಸೋಲಿನಿಯವರಿಗಾಗಲಿ, ಫ್ರೆಂಚರಿಗಾಗಲಿ ಇದು ಒಪ್ಪಿಗೆಯಿಲ್ಲ. ಆದರೆ ಮಾಡುವದೇನು ? ಅವರಿಗೆ ಪಟ್ಟಾಭಿಷೇಕ ಮಾಡಬಿಟ್ಟಲ್ಲಿ ನಾಝಿ ಪಕ್ಷದ ಪ್ರಮುಖರಾದ ಅನ್‌ಸ್ಲಸ್‌ರವರು ರಾಜ್ಯಸೂತ್ರಗಳನ್ನು ಕೈವಶ ಮಾಡಿಕೊಳ್ಳುವ ಭೀತಿಯಿದೆ, ಆದರಿಂದ ದುಃಖದಲ್ಲಿ ಸುಖವೆಂದು ಹೆಪ್ಸಬರ್ಗ ಮನೆತನದ ಒಟ್ಟೋ ರಾಜಪುತ್ರರಿಗೆ ಪಟ್ಟಗಟ್ಟಲು ಮುಸೋಲಿನಿಯವರು ನಿರುಪಾಯವೆಂದು ಒಪ್ಪಿಗೆ ಕೊಟ್ಟಿರುತ್ತಾರೆ. ಒಟ್ಟೋ ರಾಜಪುತ್ರರು ಸಿಂಹಾಸನವನ್ನೇರಿದರೆ, ಆಸ್ಟ್ರಿಯಾ ದೇಶದೊಳಗಿನ ರಾಜನಿಷ್ಠ ಜರ್ಮನ್‌ರು ರಾಜಭಕ್ತಿ ಪ್ರೇರಿತರಾಗಿ ಒಟ್ಟೋ ರಾಜರ ಅಧಿಕಾರ ಪಾಲಿಸುವರೆಂದೂ, ಜರ್ಮನಿಯೊಡನೆ ಒಕ್ಕಟ್ಟಾಗುವ ಕಾಂಕ್ಷೆ ತೊರೆಯುವರೆಂದೂ ಮುಸೋಲಿನಿಯವರ ಎಣಿಕೆ. ಆಸ್ಟ್ರಿಯಾ ದೇಶದ ಜರ್ಮನ್‌ರಿಗೆ, ಜರ್ಮನಿಯ ಜರ್ಮನ್‌ರಿಗೆ ರಕ್ತ-ವ್ಯವಹಾರ ಸಂಬಂಧಗಳಿವೆ. ಆಸ್ಟ್ರಿಯಾ ದೇಶದೊಳಗಿನ ಟಿರೋಲ ಪ್ರಾಂತದ ಜೀವನವು ಜರ್ಮನ್ ಪ್ರಯಾಣಿಕರಿಂದಲೇ ಸಾಗುತ್ತದೆ. ಈ ಪ್ರದೇಶದಲ್ಲಿ ಜರ್ಮನ್ ಪ್ರಯಾಣಿಕರು ಬಂದು ವಿಶ್ರಾಂತಿ ಪಡೆಯುತ್ತಾರೆ. ಈಗಿನ ಕಾರಕೀರ್ದಿಯಲ್ಲಿ ಈ ಉದ್ಯೋಗಕ್ಕೆ ತಡೆಬಿದ್ದು ಟಿರೋಲ ಪ್ರಾಂತದವರು ನಿರ್ಗತಿಕರಾಗಿದ್ದಾರೆ. ಆದರಿಂದ ಪರಂಪರಾಗತ ಹೆಪ್ಸಬರ್ಗ ಮನೆತನದ ರಾಜಪುತ್ರರಿಗೆ ಪಟ್ಟಗಟ್ಟಿ ಆಸ್ಟ್ರಿಯಾ ದೇಶದ ಜರ್ಮನ್‌ರ ಮನವೊಲಿಸಿಕೊಳ್ಳಬೇಕೆಂಬ ಹವ್ಯಾಸವನ್ನು ಮುಸೋಲಿನಿಯವರು ತಳೆದಿದ್ದಾರೆ. ಇದಕ್ಕೆ ಫ್ರೆಂಚ ಸರಕಾರದ ಸಮ್ಮತಿಯುಂಟು.

ಆದರೆ, ಇದಕ್ಕೆ ಝೆಕೋಸ್ಲೋವಾಕಿಯಾ, ಯುಗೋಸ್ಲಾವಿಯಾ, ಮೊದಲಾದ ಲಿಟ್ಲ-ಎಟೆಂಟಿಯಾದ ಚಿಕ್ಕ ರಾಷ್ಟ್ರಗಳು ಸಮ್ಮತಿಸುವದಿಲ್ಲ. ಝೆಕೋಸ್ಲೋವಾಕಿಯಾ ಮೊದಲಾದ ರಾಷ್ಟ್ರಗಳು ಸ್ವತಂತ್ರ ರಾಷ್ಟ್ರಗಳು. ಒಪ್ಪಂದ ಕಾಲದಲ್ಲಿ ಆಸ್ಟ್ರಿಯಾ ದೇಶದ ಗೋಣು ಮುರಿದು, ಆ ದೇಶವು ಎಂದಿಗೂ ತಲೆಯೆತ್ತಬಾರದೆಂದು ಆಸ್ಟ್ರಿಯಾ ದೇಶದ ತುಂಡು ತುಂಡು ಮಾಡಿ ಮಿತ್ರರಾಷ್ಟ್ರಗಳು ಸೃಷ್ಟಿಸಿದ ರಾಷ್ಟ್ರಗಳವು, ಈ ಮುಂಚೆ ಆಸ್ಟ್ರಿಯಾ ದೇಶದ ಅಧೀನವಿದ್ದ ಪ್ರದೇಶಗಳವು. ಒಟ್ಟೋರವರು ವ್ಹಿಯೆನ್ನಾ ರಾಜಧಾನಿಯೊಳಗೆ ರಾಜ್ಯಭಾರ ನಡಿಸತೊಡಗಿದಲ್ಲಿ ಈ ಪ್ರದೇಶದೊಳಗಿನ ಪ್ರಜೆಗಳಲ್ಲಿ ಪರಂಪರಾಗತ ರಾಜಭಕ್ತಿಯುಂಟಾಗಿ ತೊಂದರೆಯುಂಟಾಗುವ ಭೀತಿಯಿದೆ. ಆದರಿಂದ ಒಟ್ಟೋರವರಿಗೆ ಪಟ್ಟಗಟ್ಟಿದ ಪಕ್ಷದಲ್ಲಿ ಯುರೋಪ ಖಂಡದೊಳಗಿನ ಶಾಂತಿಭಂಗವಾಗುವದೆಂದೂ, ಈ ಹಿಂದೆ ಮಾಡಿದ ಒಪ್ಪಂದಕ್ಕೆ ವಿರೋಧವಾಗುವದೆಂದೂ ಅಲ್ಲಿಯ ಸರಕಾರಗಳ ಅಂಬೋಣ. ಎಲ್ಲರೂ ಶಾಂತಿಗಾಗಿ ಹೆಣಗಾಡುತ್ತಿದ್ದಾರೆ. ಅದನ್ನು ಪ್ರಸ್ಥಾಪಿಸಲು ಉಪಾಯ ಮಾಡುತ್ತಿದ್ದಾರೆ. ಒಂದು ಒಬ್ಬರಿಗೆ ಪಥ್ಯವಾದರೆ, ಮತ್ತೊಬ್ಬರಿಗೆ ಅಪಥ್ಯವಾಗುತ್ತದೆ ! ಇಷ್ಟೇ.

ಬ್ರಿಟಿಶ ಫ್ರಾನ್ಸ ದೇಶಗಳೊಳಗಿನ ಕಾರಸ್ಥಾನಗಳನ್ನು ಪರಾಂಬರಿಸಬಹುದು. ಫ್ರಾನ್ಸ ಸರಕಾರದ ಯುದ್ಧ ಇಲಾಖೆಯ ಮಂತ್ರಿಗಳಾದ ಮಾರ್ಶಲ್ ಪೆಟೆನ್‌ರವರು ಸೈನ್ಯಾಧಿಕಾರಿಗಳ ಸಭೆಯಲ್ಲಿ ನುಡಿದ ಪ್ರೇಮಿನಂದರೆ.— " ಮುಂದಿನ ಯುದ್ಧ ಅಕಸ್ಮಾತ್ ಸಂಭವಿಸುವದು, ಯಾರಿಗೂ ಪತ್ತೆ ದೊರೆಯದು, ವಿದ್ಯುತ್ತಿನಂತೆ ಥಕ್ಕನೆ ಪಿಡಿದಾರಿ ಯುದ್ಧ ಪ್ರಾರಂಭವಾಗಿ ಬಿಡುವದು. ಆದಕಾರಣ ನಮ್ಮ ಸೈನ್ಯ ಪ್ರತಿಕ್ಷಣಕ್ಕೆ ಹೋಗಲು ಸದಾ ಸಿದ್ಧವಿರಬೇಕು. ಒಂದು ಮಾತು ಲಕ್ಷದಲ್ಲಿಡಿರಿ. ಯುದ್ಧ ಪ್ರಾರಂಭವಾದೊಡನೆ ಒಮ್ಮೆಲೇ ವೈರಿಮೇಲೆ ಬಿದ್ದು ಶತ್ರುಗಳಿಗೆ ದಿಕ್ಕುಪಾಲಾಗಿ ಥಕ್ಕನೆ ಓಡಿಸುವವರಿಗೇ ವಿಜಯ ಸಿಕ್ಕೀತು. ಆದರಿಂದ ನಮ್ಮ ಸೈನಿಕರಿಗೆ ವಿದ್ಯುತ್ತಿನಂತೆ ತ್ವರಿತದಿಂದ ಶತ್ರುಗಳ ಮೇಲೆ ಸಾಗಿ ಹೋಗಲು ಕಲಿಸಬೇಕು. ಈಗಿನ ಯುಗದ ಯುದ್ಧ ಶಸ್ತ್ರಾಸ್ತ್ರಗಳು ಬಹು ಸಂಕೀರ್ಣವಾಗಿವೆ. ಆದರಿಂದ ನಮ್ಮ ಸೈನಿಕರಿಗೆ ಈಗಿನಿಂದಲೇ ನಾವು ತಕ್ಕ ಶಿಕ್ಷಣ ಕೊಟ್ಟು ಸಜ್ಜಾಗಿಡಬೇಕು. ಕಾದಿಟ್ಟ ಸೈನಿಕರು ಬೇಕಾದಾಗ ರಣರಂಗದ ಮೇಲೆ ಹೋಗಲು ಸಿದ್ಧರಾಗಿರಬೇಕು. " ಈ ಪ್ರಕಾರ ಮಾರ್ಶಲ್ ಪೆಟೆನ್‌ರವರು ಸೈನ್ಯಾಧಿಕಾರಿಗಳಿಗೆ ಹುರಿದುಂಬಿಸುತ್ತಾರೆ. ಮೆಕಡೊನಲ್ಡರವರ ಬದಲಿಗೆ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ|| ಬೋಲ್ಡವಿನ್‌ರು ಫ್ರಾನ್ಸಕ್ಕೆ ಹೋಗಿ ಜರ್ಮನಿ-ಫ್ರಾನ್ಸ ದೇಶದೊಳಗಿನ ಗಡಿನಾಡನ್ನೆಲ್ಲ ನೋಡಿ ಬಂದರು. ಇದೊಂದು ಖಾಸಗಿ ಭೆಟ್ಟಿಯೆಂದು ಸರಕಾರಿ ಪ್ರಕಟಣೆಗಳು ಹೊರಟಾಗ್ಯೂ, ಮುಂದಿನ ಯುದ್ಧದ ತಯಾರಿಯೇ ಎಂದು ಎಲ್ಲರೂ ನುಡಿಯುತ್ತಾರೆ. ಬ್ರಿಟಿಶ ದೇಶದ ಮೇಲೆ ಆಕಾಶಮಾರ್ಗದಿಂದ ಶತ್ರುಗಳು ಹಲ್ಲೆಮಾಡಬಹುದು, ಅದಕ್ಕಾಗಿ ಹಲ್ಲೆ ಮಾಡಬರುವ ವಿಮಾನಗಳಿಗೆ ಫ್ರಾನ್ಸ ದೇಶದೊಳಗಿನ ರ್‍ಹೈನ ನದಿ ಪ್ರದೇಶದಲ್ಲಿಯೇ ಅಡ್ಡಗಟ್ಟಿ ಆತ್ಮರಕ್ಷಣೆ ಮಾಡಿಕೊಳ್ಳಬೇಕೆಂದು ಮಿ|| ಬೋಲ್ಡವಿನ್‌ರು ನುಡಿದ ಕೆಲ ದಿನಗಳಲ್ಲಿಯೇ ಈ ಯಾತ್ರೆ ನಡೆದಿದೆ. ಗಡಿಗುಂಟ ಫ್ರೆಂಚ ಸರಕಾರವು ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿ ಕಟ್ಟಿಸಿದ ಕೋಟೆ-ಕೊತ್ತಲಗಳನ್ನು ಮಿ|| ಬೋಲ್ಡವಿನ್‌ರು ನೋಡಿದರು. ಫ್ರಾನ್ಸ ದೇಶದ ಅಧ್ಯಕ್ಷರಾದ ಮಿ|| ಲೆಬ್ರನ್‌ರವರು ಮಿ. ಬೋಲ್ಡವಿನ್‌ರ ಜೊತೆಗಿದ್ದರು. ಈ ಕೋಟೆಗಳ ಒಳ ಸುಳಿಯಲು ಜನಸಾಮಾನ್ಯರಿಗೆ ಅಪ್ಪಣೆಯಿಲ್ಲ. ಆ ಕಡೆ ಹೋಗಬೇಕಾದರೆ ಮುಂದಾಗಿ ಅಪ್ಪಣೆ ಪಡೆಯಬೇಕು. ಮಿ|| ಬೋಲ್ಡವಿನ್‌ರು ಅಂದು ಹಾದು ಹಡೆಯದಿದ್ದಾಗ್ಯೂ ಯಾವತ್ತೂ ವ್ಯವಸ್ಥೆಯನ್ನು ನೋಡಿದರು. ಉತ್ತರದಿಂದ ದಕ್ಷಿಣದ ತನಕ ಮೋಟರ ಬಂಡಿಯಿಂದ ಮಿ. ಬೋಲ್ಡವಿನ್‌ರು ಪ್ರವಾಸ ಮಾಡಿದರಂತೆ! ಇದೆಲ್ಲ ಸಹಜವೆಂದು ಯಾರಾದರೂ ಒಪ್ಪುವರೇ?

ಬ್ರಿಟಿಶ ಪ್ರಧಾನರಾಗಿ ಮಹಾಯುದ್ಧ ನಡಿಸಿದ ಲೋಯಿಡ್ ಜೋರ್ಜರ ಅಭಿಪ್ರಾಯವನ್ನೊಂದು ಕೊಟ್ಟುಬಿಡುತ್ತೇನೆ " ಎಲ್ಲರಿಗೂ ಯುದ್ಧವೆಂದರೆ ಭೀತಿ; ಆದರೆ, ಎಲ್ಲರೂ ಯುದ್ಧದ ತಯಾರಿ ನಡಿಸುತ್ತಿದ್ದಾರೆ. ಬ್ರಿಟಿಶ ಪಾರ್ಲಿಮೆಂಟಿನವರು ವಿನಾಶಕ ಸಾಹಿತ್ಯಗಳನ್ನು ತಯಾರಿಸುವದಕ್ಕಾಗಿ ಇಪ್ಪತ್ತು ಕೋಟಿ ಹಣವನ್ನು ಮಂಜೂರ ಮಾಡಿರುತ್ತಾರೆ. ದೇಶಾಭಿಮಾನದ ವಿಲಕ್ಷಣ ಮದ ಎಲ್ಲೆಲ್ಲಿಯೂ ಹಬ್ಬಿದೆ. ಯುದ್ಧ ಭೀತಿಯಿಂದ ಯುದ್ಧ ಪರಿಹಾರಕ್ಕಾಗಿ ಯುದ್ಧ ಪರಿಸ್ಥಿತಿಯನ್ನೇ ಅದು ಉಂಟು ಮಾಡುತ್ತಿದೆ. 'ಮತ್ತೊಂದು ಯುದ್ಧ ಬಂದೀತು, ಅದರೊಳಗಿಂದ ಜರ್ಮನಿಗೆ ತಪ್ಪಿಸಿರಿ' ಹೀಗೆ ಹಿಂಡನ್‌ಬರ್ಗರು ಹೇಳುತ್ತಿದ್ದರು. ಬ್ರಿಟಿಶ ದೇಶವನ್ನು ಯುದ್ಧದ ಅಗ್ನಿಕುಂಡದಲ್ಲಿ ಆಹುತಿ ಕೊಡಬೇಡಿ. ದೇಶಾಭಿಮಾನ ಪ್ರದರ್ಶನಕ್ಕೆ ಬೇರೆ ಮಾರ್ಗಗಳಿವೆ. ಹಾಳುಬಿದ್ದ ಭೂಮಿಗಳನ್ನು, ಉದ್ಯೋಗಗಳನ್ನು, ಕೈಗಾರಿಕೆಗಳನ್ನು ಉದ್ಧರಿಸಿರಿ. ರಕ್ತ ಚೆಲ್ಲುವ ದೇಶಾಭಿಮಾನವನ್ನು ನಿಲ್ಲಿಸಿರಿ. ಬೇರೆ ಉದ್ಯಮಗಳಲ್ಲಿ ದೇಶಸೇವೆ ಮಾಡಿ ದಿಗಂತ ಕೀರ್ತಿ ಪಡೆಯಿರಿ, " ಎಂದು ಲೊಯಿಡ್ ಜೋರ್ಜರು ಉದ್ಗರಿಸುತ್ತಾರೆ! ಈ ಮಾತಿಗೆ ಯಾರೂ ಕಿವಿಗೊಡುವದಿಲ್ಲ. ಜರ್ಮನಿಯೊಳಗಿನ ಗಡಿಬಿಡಿ ಕೇಳಿ ಫ್ರಾನ್ಸ ಸರಕಾರವು ಹಡಗುಪಡಗಳನ್ನು ಉತ್ತರ ಸಮುದ್ರಕ್ಕೆ ರವಾನಿಸಿದೆ. ಜರ್ಮನಿಯ ಮೇಲೆ ನಿಮಿಷಾರ್ಧದಲ್ಲಿ ಸಾಗಿಹೋಗಲು ಅನುಕೂಲವಾಗಬೇಕೆಂದು ಭೂಮಧ್ಯ ಸಮುದ್ರದೊಳಗಿಂದ ಉತ್ತರ ಸಮುದ್ರಕ್ಕೆ ಅವು ವರ್ಗಾಯಿಸಲ್ಪಟ್ಟಿವೆ. ಬೆಲ್ಜಿಯಮ್ ದೇಶದವರು ಯುದ್ಧ ನಿಯಮಗಳನ್ನು ನಿರ್ಧರಿಸುವದಕ್ಕಾಗಿ ಆಂತರ್ರಾಷ್ಟ್ರೀಯ ಪರಿಷತ್ತನ್ನು ನೇರಿಸುವವರಿದ್ದಾರೆ. ಅಮೇರಿಕೆಯವರೂ

ಹನೆ, ರಷ್ಯರೊಡನೆ ಜಪಾನಿಯರು ಯುದ್ಧ ಮಾಡ ಲಿಕ್ಕಿಲ್ಲನಾಗಿ ಜಪಾನ ದೇಶದ ಕಂಡಾಯ ಪ್ರಧಾನ ನಾದ ವಿ। ಫುಜಲಿಯವರು ಟೋಕಿಯೋದೊಳಗಿನ "ನಿಜಿಚಿಂಪ್ರೋ" ಪತ್ರಕರ್ತರ ಬಳಿ ನುಡಿದರು. ಇದರ ಮೇಲಿಂದ ಜಪಾನ ದೇಶದ ಸೈನ್ಯ ಖಾತೆಯು ಮಿಚರ್ಣ ಕುಗ್ಗುವದೆಂಬ ರಿಪೋರ್ಟರ ನಾಶರ್ನಾಹ ಕರ ಬಾದೆ. ಆದರೆ, ಜಪಾನದಲ್ಲಿ ಆಕಾಶ ಮಾರ್ಗ ದಿಂದ ವಿಮಾನುಗಳು ಸುಗ್ಗೆ ಹಲ್ಲೆ ಮಾಡಬಹುದು ಹ್ನ? ಅವುಗಳ ಕಾಟ ತಪ್ಪಿಸಿಕೊಳ್ಳುವ ಬಗೆ ಹೇಗ? ಎಂಬುದರ ಶಿಕ್ಷಣ ಪ್ರಜೆಗಳೆಲ್ಲರಿಗೆ ಕೊಡಲಾ ಗುತ್ತದೆ; ಕಳೆದ ತಿಂಗಳಲ್ಲಿ ದಕ್ಷಿಣ ಜಪಾನ ಪ್ರದೇ ಶದೊಳಗಿನ ಕೋಬ, ಓಸಾಕಾ, ಕ್ಯೋಟೋ, ನಾರಾ ಮೊದಲಾದ ಪಟ್ಟಣಗಳಲ್ಲಿ ೩ ತಾಸುಗಳ ತನಕ ಈ ಪ್ರಯೋಗ ನಡೆಯಿತು ಶತ್ರುಗಳ ವಿಮಾನುಗಳಿಗೆ ಹೇಗೆ ಹಿಡಿಸಬೇಕು? ಎಂಬ ಪ್ರಯೋಗವನ್ನು ಸೈ ನ್ಯಾಸಿಕ ದಳದವರು ಮಾಡಿತೋರಿಸಿದರು. ಚೀನ ದೇಶಕ್ಕೂ ಜಪಾನ ದೇಶಕ್ಕೂ ಸ್ವಲ್ಪ ವಿತುಷ್ಟಬೀಳ ದಿದೆ ಚೀನ ದಾದವರಿಗೂ, ಜಪಾನಿಯರಿಗೂ ರಾಂ ಘಾಯುದಲ್ಲಿ ಸಣ್ಣ ದೊಂಬಿಯಾಯಿತು. ಜಪಾನ ದೇಶವು ಸ್ವದೇಶಿಯರ ರಕ್ಷಣೆಗಾಗಿ ಹಡಗುಪಡೆಗ ಳನ್ನು ರಣಾನಿಸಿದೆ. ಯುದ್ಧ ಯಾರಿಗೂ ಬೇಡ, ಯುದ್ಧನಡಿಸಲಿಕ್ಕೆ ಎಲ್ಲರದೂ ತಯಾರಿ.

ನನಗೆ ಜರ್ಮನಿಯ ಅಂತರಂಗವೇ ತಿಳಿಯ ಬೊಲ್ಲದು ಅವರ ಕಾರಸ್ಥಾನ ಹೊರಬೀಳುವದೇ ಇಲ್ಲ. ಜರ್ಮನಿಯ ಸುದ್ದಿಕೊಡುವ ಪತ್ರಿಕಾ ಪ್ರತಿನಿಧಿಗಳ ಕಾಯಿದೆಯಿಲ್ಲದೆ ಜರ್ಮನ್ ಸರ ಕಾರವು ಹೊರಹಾಕಿ ಬಿಡುತ್ತದೆ ಅಮೇರಿಕೆಯ ಪತ್ರಿಕಾಪ್ರತಿನಿಧಿಗಳಾದ ಮಿ। ಥೋಂಪಸನ್‌ದವರು ತಮ್ಮ ಪತ್ರಿಕೆಗಳಿಗೆ ಪೂರೈಸಿದ ಸುದ್ದಿಗಳಿಂದ ರಾಷ್ಟ್ರದ ಅಪಮಾನವಾಯಿತೆಂದು, ಹಿಟ್ಲರ ಸರಕಾರವು ಅಭಿ ಪ್ರಾಯಪಟ್ಟು ಅವರಿಗೆ ೨೪ ತಾಸುಗಳಲ್ಲಿ ಜರ್ಮನಿ ಯನ್ನು ಒಮ್ಮೆಲೇ ಬಿಟ್ಟು ಹೋಗಬೇಕಾಗಿ ವಿಧಿಸಿತು ಲೋಕಸಂಖ್ಯೆಯನ್ನು ಬೆಳೆಸುವದಕ್ಕಾಗಿ ಹಿಟ್ಲರರು ಪ್ರಾಯಸ್ಥರೆಲ್ಲರೂ ಮದುವೆ ಮಾಡಿಕೊಳ್ಳಬೇಕಾಗಿ ಯೂ, ಮದುವೆ ಮಾಡಿಕೊಂಡವರಿಗೆಲ್ಲ ಇನಾಮು ಸಿಗುವದಾಗಿಯೂ ಪ್ರಕಟಣೆ ಹೊರಡಿಸಿ ಕಳೆದ ೧–೨ ವರ್ಷಗಳಲ್ಲಿ ಲಕ್ಷಾವಧಿ ಮದುವೆಗಳನ್ನು ಒದಗಿಸಿ ತಂದರು. ಕಳೆದ ವಾರದಲ್ಲಿ ಹಿಟ್ಲರರು ಮತ್ತೊಂದು ಫರ್ಮಾನನ್ನು ಹೊರಡಿಸಿದ್ದಾರೆ: ಸರಕಾರಿ ನೌಕರಿ ಯಲ್ಲಿದ್ದ ಅವಿವಾಹಿತ ಸ್ತ್ರೀ-ಪುರುಷರೆಲ್ಲ ಒಮ್ಮೆಲೇ ಅಧಿಕಾರತ್ಯಾಗ ಮಾಡಬೇಕೆಂದೂ, ವಿವಾಹಿತರಿಗೆ ಮಾತ್ರ ಕೆಲಸ ಸಿಗಬೇಕೆಂದೂ ಅಪ್ಪಣೆ ಮಾಡಿದ್ದಾರೆ ಸರಕಾರೇತರ ಕಂಪನಿಗಳಲ್ಲಿಯೂ ಸಹ ೨೫ ವರ್ಷದೊಳಗಿ ನ ಅವಿವಾಹಿತರಿಗೆ ಎಂದಿಗೂ ಸೇರಿಸಿಕೊಳ್ಳಬಾರ ದೆಂದು ಕಟ್ಟಪ್ಪಣೆ ಕೊಟ್ಟಿದ್ದಾರೆ. ಮಹಾಯುದ್ಧ ಕಾಲದಲ್ಲಿ ಫ್ರಾನ್ಸ ದೇಶಕ್ಕೆ ಸೇರಿಸಿದ ಸಾರ ಪ್ರಾಂತ ದಲ್ಲಿ ಈಗ ಬಹು ದೊಡ್ಡ ಗಡಿಬಿಡಿ. ಪ್ರಾಯಸ್ಥ ಸ್ತ್ರೀ-ಪುರುಷರ ಕಡೆಯಿಂದ ಮತ ಪಡೆದು ಆ ಮತ ಗಳ ಎಣಿಕೆಯಂತೆ ಈ ಪ್ರದೇಶದ ವ್ಯವಸ್ಥೆ ಯಾಗು ವದೆಂದು ವ್ಯವಸ್ಥೆಯಾದದ್ದರಿಂದ ಇಳಿತು; ಅವ್ಯವಸ್ಥೆ ಯಾಗುವದೇನೆಂಬದೊಂದು ಭೀತಿ ಸಾರ ಪ್ರದೇ ಶವು ಸಸ್ಯಸಂಪತ್ತುಳ್ಳ ಪ್ರದೇಶ; ಖನಿಜ ದ್ರವ್ಯಗಳ ಆಗಾರ; ಸಾವಕಾರರ ಸಂಪತ್ತು! ಜನಸಾಮಾನ್ಯರ ಮತಗಳನ್ನು ತಂತಮ್ಮ ಕಡೆ ಎಳೆಕೊಳ್ಳುವದಕ್ಕಾಗಿ

ಫ್ರೆಂಚರೂ, ಜರ್ಮನ್‌ರೂ ಹೇಳಲಾರದ ಕಾರಸ್ಥಾ ನಗಳನ್ನು ಹೂಡಿದ್ದಾರೆ "ಜರ್ಮನಿಯ ಅಧಿಪತ್ಯ ವನ್ನು ನಾವೆಂದಿಗೂ ಮನ್ನಿಸಲಾರೆವೆಂ"ದು ೮೦ ಸಾವಿ ರ ಜನರು ಪ್ರತ್ಯೇಕವಾಗಿ ಫ್ರೆಂಚ ಪಕ್ಷಪಾತಿ ಗಳ ಪ್ರಕಟಣೆ. "ನಮಗೆ ಧರ್ಮಗಳು ಅಂತರ, ಅವರು ಧರ್ಮರಕ್ಷಣೆ ಮಾಡುವದಿಲ್ಲ," ಹೀಗೆ ಸಾರ ಪ್ರ ದೇಶದೊಳಗಿನ ಫ್ರೆಂಚ ಪಕ್ಷಪಾತಿ ಧರ್ಮಗುರುಗಳ ಧರ್ಮವೇ ಹೆತ್ತಿದ್ದಾರೆ. "ನನಗೆ ನಿಂದಿಸುವವರು "ಜರ್ಮನ್" ಎಂದು ಹೇಳಿಸಿಕೊಳ್ಳಲಿಕ್ಕೆ ಅನರ್ಹರು, ನಾನು ಕ್ರಿಸ್ತ ಧರ್ಮಾನುಯಾಯಿಯಿದ್ದೇನೆ ಸಾರ ಜರ್ಮನ್‌ರು ನನ್ನ ದೇಶಬಾಂಧವರು, ಇಂಥ ಲೋ ಕಾಪವಾದಗಳಿಂದ ಜರ್ಮನ್ ರಾಷ್ಟ್ರಕ್ಕೆ ಭಯವಿಲ್ಲ, ಸಾರ ಪ್ರದೇಶವನ್ನು ಜರ್ಮನಿಗೆ ಒಪ್ಪಿಸಿದರೆ ಮಾತ್ರ ಫ್ರಾನ್ಸ-ಜರ್ಮನಿ ದೇಶಗಳೊಳಗೆ ಅಂತಃಕರಣಪೂ ರ್ವಕ ತಹನಾಮೆಯಾಗುವದು, ಇಲ್ಲವಿದ್ದರೆ ಶಾಂತಿ ಯಾಗುವದು ಕಠಿಣ," ಹೀಗೆ ಹಿಟ್ಲರರು ಅಚೆ ರವಿ ವಾರ ಸಾರ್ಬು ಜನಾಂಗದ ವಿದ್ಯಮಾನ ಸ್ಥಿತಿಗತಿಯನ್ನು ತಿಳಿಸಿದ್ದಾರೆ ಇದೇ ಬರುವ ಜನವರಿ ೧೩ನೇ ತಾರೀಖಿ ಗ ಮತಗಳ ಎಣಿಕೆಯಾಗಲಿಕ್ಕಿದೆ; ಈಗಿನಿಂದಲೇ ಇಲೆಕ್ಷನಿನ ತಯಾರಿಯಿದು! ಈ ಇಲೆಕ್ಷನಿನ ಒಡ ದಾಟದಲ್ಲಿಯೇ ಯುದ್ಧಕಿಡಿ ಹಾರುತ್ತದೇನೆಂಬದೊಂ ದು ಭೀತಿ. ಕಳೆದ ಸೋಮವಾರ ಮುಂಬಯಿಯಲ್ಲಿ ಜಗಚ್ಛಾಂತಿ ದಿನೋತ್ಸವವ ಸ್ಪ್ರೌರ್ಡ ಮುಂ ಬಯಿ ಹ್ಯಾಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ। ಪಾಟಕರರ ಅಧ್ಯಕ್ಷತೆಯಲ್ಲಿ ಜರುಗಿತು. "ಎಲ್ಲರಿಗೂ ಶಾಂತಿ ಬೇಕು, ಆದರೆ, ಯುದ್ಧದ ಸೋಗುಗಳು ಕವಿಕವಿದು ಒಂದು ನಿಂತಿವೆ, ಅಪ್ಪ ಯಾವಾಗ ಯುದ್ಧ ಮಾಗರೆಯುವದೆಂದು ಹೇಳ ಬರದು, ದೇಶಾಭಿಮಾನದ ಅರ್ಥವೇ ವಿಪರೀತವಾಗಿ ಮರ್ಜಲರಿಗೆ ಹಾಳಿದು ಲಾಭ ಪಡೆಯುವದಕ್ಕಾಗಿ ಪ್ರಬಲರು ಪ್ರಯತ್ನಪಡುತ್ತಿದ್ದಾರೆ ನಾವೆಲ್ಲರೂ ಜ್ವಾಲಾಮುಖಿಯ ಮೇಲೆ ನಿಂತುಕೊಂಡಿದ್ದೇವೆ" ಹೀಗೆ ಅಧ್ಯಕ್ಷರಾದ ಶ್ರೀ। ಪಾಟಕರರು ನುಡಿದರು. ಯಾರಿಗೂ ಯುದ್ಧ ಬೇಡ' ಹಿಟ್ಲರರಿಗೆ ಯುದ್ಧ ಬೇಡ, ಸಾರ ಪ್ರದೇಶ ಬೇಕು! ಫ್ರೆಂಚರಿಗೆ ಯುದ್ಧ ಬೇಡ; ಸಾರ ಪ್ರದೇಶ ಬೇಕು! ಮುಸೋಲಿನಿಯವರಿಗೆ ಯು ದ್ಧ ಬೇಡ; ಆಸ್ಟ್ರಿಯೊದೊಳಗಿನ ನಾಜಿಪಕ್ಷ ಬೇಕು! ಬ್ರಿಟಿಶ ದೇಶಕ್ಕೂ ಯುದ್ಧ ಬೇಡ; ಆದರೆ ಜಪಾನು ಬಲ್ಲೆಗಳಿಂದ ಸ್ವದೇಶ ರಕ್ಷಣೆಮಾಡಿಕೊಳ್ಳುವದಕ್ಕಾ ಸ್ವಸೈನ್ಯದ ಗಣನೆ ಬೇಕು! ಬೆಲ್ಜಿಯಮ್ ದೇಶಕ್ಕೂ ಯುದ್ಧ ಬೇಡ, ಆದರ ಯುದ್ಧ ನಡೆದಲ್ಲಿ ನಿಯಮ ಗಳನ್ನು ಸಿದ್ಧಗೊಳಿಸಿಕೊಳ್ಳಬೇಕಾಗಿದೆ! ಯುದ್ಧ ಯಾ ರಿಗೂ ಬೇಡವೆಂಬ ಮಾತು ಹೀಗ ಸಿದ್ಧ! ಹಾಗೆ ಯೇ ರಣೋತ್ಸಾಹದಿಂದ ಯಾವತ್ತು ರಾಷ್ಟ್ರಗಳ ಸ್ಥೈರಕ್ತ ಹೊರಚಿಮ್ಮುತ್ತಲಿದೆಂಬ ಮಾತೂ ಸಿದ್ಧ!

ವ್ಯತ್ಯಾಸವಾಗದಂತೆಯೂ, ಲೋಕ ಕಂಟಕವಾಗ ದಂತೆಯೂ ವರ್ತಿಸಬೇಕು ಎಂದು ತೋರಿಸಿದ್ದಾರೆ ಮೆಜಿ ಸ್ಟ್ರೇಟರೆಲ್ಲರೂ ಇದೇ ಪ್ರಕಾರ ಈ ಕಾಯಿದೆಯ ಅರ್ಥ ಮಾಡಿಕೊಂಡಲ್ಲಿ ಲೋಕ ಹಿತವಾಗುವಂತಿದೆ.

— ಜೈಂಟ ಪಾರ್ಲಿಮೆಂಟರಿ ಕಮಿಟಿಯ ಹಿಂದೀ ರಾಜ್ಯಸುಧಾರಣೆಯ ರಿಪೋರ್ಟು ಕಾಯಿದೆ ಕೌನ್ಸಿ ಲುಗಳ ಇಲೆಕ್ಷನಿನಲ್ಲಿ ಪರಿಣಾಮ ನೋಡಿ ಪ್ರಕಟವಾ ಗುವದಾಗಿ ವಿಲ್ಲಿಯ 'ಹಿಂದುಸ್ಥಾನ ಟ್ಯಾಯಿಮ್ಸ' ಪತ್ರಿ ಕೆಯ ವಾರ್ತೆ.

ವೃತ್ತಸಾರ.

— ಚಿನ್ನದ ದರ ಮತ್ತೂ ಏರಿತು ತೊಲೆಗೆ ೩೫ ರೂ ಪಾಯಿ ೪ ಆಣೆಯಾಗಿದೆ. ಮತ್ತೂ ದರ ಏರುವ ರಿಕಸವಿದೆ ಇಂಗ್ಲಂಡ ದೇಶದ ಆಮದಿಗಿಂತ ರಫ್ತು ಹೆಚ್ಚಾದ್ದರಿಂದ ಪವನು-ನೋಟಿನ ದರ ಕುಗ್ಗಿತು. ಆ ಕಾರಣದಿಂದ ನಮ್ಮ ರೂಪಾಯಿಯ ಬೆಲೆಯೂ ಕುಗ್ಗಿ ಚಿನ್ನದ ದರ ಏರಿದೆ. ತೊಲೆಗ ರೂ. ೩೭ ರ ತನಕ ದರವಾಗಬಹುದೆಂದು ಹೇಳುತ್ತಾರೆ ಇಂಗ್ಲಂ ಡ-ಅಮೇರಿಕಾ-ಫ್ರಾನ್ಸ ಮೊದಲಾದ ದೇಶಗಳು ಒ ಟ್ಟುಗೂಡಿ ಪವನಿನ ಬೆಲೆ ನಿರ್ಧರಿಸಿಕೊಳ್ಳುವ ಆಲೋ ಚನೆಯಲ್ಲಿವೆ ಬೆಳ್ಳಿಯ ದರವೂ ಏರಲಾರಂಭಿಸಿದೆ ೧೦೦ ತೊಲೆಗೆ ೬೦। ರೂಪಾಯಿ! ಅಮೇರಿಕಾ ಸರ ಕಾರದವರು ಬೆಳ್ಳಿಯ ನಾಣ್ಯ ಪ್ರಚಾರ ಮಾಡುವದ ಕ್ಕಾಗಿ ಬೆಳ್ಳಿಯನ್ನು ಖರೀದಿ ಮಾಡುತ್ತಿದ್ದಾರೆ ಅದ ರಿಂದ ಬೆಳ್ಳಿಯ ದರ ಹೆಚ್ಚಿದೆ, ಚೀನ ದೇಶದಿಂದ ಬೆಳ್ಳಿ ರಫ್ತಾಗುತ್ತಿದ್ದದರಿಂದ ಈ ದರ; ಇಲ್ಲದಿದ್ದರೆ ಮತ್ತೂ ಏರಬಹುದಾಗಿತ್ತು. ಚಿನ್ನ-ಬೆಳ್ಳಿಯ ದರ ಏರಿಕೆಯು ಹೀಗಿದೆ.

— ಶಾರದಾ ಕಾನೂನಿನ ಶಾಸನ ತಪ್ಪಿಸಿಕೊಳ್ಳುವ ದಕ್ಕಾಗಿ ಯಾನಂ ಫ್ರೆಂಚ ದ್ವೀಪದಲ್ಲಿ ಬಾಲವಿ ವಾಹಗಳಾಗುತ್ತವೆ. ಯಾನಂ ಇದು ಸಣ್ಣ ದ್ವೀಪ. ರಾಜಮಹೇಂದ್ರಿಯಿಂದ ೨೫ ಮೈಲು ದೂರವಿದೆ. ನೆರೆಯ ಮೂಲಕ ಅಲ್ಲಿ ಹೋಗಲಿಕ್ಕೆ ತೊಂದರೆ ಆದಾಗ್ಯೂ ಯಾನಂ ದ್ವೀಪದಲ್ಲಿ ಎಲ್ಲ ನಿಂತಿದೆದಲ್ಲಿ ಮದುವೆ ಮಂಟಪಗಳು!! ೨ ದಿನಗಳಲ್ಲಿ ೬೦ ಮದು ವೆಗಳಾದವು! ಮುನಿಸಿಪಾಲರೂ, ಪೋಲೀಸ ಇನಸ್ಪೆಕ ರರೂ ಅಲ್ಲಿ ಹೋಗಿ ತಮ್ಮ ಮಕ್ಕಳ ಮದುವೆ ಮಾಡಿ ದರಾಗಿ 'ಮದ್ರಾಸ ಮೇಲ' ಪತ್ರಿಕೆಯು ವಾರ್ತೆ ಒಬ್ಬ ಪ್ರಬುದ್ಧರು ೪ ವರ್ಷದ ಹುಡುಗಿಯೊಡನೆ ಇದೇ ಯಾನಂದಲ್ಲಿ ಮದುವೆ ಮಾಡಿಕೊಂಡರಂತೆ!

— ಮಿರಜಪೋಲಗಿನ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಕಳೆದ ತಾ. ೨೧ ನೇಗೆ ಶಾರದಾ ಕಾನೂನಿನನ್ವಯ ಕೊಟ್ಟ ತೀರ್ಪು ಬೋಧಪ್ರದವಿದೆ ಚೌಧರಿ ಪ್ರಸಾದರವರು ತಮ್ಮ ಶಿವಮೂರಾಲ ಹಾಗು ಬ್ರಹ್ಮಾನಂದರೆಂಬ ಇಬ್ಬರು ಕ್ರಮವಾಗಿ ೧೩ ೯ ವರ್ಷದ ಮಗಂದಿರಿಗೆ ಜಗವತಿ- ಫುಲವತಿ ಎಂಬ ೧೦-೮ ವರ್ಷ ಪ್ರಾಯದ ಹುಡುಗಿ ಯರ ಮಗಳಂದಿರೊಡನೆ ಜುಲೈ ೨ ನೇ ತಾರೀಖಿಗೆ ಮದುವೆ ಮಾಡಿದ್ದರು. ಚೌಧರಿಪ್ರಸಾದ ಹಾಗು ಚಿತಾವಾಲರು ಅಪರಾಧಿಗಳೆಂದು ಮೆಜಿಸ್ಟ್ರೇಟರು ತೀರ್ಪುಕೊಟ್ಟು ಹುಕುಮು ಮಾಡಿದ್ದೇನೆಂದರೆ— "ಶಾರದಾ ಕಾನೂನಿನಲ್ಲಿ ನಿರ್ದೇಶಿಸಿದ ಪ್ರಾಯವಾ ಗುವ ತನಕ ಬಾಲದಂಪತಿಗಳಿಗೆ ಗಂಡ ಹೆಂಡರಾಗಿ ಒಕ್ಕಟ್ಟಾಗದಂತೆ ವ್ಯವಸ್ಥೆ ಮಾಡಿದರೆ ನ್ಯಾಯವಾ ಗುತ್ತದೆ, ಅದರಿಂದ ಅಪರಾಧಿಗಳೆಲ್ಲರೂ ರೂ. ೩೦೦ ರ ಜಾಮೀನು ಕರಾರು ಬರೆಕೊಡಬೇಕ. ಪ್ರತಿ ವರ್ಷ ಆಗಸ್ಟ ತಿಂಗಳಲ್ಲಿ ಬಾಲ ದಂಪತಿಗಳನ್ನು ಕೋರ್ಟಿ ನಲ್ಲಿ ಹಾಜರ ಮಾಡಿ ಅವರು ಪ್ರತ್ಯೇಕವಿದ್ದಾ ರೆಂದು ಕೋರ್ಟಿಗೆ ಮನಗಾಣಿಸಿ ಹೋಗಬೇಕು ಶಾರದಾ ಕಾನೂನಿನಲ್ಲಿ ನಿಯಮಿಸಿದ ವಯಸ್ಸಾಗುವ ತನಕ ಈ ರೀತಿ ನಡಕೊಳ್ಳಬೇಕು ಮೆಜಿಸ್ಟ್ರೇಟರು ಈ ತೀರ್ಪು ಕೊಟ್ಟು, ಕಾಯಿದೆಯ ಸಂಕಲ್ಪಕ್ಕೆ

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ವಿಲ್ಲ, ಬಿಸಿಲು ತುಂಬಾ ಹೆಚ್ಚು.

ಬುಧವಾರ ಇಲ್ಲಿಯ ಮ್ಯುನಿಸಿಪಾಲಿಟಿಯನ್ನು [illegible] ಸ್ಥಾನಿಕ ಮಂಡಳಿಯವರು [illegible] ಬಂದ ಆ॥ ಕಲೆಕ್ಟರರು ಒಂದು [illegible] ತೆಗೆದುಕೊಂಡು ಹೊರಟುಹೋಗಿದರು. [illegible] ಸರಕಾರಿ ಅಧಿಕಾರಿಗಳ [illegible] ಕಲೆಕ್ಟರರಿಗೆ ಬರೆದು ಹೋಗಿದ [illegible]

ಸರಕಾರ ಹಾಗೂ [illegible] ಮ್ಯುನಿಸಿಪಾಲಿಟಿ [illegible] ಸರಕಾರದ ಅಧೀನವಾದದ್ದರಿಂದ ಈಗ ಮ್ಯುನಿಸಿಪಾಲಿಟಿಯ [illegible] ಮ್ಯುನಿಸಿಪಾಲಿಟಿಯ [illegible] ಕಲೆಕ್ಟರರು [illegible] ಪ್ರತಿಕೂಲ [illegible] ಮ್ಯುನಿಸಿಪಾಲಿಟಿ [illegible] ಎಲ್ಲ ಮೆಂಬರರು [illegible] ಬುಧವಾರ ಕಲೆಕ್ಟರರು ಮ್ಯುನಿಸಿಪಾಲಿಟಿಯನ್ನು ಎಕ್ಸ್ಟೆಂಡ್ [illegible] ಮ್ಯುನಿಸಿಪಾಲಿಟಿ [illegible] ಮಂಡಳದವರು ಮ್ಯುನಿಸಿಪಾಲಿಟಿಯನ್ನು [illegible] ಮ್ಯುನಿಸಿಪಾಲಿಟಿಯ [illegible] ಸೆಕ್ರೆಟರಿ [illegible] ಈ ವ್ಯಕ್ತಿ ಯಾರು? ಹೀಗೆ ತಂತಿ [illegible] ಅಧಿಕಾರ ಇವರಿಗೆ ಇದ್ದಿತು? ಇತ್ಯಾದಿ [illegible] ಮ್ಯುನಿಸಿಪಾಲಿಟಿ [illegible] ನೋಟೀಸು ಮ್ಯುನಿಸಿಪಾಲಿಟಿ [illegible] ಮ್ಯುನಿಸಿಪಾಲಿಟಿಗೆ [illegible] 'ಸೆಕ್ರೆಟರಿ' ಎಂದು ತಂತಿ [illegible] ಮ್ಯುನಿಸಿಪಾಲಿಟಿ [illegible] ಮ್ಯುನಿಸಿಪಾಲಿಟಿಯು [illegible] ಸೆಕ್ರೆಟರಿಗಳು [illegible] ಮ್ಯುನಿಸಿಪಾಲಿಟಿಯು [illegible] ನಿಲ್ಲಿಸು ವರೆಂದು ಕೇಳಿದೆ.

ಹೆರವಟ್ಟೆಯಲ್ಲಿ ಗುರುವಾರ ರಾತ್ರಿ [illegible] ನ್ನು ಯಾರೋ ಕಳ್ಳರು ಕದ್ದೊಯ್ದರು. ಪೋಲೀಸ ಚೌಕಶಿ ನಡೆದದಾಗಿ ತಿಳಿಯುತ್ತದೆ.

ಕೆಕ್ಕಾರ— [illegible] ವಿದ್ಯಾರ್ಥ್ಯಾ ಸಂಸ್ಕೃತ [illegible] ಶ್ರೀ ಕಶ್ಯಪ [illegible] ವಿದ್ಯಾವಿನೋದ-ವೇದಾಂತ [illegible] ನಡೆಯಿತು. ಮಾಂಜಾನೆ ಶ್ರೀ ಗುರುಚರಿತ್ರ ಪಾರಾಯಣವಾಯಿತು. ಅದರಂತೆ ವೇ। ಶಾ। ಸಂ। ನರಸಿಂಹ ಸುಬ್ರಾಯ ಭಟ್ಟ, ವಿದ್ವಾನ್ ಇವರು ಶ್ರೀ ಗುರುಚರಿತ್ರೆಯ ಕುರಿತು [illegible] ಪ್ರವಚನವನ್ನಿತ್ತರು. [illegible] ವೆಂಕಟರಮಣ ಭಟ್ಟರು ವಿದ್ಯೆಯ [illegible] ಗಣೇಶ ಭಟ್ [illegible] ಸಂಸ್ಕೃತಿಗೆ [illegible] ಶ್ರೀ ಕೃಷ್ಣ [illegible] ಸಭಾ [illegible] ಕಲ್ಲಿಕಟ್ಟ [illegible] ಜಯಘೋಷದೊಡನೆ ಸಭೆ ವಿಸರ್ಜನೆಯಾಯಿತು.

ಶಿರಾಲಿ— (ತಾ ೩೧-೮-೧೯೩೪) [illegible] ಹಿಂದೆ ಇಲ್ಲಿಯ [illegible] ಬಹಳ [illegible] ಗುಡಿಯ [illegible] ಭಟಕಳ [illegible]

ಭಟಕಳ— (ತಾ ೩೧-೮-೧೯೩೪) ಇಲ್ಲಿ [illegible] ವೆಂಕಟೇಶ [illegible] ಕೃಷ್ಣ [illegible] ಗಣಪತಿ [illegible] ಶ್ರೀ ಹನುಮಂತ ದೇವರು [illegible] ಸ್ವಯಂಸೇವಕರು [illegible] ಶ್ರೀ ಹನುಮಂತ ದೇವಸ್ಥಾನದ [illegible] ಅಗ್ನಿಹೋತ್ರಿ-ವೇದಶಾಸ್ತ್ರಾನುಯಾಯಿ [illegible]

[illegible] ಶ್ರೀ ಚಿತ್ರಾಪುರ [illegible] ಶ್ರೀ ಚಿತ್ರಾಪುರ [illegible] ಶ್ರೀ ಉಮಾಮಹೇಶ್ವರ ದೇವಸ್ಥಾನ [illegible] ಚಿತ್ರಾಪುರ [illegible] ಶ್ಲೋಕ [illegible] —

[illegible] ॥
[illegible]
[illegible] ॥ ೧ ॥

[illegible] ॥
[illegible] ॥
[illegible] ॥
[illegible] ॥ ೨ ॥

[illegible] ವೆಂಕಟರಮಣ [illegible] ಲಕ್ಷ್ಮಯ್ಯ [illegible] ಹೀಗೆ ಇತ್ಯಾದಿ.

[ಭಟಕಳ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರ [illegible] ಪತ್ರ [illegible] ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವದು.]

ಸಿದ್ದಾಪುರ— (ತಾ. ೧೯-೩೪) ಕಷ್ಟ ನಿವಾರಣಾ ಸಮಿತಿಯವರು ಇಲ್ಲಿ ಲಾ ಹೊಸಕೊಪ್ಪ ಗಣೇಶ ಹೆಗಡೆ (ಅಧ್ಯಕ್ಷ), ಕನ್ನಕ್ಕಿ ಶೇಷಾ ಹೆಗಡೆ, ಹಳದೀಪುರ ಗಂಗಾಧರ ಶ್ಯಾನಭಾಗ, ಗೋಳಿಮನೆ ವಾಮನ ಮತ್ತು ಗಂಗಾಧರ (ಕಾರ್ಯದರ್ಶಿ), ಹೀಗೆ ನಾಲ್ವರ ಸ್ಥಾನಿಕ ಕಮಿಟಿಯನ್ನು ನೇಮಿಸಿದ್ದಾರೆ. ಇವರು ಸ್ವತಃ ಹಳ್ಳಿಗಳಿಗೆ ಹೋಗಿ ರೈತರ ಸ್ಥಿತಿಯನ್ನು ಕಣ್ಣಾರೆ ಕಂಡು ವಿಪತ್ಗ್ರಸ್ತರಿಗೆ ಸಹಾಯ ಮಾಡುತ್ತಿದ್ದಾರೆ. ಕರ್ಜಗಿ, ಹೊಸತೋಟ, ತಾರೇಸರ, ಕಂಚಕ್ಕಿ, ಹೇರೂರ, ಬಾಳೆಸರ, ಕ್ಯಾದಗಿ, ದೊಡ್ಮನೆ, ಲಂಬಾಪುರ, ಕಾನಳ್ಳಿ, ಬಿಳಗಿ, ಕವಳಿ, ಗುಂಜಗೋಡ ಕ್ಷೇತ್ರಗಳೊಳಗಿನ ೬೬ ಹಳ್ಳಿಗಳಲ್ಲಿ ೯೫ ಕುಟುಂಬಗಳೊಳಗಿನ ೯೯೯ ಜನರಿಗೆ ಇದೇ ಆಗಸ್ಟ ತಿಂಗಳಲ್ಲಿ ೧೧೬೦ ರೂಪಾಯಿಗಳನ್ನು ಹಂಚಿದರು. ಬಟ್ಟೆಯ ಅವಶ್ಯವಿದ್ದವರಿಗೆ ಬಟ್ಟೆ ಹಂಚುವ ವ್ಯವಸ್ಥೆಯಾಗಿದೆ. ಮುಂಬಯಿಯಿಂದ ವಿದ್ಯಾರ್ಥಿ ಪ್ರೇಮಿಗಳು ಹಂಚಲು ೧೪ ಬಾಂದು ಸೀರೆಗಳು ಬಂದಿವೆ. ಕೊಂಗ್ರೆಸ ಸಭಾಸದರನ್ನು ಕಳಿಸುತ್ತಿದ್ದಾರೆ.

ಇವರು ತಿಳಿಸುವದೇನಂದರೆ.— "ಇಲ್ಲಿಯ ರೈತರ ಸ್ಥಿತಿ ತೀರ ಕಂಗೆಟ್ಟಿದೆ. ಹೊಟ್ಟೆಗಿಲ್ಲದ ಅವರು ಗೋಳನ್ನು ನೋಡಲಾಗುವದಿಲ್ಲ. ಆದ್ದರಿಂದ ಉದಾರ ಸ್ಥಿತಿಯ ಸಹೋದರರು ಇವರಿಗೆ ದಯಮಾಡಿ ಸಹಾಯ ಮಾಡಬೇಕು. ಜೈಲಿನೊಳಗಿಂದ ಬಿಡುಗಡೆ ಹೊಂದಿದ ಇವರು ತಿರುಗಿ ಜೈಲಿನಲ್ಲಿ ಹೊಟ್ಟೆಯ ಗೋಳಿಲ್ಲ, ಸಂಸಾರದ ವ್ಯಥೆಯಿಲ್ಲ. ಬಿಡುಗಡೆಯಾದ್ದರಿಂದ ಈ ಕಷ್ಟ ಅನುಭವಿಸಬೇಕಾಗಿದೆ, ಎಂದು ಮರುಗುತ್ತಿದ್ದಾರೆ. ದೇಶಬಾಂಧವರು ಈ ಕಷ್ಟ ಸ್ಥಿತಿ ನೋಡಿ ನಿಧಿಗೆ ಶಕ್ತಿಮೀರಿ ನೆರವಾಗಬೇಕು" ಇತ್ಯಾದಿ

ಹಳಿಯಾಳ— (ತಾ ೩೦-೮-೧೯೩೪) ನಾಲ್ಕು ವಾರಗಳ ಹಿಂದೆ ಇಲ್ಲಿ ಪ್ಲೇಗಿಗೆ ಪ್ರಾರಂಭ ಆಯಿತು. ಅದರಿಂದ ಎಲ್ಲರೂ ಊರು ಬಿಟ್ಟು ಹೋಗಿದ್ದಾರೆ. ಆದರಿಂದ ಪ್ಲೇಗಿನ ಆರ್ಭಟ ಕಡಿಮೆಯಾಗುವದೆಂದು ಹೇಳುತ್ತಾರೆ. ಈ ತಿಂಗಳಲ್ಲಿ ೧೬-೩೩ ಇಂಚು ಮಳೆ, ಈ ವರ್ಷ ಒಟ್ಟು ೩೯-೮೬ ಇಂಚು ಮಳೆಯಾಯಿತು.

ಸೋಮವಾರ ತಾ ೨೪ನೇಗೆ ಮ್ಯುನಿಸಿಪಾಲಿಟಿಯ ಇಲೆಕ್ಷನು ನಡೆಯಿತು. ಬಹಳ ಮೋಟು ಮತದಾರರ ಮತಗಳನ್ನು ಸಂಪಾದಿಸುವದಕ್ಕಾಗಿ ಉಮೇದ್ವಾರರು ಮಾಡಿದ ಪ್ರಯತ್ನಗಳನ್ನು, ಕಾರಸ್ಥಾನಗಳನ್ನು ನೋಡಿದರು. ಇಲೆಕ್ಷನ ಗಡಿಬಿಡಿಯಲ್ಲಿ ಉಮೇದ್ವಾರರಿಗೆ ಏಳಕಗಟ್ಟಲೆ ಖರ್ಚು ತಗಲಿತಂತೆ! ಇಷ್ಟು ಖರ್ಚು ಏಕೆ ತಗಲಿತೆಂದು ಜನರು ಆಶ್ಚರ್ಯಪಡುತ್ತಾರೆ! ಇಷ್ಟೆಲ್ಲ ಗಂಟ್ರನು ಖರ್ಚು ಮಾಡಿಕೊಂಡು ಉಮೇದ್ವಾರರು ಮ್ಯುನಿಸಿಪಾಲಿಟಿಯಲ್ಲಿ ಸೇರಿ ಏನು ಸ್ವಾರ್ಥ ಸಾಧಿಸಿಕೊಳ್ಳುತ್ತಾರೆಂದು ಯಾರಿಗೂ ತಿಳಿಯದ ಮಾತು. ಮ್ಯುನಿಸಿಪಾಲಿಟಿಯೆಂದರೆ ಪ್ರತ್ಯಕ್ಷವಾಗಿ ಲೋಕಸೇವೆ ಮಾಡುವ ಪರೋಪಕಾರದ ಸ್ಥಾನಿಕ ಸ್ವರಾಜ್ಯ ಸಂಸ್ಥೆಯಾಗಿರಲು ಉಮೇದ್ವಾರರು ಇಷ್ಟೆಲ್ಲ ಖರ್ಚು ಮಾಡಿ ಮೆಂಬರರಾಗಿ ಹಿಡಿಯುವದೇಕೆ? ಈ ಸಲ ಇಲೆಕ್ಷನಿನಲ್ಲಿ ಉಮೇದಿಯಿಂದ ಮುಂದಾದವರು ಗುಡ್ಡಾಪುರದೊಳಗಿನ ಹಿಂದು ಜನರ ಸ್ಮಶಾನ ಮಾರ್ಗದ ವ್ಯವಸ್ಥೆ ಮಾಡಲಿಲ್ಲ. ಈ ಸ್ಮಶಾನದ ಮಾರ್ಗ ತೀರ ಕೆಟ್ಟುಹೋಗಿದೆ. ಬೇಸಿಗೆಯಲ್ಲಿ ಅಲ್ಲಿ ಹೋಗುವದೇ ಕಠಿಣ, ಮಳೆಗಾಲದಲ್ಲಿ ಕೇಳುವದೇ ಬೇಡ! ಹೆಣಹೊಂಬು ಜನರ ಕೆಸರು! ರಾತ್ರಿ ಹೊತ್ತಿನಲ್ಲಿ ಯಾರಾದರೂ ಸತ್ತರೆ ಹೊತ್ತುಕೊಂಡು ಹೋಗುವವರೂ ಅಲ್ಲಿಯೇ ಸಾಯುವದು ಸೈ!!! ಕ್ರಿಶ್ಚನ್ ದಫನ ಸ್ಥಳದ ವ್ಯವಸ್ಥೆಯೂ ಹೀಗೆಯೇ. ಬೇಸಿಗೆಯಲ್ಲಿ ಬಿಸಿಲು ಕಾಯುತ್ತಿದೆ, ಮಳೆಗಾಲದಲ್ಲಿ ತೋಯಿಸಿಕೊಳ್ಳಬೇಕು. ಈ ಕಡೆ ಮೆಂಬರರ ಲಕ್ಷವಿಲ್ಲ. ಒಮ್ಮೆ ಆರಿಸಿ ಸಭಾಸದರಾದೊಡನೆ ಲೋಕೋಪಕಾರದ ಮಾತನಗಳೆಲ್ಲ ವಿಸ್ಮರಣೆಯಾಗುತ್ತವೆ. ಈ ವರ್ಷದ ಇಲೆಕ್ಷನಿನಲ್ಲಿ ೩ ಹಿಂದು ವಾರ್ಡಗಳಲ್ಲಿ ೧೮ ಉಮೇದ್ವಾರರೂ, ೧ ಮುಸಲ್ಮಾನ ವಾರ್ಡಿನಲ್ಲಿ ೩ ಉಮೇದ್ವಾರರೂ ನಿಂತಿದ್ದರು. ಪ್ರತಿ ವಾರ್ಡಿಗೆ ೩ ಜನ ಸಭಾಸದರು ಆರಿಸಲ್ಪಡಬೇಕು. ಆರಿಸಿ ಬಂದವರ ಹೆಸರುಗಳು — [ಕಸಬಾ] ರಾ| (೧) ಶಂಕರರಾವ ಸದಾಶಿವರಾವ ದೇಶಪಾಂಡೆ (೨) ಮಂಗೇಶ ನಾರಾಯಣರಾವ ಶೇಣಗಾಂವಕರ, (೩) ಲಕ್ಷ್ಮಣ ರಾಮ ಕುಲಕರ್ಣಿ, [ನ ತ್ರಿಗೇರಿ] ರಾ| (೧) ಶ್ರೀಪಾದ ದತ್ತಾತ್ರೇಯ ದೇಶಪಾಂಡೆ, (೨) ಬಾಬು ಪೊರಪ್ಪಾ ಹುಲಿಹುಳಿ (೩) ಹನಮಪ್ಪಾ ಅಪ್ಪಣ್ಣಾ ಅಗೇರುಣಸೆ, [ಗುಡ್ಡಾಪುರ] ರಾ| (೧) ರಾಮಸಿಂಗ ದೌಲತಸಿಂಗ (೨) ಗೋವಿಂದ ಲಕ್ಷ್ಮಣ ಹುಲ್ಲಾಪುರಕರ, (೩) ನಿಂಗಪ್ಪಾ ಭರಮಪ್ಪಾ ಶಕ್ಕರೇರ, [ಮುಸಲ್ಮಾನ] ವಿ| (೧) ಅಬ್ದುಲ ಖಾದರ ಮ| ಅಬ್ದುಲ್ ಕರೀಮ ಗೋಕಾಕ, (೨) ಮಿಯಾ ಸಾಹೇಬ ಮ| ಮುಸೇ ನಾಯಿಕ ಸಂಗೋಳ್ಳಿ. ಇಲೆಕ್ಷನಿನಲ್ಲಿ ಸೋತ ರಾ| ಅಪ್ಪಾಜಿ ರಾಮಯ್ಯಾ ದೇಶಾಯಿ, ರಾ| ಕೃಷ್ಣಾಜಿ ರಾಮಚಂದ್ರಿ ರಾವ ಇವರು ಮತ ಎಣಿಕೆ ಸರಿಯಾಗಿ ನಡೆದಿಲ್ಲವಾಗಿ ತಕರಾರುಮಾಡಿ ದಾವೆಮಾಡುವವರಿದ್ದರಾಗಿ ತಿಳಿಯುತ್ತದೆ.

ಕಾರವಾರ— (ತಾ ೨೯-೮-೩೪) ಕೋಡಿಬಾಗ ವರದಿಗಾರರು ಬರೆಯುವದೇನಂದರೆ— ಇಲ್ಲಿಯ ದೊಡ್ಡ ಮನೆತನದವರೂ, ಮ್ಯು| ಸಭಾಸದರೂ ಆಗಿರುವವರ ಮನೆಯಲ್ಲಿ ಮೊನ್ನೆ ಸಂತಪ್ತಿ ಉತ್ಸವ ನಡೆಯಿತು. ಹುಡುಗರು ಆಡುತ್ತಿದ್ದರು. ಫಕ್ಕನೆ ಓರ್ವ ಹುಡುಗನೊಬ್ಬನ ಕಣ್ಣಿಗೆ ಏಟು ಬಿದ್ದಿತು. ಆಗ ರಾತ್ರಿ ೯|| ಘಂಟೆಯಾಗಿತ್ತು. ಡಾ| ಸಾವಂತವರಿಗೆ ಬರಬೇಕೆಂದು ಕರೆದಾಗ, ಕಾರವಾರ ಆಸ್ಪತ್ರೆಗೆ ಒಯ್ಯಬೇಕಾಗಿ ಅವರು ಅಭಿಪ್ರಾಯ ಪಟ್ಟರು. ಮೋಟಾರಿನಲ್ಲಿ ಆ ಹುಡುಗನಿಗೆ ಆಸ್ಪತ್ರೆಗೆ ಕರೆದೊಯ್ದಾಯಿತು. ಆಗ ೧೦|| ಬಡಿದಿತ್ತು. ಇಂತಹ ರಾತ್ರೆಯಾಯಿತು, ಈಗ ನಮ್ಮ ಉಪಾಯವಿಲ್ಲ" ಹೀಗೆ ಸಿವಿಲ್ ಆಸ್ಪತ್ರೆಯ ಡಾಕ್ಟರರು ಹೇಳಿದರು. "ಸರ್ಜನರಿಗೆ ಹೇಳಿ ಕಳಿಸಿರಿ," ಎಂದು ಹೇಳಲು, ಅದಕ್ಕೂ ರಾತ್ರಿಯೆಂದೇ ಉತ್ತರ. ಆದರಿಂದ ಆ ಹುಡುಗನಿಗೆ ಉಪಚಾರ ಮಾಡದೆ ಹಿಂದಕ್ಕೆ ಕರೆತರಬೇಕಾಯಿತು. ಬೆಳಿಗ್ಗೆ ಸೋಪ್ಪ ಹೆಚ್ಚಾಗಿ ರೋಗ ಹೆಚ್ಚುದಾದರಿಂದ ಹುಬ್ಬಳ್ಳಿಗೆ ಒಯ್ಯಬೇಕಾಯಿತು.



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಬಡವರಿಗೂ

ಒನ್ನಲೇ ಗುಣಕಾರಿಯಾದ ಶ್ರೇಷ್ಠ ಔಷಧ!

ಚಳಿಜ್ವರ, ಇನ್‌ಫ್ಲುಎಂಝಾ

ಮೊದಲಾದ ಜ್ವರಗಳ ವೈರಿ!!

ಮೆಡೊನ್ ಸನ್ಸ ಎಂಡ್ ಕೋ,

ಮುಂಬಯಿ ೨.

MADON SONS & Co.
PHARMACEUTICAL CHEMISTS BOMBAY

'ಕಿರ್ಲೋಸ್ಕರ'ವೆಂದರೇ-ಶ್ರೇಷ್ಠತೆ.

ಕಿರ್ಲೋಸ್ಕರ ಕಂಪನಿಯ ಕೆಲಿಗಡ್ಡಿ ಸುಲಿಯುವ ಯಂತ್ರ ಹಲ್ಲಿಯಲ್ಲಿ ಒಳೇ ಲಾಭ ಆಗುತ್ತದೆ. ಆದರಿಂದ ಖರ್ಚ ಕಡಿಮೆ ಬಿದ್ದು ಕೆಲಸವು ಹೆಚ್ಚಾಗುತ್ತದೆ. ಯಂತ್ರ ಶಾಸ್ತ್ರ ತತ್ವದಂತೆ ಇವುಗಳನ್ನು ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲಿಯಗೂ ನವಾ ಭಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು, ಇಂಜಿನು ಗಳಿಂದಲೂ ನಡಿಸಬಹುದು.



ಪತ್ರ ಬರೆಕೊಂಡಲ್ಲಿ ಸಚಿತ್ರ ಕೆಟಲಾಗು ಕಳಿಸಲ್ಪಡುವದು

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)

ಅಲ್ಲಲ್ಲಿ ಇಷ್ಟಿಷ್ಟು!

ಗಂಗಾ ಯಮುನಾ [illegible] ನ ಸರಯೂ ಮೊದಲಾದ ನದಿಗಳಿಗೆ ನೆರೆ ಬಂದು, ದಕ್ಷಿಣ ಗಂಗಾ, ಗಯಾ, ಪಾಟ್ನಾ ಮೊದಲಾದ ಪ್ರದೇಶಗಳಲ್ಲಿ ನೀರು [illegible] ಪ್ರಾಂತದ [illegible] ನೀರು ತುಂಬಿ [illegible] ಕೊಚ್ಚಿಕೊಂಡು ಹೋದವು [illegible] ನೀರಿನ ಪ್ರವಾಹದಲ್ಲಿ ಸಿಲುಕಿ [illegible] ಜೀವದ ಆಸೆಗೆ [illegible] ಮೇಲ್ಛಾವಣಿ ಹತ್ತಿ ಕೂತರು. ಮೇಲ್ಛಾವಣಿ ಇಲ್ಲದ ಜನರು ನೀರಿನ ಪ್ರವಾಹದಲ್ಲಿ [illegible] ತಮ್ಮ ಮಕ್ಕಳನ್ನು [illegible] ನೀರಿನ ಪ್ರವಾಹದಿಂದ ಕಾಪಾಡಿಕೊಂಡರು. ದೊಡ್ಡ ದೊಡ್ಡ [illegible] ಜನರ ಮನೆಗಳು [illegible] ದೇಶದ ಮೇಲೆ ಪ್ರಾಣಹಾನಿ [illegible] ನಲ್ಲಿ [illegible] ದಕ್ಷಿಣ ಬಿಹಾರ ಪ್ರದೇಶದಲ್ಲಿ ನೀರಿನ [illegible] ಮನೆ ಮಠ ಕಳಕೊಂಡ ಜನರು ನಿರ್ಗತಿಕರಾಗಿ [illegible] ಪ್ರದೇಶದಲ್ಲಿ ಭೂಕಂಪದ [illegible] ಗಂಗಾ [illegible] ನದಿಗಳು [illegible] ನಷ್ಟ [illegible] ದೊಡ್ಡ ದೊಡ್ಡ ಮನೆಗಳು [illegible] ಕೆಡವಿ [illegible] ಹಿಡಿದಿಲ್ಲ.

[illegible]

ಗಂಗಾ ಸರಯೂ ನದಿಯ ನೀರು ವಿಪರೀತ ಏರಿತು [illegible] ಸರಯೂ ನದಿಯ ನೆರೆಯಿಂದ [illegible] ಜಿಲ್ಲೆಯೊಳಗೆ [illegible] ಅನರ್ಥವು [illegible] ಕಟ್ಟಿಗೆ [illegible] ತಗಳನ್ನು [illegible] ನಿಂತ [illegible] ನೀರಿನಲ್ಲಿ [illegible] ಎಲ್ಲಾ [illegible] ಜಿಲ್ಲೆಯ [illegible] ಪ್ರವಾಹದಲ್ಲಿ ಸಿಲುಕಿ [illegible] ಜನರು [illegible] ಕೌನ್ಸಿಲಿನ ಸಭಾಸದರೂ, ದರ್ಭಂಗಾ ಜಿಲ್ಲೆಯೊಳಗಿನ [illegible] ಭೂಕಂಪದಲ್ಲಿ [illegible] ಮನೆ [illegible] ಮೇಲೆ ಬಿದ್ದು [illegible] ದೇಶ [illegible] ಪ್ರದೇಶಗಳಲ್ಲಿ ಗಂಗಾ ನದಿಯು ಉಕ್ಕೇರುತ್ತಿದೆ. ಗಂಗಾ ನದಿಯ [illegible] ಲಕ್ಷಗಟ್ಟಲೆ, ಪಶುಪಕ್ಷಿ [illegible] ಮೊದಲಾದ [illegible] ಗಳೂ ಆ ಮನೆಗಳ [illegible] ನೀರಿನಿಂದ ತುಂಬಿಕೊಂಡಿವೆ. ನದಿಯ ದಂಡೆಯ ಭಾಗಗಳ [illegible] ಭವ್ಯ, ಮುಜಫ್ಫರಪುರ, ದರ್ಭಂಗಾ, [illegible] ಭೂಕಂಪದ [illegible] ಮನೆ ಬಿಟ್ಟು [illegible] ದರ್ಭಂಗಾದಲ್ಲಿ [illegible] ಭೂಕಂಪದ [illegible] ದಿಂದ [illegible]

[illegible]

ವರಿಷ್ಠ ನ್ಯಾಯ [illegible] ಕೌನ್ಸಿಲ್ ಆಫ್ ಸ್ಟೇಟ [illegible] ಹಿಂದೂ ಸ್ತ್ರೀಯರ ಸ್ಥಿತಿಯನ್ನು [illegible] ಹಿಂದೂ [illegible] ಮಸೂದೆ [illegible] ಮೆಂಬರರು [illegible] ಮಕ್ಕಳಿಗೆ [illegible] ವ್ಯವಸ್ಥೆ [illegible]

[illegible]

ಪಂಡಿತ ಮದನಮೋಹನ ಮಾಳವೀಯರ [illegible] ಸಂಸ್ಥೆಯ [illegible] ಪ್ರತಿಜ್ಞೆಯನ್ನು ರದ್ದು ಪಡಿಸಿದರು. [illegible] ಮುಂಬಯಿಯಲ್ಲಿ ಅವರು ಉಪೋಷಣ [illegible] ಪಂಡಿತಜಿ [illegible] ಉಪೋಷಣದಿಂದ [illegible] ಪ್ರತಿಜ್ಞೆಯನ್ನು [illegible] ಮುಂಬಯಿಯ [illegible] ರದ್ದು [illegible] ಉಪೋಷಣ [illegible] ನಾನು [illegible] ಹಿಂದೂ ಸಮಾಜದಲ್ಲಿ [illegible] ಮಂಗಳೂರು [illegible] ಪಂಡಿತ ರಾಮಚಂದ್ರಜಿ ಶರ್ಮಾರವರು [illegible] ಉಪವಾಸ [illegible] ಪಂಡಿತಜಿಯವರು [illegible] ರು ಸಾರ್ವಜನಿಕವಾಗಿ ಹೊರಡಿಸಿದ ಧರ್ಮಾನವನ್ನು [illegible] ರದ್ದು ಪಡಿಸುವಂತೆ ಕೋರಿಕೆ [illegible] ಪಂಡಿತ ರಾಮಚಂದ್ರಜಿಯವರ ೩೩ ದಿನಗಳ ಉಪವಾಸವು ಸಫಲವಾದ ಬಗೆ ಸಂತೋಷ!

[illegible]

ಮುಂಬಯಿಯಲ್ಲಿ [illegible] ಗವರ್ನರರ [illegible] ವರ್ಷ [illegible] ಮುಂಬಯಿ ಸರಕಾರವು [illegible] ಮುಂಬಯಿಯೊಳಗಿನ ಆಸ್ಪತ್ರೆಗಳಿಗೆ [illegible] ಆಸ್ಪತ್ರೆಗಳಲ್ಲಿ ರೋಗಿಗಳ ವ್ಯವಸ್ಥೆಯಾಗದೆ ಮುಂಬಯಿಯಲ್ಲಿ ದೊಡ್ಡ [illegible] ಆಸ್ಪತ್ರೆಗಳ [illegible] ಮುಂಬಯಿಯೊಳಗಿನ [illegible] ಸರಕಾರದಿಂದ [illegible] ಮ್ಯುನಿಸಿಪಾಲಿಟಿಗೆ [illegible] ಮುಂಬಯಿ [illegible] ಆಸ್ಪತ್ರೆಗಳ [illegible] ಮ್ಯುನಿಸಿಪಾಲಿಟಿ [illegible] ಲಕ್ಷ [illegible] ಸರಕಾರಕ್ಕೆ [illegible] ಮ್ಯುನಿಸಿಪಾಲಿಟಿಗೆ [illegible] ಮುಂಬಯಿ [illegible] ಲಕ್ಷ [illegible] ಮ್ಯುನಿಸಿಪಾಲಿಟಿಯು [illegible] ಮಂಗಳವಾರ [illegible] ಮ್ಯುನಿಸಿಪಾಲಿಟಿಯವರು [illegible]

ಮುಂದಿನ ನೇಮಿಸಬೇಕಾಗಿ ಸೂಚಿಸಿದ್ದರೆ ಈ ಸೂಚನೆಯು ಶ್ರೀ ಕೃಷ್ಣ ನಂದಾವರವರು ಮಾಡಿದ್ದನಂತರೆ — ಹಿಟ್ಲರನ ಬಾಲಕರ ಪ್ರೇರಣೆಯಿಂದಲೇ ಸುಳ್ಳು ಟೀಕೆಗಳು ತಯಾರು ಮಾಡಲ್ಪಟ್ಟವು, ದುಡ್ಡು ಒಟ್ಟು ಮಾಡಲು ನೇಮಿಸಿದ ಕಮಿಟಿಯೇ ಸುಮಾರು ೧೦೦ ರೂಪಾಯಿ ತಿಂದರು ೫೦೦ ರೂಪಾಯಿ ತಿಂದಿದ್ದಾರೆ ೫೦೦೦ ರೂಪಾಯಿ ಎಂದವರಿದ್ದಾರೆ. ಅವರವರ ಪಕ್ಷಪಾತಿಗಳ ತಕ್ಕಂತೆ ಅವರವರ ಹಂಚಿಕೊಂಡಿದ್ದಾರೆ. ಹಿಟ್ಲರನೂ ಸೇರಿದ ಧನಶಾಸ್ತ್ರರೆಲ್ಲರೂ ಸಂಪಾದನೆ ಮಾಡಿದವರೇ. ಹೊಟ್ಟೆ ತುಂಬಿದವರ ಮೇಲೆ ಇನ್ನೇ ವಾಗ್ವಾದ ಕಂಬ ವಿಚಾರವಾದಿತ್ತು, ಅವರ, ಎಲ್ಲರೂ ಬಂದು ಹೊರವಿದ್ದೇವೆಂಬ ವಿಶ್ವಾಸದಿಂದ ಬಸ್ಸುಗಳ ಗೋಡೆ ಬಿಟ್ಟರು. ಉತ್ಸವದ ಸ್ಥಳದಲ್ಲಿ ಅಂಗಡಿ ಹಾಕಲು ಬಾಡಿಗೆ ಕಟ್ಟಿಕೊಂಡು ಕಮಿಟಿಯವರು ಹಿಂದೆಗೆ ತೆಗೆದುಕೊಂಡವರ್ ಕೂಡದ, ಕಷ್ಟದಲ್ಲಿ ಸ್ವಾಮಿತ್ರರಿಗೆ ಪ್ರತ್ಯೇಕವಾಗಿ ಕೊಟ್ಟರು. ಒಟ್ಟು ೩೫ ಸಾವಿರ ರೂಪಾಯಿ ಕೊಟ್ಟು ಉತ್ಸವದ ಸರಕುಗಳ ಖರೀದಿ ಮಾಡಿಕೊಂಡಿದ್ದರು. ಕಮಿಟಿಯವರು ಅವರಿಗೆ ಲಾಭ ಸುಕೊಡುತ್ತ ಮಾಡಿಕೊಡಲಿಲ್ಲ. ಇತರರಿಗೆ ವಿಮೋಚನ ಹಚ್ಚಿಗೊಟ್ಟರು. ಲೆಕ್ಕದಲ್ಲಿ ಜಮಾಖರ್ಚಿನ ಖಾತೆಯಲ್ಲಿ ಏನೂ ಉಳಿತಾಯವಿಲ್ಲ. ಇದರಿಂದ ಬಹಿಷ್ಕಾರವಾಗಬೇಕು” ಇತ್ಯಾದಿ. ಸರ್ ಬ್ರಿಜ್‌ಮೋಹನ ಬಹಾದೂರಯವರು ಈ ಸೂಚನೆಗೆ ಅನುಮೋದನ ಕೊಟ್ಟರು. ಸರಕಾರದ ಮ್ಯಾಕೆಜರ್ ಜಜ್ಜರಿಗೆ ಹೇಳಿ ಈ ಪ್ರಕರಣದ ಚೌಕಶಿ ನಡೆಸಲಿಕ್ಕಿದ್ದಕ್ಕೆ, ಆ ಚೌಕಶಿ ತಗಲುವ ಖರ್ಚನ್ನು ಕಮಿಟಿ ಕೊಡುತ್ತೇವೆಂದು ಸರ್ ಬ್ರಿಜ್‌ಮೋಹನ ಬಹಾದೂರಯವರು ಮುಗಿದರು. ಸರ್ ಬ್ರಿಜ್‌ಮೋಹನವರು ಲಕ್ಷಾಧೀಶರು, ಸರಕಾರದ ಪಕ್ಷಪಾತಿಗಳು ಕಾಂಗ್ರೆಸ ಪಕ್ಷಪಾತಿಗಳಲ್ಲ! ೧೯೩೪ ರ ಹೈದರಾಬಾದ ಸಂಸ್ಥಾನ ಪತ್ರದಲ್ಲಿ ನಡೆದ ವರ್ತಮಾನದ ವಿವರಗಳಿಗೆ ಗೋಲವಿದೆ!

ಬ್ರಿಟಿಶ ಪ್ರಜಾಜನರಿಗೆಲ್ಲ ಆನಂದದ ಸುದ್ದಿ, ರಾಜ್ಯ ಶೋಕ್ಷವದ ವಾರ್ತೆ. ಚಕ್ರವರ್ತಿ ಪಂಚಮ ಜಾರ್ಜರ ಚತುರ್ಥ ಪುತ್ರರಾದ ಜಾರ್ಜ್‌ರವರು ಯುಗೋಸ್ಲಾವಿಯಾ ದೇಶದ ರಾಜಕುಮಾರಿಯೊಡನೆ ಡಿಸೆಂಬರ ೨೦ ನೇ ತಾರೀಖಿಗೆ ವಿವಾಹವಾಗುತ್ತಾರೆ, ಬಾದಶಹರು ಸಮ್ಮತಿ ಕೊಟ್ಟಿರುತ್ತಾರೆ. ರಾಜಪುತ್ರ ಜಾರ್ಜರು ಈಗ ಯುಗೋಸ್ಲಾವಿಯಾದಲ್ಲಿದ್ದು ಒಂದೇ ಪತ್ನಿಯಾಗಲಿರುವ ಸ್ನೇಹ ಬೆಳೆಸುತ್ತಿದ್ದಾರೆ. ಇನ್ನು ೮—೧೦ ದಿನಗಳಲ್ಲಿ ಬಾವಿ ಪತಿ-ಪತ್ನಿಯರು ಲಂಡನಿಗೆ ವಿವಾಹ ಮಾಡಿಕೊಳ್ಳಲಿಕ್ಕಾಗಿ ಬರುವವರಿದ್ದಾರಂತೆ. ಮರೀನಾ ರಾಜಪುತ್ರಿಯು ರೂಪಯೌವನ ಸಂಪನ್ನಳು, ಇಂಗ್ಲಿಷ ಭಾಷೆಯನ್ನು ಸುಂದರವಾಗಿ ಮಾತಾಡಬಲ್ಲಳು. ವಳು ಬ್ರಿಟಿಶ ಜನಾಂಗದ ಪ್ರೇಮವನ್ನು ಗಳಿಸುವಳು. ‘ಟೈಮ್ಸ್’ ಪತ್ರಿಕೆಯು ಅಂಬೋಣ: ಕೆಲ ವರ್ಷಗಳ ಹಿಂದೆ ಅವಳು ಇಂಗ್ಲಂಡಿಗೆ ಬಂದಿದ್ದಳು. ಆ ಕಾಲದ ರಾಜಪುತ್ರ ಜಾರ್ಜರಿಗೂ ರಾಜಪುತ್ರಿ ಮರೀನಾರವರಿಗೂ ಪ್ರಥಮ ಸಂದರ್ಶನವಾಯಿತು. ಅದೇ ಪ್ರಥಮದರ್ಶನ ಪ್ರೀತಿ. ಈ ವರ್ಷದ ಸಂಗೀತದ ಪ್ರೀತಿ ಬೆಳೆದು ಆಗಿನ ಕಾಲದಲ್ಲಿಯೂ ಈ ವರ್ಷದ ಮಿತ್ರರು. ಆಗಸ್ಟ ೧೯ನೇ ತಾರೀಖಿಗೆ ರಾಜಪುತ್ರರು ಯುಗೋಸ್ಲಾವಿಯಾಕ್ಕೆ ವಿವಾಹದ ಮಾರ್ಗವಾಗಿ ಹೋಗಿ ರಾಜಪುತ್ರಿಯ ಸಮ್ಮತಿ ಪಡೆದು ಮಾತಾಪಿತೃಗಳ ಬಗ್ಗೆ ಅರಸರ ಸಮ್ಮತಿ ಕೇಳಿಕೊಂಡರು. ಬಾದಶಹರು ಸಮ್ಮತಿ ಕೊಟ್ಟು ಪ್ರಕಟಿಸಿ ಸೇರಿದರು. ರಾಜಪುತ್ರರಿಗೆ ಬ್ರಿಟಿಶ ಪಾರ್ಲಿಮೆಂಟಿನ ೧೦ ಸಾವಿರ ಪವನು ಈಗ ಬರುತ್ತದೆ, ವಿವಾಹವಾದ ಬಳಿಕ, ೨೫ ಸಾವಿರ ಪವನು ಬರುತ್ತದೆ. ಡಿಸೆಂಬರ ೨೦ ನೇ ತಾರೀಖಿಗೆ ರಾಜಪುತ್ರರಿಗೆ ೩೩ ನೇ ವರ್ಷ ಮುಟ್ಟುತ್ತದೆ, ರಾಜಪುತ್ರಿಗೆ ೨೯ ನೇ ವರ್ಷ ಪ್ರಾರಂಭವಾಗುತ್ತದೆ. ಬ್ರಿಟಿಶ ಸಾಮ್ರಾಜ್ಯದಲ್ಲೆಲ್ಲ ಈ ವಾರ್ತೆ ಕೇಳಿ ಅದೀಗಲೇ ಆನಂದವೇ ಆನಂದ!!

ಗೋಲ್ಡನ ಸಂಸ್ಥಾನದಲ್ಲಿ ಆಗಸ್ಟ ೨೫ ನೇ ತಾರೀಖಿನಿಂದ ರಾಜ್ಯಾರೋಹಣದ ಸುವರ್ಣ ಮಹೋತ್ಸವ ನಡೆದಿದೆ. ೧—೨ ತಿಂಗಳುಗಳ ಹಿಂದೆ ಗೋಂಡಲ ಸಂಸ್ಥಾನದಲ್ಲಿ ಈ ಉತ್ಸವ ನಡೆಯುವದು. ಆಗಸ್ಟ ೨೫ ನೇ ತಾರೀಖಿಗೆ ಮಹಾರಾಜರಾದ ಸರ್ ಭಗವತಸಿಂಹಜಿಯವರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತಿಯಾಗಲೆಂದು ದೇವಸ್ಥಾನಗಳಲ್ಲಿಯೂ, ಪ್ರಾರ್ಥನಾ ಮಂದಿರಗಳಲ್ಲಿಯೂ ಪ್ರಾರ್ಥನೆಯಾಯಿತು. ಬಡಬಗ್ಗರಿಗೆ ಅನ್ನಸಂತರ್ಪಣೆಯಾಯಿತು, ದನ-ಕರುಗಳಿಗೆ ಹುಲ್ಲಿನ ಕಣಿಕೆಗಳಾಯಿತು, ಮಕ್ಕಳಿಗೆ ಮಿಠಾಯಿ ಹಂಚಲಾಯಿತು. ಅಮೇಲೆ ಸರ್ ಭಗವತಸಿಂಹಜಿಯವರು ಸುವರ್ಣ ತುಲಾಭಾರದ ವಿಧಿಯನ್ನು ನಡೆಸಿದರು. ೧೩೪ ರತ್ತಲು ತೂಕದ ಬಂಗಾರ ತೂಗಿದರು. ಆ ಮೇಲೆ ಮಹಾರಾಜರು ಅನೇಕ ವಿಧದ ಅಪರಾಧಗಳನ್ನು ಕ್ಷಮಿಸಿ ಕೈದಿಗಳನ್ನು ಬಿಡುಗಡೆ ಮಾಡಿದರು. ಜಾಹೀರನಾಮೆಯನ್ನು ಓದಿ ಹೇಳಿದರು. ಇದರಂತೆ ಅವರಿಗೆಲ್ಲ ವಿಶೇಷ ಉತ್ಸವ ಮಂಡಳಿಯವರು ಅವರಿಗೆ ಮಾನಪತ್ರಗಳನ್ನು ಅರ್ಪಿಸಿದರು. ಮಹಾರಾಜರು ತುಲಾಭಾರದ ಬಂಗಾರವನ್ನು ಸಂಸ್ಥಾನದ ಪ್ರಜೆಗಳ ಹಿತಕ್ಕಾಗಿಯೇ ಉಪಯೋಗಿಸಬೇಕೆಂದು ಅಪ್ಪಣೆ ಮಾಡಿದರು. ಸಾಯಂಕಾಲ ಸ್ತ್ರೀಯರು ಮಹಾರಾಜರಿಗೆ ಮಾನಪತ್ರವನ್ನಿತ್ತು ಸಕ್ತಿಯಿಂದ ಸ್ತ್ರೀ-ಶಿಕ್ಷಣದ ಏರ್ಪಾಟು ಮಾಡಿದ ಬಗ್ಗೆ ಆಭಾರ ಮನ್ನಿಸಿದರು. ರಾತ್ರಿ ಮಹಾಸಭೆಯಲ್ಲಿ ಮಿಷ್ಟಾನ್ನ ಭೋಜನವಾಯಿತು. ಅದೇ ದಿನ ಲಂಡನ ‘ಡೇಲಿ ಟೆಲಿಗ್ರಾಫ’ ಪತ್ರಿಕೆಯಲ್ಲಿ ಮಹಾರಾಜರ ಕಾರಕೀರ್ದಿಯನ್ನು ವರ್ಣಿಸುವ ಒಂದು ಪ್ರಮುಖವಾದ ಲೇಖ ಪ್ರಕಟವಾಯಿತು. ಆ ಲೇಖದಲ್ಲಿ ಮಹಾರಾಜರ ಭಾವಚಿತ್ರ ಸಹ ಪ್ರಕಟಗೊಂಡಿತ್ತು. ಮಹಾರಾಜರ ಕಾರಕೀರ್ದಿಯಲ್ಲಿ ಬಹಳ ಸುಧಾರಣೆಯಾಯಿತೆಂದೂ, ಸುವರ್ಣ ಮಹೋತ್ಸವ ಎಂಬ ಹೆಸರು ಸಾರ್ಥಕವಾಯಿತೆಂದೂ ಉತ್ಸಾಹದಿಂದ ಬರೆದು ಮಹಾರಾಜರಿಗೆ ಸುಖ್ಯಾತಿ ಮನವಿ ಹೊಗಳಿದ್ದರು. ‘ಡೇಲಿ ಟೆಲಿಗ್ರಾಫ’ ಪತ್ರಿಕೆ ಹಿಂದೂಸ್ಥಾನಕ್ಕೆ ಸಂಬಂಧಪಟ್ಟ ಪತ್ರಿಕೆಯೆಂದು ಎಲ್ಲರೂ ತಿಳಿವ ವಿಷಯ. ಗೋಂಡಲ ಸಂಸ್ಥಾನದಲ್ಲಿ ಉತ್ಸವ ನಡೆದ ದಿವಸವೇ ಲಂಡನದ ‘ಡೇಲಿ ಟೆಲಿಗ್ರಾಫ’ ಪತ್ರಿಕೆಯಲ್ಲಿ ಸವಿಸ್ತಾರ ಸಚಿತ್ರ ಲೇಖ ಬರೆಯುವ ವ್ಯವಸ್ಥೆ ಮಾಡಿದ್ದು ಉತ್ಸವ ಮಂಡಳಿಯ ತತ್ಪರತೆಯ ಸಾಕ್ಷಿ.

ಮುಂಬಯಿಯ ‘ಡೇಲಿ ನ್ಯೂಸ್’ ಪತ್ರಿಕೆಯು ರಾಜಕೋಟದ ಸುದ್ದಿಗಾರರು ಈ ಉತ್ಸವದ ವೃತ್ತಾಂತಗಳನ್ನು ಒತ್ತರದಿಂದ ವರ್ಣಿಸಿದ್ದಾರೆ. ಆ ಮಹಾರಾಜರ ಕಾರಕೀರ್ದಿಯನ್ನು ಸಮಾಲೋಚಿಸಿದ್ದಾರೆ — “ಇಂದು ಗೋಂಡಲ ಸಂಸ್ಥಾನಿಕರು ಸುವರ್ಣ ರಾಜ್ಯಾರೋಹಣ ಉತ್ಸವವನ್ನು ನೆರವೇರಿಸುತ್ತಾರೆ. ಸಂಸ್ಥಾನಿಕರ ಅಧಿಕಾರಿಗಳು, ಆಪ್ತಮಿತ್ರರೂ ಭಟ್ಟಂಗಿಗಳೂ ಕೂಡಿ ಉತ್ಸವ ಮಂಡಳಿಯನ್ನೇರ್ಪಡಿಸಿದ್ದಾರೆ. ಹೊಟ್ಟೆಪಾಡಿಗಾಗಿ ಬೇಕಾದ ಹಾಗೆ ಸ್ತುತಿಪಾಠ ಮಾಡಿ ಲೇಖ ಬರೆಕೊಡುವವರ ಕಡೆಯಿಂದ ಲೇಖ ಬರೆಕೊಂಡು ದೇಶ-ವಿದೇಶಗಳಲ್ಲಿ ಮಹಾರಾಜರ ಸತ್ಕೀರ್ತಿ ಹಬ್ಬುವಂತೆ ಉತ್ಸವ ಮಂಡಳಿಯವರು ಏರ್ಪಡಿಸಿದ್ದಾರೆ. ಆದ್ದರಿಂದ ಈ ಕಾರಕೀರ್ದಿಯ ದುಷ್ಪರಿಣಾಮಗಳನ್ನು ತೋರಿಸುವದು ನಿಷಿದ್ಧವೆಂದರೆ — ದಿವಸೋ ದಿವಸ ಗೋಂಡಲ ಸಂಸ್ಥಾನದ ವಿಷಯ — ಸಂಸ್ಥಾನದ ಕಾರ್ಯಕರ್ತರ ಬಗ್ಗೆ ಭಾಷಣ ಸ್ವಾತಂತ್ರ್ಯವಿಲ್ಲ, ವರ್ತಮಾನಪತ್ರಗಳ ಸ್ವಾತಂತ್ರ್ಯವಿಲ್ಲ, ವಾಚನ ಸ್ವಾತಂತ್ರ್ಯವೂ ಇಲ್ಲ. ಬ್ರಿಟಿಶ ಸರಹದ್ದಿನಿಂದ ಇಲ್ಲಿ ಬರುವ ೧೮ ವರ್ತಮಾನ ಪತ್ರಗಳಿಗೆ ಪ್ರತಿಬಂಧವಿದೆ. ಅವುಗಳನ್ನು ತರಿಸುವವರಿಗೆ ಬಹಳ ದಂಡ ದಿನದಿನಕ್ಕೆ ಸ್ವೀಕರಿಸಿ ತಪ್ಪು ಕಳಿಸಿದ್ದಲ್ಲಿ ದಕ್ಷ ಕೊಳ್ಳುವವರಿಗೆ ದಂಡ. ಧಾರ್ಮಿಕ-ಸಾಮಾಜಿಕ ಚರ್ಚೆ ಮಾಡುವ ವರ್ತಮಾನ ಪತ್ರಗಳನ್ನೂ ಇಲ್ಲಿ ತರಿಸಬಾರದು. ಸಭೆಗಳನ್ನು ಸಂಸ್ಥಾನಿಕರ ಅಪ್ಪಣೆಯಿಲ್ಲದೆ ನೆರಿಸ ಕೂಡದು. ನ್ಯಾಯಾಧೀಶರಿಗೆ ಅಂಥ ಕೊಟ್ಟಲ್ಲಿ ಬೇಕಾದ ಸಮಾಧಾನದ ತೀರ್ಪು ಕೊಳ್ಳಬಹುದು. ಇಲ್ಲಿ ಮ್ಯುನಿಸಿಪಾಲಿಟಿಯಿಲ್ಲ, ಇಲ್ಲವೆ ಬೇರೆ ಪ್ರಾತಿನಿಧಿಕ ಸಂಸ್ಥೆಗಳೂ ಇಲ್ಲ. ಆದಾಗ್ಯೂ ಪ್ರಜೆಗಳ ಕಡೆಯಿಂದ ಮ್ಯುನಿಸಿಪಲ್ ಟ್ಯಾಕ್ಸ್ ಎಂದು ೧೦ ಲಕ್ಷ ರೂಪಾಯಿಗಳು ವಸೂಲಾಗುತ್ತವೆ. ಅವುಗಳಲ್ಲಿ ೨೦ ಸಾವಿರ ರೂಪಾಯಿಗಳು ಮಾತ್ರ ಜನರ ಹಿತಕ್ಕಾಗಿ ಉಪಯೋಗಿಸಲ್ಪಡುತ್ತವೆ. ಕೆಲ ವರ್ಷಗಳ ಹಿಂದೆ ಜನರಿಗೆ ತೆರಿಸುವದಕ್ಕಾಗಿ ಧಿಮಾಕಿನೊಳಗಿನ ೫ ಮಂದಿ ವಯಸ್ಕರ ಹುಡುಗರಿಗೆ ರಾಜದ್ರೋಹದ ಅಪರಾಧದ ಮೇರೆಗೆ ಹಿಡಿದು ಶಿಕ್ಷೆ ಮಾಡಿಬಿಟ್ಟರು. ಅವರೆಲ್ಲರ ಹಂಚಿಕೆಯಿಂದ ಮುಂಬಯಿಗೆ ಓಡಿ ಹೋದರು. ಗೋಂಡಲದ ಪೋಲೀಸರು ಅವರಿಗೆ ಹಿಡಿದು ಮುಂಬಯಿ ಹ್ಯಾಕೋರ್ಟಿನಲ್ಲಿ ಖಟ್ಲೆ ನಡೆಸಿದರು. ಅಪರಾಧ ರುಜುವಾತಿನಷ್ಟು ಪ್ರಮಾಣವಿಲ್ಲವಾಗಿ ನ್ಯಾಯಾಧೀಶರು ಅವರಿಗೆ ಬಿಡುಗಡೆ ಮಾಡಿದರು. ಮಹಾರಾಜರ ನಗರ ರಚನೆಯು ಬಹಳ ಹೆಚ್ಚು. ಅದಕ್ಕಾಗಿ ಅಚ್ಚುಕಟ್ಟಾದ ನಕಾಶೆಗಳನ್ನು ತಯಾರಿಸಿ ಆ ನಕಾಶೆಯ ರೇಷೆಯೊಳಗೆ ಬಂದ ಆವಾರಗಳನ್ನು ನಿಷ್ಠುರತೆಯಿಂದ ಕೆಡವುತ್ತಾರೆ. ಆ ಆವಾರಗಳ ಬಗ್ಗೆ ಜನರಿಗೆ ನಷ್ಟ ಭರಪಾಯಿ ಕೊಡುವದಿಲ್ಲ. ಭರಪಾಯಿ ಬೇಡಿದರೆ ಶಿಕ್ಷೆಯು ಕೊಡಲ್ಪಡುವದು. ಲಕ್ಷಾವಧಿ ರೂಪಾಯಿ ಖರ್ಚು ಮಾಡಿದ ಮನೆಗಳು ಈ ನಗರ ರಚನೆಯ ಸಂಭ್ರಮದಲ್ಲಿ ನೆಲಸಮವಾದವು. ಲಕ್ಷಾಧಿಪತಿಗಳು ಭಿಕ್ಷಾಪತಿಗಳಾದರು. ನಗರದ ರಚನೆಗಾಗಿ ಮನೆ ಕಳೆದ ಪಡೆಕೊಂಡ ಸ್ಥಳ ನಗರ ರಚನೆಯ ಕಾರ್ಯಕ್ಕೆ ವಿಕ್ರಿ ಬೆಲೆಯಲ್ಲಿ ಅದನ್ನು ಸರಕಾರದ ಮಾಲೀಕನು ತಮ್ಮದು ಬೆಲೆ ಕೊಟ್ಟು ಕೊಳ್ಳಬೇಕು, ಆ ಸ್ಥಳದಲ್ಲಿ ಆವಾರವನ್ನು ಕಟ್ಟಲೇ ಬೇಕು. ೬ ತಿಂಗಳಲ್ಲಿ ಆವಾರವು ಕಟ್ಟದಿದ್ದಲ್ಲಿ ಆ ಸರಕಾರ ಜಪ್ತಿಯಾಗುತ್ತದೆ. ಇಲ್ಲಿ ೬೦೦ ಮಂದಿ ಪೋಲೀಸರಿರಬೇಕು ೧೦೦ ಇನಸ್ಪೆಕ್ಟರುಗಳು ಇರಬೇಕು. ರಾಜ್ಯದ ೫೦೦ ರಲ್ಲಿ ೬೬ ಮೈಲು ರಸ್ತೆಗಳು, ೫೧ ಕೋರ್ಟುಗಳು, ೩೦ ಅಧಿಕಾರಿಗಳ ಠಾಣೆಗಳು ಇವೆ. ೪೦೦ ಜನರು ೧೦೫ ಮೈಲು ಚಚ್ಚೌಕ ಪ್ರದೇಶದಲ್ಲಿರುವ ೧೭೫ ಗ್ರಾಮಗಳ ರಕ್ಷಣೆ ಮಾಡಬೇಕು. ಕಷ್ಟವು. ಪೋಲೀಸ ಸಂಖ್ಯೆಯಿಲ್ಲವೆ ಕಾರ-ಭೋಕರ ಉಪಟಳ ಹೇಳತೀರದು. ಎಲ್ಲರೂ ಒಂದೇ ತನ್ನಾದವರೇ. ಪಕ್ಕಗಳು ಸಂಸ್ಥಾನದ ಅಧಿಕಾರಿಗಳಿಗೆ ಸಂಕೋಚವು ತೆರುತ್ತಾರೆ. ಈ ಸಂಸ್ಥಾನದಲ್ಲಿ ಹಿಂದೂಗಳ ಪಾಲು ಇಲ್ಲ. ಸುವರ್ಣರಾಜ್ಯರೋಹಣೋತ್ಸವ ನಿಮಿತ್ತವಾಗಿ ಪ್ರತಿಯೊಬ್ಬ ಆಧಿಕಾರಿಯು ಕಡೆಯಿಂದ ೨—೩ ತಿಂಗಳ ಸಂಬಳ ಪಡೆಯಲಾಯಿತು. ಬಡಕರ್ಮಚಾರಿಗಳ ಕಡೆಯಿಂದಲೂ ಸಂಬಳ ವಸೂಲಾಗಿದೆ. ವರ್ತಕರ ಕಡೆಯಿಂದ ಅವರವರ ಐಪತ್ತಿನಂತೆ ರೂ ೧೧ ರಿಂದ ೫೧—೧೦೦ ರ ವರೆಗೆ ಸ್ವೀಕರ ಅಧಿಕಾರಗಳ ಬಲವಂತದಿಂದ ಪಡೆಯಲ್ಪಟ್ಟವೆ. ಮಹಾತ್ಮರು ೧೯೨೫ ನೆಯ ರಾಜಕೀಯ ಪರಿಷತ್ತಿಗೆ ಬಂದಾಗ, ಗೋಂಡಲ ಸಂಸ್ಥಾನವನ್ನು ಕಾಂಗ್ರೆಸ ಕಾರ್ಯಕರ್ತರು ಒಂದು ಆದರ್ಶವಾಗಿ ಅಪ್ಪಣೆ ಮಾಡಿದರು. ಆ ಸಂಸ್ಥಾನದಲ್ಲಿ ರಾಜಕೀಯ ಕಾರ್ಯಕ್ಕಾಗಿ ಸಹ ಪ್ರವೇಶ ಮಾಡಬಾರದೆಂದು ಕಟ್ಟಪ್ಪಣೆ ಕೊಟ್ಟರು, ಇಷ್ಟು ಅನ್ಯಾಯಗಳು ಈ ಸಂಸ್ಥಾನದಲ್ಲಿ ನಡೆಯುತ್ತವೆ. ಅಂಥ ಸಂಸ್ಥಾನದ ಮಹಾರಾಜರ ಸುವರ್ಣ ರಾಜ್ಯಾರೋಹಣ ಮಹೋತ್ಸವದ ಪರಿ ಎಷ್ಟೆಂದು ಬಣ್ಣಿಸುವದು”

ವಂಕ್ಟ ನ್ಯಾಯವಿಧಾಯಕ ಸಭೆಯು ಕೌನ್ಸಿಲ್ ಆಫ್ ಸ್ಟೇಟಿನ ಅಧ್ಯಕ್ಷರಾದ ಮಿ। ಹುಸೇನ ಇಮಾಮರವರು ಬ್ರಿಟಿಶ-ಹಿಂದೀ ಸೈನಿಕರ ಖರ್ಚಿನ ಬಗ್ಗೆ ಕೇಳಿದ್ದಕ್ಕೆ ಹಿಂದುಸ್ಥಾನದೊಳಗಿನ ಬ್ರಿಟಿಶ ಸೈನಿಕರಿಗಾಗಿ ೧೯ ಕೋಟಿ ರೂಪಾಯಿ ಖರ್ಚು, ಹಿಂದೀ ಸೈನಿಕರಿಗಾಗಿ ೧೭ ಕೋಟಿ ರೂಪಾಯಿ ಖರ್ಚಾಗುತ್ತವೆಂದು ಸೇನಾಪತಿಗಳು ಹೇಳಿದರು. ಹಿಂದೀ ಸೈನಿಕರ ಸಂಬಳ ಬ್ರಿಟಿಶ ಸೈನಿಕರ ಪಟ್ಟದ

ಆದುನಿಕ ಶ್ರೇಷ್ಠ ತತ್ವಜ್ಞಾನಿಗಳು.

ಸುದೀರ್ಘವಾದ ಅವಧಾನ ಸ್ಥಿಯ ಕಾಳರಾತ್ರಿಯು ಮುಗಿದು ೧೯ನೇಯ ಶತಮಾನದ ಸಜ್ಯಜ್ಞಾಸ್ಕರನು ತನ್ನ ಹೊಂಗಿರಣಗಳನ್ನೆತ್ತಿಲೂ ಎಂಬ ವಹಿ ಬರುತ್ತಿರುವ ಈ ವಂಗಲ ಪ್ರಭಾತ ಸಮಯದಲ್ಲಿ ಸ್ವಾಮಿ ವಿವೇಕಾನಂದ ಸದ್ವಿಚಾರಗಳ ದಿವ್ಯ ಮೂರ್ತಿಯಾದ ಮಹಾತ್ಮರಂತಹ ವಿಭೂತಿಗಳು ವಿಶಾಲ ಭಾರತಕ್ಕೆ ಒಲಿಸಿದ್ದು ಮಹಾಭಾಗ್ಯವೇ ಎನ್ನಬೇಕು. ಸಕಲ ಸತ್ ಉಜ್ವಲ ವರ್ಣಯೋಗಿಗಳೆಂದು ಇನ್ನೂ ಮುಂದೆ ಒಂದು ಭಾರತ ಭಾಗ್ಯವಾಗಿ ಬೆಳಗಿದ ಅವರು ವರ್ಷಗಳ ತೃಪ್ತಿ ಕತೆಯನ್ನು ಎಂದ ತತ್ವಜ್ಞಾನದ ಜೀವ ಜೀವಾಳವನ್ನೆ ಸಮೂಲವಾಗಿ ಅರಿತುದು ಒಂದೊಂದು ಉದಾಹರಣೆಯು ಶ್ರವ ಈ ಮುಂದೆ ಒಂದು ಜಿಜ್ಞಾಸುಗಳ ತತ್ವಾನ್ವೇಷಣೆಗಳನ್ನು ಮುಗ್ಧವಾಗಿ ಮಾಡುತ್ತಾರೆ. ತತ್ವಜ್ಞಾನ ಭಂಡಾರವನ್ನಲ್ಲಿ ವಿಶೇಷವಾಗಿ ಸಾರ್ಥಕ ಪ್ರಿಯ ವರ್ಗ ಧರ್ಮಶಾಸ್ತ್ರದಂತಹ ಉದ್ದಮ ನಿಬಂಧನೆಗಳನ್ನು ಜನತೆಗಾಗಿ ... ಮನು ವ ಋಷಿಯು ... ಬೆಂಬಲವನ್ನಿತ್ತ ... ದಸ್ವೇಕ್ಷಪ ಇಂದು ಮಹಾತ್ಮರ ಜೀವಾತ್ಮನೊಂದಿಗೆ ಬೆರೆತು ... ಭಾರತೀಯರ ಕಲ್ಯಾಣ ಮಾಡಬೇಕೆಂಬ ಆಸೆಯನ್ನು ವಹಿಸುತ್ತದೆ ... ಸಮಾಜೋನ್ನತಿಯ ... ಕಾರ್ಯದಲ್ಲಿಯೂ ... ಕಾರಣದಂತಹ ... ಸಮಸ್ತ ಪೂರ್ಣ ಮಹಾಪುರುಷರ ಕ್ಷಿಯೂ ... ಗಳಿಗೆ ... ಸುಂದರ ವಿಭೂತಿಗಳು ಧಾರ್ಮಿಕ ... ದಲ್ಲಿಯ ... ಸಮಯ ... ಬೀರುವ ಒಂದೊಂದು ದಿವ್ಯ ಕಿರಣಗಳ ಮೆರುಗನ್ನು ಶ್ರದ್ಧಾಪೂರ್ಣ ಜಿಜ್ಞಾಸೆಯಿಂದ ... ಪ್ರಸಂಗದ ... ವು ಒಂದು ಅರಿವು ... ಕಾವ ವ್ಯಕ್ತಿಗೆ ಸ್ಥಿರವಾಗಿಯೂ ಒಂದು ... ಬೇಕು ಅವರ ನುಡಿಗಳ ಗೂಢಾರ್ಥವನ್ನರಿಯಲು ... ಕಾವ್ಯಮಯ ... ಸ್ಪತ್ಯಗಳು ... ಜಿಜ್ಞಾಸೆ ಬೇಕು ... ಕ್ಷೇಮಕರವಲ್ಲ. ನನ್ನ ಉತ್ತರ ... ಈ ವರೆಗೆ ಅನೇಕ ದೃಷ್ಟಿಯ ಸಂದರ್ಭಗಳಲ್ಲಿಯೂ ... ದಿಂದ ಅವರಿಗೆ ... ಸ್ಮೃತ್ಯ ... ಸತ್ತಿರುವಂತೆ ... ಪರಿಸ್ಥಿತಿಯಲ್ಲಿಯೂ ಇದರಿಂದು ... ದೃಷ್ಟಿಯನ್ನು ... ಅವರ ... ಕೃತ್ಯಗಳಲ್ಲಿನ ... ಯಿಂದ ಅವಲೋಕಿಸಿ ತನ್ಮೂಲಕ ದೊರೆಯುವ ... ಸದ್ಬೋಧವನ್ನು ... ಹೊಂದುವಾಗೆಂಬ ... ಅರಿತವರಲ್ಲಿಯೂ ಅರಿಯದವರಲ್ಲಿಯೂ ವಿನಯವಾಗಿ ಪ್ರಾರ್ಥಿಸುತ್ತೇನೆ

ರಾಜೀವಂ ತಸರ್ವದಾಪ್ಯ ದಪೋಲಿಪಾರ್ಥ್ಯಕ್ಯ
ತತ್ವಬುದ್ಧಾ.

ರಾಜಂ ರಾಜನ ತಾನೆ ರಾಜ ಋಷಿಯು

ರಾಜರ್ಷಿಯ ಲಕ್ಷಣಗಳು ಈ ರೀತಿಯಲ್ಲಿ ಹೇಳಲ್ಪಟ್ಟವೆ ... ಗಳಲ್ಲಿ ಮೂಡಿಬರುವ ... ವಾದರೇನು ಅದಕ್ಕೆಂದು ದಿವ್ಯ ಸ್ಥೈಯ ಬೇಕು. ತಾನೇ ದೇವಪೂಜೆಗೆ ಅರ್ಹವಾಗುಂದು ... ಮಹರ್ಷಿಯು ... ವಾಸಂಗಗಳಿಂದ ... ಅವನಾತ್ಮವೆ ಪರಿಶುದ್ಧವಾದ ಸಂವೇದನ ಪೂರ್ಣವಾಗಿ ಉದ್ದೇಶವಾಗಿಯೇ ... ಅವನೇ ಸಾ ... ನು! ಅವನೇ ... ಮುಂದಕ್ಕೆ ಹರಿದೋಯ್ಯಲು ಯೋಗ್ಯನು ... ದಿವ್ಯ ಪ್ರಭೆ ... ತತ್ವಜ್ಞಾನದ ... ಈ ಯಾವತ್ತ ಗುಣಗಳು ಪರಿಸ್ಥಿತಿಯ ... ಕೇಂದ್ರೀಭೂತವಾಗಿವೆ ... ಅವರ ಮ ...

ಲುಗಳು ಸೋಂಕಿದವನ್ನು ತಣಿಸಲಿಲ್ಲವೆ, ಇದೇ ದರ್ಶನ ಗದ್ದಲಗಳಿಗಾಧಾರವಾಗಬಲ್ಲ ಹೊತ್ತಿಗೆಗಳ ಸರವೆ ನಂಬಿದ್ದು ಇಲ್ಲಿಗೆ ಸಾಕು!! ನಮಗಾಗಿ ಸದಾ ಬೆಳಗುವ ಎದೆಯು ನೆರವೇ ನವ ಗಿರಿಲಿ!!!

ಮಹಾತ್ಮರ ತತ್ವನಿರೂಪಣೆಯು ಅಸಾಮಾನ್ಯತೆ ಪ್ರಗತಿ ... ಅವುಗಳ ಬಗ್ಗೆ — ಮೊನ್ನೆ ... ದಲ್ಲಿ ... ಸೋಮವಾರ, ಕಾನಪೂರದಲ್ಲಿ ನಡೆದ ಒಂದು ಸಂಗತಿಯು ಅಭೂತಪೂರ್ವವಾದ ಉದಾಹರಣೆಯಾಗಿದೆ. ಆ ಪ್ರಸಂಗದಲ್ಲಿ ... ಉತ್ತರವು ಅಷ್ಟೇ ದಾರ್ಶನಿಕವಾದುದೂ ವಿಚಾರಪೂರ್ಣವಾದುದೂ ಆಗಿದೆ.

ಕಾನಪೂರ ಮುನ್ಸಿಪಾಲಿಟಿ ಸನಾತನಿಗಳೊಡನೆ ತತ್ವಚರ್ಚೆಗೆಂದು ಒಂದು ದಿನವು ಗೊತ್ತಾಗಿದ್ದಿತು ... ಕಾರ್ಯಗಳು ... ಪರದಿಂದ ... ಶಾಂತತೆಯಿಂದ ... ಪ್ರಶ್ನೆಗಳ ಪಟ್ಟಿಯೊಂದನ್ನು ಒದಗಿಸಿದ್ದರು ಅದು ಹೀಗಿತ್ತು —

ಹರಿಜನಾಂದೋಲನದಲ್ಲಿ ... ತಮ್ಮ ... ವಂತೆ ... ಜ್ಞಾತಿ ... ವಿಷಯ ... ಸಂಬಂಧವಿಲ್ಲದುದು ... ವಿಷಯ ... ಆಗುತ್ತದೆ ಹೇಗೆ?

ತಡವೆಂಬಂತೆ ಮಹಾತ್ಮರು ಉತ್ತರವನ್ನು ಮೊದಲೇ ಜ್ಞಾಪಕ ಮಾಡಿಟ್ಟುಕೊಂಡಂತೆ ... ಪ್ರಶ್ನೆ ... ವ್ಯಕ್ತಿಕ ಪ್ರಶ್ನೆಗಳು ಅಪ್ರಸ್ತುತವಾದರೂ ... ನಾನು ... ಉತ್ತರವನ್ನು ಕೊಡ್ಬೇಕೆಂದೇ ... ವಿಚಾರ ... ಕಾರ್ಯದ ... ಅಸಂಗತವಾದುದು ... ಪರಿಪೂರ್ಣ ... ಸಮಾಜ ಸುಧಾರಕನೆಂದು ... ವ್ಯಕ್ತಿ ... ಪ್ರಚಲಿತ ಸಮಾಜ ... ಪೂರ್ವ ... ಗೊಂಡು ಸುಧಾರಣೆ ... ಸಮಾಜಕ್ಕಾಗಿ ಬೇರೆ ಬೇರೆ ವರ್ಣದವರು ... ದಂತೆ ... ಅನುಗುಣವಾಗಿ ಮಾಡಬೇಕಾದ ... ಗಳ ... ವ ... ವಿವರವಾಗಿ ... ಅಗಲ್ಲಿ ವಿವಾಹ, ವೋಟುಗಳ ... ನನ್ನ ಪಲ್ಲ

ಉದಾಹರಣೆಗೆಂದು ನನ್ನ ... ವಿಷಯವನ್ನೇ ತಗೊಳ್ಳಬೇಕಾದರೆ ಅದನ್ನು ... ಧ ... ನಾನು ... ಚಾರ ಮಾಡಿದೆನು, ಮತ್ತು ... ಪ್ರಸಂಗದಲ್ಲಿ ... ಸತ್ಯದಯಾನ ಅಥವಾ ಸನಾತನ ಧರ್ಮ ... ಹೇಗೆ ವಿಚಾರ ಮಾಡಿದನು ... ಪ್ರಸಂಗದಲ್ಲಿ ... ಸತ್ಯದಯಾನ ಅಥವಾ ಸನಾತನ ಧರ್ಮ ... ಹೇಗೆ ವಿಚಾರಿಸುವನೆಂಬುದನ್ನು ಹೇಳುವೆನು

(೧) ಪ್ರಕೃತ ಚತುರ್ವರ್ಣಗಳು ... ಯಾರ ... ಅವರ ಮೂಲತತ್ವಗಳ ... ಆತ್ಮಸಂಯಮ ... ಉಭಯ ... ಗಳ ಸಾತ್ವಿಕಾಚರಣೆಯಿಂದ ... ಪ್ರಸ್ತುತಿಸುವುದು ಅವಶ್ಯವಾಗಿ ... ಮತ್ತು ... ಇವರಲ್ಲಿ ಪ್ರೇಮ ... ಎಂದು ... ಸಂಗತಿಯು ... ಎಂದು ... ಕಾಲದ ವರೆಗೆ ... ಸರ್ವಜನಿಕ ... ನನ್ನ ಧ್ಯೇಯವಾಗಿತ್ತು ... ಇಷ್ಟೇ ಅಲ್ಲ ...

ವನ್ನು ಸಹ ಸ್ವಜನರೇಕೆಂದೂ ನಿರ್ಬಂಧಿಸಿದೆನು. ಅವರಲ್ಲಿಯ ಪ್ರೇಮವು ನಿಜವಾದುದಾದರೆ ಈ ಸಾತ್ವಿಕಾಚರಣೆಯು ದೀರ್ಘ ಕಾಲದಲ್ಲಿ ಅದು ಶುದ್ಧೀಕೃತವಾಗಿ ಕೇಂದ್ರೀಭೂತವಾಗಬಹುದೆಂದು ನಾನೆಣಿಸಿದ್ದೆ. ಉಭಯತರೂ ನನ್ನ ನಿಬಂಧನೆಗಳನ್ನು ... ಪೂರ್ಣವಾಗಿ ಪಾಲಿಸಿದರು. ಈ ದೀರ್ಘಕಾಲ ನಂತರವೂ ಅವರಲ್ಲಿ ಪ್ರೇಮವು ದಿವ್ಯವಾಗಿ ಹಾಗೆಯೇ ಜೀವಿಸಿ ನಿಂತಿತ್ತು. ಆ ತರುಣರು ಸಹ ತಮ್ಮ ತಮ್ಮ ... ಗಳು ... ವಿವಾಹಬದ್ಧರಾಗಬಾರದೆಂಬ ಪ್ರತಿಜ್ಞೆಯನ್ನೇ ಮಾಡಿಕೊಂಡಂತೆ ... ಮೂಲಕ ವರ್ತಿಸುತ್ತಿದ್ದರು.

(ii) ... ವ್ಯವಸ್ಥೆಯು ... ಇರಲಿಲ್ಲವೆಂದು ... ಅದಕ್ಕೆ ಬೇರೆ ಪ್ರತ್ಯಾಯವಿಲ್ಲ. ಮಹಾಭಾರತೇತ್ಯಾದಿ ಪೂರ್ವಗ್ರಂಥಗಳಲ್ಲಿಯೂ ಮಿಶ್ರ ವಿವಾಹಗಳ ಅನೇಕ ಉದಾಹರಣೆಗಳು ಅನಿವಾರ್ಯವಾಗಿವೆ

(iii) ಧರ್ಮಶಾಸ್ತ್ರದಲ್ಲಿ ಏನೇ ಹೇಳಲಿ ಅಥವಾ ಪೂರ್ವಿಕರು ಹೇಗೆ ಬೇಕಾದರೆ ನಡೆದುಕೊಂಡಿರಲಿ ಎಲ್ಲರೂ ... ತಿಳಿದುಕೊಳ್ಳಬೇಕಾದ ವಿಷಯವೆಂದರೆ ವ್ಯಕ್ತಿಗತ ... ಸಾಮಾಜಿಕ ನಿಬಂಧನೆಗಳು ನಿರ್ಮಿತ ಕಾಲ ಪರಿಸ್ಥಿತಿಗೆ ಮಾತ್ರ ಅವು ಸಲ್ಲತಕ್ಕವುಗಳಾಗಿವೆ ಸಾರ್ವತ್ರಿಕ ತತ್ವವೆಂದರೆ ಸಂಯಮ ಒಂದೇ!

(iv) ನಮ್ಮ ಸ್ಮೃತಿಗಳ ... ಅವುಗಳಲ್ಲಿ ಎಷ್ಟೋ ನಿಯಮಗಳು ... ದೃಷ್ಟಿಯನ್ನಿಟ್ಟು ... ಒಂದರ ವಿಷಯವು ... ವಿರುದ್ಧ ... ಕಾರಣ ಅವುಗಳಲ್ಲಿ ... ಎಲ್ಲವೂ ... ತತ್ವವೆಂದೇ ... ಅವುಗಳ ... ಅವುಗಳನ್ನು ... ನಮ್ಮ ... ಅಗಲಿ, ... ಸತ್ಯ ... ಗಳು ಅದರಲ್ಲಿ ... ಗ್ರಂಥಗಳಲ್ಲಿಯ ... ಭಾಗವನ್ನು ... ಯಿಂದ ... ಯುವಂತೆ ನಾವು ... ಕೊಳಕನ್ನು ತೊಳೆದು ... ನಾವು ಸನಾತನ ... ಪೂರ್ಣ ... ಅಷ್ಟೇ ... ಸಾಧ್ಯವಾದಷ್ಟು ... ಅದು ಹೃದಯವನ್ನು ... ಚೇತರಿಸುವದು

D. Y. S.

Sriomani Udipi Narayanacharya,
CHAUKHAMBA BENARES CITY


SUN & CO
BENARES CITY

ಮಹಾಶಯರೇ, ... ಶ್ರೀಕೃಷ್ಣನ ... ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿ 1080 ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ... ಸಣ್ಣದಾಗುತ್ತ ... ಕಂಠಿ ಸರ 32 ಕಾಳಿಗೆ ರೂ 0 8 0 ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ 3 8 0 ರಿಂದ ... ವರೆಗೆ ಮತ್ತು ... ಮಾಲುಗಳ ... ಕಳಿಸುವರು 0 1 ... ಕಳಿಸಿದರೆ, 1ಕಾಶೀ ಪತ್ರೆ 1 ವಿಶ್ವೇಶ್ವರನ ... ಫೋಟೋವನ್ನು ಸಹ ಇನಾಮ ಕಳಿಸಲಾಗುವದು ... ವತ್ತ

ಶಿರೋಮಣಿ ನಾರಾಯಣಾಚಾರ್ಯ
ಚೌಕಂಬಾ ಕಾಶೀ ಕ್ಷೇತ್ರ

ಅಲ್ಲಲ್ಲಿ ಇಷ್ಟಿಷ್ಟು!

ಮೊನ್ನೆ ಶನಿವಾರಕ್ಕೆ ವರ್ಧಾದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸೇರುವದಿತ್ತು. ಆ ಸಮಯ ಪಂಡಿತ ಮದನಮೋಹನ ಮಾಳವೀಯರವರೂ ಶ್ರೀ| ಮಾಧವರಾವಜಿ ಅಣೆಯವರೂ ನಿಮಂತ್ರಣ ಮೇರೆಗೆ ಹಾಜರಾಗುವವರಿದ್ದರು ಈ ಸಭೆಯಲ್ಲಿ ಮಾಲವೀಯ ಅಣೆಯವರ ಮನವೊಲಿಸಿಕೊಳ್ಳಲು ಯಾವತ್ತು ಪ್ರಯತ್ನಗಳು ನಡೆಯುವವು. ಮಾಲವೀಯ-ಅಣೆಯವರ ವಿರೋಧದಿಂದ ಮಹಾತ್ಮರಿಗೆ ಬಹಳ ಬೇಸರವಾಗಿದೆ ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ತಮ್ಮ ಮುಂದಾಳುತನವನ್ನು ಹಿಂತೆಗೆದುಕೊಳ್ಳುವರಾಗಿ ಮದ್ರಾಸದ 'ಹಿಂದು' ಪತ್ರಿಕೆಯ ವಾರ್ತೆ. ಅಖಿಲ ಭರತಖಂಡದಲ್ಲಿ ಸಂಚರಿಸಿ ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮವನ್ನು ಪ್ರಚಾರ ಮಾಡುವರಾಗಿಯೂ ವರ್ಧಾದೊಳಗಿನ ಮದ್ರಾಸದ 'ಹಿಂದು' ಪತ್ರಿಕೆಯ ಸುದ್ದಿಗಾರರು ತಂತಿ ಕೊಡುತ್ತಾರೆ.

* * *

ಮಹಾತ್ಮರ ಅಭಾವದಲ್ಲಿ ಭಾರತೀಯ ರಾಜಕಾರಣದ ಚಾಲಕರ್ಯಾರು? ಎಂಬ ಚರ್ಚೆ ಹಿಂದುಸ್ಥಾನದಲ್ಲಿ ನಡೆಯುವದಕ್ಕಿಂತ ಲಂಡನಿನಲ್ಲೇ ನಡೆದಿದೆ ಲಂಡನಿನೊಳಗಿನ 'ರೇನಾಲ್ಡ್ಸ ವೀಕ್ಲಿ' ಪತ್ರಿಕೆಯಲ್ಲಿ ಈ ಕುರಿತು ಪ್ರಕಟವಾದ ವಾರ್ತೆ ಏನೆಂದರೆ "ಮಹಾತ್ಮರ ರಾಜಕಾರಣ ಈಗ ಮುಗಿಯಿತು ಭಾರತೀಯ ಪ್ರಮುಖರು ಉತ್ತರಾಧಿಕಾರಿಗಳ ಶೋಧದಲ್ಲಿದ್ದಾರೆ ಪೊಂಡಿಚೆರಿಯಲ್ಲಿದ್ದ ಶ್ರೀ| ಅರವಿಂದ ಘೋಷರು ಉತ್ತರಾಧಿಕಾರಿಗಳಾಗುವರು ಶ್ರೀ| ಅರವಿಂದ ಘೋಷರು ವಂಗಭಂಗದ ಚಳವಳಿಯ ಕಾಲಕ್ಕೆ ರಾಷ್ಟ್ರಪ್ರವೃತ್ತಿ ಬೀರಿದ ಮುಖಂಡರು ೨೪ ವರ್ಷಗಳ ಹಿಂದೆ ಅವರು ರಾಜಕಾರಣದ ತ್ಯಾಗ ಮಾಡಿ ಪೊಂಡಿಚೆರಿಗೆ ಹೋದರು ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರಕುವವರೆಗೆ ಬ್ರಿಟಿಶ ಹಿಂದುಸ್ಥಾನದಲ್ಲಿ ಕಾಲಿಡಲಿಕ್ಕಿಲ್ಲವಾಗಿ ಪ್ರತಿಜ್ಞೆ ಮಾಡಿ ಅವರು ಪೊಂಡಿಚೆರಿಗೆ ಹೋಗಿದ್ದರು ಅವರು ಅಂದಿನಿಂದ ರಾಜಕಾರಣದ ಗೊಡವೆಯನ್ನು ಬಿಟ್ಟಿದ್ದಾರೆ ಆದರೆ ಈಗ ಭಾಷೆಗಳು ಬರುತ್ತವೆ. ಲಂಡನಿನೊಳಗಿನ ಹಾಗು ಹಿಂದುಸ್ಥಾನದೊಳಗಿನ ಕೆಲವು ರಾಷ್ಟ್ರೀಯ ಪ್ರಮುಖರ ಶಿಷ್ಟಮಂಡಲವೊಂದು ಶೀಘ್ರವಾಗಿ ಮುಂಬಯಿಯ ರಾಷ್ಟ್ರೀಯಸಭೆಯ ಅಧಿವೇಶನಕ್ಕೆ ಅವರಿಗೆ ಕರೆತಂದು ಮಹಾತ್ಮರ ಕಡೆಯಿಂದ ರಾಜಕಾರಣ ಸೂತ್ರಗಳನ್ನು ವಹಿಸಿಕೊಳ್ಳ ಹೇಳುವರು ಶ್ರೀ| ಅರವಿಂದರು ಲಂಡನಿನಲ್ಲೇ ಹುಟ್ಟಿ ಬೆಳೆದವರು, ಅವರ ಮೇಲೆ ರಾಜದ್ರೋಹದ ಆರೋಪ ಹೊರಿಸಿ ಖಟ್ಲೆ ನಡಿಸಿದಾಗ ಆಗ ಪಾರ್ಲಿಮೆಂಟಿನ ಸಭಾಸದರಾಗಿದ್ದ ಮಿ| ಮೆಕ್‌ಡೊನಲ್ಡರವರು ಶ್ರೀ| ಅರವಿಂದ ಬಾಬುಗಳ ಪರವಾಗಿ ದೊಡ್ಡ ನಿಷೇಧ ಪ್ರದರ್ಶನ ಮಾಡಿದ್ದರು ಶ್ರೀ| ಅರವಿಂದ ಬಾಬುಗಳು ಈ ೨೪ ವರ್ಷಗಳ ಅವಧಿಯಲ್ಲಿ ಧರ್ಮ-ತತ್ವಜ್ಞಾನ ವಿಷಯಗಳ ಮೇಲೆ ೫೦೦ ಗ್ರಂಥಗಳನ್ನು ಬರೆದಿದ್ದಾರೆ ಈಗಲೂ 'ಆರ್ಯ' ವೆಂಬ ಧಾರ್ಮಿಕ ತ್ರೈಮಾಸಿಕವನ್ನು ಅವರು ಪೊಂಡಿಚೆರಿಯಲ್ಲಿ ಪ್ರಕಟಿಸುತ್ತಾರೆ ಅರವಿಂದ ಬಾಬುಗಳ ಪೊಂಡಿಚೆರಿಯೊಳಗಿನ ಆಶ್ರಮವು ಲೋಕವಿಖ್ಯಾತವಿದೆ

* * *

ಗಡಿನಾಡಿನ ಗಾಂಧಿಯೆಂಬ ಖಾನ ಅಬ್ದುಲ್ಲಗಫಾರಖಾನರವರ ಲೋಕಪ್ರಿಯತೆಯನ್ನು ಮನ್ನಿಸುವದಕ್ಕಾಗಿ ರಾಷ್ಟ್ರೀಯ ಸಭೆಯವರು ಖಾನಸಾಹೇಬರಿಗೆ ಮನ್ನಿಸಕೊಡಗಿದ್ದಾರೆ ಅಕ್ಟೋಬರ ತಿಂಗಳಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ನಗರಕ್ಕೆ 'ಅಬ್ದುಲ್ಲ ಗಫಾರ ನಗರ' ಎಂಬ ಹೆಸರು ಕೊಡಲಾಗಿದೆ ಈ ನೂತನ ನಗರದಲ್ಲಿ ಸ್ವದೇಶಿ ಪ್ರದರ್ಶನ ಪ್ರತಿನಿಧಿಗಳ ಬಿಡಾರುಗಳ ವ್ಯವಸ್ಥೆ, ವಿಷಯ ನಿರ್ಧಾರಕ ಸಭಾಸ್ಥಾನ, ರಾಷ್ಟ್ರೀಯ ಸಭೆಯ ಮಂಟಪ ಮೊದಲಾದವುಗಳ ನಿರ್ಮಿತಿಯಾಗುವದು ಖಾನ ಸಾಹೇಬರಿಗೆ ರಾಷ್ಟ್ರೀಯ ಸಭಾಪತಿಗಳಾಗಿ ಸೂಚಿಸಿಕೊಂಡು ಮನ್ನಿಸಬೇಕೆಂಬ ವಿಚಾರವಿತ್ತು ಆದ ಖಾನ ಅಬ್ದುಲ್ಲಗಫಾರಖಾನರವರು ತಿಳಿದು ಪ್ರಕಟಿಸುವದೇನೆಂದರೆ "ಈ ಸೂಚನೆ ಮಾಡುವ ಗೆಳೆಯರ ಅಂತರಂಗ ನಾ ಬಲ್ಲೆ ಮುಸಲ್ಮಾನರಿಗೆ ಗೌರವ ಸ್ಥಾನವನ್ನಿತ್ತು ಹಿಂದು-ಮುಸಲ್ಮಾನರ ಐಕ್ಯವನ್ನು ಪುರಸ್ಕರಿಸಲು ಅವರು ಕಾಂಕ್ಷಿಸುತ್ತಾರೆ ಇದಲ್ಲದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನನ್ನ ಪ್ರಾಂತದವರು ಮಾಡಿದ ಸ್ವಾರ್ಥತ್ಯಾಗದ ಪ್ರಶಂಸೆ ಮಾಡಬೇಕೆಂದೂ ಗೆಳೆಯರು ಅಪೇಕ್ಷಿಸುತ್ತಿರಬಹುದು ಆದರೆ, ನಾನು ಪುನಃ ಪುನಃ ಹೇಳುವದೇನೆಂದರೆ — ನನಗೆ ಸೇನಾಪತಿಯಾಗುವ ಆಕಾಂಕ್ಷೆಯಿಲ್ಲ, ಸೈನಿಕನಾಗಿಯೇ ಕೆಲಸ ಮಾಡುತ್ತ ಮಡಿಯಬೇಕೆಂದು ನನ್ನ ಆಕಾಂಕ್ಷೆ ಇದಲ್ಲದೆ, ಸ್ವಯಂಸೇವಕನಾಗಿ ರಾಷ್ಟ್ರೀಯ ಕಾರ್ಯಕ್ಷೇತ್ರದಲ್ಲಿ ನಾ ಮಾಡಿದ ಸೇವೆ ಅತ್ಯಲ್ಪವಿದೆ ಅದರಿಂದ ಅಮೂಲ್ಯ ಗೌರವ ಪಡೆಯಲು ನಾನು ಅರ್ಹನಾಗುವದಿಲ್ಲ ಆದರಿಂದ ಗೆಳೆಯರು ಈ ಸೂಚನೆಯನ್ನು ಪುರಸ್ಕರಿಸಬಾರದಾಗಿ ನನ್ನ ವಿನಂತಿಯಿದೆ ನನ್ನ ಪ್ರಾಂತಕ್ಕೆ ನೆರವಾಗಲು ಬೇರೆ ಅನೇಕ ಉಪಾಯಗಳಿವೆ ಖಾನ ಸಾಹೇಬರೊಡನೆ ಕಾರಾಗೃಹದಲ್ಲಿ ಸೇರಿ ಅವರೊಡನೆ ಬಿಡುಗಡೆಯಾದ ಸಹೋದರರಿಗೆ ಗಡಿನಾಡಿನ ಪರವಾಗಿ ಪಂಜಾಬಿಯ ದೆಹಲಿಯ ಕಾನ್ಫರೆನ್ಸಿಗೆ ಸಭಾಪತಿಯರನ್ನಾಗಿ ನಿಲ್ಲಿಸಬೇಕೆಂಬದೊಂದು ವಿಚಾರ ನಡೆದಿತ್ತು, ಡಾ| ಖಾನ ಸಾಹೇಬರು ಆವಕಾಶವಿಲ್ಲ. ಖಾನಸಾಹೇಬರೀಗ ಈ ವರ್ಧಾದಲ್ಲಿ ಮಹಾತ್ಮರ ಜೊತೆಗಿದ್ದಾರೆ

* * *

ಹಿಂದು' ಪತ್ರಿಕೆಯೊಳಗಿನ ವಾರ್ತೆಯ ಕುರಿತು ಪತ್ರಿಕಾ ಪ್ರತಿನಿಧಿಗಳು ಮಹಾತ್ಮರಿಗೆ ಪ್ರಶ್ನಿಸಲು ಮಹಾತ್ಮರು ನುಡಿದದ್ದೇನೆಂದರೆ— ಹಿಂದು ಪತ್ರಿಕೆಯಂಥ ಜವಾಬದಾರ ಪತ್ರಿಕೆಯು ನನಗೆ ಹೇಳದೆ-ಕೇಳದೆ ಇಂಥ ಸುದ್ದಿ ಪ್ರಕಟಿಸಿದ್ದನ್ನು ನೋಡಿ ನನಗೆ ಆಶ್ಚರ್ಯವಾಗಿದೆ ವರ್ಧಾದೊಳಗಿನ ಸುದ್ದಿಗಾರರು ನನಗೆ ಈ ಸುದ್ದಿ ತಿಳಿಸಿ ನನ್ನಿಂದ ಖಾತ್ರಿ ಪಡೆಯಬೇಕಿತ್ತು ಅಂತರಂಗದಿಂದ ನಡೆಯುವ ಸಂಭಾಷಣೆಗಳನ್ನು ಅಪೂರ್ಣವಾಗಿ ಪ್ರಕಟಿಸುವದು ಯೋಗ್ಯವಲ್ಲ ಮುಂದಿನ ಕ್ರಮ ನಾನು ಸಹಕಾರಿಗಳೊಡನೆ ಆಲೋಚಿಸುತ್ತಿದ್ದೇನೆ ಕೊನೆಯ ನಿರ್ಣಯವನ್ನು ನಾನು ಇನ್ನೂ ಕೈಕೊಂಡಿಲ್ಲ ವಾಡಿಕೆಯಂತೆ ನನಗೆ ತೋರುವ ವಿಚಾರಗಳನ್ನು ಮನೋಭೂಮಿಯಲ್ಲಿ ಉದ್ಭವಿಸಿದಂತೆ ನಾನು ಗೆಳೆಯರೊಡನೆ ಚರ್ಚಿಸುತ್ತೇನೆ ನಿರ್ಣಯವಾಗುವ ಮುಂಚೆ ನಡಿಸಿದ ವಿಚಾರ ವಿನಿಮಯಗಳನ್ನು ಕೊನೆಯ ನಿರ್ಣಯಗಳೆಂದು ಪ್ರಕಟಿಸಿದರೆ ಸಾರ್ವಜನಿಕ ಕೆಲಸ ಮಾಡುವದು ಅಸಾಧ್ಯವಾದೀತು ನನ್ನ ನಿರ್ಣಯಕ್ಕೂ, ಪಂಡಿತ ಮಾಲವೀಯ ಹಾಗು ಶ್ರೀ| ಅಣೆಯವರ ರಾಜಿನಾಮೆಗೂ ಸಂಬಂಧವಿಲ್ಲ ಇಲೆಕ್ಶನ್ ನಡಿಸುವಾಗ ಇತ್ತಂಡದಲ್ಲಿ ಕಲಹವುಂಟಾಗದಂತೆ ಯಾವತ್ತು ಪ್ರಯತ್ನಗಳು ಮಾಡಲ್ಪಡುವವು ದೇಶಬಾಂಧವರೆಲ್ಲರೂ ಕೊಂಗ್ರೆಸ ಕಾರ್ಯಕಾರಿ ಮಂಡಳದ ಆಜ್ಞೆಯಂತೆ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದವಾರರಿಗೇ ಮತದಾನ ಮಾಡುವರೆಂಬದರಲ್ಲಿ ಸಂದೇಹವೇನಿಲ್ಲ"

* * *

ರಾಷ್ಟ್ರೀಯ ಸಭೆಯನ್ನು ಇದೇ ಬರುವ ಅಕ್ಟೋಬರ ತಾ. ೨೬-೨೭-೨೮ನೇ ಮುಂಬಯಿಯಲ್ಲಿ ಸೇರಿಸಬೇಕೆಂದು ಗೊತ್ತಾಗಿದೆ ಒಬ್ಬರಿಗೆ ಸಹ ರಾಷ್ಟ್ರೀಯ ಸಭೆಯ ದರ್ಶನ ಪಡೆಯಲನುಕೂಲವಾಗಬೇಕೆಂದು ಪ್ರೇಕ್ಷಕರಿಗೆ ಟಿಕೇಟಿನ ದರ ರೂ. ೨ ಇಟ್ಟಿರುತ್ತದೆ ಸ್ವಾಗತ ಸಮಿತಿಯ ಸಭಾಸದರ ಫೀ ರೂ ೨೫, ದೊಡ್ಡವರಾಗಿ ರೂ ೧೦೦-೫೦೦ ರ ಟಿಕೇಟುಗಳು ಸಹ ತಯಾರಿಸಲಾಗಿವೆ ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನ ಸೇರುವದು ಇದು ಆರನೇ ಸಲ ರಾಷ್ಟ್ರೀಯ ಸಭೆಯ ಜನ್ಮಸ್ಥಾನವು ಮುಂಬಾಪುರಿಯೇ ೧೮೮೫ನೇ ಇಸವಿಯಲ್ಲಿ ಶ್ರೀ| ಡಬ್ಲ್ಯು. ಸಿ. ಬಾನರಜೀಯವರ ಅಧ್ಯಕ್ಷತೆಯ ಕೆಳಗೆ ಇಲ್ಲಿ ಪ್ರಥಮ ಅಧಿವೇಶನ ಜರುಗಿತ್ತು ೧೮೮೯ನೇ ಇಸ್ವಿಯಲ್ಲಿ ೨ನೇ ಬಾರಿ ರಾಷ್ಟ್ರೀಯ ಸಭೆಯ ಅಧಿವೇಶನವಾಯಿತು ಆ ಕಾಲದಲ್ಲಿ ಸರ್ ವಿಲಿಯಮ್ ವೆಡರಬರ್ನರವರು ಅಧ್ಯಕ್ಷರಿದ್ದರು ೧೯೦೪ ನೇ ಇಸ್ವಿಯಲ್ಲಿ ಸರ ಹೆನ್ರಿ ಕಾಟನ್ ದೊರೆಗಳ ಅಧ್ಯಕ್ಷತೆಯನ್ನು ಮುಂಬಯಿಯ ರಾಷ್ಟ್ರೀಯ ಸಭೆಯು ನಿರ್ವಹಿಸಿದ ಸಂಗತಿ ಎಲ್ಲರೂ ಬಲ್ಲಂಥ ವಿಷಯ ೧೯೧೫ನೇ ಇಸ್ವಿಯಲ್ಲಿ ಸರ್ ಸತ್ಯೇಂದ್ರಪ್ರಸನ್ನ ಸಿಂಹರವರ ಅಧ್ಯಕ್ಷತೆಯಲ್ಲಿ ಮಾಂಟೆಗ್ಯೂ ಸುಧಾರಣೆಯ ಪ್ರಸಂಗದಲ್ಲಿ ರಾಷ್ಟ್ರೀಯ ಸಭೆ ಸೇರಿದ್ದು ೫ನೇ ಸಲ ಸಯ್ಯದ ಹಸನ್ ಇಮಾಮರವರ ಅಧ್ಯಕ್ಷತೆಯಲ್ಲಿ ಮಾಂಟೆಗ್ಯೂ ಚೆಮ್ಸಫರ್ಡರವರ ರಾಜ್ಯಸುಧಾರಣೆಯ ಕಾಯಿದೆಯ ಬಗ್ಗೆ ೧೯೧೮ನೇ ಇಸ್ವಿಯಲ್ಲಿ ವಿಶೇಷ ಅಧಿವೇಶನ ಸೇರಿಸಿ ರಾಷ್ಟ್ರೀಯ ಸಭೆಯು ಕೊಟ್ಟ ತೀರ್ಪನ್ನು ಯಾರೂ ಮರೆಯಲಾರರು ಆ ಮೇಲೆ ೧೬ ವರ್ಷಗಳ ತರುವಾಯ ಈ ವರ್ಷ ರಾಷ್ಟ್ರೀಯ ಸಭೆ ಸೇರುತ್ತದೆ ಶ್ರೀ| ರಾಜೇಂದ್ರ ಪ್ರಸಾದರವರ ಅಧ್ಯಕ್ಷತೆಯಲ್ಲಿ ಮುಂಬಾಪುರದಲ್ಲಿಯೂ ಅತ್ಯುತ್ಸಾಹದಿಂದ ರಾಷ್ಟ್ರೀಯ ಸಭಾ ಕಾರ್ಯವನ್ನು ಪುರಸ್ಕರಿಸುತ್ತಿದ್ದಾರೆ ಸಭಾಮಂಟಪದ ತಯಾರಿ, ಅಬ್ದುಲ್ಲಗಫಾರ ನಗರದ ರಚನ ಭರದಿಂದ ನಡೆದಿವೆ

* * *

ಮಹಾತ್ಮರ ಮನೋಭೂಮಿಯಲ್ಲಿ ಉಂಟಾಗುತ್ತಿರುವ ಅವಸ್ಥಾಂತರಗಳನ್ನು 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ರಾಜಕೀಯ ಪ್ರತಿನಿಧಿಗಳು ವಿವರಿಸಿ ಬರೆಯುವದೇನೆಂದರೆ— ಮಹಾತ್ಮರೇನಾದರೂ ಕ್ರಾಂತಿಕಾರಕ ನಿರ್ಣಯ ಕೈಕೊಳ್ಳಬಹುದೆಂದು ಇಲ್ಲಿಯ ಕೊಂಗ್ರೆಸ ಕಾರ್ಯ ವರ್ತುಲದಲ್ಲಿ ಸಂದೇಹವುಂಟಾಗಿತ್ತು ರಾಷ್ಟ್ರೀಯ ಸಭೆಯವರು ಇಲೆಕ್ಶನು ಕಾಲಕ್ಕೆ ಪುರಸ್ಕರಿಸುವ ಅಸಭ್ಯ ಪ್ರಕಾರಗಳನ್ನು ಮಹಾತ್ಮರಿಂದ ನೋಡಲಾಗುವದಿಲ್ಲ ಹೀಗೆ

ಯೇ ರಾಷ್ಟ್ರೀಯ ಸಭೆಯವರು ಅನೀತಿಯ ಮಾರ್ಗಗಳನ್ನು ಕೈಕೊಂಡರೆ ಮಹಾತ್ಮರು ತೀಕ್ಷ್ಣ ಉಪಾಯ ಕೈಕೊಳ್ಳಬಹುದೆಂದೂ, ದೇಶತುಂಬ ಗೊಂದಲವಾಗಬಹುದೆಂದೂ ಅನೇಕರು ಭೀತಿಗೊಂಡಿದ್ದರು. ವೃಥ ಪಟ್ಟಣದಲ್ಲಿ ಮಹಾತ್ಮರು ಉಪೋಷಣ ವ್ರತ ತೀರಿಸಿ ಕೊಂಗ್ರೆಸ ಪ್ರಮುಖ ಕಾರ್ಯಕರ್ತರ ಸಭೆಯನ್ನು ೧೯೩೩ನೇ ಇಸ್ವಿ ಜುಲೈ ತಿಂಗಳಲ್ಲಿ ಸೇರಿಸಿದ್ದರಷ್ಟೇ. ಆಗ ಸಾರ್ವಜನಿಕ ಕಾಯಿದೆಭಂಗಕ್ಕೆ ತಡೆಹಾಕಿ ವ್ಯಕ್ತಿಗತ ಕಾಯಿದೆಭಂಗ ಕೈಕೊಳ್ಳಲಾಯಿತು. ಪಂಡಿತ ಮದನಮೋಹನ ಮಾಳವೀಯರವರು ತಮ್ಮ ಪ್ರಾಂತದಿಂದ ೩೦ ಸಾವಿರ ಜನರು ಸತ್ಯಾಗ್ರಹಿಗಳಾಗುವರಾಗಿ ಮಹಾತ್ಮರಿಗೆ ಆಶ್ವಾಸನ ಕೊಟ್ಟಿದ್ದರು. ಆದರೆ ಕೈಗೂಡಲಿಲ್ಲ. ನೆಹರೂರವರ ಹೊರತು ಪ್ರಮುಖರಲ್ಲಿ ಕಾಯಿದೆಭಂಗಕ್ಕೆ ತಲೆಹಾಕಬೇಕಾಗಿ ಸಾಧ್ಯವಾಗಲಿಲ್ಲ. ಪಂಡಿತ ಜವಾಹಿರಲಾಲರಿಂದ ಶೆಲ ಅನುಭವಿಸಬಹುದು. ಇಂಥ ಪರಿಸ್ಥಿತಿಯಲ್ಲಿ ಮಹಾತ್ಮರು ರಾಷ್ಟ್ರೀಯ ಶಕ್ತಿಯನ್ನು ಸಂಗ್ರಹಿಸುವದಕ್ಕಾಗಿ ಕೌನ್ಸಿಲ್ ಪ್ರವೇಶಕ್ಕೆ ಸಿದ್ಧರಾದುದರಿಂದ ಅನುಮತಿ ಕೊಟ್ಟರು. ಇದಲ್ಲದೆ ಕೆಲ ಸಹಕಾರಿಗಳು ವಿಧಾನಸಭೆ ಸಮಿತಿಯಲ್ಲಿ ತಾಗಿ ಮಹಾತ್ಮರಿಗೊಂದು ವಿಜ್ಞಾಪನೆ ... ಆ ಮೇಲೆ ಪಾಟನಾದಲ್ಲಿ ಸಭೆಯಾಗಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯವರ ಬಹುಮತದ ನಿರ್ಣಯದಂತೆ ಕೌನ್ಸಿಲು ಪ್ರವೇಶದ ಪುರಸ್ಕಾರ ನಡೆಯಿತು. ಜಾತಿ ನಿರ್ಣಯದ ಮೂಲಕ ವಾದದಿಂದ ರಾಷ್ಟ್ರೀಯ ಸಭೆಯೊಳಗಿನ ಭಿನ್ನಿಗ ಬಂಗ ಒಂದಿದೆ. ಪ್ರತಿಯೊಬ್ಬರು ತಮ್ಮ ತಮ್ಮ ಮತದಂತೆ ಪೃಥಕ್ ಪೃಥಕ್ ಪಂಗಡ ಸ್ಥಾಪಿಸಿಕೊಂಡಲ್ಲಿ ರಾಷ್ಟ್ರೀಯ ಸಭೆಯಿಂದ ಯಾವ ಕಾರ್ಯಭಾಗ ಸಾಧಿಸದು. ಏಸ ದಿವಸದಿಂದ ಗಂಭೀರ ನಿರ್ಣಯ ಕೈಕೊಂಡು ಕೊನೆಗಿನಲ್ಲಿ ತಲೆದೋರಿದ ಬಿಕ್ಕಟ್ಟನ್ನು ಹೋಗಲಾಡಿಸಬೇಕಾಗಿ ಮಹಾತ್ಮರು ಬಹು ಕಾಲದಿಂದ ಯೋಚಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯೊಳಗಿಂದ ಅಲಿಪ್ತರಾಗಬೇಕೆಂದು ಮಹಾತ್ಮರು ಬಹು ಕಾಲದಿಂದ ಯೋಚಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯೊಳಗಿಂದ ಅಂಗ ತೆಗೆದುಕೊಳ್ಳಲು ಯಾರೂ ಒಪ್ಪಿಗೆ ಕೊಡದು. ಮತಭೇದವೇನಿದ್ದರೂ ರಾಷ್ಟ್ರೀಯ ಸಭೆಯ ಸೂತ್ರಧಾರರಾಗಲು ಮಹಾತ್ಮರೇ ಅರ್ಹರು. ಮುಂಬಯಿಯಲ್ಲಿ ಮಹಾತ್ಮರು ಕೊಂಗ್ರೆಸ ಸನ್ಯಾಸದ ಮಾತನ್ನು ಕೇಳಿ ಎಲ್ಲರೂ ಬೆಚ್ಚಿಬಿದ್ದಿದ್ದಾರೆ. ಇಂಥ ಸಂಕಟ ಸಮಯದಲ್ಲಿ ಪಂಡಿತ ಜವಾಹಿರಲಾಲರು ನೆರವಾಗಿಲ್ಲರುವರಲ್ಲ! ಅವರಿದ್ದರೆ ವಿನೋದದಿಂದ ಮಾರ್ಗ ಸೂಚಿಸುತ್ತಿದ್ದರಲ್ಲ! ಎಂದು ಮರುಗುತ್ತಾರೆ.

•.•

ಮುಂಬಯಿಯ ಬೆರಿಸ್ಟರ ಮಸಾನಿ ಪಿ. ಆರ್. ಭರೂಚಾ, ಕೆ. ಬಿ. ಭರೂಚಾ ಹೀಗೆ ಮೂವರ ಬೆರಿಸ್ಟರಿ ಸನದುಗಳನ್ನು ಏಕೆ ರದ್ದುಪಡಿಸಬಾರದೆಂಬುದರ ಕುರಿತು ಮುಂಬಯಿ ಹೈಕೋರ್ಟಿನಲ್ಲಿ ಕಳೆದ ಸೋಮವಾರ-ಮಂಗಳವಾರ ವಿಚಾರ ನಡೆಯಿತು. ಸತ್ಯಾಗ್ರಹ ಮನ್ವಂತರದಲ್ಲಿ ಬೆರಿಸ್ಟರರು ಕಾಯಿದೆಭಂಗ ಮಾಡಿ ಶಿಕ್ಷೆಯನ್ನು ಅನುಭವಿಸಿದ್ದರು. ಎಲ್ಲರಿಗೆ ೧-೧ ವರ್ಷದ ಶಿಕ್ಷೆ, ೫೦೦-೫೦೦ ದಂಡವಾಗಿತ್ತು. ಸರಕಾರದ ಪರವಾಗಿ ಎಡ್ವೋಕೇಟ ಜನರಲ್ ಮಿ| ಕಾಂಗಾರವರು ವಾದಿಸಿದರು. ಬೆರಿಸ್ಟರರ ಪರವಾಗಿ ಮಿ| ಎಮ್. ಸಿ. ಸೆಟ್ಲವಾಡ ಹಾಗು ಮಿ| ದಪ್ತರಿಯವರು ವಾದಿಸಿದರು. ಬಾರ ಕೌನ್ಸಿಲ್ ಎಂಬ ವಕೀಲ ಸಂಘದ ಪರವಾಗಿ ಶ್ರೀ| ಬುಲಾಭಾಯಿ ದೇಸಾಯಿಯವರು ವಾದಿಸಿದರು. ಬೊಂಬೇ ಬಾರ ಎಸೋಸಿಯೇಶನ್ ಮತ್ತು ವೆಸ್ಟರ್ನ ಇಂಡಿಯಾ ಎಡ್ವೋಕೇಟ್ಸ ಎಸೋಸಿಯೇಶನ್ ಎಂಬ ಎರಡು ವಕೀಲ ಸಂಘಗಳ ಪರವಾಗಿ ಪಿ| ಒಹಾಡ್ಡುರಜಿಯವರು ವಾದಿಸಿದರು. ಎಡ್ವೋಕೇಟ-ಜನರಲ್‌ರ ಹೊರತು ಉಳಿದವರೆಲ್ಲರೂ ಬೆರಿಸ್ಟರರ ವರ್ತನವು ಕಾಯಿದೆಯ ಕಕ್ಷೆಯೊಳಗೆ ಸೇರುವದಿಲ್ಲವಾಗಿಯೂ, ಸನದು ರದ್ದುಪಡಿಸಲು ತಕ್ಕ ಆಧಾರವಿರುವದಿಲ್ಲವಾಗಿಯೂ ವಾದಿಸಿದರು. ಎಡ್ವೋಕೇಟ-ಜನರಲ್‌ರು ನುಡಿದದ್ದೇನೆಂದರೆ — 'ಯಾವದೇ ಕಾರಣದಿಂದ ಒಬ್ಬ ಮನುಷ್ಯನಿಗೆ ಶಿಕ್ಷೆಯಾದ ಬಳಿಕ ಆ ಶಿಕ್ಷೆಯ ಯುಕ್ತಾಯುಕ್ತತೆಯನ್ನು ಪುನರ್ವಿಚಾರಿಸಲಿಕ್ಕೆ ಈ ಕೋರ್ಟಿಗೆ ಅಧಿಕಾರವಿಲ್ಲ. ಅದನ್ನು ಕೋರ್ಟಿನವರು ಗ್ರಾಹ್ಯ ಮಾಡಿ ಮುಂದಿನ ಕ್ರಮ ಕೈಕೊಳ್ಳಬೇಕು. ಬುದ್ಧಿಪೂರ್ವಕವಾಗಿ ಪೌಜದಾರಿ ಕಾಯಿದೆಯನ್ನು ಉಲ್ಲಂಘಿಸಿದವರೆ ವ್ಯಾವಸಾಯಿಕ ದುರ್ವರ್ತನ (*misconduct*) ಗಳೆಂದು ಕೋರ್ಟಿನವರು ಎಣಿಸಬೇಕು. ಬೆರಿಸ್ಟರರು ಸರಕಾರದ ವಿರುದ್ಧ ಅಪರಾಧ ಮಾಡಿದ್ದಾರೆ. ಭಯಂಕರ ಅಪರಾಧವೆಂದರೆ ರಾಜದ್ರೋಹದ ಘೋರ ಪಾಪ (*treason*) ವಿದು. ವಕೀಲರಿಗೆ ಕೆಲ ಹಕ್ಕುಗಳಿವೆ, ಅದರಿಂದ ಆ ಹಕ್ಕುಗಳಿಗೆ ತಕ್ಕ ಕರ್ತವ್ಯಗಳೂ ಇವೆ. ಸ್ವತಃ ನ್ಯಾಯಿಬಂಗಮಾಡಿ ಪರರಿಗೂ ಕಾಯಿದೆಭಂಗ ಮಾಡಲು ಉತ್ತೇಜಿಸುವದು ಅನುಚಿತವಿದ [ಈ ತರ್ಕದ ಸಮರ್ಥನಕ್ಕಾಗಿ ಮುಖ್ಯ ನ್ಯಾಯಮೂರ್ತಿಗಳ ಪ್ರಿ| ಬಾಮೊಂಟರವರು ಉದ್ಗರಿಸಿದರು.] ರಾಜದ್ರೋಹ ಚಳವಳಿಯಲ್ಲಿ ಸೇರಬಾರದೆಂದು ಹಲವು ಸನದುಗಳಲ್ಲಿ ಬರೆದಿತ್ತು. ಕಾಯಿದೆಯ ಉದ್ಯೋಗ ನಡೆಸಿ ಜೀವನ ಮಾಡುವವರು ಕಾಯಿದೆಯನ್ನು ಪಾಲಿಸಬೇಕು, ಎಂಬದಾಗಿ ನ್ಯಾ| ಮೂ| ಮೆಕಲಿಯೋಡರವರು. ಈ ಹಿಂದೆ ಒಂದು ತೀರ್ಪು ಕೊಟ್ಟದ್ದುಂಟು [ಪ್ರತಿಯೊಬ್ಬರೂ ಕಾಯಿದೆಯಂತೆ ನಡೆಯಬೇಕು ಎಂಬ ದಿವ್ಯನೀತಿಯ ಉಪದೇಶ ಮಾಡುವದು ವಕೀಲರ ಕರ್ತವ್ಯವಲ್ಲ. ಸ್ವತಃ ವಕೀಲರು ಕಾಯಿದೆಭಂಗ ಮಾಡುವವರಿದ್ದರೂ ಪಕ್ಷಕಾರರಿಗೆ ಕಾಯಿದೆಯ ಪ್ರತಿ ಹೇಳಿ, ಕಾಯಿದೆಯನ್ನು ಉಲ್ಲಂಘಿಸಿದ್ದಲ್ಲಿ ಒದಗುವ ಪರಿಣಾಮಗಳನ್ನು ಪಕ್ಷಕಾರರಿಗೆ ಹೇಳಿಕೊಡಬಹುದು. ಹೀಗೆ ಮುಖ್ಯ ನ್ಯಾಯಾಧೀಶರು ಉದ್ಗರಿಸಿದರು. ಸನದುಗಳಲ್ಲಿ ಕರ್ತವ್ಯಗಳ ಉಲ್ಲೇಖಿಸಿದ್ದರೆ ಆ ಮಾತು ಬೇರೆ, ಎಂಬದಾಗಿ ನ್ಯಾ| ಮೂ| ರಾಂಗಣೇಕರರು ನುಡಿದರು] ವಕೀಲರು ನೀತಿಭ್ರಷ್ಟ ಅಥವಾ ಪತಿತ (*Infamous or disgraceful*) ಕೃತ್ಯ ಮಾಡಿದನಕ ನ್ಯಾಯಮೂರ್ತಿಗಳಿಗೆ ಸನದು ರದ್ದುಪಡಿಸುವ ಅಧಿಕಾರವಿಲ್ಲವಾಗಿ ನಿರ್ಣಯವಾದರೆ ವಕೀಲರು ಸರಕಾರಿ ಕಾರಭಾರವನ್ನು ಹಗಲಿರುಳು ಪ್ರತಿಬಂಧಿಸುವ ಪ್ರಯತ್ನ ಮಾಡಿ ಪುನಃ ಅದೇ ಸರಕಾರದಿಂದ ಸ್ಥಾಪನೆಯಾದ ಕೋರ್ಟುಗಳಲ್ಲಿ ವಕೀಲಿ ಮಾಡಬಹುದಲ್ಲವೆ?" ಈ ಪ್ರಕಾರ ಎಡ್ವೋಕೇಟ-ಜನರಲ್‌ರ ತರ್ಕಗಳ ದ ಬಳಿಕ, ವಕೀಲರ ಪರವಾಗಿ ಬೆರಿಸ್ಟರ ಸೆಟ್ಲವಾಡರವರು ನುಡಿದದ್ದೇನೆಂದರೆ — ಈ ಬೆರಿಸ್ಟರರು ವಕೀಲಿಯ ಉದ್ಯೋಗ ನಡಿಸುವಾಗ ದುರಾಚಾರ ಮಾಡಿದರಾಗಿ ಪ್ರತಿಪಕ್ಷದ ಆಕ್ಷೇಪಣವಿಲ್ಲ. ಈ ಪ್ರಸಕ್ತಿಯಲ್ಲಿ ಕಾಯಿದೆಭಂಗದಿಂದ ದುರಾಚಾರವಾಗುತ್ತದೋ ಹೇಗೆ? ದುರಾಚಾರವೆಂದರೆ ವಕೀಲಿ ನಡಿಸಲು ಆಯೋಗ್ಯವಾದ ನಡತೆ. ಇಂಗ್ಲಂಡದೇಶದಲ್ಲಿ ನೀತಿಭ್ರಷ್ಟತೆಯಿಂದೇ ಇದರ ಅರ್ಥ ಮಾಡುತ್ತಾರೆ. ನೀತಿಭ್ರಷ್ಟತೆಯೆಂದರೆ ಸಹಕಾರಿಗಳು ಸಹವಾಸವನ್ನು ತೊರೆಯುವಂಥ ನಡತೆ [' ರಾಜ್ಯಕ್ರಾಂತಿ ದುರಾಚಾರವಲ್ಲವೇ? ' ಎಂಬದಾಗಿ ನ್ಯಾ| ಮೂ| ಬೊಮೊಂಟರವರು ಕೇಳಿದರು] ಎಡ್ವೋಕೇಟ-ಜನರಲ್‌ರು ಆ ಬಣ್ಣ ಕೊಡಲು ಪ್ರಯತ್ನ ಮಾಡಿದ್ದೇನೋ ನಿಜ. ರಾಜ್ಯಕ್ರಾಂತಿಯ ಪ್ರಶ್ನೆಯೇ ಈ ಪ್ರಕರಣದಲ್ಲಿಲ್ಲ. ಸರಕಾರವು ಒಂದು ಸಂಘವನ್ನು ಬೇಕಾಯಿದೇಶೀರ ಎಂಬ ಜಾಹೀರನಾಮೆ ಹೊರಡಿಸಿತು. ಈ ಬೆರಿಸ್ಟರರು ಅದರ ಪುರಸ್ಕಾರ ಮಾಡಿದರು. ಇಷ್ಟೇ ಈ ಪ್ರಕರಣದಲ್ಲಿ ಚರ್ಚೆಯ ವಿಷಯವಾಗಿದೆ. ಅಸಂಬದ್ಧ ಮುಂಬರಿಗೂ, ಇಲ್ಲಿಯ ವಕೀಲರಿಗೂ ಏನು ಸಂಬಂಧವಿದೆ? ಆ ಮುಂಬರಿಯಿಂದ ನನ್ನ ಕಾರ್ಯಕ್ಷಮತೆಗೆ ಕುಂದು ಬರುತ್ತದೇನು? ದಾರ್ಲ್ಯಾಗಿ ಕರ್ತವ್ಯವೆಂದು, ನಾಗರಿಕ ಸ್ವಾತಂತ್ರ್ಯದ ಮೇರೆ ಬಂದ ಆಘಾತದ ನಿಮಿತ್ತವೆಂದು ತಾವು ನಡೆಕೊಂಡವಾಗಿ ರಾ| ದಮಸಾನಿಯವರು ತಮ್ಮ ಸಮರ್ಥನೆ ಮಾಡಿರುತ್ತಾರೆ. ಬ್ರಿಟಿಶ ದೇಶದೊಳಗಿನ ಮಹತ್ತ ದೊಡ್ಡ ಬೆರಿಸ್ಟರರಾದ ಕಾರ್ಸನ್ ದೊರೆಗಳೂ, ಬಿರ್ಕನ್‌ಹೆಡ್ ದೊರೆಗಳೂ ಇದೇ ಪ್ರಕಾರ ವರ್ತಿಸಿದ್ದಾರೆ. ಅವರ ಮೇಲೆ ರಾಜದ್ರೋಹದ ಖಟ್ಲೆ ನಡೆಯ ಗಲ್ಲಿಗೇರಿಸಬೇಕೆಂಬ ಶಿಕ್ಷೆ ಸಹ ಆಗಿತ್ತು. ಅಷ್ಟರಲ್ಲಿ ಯುದ್ಧ ಪ್ರಾರಂಭವಾಗಿದ್ದರಿಂದ ಅವರು ತಪ್ಪಿ, ಆಮೇಲೆ ಬ್ರಿಟಿಶ ಪ್ರಧಾನಮಂಡಳದಲ್ಲಿ ದೊಡ್ಡ ದೊಡ್ಡ ಅಧಿಕಾರ ಪದವರು ಕಾರ್ಸನ್ ದೊರೆಗಳು ಆಸೀಲ ಕೋರ್ಟಿನ ನ್ಯಾಯಮೂರ್ತಿಗಳಾದರು. ಅವರ ಸನದು ರದ್ದಾಗಲಿಲ್ಲ ಹೀಗಿಷ್ಟು, ಈ ಬೆರಿಸ್ಟರರ ಮೇಲಿ ಮಾತ್ರ ಈ ಪ್ರಕರಣವೇಕೆ? ರಂಗೂನ ಹೈಕೋರ್ಟಿನಲ್ಲಿ ಭ್ರಷ್ಟಾಚಾರವೆಂದೇ ಈ ಶಬ್ದದ ಅರ್ಥ ಮಾಡಿದೆ [ರಾಜ್ಯಕ್ರಾಂತಿಯ ವಿಚಾರ ನಡಿಸಿದವರ ವ್ಯವಸ್ಥೆಯೇನೆಂದು ನ್ಯಾ| ಮೂ| ರಾಂಗಣೇಕರರವರು ಕೇಳಿದರು.] ರಾಜ್ಯಕ್ರಾಂತಿಯ ವಿಚಾರಗಳ ಬಗ್ಗೆ ಕಾಯಿದೆಯಂತೆ ಖಟ್ಲೆಗಳಾಗಿ ಶಿಕ್ಷೆಯಾದೀತು [ಕೋರ್ಟುಗಳನ್ನು ನಾಶ ಮಾಡಲಿಚ್ಛಿಸುವವರ ವ್ಯವಸ್ಥೆಯೇನೆಂದು ಪುನಃ ನ್ಯಾ| ಮೂ| ರಾಂಗಣೇಕರರು ಕೇಳಿದರು] ಅವಾಗ್ಯೂ, ಅದು ಸನದು ರದ್ದುಪಡಿಸುವಂಥ ದುರಾಚಾರವಾಗದು. ಸ್ವತಃ ಭ್ರಷ್ಟ ಕೆಲಸ ಮಾಡಿದನಕ ಸನದು ರದ್ದುಪಡಿಸಬಾರದು. ಈ ಶಬ್ದಾರ್ಥವನ್ನು ಇಂಗ್ಲಂಡದಲ್ಲಿ ಮಾಡಿದಂತೆಯೇ ಹಿಂದುಸ್ಥಾನದಲ್ಲಿಯೂ ಮಾಡಬೇಕು. ಮದ್ರಾಸ ಹೈಕೋರ್ಟು ಇದೇ ಪ್ರಕಾರ ಅಭಿಪ್ರಾಯಪಟ್ಟಿದೆ. ಬೆರಿಸ್ಟರಿ ನಡಿಸಲು ಅಯೋಗ್ಯತೆ ಸಿದ್ಧವಾದನಕ ಸನದು ರದ್ದುಪಡಿಸಬಾರದು. ಈ ಹಿಂದ ನ್ಯಾ| ಮೂ| ಮೆಕಲಿಯೋಡರವರು ಕೊಟ್ಟ ನಿರ್ಣಯ ಮಹತ್ವವಾದದ್ದಿದೆ. ಅದನ್ನು ರದ್ದುಪಡಿಸುವ ಹಕ್ಕು ಈ ಕೋರ್ಟಿಗಿರುವದು. ನ್ಯಾ. ಮೂ. ಮೆಕಲಿಯೋಡರವರು ಕೊಟ್ಟ ತೀರ್ಪು ಪ್ರಿವಿ ಕೌನ್ಸಿಲಗಳ ತೀರ್ಪಿಗೆ ವಿರುದ್ಧವಾದದ್ದಿದೆ, ಅದನ್ನು ರದ್ದುಪಡಿಸಬೇಕು, ಅದನ್ನು ಹಾಗೆಯೇ ಇರಗೊಟ್ಟಲ್ಲಿ ವಕೀಲರಿಗೆ ಒಂದು ಅಪರಾಧದ ಸಿಗ್ಗ ಎರಡು ಶಿಕ್ಷೆ

ಗಳಾಗುವವು. ಕಾಯಿದೆಯಂತೆ ಏಟ್ಲೆ ನಡದ, ಶಿಕ್ಷೆಯಾಗುವವೊಂದು, ಮೇಲೆ ಸನದು ರದ್ದಾಯತಿಯ ಶಿಕ್ಷೆ ಆಗದು. ಇದರಿಂದ ವಕೀಲರಿಗೆ ಹೆದರಿಸಿ ಸರಕಾರಕ್ಕೆ ನಿರಂಕುಶ ಕಾರಭಾರ ನಡಿಸಲು ಅನುಕೂಲವಾಗುವದು. ನಾಗರಿಕ ಹಕ್ಕುಗಳಿಗೆ ಭಂಗ ಬರುವಂಥ ನಿರ್ಣಯವನ್ನು ನ್ಯಾಯಮೂರ್ತಿಗಳು ಕೊಡಲಾಗದು, ಎಂಬದಾಗಿ ಬೆರಿಸ್ಟರ ಸಜ್ಲೆ ವಾದರವರು ಹೇಳಿದ ಬಳಿಕ, ಶ್ರೀ| ಬುಲಾಭಾಯಿ ದೇಸಾಯಿಯವರು ಒಂದು ಕೌನ್ಸಿಲ್ ಆಕ್ಟಿನ ೧೦ನೇ ಕಲಮಿನಲ್ಲಿ ನಮೂದಿಸಿದಂತೆ ವಕೀಲರ ವೈಯಕ್ತಿಕ ನಡತೆಯು ವಕೀಲಿ ಧಂದೆ ನಡಿಸಲು ಅಯೋಗ್ಯವಿದ್ದರೆ ಮಾತ್ರ ಸನದು ರದ್ದುಪಡಿಸಬರುತ್ತದೆಂದು ವಾದಿಸಿದರು. "ಕಾರ್ಯದಕ್ಷತೆ, ಸುಸ್ವಭಾವಗಳಿದ್ದವೆ ತನಕ ಸನದು ರದ್ದುಪಡಿಸಬರುವದಿಲ್ಲ, ಈ ಶಿಕ್ಷೆಯಿಂದ ಬೆರಿಸ್ಟರರ ವಕೀಲಿ ನಡಿಸುವ ಯೋಗ್ಯತೆ ಕುಗ್ಗಿದೆಂದು ಕೋರ್ಟಿನ ಅಭಿಪ್ರಾಯವಾದರೆ ಮಾತ್ರ ಸನದು ರದ್ದು ಪಡಿಸಬರುತ್ತದೆ." ಹೀಗೆ ಬೆರಿಸ್ಟರ ಬಹಾದ್ದರಜಿಯವರು ವಾದಿಸಿದರು. ಆ ಮೇಲೆ ಕುಲಾಬಾ ವಾಗು ಭಡೋಚ ಜಿಲ್ಲೆಯೊಳಗಿನ ಸತ್ಯಾಗ್ರಹಿ ವಕೀಲರ ಸನದುಗಳನ್ನು ರದ್ದುಪಡಿಸುವ ಬಗ್ಗೆ ಅಲ್ಲಲ್ಲಿಯ ಡಿ| ಜಡ್ಜರು ಮಾಡಿದ ಶಿಫಾರಸುಗಳನ್ನು ನ್ಯಾಯಮೂರ್ತಿಗಳು ವಿಚಾರಿಸಿದರು. ಬೆರಿಸ್ಟರ ಕೋಯಾಜಿಯವರೂ, ವಸ್ತುರಿಯವರೂ ವಕೀಲರ ಪ್ರಕರಣಗಳನ್ನು ಕೋರ್ಟಿಗೆ ತಿಳಿಸಿದ ಬಳಿಕ, ನ್ಯಾಯಮೂರ್ತಿಗಳು ತೀರ್ಪು ಮುಂದೆ ಕೊಡಲ್ಪಡುವದೆಂದರು. ನಾಗರಿಕತನದ ಅಧಿಕಾರವು ವಕೀಲಿಯ ಸ್ವೀಕಾರದಿಂದ ಎಷ್ಟರಮಟ್ಟಿಗೆ ನಿಯಂತ್ರಿತವಾಗುತ್ತದೆಂಬ ಸಂಗತಿ ಈ ತೀರ್ಪಿನಲ್ಲಿ ನಿರ್ಣಯವಾಗುವದು.

* * *

ಗುಂಟೂರಿನ ಡಿ| ಜಡ್ಜರಾದ ರಾ| ಚಂದ್ರಶೇಖರ ಅಯ್ಯರವರು ಕೊಟ್ಟ ತೀರ್ಪು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಸರಕಾರವು ನಡಿಸುವ ಉಪಟಳವನ್ನು ಉದಾಹರಿಸುತ್ತದೆ. ಗುಂಟೂರಿನಲ್ಲಿ ಮ್ಯುನಿಸಿಪಾಲಿಟಿಯವರು ಒಂದು ವಾಚನಾಲಯವನ್ನಿಟ್ಟಿದ್ದಾರೆ. ಆ ವಾಚನಾಲಯದಲ್ಲಿ ಪಂಡಿತ ಮೋತಿಲಾಲ ನೆಹರೂ, ಲಾಲಾ ಲಜಪತರಾಯ, ಸ್ವಾಮಿ ಶ್ರದ್ಧಾನಂದ, ಮುಸ್ತಾಫಾ ಕೆಮಾಲ ಪಾಶಾ, ಅಬ್ದುಲ್ ಕರೀಮ್ ಆಝಾದ ಮತ್ತು ಲೋಕಮಾನ್ಯ ಟಿಳಕ ಇವರ ತೈಲ ಚಿತ್ರಗಳನ್ನು ಇಡಬೇಕಾಗಿ ಠರಾಯಿಸಿ ಆ ಬಗ್ಗೆ ಹಣವನ್ನು ಖರ್ಚು ಮಾಡಿದರು. ಈ ಖರ್ಚು ಅಸಾಮಾನ್ಯವಾದದ್ದೆಂದೂ, ಇಂಥ ಖರ್ಚು ಮಾಡಬೇಕಾದರೆ ಸರಕಾರದಿಂದ ಮುಂದಾಗಿ ಅಪ್ಪಣೆ ಪಡೆಯಬೇಕಿತ್ತೆಂದೂ, ಅಂಥ ಅಪ್ಪಣೆ ಪಡೆಯದ್ದರಿಂದ ಈ ಹಣವನ್ನು ರಾ| ಲಕ್ಷ್ಮಯ್ಯಾ ಪಂತುಲು ಮೊದಲಾದ ೬ ಮಂದಿ ಸಭಾಸದರು ತುಂಬಬೇಕೆಂದೂ ಲೋಕಲ್ ಫಂಡ ಎಗ್ಝಾಮಿನರರು ಅಪ್ಪಣೆ ಮಾಡಿದರು. ಆ ವಸೂಲಿಯ ಕ್ರಮದ ಹುಕುಮನ್ನು ರದ್ದುಪಡಿಸುವದಕ್ಕಾಗಿ ಡಿ| ಕೋರ್ಟಿನಲ್ಲಿ ಅರ್ಜಿಯಾಯಿತು. ಅದನ್ನು ಪುರಸ್ಕರಿಸಿ, ಸರಕಾರಿ ಹುಕುಮನ್ನು ರದ್ದುಪಡಿಸುವಾಗ ಡಿ| ಜಡ್ಜರು ಒರೆದದ್ದೇನಂದರೆ— "ಸನ್ಮಾನ್ಯ ವ್ಯಕ್ತಿಯವರು ವಾಚನಾಲಯಗಳಿಗೆ ಶೋಭೆ ಬೇಡವೆಂದು ಉದ್ಘೋಷಿಸಬಹುದು, ಆದರೆ, ಆಧುನಿಕ ಶಿಕ್ಷಣ ವಿಚಾರಗಳು ಭಿನ್ನವಾಗಿವೆ. ಭಾವಚಿತ್ರಗಳು ವಿಚಾರಜಾಗೃತಿಗೆ ಅವಶ್ಯವೆಂದು ಈಗ ಎಣಿಸಲ್ಪಡುತ್ತದೆ. ಭಾವಚಿತ್ರದವರ ರಾಜಕೀಯ ವಿಚಾರದ ಸಂಬಂಧ ಆಕ್ಷೇಪವಿದುವದಾಗಿ ಲೋಕಲ್ ಫಂಡ ಎಗ್ಝಾಮಿನರರ ಅಂಬೋಣವಿಲ್ಲ; ಅಸಾಮಾನ್ಯ ಖರ್ಚೆಂದು ಅವರು ಆಕ್ಷೇಪಿಸುತ್ತಾರೆ. ಮ್ಯುನಿಸಿಪಾಲಿಟಿಯ ಕಾಯಿದೆಯಲ್ಲಿ ಉಪಯೋಗಿಸಿದ ಶಬ್ದಗಳು ಅತಿ ವ್ಯಾಪ್ತಿಯವಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ಇಷ್ಟವಿದ್ದಂತೆ ಅರ್ಥ ಮಾಡಲು ಇಂಬುಗೊಡುತ್ತವೇನೋ ನಿಜ. ವಾಚನಾಲಯದ ಶೃಂಗಾರಕ್ಕಾಗಿ ಪ್ರಾಮಾಣಿಕತನದಿಂದ ಸಭಾಸದರು ಈ ಖರ್ಚು ಮಾಡಿದ್ದೆಂದು ಹೇಳಬಹುದು. ಸರಕಾರಿ ಹುಕುಮಿನಿಂದ ಮ್ಯುನಿಸಿಪಾಲಿಟಿಗಿದ್ದ ಅಧಿಕಾರವು ಬಹುಮಟ್ಟಿಗೆ ನಿಯಂತ್ರಿಸಲ್ಪಟ್ಟಿತೆಂದು ನನ್ನ ಅಭಿಪ್ರಾಯವಾಗಿದೆ. ಪುರಾತನ ವಸ್ತು ಸಂಶೋಧನ ಸಂಗ್ರಹಕ್ಕಾಗಿ ಮ್ಯುನಿಸಿಪಾಲಿಟಿಯವರು ಖರ್ಚು ಮಾಡಬಹುದು, ಚಿತ್ರಸಂಗ್ರಹಕ್ಕಾಗಿ ಅವರಿಗೆ ಖರ್ಚು ಮಾಡುವ ಅಧಿಕಾರವಿದೆ, ಸಭಾಮಂದಿರದ ಶೋಭೆಗಾಗಿ ಸಹ ಅವರು ಖರ್ಚು ಮಾಡಬಹುದು. ಇಂಥ ಪರಿಸ್ಥಿತಿಯಲ್ಲಿ ವಾಚನಾಲಯದಲ್ಲಿ ತೂಗಡಿಸಲು ಕೆಲ ಚಿತ್ರಗಳನ್ನು ಕೊಂಡುಕೊಳ್ಳಲು ಅವರಿಗೆ ಅಧಿಕಾರವಿಲ್ಲದಾಗಿ ಸರಕಾರವು ಆಕ್ಷೇಪಿಸುವದು ತಪ್ಪು. ಸಭಾಸದರಿಗಿದ್ದ ಅಧಿಕಾರವನ್ನು ಈ ಪ್ರಕಾರ ಅಪಹರಿಸತೊಡಗಿದರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ನಿಷ್ಪ್ರಯೋಜಕವಾಗುವವು, ಸಭಾಸದರು ಖರ್ಚಿಯ ಶೋಭೆಗಾಗಿ ಇರುವರು. ಸಾರ್ವಜನಿಕ ದ್ರವ್ಯನಿಧಿಯ ಅಪವ್ಯಯವಾಗದಂತೆ ಸರಕಾರವು ಜಾಗ್ರತೆ ವಹಿಯಬೇಕಾದುದೇನೋ ನಿಜ, ಕಾರಬಾರಿಗಳು ಲಂಚಗುಳಿಗಳಾಗದಂತೆ ಎಚ್ಚರಿಕೆ ವಹಿಯಬೇಕಾದುದೇನೋ ನಿಜ. ಆದರೆ ಸಣ್ಣ ಸಣ್ಣ ರಕಮುಗಳ ಖರ್ಚಿನ ಕುರಿತು ಆಕ್ಷೇಪ ಒಂದು, ಆ ಕುರಿತು ನಿಯಮಗಳ ಅರ್ಥ ಮಾಡಬೇಕಾದಾಗ ಮತ್ತು ಆ ನಿಯಮಕ್ಕೆ ಎರಡೂ ಅರ್ಥಗಳಾಗುತ್ತಿದ್ದಾಗ ಸಭಾಸದರ ವರ್ತನಕ್ಕೆ ಗ್ರಾಹ್ಯವಾದ ಅರ್ಥವನ್ನೇ ನಾವು ಮಾನ್ಯ ಮಾಡತಕ್ಕದ್ದು." ಡಿ| ಜಡ್ಜರು ಬಹು ಸೌಮ್ಯ ಭಾಷೆಯಲ್ಲಿ ಸರಕಾರದ ಅತಿಕ್ರಮವನ್ನು ನಿಷೇಧಿಸಿದ್ದಾರೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಸರಕಾರಿ ಅಧಿಕಾರಿಗಳ ಅಧಿಕಪ್ರಸಂಗತನದಿಂದ ಈಗಾಗಲೇ ನಿಷ್ಪ್ರಯೋಜಕವಾಗಿವೆ.

* * *

ವರಿಷ್ಠ ನ್ಯಾಯವಿಧಾಯಕ ಸಭೆಯ ಒಂದು ಅಂಗವಾದ 'ಕೌನ್ಸಿಲ್ ಆಫ್ ಸ್ಟೇಟ್' ಯಾನೆ ಹಿರಿಯರ ಸಭೆಯೆಂದರೆ, ಸರಕಾರಿ ಪಕ್ಷದ ಸಭೆ. ಆ ಸಭೆಯ ಮತದಾರರೆಂದರೆ, ರೂ ೨೦೦೦ಕ್ಕೆ ಮಿಕ್ಕಿ ತೀರ್ವೆ ಕೊಡುವವರು. ಇಂಥ ಮತದಾರರಿಂದ ಆರಿಸಲ್ಪಡುವವರಲ್ಲಿ ರಾಷ್ಟ್ರೀಯ ಸಭಾಭಿಮಾನಿಗಳು ಇರುವದೇ ಕಡಿಮೆ, ಕೆಲ ನಾಮಕರು ಸಭಾಸದರಿರುತ್ತಾರೆ. ಅವರಲ್ಲಿರ ಲಾಲಾ ರಾಮಶರಣದಾಸ ಮೊದಲಾದ ೬ ಜನರು ಪ್ರಗತಿ ಪಕ್ಷವೆಂಬದೊಂದು ಪಂಗಡ ಮಾಡಿಕೊಂಡಿದ್ದಾರೆ. ಈ ಪಂಗಡದವರು ಈಗ ಸದ್ಯಕ್ಕೆ ಸಿಮ್ಲಾದಲ್ಲಿ ನಡೆಯುವ ಅಧಿವೇಶನದಲ್ಲಿ ಒಂದು ಗಡಿಬಿಡಿ ಮಾಡಿದರು. ಉಕ್ಕಿನ ಉದ್ದಿಮೆಗೆ ರಕ್ಷಣೆ ಕೊಡುವ ಕಾಯಿದೆಯ ಚರ್ಚೆ ನಡೆದಿತ್ತು. ಈ ಕಾಯಿದೆಯಲ್ಲಿ ಬ್ರಿಟಿಶ ಉಕ್ಕಿನ ವ್ಯಾಪಾರಕ್ಕೆ ಭಂಗ ಬರದಂತೆ, ಹಾಗೆ ಬ್ರಿಟಿಶರ ಉಕ್ಕಿನ ವ್ಯಾಪಾರಕ್ಕೆ ಭಂಗ ಬರುವಲ್ಲಿ ಈ ದೇಶದೊಳಗಿನ ಉಕ್ಕಿನ ಮೇಲೆ ತೆರಿಗೆ ಹೇರುವಂತೆ ಈ ಕಾಯಿದೆಯ ವ್ಯವಸ್ಥೆಯಾಗಿದೆ. ಈ ವರ್ತನ್ನು ರದ್ದುಪಡಿಸಬೇಕಾಗಿ ಬಂದ ಉಪಸೂಚನೆಗಳು ಬಿದ್ದುಹೋದವು. ರಾ| ಪಿ ಎನ್ ಸಪ್ರುರವರು ಒಂದು ಉಪಸೂಚನೆ ಸೂಚಿಸಬಯಸಿದರು. ಅದೇನಂದರೆ— "ಬ್ರಿಟಿಶ ಹಿಂದುಸ್ಥಾನದೊಳಗಿನ ಉಕ್ಕಿನ ಉದ್ದಿಮೆಯ ರಕ್ಷಣೆಗಾಗಿ ಕರಹೇರಿಕೆಯಾಗುವ ಪ್ರಸಂಗದಲ್ಲಿ ಅದನ್ನು ನ್ಯಾಯವಿಧಾಯಕ ಸಭೆಗೆ ತಿಳಿಸಬೇಕಾಗಿಯೂ, ತಿಳಿಸಿದ ೬ ತಿಂಗಳು ತನಕ ಮಾತ್ರ ಆ ಕಾಯಿದೆ ಜಾರಿಯಲ್ಲಿರಬೇಕಾಗಿಯೂ ಸೂಚಿಸಿದರು. ಈ ಸೂಚನೆ ಕಾಯಿದೆಯಂತೆ ಮಾಗಬರುವದಿಲ್ಲವಾಗಿ ಅಧ್ಯಕ್ಷರು ಠರಾವು ಕೊಟ್ಟು ಒಬ್ಬರಿಗೂ ಮಾತಾಡಗೊಡಲಿಲ್ಲ. ಅದರಿಂದ ಸೌಮ್ಯ ಪ್ರಕೃತಿಯ, ಸಕಲ ಪ್ರಸಂಗಗಳಲ್ಲಿಯೂ ಸಮಾಧಾನ ಹಿಡಿಯುತ್ತಿರುವ ಪ್ರಗತಿ ಪಂಗಡಕ್ಕೆ ಸಿಟ್ಟು ಬಂದು ೬ ಜನ ಸಭಾಸದರೂ ಸಭೆಯೊಳಗಿಂದ ಎದ್ದುಹೋದರು. ಕಾಯಿದೆ ಮಂಜೂರಾಗಿಬಿಟ್ಟಿತು. ಅಧ್ಯಕ್ಷರಿಗೆ ಆ ಮೇಲೆ ತಮ್ಮ ನಿರ್ಣಯ ತಪ್ಪೆಂದು ಗ್ರಹಿಕೆಯಾಗಿ ಮಾರನೇ ದಿನ ಕ್ಷಮೆ ಬೇಡಿ ಪ್ರಗತಿ ಪಂಗಡವರಿಗೆ ಸಂತೈಸಿದರು! ಪುನಃ ಆ ಸೂಚನೆ ಮಾಡಲಿಕ್ಕೆ ಮಾತ್ರ ಇಂಬು ದೊರೆಯಲಿಲ್ಲ!!

* * *

ಇದೇ ಸಭೆಯಲ್ಲಿ ಸೈನ್ಯ ಕಾಯಿದೆಯಲ್ಲಿ ತಿದ್ದುಪಾಟ ಮಾಡುವ ಕಾನೂನಿನ ಚರ್ಚೆಯಾಯಿತು. ಈ ಕಾಯಿದೆಯಿಂದ ಹಿಂದೀಯರಿಗೆ ಸ್ವನ್ಯಾಧಿಕಾರ ಸಿಗಲು ತೊಂದರೆಯಾಗುತ್ತದೆ. ಈ ಹಿಂದೆ ಇದ್ದ ಸ್ವನ್ಯಾಧಿಕಾರದ ಹಕ್ಕು ಸಹ ರದ್ದಾಗುತ್ತದೆ. ಆ ಕುರಿತು ಸಭಿಕರು ಆಕ್ಷೇಪಿಸಲು, ಸೇನಾಪತಿಗಳಾದ ಸರ್ ಫಿಲಿಪ್ ಚೆಟ್‌ವುಡ್‌ರವರು ನುಡಿದದ್ದೇನಂದರೆ— "ಸೈನ್ಯದಲ್ಲಿ ಹಿಂದೀ ಜನರಿಗೆ ಸೇರಿಸಿಕೊಳ್ಳಲು ನಾವು ಶಾಶ್ವತವಾಗಿ, ಸ್ಥಿರವಾಗಿ ಪ್ರಯತ್ನ ನಡಿಸಬೇಕು. ಈ ಸಭಿಕರಿಗೆ ಸೈನ್ಯವ್ಯವಹಾರದ ಜ್ಞಾನವಿಲ್ಲ, ನಮಗೆ ಅನುಭವವಿದೆ. ಬ್ರಿಟಿಶ ಸರಕಾರದವರು ಅನುಭವಪಟ್ಟು ಈ ತಿದ್ದುಪಡಿಯನ್ನು ಮನ್ನಿಸಿದ್ದಾರೆ. ರಾಜಕಾರಣದ ದೃಷ್ಟಿಯಿಂದ ನಾನು ಹೀಗೆ ಹೇಳುವದಿಲ್ಲ. ಸೈನ್ಯದ ಕಾರ್ಯಕ್ಷಮತೆಯ ದೃಷ್ಟಿಯಿಂದ ನಾನು ಈ ಮಾತು ಹೇಳಿದ್ದೇನೆ. ದೊಂಬಿಯಾದರೆ ರಕ್ಷಿಸುವ ಜವಾಬದಾರಿ ನಮ್ಮದಿದೆ, ನಿಮಗೇನು ಗೊತ್ತಿದೆ? ನೀವೊಂದು ತೋಫು—ಗುಂಡಿನ ಸಪ್ಪಳವನ್ನಾದರೂ ಕೇಳಿರುವಿರೇನು? ಇಂದವರಿಗೆ ಸೈನ್ಯಖಾತೆಯ ತಿದ್ದುಪಡಿ ಸೂಚಿಸುವ ಅಧಿಕಾರವೆಲ್ಲಿದೆ? ಬ್ರಿಟಿಶ ಜನಾಂಗಕ್ಕೆ ಯುದ್ಧದ ಅನುಭವವಿದೆ. ಖಡ್ಗಬಲದಿಂದ ಅವರು ಹಿಂದುಸ್ಥಾನವನ್ನು ಗೆದ್ದಿದ್ದಾರೆ, ಖಡ್ಗಬಲದಿಂದಲೇ ಅದನ್ನು ಕಾಪಾಡಿಕೊಂಡಿದ್ದಾರೆ. ಹಿಂದುಸ್ಥಾನದಲ್ಲಿ ಶಾಂತತೆ ಕಾಪಾಡಲು ನಾವು ಜವಾಬದಾರರಿದ್ದೇವೆ. ಖುರ್ಚಿಯ ಮೇಲೆ ಕೂತು ಅಸಂಬದ್ಧ ಪ್ರಲಾಪ ಮಾಡುವದು ಯುಕ್ತವಲ್ಲ." ಈ ಭಾಷಣ ಮೇಲಿಂದ ಸರಕಾರವು—ಕೌನ್ಸಿಲು ಸಭಾಸದರ ಬಗ್ಗೆ—ಎಷ್ಟು ಆದರಭಾವವುಳ್ಳದ್ದಾಗಿದೆಂಬುದು ವ್ಯಕ್ತವಾಗುತ್ತದೆ. ಉಪಸೂಚನೆಗಳೆಲ್ಲ ಬಿದ್ದುಹೋದವು. ಮಾರನೇ ದಿನ ತಮ್ಮ ಭಾಷಣದಿಂದ ಯಾರಾದರೂ ನೊಂದುಕೊಂಡರೆ ಆ ಬಗ್ಗೆ ತಾವು ಪಶ್ಚಾತ್ತಾಪಪ್ರದರ್ಶನ ಮಾಡುತ್ತೇವಾಗಿ ಹೇಳಿ ಔದಾರ್ಯಪ್ರದರ್ಶನ ಮಾಡಿದರು. ಎಲ್ಲರಿಗೂ ಸಮಾಧಾನವಾಯಿತು! ಸರಕಾರದ ಕಾರ್ಯಭಾಗವೂ ಸಾಧಿಸಿಹೋಯಿತು!! ಕಾಯಿದೆ ಕೌನ್ಸಿಲುಗಳಲ್ಲಿ ನಡಿಯುವ ಸೋಜಿಗಗಳಿವು!!

ಕಾನಡಾವೃತ್ತ.

ವಿ ತಿ ಭಾದ್ರ ಸಂ। ಭಾದ್ರಪದ ಶು॥ ೧೨, ಸೋಮವಾರ

ಬ್ರಿಟಿಶರ ದೊಡ್ಡ ಗುಣ.

ಬ್ರಿಟಿಶ ರಾಜ್ಯಪದ್ಧತಿಯಲ್ಲಿ ಒಂದು ದೊಡ್ಡ ಗುಣ ಇದೆ ಅದೇನಂದರೆ, ಸಾರ್ವಜನಿಕ ಹಣದ ಅಪವ್ಯಯವಾಗದಂತೆ ಜಾಗ್ರತೆಗೊಳ್ಳುವದು ಲೆಕ್ಕವಿಡುವವರಿಗಿಂತ ಲೆಕ್ಕತಪಾಸಕರ ಉಪಟಳವೇ ಹೆಚ್ಚು. ಸಹಕಾರಿ ಸಂಘ, ಸ್ಥಾನಿಕ ಸ್ವರಾಜ್ಯ ಸಂಸ್ಥೆ ಮೊದಲಾದ ಸರಕಾರೇತರ ಸಂಸ್ಥೆಗಳ ಮೇಲೆ ಸರಕಾರಿ ಲೆಕ್ಕಪರಿಶೋಧಕರು ನಡಿಸುವ ದೋಳ್ಳಿಚಾರವನ್ನೆಲ್ಲ ಬಲ್ಲವರು ಬಲ್ಲರು. ಸಹಕಾರಿ ಸಂಘಗಳಲ್ಲಿ ‘ ಸುಪರವ್ಹಾಜಿಂಗ ಯೂನಿಯನ್ ’ ದೊಳಗಿನ ಬಿನ್‌ಸರಕಾರಿ ಲೆಕ್ಕಪರಿಶೋಧಕರಿಂದ ದಕ್ಷತೆಯಿಂದ ಕೆಲಸ ಸಾಗದು, ಆದಕ್ಕಾಗಿ ಸರಕಾರಿ ಲೆಕ್ಕಪರಿಶೋಧಕರೇ ಅವಶ್ಯ, ಹೀಗೆ ಸಹಕಾರಿ ಸಂಘಗಳ ಸ್ಥಿತಿ-ಗತಿಯನ್ನು ಸುಧಾರಿಸುವದಕ್ಕಾಗಿ ಮುಂಬಯಿ ಸರಕಾರವು ನೇಮಿಸಿದ ಚೌಕಶಿ ಮಂಡಳದ ಅಧ್ಯಕ್ಷರಾದ ಸಹಕಾರ ಖಾತೆಯ ರಜಿಸ್ಟ್ರಾರರು ಅಭಿಪ್ರಾಯ ಪಟ್ಟಿರುತ್ತಾರಾಗಿ ಪ್ರಕಟವಾಗಿದೆ. ಇಂಥ ಸಮಯ ಕಳೆದ ತಾ ೧೯—೧೯೩೪ ನೇ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸನ್ ೧೯೩೨-೩೩ನೇ ಸಾಲಿನ ಮುಂಬಯಿ ಸರಕಾರದ ಲೆಕ್ಕವನ್ನು ಚರ್ಚಿಸುವಾಗ ಪ್ರಕಟಗೊಂಡ ಸಂಗತಿಗಳು ಬೋಧಪ್ರದವಿವೆ.

ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ। ಲಕ್ಷ್ಮೀದಾಸ ಜೇರ್ಸಿಯವರು ನುಡಿದಂತೆ, ಈಗಿನ ಚರ್ಚಾ ಮರಣೋತ್ತರ ಚೌಕಶಿ ಈ ೧೯೩೨-೩೩ನೇ ಸಾಲು ಮುಗಿದು ೧॥ ವರ್ಷವಾಯಿತು, ೧೯೩೩-೩೪ ನೇ ಸಾಲೂ ಮುಗಿದಿದೆ, ನಾವು ಈಗ ೧೯೩೪-೩೫ನೇ ಸಾಲಿನಲ್ಲಿದ್ದೇವೆ ಆದಾಗ್ಯೂ ೧೯೩೨-೩೩ನೇ ಸಾಲಿನ ಜಮಾ-ಖರ್ಚಿನೊಳಗಿನ ಕೆಲ ಉದಾಹರಣೆಗಳು ಸರಕಾರಿ ಲೆಕ್ಕದ ಸ್ವರೂಪವನ್ನು ಹೊರಗೆಡಹುತ್ತವೆ. ಒಂದು ಜಿಲ್ಲೆಯಲ್ಲಿ ಬೆಂಚ ಮೆಜಿಸ್ಟ್ರೇಟರು ಆರೋಪಿಗಳಿಗೆ ೪೪೧ ರೂಪಾಯಿ ದಂಡ ಮಾಡಿದ್ದರು ಅವರೇ ಅದನ್ನು ವಸೂಲ ಮಾಡಿಕೊಂಡರು, ಸರಕಾರಿ ತಿಜೋರಿಯಲ್ಲಿ ಜಮಾ ಮಾಡಲೇ ಇಲ್ಲ. ಆರೋಪಿಗಳು ಅಪೀಲು ಮಾಡಿದರು, ಅಪೀಲಿನಲ್ಲಿ ಅವರ ಶಿಕ್ಷೆ ರದ್ದಾಯಿತು, ದಂಡ ತಿರುಗಿ ಕೊಡಬೇಕೆಂದು ಹುಕುಮಾಯಿತು. ತಿರುಗಿ ಕೊಡಲಿಕ್ಕೆ ರಕಮು ಜಮಾ ಇರಲಿಲ್ಲ. ಯಾವದೋ ಒಂದು ಖಾತೆಗೆ ಖರ್ಚು ಹಾಕಿ ತೆತ್ತ ದಂಡ ತೆತ್ತವರಿಗೆ ಕೊಡೋಣಾಯಿತು. ಬೆಂಚ ಮೆಜಿಸ್ಟ್ರೇಟರ ಚೌಕಶಿಯಾಯಿತು, ಅವರು ತಿಂದುಕೊಂಡಿದ್ದಾರೆಂದು ತಿಳಿಯಿತು, ಆಸ್ತಿಯಿರಲಿಲ್ಲ. ಈ ನಮೂನೆ ನೋಡಿ ಸಭಾಸದರಾದ ರಾ। ಲಕ್ಷ್ಮಣರಾವ ಗೋಖಲೆಯವರು ಅಚ್ಚರಿಗೊಂಡರು. ಬ್ರಿಟಿಶ ಸರಕಾರದ ಲೆಕ್ಕದಲ್ಲಿ ೧ ಪೈ ಹಿಂದೆ-ಮುಂದೆ ಆಗುವಂತಿಲ್ಲ, ಹೀಗಾದ ಬಗೆ ಹೇಗೆ ? ಎಂದು ಅವರಿಗೆ ತಿಳಿಯಲಿಲ್ಲ. ಬೆಂಚ ಮೆಜಿಸ್ಟ್ರೇಟರು ತಿಂದುಕೊಂಡಿದ್ದಾದರೂ ನಿಜವೇ ? ಅವರಿಗೆ ಆಸ್ತಿಯಿರಲಿಲ್ಲವೆಂಬ ಮಾತಾದರೂ ನಿಜವೇ ? ಇಷ್ಟು ನಿರ್ಧನರಿಗೆ ಸರಕಾರವು ಬೆಂಚ ಮೆಜಿಸ್ಟ್ರೇಟಿಯ ಅಧಿಕಾರವನ್ನು ಕೊಟ್ಟ ಬಗೆ ಹೇಗೆ ? ಎಂದು ಪ್ರಶ್ನಿಸಲು, “ ನಾವು ಅವರಿಗೆ ಬಲ್ಲೆ, ಅವರಿಗೆ ಕೆಲ ಆಸ್ತಿಯಿತ್ತು, ಸಾಯುವ ಪೂರ್ವದಲ್ಲೇ ಅದು ಜಪ್ತಾಗಿ, ಸತ್ತ ಮೇಲೆ ಆಸ್ತಿ ಲಿಲಾಂವಾಯಿತು, ಹೀಗೆ ಮುಂಬಯಿ ಸರಕಾರದ ಪರವಾಗಿ ಖಾನಬಹಾದ್ದೂರ ಕೂಪರರವರು ಖುಲಾಸೆ ಮಾಡಿದರು. ಈ ಪ್ರಕಾರ ಹೇಗೆ ಒದಗಿ ಬಂತೆಂದು ನಮಗಂತು ತಿಳಿಯದು.

ಖೈರಪುರ ಸಂಸ್ಥಾನದ ಪ್ರಕರಣ ಮತ್ತೂ ದೊಡ್ಡದಿದೆ. ಖೈರಪುರ ಸಂಸ್ಥಾನದ ಕೆಲ ಭಾಗವು ಸಿಂಧು ನದಿಗೆ ಕಟ್ಟಿದ ಲಾಯಿಡ್ ಒಡ್ಡಿನಲ್ಲಿ ಸಾರಿದ. ಅದನ್ನು ಖೈರಪುರ ಸಂಸ್ಥಾನಿಕರ ಕಡೆಯಿಂದ ಕ್ರಯಕ್ಕೆ ಕೊಳ್ಳಬೇಕೆಂಬ ಮಾತು ನಡೆದಿತ್ತು. ಮಾರಾಟ ಪೂರ್ಣತೆಯಾಗುವ ಮುಂಚೆಯೇ ಅವರಿಗೆ ೧೦ ಲಕ್ಷ ಹಣ ಸಂದಿದೆ. ಒಡ್ಡಿನಲ್ಲಿ ಸೇರಿದ ಸ್ಥಳವೆಷ್ಟು, ಅದರ ಬೆಲೆಯೆಷ್ಟು, ಸಂಸ್ಥಾನಿಕರಿಗೆ ಎಷ್ಟು ಸಲ್ಲಬೇಕಾಗುತ್ತದೆ ? ಅವರಿಂದ ಎಷ್ಟು ಸಲ್ಲುವದಾಗುತ್ತದೆ ? ಸಲ್ಲಬೇಕಾದ ರಕಮನ್ನು ಕರಾರಿನ ಅಭಾವದಲ್ಲಿ ಸಂಸ್ಥಾನಿಕರ ಕಡೆಯಿಂದ ವಸೂಲ ಮಾಡಿಕೊಳ್ಳುವ ಬಗೆ ಹೇಗೆ ? ಎಂಬ ಸಂಗತಿ ಯಾರಿಗೂ ಗೊತ್ತಿಲ್ಲ. ಕರಾರಾಗುವ ಮುಂಚೆ ಇಷ್ಟು ದೊಡ್ಡ ರಕಮು ಹ್ಯಾಗೆ ಕೊಟ್ಟಿತು ? ಎಂಬುದೊಂದು ಗೂಢವೇ ! ಅಪ್ರಾಮಾಣಿಕತನದಿಂದ ಖೈರಪುರ ಸಂಸ್ಥಾನಿಕರಿಗೆ ಈ ಹಣ ಕೊಟ್ಟು ಹೋಯಿತೆಂದು ಕಾಯಿದೆ ಕೌನ್ಸಿಲಿನಲ್ಲಿ ಯಾರೂ ಹೇಳಲಿಲ್ಲ, ನಾವು ಸಹ ಹಾಗೆ ಹೇಳಬಾರದು. ಆದರೆ, ಇಷ್ಟು ಅವ್ಯವಸ್ಥಿತ ವ್ಯವಹಾರ ಹ್ಯಾಗೆ ಒದಗಿ ಬಂತೆಂಬದರ ಸಮಾಧಾನಕರ ಖುಲಾಸೆಯಾಗಲಿಲ್ಲ. ಹಿಂದುಸ್ಥಾನ ಸರಕಾರದ ಕಡೆ ಈ ಪ್ರಕರಣ ಕಳಿಸಿರುವದಾಗಿ ಉತ್ತರ ಕೊಟ್ಟು ಸರಕಾರವು ಪಾರಾಗಿದೆ.

ಇದಕ್ಕಿಂತ ಲೊಯಿಡ್ ಬೆರೇಜ ಒಡ್ಡಿನ ಕಥೆ ಮತ್ತೂ ಮನೋರಂಜಕವಿದೆ. ೧೯೩೩ ನೇ ಸಾಲಿನ ತನಕ ಈ ಒಡ್ಡಿಗಾಗಿ ೨೦ ಕೋಟಿ ರೂಪಾಯಿ ಖರ್ಚು ತಗಲಿತು. ಮುಂದಿನ ವರ್ಷ ಈ ಒಡ್ಡಿನ ಕೆಲಸ ಪೂರ್ಣತೆಯಾಗುವದು. ಅಂತು ೨೫ ಕೋಟಿ ಖರ್ಚು ತಗಲುವದಾಗಿ ಈಗಿನ ಎಣಿಕೆ. ಈ ಒಡ್ಡು ಕಟ್ಟಿದ್ದರಿಂದ ಸಿಂಧು ನದಿಯ ದಂಡೆಗುಂಟ ಇರುವ ಭೂಮಿಗೆ ಬೆಲೆ ಬಂದು ಸರಕಾರಕ್ಕೆ ಲಾಭವಾಗುವದೆಂದು ಅಂದಾಜಿತ್ತು. ಈಗ ನೋಡಿದರೆ ೧೭ ಕೋಟಿ ಬೆಲೆಯ ಭೂಮಿ ಈ ಒಡ್ಡು ಕಟ್ಟಿದ್ದರಿಂದ ನಮ್ಮ ಸರಕಾರಕ್ಕೆ ಸಿಗುತ್ತದೆ, ಅಂದರೆ ೮ ಕೋಟಿ ಅಸಲಿನಲ್ಲಿ ನಷ್ಟ ! ಬಡ್ಡಿಯನ್ನು ಸರಕಾರವು ಬೇರೆ ಬೇರೆ ಖಾತೆಗಳಲ್ಲಿ ಖರ್ಚು ಹಾಕಿ ತೆರಬೇಕು. ಸರಕಾರವು ಕೆಲ ಭೂಮಿ ಮಾರಿ ಬಡ್ಡಿ ತೀರಿಸಿತು. ಬಡ್ಡಿಗೆ ಭೂಮಿ ಮಾರಿ ಹೋದರೆ ಅಸಲು ತೀರುವ ಬಗೆ ಹೇಗೆಂದು ರಾ। ಬಾಲಕೃಷ್ಣ ಕಾಮತರು ಧ್ವನಿಸಿದರು. ರಿಪೋರ್ಟಿನ ಸಾಲಿನಲ್ಲಿ ೨೧ ಲಕ್ಷ ರೂಪಾಯಿ ವೆಚ್ಚವಾದ ಬಗ್ಗೆ ೨೪೧೭ ವೌಚರುಗಳೇ ಇಲ್ಲ. ಲೆಕ್ಕ ತಪಾಸಾದ ಬಳಿಕ, ೧೭-೧೮ ಲಕ್ಷ ರೂಪಾಯಿಗಳ ವೌಚರುಗಳು ಸಿಕ್ಕಿದವು. ಇನ್ನೂ ತನಕ ಸುಮಾರು ೩ ಲಕ್ಷ ರೂಪಾಯಿಗಳ ಖರ್ಚಿನ ವೌಚರುಗಳು ಸಿಗಲಿಲ್ಲ. ಪ್ರತಿಯೊಂದು ಖರ್ಚು ಒಪ್ಪಿಸಬೇಕಾದರೆ, ವೌಚರು ಯಾನೆ ಖರ್ಚಿನ ಯಾದಿ ಇರಲೇ ಬೇಕು. ಮುಂಚೆ ವೌಚರು, ಆಮೇಲೆ ಖರ್ಚು, ಹೀಗೆ ಲೆಕ್ಕದ ಪದ್ಧತಿ. ವೌಚರಿನ ಅಭಾವದಲ್ಲಿ ಖರ್ಚಾಗಲಿಲ್ಲವೆಂದೇ ಎಣಿಕೆ. ಅಂದರೆ, ಸುಳ್ಳು ಖರ್ಚು ಬರೆದು ಹಣ ವಂಚಿಸಿದರೆಂಬ ಗ್ರಹಿಕೆ. ಒಡ್ಡಿನ ಲೆಕ್ಕದಲ್ಲಿ ಮುಂಚೆ ಖರ್ಚು, ಆಮೇಲೆ ಸಿಕ್ಕಿದರೆ ವೌಚರು, ಇಲ್ಲದಿದ್ದರೆ ಅದೂ ಇಲ್ಲ; ಖರ್ಚು ಮಾಡದೆ ಸುಳ್ಳು ಖರ್ಚು ಬರೆದು ಹಣವಿನ ವಂಚನೆಯಾಗಿದೆಂದು ಎಣಿಸಲು ದೊಡ್ಡ ದೊಡ್ಡ ಅಧಿಕಾರಿಗಳು ಈ ಪ್ರಕಾರ ವಂಚನೆ ಮಾಡಿದರೆಂದು ತಿಳಿಯಲು ಮನಸ್ಸೊಪ್ಪುವದಿಲ್ಲ. ಖರ್ಚು ಆದದ್ದಿದ್ದರೆ ಲೆಕ್ಕ ಪರಿಶೋಧದ ಸಮಯ ವೌಚರುಗಳು ಯಾಕೆ ಹಾಜರಾಗಲಿಲ್ಲ ? ಒಡ್ಡು ಕಟ್ಟುವ ಖಾತೆಯಲ್ಲಿ ದೊಡ್ಡ ಪರಿವಾರವಿದೆ. ಲೆಕ್ಕ ನೋಡುವವರಿದ್ದರೆ, ಲೆಕ್ಕ ಬರೆಯುವವರಿದ್ದರೆ, ಹೀಗಿದ್ದು, ಈ ಪ್ರಕಾರವಾಗುವ ಬಗೆ ಹೇಗೆ ? ನಮಗೆ ತಿಳಿಯದ ಸಂಗತಿ ! ಸಿಂಧು ನದಿಗೆ ಒಡ್ಡು ಕಟ್ಟುವಾಗ ಹಣದ ಜೊತೆಗೆ ವೌಚರುಗಳು ಸಹ ಮುಳುಗಿಹೋಗಿರಬೇಕೆಂದು ಬಲವಾದ ಸಂದೇಹವುಂಟಾಗುತ್ತದೆ ! ಚೀಫ ಇಂಜನಿಯರರು ತಪಾಸ ಮಾಡಿದ ಮೇಲಿನ್ನಲ್ಲಿ ವೌಚರುಗಳು ಈಗಿಲ್ಲದರೂ ಸಿಗಬಹುದು. ೧೭—೧೮ ಲಕ್ಷ ರೂಪಾಯಿಗಳ ವೌಚರುಗಳು ಸಿಕ್ಕಿರುವಾಗ, ಇನ್ನು ೨ ೩ ಲಕ್ಷಗಳ ವೌಚರುಗಳನ್ನು ಹುಡುಕಿ ತೆಗೆಯುವದೇನು ದೊಡ್ಡ ಕೆಲಸವಲ್ಲ. ಚೀಫ ಇಂಜನಿಯರರು ಪ್ರಯತ್ನ ಮಾಡುತ್ತಾರೆ. ವೌಚರುಗಳಿಗಾಗಿ ತಲ್ಲಣಿಸುವ ಕೌನ್ಸಿಲು ಸಭಾಸದರಿಗಾದರೂ ಸಮಾಧಾನವಾದೀತು. ಹಣ ಖರ್ಚಿನ ಬಗ್ಗೆ ಮನಸ್ಸಿಗೆ ಖಾತ್ರಿಯಾಗಿರುವಾಗ, ವೌಚರುಗಳಿಗಾಗಿ ಸಭಾಸದರು ಹಾತೊರೆಯುವದು ಯೋಗ್ಯವಲ್ಲ. ರಾ। ದೂಂಗರಸಿಂಗ ಪಾಟೀಲರವರು ನುಡಿದಂತೆ, ಜಮಾ ಖರ್ಚು ಚೊಕ್ಕವಿರುವದಾಗಿ ಅಭಿಪ್ರಾಯಪಟ್ಟು, ಲೆಕ್ಕ ಮನ್ನಿಸಿ, ಇಂಥ ಲೆಕ್ಕ ಇಟ್ಟ ಬಗ್ಗೆ ಸರಕಾರಕ್ಕೆ ಮನವಣಿ ಪೊಗಳಿ ಮುಂದಾಗುವದೇ ಎಲ್ಲರಿಗೂ ಶ್ರೇಯಸ್ಕರವಾದುದು.

ಕೆಲವರು ಪೋಲೀಸ ಖಾತೆಯ ಮೇಲೆ ರೇಗಿದರು. ಎಲ್ಲ ಖಾತೆಗಳಲ್ಲಿ ಸಾಲದ ಅಂತ್ಯಕ್ಕೆ ಶಿಲ್ಲಕ್ಕುಳ್ಳ ಸರಕಿನ ಗಣನೆಯಾಗುತ್ತದೆ. ಪೋಲೀಸ ಖಾತೆ ಇದಕ್ಕೊಂದು ಅಪವಾದ. ಈ ಖಾತೆಯವರ ಕಡೆ ಶಿಲ್ಕು ಮಾಲು ಎಷ್ಟೆಂದು ತಿಳಿಯುವದಿಲ್ಲ. ಶಿಲ್ಕು ಎಷ್ಟಿದ್ದರೇನು ? ಪೋಲೀಸರ ಸ್ವಾಧೀನವಲ್ಲಿದ್ದ ಸರಕು ಎಂದಾದರೂ ಕೈತಪ್ಪಿ ಹೋಗಬಹುದೇ ? ಸರಕಾರಿ ಲೆಕ್ಕಪರಿಶೋಧಕರು ಲೆಕ್ಕವಿಡಬೇಕಾಗಿ ಸೂಚಿಸಿದಾಗ್ಯೂ, ಸರಕಾರವು ಈ ಲೆಕ್ಕವಿಡುವದರಿಂದ ಲಾಭವಿಲ್ಲವಾಗಿ ಅಭಿಪ್ರಾಯಪಟ್ಟು ಲೆಕ್ಕ ಪರಿಶೋಧಕರ ಸೂಚನೆಯನ್ನು ತಿರಸ್ಕರಿಸಿಬಿಟ್ಟಿದೆ. ಪೋಲೀಸರೆಂದರೆ ಸರಕಾರವು ಸಹ ಬೆದರುತ್ತದೇನೆಂದು ಕೆಲವರ ತರ್ಕ. ಜಂಗಲ ಖಾತೆಯವರು ಒಂದೆಡೆ ೩೧ ಸಾವಿರ ರೂಪಾಯಿ ಖರ್ಚು ಮಾಡಿ ಗೇರುಗ್ರಾಸ ಸಂಗ್ರಹಿಸಿದ್ದರು. ಅದು ಹಾಳಾಯಿತಂತೆ ! ಅದರಿಂದ ೬೪ ರೂಪಾಯಿಗೆ ವಿಕ್ರಿಯಾಯಿತಂತೆ !! ಪ್ರಾಥಮಿಕ ಶಿಕ್ಷಣಕ್ಕಾಗಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಮಂಜೂರಾದ ರಕಮಿಗೆ ಮಿಕ್ಕಿ ಹಣ ಕೊಟ್ಟದ್ದರಿಂದ ೩ ಲಕ್ಷ ರೂಪಾಯಿಗಳು ಮುಳುಗುವ ಸಾಲದ ಲೆಕ್ಕಕ್ಕೆ ಖರ್ಚು ಹಾಕಲ್ಪಟ್ಟಿವೆ. ಇದನ್ನು ಸರಕಾರಿ

ಲೆಕ್ಕ ಪರಿಶೋಧಕರು ಬಹಳವಾಗಿ ಆಕ್ಷೇಪಿಸಿದ್ದಾರೆ ಇಂಜಿನಿಯರ ಖಾತೆಯವರು ೩೧೪ ರೂಪಾಯಿಗೆ ಕೆಲ ಭೂಮಿ ಕೊಂಡಿದ್ದರು ಆ ಹಣ ಭೂಮಿಯ ಮಾಲೀಕರಿಗೆ ಕೊಡಬೇಕೆಂದು ಮಂಜೂರಾಗಿ ೧೮ ವರ್ಷಗಳಾದವು; ಆದನ್ನು ಇಂಜಿನಿಯರ ಖಾತೆಯವರು ಕೊಡಲಿಲ್ಲ ಒಡ್ಡಿ ಕೂಡಿಸಿ ರೂ ೧೧೫೭ನ್ನು ೧೯೩೬—೩೭ನೇ ಸಾಲಿನಲ್ಲಿ ಕೊಟ್ಟರು

ರಾ| ತೇರ್ಸಿಯವರು ನುಡಿದಂತೆ, ಮರಣೋತ್ತರ ಚೌಕಶಿಯಿದು ! ಇದರಲ್ಲೇನು ಹುರುಳಿಲ್ಲ ಸರಕಾರಿ ಲೆಕ್ಕಪರಿಶೋಧಕರ ರಿಪೋರ್ಟುಗಳ ಕೆಲವಂಶಗಳ ಮೇಲಿಂದ ಸರಕಾರವು ಬಡಬಗ್ಗರಿಂದ ಎತ್ತುವಳಿ ಮಾಡಿದ ಹಣವನ್ನು ಯಾವ ಪರಿ ವೆಚ್ಚ ಮಾಡುತ್ತದೆಂಬ ಸಂಗತಿ ಜನಸಾಮಾನ್ಯರಿಗೆ ತಿಳಿಯುವಂತಿದೆ ಸರಕಾರಿ ಜಮಾ-ಖರ್ಚಿನಲ್ಲಿ ಪೈ ಪೈ ಲೆಕ್ಕವಿರುತ್ತದೆ, ಎಂಬ ಮಾತೇನೋ ನಿಜ ! ಲಕ್ಷಾವಧಿ ರೂಪಾಯಿಗಳು ಹಿಂದು-ಮುಂದಾಗುತ್ತವೆಂಬ ಮಾತೂ ಅಷ್ಟೇ ನಿಜ !! ಸರಕಾರಿ ಲೆಕ್ಕದೊಳಗಿನ ಈ ನ್ಯೂನತೆಯನ್ನು ಅಧಿಕಾರಿಗಳು ಇನ್ನಾದರೂ ಲಕ್ಷಿಸಿ ಪ್ರಿಟಿಶ ಪರಂಪರೆಗೆ ಉಚಿತವಾಗಿ ನಡಕೊಂಡು ಜನಸಾಮಾನ್ಯರ ಆದರ ಭಾವವನ್ನು ಸಂಗ್ರಹಿಸಬಹುದಲ್ಲವೇ ? ಖರ್ಚು ಈಗಿನ ಕಾಯಿದೆ ಕೌನ್ಸಿಲಿನಲ್ಲಿ ಮನ್ನಿಸೋಣವಾಯಿತೆಂದು ಹೇಳುವ ಮುಂಚೆಯೇ ತಿಳಿಯುವ ಹಾಗಿದೆ

ವೃತ್ತಸಾರ.

— ಹೊಸ ರಾಜ್ಯಸುಧಾರಣೆಯ ಗುಪ್ಪೇ ತಿಂಯಲೊಲ್ಲದು ೧೯೩೭ ನೇ ಇಸ್ವಿಯ ತನಕ ಹೊಸ ಸುಧಾರಣೆಯ ಕಾನೂನು ಜಾರಿಯಲ್ಲಿ ಬರಲಿಕ್ಕಿಲ್ಲವಾಗಿ ಸಿಮ್ಲಾದೊಳಗಿನ 'ಯುನೈಟೆಡ್ ಪ್ರೆಸ್' ಸುದ್ದಿಗಾರರು ಬರೆಯುತ್ತಾರೆ. ಸುಧಾರಿಸಿದ ರಾಜ್ಯಪದ್ಧತಿಯನ್ನು ಶೀಘ್ರವೇ ಜಾರಿಯಲ್ಲಿ ತರುವದಕ್ಕಾಗಿ ಸರ್ವಾಧಿಪತಿ ವಿಲಿಂಗಡನ್ ದೊರೆಗಳು ಇಬ್ಬ ಕಾರ್ಯದರ್ಶಿಗಳನ್ನು ಇದೇ ಕೆಲಸಕ್ಕಾಗಿ ನೇಮಿಸಿಕೊಳ್ಳುವವರಿದ್ದಾರೆಂದು ಪ್ರಕಟವಾಗಿದೆ ರಾಜ್ಯಸುಧಾರಣಾ ಕಾನೂನಿಗೆ ಚರ್ಚಿಲ್ಲ ಪಕ್ಷದ ಕಡೆ ವಿರೋಧವು ಈಗ ಬಯಲಾಗಹತ್ತಿದೆ ಜ್ಯಾಂಟ ಪಾರ್ಲಿಮೆಂಟರಿ ಕಮಿಟಿಯವರು ಅವರ ಆಕ್ಷೇಪಗಳನ್ನೆಲ್ಲ ಪರಿಹರಿಸಿ ಬ್ರಿಟಿಶ ಹಿತಸಂರಕ್ಷಣೆಯ ಯೋಜನೆ ಮಾಡಿದ್ದರಿಂದ ಅವರ ವಿರೋಧ ಬಯಲಾಗಿರುವದಂತೆ ವಿಲಿಂಗಡನ್ ದೊರೆಗಳಿಗೆ ಬ್ರಿಟಿಶ ಪ್ರಧಾನ ಮಂಡಳವು ಸರ್ವಾಧಿಪತಿಗಳಾಗಿ ಇನ್ನು ಕೆಲ ವರ್ಷ ಕೆಲಸ ಮಾಡಲು ಒತ್ತಾಯ ಮಾಡಿರುವದಂತೆ ! ವಿಲಿಂಗಡನ್ ದೊರೆಗಳು ಇನ್ನೂ ಅನುಮತಿ ಕೊಡಲಿಲ್ಲ—ಹಿಂದುಸ್ಥಾನದಲ್ಲಿ ಆಲೋಚನೆ ಮಾಡಿ ಹೇಳುತ್ತೇನೆಂದಾಗಿ ನುಡಿದಿರುವರಂತೆ ವಿಲಿಂಗಡನ್ ದೊರೆಗಳಿಗೆ ಈಗ ೬೯ ವರ್ಷ ಪ್ರಾಯ, ವಿಶ್ರಾಂತಿ ಅವಶ್ಯ ಕೊಳ್ಳಬೇಕಾದ ಸಮಯ ಆದಾಗ್ಯೂ, ಹಿಂದುಸ್ಥಾನದ ಕಲ್ಯಾಣಕ್ಕಾಗಿ ಇನ್ನು ೩ ವರ್ಷಗಳ ತನಕ ಸರ್ವಾಧಿಪತಿಗಳಾಗಿರಲು ಒಪ್ಪಿಗೆ ಕೊಡಬಹುದೆಂದು ಕಲಕತ್ತೆಯ 'ಸ್ಟಾರ ಆಫ್ ಇಂಡಿಯಾ' ಪತ್ರಿಕೆಯ ಸಿಮ್ಲಾದೊಳಗಿನ ಸುದ್ದಿಗಾರರು ಪ್ರಕಟಿಸುತ್ತಾರೆ ನೇಮಸ್ತರ ಮನವೊಲಿಕೆ ಮಾಡಿಕೊಳ್ಳಲು ಪ್ರಯತ್ನಗಳು ನಡದಿವೆ ನೇಮಸ್ತರು ಟೀಕೆ ಮಾಡುವದನ್ನು ಬಿಟ್ಟು ಕೆಲವೊಂದು ಕಾರಣದ ಮೇಲೆ ಹೊಸ ರಾಜ್ಯಘಟನೆಯನ್ನು ಸ್ವಾಗತ ಮಾಡಬಹುದಂತೆ ಬೆರಿಸ್ಟರ ಜಿನ್ನಾರವರಿಗೆ ಮುಂಬಯಿ ಗವ್ಹರ್ನರರಾಗಿ ನೇಮಿಸಬಹುದಂತೆ ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಮದ್ರಾಸದ ಗವ್ಹರ್ನರರಾಗಬಹುದಂತೆ ನಾ| ಆಗಾಖಾನರಿಗೂ ಒಂದು ಗವ್ಹರ್ನರಿ ದೊರಕಬಹುದಂತೆ. ಯಾವತ್ತೂ ಕಾರಸ್ಥಾನಗಳು ಒಳಗಿಂದೊಳಗೆ ನಡೆಯುತ್ತಿವೆ ಕಾಯಿದೆ ಕೌನ್ಸಿಲುಗಳ ಇಲೆಕ್ಷನುಗಳಲ್ಲಿ ರಾಷ್ಟ್ರೀಯ ಸಭೆಯವರು ಹೆಚ್ಚಿಚ್ಚಾಗಿ ಆರಿಸಿಬಂದರೆ ಜ್ಯಾಂಟ ಪಾರ್ಲಿಮೆಂಟರಿ ರಿಪೋರ್ಟು ರಾಷ್ಟ್ರೀಯ ಸಭೆಯವರ ಮನವೊಲಿಕೆಗಾಗಿ ತಿದ್ದುಪಡಿಯಾಗುವ ಸಂಭವವುಂಟು ಈ ಭೀತಿಯಿಂದಲೋ ಏನೋ, ಲಂಕೆಶಾಯರದ ವ್ಯಾಪಾರಕ್ಕೆ ತಕ್ಕಷ್ಟಾದ ಸಂರಕ್ಷಣೆ ದೊರೆಯದಿದ್ದರೆ ತಾವು ಕಾರಖಾನೆಗಳನ್ನು ಮುಚ್ಚಿಬಿಡುವದಾಗಿ ಲಂಕೆಶಾಯರದೊಳಗಿನ ವರ್ತಕರು ಲಂಡನಿನ 'ಡೇಲಿ ಮೇಲ' ಪತ್ರಿಕೆಯ ಮುಖಾಂತರ ಗದ್ದರಿಸುತ್ತಾರೆ ಜ್ಯಾಂಟ ಪಾರ್ಲಿಮೆಂಟರಿ ಕಮಿಟಿಯು ಇನ್ನೂ ವಿಚಾರಮಗ್ನವಾಗಿದೆ, ಹ್ಯಾಗೆ ನಡಕೊಳ್ಳಬೇಕೆಂದು ಅವರಿಗಿನ್ನೂ ತೋಳೆಯದು ಬಹುತರವಾಗಿ ಚರ್ಚಿಲ್ಲ ಪಕ್ಷಕ್ಕೆ ಅನುಕೂಲವಾಗಿಯೇ ಅವರ ಅಭಿಪ್ರಾಯವಿರುವದೆಂದೂ, ಅದಕ್ಕಾಗಿಯೇ ಮುಂಚಿನಂತೆ ಚರ್ಚಿಲ್ ಪಕ್ಷದವರು ಸರ್ ಸಮ್ಯುಅಲ್ ಹೋರರವರಿಗೆ ಭಾರತ ಮಂತ್ರಿಸ್ಥಾನದಿಂದ ಪದಚ್ಯುತ ಮಾಡಲು ಬೊಬ್ಬೆಯಿಡುವದಿಲ್ಲವಾಗಿಯೂ ಹೇಳುತ್ತಾರೆ ಜ್ಯಾಂಟ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟು ಪ್ರಕಟವಾದ ಒಳಕ್ಕೆ, ಆ ಕುರಿತು ಪಾರ್ಲಿಮೆಂಟಿನ ಸಭಾಸದರ ಕಡೆಗೆ ವಕೀಲಿ ನಡಿಸುವದಕ್ಕಾಗಿ ಹಿಂದೀ ಪ್ರಮುಖರ ಶಿಷ್ಟಮಂಡಳವೊಂದು ಲಂಡನಿಗೆ ಹೋಗಲಿಕ್ಕಿದೆ ಈ ಶಿಷ್ಟರಲ್ಲಿ ಪಂ| ಮದನಮೋಹನ ಮಾಲವೀಯರವರೂ ಸೇರಿರುವರಾಗಿ ನಾಗಪುರದ ಸರ್ ಹರಿಸಿಂಗ ಗೌರರವರು ಪ್ರಕಟಿಸುತ್ತಾರೆ ಇದೊಂದು ಆಶ್ಚರ್ಯದ ಮಾತು !

— ವರ್ಧಾದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರೂ, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಸಭಾಸದರೂ, ಪಂಡಿತ ಮದನ ಮೋಹನ ಮಾಲವೀಯ-ಮಾಧವರಾವಜಿ ಅಣೇಯವರೂ ಶುಕ್ರವಾರ ಬಂದು ತಲ್ಪಿದರು ಮಹಾತ್ಮರಿಗೂ, ಪಂಡಿತರಿಗೂ ಶುಕ್ರವಾರ ರಾತ್ರೆ ವಿಚಾರ ವಿನಿಮಯವಾಯಿತು ಬಹುತರವಾಗಿ ಐಕ್ಯಮತ್ಯವಾಗಬಹುದೆಂದು ಹೇಳುತ್ತಾರೆ ರಾಷ್ಟ್ರೀಯ ಸಭೆಯವರು ಮಾಲವೀಯ-ಅಣೇ ಪಕ್ಷದವರಿಗೆ ಕೌನ್ಸಿಲಿನಲ್ಲಿ ಕೆಲ ಸಭಾಸದಸ್ಥಾನಗಳನ್ನು ಕೊಡುವರೆಂದೂ, ಅವರಿಗೆ ಜಾತಿನಿರ್ಣಯದ ವಿರುದ್ಧ—ಅಭಿಪ್ರಾಯ—ಕೊಡಲಿಕ್ಕೆ ಸ್ವಾತಂತ್ರ್ಯವಿರುವದೆಂದೂ, ಸಭಾಸದಸ್ಥಾನಗಳ ಪ್ರಮಾಣಕ್ಕಾಗಿ ಇತ್ತಕ್ಷಣದಲ್ಲಿ ಈಗ ಮಾತುಕಥೆ ನಡೆಯುತ್ತದೆಂದೂ ತಿಳಿಯುತ್ತದೆ ರಾಜಿನಾಮೆಗಳನ್ನು ಹಿಂತೆಗೆದುಕೊಂಡು ಪಂ| ಮದನಮೋಹನ ಮಾಲವೀಯರವರು ತಮ್ಮ ಉಮೇದ್ವಾರರ ಹೆಸರುಗಳನ್ನು ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಮುಂದೆ ಸೂಚಿಸಿ ಮನ್ನಿಸಿಕೊಂಡಲ್ಲಿ ಮಾತ್ರ ಅವರಿಗೆ ಕಾಯಿದೆ ಕೌನ್ಸಿಲುಗಳಲ್ಲಿ ಜಾತೀಯ ನಿರ್ಣಯದ ವಿರುದ್ಧ ಮತ ಕೊಡಲು ಸ್ವಾತಂತ್ರ್ಯವಿರುವದಾಗಿ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರವರು ಉದ್ಗರಿಸುತ್ತಾರೆ ಕೊಂಗ್ರೆಸ ಪಾರ್ಲಿಮೆಂಟರಿ ಮಂಡಳದ ಸಭೆ ಮೊನ್ನೆ ಶನಿವಾರ ಮಧ್ಯಾಹ್ನ ೨ ಘಂಟೆಗೆ, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಸಭೆ ಅದೇ ದಿನ ಸಂಜೆ ೪ ಘಂಟೆಗೆ ಸೇರುವದಿತ್ತು

— ನೆರೆಯಿಂದ ಆಸಾಮ, ಪೂರ್ವ ಬಂಗಾಲ, ಬಿಹಾರ ಪ್ರಾಂತಗಳಲ್ಲಿ ಹೇಳಬಾರದಷ್ಟು ಕಷ್ಟ ! ಪದ್ಮಾನದಿಯ ನೀರು ೬೫ ಅಡಿ ಉಕ್ಕೇರಿ ಹೋಗಿತ್ತು, ಮನೆಗಳಂತು ಬಿದ್ದುಹೋದವು, ದನ-ಕರುಗಳು ಬಳದುಕೋದವು, ಹಲವೆಡೆ ಜನರೂ ಪ್ರವಾಹದಲ್ಲಿ ಸಿಲುಕಿ ತೇಲಿಕೊಂಡರು ! ಪೈರು ಕೆಟ್ಟು ನಷ್ಟ ದನ-ಕರುಗಳಿಗೆ ಹುಲ್ಲಿಲ್ಲದೆ ೩೦-೪೦ ಸಾವಿರ ದನ-ಕರುಗಳು ಉಪವಾಸ ಸಾಯುತ್ತಿವೆ ಅನೇಕರು ಎತ್ತರವಾದ ಮರಗಳ ಮೇಲೆ ಮಂಚ ಕಟ್ಟಿಕೊಂಡು ಉಪವಾಸ ತೆನೆದು ಜೀವ ಬದುಕಿಸಿಕೊಂಡರು ಬಿಹಾರ ಪ್ರಾಂತದಲ್ಲಿ ೬|| ಸಾವಿರ ಮನೆಗಳು ಬಿದ್ದುಹೋಗಿವೆ, ಎರಡು ಲಕ್ಷಕ್ಕೆ ಮಿಕ್ಕಿ ಜನರು ನಿರ್ಗತಿಕರಾಗಿದ್ದಾರೆ. ಬಂಗಾಲ ಪ್ರದೇಶದಲ್ಲಿ ೧ ಲಕ್ಷಕ್ಕೆ ಮಿಕ್ಕಿ ಜನರು ನಿರಾಶ್ರಿತರಾಗಿದ್ದಾರೆ ಆಸಾಮ ಪ್ರಾಂತದಲ್ಲಿಯೂ ಇದೇ ಕಥೆ ! ಪಂಡಿತ ಮದನಮೋಹನ ಮಾಲವೀಯರವರು ನಿರಾಶ್ರಿತರಿಗಾಗಿ ನಿಧಿ ಸಂಗ್ರಹ ಮಾಡುತ್ತಿದ್ದಾರೆ ಮುಂಬಯಿಯಲ್ಲಿಯೂ ನಿಧಿ ಸಂಗ್ರಹವಾಗುತ್ತಿದೆ ಬಾಬು ರಾಜೇಂದ್ರ ಪ್ರಸಾದರವರು ನಿರಾಶ್ರಿತರಿಗೆ ನೆರವಾಗಲು ಅವಿಶ್ರಾಂತ ದುಡಿಯುತ್ತಿದ್ದಾರೆ ಅಲ್ಲಲ್ಲಿ ದೋಣಿಗಳನ್ನು ಕಳುಹಿ ಪ್ರವಾಹದಲ್ಲಿ ಸಿಲುಕಿಕೊಂಡ ಜನರಿಗೆ ತಂದು ವ್ಯವಸ್ಥೆ ಮಾಡುತ್ತಿದ್ದಾರೆ ಈಗ ನದಿಗಳ ನೀರು ಇಳಿಯಲಾರಂಭಿಸಿದೆ ಪದ್ಮಾ ನದಿಗೆ ಇಷ್ಟು ದೊಡ್ಡ ನೆರ ಹಿಂದೆಂದೂ ಕಟ್ಟಿದ್ದಿಲ್ಲವಾಗಿ ಜನರು ಹೇಳ್ಯಾಡುತ್ತಿದ್ದಾರ ಏನಿದು, ದೇವರಕ್ಷೋಭೆ!

— ಹಿಂದುಸ್ಥಾನದಲ್ಲಿ ಹಣದ ಅಡಚಣೆ ತೋರಿಸುವ ಅಂಕೆಗಳಿವು — ೧೯೩೨-೩೩ ನೇ ಇಸ್ವಿಯಲ್ಲಿ ಹಿಂದುಸ್ಥಾನದಲ್ಲಿ ೧೩ ಕೋಟಿ, ೩೦ ಲಕ್ಷ ಹವನಿನ ಸರಕು ರಫ್ತಾಯಿತು ಅಂತು ವ್ಯಾಪಾರ ೪೩ ಕೋಟಿ, ೪೦ ಲಕ್ಷದ್ದು ಬಹುತರವಾಗಿ ಹೊರಹೋಗುವದು ಗೋದಿ, ಅರಳಿ, ಅಕ್ಕಿ ಮೊದಲಾದ ಬೇಸಾಯ ಜಿನಸುಗಳೇ ಅಂದರೆ, ೧೯೨೯-೨೪ನೇ ಸಾಲಿನಲ್ಲಿ ೨೭ ಕೋಟಿ ಹವನು ಹಿಂದುಸ್ಥಾನದೊಳಗಿನ ಒಕ್ಕಲಿಗರಿಗೆ ಸಿಕ್ಕಿತು ೧೯೩೩-೩೪ ನೇ ಸಾಲಿನಲ್ಲಿ ೮ ಕೋಟಿ,

ಲಕ್ಷ ರೂಪಾಯಿಗಳ ಸರಕು ಆಮದಾಯಿತು, ೧೧ ಕೋಟಿ, ೨೦ ಲಕ್ಷ ರೂಪಾಯಿಗಳ ಸರಕು ರಫ್ತಾಯಿತು ಅಂದರೆ ೧೯೩೩ನೇ ಸಾಲಿನಲ್ಲಿ ಒಕ್ಕಲಿಗರಿಗೆ ಸಿಕ್ಕಿದ್ದು ಬರೀ ೧೧ ಕೋಟಿ, ೨೦ ಲಕ್ಷ ಹವನು, ೧೯೨೯—೧೯೩೪ ನೇ ಸಾಲಿನ ಅರ್ಧಾಂಶಕ್ಕೂ ಕಡಿಮೆಯಾದ ರಕಮಿದು ! ಇಷ್ಟು ಅವನತಿಯಾಗಲು ಸರಕಾರವು ಕೈಕೊಂಡ ಚಲನಿ ನಾಣ್ಯದ ಕೃತ್ರಿಮ ಧೋರಣವೆಂದು ಲಂಡನಿನ—'ಟೈಮ್ಸ'—ಪತ್ರಿಕೆಯಲ್ಲಿ—ಹಿಂದುಸ್ಥಾನದೊಳಗಿನ ಆರ್ಥಿಕ ಪರಿಸ್ಥಿತಿ ಬಲ್ಲಂಥ ಕರಾಚಿಯ ಸರ್ ಮೊಂಟೆಗ್ಯೂ ಡಿ ಪಿ ವಬ್‌ರವರು ಬರೆಯುತ್ತಾರೆ ಸರ್ ಮೊಂಟೆಗ್ಯೂರವರು ಲೋಕಪಕ್ಷಪಾತಿಗಳಲ್ಲ, ಸರಕಾರ ಪಕ್ಷಪಾತಿಗಳು.

— ಹುಬ್ಬಳ್ಳಿಯಲ್ಲಿ ಶುಕ್ರವಾರ ಕ್ಷಿತ ಸಹಾಯಕ ನಿಧಿಗೆ ರೂ ೩೭೭ ಕೂಡಿವೆ ಶ್ರೀ| ರಂಗನಾಥರಾವ ದಿವಾಕರರವರು ಈ ಕಾರ್ಯಕ್ಕಾಗಿ ಬಹಳೇ ನಿಷ್ಠೆಯಿಂದ ದುಡಿಯುತ್ತಿದ್ದಾರೆ.

ಕುಮಟಾ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಕಮಿಶನರರಿಗೆ ಬರೆದ ಪತ್ರ.

ಮುಂಬಯಿಯ 'ದಿ ಡೇಲಿ ಸನ್' ಪತ್ರಿಕೆಯಲ್ಲಿ ಕುಮಟಾ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಕಮಿಶನರರಿಗೆ ಬರೆದ ಪತ್ರ ಪ್ರಕಟವಾಗಿದೆ. ಕಲೆಕ್ಟರರು ಕುಮಟಾ ಮ್ಯುನಿಸಿಪಾಲಿಟಿಯನ್ನು ರದ್ದುಪಡಿಸಬೇಕಾಗಿ ಕಮಿಶನರರಿಗೆ ಬರೆದಂಥ ರಿಪೋರ್ಟಿನ ಪತ್ರದ ಪ್ರತಿ ಕೇಳಿ, ಕುಮಟಾ ಮ್ಯುನಿಸಿಪಾಲಿಟಿಯನ್ನು ಯಾಕೆ ರದ್ದು ಮಾಡಬಾರದೆಂಬುದರ ಕುರಿತು ಕಾರಣ ಕೇಳಲು ಅಧ್ಯಕ್ಷರಿಗೆ ಅಪ್ಪಣೆ ಮಾಡಿದ್ದರು. ಅದಕ್ಕೆ ಉತ್ತರ ಕೊಡುವಾಗ ಅಧ್ಯಕ್ಷರು ವಿವಾದ ವಿಷಯವನ್ನು ಸವಿಸ್ತಾರ ವರ್ಣಿಸಿದ್ದಾರೆ. ಆ ಪತ್ರದೊಳಗಿನ ಮುಖ್ಯ ಸಂಗತಿಯೆಂದರೆ — ಮನೆತೆರಿಗೆ ತಿದ್ದುಪಡಿ ಪ್ರಕರಣಕ್ಕೆ ತಾ ೨೩–೭–೧೯೩೩ ನೇಗೆ [illegible] ಕಲೆಕ್ಟರರಿಗೆ ಮಾಡಿಕೊಂಡ ಅರ್ಜಿಯ [illegible] ಕಲೆಕ್ಟರರು ಅವನ್ನು ತಾ ೧೭–೩–೩೩ನೇಗೆ ಕಳಿಸಿ ರಿಪೋರ್ಟ ಕೇಳಿದರು. ತಾ ೩ ೬–೧೯೩೩ ನೇಗೆ ರಿಪೋರ್ಟ ಕಳಿಸಲಾಯಿತು. ಆ ಕಾಲದಲ್ಲಿ ಕಲೆಕ್ಟರರು ಮ್ಯುನಿಸಿಪಾಲಿಟಿಯ ಮೇಲೆ ಆರೋಪ ಹೊರಿಸಿದ್ದರು, [illegible] ಎಂಬ ಸಂಗತಿ ಧ್ಯಾನಕ್ಕೆ ಬಂದದ್ದರಿಂದ ಯಾವತ್ತು ಕಾಗದಗಳು ಬರಕೊಳ್ಳಲಾಗ ಲಿಲ್ಲ [illegible] ಮತ್ತು ಅವರ ಗೆಳೆಯರ ಆರೋಪಗಳಿಗೆ ಎಳ್ಳಷ್ಟು ಸತ್ಯವಿಲ್ಲ [illegible] ಅವರ ಗೆಳೆಯರು ೧೯೩೦ನೇ ಇಸ್ವಿಯಿಂದ ೧೯೩೧ನೇ ಇಸ್ವಿಯ ತನಕ ಮ್ಯುನಿಸಿಪಾಲಿಟಿಯ ಅಧಿಕಾರಿಗಳಾಗಿದ್ದರು. ೧೯೩೦ನೇ ಇಸ್ವಿಯ ಮನೆತೆರಿಗೆ ಲಿಸ್ಟನ್ನು ತಿದ್ದುಪಡಿ ಮಾಡಬೇಕಾಗಿ ಲೋಕಲ್ ಫಂಡ ಎಗ್ಸಾಮಿನರರೂ ಕಲೆಕ್ಟರರೂ ಪುನಃ ಪುನಃ ಸೂಚನೆ ಮಾಡಿದಾಗ್ಯೂ ಅವರು ಅದನ್ನು ತಿದ್ದುಪಡಿ ಮಾಡಲಿಲ್ಲ, ತಮಗೆ ಅಧಿಕಾರ ಕೊಟ್ಟ [illegible] ನೇ ಇಸ್ವಿಯ ಲಿಸ್ಟನ್ನು ತಿದ್ದುಪಡಿ ಮಾಡಲೊಪ್ಪಲಿಲ್ಲ. ಮ್ಯುನಿಸಿಪಾಲಿಟಿಯು ಆಕ್ಟಿನ [illegible] ಅವರಿಗೆ [illegible] ಸ್ಕೂಲಿಗೆ ಗ್ರಾಂಟು ಪಡಕೊಂಡರು. ಮ್ಯುನಿಸಿಪಾಲಿಟಿಯು ಎಲೆಕ್ಶನಿಂದ ಹಿಂದೆಯೂ ಸ್ಥಾಪಿತ ಮಾಡಿದರು. ಕೆಲ ಇವರ [illegible] ಮನೆತೆರಿಗೆ ಕೊಡ್ಲಿಕ್ಕೊಳ್ಳಲಿಲ್ಲ. ಕೆಲ ಇವರ [illegible] ತಮಗೆ ತೆರಿಗೆ [illegible] ಈ ಕುರಿತು ತಾ ೧೩–೧೨–೧೯೩೩ ನೇಗೆ ಗುಪ್ತ ಪತ್ರ ಬರೆಯಲಾಗಿದೆ. ಅದರೊಳಗಿನ ಕೆಲ ಭಾಗಗಳನ್ನು ಇದರ ಜೊತೆಗೆ ಕಳಿಸಿದ್ದೇನೆ. ಅದರಿಂದ ಅವರಿಗೆ ಅಧಿಕಾರ [illegible] ಯಾವಲ್ಲ [illegible] ಅವರು ಸೋತದರಿಂದ ಈಗಿನ ಕಾರ್ಯಕಾರಿಗಳಿಗೆ ಅವರು ಬಂದಿದ್ದೆಂದು ಅದರಿಂದ ಉಪದ್ರವ ಕೊಡುತ್ತಿದ್ದಾರೆ. [illegible] ಅಸ್ತಿತ್ವದಲ್ಲಿದ್ದದರಿಂದ ಅವರು ಈ ಕುಚೇಷ್ಟೆ ನಡಿಸಲು ಕೆಲ ಅಂಥ ಅನುಯಾಯಿಗಳನ್ನು ತಮ್ಮ ಸಂಗ್ರಹಿಸಿಕೊಂಡಿದ್ದಾರೆ. ಮ್ಯುನಿಸಿಪಲ್ ಆಕ್ಟಿನ [illegible] ನೇ ಕಲಮಿನ [illegible] ಪ್ರಕಾರ [illegible] ಮನೆತೆರಿಗೆ ಲಿಸ್ಟನ್ನು ತಿದ್ದುಪಡಿ ಮಾಡಬೇಕೆಂದಿದೆ. ೧೯೩೪ ನೇ ಇಸ್ವಿಯಲ್ಲಿ ಈಗಿನ ಲಿಸ್ಟ ತಯಾರಾಗಿತ್ತು. ಹೊಸ ತಿದ್ದುಪಡಿಯಲ್ಲಿ ಕೆಲವರಿಗೆ ತೆರಿಗೆ ಹೆಚ್ಚಾಗಿದೆ, ಕೆಲವರಿಗೆ ತೆರಿಗೆ ಕಡಿಮೆಯಾಗಿದೆ. ಹೀಗೆ ಹೆಚ್ಚು–ಕಡಿಮೆ ಆಗಲು ಬದಲಿದ [illegible] ಕಾರಣ [illegible] ವಿಷಯಕ್ಕೆ ಇದಕ್ಕೆ ಸಂಬಂಧವಿಲ್ಲ. ಕಲೆಕ್ಟರರು ಆಕ್ಷೇಪಿಸುವಂತೆ ವಿಚಾರವಿಲ್ಲದೆ ತೆರಿಗೆ ಹೆಚ್ಚು–ಕಡಿಮೆ ಮಾಡಲಿಲ್ಲ. ಜನರು ಮುನ್ಸಫರಲ್ಲಿ ಈ ಬಗ್ಗೆ ಆಕ್ಷೇಪವಿರಲಿಲ್ಲ. ಅತಿ ಜನರು ಸ್ಪೆಶಲ್ ಕಮೀಟಿ [illegible] ಸಭೆಗಳ ಮೇಲೆ ಆ ಜನರ [illegible] ದಿಂದ ಮ್ಯುನಿಸಿಪಾಲಿಟಿಗೆ ಅರ್ಜಿ ಕೊಟ್ಟರು, ಇವರು [illegible] ಇದ್ದ ಜನರು ಹೊಸ ಲಿಸ್ಟಿನಂತೆ ೧೦೦೦ ರೂಪಾಯಿ [illegible] ವಸೂಲಾಯಿತು. ಕಲೆಕ್ಟರರು ವಸೂಲಿ ನಡಿಸಬಾರದಾಗಿ ತಾ ೧೧–೯–೧೯೩೩ನೇಗೆ ಹುಕುಮ ಮಾಡಿದ್ದರು. ಆ ಹುಕುಮು ಅಪೂರ್ಣ ಮಾಹಿತಿಯ ಮೇಲೆ ಬರೆದಿತ್ತು. ಅವಶ್ಯವಿದ್ದಷ್ಟು ವಿವರವನ್ನು ಸ್ಪಷ್ಟ ಪಡಿಸುತ್ತೇನಾಗಿ ಅಧ್ಯಕ್ಷರು ಹೇಳಿದರು. ಅದರಂತೆ ತಾ ೨೩ – ೧೦ — ೧೯೩೩ ನೇಗೆ ಕಲೆಕ್ಟರರಿಗೆ ಸ್ವತಃ ಭೆಟ್ಟಿಯಾಗಿ ಯಾವತ್ತು ಸಂಗತಿಗಳನ್ನು ತಿಳಿಸಿದರು. ಕಲೆಕ್ಟರರ ಮುಂಚಿನ ಹುಕುಮು ರದ್ದು ಮಾಡಿ ತಾ ೬–೧೧–೧೯೩೩ ನೇಗೆ ಇನ್ನೊಂದು ಹುಕುಮು ಮಾಡಿದರು. ಕಲೆಕ್ಟರರಾಗಲಿ ಕಮಿಶನರರಾಗಲಿ ಕಾಯಿದೆ ಪ್ರಕಾರ ದುರಸ್ತ ಗ್ರಹಿಸಲಾಗುವದಿಲ್ಲ. ಕ್ರಮದಂತೆ ತಯಾರಾದ ಮನೆತೆರಿಗೆ ಲಿಸ್ಟನ್ನು ದುರ್ಲಕ್ಷಿಸಿ, ಕಾಯಿದೆಯಂತೆ ರದ್ದಾದ ಲಿಸ್ಟಿನಂತೆ ವಸೂಲಿಯ ಕ್ರಮ ನಡಿಸಲಿಕ್ಕೆ ಮ್ಯುನಿಸಿಪಾಲಿಟಿಗೆ ಅಸಾಧ್ಯವಿತ್ತು. ಮ್ಯುನಿಸಿಪಾಲಿಟಿಯ ಮೇಲೆ ಬೇರಾವ ರೀತಿ ಕ್ರಮದ ಬಗ್ಗೆ ಇಲ್ಲ [illegible] ಅದರಿಂದ ಸರಕಾರ ಪಕ್ಷದ ಅಭಿಪ್ರಾಯ ಪಡಕೊಳ್ಳಬೇಕಾಗಿ ಮ್ಯುನಿಸಿಪಾಲಿಟಿಯಲ್ಲಿ ಠರಾವಾಗಿ ಅದರಂತೆ ತಾ ೩೧–೧೨–೧೯೩೩ನೇಗೆ ಕಮಿಶನರರಿಗೆ ಪತ್ರ ಬರೆಯಲಾಯಿತು. ಕಲೆಕ್ಟರರ ಮುಖಾಂತರ ಆ ಪತ್ರ ಕಳಿಸಬೇಕಾಗಿ ಅರ್ಜಂಟವಾಗಿ ಪತ್ರ ಬರೆಯಲಾಯಿತು. ಅದು ತಾ ೧–೧ ೧೯೩೩ನೇ ಕಲೆಕ್ಟರರ ಮುಖಾಂತರ ಕಳಿಸಿತು. ಅದಕ್ಕೆ ಈ ತನಕ ಉತ್ತರವಿಲ್ಲ.

ತಾ ೮ ೧೧–೩೩ನೇ ವಸೂಲಿಯ ಕ್ರಮ ನಡಿಸಬಾರದಾಗಿ ಕಲೆಕ್ಟರರು ಕೊಟ್ಟ ಹುಕುಮನ್ನು ಕಮಿಶನರರು ಸ್ಥಿರಪಡಿಸಿದರು. ಆ ಬಳಿಕ ಸರಕಾರವು ಈ ಹುಕುಮನ್ನು ಮನ್ನಿಸಿ ಬರೆದದ್ದೇನೆಂದರೆ – ಕಲೆಕ್ಟರರು ಮನೆತೆರಿಗೆಯ ಲಿಸ್ಟನ್ನು ರದ್ದು ಮಾಡಲಿಲ್ಲ, ವಸೂಲಿಯ ಕ್ರಮ ನಡಿಸಬಾರದಾಗಿ ಮಾತ್ರ ಆಜ್ಞೆ ಕೊಟ್ಟಿರುತ್ತಾರೆ. ಮ್ಯುನಿಸಿಪಲ್ ಆಕ್ಟಿನ [illegible] ನೇ ಕಲಮಿನನ್ವಯ ಮನೆತೆರಿಗೆಯನ್ನು ಹಿಂದಿನ ಲಿಸ್ಟಿನಂತೆ ವಸೂಲು ಮಾಡಬಹುದಾಗಿದೆ, ಆದರಂತೆ ವಸೂಲು ಮಾಡತಕ್ಕದ್ದು. ಹೊರತಾಗಿ ಮನೆತೆರಿಗೆಯ ಆಕರಣಿಯ ಕೆಲಸವನ್ನು ಕಾರ್ಯದಿಂದ ಕೈಕೊಳ್ಳಬೇಕು. ಈ ಹುಕುಮು ತಾ ೬–೩–೧೯೩೪ನೇಗೆ ನನ್ನ ಕೈಸೇರಿತು. [illegible] ನೇ ಕಲಮಿನಂತೆ ೪ ವರ್ಷಕ್ಕೊಮ್ಮೆ ಪೂರ್ವದಲ್ಲಿ ತಯಾರಾದ ಲಿಸ್ಟ ಅಪ್ರಸ್ತುತವಾದುದು. ಅದೇ ಕಲಮಿನಂತೆ ಸೋಟೀಸು ಕೊಟ್ಟು ಹೊಸ ಕ್ರಮ ಕೈಕೊಂಡು ಲಿಸ್ಟು ತಯಾರಿಸಬೇಕೆಂದಿದೆ.

ಮೇಲ್ಕಾಣಿಸಿದ ಅತಿ ಅರ್ಜಿದಾರರಿಗೆ ಅನ್ಯಾಯವಾಗಿದೆಂದು ಗ್ರಹಿಸಿ [illegible] ಹಕ್ಕನ್ನು ಮ್ಯುನಿಸಿಪಾಲಿಟಿಯವರು ಅಪಹರಿಸಿದರೆಂದು ಗ್ರಹಿಸಿ ಬಾಗದ್ಯ ಮ್ಯುನಿಸಿಪಾಲಿಟಿಯವರು ಅವರಿಗೆ ನ್ಯಾಯವಾದ ಹಕ್ಕು ಕೊಡಬಾರದೆಂದು [illegible] ಬಾಗದ್ಯ ಮ್ಯುನಿಸಿಪಲ್ ಆಕ್ಟಿನ [illegible] ನೇ ಕಲಮಿನಂತೆ ಅವರು ಕಲಹ ನಡಿಸಬಹುದು. ಕಲೆಕ್ಟರರಿಗೆ [illegible] ನೇ ಕಲಮಿನಂತೆಯ ಅಧಿಕಾರವಿಲ್ಲ. ಕಲೆಕ್ಟರರು ಈ ಪ್ರಕಾರ ಕೈಕೊಂಡರೆ ಗೊಂದಲವಾದೀತು. ಅದರಿಂದ [illegible] ನೇ ಕಲಮಿನಲ್ಲಿಯ ಮನೆ ತೆರಿಗೆಯ ಆಕರಣಿ ಕೆಲಸ ನಡಿಸಲು ಸರಕಾರಕ್ಕೆ ಅಧಿಕಾರ ಕೊಡಲಾಗಿದೆ. ಕಲೆಕ್ಟರರಿಗಾಗಲಿ, ಕಮಿಶನರರಿಗಾಗಲಿ ಸರಕಾರಕ್ಕಾಗಲಿ ಕ್ರಮದಂತೆ ತಯಾರಾದ ಮನೆತೆರಿಗೆ ಲಿಸ್ಟನ್ನು ರದ್ದು ಮಾಡುವ ಅಧಿಕಾರವಿಲ್ಲ. ಅದರಿಂದ ಸರಕಾರಿ ಹುಕುಮಿನಂತೆ ಮ್ಯುನಿಸಿಪಾಲಿಟಿಯಿಂದ ಈ ಕಲಸ ನಡೆಯಲಾಗಲಿಲ್ಲ, ಹೊಸ ಲಿಸ್ಟನ್ನು ತಯಾರಿಸಬೇಕಾದದ್ದು ಕ್ರಮದಿಂದ ಅದನ್ನು ಜಾರಿಯಲ್ಲಿ ತರುತ್ತೇವೆ.

ಕಲೆಕ್ಟರರು ರದ್ದುಪಡಿಸಿದ ಲಿಸ್ಟಿನಂತೆ ವಸೂಲಿಯ ಕ್ರಮ ನಡಿಸಿರುತ್ತಾರೆಂಬ ಮಾತು ಸುಳ್ಳು. ಹುಕುಮಿನ ಮುಂಚೆ ಎಷ್ಟು ವಸೂಲಿ ನಡೆದಿತ್ತೋ ಅಷ್ಟೇ. ಕಲೆಕ್ಟರರು ಹಡೆಯಾಕಿದಂದಿನಿಂದ ವಸೂಲಿಯ ಕೆಲಸ ನಡೆಯಲೇ ಇಲ್ಲ. [illegible] ಯಾರಿ ತಯಾರಾಗುವ ಮುಂಚಿನ ಸಾಂದಲ್ಲಿ ಕೆಲ ಮತದಾರರು ಮತಾಧಿಕಾರ ಪಡೆಯುವ ಅಭಿಲಾಷೆಯಿಂದಲೋ, ಕರದ ಹೇರಿಕೆಯ ಮೇಲಿಂದ ಬೇರೆ ಮನೆತೆರಿಗೆಯನ್ನು ತಾವಾಗಿ ಕೊಡತೊಡಗಿದರು. ಅದನ್ನು ನಿರಾಕರಿಸಲಿಕ್ಕೆ ಅಧ್ಯಕ್ಷರಿಗೆ ಸಾಧ್ಯವಾಗಲಿಲ್ಲ. ತಾ ೨೩–೪–೧೯೩೪ನೇ ರಜಾವಿನಂತೆ ಹೊಸ ಲಿಸ್ಟನ್ನು ಮ್ಯುನಿಸಿಪಾಲಿಟಿಯು ಮನ್ನಿಸಿದ್ದರಿಂದಲೂ ತೆರಿಗೆ ಕೊಟ್ಟವರ ಹೆಸರುಗಳನ್ನು ಮಾತ್ರ ಮತದಾರರ ಯಾದಿಯಲ್ಲಿ ಸೇರಿಸಬೇಕಾದ್ದರಿಂದಲೂ ಕಡೆಯಾಗುವ ಮುಂಚೆ ಹೊಸ ಲಿಸ್ಟಿನಂತೆ ವಸೂಲಿಯಾದದ್ದರಿಂದಲೂ, ಯಾರಿಗೂ ಅನ್ಯಾಯವಾಗಲಾರದೆಂದು ತೆರಿಗೆ ಕೊಡತೊಡಗಿದವರ ಕಡೆಯಿಂದ ಹಣ ವಸೂಲು ಪಡೆಯಲು ನಾನು ಮ್ಯುನಿಸಿಪಲ್ ಆಫೀಸಿಗೆ ತಿಳಿಸಿದ್ದೆ. ಹಳೇ ಲಿಸ್ಟಿನಂತೆ ೬ ಜನರು ತೆರಿಗೆ ಕೊಡ ಬಂದಿದ್ದರು. ಹಳೇ ಲಿಸ್ಟಿನಂತೆ ತೆರಿಗೆ ಕೊಳ್ಳಬಾರದೆಂದಿಲ್ಲ ವಾಗಿ ಅವರಿಂದ ತೆರಿಗೆ ಕೊಳ್ಳಲಿಲ್ಲ. ಈ ಕುರಿತು ಮೇ ತಾ ೧೬ನೇಗೆ ಎಲ್ಲರ ತಿಳುವಳಿಕೆಯ ಬಗ್ಗೆ ಜಾಹೀರನಾಮೆ ಹೊರಡಿಸಿರುತ್ತೇನೆ. ಸರಕಾರಿ ಹುಕುಮುಗಳನ್ನು ಕಾಯಿದೆಯಂತೆ ಆಕ್ಷೇಪಿಸುವದು ಅಪರಾಧವಲ್ಲವಾಗಿ ನನ್ನ ಹೇಳಿಕೆ. ಮ್ಯುನಿಸಿಪಾಲಿಟಿಯವರು ಹಳೇ ಲಿಸ್ಟಿನಂತೆ ಮನೆ ತೆರಿಗೆ ವಸೂಲಿ ನಡಿಸಲು ಸರಕಾರವು ಮಾಡಿದ ಹುಕುಮನ್ನು ಉಲ್ಲಂಘಿಸಿದರೆಂಬ ಮಾತು ಸಂಪೂರ್ಣ ಸುಳ್ಳು.

ಮ್ಯುನಿಸಿಪಾಲಿಟಿಯೊಳಗಿನ ಬಹುಮತದವರು ಸರಕಾರಿ ಹುಕುಮನ್ನು ಉಲ್ಲಂಘಿಸಲು ಟೊಂಕಕಟ್ಟಿದ್ದಾರೆಂಬ ಮಾತು ದಿಟವಲ್ಲ. ವಿವಾದ ವಿಷಯದ ಕುರಿತು ಸರಕಾರವು ಹೊರಡಿಸಿದ ಹುಕುಮುಗಳನ್ನು ಪಾಲಿಸಲು ಕಾಯಿದೆಯಂತೆ ಇರುವ ಆಕ್ಷೇಪಗಳಿರುವ ಮೂಲಕ ಕಲೆಕ್ಟರ–ಕಮಿಶನರರ ಕಡೆ ಮುಂದೆ ಹೇಗೆ ನಡಕೊಳ್ಳಬೇಕೆಂಬುದರ ಕುರಿತು ಸಲಹೆ ಕೇಳಲಾಗಿತ್ತು. ಈ ಆಕ್ಷೇಪ ಮಾಡಿದವರು ಬಂದು ಪಕ್ಷದವರು, ವಿರೋಧಿಸಿದವರು ಮಾತ್ರ ಒಂದು ಪಕ್ಷದವರು, ಊರೊಳಗಿನ ಇಂಥವರು ಈ ಪಕ್ಷದವರು, ಅಂಥವರು ಆ ಪಕ್ಷದವರು ಮನೆ ತೆರಿಗೆಯ ಲಿಸ್ಟು ದೋಷ್ಟ ಪ್ರಾಣ ರಚನೆಯಿಂದ ತಯಾರಿಸಲಾಗಿದೆ ಎಂಬ ಎದುರಿಗಿರುವ ಆಧಾರವನ್ನು ಕಲೆಕ್ಟರರೇ ಬಲ್ಲರು. [illegible] ಪಾರ್ಟಿಯ ಸಬಿಕರ ದುಷ್ಪರಿಗ್ರಹ ವಿರೋಧದಿಂದ ಮ್ಯುನಿಸಿಪಾಲಿಟಿಯೊಳಗಿನ ಆಡಳಿತ ನಡಿಸುವವರು ಕೆಲ ಬಾರಿ ಬವಣೆಯಿಂದ ನಡೆದದ್ದುಂಟು. ಅದರಿಂದ ಜನರ ಹಿತ ಸಾಧಿಸಲಿಲ್ಲ, ಸ್ವಾರ್ಥ ಸಾಧಿಸಲಿಲ್ಲ. ಮ್ಯುನಿಸಿಪಾಲಿಟಿಯ ರೆಕಾರ್ಡಿನಲ್ಲಿ ಇದಕ್ಕೆ ಬೇಕಷ್ಟು ಪುರಾವೆ ದೊರೆಯುವಂತಿದೆ (ತಾ ೪ ೫–೩೪ ನೇ ಸಭೆಯ ವೃತ್ತಾಂತ ನೋಡಬಹುದು)

ಅಧ್ಯಕ್ಷರು ಬ್ಯಾ–ಇಲೆಕ್ಷನಿನ ಸಭೆಯ ಮೀಟಿಂಗ ಆಪೀಸರ ನಾಮಿಯಿಂದ ಬಸ್ತಾರ ಉಮೇದ್ವಾರ ಅರ್ಜಿಯನ್ನು ರದ್ದುಪಡಿಸಿದ್ದು ನಿಜ. ಅಧ್ಯಕ್ಷರು ಅಪ್ರಾಮಾಣಿಕತನದಿಂದ ವರ್ತಿಸಿದರೆಂದು ಎಣಿಸಬಾರದು. ಸಭಾಸದರು ಬೇರಾವ ಬೇರೆ ರೀತಿಯಿಂದ ಆರಿಸಲ್ಪಡುವರೆಂದು ಎಣಿಸುವಾ, ಆದರೆ, ಇದಕ್ಕೂ ಮ್ಯುನಿಸಿಪಾಲಿಟಿಗೂ ಏನೂ ಸಂಬಂಧವಿಲ್ಲ. ಇದಕ್ಕಾಗಿ ಮ್ಯುನಿಸಿಪಾಲಿಟಿಗೆ ಶಾಸನ ಮಾಡುವದು ಒಬ್ಬರ ಅಪರಾಧಕ್ಕಾಗಿ ಮತ್ತೊಬ್ಬರಿಗೆ ಗಲ್ಲಿಗೇರಿಸಿದಂತಾದೀತು. ಅಧ್ಯಕ್ಷರು ಬೇಕಾಬಿಟ್ಟಿ ರೀತಿಯಿಂದ ನಡೆದು ಆ ಪಕ್ಷದ ಸಭಾಸದರನ್ನು ಬ್ಯಾ–ಇಲೆಕ್ಷನಿನಲ್ಲಿ ಆರಿಸಿಕೊಂಡರೆಂದು ಕಲೆಕ್ಟರರ ಅಭಿಪ್ರಾಯವಿದ್ದರೆ ಅದನ್ನು ಆರಿಸಿಬಂದ [illegible] ಮುಂಬಯಿ ಹೈಕೋರ್ಟಿನಲ್ಲಿ [illegible] ತಿಲಕ್ಕಾರರು [illegible] ಪ್ರತಿಯೊಂದು ವಿಷಯದಲ್ಲಿ ಅನುಮೋದನೆಗಿಯೇ ಪ್ರತಿ– ಸಿದ್ಧಾಂತ ಯಾವತ್ತು ಸಭೆಗಳಲ್ಲಿ ಅವರು [illegible] ಬೆಂಬಲ ಕೊಟ್ಟಿದ್ದಾರೆ. ಕಲೆಕ್ಟರರಿಗೆ [illegible] ಅರ್ಜಿಗಳಿಗೂ ಇವರು ಸಹಿ ಮಾಡಿರುತ್ತಾರೆ.

ಮ್ಯುನಿಸಿಪಾಲಿಟಿಯು ಮುಂದೇನು ಮಾಡುವದೆಂಬುದರ ಕುರಿತು ಕಲೆಕ್ಟರರು ಕೊಟ್ಟ ನಿರ್ಣಯದ ಅಭಿಪ್ರಾಯ ನೋಡಿ ನನಗೆ ವ್ಯಸನವಾಗಿದೆ. ಮ್ಯುನಿಸಿಪಾಲಿಟಿಯ ಕಾರ್ಯ [illegible] ಯಿತೆಂಬ ಆರೋಪವನ್ನು ನಾನು ಅಲ್ಲಗಳೆಯುತ್ತೇನೆ. ಸರಕಾರಿ ಹುಕುಮಿನಂತೆ ವರ್ತಿಸಲು ನಾವು ಕಲೆಕ್ಟರ–ಕಮಿಶನರರ ಕಡೆ ಆಗಾಗ ಸಲಹೆ ಕೇಳುತ್ತಿದ್ದೆ. ಅವರು ಸಲಹೆ ಕೊಡದೆ ಮ್ಯುನಿಸಿಪಾಲಿಟಿಯ ಮೇಲೆ ಕಾರ್ಯಸ್ವಾತಂತ್ರ್ಯತೆಯ ಆರೋಪ

ತೋರಿಸಿದ್ದು ನೋಡಿ ವಿಚಿತ್ರವೆನಿಸುತ್ತದೆ ಕಲೆಕ್ಟರ ಘ ರವಿನ ಮುತ್ಸದ್ದಿಯ ನ್ಯಾಯಿಯನ್ನು ಶಿವಿಲವರೂ ಸರಕಾರವೂ ವಿಚಾರಿಸಬಹ ದು

ತಾತ್ಪರ್ಯ ಗಾರ್ವನಂದಂ — ಹಿಂದಿನ ೯ವನೆ ತರಿಗ ಯ ಲಿಸ್ಟನಂತೆ ವ ಸೆತರಿಗೆ ವಸೂಲ ಮಾಡಬಹುದ್ದದೆ ವಾತ ಕಾಕ್ಸದ್ದು, ಎಂಬುದಾಗಿ ಸಂಕಾರದ ಹುಕ ಮಾಯಿತು. ಆದರಂತೆ ಈ ಹುಕುಮು ತಲ್ಪಿದ ತಾ ೫ ೩-೧೯೩೪ ನೇ ಯಿಂದ ವಾಚರಾರ ದಿನಾ ಪ್ರಕಟಿಸುವ ತಾ ೧೭-೫-೩೩ ನೇ ವರೆಗೆ ವ್ಯುನಿಸಿಪಾಲಿಟಿಯವರು ಒಮ್ಮೆಲೇ ವಸೂಲಿಯ ಕೆಲಸ ನಡಿಸಬೇಕಿತ್ತು ಸರಕಾರವು ಹುಕುಮಿನಲ್ಲಿ ಕಾಣಿಸಿದ ಮ್ಯು ಅಕ್ಟನ ೬೭ ನೇ ಕಲಮನ್ನು ಕಣ್ಣಿತ್ತಿ ನೋಡಬಾರದಿತ್ತು ಈ ಕಾಯಿದೆಯ ಪ್ರಕಾರ, ೯ ವರ್ಷದ ಹಿಂದಿನ ಬಿಲ್ಲು, ಕಾಯಿದೆಯ ಪ್ರಕ್ರೆಪ, ಮ್ಯುನಿಸಿಪಾಲಿಟಿಯ ವಸೂಲಿಯ ಅಧಿಕಾರ ಇವುಗಳ ಕುರಿತು ಬಂದ ಸಂದೇಹಗಳನ್ನು ಕಲೆಕ್ಟರ ಕಮಿಶನರರಿಗೆ ಬರೆದು ಸಲಹ ಕೇಳಿದ ಬಗ್ಗೆ ವ್ಯುನಿಸಿಪಾಲಿಟಿಗೆ ಬಾಗಿ ಉಳಿಯಲು ಆಧಿಕಾರವಿಲ್ಲ ಸರಕಾರಿ ಅಧಿಕಾರಿ ಸಭಾಸದರ ಅಸ್ವರದಿಂದ ನಡೆದ ವಿರೋಧವನ್ನು ಪರಿಹರಿಸಿಕೊಂಡು ಕರ್ತವ್ಯ ಮಾಡಲಿಕ್ಕೆ ವ್ಯುನಿಸಿಪಾಲಿಟಿಯವರು ಪ್ರಯತ್ನಿಸಿದ್ದರೆ ಯಾವತ್ತು ಸಂಗತಿಗಳ ವಿಚಾರದಿಂದ ಮ್ಯುನಿಸಿಪಾಲಿಟಿಯವರು ಅಧಿಕಾರದ ದುರುಪಯೋಗ ಮಾಡಿದ್ದರೆಂದೂ, ಮ್ಯುನಿಸಿಪಾಲಿಟಿಯನ್ನು ರದ್ದು ಮಾಡುವದು ಸರಕಾರಿ ಅಧಿಕಾರದ ದುರುಪಯೋಗವಲ್ಲೆಂದೂ ಅಭಿಪ್ರಾಯಪಡುವಲ್ಲಿ ನನ್ನ ಉಪಾಯವಿಲ್ಲ ಇತ್ಯಾದಿ

ಇದರ ಮೇಲಿಂದ ಕುಮಟಾ ಮ್ಯುನಿಸಿಪಾಲಿಟಿ ರದ್ದು ಮಾಡಿದ ಕಾರಣಪರಂಪರೆ ತಿಳಿಯುವಂತಿದೆ ಸರಕಾರಿ ಅಧಿಕಾರಿಗಳ ಒಲಾತ್ಕಾರವೂ, ಸ್ಥಾನಿಕ ಸ್ವರಾಜ್ಯ ಸಂಸ್ಥೆಯವರ ನಿಷ್ಕಾರಣ ದರ್ಪವೂ ಒಮ್ಮೆಲೇ ಹೊಳೆಯುವಂತಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲಿಗೆ ಬಿಸಿಲು, ರಾತ್ರಿ ಮಳೆ ಈ ವಾರದಲ್ಲಿ ೩-೩೩ ಇಂಚು ಮ ಳೆ ಬಿತ್ತು, ಈ ವರೆಗೆ ಒಟ್ಟು ೧೩೩-೯೯ ಇಂಚು ಮಳೆಯಾಯಿತು.

ಇಲ್ಲಿಯ ಮ್ಯುನಿಸಿಪಾಲಿಟಿಯ ಮ್ಯಾನೇಜ ಮೆಂಟ ಕಮಿಟಿಯವರು ಇಲ್ಲಿಯ ಮಾಮಲೇದಾರರು ಮುಂಬಯಿ ಸರಕಾರದ ತಾ ೧೦ ೮-೩೪ ನೇ ಹುಕುಮಿನಂತೆ ೧೯೩೩-೩೪ನೇ ಸಾಲಿನ ಮನೆ ತರಿಗೆ ಲಿಸ್ಟನಂತೆ ಕಳೆದ ಮತ್ತು ಚಾಲು ಸಾಲುಗಳ ಮನೆ ತರಿಗೆಯನ್ನು ಮ್ಯಾನೆಜಮೆಂಟ ಕಮಿಟಿಯವರು ವಸೂಲ ಮಾಡಬೇಕ ನಿರ್ಣಯಿಸಿದಂತೆ, ಮ್ಯುನಿಸಿಪಾಲಿಟಿಯ ಬಿಲ ಮ ಕಾರ ಕೂನರ ಕಡೆ ಕೊಟ್ಟು ಮುದತಿ ಪಡೆಯಬೇಕಾಗಿ ತಾ ೬-೯-೩೪ನೇಗೆ ಪ್ರಕಟಣೆ ಹೊರಡಿಸಿದ್ದಾರೆ ಈ ಪ್ರಕಟನೆ ಮನೆತರಿಗೆ ಆಕಾರಣಿಯ ಕ್ರಮವನ್ನಲ್ಲಿ ಆಲಕ್ಷಿಸಿ ಹೊರಡಿಸಿದ್ದೆಂದು ಒಬ್ಬರು ಆಕ್ಷೇಪಿಸಿ ಬರೆಯುವದೇನಂದರೆ — ಮನೆತರಿಗೆ ಕೊಡತಕ್ಕದ್ದು ಆಯಾ ವರ್ಷದ ಎಪ್ರಿಲ್ ತಾ ೧ ರೊಳಗಾಗಿ ದ ತಾರೀಖಿನೊಳಗೆ ಮನೆತರಿಗೆ ಲಿಸ್ಟು ತಯಾರಾಗಬೇಕು ಲಿಸ್ಟು ತಯಾರಾದ ಮೇಲೆ ೩೦ ದಿನಗಳಿಗೆ ಕಡಿಮೆ ಆಗದಂತೆ ನೋಟೀಸು ಕೊಟ್ಟು ಆಕ್ಷೇಪವಿದ್ದರೆ ಕೇಳಿಕೊಂಡು ಅವುಗಳ ವಿಚಾರದಿಂದ ಲಿಸ್ಟನ್ನು ಆಯಾ ವರ್ಷದ ಎಪ್ರಿಲ್ ೧ನೇ ತಾರೀಖಿನೊಳಗೆ ತಯಾರಿಸಬೇಕು ಪ್ರತಿ ವರ್ಷ ಈ ಕ್ರಮ ನಡೆಯಬೇಕು, ಈ ಕ್ರಮ ನಡೆದ ಬಳಿಕ, ಎಪ್ರಿಲ್ ೧ನೇ ತಾರೀಖಿನ ತರುವಾಯ, (೧) ತೆರಿಗೆ ಆಕಾರಣಿ ಪಟ್ಟಿ ಆವರಿ, (೨) ಇವನಾಂತು (೩) ತರಿಗೆ ತಂದಿದ್ದಲ್ಲಿ ಬರುವ ಜವಾಬದಾರಿ, (೪) ತರಿಗೆಯ ವಿರುದ್ಧ ಮಜಿಸ್ಟ್ರೇಟರಲ್ಲಿ ಅಪೀಲು ಮಾಡುವ ಅವಧಿ, ಇವುಗಳನ್ನು ನಮೂದಿಸಿ ತೆರಿಗೆದಾರರಿಗೆ ಬಿಲು ಕೊಡಬೇಕು ಬಿಲು ಕೊಟ್ಟು ೧೫ ದಿನಗಳಲ್ಲಿ ಬಿಲಿನ ರಕಮು ತುಂಬದವರ ಮೇಲೆ ಡಿಮಾಂಡ ನೋಟೀಸು ಕೊಡಬೇಕು ೧೫ ದಿನಗಳೊಳಗೆ ನಮೂದ ಕಾಲಾನ ಕೊಡದಿದ್ದರೆ, ಮಜಿಸ್ಟ್ರೇಟರಲ್ಲಿ ಅಪೀಲು ಮಾಡಿದ್ದರೆ ಆ ಕರ ಮಾಡು ತರಿಗೆ ಕೊಡತಕ್ಕವನ ಜಂ ದಿಗೆ ಜಪ್ತಿ ಮಾಡಿ ಹರಾಜ ಮಾಡು ಮ್ಯುನಿಸಿಪಾಲಿಟಿಯವರು ವಸೂಲ ಮಾಡಬಹುದು ಬಂದಿದೆ ಜಪ್ತಿಯ ವಾರಂಟು ಕೊಡತಕ್ಕ ಅಧಿಕಾರವು ಅಧ್ಯಕ್ಷರಿಗೆ ಮಾತ್ರ ಉಂಟು ಸರಕಾರದವರಿಗೆ, ಅವರಿಂದ ನೇಮಿಸಲ್ಪಟ್ಟ ಮ್ಯಾನೇಜಮೆಂಟ ಕಮಿಟಿಯವರಿಗಾಗಲಿ ಈ ಅಧಿಕಾರವಿಲ್ಲ ಇಂಥ ಯಾವದೇ ಕ್ರಮ ನಡಿಸದೆ, ಸರಕಾರಿ ಹುಕುಮು ಹೀಗೆ ಬಂದಿದೆಂದು ಹಠಾತ್ ಹೇಳಿ, ಹಿಂದಿನ ಯಾವದೋ ಒಂದು ಲಿಸ್ಟಿನಂತೆ ತರಿಗೆ ವಸೂಲ ಕೊಡಲು ಆಜ್ಞೆ ಹೊರಡಿಸುವದು ಯಾವ ಕಾಯಿದೆಯಿಂದ ಮ್ಯಾನೇಜಮೆಂಟ ಖುಲಾಸೆ ಮಾಡಿದರೆ ಉತ್ತಮ

ಇತ್ತೀಚೆ ರಿಜಿಸ್ಟರಗಳಾದ ವಿ. ಕೆ. ಹೆಗಡೆ ಹರಿ ಕೃಷ್ಣ ಭಾಗವತ ಮ್ಯುನಿಸಿಪಾಲಿಟಿಯ ಸಕ್ರೆಟರಿಗಳ ಮೇಲೆ ೧ ನೇ ವರ್ಗದ ಮಜಿಸ್ಟ್ರೇಟರಲ್ಲಿ ಒಂದು ಫಿರ್ಯಾದು, ಸಬಜಜ್ಜ ಕೋರ್ಟಿನಲ್ಲಿ ಒಂದು ದಾವೆ ಮಾಡಿದ್ದಾರೆ ತಾ ೨೯-೮-೩೪ ನೇಗೆ ನಡೆದ ಮೀಟಿಂಗ ಠರಾವುಗಳನ್ನು ನೋಡಲಿಕ್ಕೆ ಪದೇ ಪದೇ ಅರ್ಜಿ ಕೊಟ್ಟಾಗ್ಯೂ ಸಕ್ರೆಟರಿಗಳು ನೋಡಗೊಡದಿದ್ದದ್ದೇ ಈ ವ್ಯಾಜ್ಯಗಳಿಗೆ ಕಾರಣ ಮಜಿಸ್ಟ್ರೇಟರು ಆರೋಪಿಗಳಿಂದ ಕಾಯಿದೆ ಕೇಳಿಕೊಂಡು, ಮುಂದೆ ಹುಕುಮಾಗುವದಾಗಿ ಹೇಳಿ ಕಳಿಸಿದರಂತೆ

ತೆರಿಗೆದಾರರು ಕಾರವಾರ ಸಬಜಜ್ಜ ಕೋರ್ಟಿನಲ್ಲಿ ಮಾಡಿದ ದಾವೆಗಳಿಗೆ ವಿಚಾರದ ಪೂರ್ವದಲ್ಲಿ ಹಂಗಾಮಿ ತಾಕೀತಿಗಾಗಿ ಕೊಟ್ಟ ಅರ್ಜಿಯ ವಿಚಾರವು ಬುಧವಾರ ನಡೆದು ಇಬ್ಬರಿಗೂ ಅರ್ಜಿಯನ್ನು ಖುನ್ನಿಸಿ ಸರಕಾರದ ಮೇಲೆ ತಾಕೀತು ಕೊಡುವಷ್ಟು ಕಾರಣವಿಲ್ಲವಾಗಿ ಸಬಜಜ್ಜರು ಅಭಿಪ್ರಾಯಪಟ್ಟು ಅರ್ಜಿಯನ್ನು ತಿರಸ್ಕರಿಸಿದ್ದಾರೆ

೧೯ ಆಸ್ತ್ರ ಕಡೆಯಿಂದ ಹರಿವಟ್ಟೆಯ ಜಂಗಮ ಮಠ ಕ್ಕೆ ತಾ ೨೫ ನೇಗೆ ಒಬ್ಬ ಸನ್ಯಾಸಿಗೆ ಕಟಿಗೆ ವಿರಕ್ತಮಾತ್ರಸ್ವರೂಪ ಸನ್ನ್ಯಾಸಿ ಕರೆತಂದ, ತಾವು ಲಿಂಗಾಯತ ಮಾರ್ಗದ ಮಠಕ್ಕೆ ಸೇರಿದವರೆಂದ ಹೇಳಿ, ಸ್ವಲ್ಪ ಸಣ್ಣಗಾರರ ಕಡೆಯಿಂದ ಅಜಮಾಸ ರೂ ೫೦ ವಸೂಲ ಕೊಂಡು ಹೊನ್ನಾವರ ಕಡೆ ಹೊರಟು ಹೋಗಿರ ತ್ತಾನೆ ಮಾರ್ಗದ ವರದವರು ವಿಚಾರ ಮಾಡಬೇಕು, ಪೋಲಿಸರು ಚೌಕಶಿ ಮಾಡಬೇಕು

ಹೊನ್ನಾವರ— ಹಳೇ ಟಪಾಲ ಆಫೀಸ ಬಳಿಯ ಖಾನಾವಳಿ ಸಮೀಪದ ರಾಜ ಮಾರ್ಗದ ಮೇಲೆ ಕಸರಾಗಿ ಹ ೪ ಬಿದ್ದು ನಾರುತ್ತದೆ ಮ್ಯುನಿಸಿಪಾಲಿಟಿಯವರು ಕಣ್ಣು ಮುಚ್ಚಿ ದಾರಿ ಹೋಗುತ್ತಾರೆ ಯಾಕೆ?

ಕೊಂಗ್ರೆಸ ಸಭಾಸದರನ್ನು ಕೂಡಿಸುವ ಕೆಲಸ ನಡೆದದೆ

ಭಟಕಳ— ಹೋದ ಶನಿವಾರ ಇಲ್ಲಿಯ ಶ್ರೀ ಹನುಮಂತ ದೇವಸ್ಥಾನದಲ್ಲಿ ಸಾರ್ವಜನಿಕರಿಂದ ಮಂಗಲೋತ್ಸವ ನಡೆಯಿತು ಅಂದು ೧೧ ಲಕ್ಷ್ಮೀನಿವಾಸ ಮನೆ ಗಳು ಹಾಕಲ್ಪಟ್ಟವು ಬೇಗ್ಗ ನಗರ ಭಜನೆಯಾಯಿತು ಸುಮಾರು ೩೦೦ ಕ್ಕಿಂತ ಹೆಚ್ಚಾಗಿ ಬಂದ ಜನರೆಲ್ಲ ವ್ಯಾಯಾಮದ ಮಹತ್ವ ತಿಳಿಸಲ್ಪಟ್ಟಿತು ಮಕ್ಕಳಿಗೆ ಹ್ವ್ಯಾಯಾಮ ಶಾಲೆ ಸ್ಥಾಪಿಸಬೇಕಾಗಿದೆ, ವ್ಯಾಯಾಮ ಶಾಲೆ ಸ್ಥಾಪನೆಯಾಗುವ ತನಕ ವ್ಯಾಯಾಮದ ಆಟ್ಯಾಸಗಳನ್ನು ಶ್ರೀ ಹನುಮಂತ ದೇವಸ್ಥಾನದಲ್ಲಿ ನಡೆಯಬೇಕಾಗಿಯೂ ಗೊತ್ತಾಗಿದೆ ಭಟ್ಕಳದ ಕೆಳಗಿನ ೪ ತಾಲೂಕುಗಳಲ್ಲಿಯೂ ವ್ಯಾಯಾಮ ಶಾಲೆಗಳಿಲ್ಲ ಆದರಿಂದ ವ್ಯಾಯಾಮ ಶಾಲೆಗಳನ್ನು ಸ್ಥಾಪಿಸುವದು ಉತ್ತಮವೆಂದೂ, ಇಂಥ ಶಾಲೆಗಳ ಬಾಲಕ ಎಲ ಹುಡುಗರಲ್ಲ ಕಾರ್ಯಮಾಡತಕ್ಕ ಶಕ್ತಿ ಒಟ್ಟಿಂದಲೇ ಉಂಟಾಗುವದೆಂದೂ ಡಾ॥ ದಾ॥ ಹುಬಳಿಕರ ನಾರಾಯಣ ಶಾಸ್ತ್ರಿಗಳು ಉದ್ಗರಿಸಿದರು.

ಇಲ್ಲಿ ಮ್ಯುನಿಸಿಪಾಲಿಟಿಯವರು ಔಷಧಾಲಯವನ್ನು ಕಟ್ಟಿಸಲಿಲ್ಲ ಒಬ್ಬರು ಮಾರ್ಗದ ಶಾಲೆಯಲ್ಲಿ ಮೂತ್ರ ಶಂಕೆ ಮಾಡಿದರೆಂದು ಪೋಲೀಸರು ಅವರಿಗೆ ಫೌಜದಾರರ ಕಡೆ ಕರೆದೊಯ್ದರಂತೆ '

ಶಿರಸಿ — (ತಾ ೮-೯-೧೯೩೪) ಈಯಿ ಅದ ಯಲ್ಲಾಪುರ–ಹುಬ್ಬಳ್ಳಿ ಮಾರ್ಗಗಳ ಕೂಡುವ ಶಿರ್ಸಿಯ ಬಳಿ ಹೀಪವಳ್ಳಿ ಬುಬ್ರಿಯ ಹಗಡೆಯವರ ಒಟ್ಟು ಬೋಳಾದಿಂದ ಉರುಲು ಹಾಕಿಕೊಂಡು ಮರದಲಿ ತೂಗಿಹಾಕುತ್ತಿದ್ದದು ಕಂಡು ಬಂತು ಇದು ತಾ ೪ ನೇಗೆ ಪೋಲೀಸರು ವಿಚಾರ ನಡಿಸುತ್ತಿದ್ದಾರೆ

ಇಲ್ಲಿಯ ಗಣಪತಿ ಹವಾಲದಾರರಿಗೆ ಲಕ್ಷ್ಮಪತ್ರದಲ್ಲಿ ವಂಚನೆ ಮಾಡಿದ ಆರೋಪದ ಮೇಲೆ ಇಲ್ಲಿಯ ಮಜಿಸ್ಟ್ರೇಟರಲ್ಲಿ ಒಟ್ಟಿದು ವಿಚಾರ ನಡೆದು ಅವರಿಗೆ ೬ ತಿಂಗಳ ಶಿಕ್ಷೆಯಾಯಿತು.

ಕಲ್ಲೊಂದು ಸಣ್ಣ ಪ್ರಕರಣ ಪೋಲೀಸರು ಬೆಂಡಿಗೆ ಹುಡುಗನನ್ನು ತೊಡೆಯಿಂದ ಹೊಡೆದರಂತೆ ಮೆಟ್ಟಿನಿಂದ ಹೊಡದರಂತೆ ಗುದ್ದಿದರಂತೆ ಎಳಕೊಂಡು ಕಚೇರಿಗೆ ಒಯ್ಯುತ್ತಿದ್ದರಂತೆ ಟಪಾಲ ಮಾಸ್ತರರು ಇದನ್ನು ನೋಡಿ ಬಾಗದ ಹೊಡೆಯಬೇಡಿರೆಂದು ಹೇಳಿದ್ದಕ್ಕೆ ಪೋಲೀಸರು ಅವರ ಮೈಮೇಲೆ ಹಾರಿಬಂದರಂತೆ ಪೋಲೀಸ ಸಾಹೇಬರಿಗೆ ತಂತಿ ಹೋಗಿರುವದಾಗಿ ತಿಳಿಯುತ್ತದೆ

ಅಂಕೋಲಾ— (ತಾ ೯-೯-೩೪) ಇಲಿಗಳು ಇನ್ನೂ ಬೀಳುತ್ತಲಿವೆ ೩೦೦ ಜನರು ಕೊಂಗ್ರೆಸ ಸಭಾಸದರಾದರು ಕೊಂಗ್ರೆಸ ಕಮೀಟಿ ಸ್ಥಾಪಿಸಿ, ಹೊಸ ಮೆಂಬರರನ್ನಾರಿಸುವ ಕುರಿತು ಇದೇ ತಾ ೧೯ನೇಗೆ ಕೊಂಗ್ರೆಸ ಕಚೇರಿಯಲ್ಲಿ ಕೊಂಗ್ರೆಸ ಸಭಾಸದರ ಸಭೆ ಸೇರುವದರಿಂದ ಕಾರಣ ಎಲ್ಲರೂ ತಪ್ಪದೇ ಹಾಜರಿರಬೇಕಾಗಿ ವಿನಂತಿ

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಸ್ಯದ ಪುಡಿ ಸುಲಭ ಕ್ರಯ,

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು, ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಇಂತಕ್ಕೆ ಸೇರ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ನೀವು ಜನರ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಬಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸ ಫುಕ್ಕಟ ಕಳಿಸಲಾಗದು

(Registered Trade Mark)

ಬುದ್ಧಿ ಬಂದಕ್ಕೆ ಕ್ರಯ ರೂ ೦-೪ ಒಂದ್ಲಿ ವಿ ೪ ಆಣೆ ಡಜನ್ ೧ ಕ್ಕೆ ರೂ ೨-೮-೦ ವಿ ಪಿ ೦ ೫-೦

ದಯಮಾಡಿ ನಿಮ್ಮ ಹೆಸರನ್ನೂ, ಅದ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪಾರ್ಕಟೌನ್, ಮದರಾಸ

ಜಿಲ್ಲಾ ಸಮಾಚಾರ.

ಭಟಕಳ— (ತಾ ೧-೯ ೩೪) ಭಟಕಳ ಮ್ಯುನಿಸಿಪಾಲಿಟಿಯ ಅಧ್ಯಕ್ಷರು [illegible]

[illegible]

ಯಲ್ಲಾಪುರ— (ತಾ ೩-೮-೩೪) [illegible]

[illegible]

ಕಾರವಾರ— (ತಾ ೯-೮-೧೯೩೪) [illegible]

[illegible]

ಸಂಸ್ಥೆ ಕಡಿಮೆಯಾಗ ತ್ತಕೊಳ್ಳುವದು, ಬೋರ್ಡಿನ ಇವ ಲ್ಯುಟಿಳ ವುವದು, ನಮ್ಮ ವರ್ಗದ ಸ್ಕೇಲು ಸಾದರ ಹೆಚ್ಚಾಗುತ್ತದೆ, ಎಂದು ನಂಬಿ ನಾವು ಉಬ್ಬಿದ್ದೆವು ಈ ಹೊಸ ಸ್ಕೇಲಿನ ಪದ್ಧತಿ ಶೇಖ ಈಗ ಉಬ್ಬಿದ್ದಷ್ಟೇ ತಗ್ಗಿದ್ದೇವೆ ೧೯೩೩ರಿಂದ ಇಲ್ಲಿಯ ವರೆಗೆ ಸೇವೆ ಸಾಸ್ತ್ರ್ಯ ಶಿಕ್ಷಕರು ೬-೮ ವರ್ಷಗಳ ತನಕ ಒತ್ತಿದ ಬ್ಬರ ಉಳಿಸಬೇಕಾ ಗುತ್ತದೆ ಅವರಿಗೆ ಹಿಂದಿನ ಸ್ಕೇಲಿನ ಪ್ರಕಾರ ಸೇರುತ್ತಿ ಕೊಂಡಿತ್ತು ಆದರಿಂದ ತಪ್ಪಾಗದೆ ಬಡತಿ ಸಿಕ್ಕುವದು ಮಾಹದನ್ಯಾಯ ವು ಹೊಸ ಸ್ಕೇಲು ಟ್ರೇನ್ಡ್ ಶಿಕ್ಷಕ ಟರ್ ಬೇರೆ-ಪ್ರೋಬೇಶನ ಶಿಕ್ಷಕರಿಗೆ ಅಗ್ರಹ ಕಂಗತಿ ಯಿದು ಪಾಠಶಾಲೆ ಕೆಲಸ ಮಾಡುವ ಪವಿತ್ರವಾದ ವೃತ್ತಿಯ ಶಿಕ್ಷಕನ ಯೋಗ್ಯತೆಯನ್ನು ಇಷ್ಟು ಮಟ್ಟಿಗೆ ಕುಂದಿಸಬಾರದಾಗಿ ನಮ್ಮದು ಪ್ರಾರ್ಥನೆ ಮಾಡಿದ ಹಿಂ ತಿ ಕೊಡುವಾಗ ಪ್ರ ಗಾಮ ಸರ್ವಿಸನ್ನು ಸಹ ಗಣನೆಗೆ ತರುತ್ತಿದ್ದರೆ, ಈಗ ೧೯೩೩ ರಿಂದ ತಿಂಗಳು ಮೊದಲಿನಿಂದ ಬಡತಿ ಕೊಟ್ಟು ಹಿಂಗಾರು ಸರ್ವಿಸಿಗೆ ಕೊಟ್ಟ ಒತ್ತಾಯನ್ನು ರಿಸಂತ ಮಾಡಿಸಿಕೊಳ್ಳುತ್ತಾರೆ ಸುರೇ ಪರಾಂಜಪೇ ಸ್ಕೇಲಿನಂತೆ ಸಂಬಳ ಕೊಡಲಿಕ್ಕೆ ಸಾಧ್ಯವಿಲ್ಲದಿದ್ದರೆ, ೧೯೩೩ನೇ ಇಸ್ವಿಗಿಂತ ಹೊದಲಿದ್ದ ಸ್ಕೇಲನ್ನಾದರೂ ಆವ ನಿಸ್ಸಿಡಬೇಕು ಈಗ ಜಾರಿಯಾದ ಸ್ಕೇಲು ಸಂಪೂ ರಿತನಾದ ಶಿಕ್ಷಕನಿಗೆ ಅಪ್ಪದ ಯುವ ದಮ್ಮ ಆದರಿಂದ ಹೊಸ ಸ್ಕೇಲನ್ನು ಬಡ ಶಿಕ್ಷಕರಿಗೆ ಅನುಗು ಮಾಡಬಾರದಾಗಿ ಬಿನ್ನೈಸಿಕೊಳ್ಳುತ್ತೇವೆ

ಅಂಕೋಲಾ— (ತಾ ೧೨-೮-೩೪) ಸ್ವೈ ತಾ ೧೧ನೇಗೆ ಇಲ್ಲಿ ಸಾರ್ವಜನಿಕ ಸಭೆ ಸೇರಿ ಅಂಕೋಲಾ ತಾಲೂಕ ಹರಿಜನ ಸೇವಕ ಸಂಘದ ನಿರ್ಮಾಣಿಸಿದ ಆದರೊಳಗೆ ಈ ಕೆಳಗೆ ಕಾಣಿಸಿದಂತೆ ಸಭಾಸದರಿದ್ದಾರೆ - (೧) ರಘುನಂದ ಪಾಸ್ತರ[ಅಧ್ಯಕ್ಷ] (೨) ದಾ ತಿ ಮಾರುತಿ ಶೆಟ್ಟಿ[ಉಪಾಧ್ಯಕ್ಷ], (೩) ರಾ| ನಾಡಕರ್ಣಿ, (೪) ರಾ| ಸುಬ್ರಾವ ನಾಡಕರ್ಣಿ (೫) ರಿ ಮಾ ಹನುಮಂತ ಶೆಟ್ಟಿ, (೬) ಮ ತಿಂದ ಪ್ರಭು ಬಿರಾರ (೭) ನಾರಾಯಣ ನಾಡಕರ್ಣಿ ಅಂಪ್ಲೆ, (೮) ಪರಮೇಶ್ವರ ನಾಯ್ಕ ಬಂಡಿಗೆ, (೯) ಶೇಣಾ ಮಾಸ್ತರ ಅವರ್ಸಾ, (೧೦) ಅಣ್ಣಯ್ಯ ಶಾಮಾಜ ಅವರ್ಸಾ, (೧೧) ಆರ್ ಪಿ ಶಾಸ್ತ್ರಿ ಹಾರ್ವಾಡಾ, (೧೨) ತುಕಾರಾಯ ಬಾಪೂ ಅವರ, (೧೩) ವೆಂಕಟ ಕಮ್ಮಾ ಮಹಾದ, (೧೪) ಜೋಯ್ಡಾದೇವು ಜಗೇರಿ, (೧೫) ಕೆಂಚಪ್ಪ ದೇಸಾಯಿ ಅಲಗೇರಿ [ಕಾರ್ಯದರ್ಶಿ]

ಸಿದ್ದಾಪುರ — ಈ ತಾಲೂಕಿನೊಳಗಿನ ಗೇರುಸೊಪ್ಪೆಯ ಜಲಪಾತಗಳಲ್ಲಿ ಹುಟ್ಟುವ ವಿದ್ಯುಚ್ಛಕ್ತಿಯನ್ನು ಪ್ರಾ ಜೆ -ಇಲೆಕ್ಟ್ರಿಕ್ ಕಾರಖಾನೆಗಳ ಏರ್ಪಾಟಿನಿಂದ ಸಂಗ್ರಹಿಸಿ ಅದನ್ನು ಬೇರೆ ಬೇರೆ ಕಡೆಗೆ ಒಯ್ದು ಉಪಯೋಗಿಸುವ ಕುರಿತು ಮುಂಬಯಿ-ಮೈಸೂರ ಸಂಸ್ಥಾನಗಳೊಳಗೆ ಪತ್ರವ್ಯವಹಾರ ನಡೆದಿದೆ, ೩೦ ಸಾವಿರ ಅಶ್ವಶಕ್ತಿಯ ವಿದ್ಯುತ್ತು ನಿರ್ಮಾಣವಾಗಬಹುದೆಂದು ಅಂದಾಜವ ಈ ಪ್ರಕಾರ ಯುನೈಟೆಡ್ ಪ್ರೆಸ್ ವಾರ್ತಾವಾಹಕ ಸಂಸ್ಥೆಯು ಮೈಸೂರಿನ ಸುದ್ದಿಗಾರರನ್ನು ತಿಳಿಸುತ್ತಾರೆ

— ಸಂತತಿನಿಯಮನದ ಕುರಿತು ಮುಂಬೈಯಿನ ಆರೋಗ್ಯ ಚಂದ್ರಿಕೆ ಯಲ್ಲಿ ಅಮೇರಿಕೆಯ ಪತ್ರಿಕೆಯೊಂದರಲ್ಲಿ ಒಂದು ಲೇಖದ ಸಾರಾಂಶ ಕೊಟ್ಟಿದೆ ಅದೇನೆಂದರೆ— ತಿಂಗಳಿಗೊಂದಾವರ್ತಿ ರಜಸ್ವಲೆಯಾಗುವ ಸ್ತ್ರೀಯರು, ಮುಟ್ಟಾಗುವದಕ್ಕೆ ೧೦ ದಿನಗಳ ಮೊದಲು ಮತ್ತು ಮುಟ್ಟಾಗಿ ಸ್ನಾನ ಮಾಡಿದ ೮ ದಿನಗಳ ವರೆಗೆ ಗರ್ಭವತಿಯರಾಗುವ ಸಂಭವವಿಲ್ಲ ಮುಟ್ಟಾಗಿ ೧೦ ದಿನಗಳು ಕಳೆದ ಮೇಲೆ ಮಾತ್ರ ೨೫ ದಿನಗಳೊಳಗಾಗಿಯೇ ಹೆಚ್ಚಾಗಿ ಗರ್ಭವು ಉಂಟಾಗುವದು ಅದರಲ್ಲಿಯೂ ಮುಖ್ಯವಾಗಿ ೧೨, ೧೩ ೧೪ನೇ ದಿನಗಳಲ್ಲಿ ಗರ್ಭ ಧಾರಣಗೆ ಸೌಕರ್ಯವು ಹೆಚ್ಚು ಆದುದರಿಂದ ಮೇಲ್ಕಂಡ ದಿನಗಳಲ್ಲಿ ಪತಿ-ಪತ್ನಿಯರು ದೂರವಾಗಿದ್ದರೆ, ಸ್ತ್ರೀಯರು ಗರ್ಭಿಣಿಯರಾಗುವದಿಲ್ಲವೆಂದು ಬಹಳಮಟ್ಟಿಗೆ ನಂಬಬಹುದು ಇದು ಸುರಕ್ಷಿತವಾದ ಮಾರ್ಗವು. ಔಷಧ ಪ್ರಯೋಗಕ್ಕಿಂತ ಕ್ಷೇಮಕರ

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂತಿನ ದರಗಳೂ, ಕರಾರುಗಳೂ ಬಹಳ ಸೋಯಿಯವು ಇವೆ ಕಂಪನಿಯ ಹಣವು ಸರಕಾರಿ ಪ್ರೊ ಸೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಿಯುವದು.

Kumta Agents – D K NAYAK Bros Honavar Agent R V PRABHU Esq	K. Padmanabha Rao & Sons. BELGAUM *Chief Agents for Karnatak Districts & S M States*



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಚಿಕ್ಕವರಿಗೂ

ಒಮ್ಮೆಲೇ ಗುಣಕಾರಿಯಾದ ಶ್ರೇಷ್ಠ ಔಷಧ!

ಚಳಿಜ್ವರ, ಇನ್‌ಫ್ಲುಎಂಝಾ

ಮೊದಲಾದ ಜ್ವರಗಳ ಮೇಲೆ!!

ಮೆಡೋನ್ ಸನ್ಸ ಎಂಡ್ ಕೋ,

ಮುಂಬಯಿ ೨

MADON SONS & Co

PHARMACEUTICAL CHEMISTS BOMBAY

'ಕಿರ್ಲೋಸ್ಕರ'ವೆಂದರೇ-ಶ್ರೇಷ್ಠತೆ.

ಕಿರ್ಲೋಸ್ಕರರ ಕಂಪನಿಯ ನೆಲಗಡಲೆ ಸುಲಿಯುವ ಯಂತ್ರ ಬಳಸಿದ್ದಲ್ಲಿ ಬಹಳ ಲಾಭ ಸಿಗುತ್ತದೆ ಆದರಿಂದ ಖರ್ಚು ಕಡಿಮೆ ಬಿದ್ದು, ಕೆಲಸವು ಹೆಚ್ಚಾಗುತ್ತದೆ ಯಂತ್ರ ಶಾಸ್ತ್ರ ಪ್ರಕಾರವಾಗಿ ಇವುಗಳನ್ನು ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲಿಗೂ ಸಮಾಧಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು, ಇಂಜಿನು ಗಳಿಂದಲೂ ನಡಿಸಬಹುದು



ಪತ್ರ ಬರೆಕೊಂಡಲ್ಲಿ ಸಚಿತ್ರ ಕೆಟಲಾಗು ಕಳಿಸಲ್ಪಡುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)

ಸಾಲವೇ ಶೂಲ.

[ಒಕ್ಕಲುತನದ ಮೋರೆಯ ಮೇಲೆ ಬಂದು ಬಿದ್ದ ಸಾಲದ ಅಪರಿಮಿತ ಒಜ್ಜೆಯನ್ನು ಪರಿಹರಿಸುವದಕ್ಕಾಗಿ ಬೇರೆ ಬೇರೆ ಚಳವಳಿ ನಡೆದಿವೆ. ಅಲ್ಲಲ್ಲಿ ಚೌಕಶಿ ಮಂಡಳ ನೇಮಿಸಿ ಸ್ಥಳೀಕ ಪರಿಸ್ಥಿತಿಯ ವಿಚಾರವಾಗುತ್ತಿದೆ. ಸರಕಾರಿ ಉಪಾಯಗಳೂ ಅವುಗಳ ಪರಿಣಾಮಗಳೂ ವಿಚಾರಿಸಲ್ಪಡುತ್ತಿವೆ. ಈ ಒಕ್ಕಲು ಸಮಸ್ಯೆಗೆ ಸಂಬಂಧಪಟ್ಟದ್ದಿದ್ದು ವಿಚಾರಾರ್ಹವಿರುವದರಿಂದ ಈ ಕುರಿತು ಅಲ್ಲಲ್ಲಿ ನಡೆಯುವ ವಿಚಾರಗಳನ್ನು ಕಾಲಕಾಲಕ್ಕೆ ಈ ಸದರಿನಲ್ಲಿ ಪ್ರಕಟಿಸಬೇಕೆಂದು ಸಂಕಲ್ಪ ಮಾಡಿದ್ದೇವೆ. ಈ ವಿಷಯ ವಿಚಾರವಂತರು ತಮ್ಮ ತಮ್ಮ ಕಡೆ ಪರಿಸ್ಥಿತಿಯನ್ನು ನಮೂದಿಸಿ ಸೂಚನ ಕಳುಹಿದ್ದಲ್ಲಿ ಅವು ಸಹ ಇದೇ ಸದರಿನಲ್ಲಿ ಪ್ರಕಟವಾಗುವವು. **ಸಂಪಾದಕ**]

೧

ಮದ್ರಾಸ ಇಲಾಖೆಯೊಳಗಿನ ಸ್ಥಿತಿ.

ಹಿಂದುಸ್ಥಾನ ಸರಕಾರವು 'ಇಂಡಿಯನ್ ಸೆಂಟ್ರಲ್ ಬೇಂಕಿಂಗ ಎನ್‌ಕ್ವಾಯರಿ ಕಮಿಟಿ' ಎಂಬ ಚೌಕಶಿ ಮಂಡಳವನ್ನೊಂದು ನೇಮಿಸಿ ಸಹಕಾರಿ ಸಂಘಗಳ ಸ್ಥಿತಿ-ಗತಿಯ ವಿಚಾರ ಮಾಡಿದ್ದರು. ಮದ್ರಾಸ ಇಲಾಖೆಯೊಳಗಿನ ಸಂಘಗಳ ಚೌಕಶಿಯನ್ನು ಮಾಡಿದ್ದರು. ಆ ಕುರಿತು ಮದ್ರಾಸ ಸರಕಾರವು ಕಳೆದ ತಿಂಗಳಿನಲ್ಲಿ ಸರಕಾರಿ ಠರಾವು ಮಾಡಿ ತನ್ನ ಅಭಿಪ್ರಾಯ ಪ್ರಕಟಿಸಿದೆ. ಅದರೊಳಗಿನ ಮುಖ್ಯಾಂಶವೇನಂದರೆ— ಈ ಇಲಾಖೆಯೊಳಗಿನ ಒಕ್ಕಲಿಗರಿಗೆ ೧೫೦ ಕೋಟಿ ರೂಪಾಯಿ ಸಾಲವಿದೆ. ಅದರೊಳಗಿನ ಅರ್ಧಾಂಶ ಬೇಸಾಯ-ಮನೆ ಖರ್ಚಿಗ ಕೊಂಡದ್ದು. ಉಳಿದದ್ದು ಹಿಂದಿನ ಸಾಲ. ೭೫ ಕೋಟಿ ರೂಪಾಯಿಗಳ ಸಾಲವನ್ನು ತಾತ್ಪೂರ್ತಿಕ ಖರ್ಚಿಗಾಗಿ, ಅಂದರೆ ನಿತ್ಯ ಖರ್ಚಿಗಾಗಿ ಕೊಂಡದ್ದು. ಬೇಸಾಯದಿಂದ ೧೬೫ ಕೋಟಿ ರೂಪಾಯಿ ಉತ್ಪನ್ನವಾಗುತ್ತದೆ. ಇದರೊಳಗಿಂದ ತಾತ್ಪೂರ್ತಿಕವಾಗಿ ಕೊಂಡ ೭೫ ಕೋಟಿ ರೂಪಾಯಿ ಸಾಲವನ್ನು ತೀರಿಸಿದ್ದಲ್ಲಿ ಬೇಸಾಯಗಾರರ ಕಡೆ ಮಿಲ್ಕು ಉಳಿಯುವದು ೯೦ ಕೋಟಿ ರೂಪಾಯಿ ಎಲ್ಲ ರೈತರ ಮೇಲೆ. ಈ ಸಾಲ ಸರಿಯಾಗಿ ಹಂಚಿಹೋಗುವದಿಲ್ಲ. ೯೦ ಕೋಟಿ ರೂ. ಉತ್ಪನ್ನವು ಎಲ್ಲ ರೈತರಿಗೆ ಸಿಗುವದಿಲ್ಲ. ಸಾಲವಿಲ್ಲದ ಸಾವಕಾರ ರೈತರ ವಿಚಾರ ಮಾಡಿದ್ದಲ್ಲಿ ಸಾಲಗಾರ ರೈತರ ಕಡೆ ೪೦–೪೫ ಕೋಟಿ ರೂ. ಉಳಿಯಬಹುದು. ಇಷ್ಟು ಉತ್ಪನ್ನದಿಂದ ಹಳೇ ಸಾಲ ೭೫ ಕೋಟಿ ರೂ. ನಿತ್ಯ-ನೈಮಿತ್ತಿಕ ಖರ್ಚು ಕಳೆದು ಉಳಿದರೆ ಮಾತ್ರ ಹಳೇ ಸಾಲಕ್ಕೆ ಕೊಡಬರುತ್ತದೆ. ಇದರ ಮೇಲಿಂದ ಯಾವದೇ ಬಡ್ಡಿ ಹಿಡಿದಾಗ್ಯೂ, ಎಷ್ಟು ಕಂತು ಮಾಡಿಕೊಟ್ಟಾಗ್ಯೂ, ಎಷ್ಟು ಉದ್ಯೋಗ ನಡಿಸಿದಾಗ್ಯೂ ಹಿಂದಿನ ಸಾಲ ಹುಟ್ಟುವಳಿಯೊಳಗಿಂದ ತೀರಿಸುವದು ಅಶಕ್ಯವಿದೆ. ಬೇಸಾಯದ ಉತ್ಪನ್ನದ ಮಾನವನ್ನು ಹೇರಳವಾಗಿ ಹೆಚ್ಚಿಸಬೇಕು ಮತ್ತು ಸಾಲವನ್ನು ಈಗಿನ ಪರಿಸ್ಥಿತಿಯ ಮಾನದಿಂದ ತಗ್ಗಿಸಬೇಕು. ಅಂದರೆ ಮಾತ್ರ ಏನಾದರೊಂದು ವ್ಯವಸ್ಥೆಯಾಗುವದು. ಆದರಿಂದ ಸರಕಾರವು ರೈತರ ಉತ್ಪನ್ನ ಬೆಳೆಸುವದಕ್ಕಾಗಿ ಕಬ್ಬಿನ ಬೆಳವಣಿಗೆಗೂ, ಸಕ್ಕರ ತಯಾರಿಗೂ ಉತ್ತೇಜನ ಕೊಡಬೇಕು. ಸಾಧ್ಯವಿದ್ದಲ್ಲಿ ಹತ್ತಿಯ ಬೆಳೆ ಬೆಳೆಸಬೇಕು. ರೇಶಿಮೆಯ ಹುಳಗಳನ್ನು ಸಾಕಿ ರೇಶಿಮೆಯ ಉದ್ದಿಮೆಯನ್ನು ಒಕ್ಕಲಿಗರಿಗೆ ಹಚ್ಚಿಕೊಡಬೇಕು. ಸಾವಕಾರರಿಗೆ ಸಹಕಾರಿ ಸಂಘಗಳ ವಿದ್ಯಮಾನ ನೆರವಾಗಬೇಕು. ಈ ಪ್ರಕಾರ ಒಕ್ಕಲಿಗರ ಉತ್ಪನ್ನವನ್ನು ಬೆಳಿಸಿದ ಬಳಿಕ, ಅವರೊಳಗಿನ ಕೆಲವರವನ್ನು ಸಾವಕಾರರಿಗೆ ಕೊಟ್ಟು, ಹಳೇ ಸಾಲವನ್ನು ಕಂತಿನ ಸಾಲ ಮಾಡಬೇಕು. ನಿಬಂಧನೆ ಮಾಡುವ ಮಟ್ಟಿಗೆ ಸಾವಕಾರರಿಗೆ ಸಲ್ಲತಕ್ಕ ಸಾಲದ ರಕಮನ್ನು ನಿರ್ದಿಷ್ಟಗೊಳಿಸಬೇಕು. ಸರಕಾರದಿಂದ ಈ ಯೋಜನೆಗಾಗಿ ಯಾವದೇ ಪ್ರಕಾರ ಪ್ರತ್ಯಕ್ಷ ಸಹಾಯವಾಗುವದಿಲ್ಲ. ಸರಕಾರಿ ಸಿಬಂದಿಯನ್ನು ಕೊಡಬಹುದು. ಸಹಕಾರಿ ಸಂಘಗಳು ಈ ಯೋಜನೆಗಳಿಗೆ ಎಷ್ಟರಮಟ್ಟಿಗೆ ಸಹಾಯ ಮಾಡಬಲ್ಲವೆಂಬ ಸಂಗತಿಯನ್ನು ಸಹಕಾರಿ ಸಂಘಗಳ ರಜಿಸ್ಟ್ರಾರರು ವಿಚಾರ ಮಾಡಿ ರಿಪೋರ್ಟ ಮಾಡಬೇಕು. ಬೇಸಾಯ ಮತ್ತು ಉದ್ದಿಮೆ ಖಾತೆಗಳ ಮುಖ್ಯಸ್ಥರೂ ಸರಕಾರಕ್ಕೆ ರಿಪೋರ್ಟ ಮಾಡಬೇಕು. ಒಕ್ಕಲಿಗರಿಗೆ ಮಧ್ಯಸ್ಥ ದಲಾಲರು ಸುಲಿಯುತ್ತಾರೆಂಬದೊಂದು ದೂರಿದೆ. ದಲಾಲರ ಮೂಲಕ ಒಕ್ಕಲಿಗರಿಗೆ ತಮ್ಮ ಸರಕಿನ ಪೂರ್ಣ ಬೆಲೆ ದೊರಕುವದಿಲ್ಲವಾಗಿಯೂ, ಚೌಕಶಿ ಮಂಡಳದವರ ಹೇಳಿಕೆಯ ಬಳಿ ಸರಕಾರವು ಒಕ್ಕಲಿಗರ ಸರಕನ್ನು ಸರಕಾರಿ ಉಗ್ರಾಣಗಳಲ್ಲಿ ಇಟ್ಟುಕೊಂಡು ಅವರಿಗೆ ಆಡಚಣೆ ಸಮಯ ಹಣವೊದಗಿಸಿಕೊಡಬೇಕಾಗಿ ಚೌಕಶಿ ಮಂಡಳದವರ ಸೂಚನೆಯಿದೆ. ಆದರೆ, ಸರಕಾರಕ್ಕೆ ಹಣದ ಅಡಚಣೆಯಿರುವದರಿಂದ ಪ್ರಜೆಗಳಿಗೆ ಹಣ ಪೂರೈಸಲಿಕ್ಕೆ ಸರಕಾರಕ್ಕೆ ಸಾಧ್ಯವಿಲ್ಲ. ಸಹಕಾರಿ ಸಂಘಗಳು ಈ ವ್ಯವಸ್ಥೆ ಮಾಡಬಹುದು, ಆ ಕುರಿತು ಅವಶ್ಯವಿದ್ದಲ್ಲಿ ಕಾಯಿದೆಯನ್ನೂ ತಿದ್ದಬಹುದು. ಅಲ್ಲಲ್ಲಿ ಸಂತೆಮಂಡಳ (*market committee*)ಗಳನ್ನು ಸ್ಥಾಪಿಸಿ ಸರಕು ಸಂಗ್ರಹಿಸಿ ಒಕ್ಕಲಿಗರಿಗೆ ಹಣದ ಪೂರೈಕೆಯಾಗುವಂತೆ ಏರ್ಪಾಟು ಮಾಡಬಹುದು. ಇದು ಮದ್ರಾಸ ಸರಕಾರದ ಅಪ್ಪಣೆ. ಸರಕಾರದ ದುಡ್ಡಿಗೆ ಆಪಾಯ ಬರದಂತೆ ಪರಸ್ಪರ ಸಹಕಾರ ಸಂಘಗಳ ವಿದ್ಯಮಾನ ಬೇಸಾಯಗಾರರ ಪರಸ್ಪರ ಸಮೃದ್ಧಿ ಮಾಡುವ ಯೋಜನೆಯಿದು! ಒಕ್ಕಲಿಗರು ಸಾಲದಲ್ಲಿ ಮುಳುಗಿದ್ದಾರೆ; ಹುಟ್ಟುವಳಿಯಿಂದ ಸಾಲ ತೀರಿಸುವದಸಾಧ್ಯ; ಎಷ್ಟು ಪ್ರಯತ್ನಪಟ್ಟಾಗ್ಯೂ ಅದು ತೀರದು; ಆದಕ್ಕಾಗಿ ಬೇರೊಂದು ಯೋಜನೆಯನ್ನೇ ಮಾಡಬೇಕು, ಎಂಬ ಒಪ್ಪಿಗೆ ಮಹತ್ವದ್ದಿದೆ.

* * *

೨

ಸ್ಪಾಕ್ಸ ಗ್ರಾಮೋದ್ಧಾರಯೋಜನೆಯ ವಿಚಾರ

ಧಾರವಾಡದಲ್ಲಿ ಕರ್ನಾಟಕ ಭಾಗದ ಸಹಕಾರಿ ಇನ್ಸ್ಟಿಟ್ಯೂಟ ಯಾನೆ ಪ್ರಚಾರ ಸಂಘದ ವಿದ್ಯಮಾನದಿ| ಬ| ಅರ್ಕೇರಿಯವರ ಭಾಷಣವಾಯಿತು. 'ಸಹಕಾರ ವಿಕಾಸದ ಪ್ರಕಾರಗಳು' ಎಂಬ ವಿಷಯದ ವಿವೇಚನವಾಯಿತು. ಅ| ರಿಜಿಸ್ಟ್ರಾರರಾದ ರಾ| ಹೋಲಿಯವರು ಸಭಾಪತಿಗಳಿದ್ದರು. ದಿ| ಬ|ರು ನುಡಿದದ್ದೇನಂದರೆ — "ಸಹಕಾರಿ ಸಂಘಗಳೆಂದರೆ, ಸುಲಭವಾಗಿ ಹಣ ಸಿಗುವ ಸಂಸ್ಥೆಗಳೆಂಬದೊಂದು ಕಲ್ಪನೆಯಾಗಿದೆ. ಈ ಸಂಘಗಳು ಸಾದರಕವಾಗಿಲ್ಲವಾಗಿ ಜನಾಭಿಪ್ರಾಯ ಸುಲಭ ಸಾಲ ಸಿಗುವ ವ್ಯವಸ್ಥೆಯಿಂದಲೇ ಒಕ್ಕಲಿಗರ ಮೇಲೆ ಕಷ್ಟ ಕಾಲ ಒದಗಿದೆಂದು ಅನೇಕ ಸುಶಿಕ್ಷಿತರು ಅಭಿಪ್ರಾಯಪಡುತ್ತಾರೆ. ಇದಕ್ಕೆ ತಕ್ಕಷ್ಟು ಕಾರಣವಿದೆ. ಆದರೆ, ಅದು ಸಹಕಾರಿ ತತ್ವಗಳ ತಪ್ಪಲ್ಲ. ಸಹಕಾರಿ ತತ್ವಗಳು ಲೋಕಕಲ್ಯಾಣಪ್ರದವಾದವು, ಜನರೇ ಅವುಗಳ ದುರುಪಯೋಗ ಮಾಡಿದರು. ಸಹಕಾರಿ ಸಂಘಗಳು ಸಾವಕಾರರ ಸ್ಥಾನವನ್ನು ಆಕ್ರಮಿಸಿದವು. ರೈತ ಸುಧಾರಣ ಕಾಯಿದೆಯ ಉಪಟಳಕ್ಕಾಗಿ ಸಾವಕಾರರು ತಮ್ಮ ಹಣಗಳನ್ನು ಸಹಕಾರಿ ಸಂಘಗಳಲ್ಲಿ ಇಡುವದೇ ಒಳ್ಳೆದೆಂದು ಅಭಿಪ್ರಾಯಪಟ್ಟರು. ಈ ಪ್ರಕಾರ ಸಂಗ್ರಹವಾದ ಹಣವನ್ನು ಸಂಘದವರು ಸಭಾಸದರಿಗೆ ಸಾಲ ಕೊಟ್ಟರು. ಸಹಕಾರಿ ಸಂಘದ ತತ್ವ ಹೀಗಲ್ಲ. ಮೆಂಬರರಿಂದ ಸ್ವಲ್ಪ ಸ್ವಲ್ಪ ಹಣ ಎತ್ತುವಳಿ ಮಾಡಿ ಅಡಚಣೆಯುಳ್ಳ ಮೆಂಬರರಿಗೆ ಪೂರೈಸಬೇಕೆಂದಿದೆ. ಸಾಲ ಕೊಡುವಾಗ ಸಂಘದವರು ಸಾಲ ಕೊಳ್ಳುವವರ ನಡೆನುಡಿಗಳನ್ನು ವಿಚಾರಿಸಲಿಲ್ಲ. ರೇಂಜ ಭಾಂಡವಲು ಸಹ ಸ್ವತಂತ್ರವಾಗಿ ವಸೂಲ ಮಾಡದೆ ಮಂಜೂರ ಮಾಡಿದ ಸಾಲದ ರಕಮಿನೊಳಗಿಂದಲೇ ವಸೂಲಾಗುತ್ತಿತ್ತು. ಇಂಥ ಪ್ರಸಕ್ತಿಯಲ್ಲಿ ಅಪಯಶವಾದದ್ದು ಆಶ್ಚರ್ಯಕರವಲ್ಲ. ಆದಾಗ್ಯೂ ಈ ಅಪಯಶಕ್ಕೆ ಬಹುಮಟ್ಟಿಗೆ ಅಪರಿಹಾರ್ಯ ಪರಿಸ್ಥಿತಿಯೇ ಕಾರಣ. ಈಗಿನ ಆರ್ಥಿಕ ಮುಗ್ಗಟ್ಟಿನಲ್ಲಿ ಒಕ್ಕಲಿಗರೂ, ವರ್ತಕರೂ, ಶಿಲ್ಪಿಗಳೂ, ಎಲ್ಲರೂ ಅಡಚಣೆಯಲ್ಲಿ ಬಿದ್ದಿದ್ದಾರೆ. ಬೇಸಾಯಗಾರರ ಸ್ಥಿತಿ ಸುಧಾರಿಸುವದು ಮುಖ್ಯ ಕೆಲಸ. ಇದರ ಪ್ರಯತ್ನ ಸೇನೋ ನಡೆದದೆ. ಬೇಸಾಯ ಖಾತೆಯವರ ಕಡೆ ಬೇಸಾಯಗಾರರು ಹೋಗಿ ಸಲಹೆ ಕೇಳುತ್ತಾರೆ. ಆ ಸಲಹೆಗಳಂತೆ ನಡೆಯಲು ಬೇಕಾದ ಸರಂಜಾಮು ಖಾತೆಯವರು ನೆರವಾಗುವದಿಲ್ಲ. ಅವರು, ಬೇಸಾಯಗಾರರಿಗೆ ನೆರವಾಗುವದು ತಮ್ಮ ಕೆಲಸವಲ್ಲೆಂಬಂತೆ ವರ್ತಿಸುತ್ತಾರೆ. ಉದ್ದಿಮೆ ಖಾತೆಯವರು ಸಹಕಾರಿ ಖಾತೆಯೊಡನೆ ಸಹಕಾರ ಮಾಡಿದ್ದಲ್ಲಿ ನೆಯ್ಗೆ ಮೊದಲಾದ ಉದ್ದಿಮೆಗಳನ್ನು ಪುರಸ್ಕರಿಸಬಹುದು. ಸಹಕಾರಿಗಳಲ್ಲಿ ಅತಿಕ್ಷಿತರೇ ಹೆಚ್ಚು, ರಕ್ಕು ಜನರ ಕೈಗೊಂಬೆಗಳು. ವಿದ್ಯಾ ಇಲಾಖೆಯವರು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ಸಹಕಾರಿ ಸಂಘಗಳೊಡನೆ ಸಹಕಾರ ಮಾಡಬಾರದು. ಅವರು, ಸಹಕಾರಿ ಸಂಘಗಳಲ್ಲಿ ಪ್ರವೇಶ ಮಾಡಬಾರದೆಂದು ವಿದ್ಯಾಧಿಕಾರಿಗಳು ಶಿಕ್ಷಕರಿಗೆ ಪ್ರತಿಬಂಧ ಮಾಡುತ್ತಾರೆ. ಈ ಹಿಂದಿನ ಗವರ್ನರರಾಗಿದ್ದ ಸರ್ ಫ್ರೆಡರಿಕ್ ಸ್ಪಾಕ್ಸರವರು ಪ್ರಚುರಗೊಳಿಸಿದ ಗ್ರಾಮೋದ್ಧಾರದ ಯೋಜನೆಯನ್ನು ನಾನು ವಿಚಾರಿಸುತ್ತಿದ್ದೇನೆ. ಜನರು ಸ್ವಾವಲಂಬಿಗಳಾದರೆ ಜನರ ಉದ್ಧಾರವಾಗುವದಾಗಿ ಅವರು ಹೇಳಿದರು. ಇದೊಂದು ಗೂಢವಾದ ಒಗಟು, ಅಂದರೆ ಬಿಡಿಸಲಾಗದ ಪ್ರಶ್ನೆ.

ಬೆಳೆಯುವಿಗ ಕಟ್ಟಿದವನಿಗೆ ಈಸಹೇಳಿದಂತೆಯೇ! ಬೇಸಾಯಗಾರರು ಸಾಲದ ಪಾಶದಲ್ಲಿ ಮುಳುಗಿ ಹೋರಾಡುತ್ತಿದ್ದಾರ ಅದರೊಳಗಿಂದ ಅವರು ಪಾರಾಗಲಾರರು. ಅವರಿಗೆ ವಿಮೋಚಿಸುವದು ಆದ್ಯ ಕರ್ತವ್ಯ. ಪರದೇಶಗಳಲ್ಲಿ ಸರಕಾರವು ಬಹಳ ಪ್ರಯತ್ನ ಮಾಡಿದೆ. ಝೆಕೋಸ್ಲೊವಾಕಿಯಾ ಸರಕಾರವು ಶೇಕಡಾ ೩೦ರಂತೆ ಸಾಲವನ್ನು ಕಾಯಿದೆಯೋರ್ಪಡಿಸಿ ತಗ್ಗಿಸಿದೆ. ಕೆನಡಾ ದೇಶದ ಸರಕಾರವು ಒಕ್ಕಲಿಗರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಶೇಕಡಾ ೪ರಂತೆ ಅವರಿಗೆ ಸಾಲ ಪೂರೈಸುತ್ತಿದೆ. ಆಸ್ಟ್ರೇಲಿಯಾ ಮತ್ತು ನ್ಯೂಝಿಲೆಂಡ ದೇಶದ ಸರಕಾರಗಳು ಅಲ್ಲಿ ಬೆಳೆಯುವ ಗೋದಿಯನ್ನು ಉಗಿಬಂಡಿಯಿಂದಲೂ, ಹಡಗದಿಂದಲೂ ಒಯ್ಯಲಿಕ್ಕೆ ಕಡಿಮೆ ದರ ಇಟ್ಟಿವೆ. ಅದರಿಂದ ನಮ್ಮ ಹಿಂದುಸ್ಥಾನದಲ್ಲಿ ಅಲ್ಲಿಯ ಗೋದಿ ನಮ್ಮ ಗೋದಿಗಿಂತ ಅಗ್ಗವಾಗಿ ಮಾರಲ್ಪಡುವಂತಾಗಿದೆ. ಜರ್ಮನ್ ಸರಕಾರವು ಇದೇ ಪ್ರಕಾರದ ಬಿಕ್ಕಟ್ಟುಗಳಿಗೂ, ರೈತರಿಗೂ ಅನುಕೂಲತೆಗಳನ್ನು ಪೂರೈಸಿ ಪ್ರಜೆಗಳನ್ನು ಕಾಪಾಡಿದೆ. ಸುಶಿಕ್ಷಿತರು ಹಳ್ಳಿಗಳಿಗೆ ಹೋಗಿ ಅವರಿಗೆ ಉಪದೇಶ ಮಾಡಿ ತಮ್ಮಿಂದಾದಷ್ಟು ಸಹಾಯ ಮಾಡಿ ಒಕ್ಕಲಿಗರ ಸ್ಥಿತಿ ಸುಧಾರಿಸಲು ನೆರವಾಗಬೇಕು. ಡಿ|ಬಿ| ಬರ್ವೇಯವರು ಬೆಳಗಾವಿಯ ಡಿಸ್ಟ್ರಿಕ್ಟ ಸೆಂಟ್ರಲ್ ಕೋಆಪರೇಟಿವ್ಹ ಬ್ಯಾಂಕಿನ ಚೇರಮನ್ನರಿರುತ್ತಾರೆ.

* * *

೩

ರಾ| ಖುರೇಶಿಯವರ ಗ್ರಾಮೋದ್ಧಾರದ ಕಲ್ಪನೆ

ರಾ| ಅನ್ವರ ಇಕಬಲ್ ಖುರೇಶಿಯವರು 'ಒಕ್ಕಲಿಗನೂ, ಆತನ ಸಾಲವೂ' ಎಂಬದೊಂದು ಚಿಕ್ಕ ಪುಸ್ತಕವನ್ನು ಸದ್ಯಕ್ಕೆ ಪ್ರಕಟಿಸಿದ್ದಾರೆ. ಲಂಡನಿನಲ್ಲಿ ''ಇಂಡಿಯನ್ ರೂರಲ್ ರಿಕನ್‌ಸ್ಟ್ರಕ್ಷನ್ ಲೀಗ' ಎಂಬ ಹಿಂದೀ ಗ್ರಾಮೋದ್ಧಾರ ಸಂಘವೆಂಬದೊಂದು ಸಂಸ್ಥೆಯಿದೆ. ಒಕ್ಕಲಿಗರ ಸ್ಥಿತಿಯನ್ನು ಸುಧಾರಿಸಬೇಕೆಂಬದೇ ಈ ಸಂಸ್ಥೆಯ ಉದ್ದೇಶ. ಈ ಸಂಸ್ಥೆಯ ವಿದ್ಯಮಾನ ರಾ|| ಖುರೇಶಿಯವರು ಬೇರೆ ಬೇರೆ ದೇಶಗಳಲ್ಲಿ ತಿರುಗಾಡಿ ತಮಗೆ ಕಂಡ ಅನುಭವಗಳನ್ನು ಈ ಗ್ರಂಥದಲ್ಲಿ ಬರೆದಿದ್ದಾರೆ. ಹಿಂದೀ ಒಕ್ಕಲಿಗರ ವಿಷಯ ಅವರು ಬರೆದ ಮೊದಲನೆ ಅಧ್ಯಾಯದೊಳಗಿನ ಸೂಚನೆಗಳು ವಿಚಾರಾರ್ಹವು. ಅವರು ಬರೆಯುವದೇನೆಂದರೆ:- ಬೇರೆ ಯಾವದೇ ದೇಶಗಳಿಗಿಂತ ಒಕ್ಕಲಿಗನ ಸುಧಾರಣೆಗಾಗಿ ನಮ್ಮ ಹಿಂದುಸ್ಥಾನ ದೇಶದಲ್ಲಿ ಪ್ರಥಮತಃ ಪ್ರಯತ್ನ ನಡೆಯತಕ್ಕದ್ದಿತ್ತು, ಆದರೆ, ಈ ದೇಶವನ್ನೊಂದು ಬಿಟ್ಟು ಉಳಿದ ಯಾವತ್ತು ದೇಶಗಳಲ್ಲಿ ಈ ಪ್ರಯತ್ನಗಳು ನಡೆದಿವೆ. ವಾಶಿಂಗಟನ್‌ದೊಳಗಿನ ಬೇಸಾಯ ಪ್ರಚಾರಕ ಇಲಾಖೆಯವರು ಪ್ರಕಟಿಸಿದ ಪತ್ರಿಕೆಯನ್ನು ಪರಾಂಬರಿಸಿದ್ದಲ್ಲಿ ನನ್ನ ಹೇಳಿಕೆಯ ಸತ್ಯತೆ ತಿಳಿದೀತು. ಹಿಂದುಸ್ಥಾನದಲ್ಲಿ ಒಕ್ಕಲತನದ ಕಡೆ ಪೂರ್ಣ ಅಲಕ್ಷವಿದೆ. ಒಕ್ಕಲಿಗರಿಗೆ ನೆರವಾಗಬೇಕೆಂಬದರ ಕುರಿತು ದೊಡ್ಡ ದೊಡ್ಡ ವ್ಯಾಖ್ಯಾನಗಳಾಗುತ್ತಿವೆ, ಆದರೆ, ಪ್ರತ್ಯಕ್ಷ ಕಾರ್ಯ ಶೂನ್ಯ! ಹಿಂದುಸ್ಥಾನದಲ್ಲಿ ಶೇಕಡಾ ೭೦ ರಷ್ಟು ಜನರು ಬೇಸಾಯದ ಮೇಲೆಯೇ ಜೀವನೋಪಾಯ ನಡೆಸುತ್ತಾರೆ. ಅದನ್ನು ಸುಧಾರಿಸಬೇಕಾಗಿ ಸಾರ್ವಭೌಮರು ನೇಮಿಸಿದ ಚೌಕಶಿ ಮಂಡಳಗಳೂ, ಪ್ರಾಂತಿಕ ಚೌಕಶಿ ಮಂಡಳಗಳೂ ಆಗಿಂದಾಗ ಶಿಫಾರಸು ಮಾಡುತ್ತವೆ. ಆದರೆ ಆ ಕಡೆ ಲಕ್ಷ್ಯ ಕೊಡುವವರಿಲ್ಲ. ಉದ್ಯೋಗಗಳನ್ನು ಸಂರಕ್ಷಿಸುವದಕ್ಕಾಗಿ ಆಮದು-ರಫ್ತು ಜಿನಸುಗಳ ಮೇಲೆ ಹೇರಳವಾಗಿ ಕರ ಹೇರಿಕೆಯಾಗಿದೆ. ಈ ತೆರಿಗೆಗಳ ಒಜ್ಜೆಯೆಲ್ಲ ಹಿಂದುಸ್ಥಾನದೊಳಗಿನ ಜನಸಾಮಾನ್ಯರ ಮೇಲೆ ಬಿದ್ದಿದೆ. ಕೆಲ ಅಂಕಿಗಳನ್ನು ಕೊಟ್ಟಲ್ಲಿ ಇದರ ಕಲ್ಪನೆ ಬಂದೀತು. ೧೯೧೩-೧೪ನೇ ಇಸ್ವಿಯಲ್ಲಿ ಆಮದು ತೆರಿಗೆಯ ಮಾನ ನೂರಕ್ಕೆ ೫ರಂತೆ ಇತ್ತು. ಅದು ಮರುವರ್ಷದಲ್ಲಿ ೭||. ೧೯೩೦ನೇ ಇಸ್ವಿಯಲ್ಲಿ ಶೇಕಡಾ ೧೧, ೧೯೩೧ರಲ್ಲಿ ೧೫, ೧೯೩೨ರಲ್ಲಿ ಶೇಕಡಾ ೩೦ ಆಗಿ, ಅದೇ ಇಸ್ವಿಯಲ್ಲಿ ಅದು ಪುನಃ ೩೧ ೭|| ಆಗಿದೆ. ಒಕ್ಕಲಿಗರಿಗೆ ತೀರ್ವೆ ಕೊಡುವದೇ ಕಷ್ಟ, ಅವರ ಮೇಲೆ ಈ ಒಜ್ಜೆ! ಹಿಂದುಸ್ಥಾನವು ಬೇಸಾಯ ಪ್ರಧಾನ ದೇಶವಾದ್ದರಿಂದ ಬೇಸಾಯಕ್ಕೆ ಉತ್ತೇಜನ ಕೊಡಲು ಬೇಸಾಯ ಹುಟ್ಟುವಳಿಯ ವಿಕ್ರಯಕ್ಕೆ ಅನುಕೂಲತೆಯಿರಬೇಕಾಗಿತ್ತು, ಅದು ಮಾಯವಾಗಿ ಎರಡೆ ಬೇರೆ ಉದ್ದಿಮೆಯವರಿಗಾಗಿ, ರಾಜಕಾರಣಿಗಳಿಗಾಗಿ ಬೇಸಾಯಗಾರರ ಘಾತವಾಗುತ್ತಿದೆ. ನಮ್ಮ ದೇಶದೊಳಗಿನ ಉದ್ದಿಮೆಗಳನ್ನು ಸಂರಕ್ಷಿಸಬೇಕಾಗಿ ಹೇಳುತ್ತಿರುವವರು ಸಂರಕ್ಷಣೆಯ ತತ್ವವನ್ನು ಬೇಸಾಯಕ್ಕೆ ಯಾಕೆ ಲಾಗು ಮಾಡುವದಿಲ್ಲ? ಕಷ್ಟಗಳನ್ನು ಒಕ್ಕಲಿಗರು ಸಹಿಸಿಕೊಂಡದ್ದಲ್ಲ; ಸೃಷ್ಟಿದೇವತೆಯಿಂದ ಆತನಿಗ ಉಪದ್ರವಗಳುಂಟಾಗಿವೆ. ಸ್ವಂತ ಸರಕಾರದ ಕಡೆಯಿಂದ ತುಂಬಾ ಧನನಷ್ಟವಾಯು. ಪಡೆದ ಪರದೇಶೀ ಸರಕು ಹಿಂದುಸ್ಥಾನದ ಪೇಟೆಗಳಲ್ಲಿ ಬಂದು ಆತನಿಗೆ ನಷ್ಟವಾಗುತ್ತದೆ. ಹಿಂದುಸ್ಥಾನದೊಳಗಿನ ಉಗಿಬಂಡಿಗಳು ಸ್ವಾತಂತ್ರ್ಯವಿಂದ ಪರದೇಶಸ್ಥ ವ್ಯಾಪಾರಿಕ್ಕೆ ಇಟ್ಟ ದರಗಳಿಂದ ಆತನಿಗ ಹಾನಿಯಾಗುತ್ತದೆ. ಗೊಬ್ಬರ, ಉರುವಲ ಕಟ್ಟಿಗೆ ಮೊದಲಾದ ನಿತ್ಯನೈಮಿತ್ತಿಕ ಸಂಸಾರ ಸಾಹಿತ್ಯವನ್ನು ತರಬಯ್ಯುವದಕ್ಕಾಗಿ ಉಗಿಬಂಡಿಗಳು [illegible] ದರ ಹೇರುತ್ತವೆ. ಕಟ್ಟಿಗೆಯನ್ನು ಉರುವಲಕ್ಕೆ ಉಪಯೋಗಿಸಿ ಫಲ ಕೊಡುವ ಗೊಬ್ಬರ ಸುಟ್ಟುಹಾಕುವ ಒಗ್ಗ ನಮ್ಮಲ್ಲಿಯ ಒಕ್ಕಲಿಗರಿಗೆ ಬರುತ್ತಾರೆ. ಆದರೆ, ಬೇರೆ ಉಪಾಯವಿಲ್ಲದೆ, ಉರುವಲ ಕೊಳ್ಳಲಾಗದೆ ಆತನು ಈ ಪ್ರಕಾರ ಮಾಡುತ್ತಾನೆಂದು ಒಬ್ಬರೂ ಗ್ರಹಿಸುವದಿಲ್ಲ. ನ್ಯೂಝಿಲೆಂಡದಲ್ಲಿ ಗೊಬ್ಬರವನ್ನು ಕಾಪಾಡುವದಕ್ಕಾಗಿ ಸರಕಾರವು ಹೇರಳ ಹಣ ಖರ್ಚು ಮಾಡುತ್ತಿದೆ. ೧೯೩೨-೩೩ನೇ ಸಾಲಿನಲ್ಲಿ ಬೇಸಾಯ ಮಾಡುವವರು ಗೊಬ್ಬರ ತಯಾರಿಗಾಗಿ ೧,೯೧,೪೫೭ ಹಣವನ್ನು ಕೊಟ್ಟರು. ಒಕ್ಕಲತನದ ಅನುಕೂಲತೆಗಾಗಿ ಸರಕಾರವು ೧೧೩,೦೦೦ ಹಣವನ್ನು ಉಗಿಬಂಡಿಯವರಿಗೆ ಕೊಟ್ಟಿತು. ಹಿಂದುಸ್ಥಾನದ ಸ್ಥಿತಿಯೇ ಬೇರೆ. ಆಸ್ಟ್ರೇಲಿಯಾ ದೇಶದಿಂದ ಕಲಕತ್ತೆಗೆ ಮಣ ಗೋದಿ ಬರಲು ಬೀಳುವ ಭಾಡಿ! ಆದರೆ ಗೋದಿ ಪಂಜಾಬ ಪ್ರಾಂತದ ಲಾಯಲ್‌ಪುರದಿಂದ ಕಲಕತ್ತೆಗೆ ಒಯ್ಯಲು ರೂ. ೧-೩-೩!! ಈ ಪ್ರಕಾರ ಹಿಂದುಸ್ಥಾನ ಸರಕಾರವು ನೇಮಿಸಿದ ಸೆಂಟ್ರಲ ಬ್ಯಾಂಕಿಂಗ ಎನ್‌ಕ್ವಾಯರಿ ಕಮಿಟಿಯವರು ಅಭಿಪ್ರಾಯಪಟ್ಟಿದ್ದಾರೆ. ೧೯೩೦ನೇ ಇಸ್ವಿಯಲ್ಲಿ ಕಠಿಣ ಸ್ಥಿತಿ. ಪಂಜಾಬ ಪ್ರಾಂತದಲ್ಲಿ ಗೋದಿ ರಾಶಿಯಾಗಿ ಬಿದ್ದಿತ್ತು, ಉಗಿಬಂಡಿಯ ದರದ ಮೂಲಕ ಕಲಕತ್ತೆಗೆ ಒಯ್ದು ಮಾರಲು ತೊಂದರೆ! ಸರಕಾರದ ಕಡೆ ಮೊರೆಗೊಂಡರೆ ಕೇಳುವವರಿಲ್ಲ. ಸ್ವದೇಶದಲ್ಲಿ, ಸ್ವದೇಶದೊಳಗೆ ಬೆಳೆದ ಗೋದಿ ಒಯ್ದು ಮಾರಲಿಕ್ಕೆ ನಮ್ಮ ಸರಕಾರವು ಉಪೇಕ್ಷೆ ಮಾಡುತ್ತಿರುವಾಗ ಪರದೇಶದವರು ವಿಪುಲ ದ್ರವ್ಯಸಹಾಯವನ್ನಿತ್ತು ತಮ್ಮಲ್ಲಿ ಬೆಳೆದ ಗೋದಿಯನ್ನು ಬೇರೆ ಬೇರೆ ದೇಶಗಳಿಗೆ ರಫ್ತು ಮಾಡುತ್ತಿದ್ದರು. ಒಕ್ಕಲಿಗರಿಗೆ ಬದುಕಿಸಿಕೊಳ್ಳುವದಕ್ಕಾಗಿ ಅಮೇರಿಕೆ ಸರಕಾರದವರು ಕೋಟ್ಯಾವಧಿ ರೂಪಾಯಿ ಖರ್ಚ ಮಾಡಿ ಅಲ್ಲಿ ಬೆಳೆದ ಗೋದಿಯನ್ನೇ ಖರೀದಿ ಮಾಡಿ ಇಟ್ಟುಕೊಂಡರು. ಒಕ್ಕಲಿಗರಿಗೆ ಪರದೇಶಗಳಲ್ಲಿ ಸಿಗುವ ದರಕ್ಕಿಂತ ಹೆಚ್ಚಿಗೆ ದರ ಕೊಟ್ಟರು. ಸಾಲ ತೀರಿಸುವದೇ ಒಕ್ಕಲಿಗರ ಮುಖ್ಯ ಪ್ರಶ್ನೆ. ಇತ್ತ ಕೆಲ ವರ್ಷಗಳಿಂದ ಆತನ ಪ್ರಾಪ್ತಿ ಹೇರಳವಾಗಿ ಕುಗ್ಗಿದೆ. ಬೇಸಾಯ ಸರಕುಗಳ ದರ ಇಡೀ ಜಗತ್ತಿನಲ್ಲೇ ಇಳಿದಿದೆ. ಇದರಿಂದ ಎಲ್ಲೆಲ್ಲಿಯೂ ಒಕ್ಕಲಿಗರ ಸ್ಥಿತಿ ಕೆಂಗೆಟ್ಟಿದೆ, ಹಿಂದುಸ್ಥಾನದೊಳಗಿನ ಒಕ್ಕಲಿಗರ ಸ್ಥಿತಿ ಮತ್ತೂ ಕುಗ್ಗಿದೆ. ಯಾಕೆಂದರೆ, ಆತ ಬೆಳೆಸುವ ಧಾನ್ಯ-ಜಿನಸುಗಳ ಕ್ರಯ ಮಾತ್ರ ಕುಗ್ಗಿದೆ ಇದಲ್ಲದೆ, ಆತನ ಮೇಲೆ ಕರ ಬೆಳೆದಿದೆ: ಅಪ್ರತ್ಯಕ್ಷ ಕರ, ಪ್ರತ್ಯಕ್ಷ ಕರ, ಹೀಗೆ ಎರಡೂ ಕರ ಆತನು ತೆರಬೇಕು. ಆದಾಯ ಕಡಿಮೆಯಾಗಿ ವೆಚ್ಚ ಹೆಚ್ಚಾಗಿ ಆತ ಹೋರಾಡುತ್ತಿದ್ದಾನೆ. ಸಾಲದ ಪ್ರಶ್ನೆಯನ್ನು ಅಲಕ್ಷ ಮಾಡಿ, ಆ ಕುರಿತು ಕೈಕಟ್ಟಿ ಸುಮ್ಮಗುಳಿಯುವದು ತೀರ ಕೆಟ್ಟದ್ದೆಂದು ಸಾರ್ವಭೌಮ ಬೇಸಾಯ ಚೌಕಶಿ ಮಂಡಳವು ಅಭಿಪ್ರಾಯಪಟ್ಟಿದೆ. ಸರಕಾರದ ಧೋರಣವು ಶೋಚನೀಯವಿದೆ, ಆದರೆ, ಹಿಂದೀ ರಾಜಕೀಯ ಮುಂದಾಳುಗಳು, ರಾಷ್ಟ್ರೀಯವೆಂದು ಹೇಳಿಸಿಕೊಳ್ಳುವ ವರ್ತಮಾನಪತ್ರಗಳೂ ಅಷ್ಟೇ ಯೋಗ್ಯರಾಗಿರುವ ಕೆಲ ಪ್ರಮುಖರಿಗಂತೂ ಗ್ರಾಮವೆಂದರೇನೆಂಬ ಸಂಗತಿ ಗೊತ್ತಿಲ್ಲ. ಕೆಲವರು ಹಳ್ಳಿಗರ ಹಿತ ಕಾಪಾಡುವದು ಒತ್ತಟ್ಟಿಗಿರಲಿ, ವಿರೋಧವನ್ನೇ ಒಡ್ಡಿದ್ದಾರೆ. ಹಿಂದೀ ರಾಷ್ಟ್ರೀಯ ಸಭೆಯು

ಒಂದು ಸಾರೆ ಅನುಭವದಿಂದಲೇ ಸತ್ಯತೆಯು ತಿಳಿಯುವದು

[ಆತ್ಮಪ್ರೇರಣೆಯಿಂದ ಕೇರಳ ಪಾಶ್ಚಾತ್ಯ ಪದ್ಧತಿಗಳಿಂದ ಪರೀಕ್ಷಿಸಿದ]

ಭಾವೀ ಫಲದಿಗ್ದರ್ಶನ.

ನಮ್ಮಾಲಯದಲ್ಲಿ ಜನ್ಮ ಟಿಪ್ಪಣಿಯನ್ನಾಗಲಿ, ಜನ್ಮ ವೇಳೆಯನ್ನಾಗಲಿ ಇಲ್ಲವೆ ಪತ್ರ ಬರೆದ ವೇಳೆ, ಅಜನಾಸ ಸ್ಥಾನ ಬರೆದು ಕೇಳಿದ ಸಿದ್ಧ ಮುಹೂರ್ತ ತಕ್ಕ ಫಲ ತಯಾರಿಸಿ, ವ್ಹಿ ಪಿ ಯಿಂದ ಕಳಿಸಲ್ಪಡುವದು

ವರ್ಷಫಲಂಕ್ಕೆ ಪೃಚ್ಛೆ ೧ಕ್ಕೆ ಮೇಳಾಮೇಳಿ ೧ಕ್ಕೆ
ರೂ. ೨-೮-೦ ೧-೪-೦ ೦ ೮-೦

ಇದಲ್ಲದೆ ಜಾತಕದ ಎಲ್ಲ ಕೆಲಸಗಳೂ ಗ್ರಹಶೋಧ, ಬಾಲಗ್ರಹ, ದೃಷ್ಟಿ, ಹಿಂದಿನ ಬಾಧೆ ಇವುಗಳ ನಿವಾರಣೆಗ ಉಪಾಯಗಳು, ತಕ್ಕ ರಕ್ಷೆಗಳೂ ತಯಾರಿಸಲ್ಪಡುತ್ತವೆ. ಅಪೇಕ್ಷೆಯುಳ್ಳವರು ಹೆಚ್ಚಿನ ಮಾಹಿತಿಗೆ ಸ್ಟಾಂಪು ಇಟ್ಟ ಪತ್ರ ದ್ವಾರ ಬರೆದಲ್ಲಿ ತಿಳಿಸಲ್ಪಡುವವು.

ವಿಳಾಸ.—

ಬ್ರಹ್ಮಣಸ್ಪತಿ ಜ್ಯೋತಿಷಾಲಯ,
ಪೋ - ಶಿರಾಳಿ (ಚಿತ್ರಾಪುರ) ಜಿ ಉ ಕಾನಡಾ

ವರು ನಡೆ ಸಿ ಕಡೆ ಅಲ್ಲಷ್ಟನ್ನು ಮಾಡಿದ್ದಾರೆ ಇಂಥದೊಂದು ಸಂಗತಿಯ ವಿಷಯದಲ್ಲಿ ಜಾತಿಯ ಮತಭಿಮಾನವೇ ಅಡ್ಡಬರುತ್ತದೆ. ಈ ದೃಷ್ಟಿಕೋನ ಬದಲಿದ ಹೊರತು, ದೇಶಕ್ಕೆ ಕ್ಷೇಮವಾಗದು ಹಿಂದುಸ್ಥಾನದಲ್ಲಿ ಕೆಲ ಪ್ರಾಮಾಣಿಕ ಸಾವಕಾರರಿದ್ದಾರೆ, ಎಂಬ ಸಂಗತಿ ಒಪ್ಪಿಗೆ. ಆದರೆ ಅಜ್ಞ ಒಕ್ಕಲಿಗರಿಗೆ ಮೋಸ ಮಾಡಿ ಸ್ವಾರ್ಥ ಸಾಧಿಸುವವರಿದ್ದಾರೆಂಬದನ್ನು ಮರೆಯಕೂಡದು ಕಾಯಿದೆ ಮಾಡಿ ಮೋಸಗಾರ ಸಾವಕಾರರಿಗೆ ಕಡಿವಾಣ ಹಾಕದನಕ ಒಕ್ಕಲಿಗರ ಋಣವಿಮೋಚನೆಯಾಗದೆಂದು ಮದ್ರಾಸ ಪ್ರಾಂತದ ರಾ| ಸ್ವಾ ರಾಮದಾಸ ಪಂತುಲು ರವರು ಒರೆಯುತ್ತಾರೆ ಸಾಲವನ್ನು ಕುಗ್ಗಿಸಿ ತೀರಿಸುವ ಯೋಜನೆಗಾಗಿ ಪ್ರಾಂತಿಕ ಸರಕಾರದವರು ಮೂವರದೊಂದು ಮಂಡಳವನ್ನು ಸ್ಥಾಪಿಸಿ ವಿಚಾರ ನಡಿಸಬೇಕು ಒಬ್ಬರು ಸ್ಥಾನಿಕ ಪ್ರಮುಖರು, ಎರಡನೇಯವರು ಕಾಯಿದೇ ಪಂಡಿತ ಜವಾಬದಾರರಿರಬೇಕು, ಮೂರನೇಯವರು ಸಹಕಾರಿ ಇಲಖೆ ಬೇಸಾಯ ಖಾತೆಯ ಅಧಿಕಾರಿಗಳಿರಬೇಕು ಸಾಲಗಾರ ರೈತರು ಈ ಮಂಡಳಕ್ಕೆ ಅರ್ಜಿ ಮಾಡಬೇಕು ಮಂಡಳದವರು ಆತನ ಆಸ್ತಿಯ ಉತ್ಪನ್ನವನ್ನೂ, ಸಾಲವನ್ನೂ ವಿಚಾರಿಸಿ ಹುಟ್ಟುವಳಿಯಿಂದ ಸಾಲ ತೀರಿಸುವದು ಅಸಾಧ್ಯವೆಂದು ಕಂಡೊಡನೆ ರಕ್ಷಾಪತ್ರ (*Protection certificate*) ಕೊಡಬೇಕು ೩ ವರ್ಷಗಳ ತನಕ ಈ ಒಕ್ಕಲಿಗರ ಮೇಲೆ ಸಾವಕಾರರು ನ್ಯಾಯಸ್ಥಾನಗಳಲ್ಲಿ ಇಲಾಜು ನಡಿಸಕೂಡದು ಆದರೆ, ಈ ಉಪಾಯದಿಂದ ಆಸ್ತಿವಂತ ಒಕ್ಕಲಿಗರಿಗೆ ಮಾತ್ರ ಸಾಲ ತೀರಿಸಲು ಅವಕಾಶ ಕೊಟ್ಟಂತಾಗುವದು ಉಳಿದವರಿಗೆ ಇದರಿಂದ ಪ್ರಯೋಜನ ದೊರೆಯದು. ಆದರಿಂದ ಈ ಮಂಡಳಕ್ಕೆ ವಿಮೋಚನ ಪತ್ರ (*clearing certificate*) ಹೊರಡಿಸುವ ಅಧಿಕಾರವಿರಬೇಕು ಮಂಡಳದವರು ಒಕ್ಕಲಿಗರ ಬರುವದು-ಕೊಡುವದುಗಳನ್ನು ವಿಚಾರಿಸಿ ಸಾಲ ತೀರಿಸುವದಸಾಧ್ಯವೆಂದು ಕಂಡೊಡನೆ ಆತನ ಸಂಸಾರಕ್ಕೆ ಅವಶ್ಯವಿದ್ದಷ್ಟು ಆಸ್ತಿಯನ್ನು ಆತನಿಗೆ ಬಿಟ್ಟು ಉಳಿದ ಆಸ್ತಿಯನ್ನು ಹರಾಜು ಮಾಡಿ ಆತನಿಗೆ ಋಣವಿಮೋಚನ ಮಾಡಬೇಕು ಸ್ಥಾವರ ಆಸ್ತಿಯ ಭದ್ರತೆಯುಳ್ಳ ಸಾಲಗಳನ್ನು ಮೊದಲು ತೀರಿಸಿ, ಹಣಪ್ರತಿವರ ಮಾತ್ರ ಭದ್ರತಯಿಲ್ಲದ, ಸಾಲಗಳನ್ನು ತೀರಿಸಬೇಕು ಸರಕಾರವು ಹಾಳುಬಿದ್ದ ಗ್ರಾಮಗಳಲ್ಲಿ ಜನವಸತಿಯಾಗುವಂತೆ ಧೋರಣವನ್ನಿಡಬೇಕು ಭೂಮಿ ಸಾಗುಮಾಡುವವರಿಗೆ ಅವಶ್ಯವುಳ್ಳ ದ್ರವ್ಯಸಹಾಯವನ್ನೀಯಬೇಕು ಅಲ್ಲಿ ಬೆಳೆದ ಬೆಳೆ ಪೇಟೆಗೆ ಒಯ್ಯಲು ಅವಶ್ಯವುಳ್ಳ ಸೌಕರ್ಯಗಳನ್ನು ನಿರ್ಮಿಸಬೇಕು ಕಂಡಕಂಡವರು ಸಾವಕಾರಿ ನಡಿಸದಂತೆ ಪ್ರತಿಬಂಧ ಮಾಡಬೇಕು ಸುಲಭವಾಗಿ ಸಾಲ ಸಿಗುವದರಿಂದ ಒಕ್ಕಲಿಗರಿಗೆ ಉಪದ್ರವವಾಗಿದೆ ಒಕ್ಕಲಿಗರು ತಮ್ಮ ಸಾಮರ್ಥ್ಯದ ವಿಚಾರ ಮಾಡದೆ ಹೆಚ್ಚೆಚ್ಚಿನ ಮುಪ್ಪು ಮಾಡಿ ನೂರಾರು ರೂಪಾಯಿಗಳನ್ನು ಪಡೆಯುತ್ತಾರೆ ಈ ಸಾಲ ತೀರಿಸಬೇಕೆಂಬ ವಿಚಾರವೇ ಅವರಿಗೆ ಹೊಳೆಯದು ಆದಕಾರಣ ಸಾಲ ಕೊಡುವವರು ಡಿ| ಮೆಜಿಸ್ಟ್ರೇಟರ ಕಡೆಯಿಂದ ಲೈಸನ್ಸು ಪಡೆಯಬೇಕೆಂದು ಕಾನೂನು ಮಾಡಬೇಕು ಲೈಸನ್ಸಿನ ಪದ್ಧತಿಯಿಂದ ಮೋಸಗಾರ ಸಾವಕಾರರಿಗೆ ಮೋಸ ಮಾಡ

ಜಾಹೀರ ವಿನಂತಿ.

ಪ್ರಪಂಚದಲ್ಲಿ ನೋಡದ-ಕೇಳದ! ವಿವಿಧ ಕೈಗಾರಿಕೆಗಳ ಅದ್ವಿತೀಯ!!

ಅಭೂತಪೂರ್ವ ಸಿಂಹಾಸನದ ಪ್ರದರ್ಶನ!!!

ಶ್ರೀಮದ್ರಾಮಚಂದ್ರಾಪುರ ಶ್ರೀಮನ್ಮಠ ಸಂಸ್ಥಾನಕ್ಕೋಸ್ಕರ ಈ ವರೆಗೆ ಪ್ರಪಂಚದಲ್ಲೆಲ್ಲಿಯೂ ನೋಡಲು ಸಿಗದ ಅಪೂರ್ವವಾದ ಆಸಯ ದಂತದ ಸಿಂಹಾಸನವೊಂದು ನೂತನವಾಗಿ ತಯಾರಿಸಿದ್ದರೆ ಮೈಸೂರ ಶ್ರೀಮನ್ಮಹಾರಾಜರನ್ನು ಆಗಾಗ್ಗೆ ತನ್ನ ಕೈಗಾರಿಕೆಯ ಜಾಣ್ಮೆಯಿಂದ ಆಶ್ಚರ್ಯಗೊಳಿಸಿ ಬಹುಮಾನಗಳನ್ನು ಪಡೆಯುತ್ತಿರುವ ಮೈಸೂರ ಸೀಮೆಯ ಪ್ರಕೃತಿ ಸೊರಬ ತಾಲೂಕಿನ ಚಿತ್ರಕಾರ ಹಿರಿಯಪ್ಪ ಮೊದಲಾದ ಅನೇಕ ಪ್ರಸಿದ್ಧ ಶಿಲ್ಪಿಗಳು ಶ್ರಾಸ್ತ್ರೀಯವಾಗಿ ತಯಾರಿಸಿದ್ದಾರೆ ಸಿಂಹಾಸನದಲ್ಲಿ ರಾಮಾಯಣ, ಮಹಾಭಾರತ ಭಾಗವತ ಮೊದಲಾದ ಗ್ರಂಥಗಳಲ್ಲಿಯ ಪ್ರಾಮುಖ್ಯವಾದ ನೂರಾರು ಸಂದರ್ಭಗಳ ಚಿತ್ರಗಳು ಕಲ್ಪನಾತೀತವಾದ ಕುಶಲತೆಯಿಂದ ಒಳ್ಳೆ ಅಚ್ಚುಕಟ್ಟಾಗಿ ಸೂಕ್ಷ್ಮ ರೀತಿಯಿಂದ ಕೊರೆಯಲ್ಪಟ್ಟಿವೆ ಚಿತ್ರಗಳ ಒಳಗಡೆಯಲ್ಲಿ ಎಷ್ಟು ಕಡೆ ಸಿದ್ಧಸ್ಥವಾದ ಬಂಗಾರದ ತಗಡುಗಳು ಕೂಡ್ರಿಸಲ್ಪಟ್ಟಿದ್ದು ಆ ತಗಡಿನ ಮೇಲೆ ಪಣ್ಣ-ದೊಡನೆ ಕೂಡ, ಪಣ್ಣದ ದಂತದ ಚಿತ್ರಗಳು ಒತ್ತ ನಮನಮೂನೆಯಾಗಿ ಕಂಗೊಳಿಸಿ ಪ್ರೇಕ್ಷಕರನ್ನು ಮಂಗುಬಡಿಸುತ್ತವೆ ಸಿಂಹಾಸನದ ಶಿರೋಭಾಗದ ಮಂತ್ರ-ಪಜ್ರಗಳಿಂದ ಸುಶೋಭಿತವಾಗಿದೆ ಒಟ್ಟಿನ ಕೆಲಸದಿಂದಲೂ, ಸೌಂದರ್ಯದ ಪರಮಾವಧಿಯಿಂದಲೂ ಒಡಗೂಡಿದ ಪ್ರಪಂಚದ ದರ್ಶನೀಯ ವಸ್ತುಗಳ ಒಳಗೆಲ್ಲ ಗಣಿಸಲ್ಪಟ್ಟ, ಇದರ ಉತ್ಪಾದಕರು ಶ್ರೀಮಠಾ ಸಂಸ್ಥಾನದ ಶಿಷ್ಯರಾದ ಹೊಸಬಾಳೆ ಪುಟ್ಟಪ್ಪನವರು ಇವರು ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಪ್ರೆಸಿಡೆಂಟರಾಗಿಯೂ, ಮೈಸೂರ ಅಸೆಂಬ್ಲಿಯ ಮೆಂಬರರಾಗಿಯೂ ಕೆಲಸ ಮಾಡಿದ ಪ್ರಖ್ಯಾತ ಪ್ರಜಾಸೇವಕರು ಕಳೆದ ವರ್ಷ ಸೊರಬದಲ್ಲಿ ಸಿಂಹಾಸನದ ಪ್ರದರ್ಶನವನ್ನು ತೆರೆದು ಆ ಭಾಗದ ದರ್ಶನೋತ್ಸಾಹಕರ ಲವಲವಿಕೆಯನ್ನು ಶಾಂತ ಮಾಡಿದರು ದರ್ಶನೋತ್ಸಾಹಕರ ಅನೇಕ ಮಹನೀಯರ ಅಪೇಕ್ಷೆಯ ಮೇರೆಗೆ ಶ್ರೀಕ್ಷೇತ್ರ ಗೋಕರ್ಣದ ರಥೋತ್ಸವ ಮಠದಲ್ಲಿ ಇದೇ ಸಪ್ಟಂಬರ ೧೫ನೇ ತಾರೀಖಿನಿಂದ ೩೦ನೇ ತಾರೀಖಿನ ವರೆಗೆ ಪ್ರದರ್ಶನ ನಡಸಬೇಕೆಂದು ನಿಶ್ಚಿತವಾಗಿದೆ ದರ್ಶನ ಪಾಕ್ಷಿಗಳು ಈ ಅವಧಿಯೊಳಗೆ ಬಂದು ಸಿಂಹಾಸನದ ಪ್ರದರ್ಶನದ ಸಹಿತ ಸರ್ವಾಲಂಕಾರ ಭೂಷಿತ ಶ್ರೀಪಟ್ಟದ ರಾಮಚಂದ್ರ ದೇವರ ದರ್ಶನವನ್ನು ಪಡದು ಶ್ರೇಯಸ್ಸಿಗೆ ಪಾತ್ರರಾಗಬೇಕು ವಿಶೇಷ ಮಾಹಿತಿ ಶ್ರೀರಥೋತ್ಸವ ಮಠದ ವ್ಯವಸ್ಥಾಪಕರಿಂದ ದರ್ಶನ ಸಮಯಕ್ಕೆ ತಿಳಿಯುವದು

ಪ್ರದರ್ಶನದ ವೇಳೆ -

ಪ್ರಾತಃಕಾಲ ೭ರಿಂದ ೧೧ರ ವರೆಗೆ,

ಮಧ್ಯಾಹ್ನ ೩ ರಿಂದ ರಾತ್ರಿ ೯ ಘಂಟೆಯ ವರೆಗೆ

ಶ್ರೀ ರಥೋತ್ಸವಮಠ,
ಗೋಕರ್ಣ,
ತಾ ೧೦-೯-೩೪

ಮನೇಜರ,

ಎಚ್. ಸುಬ್ರಾವ್, ಸೊರಬ.

ಒರದ ಮಹಾ ಸೇವಜದ ಆಸ್ತಿದಕಾರ್ಯಗಳಿಗಾಗಿ ಅವರ ಪ್ರಯತ್ನದ ಫಲವನ್ನು ಸಹಕಾರಿ ಸಂಘಗಳು ಮಾಡುವದಿಲ್ಲವಾದ್ದರಿಂದ ಒಕ್ಕಲಿಗರು ಇಂಥ ಬಿಕ್ಕಟ್ಟಿನಲ್ಲಿ ಸಾವಕಾರರ ಕಾಲು ಹಿಡಿಯಬೇಕಾಗುತ್ತದ ರಲ್ಲಿ ಕಾಮೂನದ ಮಧ್ಯಕಾಲದಲ್ಲಿ ಯುರೋಪ ಖಂಡದ ಒಕ್ಕಲಿಗರ ಸ್ಥಿತಿಯೂ ಹೀಗೆಯೇ ಇತ್ತು ಸರಕಾರದ ಪ್ರಚಾರದಿಂದಲೂ, ಸಾವಕಾರರ ನಿಯಂತ್ರಣದಿಂದಲೂ ಅಲ್ಲಿಯ ಸ್ಥಿತಿ ಸುಧಾರಿಸಿದ ಅದರಂತೆ ಇಲ್ಲಿಯೂ ನಡಕೊಂಡಲ್ಲಿ ದೇಶಕ್ಕೆ ಕ್ಷೇಮವಾಗುವದು ರಾ|| ಯು ರೇತಿಯವರ ವಿಚಾರಗಳು ವಿಚಾರಾರ್ಹವಿವೆ ಈ ಗ್ರಂಥಕ್ಕೆ ಹಿಂದುಸ್ಥಾನ ಸರಕಾರದ ಪ್ರಚಾರ ಖಾತೆಯ ಮುಖ್ಯಸ್ಥರಾಗಿದ್ದ ಮಿ| ಕೋಟಮನ್‌ರವರು ಪ್ರಸ್ತಾವನ ಬರೆದಿದ್ದಾರೆ ಹಿಂದುಸ್ಥಾನ ಸರಕಾರದ ವ್ಯಾ-ಕಮಿಶನರರಾದ ಸರ್ ಭೂಪೇಂದ್ರನಾಥ ಮಿತ್ರರವರು ಮುನ್ನುಡಿ ಬರದು ಗ್ರಂಥಕ್ಕೆ ಶೋಭೆ ವರ್ಧವನ್ನಿತ್ತಿದ್ದಾರೆ ಮೇಲಾಗಿ, ರಾ| ಯುರೇತಿಯವರು ಆಸ್ಟ್ರೇಲಿಯಾ, ನ್ಯೂಝಿಲೆಂಡ, ದಕ್ಷಿಣ ಆಫ್ರಿಕಾ ಮೊದಲಾದ ಕಡೆ ಸಂಚರಿಸಿ ಅಲ್ಲಲ್ಲಿಯ ಒಕ್ಕಲಿಗರ ಸ್ಥಿತಿಯನ್ನೂ, ಅದನ್ನು ಸುಧಾರಿಸುವದಕ್ಕಾಗಿ ಅಲ್ಲಲ್ಲಿಯ ಸರಕಾರಗಳು ಕೈಕೊಂಡ ಉಪಾಯಗಳನ್ನು ಪರಾಂಬರಿಸಿ ಬರೆದ ಗ್ರಂಥವಿದು ಈ ಗ್ರಂಥದಲ್ಲಿ ಬೇರೆ ಬೇರೆ ದೇಶಗಳೊಳಗಿನ ವಿವರ ಕೊಟ್ಟಿದೆ ಆ ವಿವರ ಈ ಮುಂದೆ

Siromani Udipi Narayanacharya
CHAUKHAMBA BENARES CITY.

ಮಾರ್ಕಂಡೇಯ ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕಂಠಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಹೋದಂತೆ ಕ್ರಯ ಹೆಚ್ಚುವದು. ಕಂಠಿ ಸರ 32 ರ 1ಕ್ಕೆ ರೂ 0 8 0ಯಿಂದ ರೂ. 100 ವರೆಗೆ ಗೌರಿಶಂಕರ 1ಕ್ಕೆ ರೂ. 3-8 0ರಿಂದ 35ರ ವರೆಗೆ ಮತ್ತು ದೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ, 1ಕಾಶೀ ನಕ್ಷೆ 1 ವಿಶ್ವೇಶ್ವರನ ಪಟ ನಮ್ಮ ಕೆಟಲಾಗು ಸಹ ಇನಾಂ ಕಳಿಸಲಾಗುವದು. ಪತ್ತೆ-

ಶಿರೋಮಣಿ ನಾರಾಯಣಾಚಾರ್ಯ,

ಚೌಕಾಂಬಾ, ಕಾಶೀ ಕ್ಷೇತ್ರ

ಈಗಿನ ಪ್ರಪಂಚ.

ಸಂಧಿಯಾಗಲಿಲ್ಲ!

ಅಂತು ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೂ ಮಾಲವೀಯ-ಅಣೇರವರು ನೂತನವಾಗಿ ಸ್ಥಾಪಿಸಿದ ರಾಷ್ಟ್ರೀಯ ಪಕ್ಷಕ್ಕೂ ಸಂಧಿಯಾಗಲಿಲ್ಲ ಕಳೆದ ತಾ ೮ನೇ ಶನಿವಾರದಿಂದ ಮಂಗಳವಾರದ ತನಕ ೪ ದಿನ ಕೊಂಗ್ರೆಸ ಕಾರ್ಯಕಾರಿ ಮಂಡಳದವರೂ, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರೂ, ಪಂಡಿತ ಮಾಲವೀಯ ಅಣೇರವರೂ ಒಕ್ಕಟ್ಟಾಗುವದಕ್ಕಾಗಿ ಯಾವತ್ತೂ ಪ್ರಯತ್ನಗಳನ್ನು ಮಾಡಿದರು ಮಹಾತ್ಮರೂ, ಸರದಾರ ವಲ್ಲಭಭಾಯಿ ಪಟೇಲ, ಶ್ರೀ| ಭುಲಾಭಾಯಿ ದೇಸಾಯಿ, ಡಾ| ವಿಧಾನಚಂದ್ರ ರಾಯ್, ಮೌ| ಅಬುಲ್ ಕಲಾಮ್ ಆಝಾದ ಮೊದಲಾದ ಮಹನೀಯರೂ ರಾಷ್ಟ್ರೀಯ ಸಭೆಯವರೊಳಗೆ ನಿಷ್ಕಾರಣವಾಗಿ ಬಿಕ್ಕಟ್ಟಾಗದಂತೆ ಏರ್ಪಾಟು ಮಾಡುವದಕ್ಕಾಗಿ ಬಹಳ ಪ್ರಯತ್ನ ಮಾಡಿದರು ಇತ್ತಂಡದ ಮೂಲ ತತ್ವಗಳು ಭಿನ್ನವಾದ್ದರಿಂದ ಸಂಧಿಯೊದಗಲಿಲ್ಲ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಪಂಡಿತ ಮಾಲವೀಯರವರಿಗೂ, ಶ್ರೀ| ಅಣೇಯವರಿಗೂ ಕರಿಸಿಕೊಂಡು ದೀರ್ಘ ಕಾಲದ ತನಕ ಆಲೋಚನ ನಡಿಸಿದರು ಜಾತೀಯ ನಿರ್ಣಯದ ಕುರಿತು ತಿರಸ್ಕಾರವಾಗಲಿ, ಪುರಸ್ಕಾರವಾಗಲಿ ಮಾಡುವದು ರಾಷ್ಟ್ರೀಯ ಸಂಸ್ಥೆಗೆ ಅನುಚಿತವಾದದ್ದರಿಂದ ಪಂ| ಮಾಲವೀಯ ಅಣೇಯವರೊಡನೆ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಸಂಧಿ ಮಾಡುವದು ಸಾಧ್ಯವಾಗಲಿಲ್ಲ ಮಹಾತ್ಮರು ಮಧ್ಯಸ್ಥಿಕೆಯ ಮತ್ತೊಂದು ಮಾರ್ಗವನ್ನು ಸೂಚಿಸಿದರು ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ತಮ್ಮ ಉಮೇದ್ವಾರರ ಯಾದಿ ತಯಾರಿಸಬೇಕು ಮಾಲವೀಯ-ಅಣೇರವರು ತಮ್ಮ ಉಮೇದ್ವಾರರ ಯಾದಿಯನ್ನು ಪಾರ್ಲಿಮೆಂಟರಿ ಬೋರ್ಡಿಗೆ ಕೊಡಬೇಕು, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರಿಗಿಂತ ಪ್ರತಿಪಕ್ಷದ ಉಮೇದ್ವಾರರು ಗೆಲ್ಲುವಂತಿದ್ದರೆ ಪಾರ್ಲಿಮೆಂಟರಿ ಬೋರ್ಡಿನವರು ಆಯಾ ಮತದಾರ ಮಂಡಳಗಳಲ್ಲಿ ಹೋರಾಟ ನಡಿಸಕೂಡದು, ಅದರಂತೆ ಇತ್ತಂಡದ ಉಮೇದ್ವಾರರ ಯಾದಿ ತಯಾರಾಯಿತು ಪಾರ್ಲಿಮೆಂಟರಿ ಬೋರ್ಡಿನ ಯಾದಿಗಿಂತ ಅಣೇ ಮಾಲವೀಯರ ಯಾದಿಯಲ್ಲಿ ಗೆಲ್ಲುವಂಥ ಉಮೇದ್ವಾರರಿಲ್ಲವಾಗಿ ಡಾ| ರಾಯ್‌ರವರೂ, ಶ್ರೀ| ಭುಲಾಭಾಯಿ ದೇಸಾಯಿಯವರೂ ಅಭಿಪ್ರಾಯಪಟ್ಟು, ಹಾಗೆಯೇ ಮಹಾತ್ಮರಿಗೆ ಖಚಿತ ಮಾಡಿಕೊಂಡರು ಆದರಿಂದ ಇತ್ತಂಡದ ತತ್ವಕ್ಕೆ ಭಂಗವಾಗದಂತೆ ಮಹಾತ್ಮರು ಸೂಚಿಸಿದ ಸಂಧಿ ಮಾರ್ಗವು ಸಾರ್ಥಕವಾಗಲಿಲ್ಲ ಈ ಮೂಲಕ ಮಹಾತ್ಮರಿಗೂ, ಪಂಡಿತ ಮಾಲವೀಯರಿಗೂ ವಿತುಷ್ಟವಾಗಿರಬೇಕೆಂದು ಒಂದು ವಾರ್ತೆ ಹಬ್ಬಿತ್ತು. ಅಂಥ ಪ್ರಕಾರವೇನಿಲ್ಲವಾಗಿ ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ| ಮಹಾದೇವಭಾಯಿಯವರು ಪ್ರಕಟಿಸಿದ್ದಾರೆ ಮಹಾತ್ಮರು ಅಜಾತಶತ್ರುಗಳು, ಪಂಡಿತ ಮದನಮೋಹನ ಮಾಲವೀಯರಿಗೆ ಸಂತಾಪವೇನೆಂಬ ಸಂಗತಿ ಗೊತ್ತಿಲ್ಲ ಇಬ್ಬರೂ ವಿಶಾಲ ಅಂತಃಕರಣದವರು ದೇಶದ ಕ್ಷೇಮಕ್ಕಾಗಿ ತತ್ವನೆಂದು ಮನೋದೇವತೆಯ ಆಜ್ಞೆಯನ್ನು ಉಲ್ಲಂಘಿಸಲಾಗದೆ ಒಂದು ಪಕ್ಷದಿಂದ ಹೋರಾಡಬೇಕಾಗಿದೆ, ಇಷ್ಟೇ! ಮಹಾತ್ಮರ ಅಥವಾ ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಸೂಯದಿಂದ ಪಂಡಿತ ಮಾಲವೀಯರು ರಾಷ್ಟ್ರೀಯ ಪಕ್ಷವನ್ನು ನಿರ್ಮಿಸಿಕೊಂಡಿಲ್ಲ, ಮಹಾತ್ಮರಾದರೂ ತಮ್ಮ ಹಟದಿಂದ ಕೊಂಗ್ರೆಸ ಕಮಿಟಿಯ ತಟಸ್ಥವೃತ್ತಿಯ ನಿರ್ಣಯವನ್ನು ಪುರಸ್ಕರಿಸುವದಿಲ್ಲ ತಟಸ್ಥ ವೃತ್ತಿಯಿಂದ ದೇಶಕ್ಕೆ ಕ್ಷೇಮವಿರುವದಾಗಿ ಮಹಾತ್ಮರ ಅಂಬೋಣ ತಟಸ್ಥ ವೃತ್ತಿಯಿಂದ ದೇಶಹಿತ ಘಾತವಾಗುವದಾಗಿ ಪಂಡಿತ ಮಾಲವೀಯರ ಮಾತು ಈ ಪ್ರಕಾರ ಮತಭೇದವಿದ್ದಾಗ್ಯೂ, ಮತೈಕ್ಯವಾಗದಿದ್ದಾಗ್ಯೂ ಮಹಾತ್ಮರಿಗೆ ಇಲೆಕ್ಷನ್ ಸಂಗ್ರಾಮದಲ್ಲಿ ರಾಷ್ಟ್ರೀಯ ಸಭೆಯವರು ಬೇರೆ ಬೇರೆಯಾಗಿ ಹೋರಾಡುವದು ಇಷ್ಟವಿಲ್ಲ ಇದನ್ನು ತಗಹರಿಸಿಕೊಳ್ಳಬೇಕೆಂದು ಮಹಾತ್ಮರು ನಿರ್ಧರಿಸಿದ್ದಾರೆ ತಗಹರಿಸುವ ಮಾರ್ಗವೊಂದನ್ನು ಮಹಾತ್ಮರು ಸೂಚಿಸಿ ಪಂಡಿತ ಮಾಲವೀಯರಿಗೆ ಒಂದು ಪತ್ರ ಬರೆದಿರುವದಾಗಿ ಪ್ರಸಿದ್ಧವಾಗಿದೆ ಸಧ್ಯಕ್ಕೆ ಪಂಡಿತ ಮದನಮೋಹನ ಮಾಲವೀಯರವರೂ, ಶ್ರೀ| ಮಾಧವರಾವ ಅಣೇಯವರೂ, ಶ್ರೀ| ಸುಭಾಸಚಂದ್ರ ಬೋಸರವರ ಸಹೋದರರಾದ ಶ್ರೀ| ಶರಚ್ಚಂದ್ರ ಬೋಸರವರೂ ಉಮೇದ್ವಾರರಾಗಿ ನಿಂತಲ್ಲಿ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರು ನಿಲ್ಲಕೂಡದೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳದ ಆಜ್ಞೆಯಾಗಿದೆ ರಾಷ್ಟ್ರಹಿತೇಚ್ಛುಗಳು ತಾತ್ವಿಕ ಭೇದದ ವೃತ್ತಿ ಹಿಡಿದು ಕಾರ್ಯ ನಡಿಸಿದ್ದಲ್ಲಿ ತತ್ವಭೇದವಿದ್ದಾಗ್ಯೂ, ವಿತುಷ್ಟವು ಹುಟ್ಟದಿಲ್ಲವೆಂಬುದಕ್ಕೆ ಇದೇ ಉದಾಹರಣೆ ಮಹಾತ್ಮರ ಐಕ್ಯಮತ್ಯದ ಪ್ರಯತ್ನವು ಸಫಲವಾಗಲೆಂದೂ, ಸಫಲವಾಗಬೇಕೆಂದೂ ಎಲ್ಲರೂ ಹಾರೈಸುತ್ತಾರೆ

* * *

ಕೊಂ| ಕಾ| ಮಂಡಳದ ನಿರ್ಣಯಗಳು

ಶನಿವಾರ ರಾತ್ರಿ ಮಾತು-ಕತೆಯಲ್ಲಿಯೇ ಇಡೀ ದಿನ ಕಳೆಯಿತು ರವಿವಾರ ಮಾಲವೀಯ-ಅಣೇ ಪ್ರಕರಣದ ಚರ್ಚೆಯಾಗಿ ಮೇಲ್ಕಾಣಿಸಿದಂತೆ ಸಂಧಿಯಾಗದೆಂಬ ನಿರ್ಣಯವಾಯಿತು. ಸೋಮವಾರ ಮಹಾತ್ಮರ ಮೌನವ್ರತದ ದಿನ. ಆ ಸಭೆ ಸೇರಲಿಲ್ಲ ಮಂಗಳವಾರ ಸಭೆ ಸೇರಿತು. ಆ ಸಭೆಯಲ್ಲಿ ಮಹಾತ್ಮರ ಘೋಷಣದ ವಿಚಾರವಾಯಿತು ರಾಷ್ಟ್ರೀಯ ಸಭೆಯ ಚಾಲಕ ಸ್ಥಾನವನ್ನು ಬಿಟ್ಟುಬಿಡಬೇಕಾಗಿ ಮಹಾತ್ಮರು ಕಲ್ಪಿಸಿದ್ದರು ೫ ತಾಸುಗಳ ತನಕ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಈ ಹಿಂದಿನಂತೆ ಇನ್ನೂ ಮುಂದೆಯೂ ರಾಷ್ಟ್ರೀಯ ಸಭೆಯನ್ನು ನಡಿಸಬೇಕಾಗಿ ಮಹಾತ್ಮರಿಗೆ ಪರಿಪರಿಯಿಂದ ಹೇಳಿಕೊಂಡರು ಮಹಾತ್ಮರು ಮುಂಬಯಿ ರಾಷ್ಟ್ರೀಯ ಸಭೆಯ ಅಧಿವೇಶನದ ತನಕ ರಾಷ್ಟ್ರೀಯ ಸಭೆಯ ಮಾರ್ಗದರ್ಶಕರಾಗಿರಲು ಒಪ್ಪಿಕೊಂಡಿದ್ದಾರೆ. ಕಾರ್ಯಕಾರಿ ಮಂಡಳದವರು ಆ ದಿನ ಕೈಕೊಂಡ ನಿರ್ಣಯಗಳ್ಯಾವವೆಂದರೆ — (೧) ಝಾಂಝಿಬಾರದೊಳಗೆ ಹಿರಿಯರ ಕಾಲದಿಂದ ಮನೆಮಾರು ಮಾಡಿಕೊಂಡಿದ್ದ ಹಿಂದೀ ರಹಿವಾಸಿಗಳ ಸ್ಥಾವರ ಆಸ್ತಿಯ ಅಪಹಾರದ ಕುರಿತು ಝಾಂಝಿಬಾರ ಸರಕಾರವು ಮಾಡಿದ ಕಾನೂನುಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಮಿ| ಎಂಡ್ರ್ಯೂಜರವರ ಕಡೆಯಿಂದ ತಿಳಕೊಂಡು ಹಿಂದೀ ರಹಿವಾಸಿಗಳೊಡನೆ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ, ಮತ್ತು ಈ ಆಪತ್ತಿನ ವಾರಣೆಗಾಗಿ ಮಿ| ಎಂಡ್ರ್ಯೂಜರವರು ಕೈಕೊಂಡ ಯಾವತ್ತೂ ಪ್ರಯತ್ನಗಳ ಬಗ್ಗೆ ಅವರಿಗೆ ಕೃತಜ್ಞತೆಯನ್ನು ಪ್ರದರ್ಶಿಸುತ್ತಾರೆ ಇದೇ ರೀತಿ ಹಿಂದೀಯರ ಬಗ್ಗೆ ಅವರು ಪ್ರಯತ್ನಿಸುತ್ತಿರಬೇಕಾಗಿಯೂ ಮಂಡಳದವರು ಕೇಳುತ್ತಾರೆ (೨) ದೇಶದೊಳಗಿನ ಯಾವತ್ತೂ ಕೊಂಗ್ರೆಸ ಸಂಸ್ಥೆಗಳು ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರಿಗೇ ಮತ ಸಿಗುವಂತೆ ಪ್ರಯತ್ನ ಮಾಡಬೇಕು ಇತರರಿಗೆ ಇಲ್ಲವೆ ಇತರ ಪಕ್ಷದವರಿಗೆ ಯಾವದೇ ಕಾರಣದಿಂದ ರಾಷ್ಟ್ರೀಯ ಸಭೆಯ ಧೋರಣಕ್ಕೆ ವಿರುದ್ಧವಾಗಿ ಸಹಾಯ ಮಾಡಕೂಡದು (೩) ರಾಷ್ಟ್ರೀಯ ಸಭೆಯ ಪೂರ್ಣ ಸ್ವರಾಜ್ಯ ಧ್ಯೇಯದಲ್ಲಿ ಹೆಚ್ಚು-ಕಡಿಮೆಯಾಗಿರುವದಾಗಿ ಕೆಲವರು ಸಂದೇಹಪಡುತ್ತಾರೆ ಹೀಗೆ ರಾಷ್ಟ್ರೀಯ ಸಭೆಯವರು ಎಂದಿಗೂ ವರ್ತಿಸಲಾಗದು ಪೂರ್ಣ ಸ್ವರಾಜ್ಯ ಧ್ಯೇಯವನ್ನು ಯಾವಾಗಲೂ ದೃಷ್ಟಿಯಾಗಿಟ್ಟುಕೊಂಡು ಅದಕ್ಕೆ ಪೋಷಕವಾಗುವಂತೆಯೇ ವರ್ತಿಸಬೇಕು ಪೂರ್ಣ ಸ್ವರಾಜ್ಯವನ್ನು ಸಂಪಾದಿಸಲಿಕ್ಕೆ ಸತ್ಯ ಮತ್ತು ಅಹಿಂಸೆಯ ಆಶ್ರಯಕೊಳ್ಳಬೇಕು ಇದಕ್ಕಾಗಿ ಕೊಂಗ್ರೆಸ ಕಾರ್ಯಕಾರಿ ಮಂಡಳದವರೂ ಅಖಿಲ ಭಾರತ ಕೊಂಗ್ರೆಸ ಕಮಿಟಿಯವರೂ ಕಾಲಕಾಲಕ್ಕೆ ಹೊರಡಿಸುವ ಸೂಚನೆಗಳಂತೆ ವರ್ತಿಸಬೇಕು ಪೂರ್ಣ ಸ್ವರಾಜ್ಯವೆಂದರೆ ಸೈನ್ಯ, ವ್ಯಾಪಾರ, ಜಮಾಬಂದಿ, ಪರದೇಶ ವ್ಯವಹಾರಗಳನ್ನು ಸ್ವತಂತ್ರವಾಗಿ ನಡಿಸುವ ಅಧಿಕಾರ ಗ್ರಹಣ ಬ್ರಿಟಿಶರೊಡನೆ ಸಂಬಂಧವಿಡುವದು ಯಾ ತುಂಡರಿಸುವದು ಸ್ವತಂತ್ರ ಹಿಂದುಸ್ಥಾನದ ಮರ್ಜಿಯ ಮೇಲಿರಬೇಕು ರಾಷ್ಟ್ರೀಯ ಸಭೆಯವರು ನ್ಯಾಯದಂತೆ ಸಲ್ಲತಕ್ಕ ಸಾಲವನ್ನು ಸ್ವೀಕರಿಸುವರು ಬ್ರಿಟಿಶರು ಕೊಂಡ ಸಾಲಗಳ ಯುಕ್ತಾಯುಕ್ತತೆ, ನ್ಯಾಯಾನ್ಯಾಯಗಳ ವಿಚಾರವಾಗಿ ನ್ಯಾಯವಂತ ಇತ್ಯರ್ಥವಾದ ಸಾಲಗಳನ್ನಷ್ಟೇ ತೆರಬೇಕಾಗುತ್ತದೆ ಈ ಘಟನೆಯಾದ ಬ್ರಿಟಿಶ ಸಾಮ್ರಾಜ್ಯವು ಪ್ರಾಯಶಃ ಹಿಂದೀಯರಿಗೆ ನಷ್ಟವಾಗುವಂತೆ, ಬ್ರಿಟಿಶರಿಗೆ ಲಾಭವಾಗುವಂತೆ ಏರ್ಪಾಟಾಗಿರುವದಾಗಿ ರಾಷ್ಟ್ರೀಯ ಸಭೆಯು ಈ ಹಿಂದಿನಿಂದ ಹೇಳುತ್ತ ಬಂದಿದೆ ಬ್ರಿಟಿಶರೊಡನೆ ಸ್ನೇಹಭಾವದ ಸಂಬಂಧವು ರಾಷ್ಟ್ರೀಯ ಸಭೆಗೆ ಸಂತೋಷವಿದೆ, ಆದರೆ, ಈಗಿನ ಅಸ್ವಾಭಾವಿಕ ಹಾಗು ಅಸಮಾನತ್ವದ ಸಂಬಂಧವನ್ನು ಅಂತ್ಯಗೊಳಿಸುವದಕ್ಕಾಗಿ ರಾಷ್ಟ್ರೀಯ ಸಭೆಯು ಪರಮಾವಧಿಯ ಪ್ರಯತ್ನ ನಡಿಸೀತು ಕೊಂಗ್ರೆಸ ಕಾರ್ಯಕಾರಿ ಮಂಡಳದವರ ಕಾಲಕಾಲಕ್ಕೆ ಹೊರಡಿಸಿದ ವಿಧಾಯಕ ಕಾರ್ಯಕ್ರಮವನ್ನು ಪುರಸ್ಕರಿಸಿ ನೈತಿಕ ಸ್ವಾತಂತ್ರ್ಯ ಸಂಗ್ರಹಿಸಿದನಕ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯಾಗದೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ಈ ಹಿಂದೆ ಮಾಡಿದ ನಿರ್ಧಾರವನ್ನು ನೆನಪು ಮಾಡುತ್ತದೆ. ರಾಷ್ಟ್ರೀಯ ಸಭೆಯು ಜನಸಾಮಾನ್ಯರ ಪ್ರಾತಿನಿಧಿಕ ಸಂಸ್ಥೆ, ಲೋಕಸೇವೆಯಿಂದಲೇ ರಾಷ್ಟ್ರೀಯ ಸಭೆಗೆ ಪ್ರಾತಿನಿಧಿಕ ಅಧಿಕಾರ ದೊರಕುತ್ತದೆ, ಆದರಿಂದ ವಿಧಾಯಕ ಕಾರ್ಯಕ್ರಮವನ್ನು ರಾಷ್ಟ್ರೀಯ ಸಭೆಯವರು ಜಾಗ್ರತೆಯಿಂದಲೂ, ಭಕ್ತಿಯಿಂದಲೂ ಪುರಸ್ಕರಿಸಬೇಕು

*

(ಮುಂದೆ ೧೧ ನೇ ಪಾನಿನ ಮೇಲೆ ಮುಂದರಿಸಿದೆ)

ಕಾನಡಾವೃತ್ತ.

ವಿ.ತಿ ಭಾವ ಸಂ। ಭಾದ್ರಪದ ಶು॥ ೯ಮಿ, ಸೋಮವಾರ

ಮುಂಜಾಗ್ರತೆ.

ರಾಷ್ಟ್ರೀಯ ಸಭಾಭಿಮಾನಿಗಳೆಲ್ಲರೂ ಬಹು ಜಾಗರೂಕರಾಗಿ ವರ್ತಿಸುವ ಸಮಯ ಬಂದಿದೆ. ರಾಷ್ಟ್ರೀಯ ಸಭೆಯವರೊಳಗುಂಟಾದ ಮೇಲಾಟವನ್ನು, ರಾಷ್ಟ್ರೀಯ ಸಭೆಯವರು ಕೈಕೊಳ್ಳುವ ಕಾರಸ್ಥಾನಗಳನ್ನು, ಪ್ರಾಂತಿಕ ಕೊಂಗ್ರೆಸ ಕಮೀಟಿಗಳ ಇಲೆಕ್ಷನುಗಳಲ್ಲಿ ತೋರಿಬಂದ ಅನೀತಿಯ ಆಕ್ರಮಗಳನ್ನು ಮಹಾತ್ಮರು ತಿಳಿದು ಬಹು ಬೇಸರಗೊಂಡಿದ್ದಾರೆ. ರಾಷ್ಟ್ರೀಯ ಸಭೆಯವರಲ್ಲಿ ಶಿಸ್ತಿಲ್ಲ, ವಿಧೇಯತೆಯಿಲ್ಲ, ತಕ್ಕಷ್ಟು ಪ್ರಾಮಾಣಿಕತನವಿಲ್ಲ, ಸತ್ಯಪ್ರಿಯತೆಯಾಗಲಿ, ಅಹಿಂಸಾಭಕ್ತಿಯಾಗಲಿ ಇನ್ನೂ ಬೇರೂರಿಕೊಂಡಿಲ್ಲ, ಮುಂಬಯಿ, ಸಂಯುಕ್ತ ಪ್ರಾಂತ, ಬಂಗಾಲ ಮೊದಲಾದ ಕಡೆ ರಾಷ್ಟ್ರೀಯ ಸಭೆಯವರು ನಡಿಸಿದ ಯಾದವಿಯಿಂದ ಮಹಾತ್ಮರ ಅಂತಃಕರಣವು ತೀರ ನೊಂದುಕೊಂಡಿದೆ. ಅದಕ್ಕಾಗಿ ರಾಷ್ಟ್ರೀಯ ಸಭೆಯನ್ನು ಬಿಟ್ಟುಬಿಡಬೇಕೆಂದು ಮಹಾತ್ಮರು ಆಲೋಚಿಸಿದ ಸಂಗತಿ ಈಗ ಲೋಕವಿಶ್ರುತವಿದೆ. ರಾಷ್ಟ್ರೀಯ ಸಭೆಯು ಧ್ಯೇಯಕ್ಕನುಗುಣವಾಗಿ ನಡಕೊಳ್ಳುವದಿಲ್ಲೆಂದು ಮಹಾತ್ಮರ ಅಂಬೋಣ. ರಾಷ್ಟ್ರೀಯ ಸಭೆಯೊಳಗೆ ಅವಶ್ಯವುಳ್ಳ ಮಾರ್ಪಾಟು ಕೈಕೊಂಡು ರಾಷ್ಟ್ರೀಯ ಸಭೆಯವರ ಶೀಲ ಬೆಳಸಲು ಮಹಾತ್ಮರು ವಿಚಾರಮಗ್ನರಾಗಿರುತ್ತಾರೆ. ವರ್ಧಾದೊಳಗೆ ಸೇರಿದ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಮಹಾತ್ಮರ ಮನಸ್ಸೊಲಿಸದಿದ್ದರೆ, ಇಷ್ಟೊತ್ತಿಗ ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ಬಲಿಷ್ಠರಾದರೆಂದು ನಾವೆಲ್ಲರೂ ಓದಿ, ಮುಂದೇನು ? ಎಂದು ಕೇಳುವ ಪ್ರಸಂಗ ಒದಗುತ್ತಿತ್ತು. ಈ ಆಪತ್ತನ್ನು ಪರಿಹರಿಸಿದ ಬಗ್ಗೆ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ನಾವು ಹೃತ್ಪೂರ್ವಕ ಕೃತಜ್ಞರಾಗಿದ್ದೇವೆ. ಮುಂಬಯಿಯ ರಾಷ್ಟ್ರೀಯ ಸಭೆಯ ವರೆಗಾದರೂ ಮಹಾತ್ಮರು ರಾಷ್ಟ್ರೀಯ ಸಭೆಯ ಸೂತ್ರಚಾಲಕರಾಗಿರಲು ಒಪ್ಪಿಕೊಂಡ ಬಗ್ಗೆ ಜಗಚ್ಚಾಲಕನಿಗೆ ನಮ್ಮ ವಂದನೆಗಳು.

ಆದರೆ, ೧-೨ ತಿಂಗಳ ಅವಧಿಯಲ್ಲಿ ರಾಷ್ಟ್ರೀಯ ಸಭೆಯವರೆಲ್ಲರೂ ತಮ್ಮ ನಡತೆ ಸುಧಾರಿಸಬೇಕು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಅನುಜ್ಞೆಯಂತೆ ನಿಸ್ವಾರ್ಥವಾದ ಲೋಕಸೇವೆಯೇ ರಾಷ್ಟ್ರೀಯ ಸಭೆಯ ಅಧಿಕಾರಿಯಾಗಲು ಪಾತ್ರತೆಯೆಂಬದಾಗಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೈಕೊಂಡ ನಿರ್ಣಯವನ್ನು ಸರ್ವರೂ ಪರಾಂಬರಿಸತಕ್ಕದ್ದು. ಸಂಪೂರ್ಣ ಸ್ವಾತಂತ್ರ್ಯ ಪಡೆಯಬೇಕೆಂದ. ಉಬ್ಬಿದ್ದ ಭಾಷಣ ಮಾಡಿ ಪ್ರಯೋಜನವಿಲ್ಲ. ಜರ್ಮನಿಯ ಸರ್ವಸತ್ತಾಧಾರಿಗಳಾದ ಹರ್ ಹಿಟ್ಲರರವರು ಎಳೆ ಹುಡುಗರಿಗೆ ಉಪದೇಶಿಸಿದಂತೆ, ಲೋಕದಲ್ಲಿ ಯಾರೂ ಯಾರಿಗೂ ದಾನ ಮಾಡುವದಿಲ್ಲ, ಸ್ವಪರಾಕ್ರಮದಿಂದ ಇಷ್ಟಾರ್ಥವನ್ನು ಸಾಧಿಸಿಕೊಳ್ಳಬೇಕಾಗಿದೆ. ರಾಷ್ಟ್ರೀಯ ಸಭೆಯು ನಮ್ಮಿಂದ ಅಪೇಕ್ಷಿಸುವ ಕಾರ್ಯಕ್ರಮವಾವುದು? ವಿಧಾಯಕ ಕಾರ್ಯಕ್ರಮದ ಪುರಸ್ಕಾರ, ಖಾದಿಯ ಪ್ರಚಾರ, ಪರದೇಶಿ ಅರಿವೆಯ ಬಹಿಷ್ಕಾರ, ದೇಶೀ ಕೈಗಾರಿಕೆಗಳಿಗೆ ಉತ್ತೇಜನ, ಪರದೇಶಿ ಸರಕುಗಳ ತ್ಯಾಗ, ಸಮಾಜೈಕ್ಯ, ಜಾತಿ-ಜಾತಿಗಳೊಳಗೆ ಉಂಟಾದ ಕಲಹ ಕಾರಣಗಳನ್ನು ಪರಿಶೋಧಿಸಿ ಅವನ್ನು ಪರಿಹರಿಸುವದು, ಒಡಹುಟ್ಟಿದವರಿಗುಂಟಾಗುವ ತೊಡಕುಗಳನ್ನು ಸ್ವಾರ್ಥತ್ಯಾಗದ ಸಹಾಯದಿಂದ ಬಗೆಹರಿಸಿಕೊಳ್ಳುವದು, ರಾಷ್ಟ್ರೈಕ್ಯವನ್ನು ಅಭಿವೃದ್ಧಿಗೊಳಿಸುವದು. ಸಮಸ್ತ ಹಿಂದೀಯರೊಳಗ ಏಕರಾಷ್ಟ್ರೀಯ ಭಾವವನ್ನು ಹುಟ್ಟಿಸಿ ಸಂಪೂರ್ಣ ಸ್ವಾತಂತ್ರ್ಯದ ಅಭಾವದಲ್ಲಿ ಎಲ್ಲರಿಗೂ ಅಹಿತವಿರುವದಾಗಿಯೂ, ಪೂರ್ಣ ಸ್ವರಾಜ್ಯ ಪ್ರಾಪ್ತಿಯಾದ್ದಲ್ಲಿ ಸಮಸ್ತರ ಕಲ್ಯಾಣ ಸಾಧಿಸುವದಾಗಿಯೂ ರಾಷ್ಟ್ರೀಯ ಕಾರ್ಯಕರ್ತರು ಗ್ರಾಮಾಂತರಗಳಲ್ಲಿ ಬೋಧಿಸಿ ರಾಷ್ಟ್ರೀಯ ಸಭೆಯ ಸಂದೇಶವನ್ನು ದೇಶತುಂಬ ಬೀರಬೇಕು, ಎಂದಿಗೂ ಅಸತ್ಯಾಶ್ರಯ ಮಾಡಕೂಡದು, ಅಸಭ್ಯ ವರ್ತನೆ ಮಾಡಕೂಡದು, ಹಿಂಸೆಯನ್ನು ಕನಸಿನಲ್ಲಿ ಸಹ ಯೋಚಿಸಕೂಡದು. ಅಂದರೆ ಮಾತ್ರ ಮಹಾತ್ಮರಿಗೆ ಸಂತೋಷವಾಗಿ, ರಾಷ್ಟ್ರೀಯ ಸಭೆಯ ಸೂತ್ರಧಾರರಾಗಲು ಉತ್ಸಾಹವಿದೆ. ಹೀಗೆ ಮಹಾತ್ಮರು ಕೊಂಗ್ರೆಸ ಕಾರ್ಯಕಾರಿ ಮಂಡಳದ ಎದ್ಯಮಾನ ಅಖಿಲ ರಾಷ್ಟ್ರಕ್ಕೆ ಮುಂಜಾಗ್ರತೆ ಕೊಟ್ಟಿರುತ್ತಾರೆ. ಇದರಂತೆ ರಾಷ್ಟ್ರೀಯ ಸಭೆಯವರು ನಡಕೊಂಡದ್ದು ಮಹಾತ್ಮರಿಗೆ ತೋರಿಬರದಿದ್ದಲ್ಲಿ ಮಹಾತ್ಮರು ನಿಶ್ಚಯವಾಗಿಯೂ ರಾಷ್ಟ್ರೀಯ ಸಭೆಯೊಳಗಿಂದ ಅಲಿಪ್ತರಾಗಿ ಬಿಡುವರು. ರಾಷ್ಟ್ರೀಯ ಸಭೆಯ ಸೂತ್ರಧಾರರಾಗಿ ಮಹಾತ್ಮರು ನಡಿಸಿದ ದೇಶಸೇವೆ ಈಗ ಎಲ್ಲರಿಗೂ ವಿದಿತವಿದೆ. ಮಹಾತ್ಮರಂಥ ಲೋಕನಾಯಕರ ಅಭಾವದಲ್ಲಿ ರಾಷ್ಟ್ರೀಯ ಸಭೆಯು, ಬಿರುಗಾಳಿಯಲ್ಲಿ ಸಿಲುಕಿದ, ಚುಕ್ಕಾಣಿ ಮುರಿದ ಹಡಗದಂತೆ ಹೊಡೆದಾಡುತ್ತಿರಬೇಕಾದೀತು. ಇದನ್ನು ಸಮಸ್ತರೂ ಗ್ರಹಿಸಿ ನಡೆಕೊಳ್ಳಬೇಕಾಗಿ ವಿನಂತಿ.

ಇಷ್ಟರಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನ ಇಲೆಕ್ಷನು ಸಹ ಬಂತು. ಕೊಂಗ್ರೆಸ ಕಾರ್ಯಕಾರಿ ಮಂಡಳದ ನಿರ್ಣಯದಂತೆ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರು ಆಲ್ಲಲ್ಲಿ ಉಮೇದ್ವಾರರಾಗಿ ನಿಲ್ಲುವರು. ಅವರಲ್ಲರಿಗೆ ರಾಷ್ಟ್ರೀಯ ಸಭೆಯ ಅಭಿಮಾನವುಳ್ಳ ಯಾವತ್ತೂ ಮತದಾರರು ಮತ ಕೊಟ್ಟು ಆರಿಸಿ ಕಳುಹಬೇಕು. ರಾಷ್ಟ್ರೀಯ ಸಭೆಯವರಲ್ಲಿ ಇತ್ತಂಡಗಳಾದ್ದರಿಂದ ಬುದ್ಧಿಭೇದವಾಗುವ ಸಂಭವವಿದೆ. ಸುದೈವದಿಂದ ನಮ್ಮ ಕರ್ನಾಟಕ ಪ್ರಾಂತದೊಳಗೆ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ವಿರೋಧ ಮಾಡುವ 'ರಾಷ್ಟ್ರೀಯ' ಪಕ್ಷದ ಸ್ಥಾಪನೆಯಾಗಲಿಲ್ಲ, ಮುಂದೆ ಸ್ಥಾಪನೆಯಾಗಲಿಕ್ಕಿಲ್ಲವಾಗಿ ಹೇಳುವದು ಕಠಿಣ. ಅದು ಸ್ಥಾಪನೆಯಾಗಲಿ ಯಾ ಆಗದಿರಲಿ, ಅದರ ಗೊಡವೆಯನ್ನು ಯಾರೂ ಹಿಡಿಯಬಾರದು. ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರಿಗೆ ಕಣ್ಮುಚ್ಚಿ ಮತ ಕೊಟ್ಟು ರಾಷ್ಟ್ರೀಯ ಶಿಸ್ತನ್ನು ಕಾಪಾಡಬೇಕು. ರಾಷ್ಟ್ರೀಯ ಸಭೆಯು ರಾಷ್ಟ್ರಕಲ್ಯಾಣದ ಸಂಸ್ಥೆ. ಅದರ ಕಾರ್ಯಕ್ರಮ ಪುರಸ್ಕಾರದಿಂದ ಜನಾಂಗದ ಕಲ್ಯಾಣವಾಗಬೇಕು, ಎಂಬ ಭಾವನೆ ಹಿಡಿದು ಎಲ್ಲರೂ ನಡಕೊಳ್ಳಬೇಕು. ಕಾರ್ಯಕ್ರಮದ ಯುಕ್ತಾಯುಕ್ತತೆಯ ಕುರಿತು ವಿಚಾರ ಪ್ರದರ್ಶನ ಮಾಡಬಹುದು, ಆದರೆ ವಿಚಾರಾಂತ್ಯದಲ್ಲಿ ಕೈಕೊಂಡ ನಿರ್ಧಾರವನ್ನು ವ್ಯಕ್ತಿಗತ ವಿಚಾರಾಭಿಮಾನಕ್ಕೆ ಬಲಿಬೀಳದೆ ಎಲ್ಲರೂ ನಿರ್ಣಯವನ್ನು ಆಚರಿಸತಕ್ಕದ್ದು. ಸಂಸ್ಥೆಗಳು ಕಾರ್ಯಕ್ಷಮವಾಗುವದು ಹೀಗೆ! ಇಡೀ ದೇಶದೊಳಗಿನ ಸಮಸ್ತ ವ್ಯಕ್ತಿಗಳಲ್ಲಿ ಏಕಕಾಲಕ್ಕೆ ಏಕಮತ ಪ್ರಾದುರ್ಭೂತವಾಗುವದು ಯಾವಾಗಲೂ ದುರಾಪಾಸ್ತ. ಭಿನ್ನ ಭಿನ್ನ ಮತದವರು ಭಿನ್ನ ಭಿನ್ನ ಮಾರ್ಗಗಳನ್ನು ವ್ಯಕ್ತಿಸ್ವಾತಂತ್ರ್ಯ-ಮತಸ್ವಾತಂತ್ರ್ಯಕ್ಕೆ ಬಲಿಬಿದ್ದು ಪುರಸ್ಕರಿಸಿದರೆ, ರಾಷ್ಟ್ರೈಕ್ಯವು ಹಂಚಿಹೋಗಿ ಪೂರ್ಣಸ್ವರಾಜ್ಯವು ಹಸ್ತಗತವಾಗದು. ಈ ವಿಚಾರವನ್ನು ಎಲ್ಲರೂ ಗ್ರಹಿಸಬೇಕು. ಎರಡು ಬಾರಿ ಸಂಧಿ ಪ್ರಸ್ತಾವ ಮುರಿದುಹೋದಾಗ್ಯೂ ಪುನಃ ಮಹಾತ್ಮರು ಪಂಡಿತ ಮಾಲವೀಯರಿಗೆ ಪತ್ರ ಬರೆದು ಸಾಮೋಪಚಾರ ಮಾಡಬಯಸುವದಾದರೂ ಇದಕ್ಕಾಗಿಯೇ. ಆದರಿಂದ ರಾಷ್ಟ್ರೀಯ ಸಭೆಯವರಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ನಿರ್ಣಯದ ಬಗ್ಗೆ ಮತಭೇದವಿದ್ದಾಗ್ಯೂ, ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರ ಯೋಗ್ಯತೆಯ ಬಗ್ಗೆ ಮತ್ಯೈಕ್ಯವಿಲ್ಲದಿದ್ದಾಗ್ಯೂ ಅವರಿಗೇ ಮತ ಕೊಟ್ಟು ರಾಷ್ಟ್ರೀಯ ಸಭೆಯವರೊಳಗೆ ಶಿಸ್ತು ಇರುವದಾಗಿ ಸಿದ್ಧಪಡಿಸಬೇಕು. ಇದರಿಂದ ಮಹಾತ್ಮರಿಗೆ ಸಂತೋಷವಾಗುವದು, ರಾಷ್ಟ್ರೀಯ ಸಭೆಯವರಿಗೆ ಲೋಕಬೆಂಬಲ ತಿಳಕೊಳ್ಳಲನುಕೂಲವಾಗುವದು. ಮಹಾತ್ಮರ ಮೇಲಿನ ನಿಷ್ಠೆಯೂ, ರಾಷ್ಟ್ರೀಯ ಸಭೆಯ ಮೇಲಿನ ಭಕ್ತಿಯೂ ಒಮ್ಮೆಲೇ ಪ್ರದರ್ಶನ ಹೊಂದುವವು. ಮಹಾತ್ಮರಿಗೆ ರಾಷ್ಟ್ರೀಯ ಸಭೆಯಲ್ಲಿ ಉಳಕೊಳ್ಳಲು ಪ್ರೀತಿಯೆನಿಸುವದು. ಮುಂಜಾಗ್ರತೆಗಾಗಿ ಮಹಾತ್ಮರು ಈ ಅವಧಿ ಕೊಟ್ಟಿರುತ್ತಾರೆ. ರಾಷ್ಟ್ರೀಯ ಸಭೆಯವರಲ್ಲರೂ ಯಾವತ್ತೂ ಪರಿಸ್ಥಿತಿಯನ್ನು ಆಳವಾಗಿ ಪರಾಂಬರಿಸಿ ನಡಕೊಳ್ಳಬೇಕೆಂಗಿ ಪ್ರಾರ್ಥನೆ. ರಾಷ್ಟ್ರೀಯ ಸಭೆಯ ಮೇಲೆ ಬಂದ ಆಪತ್ತನ್ನು ಪರಿಹರಿಸಬೇಕಾಗಿಯೂ ವಿನಂತಿ.

ಸ್ಫುಟ ಸೂಚನೆಗಳು.

೧. ಇಂಗ್ಲಂಡ ದೇಶದ ನೋಟಿಂಘಾಮ ಪಟ್ಟಣದಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಪರಿಷತ್ತು ಸೇರಿತ್ತು. ಆ ಸಮಯ ಪ್ರೊ। ಗಿಲ್ಬರ್ಟ ಮರೀಯವರು ಈಗಿನ ಸರಕಾರ ಸಂಸ್ಥೆಯ ಮೇಲೆ ಮಾಡಿದ ಟೀಕೆಯನ್ನು ಮುತ್ಸದ್ದಿಗಳು ವಿಚಾರಿಸುವ ಹಾಗಿದೆ. ಈ ಹಿಂದಿನ ಸರಕಾರಗಳು ಈಗಿನ ಸರಕಾರಗಳಿಗಿಂತ—ವಿಶೇಷ—ಹೆಚ್ಚು ಲೋಕಕಲ್ಯಾಣಪ್ರದವಿದ್ದವೆಂದು ಯಾರಾದರೂ ಹೇಳಿದರೆ ಅದನ್ನು ಆಕ್ಷೇಪಿಸುವದು ಕಠಿಣವಿದೆ. ಇತ್ತ ಸೆರೆಮನೆಗಳಲ್ಲಿ ಹೆಚ್ಚೆಚ್ಚು ನಿರಪರಾಧಿ ಜನರು ಕೊಳೆಯುತ್ತಿದ್ದಾರೆ, ಗುಪ್ತಪೋಲೀಸರ ಉಪಟಳವೇ ಹೆಚ್ಚು, ಗುಪ್ತ ಚಾರರ ಗುಪ್ತತಪಾಸಿಯ ತೊಡಕು ಬಹಳ, ಸೆರೆಮನೆಯಲ್ಲಿ ಯಮಯಾತನೆಗಳು ಎಂದಿನಂತೆ ನಡೆಯಲಾರಂಭಿಸಿವೆ, ಸುಳ್ಳಾಡುವದೇ ಸಭ್ಯತನವಾಗಿದೆ. ಇದು ನೂತನ ಮನ್ವಂತರದೊಳಗಿನ ನೂತನವಾದ ಲಕ್ಷಣ. ರಾಷ್ಟ್ರ

ಗಳ ಕಡೆ ಹಣವಿಲ್ಲ, ಎಲ್ಲರಿಗೂ ಹಣದ ಅಡಚಣೆ, ಆದರೆ ಶಸ್ತ್ರಾಸ್ತ್ರಗಳಿಗಾಗಿ, ಯುದ್ಧೋಪಕರಣಗಳಿಗಾಗಿ ಮಿತಿಮೀರಿ ಹಣ ವೆಚ್ಚವಾಗುತ್ತದೆ. ಇಷ್ಟು ಹಣ ಖರ್ಚಾದದ್ದು ಈ ಹಿಂದಿನ ಇತಿಹಾಸದಲ್ಲಿ ಎಲ್ಲಿಯೂ ನಡೆದಿಲ್ಲ. ಪ್ರೊ|| ಮರೀಯವರು ಸರಕಾರಗಳ ಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ವರ್ಣಿಸಿದ್ದಾರೆ. ಸಭೆಯೊಳಗೆ ಸುಳ್ಳನ್ನಾಡುವದು, ಸ್ವಾರ್ಥ ಬಚ್ಚಿಟ್ಟು ಪರೋಪಕಾರವನ್ನೇ ಪ್ರಚಾರ ಮಾಡುವದು, ಇದೇ ಈಗಿನ ರಾಜಕಾರಣಧುರಂಧರರ ಕಾರ್ಯವಾಗಿದೆ. ಇಂಥವರೇ ಮುತ್ಸದ್ದಿಗಳೆಂದು ಲೋಕದಲ್ಲಿ ಖ್ಯಾತಿ ಹೊಂದಿದ್ದಾರೆ. ಆದರಿಂದಲೇ ಶಾಂತಿಪಾಲಕ ಸರಕಾರಗಳು ಶಸ್ತ್ರಸನ್ಯಾಸದ ಪರಿಷತ್ತನ್ನು ಸೇರಿಸುತ್ತಿರುವಾಗಲೇ ಶಸ್ತ್ರಾಸ್ತ್ರಗಳ ತಯಾರಿಯನ್ನು ನಡಿಸುತ್ತಿದ್ದಾರೆ. ಇಂಥ ಅಪ್ರಾಮಾಣಿಕತನದಿಂದ ಎಂದಿಗಾದರೂ ಲೋಕಕ್ಕೆ ಕ್ಷೇಮ ಸಿಗುವದೇ? ಮಹಾತ್ಮರು ನುಡಿದಂತೆ, ಸತ್ಯ-ಅಹಿಂಸೆಗಳನ್ನು ಆಶ್ರಯಿಸಿ ಪ್ರಾಮಾಣಿಕತನದಿಂದ ಪರರಾಷ್ಟ್ರಗಳ ಅಸೂಯೆ ಹಿಡಿಯದೆ ಶಾಂತಿಸ್ಥಾಪನೆಗೆ ತೊಡಗಿದರೆ ಮಾತ್ರ ಲೋಕದಲ್ಲಿ ಶಾಂತತೆ ನೆಲೆಗೊಂಡೀತು. ಪರಸ್ಪರ ದ್ವೇಷಭಾವ, ಮತ್ಸರ, ಅಸೂಯೆ, ಅಪನಂಬಿಗೆಗಳನ್ನು ಹಿಡಿದು ನಡಕೊಂಡರೆ ಎಂದೆಂದಿಗೂ ಶ್ರೇಯಸ್ಸಿಲ್ಲ. ಇದೇ ಸಂಗತಿಯನ್ನು ಪ್ರೊ|| ಮರೀಯವರು ಭಿನ್ನ ಶಬ್ದಗಳಿಂದ ವಿದ್ಯಾರ್ಥಿಗಳಿಗೆ ಹೇಳಿದರು. ಗೆಳೆಯರ ಸಂಘದವರು ನಿಸ್ಪೃಹತನದಿಂದಲೂ, ಪ್ರೀತಿಯಿಂದಲೂ ಸಾರ್ವಜನಿಕ ಹಿತ ಸಾಧಿಸುತ್ತಿದ್ದಾರೆ, ಅವರ ಸ್ನೇಹಪ್ರವೃತ್ತಿ ವರ್ಷವರ್ಷಕ್ಕೆ ಬೆಳೆಯುತ್ತಿದೆ. ಇದು ಸುಲಕ್ಷಣ, ಇದರಿಂದಲೇ ಕ್ಷೇಮವಿದೆ. ಹೀಗೆ ಪ್ರೊ|| ಮರೀಯವರು ನುಡಿದರು. ಈ ವಿಚಾರಗಳನ್ನು ಎಲ್ಲರೂ ಪರಾಂಬರಿಸಿ, ಅದರಂತೆ ನಡಕೊಂಡು ಲೋಕದಲ್ಲಿ ಹಬ್ಬುತ್ತಿದ್ದ ಅಸತ್ಯಪ್ರಿಯತೆಯನ್ನು ಹೋಗಲಾಡಿಸಬೇಕು.

---

೨ ಪುರಾತನ ಕಾಲದಲ್ಲಿ ನಮ್ಮ ದೇಶದೊಳಗೆ ದಶಾಂಶ ರಾಜಾರ್ಧ ಕೊಡುವ ಪರಿಪಾಠವಿತ್ತು. ಅದರಂತೆ ಇಂಗ್ಲಂಡ ದೇಶದಲ್ಲಿ ಇಗ್ರಜಿಗಳಿಗೆ ದಶಾಂಶ ಕರ ತೆರುವ ಪರಂಪರೆಯಿದೆ. ಇದಕ್ಕೆ 'ಟ್ಯಾದ' ಎಂದು ಹೆಸರು. ಸಮಸ್ತರೂ ಹುಟ್ಟುವಳಿಯ ದಶಾಂಶವನ್ನು ಇಗ್ರಜಿಗಳಿಗೆ ತೆರಲೇಬೇಕು. ಬಡಬಗ್ಗರಿಗೆ ಈಗಿನ ದಿನಮಾನದಲ್ಲಿ ಇದನ್ನು ತೆರುವದು ಬಲು ಕಷ್ಟ. ಒಕ್ಕಲಿಗರು ಬಹಳ ಕೋಲಾಹಲ ಮಾಡಿದರು. ಕೆಂಟ ಪರಗಣೆಯಲ್ಲಿ ದಶಾಂಶ ವಸೂಲಿಯ ಕ್ರಮ ನಡೆದಿದೆ. ದಶಾಂಶ ವಸೂಲಿಗಾಗಿ ಹೊಲಮನೆಗಳಲ್ಲಿ ದಾಸ್ತಾನು ಮಾಡಿದ ತೋಕೆಗೋದಿ ಜಪ್ತಾಯಿತು. ಮೋಟಾರ ಲೋರಿ ಕಾಳು ತುಂಬಿಕೊಂಡು ಹೋಗುವಾಗ ಒಕ್ಕಲಿಗರ ಹೆಂಗಸರೂ, ಮುದುಕಿಯರೂ ಲೋರಿಗಳ ಮುಂದೆ ಮಾರ್ಗಗಳ ಮೇಲೆ ಮಲಗಿಕೊಂಡರು. ಇದರಿಂದ ಲೋರಿಗಳನ್ನು ಒಯ್ಯಲು ಬಹು ಕಠಿಣವಾಯಿತು. ದಿಕ್ಕು ತಪ್ಪಿಸಿಕೊಂಡು ಲೋರಿಗಳನ್ನು ೧ ಬಟಾಟೆಯ ಗದ್ದೆಯೊಳಗಿಂದ ಓಡಿಸಿಕೊಂಡೊಯ್ದರಂತೆ. ಇದು ೪ನೇ ಬಾರಿ ನಡೆದ ಜಪ್ತಿಯ ಕಥೆಯೆಂದು 'ಕ್ರ್ಯಾಟಿರ' ವಾರ್ತಾವಾಹಕರು ಪ್ರಕಟಿಸುತ್ತಾರೆ. ಈ ಪ್ರಕಾರ ಅಲ್ಲಿ ಸತ್ಯಾಗ್ರಹ ನಡೆಯುತ್ತಿದ್ದಾಗ್ಯೂ ಹಿಂದುಸ್ಥಾನದಲ್ಲಿ ನಡೆದಂತೆ ಗುಂಡು ಹಾರಿಸಿದ ಉದಾಹರಣೆಯಿಲ್ಲವಾಗಿ ಕಲಕತ್ತೆಯ 'ಎಡ್ವಾನ್ಸ' ಪತ್ರಿಕೆಯು ಟೀಕಿಸಿ ಮಹಾತ್ಮರ ನಿಶ್ಶಸ್ತ್ರ ಪ್ರತೀಕಾರದ ತತ್ವವು ಇಂಗ್ಲಂಡ ದೇಶದಲ್ಲಿ ಹಬ್ಬಲಾರಂಭಿಸಿರುವದಾಗಿ ಸಂತೋಷದಿಂದ ನಮೂದಿಸಿ ಮಹಾತ್ಮರಿಗೆ ಅಭಿನಂದನಗಳನ್ನರ್ಪಿಸುತ್ತದೆ. ನವೀನಕಾಂತ ಶಸ್ತ್ರಾಸ್ತ್ರಗಳಿಂದ ಪ್ರಬಲವಾಗಿರುವ ಸರಕಾರದ ಬಲಾತ್ಕಾರವನ್ನು ವಿರೋಧಿಸಲು ದುರ್ಬಲರಾದ ಪ್ರಜೆಗಳು ನಿಶ್ಶಸ್ತ್ರ ಪ್ರತೀಕಾರವಲ್ಲದೆ ಮತ್ತಾವ ಉಪಾಯ ಹೂಡಬಲ್ಲರು? ಮಹಾತ್ಮರು ಈ ದೃಷ್ಟಿಯಿಂದಲೇ ಈ ಉಪಾಯ ಕಲ್ಪಿಸಿರುವರಲ್ಲವೇ?

---

೩ ಲೊಯಿಡ್ ಬಿರೇಜ ಯಾನೆ ಸಿಂಧ ಪ್ರಾಂತದೊಳಗಿನ ಸಕ್ಕರ ಒಡ್ಡಿನ ಕಥೆ ಮತ್ತೂ ಮನೋರಂಜಕವಿದೆ. ದುಡ್ಡು ತಿನ್ನುವ ಕ್ರಮ ಬಹಿರಂಗದಿಂದಲೇ ಅಲ್ಲಿ ನಡೆದಿದೆ. ಕರಾಚಿ ಪಟ್ಟಣದ ತರ್ಫೆನಿಂದ ಕಾಯಿದೆ ಕೌನ್ಸಿಲಿನ ಸಭಾಸದರಾದ ಮಿ|| ಮಹಮ್ಮದ ಹಾಶಿಮ ಗಝ್ದರರವರು 'ಮುಂಬಯಿ ಕ್ರಾನಿಕಲ್' ಪತ್ರಿಕೆಯಲ್ಲಿ ಈ ಒಡ್ಡಿನ ಕುರಿತು ಸರಕಾರಿ ಲೆಕ್ಕ ತಪಾಸಕರು ಒರೆದ ಆಕ್ಷೇಪಗಳನ್ನೇ ವಿವರಿಸಿ ಟೀಕಿಸಿದ್ದಾರೆ. (೧) ಟೆಂಡರು ಕರೆಯದೆ ಕಂಟ್ರಾಕ್ಟು ಕೊಡುವದು, (೨) ಕಂಟ್ರಾಕ್ಟರರ ಕಡೆಯಿಂದ ಕಂಟ್ರಾಕ್ಟಿನಂತೆ ನಡಕೊಳ್ಳುತ್ತೇವೆಂದು ಭದ್ರತೆ ಪಡಕೊಳ್ಳದಿರುವದು, (೩) ಎಸ್ಟಿಮೇಟ ಇಲ್ಲದೆ ಕೆಲಸ ಪ್ರಾರಂಭಿಸುವದು, (೪) ಕರಾರುಗಳಿಗೆ ರೀತಿಯಂತೆ ಸರಕಾರದ ಮಾನ್ಯತೆ ಪಡಕೊಳ್ಳುವ ಮುಂಚೆ ಕೆಲಸ ಪ್ರಾರಂಭಿಸುವದು, (೫) ಕೆಲಸ ಪೂರ್ಣತೆಯಾದ ಬಳಿಕ ೬-೧೨ ತಿಂಗಳ ತನಕ ಬಿಲ್ಲುಗಳ ಹಣ ಕೊಡದಿರುವದು, (೬) ವೋಚರು ಇಲ್ಲದೆ ಹಣ ಕೊಡುವದು, ಇನ್ನೂ ಅನೇಕ ಅಕ್ರಮಗಳಿವೆ. ೨ ಲಕ್ಷ ರೂಪಾಯಿಗಳ ಸಾಮಾನು ಕಳವಾಯಿತೆಂದು ಖರ್ಚು ಬಿದ್ದಿದೆ, ಇದರ ಪತ್ತೆಯಿಲ್ಲ. ಎಸ್ಟಿಮೇಟಿಲ್ಲದೆ ೫೦ ಲಕ್ಷ ರೂಪಾಯಿಗಳ ೬೦೦ ಕೆಲಸಗಳು ಪ್ರಾರಂಭಿಸಲ್ಪಟ್ಟವು. ಸಕ್ಕರ ಒಡ್ಡಿಗಾಗಿ ೧೯೩೨-೩೩ನೇ ಸಾಲಿನಲ್ಲಿ ೧ ಕೋಟಿ ೬೫ ಲಕ್ಷ ರೂ ಖರ್ಚು ಆದದ್ದರೊಳಗೆ ೧ ಕೋಟಿ, ೨ ಲಕ್ಷ ರೂಪಾಯಿಗಳ ಬಗ್ಗೆ ಲೆಕ್ಕ ತಪಾಸಕರ ಆಕ್ಷೇಪ. ಅಂದ ಬಳಿಕ, ಸಕ್ಕರ ಒಡ್ಡಿನ ಕಾರಭಾರವು ಎಷ್ಟು ಪರಿಯ ನಡೆದದೆಂದು ಕಲ್ಪನೆ ಬಂದೀತು. ಈ ಒಡ್ಡಿನ ವ್ಯವಸ್ಥಾಪಕರು ಸರ್ ಚಾರ್ಲ್ಟನ್ ಹೆಂಸನ್‌ರವರು. ಇವರಿಗೆ ಕಂಟ್ರಾಕ್ಟು ಕೊಡುವ ಸರ್ವಾಧಿಕಾರ ಕೊಡೋಣಾಗಿದೆ. ಈ ವಿಷಯ ಸರಕಾರಕ್ಕೆ ಸಲಹೆ ಕೊಡುವವರು ಇವರ ಸಹೋದರ ಮಿ|| ಆರ್. ಟಿ. ಹೆಂಸನ್‌ರವರು! ಈ ಪ್ರಕಾರ ಸಹೋದರರು ಸಕ್ಕರ ಒಡ್ಡಿನಲ್ಲಿ ಸರಕಾರಿ ಹಣವನ್ನು ಹುಗಿಯುತ್ತಿದ್ದಾರೆ. ಈ ಕುರಿತು ಮುಂಬಯಿ ಸರಕಾರದ ಅಂಕೆ ಸಹ ಇವರ ಮೇಲೆ ನಡೆಯುವದಿಲ್ಲ. ಮಿ|| ಲೇನ ಎಂಬವರು ಸೆಕ್ರೆಟರಿಗಳು, ಹೆಂಸನ್‌ರವರ ಮೇಲೆ ತಪಾಸ ಇಡುವದು ಇವರ ಕೆಲಸ. ಆದರೆ, ಸರ್ವಿಸಿನ ಮಾನದಿಂದ ಹೆಂಸನ್‌ರು ಹಿರಿಯರು, ಲೇನರು ಕಿರಿಯರು, ಆದರಿಂದ ಲೇನರ ಕಾರುಬಾರು ಹೆಂಸನ್‌ರ ಮುಂದೆ ನಡೆಯದು. ಹೀಗಾಗಿ, ಸಕ್ಕರ ಒಡ್ಡಿನ ಕಾರಭಾರವು ನಿರಂಕುಶವಾಗಿ ಸಾಗಿದೆ. ಆದಾಗ್ಯೂ, ಮುಂಬಯಿ ಸರಕಾರವು ವಂಚನೆಗಳ ಚೌಕಶಿ ಮಾಡಲೊಪ್ಪುವದಿಲ್ಲ. ಇಂಥ ಕಾರಭಾರದಲ್ಲಿ ೫ ಕೋಟಿ ರೂಪಾಯಿ ಖರ್ಚಾಗಿ, ೧೭ ಕೋಟಿ ರೂಪಾಯಿ ಬೆಲೆಯ ಭೂಮಿ ಪ್ರಾಪ್ತಿಯಾದರೆ ಅದೇನಾಶ್ಚರ್ಯ! ಮುಂಬಯಿ ಸರಕಾರವು ಹೆಂಸನ್ ಬಂಧುಗಳಿಗೆ ಜಹಾಗೀರೆಂದು ಈ ರಕಮುಗಳನ್ನು ಅರ್ಪಿಸುತ್ತದಾಗಿ ಜಮಾ-ಖರ್ಚಿನ ಪತ್ರಿಕೆಯಲ್ಲಿ ನಮೂದಿಸಿದ್ದರೆ, ಇಷ್ಟೆಲ್ಲ ವಾಗ್ವಾದಕ್ಕೆ ಕಾರಣವಿದ್ದಿಲ್ಲ. ಸರಕಾರವು ಇಷ್ಟು ತಿದ್ದುಪಡಿಯನ್ನಾದರೂ ಮಾಡಬಹುದಲ್ಲವೇ?

---

೪ ಮಿ|| ಗರುಡಚಾರರವರು ತಮ್ಮ ಪತ್ರದಲ್ಲಿ ಬರೆದ ಇನ್ನೊಂದು ಸಂಗತಿ ಕಾಯಿದೆ ಕೌನ್ಸಿಲುಗಳ ನಿರರ್ಥಕತೆಯನ್ನು ಸಿದ್ಧಗೊಳಿಸುತ್ತದೆ. ಸಕ್ಕರ ಒಡ್ಡಿನಲ್ಲಿ ನಡೆದ ಅಕ್ರಮಗಳ ವಿಚಾರ ಮಾಡುವದಕ್ಕಾಗಿ ಚೌಕಶಿ ಮಂಡಳ ನೇಮಿಸಬೇಕೆಂದು ಇವರೊಂದು ಠರಾವು ತಂದಿದ್ದಾರೆ. ಆ ಠರಾವು ಇನ್ನೆರಡು ವರ್ಷಗಳ ತನಕ ಚರ್ಚೆಗೆ ಬರದು. ಅಷ್ಟರೊಳಗೆ ಹಬ್ಬ ಆಡಿ ಕೂಳಿ ಬೀರಿ ಹೋಗುತ್ತದೆ! ಕಾಯಿದೆ ಕೌನ್ಸಿಲುಗಳಲ್ಲಿ ಲೋಕಮತ ಪ್ರದರ್ಶನವಾಗದಂತೆ ಸರಕಾರವು ವಿವಿಧ ಕಾರಸ್ಥಾನಗಳನ್ನು ನಡಿಸುತ್ತದೆ. ಕಾಯಿದೆ ಕೌನ್ಸಿಲಿನ ಅಧಿವೇಶನಗಳು ವರ್ಷಕ್ಕೆರಡಾದವು. ಅವುಗಳಲ್ಲಿ ಮುಕ್ಕಾಲು ಪಾಲು ಸಮಯ ಸರಕಾರಿ ಕಾಯಿದೆಗಳ ಚರ್ಚೆಗೆ, ಉಳಿದ ಚತುರ್ಥಾಂಶ ಅವಧಿಯಲ್ಲಿ ಬಹುತರವಾಗಿ ಕೊನೆಯ ದಿನಗಳು ಬಿನ್ ಸರಕಾರಿ ಕಾಯಿದೆ ಠರಾವುಗಳ ಚರ್ಚೆಗೆ. ಈ ವ್ಯವಸ್ಥೆಯಿಂದ ಸರ್ವೋತ್ತರ ವಿಷಯಗಳ ಚರ್ಚೆ ಮಾಡಲು ಸಾಕಷ್ಟು ಅವಕಾಶ ದೊರೆಯುವದಿಲ್ಲ. ಒಂದುವೇಳೆ ಅವಕಾಶ ದೊರೆತಾಗ್ಯೂ, ಕೊನೆಯ ದಿನಗಳಲ್ಲಿ ಲೋಕನಿಯುಕ್ತ ಸಭಾಸದರು ಹಾಜರಿರುವದು ಕಠಿಣ. ಅಂತು ಇಂತು ಲೋಕೋಪಯೋಗಿ ವಿಷಯಗಳಿಗೆ ವನವಾಸವೇ. ಬೇರೆ ಬೇರೆ ಪ್ರಾಂತಗಳಲ್ಲಿ ಮಾಡಿದಂತೆ ಕೌನ್ಸಿಲಿನ ಅಧಿವೇಶನಗಳನ್ನು ಹೆಚ್ಚಿಸಬೇಕಾಗಿ ಬಿನ್ನೈಸಿಕೊಂಡಲ್ಲಿ ಹೆಚ್ಚು ಖರ್ಚು ತಗಲುತ್ತದಾಗಿ ಸರಕಾರದ ಆಕ್ಷೇಪ. ಸರಾಸರಿ ಒಂದು ಅಧಿವೇಶನಕ್ಕೆ ೨೦ ಸಾವಿರ ರೂಪಾಯಿ ಖರ್ಚು ಬರುತ್ತದಂತೆ. ಸಕ್ಕರ ಒಡ್ಡಿನಲ್ಲಿ ಕೋಟ್ಯವಧಿ ಖರ್ಚು ಮಾಡಲು ಸರಕಾರಕ್ಕೆ ಹಣದ ಅಡಚಣೆಯಿಲ್ಲ, ಕೌನ್ಸಿಲು ಅಧಿವೇಶನ ಸೇರಿಸಲಿಕ್ಕೆ ಮಾತ್ರ ಹಣದ ಅಡಚಣೆ! ಮುಂಬಯಿ ಸರಕಾರವು ಕೌನ್ಸಿಲು ಸಭಾಸದರ ದಿನಗೂಲಿಯನ್ನು ರೂ. ೮ಕ್ಕೆ ಇಳಿಸಿತು, ಆದಾಗ್ಯೂ, ಹಣದ ಅಡಚಣೆ ತಪ್ಪದು. ಪಂಜಾಬ ಪ್ರಾಂತದಲ್ಲಿ ಸಭಾಸದರಿಗೆ ದಿನಾ ೧೫ ರೂ ಸಿಗುತ್ತದೆ. ಇದರ ಮೇಲಿಂದ ಮುಂಬಯಿ ಸರಕಾರದ ಕಲ್ಪನೆ ಏನೆಂದು ತಿಳಿಯಬೇಕು? ಲೋಕಮತವನ್ನು ಈ ಪ್ರಕಾರ ಮೆಟ್ಟುವದು ಕ್ಷೇಮಕರವಲ್ಲ. ಸಕ್ಕರ ಒಡ್ಡಿನ ಪ್ರಕರಣವನ್ನು ಸರಕಾರಿ ಲೆಕ್ಕಪರಿಶೋಧಕರೇ ಹೇಳುತ್ತಿರುವಾಗ ಸರಕಾರವು ಅದನ್ನು ತಿರಸ್ಕರಿಸಿದರೆ ಜನಸಾಮಾನ್ಯರು ಇಲ್ಲಸಲ್ಲದ ತರ್ಕಗಳನ್ನು ಹೊರಡಿಸ್ಯಾರು. ಮುಂಬಯಿ ಸರಕಾರವು ದೀರ್ಘಾಲೋಚನ ಮಾಡಿ ಚೌಕಶಿ ಮಂಡಳ ನೇಮಿಸಿ ವಿಚಾರ ನಡಿಸುವದೇ ಶ್ರೇಯಸ್ಕರವು. ಹೆಂಸನ್ ಬಂಧುಗಳು ನೌಕರಿಯ ಮೇಲಿರುವಾಗಲೇ ವಿಚಾರ ನಡಿಸಿದರೆ ವಂಚನೆಯಾದ ಹಣ ಜವಾಬದಾರ ಅಧಿಕಾರಿಗಳಿಂದ ಭರಪಾಯಿ ಮಾಡಿಕೊಳ್ಳಲನುಕೂಲವಾಗುವದು. ಪೆನ್ಶನಿಗೆ ಹೋದ ಮೇಲೆ ಚೌಕಶಿ ಮಾಡಿ ಪ್ರಯೋಜನವೇನಿದೆ?

ವೃತ್ತಸಾರ.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಹೊಸ ಅಧಿಕಾರಿ ಮಂಡ — [ಅಧ್ಯಕ್ಷ] ಶ್ರೀ| ಸಿದ್ಧಪ್ಪಾ ಹೊಸಮನಿ, [ಉಪಾಧ್ಯಕ್ಷ] ಶ್ರೀ| ನಾರಾಯಣರಾವ ಜೋಶಿ, ಸುಬ್ರಾವ ಹರಿದೀಪುರ, ಶ್ರೀಮತಿ ಉಮಾಬಾಯಿ ಕುಂದಾಪುರ, [ಕಾರ್ಯದರ್ಶಿ] ಶ್ರೀ| ರಾಮರಾವ ಹುಕ್ಕೇರಿಕರ, ಕೇಶವರಾವ ಗೋಖಲೆ, ಗುದ್ಲೆಪ್ಪಾ ಹಳ್ಳಿಕೇರಿ, [ಕೋಶಾಧ್ಯಕ್ಷ] ಡಾ| ಕಮ್ಮಾರ, [ಸಭಾಸದರು] ಶ್ರೀ| ರಂಗನಾಥರಾವ ದಿವಾಕರ, ದತ್ತಾತ್ರೇಯ ಕರಮರಕರ, ಸದಾಶಿವರಾವ ಕರ್ನಾಡ, ಗಂಗಾಧರರಾವ ದೇಶಪಾಂಡೆ, ಹಣಮಂತರಾವ ಕೌಜಲಗಿ ಟಿ ಸುಬ್ರಹ್ಮಣ್ಯಂ, ಮುರಿಗೆಯ್ಯ ಜಂಗಿನ, ಅಂದಾನೆಪ್ಪ ದೊಡ್ಡಮನಿ, ಶಿವಶಂಕರಪ್ಪ ದೇವಪುರ, ವೀರನಗೌಡ ಪಾಟೀಲ, ಕೃಷ್ಣ ಅಯ್ಯರ, ಡಾ| ಹರ್ಡೇಕರ

— ಗದಿನಾಡಿನಲ್ಲಿ ಅಲ್ಲಿಯ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಬ್ಯಾ ಇಲೆಕ್ಷನು ನಡೆಯುತ್ತಿದೆ ಅದಕ್ಕೆ ಅಲ್ಲಿಯ ಕೊಂಗ್ರಸ ಕಮಿಟಿಯವರು ಪಿ| ಅಬ್ದುಲ್ಲಾ ಖಾನರವರಿಗೆ ನೇಮಿಸಿದ್ದರು ಇವರಿಗೆ ಸತ್ಯಾಗ್ರಹದಲ್ಲಿ ಶಿಕ್ಷೆಯಾದ್ದರಿಂದ ಇವರ ನೇಮಣೂಕಿಯ ಪತ್ರವನ್ನು ರಿಟರ್ನಿಂಗ ಆಫೀಸರರು ತಿರಸ್ಕರಿಸಿದ್ದಾರೆ ಇವರ ಮೇಲಿನ ಪ್ರತಿಬಂಧವನ್ನು ದೂರಪಡಿಸಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ತಂತಿಯಿಂದ ಅರ್ಜಿ ಮಾಡಿತ್ತು ಅದಕ್ಕೆ ಉತ್ತರವಿಲ್ಲದೆ ಅವರ ಅರ್ಜಿ ತಿರಸ್ಕರಿಸಲ್ಪಟ್ಟಿದೆ ಈ ಸಂಗತಿಯನ್ನು ಕೊಂಗ್ರಸ ಕಮಿಟಿಯವರು ಮಹಾತ್ಮರಿಗೂ, ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರಿಗೂ, ಕೊಂಗ್ರೆಸ ಪಾರ್ಲಮೆಂಟರಿ ಬೋರ್ಡಿಗೂ ತಿಳಿಸಿದ್ದಾರೆ ಗಡಿನಾಡಿನ ಪರವಾಗಿ ಗಡಿನಾಡಿನ ಗಾಂಧಿಯವರ ಸಹೋದರರಾದ ಡಾ| ಖಾನಸಾಹೇಬರವರಿಗೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಉಮೇದ್ವಾರರಾಗಿ ನಿಲ್ಲುವಂತೆ ವಿನಂತಿಸಲಾಗಿದೆ

— ಜಗತ್ತಿನ ಮೇಲಾಟ ಎಲ್ಲಿಗೆ ಮುಟ್ಟೀತೆಂದು ಯಾರಿಗೂ ಹೇಳಬರದು! ಆಕಾಶದ ಫೌಂಟನ್ ಪೆನ್! ಒಪ್ಪೆನ್ನಿನ ಸ್ಕ್ರೂ ಟೈಯರು!! ಗಾಳಿಯಿಂದ ಛಾಯಾಚಿತ್ರ ತೆಗೆಯುವ ಕೆಮರಾ!!! ಲಂಡನದಲ್ಲಿ ಸಿಗುತ್ತವೆ ಐದು ನಿಮಿಷಗಳ ಮೇಲೆ ೧೦೦ಕ್ಕೆ ೫೦ ರಿಂದ ೬೬ ರ ತನಕ ಆವದು ತಗ್ಗಿಸುತ್ತಾ ಈ ತರದಿಂದ ಸಾಮಾನುಗಳು ಸಿಗುತ್ತವೆ! ಈ ದರದ ಮೂಲಕ ವ್ಯಾಪಾರಕ್ಕೆ ಮೇಲಾಟ ಮಾಡುವದು ಅಶಕ್ಯವೆಂದು ಬ್ರಿಟಿಶ ದೇಶದೊಳಗಿನ ಕಾರಖಾನೆಗಳ ಸಂಘದ ಕಾರ್ಯದರ್ಶಿಗಳಾದ ಲ್ಯಾನ್ಸಲಟ ಕರ್ನಲ್ ರಾವಿನ್ಸನವರು ಉದ್ಗರಿಸಿದರು ಬ್ರಿಟಿಶ ದೇಶದಲ್ಲಿ ರಾಜಕುಮಾರ ಜೋರ್ಜರ ವಿವಾಹದ ತಯಾರಿ ನಡೆದದ ರಾಜಪುತ್ರರು ರತ್ನ ವ್ಯಾಪಾರಿಗಳಲ್ಲಿ ಹೋಗಿ ವಿವಾಹ-ಉಂಗುರಗಳನ್ನು ಖರೀದಿ ಮಾಡುವ ಗಡಿಬಿಡಿಯಲ್ಲಿದ್ದಾರ ಜಪಾನಿಯರು ಜೋರ್ಜ-ಮರಿನಾ ರಾಜದಂಪತಿಗಳ ಲಕ್ಷಾವಧಿ ಚಿತ್ರಗಳನ್ನು ತಯಾರಿಸಿ ಬ್ರಿಟಿಶ ಸಾಮ್ರಾಜ್ಯದಲ್ಲಿ ಮಾರಾಟ ನಡಿಸುವ ತಯಾರಿಯಲ್ಲಿದ್ದಾರೆ ಜಪಾನಿಯರ ದೂರದೃಷ್ಟಿ, ಮೇಲಾಟದ ನಮೂನೆ ನೋಡಿರಿ!

— ಲಂಡನಿನೊಳಗಿನ ಮಿ| ಹೊವರ್ಡ ಎಂಬ ಬ್ರಿಟಿಶ ಇಂಜನಿಯರರು ಹೊಸ ಮೋಟರಕಾರನ್ನು ತಯಾರಿಸಿದ್ದಾರೆ ಆ ಕಾರದ ಮೋಟರ ಸ್ಕ್ರೂಕಲಿನ ಸಾಹಿತ್ಯದಿಂದ ಈ ಹೊಸ ಮೋಟರಕಾರು ತಯಾರಾಗಿದೆ! ಇದು ವಿಮಾನದ ಆಕಾರದ್ದು! ಇದು ೧ ತಾಸಿನ ಶಕ್ತಿಯಿಂದ ೧೦೦ ಮೈಲುಗಳಿಗೆ ೧ ಗ್ಯಾಲನ್ ಪೆಟ್ರೋಲು ಬೇಕು ಮಿ| ಹೊವರ್ಡರು ಈ ಕಾರಿನಿಂದ ೧| ಲಕ್ಷ ಮೈಲಿ ಪ್ರವಾಸ ಮಾಡಿದ್ದಾರಂತೆ! ಇದರ ಬೆಲೆ ಆ ಕಾರಿನ ಈಗಿನ ಹುಂಡಣಾವಳಿಯ ದರದಿಂದ ೫೦ ರೂಪಾಯಿ

— ಗ್ವಾಲ್ಹೇರದ ಬಳಿ ಮೋಹನಾ ಗ್ರಾಮದಲ್ಲಿ ಬಾಲಮುಕುಂದನೆಂಬ ಆಳಿಯನು ಮಾವನ ಮನೆಯಲ್ಲಿ ೭ ದಿನಗಳ ತನಕ ಉಪೋಷಣ ಮಾಡಿ ಸತ್ಯಾಗ್ರಹ ಮಾಡಿದನು, ಹೆಂಡತಿಯ ತನ್ನ ಜೊತೆಗೆ ಕಳಿಸಬೇಕೆಂದು ಆತನ ಹಟವು, ಕೊಡುವದಿಲ್ಲೆಂದು ಮಾವನ ಹಟ ಆದ ಗ್ಯ, ಮಗಳನ್ನು ಕಳಿಸಿಕೊಡಲು ಮಾವನು ಒಪ್ಪಲಿಲ್ಲ ಕೊನೆಗೆ ಆಳಿಯನು ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ತಯಾರಾದನು ಮಾವನ ಮನೆಯಲ್ಲಿಯೇ ಮಾವನ ಸಮಕ್ಷಮ ಆತ್ಮಹತ್ಯದ ತಯಾರಿ ನಡೆಯಿತು ಆಗ ಮಾವನ ಕರುಳು ಕರಗಿತು! ಮಗಳನ್ನು ಆಳಿಯನ ಜೊತೆಗೆ ಕಳಿಸಿದನು! ಗಂಡ-ಹೆಂಡರು ಹೊರಬರುವಷ್ಟರಲ್ಲಿ ಆತ್ಮಹತ್ಯ ಪ್ರಯತ್ನ ಮಾಡಿದ ಬಗ್ಗೆ ಪೋಲೀಸರು ಬಾಲಮುಕುಂದನಿಗೆ ಸೆರೆಹಿಡಿದೊಯ್ದರು!

— ಹೊಗೆಸೊಪ್ಪಿನ ಸುಂಕದಿಂದ ಮುಂಬಯಿ ಸರಕಾರಕ್ಕೆ ೧೯೩೩ನೇ ಇಸ್ವಿ ಡಿಸೆಂಬರ ವರೆಗಿನ ೯ ತಿಂಗಳಲ್ಲಿ ರೂ ೬೭೭೧೨ ಉತ್ಪನ್ನವಾಯಿತು ಇದಕ್ಕೆ ರೂ ೬೯೦೦ ಖರ್ಚು ಆಯಿತು!

ವಿದ್ವಾಂಸರಿಂದ ಅನೇಕ ಗ್ರಂಥಗಳ ಆಧಾರದಿಂದ
ಪರಿಶೋಧಿಸಲ್ಪಟ್ಟ
ನವದುರ್ಗಾ
ಪೂಜಾ ವಿಧಾನ ಎಂಬ ಪುಸ್ತಕವು
ಇದೇ ಅನಂತ ಚತುರ್ದಶಿಗೆ ತಯಾರಾಗಿ
ಮಾರಾಟಕ್ಕೆ ಸಿದ್ಧವಾಗುವದು!
ಸ್ವಲ್ಪೇ ಪ್ರತಿಗಳನ್ನು ತೆಗೆದಿರುವದರಿಂದ ಗ್ರಾಹಕರು
ತ್ವರೆ ಮಾಡಿರಿ!
ಬೆಲೆ ೬ ಆಣೆ ೬ ಪೈ ಬೇರೆ
ನಂದಿನೀ ಪುಸ್ತಕಾಲಯ, ಗೋಕರ್ಣ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್
ಸ್ಥಾಪನೆ. 1908.
ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳ ಇವೆ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಶೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ
ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.
ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents -
D K NAYAK Bros
Honavar Agent
R V PRABHU Esq

K. PadmanabhaRao & Sons
BELGAUM
Chief Agents for
Karnatak Districts & S M States

'ಕಿರ್ಲೋಸ್ಕರ' ಎಂದರೇ ಶ್ರೇಷ್ಠತೆ.



ಕಿರ್ಲೋಸ್ಕರ ಕಂಪನಿಯ ನೆಲಗಡ್ಲೆ ಸುಲಿಯುವ ಯಂತ್ರ ಹೆಚ್ಚು ಪ್ರಸ್ಥ ಒಹಳ ಲಾಭ ಸಿಗುತ್ತದೆ ಇದರಿಂದ ಖರ್ಚು ಕಡಿಮೆ ಬಿದ್ದು ಕೆಲಸವು ಹೆಚ್ಚಾಗುತ್ತದೆ ಯಂತ್ರ ಶಾಸ್ತ್ರ ತತ್ವದಂತೆ ಇವುಗಳನ್ನು ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲರಿಗೂ ಸಮಾಧಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು, ಇಂಜಿನು ಗಳಿಂದಲೂ ನಡಿಸಬಹುದು

ಪತ್ರ ಬರಕೊಂಡಲ್ಲಿ ಸಚಿತ್ರ ಕೆಟಲಾಗು ಕಳಿಸಲ್ಪಡುವದು

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಕಿರ್ಲೋಸ್ಕರವಾಡಿ. (ಜಿಲ್ಹಾ- ಸಾತಾರಾ.)

ಸ್ಥಾನಿಕ ವೃತ್ತಾಂತ.

ಕುಮಟಾ— ಈ ಸಲ ಚಳಿಯು ನಡೆಯುತ್ತದೆ ಹಗಲಿಗೆ ಸಾಮಾನ್ಯವಾಗಿ ಬಿಸಿಲು, ರಾತ್ರಿ ೧-೨ ತಾಸ ದ್ದಾಗಿನ ಚಳಿಗಳ ಕಾಟ ಇಲ್ಲಿಲ್ಲ ಎಂದು ಗಮ್ಮನ ಕೇರಿ ಗೌಡರಲ್ಲಿ ೩ ಮನೆಗಳಿಂದವು, ಎಳೆ ಸ್ತ್ರೀಯರವರು ಮಡಿಕೆಯೊಬ್ಬರಿಗೆ ಪ್ಲೇಗಿನ ಗುತ್ತಾಂತ, ಆದರೆ ಒದಗಿರಲಿ.

ಅಂಜೆನಿಯಾದ ಹುಡುಗರು ಮಾರ್ಗ ದುರಸ್ತಿಗೆ ತೊಡಗಿದ್ದಾರೆ ಗವ್ಹರ್ನರರಿಂದ ಬ್ರಿಟಿಷ್ ದೊರೆಗಳು ಬರುವವರಿಂದ ವೇಗದಿಂದ ಬೇಗನೆ ಹೋಗಿ ಅಲ್ಲಿ ಹಡಗ ಹತ್ತಿ ಕುಂದಾಪುರಕ್ಕೆ ತಲುಪುವಂತೆ ಕಾರ್ಯಕ್ರಮವಿರುವದರಿಂದ ಅಂಜೆನಿಯ ರ ಖಾತೆಯವರು ಹೊನ್ನಾವರ-ಕುಮಟಾ ಬೆಳಗಾವ ವರೆಗಿನ ಮಾರ್ಗ ದುರಸ್ತಿಯ ಕೆಲಸವನ್ನು ತತ್ಪರತೆಯಿಂದ ಶೀಘ್ರವಾಗಿ ತೀರಿಸುತ್ತದೆ ಗವ್ಹರ್ನರರ ದರ್ಶನ ಲಾಭವು ಇಲ್ಲಿಯ ರಹಿವಾಸಿಗರಿಗೆ ದೊರಕುವ ಅಪೂರ್ವ ಯೋಗವು ಕೂಡಿಬಂದಿದೆ!

ಬಸ್ತಿಯ ರಾ। ವೆಂಕಪ್ಪ ನಾಯ್ಕ ಪಟೇಲ ಇವರ ಮನೆಯಲ್ಲಿ ತಾ ೩-೭-೧೯೩೪ನೇಯ ಮನೆಯವರು ದರೋಡೆ ಮಾಡಿದರೆಂಬುದೂ, ವೆಂಕಪ್ಪ ನಾಯ್ಕರ ಹತ್ತಿರವಿದ್ದ ರೂ ೧೩೦೦೦ ಬಾಬಿನ, ರೋಖ ರೂ ೧೧೦ ದಾಗಿನೆ ಬಸಿಸಿ ಒಯ್ದರೆಂಬುದಾಗಿ ಟಿಪ್ಲೆ ನಡೆದಿತ್ತು ಈ ಸಬ್ ಡಿ. ಜನರಲ್ ಮ್ಯಾಜಿಸ್ಟ್ರೇಟ್ ಕೋರ್ಟಿನವರು ಪೂರ್ವಚೌಕಶಿ ನಡಿಸಿ ಟಿಪ್ಲೆಯನ್ನು ಮುಂದಿನ ವಿಚಾರಕ್ಕಾಗಿ ಸೆಶನ್ಸ ಕೋರ್ಟಿಗೆ ರವಾನಿಸಿದ್ದರು ಅಲ್ಲಿ ವಿಚಾರ ನಡೆದು ಕಳೆದ ಸೋಮವಾರ ೧೦ನೇ ತಾರೀಖಿಗೆ ಯಾವತ್ತು ಆರೋಪಿಗಳು ನಿರ್ದೋಷಿಗಳೆಂದು ಬಿಡುಗಡೆಯಾಗಿದೆ ವೆಂಕಪ್ಪನಾಯ್ಕರ ಕಡೆಯಿಂದ ದಾಗಿನೆಗಳನ್ನು ಪಡೆಯುವಲ್ಲಿ ಅಪ್ರಾಮಾಣಿಕ ಹೇತುವಿದ್ದ ಸಂಗತಿ ಪುರಾವೆಯ ಮೇಲಿಂದ ಸಿದ್ಧವಾಗುವದಿಲ್ಲವಾಗಿ ಸೆಶನ್ಸ ಜಡ್ಜರು ಅಭಿಪ್ರಾಯಪಟ್ಟು ಆರೋಪಿಗಳಿಗೆ ದೋಷಮುಕ್ತಗೊಳಿಸಿದ್ದಾರೆ ದಾಗಿನೆಗಳನ್ನೆಲ್ಲ ರಾ। ವೆಂಕಪ್ಪ ನಾಯ್ಕರಿಗೆ ಬಿಟ್ಟುಕೊಡಬೇಕೆಂದು ಸೆಶನ್ಸ ಜಡ್ಜರು ಹುಕುಮಮಾಡಿದ್ದು ಕಳವಾಗಿ ಹೋದದ್ದೆಂಬ ೧೧೧೦೦ ರೂಪಾಯಿಗಳ ಪತ್ತೆ ಆಗಲಿಲ್ಲ

ಈ ವಾರದಿಂದ ಸಿಲಿಕ್ ನಿಕ್ಸನ್ ಕಂಪನಿಯ ಹಡಗಗಳ ಟೈಮ್ಟೇಬಲ್ಕ್ಕೆ ಪ್ರಾರಂಭವಾಯಿತು ಮಾರ್ಕ್ಕದಂತೆ ಹಡಗಗಳು ಹೊರಡುತ್ತವೆ, ಮೊದಲನೇ ಹಡಗವು ಬುಧವಾರ ಇಲ್ಲಿ ಬಂತು, ಎರಡನೇ ಹಡಗವು ನಿನ್ನೆ ಬಂತು

ಅಕ್ಕಿಯ ದರ ಇಳಿಯುತ್ತಲಿದೆ, ಇನ್ನೂ ಇಳಿಯಲೂಬಹುದು ರಂಗೂನ ಅಕ್ಕಿ ಬಹಳ ಅಗ್ಗವಾಗಿದೆ ಇಂಡೋಚಾಯನಾ ದೇಶದಿಂದ ಹೇರಳ ಅಕ್ಕಿ ಇತರ ದೇಶಗಳಲ್ಲಿ ಆಮದಾಗಿ ಬರುತ್ತದೆ ಇಲ್ಲಿಂದ ಹೊರಹೋಗುವ ಅಕ್ಕಿಯ ಮೇಲೆ ಪರದೇಶ ಸರಕಾರದವರು ಟನ್ ೧ಕ್ಕೆ ರೂ ೧೧ರಂತೆ ಸುಂಕ ಹೇರಿದ್ದರಿಂದ ಅಕ್ಕಿ ರಫ್ತಾಗದೆ ಈ ಕಡೆ ಅಕ್ಕಿ ಅಗ್ಗ! ರಂಗೂನದಿಂದ ಮಂಗಳೂರಿಗೆ ಕಳೆದ ವಾರ ೨೦ ಸಾವಿರ ಗೋಣಿ ಅಕ್ಕಿ ಬಂದಿತ್ತು ಹೀಗೆ ಅಕ್ಕಿ ಅಗ್ಗವಾದರೆ, ರೈತರು ಏನು ಮಾಡಬೇಕು ಹೇಗೆ?

ಗೋಕರ್ಣ ಮ್ಯುನಿಸಿಪಾಲಿಟಿಯ ಮೇಲೆ ಬಂದ ಆಪತ್ತು ನಿವಾರಣೆ ಹೊಂದಿದೆ ಮ್ಯುನಿಸಿಪಾಲಿಟಿಯವರು ಜಿಲ್ಲಾ ಲೋಕಲ್ ಬೋರ್ಡಿನ ತಂಗೆಯ ವಸೂಲಿ ನಡಿಸದಿದ್ದರೆ ಮ್ಯುನಿಸಿಪಾಲಿಟಿಯು ಮ್ಯಾನೇಜಮೆಂಟಿನ ದೃಷ್ಟಿಯಿಂದ ಯೋಗ್ಯವಾಗುವದಿಲ್ಲವಾಗಿ ಮುಂಬಯಿ ಸರಕಾರವು ಅಭಿಪ್ರಾಯಪಟ್ಟು ಕಲೆಕ್ಟರ-ಕಮಿಶನರರು ಮ್ಯುನಿಸಿಪಾಲಿಟಿಯನ್ನು ರದ್ದು ಮಾಡಬೇಕಾಗಿ ಮಾಡಿದ ಠರಾವನ್ನು ತಿರಸ್ಕರಿಸಿದೆ ಆಗಲಿ, ಮುಂಬಯಿ ಸರಕಾರವು ಕಷ್ಟದ ವಿಚಾರ ಮಾಡಿತೆಂಬುದು ಸಮಾಧಾನಕರ!

ಹಳದೀಪುರದ ವೇ। ಮೂ। ಹರಿ ಮಹಾಬಲ ಭಟ್ಟ ಇವರು ಮಂಗಳವಾರ ಜ್ವರಗ್ರಸ್ತರಾಗಿ ತೀರಿಕೊಂಡರೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ ವೇ। ಮೂ। ಗಳು ಜ್ಯೋತಿಷಶಾಸ್ತ್ರವಿಶಾರದರಾಗಿದ್ದು ಅನೇಕರಿಗೆ ಉಪಕಾರಿಯಾದ್ದರಿಂದ ಹೊಂದಬೇಕಾದ ವಿರೋಧ ದೇವರು ವರ್ಷಿ ಇವರು ಅರ್ಹರಾಗಿದ್ದರು ಮೃತಾತ್ಮರಿಗೆ ಸದ್ಗತಿ ಪ್ರಾಪ್ತಿಯಾಗಲಿ!

ಹೊನ್ನಾವರ— (ತಾ ೧೬-೯-೩೪) ಮಳೆ ನಿಂತಿದ್ದರಿಂದ ಊರಲ್ಲಿ ಜ್ವರ ಮೊದಲಾದ ರೋಗದಿಂದ ಊರ ತುಂಬ ಹೊಲಸು. ಮ್ಯುನಿಸಿಪಾಲಿಟಿಯವರು ಲಕ್ಷ ಗೊಟ್ಟು ಊರ ಆರೋಗ್ಯ ಕಾಪಾಡಬೇಕು

ವೈದಿಕ ಸನಾತನದವರು ತಮ್ಮ ಗಣಪತಿಗಳನ್ನು ಮೊದಲಿನಿಂದ ವಾದ್ಯಘೋಷ ಮಾಡುತ್ತ ಹೊಳೆಯಲ್ಲಿ ವಿಸರ್ಜಿಸುವ ಪರಿಪಾಠವು ಈಗ ಹಲ ಕಾಲದಿಂದ ನಡೆದು ಬಂದಿದೆ ಹೊಳೆಗೆ ಹೋಗುವ ದಾರಿಯಲ್ಲಿ ಒಂದು ಮಸೀದಿಯಿದೆ ಈ ಮಸೀದಿಯ ಮುಂದಿನಿಂದ ಈ ಕಲಹ ಎದ್ದದ್ದರಿಂದ ಗಣಪತಿ ಉತ್ಸವ ಸಾಗುತ್ತಿತ್ತು ಕಳೆದ ವರ್ಷ ಮಸೀದಿಯ ಮುಂದೆ ವಾದ್ಯ ಬಾರಿಸಗೊಡಲಿಕ್ಕಿಲ್ಲವಾಗಿ ಮುಸಲ್ಮಾನ ಸಮಾಜದವರು ದುರಾಗ್ರಹ ಮಾಡಿದ್ದರಿಂದ ತಮ್ಮ ಬಾವಿಗಳಲ್ಲಿಯೇ ಕಳೆದ ವರ್ಷ ವಿಸರ್ಜನೆ ಮಾಡಬೇಕಾಯಿತು ಈ ವರ್ಷ ಈ ಕುರಿತು ಪೋಲೀಸರ ಕಡೆ ಅರ್ಜಿ ಮಾಡಿಕೊಂಡಿದ್ದಾರೆ ಮುಸಲ್ಮಾನ ಬಾಂಧವರು ನಿಷ್ಕಾರಣ ದುರಾಗ್ರಹವನ್ನು ಹಿಡಿದು ಸಾಮಾಜಿಕ ವೈಮನಸ್ಯ ಬೆಳೆಸಬಾರದೆಂದು ವಿನಂತಿ ತಮ್ಮ ಧರ್ಮದಷ್ಟೇ ಬಾಂಧವರ ಪ್ರೀತಿ ಸಂಗ್ರಹಿಸಬೇಕೆಂದೇ ಆಪ್ತರ್ದ್ದೇ ಯುವ ವಿದ್ಯಾ ಧರ್ಮದ ವಿದ್ವಾಂಸರು ಗಳ ರಹಸ್ಯವನ್ನರಿತು ವಿಶ್ವಶಾಂತಿಯ ಉನ್ನತ ಕಾರ್ಯದಲ್ಲಿ ವಿಘ್ನಗಳನ್ನುಂಟು ಮಾಡಬಾರದಾಗಿ ಅರಿಕೆ

ಸಿದ್ದಾಪುರ— (ತಾ ೧೫-೯-೩೪) ಕಳೆದ ಕಾರ್ತಿಕ ತಿಂಗಳಲ್ಲಿಯ ಸಂಗ್ರಾಮದಲ್ಲಿ ಗುಂಜಗೋಡ ಕೇಂದ್ರದ ಶ್ರೀ ಸುಬ್ಬಯ್ಯ ವೀರಪ್ಪ ಹೆಗಡೆ ಹೆಗಡೆಮನೆ ಇವರ ಮನೆ ಸರಕಾರ ಜಪ್ತಿಗೆ, ಅದನ್ನು ಕಳೆದ ಸೋಮವಾರ ಮುಕ್ತ ಬಿಡುಗಡೆ ಮಾಡಿಕೊಟ್ಟಿರುತ್ತಾರೆ

ಸಪ್ಟಂಬರ ತಿಂಗಳಲ್ಲಿ ನಿರ್ಮಿತರ ಪ್ರತ್ಯಕ್ಷವಾಗಿ ಸಹಾಯದ ಕೆಲಸ ನಡೆಯದೆ ಬೀಳಗಿ, ಕ್ಯಾದಗಿ ದೇವನಳ್ಳಿ, ಬಾಳೂರು, ಗುಂಜಗೋಡ, ಕಲ್ಲಬಿಳು ಕಡೆಗಳಲ್ಲಿ ನಿರಾಶ್ರಿತರಿಗೆ ಸಹಾಯ ಕೊಡುವ ಕೆಲಸ ಮುಗಿದಿದೆ ಮಂಗಳೂರಿಗೆ ಬಟ್ಟೆ ಸಹ ಕಳಿಸಿಕೊಡುತ್ತಾರೆ

ಒಬ್ಬರು ತಿಳಿಸುವದೇನೆಂದರೆ — ನಿರಾಶ್ರಿತರಿಗೆ ಸಹಾಯ ಮಾಡುವವರು ಒಂದು ಸಂಗತಿಯನ್ನು ಮರೆಯಕೂಡದು ನಿಷ್ಕ್ರಿಯ ಕಟಿಬದ್ಧ ಧ್ಯೇಯವುಳ್ಳ ಸ್ವಾವಲಂಬನ ದ್ರವ್ಯ ಸಹಾಯ ಪ್ರಜೆಗಳಿಗೆ ಸ್ವಾವಲಂಬಿಗಳಾಗಿ ಬಾಳುವ ಸ್ವಭಾವ ರಾಷ್ಟ್ರೀಯ ಸಭೆಯು ಮಹಾತ್ಮಾಜಿಯವರ ವಿಚಾರದಲ್ಲಿ ಶ್ರೀ ರಾಜೇಂದ್ರ ಪ್ರಸಾದರು ಭೂಕಂಪಗ್ರಸ್ತರಿಗೆ ಸಹಾಯ ಮಾಡುವಾಗ ಈ ದೃಷ್ಟಿಯನ್ನಿಟ್ಟು ನಿರಾಶ್ರಿತರ ಕೈಯಿಂದ ಕೆಲಸ ಮಾಡಿಸಿಕೊಂಡು ದ್ರವ್ಯಸಹಾಯ ಮಾಡಿರುತ್ತಾರೆ ಆದ್ದರಿಂದ ನಿಷ್ಕ್ರಿಯತೆಗೆ ಹಚ್ಚುವ ಸಹಾಯ ಮಾಡದೆ ಕೈಮಗ್ಗ ಕೇಂದ್ರಗಳನ್ನು ಅಲ್ಲಲ್ಲಿ ಸ್ಥಾಪಿಸಿ ನಡಿಸಿದರೆ ನಿರಾಶ್ರಿತರಿಗೆ ಸಹಾಯವಾದೀತು ಹಿಂದಿನವರೂ ಇದೇ ಪ್ರಕಾರ ಅಲ್ಲಲ್ಲಿಯ ಜನರಿಗೆ ಕೈಮಗ್ಗ ಅರಳೆ ಪೂರೈಸಿ ಉದ್ಯೋಗ ಪ್ರವೃತ್ತಿಯನ್ನು ಬೆಳೆಸಬೇಕು, ಜೀವನಾಧಾರ ಕಲ್ಪಿಸಿಕೊಟ್ಟು ಕಾರ್ಯಕ್ಷಮರನ್ನಾಗಿ ಮಾಡಬೇಕು, ಅಂದರೆ ಸ್ವಾವಲಂಬನದಿಂದ ಬಂದ ಶಕ್ತಿಯಿಂದ ಕಷ್ಟವನ್ನು ಪರಿಹರಿಸಿಕೊಳ್ಳುವರು ಸತ್ಯಾಗ್ರಹಿಗಳಿಗೆ ಸ್ವಾವಲಂಬನ ಮಾರ್ಗ ದೊರೆತಿದ್ದರಿಂದ ಅನ್ನ ವಸ್ತ್ರ ರಾಷ್ಟ್ರಕಾರ್ಯ ಸಾಧ್ಯವಾಗುವದೆ ಇತ್ಯಾದಿ

ಕಾರವಾರ— ಪ್ಲೇಗಿನ ಉಪಟಳ ಇನ್ನೂ ನಿಲ್ಲಲಿಲ್ಲದು ಊರಲ್ಲಿ ಇಲಿ ಬೀಳುತ್ತಿವೆ

ಮ್ಯುನಿಸಿಪಾಲಿಟಿಯಲ್ಲಿ ರವಿವಾರ ತಾ ೯ನೇಯ ಒಂದು ಸಂತೋಷ ಕೂಟ ಸಮಾರಂಭವಾಯಿತು ಅಧ್ಯಕ್ಷರಾದ ರಾ। ಪುರುಷೋತ್ತಮ ಮಯ್ಯರವರಿಗೆ ಮ್ಯುನಿಸಿಪಾಲಿಟಿ ಸಭೆಯವರು ತಾಲೂಕು ಸಮುದಾಯ ವತಿಯಿಂದ ತಮಗೆಲ್ಲರಿಗೆ ಪ್ರೀತಿಯಿಂದ ನಡೆಸಿಕೊಂಡಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಸಹಕಾರ ದೊರೆತ ಬಗ್ಗೆ ಡಾ। ಮಯ್ಯರವರು ಆಭಾರ ಮನ್ನಿಸಿದರು

ತಾ ೩ನೇ ಸಂಚಿಕೆಯೊಳಗಿನ ಕೋರ್ಟಿನವರ ಸುದ್ದಿಯ ಕುರಿತು ವರ್ತಮಾನವು ಬರೆಯುವದೇನೆಂದರೆ — ಸದ್ದಿಯಲ್ಲಿ ಉಲ್ಲೇಖಿಸಿದ ಡಾ। ವಾಘ ಕಡೆ ಟಾಂಗಾ ಮಾಡಿದ್ದಲ್ಲಿ ತಿಳಿಯುವದೇನೆಂದರೆ — ಆ ರಾತ್ರಿ ಡಾ। ವಿಳಂಬಮಾಡಿದ್ದರೂ ತಮ್ಮಿಂದ ಅದನ್ನು ಜಾಗ್ರತೆ ಕೊಂಡಿರುತ್ತಾರೆ ಶಸ್ತ್ರಪ್ರಯೋಗ ಅವಶ್ಯ ಬೀಳಬಹುದೆಂದು ಡಾ। ವಿಳಂಬಮಾಡಿದರು ಆಗಲೇ ಅಭಿಪ್ರಾಯಪಟ್ಟಿದ್ದರು ಆದರೆ ಶಸ್ತ್ರಕ್ರಿಯೆ ಮಾಡುವರು ಅವಶ್ಯವಿಲ್ಲವಾಗಿದೆ, ರಾತ್ರಿ ಹುಡುಗನನ್ನು ಆಸ್ಪತ್ರೆಯಲ್ಲಿ ಸೇರಿಸಬೇಕಾಗಿಯೂ ಡಾ। ವಿಳಂಬಮಾಡದೆ ಹೇಳಿದ್ದರು, ಆದರೆ ಮಾರನೇ ದಿನ ಶಸ್ತ್ರಪ್ರಯೋಗ ಮಾಡುವದಿದ್ದಲ್ಲಿ ಮಾರನೇ ದಿನವೇ ಹುಡುಗನಿಗೆ ಆಸ್ಪತ್ರೆಗೆ ತರುತ್ತೇವಾಗಿ ಹೇಳಿ, ಹುಡುಗನಿಗೆ ಒಯ್ಯಲಾಯಿತು. ಶಸ್ತ್ರಪ್ರಯೋಗ ಮಾಡುವ ಮುಂಚೆ ಕ್ಷ' ಕಿರಣಗಳ ಸಹಾಯದಿಂದ ಮುರಿದ ಕೈಯ ಛಾಯಾಚಿತ್ರ ಕೊಳ್ಳುವದು ಅವಶ್ಯವಿದ್ದದರಿಂದಲೂ, ಆ ಆಸ್ಪತ್ರೆ ಇಲ್ಲಿಯ ಆಸ್ಪತ್ರೆಯಲ್ಲಿ ಇಲ್ಲದರಿಂದಲೂ ಡಾ। ವಿಳಂಬ ಅಪೇಕ್ಷೆಯ ಮೇರೆಗೆ ಹುಡುಗನಿಗೆ ಮುಂಬಯಿಗೆ ಒಯ್ಯಲಾಯಿತು ಡಾ। ವಿಳಂಬಮಾಡಿದರೆಂದೇನೂ ತಪ್ಪಿಲ್ಲ ಇತ್ಯಾದಿ

ತಿಮ್ಮಪ್ಪ ಶೆಡಿ.— ಭಟಕಳ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಕಳುಹಿದ ಲೇಖದಲ್ಲಿ ತಾ ೩೧-೩-೩೪ನೇ ವರೆಗೆ ಮ್ಯುನಿಸಿಪಾಲಿಟಿಯಿಂದ ಜಿಲ್ಹಾ ಲೋಕಲ್ ಬೋರ್ಡಿಗೆ ಪ್ರಾಥಮಿಕ ಶಿಕ್ಷಣದ ಸಂಬಂಧ ರೂ ೭೦೦೦ ಸಲ್ಲತಕ್ಕದ್ದೆಂದು ಬರೆದಿದೆ, ಅದು ತಪ್ಪು ತಾ ೩೧-೩-೩೪ನೇ ವರೆಗೆ ರೂ ೭೦೦ ಸಲ್ಲತಕ್ಕದ್ದಾಗುತ್ತದೆ ಎಂದು ವ್ಯವಸ್ಥಾಪಕರು ತಾ ೧೬ ನೇಯ ಬರೆಯುತ್ತಾರೆ

— ಚೆನ್ನದ ದರ ಅತ್ಯಕ್ಕೇ ನಿಂತಿದೆ, ಈಗಿನ ಮಾರ ಇಳಿತವು ಇದಿನಿಗೆ ದರ ಇಳಿಯುವದೆಂದ ಹೇಳಬರದು ಅಮೇರಿಕಾ-ಫ್ರಾನ್ಸ ದೇಶಗಳಿಂದ ಚಿನ್ನಕ್ಕೆ ಗಿರಾಕಿ ಹೇರಳ ಈ ದೇಶಗಳಲ್ಲಿ ಜಗತ್ತಿನ ಮೂರನೆಯ ಚಿನ್ನ ಒಟ್ಟಾಗಿದೆಯೆಂದು ಹೇಳಬಹುದು ಆದಾಗ್ಯೂ ಚಿನ್ನದ ಪೇಟೆಯ ಏರು ಕಡಿಮೆ ಇದ್ದ ಈಗ ಒಂದು ತೊಲೆ ಚಿನ್ನಕ್ಕೆ ರೂ ೩೪ ೧೫-೩ ಇದೆ

— ಮುಂಬಯಿಯ ರಾಷ್ಟ್ರೀಯ ಸಭೆಗೆ ಬಿಹಾರ ಪ್ರಾಂತದೊಳಗಿನ ಬಾಬು ರಾಜೇಂದ್ರ ಪ್ರಸಾದರವರು ಅಧ್ಯಕ್ಷರಾಗುವರು ಅಲ್ಲಲ್ಲಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅವರಿಗೇ ಪಾಠಿಂಬಾ ನೀಡುತ್ತಿದ್ದಾರೆ ಕರ್ನಾಟಕ ಕಾಂಗ್ರೆಸ ಕಮಿಟಿಯವರೂ ಅಧ್ಯಕ್ಷಸ್ಥಾನಕ್ಕಾಗಿ ಅವರಿಗೆ ಸೂಚನೆ ಮಾಡಿದ್ದಾರೆ

— ಬಂಗಾಲದಲ್ಲಿ ಕುದುರೆ ಶರ್ಯತ್ತು ನಡೆದಾಗ ಗವ್ಹರ್ನರರಾದ ಸರ್ ಜ್ಹಾನ್ ಎಂಡರಸನ್‌ರವರ ಮೇಲೆ ಗುಂಡು ಹಾರಿಸಿದ ಬಗ್ಗೆ ನಡೆದ ಖಟ್ಲೆಯಲ್ಲಿ ಬಾಬು ಭಟ್ಟಾಚಾರಜಿ ರವೀಂದ್ರ ಬಾನರ್ಜಿ, ಮನೋರಂಜನ ಬಾನರ್ಜಿ, ಈ ಮೂವರಿಗೆ ಗಲ್ಲಿಗೇರಿಸಬೇಕೆಂದು ಶಿಕ್ಷೆ ವಿಧಿಸಲಾಗಿದೆ ಮಧುಸೂದನ ಬಾನರ್ಜಿ ಸುಕ ಮಾರ ಘೋಷರವರಿಗೆ ೧೪ ವರ್ಷಗಳ ಶಿಕ್ಷೆ, ಸುಶೀಲ ಚಕ್ರವರ್ತಿಯವರಿಗೆ ೧೨ ವರ್ಷಗಳ ಶಿಕ್ಷೆ, ಕುಮಾರಿ ಉಮಿಯಾ ಮಜುಮದಾರರವರಿಗೆ ಕಾಲೇಪಾನಿ ಶಿಕ್ಷೆ, ಹೀಗೆ ಶಿಕ್ಷೆ ವಿಧಿಸಲಾಗಿದೆ ಭಟ್ಟಾಚಾರಜಿ ಎಂದವರು ತಮ್ಮ ಕರ್ತವ್ಯಕ್ಕೆ ಹರಟೆ ಹೊಡೆಯುತ್ತಿದ್ದರು, ಶಿಕ್ಷೆ ಹೇಳಿದ ಬಳಿಕ, ನ್ಯಾಯಾಸನೆಯಲ್ಲಿ ಕೆಲ ಅಸಭ್ಯ ಉದ್ಗಾರಗಳನ್ನು ಮಾಡಿ, ಪೂರ್ಣ ಮನದಲ್ಲಿ ಇದ್ದು ಮುಕ್ತಿಯಿಂದಿರದೆ ಕೆಲ ಮಾತುಗಳನ್ನು ಹೇಳಿದರು ಮತ್ತು ಸಮಾಧಾನ ವೃತ್ತಿಯಿಂದ ಆರೋಪಿಗಳು ಶಿಕ್ಷೆ ಕೇಳಿಕೊಂಡರು ಗುಂಡಿನ ಗುರಿ ತಪ್ಪಿದ್ದರಿಂದ ಗವ್ಹರ್ನರರಿಗೆ ಅಪಾಯವೇನೂ ಆಗಲಿಲ್ಲ, ಇದೊಂದು ಸುದೈವ

ಅಲ್ಲಲ್ಲಿ ಇಷ್ಟಿಷ್ಟು!

ಮದ್ರಾಸದೊಳಗಿನ ಜಸ್ಟಿಸ್ ಪತ್ರಿಕೆಯ ಅಯಂ ಬೇಟದೊಳಗಿನ ಸದ್ದಿ ಂದು ಓದಿದವರೇನಂದರೆ ಕಲ್ಲಿಂದ ೬ ಮೈಲು ದೂರ ಪೆರೂರು ಎಂಬ ಗ್ರಾಮದಲ್ಲಿದ್ದ ರಾಮಮ್ಮಳ ಎಂಬ ಹೆಂಗಸು ಗರ್ಭಿಣಿಯಾಗಿ ೧೫ ತಿಂಗಳುಗಳು ಆದವು. ೯ನೇ ತಿಂಗಳಿನಿಂದ ಆವಳಿಗೆ ಆಗಿಂದಾಗ ಹೊಟ್ಟೆನೋವಾಗ ಹತ್ತಿ ಹೃದಯಕ್ರಿಯೆ ನಿಲ್ಲ ಹತ್ತಿ ಕಷ್ಟಕ್ಕಿಡಾಗಿ ಅವಳು ಪ್ರಸೂತಳಾಗಿ ಒಂದು ಸಣ್ಣ ಮಗುವಿಗೆ ಜನ್ಮ ಕೊಟ್ಟಳು. ತಿಂಗಳುಗಳ ತರುವಾಯ ೧೧ ತಿಂಗಳ ತನಕ ಆ ಹಾವಿಗೆ ಆವಳು ಅಕ್ಕರತೆಯಿಂದ ಸಾಕಿದಳು. ೧೫ ತಿಂಗಳ ಪರ್ಯಂತ ಆ ಹಾವು ಸುಮ್ಮನೆ ಉಳಿಯಿತು. ಸೋಪಾನ ಮಾಡ ನೋಡಲೆಂದ ಸಮಯ ಸಾಧಿಸಿ ಆತನಿಗೆ ಕಚ್ಚಿ ಬಿಟ್ಟಿತು! ಸೋದರನ ವಿಷದಿಂದ ಸೋದರಮಾವನು ಸ್ಮೃತಿ ತಪ್ಪಿ ಬಿದ್ದನು. ಪರಿಹಾರದ ವರೆಗೆ ಒಂದು ಹಾವಿಗೆ ಕಲ್ಲು ಹೊಡೆದು ಕೊಂದರು. ತಾಯಿಗೆ ಕಷ್ಟ ಆಪತ್ತು ತಪ್ಪದೆ ಆವಳು ಬಿಡಲೊಲ್ಲಳು. ಹಾವು ಸತ್ತದ್ದು ನೋಡಿ ಬಿಕ್ಕಿ ಬಿಕ್ಕಿ ಅತ್ತಳು. ರಾಮಮ್ಮಳು ತನ್ನ ನೆಗೆ ಹಾವು ಕಚ್ಚಿದ ಭಾಗದಲ್ಲಿ ತಾನು ಕಚ್ಚಿ ವಿಷವನ್ನೆಲ್ಲ ಹೀರಿಕೊಂಡಳು. ತಮ್ಮನು ನಿದ್ದೆಯಿಂದ ಎಚ್ಚತ್ತಂತೆ ಎದ್ದು ಕುಳಿತುಕೊಂಡನು! ರಾಮಮ್ಮಳಿಗೆ ವಿಷದ ಬಾಧೆಯಾಗಲಿಲ್ಲ! ಯಾಕೆಂದರೆ ವಿಷ ಉಂಟಾದ ಹನ್ನ ಹಾವಿನ ಅವಳಲ್ಲಿಯ ವಿಷ ಹೊಡೆಯಾರೀತು?

* *

ಕುತ್ತಿಕೋಣದಲ್ಲಿ ರಾ| ವೇಲಾಯುಧಂ ಪಿಳ್ಳೆ ಎಂಬ ಮಂತ್ರವಾದಿಗಳಿದ್ದಾರೆ. ಮಂತ್ರೋದಕದಿಂದ ಜಲ ಚಿಕಿತ್ಸೆಯಿಂದ ಅವರು ನಿತ್ಯರೋಗಗಳುಳ್ಳವರಿಗೆ ಸ್ವಾಧೀನ ಮಾಡಿದ್ದಾರೆ. ಸಿದ್ಧವೈದ್ಯ ಸ್ವಾಮಿ ಎಂಬ ಕಾಲಿಲ್ಲದ ಹೆಂಗಸಿಗೆ ಒಂದು ತಿಂಗಳಲ್ಲಿ ಎರಡೇ ದಿನ ಸ್ನಾನಗಳು! ಹೆಂಗಸು ನಿರ್ಲಕ್ಷ್ಯವಾಗಿ ಕಡವಾಗಿ ಬಿಟ್ಟಳು! ಆದುದರಿಂದ ಹಾಸ್ಪತ್ರೆ ಡಾಕ್ಟರರು ಅವಳಿಗೆ ಬದುಕಿಸಲಾರರು ಎಂದರು. ಪಿಳ್ಳೆಯವರು ಬಂದು ಉಳಿಸುವೆನು ಎಂದು ಜಲಸಿಂಚನ ಮಾಡಿದರು. ಆ ಹೆಂಗಸು ಆಗಲೂ ನಿಶ್ಚೇಷ್ಟಿತಳಾಗಿ ಉಳಿದಳು. ಆ ವೇಳೆ ಕ್ರಮವಾಗಿ ಅವಳಿಗೆ ಸ್ಮೃತಿ ಬಂತು. ಎದ್ದು ಕುಳಿತು ಉಂಡಳು. ಜನರು ಆನಂದಪಟ್ಟರು. ಸಮ್ಮಾನಿಸಿದರು. ರಾ| ಪಿಳ್ಳೆಯವರು ಈಗ ೨೫ ವರ್ಷಗಳಿಂದ ಈ ಪರೋಪಕಾರ ಮಾಡುತ್ತಿದ್ದಾರೆ, ಹಣ ತೆಗೆದುಕೊಳ್ಳುವುದಿಲ್ಲ. ಅವರಿಗೆ ದೊಡ್ಡ ದೊಡ್ಡವರು ಪ್ರಶಸ್ತಿಪತ್ರಗಳನ್ನು ಕೊಟ್ಟಿದ್ದಾರೆ. ಎಷ್ಟೋ ಸರ್ಜನ್ ಪ್ರಶಸ್ತಿ ಪತ್ರಿಕೆಗಳು ಅನೇಕವಿವೆ. ಮದ್ರಾಸ ಇಲಾಖೆಯ ಸರ್ಜನ್ ಜನರಲ್‌ರೂ ಒಂದು ಪ್ರಶಸ್ತಿಪತ್ರಿಕೆ ಕೊಟ್ಟಿರುತ್ತಾರೆ. ರಾ| ಪಿಳ್ಳೆಯವರ ಕಡೆ ದೂರದೂರದಿಂದ ಜನರು ಬರುತ್ತಾರೆ. ಸದ್ಗುಣರು ಬರೆದಂತೆ ಅಳುತ್ತ ಬರುತ್ತಾರೆ, ನಗುತ್ತ ಹೋಗುತ್ತಾರೆ! ಮಂತ್ರ ಮಹಿಮೆ ಹೇಗಿದೆ!! ಸುಶಿಕ್ಷಿತರು ವಿಚಾರ ಮಾಡಬೇಕಾದ ವಿಷಯ! ಮಂತ್ರಗಳನ್ನು ಸರಿಯಾಗಿ ಪ್ರಯೋಗಿಸಿದ್ದಲ್ಲಿ ಅದರಿಂದ ಲೋಕಕ್ಕೂ ದೇಶಕ್ಕೂ ಕಲ್ಯಾಣವಿದೆ.

* *

'ಮದ್ರಾಸ ಮೇಲ್' ಪತ್ರಿಕೆಯು ಮಲಬಾರದ ಸದ್ದಿಗಾರನ ಪ್ರಮಾಣದಿಂದ ಒಂದು ಆಶ್ಚರ್ಯಕರವಾದ ಸದ್ದಿಯನ್ನೊಂದು ಪ್ರಕಟಿಸಿದ್ದಾರೆ. ಮಾಧವ ಮನೋಕಿ ಎಂಬವನು ಕುಸ್ತಿಯಾಳ್ ನಾಯರ ಇವನ ಮೇಲೆ ೬ ರೂಪಾಯಿಗಳ ದಾವೆ ಹೂಡಿದ್ದನು! ಹಣ ಮಾಧವನಿಗೆ ಸಂದಿಲ್ಲ, ಆತನು ಗುಡಿಯಲ್ಲಿ ವಿಧಿಯುಕ್ತ ಪ್ರಮಾಣ ಮಾಡಿದಲ್ಲಿ ಹಣ ಕೊಡಲಿದ್ದೇನೆ ಎಂದು ಕುಸ್ತಿಯಾಳನು ಹೇಳಿದಂತೆ, ಅಂಬಾಡಿ ಕೋರ್ಟಿನವರು ಪ್ರಮಾಣದ ಹುಕ್ಮು ಮಾಡಿದರು. ಕುಸ್ತಿಯಾಳನು ಶ್ರೀ ದೇವರ ಇದಿರಿಗೆ ಮಾಧವನ ಹಣವನ್ನು ಇಟ್ಟನು! ಮಾಧವನು ಕೆರೆಯಲ್ಲಿ ಸ್ನಾನ ಮಾಡಿ ದೇವರ ಇದಿರಿಗೆ ಬಂದು ನಿಂತನು. ನೆರೆದ ಜನಸಂದಣಿಯ ಮುಂದೆ ಪ್ರಮಾಣದ ವಿಧಿ ಮುಗಿಸುವಷ್ಟರಲ್ಲಿ ಹಣ ಸಲ್ಲದಿಲ್ಲವಾಗಿ ಮಾಧವನು ಪ್ರಮಾಣ ಮಾಡಿ ಹಣ ಒಯ್ದನು! ಆಮೇಲೆ ೧೮ ತಾಸಿನೊಳಗೆ ಮಾಧವನು ಸತ್ತನು. ಕುಸ್ತಿಯಾಳನು ಕೊಟ್ಟ ಹಣ ಇದೊಂದು ತೀರ್ಮಾನದ ನಮೂನೆ!

* *

ಜರ್ಮನಿಯ ನ್ಯೂರೆಂಬರ್ಗ ಪಟ್ಟಣದಲ್ಲಿ ನಾಝಿ ಯುವಕರ ಬಹು ದೊಡ್ಡ ಸಭೆಯಾಯಿತು. ೬೦ ಲಕ್ಷ ಹುಡುಗ-ಹುಡುಗಿಯರು ೬೦ ಸಾವಿರ ಪ್ರತಿನಿಧಿಗಳನ್ನು ಕಳುಹಿಸಿ ಈ ಸಭೆಗೆ ಹಾಜರಿದ್ದರು. ಜರ್ಮನಿಯ ಸರ್ವಸತ್ತಾಧಾರಿಗಳಾದ ಹರ್ ಹಿಟ್ಲರರವರು ಈ ಸಭೆಯಲ್ಲಿ ಭಾಷಣ ಮಾಡಿದ್ದೇನಂದರೆ— "ರಾಷ್ಟ್ರ ಸಂಗ್ರಾಮವನ್ನು ನೀವು ನಡೆಸಬೇಕು. ನಿಶ್ಚಿಂತರಾಗಿರಿ. ಎದೆಗಾರರಾಗಿ ವಿಧೇಯರಾಗಿ ಕಾದಾಡಬೇಕು. ಸ್ಥಿರವಾಗಿ ನಿಲ್ಲಬೇಕು. ಲೋಕದಲ್ಲಿ ಯಾರೂ ದಾರಿಯ ದಾನ ಮಾಡುವದಿಲ್ಲ. ಸ್ವಪರಾಕ್ರಮದಿಂದ ಸಂಪಾದನೆ ಮಾಡುವವರಿಗೆ ಮಾತ್ರ ಲಾಭ ಸಿಗುತ್ತದೆ. ಮುಂದಿನ ನಾಝಿ ಸಂಘದ ಲೋಕನಾಯಕರು ನೀವು. ಇಷ್ಟು ದೊಡ್ಡ ಪ್ರಚಂಡ ಸಂಸ್ಥೆ ಲೋಕದಲ್ಲಿಯೇ ಇಲ್ಲ." ಈ ಪ್ರಕಾರ ಹಿಟ್ಲರರವರು ನವಯುವಕರಿಗೆ ಹುರಿದುಂಬಿಸಿದ್ದಾರೆ.

* *

ಅಜಮೀರದ ಮ್ಯುನಿಸಿಪಾಲಿಟಿ ರದ್ದಾಗಿ ಅದು ಸರಕಾರದ ವ್ಯವಸ್ಥಾಪಕ ಮಂಡಳದ ಸ್ವಾಧೀನವಿದೆ. ಈ ವ್ಯವಸ್ಥಾಪಕ ಮಂಡಳಕ್ಕೆ ಊರ ಚಿಂತೆಯಿಲ್ಲ. ಅದರಿಂದ ಅಜಮೀರ ಪಟ್ಟಣ ಒಳದುಕೊಳ್ಳುವ ಪ್ರಸಂಗ ಬಂದಿತ್ತು. ಫೆಬ್ರುವರಿ ... ಜನಸಗರು ಈ ಕೆರೆಗಳಲ್ಲಿ ಮಳೆ ಬಿದ್ದಿ ಅವರಿಗೆ ನೀರು ಕುಡಿಯಲು ಸಿಗುತ್ತದೆ. ಮಳೆ ಬಂತು. ಕೆರೆ ನೀರು ಹೊರ ಹರಿದು ಹೋಗವಂತೆ ಪರಿಪಾಟ ಮಾಡಿರೆಂದು ರಕ್ಷಾದ ಮ್ಯುನಿಸಿಪಾಲಿಟಿಯು ಒಳ್ಳೆ ಕಾಳಜಿಯ ವ್ಯವಸ್ಥಾಪಕ ಮಂಡಳದ ಅವ್ಯವಸ್ಥೆಯನ್ನು ನೋಡಲಾರದೆ ತಿಳಿಸಿದರು. ರಭಸದ ಮಳೆ ಸಿಗದಿದ್ದಿಲ್ಲ — 'ಬಿಸ್ತ್ರಿ ಎಷ್ಟು ಬಿದ್ದ' ತಿಳಿಯಲಿಲ್ಲವೆ?! ಕೆರೆ ಕೆರೆ ತುಂಬಿ ಅಜಮೀರ ಪಟ್ಟಣದಲ್ಲೆಲ್ಲ ನೀರೇ ನೀರು. ನೀರು ಹೊರಹೋಗುವ ಕಾಲುವೆಗಳೆಲ್ಲ ಮ್ಯುನಿಸಿಪಾಲಿಟಿಯವರು ಗಟ್ಟಿಯಾಗಿ ಮುಚ್ಚಿಬಿಟ್ಟಿದ್ದರು. ದೂರದವರೆ, ರಕ್ಷಾದ ಮ್ಯುನಿಸಿಪಾಲಿಟಿಯವರು ಅದನ್ನು ತೆರೆದಿರಲಿಲ್ಲವೆಂದು ಇಟ್ಟಿದ್ದರು! ಪಟ್ಟಣ ತುಂಬ ನೀರು ಬಂದ ಬಳಿಕ, ವ್ಯವಸ್ಥಾಪಕ ಮಂಡಳದ ಕಣ್ಣು ತೆರೆಯಿತು! ಆದರೆ ಮಾಡುವದೇನು? ಅಲ್ಲಿಗಾಗಲೇ ಕೊಟ್ಯಧೀಶರಾದ ಶೇಟ ಒಬ್ಬರಿಂದ ರವರು ತಮ್ಮ ಮನೆಗಳನ್ನು ಬಿಟ್ಟು ನಿರಾಧಾರಿಗಳಾಗುವ ಜನರಿಗೆ ಕರೆತಂದು ತಮ್ಮ ಇಮಾರತುಗಳಲ್ಲಿ ವ್ಯವಸ್ಥೆ ಮಾಡಿದರು. ಈ ಪ್ರಕಾರ ಅವ್ಯವಸ್ಥೆ ಮಾಡಿದಾಗ್ಯೂ ವ್ಯವಸ್ಥಾಪಕ ಮಂಡಳ ರದ್ದಾಗುವ ಭೀತಿಯಿಲ್ಲ!

* *

ಕಳೆದ ಶುಕ್ರವಾರ ತಾ| ೭ ನೇದ್ ಪಾರ್ಸಿ ಯುಗಾದಿ! ನವರೋಜ ಹಬ್ಬ! ಆ ದಿನ ಪಾರ್ಸಿ ಸಮಾಜದವರು ಬಹಳ ಧರ್ಮ ಮಾಡುತ್ತಾರೆ. ಪಾರ್ಸಿ ಸಮಾಜದವರ ಧರ್ಮವು ಲೋಕಪ್ರಸಿದ್ಧವಿದೆ. ಲಕ್ಷಾವಧಿ ರೂಪಾಯಿಗಳನ್ನು ಅವರು ಧರ್ಮ ಮಾಡುತ್ತಾರೆ. ಸ್ವಸಮಾಜದವರಿಗಾಗಿಯೂ, ಪರ ಸಮಾಜದವರಿಗಾಗಿಯೂ ಅವರು ಈ ತನಕ ಲಕ್ಷಾವಧಿ ರೂಪಾಯಿಗಳನ್ನರ್ಪಿಸಿದ್ದಾರೆ. ಕಳೆದ ವರ್ಷ ಈ ಸಮಾಜದವರು ಮಾಡಿದ ಧರ್ಮವು ೧ ಕೋಟಿಗೆ ಮಿಕ್ಕಿದೆ. ೨೭ ಲಕ್ಷ ರೂಪಾಯಿ ಖರ್ಚು ಮಾಡಿ ಕಾಲೋನಿಯಲ್ಲಿ ಬಡ ಪಾರ್ಸಿಗಳಿಗೆ ಉಳಕೊಳ್ಳಲು ಮನೆಗಳನ್ನು ಕಟ್ಟಿಸಿಟ್ಟರು. ನಿರುದ್ಯೋಗಿಗಳಿಗಾಗಿ ಹುನ್ನರ ಶಾಲೆ ಯಾನೆ ಉದ್ಯೋಗ ಮಂದಿರವನ್ನು ಸ್ಥಾಪಿಸುವದಕ್ಕಾಗಿ ಒಬ್ಬರು ೧೩ ಲಕ್ಷ ರೂಪಾಯಿ ಕೊಟ್ಟರು. ಒಬ್ಬಳು ೫ ಲಕ್ಷ ರೂಪಾಯಿ ಕೊಟ್ಟಳು, ಅವಳೇ ೧೫ ಲಕ್ಷದ ಆಬಾದನ ಕೊಟ್ಟಿದ್ದಾಳೆ. ಪಾರ್ಸಿ ವಿದ್ಯಾರ್ಥಿಗಳನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಕಳಿಸುವದಕ್ಕಾಗಿ ರೂ ೧೫ ಲಕ್ಷ ಕೊಡಲಾಗಿದೆ. ಪ್ರಸೆಯಲ್ಲಿ ಇಂಗ್ಲಂಡ ದೇಶದೊಳಗಿನ ಹೆಸರಾದ ಹೆರೋ-ಈಟನ್ ಶಾಲೆಗಳ ನಮೂನೆಗಳ ಮೇಲೆ ಶಾಲೆಗಳನ್ನು ತೆರೆಯುವದಕ್ಕಾಗಿ ೧೫ ಲಕ್ಷ ರೂಪಾಯಿ ಕೊಡಲಾಗಿದೆ. ನಿರುದ್ಯೋಗಿ ಪಾರ್ಸಿಗಳಿಗಾಗಿ 'ಪಾರ್ಸಿ ಜೇಕಾರ ಫಂಡ' ಎಂಬ ಸಂಸ್ಥೆಯಿದೆ. ಈ ಸಂಸ್ಥೆಯವರು ೩೮ ಸಾವಿರ ರೂಪಾಯಿ ಹಂಚಿದರು. 'ಉತ್ತಮ ಎರಿ' ಅಂದರೆ ಉತ್ತರ ಕ್ರಿಯೆ, ನಿಧನದ ೩ ನೇ ದಿನ ಇದು ನಿರವಾಗುತ್ತದೆ. ಈ ಸಮಯ ಸಮಾಜದ ಕಲ್ಯಾಣಕ್ಕಾಗಿ ಪಾರ್ಸಿ ಜನರು ಯಥಾಶಕ್ತಿ ದಾನ ಮಾಡುತ್ತಾರೆ. ಸುಮಾರು ೪ ಲಕ್ಷಕ್ಕೆ ಮಿಕ್ಕಿ ಹಣ ಹೀಗೆ ಈ ವರ್ಷ ಕೊಡಲಿದೆ. ಬಿಹಾರ ಭೂಕಂಪಗ್ರಸ್ತರಿಗಾಗಿ ಟಾಟಾ ಕಂಪನಿಯವರು ೫|| ಲಕ್ಷ ರೂಪಾಯಿ ಕೊಟ್ಟರು. ಮಾ| ಸರ್ ದೋರಾಬ ಟಾಟಾರವರ ಆಸ್ತಿಯು ದಾನಧರ್ಮಕ್ಕಾಗಿ ಅರ್ಧ ಲಕ್ಷ ರೂಪಾಯಿ ತಕ್ಕರು. ಇದಲ್ಲದೆ ಸ್ವಾನ ಗೃಹ ಕಟ್ಟುವದಕ್ಕಾಗಿ ೩೫ ಸಾವಿರ ರೂಪಾಯಿ ಅರ್ಪಿಸಲಾಗಿದೆ. ಪಾರ್ಸಿ ಸಮಾಜವು ದಾನಶೂರವಿದೆ. ಆಯಾ ಸಮಾಜದ ಶ್ರೀಮಂತರೆಲ್ಲರೂ ಇದರಂತೆಯೇ ಸ್ವಸಮಾಜದ ಕಲ್ಯಾಣ ಕಾರ್ಯದಲ್ಲಿ ನೆರವಾದರೆ ಅವರ ಶ್ರೀಮಂತಿಕೆಯು ಸಾರ್ಥಕವಿದೆ.

* *

— ಸಾರ್ವಭೌಮ ದ ಚಮ ಜೋಹಾರ ಪ್ರಕೃತಿ ನಟ್ಟಿಗಿಲ್ಲ ಕೀಲಬಧ

ಸಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರ ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಯಾರು ಬೆಟ್ಟನಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಲವು ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ಸ್ಟೆಪಿ ೪ ಆಣೆ ಡಜನ್ ೧ಕ್ಕೆ ರೂ ೨-೮-೦ ವಿ ಪಿ ೦-೫-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ: ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ| ಬಾ| ೫೧೦, ಪಾರ್ಕ್‌ಟೌನ ಮದರಾಸ

ಈಗಿನ ಪ್ರಪಂಚ.

(೫ನೇ ಪಾನದಿಂದ ಮುಂದುವರಿದದ್ದು)

ಕರ್ನಾಟಕ ಪ್ರಾಂ। ಕಾಂ। ಕ। ನಿರ್ಣಯಗಳು

ಕಳೆದ ತಾ ೯ನೇ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮೀಟಿಯ ಸಭೆ ಬೆಳಗಾವಿಯಲ್ಲಿ ಕೂಡಿ ೨೦ ಠರಾವುಗಳಾಗಿವೆ (೧) ದೇಶೀಯ ಸಂಸ್ಥಾನಗಳೊಳಗೆ ಜವಾಬದಾರ ರಾಜ್ಯಪದ್ಧತಿ ಪ್ರಾರಂಭವಾಗಬೇಕು ಭಾವೀ ರಾಜ್ಯಘಟನೆಯು ಬ್ರಿಟಿಶ ಹಿಂದುಸ್ಥಾನ ಹಾಗು ದೇಶೀ ಸಂಸ್ಥಾನಗಳ ಪ್ರತಿನಿಧಿಗಳಿಗೆ ಮಾನ್ಯವಾಗುವಂಥಾದ್ದಿರಬೇಕು (೨) ಕಾರವಾರ ಜಿಲ್ಲಾ ರೈತರ ಕರುಣ ಕಥೆಗೆ ಕಿವಿಗೊಟ್ಟು ಸಕಲರೂ ಸಹಾಯ ನಿಧಿಗೆ ಶಕ್ತಿಮೀರಿ ನೆರವಾಗಬೇಕು (೩) ಪ್ರತಿಯೊಂದು ಜಿಲ್ಲಾ ಕಮಿಟಿಯವರು ರೈತರ ಅತ್ಯಂತ ದೈನ್ಯಾವಸ್ಥೆಯನ್ನು ವಿಚಾರ ಮಾಡಿ ತೆರಿಗೆ, ತಗಾವಿ ಮೊದಲಾದ ವಸೂಲಿಯ ಸಂಬಂಧ ರೈತರಿಗಾಗುವ ಅನ್ಯಾಯಗಳಿಂದ ರೈತರನ್ನು ರಕ್ಷಿಸಲು ಯತ್ನಿಸಬೇಕು (೪) ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಪ್ರತಿನಿಧಿಗಳು ೩—೨ ರೂಪಾಯಿ ಪಟ್ಟಿಗೆ ಪ್ರತಿನಿಧಿ ಫೀ ಕೊಡಬೇಕು (೫) ಕೊಂಗ್ರೆಸ ಕಾರ್ಯಕಾರಿ ಮಂಡಳದ ಧೋರಣವು ಸದ್ಯಸ್ಥಿತಿಗೆ ಸಮಂಜಸವಾದದ್ದಿದೆ ಐಕ್ಯಮತ್ಯ ಅವಶ್ಯವಾಗಿರುವ ಸಂದರ್ಭದಲ್ಲಿ ಇಬ್ಬಣವಾದದ್ದು ನೋಡಿ ಈ ಸಭೆಗೆ ವಿಷಾದವಾಗುತ್ತದೆ (೬) ಕೊಂಗ್ರೆಸ ಕಮಿಟಿಯವರು ಪಗಾರಿ ಇಸಮರ ನೇಮಿಸುವಲ್ಲಿ ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋದವರನ್ನೇ ಹೆಚ್ಚಾಗಿ ನೇಮಿಸಬೇಕು (೭) ಶ್ರೀ। ಗಂಗಾಧರರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಕಾರವಾರ ರೈತರ ಕಷ್ಟಪರಿಹಾರಕ ಸಮಿತಿಯ ತೀರ್ಮಾನವನ್ನು ಈ ಸಭೆಯು ಮನ್ನಿಸುತ್ತದೆ (೮) ಮುಂಬಯಿಯಲ್ಲಿ ಕೂಡಲಿರುವ ಹಿಂದೀ ರಾಷ್ಟ್ರೀಯ ಸಭೆಗೆ ಬಾಬು ರಾಜೇಂದ್ರ ಪ್ರಸಾದರವರು ಅಧ್ಯಕ್ಷರಾಗಬೇಕಾಗಿ ಈ ಸಭೆಯ ಸೂಚನೆ (೯) ನವಂಬರ ತಿಂಗಳಲ್ಲಿ ನಡೆಯುವ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಗಾಗಿ ಶ್ರೀ। ಸಿದ್ದಪ್ಪಾ ಹೊಸಮನಿ, ಗಂಗಾಧರರಾವ ದೇಶಪಾಂಡೆ, ಶ್ರೀನಿವಾಸರಾವ ಕೌಜಲಗಿ, ಟಿ ಸುಬ್ರಮ್ಮಣ್ಯ, ಕಾರ್ನಾಡ ಸದಾಶಿವರಾವ, ಸಬ್ರಾವ ಹಳದೀಪುರಕರ, ಕೇಶವ ಗೋಖಲೆ ಇವರು ದಕ್ಷಿಣ ಭಾಗದಲ್ಲಿ ಇಲೆಕ್ಷನ್ ಪ್ರಚಾರಕಾರ್ಯ ಮಾಡಬೇಕು (೧೦) ಕೊಂಗ್ರೆಸ ಕಮಿಟಿಗಳ ಕಾರ್ಯಕ್ಕಾಗಿ ಹೊಸ ಸ್ವಯಂಸೇವಕ ಪಡೆ ತಯಾರಿಸಬೇಕು (೧೧) ರೈತರ ಸಲುವಾಗಿ ಹಗಲಿರುಳು ಕಳವಳಪಡುವ ಸರದಾರ ವಲ್ಲಭಭಾಯಿಯವರಿಗೆ ಕರ್ನಾಟಕಕ್ಕೆ ಕರತರಬೇಕು (೧೨) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆಡಳಿತೆಯನ್ನು ಜಿಲ್ಲಾ ಕೊಂಗ್ರೆಸ ಕಮಿಟಿಗಳು ವಿಚಾರ ಮಾಡಿ ಸ್ಥಳಿಕ ಪರಿಸ್ಥಿತಿಯ ಮಾನದಿಂದ ಉಮೇದ್ವಾರರ ಮೇಲೆ ಅವಶ್ಯ ತೋರುವ ನಿರ್ಬಂಧ ಹಾಕಿ ಆ ಸಂಸ್ಥೆಗಳ ವಿದ್ಯಮಾನ ಕೊಂಗ್ರೆಸ ಕಾರ್ಯ ನಡಿಸಬೇಕು (೧೩) ಸತ್ಯಾಗ್ರಹ ಸಮರದಲ್ಲಿ ಕಷ್ಟನಷ್ಟ ಸಹಿಸಿದ ಕರ್ನಾಟಕ ಕೊಂಗ್ರೆಸ ಭಕ್ತರಿಗೆ ಅಭಿನಂದನೆ, ಅತುಲ ಸ್ವಾರ್ಥತ್ಯಾಗ - ಅಚಲ ಧೈರ್ಯ ತೋರಿಸಿದ ಕಾರವಾರ ರೈತರಿಗೆ ಅಂತಃಕರಣಪೂರ್ವಕ ಧನ್ಯವಾದಗಳು (೧೪) ರಾಷ್ಟ್ರೀಯ ಸಭೆಯ ಅಧಿವೇಶನವು ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಜರಗುವಂತೆ ಏರ್ಪಾಟು ಮಾಡಲು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಬಿನ್ನಹ, (೧೫) ಹಿಂದುಸ್ಥಾನದ ನೈಸರ್ಗಿಕ ಹುಟ್ಟುವಳಿಯನ್ನು ಹೀರಲು ಈಗಿನ ಸರಕಾರವು ವಿದೇಶಿ ಕಂಪನಿಗಳಿಗೆ ಕೊಟ್ಟ ಸವಲತ್ತುಗಳು ಸ್ವತಂತ್ರ ಹಿಂದೀ ಸರಕಾರಕ್ಕೆ ಬಾಧಿಸಲಾರವು, (೧೬) ಖಾದಿಯ ಮಾರಾಟ ಕುಗ್ಗಿದೆ, ಆದದರಿಂದ ಕೊಂಗ್ರೆಸ ಭಕ್ತರೆಲ್ಲರೂ ಖಾದಿಯ ಪ್ರಚಾರ ಕಾರ್ಯದಲ್ಲಿ ಹೆಚ್ಚು ಹೆಚ್ಚು ದುಡಿಯಬೇಕು, (೧೭) ಸಿಂಧ ಮತ್ತು ಒರಿಸಾ ಪ್ರಾಂತಗಳನ್ನು ಪ್ರತ್ಯೇಕವಾಗಿ ಏರ್ಪಡಿಸಿದಂತೆ, ಕರ್ನಾಟಕ ಪ್ರಾಂತವನ್ನಾದರೂ ಸ್ವತಂತ್ರವಾಗಿ ಘಟಿಸಲು ಕರ್ನಾಟಕ ಏಕೀಕರಣ ಸಂಘದವರು ಕೈಕೊಂಡ ಕಾರ್ಯದಲ್ಲಿ ಸಹಕಾರ ಮಾಡಲೋಸುಗ ಶ್ರೀ। ಮುರಗಯ್ಯಾ ಜಂಗಿನ, ರಂಗನಾಥರಾವ ದಿವಾಕರ, ಶ್ರೀನಿವಾಸರಾವ ಮಂಗಳವೇಢ, ಹನುಮಂತರಾವ ವೇಶರಯವರದೊಂದು ಉಪಸಮಿತಿ ನೇಮಿಸಲಾಯಿತ (೧೮) ಸತ್ಯಾಗ್ರಹ ಚಳವಳಿಯನ್ನು ನಿಲ್ಲಿಸಿದಾಗ್ಯೂ ಸರಕಾರವು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಿಲ್ಲ, ದಂಡ ಸೂಟ ಎತ್ತಲಿಲ್ಲ, ಸೇವಾದಲದ ಮೇಲಿನ ಬಹಿಷ್ಕಾರ ತೆಗೆಯಲಿಲ್ಲ, ಈ ಧೋರಣವು ತೀರ ಅಯೋಗ್ಯವಾದುದು (೧೯) ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಘಟನೆಯಲ್ಲಿ ತಿದ್ದುಪಾಟಗಳನ್ನು ಸೂಚಿಸುವದಕ್ಕಾಗಿ ಶ್ರೀ। ನಾರಾಯಣರಾವ ಜೋಶಿ ಬಳವಂತರಾವ ದಾತಾರ, ಹನುಮಂತರಾವ ಮೋಹರಿ, ರಾಮರಾವ ಹುಕ್ಕೇರಿಕರ ಇವರದೊಂದು ಉಪಮಂಡಳ ನೇಮಿಸಲಾಯಿತು (೨೦) ಧಾರವಾಡದ ಭಾರತೀಯ ತರುಣ ಸಂಘದವರು ಹೊಸರಿತ್ತಿ ಗಾಂಧಿ ಆಶ್ರಮದ ಪರವಾಗಿ ೩೦ ಗ್ರಾಮಗಳಲ್ಲಿ ಪ್ರಾರಂಭಿಸಿದ ವಿಧಾಯಕ ಕಾರ್ಯಕ್ರಮದ ಸವಿಸ್ತರ ವರದಿಯಲ್ಲಿ ನಮೂದಿಸಿದ ಕಾರ್ಯಕ್ರಮದ ಬಗ್ಗೆ ಸಭೆಯು ಅವರಿಗೆ ಅಭಿನಂದಿಸಿತು ಮತ್ತು ಅವರಿಗೆ ಎಲ್ಲರೂ ಸಹಾನುಭೂತಿಯಿಂದ ನೆರವಾಗಬೇಕಾಗಿ ಬಿನ್ನೈಸಿಕೊಂಡಿತು

ವಿಜಯನಗರಂ ಡಾ॥ ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಮತ್ತು ಸ್ಪ್ಲೀನ್ ಔಷಧಗಳು.

ಒಬ್ಬ ಪ್ರಸಿದ್ಧ ಡಾಕ್ಟರರ ಅಭಿಪ್ರಾಯ —

' ಕಳೆದ ಹತ್ತು ವರ್ಷಗಳ ವೈದ್ಯಕೀಯ ಅನುಭವದ ಅಧಿಕಾರ ವಾಣಿಯಿಂದ ಹೇಳುವುದೇನೆಂದರೆ — ಶಿಶುವೈದ್ಯ ಪ್ರವೀಣ ಡಾ॥ ಜಮ್ಮಿಯವರ ಲಿವರ ರೋಗದ ನಿವಾರಕ ಔಷಧಿಯು ಅತ್ಯಂತ ಫಲದಾಯಕವಾದುದು ಇದರ ಪ್ರಚಾರದಿಂದ ಮಕ್ಕಳ ಮೃತ್ಯು ಸಂಖ್ಯೆಯು ೧೦೦ಕ್ಕೆ ೯೦ರಂತೆ ಕಡಿಮೆಯಾಗಿದೆ ' '

(ರುಜು) ಡಾ। ಟಿ ಕೆ ನಟೇಶನ್.

— ಮಕ್ಕಳ ಭಯಂಕರವಾದ ಲಿವರ್ ರೋಗವನ್ನು ನಿವಾರಿಸಿ ಆರೋಗ್ಯವಂತರನ್ನಾಗಿಯೂ ಆನಂದಭರಿತರನ್ನಾಗಿಯೂ ಮಾಡುವುದು. ಅಂಗಡಿಗಳಲ್ಲಿ ದೊರಕುವ ಬೇರೆ ಮದ್ದುಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ!

ಜಮ್ಮಿ ವೆಂಕಟರಮಣಯ್ಯ, ಮೈಲಾಪುರ, ಮದ್ರಾಸ.

ಸೋಲ ಏಜಂಟ —

ಡಿ. ಎನ್. ಕೋಳಿವಾಡಕರ್, ಕುಮಟಾ. (ಉ ಕ)

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯವೈದ್ಯರಿಗೂ ಹಾಗೂ ಎಲ್ಲ ಫಾರ್ಮಸಿಗಳವರಿಗೂ ಗೊತ್ತಿರುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು [illegible] ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡು ಬರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ [illegible] ಶರೀರ [illegible] ಲಾಡಿಸಿ ಸ್ನಾಯುಗಳ ತಾಕತ್ತನ್ನು, ಶಕ್ತಿಯನ್ನು ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, [illegible] (ವಾತ, ಕ್ಷಯ, ಪಾಂಡು,) [illegible], ರಕ್ತಸಂಬಂಧದ ಕುಷ್ಠವ್ಯಾಧಿ, [illegible], ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಕ್ಕರಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ [illegible] ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ಬಿಕಾರಗಳಿಗೆ, ನರಗಳ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಉತ್ಪನ್ನವಾದ ರೋಗಗಳಿಗೆ ಅತ್ಯುತ್ತಮವಾಗಿ ಉಪಯೋಗವಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದನಂತರ (ದಿನ ಎರಡಾವರ್ತಿ) ಹಿಂದೆಯೊಂದು [illegible] ನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನಿರೋಗತ್ವವನ್ನು [illegible]

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

[illegible] ಔಂಸ ಬಾಟ್ಲಿ ೧ಕ್ಕೆ ರೂ. ೧—೮—೦

,, ಬಾಟ್ಲಿ ೧ಕ್ಕೆ ರೂ. [illegible]

,, ಬಾಟ್ಲಿ ೧ಕ್ಕೆ ರೂ. ೧—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಾದಿಪ್ರ [illegible], ಕುಷ್ಮಾಂಡಾವಲೇಹ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, [illegible], ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ:— ಕುಮಟಾ. (ಉ ಕನ್ನಡ)

|| ಶ್ರೀ ರಾಮ ಪ್ರಸನ್ನ ||

ಡಾ| ಅಂಕಲೀಕರ, ಎಮ್. ಡಿ., (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ !

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾಯುಮನಾವ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ, ಇನ್‌ಫ್ಲುಎಂಝಾ, ಸಂಧಿವಾತ, ಬಾಣಂತಿ ರೋಗ, (ಹಡೆದಾಗ ಇದ್ದವೆ [illegible] ಸಂಭವಿಸುವ ಬಾಣಂತಿ ರೋಗಗಳ ಮೇಲೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲಬದ್ಧತೆ, ಮೈನೋವು, ಧಂಡಿಯಿಂದ ಗಂಟಲು ನೋವು ಮತ್ತು ಗಾಯಕ ಜನರಿಗೆ ಧ್ವನಿಬೇರೆಯಾಗ, ರಕ್ತಹೋರಕಡೆ, ಅತಿಸಾರ, ಸಂಗ್ರಹಣಿ ಕಡೆಗೆರೋಗ, ಮೂಳೆಮೂಲಗರೋಗ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ, ಲಿವ್ಹರ (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, ಪುಪ್ಪುಸದ ಹಾಗೂ ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ [illegible], ಸ್ತ್ರೀಯರ ಮುಟ್ಟುದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ [illegible] ಮಾತ್ರವಾಯುಕ ಸಿದ್ಧೌಷಧವಿರುತ್ತದೆ. ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟ, [illegible], ಸಣ್ಣ ಹುಡುಗರಂತೂ ಬಹಳ ಪ್ರೀತಿಯಿಂದ ತಕ್ಕೊಳ್ಳುವರು. ಇದು ತಕ್ಕೊಳ್ಳುವದರಿಂದ ರಕ್ತ [illegible] ಹಾಗೂ ರಕ್ತವೃದ್ಧಿಯಾಗಿ [illegible] ಮತ್ತು [illegible] ಕಾರಣದಿಂದ ಉಂಟಾದ ಉದಾಸೀನತೆಯು ಕಳೆದು ಮನಸ್ಸು ಆನಂದಿತವಾಗಿ [illegible] ದಿನಾಲೂ [illegible] ಲವಲವಿಕೆಯುಳ್ಳವಾಗಿ ತೋರುವದು.

ಈ ಔಷಧದಿಂದ ೨೦-೨೫ ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು ಪೂರ್ಣ ಗುಣ ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗಗಳ [illegible] ಔಷಧವಿಲ್ಲೆಂದು ನಿರಾಶೆಪಡುವ ಕಾರಣವಿಲ್ಲದಂತಾಗಿದೆ. ಈ ಔಷಧ ಉಪಯೋಗ [illegible] ರೋಗಮುಕ್ತರಾಗಿರಿ. ಈ ತನಕ ಸಾವಿರಾರು ಜನರು ರೋಗಮುಕ್ತರಾಗಿರುವರು. ನಿರಾಶೆಯಿಂದ ದುಃಖಪಡುತ್ತಿರುವ ಜನರಿಗೆ ಇದರ ಮಾಹಿತಿಯಾಗಿ ಗುಣಪಡೆಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸಲ್ಪಟ್ಟಿರುತ್ತದೆ. ಇದನ್ನು ಹಳ್ಳಿಗರು ಹಾಗೂ [illegible] ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು.

ನಗಡಿ, ಜ್ವರ, ದಮ್ಮು ಶುರು ಆದ ಹೊತ್ತಿನಲ್ಲಿ ಜನರು ನಿಷ್ಕಾಳಜಿಯಿಂದ [illegible] ದಿನ ಹಾಗೇ ವ್ಯರ್ಥ ಕಳೆಯುತ್ತಾರೆ. ಹೀಗೆ ಮಾಡುವದರಿಂದ ಮುಂದೆ ಜ್ವರವು ದೋಷಿಯಾಗುವ ಸಂಭವವಿರುತ್ತದೆ. ಆ ಕಾರಣ ಶುರುವಾದ ಕೂಡಲೆ ಈ ಕಷಾಯ ತೆಗೆದುಕೊಳ್ಳುವದರಿಂದ [illegible] ತ್ರಾಸು ತಪ್ಪುವದು. ಇದೇ ರೀತಿ ಬಾಣಂತಿ ಮತ್ತು ಕೂಸು ಇವರಿಗೆ [illegible] ದಿನದಿಂದ ೫-೬ ವಾರಡಿ ಮೂರು ತಿಂಗಳು ತನಕ ಚಾಲು ಇಡುವದು, ಹುಡುಗರಿಗೆ ಬೇರೆ ಔಷಧವು ಕೊಡುವ ಗರಜಿಲ್ಲ. ಚಿಕ್ಕಮಕ್ಕಳ ಕರಕರೆ ನಿಲ್ಲುತ್ತವೆ. ಗರ್ಭಿಣಿ ಹೆಂಗಸರಿಗೆ [illegible] ಇಲ್ಲ. ಅನುಪಾನ ಪತ್ರಿಕೆಯು ಬಾಟ್ಲಿಯ ಸಂಗಡ ಸಿಗುತ್ತದೆ.

ವಿ. ದ. ನಾಗನೀಸ, ಮ್ಯೂಝಿಕ್ ಟೀಚರ, ಮುಂಬಯಿ— ಜನವರಿ [illegible]. ನನ್ನ ಧ್ವನಿಯು [illegible] ಶ್ವಾಸದ ತ್ರಾಸಿನ [illegible] ಹಾಗೂ ಗಾಯನದ ಪ್ರೋಗ್ರಾಮಿನ ಮೇಲೆ ಬಹಳ ಬಿದ್ದುಹೋಗಿತ್ತು. ಆಗ ನಾನು ತಮ್ಮ "ಕಲ್ಪತರು ಕಷಾಯ"ವನ್ನು ತಕ್ಕೊಂಡೆನು. ಅದರಿಂದ ನನ್ನ ಧ್ವನಿಯು ಮೊದಲಿನಂತೆ ಆಗಿ ನಾನು ಒಳ್ಳೇ ಸ್ವರದಿಂದ ನನ್ನ ಆರು ತಾಸಿನ ಪ್ರೋಗ್ರಾಮದಲ್ಲಿ ಯಾವದೇ ತರದಿಂದ ಗಾಬರಿಯಿಲ್ಲದೆ, ದೇವರು ಕೊಟ್ಟ ಗಾಯನ ಕಲೆಯಿಂದ ಹಾಡತೊಡಗಿದೆನು. ಸದ್ರಿ ಔಷಧವು ನನ್ನಲ್ಲಿಯ ಸಣ್ಣ ಹುಡುಗರ ಕೆಮ್ಮಿನ ಮೇಲೆ ಉಪಯೋಗಿಸಿದೆನು. ಅದರ ಉಪಯೋಗದಿಂದ ೨—೩ ದಿವಸಗಳಲ್ಲಿಯೇ ಪೂರ್ಣ ಗುಣವಾಯಿತು.

ಕಿಮ್ಮತ್ತು: ೧ ರತ್ತಲ ಬಾಟ್ಲಿಗೆ ರೂ. ೩||, ಅರ್ಧ ರತ್ತಲ ಬಾಟ್ಲಿಗೆ ರೂ. ೧||; ೧ ರತ್ತಲ ಬಾಟ್ಲಿಗೆ [illegible] ಆಣೆ. ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ.

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು-ಮುರುಡುಗಳ ರೋಗ ಮುಂತಾದವುಗಳು ವಾಸಿಯಾಗುತ್ತವೆ. ಈ ಔಷಧವನ್ನು ದಿನಾ ಹಿಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೫.

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶೌಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕೊಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀ ರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

☛ ಕುಮಟೆಯಲ್ಲಿ ಸಿಗುವ ಪತ್ತೆ.— ಕಲಬಾಗಕರ ದುಕಾನ, ಕುಮಟಾ.

Reg No. B 1270.

Monday, 24th September, 1934

ವರ್ಷ ೧೭

ಕಾನಡಾವೃತ್ತ

THE KANARA NEWS.

ಸಂಚಿಕೆ ೧೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-1-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಬೇಕಾದಲ್ಲಿ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ನರಪतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ರತಿ ಪ್ರತಿಯ (೧೫ ಎಮ್ ಉದ್ದ) ೫ ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-2-0
ಹೆಚ್ಚಿಗಂದ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—*(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೪ ಮಾಹೆ ಸಪ್ಟಂಬರ ಸನ್ ೧೯೩೪ ನೇ ಇಸವಿ.)*—

ಪ್ರೆಸಿಡೆನ್ಸಿ ವಿಮಾ ಕಂಪನಿಯ

ಅಪೂರ್ವ ಸವಲತ್ತು !!

ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಸ್ಯೂರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸು.— ಯೋರ್ಕ ಬಿಲ್ಡಿಂಗ, ಮುಂಬಯಿ.

ಇದರ ಆಡಳಿತೆ ಸಂಪೂರ್ಣವಾಗಿ ಹಿಂದೀ ಜನರ ಕೈಯಲ್ಲಿದೆ! ಆಡಳಿತೆಯ ಖರ್ಚು ಎಲ್ಲ ಕಂಪನಿಗಿಂತಲೂ ಕಡಿಮೆ. ಈ ಕಂಪನಿಯು ಮೊದಲನೇ ವ್ಹೆಲ್ಯುಏಶನ್ ರಿಪೋರ್ಟಿನಲ್ಲಿಯೇ ಲಾಭ ತೋರಿಸಿ ಲೋಕಪ್ರಿಯವಾಗಿದೆ. ಇದಕ್ಕೆ ಲೋಕಾದೃಯವು ದಿನೇ ದಿನೇ ಹೆಚ್ಚುತ್ತಲಿದೆ

ಸರಕಾರ ಮನ್ನಣೆಯುಳ್ಳ ಎಕ್ಚ್ಯುಅರಿಯವರೇ ಈ ಕಂಪನಿಯ ಲೆಕ್ಕ ತಪಾಸಣೆ ಮಾಡುತ್ತಾರೆ ಇದರಿಂದ ಇಡೀ ಹಿಂದುಸ್ಥಾನದಲ್ಲಿ ಈ ಕಂಪನಿಯ ಭದ್ರತೆ ಖ್ಯಾತಿಗೊಂಡಿದೆ ಎಕ್ಚ್ಯುಅರಿಗಳಾದ ಶ್ರೀ ಜಿ ಎಸ್ ಮರಾಠೀಯವರು ತಮ್ಮ ರಿಪೋರ್ಟಿನಲ್ಲಿ ಬರೆಯುವದೇನೆಂದರೆ— ವ್ಹೆಲ್ಯುಏಶನ್ ಮಾಡಿ ಬೋನಸ್ ಹಂಚುವ ವ್ಯವಸ್ಥೆ ಇರುವ ಕಂಪನಿ ಇಡೀ ಹಿಂದುಸ್ಥಾನದಲ್ಲಿ ಇದೊಂದೇ! ಹೊರತು ಬೇರೆ ಕಂಪನಿಯಿಲ್ಲ

ಈ ಕಂಪನಿಯಲ್ಲಿ ಎಲ್ಲ ತರದ ವಿಮೆ ಇಳಿಸುವ ಏರ್ಪಾಟಿದೆ. ಡಾಕ್ಟರರ ತಪಾಸಣೆಯ ನಿರ್ಬಂಧವಿಲ್ಲ ಪ್ರತಿ ತಿಂಗಳಿಗೆ ೮ ಆಣೆ, ೧ ರೂಪಾಯಿ, ೩ ರೂಪಾಯಿಗಳ ತನಕ ತುಂಬುವ ಅನುಕೂಲತೆಯಿದೆ ತೀರ ಬಡವರು ಸಹ ವಿಮೆ ಇಳಿಸಬಹುದು.

ಉತ್ತರ ಕನ್ನಡ ಜಿಲ್ಲೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ನಂಬಿಗಸ್ತ ಏಜಂಟರು ಬೇಕು ಏಜನ್ಸಿಯ ನಿಯಮಗಳ ಬಗ್ಗೆ ಹೆಡ್ ಆಫೀಸಿಗೆ ಯಾ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಎಮ್. ಪಿ. ರೇವಣಕರ ಹಳದೀಪುರ,
ಉತ್ತರ ಕನ್ನಡಾ ಜಿಲ್ಲೆಯ ಆರ್ಗನೈಝರರು,
ಪೋ. ಕುಮಟಾ. (ಉತ್ತರ ಕನ್ನಡ)

ಮೀನುಕಣ್ಣಿಗೆ (Corn) ಮದ್ದು.

ಹತ್ತಾಣೆ ಬೆಲೆಯ ಸ್ಟ್ಯಾಂಪು ಕಳಿಸಿದರೆ ಕಳಿಸುತ್ತೇವೆ.
ವ್ಹಿ. ಪಿ. ಯಿಂದ ಖರ್ಚು ಹೆಚ್ಚು.

ಕಲಬಾಗ ಗಂಗಾಧರ ಎಂಡ್ ಸನ್ಸ,
ಕುಮಟಾ. (ಕಾರವಾರ)

The Canara Industrial & Banking Syndicate, Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Head Office— **Mukund Nivas, UDIPI**

Branches— Udipi, *Bangalore City*, Mangalore, Payyanur, Cannanore, Brahmavar, Honnavar, Karwar, Hubli, Belgaum, Sirsi, Kumta, Hangarkatta, Coondapur & Ankola Out Agencies

Figures as at 31st August, 1934.

Authorised Capital (ಅಧಿಕೃತ ಮೂಲಧನ)	Rs. 5 00 000
Subscribed Capital (ಚಂದಾ ಅರ್ಪಿಸಿದ್ದು)	Rs. 1,31,300
Paid-up " (ತೆತ್ತು ಬಂದದ್ದು)	... 61 300.
Reserve Fund (ರಿಝರ್ವ ಫಂಡು)	.. 30,500.
Total Deposits (ಒಟ್ಟು ಠೇವಣಾತಿಗಳು)	.. 11,10,082-5-8

☞ Deposits are received at favourable rates of interest.
Bills collected, drafts issued and every description of Banking business transacted.

For further particulars please apply to —

Kumta,
13—9—1934.

T. RANGA PAI,
Agent at KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಸ್ಯೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.
ಸಂಪೂರ್ಣ ಹಿಂದೀ ಕಂಪನಿ— ೧೯ ವರ್ಷಗಳಿಂದ ನಡೆದು ಬಂದದ್ದು.
ಹೆಡ್ ಆಫೀಸು.— ಎಪೋಲೋ ಸ್ಟ್ರೀಟ, ಫೋರ್ಟ, ಮುಂಬಯಿ.

೧೯೩೧, ಇನ್ನೊಂದು ಹೆಸರಾದ ವರ್ಷ.

ಈ ವರ್ಷದಲ್ಲಿ ೧೯೩೦ನೇ ಸಾಲಿಗಿಂತ ಶೇಕಡಾ ೩೩ರಷ್ಟು ಹೆಚ್ಚಿನ ವಿಮಾ ಇಳಿಸಲಾಯಿತು.
ಕಂಪನಿಯು ದಕ್ಷಿಣಕ್ಕಾಗಿ ಲೋಕಪ್ರಿಯವಾಗಹತ್ತಿದೆ— ಇದು ಜನರ ನಂಬಿಗೆಯ ಸಾಕ್ಷಿ.
ವಿಮೆದಾರರಿಗೆ ತುಂಬಾ ಭದ್ರತೆಯಿದೆ, ಸಂಪೂರ್ಣವಾದ ರಕ್ಷಣೆಯಿದೆ.
ಕಂಪನಿಯವರು ಹೊಸ ಹೊಸ ಯೋಜನೆಗಳನ್ನು ಕಲ್ಪಿಸಿದ್ದಾರೆ— ಸ್ತ್ರೀಯರೂ ವಿಮೆ ಇಳಿಸಬಹುದು.
ಇಂಥ ದಿನೇ ದಿನೇ ಪ್ರಗತಿ ಹೊಂದುತ್ತಿರುವ ವಿಮೆ ಕಂಪನಿಯ
ಏಜನ್ಸಿ ಕೊಳ್ಳುವದರಿಂದ ಜನರಿಗೆ ಬಹು ಲಾಭವಿದೆ
ವಿಶೇಷ ಮಾಹಿತಿಯ ಬಗ್ಗೆ ಬರೆಕೊಳ್ಳಬೇಕಾದ ಪತ್ತೆ.—

ಪ್ರಾಮುಖ್ಯ ಏಜಂಟರು:—

ಪಿ. ಎಸ್. ಶ್ಯಾನಭಾಗ ಎಂಡ್ ಬ್ರದರ್ಸ, ಕುಮಟಾ (ಉ ಕನ್ನಡ) ಅಥವಾ ದಿ ಮೆನೇಜರ, ಹೆಡ್ ಆಫೀಸು.

ಓಂ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹು ದಿನಗಳಿಂದ ಎಲ್ಲ ಆಯುರ್ವೇದ ವೈದ್ಯರುಗಳೂ ಹಾಗೂ ಎಲ್ಲ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವು ಇರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು [illegible]

[illegible]

ಈ ಮಿಶ್ರಣದಿಂದ [illegible]

ಅದರಿಂದ ಅಜೀರ್ಣ, ಕೆಮ್ಮು, ದಮ್ಮು, [illegible] (ವಾತ, ಕ್ಷಯ, ವಾಂತಿ) [illegible] ಅಗ್ನಿಮಾಂದ್ಯ, ಉದರರೋಗ, [illegible]

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ನಂತರ (ದಿನ ಎರಡಾವರ್ತಿ) [illegible]

[illegible]

ಇನ್ನೂ ಇದೆ, ನಮ್ಮಲ್ಲಿ ಆಯುರ್ವೇದ ಶಾಸ್ತ್ರೋಕ್ತ ತಯಾರಿಸಿದ [illegible] ಅಶ್ವಗಂಧಾರಿಷ್ಟ, ಕುಷ್ಮಾಂಡಾವಲೇಹ, ದ್ರಾಕ್ಷಾ [illegible] ದ್ರಾಕ್ಷಾರಿಷ್ಟ, ಕುಮಾರಿ ಆಸವ, [illegible] ಲೋಹಾಸವ [illegible] ತೈಲ, [illegible] ಸಿಕ್ಕುತ್ತವೆ. [illegible] ಅನುಭವ ಪಡೆಯಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ ಕನ್ನಡ)

॥ ಶ್ರೀರಾಮ ಪ್ರಸನ್ನ ॥

ಡಾ॥ [illegible] ಎಮ್ ಡಿ, (ಅಮೇರಿಕಾ) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ !

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಜೊತೆಗೆ ಯಾವದೇ ತರದ ಜ್ವರ (ದೋಷಿ ಅಥವಾ ಸಾದಾ) ನಿಮೋನಿಯಾ (ವಾತ ಸನ್ನಿ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆನೋವು, ಕಾಲರಾ, ಪ್ಲೇಗ, ಇನ್ಫ್ಲುಯೆಂಝಾ [illegible], ಬಾಣಂತಿರೋಗ, (ಹಡೆದಾಗ ಇದ್ದರೆ [illegible] ಸಂಭವಿಸುವ [illegible] ರೋಗಗಳ ಮೇಲೆ) [illegible] ಅಪಸ್ಮಾರ, ಅಗ್ನಿಮಾಂದ್ಯ, [illegible] ರಕ್ತಹೀನತೆ, ಅತಿಸಾರ, [illegible] ವಾಂತಿ [illegible] ರೋಗ [illegible] (ಸ್ಪ್ಲೀನ), ಹೊಟ್ಟೆಯೊಳಗಿನ ಗಂಟು, [illegible] ವಿಕಾರ, ದಾತ ಕ್ಷೀಣತೆ, ಸ್ವಪ್ನದೋಷ, [illegible] ಮೊದಲಾದ ಎಲ್ಲಾ ರೋಗಗಳ ಮೇಲೆ [illegible] ಈ ಔಷಧವು [illegible]

[illegible]

ನೆಗಡಿ, ಜ್ವರ, [illegible]

[illegible] ಮುಂಬಯಿ [illegible]

ಕಿಮ್ಮತ್ತು — ೧ ರತ್ತಲ ಬಾಟ್ಲಿಗೆ ರೂ ೩॥ ಅರ್ಧ ರತ್ತಲ ಬಾಟ್ಲಿಗೆ ರೂ ೧॥, [illegible] ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪೂರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ

ಔಷಧೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು, ಕೀವು, ರಕ್ತ, ಹಲ್ಲು ವಸಡುಗಳ ರೋಗ ಮುಂತಾದವುಗಳು ನಾಶಿಯಾಗುತ್ತವೆ ಈ ಔಷಧವನ್ನು ದಿನಾ ಒಂದಾವರ್ತಿ ಇಲ್ಲವೆ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದರಿಂದ [illegible] ಬೆಲೆ ಆಣೆ ೫

ಇನ್ಝರ್, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶೌಚಕ್ಕೆ ಸವಿ ಔಷಧ, ಜಂತುನಾಶಕ ಕಷಾಯ, ಕಾಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ

ಶ್ರೀರಾಮ ಆಯುರ್ವೇದಿಕ ಫಾರ್ಮಸಿ, ಗಡಹಿಂಗ್ಲಜ. (ಕೊಲ್ಹಾಪುರ ಸಂ)

☛ ಕುಮಟೆಯಲ್ಲಿ ಸಿಗುವ ಪತ್ತೆ — ಕಲಬಾಗಕರ ದುಕಾನ, ಕುಮಟಾ

Reg No B 1270.

Monday, 24th September, 1934

ವರ್ಷ ೧೭

ಸಂಚಿಕೆ ೧೪

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ

ಕುಮಟೆಯಲ್ಲಿ ಆಗಾವು
ರೂಪಾಯಿ 2-1-0
ಮನಿಯಾರ್ಡರಿನಿಂದ
ರೂ 3-1-0
ವ್ಹಿ. ಪಿ. ಆ ಖರ್ಚು ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಥಾ ಟೈಪಿನ (೧೫ ಎಮ್ ಉದ್ದ) ಆ ಸಾಲುಗಳವರೆಗೆ ರೂ 1-0-0 ಆ ನಂತ್ರ, ಪ್ರತಿಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೪ ಮಾಹೆ ಸಪ್ಟಂಬರ ಸನ್ ೧೯೩೪ ನೇ ಇಸವಿ.)—

ಪ್ರೆಸಿಡೆನ್ಸಿ ವಿಮಾ ಕಂಪನಿಯ

ಅಪೂರ್ವ ಸವಲತ್ತು!!

ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್

ಹೆಡ್ ಆಫೀಸು - ಯಾರ್ಕ ಬಿಲ್ಡಿಂಗ ಮುಂಬಯಿ.

ಇದರ ಆಡಳಿತೆ ಸಂಪೂರ್ಣವಾಗಿ ಹಿಂದೀ ಜನರ ಕೈಯಲ್ಲಿದೆ! ಆಡಳಿತೆಯ ಖರ್ಚು ಎಲ್ಲ ಕಂಪನಿಗಿಂತಲೂ ಕಡಿಮೆ. ಈ ಕಂಪನಿಯು ಮೊದಲನೇ ವ್ಹಾಲ್ಯುಏಶನ್ ರಿಪೋರ್ಟಿನಲ್ಲಿಯೇ ಬೋನಸ ಕೊಟ್ಟು ಲೋಕಪ್ರಿಯವಾಗಿದೆ ಇದಕ್ಕೆ ಲೋಕಾಶ್ರಯವು ದಿನಾ ದಿನಾ ಹೆಚ್ಚುತ್ತಲಿದೆ

ಸರಕಾರ ಮನ್ನಣೆಯುಳ್ಳ ಎಕ್ಚ್ಯುಅರಿಯವರು ಈ ಕಂಪನಿಯ ಲೆಕ್ಕ ತಪಾಸಣೆ ಮಾಡುತ್ತಿರುವದರಿಂದ ಇಡೀ ಹಿಂದುಸ್ಥಾನದಲ್ಲಿ ಈ ಕಂಪನಿಯ ಭದ್ರತೆ ಖ್ಯಾತಿಗೊಂಡಿದೆ ಎಕ್ಚ್ಯುಅರಿಗಳಾದ ಶ್ರೀ ಜಿ. ಎಸ್ ಮರಾಠೆಯವರು ತಮ್ಮ ರಿಪೋರ್ಟಿನಲ್ಲಿ ಒರೆಯುವದೇನೆಂದರೆ — ವ್ಹಾಲ್ಯುಏಶನ್ ಮಾಡಿ ಬೋನಸ್ ಹಂಚುವ ಪ್ರವೃತ್ತಿ ಇರುವ ಕಂಪನಿ ಇಡೀ ಹಿಂದುಸ್ಥಾನದಲ್ಲಿ ಇದೊಂದೇ! ಹೊರತು ಬೇರೆ ಕಂಪನಿಯಿಲ್ಲ

ಈ ಕಂಪನಿಯಲ್ಲಿ ಎಲ್ಲ ತರದ ವಿಮೆ ಇಳಿಸುವ ಅನುಕೂಲವಿದೆ ಡಾಕ್ಟರರ ತಪಾಸಣೆಯ ಸಿವಾಯಿ ಬಿಲ್ಲ ಸತಿ ತಿಂಗಳಿಗೆ ೧ ಆಣೆ, ೧ ರೂಪಾಯಿ, ೩ ನೂರು ರೂ. ತನಕ ತುಂಬುವ ಅನುಕೂಲತೆಯಿದೆ ತೀರ ಬಡವರು ಸಹ ವಿಮಾ ಇಳಿಸಬಹುದು

ಉತ್ತರ ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ನಂಬಿಗಸ್ಥ ಏಜಂಟರು ಬೇಕು ಏಜನ್ಸಿಯ ನಿಯಮಗಳ ಬಗ್ಗೆ ಹೆಡ್ ಆಫೀಸಿಗೆ ಯಾ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್ ಪಿ ರೇವಣಕರ ಹಳದೀಪುರ,
ಉತ್ತರ ಕನ್ನಡ ಜಿಲ್ಲೆಯ ಆರ್ಗನೈಝರರು,
ಪೋ ಕುಮಟಾ (ಉತ್ತರ ಕನ್ನಡ)

ಮೀನುಕಣ್ಣಿಗೆ (Corn) ಮದ್ದು

ಅರ್ಧಾಣೆ ಟಿಕೀಟು ಕಳಿಸಿದರೆ ಕಳಿಸುತ್ತೇವೆ ವ್ಹಿ. ಪಿ. ಯಿಂದ ಖರ್ಚ ಹೆಚ್ಚು

ಕಲಬಾಗ ಗಂಗಾಧರ ಎಂಡ್ ಸನ್ಸ,
ಕುಮಟಾ. (ಕಾರವಾರ)

The Canara Industrial & Banking Syndicate, Ltd

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್

Head Office — Mukund Nivas, UDIPI

Branches — Udipi, Bangalore City, Mangalore, [illegible], Cannanore, [illegible], Honnavar, Karwar, Hubli, Belgaum, [illegible], Kumta, Hungarkatta, Coondapur & Ankola Out Agencies

Figures as at 31st August, 1934.

Authorised Capital (ಅಧಿಕೃತ ಮೂಲಧನ)	Rs. 5 00 000
Subscribed Capital (ಚಂದಾ ಆಕರಿಸಿದ್ದು)	Rs. 1,31,300
Paid-up " (ತೆತ್ತು ಬಂದದ್ದು)	61,300
Reserve Fund (ರಿಝರ್ವ ಫಂಡು)	30 500
Total Deposits (ಅಂತು ಠೇವಣಾತಿಗಳು)	11,40,082-5-8

☞ Deposits are received at favourable rates of interest
Bills collected drafts issued and
every description of Banking business transacted

For further particulars please apply to —

Kumta,
13—9—1934

T. RANGA PAI,
Agent at KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಶ್ಯೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

ಸಂಪೂರ್ಣ ಹಿಂದೀ ಕಂಪನಿ— ೧೯ ವರ್ಷಗಳಿಂದ ನಡೆದು ಬಂದದ್ದು

ಹೆಡ್ ಆಫೀಸು - ಅಪೋಲೋ ಸ್ಟ್ರೀಟ, ಫೋರ್ಟ, ಮುಂಬಯಿ.

೧೯೩೧,—ಇನ್ನೊಂದು ಹೆಸರಾದ ವರ್ಷ.

ಈ ವರ್ಷದಲ್ಲಿ ೧೯೩೦ನೇ ಸಾಲಿಗಿಂತ ನೂರಕ್ಕೆ ಹೆಚ್ಚು ದ್ವಿಗುಣ ವಿಮೆ ಇಳಿಸಲಾಯಿತು.
ಕಂಪನಿಯು ಹೆಚ್ಚಿನದಾಗಿ ಲೋಕಪ್ರಿಯವಾಗಹತ್ತಿದೆ— ಇದು ಜನರ ನಂಬಿಗೆಯ ಸಾಕ್ಷಿ
ವಿಮೆದಾರರಿಗೆ ತುಂಬ ಭದ್ರತೆಯಿದೆ ಸಂಪೂರ್ಣವಾದ ಲಕ್ಷ್ಯವಿದೆ
ಕಂಪನಿಯವರು ಹೊಸ ಹೊಸ ಯೋಜನಗಳನ್ನು ಕಲ್ಪಿಸಿದ್ದಾರೆ— ಸ್ತ್ರೀಯರೂ ವಿಮಾ ಇಳಿಸಬಹುದು
ಇಂಥ ದಿನೇ ದಿನಾ ಪ್ರಗತಿ ಹೊಂದುತ್ತಿರುವ ವಿಮೆ ಕಂಪನಿಯ
ಏಜನ್ಸಿ ಕೊಳ್ಳುವದರಿಂದ ಜನರಿಗೆ ಬಹು ಲಾಭವಿದೆ
ವಿಶೇಷ ಮಾಹಿತಿಯ ಬಗ್ಗೆ ಬರೆಯಬೇಕಾದ ಪತ್ತೆ —

ಪ್ರಾಮುಖ್ಯ ಏಜಂಟರು —

ಪಿ. ಎಸ್ ಶ್ಯಾನಭಾಗ ಎಂಡ್ ಬ್ರದರ್ಸ,
ಕುಮಟಾ (ಉ ಕನ್ನಡ)

ಅಥವಾ

ದಿ ಮೆನೇಜರ,
ಹೆಡ್ ಆಫೀಸು.

ರಾಷ್ಟ್ರೀಯ ಸಭೆಯ ಪುನರ್ಘಟನೆ: ಮಹಾತ್ಮರ ಸೂಚನೆ.

ಮಹಾತ್ಮರ ಮುಂಜಾಗ್ರತೆ.

ಪೂರ್ವಪೀಠಿಕೆ.

ರಾಷ್ಟ್ರೀಯ ಸಭೆಯೊಳಗಿಂದ ನಾನು ಅಲಿಪ್ತನಾಗುವ ವಿಚಾರದಲ್ಲಿದ್ದೇನೆಂಬ ಸುದ್ದಿ ಬಿಟವಾದುದು ಆದರೆ, ಕಾರ್ಯಕಾರಿ ಮಂಡಳ ಹಾಗು ಪಾರ್ಲಿಮೆಂಟರಿ ಬೋರ್ಡಿನ ಸಭೆಗಳಿಗಾಗಿ ವರ್ಧಾದಲ್ಲಿ ಸೇರಿದ ಗೆಳೆಯರ ಆಗ್ರಹದ ಮೇರೆಗೆ ರಾಷ್ಟ್ರೀಯ ಸಭೆಯನ್ನು ಆಕ್ಟೋಬರ ಅಧಿವೇಶನದ ವರೆಗಾದರೂ ತ್ಯಜಿಸಬಾರದೆಂಬದಕ್ಕೆ ನಾನು ಒಪ್ಪಿದ್ದೇನೆ. ರಾಷ್ಟ್ರೀಯ ಸಭೆಯಲ್ಲಿ ಇರುವದು ಕಾರಬಾರದಲ್ಲಿ ಸೇರದಿದ್ದರಾಯಿತೆಂದು ಪಂಡಿತ ಗೋವಿಂದ ವಲ್ಲಭ ಪಂತರವರೂ, ಮಿ! ರಫಿ ಅಹಮ್ಮದ ಕಿದವಾಯಿಯವರೂ ಸೂಚಿಸಿದರು ಈ ವಿಚಾರವನ್ನು ಸರದಾರ ವಲ್ಲಭಭಾಯಿಯವರೂ, ಮೌ ಅಬುಲ ಕಲಮ್ ಆಜಾದರವರೂ ತೀವ್ರವಾಗಿ ನಿಷೇಧಿಸಿದರು ರಾಷ್ಟ್ರೀಯ ಸಭೆಯೊಳಗಿಂದ ನಾನು ಅಲಿಪ್ತನಾಗುವ ಸಮಯ ಬಂದಿದೆಂದು ಸರದಾರ ವಲ್ಲಭಭಾಯಿಯವರು ಒಪ್ಪಿದರು ಆದರೆ, ಈ ವಿಚಾರ ಅನೇಕರಿಗೆ ಸಮ್ಮತವಾಗಲಿಲ್ಲ ನಾನು ಯಾವತ್ತೂ ಸಂಗತಿಗಳ ಸಾಧಕ-ಬಾಧಕ ವಿಚಾರ ಮಾಡಿದೆನು ಆಕ್ಟೋಬರದಲ್ಲಿ ಅಧಿವೇಶನವಾಗುವ ತನಕ ಈ ವಿಷಯ ನಿರ್ಣಯ ಕೈಕೊಳ್ಳಬಾರದೆಂದು ನಾನು ನಿರ್ಧರಿಸಿದ್ದೇನೆ ಇದು ಸುರಕ್ಷಿತವಾದ ಮಾರ್ಗವಂದು ನನ್ನ ಅಂಬೋಣ. ಕೊನೆಯ ನಿರ್ಣಯ ವಿಚಾರವನ್ನು ಮುಂದೂಡುವಾಗ ನಾನು ಹೇಳುವದರಲ್ಲಿ ಒಂದು ಮರ್ಮವಿದೆ. ಕಾಂಗ್ರೆಸ್ಸಿನ ಬುದ್ಧಿವಂತ ವಿಚಾರವಂತರಿಗೆ ನನ್ನ ಕಾರ್ಯಕ್ರಮ ನನ್ನ ವಿಚಾರ ಸೇರುವದಿಲ್ಲ, ನನ್ನಿಂದ ರಾಷ್ಟ್ರೀಯ ಸಭೆಯ ವಿಕಾಸಕ್ಕೆ ತೊಂದರೆಯಾಗಿದೆ, ರಾಷ್ಟ್ರೀಯ ಸಭೆಯು ಲೋಕಶಾಹಿ ಪ್ರಜಾಪ್ರತಿನಿಧಿ ಸಂಸ್ಥೆಯಾಗುವ ಬದಲು, ನನ್ನ ಅಧಿಕತೆಯಲ್ಲಿ ನಿರಂಕುಶ ಸಂಸ್ಥೆಯಾಗಿ ಪರಿಣಮಿಸಿದೆ, ಈ ಪ್ರಕಾರ ನನಗುಂಟಾದ ಭಾವನೆಯ ಯುಕ್ತಾಯುಕ್ತತೆಯನ್ನು ಪರೀಕ್ಷಿಸಲು ಈ ಸಮಯವಿದೆ. ನನ್ನ ಭಾವನೆಯ ಕಾರ್ಯಕಾರಣವನ್ನು ನಾನು ಜನರಿಗೆ ತಿಳಿಸಬೇಕು, ನನ್ನ ಸೂಚನೆಗಳನ್ನು ಅರುಹಬೇಕು, ಮತ್ತು ಅವುಗಳ ಮೇಲೆ ಅವರ ಮತ ಪಡಕೊಳ್ಳಬೇಕು, ಇದೇ ಸರಿಯಾದ ರಾಜಮಾರ್ಗವಿದೆ

ರಾಷ್ಟ್ರೀಯ ಸಭೆಯವರಿಗೂ, ನನಗೂ ದೃಷ್ಟಿಕೋನದಲ್ಲಿಯೇ ಮತಭೇದವಿದೆ ನನ್ನ ಮೇಲೆ ಭಕ್ತಿಯಿರದಿದ್ದರೆ ಅನೇಕ ರಾಷ್ಟ್ರೀಯ ಸಭೆಯ ಪ್ರಮುಖರು ಈಗಿನ ಮಾರ್ಗಕ್ಕಿಂತ ಸರಿಪಿರುದ್ಧವಾದ ಮಾರ್ಗವನ್ನೇ ಅನುಸರಿಸುತ್ತಿದ್ದರು ರಾಷ್ಟ್ರೀಯ ಸಭೆಯಲ್ಲಿ ನಾನು ಪುರಸ್ಕರಿಸಿದ ಧೋರಣವನ್ನು ಅನೇಕ ವಿಚಾರಶೀಲ ಪ್ರಮುಖರು ನಿಷೇಧಿಸಿದರು, ವಿರೋಧಿಸಿದರು ಆದಾಗ್ಯೂ ಅವರು ನನ್ನ ಮೇಲೆ ನಿಷ್ಠೆಯನ್ನಿಟ್ಟು ನನ್ನ ಕಾರ್ಯಕ್ರಮವನ್ನೇ ಪುರಸ್ಕರಿಸಿದ್ದಾರೆ ಇದನ್ನು ಸ್ವಾಮಿನಿಷ್ಠೆಯಾಗಲಿ, ಸ್ವಾಮಿಭಕ್ತಿಯಾಗಲಿ ಇನ್ನಾರಿಗೂ ತಿಗದು ಮತ್ತು ನಾನು ಎಳೆದರೆ ಅದರಿಂದ ಕ್ಷೇಮವಿಲ್ಲ ನನ್ನ ಕಾರ್ಯಕ್ರಮ ಭಕ್ತಿಯಿಂದ ಪುರಸ್ಕರಿಸಿದಾಗ್ಯೂ ನನಗೂ ಅವರಿಗೂ ಇರುವ ಮೂಲಭೇದವನ್ನು ನಾನು ಕಣ್ಮರೆ ಮಾಡಲಾರೆ

ಕೈರಾಟಿ, ಖಾದಿ.

ಅವನ್ನೇ ನಾನು ಈಗ ವಿವರಿಸುವೆನು ಕೈರಾಟಿ ಮತ್ತು ಖಾದಿ ಇವು ನನ್ನ ಕಾರ್ಯಕ್ರಮದೊಳಗಿನ ಮುಖ್ಯ ಅಂಗಗಳು ರಾಷ್ಟ್ರೀಯ ಸಭೆಯೊಳಗಿನ ವಿಚಾರವಂತರೆಲ್ಲರೂ ಕೈಯಿಂದ ನೂಲುವದನ್ನು ಬಿಟ್ಟುಬಿಟ್ಟಿರುತ್ತಾರೆ ಅವರಿಗೆ ಅದರ ಮೇಲೆ ಭಕ್ತಿಯಿಲ್ಲ ನನ್ನಲ್ಲಿ ಅವರ ಬುದ್ಧಿಗೆ ಪ್ರೇರಣೆ ಮಾಡುವ ಸಾಮರ್ಥ್ಯವಿದ್ದರೆ ನಾನು ಈಗಲೂ ಆ ಅಣೆ ವರ್ಗಣಿಯ ಬದಲಿಗೆ ಕೈನೂಲನ್ನೇ ಕಾಂಗ್ರೆಸ ಮೆಂಬರಿಯ ವಂತಿಗೆಯೆಂದ ನಿಯಮ ಮಾಡಬಲ್ಲೆ ಮುಂಚಿನಿಂದಲೂ ಖಾದಿಯ ನಿಯಮವು ಪಾಲಿಸಲ್ಪಡುತ್ತಿದ್ದಿಲ್ಲ ಖಾದಿಯ ರೀತಿನಿಂದ ರಾಷ್ಟ್ರೀಯ ಸಭೆಯಲ್ಲಿ ತಲೆದೋರಿದ ದಕ್ಷುತನಕ್ಕೆ ನಾನೇ ಹೊಣೆಗಾರನೆಂದು ಅನೇಕರು ನನ್ನ ಕಡೆ ದೂರಿದುತ್ತಾರೆ ನನ್ನ ಮೇಲೆ ಭಕ್ತಿಯಿಟ್ಟು ಆ ದರ್ಜೆಯ ಸಾಸಾಗಿತ್ತೆಂಬದನ್ನು ನಾನು ಒಕ್ಕದಲ್ಲದಬೇಕಾಗಿತು ಹಾಗೆ ನಾನು ಮಾಡದೆ ಇದದು ತಪ್ಪು.

ಆದ್ದರಿಂದ, ನಿರ್ಮಲ ಅಹಿಂಸೆಯ ಉಪಾಯದಿಂದಲೇ ಕಾಯಕದಿಂದ ಜೀವನೋಪಾಯ ಮಾತ ಪಕೊಂಡು ವದಿ ಬಹುಜನಸ್ವರ ಕಡೆಯಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಬೇಕಾದರೆ ಕೈರಾಟಿ ಮತ್ತು ಖಾದಿ ಇವುಗಳನ್ನು ಪುರಸ್ಕರಿಸುವದು ಕಲಿತವರಿಗೆ ಸ್ವಭಾವಗುಣವಾಗಬೇಕು, ದೇವರು ಉಪಯೋಗಕ್ಕಾಗಿ ಕೊಟ್ಟ ಕೈಗಳನ್ನು ಅದರ ಸಂಕಲ್ಪದಂತೆ ಉಪಯೋಗಿಸದೆ ಒಟ್ಟೆ ಹೊರುವ ಕರ್ಮಯೋಗಿಗಳಾಗಿ ಕಾಲಹರಣ ಮಾಡುವವರಿಗೂ ಇವರದ ಸ್ವಭಾವಗುಣವಾಗಿರಬೇಕು, ಈ ಪ್ರಕಾರ ಕೈರಾಟೆಯು ಮಾನವ ಕೋಟಿಯ ಸೇವಾವ್ರತ ವಿಶ್ವಬಂಧುತ್ವದ ಚಿಹ್ನೆಯಾಗಿದೆ ಇದು ಬೇಕಾಯದ ತೇತ್ತು, ರಾಷ್ಟ್ರದಿಂದ ಎರಡನೇ ಪ್ರಶ್ನೆಯದು ಒಂದೇ ಪ್ರಶ್ನೆಯ ಮೇಲೆ ಯಾವತ್ತೂ ಭಾರ ಹಾಕಿರುವದರಿಂದ ನಮ್ಮ ನಾಶವಾಗುತ್ತಿದೆ ಹೀಗಿದ್ದಾಗ್ಯೂ ಕೈರಾಟೆಯ ಕಾರ್ಯಕ್ಷಮತೆಯ ಬಗ್ಗೆ ಬಹುಜನಸಮಾಜದಲ್ಲಿ ನಿಷ್ಠೆಯಿಲ್ಲ ಖಾದಿಯನ್ನು ರಾಷ್ಟ್ರೀಯ ಪೋಷಾಕವೆಂದು ಒಪ್ಪಿ ಮಾಡಿದ್ದಲ್ಲಿ ರಾಷ್ಟ್ರೀಯ ಸಭೆಗೂ ಬಹುಜನಸಮಾಜಕ್ಕೂ ಇರುವ ಸಂಬಂಧವು ತುಂಡರಿಸಿಹೋಗುವದು, ಮತ್ತು ರಾಷ್ಟ್ರೀಯ ಸಭೆಯು ಬಹುಜನಸಮಾಜದ ಪ್ರತಿನಿಧಿಕ ಸಂಸ್ಥೆಯಾಗಲಾರದು ಖಾದಿಯ ಶತ ಸ್ಥಿತ್ಯರ ಇದನ್ನು ನಿಷ್ಠುರವಾಗಿ ಸಭಾಸದರ ಕಡೆಯಿಂದ ಪಾಲಿಸಿಕೊಳ್ಳಬೇಕು. ಬಹುಸಂಖ್ಯಾಕರ ವಿರೋಧದ ಮೂಲಕ ಅದನ್ನು ಪಾಲಿಸಿಕೊಳ್ಳುವದು ಕಠಿಣ

ಪಾರ್ಲಿಮೆಂಟರಿ ಬೋರ್ಡು

ಪಾರ್ಲಿಮೆಂಟರಿ ಬೋರ್ಡಿನ ಉದಾಹರಣೆ ಕೊಡುವೆ. ಈಗ ಸತ್ಯಾಗ್ರಹದ ಕಾರ್ಯಕ್ರಮವಿಲ್ಲ, ಇಂಥ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಅವಶ್ಯವಾಗಿ ಪಾರ್ಲಿಮೆಂಟರಿ ಪಕ್ಷ ಹೊಂದಿರಬೇಕೆಂದು ನನ್ನ ಅಭಿಪ್ರಾಯ ಆದಾಗ್ಯೂ ರಾಷ್ಟ್ರೀಯ ಸಭೆಯವರಲ್ಲಿ ಈ ಕುರಿತು ತೀವ್ರ ಮತಭೇದಗಳಿವೆ. ಪಾಟಣಾ ಪಟ್ಟಣದಲ್ಲಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿ ಸೇರಿದಾಗ ನಾನು ಮಾಡಿದ ಅತ್ಯಾಗ್ರಹದಿಂದ ಸಹಕಾರಿಗಳಿಗೆ ಬಹಳ ಕಷ್ಟವಾಯಿತು. ಆದರೆ, ತಮ್ಮ ವಿಚಾರದಂತೆ ಅವರಿಗೆ ಆಚರಿಸುವದಕ್ಕೆ ನಿರ್ಧಾರವು ಅವರಿಂದ ಕೈಕೊಳ್ಳಲಾಗಲಿಲ್ಲ ನನಗಿಂತ ಜಾಣರಿಗಾಗಿ, ಅನುಭವಪಟ್ಟವರಿಗಾಗಿ ಮತಭೇದವನ್ನು ದಬ್ಬಿ ಹಿಡಿಯುವದು ಸಂಸ್ಥೆಯ ವಿಕಾಸಕ್ಕೆ ಘಾತಕವಾಗುತ್ತದೆಂಬುದೋ ನಿಜ, ಆದರೆ ಅದಕ್ಕೆ ಸೀಮೆಯಿದ. ದಿನಾ ಇದೇ ಪ್ರಕಾರ ನಡೆಯುತ್ತಿದ್ದರೆ ಲೋಕಕಂಟಕವೇ ಅದು ಲೋಕಕಂಟಕನಾಗಬೇಕೆಂದು ನನ್ನ ಇಚ್ಛೆ ಇರದಿದ್ದಾಗ್ಯೂ ನಾನು ಲೋಕಕಂಟಕನಾಗಹತ್ತಿದ್ದೇನೆಂದು ಅನುಭವದಿಂದ ಹೇಳಬಲ್ಲೆ ನನಗೆ ವಿರೋಧ ಮಾಡಲು ಅನೇಕರು ಹೆದರುತ್ತಾರೆ, ಇದನ್ನು ನೋಡಿ ನನಗೆ ನಾಚಿಕೆಯೆನಿಸುತ್ತದೆ ನಾನು ಲೋಕಶಾಹಿಯ ಪುರಸ್ಕರ್ತನು; ಬಾಲ್ಯದಿಂದಲೇ ನನಗೀ ಪ್ರವೃತ್ತಿ ನಾನು ಶೀರ ದರಿದ್ರನಂತೆ ಜೀವಿಸಲು ಪ್ರಯತ್ನಪಡುತ್ತಿದ್ದೇನೆ, ಬುದ್ಧಿಪೂರ್ವಕವಾಗಿ ನಾನೀ ಪ್ರಯತ್ನ ಮಾಡುತ್ತಿದ್ದೇನೆ. ಸಾಮಾನ್ಯ ಜನ ಸಮರಸವಾಗುವ ಪ್ರಯತ್ನವೇ ಲೋಕಶಾಹಿಯ ಪುರಸ್ಕರ್ತನಾಗಲು ಪಾತ್ರತೆಯೆಂದು ನನ್ನ ಎಣಿಕೆ,

ಸಮಾಜಸತ್ತಾವಾದಿಗಳು

ಸಮಾಜಸತ್ತಾವಾದಿಗಳ ಪಂಗಡಕ್ಕೆ ನನ್ನ ಆಶೀರ್ವಾದವಿದೆ ಅನೇಕರು ನನಗೆ ಪೂಜ್ಯರಿದ್ದಾರೆ. ದೇಶಕಲ್ಯಾಣಕ್ಕಾಗಿ ಸ್ವಾರ್ಥತ್ಯಾಗ ಮಾಡಿದ ಸಹಕಾರಿಗಳವರು. ಇವರಿಗೂ, ನನಗೂ ಮೂಲತತ್ವಗಳಲ್ಲಿಯೇ ಭೇದ ಆದಾಗ್ಯೂ ಅವರ ವಿಚಾರಪ್ರಸಾರಕ್ಕೆ ನಾನು ಆತಂಕ ಮಾಡಲಾರೆ. ಅವರು ರಾಷ್ಟ್ರೀಯ ಸಭೆಯಲ್ಲಿ ಪ್ರಾಬಲ್ಯ ಹೊಂದಿದರೆ ನಾನು ರಾಷ್ಟ್ರೀಯ ಸಭೆಯಲ್ಲಿ ಉಳಿಯಲಾರೆ ನಾನು ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ ಆದರೆ, ಯಾವದೇ ಸಂಸ್ಥೆಯಲ್ಲಿ ಚಾಲಕರಿಗೆ ವಿರೋಧ ಮಾಡಿ ಉಳಿಯುವದು ನನಗೆಂದೂ ಸಾಧ್ಯವಿಲ್ಲ ಈ ತನಕ ಈ ಪ್ರಕಾರ ನಾನು ನಡಕೊಂಡದ್ದಿಲ್ಲ

ಸಂಸ್ಥಾನಿಕರ ವಿಷಯ ರಾಷ್ಟ್ರೀಯ ಸಭೆಯಲ್ಲಿ ಹೇಗೆ ನಡಕೊಳ್ಳಬೇಕೆಂಬದರ ಕುರಿತು ನಾನೊಂದು ಧೋರಣವನ್ನು ಪುರಸ್ಕರಿಸುತ್ತಿದ್ದೇನೆ ಅದು ಅನೇಕರಿಗೆ ಮಾನ್ಯವಿಲ್ಲ ಅದನ್ನು ತಿದ್ದುಪಡಿ ಮಾಡುವದವಶ್ಯವೇನೆಂದು ನಾನು ಆಲೋಚಿಸಿದೆ, ಅವಶ್ಯವಿಲ್ಲವಾಗಿ ನನ್ನ ಮನವರಿಕೆಯಾಗಿದ

ಅಸ್ಪೃಶ್ಯೋದ್ಧಾರ

ಅಸ್ಪೃಶ್ಯೋದ್ಧಾರದ ವಿಷಯ ನನ್ನ ವಿಚಾರಗಳೇ ಬೇರೆ ನನಗದು ಧರ್ಮವಾಗಿದೆ ಸತ್ಯಾಗ್ರಹವನ್ನು ಬಿಟ್ಟು ಈ ಕಡೆ ನನ್ನ ದೃಷ್ಟಿ ತಿರುವಿದ್ದು ಅನೇಕರಿಗೆ ಸೇರಲಿಲ್ಲ ನಾನು ಮಹಾ ದೊಡ್ಡ ತಪ್ಪು ಮಾಡಿದೆನೆಂದು ಅವರ ಅಭಿಪ್ರಾಯ ಆ ಕಾಲದಲ್ಲಿ ನಾನು ಹಾಗೆ ವರ್ತಿಸದಿದ್ದರೆ ಆತ್ಮವಂಚನೆಯಾಗುತ್ತಿತ್ತೆಂದು ನನ್ನ ಅಭಿಪ್ರಾಯ

ಅಹಿಂಸೆ

ಕೊನೆಗೆ ಅಹಿಂಸೆಯ ವಿಷಯ ಹೇಳುತ್ತೇನೆ ೧೪ ವರ್ಷಗಳಾದರೂ ರಾಷ್ಟ್ರೀಯ ಸಭೆಯವರು ಅದೊಂದು ಧೋರಣವೆಂದೇ ಪುರಸ್ಕರಿಸುತ್ತಾರೆ ನಾನದನ್ನು ಧರ್ಮವೆಂದೇ ಪುರಸ್ಕರಿಸುತ್ತೇನೆ ರಾಷ್ಟ್ರೀಯ ಸಭೆಯವರು ಅಹಿಂಸೆಯನ್ನು ಧರ್ಮವೆಂದೆಣಿಸದ ಬಗ್ಗೆ ನಾನವರಿಗೆ ಹೇಳುವದಿಲ್ಲ. ಅಹಿಂಸೆಯನ್ನು ನಾನವರಿಗೆ ಸರಿಯಾಗಿ ತಿಳಿಸಿಹೇಳಲಿಲ್ಲ, ಸರಿಯಾಗಿ ಆಚರಿಸಲೂ ಇಲ್ಲ ಅದರಿಂದ ಅವರಿಗೆ ಭಕ್ತಿ ಹುಟ್ಟಲಿಲ್ಲ ನಾನು ತಪ್ಪು ಮಾಡಿದ್ದು ನನಗೀಗ ತೋರುವದು ಆದರೆ,

ನಾ ಲೋಕಕಂಟಕನಲ್ಲ! ಲೋಕಶಾಹಿಯ ಪ್ರವರ್ತಕನು!!

ತಪ್ಪಿದ್ದರಿಂದಲೇ ಅವರಿಗೆ ಮನವರಿಕೆಯಾಗಿಲ್ಲವಾಗಿ ನನ್ನ ತರ್ಕ.

ಅಹಿಂಸೆಯ ಮೇಲೆ ಕಟ್ಟಿದ ಸತ್ಯಾಗ್ರಹವು ೩೭ ವರ್ಷಗಳಿಂದ ನಾನು ಸತ್ಯಾಗ್ರಹದ ವ್ಯಾಸಂಗ ಮಾಡುತ್ತಿದ್ದೇನೆ, ಸತ್ಯಾಗ್ರಹದ ಪುರಸ್ಕಾರ ಮಾಡುತ್ತಿದ್ದೇನೆ. ಆದಾಗ್ಯೂ ಅದರ ಗುಟ್ಟು ನನಗೆ ಹೊಳೆಯದು. ಮಾನವಜೀವನಕ್ರಮದಲ್ಲಿ ಸತ್ಯಾಗ್ರಹ ಮಾಡುವ ಪ್ರಸಂಗಗಳು ತೀರ ಕಡಿಮೆ. ಈ ಮೂಲಕ ಸತ್ಯಾಗ್ರಹ ಪರಿಶೀಲನದ ಕಕ್ಷೆಯೂ ಸಂಕುಚಿತವಾದುದು. ತಾಯಿ-ತಂದೆ, ಗುರು-ಹಿರಿಯ ಮೊದಲಾದ ಅಧಿಕಾರಿಗಳಿಗೆ ಸ್ವಯಂಸ್ಫೂರ್ತಿಯಿಂದ ವಿಧೇಯರಾಗಿ ನಡೆದುಕೊಂಡು ಬಂದವರೇ ಸತ್ಯಾಗ್ರಹ ಮಾಡಲು ಪಾತ್ರರು. ಆದರಿಂದ ನಾನೊಬ್ಬನೇ ಈ ಕಾರ್ಯಕ್ಕೆ ಪಾತ್ರನೆಂದು ನನಗೆ ತಿಳಿಯಬೇಕಾಗಿದ್ದಿತ, ಈ ಜಾಗೃತಿ ಕೊಂಡಿದ್ದಲ್ಲಿ ತಪ್ಪುಗಳಾಗುತ್ತಿದ್ದಿಲ್ಲ, ಅದರ ಮರ್ಮವು ಹೊಳೆಯುತ್ತಿತ್ತು. ಹೀಗಿನ ಸ್ಥಿತಿಯಿದ್ದಾಗ್ಯೂ ನಾನು ಪುರಸ್ಕರಿಸಿದ ಠರಾವುಗಳಿಗೆ ಸಹಕಾರಿಗಳು ಮತ ಕೊಟ್ಟು ಬೆಂಬಲ ಕೊಟ್ಟಾಗ್ಯೂ, ಠರಾವುಗಳ ಅಭಿಪ್ರಾಯದಂತೆ ಅವರ ಮನೋಭೂಮಿಯಲ್ಲಿ ಅವಸ್ಥಾಂತರವುಂಟಾಗಲಿಲ್ಲ. ಠರಾವುಗಳಲ್ಲಿ ಆಸಕ್ತಿಯಿಲ್ಲದೆ ಅವರು ಮತ ಕೊಟ್ಟದ್ದನ್ನು ನೋಡಿ ನನಗೆ ಬಹಳ ಸಂಕಟವಾಯಿತು! ಮತ ಕೊಡುವಾಗ ಅವರಿಗೆ ಕಷ್ಟವೊದಗಿದಂತೆಯೇ ನನಗೂ ಕಷ್ಟವೊದಗಿತು. ಧ್ಯೇಯ ಸಾಧನೆಯಾಗಬೇಕಾದರೆ, ಈ ಉಪದ್ರವದೊಳಗಿಂದ ನಾನೂ, ಅವರೂ ಬಿಡುಗಡೆ ಹೊಂದಬೇಕಾಗಿದೆ. ಆದರಿಂದ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳಂತೆ ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ ನಡೆದುಕೊಳ್ಳುವದು ಅವಶ್ಯವಾದದ್ದು.

ಸತ್ಯಾಗ್ರಹವನ್ನು ನಿಲ್ಲಿಸಬೇಕಾಗಿ ನಾನು ಪಾಟಣಾ ಪಟ್ಟಣದಿಂದ ಹೊರಡಿಸಿದ ಪ್ರಕಟಣೆಯಲ್ಲಿ ಎರಡು ಸಂಗತಿಗಳನ್ನು ನಮೂದಿಸಿದ್ದೇನೆ. ಸತ್ಯಾಗ್ರಹವನ್ನು ನಾವು ಸಂಪೂರ್ಣವಾಗಿ ಅಹಿಂಸೆಯಿಂದ ನಡೆಸಿದ್ದಲ್ಲಿ ಅದು ಸರಕಾರಕ್ಕೂ ಕಾಣಬೇಕಾಗಿದ್ದಿತು. ನಾವು ಮಾಡಿದ ತಪ್ಪುಗಳ ಆಧಾರ ಹಾಗು ರಾಜಶಾಸನಗಳ ಸಮರ್ಥನೆಯಾಗದು, ಅವು ಹೊರಡಿಸಿ ನಮ್ಮ ಧೈರ್ಯಪ್ರವೃತ್ತಿಯನ್ನು ಕುಗ್ಗಿಸಬೇಕಾಗಿ ಸರಕಾರವು ಹವಣಿಸಿತ್ತು. ಆದಾಗ್ಯೂ ಸತ್ಯಾಗ್ರಹಿಗಳು ನಿರ್ದೋಷಿಗಳೆಂದು ನಾನು ಹೇಳಲಾರೆ. ಅಂತರ್ಬಾಹ್ಯ ಸರ್ವಾಂಗದಲ್ಲಿ ಅವರು ಅಹಿಂಸೆಯ ವರ್ತನ ಇಟ್ಟಲ್ಲಿ ಅದು ಪ್ರತ್ಯಕ್ಷ ಪ್ರಮಾಣದಂತೆ ಎಲ್ಲರಿಗೂ ಕಾಣಬೇಕಾಗಿದ್ದಿತು. ಕ್ರಾಂತಿಕಾರಕರಂತೆಯೇ ನಮ್ಮಲ್ಲಿ ಹಿಂಸಾಪ್ರವೃತ್ತಿಯಿರುವದಾಗಿ ನಾವು ಸ್ಫುಟ ಮಾಡಿದೆವು, ಹೊರತು ನಮ್ಮ ಅಹಿಂಸೆಯಿಂದ ಅವರ ಹಿಂಸಾಪ್ರವೃತ್ತಿ ಕುಗ್ಗಿಸಲಿಲ್ಲ. ಹಿಂಸಾಪ್ರವೃತ್ತಿಯು ಇತ್ತಂಡದಲ್ಲಿ ಇರುವದಾದ್ದಲ್ಲಿ ಹಿಂಸಾಚಾರಿಗಳೂ, ಹಿಂಸಾಚಾರಹೀನರೂ ಒಂದೇ ಮಾಲೆಯೊಳಗಿನವರೆಂದು ಕ್ರಾಂತಿಕಾರಕರು ವಾದಿಸುತ್ತಾರೆ. ದೇಶತುಂಬ ಅನಪೇಕ್ಷಿತವಾದ ಅಹಿಂಸೆಯ ಪ್ರಚಾರವಾಗಿದೆ, ಅನೇಕರು ಅಕಲ್ಪಿತವಾದ ಧೈರ್ಯವನ್ನೂ, ಸ್ವಾರ್ಥತ್ಯಾಗವನ್ನೂ ಪ್ರದರ್ಶಿಸಿದ್ದಾರೆ, ಈ ಮಾತನ್ನು ನಾನು ಈ ಹಿಂದೆ ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ಆದಾಗ್ಯೂ ನಾವೆಲ್ಲರೂ ಕಾಯಾ-ವಾಚಾ-ಮನಸಾ ನಿರ್ಮಲವಾದ ಅಹಿಂಸೆಯ ಪುರಸ್ಕಾರ ಮಾಡಲಿಲ್ಲವಾಗಿ ನನ್ನ ಅಭಿಪ್ರಾಯವಾಗಿದೆ. ಆದರಿಂದ ಸರಕಾರಕ್ಕೂ, ಕ್ರಾಂತಿಕಾರಕರಿಗೂ ಅಹಿಂಸೆಯ ಅನೋಖ ಮಹಿಮೆಯನ್ನು ತಿಳಿಸಿ ಅದರಿಂದ ಪ್ರತಿಯೊಂದು ಪ್ರಕಾರದ ಸ್ವಾತಂತ್ರ್ಯ ಪ್ರಾಪ್ತಿ ಮಾಡಿಕೊಳ್ಳಲು ಬರುತ್ತಿರುವದಾಗಿ ಸ್ಪಷ್ಟಪಡಿಸಿ ತೋರಿಸುವಂಥ ಕಾರ್ಯಕ್ರಮವನ್ನು ಯೋಜಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಸತ್ಯವೇ ನನ್ನ ಅಧಿದೇವತೆ

ಈ ಪ್ರಯೋಗ ಮಾಡಲು ನನಗೆ ಸಂಪೂರ್ಣವಾಗಿ ಅಲಿಪ್ತತೆ ಬೇಕು, ಪರಿಪೂರ್ಣವಾದ ವಿಚಾರಸ್ವಾತಂತ್ರ್ಯವು ಬೇಕು. ಸತ್ಯಾಗ್ರಹವು ಸಾರ್ವತ್ರಿಕ ಜೀವನ ಕ್ರಮದ ಒಂದು ನೇಮವಿದೆ. ಸತ್ಯವೇ ನನ್ನ ಅಧಿದೇವತೆ. ಅಹಿಂಸೆಯಿಂದಲೇ ಸನಾತನ ಸಾಕ್ಷಾತ್ಕಾರವಾಗಬೇಕು. ಜಗತ್ತಿನ ಸ್ವಾತಂತ್ರ್ಯವನ್ನು, ಸ್ವದೇಶದ ಸ್ವಾತಂತ್ರ್ಯವೂ ಸತ್ಯಶೋಧದಲ್ಲಿಯೇ ಅಡಕವಾಗಿವೆ. ಸತ್ಯಾನ್ವೇಷಣದ ಮುಂದೆ ಇಡೀ ಜಗತ್ತಿನಲ್ಲಿ ನನಗೆ ಪ್ರಿಯವಾದ ಅನ್ಯ ವಸ್ತುವಿಲ್ಲ. ಈ ಶೋಧಕ್ಕಾಗಿಯೇ ನಾನು ರಾಜಕಾರಣದಲ್ಲಿ ಸೇರಿದೆನು. ಈ ಶೋಧದಲ್ಲಿಯೇ ಸಂಪೂರ್ಣ ಸ್ವಾತಂತ್ರ್ಯವಿದೆ. ಈ ತಿಳುವಳಿಕೆ ವಿಚಾರಶೀಲ ರಾಷ್ಟ್ರೀಯರಲ್ಲಿ ಬೇರೂರುವ ತನಕ ನಾನೊಬ್ಬನೇ ಏಕಟಾಳಿಕನಲ್ಲಿ ನಿತಾಂತ ನಿಷ್ಠೆಯನ್ನಿಟ್ಟು ದುಡಿಯಬೇಕಾಗಿದೆ. ಆತನಿಂದಲ್ಲಿ ನಾಳೆ, ದಕ್ಷ ಶಬ್ದಗಳನ್ನು ಪ್ರಯೋಗಿಸಿ ದೇಶಬಾಂಧವರಿಗೆ ನನ್ನ ವಿಚಾರಗಳನ್ನು ಮನಗಾಣಿಸುವಂತೆ ವ್ಯವಸ್ಥೆ ಮಾಡುವದು ಕಲ್ಲಿನನ್ನಿಂದ ಶಕ್ಯವಾದ ಯಾವದೊಂದು ಕಾರ್ಯ ಮಾಡಿಸಿಕೊಂಡು ದೇಶಬಾಂಧವರಿಗೆ ನನ್ನಂತೆಯೇ ಮನಸ್ಸೊಲಿಸುವದು. ಇಂಥ ಮಹಾಕಾರ್ಯಗಳಲ್ಲಿ ಮನಃಪೂರ್ವಕವಿಲ್ಲದ ಕೊಟ್ಟ ಮತದಾನದಿಂದ ಪ್ರಯೋಜನವಿಲ್ಲ.

ಧ್ಯೇಯದ ವಿವರ.

ನಾವು ಧ್ಯೇಯವೆಂದು ಮಾಡಿದ ಉಲ್ಲೇಖದಿಂದ ಎಲ್ಲರೂ ಒಂದೇ ಪ್ರಕಾರ ಅರ್ಥ ಮಾಡುತ್ತಾರೆಂದು ನಾನು ತಿಳಿಯುವದಿಲ್ಲ. ಸಂಪೂರ್ಣ ಸ್ವಾತಂತ್ರ್ಯವೆಂದರೆ ಪೂರ್ಣ ಸ್ವರಾಜ್ಯ. ಪೂರ್ಣ ಸ್ವರಾಜ್ಯವೆಂಬ ಶಬ್ದ ಸಮುಚ್ಚಯದಲ್ಲಿ ಸಹ ಸಂಪೂರ್ಣ ಸ್ವಾತಂತ್ರ್ಯ (*Complete Independence*)ದ ಪರಿಪೂರ್ಣ ಅರ್ಥ ಹೊರಡುವದಿಲ್ಲ. ಯಾವದೇ ಶಬ್ದ ಸಮುಚ್ಚಯದಿಂದ ಸಂಪೂರ್ಣ ಸ್ವಾತಂತ್ರ್ಯದ ಸಂಪೂರ್ಣ ಕಲ್ಪನೆ ಬರದು. ಶಬ್ದ ಸಮುಚ್ಚಯದ ಅಭಾವದಲ್ಲಿ ಧ್ಯೇಯ ಮಾರ್ಗದಲ್ಲಿ ಭಿನ್ನಾಭಿಪ್ರಾಯವಾಗುತ್ತಿದೆ. ಆರಂಭನೇ ಇಷ್ಟಿಯಿಂದ ಧ್ಯೇಯವೂ, ಧ್ಯೇಯ ಸಾಧನೆಯೂ ಒಂದೇ ಎಂದು ನಾನು ಪ್ರತಿಪಾದಿಸುತ್ತ ಬಂದಿದ್ದೇನೆ. ಧ್ಯೇಯವಾಕ್ಯದಲ್ಲಿಯೇ ಹೆಚ್ಚು-ಕಡಿಮೆಯಾದರೆ ಧ್ಯೇಯಸಾಧನೆಯಲ್ಲಿಯೂ ಹೆಚ್ಚು ಕಡಿಮೆಯಾಗಿ ಫಲಭೇದವಾಗುತ್ತದೆ. ಸಾಧನ ಸಾಮಗ್ರಿ ನಮ್ಮ ಸ್ವಾಧೀನವಿದ್ದದ್ದು, ಫಲವು ನಮ್ಮ ಅಂಕಿತವಾದ ವಿಷಯವಲ್ಲ. ಆದರೆ ಒಂದೇ ಅರ್ಥದಿಂದ ನಾವು ಸಾಧನಗಳನ್ನು ಪ್ರಯೋಗಿಸಿದರೆ ಅದರ ಫಲವಾದರೂ ಒಂದೇ ಆಗಬೇಕು. ಆದರೆ ಈ ಸಿದ್ಧಾಂತವನ್ನು ರಾಷ್ಟ್ರೀಯ ಸಭೆಯವರು ಒಪ್ಪುವದಿಲ್ಲ. ಧ್ಯೇಯಪ್ರಾಪ್ತಿಯಾಗುತ್ತಿದ್ದರೆ ಬೇಕಾದ ಸಾಧನಕ್ಕೆ ಕೈಕೊಳ್ಳಬಹುದಾಗಿ ಅವರ ಅಂಬೋಣ. ಇಂಥ ಮತಭೇದಗಳಿಂದ ಈಗಿನ ರಾಷ್ಟ್ರೀಯ ಸಭೆಯ ಕಾರ್ಯಕ್ರಮವು ತೇಜೋಹೀನವಾಗಿದೆ. ಶಕ್ತಿಯ ಅಭಾವದಲ್ಲಿ ಅವರಿಂದ ಕಾರ್ಯಕ್ರಮದ ಪುರಸ್ಕಾರವಾಗಲಿಲ್ಲ. ಅಸ್ಪೃಶ್ಯೋದ್ಧಾರ, ಹಿಂದು-ಮುಸಲ್ಮಾನರ ಐಕ್ಯ, ಮದ್ಯಪಾನೋಚ್ಚಾಟನ, ಕೈರಾಟಿ, ಖಾದಿ, ಸ್ವದೇಶಿ ಕೈಗಾರಿಕೆಗಳ ಉದ್ಧಾರ, ೭ ಲಕ್ಷ ಗ್ರಾಮಗಳ ಪುನರ್ಘಟನೆ, ಈ ಕಾರ್ಯಕ್ರಮವು ದೇಶಹಿತೇಚ್ಛುಗಳಿಗೆಲ್ಲ ಸಮಾಧಾನಕರವಾದದ್ದಿರಬೇಕು. ಇದು ಅವರಿಗೆ ಸೇರದಿದ್ದರೆ ನನ್ನಕಡೆ ಅವರಿಗೆ ಸೇರುವಂಥ ಬೇರೆ ಕಾರ್ಯಕ್ರಮವಿಲ್ಲ.

ಈಗಿನ ಸ್ಥಿತಿಯಲ್ಲಿ ಗಡಿನಾಡಿನೊಳಗಿನ ಒಂದು ಗ್ರಾಮದಲ್ಲಿ ಏಕಾಂತವಾಸದಿಂದ ಕಾಲಕ್ಷೇಪ ಮಾಡುವದೇ ಲೇಸೆಂದು ಸ್ವಂತ ಅಭಿಪ್ರಾಯ. ಖುದಾಯಿ-ಖಿದಮತಗಾರ ಹೆಸರಿನ ಸೇವಕರು ನಿಜವಾಗಿ ಅಹಿಂಸಾಪ್ರೇರಿತರಾಗಿದ್ದರೆ ಅವರು ಅಹಿಂಸಾಪ್ರವೃತ್ತಿ, ಹಿಂದು-ಮುಸಲ್ಮಾನರ ಐಕ್ಯ ಬೆಳಸಲಿಕ್ಕೆ ತುಂಬಾ ನೆರವಾಗುವರು. ಯಾಕೆಂದರೆ, ಸರ್ವಪರಿಯಿಂದಲೂ ಅವರು ಅಹಿಂಸಾವಾದಿಗಳಾದರೆ ಹಿಂದು-ಮುಸಲ್ಮಾನರ ಐಕ್ಯಪ್ರವರ್ತಕರಾದರೆ, ಅವರೆ ವಿದ್ಯಮಾನ ನಮ್ಮ ದೇಶಕ್ಕೆ ಅವಶ್ಯವಿರುವ ಎರಡು ಕಾರ್ಯಗಳು ಸಾಧಿಸುವವು. ಪರಂಪರೆಯಿಂದ ನಡೆದುಬಂದ ಅಪಮಾನ ದೌಡಿನ ಭೀತಿಯು ನಾಮಶೇಷವಾಗುವದು, ಅದರಿಂದ ಅವರ ಅಹಿಂಸೆಯು, ಹಿಂದು-ಮುಸಲ್ಮಾನ ಐಕ್ಯದ ಪರೀಕ್ಷೆ ಮಾಡಲು ನಾನು ಹಂಬಲಿಸುತ್ತಿದ್ದೇನೆ. ಕೈಂಬಟಿಯ ಸಂದೇಶವನ್ನು ಅವರಿಗೆ ಸ್ವತಃ ಒಡುಹಬೇಕೆಂದು ನನ್ನ ಬಯಕೆಯಿದೆ. ನಾನು ರಾಷ್ಟ್ರೀಯ ಸಭೆಯಲ್ಲಿ ಸೇರಲಿ ಇಲ್ಲವೆ ಸೇರದಿರಲಿ ನನ್ನ ಬುದ್ಧಿಯ ಮಟ್ಟಿಗೆ ಈ ಪ್ರಕಾರ ಸೇವೆ ಮಾಡುತ್ತಿರುವದೇ ನನಗೆ ಪ್ರೀತಿ.

ರಾಷ್ಟ್ರೀಯ ಸಭೆಯ ಅಭಿಮಾನ.

ರಾಷ್ಟ್ರೀಯ ಸಭೆಯವರಲ್ಲಿ ತಲೆದೋರುವ ಅನೀತಿಯ ಅನಾಚಾರಗಳನ್ನು ನಾನು ಈ ಹಿಂದೆಯೇ ನಿಷೇಧಿಸಿದ್ದೇನೆ. ಇದೇನಿದ್ದಾಗ್ಯೂ, ರಾಷ್ಟ್ರೀಯ ಸಭೆಯಷ್ಟು ಪ್ರಬಲವಾದ ಪ್ರಾತಿನಿಧಿಕ ಸಂಸ್ಥೆಯು ನಮ್ಮ ದೇಶದಲ್ಲಿ ಬೇರೊಂದಿಲ್ಲ. ಆ ಸಂಸ್ಥೆಯ ಮೇಲಣ ಪ್ರಾಬಲ್ಯಭಾವವು ಎಳ್ಳುಕಾಳಿನಷ್ಟು ಕುಂದಲಿಲ್ಲ. ಅಪ್ರತಿಬಂಧವಾದ ಲೋಕಸೇವೆಯಿಂದಲೂ, ಸ್ವಾರ್ಥತ್ಯಾಗದಿಂದಲೂ ಅದರ ಇತಿಹಾಸವು ತುಂಬಿತುಳುಕುತ್ತಿದೆ. ಬಾಲ್ಯದಿಂದಲೇ ಆ ಸಂಸ್ಥೆಯು ಆಪತ್ತುಗಳಿಗೆ ಇದಿರಾಗುತ್ತ ಬಂದಿದೆ. ಇಷ್ಟು ಸಾಹಸವನ್ನು ಬೇರೆ ಯಾವಸಂಸ್ಥೆಯೂ ಮಾಡಿಲ್ಲ. ಈ ಸಂಸ್ಥೆ ಮಾಡಿದ ಸ್ವಾರ್ಥತ್ಯಾಗವನ್ನು ಯಾವದೇ ದೇಶದವರು ಅಭಿಮಾನಪಟ್ಟು ಹೇಳುವರು. ಈ ಸಂಸ್ಥೆಯಲ್ಲಿ ಇದೀಗ ಇರುವಷ್ಟು ಶೀಲವಂತ ಸ್ತ್ರೀ-ಪುರುಷರು ಬೇರೆ ಯಾವ ಸಂಸ್ಥೆಯಲ್ಲಿಯೂ ಇಲ್ಲ. ಇಂಥ ಸಂಸ್ಥೆಯನ್ನು ಒಮ್ಮೆಲೇ ತ್ಯಜಿಸಬೇಕಾದರೆ ನನ್ನ ಅಂತರಾತ್ಮನು ತಲ್ಲಣಗೊಳ್ಳದಿರನು. ಆದರೆ, ರಾಷ್ಟ್ರೀಯ ಸಭೆಯ ಹೊರನಿಂತು ಹೆಚ್ಚಿನ ದೇಶಸೇವೆಯಾಗುತ್ತದಾಗಿ ಮನೋನಿಶ್ಚಯವಾದರೆ ಮಾತ್ರ ನಾನದನ್ನು ತ್ಯಜಿಸುವೆನು.

ರಾಷ್ಟ್ರೀಯ ಸಭೆಯ ವಿಷಯನಿರ್ಧಾರಕ ಸಭೆಯಲ್ಲಿ ಮೇಲ್ಕಾಣಿಸಿದ ಅಭಿಪ್ರಾಯಗಳಂತೆ ಠರಾವುಗಳನ್ನು ಸೂಚಿಸಿ ರಾಷ್ಟ್ರೀಯ ಸಭೆಯವರ ಮನೋಗತವನ್ನು ನಾನು ತಿಳಕೊಳ್ಳಬಯಸಿದ್ದೇನೆ.

ಗಡಿನಾಡಿನ ಗ್ರಾಮದ ಏಕಾಂತವಾಸವೇ ನನ್ನ ಹಂಬಲ!

ತಿದ್ದುಪಡಿಯ ಸೂಚನೆಗಳು.

ರಾಷ್ಟ್ರೀಯ ಸಭೆಯ ಧ್ಯೇಯನಿಯಮದಲ್ಲಿ ನ್ಯಾಯಸಮ್ಮತ ಮತ್ತು ಶಾಂತ (*legitimate and peaceful*) ಎಂಬ ಶಬ್ದಗಳಿವೆ ಈ ಶಬ್ದಗಳ ಬದಲಿಗೆ ಸತ್ಯ-ಅಹಿಂಸೆ (*truthful and non-violent*) ಎಂಬ ಶಬ್ದಗಳನ್ನು ಸೇರಿಸಬೇಕು. ಈ ಶಬ್ದಗಳ ಬಗ್ಗೆ ನಾನು ಆಗ್ರಹ ಮಾಡುತ್ತಿದ್ದೇನೆ ಆದರೆ, ಈ ಶಬ್ದಗಳನ್ನು ನಾನು ಉಪಯೋಗಿಸಿದ ಬಗ್ಗೆ ಕೆಲ ರಾಷ್ಟ್ರೀಯ ಸಭೆಯವರು ವಿರೋಧಿಸಿದರು. ಸತ್ಯ-ಅಹಿಂಸೆಗಳಿಂದಲೇ ನಮ್ಮ ಸ್ವಾತಂತ್ರ್ಯ [illegible] ಪಡೆಯುವಲ್ಲಿ [illegible] ಈ [illegible] ರಾಷ್ಟ್ರೀಯ ಸಭೆಯವರ [illegible] ಕೂಡದು.

ಎರಡನೇ ದುರುಸ್ತಿಯ [illegible] ರಾಷ್ಟ್ರೀಯ ಸಭೆಯ ಸದಸ್ಯನು [illegible] ಸುತ್ತನ್ನು ತನ್ನ ೨೦೦೦ ಸುತ್ತು ಇರುವ [illegible] ನ್ನು ಪ್ರತಿ ತಿಂಗಳಿಗೆ ಕಾಂಗ್ರೆಸ ಕಚೇರಿಗೆ ಕೊಡಬೇಕು. ಈ ಸೂಚನೆಯ ಕುರಿತು ಅನುಕೂಲ-ಪ್ರತಿಕೂಲ ಚರ್ಚೆ ಮಾಡುವವರು [illegible] ರಾಷ್ಟ್ರೀಯ ಸಭೆಯು ಬಡಬಗ್ಗರ [illegible] ಸಂಸ್ಥೆಯಾಗಬೇಕಾದರೆ ಕಾಯಕಷ್ಟವೇ ಮತಾಧಿಕಾರವಾಗಬೇಕು.

[illegible] ಮೇಲೆ ನೂತರೆ ಕೂಲಿ [illegible] ಕಡಿಮೆಯಾದರೂ ಅದರಷ್ಟು ಗೌರವಯುಕ್ತ [illegible] ಎಲ್ಲರೂ ಒಪ್ಪುತ್ತಾರೆ. [illegible] ದಿನಾ ಅರ್ಧ ತಾಸು [illegible] ಮಾಡಬಲ್ಲಿದ್ದರೆ [illegible] ಮತಾಧಿಕಾರ [illegible] ಮತಾಧಿಕಾರ [illegible] ಶೀಲರೂ, [illegible] ಕಾಯಕಷ್ಟದಿಂದ [illegible] ಗೌರವದ ವಿಚಾರ ಮಾಡಿ ಈ ಸೂಚನೆಯನ್ನು ಅಂಗೀಕರಿಸುವರೆಂದು ನಾನು ತಿಳಿದರೆ ತಪ್ಪಾದೀತೇನು? ವಿದ್ಯಾವ್ಯಾಸಂಗದಂತೆ ಕಾಯಕಷ್ಟ ಮಾಡುವವರಿಂದ ಹೊಂದುವ ಆನಂದವೇ ಪ್ರತಿಫಲವಲ್ಲವೇ? ಜನಸಾಮಾನ್ಯರ ಸೇವಕರೆಂದು [illegible] ಬೇಕಾದರೆ ಅವರಿಗಾಗಿ ಆಜವಾನದಿಂದ ನಾವು [illegible] ಬೇಕಲ್ಲವೇ? [illegible] ಮಹಮ್ಮದ [illegible] ನುಡಿದ ಒಂದು ವಚನವನ್ನು ನಾನಿಲ್ಲಿ ನಮೂದಿಸಬಯಸುತ್ತೇನೆ. [illegible] ರದ [illegible], ಹಾಗೆಯೇ ಕೈರಾಟಿಯೂ, [illegible] ಯೂ ಅಹಿಂಸ-ಲೋಕಸೇವೆ ವಿಷಯಗಳ [illegible] ವಿದೆ. ರಾಷ್ಟ್ರಧ್ವಜದಲ್ಲಿ ಕೈರಾಟಿಯು ಅಂಕಿತವನ್ನು [illegible] ಪ್ರತಿಯೊಂದು [illegible] ಕೈರಾಟಿಯು [illegible] ವಿಂಕರಿಸಬೇಕಾಗಿ ನಾವು [illegible]. ಆದರೆ [illegible] ರಾಷ್ಟ್ರೀಯ ಸಭೆಯ ಪರಿಗೆ [illegible] ರಾಷ್ಟ್ರ [illegible] ದಿಂದ ಕೈರಾಟಿಯನ್ನು [illegible] ಯನ್ನು ನಾವು [illegible] ಬೇಕು. [illegible] ನ್ನು ನಿರ್ದಾಕ್ಷಿಣ್ಯವಾಗಿ [illegible]. ಅಸತ್ಯ, ಲೋಕವಂಚನೆಯಿದೆ ರಾಷ್ಟ್ರೀಯ ಸಭೆಯ ಚುನಾವಣೆಯಲ್ಲಿ ಮತ ಕೊಡುವವನ ಹೆಸರು [illegible] ತಿಂಗಳ ತನಕ ರಾಷ್ಟ್ರೀಯ ಸಭೆಯ ಪಟದ [illegible] ದಾಖಲು ಇರತಕ್ಕದ್ದು, ಮತ್ತು ಅತನು ಆ ಅವಧಿಯಲ್ಲಿ ಸಂಪೂರ್ಣವಾಗಿ ಖಾದಿಯನ್ನೇ ಧರಿಸಬೇಕು. ಈ ಕುರಿತು ನಿರ್ಣಯ ಮಾಡುವ ಅಧಿಕಾರವನ್ನು [illegible] [illegible] ಸಭೆಯ ಅಧ್ಯಕ್ಷರಿಗೂ ಒಪ್ಪಿಸಬೇಕು. ಎಲ್ಲರೂ ಇದನ್ನು ಆತ್ಮಸಂತೋಷದಿಂದ ಪಾಲಿಸಿದರೆ ಮಾತ್ರ ಈ ನಿಯಮದಿಂದ ಪ್ರಯೋಜನವಿದೆ ಇದು ಮೂರನೆಯ ಸೂಚನೆ

ರಾಷ್ಟ್ರೀಯ ಸಭೆಗೆ ೬೦೦೦ ಪ್ರತಿನಿಧಿಗಳಿದ್ದಾರೆ. ಇದು ತೀರ ಪ್ರಚಂಡ ಸಂಖ್ಯೆ. ಇಷ್ಟು ಪ್ರತಿನಿಧಿಗಳು ಎಂದೂ ಹಾಜರಾದದ್ದಿಲ್ಲ. ಆದರಿಂದ ಈ ಸಂಖ್ಯೆಯನ್ನು ೧೦೦೦ ಕ್ಕೆ ಇಳಿಸಬೇಕೆಂದು ನನ್ನ ಸೂಚನೆ. ಸಾಮಾನ್ಯವಾಗಿ ೧೦೦೦ ಮತದಾರರಿಗೊಬ್ಬ ಪ್ರತಿನಿಧಿಯಿರಬೇಕು. ೧೦೦೦ ಪ್ರತಿನಿಧಿಗಳಾಗಲು ೧೦ ಲಕ್ಷ [illegible] ನೀಗ ೩೦ ಕೋಟಿ ಜನರಲ್ಲಿ [illegible] ಆಕ್ಷೇಪ ಮಾಡುವವರು [illegible] ರಾಷ್ಟ್ರೀಯ ಸಭೆಯ [illegible] ದಿಂದ [illegible] ಪ್ರತಿನಿಧಿಗಳಿಂದ [illegible] ರಾಷ್ಟ್ರೀಯ ಸಭೆಯವರ [illegible] ರಾಷ್ಟ್ರೀಯ ಸಭೆಯ ಮಹತ್ವ [illegible] ಸಂಪೂರ್ಣ [illegible]?

[illegible] ಲೋಕಶಾಹಿ [illegible] ಒಂದು [illegible] ಲಾದ [illegible] ಲಭ್ಯವಾದ [illegible] ನ್ನು [illegible] ನಮ್ಮ [illegible] ಯೋಗ್ಯತೆಯನ್ನು ಲೋಕಕ್ಕೆ [illegible] ಈಗ [illegible] ಲೋಕ [illegible] ಕೂಡದು [illegible] ಪ್ರಸ್ತುತ, [illegible] ನಮ್ಮ [illegible] ಇದರಲ್ಲಿ ಲೋಕ [illegible] ನನ್ನ [illegible] ಅಂತರಾತ್ಮನ [illegible] ಬೇಕು.

[illegible] ಈ ಪ್ರಕಟಣೆಯಲ್ಲಿ ಪ್ರಕಟಿಸಿದ [illegible] ಸೂಚಿಸಲ್ಪಡುವವು. ಮೇಲ್ಕಾಣಿಸಿದ ಸೂಚನೆಗಳನ್ನು ಬಹು ಸಂಖ್ಯಾಕರು ಆಕ್ಷೇಪಿಸುವರೆಂದೇ ನನ್ನ ಎಣಿಕೆ. ಆದಾಗ್ಯೂ ನಾನು ರಾಷ್ಟ್ರೀಯ ಸಭೆಯನ್ನು ನಡಿಸಬೇಕಾಗಿರೆ ನಮ್ಮ ಧ್ಯೇಯಪ್ರಾಪ್ತಿಗೆ ಈ ಸೂಚನೆಗಳು ತೀರ ಅವಶ್ಯವಾದವುಗಳೆಂದು ನನ್ನ ಅಭಿಪ್ರಾಯ. ಸ್ವಯಂಸೇವಕ ಪದ್ಧತಿಯ ಮೇಲೆ ನಡೆದ ಸಂಸ್ಥೆಯ ಸಭಾಸದರು ಅಂತಃಕರಣಪೂರ್ವಕವಾಗಿ ಆ ಸಂಸ್ಥೆಯ ಠರಾವುಗಳನ್ನೂ, ಧೋರಣವನ್ನೂ ಪುರಸ್ಕರಿಸದಿದ್ದರೆ ಅಂಥ ಯಾವದೇ ಸಂಸ್ಥೆಯ ಉದ್ದೇಶ ಸಫಲವಾಗದು ಮತ್ತು ಲೋಕಾಗ್ರಣಿಯು ಮಾರ್ಗದರ್ಶಕತ್ವವನ್ನು ಸ್ವಾಮಿನಿಷ್ಠೆಯಿಂದಲೂ, ಸ್ವಸಂತೋಷದಿಂದಲೂ, [illegible] ದಿಂದಲೂ ಅನುಯಾಯಿಗಳು ಅನುಸರಿಸದಿದ್ದರೆ ಯಾವ ನಾಯಕ ಲೋಕಾಗ್ರಣಿಯು ತನ್ನ ಕಾರ್ಯಕ್ರಮದ ಸಾರ್ಥಕತೆ [illegible] ಸತ್ಯ-ಅಹಿಂಸೆಗಳೇ ಬಂಡವಲಾಗಿ ಇರುವ ಲೋಕನಾಯಕನಿಗಂತೂ ಇದು ತೀರ ಅವಶ್ಯಕ. ಅದರಿಂದ ಈ ಪ್ರಕಟಣೆಯಲ್ಲಿ [illegible] ಮುಖ್ಯ ಮಾತುಗಳ ವಿಷಯ ಹೆಚ್ಚು [illegible] ಸಾಧ್ಯವಿಲ್ಲವಾಗಿ [illegible] ಸಿದ್ಧವಾಗುವ [illegible] ಕಾರಣ ರಾಷ್ಟ್ರೀಯ ಸಭೆಯವರಲ್ಲರೂ ಈ [illegible] ನಿರ್ಮಲಚಿತ್ತದಿಂದ [illegible] ಆಲೋಚನ ಮಾಡಿ ಮನೋ [illegible] ನನ್ನ ವ್ಯಕ್ತಿ ವಿಚಾರವನ್ನು [illegible] ಸಂಪೂರ್ಣವಾಗಿ ಕಣ್ಮರೆ ಮಾಡಿ ಸ್ವಂತ [illegible] ನಿರ್ಣಯ ಕೈಕೊಳ್ಳಬೇಕು.

[illegible] ಗಂಜ, | ತಾ [illegible]
ಮೋ. ಕ. ಗಾಂಧಿ.

ಒಂದಾಣೆ ಮಾಲೆ.

ಸಂಪಾದಕ — ಬಾಲಚಂದ್ರ ಘಾಣೇಕರ.

[illegible] ಒಂದೆ ಪೆಟ್ಟಿಗೆ [illegible] ಮಾತ್ರ ನಾನೇ ಹೂಲಿಯ, ನಾರೀರತ್ನ, ಒಡವರ ರೊಟ್ಟಿ [illegible] ಗುಡಿ, ಸಧವಾ ಕುಮಾರಿ, ದೇಶದ್ರೋಹಿ ಎಂಬ ಪುಸ್ತಕಗಳು ಎಲ್ಲ ಕಡೆಗೂ ಪ್ರಸಿದ್ಧಗೊಂಡಿವೆ.

ಬಿಡಿ ಪ್ರತಿಗೆ [illegible] ಆಣೆ ಟಿಕೀಟು ಕಳಿಸಿರಿ

ಸಮಾಜೋನ್ನತಿ ಕಾರ್ಯಾಲಯು, ಧಾರವಾಡ.

ದಿ ಬೊಂಬೆ ಮ್ಯೂಚ್ಯುಅಲ್ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ [illegible] ಬೆಳೆಯುತ್ತ ಇದೆ. ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟನ ನಿಯಮಗಳಂತೆ [illegible] ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮುಲ್ಟಿಪಲ್ ಬೆನಿಫಿಟ್ ಎಂಬ ಹೊಸ ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ಹೆಚ್ಚಿನ ಮಾಹಿತಿ [illegible] ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ [illegible].

Kumta Agents –
D.K. NAYAK Bros
Honavar Agent
R. V. PRABHU Esq.

K. Padmanabha Rao & Sons.
BELGAUM
Chief Agents for
Karnatak Districts & S. M. States

ವೃತ್ತಸಾರ.

— ಜಪಾನ ದೇಶದಲ್ಲಿ ಡಾಟಸನ್ ಎಂಬ ಮೋಟರುಗಾಡಿ ತಯಾರಾಗುತ್ತದೆ. ಇದು ತಾಸಿಗೆ ೬೫ ಮೈಲು ಓಡಬಲ್ಲದು. ಇಷ್ಟು ಒಳ್ಳೇ ಪರಿಶ್ರಮದ ಮೋಟರುಗಳು ಬೇರೆ ಯಾವ ದೇಶದಲ್ಲಿಯೂ ದೊರೆಯುವದಿಲ್ಲವಂತೆ! ದರ ೩೦೦ ಕಡಿಮೆ. ಈ ಬಂಡಿಗೆ ಗಿರಾಕಿ ಹೆಚ್ಚಿದರೆ, ಅದರಿಂದ ಕಂಪನಿಯವರು ಹೆಚ್ಚಿನ ಉತ್ಸಾಹ ಕೊಂಡು ಮುಂದಿನ ವರ್ಷ ೫೦೦೦ ಬಂಡಿ ತಯಾರಿಸಬೇಕೆಂದು ನಿರ್ಧರಿಸಿದ್ದಾರೆ.

— ಸಾದ್ರ್ಯಾಸ ಇಲಾಖೆಯ ದಾಯಿನ್ಯಾದೊಳಗಿನ ೧೦ ಮಂದಿ ವಿದ್ಯಾರ್ಥಿಗಳು ತಮ್ಮ ಹ್ಯಾಸ್ಟೆಲು ಹೆಡ್ ಮಾಸ್ತರರ ಮೇಲೆ ಒಂದು ವಿಲಕ್ಷಣವಾದ ದಾವೆ ಹೂಡಿದ್ದಾರೆ. ಕಳೆದ ಜೂನ ತಿಂಗಳಲ್ಲಿ ತಮಗೆ ಮೇಲಿನ ವರ್ಗಕ್ಕೆ ಹಾಕಿದರೂ ಬೇಸಿಗೆದರು, ಹೊಸ ವರ್ಗದ ಪುಸ್ತಕ ಕೊಂಡು ೩ ತಿಂಗಳು ಅಭ್ಯಾಸ ಮಾಡಿದ್ದು, ಈಚೆಗೆ ಅಪಳತೆ ಸುರಿಸು ವಿದ್ಯಾರ್ಥಿಗಳಿಗೆ ನು, ಈ ಲ ಶಿಕ್ಷಣ ವಿದ್ಯಾ ಪತ್ರವ್ಯವಹಾರ ನಡೆದು ಆ ವಿದ್ಯಾರ್ಥಿಗಳಿಗೆ ಕೆಳ ತರಗತಿಗೆ ಕಳಿಸಿ ಕಾಗಿ ಹೆಡ್ ಮಾಸ್ತರರಿಗೆ ಅಪ್ಪಣೆಯಾಯಿತು. ಈ ಪ್ರಕಾರ ವಿದ್ಯಾಧಿಕಾರಿಗಳ ಹುಕುಮು ಪಾಲಿಸ ಬೇಕಾಗಿ ಹೆಡ್ ಮಾಸ್ತರರು ಒಂದು ಗಟ್ಟಿ ಕಳೆದ, ವಿದ್ಯಾರ್ಥಿಗಳು ಆ ಹೆಡ್ ಮಾಸ್ತರರಿಗೆ ವರ್ಗ ಮಾಡಿ ಬೇಡಿಯುವರೆಗೆ ತಂದರು. ಹೊಸ ಹೆಡ್ ಮಾಸ್ತರರು ವಾಗಿ ವಿದ್ಯಾರ್ಥಿಗಳಿಗೆ ಮೇಲ್ಪಟ್ಟಗಳಿಂದ ಕೆಳತರಗತಿಗೆ ಕಳಿಸುವ ತಕರಾರು ನಡೆಸಿದ್ದರಿಂದ ವಿದ್ಯಾರ್ಥಿಗಳು ಹೊಸ ಹೆಡ್ ಮಾಸ್ತರರ ಮೇಲೆ ದಾವೆ ಹೂಡಿ ಕಳೆದಗತಿಗೆ ಹಾಕಿದಂಥ ಧ್ಯೇಯಬಂದಕ ಹುಕುಮನ್ನು ಬೇಡಿ ದಾವೆ ಹೂಡಿದ್ದಾರೆ! ವಿಚಿತ್ರ ದಾವೆಯೆಂದು ಪ್ರಕಟಿಸ್ಸ!!

— ಮುಂಬಯಿಯಲ್ಲಿ ಸಟ್ಟಾ-ಜೂಗಾರು ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಕೆಲಸ ಮಿ| ಹೊರ್ನಿಮನ್ ರವರು ತಮ್ಮ 'ಬೊಂಬೇ ಸೆಂಟಿನಲ್' ಪತ್ರಿಕೆಯಲ್ಲಿ ದೊಡ್ಡ ಚಳವಳಿಯನ್ನೆಬ್ಬಿಸಿದ್ದಾರೆ. ಅದರಿಂದ ಅನೇಕ ಬಿಕ್ಕಟ್ಟುಗಳು ನಡೆಯುತ್ತಿವೆ. ಪೋಲೀಸ ಅಧಿಕಾರರ ಮೇಲೆ ವಿಪರೀತ ರೂಪದ ಟೀಕೆಗಳಾಗಿ ವಿಚಾರ ನಡೆದ ಬಳಿಕ ಪೋಲೀಸರ ಅಂಗರಕ್ಷಕ ಸಟ್ಟಾ ಉದ್ಯೋಗ ನಡೆಯುತ್ತದಾಗಿ ಮಿ| ಹೊರ್ನಿಮನ್ ರವರ ಅಭಿಪ್ರಾಯ. ಸಟ್ಟಾ ಆಡುವವರ ಅಡ್ಡೆ ಕಟ್ಟೆ ಒಗ್ಗೆ ಸುದ್ದಿಗಾರರಿಗೆ ಪೋಲೀಸರು ಪತ್ತೆಹಚ್ಚಿದರಾಗಿ ಹೇಳ . | ಹೊರ್ನಿಮನ್ ರವರು ಗಡಿಬಿಡಿಯನ್ನೆಬ್ಬಿಸಿದ್ದರೆ ಪೋಲೀಸರು 'ಸೆಂಟಿನಲ್' ಪತ್ರಿಕೆಯೊಳಗಿನ ಬಾತಮೀದಾರರಿಂದ ಜಾಗ್ರತರಾಗಿ ಸಟ್ಟಾ-ಜೂಗಾರಿಗಳನ್ನು ಹಿಡಿಯಲಾರಂಭಿಸಿದ್ದಾರೆ. ಮೊನ್ನೆ ರಾತ್ರಿ ಪೋಲೀಸರು ಡಂಕನ್ ರೋಡಿನ ಒಳೆ ಒಂದು ಮನೆಗೆ ಮುತ್ತಿಗೆ ಹಾಕಿ ಜೂಗಾರಿಗಳನ್ನು ಹಿಡಿದರು. ಈ ಜೂಗಾರ ಮಂದಿರದ ವ್ಯವಸ್ಥೆ ಪರಿಪೂರ್ಣವಿತ್ತು. ಪೋಲೀಸರಿಗೆ ತಂಪೊಡನೆ ಭಯಸೂಚಕ ಗಂಟೆಯು ಬಾರಿಸಲಿಕ್ಕೆ ಪೋಲೀಸರು ಒಳ ಸೇರುವೊಡನೆ ಯಾವತ್ತು ವಿದ್ಯಾರ್ಥಿಗಳು ಪುಸ್ತಕ ಸಲಗಿ ಜೂಗಾರಿಗಳು ಒಮ್ಮೆಲೆ ವಿದ್ಯಾರ್ಥಿಗಳಾಗಿಂತ ದೊರೆಯಾಗಿಬಿಟ್ಟರು. ಹಿಡಿದ ಒಬ್ಬ ಪೋಲೀಸರಿಗೆ ಗದ್ದಲ ಮಾಡಿದರು. ಅದಾಗ್ಯೂ ಪೋಲೀಸರು ಎದೆಗಟ್ಟಿ ಮಾಡಿ ೧೭ ಮಂದಿಗಳಿಗೆ ಹಿಡಿದರು. ಜೂಗಾರದ ದಾವಿಯವನಿಗೆ ಹಿಡಿದು ಪೂರ್ತಿ ದೀಪ ಹಚ್ಚಿಸಿ ಝಡತಿ ಮಾಡಿ ಹಣ-ಸಟ್ಟಾ ಯಾದಿಗಳನ್ನು ಒಯ್ದರು.

— ಮುಂಬಯಿಯಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ಅಧ್ಯಕ್ಷರ ಸ್ಥಾನಕ್ಕೆ ತಮ್ಮನ್ನು ನೇಮಿಸಬಾರದಾಗಿ ಬಾಬು ರಾಜೇಂದ್ರ ಪ್ರಸಾದರವರು ಮಹಾತ್ಮರಿಗೆ ತಂತಿ ಮಾಡಿ ಖಾನ ಅಬ್ದುಲ್ಲ ಗಫ್ಫಾರಖಾನರವರಿಗೆ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಬಿನ್ನೈಸಿಕೊಂಡಿದ್ದರು. ಖಾನ ಸಾಹೇಬರು ಅಧ್ಯಕ್ಷರಾಗಲು ಎಷ್ಟುಕೂ ಒಪ್ಪಲಿಲ್ಲ. "ನಾನು ಸಿಪಾಯಿ, ಸೇನಾಪತಿಯಲ್ಲ" ಹೀಗೆ ಖಾನ ಸಾಹೇಬರು ಅಂದರಂತೆ. ಆದರಿಂದ ಬಾಬು ರಾಜೇಂದ್ರ ಪ್ರಸಾದರವರಿಗೇ ಅಧ್ಯಕ್ಷರಾಗಬೇಕಾಗಿ ಮಹಾತ್ಮರ ಅಪ್ಪಣೆಯಾದಂತೆ ನಿರುಪಾಯವಾಗಿ ಬಾಬು ರಾಜೇಂದ್ರ ಪ್ರಸಾದರವರು ಅಧ್ಯಕ್ಷಸ್ಥಾನವನ್ನಂಗೀಕರಿಸಲು ಒಪ್ಪಿಕೊಂಡಿರುತ್ತಾರೆಂದು ಪಾಟನಾದ 'ಸರ್ಚಲೈಟ' ಪತ್ರಿಕೆಯ ವಾರ್ತೆ.

— ಆಫ್ರಿಕಾ (ಬೆಲ್ಜಿ)ದಲ್ಲಿ ಈಗ ಭಾರತವರ್ಷದ ಮಹಾಯುದ್ಧನಡೆದಿದೆ. ಆ ಯುದ್ಧಕ್ಕೆ ೧॥ ಲಕ್ಷ ಖರ್ಚು ತಪ್ಪದೇ ೩॥ ಕೋಟಿ ರೂಪಾಯಿ ಬೇಕು. ಯುದ್ಧ ನಡೆಯುವದು ತ್ವರಿತವಾಗಿ ಭಾರತವರ್ಷದ ಮೇಲಿನ ಯಾವತ್ತು ಆಪತ್ತುಗಳನ್ನು ಪರಿಹರಿಸಲೆಂದು ಪ್ರಾರ್ಥನೆ.

— ಇದೇ ತಿಂಗಳ ಅಕ್ಟೋಬರ ೨ ನೇ ತಾರೀಖಿಗೆ ಮಹಾತ್ಮರ ವರ್ಷಂತ್ಯುತ್ಸವ. ಆ ದಿನ ಮಹಾತ್ಮರಿಗೆ ಅತ್ಯಂತ ಪ್ರೀತಿದಾಯಕ ಖಾದಿಯನ್ನು ಪ್ರಸಾರಿಸಬೇಕೆಂತ ಪ್ರಯತ್ನ ನಡೆಯಬೇಕಾಗಿ ಅಖಿಲ ಭಾರತೀಯ ನೂಲುಗಾರ ಸಂಘದ ಸೂಚನೆ. ಆ ದಿವಸ ಜನರು ಖಾದಿಯ ಪ್ರಚಾರ ಮಾಡಿ ದೃಷ್ಟಿ ಹರಿಸು ಕೊಂಡು ಬೇರೆ ಅವಿವೇಕವೇ ಪರಿಹಾರವೆಂದು ನಿರ್ಧಾರ ಮಾಡಿದ್ದಲ್ಲದೆ ೧ ಲಕ್ಷ ೨೦ ಸಾವಿರ ರೂಪಾಯಿ ಸಂಗ್ರಹವಾಗಬೇಕೆಂದೂ ಅಪ್ಪಣೆ. ಆ ದಿವಸ ಖಾದಿ ಪ್ರಚಾರಕ್ಕೆ ಪಂಚಶಕ್ತಿಗೆ ಅವರಿಗೆ ಅಪ್ಪಣೆ ನೀಡಿದ ಕ್ರಿಯೆಯನ್ನು ಪೂರೈಸುವದಾಗಿ ಸಂಘದವರು ಹೇಳಿ ಖಾದಿಯನ್ನು ಖರೀದಿ ಪ್ರಚಾರ ಮಾಡಬೇಕೆಂದು ಅಪ್ಪಣೆ ಮಾಡಿದ್ದಾರೆ.

— ತ್ರಿವೇಂದ್ರಮ್ ದಲ್ಲಿ ರಾ| ಕೃಷ್ಣ ಪಿಳ್ಳೆ ಎಂಬ ಸಬ್-ರಜಿಸ್ಟ್ರಾರರಿದ್ದಾರೆ, ಇವರು ಪ್ರಸಿದ್ಧ ವಿದ್ಯಾವಂತರು. ಇವರು ಒಂದೇ ಸಲದ ಮೇಲೆ ನಿದ್ರಾಹಾರ ಮಾಡದೆ ೩ ವರ್ಷದಿಂದ ಹೀಗೆಯೇ ನಡೆಯುತ್ತಾರೆ. ಗೆಳೆಯರ ಅತ್ಯಾಗ್ರಹದ ಮೂಲಕ ಅವರು ಇದೇ ವರ್ಷದಲ್ಲಿ ೬ ಸಲ ಅಲ್ಪಾಹಾರ ಕೊಂಡರು. ಇದನ್ನು ಅವರು ಔಷಧೋಪಚಾರದಿಂದ ಗಲಿ, ಮಂತ್ರಶಕ್ತಿಯಿಂದಾಗಲಿ ನಡೆಸುವದಿಲ್ಲ. ಮಹಾದೇವಿಯು ಒಮ್ಮೆ ಪ್ರಸನ್ನಳಾಗಿ ಅವರಿಗೆ ಈ ಅದ್ಭುತ ಶಕ್ತಿಯು ದೊರೆಯಿತೆಂದು ಹೇಳುತ್ತಾರಂತೆ, ಅಂದಿನಿಂದ ಇವರ ಉಪೋಷಣ ವ್ರತ ನಡೆದಿದೆ. ಮುಕ್ಕಾಗೂ ಇವರು ಈ ಶಕ್ತಿಯ ಉಪದೇಶ ಮಾಡಿದರಿಂದ ಅವರೂ ಜಲಪಾನದಿಂದಲೇ ನಿರ್ವಾಹ ಮಾಡಿಕೊಳ್ಳುತ್ತಾರೆ. ರಾ| ಪಿಳ್ಳೆಯವರು ಮಹಾತ್ಮರಿಗೆ ಸಮ್ಮತಿಯಿಂದ ಬಿಟ್ಟದಾಗಿ ಈ ರಹಸ್ಯವನ್ನರುಹುವರಂತೆ. ತ್ರಿವೇಂದ್ರಮ್ ದೊಳಗಿನ 'ಯುನೈಟೆಡ್ ಪ್ರೆಸ' ವಾರ್ತಾಹರರು ಮಾಡಿ ಸುದ್ದಿಗಾರರು ಬರೆದಿಯಿಂದ ಕೊಟ್ಟ ವಾರ್ತೆಯಿದು! ದೈವೀ ಶಕ್ತಿಯ ಅದ್ಭುತ ಲೀಲೆ!

— ಮುಂಬೈ ಸರಕಾರದಲ್ಲಿ ಗುಜರಾತ ಮತ್ತು ಕರ್ನಾಟಕದೊಳಗಿನ ಸತ್ಯಾಗ್ರಹ ನಿಮಿತ್ತ ಜಪ್ತಿಯಾದ ಜನರ ಸಟ ಸೇರಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರ ಕಡೆ ೩೦೦೦ ರೂಪಾಯಿಗಳನ್ನು ಕಳಿಸಿದರು. ಸರದಾರರು ನಿಧಿಯನ್ನು ಅಂಗೀಕರಿಸುವಾಗ ಹಮುಗ ಮಾಡಿ ಗೆಲವಪ್ರ ಸತ್ಯಾಗ್ರಹಿಗಳಿಗೇ ಸಲ್ಲತಕ್ಕದ್ದೆಂದೂ, ಅವರ ಕಷ್ಟ ನಿವಾರಣೆಗಾಗಿ ಇನ್ನೂ ಪ್ರಯತ್ನ ನಡೆಯುತ್ತಿರಬೇಕಾಗಿಯೂ ಉದ್ಗರಿಸಿ ಸಮುಸ್ತರಿಗೂ ಸ್ವಾರ್ಥತ್ಯಾಗ ದೇಶಸೇವಕರ ಕಷ್ಟ ನಿವಾರಣೆ ಮಾಡಲು ಬೋಧಿಸಿದರು.

— ಸಿಲೋನದೊಳಗಿನ ಬಂದ ವಾರ್ತೆ. ರಾಷ್ಟ್ರೀಯ ಸಭೆಯವರ ಉಪಟಳಕ್ಕಾಗಿ ಈ ಬಾರಿ ಜರುಗಬೇಕಾಗಿದ್ದ ಕೌನ್ಸಿಲಿನ ಇಲೆಕ್ಷನನ್ನು ನಡೆಸಬಾರದೆಂದು ಭಾರತ ಮಂತ್ರಿಗಳ ಅಭಿಪ್ರಾಯವಿತ್ತಂತೆ. ಹಾಗೇಯೂ ನಿರ್ಣಯದ ವಿಷಯ ರಾಷ್ಟ್ರೀಯ ಸಭೆಗೆ ಅತ್ಯಂತ ಬಾಧಕವಾಗುವದಾಗಿಯೂ, ಕಳೆದ ಕೌನ್ಸಿಲುಗಳಲ್ಲಿ ರಾಷ್ಟ್ರೀಯ ಸಭೆಯವರು ಹಾಕಿದ ತೊಡಕುಗಳನ್ನು ಪ್ರಕಟವಾಗಿ ಅರಿಸಬಲ್ಲೆವಲ್ಲವಾಗಿಯೂ ಸರ್ಕಾರದ ಪತಿಗಳಾದ ವಿಲಿಂಗಡನ್ ದೊರೆಗಳು ಅಭಿಪ್ರಾಯ ಕೊಟ್ಟು ಈ ವರ್ಷವೇ ಮಧ್ಯವರ್ತಿ ಕೌನ್ಸಿಲಿನ ಇಲೆಕ್ಷನು ನಡೆಸಬೇಕಾಗಿ ಅಭಿಪ್ರಾಯ ಕೊಟ್ಟಂತೆ ಹೊಸ ಇಲೆಕ್ಷನಿನ ಪ್ರಕಟಣೆ ಹೊರಟಿತಂತೆ. ಇಂಥ ಪ್ರಸಕ್ತಿಯಲ್ಲಿ ಲಂಡನ ವರ್ತಮಾನ ಪತ್ರಿಕೆಯಿಂದ ಬಂದ ವಾರ್ತೆ: ದೊರೆಯ ರಾಜಕಾರಣದ ರಂಗದ ಅನುಭವಿಕ ಲೋಕನಾಯಕರು ಪ್ರತ್ಯೇಕ ಪಂಗಡ ಸ್ಥಾಪಿಸಬೇಕಾಗಿ ಸಿಲೋನದೊಳಗಿನ ವಿಚಾರವಂತರು ಹೇಳುವರೆಂದು 'ಫ್ರೀ ಪ್ರೆಸ' ಪತ್ರಿಕೆಯ ಸಿಲೋನದೊಳಗಿನ ಸುದ್ದಿಗಾರರ ವಾರ್ತೆ.

ಜಾಹೀರ ನೋಟೀಸು.

ಪಾರ್ವತೀ ಕೋಂ ನರಸಿಂಹ ಶೆಟ್ಟಿ ಸಾಕೀನ ಸೊಂಡಿಹಿತ್ತಲು, ಉಪ್ಪಿನಪಟ್ಟಣ ಗ್ರಾಮ, ತಾಲೂಕ ಕುಮಟಾ ಇವರು ಈ ಮೂಲಕ ತಿಳಿಸುವದೇನಂದರೆ —

ನನ್ನ ಗಂಡ ನರಸಿಂಹ ಗಣಪಯ್ಯ ಶೆಟ್ಟಿ ಇವರು ಇತ್ತ ೭-೮ ವರ್ಷಗಳಿಂದ ತಲೆಕೆಟ್ಟು ತಿರುಗುತ್ತಿರುತ್ತಾರೆ. ಅವರು ಮೊಬೈನವರ ಹಿಡಿದಿದ್ದು ಆಸ್ತಿ ಅವರ ಕ್ರಿಯ ಪಗ್ಗರೆ ಮಾಡುವವರಿದ್ದಾರಾಗಿ ತಿಳಿಯುತ್ತದೆ. ಹಾಗೆ ಅವರು ಏನಾದರೂ ಲೀಜು ಮಾಡಿಕೊಟ್ಟಲ್ಲಿ ಅಪ್ರಾಯಸ್ತ ಮಕ್ಕಳಾದ ೧ ಮಹಾಬಲೇಶ್ವರ, ೨ ಪದ್ಮಲ ಇವರಿಗಾಗಲಿ, ಕುಟುಂಬದವರಿಗಾಗಲಿ ಏನೂ ಬಾಧಿಸಲಾರದು. ಇಂಥ ಯಾವದೇ ವ್ಯವಹಾರಗಳು ಸಿಂಧು ಆಗಲಾರವು ತಿಳಿಯುವದು. ತಾ| ೧೭-೯-೧೯೩೪

✣ ಈ ಎಡ್ರೆಸ್ಸು ಮೆಟ್ಟಿಲಿನ ೧ ಮ ಪಾರ್ವತಿ
ಕೋಂ ನರಸಿಂಹ ಶೆಟ್ಟಿ, ಸೊಂಡಿಹಿತ್ತಲ
ಉಪ್ಪಿನಪಟ್ಟಣ ಇವರದಾಗಿರುತ್ತದೆ

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ,

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದಂದಿನಿಂದ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಿಗೆ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸ ಧ್ರೀಕ್ಕಟ ಕಳಿಸಲಾರೆವು.
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ಷ್ಟಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೩-೮-೦ ವಿ ಪಿ ೦-೮-೦.
ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ
ಜಿ. — ಗೋವಿಂದಸ್ವಾಮಿ ಆಂಡ್ ಕಂಪನಿ ಲಿಮಿಟೆಡ್ ಪೋ| ಬಾ ೫೧೦, ಮೌಂಟರೋಡು, ಮದರಾಸ.

ಕಾನಡಾವೃತ್ತ.

ಮಿತಿ ಭಾವ ಸಂ| ಭಾದ್ರಪದ ವ| ೧೫, ಸೋಮವಾರ

ಆತ್ಮನಿರೀಕ್ಷಣೆ.

ಮಹಾತ್ಮರೊಡನೆ ಮತೈಕ್ಯವಾಗಲಿ, ಮತಭೇದವಾಗಲಿ ಮಹಾತ್ಮರು ಹೊರಡಿಸಿದ ಪ್ರಕಟಣೆಯನ್ನು ಓದಿ ಆತ್ಮನಿರೀಕ್ಷಣೆ ಮಾಡದವನು ವಿರಳ. ಮಹಾತ್ಮರು ತಮ್ಮ ಮನೋಗತವನ್ನು ಈ ಪ್ರಕಟಣೆಯಲ್ಲಿ ಸ್ಫುಟಗೊಳಿಸಿದ್ದಾರೆ. ರಾಷ್ಟ್ರೀಯ ಸಭೆಯವರಲ್ಲಿ — ಏಕೆ? ಲೋಕಸೇವೆಗಾಗಿ ಟೊಂಕಕಟ್ಟಿದ ಪ್ರಮುಖರನೇಕರಲ್ಲಿ— ಬೇರೂರಿಕೊಂಡ ನಿರರ್ಥಕ ವಾಚಾಲತ್ವದಿಂದ ಮಹಾತ್ಮರಿಗೆ ಬೇಸರ ಬಂದಿದೆ. ಅಂತಃಕರಣಪೂರ್ವಕವಾಗಿ ಒಪ್ಪದ [illegible] ಪ್ರತ್ಯಕ್ಷ ಆಚಾರದಿಂದ ದೂರ ಹೋಗುವವರಿಗಾಗಿ ಪ್ರಮುಖರು ಪ್ರಯತ್ನ ಮಾಡುವದಿಲ್ಲ, ಜನಸಾಮಾನ್ಯರ ಉಪಕಾರದ ವೇಷ ಮಾತ್ರ ತಾಳುತ್ತಾರೆ, ಜನಾಂಗದ ಪ್ರತಿನಿಧಿಗಳಿಗೆ ಉಚಿತವಾಗಿ ಜೀವನಕ್ರಮ ನಡಿಸದೆ ಜನಸಾಮಾನ್ಯ ಸುಖ-ದುಃಖಗಳ ಪಾಲುಗಾರರಾಗದ ಲೋಕಪ್ರತಿನಿಧಿಗಳೆಂದು ಅವರು ಮೆರೆಯುತ್ತಾರೆ, ಇದು ಲೋಕವಂಚನೆ, ಆತ್ಮವಂಚನೆ, ರಾಷ್ಟ್ರಸಭೆಯ ದ್ರೋಹ, ಇದರಿಂದ ಯಾವದೇ ಕಾರ್ಯಭಾಗವಾಗದು, ಪೂರ್ಣ ಸ್ವರಾಜ್ಯವಾಗಲಿ ಸಂಪೂರ್ಣ ಸ್ವಾತಂತ್ರ್ಯವಾಗಲಿ ಸಂಪ್ರಾಪ್ತವಾಗದು, ದೇಶಸ್ವಾತಂತ್ರ್ಯದ ವಿಷಯವು ಅತಿ ಗಡುಚಾಗಿದ್ದು, ಅದಕ್ಕಾಗಿ ಮಹಾತ್ಮರು ನುಡಿದಂತೆ, ಸತ್ಯ-ಅಹಿಂಸೆಗಳ ಅಸ್ತ್ರವ ಹಿಡಿದು ದುಡಿಯುವವರು ಕೈಕೊಂಡ ನಿರ್ಣಯಗಳಂತೆ ಸ್ವತಃ ನಡಕೊಂಡು, ಜನಾಂಗದ ನಂಬಿಗೆಯನ್ನು ಬೆಂಬಲವನ್ನು ಸಂಗ್ರಹಿಸಿಕೊಂಡು ಕಾದಾಡದಿದ್ದರೆ ಸಾರ್ಥಕವಾಗದು. ಅದಕ್ಕಾಗಿಯೇ ಮಹಾತ್ಮರು ಪ್ರಕಟಣೆಯನ್ನು ಹೊರಡಿಸಿ ರಾಷ್ಟ್ರೀಯ ಸಭೆಯ ಚಾಲಕರಿಗೆ ಆತ್ಮನಿರೀಕ್ಷಣ ಮಾಡಲು ಆಜ್ಞೆ ಮಾಡಿರುತ್ತಾರೆ.

ಮಹಾತ್ಮರಿಗೆ ಸೈನ್ಯಬಲ ಬೇಡ, ದ್ರವ್ಯಬಲ ಬೇಡ, ಜನಬಲ ಬೇಡ, ಶೀಲಬಲವೇ ಬೇಕು, ಶೀಲವಂತರೇ ರಾಷ್ಟ್ರೀಯ ಸಭೆಯ ಮೂಲಾಧಾರರೆಂದು ಮಹಾತ್ಮರ ನಿಶ್ಚಿತಾಭಿಪ್ರಾಯ. ಸತ್ಯಾಗ್ರಹ ಸಂಗ್ರಾಮದಲ್ಲಿ ಶೀಲವಂತ ಪುರುಷರೇ ಅತ್ಯವಶ್ಯಕವಾಗಿ ಬೇಕಾಗಿರುತ್ತಾರೆ. ಶೀಲವಂತರ ಅಭಾವದಲ್ಲಿ ಸಂಕಲ್ಪದಂತೆ ರಾಷ್ಟ್ರೀಯ ಸಭೆಯ ಸಂಗ್ರಾಮ ನಡಿಸುವದಾಗಲಿ, ಪೂರ್ಣ ಸ್ವಾತಂತ್ರ್ಯ ಪ್ರಾಪ್ತಿ ಮಾಡಿಕೊಳ್ಳುವದಾಗಲಿ ದುಃಸಾಧ್ಯವಾದುದು. ಪಾಶ್ಚಾತ್ಯ ಲೋಕಶಾಹಿಯಲ್ಲಿ ಕಂಡುಬರುವ ಕೃಷ್ಣ ಕಾರಸ್ಥಾನಗಳಿಗೆ ನಮ್ಮ ಲೋಕಶಾಹಿಯಲ್ಲಿ ಇಂಬಿಲ್ಲ. ದುರ್ಮಾರ್ಗದಿಂದ, ಠಕ್ಕತನದಿಂದ, ಸುಳ್ಳು ಸೋಗಿನಿಂದ ಮತ ಸಂಗ್ರಹಿಸಿ ಲೋಕನಾಯಕರೆಂದು ರೂಪಾಂತರಿಸುವ ಪಾಶ್ಚಾತ್ಯ ಪದ್ಧತಿಯನ್ನು ಮಹಾತ್ಮರು ಹೇಯುತ್ತಾರೆ, ಯಾರೂ ಇದನ್ನು ಹೇಳದಿರರು. ಬೇಡ— ಮ್ಯುನಿಸಿಪಾಲಿಟಿ ಮೊದಲಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ನಡೆಯುತ್ತಿರುವ ಗುಂಪಾಟವನ್ನೂ ಆತ್ಮಪ್ರತಿಷ್ಠೆಯನ್ನೂ, ನೀತಿಭ್ರಷ್ಟತೆಯನ್ನೂ ಎಲ್ಲರೂ ತಿಳಿದ ವಿಷಯ. ಪಾಶ್ಚಾತ್ಯ ಲೋಕಶಾಹಿಯ ಅಧಿಕಾರ ನಮಗೆ ದೊರೆಯದಿದ್ದಾಗ್ಯೂ ಆ ಲೋಕಶಾಹಿಯ ಕುಚೇಷ್ಟೆ-ಕುಯುಕ್ತಿಗಳನ್ನೆಲ್ಲ ಜನರು ಕಲಿತುಬಿಟ್ಟಿದ್ದಾರೆ. ಪರವಾದ ಪಕ್ಷ ತತ್ವ ಸ್ವಾರ್ಥ ಸಾಧಿಸಿಕೊಳ್ಳಲು ಪಾಶ್ಚಾತ್ಯ ಲೋಕಶಾಹಿಯು ಸ್ವಾರ್ಥಸಾಧಕರಿಗೆ ತೀರ ಅನುಕೂಲವಾಗಿದೆ. ಲೋಕಶಾಹಿ ಆಕ್ಷೇಪವಾದುದೆಂದು ಮಹಾತ್ಮರ ಮನೋನಿಶ್ಚಯ. ಯಾರೂ ಹಾಗೆ ಒಪ್ಪಲೇ ಬೇಕು. ರಾಷ್ಟ್ರೀಯ ಸಭೆಯೊಳಗೆ ಈ ಸೋಗು ತಲೆದೋರಲಾರಂಭಿಸಿದ್ದರಿಂದ ಮಹಾತ್ಮರು ಪ್ರಕಟಣೆ ಹೊರಡಿಸಿ ಭಾರತವರ್ಷಕ್ಕೆ ಮುಂಜಾಗ್ರತೆಯನ್ನಿತ್ತಿದ್ದಾರೆ.

ರಾಷ್ಟ್ರೀಯ ಸಭೆಯ ಪುನರ್ಘಟನೆಗಾಗಿ ಮಹಾತ್ಮರು ಮಾಡಿದ ಸೂಚನೆಗಳನ್ನು, ಅವರಿಗಾದ [illegible] ಸ್ಥಿತಿಯನ್ನು ರಾಷ್ಟ್ರಹಿತೇಚ್ಛುಗಳೆಲ್ಲರೂ ಆಳವಾಗಿ ವಿಚಾರಿಸಬೇಕು. ರಾಷ್ಟ್ರಸಂಸ್ಥೆಯ ಈ ಯೋಗ್ಯ ದೋಷದಿಂದ ಪೂರ್ಣ ಸ್ವಾತಂತ್ರ್ಯದಂತ-ಪೂರ್ಣವಾದರೆ ಸಂಪೂರ್ಣ [illegible] ಪದ, ಪ್ರಿಯಸ್ಪರ್ಧಾ [illegible] ಗೌರವ ಹೊರತು ರಾಷ್ಟ್ರಕ್ಕೆ ಏನೊಂದಿಲ್ಲ. [illegible] ಸ್ವಾತಂತ್ರ್ಯ [illegible] ಮಾತ್ರ ರಾಷ್ಟ್ರವು [illegible], ಅನುವಂಶಿಕ ಸಂಸ್ಕಾರ [illegible] ಹಿಂದೆ ಸರಿಯದಿರುವ [illegible] ಕಲ್ಯಾಣ ಸಾಧಿಸಲು ನೆರವಾಗಬಲ್ಲದು. ಅದಕ್ಕಾಗಿಯೇ ಪಾರತಂತ್ರ್ಯದಲ್ಲಿ ದೂಡ ದೂಡ ಸಂಬಳ ತಿನ್ನುವ [illegible] ಅಧಿಕಾರ [illegible] ಸ್ವರಾಜ್ಯದಲ್ಲಿ ಕಸಗುಡಿಸುವ ಜಾಡಮಾಲಿಯಾಗಿರುವದೇ ಲೇಸೆಂದು ಮಹಾತ್ಮ ಗಾಂಧಿಗಳ ಅನುಭವ [illegible] ರವರು [illegible] ನ್ನ ಶುದ್ಧ [illegible] ದ್ಯ ಧ್ಯೇಯವು ನಮ್ಮ [illegible] ಸ್ವಾತಂತ್ರ್ಯಗಳಲ್ಲಿನ ಅವನ್ನು [illegible], ಶಸ್ತ್ರಾದಿಗಳಿಗೆ ಇದಿರಾಗಿ [illegible] ಸತ್ಯ-ಅಹಿಂಸೆಯ ಅಸ್ತ್ರವ ಹಿಡಿದವರು ನುಡಿದಂತೆ ನಡೆಯಬೇಕಲ್ಲವೇ? ಆಡಿದಂತೆ ಮಾಡದಿದ್ದರೆ ಲೋಕದಲ್ಲಿ ರಾಷ್ಟ್ರೀಯ ಸಭೆಯ ಪ್ರತಿಷ್ಠೆ ಉಳಿದೀತೇ? ರಾಷ್ಟ್ರೀಯ ಸಭೆಯು, ಅಸಹಾಯ್ಯಕರ [illegible] ದು ಹರಟೆಯ ಸಂಘವೆಂದು ಲೋಕಾಪವಾದ ಹಬ್ಬಿದರೆ ರಾಷ್ಟ್ರವಿಮೋಚನೆಯ ಕಾರ್ಯವೆಂದಾದರೂ ಅದರಿಂದ ಸಾಧ್ಯವಾದೀತೇ? ಇದನ್ನು ದೇಶಬಾಂಧವರು ದೀರ್ಘವಾಗಿ ವಿಚಾರಿಸಿ ಮನೋನಿರ್ಣಯ ಕೈಕೊಳ್ಳಬೇಕಾಗಿ ಮಹಾತ್ಮರ ಸೂಚನೆಯಿದೆ.

ರಾಷ್ಟ್ರೀಯ ಸಭೆಯ ಬಲವು ಸೈನ್ಯದಲ್ಲಿಲ್ಲ, ಮದ್ದು-ಗುಂಡುಗಳಲ್ಲಿಲ್ಲ, ತೋಪು-ತುಪಾಕಿಗಳಲ್ಲಿಲ್ಲ, ಶಸ್ತ್ರಾಸ್ತ್ರಗಳಲ್ಲಿಲ್ಲ, ಯಂತ್ರಸಾಹಿತ್ಯಗಳಲ್ಲಿಲ್ಲ, ಕೋಟೆ ಕೊತ್ತಲಗಳಲ್ಲಿಲ್ಲ. ರಾಷ್ಟ್ರೀಯ ಸಭೆಯವರು ಕೈಕೊಳ್ಳುವ ಮನೋನಿಶ್ಚಯದ ಮೇಲೆ ಅದು ಸರ್ವಥಾ ಅವಲಂಬಿಸಿಕೊಂಡಿದೆ. ನುಡಿದಂತೆ ನಡೆಯುತ್ತಿದ್ದರೆ, ಆಡಿದಂತೆ ಕಾರ್ಯ ಮಾಡಿದರೆ ರಾಷ್ಟ್ರೀಯ ಸಭೆಯು ಪ್ರಬಲ ಸಂಸ್ಥೆ, ಹಾಗಿರದಿದ್ದಲ್ಲಿ ರಾಷ್ಟ್ರೀಯ ಸಭೆಯು ಸತ್ವಶೂನ್ಯ, ತೇಜೋಹೀನ, ದುರ್ಬಲ ಸಂಸ್ಥೆ. ಬೇರೊಂದಿಲ್ಲ. ಮಹಾತ್ಮರಂಥ ವ್ರತನಿಷ್ಠ ಪುರುಷರೊಬ್ಬರು ರಾಷ್ಟ್ರೀಯ ಸಭೆಯ ಕಾರಭಾರದಲ್ಲಿ ಸೇರಿಕೊಂಡಂದಿನಿಂದ ರಾಷ್ಟ್ರೀಯ ಸಭೆಯಲ್ಲುಂಟಾದ ನವಚೈತನ್ಯವನ್ನೂ, ನವಶಕ್ತಿಯನ್ನೂ, ಲೋಕಪ್ರತಿಷ್ಠೆಯನ್ನೂ ನಾವು ದಿನಾ ಅನುಭವಿಸುತ್ತಿದ್ದೇವೆ. ಸತತೋದ್ಯೋಗದಿಂದ ಮಹಾತ್ಮರು ರಾಷ್ಟ್ರೀಯ ಸಭೆಯನ್ನು ಪ್ರಜಾಪ್ರತಿನಿಧಿ ಸಂಸ್ಥೆಯನ್ನಾಗಿ ಪರಿಣಮಿಸಿದ್ದಾರೆ. ರಾಷ್ಟ್ರೀಯ ಸಭೆಯೆಂದರೆ ಸರಕಾರವು ಹೌಹಾರುತ್ತಿದೆ. "ಬ್ರಹ್ಮತೇಜೋ ಬಲಂ ಬಲಂ" ಎಂಬ ವಿಶ್ವಾಮಿತ್ರ ರಾಜರ್ಷಿಯ ವಚನದಂತೆ ಮಹಾತ್ಮರು ಆತ್ಮಶಕ್ತಿಯೇ ರಾಷ್ಟ್ರೀಯ ಸಭೆಯ ಸಾಮರ್ಥ್ಯವೆಂದೂ, ಅದನ್ನು ರಾಷ್ಟ್ರೀಯ ಸಭೆಯವರು ಆತ್ಮನಿರೀಕ್ಷಣೆ ಮಾಡಿ ಹೆಚ್ಚಿನದಾಗಿ ಸಂಗ್ರಹಿಸಬೇಕೆಂದೂ, ಇಲ್ಲದಿದ್ದರೆ ಸಂಕಲ್ಪಿತ ಸಾಧನಗಳಿಂದ ಪೂರ್ಣ ಸ್ವರಾಜ್ಯ ಪ್ರಾಪ್ತಿಯಾಗದೆಂದೂ ಲೋಕಕ್ಕೆ ಸಾರಿದ್ದಾರೆ. ರಾಷ್ಟ್ರೀಯ ಸಭೆಯ ಸಾಮರ್ಥ್ಯವು ಸಂಖ್ಯಾಬಲದ ಮೇಲೆ ಹೊಂದಿಕೊಂಡಿಲ್ಲ, ಗುಣಬಲವನ್ನೇ ಸಂಪೂರ್ಣವಾಗಿ ಹೊಂದಿಕೊಂಡಿದೆ. ಆದರಿಂದ ಆತ್ಮನಿರೀಕ್ಷಣ ಮಾಡಿ ಅಂತಃಕರಣದಲ್ಲಿ ಮನೆಮಾಡಿಕೊಂಡಿದ್ದ ಅಪ್ರಾಮಾಣಿಕತನವನ್ನು ಹೋಗಲಾಡಿಸಿ ರಾಷ್ಟ್ರೀಯ ಸಭೆಯ ಪಾರತಂತ್ರ್ಯವಿಮೋಚನ ಕಾರ್ಯದಲ್ಲಿ ನೆರವಾಗಬೇಕಾಗಿ ದೇಶಬಾಂಧವರ ಕಡೆ ವಿನಮ್ರವಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ದೇಶಬಾಂಧವರು ಶೀಲಸಂಗ್ರಹ ಮಾಡಿಕೊಂಡು ಸ್ವಪರ ಕಲ್ಯಾಣವನ್ನೆರಡೂ ಸಾಧಿಸಿಕೊಂಡು ಕೃತಾರ್ಥರಾಗಬಹುದಲ್ಲವೇ?

ಸ್ಫುಟ ಸೂಚನೆಗಳು.

೧ ಹಿಂದು-ಮುಸಲ್ಮಾನರ ಕಲಹಕ್ಕೆ ಈಗಿನ ಶಿಕ್ಷಣವೇ ಕಾರಣವೆಂದು ಹೇಳಿದರೆ ಯಾರೂ ನಂಬರು. ಹಿಂದುಗಳು ಬೇರೆ, ಮುಸಲ್ಮಾನರು ಬೇರೆ, ಅವರವರ ಹಿತಸಂಬಂಧಗಳು ಬೇರೆ, ಹಿಂದುಗಳ ಹಿತವೆಂದರೆ ಮುಸಲ್ಮಾನರ ಅಹಿತ, ಮುಸಲ್ಮಾನರ ಹಿತವೆಂದರೆ ಹಿಂದುಗಳ ಅಹಿತ, ಎಂಬದೊಂದು ಹೊಸ ಇತಿಹಾಸ ಇತ್ತೀಚೆಗೆ ಎಲ್ಲೆಲ್ಲಿಯೂ ಹಬ್ಬಿಕೊಂಡಿದೆ. ಪ್ರೊ| [illegible] ದೇಸಾಯಿಯವರು ನಾಗಪುರದ [illegible] ಅಂಜುಮನ್ ಹೈಸ್ಕೂಲ ಸಭಾಮಂದಿರದಲ್ಲಿ [illegible] ಮುಸಲ್ಮಾನ ಸಂಘದ ವಿದ್ಯಾರ್ಥಿಗಳ ಸಭೆಯಲ್ಲಿ ಹಿಂದು-ಮುಸಲ್ಮಾನರ ಪೂರ್ವಜರು ಒಂದೇ ಎಂದೂ, ಬಹಳಷ್ಟು ಮುಸಲ್ಮಾನರು ಮುಂಚೆ ಹಿಂದು ಜಾತಿಯವರಿದ್ದರೆಂದೂ, ಮೊಗಲರು [illegible] ಸಂಪ್ರದಾಯದವರಿದ್ದರೆಂದೂ ಸಪ್ರಮಾಣ ಪ್ರತಿಪಾದಿಸಿದರು. ಮೋಗಲಾಯಿಯಲ್ಲಿ ಹಿಂದು-ಮುಸಲ್ಮಾನರೆಂಬ ಭೇದವು ಇದ್ದಿಲ್ಲವೆಂದೂ, ಅರಸರು ಇವರಿಬ್ಬರನ್ನೂ ಸರಿಯಾಗಿ ನಡಿಸಿಕೊಳ್ಳುತ್ತಿದ್ದರೆಂದೂ, ಮೊಗಲ್ ಬಾದಶಹರು ಹಿಂದುಸ್ಥಾನವನ್ನೇ ಸ್ವದೇಶವೆಂದೆಣಿಸಿ ರಾಜ್ಯಕಾರಭಾರ ನಡಿಸಿದರೆಂದೂ ಸಪ್ರಮಾಣ ಪ್ರತಿಪಾದಿಸಿ, ಹಿಂದು-ಮುಸಲ್ಮಾನರು ಐಕ್ಯಮತ್ಯದಿಂದ ದುಡಿದು ದೇಶಕಲ್ಯಾಣ ಸಾಧಿಸಬೇಕಾಗಿ ಮುಸಲ್ಮಾನ ಹುಡುಗರಿಗೆಲ್ಲ ಪ್ರಬೋಧಿಸಿದರು. ಪ್ರೊ| [illegible] ಯವರು ಹೇಳಿದ ಒಂದೆರಡು ಉದಾಹರಣೆಗಳಿಂದ ಮೊಗಲ್ ಬಾದಶಹರ ಧರ್ಮಸಹಿಷ್ಣುತೆಯು ಸ್ಫುಟವಾಗುತ್ತದೆ. ಅಕಬರ ಬಾದಶಹರಿಗೆ ಬೇರೆ ಬೇರೆ ಧರ್ಮದ ಪತ್ನಿಗಳಿದ್ದರೆಂಬ ಮಾತು ಇತಿಹಾಸಪ್ರಸಿದ್ಧವಾದದು. ಹಿಂದು ಪತ್ನಿಯು ತುಲಸೀಪೂಜೆ ಮಾಡುತ್ತಿದ್ದಳು, ಕ್ರೈಸ್ತ ಮತದ ರಾಣಿಯು ಕ್ರೈಸ್ತ ಸಂಪ್ರದಾಯದಂತೆ ಪ್ರಾರ್ಥನೆ ಮಾಡುತ್ತಿದ್ದಳು, ಫತ್ತೇಪುರ-ಸಿಕ್ರಿಯಲ್ಲಿ

ಈಗಲೂ ಈ ಪತ್ನಿಯರ ನಿವಾಸಮಂದಿರಗಳನ್ನು ಕಾಣಬಹುದು ಆದಾಗ್ಯೂ ಮೋಘಲ್ ಬಾದಶಹನ ಪ್ರೀತಿಯಲ್ಲಿ ವ್ಯತ್ಯಾಸವಿರಲಿಲ್ಲ ಇಸ್ಲಾಮ ಧರ್ಮವು ಇಷ್ಟು ಸರ್ವವ್ಯಾಪಕವಿದೆ, ಇದನ್ನು ಧರ್ಮಬಾಂಧವರು ನನಿಸಿ ವರ್ತಿಸಿದರೆ, ಅವರಿಗೂ ದೇಶಕ್ಕೂ ಕ್ಷೇಮವಿದೆ, ಗಡಿನಾಡಿನ ಗಾಂಧಿಗಳು ಖಾನಸಾಂವಿನೊಳಗಿನ ತಮ್ಮ ಭಾಷಣದಲ್ಲಿ ನುಡಿದಂತೆ ಇಸ್ಲಾಮ ಧರ್ಮವಾಗಲಿ, ಹಿಂದು ಧರ್ಮವಾಗಲಿ ಆಪತ್ತಿನಲ್ಲಿ ಸಿಲುಕಿಕೊಳ್ಳಲು ಪರಧರ್ಮೀಯರು ಕಾರಣರಲ್ಲ, ಆಯಾ ಧರ್ಮದವರೇ ಕಾರಣರು ಧರ್ಮತತ್ವವನ್ನರಿಯದ, ನ್ಯಾಯಾನ್ಯಾಯಗಳ ವಿಚಾರ ಮಾಡದೆ ಪರಿಸ್ಥಿತಿಯನ್ನು ಲಕ್ಷಿಸದೆ ವರ್ತಿಸಿದ್ದರಿಂದಲೇ ಜನಾಂಗವು ಕಷ್ಟದಲ್ಲಿ ಸಿಲುಕಿಕೊಂಡಿರುವದಲ್ಲವೇ? ಶ್ರೀ| ಭುಲಾಭಾಯಿಯವರ ಭಾಷಣ ಕೇಳಿ ಮುಸಲ್ಮಾನ ಸಂಘದವರು ಅವರಿಗೆ ತಮ್ಮ ಸಂಘದ ಬಹುಮಾನ್ಯ ಸಭಾಸದರಾಗಿ ಸೇರಿಸಿಕೊಂಡರೆಂದು ನಮೂದಿಸಲು ಅತ್ಯಂತ ಸಂತೋಷವೆನಿಸುತ್ತದೆ ಈ ಸಭೆಗೆ ಬೆರಿಸ್ಟರ ಖಿದಾಯತಲ್ಲಾರವರು ಅಧ್ಯಕ್ಷರಾಗಿದ್ದುದೂ ಸಂತೋಷದ ಸಂಗತಿಯು ಇದೇ ಪ್ರವೃತ್ತಿಯನ್ನು ದೇಶತುಂಬ ಹಬ್ಬಿಸಿದರೆ ಹಿಂದು-ಮುಸಲ್ಮಾನರ ಕಲಹದ ಕಲಂಕವು ಅಚ್ಚು ತೊಳೆದುಹೋಗುವದಲ್ಲವೇ?

---

೨ ಸಂಯುಕ್ತಪ್ರಾಂತದ ಪ್ರಮುಖರಾದ ಪಂಡಿತ ಸುಂದರಲಾಲರವರು ಶನವ್ರರದೊಳಗಿನ 'ಟಿಳಕ ಸಭಾಮಂದಿರ'ದಲ್ಲಿ ಗಣಪತ್ಯುತ್ಸವದ ಸಮಯ ಮಾಡಿದ ಭಾಷಣವು ಹಿಂದು-ಮುಸಲ್ಮಾನರ ಐಕ್ಯಕ್ಕೆ ಪರಿಪೋಷಕವಾಗಿದೆ ಈಗ ವಿದ್ಯಾರ್ಥಿಗಳು ಕಲಿಯುವ ಇತಿಹಾಸ ಪುಸ್ತಕಗಳಿಂದ ಹಿಂದು-ಮುಸಲ್ಮಾನರು ಪರಂಪರೆಯಿಂದ ಪರಸ್ಪರ ದ್ವೇಷಿಕರೆಂಬ ಭಾವನೆ ಬಾಲ್ಯದಿಂದಲೇ ಬೇರೂರುತ್ತಿದೆ ಅಕಬರನಂಥ ಔದಾರ್ಯವಂತ ಬಾದಶಹನ ಮಾತು ಹಾಗಿರಲಿ, ಔರಂಗಜೇಬ ಬಾದಶಹನು ಸಹ ಹಿಂದು ದೇವಸ್ಥಾನಗಳಿಗೆ ಜಹಾಗೀರುಗಳನ್ನು ಅರ್ಪಿಸಿದ್ದನೆಂಬ ಈ ಉಲ್ಲೇಖಗಳು ನಮ್ಮ ಇತಿಹಾಸ ಪುಸ್ತಕಗಳಲ್ಲಿ ಎಲ್ಲೆಲ್ಲಿಯೂ ಓದಸಿಗವು ಮೋಘಲ್ ಬಾದಶಾಹಿಯು ೨೦೦ ವರ್ಷಗಳ ತನಕ ನಡೆಯಿತು ಆದರೆ, ಇಷ್ಟು ದೀರ್ಘ ಕಾಲದಲ್ಲಿ ಒಂದು ಸಹ ಗೋಹತ್ಯವಾಗಲಿಲ್ಲವಾಗಿ ಪ್ರಸಿದ್ಧ ಇತಿಹಾಸಕರ್ತನಾದ ಹಂಟರನೇ ನಮೂದಿಸಿಟ್ಟಿದ್ದಾನೆ. ೧೯೩೧ ನೇ ಇಸ್ವಿಯಲ್ಲಿ ಕಾನಪುರದಲ್ಲಿ ನಡದಂಥ ಹಿಂದು-ಮುಸಲ್ಮಾನರ ದೊಂಬಿಯಂಥ ಒಂದು ದೊಂಬಿ ಸಹ ಮೋಘಲ್ ಬಾದಶಹರ ಕಾರಕೀರ್ದಿಯಲ್ಲಿ ಘಟಿಸಲಿಲ್ಲ ಇಷ್ಟು ಪರಮತಸಹಿಷ್ಣುತೆಯು ಮೋಘಲ್ ರಾಜ್ಯದಲ್ಲಿ ನಲಿಗೊಂಡಿತ್ತಾಗಿ ಪಂಡಿತ ಸುಂದರಲಾಲರು ಹೊಗಳುತ್ತಾರೆ ಈಗಿನ ಇತಿಹಾಸ ಪುಸ್ತಕಗಳಲ್ಲಿ ಐಕ್ಯಪರಿಪೋಷಕವಾದ ಈ ಉಲ್ಲೇಖಗಳಿಲ್ಲ ಅಲ್ಪರು ದ್ವೇಷ ಸಾಧಿಸಿದ ಸಂಗತಿಗಳಿವೆ ಈ ಪುಸ್ತಕಗಳನ್ನು ನಮಗೆ ಕಲಿಸಿ ನಮ್ಮಷ್ಟು ಮೂರ್ಖರು ಜಗತ್ತಿನಲ್ಲಿ ಬೇರೊಬ್ಬರಿಲ್ಲವಾಗಿ ನಮ್ಮಿಂದಲೇ ಪ್ರತಿಪಾದಿಸಿಕೊಳ್ಳುವ ಕಪಟ ನಾಟಕವಿದೆಂದು ಪಂಡಿತ ಸುಂದರಲಾಲರು ಆವೇಶದಿಂದ ಉದ್ಗರಿಸಿ, ಈ ಪುಸ್ತಕಗಳನ್ನು ಒಮ್ಮೆಲೇ ಸುಟ್ಟು ಬೂದಿ ಮಾಡಬೇಕಾಗಿ ಬೋಧಿಸಿದ್ದಾರೆ ಹಿಂದು-ಮುಸಲ್ಮಾನರು ಜಗಳ ಮಾಡಿಕೊಂಡ ಸಂಗತಿಯ ಬಾಹುಲ್ಯ ಮಾಡುವದೇಕೆ? ಒಡಹುಟ್ಟಿದ ಅಣ್ಣ-ತಮ್ಮಂದಿರು ಬಡಿದಾಡಿಕೊಂಡದ್ದನ್ನು ಯಾರು ನೋಡಿಲ್ಲ? ಅದರಿಂದ ಅಣ್ಣ-ತಮ್ಮಂದಿರು ಯಾವಾಗಲೂ ಭಿನ್ನ ಭಿನ್ನರೆಂದು ಪ್ರತಿಪಾದಿಸುವದು ಯುಕ್ತವಾದೀತೇ? ಹೀಗೆ ಸಹ ಪಂಡಿತ ಸುಂದರಲಾಲರು ಕೇಳುತ್ತಾರೆ. ಹಿಂದು-ಮುಸಲ್ಮಾನರು ಪರಸ್ಪರ ದ್ವೇಷಭಾವ ಹಿಡಿಯದೆ, ಎಲ್ಲರೂ ಒಡಹುಟ್ಟಿದವರೋಪಾದಿಯಲ್ಲಿ ಧರ್ಮತತ್ವಗಳನ್ನು ಗ್ರಹಿಸಿ, ಅದರಂತೆ ವರ್ತಿಸಿ ಸಮಸ್ತ ಧರ್ಮಗಳೂ ಮೂಲತತ್ವದಲ್ಲಿ ಒಂದೇ ಎಂದು ಜಗತ್ತಿಗೆ ಭಾರತೀಯರು ಸಾರಬೇಕಾಗಿ ವಿನಂತಿ ಮಾಡಿಕೊಳ್ಳುತ್ತಾರೆ ಯಾಕೆಂದರೆ, ಶ್ರೀ| ಭುಲಾಭಾಯಿಯವರು ನಾಗಪುರದ ಸಭೆಯಲ್ಲಿ ನುಡಿದಂತೆ, ಸಕಲ ಧರ್ಮಗಳ ಗುರಿಯೊಂದೇ ಪರಮಾತ್ಮನ ಪ್ರಾಪ್ತಿ. ಮಾರ್ಗ ಮಾತ್ರ ಬೇರೆ ಬೇರೆ!

---

೩ ಸತ್ಯಾಗ್ರಹದಲ್ಲಿ ಸೇರಿ ಶಿಕ್ಷೆಹೊಂದಿದ ವಕೀಲರ ಮೇಲೆ ಸರಕಾರವು ಎತ್ತಿದ ಕತ್ತಿಯೊಳಗಿಂದ ವಕೀಲರು ಪಾರಾದ ಬಗ್ಗೆ ಅವರಿಗೆ ಅಭಿನಂದನೆ, ಪಾರುಗಾಣಿಸಿದ ಬಗ್ಗೆ ಮುಂಬಯಿ ಹ್ಯಾಕೋರ್ಟಿಗೆ ಅಭಿವಂದನೆ ವಕೀಲರು ಕಾಯಿದೆಯ ಉದ್ದಿಮೆಯಿಂದ ಜೀವಿಸುತ್ತಾರೆ, ಅವರು ಕಾಯಿದೆಯನ್ನು ಯಾವಾಗಲೂ ಶಿರಸಾ ಮನ್ನಿಸುತ್ತಿರಬೇಕು, ಹೀಗೊಂದು ಸೂತ್ರವನ್ನು ಈ ಹಿಂದೆ ಮುಂಬಯಿ ಹ್ಯಾಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ನೋರ್ಮನ್ ಮೆಕ್ಲಿಯೊಡರವರು ಠರಾಯಿಸಿಟ್ಟಿದ್ದರು ಅದನ್ನು ಮುಖ್ಯ ನ್ಯಾ| ಮೂ| ಸರ್ ಜ್ಹೊನ್ ವಿಲಿಯಮ್ ಫಿಸರ ಬೊಮಂಟರವರೂ, ನ್ಯಾ| ಮೂ| ರಾಂಗಣೇಕರ-ನಿವಾಟಿಯಾರವರೂ ಅಲ್ಲಗಳೆದು, ವಕೀಲರು ಇತರ ನಾಗರಿಕರಂತೆ ಕಾಯಿದೆ ಪಾಲಿಸಲು ಬದ್ಧರೆಂದೂ, ವಕೀಲರೆಂಬದರಿಂದ ಅವರ ಮೇಲೆ ಹೆಚ್ಚಿನ ಜವಾಬದಾರಿ ಬರುವದಿಲ್ಲವಾಗಿಯೂ ಅಭಿಪ್ರಾಯಪಟ್ಟಿದ್ದಾರೆ ಕಾಯಿದೆಯಂತೆ ಅವರಿಗೆ ಶಿಕ್ಷೆಯಾದ ಬಳಿಕ, ವಕೀಲಿಯ ಸನದುಗಳನ್ನು ರದ್ದುಪಡಿಸಿ ಜೀವನೋಪಾಯ ಅಪಹರಿಸುವ ಶಿಕ್ಷೆ ಮಾಡಲು ನ್ಯಾಯಾಧೀಶರು ಒಪ್ಪಲಿಲ್ಲ ವಕೀಲರು ನೀತಿಭ್ರಷ್ಟ ವರ್ತನ ನಡಿಸಿದ್ದಲ್ಲಿ ಇಲ್ಲವೆ ಬಾದಶಹರ ರಾಜ್ಯವನ್ನೇ ನಷ್ಟಪಡಿಸುವ ಕ್ರಾಂತಿಯಲ್ಲಿ ಸಿಲುಕಿಕೊಂಡಿದ್ದಲ್ಲಿ ಆ ಮಾತು ಬೇರೆ " ಪರಿಸ್ಥಿತಿಯ ಅಭಾವದಲ್ಲಿ ಬೆರಿಸ್ಟರರ ಸನದುಗಳನ್ನು ರದ್ದುಪಡಿಸಿ ಅವರಿಗೆ ಮೂಲ ಶಿಕ್ಷೆಯ ಪರಿಮಾಣವನ್ನು ತಾವು ಬೆಳಿಸಲಾರೆವೆಂದು ನ್ಯಾ| ಮೂ| ಗಳು ಉದ್ಗರಿಸಿ ರಾ| ಮಸಾನಿ, ಭರೂಚಾ, ಮೇಥಾ, ವೀನೆ ಮೊದಲಾದ ಬೆರಿಸ್ಟರ-ವಕೀಲರ ವಿರುದ್ಧ ಸರಕಾರದ ಪರವಾಗಿ ದಾಖಲಾದ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ ಸತ್ಯಾಗ್ರಹದಲ್ಲಿ ಸೇರಿದ ಬೆರಿಸ್ಟರರು ಪಕ್ಷಗಾರರ ವಕೀಲಿಯನ್ನು ಕುಂದಿಲ್ಲದೆ ನಡಿಸಿದರಾಗಿ ನ್ಯಾ| ಮೂ| ಗಳು ಆನಂದದಿಂದ ನಮೂದಿಸಿದ್ದಾರೆ ಈ ಪ್ರಕಾರ ಸರಕಾರವು ವಕೀಲರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರದಂತೆ ಸಂಕಲ್ಪಿಸಿದ ಪಾಶವು ಹರಿದುಹೋಗಿದೆ ಈಬಗ್ಗೆ ರಾ| ಮಸಾನಿ ಮೊದಲಾದ ವಕೀಲರಿಗೂ, ನ್ಯಾಯಮೂರ್ತಿಗಳಿಗೂ ನಾವು ಪುನಃ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ

---

೪ ಇನಕಮ್‌ಟಕ್ಸ ಖಾತೆಯೊಳಗಿನ ನಿರಂಕುಶ ಕಾರಭಾರಕ್ಕೆ ಮುಂಬಯಿ ಹ್ಯಾಕೋರ್ಟು ಒಳ್ಳೇ ಕಡಿವಾಣ ಹಾಕಿ ನಿಯಂತ್ರಿಸಿದೆಂದು ತಿಳಿಸಲು ತುಂಬಾ ಸಂತೋಷ ಮುಂಬಯಿಯಲ್ಲಿ 'ಬೊಂಬೇ ಟ್ರಸ್ಟ ಕೊರ್ಪೋರೇಶನ್' ಎಂಬ ಕಂಪನಿಯಿದೆ ಈ ಕಂಪನಿಯವರು 'ಹೋಂಗ-ಕೊಂಗ ಕೊರ್ಪೋರೇಶನ್' ಎಂಬ ಕಂಪನಿಯಿಂದ ೧೧ ಕೋಟಿ ರೂಪಾಯಿ ಸಾಲ ಕೊಂಡಿದ್ದರು ಈ ಸಾಲದ ಬಡ್ಡಿಯ ಮೇಲೆ ಬೊಂಬೇ ಟ್ರಸ್ಟ ಕಂಪನಿಯವರು ಇನಕಮ್ ಟೆಕ್ಸ ಹಿಡಿದು ಕೊಡಬೇಕಾಗಿ ಇನಕಮ್ ಟೆಕ್ಸ ಖಾತೆಯವರು ಹುಕುಮು ಮಾಡಿದರು. ಈ ಹುಕುಮಿನ ವಿರುದ್ಧ ಪ್ರಿವ್ಹಿ ಕೌನ್ಸಿಲು ತನಕ ವ್ಯಾಜ್ಯ ನಡೆದು ಕಂಪನಿ ಸೋತಿತು, ಸರಕಾರವೇ ಗೆದ್ದಿತು ಈ ಬಡ್ಡಿಯ ರಕಮಿನ ಮಟ್ಟಿಗೆ ಬೊಂಬೇ ಟ್ರಸ್ಟ ಕಂಪನಿಯವರು ಹೋಂಗಕೊಂಗ ಕಂಪನಿಯ ಏಜಂಟರೆಂದು ನ್ಯಾಯಕೋರ್ಟುಗಳು ಕಾಯಿದೆಯ ಅರ್ಥವನ್ನು ಮಾಡಿ ಈ ತೆರಿಗೆ ಕೊಡಲೇ ಬೇಕೆಂದು ವಿಧಿಸೋಣವಾಯಿತು ಟೆಕ್ಸು ತೆರೋಣಾಯಿತು ಹೋಂಗ-ಕೊಂಗ ಕಂಪನಿಯು ಬ್ರಿಟಿಶ ಕಾಯಿದೆಯ ಅಧೀನವಾದ ಕಂಪನಿಯಲ್ಲ ಹೀಗಾಗಿ ಇನಕಮ್ ಟೆಕ್ಸಿನ ಭೂದಂಡ ಬೊಂಬೇ ಕಂಪನಿಯ ಮೇಲೇ ಬಿತ್ತು ಈ ಉಪಟಳ ಬೇಡವೆಂದು ೧೯೩೦ ನೇ ಇಸ್ವಿಯಲ್ಲಿ ಹೋಂಗಕೊಂಗ ಕಂಪನಿಯ ಸಾಲ ತೀರಿಸಿದರು, ಆದಾಗ್ಯೂ ಇನಕಮ್ ಟೆಕ್ಸ ಆಫೀಸರರು ಬಡ್ಡಿಯ ಮೇಲೆ ರೂಪಾಯಿ ೩,೧೭,೧೮೭-೬-೦ ಟೆಕ್ಸ ವಿಧಿಸಿದರು ಸಾಲ ತೀರಿತೆಂದರೂ ಕೇಳದೆ ಟೆಕ್ಸ ವಿಧಿಸಿದರು, ಅ| ಕಮಿಶನರ-ಕಮಿಶನರರು ಅಪೀಲು ತಿರಸ್ಕರಿಸಿದರು ಹ್ಯಾಕೋರ್ಟಿಗೆ ಬೊಂಬೇ ಟ್ರಸ್ಟಕಂಪನಿಯವರು ಅರ್ಜಿ ಮಾಡಿಕೊಂಡರು ಅದರಂತೆ ನ್ಯಾ| ಮೂ| ಗಳು ವಿಚಾರಿಸಿ ಇನಕಮ್ ಟೆಕ್ಸ ಖಾತೆಯ ಹುಕುಮನ್ನು ರದ್ದುಪಡಿಸಿ ಟೆಕ್ಸನ್ನು ತಿರುಗಿ ಕೊಡಬೇಕಾಗಿ ಅಪ್ಪಣೆ ಮಾಡಿದರು ಆದಾಗ್ಯೂ ಇನಕಮ್ ಟೆಕ್ಸ ಕಮಿಶನರರ ಸೊಕ್ಕು ಮುರಿಯಲಿಲ್ಲ ನಸೂಸ ಕಂಪನಿಯ ಜಾಮೀನ ಕೊಟ್ಟನಕ ಹಣವನ್ನು ಹಿಂತಿರುಗಿ ಕೊಡಬರುವದಿಲ್ಲವಾಗಿ ಇನಕಮ್ ಟೆಕ್ಸ ಕಮಿಶನರರು ಹುಕುಮು ಮಾಡಿದರು, ಇದಲ್ಲದೆ, ಪುನಃ ಇನಕಮ್ ಟೆಕ್ಸ ಆಫೀಸರರಿಗೆ ಅಪ್ಪಣೆ ಮಾಡಿ ಹೋಂಗಕೊಂಗ ಕಂಪನಿಯ ಲೆಕ್ಕದ ಪುಸ್ತಕಗಳನ್ನು ಬೊಂಬೇ ಟ್ರಸ್ಟ ಕಂಪನಿಯಿಂದ ಹಾಜರಪಡಿಸಿಕೊಂಡು ಇನಕಮ್‌ಟೆಕ್ಸ ಆಕರಿಸಬೇಕಾಗಿ ಹುಕುಮು ಮಾಡಿದರು. ಸಾಲ ತೀರಿ ಸಂಬಂಧ ಕಡಿದುಹೋದ್ದರಿಂದ ಬೊಂಬೇ ಕಂಪನಿಯವರು ಹೋಂಗಕಾಂಗ ಕಂಪನಿಯ ಲೆಕ್ಕ ಹಾಜರಪಡಿಸಲಿಲ್ಲ ಆಫೀಸರರು ಉತ್ಪನ್ನ ಗೃಹೀತ ಹಿಡಿದು ಹ್ಯಾಕೋರ್ಟು ರದ್ದ ಮಾಡಿದಷ್ಟೇ ಟೆಕ್ಸ ಆಕರಣೆ ಮಾಡಿದರು. ಬೊಂಬೇ ಟ್ರಸ್ಟ ಕಂಪನಿಯವರು ಈ ಹುಕುಮಿನ ವಿರುದ್ಧ ಮಾಡಿದ ಅರ್ಜಿಯನ್ನು ನ್ಯಾ| ಮೂ| ಬೊಮಂಟ-ರಾಂಗಣೇಕರರವರು ಮನ್ನಿಸಿ, ಹ್ಯಾಕೋರ್ಟಿನ ನಿರ್ಣಯವನ್ನು ತಿರಸ್ಕರಿಸಿ ಬೊಂಬೇ ಕಂಪನಿಯವರ ಮೇಲೆ ಇನಕಮ್ ಟೆಕ್ಸು ಹೊರಿಸಿದ್ದೂ ಜಾಮೀನು ಬೇಡಿದ್ದೂ ಅತಿಕ್ರಮವೆಂದೂ, ಹ್ಯಾಕೋರ್ಟಿನ ಅಪಮಾನವೆಂದೂ ನಮೂದಿಸಿ ಬಡ್ಡಿಮತ್ತು ಖರ್ಚ ಸಹಿತ ಎಲ್ಲ ರಕಮನ್ನು ಬೊಂಬೇ ಟ್ರಸ್ಟ ಕಂಪನಿಗೆ ತೆರಬೇಕಾಗಿ ಇನಕಮ್ ಟೆಕ್ಸ ಕಮಿಶನರರಿಗೆ ವಿಧಿಸಿದ್ದಾರೆ. ನ್ಯಾಯಸ್ಥಾನದ ಅಂಕೆಯಲ್ಲಿಟ್ಟರಿಂದ ಈ

[ಪುಟ ೯ ಕಲಮು ೩ನೇದನ್ನು ನೋಡಿರಿ]

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಸಾಧಾರಣ. ವಿಷಮ ಜ್ವರ ಮೊದಲಾದ ರೋಗರಾಯಿಯಿದೆ.

ಶ್ರೀ ಶಾಂತಿಕಾ ಪರಮೇಶ್ವರಿ ಅಮ್ಮನವರಲ್ಲಿ ಭಜನ ಸಪ್ತಾಹ ನಡೆದು ನಿನ್ನೆ ಮಂಗಲೋತ್ಸವವಾಯಿತು.

ಬೋಟ ಕಂಪನಿಯ [illegible] ಇದ್ದಾರೆ. [illegible] ಅಂದರೆ ೧೯೧೩ ೧೩ ನೇ [illegible] ಕಂಪನಿಯವರು ಈಗಿನ [illegible] ಮಾಡಿ ಮತ್ತು [illegible] ಪ್ರಯಾಣಿಕರಿಗೆ [illegible] ಮಾಡಿದೆ.

ಹೊನ್ನಾವರ—ಗೋಕರ್ಣ ಮೋಟರ ಸ್ಟೀರ್ಸ್ ನಡಿಸ [illegible] ಕಂಪನಿಗಳು [illegible] ನಡಿಸದೆ ೧ ತಿಂಗಳು [illegible] ಎಂಬುದೊಂದು [illegible] ಪ್ರಾರಂಭ.

ಭಟಕಳ— (ತಾ ೨೦-೯-೧೯೩೪) ಮ್ಯುನ್ಸಿಪಾಲಿಟಿಯ [illegible] ಉತ್ತರವಾಗಿ [illegible] ವೇನಂದರೆ— (೧) ಅಧ್ಯಕ್ಷರು [illegible] ೧೯ ವರ್ಷಗಳಿಂದ [illegible] ಅಧ್ಯಕ್ಷರ [illegible] (೧೯೩೧ ೩೪) [illegible] ವರ್ಷ [illegible] (೨) [illegible] ಮಾರ್ಗಗಳ [illegible] ರಸ್ತೆಯು [illegible] ಅಧ್ಯಕ್ಷರು [illegible] (೩) ಮ್ಯುನಿಸಿಪಾಲಿಟಿಯ [illegible] ೧ ದೊಡ್ಡ, ೧ ಸಣ್ಣ [illegible] ೩೦೦೦ [illegible] ಅಧ್ಯಕ್ಷರ [illegible] ೩೦೦೦ [illegible] ೬೦೦೦ [illegible] ೩೦೦೦ [illegible] ಆಗಬೇಕೆಂದರೆ ಮತ್ತಷ್ಟು ಬೇಕು? (೪) ಅಂಜುಮನ ಶಾಲೆಗೆ ಗ್ರಾಂಟು [illegible] ತಿಂಗಳಲ್ಲಿ [illegible] ಅರ್ಜಿ ಮಾಡಿಲ್ಲ [illegible] ಪ್ರಾಥಮಿಕ [illegible] ಅರ್ಜಿಯನ್ನು [illegible] ತಿಂಗಳಲ್ಲಿ ಅಂಜುಮನ ಶಾಲೆಗೆ [illegible] ಪ್ರಾಥಮಿಕ ಶಿಕ್ಷಣವು [illegible] ಇಂಗ್ಲೀಷ ಶಿಕ್ಷಣವು ಪ್ರಥಮ ಕರ್ತವ್ಯವೋ? ಅಧ್ಯಕ್ಷರೇ ಹೇಳಲಿ [illegible] ಪ್ರಾಥಮಿಕ ಶಿಕ್ಷಣಕ್ಕೆ [illegible] ಇಂಗ್ಲಿಷ ಶಿಕ್ಷಣಕ್ಕೆ [illegible] ನನ್ನದೇನು ಆಕ್ಷೇಪವಿಲ್ಲ (೫) [illegible] ಅಧ್ಯಕ್ಷರು [illegible] ಮುಂದೊಡ್ಡಿ [illegible] ೨ ವರ್ಷಗಳಿಂದ [illegible] ಅಧ್ಯಕ್ಷರಿಗೆ [illegible] ಮೇಲೆ [illegible] (೬) [illegible] ಹಳೇ ಇಂಗ್ಲಿಷ ಶಾಲೆಯಲ್ಲಿ ೩-೪ ವಿದ್ಯಾರ್ಥಿಗಳಿದ್ದರೆಂದು ಆಕ್ಷೇಪ [illegible] ಸರಕಾರದಿಂದ ಗ್ರಾಂಟು [illegible] ವಿದ್ಯಾರ್ಥಿಗಳಿದ್ದರೆ ಸರಕಾರವು ಗ್ರಾಂಟು [illegible] ಅಧ್ಯಕ್ಷರು [illegible]

ಶಿರಸಿ— [illegible] ದಿವಸಗಳ ಹಿಂದೆ ಇಲ್ಲಿಯ [illegible] ವಿದ್ಯಾರ್ಥಿಗಳಿಗೆ [illegible]

ಶ್ರೀ [illegible] ವಿದ್ಯಾರ್ಥಿಗಳು [illegible]

ಇಲ್ಲಿಯ [illegible] (೧) [illegible] (೨) [illegible] ೧ ನೇ [illegible] ವರ್ಷಗಳ [illegible] ಜನರ [illegible] ೧ ನೇ [illegible] ವರ್ಷಗಳ [illegible] ಎಂದರೆ [illegible] ೧೮೮೦ [illegible] ೧ ನೇ [illegible] ಕೊನೆಗೆ [illegible]

ನಗರ ಮಸೂತಿಯು [illegible] ಪಶ್ಚಿಮ ದಿಕ್ಕಿಗೆ [illegible] ೧೨, [illegible] ಮುಂದೆ ವಾದ್ಯ [illegible]

ಆದರಂತೆ [illegible] ವರ್ಷಗಳ [illegible] ಮಸೂತಿಯ ಮುಂದೆ [illegible] ವಾದ್ಯ ಬಾರಿಸಿಕೊಂಡು ಹೋಗಲಿಕ್ಕೆ [illegible] ಜನಸಮೂಹ [illegible] ಮಸೂತಿಗಳ ಮುಂದೆ ವಾದ್ಯಕ್ಕೆ [illegible] ಅಲ್ಲಿಂದ [illegible] ಕಾಲಕ್ಕೆ ವಾದ್ಯದೊಂದಿಗೆ [illegible] ಮುಂದೆ ಮಹಮ್ಮದೀಯ [illegible] ಶಾಂತತಾಭಂಗವಾಗದಂತೆ ಯೋಗ್ಯ ವ್ಯವಸ್ಥೆ [illegible] ಕೆಲ ನಾಗರಿಕರು ಇಲ್ಲಿಯ ಮ್ಯಾಜಿಸ್ಟ್ರೇಟರ [illegible] ಅರ್ಜಿ [illegible] ಮತ್ತು [illegible] ಫೌಜದಾರರು [illegible] ಮ್ಯಾಜಿಸ್ಟ್ರೇಟರ [illegible] ಕಾಲಕ್ಕೆ [illegible]

ತಾರೀಖು ೧೧ ವಿ [illegible] ಡಿ ಎಸ್ ಪಿ [illegible] ಪೋಲೀಸ ಇನಸ್ಪೆಕ್ಟರ [illegible] ಪೋಲೀಸರು [illegible] ಮ್ಯಾಜಿಸ್ಟ್ರೇಟರು [illegible] ಹಿಂದುಗಳಿಗೆ [illegible] ಮಹಮ್ಮದೀಯರು [illegible] ಮ್ಯಾಜಿಸ್ಟ್ರೇಟರು [illegible] ಹಿಂದುಗಳು [illegible] ಮಹಮ್ಮದೀಯರು [illegible] ಮ್ಯಾಜಿಸ್ಟ್ರೇಟರು [illegible] ಪ್ರಾರ್ಥನೆಯ ವೇಳೆಯ [illegible] ಹಿಂದುಗಳು [illegible] ಮಹಮ್ಮದೀಯರು [illegible] ಮಸೂತಿಯ ಮುಂದೆ ವಾದ್ಯದೊಂದಿಗೆ [illegible] ಅರ್ಜಿದಾರರ [illegible] ಮಹಮ್ಮದೀಯರು [illegible] ಪ್ರಾರ್ಥನೆಯ [illegible] ಹಿಂದುಗಳು [illegible]

ರು. ಇದರ ಮೇಲೆ ನಮೂದಿಸಿದ ಪ್ರಾಂತಿಕರು ಮಹತ್ವ ದೇನೆಂದು ಹೇಳಿದ ಕಾಲಾವಧಿಯಲ್ಲಿ ಮಳೆ ಸ್ವಲ್ಪ ಕಡಿಮೆ ಬಿದ್ದು ಅದು ಅವರಿಗೆ ಮುಖ್ಯವಾದು ದಾಗಿ ಹೇಳಿದರು. ಹೀಗಾಗಿ ಈಗ ಮಳೆಗಳದವರು ಪ್ರತಿ ಸಾರೆ ೮ ಅಂಶ ಕಮ್ಮಿ ಪೋಲೀಸ ಖಾತೆ ಪಡೆದುಕೊಳ್ಳ ಬೇಕಾಗಿದ್ದ ಅದರಲ್ಲಿ ಈ ಕೆಳಗೆ ಕಾಣಿಸಿದ ಮೇರೆಯಲ್ಲಿ ಅವ ರಿಗಳ ಅಂಶಪ್ರಮಾಣ [illegible] ನಿರ್ಬಂಧವಾಗಿದೆ

(೧) ಬೆಳಗ್ಗೆ ೪ ರಿಂದ ೬

(೨) ಮಧ್ಯಾಹ್ನ ೧೨॥ ೧॥

(೩) ,, ೩॥-೪।

(೪ ಸಾಯಂಕಾಲದ [illegible]॥ ಘಂಟೆ

(೫) ರಾತ್ರಿ ೮॥-೯॥

ಸದರ ಮೇಳೆಗಳ ಲಕ್ಷ ಇರುವ ಪೇಟೆಗಳ ಜನರಿಗೆ ಈ ನಿರ್ಬಂಧದಿಂದ ಬಹಳೇ ಅನಾನುಕೂಲತೆಯಾಗು ತ್ತಿರುವದರಿಂದ ಅವರು ಮೂಲ ಅರ್ಜಿಗೆ ಸಹಿ ಮಾಡಿದ ವರು ಉಳಿದ ಜನರು ಅಸಂತುಷ್ಟರಾಗಿದ್ದು, ಮೇಲ್ಕಾ ಣಿಸಿದ ನಿರ್ಬಂಧವು ತಮಗೆ ಮಾನ್ಯವಿಲ್ಲವಾಗಿಯೂ ಅದನ್ನು ಮಾಡಿದವರು ನಮ್ಮ ಪ್ರತಿನಿಧಿಗಳಲ್ಲವಾಗಿದೆ ಎ ಹೇಳು ತ್ತಿರುವರು ಹೀಗಾಗಿ ಈ ಪ್ರಕರಣವು ಮತ್ತು ಬೆಳೆಯು ವ ಲಕ್ಷಣವು ಕಾಣುತ್ತಿದೆ.

ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಜಾತ್ರೆ ಸಪ್ತಾಹವು ಎಂದಿನಂತೆ ಬಹಳ ಉತ್ಸಾಹದಿಂದ ನೆರವೇರಿತು. ಪ್ರತಿ ದಿವಸ ನಾನಾ ಆಟಗಳನ್ನು ನೋಡಲು ಸಾವಿರಾರು ಜನರು ಸೇರುತ್ತಿದ್ದರು.

ಹೊನ್ನಾವರ— (೨೦—೯ ೧೯೩೪) ಅಂಕ ಗಣಪತಿಯ ಮೆರವಣಿಗೆ ಕಾಲಕ್ಕೆ ಮುಸಲ್ಮಾನರಿಗೂ ದೈವಜ್ಞ ಸಮಾಜದವರಿಗೂ ಆದ ಕಲಹವು ನಿರ್ಣಯ ದಿಂದ ವಿಕೋಪಕ್ಕೆ ಏರಿತು [illegible] ಸರ್ಕಾರದವರ ಅನಂತಪುರ ಕಲಹದ ಮೆರವಣಿಗೆಯಾದ ಬಳಿಕ, ದೈವಜ್ಞ ಸಮಾಜದವರ ಗಣ ಪತಿಗಳ ಉತ್ಸವವು ಸರ್ಕಾರದಿಂದ [illegible] ಯಂತೆ ವ್ಯವಸ್ಥೆಯಿಂದ ಮುಸಲ್ಮಾನರು ಹೋಗ [illegible] ಬಾಂಧವರು ದಯಮಾಡಿ [illegible] ಬಾಂಕಿಯಿಂದ ಉತ್ಸವ [illegible] ಕಾರ್ಯದಲ್ಲಿ ನೆರವಾದ ಬಗ್ಗೆ ಸಮಸ್ತರಿಗೂ ಸರ್ವರೀತಿಯಿಂದಾಗಿದೆ. ಫೌಜ ದಾರರೂ, ಮೆಜಿಸ್ಟ್ರೇಟರೂ ಪೋಲೀಸ ಖಂಡೇ ಒಪ್ಪಿಸಿಟ್ಟು ಜಾಗ್ರತೆ ಕೊಂಡಿದ್ದರು. ಅವರೆಲ್ಲರಿಗೂ ದೈವಜ್ಞ ಸಮಾಜವು ಕೃತಜ್ಞವಾಗಿದೆ.

ನಿನ್ನೆ ಇಲ್ಲಿ ಬೋಟು ಒಂದರ ಮಾಸ ಪಡೆದು ೩ ಸಾ ರು ೧೨೦೦ ಚೀಲ [illegible] ಇಳಿಯಬೇಕಿತ್ತು ಆದರೆ, ಹೇಳಿಯ ಪ್ರಮಾಣದ [illegible] ಗಳಿಗೆ ಹೋಗಲಾಗದೆ ಬೋಟಿನ ಮಾಲಿಗಳೂ [illegible] ತೆರಳಬೇಕಾಯಿತು.

ಅಂಕೋಲಾ— (೨೦ ೯—೩೪) ತಾ ೧೪ನೇ ಗೆ ಇಲ್ಲಿ ಕೊಂಗ್ರೆಸ ಸಭಾಸದರ ಸಾಧಾರಣ ಸಭೆಯು ರಾ। ಸಾ। ಪ್ರಭು ದತ್ತಾತ್ರೇಯ [illegible] ಅಧ್ಯಕ್ಷ ತೆಯಲ್ಲಿ ಸೇರಿ ೮ ಜನರದೊಂದು ಕಾರ್ಯಕಾರಿ ಮಂಡ ಳ ನೇಮಿಸಲ್ಪಟ್ಟಿತು—ರಾ। (೧) ಶಾಮರಾವ ಕೃಷ್ಣ ಕೇಣಿ [ಅಧ್ಯಕ್ಷ], (೨) ಗಣಪತಿ ವಾಮನ ಕಾಮತ [ಕೋಶಾ ಧ್ಯಕ್ಷ] (೩) ಪ್ರಭು ದತ್ತಾತ್ರೇಯ ನಾಡಕರ್ಣಿ (೪) ಹನ್ನ ಮ್ಮ ಕಾಕ ನಾಯ್ಕ ಸುರ್ವೆ, (೫) ಹನುಮಪ್ಪ ಗೋವಿಂದ ನಾಯ್ಕ ವಂದಿಗೆ, (೬) ಕಾಂತ ರಾಮ ರಾಮಕೃಷ್ಣ ಪ್ರಭು ಅಪ್ರಸ್ (೭) ಬೊಮ್ಮಯ್ಯ [illegible] ನಾಯ್ಕ ಕೇಣಿ ಗಿಲ (೮) ಲಕ್ಷ್ಮಣ ವೆಂಕಟೇಶ ಕಾಮತ [ಕಾರ್ಯದ ರ್ಶಿ] ಇದಲ್ಲದೆ ಜಿಲ್ಲಾ ಕೊಂಗ್ರೆಸ ಕಮಿಟಿಗೆ ಮೇಲ್ಕಾಣಿ ಸಿದ ೧ರಿಂದ ೫ನೆಯವರ ಸಹಿತ ೧೩ ಜನರನ್ನು ಆರಿ ಸಲಾಯಿತು. ಹೆಚ್ಚಿನ ೮ ಜನರ ಹೆಸರುಗಳು—ರಾ। (೧) ಶಂಕರ ದತ್ತಾತ್ರೇಯ ದೇಸಾಯಿ (೨) ಹರಿ ಅನಂತ ಪೈ (೩) ಶ್ರೀನಿವಾಸ ಕೃಷ್ಣ ಪೈ, (೪) ಗೋವಿಂದ ರಾಮ ನಾಯ್ಕ ಸುರ್ವೆ (೫) ಗೋವಿಂದರಾವ ವಿಠ್ಠಲ ಕಾಮತ (೬) ರಾಮದಾಸ ಹುಲಿಯಪ್ಪ ಗೌಡ ಉಳವರೆ (೭) ಬೊಮ್ಮಯ್ಯ [illegible] ನಾಯ್ಕ ಸುರ್ವೆ, (೮) ದೇವ ಹೊನ್ನಪ್ಪ ನಾಯ್ಕ ಸಾಮಧಾರಿ ಈ ಪ್ರಕಾರ ಚುನಾವಣೆ ಯಾದ ಬಳಿಕ, ಸತ್ಯಾಗ್ರಹದಲ್ಲಿ ಸೆರೆ ಮನೆಯಲ್ಲಿ ಕಳೆ ಕೊಂಡ ಸ್ವಾರ್ಥತ್ಯಾಗಿ [illegible] ಅಭಿನಂದಿಸುವ ಠರಾ ವಾಯಿತು. ಕಾರವಾರ ಜೈಲಿನಲ್ಲಿ ತೀರಿಕೊಂಡ ರಾ। ತಿಮ್ಮಪ್ಪ [illegible] ಗೌಡ ಮತ್ತು ಬೆಳಗಾವಿಯ ಹಿಂಡಲಗಿ ಜೈಲಿನಲ್ಲಿ ತೀರಿಕೊಂಡ ರಾ। ನಾರಾಯಣ ಉಪೇಂದ್ರ ಕ್ಯಾನಡಾಗ ಇವರ ಬಗ್ಗೆ ದುಃಖಪ್ರದರ್ಶನ ಮಾಡಲಾಯಿತು.

(ತಾ ೨೨ ೯—೩೪) ಇಲ್ಲಿಂದು ಹೊಸ ಕೋಟೆಸ್ಸ [illegible] ಸಿದವಾಗಿದೆ [illegible] ಈ ಕೋಟದ [illegible] ಇದರಿಂದ ಕೆಲ ಮೋಟ ರುಗಳು ನಿಸ್ಸಂಶಯ ಆಗತ್ತವೆ, ಒಂದು ಮೋಟಾರ ವರು ಜಾಸ್ತಿಯಾಗಿ ಪ್ರಯಾಣಿಕರನ್ನು [illegible] ತುಂಬಿ ಕರುವದಿಲ್ಲ [illegible] ಕಷ್ಟ!

ಜಾದಾ ಪೋಲೀಸ ತಂಗಿಯು [illegible] ನಿಂದ ನಡೆದ [illegible] ಗಳಿಗೆ ತೆರಬಿಲ್ಲ [illegible] ಯನ್ನು [illegible] ವಿಚಾರವನ್ನು ಕಲೆಕ್ಟರರು [illegible] ಸಂಚನೆ [illegible] ನವಾಗುವದಿದ್ದರಿಂದ [illegible] ಮನ್ನು [illegible] ಬಿಟ್ಟರೆಂದು ಜಾಹೀರಪಡಿಸಿ ಜನಗಳಿಗೆ ಸಂತೃಪ್ತಿ [illegible] ಸೂಚನೆ

ಪ್ಲೇಗು ಇನ್ನೂ ಸಮಾಧಾನವಾಗಿಲ್ಲ ಅಲ್ಲಲ್ಲಿ ಇನ್ನೂ ಇಲಿಗಳು ಬೀಳುತ್ತಿವೆ [illegible] ಗಳಾದವು ಜನರ ಕಷ್ಟ

ಸ್ಪಷ್ಟ ಸೂಚನೆಗಳು

[ಹಿಂದಿನ ಸಂಚಿಕೆಯಿಂದ ಮುಂದರಿದಿದ್ದು]

[illegible] ಲೋಕಕಂಟಕರಾಗಿದ್ದ [illegible] ಹಿಂದೆ [illegible] ಹರಡ [illegible] ಉಪದ್ರವತೆಯಲ್ಲಿ [illegible] ಬುದ್ಧಿವಂತಿಕೆ, ಜನರು [illegible] ದಲ್ಲಿ ಮುಳುಗಿದ್ದಾರೆ, ಆದಾಗ್ಯೂ ಇನಕಮ್ ಟ್ಯಾಕ್ಸ [illegible] ಜನರ [illegible] ತ್ತಿದೆ ಇನಕಮ್‌ಟೆಕ್ಸ [illegible] ನಿರಂಕುಶ [illegible] ಇದಕ್ಕೆ ಕಾರಣ ಸರಕಾರವು ಇಂಥ ಅನ್ಯಾ ಯವನ್ನು ನಡಿಸುವುದು ಪ್ರಶಸ್ತವಲ್ಲ. ಜನ ನ [illegible] ವ್ಯಾಕೋರ್ಟಿನ [illegible] ದರಿಂದ ಇನಕಮ್‌ಟೆಕ್ಸ [illegible] ಯಲ್ಲಿ [illegible] ಅಧಿಕ [illegible] ಇನ್‌ಕಮ್‌ಟೆಕ್ಸ [illegible] ತೆಯ [illegible] ನಡೆಯುವ [illegible] ಅನ್ಯಾಯ [illegible] ಸರಕಾ ರವು ಪರಿಹರಿಸಲಿ [illegible]?

[illegible]
[illegible]
[[illegible]
[illegible] ಪದ್ಧತಿಯಿಂದ [illegible]]

ಭಾವೀ ಫಲದಿಗ್ದರ್ಶನ.

ಸಮ್ಮಾಲಯದಲ್ಲಿ ಜನ್ಮ [illegible], ಜನ್ಮ [illegible] ಇಲ್ಲದ ಪಕ್ಷ [illegible] [illegible] ಕಳಿಸಲ್ಪಡುವದು

[illegible]

ರೂ ೩-೮-೦ ೧-೬-೦ ೧-೦-೦

ಇದಲ್ಲದೆ ಜಾತಕದ ಎಲ್ಲ ಕೇಸಗಳೂ ಗ್ರಹ ದೋಷ, ಬಾಲಗ್ರಹ, [illegible] ಗಳ ನಿವಾರಣೆಗೆ ಉಪಾಯಗಳು ತಕ್ಕ [illegible] ತಯಾರಿಸಲ್ಪಡುವವು [illegible] ವರು ಹೆಚ್ಚಿನ [illegible] ಸ್ಟಾಂಪು ಇಟ್ಟು ಪತ್ರ ದ್ವಾರ ಬರೆದಲ್ಲಿ ತಿಳಿಸಲ್ಪಡುವದು

ವಿಳಾಸ— ವಿ ಶಾಂತಾರಾಮ,

ಬ್ರಹ್ಮಣಸ್ಪತಿ ಜ್ಯೋತಿಷಾಲಯ,

ಪೋ - ಶಿರಾಲಿ (ಬ್ರಾಪುರ) ಜಿ ಉ ಕಾನಡಾ

'ಕಿರ್ಲೋಸ್ಕರ' ಸಂದರ್ಶ-ಶ್ರೇಷ್ಠತೆ.

ಕಿರ್ಲೋಸ್ಕರ ಕಂಪನಿಯ ನೆಲಗಡ್ಲೆ ಸುಲಿ ಯುವ ಯಂತ್ರ ಪಟ್ಟಿತ್ತಲ್ಲಿ ಒಹಳ ಬ ಬಿಗುತ್ತದೆ ಅದರಿಂದ ಬೀಜ ಕಡಿಮೆ ಬಿದ್ದು ಕಳಸ [illegible] ಗುತ್ತದೆ ಯಂತ್ರ ಶಾಸ್ತ್ರ ಕಷ್ಟದಂತೆ ಇವುಗಳನ್ನ ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲರಿಗೂ ಸಮಾ ಧಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು, ಇಂಜಿನು ಗಳಿಂದಲೂ ನಡಿಸಬಹುದು.



ಪತ್ರ ಬರಕೊಂಡಲ್ಲಿ ಸಚಿತ್ರ ಕೆಟಲಾಗು ಕಳಸಲ್ಪಡುವದು

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)

ದಿ ಬೊಂಬೇ ಸ್ಟೀಮ ನೆವಿಗೇಶನ್ ಕಂಪನಿ ಲಿಮಿಟೆಡ್, ಮುಂಬಯಿ.

ದಿ ಬೊಂಬೇ ಸ್ಟೀಮ ನೆವಿಗೇಶನ್ ಕಂಪನಿ ಲಿಮಿಟೆಡ್ ಇವರು ಮಂಗಳೂರ ಕಡೆ ಚಲಾವಣೆಯಾಗುವ ಹಡಗಗಳ ಟಿಕೇಟಿನ ದರವನ್ನು ಈ ಕೆಳಗೆ ವಿವರಿಸಿದಂತೆ ತಾ. 1—10—1934ನೇಯಿಂದ ಇಳಿಸಿರುವರಾಗಿ ಪ್ರಕಟಿಸಲು ಸಂತೋಷಪಡುತ್ತಾರೆ.

ಬಂದರದ ಹೆಸರು:	ಈಗಿನ ಹಾಸಲು:	ಕಡಿಮೆ ಮಾಡಿದ ಹಾಸಲು:
ಕಾರವಾರ	ರೂ ೬—೧೪—೦	ರೂ ೬ ೪—೦
ತದಡಿ	,, ೭— ೦—೦	,, ೬— ೮—೦
ಕುಮಟಾ	,, ೭— ೪—೦	,, ೬—೧೨—೦
ಹೊನ್ನಾವರ	,, ೭— ೬—೦	,, ೭— ೦—೦
ಭಟಕಳ	,, ೮—೧೨—೦	,, ೮— ೦—೦
ಕುಂದಾಪುರ	,, ೮—೧೪—೦	,, ೮— ೮—೦
ಮಂಗಳೂರ	,, ೧೨— ೪—೦	,, ೯— ೮—೦

ಪ್ರಯಾಣಸ್ಥರು ಈ ಸೌಕರ್ಯವನ್ನನುಲಕ್ಷಿಸಿ ಹಡಗಗಳ ಮೂಲಕವೇ ಹೆಚ್ಚಾಗಿ ಪ್ರಯಾಣ ಬೆಳಿಸಿ ಲಾಭ ಪಡೆಯುವರಾಗಿ ಕೋರಿಕೆ

೧೦೦, ಫ್ರಿಯರ ರೋಡ, ಮುಂಬಯಿ, ತಾ ೧೮-೯-೩೪. } ಕಿಲಿಕ್ ನಿಕ್ಸನ್ ಮತ್ತು ಕಂಪನಿ, ಏಜಂಟ್ಸ
Killick Nixon & Co., Agents.

ಬಿ. ಎಸ್. ಎನ್. ಕಂಪನಿಯ ಇತಿಹಾಸ.

THE BOMBAY STEAM NAVIGATION CO., LTD

(ಕಂಪನಿಯವರ ಅಪೇಕ್ಷೆಯ ಮೇರೆಗೆ)

ಪೂರ್ವಕಥೆ.

ಪಶ್ಚಿಮ ಕರಾವಳಿಯಲ್ಲಿ ಮೊಟ್ಟಮೊದಲು ಸರಿಯಾದ ನಾವೆಯ ಸೌಕರ್ಯಗಳನ್ನು ಕಲ್ಪಿಸಿದ ಕೀರ್ತಿಯು ಒಂದನೇ 'ಬಿ. ಎಸ್. ಎನ್. ಕಂಪನಿಗೆ ಸಲ್ಲುವದು ೧೮೪೫ರಲ್ಲಿ ಇದು ಪ್ರಾರಂಭವಾಗಿ ೧೦ ಲಕ್ಷ ರೂ ಗಳ ಬಂಡವಾಳ ಹಾಕಿತು ಇದರ ನಾವೆಗಳು ಉತ್ತರಕ್ಕೆ ಕರಾಚಿ ವರೆಗೂ, ದಕ್ಷಿಣಕ್ಕೆ ಡಿಗಲ್ಲೀ ವರೆಗೂ ಹಬ್ಬಿತ್ತು. ಇದಲ್ಲದೆ ಮದರಾಸು, ಕಲಕತ್ತೆ, ಪೆನಾಂಗ್ ಮತ್ತು ಸಿಂಗಾಪುರಗಳಿಂದ ಬರುವ ಪಿ. ಮತ್ತು ಓ. ನಾವೆಗಳ ಸಂಬಂಧವೂ ಇದಕ್ಕಿತ್ತು. ೧೦ ವರ್ಷಗಳು ಯಶಸ್ವಿಯಾಗಿ ದುಡಿದ ಕಂಪನಿಗೆ ಪಡೆಯಲಾರದ ಸಂಕಟಗಳೊದಗಿ ೧೮೬೭ರಲ್ಲಿ ಇದರ ಕೆಲಸಗಳು ನಿಂತುಹೋದವು ಕಷ್ಟಪಟ್ಟು ಸ್ಥಾಪಿಸಿದ ವ್ಯವಸ್ಥೆಯ ಫಲವನ್ನು ಪರರು ಅನುಭವಿಸಲು ಮುಂದೆ ಬಂದರು

೧೮೭೬ರಲ್ಲಿ ಎರಡನೆ ಬಿ ಎಸ್ ಎನ್. ಕಂಪನಿಯು ಜನ್ಮತಾಳಿತು. ಮೊದಲು-ಮೊದಲು ತನ್ನ ಯೋಗ್ಯತೆಯನ್ನು ತಾನು ಕಂಡುಕೊಂಡು ಅಭಿವೃದ್ಧಿಗೆ ಎದುರು ನೋಡುತ್ತಿತ್ತು. ಕಂಪನಿಯ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳ ಕೆಲಸಗಾರರು ಕಂಪನಿಯಿತ್ತ ಸೌಕರ್ಯಗಳನ್ನು ಉಪಯೋಗಿಸಿಕೊಂಡು ತಮ್ಮ ವ್ಯಾಪಾರವನ್ನು ವಿಸ್ತರಿಸಿದರು ಇದರಿಂದ ಕಾಠೇವಾಡದ ಹತ್ತಿ ವ್ಯಾಪಾರದಲ್ಲಿಯ, ಕೆನರಾ ಜಿಲ್ಲೆಯ ಕಾಫಿ ವ್ಯಾಪಾರದಲ್ಲಿಯೂ ಅಸಾಧ್ಯ ಪರಿವರ್ತನೆಗಳಾದವು. ಈ ಕಾಲದಲ್ಲಿ ಯುರೋಪಿಯನ್ 'ಕಮ್ಯಾಂಡರ್' ಗಳನ್ನೆಲ್ಲ ತೆಗದುಹಾಕಿ ಭಾರತೀಯರನ್ನೇ ಅವರ ಸ್ಥಾನಗಳಿಗೆ ನೇಮಿಸಿದರು

೧೯೦೬ರಲ್ಲಿ ಮುಂಬಯಿಯ ಕಿಲ್ಲಿಕ್‌ನಿಕ್ಸನ್ ಕಂಪನಿಯವರು ೩೦ ಲಕ್ಷ ರೂ ಗಳ ಬಂಡವಾಳ ಹಾಕಿ ಮೂರನೇ ಬಿ. ಎಸ್. ಎನ್. ಕಂಪನಿಯನ್ನು ತೆಗೆದರು ಅದರ ನಾವೆಗಳು, ಸ್ವಾತ್ತ್ಯಗಳು ಎಲ್ಲವನ್ನು ಈ ಕಂಪನಿಯೇ ತೆಗೆದುಕೊಂಡಿತು ಇಲ್ಲಿಂದ ಮುಂದೆ ಕಂಪನಿಯು ಹಣಕಾಸಿನ ಕಡೆಯಲ್ಲಿ ಬಲ್ಲಿದವಾಗತೊಡಗಿತು.

ಅರ್ಧ ಶತಮಾನದ ಅನುಭವ

ಮೇಲಿನ ಚರಿತ್ರೆಯನ್ನು ನೋಡಿದರೆ ಬಿ ಎಸ್ ಎನ್. ಕಂಪನಿಯು ಭಾರತದ ಪಶ್ಚಿಮ ಕರಾವಳಿಯಲ್ಲಿ ಅತಿ ಪುರಾತನವಾದುದೆಂಬುದು ಸಿದ್ಧವಾಗುವದು ಇದಕ್ಕೆಷ್ಟೋ ಆಪತ್ತುಗಳು ಒದಗಿದವು ಈಗ ಅದು ಭದ್ರವಾದ ತಳಹದಿಯ ಮೇಲೆ ನಿಂತು ಕೆಲಸ ಮಾಡುತ್ತಿದೆ ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಜೀವವಿಮೆ, ಬ್ಯಾಂಕಿಂಗ ಮೊದಲಾದ ವೃತ್ತಿಗಳಲ್ಲಿ ತೊಡಗಿರುವವರು ಡೈರೆಕ್ಟರುಗಳಾಗಿದ್ದಾರೆ ಇದರ ನೌಕಾ ವ್ಯವಸ್ಥೆಯಿಂದ ಮುಂಬಯಿ ನಗರಕ್ಕೂ,ಕೆನರಾ ಜಿಲ್ಲೆ, ಕೊಂಕಣ, ಕಚ್, ಕಾಠೇವಾಡ, ಕರಾಚಿ ಈ ಪ್ರಾಂತ್ಯಗಳಿಗೂ ನಿಕಟ ಸಂಬಂಧವುಂಟಾಗಿದೆ. ಪ್ರಿನ್ಸೆಸ್ ಡಾಕನ್ನು ನೋಡಿದರೋ ಒಂದು ಕಡೆ ಹೊರಡಲು ಸಿದ್ಧವಾಗುತ್ತಿರುವ ಹಡಗುಗಳು, ಮತ್ತೊಂದು ಕಡೆ ಸಾಮಾನುಗಳನ್ನು ಇಳಿಸುತ್ತಿರುವ ಹಡಗುಗಳು, ಟಿಕೆಟುಗಳನ್ನು ಕೊಳ್ಳುವ ಜನರ ಗುಜುಗುಂಪಲು ಎಲ್ಲವೂ ಬಹಳ ಆನಂದದಾಯಕವಾಗಿರುವವು. ಇದಲ್ಲದೆ, ಈ ಕಂಪನಿಯು ಈಗ ೫೦ ವರ್ಷಗಳಿಂದ ಅಂಚೆಯನ್ನು ಸಾಗಿಸಿ ಬ್ರಿಟಿಶ ಸರಕಾರದ ಆದರಕ್ಕೂ ನಂಬಿಗೆಗೂ ಪಾತ್ರವಾಗಿದೆ.

ಕೊಂಕಣ ರಾಣಿ

ಜನಸಾಮಾನ್ಯರ ಅನುಕೂಲತೆಗಳನ್ನೇ ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಂಡು ಅವುಗಳಿಗೆ ತಕ್ಕಂತೆ ಬದಲಾವಣೆಗಳನ್ನು ಮಾಡುವದು ಕಂಪನಿಯವರ ಮುಖ್ಯ ಉದ್ದೇಶವಾಗಿದೆ ೧,೧೦೦ ಜನರನ್ನು ಹೊರುವ 'ಹಿಂದಾವತಿ' ಎಂಬ ಹಡಗು ಈಗ ತಾನೇ ಕಟ್ಟಲ್ಪಟ್ಟು ಕೊಂಕಣ ತೀರದಲ್ಲಿ ಕೆಲಸ ಮಾಡುತ್ತಿದೆ. ಇದನ್ನು ಅಲ್ಲಿನ ಪ್ರಯಾಣಿಕರು 'ಕೊಂಕಣ ರಾಣಿ' ಎನ್ನುವರು. ಇದಲ್ಲದೆ ಇದರ ಜೊತೆಗೆ 'ಚಂಪಾವತಿ', 'ಪ್ರಭಾವತಿ' ಎಂಬ ಮತ್ತೆರಡು ಹಡಗಗಳು ಈಗ ಕೆಲಸ ಮಾಡತೊಡಗಿ ಜನರ ಆದರಕ್ಕೆ ಪಾತ್ರವಾಗಿವೆ.

ಮುಂಬಯಿಯಿಂದ ಪಣಜಿಗೆ ಜನರನ್ನು ಹೊತ್ತು ತರುವ ಹಡಗಿನಲ್ಲಿ ಪ್ರಯಾಣ ಮಾಡಿ ಸುಖವನ್ನನುಭವಿಸಬೇಕು. ಪ್ರಕೃತಿ ಸೌಂದರ್ಯವು ಆ ತೀರದಲ್ಲಿ ತಾಂಡವವಾಡುವುದು ಈ ಪ್ರಯಾಣವು ೨೦ ಗಂಟೆಗಳೊಳಗೆ ಮುಗಿಯುವುದು. ಪ್ರಯಾಣಕ್ಕೆ ತಕ್ಕ ಸೌಕರ್ಯಗಳಿವೆ ಪಣಜಿಯಲ್ಲಿ ಹೋಟಲುಗಳ ಶುಲ್ಕವೂ ಅಷ್ಟೇನೂ ಹೆಚ್ಚಲ್ಲ. ಮುಂಬಯಿಯಿಂದ ಸುಖ ಪ್ರಯಾಣ ಮಾಡುವವರಿಗೆ ಇದೇ ಉತ್ತಮ.

ಕ್ಯಾಬಿನ್ ಸೌಕರ್ಯ.

ಕಂಪನಿಯ ಬೇರೆ ಬೇರೆ ಹಡಗುಗಳು ಕರಾಚಿ, ಮಂಗಳೂರು ಮತ್ತು ಭಾವನಗರಗಳಿಗೆ ಸಾಮಾನುಗಳನ್ನೂ, ಪ್ರಯಾಣಿಕರನ್ನೂ ಹೊತ್ತು ತರುವವು. ಒಂದು ಸಾರೆ ಪೂರ್ಣ ಪ್ರಯಾಣ ಮಾಡಲು ಒಂದೇ ಒಂದು ವಾರ ಹಿಡಿಯುತ್ತದೆ. ನೋಡತಕ್ಕ ಸ್ಥಳಗಳಲ್ಲೆಲ್ಲ ಒಂದೊಂದು ದಿನ ನಿಲ್ಲಬಹುದು ಭಾವನಗರ, ಮಾರ್ಮುಗೋವಾ, ಕರಾಚಿ ಈ ಕಡೆಗಳಲ್ಲಿ ಉಚಿತವಾಗಿ ಕ್ಯಾಬಿನ್ ಸೌಕರ್ಯವು ಲಭಿಸುವದರಿಂದ ಹೋಟಲಿನ ಗೊಡವೆ ಬೇರೆ ಇಲ್ಲ ಇದಲ್ಲದೆ ಮುಂಬಯಿಗೂ ಕರಾಚಿಗೂ ಅತ್ಯಂತ ಸುಲಭವಾದ ಪ್ರಯಾಣ ಸೌಕರ್ಯಗಳನ್ನೊದಗಿಸಿ ಕೊಡುವರು ಇವರಲ್ಲಿನ ಕ್ಯಾಬಿನ್ ಸೌಕರ್ಯವು ವಿಶೇಷ ಪ್ರಸಿದ್ಧಿ ಹೊಂದಿದೆ. ರೂ. ೫೬ ಕೊಟ್ಟರೆ ಎರಡೂ ಕಡೆ ಪ್ರಯಾಣ ಮಾಡಬಹುದು. ಇವರಿಂದ ಹುಟ್ಟುವ ಅನುಕೂಲಗಳಲ್ಲದೆ ಬಹಳ ಕ್ಷೇಮ ಮಂಗಳೂರು ಮಾರ್ಗದಲ್ಲಿ ವೆಂಗುರ್ಲೆ, ಮಾರ್ಮುಗೋವಾ ಮುಂತಾದ ಕಣ್ಮನಗಳನ್ನು ಸೆಳೆಯುವ ಮತ್ತು ಉತ್ತಮ ವಾಯುಗುಣವಿರುವ ಸ್ಥಳಗಳಲ್ಲಿ ನಿಲ್ಲುವುದು ಎಂ. ಎಸ್ ಎಂ ಮತ್ತು ಎಸ್ ಐ ರೈಲ್ವೆಗಳ ಸ್ಟೇಶನ್‌ಗಳಾದ ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಮದ್ರಾಸು, ಉದಕಮಂಡಲ, ಬೆಂಗಳೂರು, ಕಣ್ಣೂರು, ಕ್ಯಾಲಿಕತ್, ತಿರುಚನಾಪಳ್ಳಿಗಳಿಗೆ ಬಹಳ ಹತ್ತಿರದ ಮತ್ತು ಕಮ್ಮಿ ವೆಚ್ಚದ ಮಾರ್ಗ ಮುಂಬಯಿಯಿಂದ ಮಂಗಳೂರಿಗೆ ಹಡಗಿನಿಂದ ಒಂದು ಅಲ್ಲಿಂದ ರೈಲಿನಲ್ಲಿ ಉದಕಮಂಡಲಕ್ಕೆ ೨೨ ಗಂಟೆಗಳೊಳಗೆ ಬರಬಹುದು.

ಗಳಿಸಿದ ಕೀರ್ತಿ

ಇದಲ್ಲದೆ ಈಚೆಗೆ ಕಂಪನಿಯು ಒಂದು ಹೊಸ ಸೌಕರ್ಯವನ್ನು ಕಲ್ಪಿಸಿದೆ ಮುಂಬಯಿ ರೇವಿನ ಸೌಂದರ್ಯಸುಖವನ್ನನುಭವಿಸಿ ಕೊಂಚ ಕಾಲ ನಾವೆಯಲ್ಲಿ ಪ್ರಯಾಣ ಮಾಡುವ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಿದ್ದಾರೆ ಇದಕ್ಕೆ ಸಾರ್ವಜನಿಕರ ಬೆಂಬಲವು ದಿನೇ ದಿನೇ ಹೆಚ್ಚುತ್ತಿದೆ ಇದಕ್ಕೆ ಚೆನ್ನಾಗಿ ಶೃಂಗರಿಸಲ್ಪಟ್ಟ ಒಂದು ಹಡಗನ್ನೇ ಪ್ರತ್ಯೇಕವಾಗಿ ಇಟ್ಟಿದ್ದಾರೆ ೧೨ ವರ್ಷಗಳೊಳಗಿನ ಹುಡುಗರಿಗೆ ಅರ್ಧ ಶುಲ್ಕ. ಹಡಗಿನಲ್ಲಿ ಸಂಗೀತ ಸುಖವನ್ನು ಬೇರೆ ಉಂಟುಮಾಡಿಕೊಡುವರು

ಈಗ ಸಾರ್ವತ್ರಿಕ ಆರ್ಥಿಕ ಮುಗ್ಗಟ್ಟು ಈ ಕಂಪನಿಗೂ ಒದಗಿದ್ದರೂ ಅದು ಈಗ ಗಳಿಸಿರುವ ಕೀರ್ತಿಯು ಅವರ ಶ್ರೇಯೋಭಿವೃದ್ಧಿಗೆ ಭದ್ರವಾದ ತಳಹದಿಯಾಗಿ ನಿಂತಿದೆ

— ಲಂಡನಿನೊಳಗಿನ ಒಲಂಪಿಯಾ ಪ್ರದರ್ಶನದಲ್ಲಿ ನೂತನವಾದ ರೇಡಿಯೋ ಯಂತ್ರ ಪ್ರದರ್ಶನ ನಡೆದಿದೆ. ಇದಕ್ಕೆ ೧೦ ಧ್ವನಿವಾಹಕ ಯಂತ್ರಗಳಿವೆ. ಇವನ್ನು ಮನೆಯಲ್ಲಿ ೧೦ ಕೋಣೆಗಳಲ್ಲಿ ಇಡುವದು. ಕಳ್ಳನು ಮನೆಯ ಯಾವದೊಂದು ಕೋಣೆಯಲ್ಲಿ ಹೊಕ್ಕೊಡನೆ ನಾಯಿಯಂತೆ ಹತ್ತೂ ಕೋಣೆಗಳಲ್ಲಿ ಬೊಗಳುವ ಧ್ವನಿಯಾಗುತ್ತದೆ 'ಯಾರಲ್ಲಿ?' ಎಂಬ ಪ್ರಶ್ನೆ ಹತ್ತೂ ಕಡೆಗಳಿಂದ ಮನುಷ್ಯನ ದನಿಯಿಂದ ಹೊರಡುತ್ತದೆ. ಕಳ್ಳರ ಕಾಟ ತಡಿಸಲು ಇದೊಂದು ಹೊಸ ಶೋಧ!

— ಬೆಂಗಳೂರಿನಲ್ಲಿ ಮೈಸೂರ ಸರಕಾರವು ಮಣ್ಣು ಗಡಿಗೆಯ ಕಾರಖಾನೆ ಸ್ಥಾಪಿಸಿದೆ. ಈ ಕಾರಖಾನೆಯಲ್ಲಿ ತಯಾರಾದ ಪಾತ್ರೆಗಳಿಗೆ ಒಳ್ಳೇ ಗಿರಾಕಿಯಿದ್ದ ಈಗಿನ ದಿನಮಾನದಲ್ಲಿ ಸಹ ಇಲ್ಲಿಯ ಗಡಿಗೆಗಳಿಗೆ ಬೇಡಿಕೆ ಕಡಿಮೆಯಾಗಲಿಲ್ಲ. ಆದರಿಂದ ಕಾರಖಾನೆಯ ವ್ಯಾಪ ಬೆಳೆಸಿದೆ. ಹೆಚ್ಚಿನ ಜ್ಞಾನಸಂಗ್ರಹ ಮಾಡುವದಕ್ಕಾಗಿ ಮೈಸೂರ ಸರಕಾರದವರು ಮನೇಜರರಾದ ರಾ|| ರಘುನಾಥರವರಿಗೆ ಯುರೋಪ ಖಂಡಕ್ಕೆ ಕಳುಹಿದ್ದಾರೆ. ಹೇಳತಕ್ಕ ಸಂಗತಿಯಂದರೆ— ಈ ಕಾರಖಾನೆಯಲ್ಲಿ ತಯಾರಾದ ಮಣ್ಣು ಪಾತ್ರೆಗಳ ಮೇಲೆ ಜಪಾನದವರಿಗೆ ಸ್ಪರ್ಧೆ ನಡೆಸುವದಶಕ್ಯ. ಅಷ್ಟು ಇಲ್ಲಿಯ ಸರಕು ಅಗ್ಗವಾಗಿದ್ದು ಬಾಳಿಕೆಯದಿದೆ.

ವಿದ್ವಾಂಸರಿಂದ ಅನೇಕ ಗ್ರಂಥಗಳ ಆಧಾರದಿಂದ ಪರಿಶೋಧಿಸಲ್ಪಟ್ಟ

ನವದುರ್ಗಾ

ಪೂಜಾ ವಿಧಾನ ಎಂಬ ಪುಸ್ತಕವು

ಇದೇ ಅನಂತ ಚತುರ್ದಶಿಗೆ ತಯಾರಾಗಿ ಮಾರಾಟಕ್ಕೆ ಸಿದ್ಧವಾಗುವದು!

ಸ್ವಲ್ಪೇ ಪ್ರತಿಗಳನ್ನು ತೆಗೆದಿರುವದರಿಂದ ಗ್ರಾಹಕರು ತ್ವರೆಮಾಡಿರಿ!

ಬೆಲೆ ೬ ಆಣೆ, ಟ ಖ ಬೇರೆ

ನಂದಿನೀ ಪುಸ್ತಕಾಲಯ, ಗೋಕರ್ಣ.

ಜಯಕರ್ನಾಟಕ ನಾಟ್ಯಾಂಕ.

ಸಂಪಾದಕರು — ಶ್ರೀ|| ಬೆಳಗಾವಿ ರಾಮಚಂದ್ರ, ಬಿ. ಎ. ಶ್ರೀ|| ಎಚ್. ಪಿ. ಜೋಶಿ, ಬಿ. ಎ.

ನವಂಬರ ಮೊದಲನೇ ವಾರದಲ್ಲಿ ಪ್ರಕಟವಾಗುವದು

(೧೯೩೪ ರ ವಿಶೇಷ ಸಂಚಿಕೆ)

ರಂಗಭೂಮಿ, ನಾಟ್ಯ, ನೃತ್ಯ, ಸಂಗೀತ, ಚಲಚ್ಚಿತ್ರ ಮೊದಲಾದವುಗಳ ಪ್ರಾಚೀನ-ಅರ್ವಾಚೀನ ರೂಪಗಳನ್ನು ಕುರಿತು ತಜ್ಞರ ಲೇಖನಗಳು- ಒಂದೆರಡು ತ್ರಿವರ್ಣ ಚಿತ್ರಗಳು, ಪ್ರಖ್ಯಾತ ನಟ-ನಟಿಯರ ಭಾವಚಿತ್ರಗಳು ಅಲ್ಲದೆ ಬೇರೆ ಅನೇಕ ದರ್ಶನೀಯ ಚಿತ್ರಗಳು, ಏಕಾಂಕ ನಾಟಕಗಳು, ಕಥೆಗಳು, ವ್ಯಂಗ ಚಿತ್ರಗಳು ಇವುಗಳಿಂದೊಡಗೂಡಿ ವಿಶೇಷ ಸಂಚಿಕೆಯು ಕಣ್ಮನಗಳಿಗೆ ಮೋಹಕವಾಗಿ ಪ್ರಕಟವಾಗುವದು. ಇದೊಂದು ಸಂಗ್ರಾಹ್ಯ ಗ್ರಂಥವಾಗಿಯೇ ವಾಚಕರ ಕೈಯಲ್ಲಿ ಕಂಗೊಳಿಸುವದು.

ವಿಶೇಷ ಸಂಚಿಕೆಗೆ ಒಂದೇ ರೂಪಾಯಿ. ಚಂದಾದಾರರಿದ್ದವರಿಗೆ ಉಚಿತವಾಗಿಯೇ ಸಿಗುತ್ತದೆ. ಜಾಹೀರಾತುದಾರರಿಗೆ ಸುವರ್ಣ ಸಂಧಿ. ಕನ್ನಡ ನಾಡಿನಲ್ಲೆಲ್ಲ ವಿಶೇಷ ಸಂಚಿಕೆಯು ಪ್ರಚಾರ ಮಾಡುವ ವ್ಯವಸ್ಥೆ ಮಾಡಿದೆ. ಏಜಂಟರಿಗಾಗಿ ಈಗಲೇ ಕಾಂಟ್ರಾಕ್ಟರಿ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು. ವಿಶೇಷ ಸಂಚಿಕೆಗಳನ್ನು ಕೊಳ್ಳಲಿಚ್ಛಿಸುವವರು ಈಗಲೇ ಆರ್ಡರು ದಾಖಲು ಮಾಡಿಸಬೇಕು.

ಹೆಚ್ಚಿನ ವಿವರಗಳಿಗೆ ಈಗಲೇ ಬರೆಯಿರಿ

ವ್ಯವಸ್ಥಾಪಕ.— ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ವಿಜಯನಗರಂ ಡಾ|| ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಮತ್ತು ಸ್ಪ್ಲೀನ್ ಔಷಧಗಳು.

ಒಬ್ಬ ಪ್ರಸಿದ್ಧ ಡಾಕ್ಟರರ ಅಭಿಪ್ರಾಯ —

'ಕಳೆದ ಹತ್ತು ವರ್ಷಗಳ ವ್ಯಕ್ತಿಶಃ ಅನುಭವದ ಅಧಿಕಾರ ವಾಣಿಯಿಂದ ಹೇಳುವುದೇನಂದರೆ.— ಶಿಶುವೈದ್ಯ ಪ್ರವೀಣ ಡಾ|| ಜಮ್ಮಿಯವರ ಲಿವರ ರೋಗದ ನಿವಾರಕ ಔಷಧಿಯು ಅತ್ಯಂತ ಫಲದಾಯಕವಾದುದು. ಇದರ ಪ್ರಚಾರದಿಂದ ಮಕ್ಕಳ ಮೃತ್ಯು ಸಂಖ್ಯೆಯು ೧೦೦ಕ್ಕೆ ೯೦ರಂತೆ ಕಡಿಮೆಯಾಗಿದೆ!"

(ರುಜು) ಡಾ|| ಟಿ. ಕೆ. ನಟೇಶನ್,

— ಮಕ್ಕಳ ಭಯಂಕರವಾದ ಲಿವರ್ ರೋಗವನ್ನು ನಿವರಿಸಿ ಆರೋಗ್ಯವಂತರನ್ನಾಗಿಯೂ, ಆನಂದಭರಿತರನ್ನಾಗಿಯೂ ಮಾಡುವವು. ಅಂಗಡಿಗಳಲ್ಲಿ ದೊರಕುವ ಬೇರೆ ಮದ್ದುಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ!

ಜಮ್ಮಿ ವೆಂಕಟರಮಣಯ್ಯ, ಮೈಲಾಪುರ, ಮದ್ರಾಸ.

ಸೋಲ ಏಜಂಟ —

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ.)

Siromani Udipi Narayanacharya.

CHAUKHAMBA, BENARES CITY.

S. U. N. & Co.
BENARES CITY.

ಮಾಣಿ, ಶಬರೀ, ರುದ್ರನೇತ್ರ ಪ್ರಸನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಕ್ರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸ್ವಚ್ಛದಾಗುತ್ತ ಅಗುತ್ತ ಕ್ರಿಯಾ ಶಕ್ತಿವದು. ಕಂಠಿ ಸರ 32 ದರ1ಕ್ಕೆ ರೂ.0 8-0ಯಿಂದ ರೂ. 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 35ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ, 1ಕಾಶೀ ನಕ್ಷೆ, 1 ವಿಶ್ವೇಶ್ವರನ ಪಟ ಸಮ್ಮತಿಕಟಲಾಗು ಸಹ ಇನಾಂ ಕಳಿಸಲಾಗುವದು. ಪತ್ರ— ಶಿರೋಮಣಿ ನಾರಾಯಣಾಚಾರ್ಯ, ಚೌಕಾಂಬಾ, ಕಾಶೀ ಕ್ಷೇತ್ರ.

ಜಾಹೀರ ನೋಟೀಸು.

ನಂ|| ಅನರರ ಆರ್ಗನ್ನಾಯುರ ವ ಲಿಕ್ವಿಡೇಟರ ಬಳಗಾರ ಗ್ರೂಪ ಪತಕಿ ಸಹಕಾರಿ ಸಂಘ, ಅಂಕೋಲೆ ಯಮಿತ ಇವರ ಕಡೆಯಿಂದ–

ಈ ನೋಟೀಸು ಮೂಲಕ ತಿಳಿಸುವದೇನಂದರೆ – ಯಲ್ಲಾಪುರ ತಾಲೂಕ ಬಳಗಾರ ಗ್ರೂಪ ಪತಕಿ ಸಹಕಾರಿ ಸಂಘ ಅನಿಯಮಿತ ಇದನ್ನು ಮೆ|| ರಜಿಸ್ಟ್ರಾರ ಸಾಹೇಬ ಬಹಾದ್ದೂರ ಸಹಕಾರಿ ಸಂಘಗಳು ಮುಂಬಯಿ ಇಲಾಖೆ–ಪೂನಾ ಇವರು ... ಇಸ್ಕಿಯ ಸಹಕಾರಿ ಕಾನೂನ ... ಕಲಮು ... ಯ ರದ್ದುಪಡಿಸಿ ಈ ಕೆಳಗ ಸಹಿಮಾಡಿದವರಿಗ ಲಿಕ್ವಿಡೇಟರರಾಗಿ ನೇಮಿಸಿದ ಬಗ್ಗ ತಮ್ಮ ಹುಕುಮ ನಂ. ... ತಾರೀಖು ... ರನ್ನು ತಿಳಿಸಿದ್ದಾರ ಕಾರಣ, ಈ ನೋಟೀಸು ಜಾಹೀರ ಪಡಿಸಿದ ... ತಿಂಗಳೊಳಗ ... ಈ ಸಂಘದಿಂದ ಏನಾದರೂ ಸಲ್ಲತಕ್ಕದಿದ್ದರೆ, ಆ ಬಗ್ಗ ಕೆಳಗ ಸಹಿ ಮಾಡಿದವರ ಕಡೆ ತಿಳಿಸಬೇಕು. ಈ ಮುದ್ದತ್ತಿನೊಳಗ ತಿಳಿಸದೆ ಇದ್ದಲ್ಲಿ ಅವರ ಹಕ್ಕು ಯಾವದೇ ತರದಿಂದಲೂ ... ವದು

ಅಂಕೋಲ, ತಾ 24—9—1931

V. P. Gaonkar,

ಆನರರಿ ಆರ್ಗನ್ನಾಯುರ ವ ಲಿಕ್ವಿಡೇಟರ ಬಳಗಾರಗ್ರೂಪ ಪತಕಿ ಸಹಕಾರಿಸಂಘ ಅಂಕೋಲಾ

ಜಾಹೀರ ನೋಟೀಸು.

ಯಲ್ಲಾಪುರ ತಾಲೂಕ ಬಾಗಿನಕಟ್ಟೆಯಲ್ಲಿ ಇರುವ 1 ಶಿವರಾಮ ಸೂರಣ್ಣಾ, 2 ಶಂಕರ ಸೂರಣ್ಣಾ, 3 ಲಿಂಗಣ್ಣಾ ಸೂರಣ್ಣಾ ಈ ಮೂವರು ಇದರ ಮೂಲಕ ಯಾವತ್ತೂ ಜನರಿಗ ಜಾಹೀರಪಡಿಸುವದೇನಂದರೆ — ನಾವು ಮೂವರು ಮತ್ತು ವೆಂಕಟರಮಣ ಸೂರಣ್ಣಾ ಬಾಗಿನಕಟ್ಟೆ ತಾಲೂಕ ಯಲ್ಲಾಪುರ ಇವರು ಕೂಡಾ ನಾಲ್ವರು ಅಣ್ಣ–ತಮ್ಮಂದಿರಿದ್ದು, ಒಂದೇ ಅವಿಭಕ್ತ ಕುಟುಂಬದಲ್ಲಿ ಸದರಿ ವೆಂಕಣ್ಣಾ ಸೂರಣ್ಣಾ ಇವರ ಮುಖಂಡತನದಲ್ಲಿ ನಡೆದು ಬರುತ್ತಿರುವಲ್ಲಿ ಕಳದ ನೆಬ್ರುವರಿ ತಿಂಗಳ ಸುಮಾರಿಗೆ ಸದರೀ ವೆಂಕಟರಮಣ ಸೂರಣ್ಣಾ ಇವರು ನಮ್ಮ ಅವಿಭಕ್ತ ಕುಟುಂಬದ ಮನೆಯಿಂದ ಚಿನ್ನ, ಬೆಳ್ಳಿ ಮತ್ತು ನಗದೀ ಹಣ ಇವುಗಳನ್ನೆಲ್ಲ ತೆಗೆದುಕೊಂಡು ಹೊರಟು ಹೋಗಿರುತ್ತಾರೆ ಮತ್ತು ಅವರು ಈಗ ನಮಗೆಲ್ಲರಿಗೂ ಬಾಧೆಯಿಸುವ ಹೇತುವಿನಿಂದ ನಮ್ಮ ಅವಿಭಕ್ತ ಕುಟುಂಬದ ಆಸ್ತಿಗಳನ್ನೆಲ್ಲ ಪರಾಧೀನ ಮಾಡುವವರಿದ್ದಾರೆ, ಸಾಲ–ಸಹ ... ರನ್ನು ಸಹ ಮಾಡುವ ತಯಾರಿಯಲ್ಲಿರುತ್ತಾರಾಗಿ ತಿಳಿಯುತ್ತದೆ ಆದ್ದರಿಂದ ಇದರ ಮೂಲಕ ಯಾವತ್ತೂ ಜನರಿಗೆ ಜಾಹೀರಪಡಿಸುವದೇನಂದರೆ —

ಸದರಿ ವೆಂಕಟರಮಣ ಸೂರಣ್ಣಾ ಇವರು ನಮ್ಮ ಅವಿಭಕ್ತ ಕುಟುಂಬದ ಮ್ಯಾನೇಜರ ಎಂತ ನಾವು ಒಪ್ಪುವದಿಲ್ಲ ಅವರಿಗೆ ನಮ್ಮ ಅವಿಭಕ್ತ ಕುಟುಂಬದ ಬಗ್ಗ ಸಾಲ ಮಾಡಲಿಕ್ಕಾಗಲೀ, ಅಸ್ತಿ ಪರಾಧೀನ ಮಾಡಲಿಕ್ಕಾಗಲೀ ಏನೂ ಹಕ್ಕು ಇರುವದಿಲ್ಲ ನಮ್ಮ ಅವಿಭಕ್ತ ಕುಟುಂಬಕ್ಕೆ ಸಾಲ ಮಾಡುವ ವ ಅಸ್ತಿ ಪರಾಧೀನ ಮಾಡುವ ಪ್ರಸಂಗವು ಇಲ್ಲ ಹೀಗಿದ್ದು ಸದರಿ ವೆಂಕಟರಮಣ ಸೂರಣ್ಣಾ ಇವರು ಸಾಲ ಮಾಡಿದ್ದಲ್ಲಿ ಅಥವಾ ಇನ್ನು ಮುಂದೆ ಸಾಲ ಮಾಡುವಲ್ಲಿ ಮತ್ತು ಯಾವದೇ ತರದಿಂದ ಅವರು ಅಸ್ತಿ ಪರಾಧೀನ ಮಾಡಿದಲ್ಲಿ ಅ ಬಗ್ಗೆ ನಮ್ಮ ಅವಿಭಕ್ತ ಕುಟುಂಬದ ಆಸ್ತಿಯಾಗಲೀ ಜವಾಬದಾರ ಆಗಲಾರದು ತಿಳಿಯುವದು ತಾ 22-9-1931

(ಸಹಿ) ಶಿವರಾಮ ಸೂರಣ್ಣ

× ಇದೇ ಎಡಗೈ ಹೆಬ್ಬೆಟ್ಟಿನ ಗುರುತು ಶಂಕರ ಸೂರಣ್ಣಾ ಇವನದಾಗಿರುತ್ತದೆ

— ಇದೇ ಎಡಗೈ ಹೆಬ್ಬೆಟ್ಟಿನ ಗುರ್ತು ಲಿಂಗಣ್ಣಾ ಸೂರಣ್ಣಾ ಇವನದಾಗಿರುತ್ತದೆ

ವಿದ್ವಾಂಸರಿಂದ ಅನೇಕ ಗ್ರಂಥಗಳ ಆಧಾರದಿಂದ ಪರಿಶೋಧಿಸಲ್ಪಟ್ಟ

ನವದುರ್ಗಾ

ಪೂಜಾವಿಧಾನ ಎಂಬ ಪುಸ್ತಕವು ಇದೇ ಅನಂತ ಚತುರ್ದಶಿಗೆ ತಯಾರಾಗಿ ಮಾರಾಟಕ್ಕೆ ಸಿದ್ಧವಾಗುವದು !

ಸ್ವಲ್ಪ ಪ್ರತಿಗಳನ್ನು ತೆಗೆದಿರುವದರಿಂದ ಗ್ರಾಹಕರು ತ್ವರೆ ಮಾಡಿರಿ !

... ... ಬೇರೆ

ನಂದಿನೀ ಪುಸ್ತಕಾಲಯ, ಗೋಕರ್ಣ

ಸ್ವದೇಶಿಯ ಉದ್ಯಮವನ್ನು ... ಸಿಸ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ !!

ಪ್ರೊಪ್ರುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: **ಮಂಗಳೂರು.**

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿ ... ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ !!

[... ಪೊಲಿಸಿಗಳ ಸುಲಭ ಕಂತಿನ ...]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಗಾರಾಳ ಕಮಿಶನ್ ಕೊಡಲಾದೀತು.

ಮುಂಬಯಿ ...

ಪ್ರಭಾಕರ ಕಂಪನಿ, 415 ಠಾಕುರದ್ವಾರ ರಸ್ತೆ ಮುಂಬಯಿ.

'ಕಿರ್ಲೋಸ್ಕರ' ಸಂಪದ–ಶ್ರೇಷ್ಠತೆ.

ಕಿರ್ಲೋಸ್ಕರ ಕಂಪನಿಯ ನೆಲಗಡ್ಲೆ ಸುಲಿಯುವ ಯಂತ್ರ ... ಕಡಿಮೆ ... ಯಂತ್ರ ... ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲರಿಗೂ ಸಮಾಧಾನವಾಗಿದೆ ಇವನ್ನು ಕೈಯಿಂದ ನಡಿಸಬಹುದು, ಇಂಜಿನು ಗಿಂದಲೂ ನಡಿಸಬಹುದು



ಪತ್ರ ಬರಕೊಂಡಲ್ಲಿ ಸಚಿತ್ರ ಕಬಲಾಗು ಕಳಿಸಲ್ಪಡುವದು

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಲಾ– ಸಾತಾರಾ.)

ಅಲ್ಲಲ್ಲಿ ಇಷ್ಟಿಷ್ಟು!

ಸಿಮ್ಲಾದಲ್ಲಿ ಬಿಶಪ್ ಕಾಟನ್ ಶಾಲೆಯಿದೆ. ಈ ಶಾಲೆಯಲ್ಲಿ ಇನಾಮು ಸಮಾರಂಭ ನಡೆಯಿತು. ಅದಕ್ಕೆ ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳು ಅಧ್ಯಕ್ಷರಿದ್ದರು. ಇನಾಮು ಸಿಗದ ವಿದ್ಯಾರ್ಥಿಗಳಿಗೆ ಸಮಾಧಾನ ಮಾಡ ಲೋಸುಗ ಸರ್ವಾಧಿಪತಿಗಳು ನುಡಿದದ್ದೇನಂದರೆ — "ನಾನು ನಿಮ್ಮಂತೆ ವಿದ್ಯಾರ್ಥಿಯಾಗಿದ್ದಾಗ, ನನಗೆ ಒಂದು ಬಾರಿಯೂ ಇನಾಮುಗಳಿಲ್ಲ, ಆದರಿಂದ ಇನಾಮು ಸಿಗದವರು ನಿರಾಶರಾಗುವ ಕಾರಣವಿಲ್ಲ. ಇನಾಮು ಸಿಗದ ವಿದ್ಯಾರ್ಥಿಗಳು ನನ್ನಂತೆ ಸರ್ವಾಧಿಪತಿಗಳಾಗಬಹುದು." ಹೀಗೆ ನುಡಿದರು. ಈ ಮಾತು ಕೇಳಿ ಇನಾಮು ಕೊಂಡವರಿಗೆ ಪಶ್ಚಾತ್ತಾಪವಾಯಿತೇನೋ ತಿಳಿಯಲಿಲ್ಲ! ಇನಾಮು ಸಿಗದವರೆಲ್ಲ ಸರ್ವಾಧಿಪತಿಗಳಾಗ ತೊಡಗಿದರೆ ಎಷ್ಟು ಮಾಂಡಲೀಕ ರಾಜ್ಯ ಬೇಕಾದೀತು? ಎಂಬುದನ್ನು ಇನಾಮು ಸಿಗದ ವಿದ್ಯಾರ್ಥಿಗಳು ಆಲೋಚಿಸಿ ತಾವು ದೊಡ್ಡವರಾಗುವ ಅನ್ ಬ್ರಿಟಿಶ ರಾಜ್ಯದ ವಿಸ್ತಾರವಾಗಿ ಹಿಂದುಸ್ಥಾನದಂಥ ಪರತಂತ್ರ ರಾಜ್ಯಗಳ ಸಂಖ್ಯೆ ಬೆಳೆಯಲೆಂದು ಮನಸ್ಸಿನಲ್ಲೇ ಪ್ರಾರ್ಥಿಸಿಕೊಂಡಿರಬಹುದು!

* *

ಪುಣೆಯಲ್ಲಿ ಮುಂಬಯಿಯ ಗವರ್ನರರಾದ ಬ್ರೆಬರ್ನ ದೊರೆಗಳಿಗೆ ಬೆಂಚ ಮೆಜಿಸ್ಟ್ರೇಟರು ತಮ್ಮ ವಾರ್ಷಿಕ ಸಮ್ಮೇಲನ ಸೇರಿಸಿ ಮಾನಪತ್ರ ಕೊಟ್ಟರು. ಸಂಪ್ರದಾಯದಂತೆ ತಮ್ಮ ಅಡಚಣಿಗಳನ್ನೂ, ಆಕಾಂಕ್ಷೆಗಳನ್ನೂ ಅವರು ಅರಿಕೆ ಮಾಡಿಕೊಂಡರು. "ನಮಗೆ ೧ನೇ ವರ್ಗದ ಮೆಜಿಸ್ಟ್ರೇಟ ಅಧಿಕಾರ ಕೊಡಬೇಕು, ಸೆಶನ್ಸ ಜಜ್ಜರ ಕಡೆ ಕಳಿಸುವ ಪ್ರಕರಣಗಳನ್ನು ಪೂರ್ವ ಚೌಕಶಿಗಾಗಿ ನಮ್ಮ ಕಡೆ ಕಳಿಸಬೇಕು, ಕಚೇರಿ ಕಟ್ಟಿಸಿಕೊಡಬೇಕು, ಪುಸ್ತಕ ಸಂಗ್ರಹ ಬೇಕು" ಹೀಗೆ ಹೇಳಿಕೊಂಡರು. ಮಾನಪತ್ರ ಬೇಡಿಕೆಗಳನ್ನು ನಾಮದಾರರು ತಿರಸ್ಕರಿಸುವಾಗ ಸವಿ-ಸವಿ ನುಡಿಗಳನ್ನಾಡಿದರು. "ನೀವು ಬಹಳ ಕೆಲಸ ಮಾಡುತ್ತೀರಿ, ಆದರಿಂದ ಸರಕಾರಕ್ಕೆ ಬಹಳ ಲಾಭವಾಗಿದೆ. ಪಗಾರು ಕೊಟ್ಟು ಮೆಜಿಸ್ಟ್ರೇಟರಿಗೆ ನೇಮಿಸುವ ಖರ್ಚು ಉಳಿದಿದೆ, ಆದಾಗ್ಯೂ, ನಿಮಗೆ ೧ನೇ ವರ್ಗದ ಅಧಿಕಾರ ಕೊಟ್ಟರೆ ಸರಕಾರಕ್ಕೆ ವ್ಯವಹಾರ ಜ್ಞಾನವಿಲ್ಲವಾಗಿ ತಿಳಿಯಬೇಕಾಗುವದು, ನಿಮ್ಮ ಅಂಬೋಣವನ್ನೆಲ್ಲ ಸರಕಾರಿ ಅಧಿಕಾರಿಗಳು ಪರ್ಯಾಲೋಚಿಸಿದ್ದಾರೆ. ನಿಮಗೆ ಸೆಶನ್ಸ ಜಜ್ಜರ ಕಡೆ ಹೋಗುವ ಪ್ರಕರಣಗಳ ಪೂರ್ವಚೌಕಶಿ ಮಾಡುವ ಅಧಿಕಾರವಿದ್ದ, ಅಂಥ ಪ್ರಕರಣಗಳನ್ನು ನಿಮ್ಮ ಕಡೆ ಕಳಿಸಿದ್ದಲ್ಲಿ ನಿಮಗೆ ಅವನ್ನು ವಿಚಾರ ಮಾಡಲು ಅಶಕ್ಯವಾಗುವದು. ಆದರಿಂದ ಅವನ್ನು ಈ ಹಿಂದಿನಂತೆ ಇನ್ನು ಮುಂದೆಯೂ ಸರಕಾರಿ ಮೆಜಿಸ್ಟ್ರೇಟರ ಕಡೆ ರವಾನಿಸಲ್ಪಡುವವು. ಕಚೇರಿ ಕಟ್ಟೋಣ, ಪುಸ್ತಕ ಸಂಗ್ರಹಗಳ ಕುರಿತು ಜಿಲ್ಲಾಧಿಕಾರಿಗಳ ಕಡೆ ಅರ್ಜಿ ಮಾಡಿಕೊಂಡಲ್ಲಿ ಸಹಾನುಭೂತಿಯಿಂದ ವಿಚಾರವಾಗುವದು" ಎಂದರು. ವಾರ್ಷಿಕ ಸಮ್ಮೇಲನಕ್ಕಾಗಿ ನಾಮದಾರ ಗವರ್ನರರಿಗೆ ಕರೆಸಿ ಬೆಂಚ ಮೆಜಿಸ್ಟ್ರೇಟರಿಗೆ ಸಿಕ್ಕಿದ ಗಂಟು!

* *

ಅಮೇರಿಕೆಯಲ್ಲಿ ರೂಝವೆಲ್ಟರವರು ಅಧ್ಯಕ್ಷರಾದ ಬಳಿಕ, ಮದ್ಯಪಾನಕ್ಕಿದ್ದ ಸರಕಾರಿ ಪ್ರತಿಬಂಧವು ದೂರವಾಗಿತ್ತು. ಈಗ ಇದರ ಪರಿಣಾಮವೇನಂದರೆ — ಮೋಟರ ಡ್ರೈವ್ಹರರು ಯಥೇಷ್ಟ ಮದ್ಯ ಕುಡಿದು, ಎಚ್ಚರವಿಲ್ಲದೆ ಮೋಟರ ಹೊಡಿಸಿ ಅಪಘಾತ ಮಾಡುತ್ತಾರೆ. ಆದರಿಂದ ಪುನಃ ಪ್ರತಿಬಂಧ ಮಾಡಬೇಕಾಗಿ ಒಂದು ಚಳವಳಿ ನಡೆದಿದೆ.

* *

ಜಪಾನ ದೇಶದವರೊಡನೆ ಪೈಪೋಟಿ ನಡೆಸುವದು ಕಠಿಣವೆಂದು ಇಡೀ ಲೋಕದಲ್ಲಿಯೇ ಖ್ಯಾತಿಯಿದೆ. ಸರಕಿನ ಒಳ್ಳೇ ಗುಣ ಹೇಗಿದ್ದರೂ ದರದಲ್ಲಿ ಇವರ ಕೈಹಿಡಿಯುವವರಿಲ್ಲ. ಆದರೆ ರಶಿಯಾ ದೇಶವು ಜಪಾನ ದೇಶದವರೊಡನೆ ಒಳ್ಳೇ ಪೈಪೋಟಿ ಮಾಡಲಾರಂಭಿಸಿದೆ. ಚೀನ ದೇಶದ ಹೊಂಗ-ಕೊಂಗ ಜವಳಿ ಪೇಟೆಯಲ್ಲಿ ರಶಿಯಾ ದೇಶದ ಅರವೆ ೧ ಗಜಕ್ಕೆ ೩ ಪೈಸೆಗೂ ಕಡಿಮೆ ದರಕ್ಕೆ ಮಾರಲಾರಂಭಿಸಿದೆ. ಜಪಾನದವರಿಗೆ ಇದರೊಡನೆ ಪೈಪೋಟಿ ಮಾಡಬರದು. ಆಗಲಿ ಜಪಾನ ದೇಶಕ್ಕೆ ಒಬ್ಬ ವೈರಿ ಹುಟ್ಟಿದನು!

* *

ಹಿಂದುಸ್ಥಾನದ ಸ್ವಸ್ಥ ಮಾತೆಯವರು ಹಿಂದುಸ್ಥಾನದ ಕಲ್ಯಾಣವನ್ನೇ ಬಯಸುತ್ತಾರೆಂದು ಸೇನಾಪತಿ ಸರ್ ಫಿಲಿಪ್ ಚೆಟ್ವುಡರವರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಉದ್ಗರಿಸಿದ್ದುಂಟು. ಸ್ವಸ್ಥ ಮಾತೆಯವರಿಗೆ ಗಂಡಾಂತರ ಒದಗಿ ತಪ್ಪಿಸಿಕೊಂಡು ಸಾಯುವದಿಂದ ವಿಶ್ರಮಿಸಲು ಸಾವಿರಾರು ಒಲೆಗಳು ಬೇಕು. ಅವು ಹಿಂದ ಸ್ಥಾನದಲ್ಲಿ ಬೇಕಾಗುತ್ತವೆ. ಆದಾಗ್ಯೂ ಅವುಗಳ ಕಾಲಕಾ ಇಲ್ಲಿ ಚಾಕರ ಮಾಡದೆ ಹೊಟ್ಟೆಗೆ ಸೊಟ್ಟಂಥವರು ಕಂಡನಿಗೆ ಆರ್ಥರು ಹೋಗಿರುವದಾಗಿ ಅಲಹಾಬಾದದ 'ಲೀಡರ' ಪತ್ರಿಕೆಯು ಗೊತ್ತುಗಟ್ಟುತ್ತದೆ. ಇತ್ತ ಆರ್ಥರು ಹೋಗದಿದ್ದರೆ ಪಕ್ಷಪಾತವಲ್ಲವೇ?

* *

ಹೊಟ್ಟೆಗಿಲ್ಲದ ಜನರು ಹಿಂದುಸ್ಥಾನದಲ್ಲಿ ಸಾಯುತ್ತಿದ್ದ ಸಂಗತಿ ಜನರು ಓದಿರಬಹುದು. ಇದರ, ದೆಹಲಿನಿಂದ ಬಳಿ ಇರುವ ಸ್ ೦೧ ಎಂಬುವರು ಬಹಳ ಮುಕ್ತಿ ತೀರಿಕೊಂಡರು. ಕಿದರಿಂದ ಮಾತ್ರ ಎದ್ದರು. ಡಾಕ್ಟರು ಮಿತಿಯಿಂದ ಆಹಾರ ಕೊಳ್ಳಬೇಕಾಗಿ ವಿಧಿಸಿದ್ದರು. ಇವರಿಗೆ ಹೊಟ್ಟೆ ತುಂಬ ಊಟ ಬೇಕೆಂಬ ಆಶೆ. ೧ ಪಕ್ಕ ಸೇರು ಮಾಂಸ ತಿಂದರು, ಮತ್ತೊಂದು ಪಕ್ಕ ಸೇರು ಹಾಲು ಕುಡಿದರು! ಆದಾಗ್ಯೂ ಹೊಟ್ಟೆಯ ಹಸಿವು ಕಡಿಯಲಿಲ್ಲ, ೮ ಪಕ್ಕ ಕೇಳಿಕೆಯೂ ತಂದು ತಿಂದರು! ಪ್ರಾಣ ಉಳಿಯಲಾರದೆ ಹಾರಿಹೋಯಿತು!

* *

ಪ್ರಸಿದ್ಧ ಫ್ರೆಂಚ ಇತಿಹಾಸಕಾರರಾದ ಎಮ್ ರೆನೊವಿನ್‌ರವರು ಯುರೋಪ ಖಂಡದ ಪ್ರಸ್ತುತ ಪರಿಸ್ಥಿತಿಯ ಕುರಿತು ಒಂದು ಗ್ರಂಥ ಬರೆದಿದ್ದಾರೆ. ಯುದ್ಧ ಮುಗಿದಂದಿನಿಂದ ಯುರೋಪ ಖಂಡದೊಳಗಿನ ರಾಷ್ಟ್ರಗಳ ಪರಿಸ್ಥಿತಿ ಕೆಟ್ಟುಹೋಯಿತು, ಹೊರತು ಸುಧಾರಿಸಲಿಲ್ಲ. ಆಗ ಅವರ ಅಂಬೋಣ. ರಾಷ್ಟ್ರಸಂಘದವನ್ನು ಸ್ಥಾಪಿಸಿದ್ದೊಂದು ಶ್ರೇಯಸ್ಸು ಮಾತ್ರ ದೊರೆತಿದೆ. ಯುರೋಪಿಯನ್ನರ ಪ್ರತಿಷ್ಠೆ ಲೋಕದಲ್ಲಿ ಹೇಳಲಾರದಷ್ಟು ಕುಗ್ಗಿದೆ, ಹೀಗೆ ಅವರು ಬರೆಯುತ್ತಾರೆ. "ಜಗತ್ತಿನಲ್ಲಿ ಅವರಿಗ ಏನೂ ಮರ್ಯಾದೆ ಉಳಿದಿಲ್ಲ. ಆಗಿಯೂ ಅವರ ಅಂಬೋಣ ಸ ದಾರಿಸಿದ ರಾಷ್ಟ್ರಗಳೆಂದು ಹೇಳಿಕೊಳ್ಳುವ ಜನಾಂಗಗಳು ತಮ್ಮ-ತಮ್ಮೊಳಗೆ ಹೊಡೆದಾಡಿಕೊಂಡು ಸಂಪಾದಿಸಿದ ಬರೀ ಪ್ರತಿಷ್ಠೆ ಉಳಿಯುವ ಬಗೆ ಹೇಗೆ?" ಎಂಬುದಾಗಿ ರೆನೊವಿನ್‌ರವರ ಪ್ರಶ್ನೆ.

* *

ಶಿರ ಪತಿಯ ಅಮ್ಮನ್ನರಾಯನ ಅವತಾರದ ಸಂಗತಿ ಎಲ್ಲರಿಗೂ ಗೊತ್ತಿದ್ದದ್ದೇ! ಕೃಷ್ಣದೇವರು ಗೋವಳಿಗರೊಳಗಿನ ಹುತ್ತಿನಲ್ಲಿ ತನ್ನ ಹಾಲು ಸುರಿಯುತ್ತಿತ್ತಾಗಿ ದಂತ ಕಥೆಯಿದೆ. ಅದರಂತೆಯೇ ಬಿಹಾರದೊಳಗಿನ ಶದಾ ಗ್ರಾಮದಲ್ಲಿ ಹಾಲು ಬಿಡದ ಮೇಲು(?)ವಲ್ಲಿ ಒಂದು ಪ್ರಕಾರ ನಡೆದಿದೆ. ದಿನಾ ೧ ದಿಕ್ಕಳು ಸುದ್ದಿಯಿಲ್ಲದೆ ಒಂದು ಸಿದ್ಧಿಲ್ಲದ ತನ್ನ ಹಾಲು ಲಿಂಗದ ಮೇಲೆ ಅಭಿಷೇಕ ಮಾಡಿ ಹೋಗುತ್ತಿದೆ. ಭಕ್ತರು ಅಭಿಷೇಕ ಮಾಡಬೇಕಾಗಿ ಕೆಲವರ ಕಲ್ಪನೆಯಾಗಿ ಓಡಿ ಮಾಡಲು ಗೋವಿನ ದತ್ತವಾಗಿದೆ. ಇದೆಂಥ ಚಮತ್ಕಾರ!

* *

ನಮ್ಮ ಭರತಖಂಡದ ಮೇಲೆ ಬಂದ ಭೂಕಂಪ ನೆರೆ ಮೊದಲಾದ ಆಪತ್ತುಗಳ ನಿವಾರಣೆಗಾಗಿ ಕಲಕತ್ತೆಯಲ್ಲಿ ಕೆಲವು ಪಂಡಿತರು ಸನ್ಯಾಸಿಗಳು ಈ ಮಾಗಾಲದ ಲಕ್ಷ್ಮಿಪತ್ತಿ ವಿಷ್ಣುಯಜ್ಞ'ವನ್ನು ನಡೆಸುವ ವ್ಯವಸ್ಥೆ ಮಾಡುತ್ತಾರೆ. ಇದಕ್ಕಾಗಿ ಮಹಾಸ ಕರೆಯುವದರಿಂದ ಒಬ್ಬ ಋಷಿಗಳು ಬರತಕ್ಕವರಿದ್ದರು. ಯಜ್ಞ ನೆರೆಯುವ ಯಜ್ಞಭೂಮಿಯನ್ನು ಸಮಸ್ತ ಬಾಂಧವ್ಯಗಳಿಂದ ಶೋಧಿಸಲಿ!

* *

ಮ್ಯಾಂಚೆಸ್ಟರದಲ್ಲಿ ಒಂದು ಚಮತ್ಕಾರವಾಯಿತು! ಒಬ್ಬ ಹುಡುಗಿಗೆ ಮಾನಸಿಕ ವಿಕಾರವಿತ್ತು. ಬಾಲ್ಯದಿಂದ ಲೇಖ ವಿಕಾರ ಅರ್ಧ ತಾಸಿನ ತನಕ ಈ ವಿಕಾರವು ಇರುತ್ತಿತ್ತು. ಮಾರ್ಗರೆಟ್ ಒಂದೊದಾಗಿ ದೇವರ ಪೂಜೆಯನ್ನು ಶ್ರದ್ಧೆಯಿಂದಂತೆ ಆಕೆಯು ಸ್ಮರಿಸುತ್ತಿದ್ದಳು. ಏನೇನೋ ಬೇಡಿಕೊಳ್ಳುತ್ತಿದ್ದಳು. ವೈದ್ಯರೆಲ್ಲ ಈ ವಿಕಾರಕ್ಕೆ ಉಪಚಾರ ಮಾಡಲಾರದೆ ಸೋತರು. ಕೆಲ ದಿನಗಳ ಹಿಂದೆ ಆಕೆಗೆ ಪ್ರತಿಯಂತೆ ಮಾನಸಿಕ ಬಾಧೆ ತಾಸಿನ ತನಕ ಮರೆ ಉಳಿಯಿತು. ಮಾಡಿಕೊಂಡಂತೆ ೧|| ತಾಸಿನ ತನಕ ಪ್ರಾರ್ಥನೆಯು ಜೋಪ್ಷ ಮಾಡಿದಳು, ಬೇಡಿಕೊಂಡಳು. ಬಳಿಕ ಸ್ಮೃತಿಗೆ ಬಂದು ತನಗೆ ದೇವರು ಪ್ರತ್ಯಕ್ಷವಾದನೆಂದು ಉದ್ಗರಿಸಿದಳು! ನೋಡಿದರೆ, ಆಕೆಯ ಕೈಯಲ್ಲಿ ಒಂದು ವನಸ್ಪತಿಯ ಬೇರಿದೆ! ವನಸ್ಪತಿ ಯಾವದೆಂದು ಪತ್ತೆಹತ್ತಲಿಲ್ಲ. ಪ್ರತ್ಯಕ್ಷನಾದ ದೇವರು ತನಗೆ ಆ ಬೇರು ಕೊಟ್ಟರೆಂದೂ ೧ ವರ್ಷದ ತನಕ ಪ್ರಾರ್ಥನೆ ಉಪೋಷಣ ಮಾಡಲು ಹೇಳಿದ್ದರೆಂದೂ ನುಡಿದಳು! ಅಂದಿನಿಂದ ಈ ತನಕ ಆಕೆಗೆ ಮಾನಸಿಕ ವಿಕಾರವಾಗಲಿಲ್ಲ!!

* *

ಹೇಳಿದರೆ ನಂಬಲಾರದ ಸಂಗತಿ, ಬೆಳಗಿ ಹೋಗಿದೆ. ಒರಿಸಾ ಪ್ರಾಂತದೊಳಗಿನ ಕೇಶವ ಗಂಗೂಳಿ ಎಂಬ ಹುಡುಗನು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ೩ ಬಾರಿ ಸಂಸ್ಕೃತದಲ್ಲಿ ೧೯೩೩ ನೇ ಇಸ್ವಿಯಲ್ಲಿ ಈತನು ಪರೀಕ್ಷೆಗೆ ಕೂತುಕೊಂಡಿದ್ದನು, ಈತನು ಕಾಗ್ರಾಮದ ನಿವಾಸಿ. ವರ್ತಮಾನ ಪತ್ರಗಳಲ್ಲಿ, ಸಾಮಾನ್ಯನೆಂದು ಒಂದು ಗುಲ್ವಾರ್ತೆ ಕೇಳಿದನು. ಆ ಮೇಲೆ ಮ್ಯಾಟ್ರಿಕ್ಯುಲೇಶನ ಕಾಲೇಜಿಗೆ ಹೋಗಿ ಪರೀಕ್ಷೆಗೆ ಕೂತು ಮೊದಲನೇ ವರ್ಗದಲ್ಲಿ ತೇರ್ಗಡೆ ಹೊಂದಿದನು! ಈತನು ಈ ಹಿಂದೆಯೇ ತೇರ್ಗಡೆ ಹೊಂದಿದ್ದನೆಂದು ಈಗ ಕಲಕತ್ತೆಯ ವಿಶ್ವವಿದ್ಯಾಲಯದವರಿಗೆ ಗೊತ್ತಾಗಿದೆ! ಈಗ ವಿಶ್ವವಿದ್ಯಾಲಯದವರು ಏನು ಮಾಡಬೇಕೆಂದು ವಿಚಾರದಲ್ಲಿ ಬಿದ್ದಿರುತ್ತಾರಂತೆ!

* *

ಚೀನ ದೇಶದಲ್ಲಿ ತಿಬೇಟದ 'ಪಂಚನ್' ಲಾಮಾ ಎಂಬ ಸಾಧುಗಳಿದ್ದಾರೆ. ಇವರು ಬೌದ್ಧ ಸಂಪ್ರದಾಯದವರು, ಸಾತ್ವಿಕರು, ಸಜ್ಜನರು. ಇವರಿಗೆ ಬುದ್ಧ ದೇವರ ಅವತಾರವೆಂದು ಎಣಿಸುತ್ತಾರೆ. "ನಾನು ಈ ಹಿಂದೆ ಹಿಂದುಸ್ಥಾನಕ್ಕೆ ಹೋಗಿದ್ದೆ, ಬಹಳ ವರ್ಷಗಳಾದವು. ಈಗ ಮತ್ತೆ ಅತ್ತ ಗುಂಡಿಸುವದರ ಹಸಿವು ಕೇಳಿರಲಿಲ್ಲ. ಚೀನ ದೇಶದಲ್ಲಿ ಬಂದಂದಿನಿಂದ ಅವರ ಕೀರ್ತಿ ಕೇಳಹತ್ತಿದೆ. ಇವರಿಗೆ ಎಷ್ಟು ಮಾಡಿದರೂ ಕೇಳುವ ಅವಕಾಶವಿದೆ." ಹೀಗೆ ಅವರು ಕೇಳಿದರಾಗಿ ಜಪಾನ ದೇಶದ ಪತ್ರಿಕೆಗಳು ಬರೆಯುತ್ತವೆ.

* *

'ಸನ್ಡೇ ಕ್ರೋನಿಕಲ್' ಎಂಬ ಲಂಡನಿನೊಳಗಿನ ಪತ್ರಿಕೆಯಲ್ಲಿ ಮಿ. ಹಾರ್ವರ ಕೋರಿ ಎಂಬುವರು ಒಂದು ಲೇಖ ಬರೆದಿದ್ದಾರೆ. ಯುದ್ಧದ ಆಧುನಿಕ ಸುಧಾರಣೆಯು ಪರಿಣಾಮವೆಂದು ಅವರ ಅಂಬೋಣ. ಸುಧಾರಿಸಿದ ಹಾಗೆ ನಿಷ್ಕಾರಣ ಮತ್ತು ಅಪ್ಪಟ ಯುದ್ಧ ಸಾಧನಗಳು ಉಪಯೋಗಿಸಲ್ಪಡುತ್ತವಾಗಿ ಅವರ ಅಭಿಪ್ರಾಯ. ಆತ್ಮಸಂರಕ್ಷಣೆಗಾಗಿ ಯುದ್ಧ ಮಾಡುವದದಕ್ಕೆ ವಿಶ್ವವಾಗಿ ಅವರು ಪುರಾತನ ಇತಿಹಾಸ ಪರಂಪರೆಯಿಂದ ಬರೆಯುತ್ತಾರೆ. ಆದಕ್ಕೆ ಆಧುನಿಕ ಯುಗದಲ್ಲಿ ಸ್ಥಾಪನೆಯಾದ ಸ್ವಸ್ಥ ಜಾತಿಗಳೇ ಉದಾಹರಣೆ. ಸುಧಾರಣೆಯು ಮೋಹಪಾಶದೊಳಗಿಂದ ಸುಧಾರಿಸಿದ ರಾಷ್ಟ್ರಗಳು ಸ್ಥಿರವಾಗಿ ಮೋಕ್ಷ ತಿರ ನಲಾರಂಬಿಸಿವೆ

* *

ಪತ್ರಕರ್ತರ ನುಡಿಗನ್ನಡಿ.

೧ ಸರಕಾರವು ಅಹಿಂಸೆಗೆ ಬೆದರುವದಿಲ್ಲ, ಹಿಂಸೆಗೆ ನಡುಗುತ್ತದೆ, ಆದದರಿಂದಲೇ ಮಹಾತ್ಮರ ಹೋರಾಟವು ನಿರರ್ಥಕವಿದೆ, ಹೀಗೆ ವಾದಿಸುವವರು ದೀರ್ಘ ಆಲೋಚನ ಮಾಡಬೇಕು. ದಿಲ್ಲಿಯ 'ರಿಯಸ್ಸ ವೀಕ್ಲಿ' ಪತ್ರಿಕೆಯಲ್ಲಿ ಗಾಂಧಿಜಿಯವರ ಅನುಯಾಯಿಗಳೊಬ್ಬರು ಬರೆದಂತೆ, ಬ್ರಿಟಿಶಾದಿ ಪಾಶ್ಚಾತ್ಯರು ಹಿಂಸಾವಾದದ ತಜ್ಞರು, ಅವರಿಗೆ ಹಿಂಸಾಚಾರದ ಪರಿಚಯ ಮಾಡಬರುತ್ತದೆ, ಅಹಿಂಸೆಯು ಅವತಾರಗೊಂಡಿತೆಂದೊಡನೆ ಅವರು ಹೆದರುತ್ತಾರೆ. ಸತ್ಯ-ಅಹಿಂಸೆಗಳ ಆಚಾರ-ವಿಚಾರಗಳನ್ನಾಗಲಿ, ಸಾಮರ್ಥ್ಯವನ್ನಾಗಲಿ ಅವರು ಒಗಮಿಸಲಾರರು. ಗಡಿನಾಡಿನಲ್ಲಿಗೆ ಖುದಾಯಿ-ಖಿದಮತಗಾರ ಸಂಘಗಳನ್ನು ಸರಕಾರವು ಇನ್ನೂ ಬಹಿಷ್ಕಾರದಲ್ಲಿಡುವ ಕಾರಣವು ಇದೇ. ಇಷ್ಟು ಕಾಂಗ್ರೆಸ ಸಂಸ್ಥೆಗಳ ಮೇಲಿನ ಬಹಿಷ್ಕಾರವು ಹಿಂತೆಗೆಯಲ್ಪಟ್ಟರೂ, ಖುದಾಯಿ-ಖಿದಮತಗಾರರು ಇನ್ನೂ ಬಹಿಷ್ಕಾರದಲ್ಲಿದ್ದಾರೆ. ಡಾ. ಖಾನಸಾಹೇಬರು ಬಾಪ ಗ್ರಾಮದಲ್ಲಿ ಭಾಷಣ ಮಾಡುವಾಗ, ಖುದಾಯಿ-ಖಿದಮತಗಾರರ ವರ್ಣನ ಮಾಡಿದರು. ಖುದಾಯಿ-ಖಿದಮತಗಾರರು ೩ ಲಕ್ಷ ಜನರಿದ್ದಾರೆ. ನಿಸ್ವಾರ್ಥಬುದ್ಧಿಯಿಂದಲೂ, ಶಿಸ್ತುಬದ್ಧತೆಯಿಂದಲೂ, ಅಹಿಂಸಾ ಅಸ್ತ್ರಯದಿಂದಲೂ ದೇಶಸೇವಾ-ಜನಸೇವೆ ಮಾಡಲು ಈ ಸ್ವಯಂಸೇವಕರು ವ್ರತ ಕೈಕೊಂಡಿದ್ದಾರೆ. ಪಠಾಣರು ಪ್ರಬಲರು, ಗಟ್ಟಿಗರು, ಬಲಾತ್ಕಾರವೇ ಇವರ ಪರಂಪರೆ ಕೊಳ್ಳುವದೆಂದರೆ ಇವರಿಗೆ ಸಹಜ. ಗಡಿನಾಡಿನಲ್ಲಿ ತುಬಕಿಗಳನ್ನು, ಶಸ್ತ್ರಗಳನ್ನು ಬಳಸಿಲ್ಲದೆ ಬೀಕಲ್ಲ ಪಡೆದಿಡಬಹುದು. ಖುದಾಯಿ ಖಿದಮತಗಾರರು ಈ ಸಂಸ್ಕಾರದವರು, ಆದಾಗ್ಯೂ, ಪರಂಪರಾಗತ ಸ್ವಭಾವವನ್ನು ತೊರೆದು ಖುದಾಯಿ-ಖಿದಮತಗಾರರು ನಿಶ್ಶಸ್ತ್ರರಾಗಿದ್ದಾರೆ. ಖಿದಮತಗಾರರ ಮೇಲೆ ಭಯಂಕರ ಅತ್ಯಾಚಾರಗಳಾದವು, ಸಹಿಷ್ಣುತೆಯ ಪರೀಕ್ಷೆಯ ಸಮಯವದು! ಆದಾಗ್ಯೂ, ಅವರು ಅಹಿಂಸಾವ್ರತದ ದೀಕ್ಷೆಯನ್ನು ಎಷ್ಟಕ್ಕೂ ತ್ಯಜಿಸಲಿಲ್ಲ, ಇಷ್ಟು ಸಹನಶೀಲತೆಯನ್ನು ಅವರು ಪ್ರದರ್ಶಿಸಲಿಕ್ಕೆ ಈಶ್ವರನೇ ಕಾರಣವೆಂದು ಡಾ|| ಖಾನಸಾಹೇಬರು ಉದ್ಗರಿಸಿದರು. ಇದರ ಮೇಲಿಂದ ಅಹಿಂಸೆಯ ಪರಾಕ್ರಮವು ಹೊಳೆಯುವಂತಿದೆ. ಸರಕಾರವು ಖುದಾಯಿ-ಖಿದಮತಗಾರರ ಮೇಲೆ ಹಿಂಸಾಚಾರದ ಆರೋಪ ಮಾಡುತ್ತಿದ್ದಾಗ್ಯೂ, ಚೌಕಶಿ ನೋಡಲು ಗಡಿನಾಡಿನ ಗಾಂಧಿಗಳಾದ ಖಾನ ಅಬ್ದುಲ್ ಗಫ್ಫಾರಖಾನರವರು ಆಹ್ವಾನ ಕೊಟ್ಟು ಕರೆದರೆ ಅದನ್ನು ಸರಕಾರವು ಸ್ವೀಕರಿಸದೆ ಅಹಿಂಸಾವಾದಿಗಳಿಗೆ ಬಹಿಷ್ಕರಿಸುವದು ಕಷ್ಟ. ಬಹಿಷ್ಕರಿಸದಿರುವದೂ ಕಷ್ಟ, ಇಂಥ ಇಕ್ಕಟ್ಟಿನಲ್ಲಿ ಸರಕಾರವು ಸಿಲುಕಿಕೊಂಡಿದೆ. ಅತ್ಯಾಚಾರ ಪ್ರವೃತ್ತಿಯವರೆಲ್ಲರೂ ಈ ಸ್ಥಿತಿಯನ್ನು ಪರಾಂಬರಿಸಿ ಸುಧಾರಿಸುವದು ಶ್ರೇಯಸ್ಕರವಾದುದು.

---

೨ ಮಹಾತ್ಮರ ಪ್ರಕಟಣೆಯ ಕುರಿತು ದೇಶ ತುಂಬ ಚರ್ಚೆಯಾಗುತ್ತಿದೆ. ಮಹಾತ್ಮರು ರಾಷ್ಟ್ರೀಯ ಸಭೆಯನ್ನು ತೊಲಗಿಹೋಗಬಾರದು, ರಾಷ್ಟ್ರೀಯ ಸಭೆಯವರಲ್ಲಿ ಶಿಸ್ತು ನೆಲೆಗೊಳ್ಳಬೇಕು, ಹೀಗೆ ಇತ್ತಣ್ಡಿಗೂ ಸಮ್ಮತವಾದ ಉಪಾಯ ಶೋಧಿಸುವದಕ್ಕಾಗಿ ಎಲ್ಲರೂ ಪ್ರಯತ್ನ ಪಡುತ್ತಿದ್ದಾರೆ. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರವರು, ಈ ಮುಂದೆ ಅಧ್ಯಕ್ಷರಾಗಲಿರುವ ಬಾಬು ರಾಜೇಂದ್ರ ಪ್ರಸಾದರವರೂ ವರ್ಧಾಗಂಜಕ್ಕೆ ಹೋಗಿ ಮಹಾತ್ಮರೊಡನೆ ದೀರ್ಘಕಾಲದ ತನಕ ಆಲೋಚಿಸಿದರಂತೆ. "ಮಹಾತ್ಮರು ಲೋಕಶಾಹಿಯ ಪ್ರವರ್ತಕರೆಂದು ಹೇಳುತ್ತಾರೆ, ಸ್ವಂತ ಹಟ ಮಾತ್ರ ಬಿಡುವದಿಲ್ಲ, ತಮ್ಮಂತೆ ರಾಷ್ಟ್ರೀಯ ಸಭೆಯಲ್ಲಿ ಸುಧಾರಣೆಯಾಗದಿದ್ದರೆ, ತಾವು ರಾಷ್ಟ್ರೀಯ ಸಭೆಯೊಳಗಿಂದ ಅಲಿಪ್ತರಾಗುತ್ತೇವೆಂದು ವೈರಾಗ್ಯ ಹೇಳುವದು ಯಾವ ಲೋಕಶಾಹಿ?" ಬಹುಮತದಂತೆ ಸ್ವಂತ ನಡತೆಯನ್ನು ಸುಧಾರಿಸಿಕೊಂಡು ಜನರಿಗೆ ಮಾರ್ಗದರ್ಶಕರಾಗುವದು ಲೋಕಪ್ರವರ್ತಕರ ಕರ್ತವ್ಯ ಹೌದು, ನನ್ನ ಸೂಚನೆ ಹೀಗಿದೆ, ಅದು ಬೇರೆ ಯೋಗ್ಯವಾದುದು, ಅದನ್ನು ನೀವು ಮನ್ನಿಸಬೇಕು, ಇಲ್ಲದಿದ್ದರೆ, ಇಕೋ ನಾನು ಹೊರಟೆ! ಹೀಗೆ ಕೊನೆಯ ಮಾತು ಹೇಳುವದು ಲೋಕಶಾಹಿಯ ಪ್ರವರ್ತಕರಿಗೆ ಭೂಷಣವಲ್ಲ. ಹೀಗೆ ಸಮಾಜಸತ್ತಾವಾದಿಗಳ ಪ್ರತಿಪ್ರಕಟಣೆ. "ಮಹಾತ್ಮರು ರಾಷ್ಟ್ರೀಯ ಸಭೆಯ ಮಾರ್ಗದರ್ಶಕರಾಗಿರಬೇಕಾದರೆ ಅವರ ಶರ್ತುಗಳನ್ನು ರಾಷ್ಟ್ರೀಯ ಸಭೆಯವರು ವಿರಸ ಮನ್ನಿಸಬೇಕು. ನೀವು ಮಹಾತ್ಮರ ಅಪೇಕ್ಷೆಯಂತೆ ನಡೆಯದಿದ್ದರೆ, ನೀವು ಸ್ವಂತ ಅವರು ನಡೆಕೊಂಡು ನಿಮಗೆ ಮುಂದಿನ ಮಾರ್ಗ ತೋರಿಸಿಕೊಡಬೇಕು. ಇದು ಯಾವಲ್ಲಿಯ ನ್ಯಾಯ?" ಎಂದಾಗಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ಪ್ರಕಟಿಸಿದ್ದು ಸಮಾಜಸತ್ತಾವಾದಿಗಳಿಗೆ ಸೂಚಿಸಿದ್ದಾರೆ. ಎರಡೂ ದೃಷ್ಟಿಗಳಲ್ಲಿ ತಥ್ಯಾಂಶವಿದೆ. ಇವೆರಡನ್ನೂ ದೇಶಕಾಲಪರಿಸ್ಥಿತಿಗನುಸಾರವಾಗಿ ಪರಿಶೀಲಿಸಿಕೊಂಡು ಲೋಕಕಾರ್ಯ ನಡಿಸುವದೇ ಜಾಣರ ಕೆಲಸ. ಆದರೆ, ದಿಲ್ಲಿಯ 'ರಿಯಸ್ಸ ವೀಕ್ಲಿ' ಪತ್ರಿಕೆಯಲ್ಲಿ ಗಾಂಧಿಜಿಯವರ ಅನುಯಾಯಿಗಳು ಬರೆದಂತೆ, ಖಾದಿಯ ಶರ್ತಿಗೆ ಗೋಣುಗುಟ್ಟುವವರು ಒಂದು ಮಾತನ್ನು ಮರೆತುಬಿಡುತ್ತಾರೆ. ದಿನಾ ಅರ್ಧ ತಾಸು ನೂಲುವ ಬಲಾತ್ಕಾರವೇಕೆ? ನೂಲದೆ ದೇಶಕಾರ್ಯ ಮಾಡಬರುವದಿಲ್ಲವೇ? ಹೀಗೆ ಕೆಲ ಪ್ರಾಮಾಣಿಕ ದೇಶಬಾಂಧವರ ಪ್ರಶ್ನೆ. ಆದರೆ, ಪ್ರತಿಯೊಂದು ಸಂಘದಲ್ಲಿಯೂ ಒಂದು ಶಿಸ್ತಿದೆ. ಶಿಸ್ತಿರಬೇಕು. ಜರ್ಮನಿಯ ಉದ್ಧಾರ ಮಾಡಹೊರಟ ಹಿಟ್ಲರರು ತಮ್ಮ ಅನುಯಾಯಿಗಳ ಕಡೆಯಿಂದ ನಿಯಮದಂತೆ ದಿನಾ ಲಷ್ಕರ ಕವಾಯಿತನ್ನೂ ಮೆರವಣಿಗೆಗಳನ್ನೂ ಮಾಡಿಸಿಕೊಳ್ಳುತ್ತಾರೆ. ಮುಸೋಲಿನಿಯವರೂ ಸೈನ್ಯ ಶಿಕ್ಷಣಕ್ರಮವನ್ನು ತಮ್ಮ ಅನುಯಾಯಿಗಳಿಗಲ್ಲ ವಿಧಿಸಿದ್ದಾರೆ, ಇದರಿಂದ ಎಲ್ಲರೂ ರಣಾಂಗಣದ ಮೇಲೆ ಹೋಗಿ ಕಾದಾಡಬೇಕೆಂಬ ಅರ್ಥವಲ್ಲ. ಕ್ಷಾತ್ರ ಪ್ರವೃತ್ತಿಯು ದೇಶದತುಂಬ ಹರಡಬೇಕೆಂಬದೇ ಇದರ ಉದ್ದೇಶ. ನೂಲುವ ಶರ್ತದ ಹಾಗೆಯೇ. ಸರಕಾರಿ ನೌಕರಿಯಲ್ಲಿದ್ದು ಸಹ ದೇಶಸೇವೆ ಮಾಡುವ ಅನೇಕ ದೇಶಹಿತಚಿಂತಕರಿರಬಹುದು, ಇಂಥ ಪರಿಸ್ಥಿತಿಯಲ್ಲಿ ನೂಲದ ದೇಶಸೇವೆ ಮಾಡುವದೇನು ಆಶ್ಚರ್ಯವಲ್ಲ! ಆದರೆ ಒಂದು ಶಿಸ್ತು ಬೇಕು, ಅಹಿಂಸೆಯ ಪ್ರವೃತ್ತಿ ಲೋಕದಲ್ಲಿ ಹಬ್ಬಿ ದೃಢಮೂಲವಾಗಬೇಕು; ಇದಕ್ಕಾಗಿ ಮಹಾತ್ಮರು ಕೈರಾಟಿಯನ್ನು ಕಲ್ಪಿಸಿದ್ದಾರೆ. ಹಿಟ್ಲರ-ಮುಸೋಲಿನಿಯವರಂತೆ ಮನೆ-ಮಾರು ಬಿಟ್ಟು ಸೈನ್ಯ ರಾಣ್ಯಾಗೆ ಆಲ್ಲಾಳಿಯ ವ ಆವಶ್ಯಕತೆಯಿಲ್ಲ. ಸ್ವಂತ ಮನೆಯಲ್ಲಿ ಸುಖದಿಂದ ಕೂತು ಅರ್ಧ ತಾಸು ನೂತರಾಯಿತು, ಇದರಿಂದ ದೇಶಸೇವೆಯ ಪಾಠವನ್ನು ಅಜ್ಞಬಾಂಧವರಿಗೆ ಕಲಿಸಿಕೊಟ್ಟ ಶ್ರೇಯಸ್ಸು ದೊರೆತು ಕೂತಲ್ಲಿ ಕೆಲ ಪ್ರಾಪ್ತಿಯಾಗುತ್ತದೆ, ಬಡಬಗ್ಗರೊಡನೆ ಸಹಾನುಭೂತಿಯನ್ನೂ, ಬಂಧುಪ್ರೇಮವನ್ನೂ ಪ್ರತ್ಯಕ್ಷ ಆಚಾರದಿಂದ ಪ್ರದರ್ಶಿಸಿದಂತಾಗುತ್ತದೆ. ದೇಶಬಾಂಧವರು ಈ ದೃಷ್ಟಿಕೋನದಿಂದ ಮಹಾತ್ಮರ ಸೂಚನೆಗಳನ್ನು ಪರಾಂಬರಿಸಿ, ಅವು ಅಶಕ್ಯಕೋಟಿಯೊಳಗಿನವು, ಅವ್ಯವಹಾರಿಕವಾದವು ಎಂಬ ಭಾವನೆ ಒಡೆಯದೆ, ದೇಶದಲ್ಲಿ ಆ ರೀತಿ ನಡೆಕೊಳ್ಳುವಂತೆ ಪ್ರಚಾರ ಕಾರ್ಯ ನಡಿಸಬೇಕು. ಅಂದರೆ, ಸ್ವತಃ ನಡೆಕೊಂಡು ಪರರಿಗೆ ಹೇಳಬೇಕು. ಯಾಕೆಂದರೆ, 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ|' ಎಂಬ ಗೀತಾಬೋಧವಿರುವದಲ್ಲವೇ?

---

೩ ಹಿಂದುಸ್ಥಾನದ ಮುಖ್ಯ ಹೋರೆ ಒಕ್ಕಲತನ. ಎಲ್ಲೆಲ್ಲಿಯೂ ಒಕ್ಕಲಿಗರು ಸಾಲದಲ್ಲಿ ಮುಳುಗಿ ಬಳಲುತ್ತಿದ್ದಾರೆ. ಇತ್ತಲಾಗಿ ಉಂಟಾದ ಆರ್ಥಿಕ ಮುಗ್ಗಟ್ಟಿನಲ್ಲಿ ಅವರು ಗತಿಗಟ್ಟಿರು. ಅವರಸ್ಥಿತಿ ಸುಧಾರಿಸಿದನಕ ಬೇಸಾಯದ ಉದ್ಧಾರವಾಗದೆಂಬ ಸಮಸ್ತರ ಅಭಿಪ್ರಾಯವಾಗಿದೆ. ಅವರನ್ನು ಸುಧಾರಿಸುವ ಬಗೆ ಹೇಗೆಂಬದೇ ಬಿಕ್ಕಟ್ಟಿನ ವಿಷಯ. ಭಾವನಗರ, ಗೊಂಡಳದ ಮೈಸೂರ ಮೊದಲಾದ ಸಂಸ್ಥಾನಗಳಲ್ಲಿ ಬೇಸಾಯಗಾರರಿಗೆ ಸುಣಗಿವೋಜನ ಮಾಡುವ ಬೇರೆ ಬೇರೆ ಯೋಜನೆಗಳು ನಡೆದಿವೆ. ಗೊಂಡಳದ ಸಂಸ್ಥಾನಿಕರು ಬೇಸಾಯಗಾರರ ಕಷ್ಟಗಳನ್ನು ಕೇಳಿಕೊಂಡು ಅವರ ಮೇಲೆ ಕೋರ್ಟಿ ಡಿಕ್ರಿಗಳಂತೆ ಕೊರಬೆ ವಸೂಲಿಯ ಕ್ರಮಗಳನ್ನು ಬರುವ ಮಾರ್ಚ ತಿಂಗಳ ತನಕ ನಿಲ್ಲಿಸಬೇಕಾಗಿ ಜಾಹೀರನಾಮೆ ಹೊರಡಿಸಿದ್ದಾರೆ ಮತ್ತು ಬೇಸಾಯಗಾರರ ಸಾಲ ವಿಮೋಚನೆಯ ವಿಚಾರ ಮಾಡುವದಕ್ಕಾಗಿ ಚೌಕಶಿ ಮಂಡಲವನ್ನೊಂದು ನೇಮಿಸಿದ್ದಾರೆ. ಭಾವನಗರದಲ್ಲಿ ನಡೆದ ಉಪಾಯಗಳ ಕುರಿತು ಅಲ್ಲಿಯ ದಿವಾಣರಾದ ಸರ್ ಪ್ರಭಾಶಂಕರ ಪಟ್ಟಣಿಯವರಿಗೂ, ಪುಣೆಯೊಳಗಿನ ಕೆಲ ಪ್ರಮುಖರಿಗೂ 'ಟಿಳಕ ಸ್ಮಾರಕ ಮಂದಿರ'ದಲ್ಲಿ ಚರ್ಚೆ ನಡೆಯಿತು. ಈ ಸಭೆಗೆ ಕೃಷಿ ಕಾಲೇಜಿನ ಪ್ರೊಫೆಸರರಾದ ರಾ|| ಗೋಖಲೆಯವರೂ ಹಾಜರಿದ್ದರು. ಪ್ರಮುಖರೆಲ್ಲರೂ ಮನಬಿಚ್ಚಿ ಮಾತಾಡಿದರು. ವಿಷಯಗಳನ್ನು ಚರ್ಚಿಸಿದ ರೀತಿ ಪ್ರಸಿದ್ಧ 'ಕೇಸರಿ' ಪತ್ರಿಕೆಯಲ್ಲಿ ಪ್ರಕಟವಾಗಿದೆ, ಸರ್ ಪ್ರಭಾಶಂಕರ ಪಟ್ಟಣಿಯವರು ಭಾವನಗರ ಸಂಸ್ಥಾನದಲ್ಲಿ ಕೈಕೊಂಡ ಉಪಕ್ರಮ ವಿವರಿಸಿದ್ದನ್ನು ಕೇಳಿದರೆ ಸಂತೋಷವಾಗುತ್ತದೆ. ಸಂಸ್ಥಾನಿಕರು ೩ ವರ್ಷಗಳ ಹಿಂದೆ ರೂ ೬೦-೬೫ ಲಕ್ಷ ರೈತರಿಗೆ ಸಾಲ ಬಿಟ್ಟರು. ಬೇಸಾಯಗಾರರಿಗಿರುವ ಸಾಲದ ಚೌಕಶಿ ನಡಿಸಿದರು. ಚಕ್ರಬಡ್ಡಿಯಿಂದ ಈ ರಕಮು ೮೬ ಲಕ್ಷ ಕ್ಕೆ ಏರಿತ್ತು. ಸಾವಕಾರರಿಗೆ ಕರಿಸಿ ಅವರೊಡನೆ ಆಲೋಚನ ನಡಿಸಿ ಅವಶ್ಯವುಳ್ಳ ಕಾಯಿದೆಯನ್ನು ಏರ್ಪಡಿಸಿ ಸಂಸ್ಥಾನಿಕರು ರೂ ೨೨ ಲಕ್ಷಗಳನ್ನು ಸರಕಾರಿ ಕೋಶದಿಂದ ತೆತ್ತು ಸಾವಕಾರರಿಗೆ ಸಲ್ಲತಕ್ಕ

ಸಂಪೂರ್ಣ ಸಾಲದ ಹೊರೆಯನ್ನು ರೈತರ ಮೇಲಿಂದ ತಪ್ಪಿಸಿದರು. ಸಾವಕಾರರು ರೂ. ೩೬ ಲಕ್ಷ ಕೊಂಡು ರೂ ೮೭ ಲಕ್ಷಗಳಿಗೆ ಪಾವತಿ ಕೊಟ್ಟರು. ಸರಕಾರಕ್ಕೆ ಸಲ್ಲತಕ್ಕ ೩೬ ಲಕ್ಷ ರೂಗಳನ್ನು ಒಕ್ಕಲಿಗರು ತಮ್ಮ ತಮ್ಮ ಗ್ರಾಮ ಪಂಚಾಯತುಗಳಿಗೆ ಕಂತಿನಿಂದ ವಸೂಲು ಕೊಡಬೇಕು. ಆ ರಕಮಿನಿಂದ ಗ್ರಾಮ ಪಂಚಾಯತುಗಳು ಗ್ರಾಮಸುಧಾರಣೆಯನ್ನು ನಡಿಸತಕ್ಕದ್ದು. ಗ್ರಾಮಸುಧಾರಣೆಗೆ ಅವಶ್ಯವುಳ್ಳ ಖರ್ಚಿಗಾಗಿ ಬೇರೆ ತೆರಿಗೆ ಎತ್ತುವಳಿ ಮಾಡತಕ್ಕದ್ದಿಲ್ಲ. ಇದನ್ನು ಕೇಳಿ ಸಂತೋಷವಾಗುತ್ತದೆ. ಸಂಸ್ಥಾನಿಕರು ಬೇಸಾಯಗಾರರಿಗೆ ಋಣಮುಕ್ತ ಮಾಡುವಾಗಲೇ ಗ್ರಾಮೋದ್ಧಾರಕ್ಕೆ ಅವಶ್ಯವುಳ್ಳ ನಿಧಿಯನ್ನೂ ಕಲ್ಪಿಸಿಕೊಟ್ಟಿದ್ದಾರೆ. ಭಾವನಗರ–ಸೊಂಡೂರ ಸಂಸ್ಥಾನಗಳಂಥ ಮಾಂಡಲೀಕ ಸರಕಾರಗಳು ಕೈಕೊಂಡ ಉಪಕ್ರಮವನ್ನು ಸಾರ್ವಭೌಮ ಬ್ರಿಟಿಶ ಸರಕಾರವು ಅನುಸರಿಸಿದರೆ ಬ್ರಿಟಿಶ ಪ್ರಜೆಗಳು ತುಂಬಾ ಕೃತಜ್ಞರಾಗುವರು. ಆದರೆ, ಬ್ರಿಟಿಶ ಪ್ರಜೆಗಳು ಅಷ್ಟು ಭಾಗ್ಯವಂತರಾಗುವ ಆಶೆ ಎಲ್ಲಿ?

---

೪ ಮೈಸೂರ ಸಂಸ್ಥಾನದವರು ಭದ್ರಾವತಿಯಲ್ಲಿ ಒಕ್ಕಲಿಗರದೊಂದು ವಸಾಹತು ಮಾಡಿದ್ದಾರೆ. ಹೆಬ್ಬಾಳ ಬೇಸಾಯ ಶಾಲೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಸ್ವಾವಲಂಬನದ ಉಪಾಯಗಳಿಂದ ಜೀವನ ನಡಿಸಲನುಕೂಲ ಮಾಡಿಕೊಡುವದೇ ಈ ಯೋಜನೆಯ ಮೂಲ ಉದ್ದೇಶ. ಈ ಉಪಕ್ರಮದಿಂದ ವಿದ್ಯಾರ್ಥಿಗಳಿಗೆ ಬೇಸಾಯದಿಂದುಂಟಾಗುವ ಪ್ರಯೋಜನವನ್ನು ಪ್ರತ್ಯಕ್ಷ ಪ್ರಯೋಗದಿಂದ ಸಿದ್ಧಪಡಿಸಿ ನಿರುದ್ಯೋಗಿ ಸುಶಿಕ್ಷಿತರಲ್ಲಿ ಬೇಸಾಯದ ಅಭಿರುಚಿ ಹುಟ್ಟಿಸಿ, ಸೋಮಾರಿ ಸುಶಿಕ್ಷಿತರಿಗೆ ಕೆಲಸ ಪೂರೈಸುವದು ಎರಡನೇ ಉದ್ದೇಶ. ಮೈಸೂರ ಸಂಸ್ಥಾನದವರು ಒಬ್ಬೊಬ್ಬ ವಿದ್ಯಾರ್ಥಿಗೆ ೩೦–೩೦ ಎಕರೆಯಂತೆ ಭೂಮಿ ಕೊಟ್ಟು ಆ ವಿದ್ಯಾರ್ಥಿಗಳದೊಂದು ಆಶ್ರಮವನ್ನು ಪೆನ್ಶನ್ ಪಡೆದ ಅ| ಡೈರೆಕ್ಟರರಾದ ರಾ| ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸ್ಥಾಪನೆ ಮಾಡಿದರು. ಭೂಮಿಯೆಲ್ಲ ಬೆಟ್ಟದ ಪಾಲಾಗಿತ್ತು. ಸಾಗುವಳಿ ಮಾಡಲು ಅವಶ್ಯವುಳ್ಳ ಖರ್ಚನ್ನು ಮೈಸೂರ ಸರಕಾರವು ಪ್ರೋತ್ಸಾಹಕ್ಕಾಗಿ ೧೨ ಸಾವಿರ ರೂಪಾಯಿ ಕೊಟ್ಟಿದೆ. ವಿದ್ಯಾರ್ಥಿಗಳು ಅಲ್ಲಿ ಬೆಟ್ಟ ಕಡಿದು ಬಿಡಾರುಕಟ್ಟಿ ಪೈರು ಬೆಳಸಿದರು. ಇತ್ತ ೩ ವರ್ಷಗಳಲ್ಲಿ ಕಾಳು–ಕಡಿ ಧಾರಣೆ ಅನಪೇಕ್ಷಿತವಾಗಿ ಇಳಿದದ್ದರಿಂದ ಆಶ್ರಮವಾಸಿಗಳಿಗೆ ಬಲು ಕಷ್ಟವಾಯಿತು. ಸರಕಾರಕ್ಕೆ ಸಲ್ಲತಕ್ಕ ತೀರ್ವೆ ಸಹ ವಿದ್ಯಾರ್ಥಿಗಳಿಂದ ತೆರಲಾಗಲಿಲ್ಲ. ನಿರ್ವಾಹ ಸಾಗಿಸಿಕೊಂಡು ಗೊಬ್ಬರ ಸಪ್ಪಿಗೆ ಸಹ ಅವಶ್ಯವುಳ್ಳ ಹಣ ಉಳಿತಾಯವಾಗಲಿಲ್ಲ. ಮೈಸೂರ ಸಂಸ್ಥಾನದವರು ಚೌಕಶಿ ನಡಿಸಿ ಕೆಲ ತೀರ್ವೆಯನ್ನು ಸೂಟ ಬಿಟ್ಟರು. ೬೦೦೦ ರೂ ಗಳ ಸಾಲ ಕೊಟ್ಟು ಚನ್ನಾಗಿ ಪೈರು ಬೆಳಸಲು ಅನುಕೂಲತೆ ಮಾಡಿಕೊಟ್ಟಿರುತ್ತಾರೆ. ಮೈಸೂರ ಸರಕಾರವು ಅಲ್ಲಿಯೇ ಸಕ್ಕರೆಯ ಕಾರಖಾನೆಯನ್ನೇರ್ಪಡಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗ ಪೂರೈಸಿ ಅವರಿಂದ ಸಾಲ ತೀರಿಸಿಕೊಳ್ಳುವ ಸಂಕಲ್ಪದಲ್ಲಿದೆ. ನಮ್ಮತ್ತ ಕಡೆ ಬೇಸಾಯದ ಪ್ರಯೋಗಗಳೇನೋ ನಡೆದಿವೆ, ಪ್ರಯೋಗ ಹೊಲಗಳೇರ್ಪಟ್ಟಿದೆ, ಆದರೆ, ಇವು ಸ್ವಾವಲಂಬನ ಕಲಿಸುವದಿಲ್ಲ. ಅವಶ್ಯವುಳ್ಳ ಹಣವನ್ನೆಲ್ಲ ಸರಕಾರವು ಪೂರೈಸುತ್ತದೆ; ಸಂಬಳವನ್ನು ಸರಕಾರವು ತೆರುತ್ತದೆ. ಈ ಪ್ರಯೋಗದಿಂದ ಲಾಭವೋ, ನಷ್ಟವೋ ಸರಕಾರಿ ಲೆಕ್ಕ ಪರಿಶೋಧಕರೇ ಹೇಳಬೇಕು. ಜನಸಾಮಾನ್ಯರಿಗೇನು ಪ್ರಯೋಜನ ದೊರೆತದ್ದು ಕಂಡುಬರಲಿಲ್ಲ. ಮೈಸೂರ ದರಬಾರವು ಬೇಸಾಯ ಪ್ರಯೋಗದ ಪ್ರಜಾಕಲ್ಯಾಣಪರ ಯೋಜನ ತೋರಿಸಿಕೊಟ್ಟಿದೆ. ಬ್ರಿಟಿಶ ಸರಕಾರವು ಇದನ್ನಾದರೂ ಅನುಸರಿಸಿದರೆ ಕ್ಷೇಮವಾಗಲಿಕ್ಕಿಲ್ಲವೇ?

---

೫. ಆದರೆ, ನಮ್ಮ ಮುಂಬಯಿ ಸರಕಾರವು ಒಕ್ಕಲಿಗರ ಸ್ಥಿತಿ-ಗತಿಯನ್ನು ಚೌಕಶಿ ಮಾಡಬೇಕೆಂದು ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಎರಡು ಠರಾವುಗಳು ಸೂಚಿಸಲ್ಪಟ್ಟವು. ಅವೆರಡಕ್ಕೂ ಮುಂಬಯಿ ಸರಕಾರವು ವಿರೋಧಿಸಿತು, ಕಡುತರವಾಗಿ ವಿರೋಧಿಸಿತು. ಚೌಕಶಿ ನಡಿಸುವಷ್ಟು ರೈತರ ಸ್ಥಿತಿ ಕೆಂಗೆಡಲಿಲ್ಲವಾಗಿಯೇ ಸರಕಾರದ ಅಂಬೋಣ. ಕೆಂಗೆಟ್ಟಾಗ್ಯೂ, ಅದಕ್ಕೆ ಸರಕಾರವು ಹೊಣೆಗಾರವಲ್ಲವಾಗಿಯೂ, ರೈತರು ... ಯೋಜನ ಕಾರ್ಯಗಳಲ್ಲಿಯೂ, ಇತರ ಸಂಸಾರ ಖರ್ಚಿನಲ್ಲಿಯೂ ಅತಿ ಗಟ್ಟಲೆ ಖರ್ಚು ಮಾಡಿ ಸಾಲಗಾರರಾಗಿದ್ದಾರೆಂದೂ ಸರಕಾರವು ವಾದಿಸುತ್ತದೆ. ತೀರ್ವೆಯಿಂದ ರೈತರು ಎಷ್ಟಕ್ಕೂ ಸೋಲಲಿಲ್ಲವಾಗಿಯೂ ಸರಕಾರದ ವಾದ. ಮಹಾಯುದ್ಧ ಕಾಲದಲ್ಲಿ ವಿಪರೀತ ಕಾಳು-ಕಡಿಯ ದರ ಏರಿತ್ತು, ಆ ಸಮಯ ಏರಿಸಿದ ತೀರ್ವೆ ಇನ್ನೂ ಇಳಿಯಲಿಲ್ಲ, ಇಳಿಸುವ ಆಲೋಚನೆಯೂ ಸರಕಾರಕ್ಕಿಲ್ಲ. ಮುಂಚಿನ ತೀರ್ವೆಗಿಂತ ನಾಲ್ಕಡಿ ತೀರ್ವೆ ಏರಿದ್ದೂ ಉಂಟು. ತೀರ್ವೆಯ ಸರಾಸರಿ ಉತ್ಪನ್ನವೇ ಇದಕ್ಕೆ ಸಾಕ್ಷಿ. ಆದಾಗ್ಯೂ ಸರಕಾರವು ಕಣ್ಮುಚ್ಚಿಕೊಂಡಿದೆ. ಸರಕಾರದ ದೋರಣೆಯಿಂದ ಒಕ್ಕಲಿಗರ ಸ್ಥಿತಿ ಕೆಂಗಡಲಿಲ್ಲವಾಗಿ ಇದು ಸಾಧಿಸುತ್ತಿದೆ. ಸಭಾಸದರು ಭಾವನಗರ ಸಂಸ್ಥಾನದ ಉದಾಹರಣೆ ಕೊಟ್ಟಾಗ್ಯೂ ಸರಕಾರಕ್ಕೆ ಹಣದ ಅಡಚಣೆಯಿಂದ ಒಕ್ಕಲಿಗ ಬೇಸಾಯಗಾರರು ಮಾಡುವದೇನು! ಗ್ರಾಮೋದ್ಧಾರದ ಯೋಜನೆಯಾಗಿದೆ, ಪರಸ್ಪರ ಹಣ ಎತ್ತುವಳಿ ಮಾಡಿಕೊಂಡು ಜನರು ಒಕ್ಕಲುದ್ಧಾರ ಮಾಡಿಕೊಂಡರಾಯಿತು. ಸಹಕಾರ ಕಾಯಿದೆಯು ಏರ್ಪಟ್ಟಾಗಿದೆ, ಜನರು ಪರಸ್ಪರ ಹಂಡವಲು ಒಟ್ಟುಮಾಡಿ ಬೇಸಾಯವನ್ನು ಸುಧಾರಿಸಿಕೊಳ್ಳಬೇಕು. ರೈತ ಸುಧಾರಣೆಯ ಕಾಯಿದೆಯಿಂದ ಕೆಲ ಸಾವಕಾರರಿಗೆ ಮುಂಚೆ ನಷ್ಟವಾದಾಗ್ಯೂ ಈಗ ರೈತರಿಗೆ ತೀರ ಕಷ್ಟವಾಗಿದೆ. ರೈತ ಸುಧಾರಣೆಯ ಕಾಯಿದೆಯಿಂದ ಒಕ್ಕಲಿಗರು ಸತ್ತುಗಳಾಗಿದ್ದಾರೆ. ಸಹಕಾರ ಕಾಯಿದೆಯಿಂದ ಅಪೇಕ್ಷೆಯಂತೆ ಕ್ಷೇಮವಾಗಲಿಲ್ಲವಾಗಿ ಸಹಕಾರ ಖಾತೆಯ ರಜಿಸ್ಟ್ರಾರರಾದ ಮಿ| ಪಂಜಾಬಿಯವರು ಕಾಯಿದೆ ಕೌನ್ಸಿಲಿನಲ್ಲಿ ಒಪ್ಪಿಗೆಯನ್ನೇ ಕೊಟ್ಟ ಬಳಿಕ, ನಾವು ಮತ್ತೇನು ಹೇಳುವದುಳಿಯಿತು? ಬೆಲ್ಲದ ಗಣಪತಿಗೆ ತೇದಿ ಬೆಲ್ಲದ ನೈವೇದ್ಯ ಮಾಡಿ ಅದನ್ನು ತಿಂದು ಪುಣ್ಯವಂತರಾಗಲು ಸಿಂಪಾಯಿತೆ? ತೇದಿ-ತೇದಿ ಬೆಲ್ಲದ ಗಣಪತಿಯ ವಿಗ್ರಹವು ಮಾಯವಾದ ಬಳಿಕ, ಪುಣ್ಯಸಂಗ್ರಹಕ್ಕೆ ಎಡೆಯೆಲ್ಲಿದೆ? ಸರಕಾರವು ಸುಮ್ಮನೆ ಹಟನಿಗ್ರಹ ಹಿಡಿಯಬಾರದು. ಸರ್ ಮೌ| ರಫಿಉದ್ದಿನರವರು ನುಡಿದಂತೆ, "ಏನೂ ಮಾಡಿರಿ. ಬಡ ಒಕ್ಕಲಿಗರಿಗೆ ಋಣಮುಕ್ತ ಮಾಡಿರಿ, ವಿಚಾರಕ್ಕಾಗಿ ಕಮಿಟಿಯನ್ನು ನೇಮಿಸಲಾಗದಿದ್ದರೆ ಮತ್ತೇನಾದರೂ ಮಾಡಿ ಯೋಜನೆ ಕೈಕೊಳ್ಳಿರಿ, ಅಂತು ಬೇಸಾಯಗಾರರಿಗೆ ಬಿಟ್ಟುಕೊಡಬೇಡಿ"

---

೬ ಮುಂಬಯಿ ಸರಕಾರವು 'ಲೆಂಡಮೊರ್ಗೇಜ ಬೇಂಕು'ಗಳನ್ನು ಸ್ಥಾಪಿಸಿ ರೈತರಿಗೆ ಸಾಲದಿಂದ ಬಿಡುಗಡೆ ಮಾಡುವ ಯೋಜನೆಯಲ್ಲಿದೆ. ಈ ಹಿಂದೆ ಪ್ರಕಟಿಸಿದಂತೆ ಆ ರಿಪೋರ್ಟು ತಯಾರಾಗಿದೆ. ಅದರೊಳಗಿನ ಸೂಚನೆಗಳನ್ನು ಮನ್ನಿಸಿದ್ದಲ್ಲಿ ಬೇಸಾಯಗಾರರಿಗೆ ಲಾಭವಿರುವದಾಗಿ ಸಹಕಾರ ಖಾತೆಯ ರಜಿಸ್ಟ್ರಾರರಾದ ಮಿ| ಪಂಜಾಬಿಯವರು ಕಾಯಿದೆ ಕೌನ್ಸಿಲಿನಲ್ಲಿ ನುಡಿದರು. ಈ ರಿಪೋರ್ಟು ಇನ್ನೂ ಪ್ರಕಟವಾಗಲಿಲ್ಲ. ಆದರೆ, ಆ ಬೇಂಕುಗಳ ವ್ಯವಹಾರದ ಸಾಮಾನ್ಯ ಸ್ವರೂಪವನ್ನು ನಾವು ಈಗಲೇ ಎಣಿಸಬಹುದು. ಈ ಬೇಂಕುಗಳು ಬೇಸಾಯಗಾರರ ಸ್ಥಿತಿ-ಗತಿಯ ಚೌಕಶಿ ಮಾಡಿ ಅವರಿಗೆ ಕಡಿಮೆ ಬಡ್ಡಿಯಿಂದ ಕಂತಿನ ಮೇಲೆ ಸಾಲ ಕೊಡುವವು, ಬಂಡವಲನ್ನು ಬೇಂಕುಗಳೇ 'ಡಿಬೆಂಚರ್ಸ' ಎಂಬ ಸಾಲದ ಕರಾರುಗಳನ್ನು ಸಾವಕಾರರಿಗೆ ಬರೆಕೊಟ್ಟು ಪೂರೈಸಿಕೊಳ್ಳುವವು. ಈ ಸಾಲಕ್ಕೆ ಸರಕಾರದ ಹೊಣೆಯಿರುವದು. ಹೀಗೆ ಎತ್ತಿದ ಹಣವನ್ನು ಒಕ್ಕಲಿಗರಿಗೆ ಕೊಟ್ಟು ಸರಕಾರವು ಬೇಸಾಯಗಾರರ ಋಣವಿಮೋಚನ ಮಾಡಬೇಕೆಂದಿದೆ. ಯಾವ ದರದಿಂದ ಬಡ್ಡಿ ಆಕರಿಸಲ್ಪಡುವದೆಂದು ತಿಳಿಯಲಿಲ್ಲ. ತಕ್ಕಮಟ್ಟಿಗೆ ಹೆಚ್ಚು ಕಡಿಮೆಯಾಗಿ ಸಾಲ ಸಿಗುವದೆಂದು ನಮಗೆ ತೋರದು. ಬೇಸಾಯಗಾರರು ಅಸಲು ಬಡ್ಡಿಯನ್ನು ವರ್ಷ-ವರ್ಷಕ್ಕೆ ತೆರಬೇಕು. ಈ ಸ್ಥಿತಿ ರೈತರಿಗಿದೆಯೋ ಹೇಗೆ? ಅಸಲು ಕೊಡುವದಿರಲಿ, ಬಡ್ಡಿಯನ್ನಾದರೂ ತೆರಬಲ್ಲರೋ ಹೇಗೆ? ಬಡ್ಡಿಯನ್ನು ಸಹ ತೆರಲಾಗದಿದ್ದಲ್ಲಿ ಈ ಯೋಜನೆಯಿಂದ ಪ್ರಯೋಜನವಾದೀತೇನು? ಎಂಬುದೇ ವಿಚಾರಾರ್ಹ ಪ್ರಶ್ನೆಗಳು. ಸಾಮಾನ್ಯ ಜನರು ಬೇಸಾಯದಿಂದ ಲಾಭವಿಲ್ಲವಾಗಿ ಹೇಳುತ್ತಾರೆ, ಸರಕಾರವು ಇದೊಂದು ಸ್ವಾರ್ಥವೆಂದು ಹಳಿಯಬಹುದು. ಆದರೆ, ಪುಣೆಯೊಳಗಿನ ಬೇಸಾಯ ಕಾಲೇಜಿನ ಪ್ರಿನ್ಸಿಪಾಲರಾದ ರಾ| ಗೋಖಲೆಯವರು ಬೇಸಾಯದಿಂದ ಈಗಿನ ಸ್ಥಿತಿಯಲ್ಲಿ ಕುಟುಂಬ ಪೋಷಣೆ ಸಹ ಮಾಡುವದು ದುರಾಪಾಸ್ತವೆಂದು ಸಪ್ರಮಾಣ ಪ್ರತಿಪಾದಿಸುತ್ತಾರೆ. ಈ ಹಿಂದೆ ಬೇಸಾಯ ಖಾತೆಯ ಅಧಿಕಾರಿಗಳಾಗಿದ್ದ ಡಾ| ಮೆನ್‌ರವರೂ, ರಾ| ಪಾಟೀಲರವರೂ ಇದೇ ಪ್ರಕಾರ ಅಭಿಪ್ರಾಯಪಟ್ಟಿರುತ್ತಾರೆ. ಅಂದ ಬಳಿಕ, ತೀರ್ವೆ ಕೊಡುವ ಬಗೆ ಹೇಗೆ? ಸಾಲ ತೀರಿಸುವ ಬಗೆ ಹೇಗೆ? ಪರಸ್ಪರ ಹವಾಲೆ ಹಾಕಿ ಬೇಸಾಯೋದ್ಧಾರ ಸಾಧಿಸಿದೆವಾಗಿ ಸರಕಾರಕ್ಕೆ ಲೋಕದಲ್ಲಿ ಸಾರೆಯುವದಿದ್ದರೆ ಆ ಮಾತು ಬೇರೆ. ನಿಜವಾಗಿ ಇವು ಲೋಕಕಲ್ಯಾಣದ ಯೋಜನೆಗಳಲ್ಲ. ಬೇಸಾಯಗಾರರಿಗೆ ಮುಂಬಯಿ ಇಲಾಖೆಯಲ್ಲಿ ೮೦ ಕೋಟಿ ರೂ ಗಳ ಸಾಲವಿದೆ. ಶೇಕಡಾ ೫ರಂತೆ ಬಡ್ಡಿ ಹಿಡಿದಾಗ್ಯೂ ವರ್ಷಕ್ಕೆ ೪ ಕೋಟಿ ರೂ. ಬಡ್ಡಿಯಾಯಿತು. ಉತ್ಪನ್ನದಲ್ಲೇ ಇಷ್ಟು ಹೆಚ್ಚಿನ ರಕಮು ಹುಟ್ಟಿಸುವ ಯೋಜನೆಯಾದವನಕ ಬರೇ ಬೇಂಕು ಸ್ಥಾಪನೆಗಳಿಂದೇನು ಪ್ರಯೋಜನ? ಬೇಂಕುಗಳು ಭದ್ರತೆ ಪಡೆದು ಹಣ ಪೂರೈಸಿ ಬಡ್ಡಿ ಎತ್ತುವಳಿ ಮಾಡುವ ಸಂಸ್ಥೆಗಳು, ದೊರತು ಜನರ

[ಮುಂದೆ ೧೦ ನೇ ಪಾನು ನೋಡಿರಿ.]

ಕಾನಡಾವೃತ್ತ.

[illegible] ಭಾದ್ರಪದ [illegible], ಸೋಮವಾರ

ಬ್ರಿಟಿಶ ಕಾರಸ್ಥಾನ.

ಸಾರ್ವಭೌಮ ಪಂಚಮ ಜೋರ್ಜ ಬಾದಶಹರು ಹಿಂದುಸ್ಥಾನವನ್ನು ಹಿಂದೀ ಪ್ರಜಾಜನರ ಹಿತದ ದೃಷ್ಟಿಯಿಂದಲೇ ನಡಿಸಬೇಕೆಂಬ ಸತ್ಸಂಕಲ್ಪದವರಿದ್ದಾರೆ ಅದಕ್ಕಾಗಿಯೇ ಸ್ವದೇಶದೊಳಗಿಂದ ರಾಜ್ಯಕರ್ತರನ್ನು ನಿಮ್ಮಿತ್ತಕದ ರವಾನಿಸುತ್ತಾರೆ ಅಧಿಕಾರ ಕೊಡುವಾಗ, ಅಧಿಕಾರಿಗಳ ಕಡೆಯಿಂದ ಇಂದ ಪ್ರತಿಜ್ಞೆಗಳನ್ನು ಸಹ ಮಾಡಿಸಿಕೊಳ್ಳುತ್ತಾರೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಅಧಿಕಾರಿಗಳಾದ ಸರ್ ಜೇಮ್ಸ ಗ್ರಿಗ್‍ರವರು ಈ ಮಾತನ್ನು ಹೇಳಿ ಅದರಂತೆ ತಾವೆಲ್ಲರೂ ನಡಕೊಳ್ಳುತ್ತೇವಾಗಿ ನುಡಿದರು. ಕೆಲ ಸಭಾಸದರು ಆಕ್ಷೇಪ ಮಾಡಿದಾಗ್ಯೂ ಗ್ರಿಗ್‍ರವರು ಒಪ್ಪಲಿಲ್ಲ ಹಿಂದುಸ್ಥಾನದಿಂದ ಬ್ರಿಟಿಶರು ಲಾಭ ಹೊಂದಬೇಕೆಂದು ಸಾರ್ವಭೌಮರ ಸಂಕಲ್ಪವಿಲ್ಲ ನಿರಂಕುಶ ರಾಜ್ಯನಿರ್ಮೂಲನ ಸಂಘದ ಪರವಾಗಿ (*League against Imperialism*) ಪಾರ್ಲಿಮೆಂಟಿನ ಸಭಾಸದರಾದ ಮಿ|| ಬ್ರಿಜ್‍ಮನ್‍ರವರು ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ಹೇರಳ ಲಾಭವಾಗುತ್ತದಾಗಿ ನುಡಿಯಲು, ಭಾರತ ಮಂತ್ರಿಗಳ ಕಾರ್ಯದರ್ಶಿಗಳಾದ ಮಿ| ಬಟ್ಲರವರು ನಿಷೇಧಿಸಿದರು ಹಿಂದುಸ್ಥಾನದಿಂದ ಇಂಗ್ಲಂಡ ದೇಶಕ್ಕೆ ಯಾವದೇ ತರದಿಂದ ಸಹಾಯವಾಗುವದಿಲ್ಲವಾಗಿ ನುಡಿದರು ಹಿಂದುಸ್ಥಾನದಿಂದ ಲಾಭ ಪಡೆಯಬಾರದೆಂದೂ, ಹಿಂದುಸ್ಥಾನದ ಕಲ್ಯಾಣವನ್ನೇ ಬಯಸಿ ರಾಜ್ಯಭಾರ ನಡಿಸಬೇಕೆಂದೂ ಚಕ್ರವರ್ತಿಗಳ ಸಂಕಲ್ಪವಿರುವದಾಗಿ ಈ ಹಿಂದಿನ ಮೇಲಿಂದ ಗೊತ್ತಾದೀತು ಆದರೆ ಅಧಿಕಾರಿಗಳು ಆ ಪ್ರಕಾರ ಪ್ರತ್ಯಕ್ಷ ನಡಕೊಳ್ಳುತ್ತಾರೇನೆಂಬದೊಂದು ಪ್ರಶ್ನೆ

ಹಿಂದುಸ್ಥಾನದಲ್ಲಿ ಟಾಟಾರವರ ಉಕ್ಕಿನ ಕಾರಖಾನೆಯಿದೆ ಈ ಕಾರಖಾನೆಗೆ ಪ್ರೋತ್ಸಾಹ ಕೊಡುವದಕ್ಕಾಗಿ ಉಕ್ಕಿನ ರಕ್ಷಣೆಯ ಕಾನೂನಿನ ಏರ್ಪಾಟಾಗಿದೆ ಇಂಗ್ಲಂಡ, ಜರ್ಮನಿ ಮೊದಲಾದ ದೇಶಗಳಲ್ಲಿ ಹೇರಳ ಉಕ್ಕು ತಯಾರಾಗುತ್ತಿದೆ ಬಾಲ್ಯಾವಸ್ಥೆಯಲ್ಲಿ ಅವುಗಳ ಕಾಟದಿಂದ ಹಿಂದುಸ್ಥಾನದೊಳಗಿನ ಉಕ್ಕಿನ ಉದ್ದಿಮೆಯನ್ನು ರಕ್ಷಿಸುವದೇ ಈ ಕಾಯಿದೆಯ ಉದ್ದೇಶ ಈ ಕಾಯಿದೆಯಿಂದ ಬ್ರಿಟಿಶ ದೇಶದ ಬರ್ಮಿಂಘೆಮದೊಳಗಿನ ಉಕ್ಕಿನ ಕಾರಖಾನೆಯವರಿಗೆ ಪೆಟ್ಟು ತಗಲಿತು ಆದರಿಂದ ಈ ಕಾಯಿದೆಯಲ್ಲಿ ತಿದ್ದುಪಡಿ ಸೂಚಿಸುವದಕ್ಕಾಗಿ ಹಿಂದೀ ಟಾರಿಫ್ ಬೋರ್ಡಿನ ಚೌಕಶಿ ನಡೆಯಿತು ಹಿಂದುಸ್ಥಾನದೊಳಗಿನ ಉಕ್ಕಿನ ಉದ್ಧಾರಕ್ಕಾಗಿಯೇ ಈ ಚೌಕಶಿ ನಡೆಯುತ್ತದೆಂದು ಲೋಕಗ್ರಹಿಕೆ ಆದರೆ ಹೊಸ ಚೌಕಶಿಯ ರಹಸ್ಯವೇ ಬೇರೆ ಟಾರಿಫ್ ಬೋರ್ಡಿನವರು ಕೊಟ್ಟ [illegible] ಯೇ ಹಿಂದುಸ್ಥಾನ ಸರಕಾರವು ಬ್ರಿಟಿಶ ಉಕ್ಕಿನ ಸಂಘಕ್ಕೆ ಒಂದು ಪ್ರತಿಯನ್ನು ಕಳಿಸಿತು ಆ ಪ್ರತಿಯನ್ನು ಸಂಘದಲ್ಲಿ ಚರ್ಚಿಸಿ ಅವಶ್ಯವಾದ ಸೂಚನೆಗಳನ್ನು ಆ ಸಂಘವು ಮಾಡಿತು ಆ ಸೂಚನೆಗಳಂತೆ ಹಿಂದುಸ್ಥಾನ ಸರಕಾರವು ವಿಚಾರದ ಶಿಸ್ತು ನಡಿಸಿ ಉಕ್ಕಿನ ಕಾಯಿದೆಯಲ್ಲಿ ತಿದ್ದುಪಡಿ ಮಾಡಿದ ಹೊಸ ಕಾಯಿದೆಯನ್ನು ಕಳೆದ ವರ್ಷ ಕಾಯಿದೆ ಕೌನ್ಸಿಲಿನಲ್ಲಿ ಮನ್ನಿಸಿಕೊಂಡಿದೆ ಸರ್ವಾಧಿಪತಿಗಳ ಸಮ್ಮತಿ ಸಹ ದೊರೆತು ಈ ಕಾಯಿದೆಯು ಈಗ ಅಮಲಿನಲ್ಲಿ ಹಿಂದೀ ಅಧಿಕಾರಿಗಳು ನಡಿಸಿದ ಕಾರಸ್ಥಾನವನ್ನು 'ಇಂಡಿಯನ್ ಫಿನೆನ್ಸ' ಪತ್ರಿಕೆಯು ಪ್ರಕಟಿಸಿದೆ "ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳು ಈ ಪ್ರಕಾರ ನಡಕೊಳ್ಳುವರೆಂದು ನಾವೆಂದೂ ನಂಬುತ್ತಿದ್ದಿಲ್ಲ ಬ್ರಿಟಿಶ ಉಕ್ಕಿನ ಸಂಘದ ಕಾರ್ಯಕಾರಿ ಮಂಡಳಿಯ ಜುಲೈ ೧೬ನೇ ತಾರೀಖಿನ ರಿಪೋರ್ಟಗಳನ್ನು ನಾವು ಸ್ವಂತ ಕಣ್ಣಿಂದ ನೋಡಿದೆವು" ಈ ಪ್ರಕಾರ ಫಿನೆನ್ಸ ಪತ್ರಕರ್ತರು ಬರೆದು ಚಕಿತರಾಗಿದ್ದಾರೆ ಬ್ರಿಟಿಶ ಉಕ್ಕಿನ ಗಿರಾಕಿ ಕಡಿಮೆಯಾಗದಂತೆ ಬ್ರಿಟಿಶ ಸರಕುಗಳ ಹಿಂದೀ ಸರಕುಗಳ ಮೇಲೆ ಬಿನ್ನಿಗೆ [illegible] ತೆರಿಗೆ ಹೇರಿ ಬ್ರಿಟಿಶ-ಹಿಂದೀ ಸರಕುಗಳ [illegible] ತೆರಿಗೆಯನ್ನು ಸರಿಪಡಿಸುವಂತೆ ಏರ್ಪಾಡಾಗಬೇಕಾಗಿ ವಂದಾಗಿ [illegible] ರಿಪೋರ್ಟಿನ ಪ್ರತಿಯನ್ನು ಬರ್ಮಿಂಘೆಮದೊಳಗಿನ ಉಕ್ಕಿನ ವ್ಯಾಪಾರಿಗಳಿಗೆ ಕಳಿಸಿ ನಡಿಸಿದ ಈ ಕಾರಸ್ಥಾನವಿದು! ಬ್ರಿಟಿಶ ಉಕ್ಕಿನ ಪೇಟೆ ಇಲ್ಲಿ ಕಿನ್ನಿಗೆ [illegible] ಆಪುದು ತೆರಿಗಯಿದೆ, ಆ ಲಾಭ ಹಿಂದೀ ಉಕ್ಕಿಗೆ ಸಿಕ್ಕದರೆ ಹಿಂದೀ ಉಕ್ಕು ಅಗ್ಗವಾಗುತ್ತದೆ, ಬ್ರಿಟಿಶ ಉಕ್ಕು ತುಟ್ಟಿ ಬೀಳುತದೆ [illegible] ಬ್ರಿಟಿಶ ಉಕ್ಕಿನ ಸಾಪ ಕಾರರಿಗೆ ನಷ್ಟ ಒದಗಬಾರದೆಂದು ಗುಪ್ತವಾಗಿ ರಚಿಸಿದ ವ್ಯೂಹರಚನೆಯಿದು! ಅತ್ತಿತ್ತ ಆಚೀಕಚೀ ಇಣಿಕಿ ನೋಡಿ ಕಣ್ಣುಕಟ್ಟಿಕೊಂಡು ಹಾಲು ಕುಡಿಯುವ ಬೆಕ್ಕಿನಂತೆ ಅಧಿಕಾರಿಗಳು ಯಾವತ್ತೂ ಏರ್ಪಾಡು ಮಾಡಿದ್ದರು!

ಆದರೆ, ಕಾಯಿದೆ ಕೌನ್ಸಿಲಿನ ಸಭಾಸದರಿಗೆ ಹೇಳದ ಗ್ರಹಿಕೆ ಮಾತ್ರ ಬೇರೆ 'ಸರಕಾರದ ಉತ್ಪನ್ನ ಕುಗ್ಗಿದೆ, ಖರ್ಚು ಬೆಳೆದಿದೆ, ಜಮಾ-ಖರ್ಚ ಬಾಯಿಗೂಡುವದಿಲ್ಲ, ಅದಕ್ಕಾಗಿ ಹಿಂದೀ ಉಕ್ಕಿನ ಮೇಲೆ ಕರ ಹೇರಬೇಕಾಗಿದೆ ಸಿರುವಾಯದ ಸಂಗತಿಯಿದು!' ಈ ಪ್ರಕಾರ ಸರಕಾರದ ಮಾತು ಕೇಳಿ ನಮ್ಮ ಸಭಾಸದರ ಕರುಳು ಕರಗಿ ನೀರಾಯಿತು ಬ್ರಿಟಿಶ ಅಧಿಕಾರಿಗಳಿಗೆ ಸ್ವಾರ್ಥ ಸೋಂಕಿಲ್ಲ, ಹಿಂದುಸ್ಥಾನದ ಕಲ್ಯಾಣದ್ದೇ ಚಿಂತೆ, ಹೀಗೆ ಗ್ರಹಿಸಿ, ನಮ್ಮ ರಾಜಕಾರಣಧುರಂಧರ ಸಭಾಸದರು ಕಾಯಿದೆಗೆ ಸಮ್ಮತಿಯನ್ನಿತ್ತರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸರಕಾರವು ಹಿಂದುಸ್ಥಾನದ ಕಲ್ಯಾಣದ ನಾಟಕವನ್ನೇ ನಡಿಸಿತ್ತಾಗಿ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯು ಸಮರ್ಥಿಸಿ, ಹಿಂದುಸ್ಥಾನ ಸರಕಾರಕ್ಕೆ ಕೊಟ್ಟ ಆರ್ಥಿಕ ಸ್ವಾತಂತ್ರ್ಯವು ಬರೇ ತೋರಗಾಣಿಕೆಯದೆಂದು ಪ್ರತಿಪಾದಿಸುತ್ತಿದೆ ಸಾಮ್ರಾಜ್ಯದ ಹಿತಕ್ಕಾಗಿ ಒಟ್ಟಾವಾ ಕರಾರನ್ನೇರ್ಪಡಿಸಿ ಬ್ರಿಟಿಶ ಜನಾಂಗಕ್ಕೆ ಲಾಭವಾಗಿದೆ ಆ ಕುರಿತು ಕಾಯಿದೆ ಕೌನ್ಸಿಲಿನಲ್ಲಿ ಅಧಿಕ್ಷೇಪವಾಗಲು, ವರ್ತಕ ಇಲಾಖೆಯ [illegible] ಗೊಂಡು, "ನಮಗ ಮನೋದೇವತೆಯುಂಟು, ಅದನ್ನು ಪಡಸಾಲೆಯಲ್ಲಿ ಕಟ್ಟಿಟ್ಟು ನಾವು ಅಧಿಕಾರ ಕೈಕೊಳ್ಳುವದಿಲ್ಲ"ವೆಂದು ನುಡಿದು, ಅಧಿಕಾರಿಗಳ ಪ್ರಾಮಾಣಿಕತನದ ಡಂಬ ಮೆರೆದಿದ್ದರು, ಈಗ ಅದೆಲ್ಲಿಗೆ ಹೋಯಿತು? ಮನೋದೇವತೆಯನ್ನು ಪಡಸಾಲೆಯಲ್ಲಿಟ್ಟಿರದ್ದರೆ ಅದು ಯಾವದೆ ಮೂಲೆಗುಂಪಾಗಿ ಹೋಯಿತೆಂದು 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯು ಸರ್ ಜೋಸಫ್‍ರವರಿಗೆ ಸಾತ್ವಿಕ ಉದ್ವೇಗದಿಂದ ಸವಾಲು ಮಾಡುತ್ತಿದೆ ಅಧಿಕಾರಿಗಳ ಕಾರಸ್ಥಾನಗಳನ್ನು ಎಷ್ಟೆಂದು ಎಣ್ಣಿಸುವದು?

ಈ ಸಂಗತಿಯ ಮೇಲಿಂದ ಒಂದು ಸಂಗತಿ ಸಿದ್ಧವಾಗುತ್ತದೆ ಅಧಿಕಾರಿಗಳು ಹಿಂದುಸ್ಥಾನದ ಪರಿಪೂರ್ಣ ಕಲ್ಯಾಣೇಚ್ಛೆಯಿಂದ ಅಧಿಕಾರವನ್ನು ಅಂಗೀಕರಿಸುತ್ತಿದ್ದರೂ, ಆನುವಂಶಿಕ ಸಂಸ್ಕಾರವಿರುವದರಿಂದ ಅವರಿಗೆ ಸ್ವದೇಶೀಯರ ಅಭಿಮಾನ ಬೆನ್ನು ಬಿಡದು '*Blood is thicker than water*' ಎಂಬ ಇಂಗ್ಲೀಷ ನಾಣ್ಣುಡಿಯಿದೆ ನಮ್ಮವರಿಗೆ ಯಾವಾಗಲೂ ನಮ್ಮವರ ಅಭಿಮಾನವಿದೆ ಎಂಬದೇ ಇದರ ಅರ್ಥ ಸಾರ್ವಭೌಮರು ಹಿಂದೀ ಪ್ರಜಾಜನರ ಹಿತವಾಗಬೇಕೆಂದು ಸಾಧ್ಯವಿದ್ದಷ್ಟು ಜಾಗ್ರತೆ ಕೊಂಡಾಗ್ಯೂ ಅಧಿಕಾರಿಗಳು ಪ್ರಜೆಗಳೊಡನೆ ಸಮರಸವಾದರೆ ಪ್ರಜೆಗಳ ಹಿತವಾಗದೆಂದೇ ಇದರ ಅಭಿಪ್ರಾಯ ಹಿಂದೀಯರು ಬ್ರಿಟಿಶರಿಗೆ ದೂರುವದು ನಿರರ್ಥಕ ಹಿಂದುಸ್ಥಾನವು ಸಾರ್ವಭೌಮ ರಾಜ್ಯವಾಗಿ ಮಾಂಡಲೀಕ ರಾಜ್ಯಗಳ ಮೇಲೆ ಹಿಂದೀಯರು ಕಾರಭಾರ ನಡಿಸಹೋದಾಗ್ಯೂ ಆಗುವ ಹಣೇಬರಹವಿದೇ ಹಿಂದೀಯರಿಗೆ ಲಾಭವಾಗುವಂತೆ ಅವರು ನಡೆಯದಿರರು. ಇದಕ್ಕೊಂದೇ ಉಪಾಯ ರಾಜ್ಯಕಾರಭಾರವನ್ನು ಸಂಪೂರ್ಣವಾಗಿ ಹಿಂದೀಯರಿಗೊಪ್ಪಿಸಿ ಹಿಂದೀಯರೇ ಪರಿಪೂರ್ಣವಾಗಿ ರಾಜ್ಯಭಾರ ನಡಿಸಗೊಡುವದು, ಅಂದರೆ ಮಾತ್ರ ಸಾರ್ವಭೌಮರ ಸಂಕಲ್ಪದಂತೆ ಹಿಂದುಸ್ಥಾನದ ರಾಜ್ಯಕಾರಭಾರ ನಡೆದು ಲೋಕಹಿತವಾಗುವದು ಬ್ರಿಟಿಶರು ದೇವಲೋಕದಿಂದ ಇಳಿದು ಬಂದ ದೇವತೆಗಳಲ್ಲ, ನಮ್ಮಂತೆಯೇ ಜಾವನಯುಳ್ಳ ಮಾನವರವರು

ಹೊಸ ರಾಜ್ಯಘಟನೆಯ ವಿಚಾರ ನಡೆದಾಗ ಈ ಕಾರಸ್ಥಾನ ಬೈಲಿಗೆ ಬಂದದ್ದು ಒಂದು ಪ್ರಕಾರದಿಂದ ಒಳಿತಾಯಿತು. ಬ್ರಿಟಿಶರಿಗೆ ರಾಜ್ಯಾಧಿಕಾರ ಕೊಟ್ಟರೆ ರಾಜ್ಯಭಾರದ ಸಂಕಲ್ಪದಂತೆ ಅವರಿಂದ ರಾಜ್ಯಭಾರ ನೆರವೇರಿಸಿಕೊಳ್ಳುವದು ಕಠಿಣವೆಂದು ಈಗ ಸಿದ್ಧವಾಗಿದೆ ಆದರಿಂದ ಹೊಸ ಕಾಯಿದೆಯಲ್ಲಿ ಬ್ರಿಟಿಶ ಅಧಿಕಾರಿಗಳ ಕೈಯಲ್ಲಿ ರಾಜ್ಯಭಾರದ ಸೂತ್ರಗಳಿರದಂತೆ ವ್ಯವಸ್ಥೆಯಾಗುವದು ಅತ್ಯವಶ್ಯವಿದೆ ಹಿಂದುಸ್ಥಾನಕ್ಕೆ ಹಿತವಾಗಬೇಕೆಂದಿದ್ದರೆ, ಹಿಂದೀ ಪ್ರಜೆಗಳು ಸುಖದಿಂದ ಬಾಳಿ ಬದುಕಬೇಕೆಂದಿದ್ದರೆ, ಭಾರತವರ್ಷದಲ್ಲಿ ನಿರುದ್ಯೋಗವಳಿದು ಉದ್ದಿಮೆ ಬೆಳೆದು ಭಾರತೀಯರ ಸಂಪದಭ್ಯುದಯವಾಗಬೇಕೆಂದಿದ್ದರೆ ಈ ಸುಧಾರಣೆಯಾಗಲೇ ಬೇಕು ಈ ಸುಧಾರಣೆಯಾದರ ಮಾತ್ರ ಚಕ್ರವರ್ತಿಗಳ ಹಿಂದುಸ್ಥಾನದ ನಿತಾಂತ ಕಲ್ಯಾಣದ ಸಂಕಲ್ಪವು ನೆರವೇರೀತು ಇದೊಂದನ್ನು ಬಿಟ್ಟು ಬಾಹ್ಯ ಕ್ರಮದಲ್ಲಿ ಎಷ್ಟು ಸುಧಾರಣೆಯಾದಾಗ್ಯೂ ಅದರಿಂದ ಪ್ರಯೋಜನವಿರದು ಇದಕ್ಕಾಗಿಯೇ ಮಹಾತ್ಮರು ಈಗಣ ರಾಜ್ಯಪದ್ಧತಿಯ ಅಂತರಂಗದಲ್ಲಿ, ಅಂತಃಕರಣದಲ್ಲಿ ಬದಲಾವಣೆಯಾಗಬೇಕಾಗಿ ಒತ್ತೊತ್ತಿ ಹೇಳುತ್ತಿರುವರು!

ಸ್ಫುಟ ಸೂಚನೆಗಳು.

೧ ಸರಕಾರದ ದಯಾಘನತೆ ಏನಿದ್ದಾಗ್ಯೂ ಪ್ರಯಾಗದ ನ್ಯಾಯಮೂರ್ತಿಗಳಾದ ಕಿರ್‌ರವರು ನ್ಯಾಯದಾನದಲ್ಲಿ ದಯಾಘನತೆ ತೋರದರೆಂದು ನಮ್ಮ ಅಭಿಪ್ರಾಯ. ಪಂಡಿತ ಜವಾಹಿರಲಾಲ ನೆಹರೂಅವರಿಗೆ ಕಳೆದ ಫೆಬ್ರುವರಿ ೧೬ ನೇ ತಾರೀಖಿಗೆ ಕಲಕತ್ತೆಯ ಅಲ್ಬರ್ಟ ಹೋಲಿನಲ್ಲಿ ರಾಜದ್ರೋಹದ ಭಾಷಣ ಮಾಡಿದ ಬಗ್ಗೆ ೨ ವರ್ಷಗಳ ಶಿಕ್ಷೆಯಾಗಿತ್ತಷ್ಟೆ. ಸೌ| ಕಮಲಾ ನೆಹರೂರವರ ಚಿಂತಾಜನಕ ಅಸ್ವಾಸ್ಥ್ಯದ ಮೂಲಕ ಕಳೆದ ಆಗಸ್ಟ ೧೨ ನೇ ತಾರೀಖಿಗೆ ೧ ವಾರದ ತನಕ ಪೆರೋಲ್‌ಪರ್ತ ಬಿಡುಗಡೆ ಮಾಡಿ ಪುನಃ ಪಂಡಿತ ಜವಾಹಿರಲಾಲರನ್ನು ಜೈಲಿಗೆ ಒಯ್ದರು. ಪುನಃ ಸೌ| ಕಮಲಾ ನೆಹರೂರವರ ಪ್ರಕೃತಿ ಕಷ್ಟದ್ದರಿಂದ ಜವಾಹಿರಲಾಲರಿಗೆ ದಿನಾ ಒಂದೆರಡು ತಾಸು ಬಂದು ಪತ್ನಿಗೆ ಒಳ್ಳೆಯದು-ನೋಡಿ ಪುನಃ ಸೆರೆಮನೆಗೆ ಹೋಗಲು ಅಪ್ಪಣೆಯಾಗಿದೆ. ಈ ಪ್ರಕಾರವು ಕಾಯಿದೆಗೆ ಸಮ್ಮತವಲ್ಲವೆಂದೂ, ಸಮಯ ಶಿಕ್ಷೆಯಾದವರಿಗೆ ಈ ಪ್ರಕಾರ ಆಗಿಂದಾಗ ಬಿಡುಗಡೆ ಮಾಡಿ ಹಿಡಿಯಲು ಕಾಯಿದೆಯಲ್ಲಿ ಆಧಾರವಿಲ್ಲವಾಗಿಯೂ, ಬಿಡುಗಡೆಯಾದೊಡನೆ ಉಳಿದ ಯಾವತ್ತೂ ಶಿಕ್ಷೆ ರದ್ದಾಯಿತೆಂದು ಎಣಿಸಬೇಕಾಗಿಯೂ ವಾದಿಸಿ ಅಲಹಾಬಾದ ಹೈಕೋರ್ಟಿನ ಎಡ್ವೊಕೇಟರಾದ ಶ್ರೀ| ಗಿರಿಧರಲಾಲ ಅಗರವಾಲರವರು ಹೈಕೋರ್ಟಿಗೆ ಅರ್ಜಿ ಮಾಡಿ, ಆಗೋಸ್ಟ ೧೯ನೇ ತಾರೀಖಿಗೆ ಪುನಃ ಪಂ| ಜವಾಹಿರಲಾಲರಿಗೆ ಸೆರೆಹಿಡಿದೊಯ್ದದ್ದು ಬೇಕಾಬೇಕಿರ ಪ್ರತಿಬಂಧನಾದದ್ದರಿಂದ ಅವರಿಗೆ ಹೈಕೋರ್ಟಿನವರು ಹಾಜರಪಡಿಸಿಕೊಂಡು ಬಿಡುಗಡೆ ಮಾಡಬೇಕಾಗಿ ಬಿನ್ನೈಸಿಕೊಂಡಿದ್ದರು. ನ್ಯಾ| ಮೂ| ಕಿರ್‌ರವರು ಈ ಅರ್ಜಿಯನ್ನು ತಿರಸ್ಕರಿಸಿದ್ದಾರೆ. 'ಶಿಕ್ಷೆ ಸೆರೆಹಿಡಿದವರಿಗೆ ಬಿಡುಗಡೆ ಮಾಡಲು ಕಾಯಿದೆಯಲ್ಲಿ ಕಲಮಿನ ಅಭಾವವಿರುವದೇನೋ ನಿಜ, ಆದರೆ, ಶಿಕ್ಷೆ ಪೂರ್ಣ ಮುಗಿಯುವದರೊಳಗಾಗಿ ಬಿಡುಗಡೆ ಮಾಡಿ ಪುನಃ ಸೆರೆಹಿಡಿಯಬಾರದಾಗಿ ಕಾಯಿದೆಯಲ್ಲಿ ಒಪ್ಪಿಗೆಯಿಲ್ಲ, ಇದರ ಮೇಲಿಂದ ಶಿಕ್ಷೆಯಾದವರಿಗೆ ಬೇಕಾದಾಗ ಬಿಡುವದು, ಪುನಃ ಹಿಡಿದಿಡುವದು ಸರಕಾರದ ಸಾರ್ವಭೌಮ ಅಧಿಕಾರಕ್ಕೆ ಒಪ್ಪಿದ ಮಾತು. ಸರಕಾರದವರು ಪಂಡಿತ ಜವಾಹಿರಲಾಲರಿಗೆ ದಯ ತೋರಿಸಿದ್ದಾರೆ. ಇದರ ಮೇಲಿಂದ ಉಳಿದ ಶಿಕ್ಷೆ ರದ್ದಾಗದು" ಈ ಪ್ರಕಾರ ನ್ಯಾ| ಮೂ| ಕಿರ್‌ರವರು ಅಭಿಪ್ರಾಯಪಟ್ಟದ್ದನ್ನು ನೋಡಿ ಆಶ್ಚರ್ಯವಾಗುತ್ತದೆ. ಸೆರೆಹಿಡಿದವರಿಗೆ ಪೂರ್ಣ ಶಿಕ್ಷೆ ಮುಗಿಯುವ ತನಕ ಬಂಧಿಸಿಡಬೇಕೆಂದು ಸ್ಪಷ್ಟವಿರುವಾಗ ತನ್ಮಧ್ಯೆ ಬಿಡುಗಡೆಯಾದ ಬಳಿಕ ಶಿಕ್ಷೆ ತೀರಿತೆಂದು ಎಣಿಸಬಹುದು; ಇಲ್ಲವೆ ಉಳಿಯಿತೆಂದು ಎಣಿಸಬಹುದು. ಎರಡೂ ಅರ್ಥಗಳು ಹೊರಡುತ್ತಿದ್ದಾಗ ಪ್ರಜಾನುಕೂಲತೆಯ ಅರ್ಥವನ್ನೇ ಮನ್ನಿಸುವದು ನ್ಯಾಯ ಕೋರ್ಟಿನ ಪರಂಪರೆ. ಪಂಡಿತ ಜವಾಹಿರಲಾಲರಿಗೆ ಸರಕಾರವು ತೋರಿಸಿದ ದಯೆಯನ್ನು ನಾವೆಲ್ಲರೂ ಒಪ್ಪುವ ವಿಷಯ. ನ್ಯಾಯಾಸನವು ದಯೆ ತೋರಿಸುವದಾಗಿ ಶ್ರೀ| ಗಿರಿಧರಲಾಲರ ಅಪೇಕ್ಷೆಯಿತ್ತು. ನ್ಯಾ| ಮೂ| ಕಿರ್‌ರವರು ವಸ್ತುಸ್ಥಿತಿಯ ಅರ್ಥವನ್ನು ವಿಪರೀತ ಗ್ರಹಿಸಿ ಅರ್ಜಿ ತಿರಸ್ಕರಿಸಿದರೆಂದು ನಮೂದಿಸಲು ವ್ಯಸನವಾಗುತ್ತದೆ. ಪಂ| ಜವಾಹಿರಲಾಲರ ಮಟ್ಟಿಗೆ ಅರ್ಜಿ ತಿರಸ್ಕರಿಸಿದರೂ ಒಂದೇ, ಮನ್ನಿಸಿದರೂ ಒಂದೇ! ಅವರಿಗೆ ಸರಕಾರದ ದಯೆಯೂ ಬೇಡ, ನ್ಯಾಯಸ್ಥಾನದ ಔದಾರ್ಯವೂ ಬೇಡ! ಸ್ವತಂತ್ರ ಸ್ವಾಭಿಮಾನಿ ಪುರುಷರವರು!

---

೨. ಸೌ| ಕಮಲಾ ನೆಹರೂರವರ ಪ್ರಕೃತಿ ವಿಶೇಷ ಕಟ್ಟಿದೆ. ಅವರಿಗೆ ೧೦೪ ರ ತನಕ ಜ್ವರ ಏರುತ್ತಿದೆ, ವಾಕರಿಕೆಯಿದೆ, ಅಸ್ಥಿಪಂಜರವೊಂದು ಉಳಿದಿದೆ, ಇಷ್ಟು ಕಠಿಣ ಸ್ಥಿತಿಯಾದಾಗ್ಯೂ, ಸರಕಾರವು ಪಂ| ಜವಾಹಿರಲಾಲರಿಗೆ ಸಂಪೂರ್ಣವಾಗಿ ಬಿಡುಗಡೆ ಮಾಡದ್ದನ್ನು ನೋಡಿ ಮನಸ್ಸು ಬೇಸರಗೊಳ್ಳುತ್ತದೆ. ಕಳೆದ ಆಗಸ್ಟ ೧೨ ನೇ ತಾರೀಖಿಗೆ ಜವಾಹಿರಲಾಲರಿಗೆ ತಾತ್ಕಾಲಿಕವಾಗಿ ಬಿಡುಗಡೆ ಮಾಡಿದ ಬಳಿಕ, ಸಂಯುಕ್ತ ಪ್ರಾಂತಿಕ ಸರಕಾರದ ಕಡೆ ಜವಾಹಿರಲಾಲರಿಗೆ ಸಂಪೂರ್ಣವಾಗಿ ಬಿಡುಗಡೆ ಮಾಡಬಹುದೇನೆಂದು ಹಿಂದುಸ್ಥಾನ ಸರಕಾರವು ವಿಚಾರಿಸಿತಂತೆ. ತಮ್ಮದೇನಡ್ಡಿಯಿಲ್ಲವಾಗಿ ಅಲ್ಲಿಂದ ಉತ್ತರ ಬರಲು, ಮುಂಬಯಿ ಸರಕಾರದ ಕಡೆ ವಿಚಾರ ನಡೆಯಿತು. ಈ ತಿಂಗಳಲ್ಲಿ ರಾಷ್ಟ್ರೀಯ ಸಭೆ ಸೇರಲಿಕ್ಕಿದೆ, ಪಂ| ಜವಾಹಿರಲಾಲರು ಕಾರ್ಯದಕ್ಷರು. ಅವರು ಬಿಡುಗಡೆ ಹೊಂದಿದಲ್ಲಿ ಸೌ|ಯವರ ಪ್ರಕೃತಿ ಸುಧಾರಿಸಿದ ಬಳಿಕ ಮುಂಬಯಿಗೆ ಬರಬಹುದೆಂಬ ದೂರಾಲೋಚನೆಯಿಂದ ಮುಂಬಯಿ ಸರಕಾರದ ಅಭಿಪ್ರಾಯ ಕೇಳಲಾಗಿತ್ತು. "ನಮ್ಮ ಆಕ್ಷೇಪವಿಲ್ಲ, ನಾವು ಆಲೋಚಿಸಬಲ್ಲೆವು" ಹೀಗೆ ಮುಂಬಯಿ ಸರಕಾರದಿಂದ ಬರೆದುಹೋದಾಗ್ಯೂ ಪಂಡಿತ ಜವಾಹಿರಲಾಲರಿಗೆ ಹಿಂದುಸ್ಥಾನ ಸರಕಾರವು ಬಿಡುಗಡೆ ಮಾಡಲೊಪ್ಪದೆ ಬಂಧಿಸಿಟ್ಟದ್ದು ಮಹದನ್ಯಾಯವಿದೆ. ಸೌ| ಕಮಲಾ ನೆಹರೂರವರ ಪ್ರಕೃತಿ ಕ್ರಮವಾಗಿ ಇಕ್ಕಟ್ಟಿನದಾಗುತ್ತ ನಡೆದಿದೆ, ಸರಕಾರವು ಇನ್ನೂ ಬಿಗಿಹಿಡಿಯುವದು ದರಲ್ಲಿ ಪಂ| ಜವಾಹಿರಲಾಲರ ಕಡೆಯಿಂದ ಚಳವಳಿಯಲ್ಲಿ ಸೇರಲಿಕ್ಕಿಲ್ಲವಾಗಿ ಕರಾರು ಬರಕೊಳ್ಳುವದು ಸರ್ವಥಾ ಸಾಧ್ಯವಿಲ್ಲ. ಜವಾಹಿರಲಾಲರಂಥ ನಿಷ್ಠಾಚರಿತರು ಈಗಿನ 'ಜವಾಹಿರ' ಅಂದರೆ ರತ್ನವೇ ಸರಿ! ಪಂ| ಮೋತಿಲಾಲರು ರಾಷ್ಟ್ರಕ್ಕೆ ಅರ್ಪಿಸಿದ ಅನರ್ಘ್ಯ ಪುತ್ರರತ್ನದ!! ಇಂಥವರಿಗೆ ಪೀಡಿಸಿದರೆ ರಾಷ್ಟ್ರಕ್ಕೇ ಪೀಡನೆಯಾಗುವದು ಖಚಿತ! ಆದರಿಂದ ಸರಕಾರವು ಪುನರಾಲೋಚಿಸಿ ನ್ಯಾ| ಮೂ| ಕಿರ್‌ರವರು ಕೊಟ್ಟ ದಯಾಘನತೆಯ ಪ್ರಶಸ್ತಿಪತ್ರವನ್ನು ಸಾರ್ಥಕ ಮಾಡುವದೇನು?

— ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರು ಹಿಂದುಸ್ಥಾನ ಸರಕಾರದೊಡನೆ ಟಿಪ್ಪಣಿ ನಡೆಸಿ ಸತ್ಯಾಗ್ರಹದಲ್ಲಿ ಶಿಕ್ಷೆಯಾದವರು ಇಲೆಕ್ಷನಿನಲ್ಲಿ ಉಮೇದ್ವಾರರಾಗಿ ನಿಲ್ಲಲು ಸರಕಾರದ ಆಕ್ಷೇಪವಿಲ್ಲವಾಗಿ ನಿರ್ಣಯಿಸಿಕೊಂಡಿದ್ದಾರೆ. ಬದಲು, ಪ್ರಾಂತಿಕ ಸರಕಾರಗಳು ಇಷ್ಟ ಕಂಡಲ್ಲಿ ಪ್ರತಿಬಂಧ ಮಾಡಬಹುದಂತೆ. ಪ್ರಾಂತಿಕ ಸರಕಾರದ ಅಧಿಕಾರಕ್ಕೆ ಹಿಂದುಸ್ಥಾನ ಸರಕಾರದ ಅಭಿಪ್ರಾಯದಿಂದ ಯಾವದೇ ಪ್ರಕಾರದ ನಿರ್ಬಂಧವಾಗಲಿಕ್ಕಿಲ್ಲ. ಈ ಟಿಪ್ಪಣಿಯಿಂದ ಶಿಷ್ಟರಿಗೊಂದು ದೊಡ್ಡಕಾರ್ಯ ಸಾಧಿಸಿದ ಸಮಾಧಾನವೇ ಹೊರತು ಬಹುಜನಸಮಾಜಕ್ಕೆ ಪ್ರಯೋಜನವೇನಾಗದು.

ವೃತ್ತಸಾರ.

— ಮಹಾತ್ಮರಿಗೂ, ಕೊಂಗ್ರೆಸ ರಾಷ್ಟ್ರೀಯ ಪಕ್ಷದ ಶ್ರೀ| ಮಾಧವರಾವ ಅಣೇಯವರಿಗೂ ಮಧ್ಯಸ್ಥಿಕೆಯಾಗಿದೆ. ರಾಷ್ಟ್ರೀಯ ಸಭೆಯ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರಿಗಿಂತ ಕೊಂಗ್ರೆಸ ರಾಷ್ಟ್ರೀಯ ಪಕ್ಷದ ಉಮೇದ್ವಾರರಿಗೆ ಹೆಚ್ಚಿಗೆ ಮತದಾನವಾಗುವ ಸಂದರ್ಭದಲ್ಲಿ ಪಾರ್ಲಿಮೆಂಟರಿ ಬೋರ್ಡಿನವರು ತಮ್ಮ ಉಮೇದ್ವಾರಿಯನ್ನು ಹಿಂತೆಗೆದುಕೊಳ್ಳಬೇಕು, ಬೋರ್ಡಿನ ಉಮೇದ್ವಾರರಿಗೆ ಹೆಚ್ಚಿಗೆ ಮತಬಲ ಸಿಗುತ್ತಿದ್ದಲ್ಲಿ ರಾಷ್ಟ್ರೀಯ ಪಕ್ಷದ ಉಮೇದ್ವಾರರು ಹಿಂಜರಿಯಬೇಕು, ದೋರಣದ ಮಟ್ಟಿಗೆ ಆಕ್ಷೇಪವೇನಿಲ್ಲ. ಪ್ರತ್ಯಕ್ಷ ಉಮೇದ್ವಾರರು ನಿಂತು ಹೋರಾಟವಾಗುವಾಗ ಭಿನ್ನಾಭಿಪ್ರಾಯವಾಗುವದೇನೆಂಬದೊಂದು ಭೀತಿ. ಮಹಾತ್ಮರು ಅಂತಃಕರಣಪೂರ್ವಕವಾಗಿ ಸಾಮೋಪಚಾರದವರು. ಶ್ರೀ| ಅಣೇಯವರಿಗೆ ಇದಿರಾಗಿ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ಎಂದಿಗೂ ಉಮೇದ್ವಾರರಿಗೆ ನಿಲ್ಲಿಸಲಿಕ್ಕಿಲ್ಲ, ನಿಲ್ಲಿಸಿದ್ದಲ್ಲಿ ವರ್‍ಹಾಡ ಪ್ರಾಂತದಲ್ಲಿ ತಾವು ಸ್ವತಃ ಸಂಚರಿಸಿ ಶ್ರೀ| ಅಣೇಯವರ ಬಗ್ಗೆ ಮತಸಂಗ್ರಹ ಮಾಡುವವಾಗಿ ಮಹಾತ್ಮರು ವಚನ ಕೊಟ್ಟರೆಂದು ಅಮರಾವತಿಯ 'ಉದಯ' ಪತ್ರಿಕೆಯ ವಾರ್ತೆ. ಮಹಾತ್ಮರ ನಿಷ್ಕಪಟ ಅಂತಃಕರಣದ ಸಾಕ್ಷಿಯಿದು!

— ರಾಷ್ಟ್ರೀಯ ಸಭೆಯ ಸ್ವಾಗತ ಸಮಿತಿಯವರು ಟಿಕೀಟುಗಳ ೪ ಆಣೆಯಂತೆ ಎತ್ತುವಳಿ ಮಾಡಿ ಹುಟ್ಟಿದ ಹಣವನ್ನು ಗುಜರಾಥ ಮತ್ತು ಕರ್ನಾಟಕ ರೈತರ ಕಷ್ಟನಿವಾರಣಾ ನಿಧಿಗೆ ಅರ್ಪಿಸಬೇಕಾಗಿ ಒಂದು ಸೂಚನೆ 'ಮುಂಬಯಿ ಕ್ರಾನಿಕಲ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

— ಕೋಲಂಬೋದಲ್ಲಿ ಡಾ| ಇ ವ್ಹಿ ರತ್ನಂ ಎಂಬ ವಿಖ್ಯಾತ ಸರ್ಜನ್‌ರಿದ್ದಾರೆ. ಇವರು ಖಾದಿಯ ಭಕ್ತರು. ಖಾದಿಯಲ್ಲಿ ನಿರ್ಮಲತೆಯಿದೆ, ಅದನ್ನು ತೊಟ್ಟುಕೊಂಡಲ್ಲಿ ನಮ್ಮಲ್ಲಿ ನಿರ್ಮಲ ಭಾವನೆಗಳುಂಟಾಗುತ್ತವೆ, ಹೀಗವರು ಗೆಳೆಯರ ಬಳಿ ಉದ್ಗರಿಸಿದರಾಗಿ 'ಖಾದಿ ಪತ್ರಿಕೆ'ಯ ಲೇಖಕರಾದ ಶ್ರೀ| ಜೆರಾಜಾಣಿಯವರು ಪ್ರಕಟಿಸುತ್ತಾರೆ.

— ಮುಂಬಯಿಯಲ್ಲಿ ಮೊನ್ನೆ ರಾಷ್ಟ್ರೀಯ ಸಭೆಯ ಸ್ವಾಗತ ಸಮಿತಿಯ ಸಭೆ ಸೇರಿ ಬಾಬು ರಾಜೇಂದ್ರಪ್ರಸಾದರವರು ಸರ್ವಾನುಮತಿಯಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ. ಒಂದು ಬಂಗಾಲದ ಹೊರತು ಯಾವತ್ತೂ ಪ್ರಾಂತಗಳು ಬಾಬು ರಾಜೇಂದ್ರಪ್ರಸಾದರವರಿಗೇ ಅಧ್ಯಕ್ಷಸ್ಥಾನಕ್ಕಾಗಿ ಸೂಚಿಸಿದ್ದವು. ಬಂಗಾಲ ಪ್ರಾಂತದಿಂದ ಇನ್ನೂ ಸೂಚನೆ ಬಂದಿಲ್ಲ.

— ಇದೇ ತಾ ೭ ನೇಗೆ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭೆ ಧಾರವಾಡದಲ್ಲಿ ಸೇರುವದು. ಆ ಸಮಯ ಮಹಾತ್ಮರ ಪ್ರಕಟಣೆಯನ್ನು ಕಮಿಟಿಯವರು ಆಲೋಚಿಸಿ ತಮ್ಮ ನಿರ್ಣಯ ಕೈಕೊಳ್ಳುವರು. ರಾಷ್ಟ್ರೀಯ ಸಭೆಯ ಘಟನೆಯಲ್ಲಿ ಪರ್ಯಾಯವಾಗಿ ತಿದ್ದುಪಾಟುಗಳನ್ನೂ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಗಾಗಿ ಕೈಕೊಳ್ಳಬೇಕಾದ ಪ್ರಚಾರ ಕಾರ್ಯಕ್ರಮವನ್ನೂ ಕುರಿತು ಆಲೋಚಿಸುವರು. ನಮ್ಮ ದಕ್ಷಿಣ ಭಾಗದ ಪರವಾಗಿ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಗೆ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ಹಾವೇರಿಯ ಶ್ರೀ| ಸಿದ್ದಪ್ಪಾ ಹೊಸಮನಿ ಇವರಿಗೆ ನೇಮಿಸಿದ್ದಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಇಷ್ಟು ಮಳೆ ಬೀಳ, ಈಗಿನ ಮಳೆಯಿಂದ ಸ್ವಲ್ಪ ಅಡ್ಡಬಿದ್ದು ಹುಟ್ಟಿದ ಬೆಳೆ ಗದ್ದೆ ಹಾಳಾಗುವ ಭೀತಿಯ ಈ ವರ್ಷದ ಬೆಳೆ ಬಾಳ್ವೆ ಗಿಡಂದು ಸಂತೋಷಪಡುವವರು ಈಗ ಚಿಂತಿಸ ತ್ತಿದ್ದಾರೆ ಈ ವಾರದಲ್ಲಿ [illegible] ಇಂಚು ಮಳೆ, ಅಂತು ಈವರೆಗೆ [illegible] ಇಂಚು ಮಳೆ.

ಸರಕಾರ ಹಾಗು ಮ್ಯುನಿಸಿಪಾಲಿಟಿಗಳ ಮೇಲೆ ಇಲ್ಲದ [illegible] ಮುನಿಸಿಪಲ ಕಮಿಟಿಯು [illegible] [illegible]

[illegible]

ಹಳದೀಪೂರ— ಇಲ್ಲಿಯ [illegible] [illegible]

[illegible]

ಹೊನ್ನಾವರ— ಇಲ್ಲಿಯ ಶ್ರೀ ಸಿದ್ಧಿವಿನಾಯಕ ವಿದ್ಯಾಲಯದವರು [illegible] ಶ್ರೀ ಸಿದ್ಧಿವಿನಾಯಕ ವಿದ್ಯಾಲಯದ [illegible] [illegible]

[illegible]

ಮುಂಡರ್ಗೇಶ್ವರ— (ತಾ ೨೮-೯-೩೦) ದಿನಾ [illegible] ಮಳೆ ಬೀಳುತ್ತಿದೆ, ಭತ್ತದ ಪೈರು [illegible] [illegible]

[illegible]

ಶಿರಸಿ— (ತಾ ೨೮-೯-೩೦) ಈ ತಾಲೂಕಿನ [illegible] [illegible]

[illegible]

[illegible] ಗಂಧದ [illegible] ವ್ಯಾಸರ ಬೆಟ್ಟ [illegible] ವ್ಯಾಸರ ಬೆಟ್ಟಗಳು, ಹೀಗೆ ನಮ್ಮ ವ್ಯಾಸರ ಬೆಟ್ಟದ [illegible] ಭಾಗಗಳು [illegible] ಬೆಂಕಿ [illegible] ವ್ಯಾಸರ ಬೆಟ್ಟಕ್ಕೆ [illegible] ಬೆಂಕಿಯನ್ನು ನಂದಿಸಲು [illegible] ಬೆಂಕಿಯಿಂದ [illegible] ಬೆಂಕಿ ನಂದಿಸ [illegible] ವ್ಯಾಸರ ಬೆಟ್ಟದಿಂದ [illegible] ಗಂಧದ [illegible] ಬೆಂಕಿಯಿಂದ ಜಂಗಲು [illegible] ವ್ಯಾಸರ ಬೆಟ್ಟಕ್ಕೆ [illegible] ವನಗಳನ್ನು ಬೆಟ್ಟದಲ್ಲಿ [illegible] ಜಂಗಲ [illegible]

ಸಿದ್ದಾಪುರ— [illegible] ಕಾಂಗ್ರೆಸ ಕಮಿಟಿಯ [illegible] ಜಿಲ್ಲಾ ಕಾಂಗ್ರೆಸ ಕಮಿಟಿಯ [illegible]

[illegible]

ಕಾರವಾರ— [illegible]

[illegible]

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ! ಯೋಗ್ಯವಾದ ಧಾರಣೆ!!

ಯು. ಶಿವಾ ಎಂಡ್ ಬ್ರದರ್ಸ್,

ಒಟೋಮೋಬೈಲ ಇಂಜಿನಿಯರ್ಸ ಎಂಡ್ ಬೋಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶೆವರಲೆಟ್ ಬ್ಯೂಕ ಕ್ರೈಸಲರ, ಪಿಟ್ರೋಲ್, ಡೋಜ್, ಡಿಸೋಟೊ, ಪ್ಲೈಮಂಟ, ಎಸೆಕ್ಸ ಎರ್ಸ್ಕಿನ್, ಪಾಂಟಿಯಾಕ, ಫ್ಯಾಟ, ಜ ಎಸರ್ [illegible], ಫೋರ್ಡ-ಎ, ಫೋರ್ಡ ಎವಿ, ಹೆಪ್‌ಮೊಬೈಲ್ ಹಡಸನ್, ಮಾಸ್ಕವೆಲ್, ಓವರ್ಲೆಂಡ್, ವ್ಹಿಪೆಟ್, ವಿಲಿಂಸ ಸ್ಟುಡಬೇಕರ, ರಗ್ಬಿ, ಲ್ಯಾಫಾಯೆಟ, [illegible], ಸಿಂಗರ ಮೊದಲಾದ ಯಾವತ್ತು ಮೋಟಾರುಗಳ ಮೋಟಾರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ [illegible] ದರದಿಂದಲೂ ಮಾಡಿಕೊಡುವೆವು. ಬೇಕಾದ ನ್ಯೂಜಿನ ಬೋಡಿಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಅದಲ್ಲದೆ—

ಎಕ್ಸ್ಟ್ರಾ ಜವಾಬಿನಿಗೆ ಸಂಬಂಧಪಟ್ಟ [illegible] ಸಣ್ಣ ದೊಡ್ಡ [illegible] ರಾಟಿಗಳನ್ನು ತಯಾರಿಸಿ ಬೇಕಾದಲ್ಲಿ ಫಿಟಿಂಗ ಮಾಡಿಕೊಡುವೆವು, ಬೋಡಿಬಿಲ್ಡಿಂಗ, ಬೇಕಾದ ನಮೂನೆಯ ಮಂಚಗಳೂ, ಬಾಂಕುಗಳೂ, ಕೋಟ್‌ಗಳೂ ಮಾಡಿಕೊಡುವೆವು. ಬಡಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ.

ಪತ್ರಕರ್ತರ ನುಡಿಗನ್ನಡಿ

(೫ನೇ ಪಾನದಿಂದ ಮುಂದುವರಿದ್ದು)

ಹುಟ್ಟುವಳಿ ಹೆಚ್ಚಿಸುವ ಸಾಧನಗಳಲ್ಲ ಸಾವಕಾರರ ಸ್ಥಾನದಲ್ಲಿ ಬ್ಯಾಂಕುಗಳ ನಿರ್ಮಾಣವಾಗುವದು, ಇಷ್ಟೇ ಈ ಯೋಜನೆಯ ಹಲ ಸಾಲದ ಸಂಕ್ರಾಂತಿಯೊಳಗಿಂದ ಬೇಸಾಯಗಾರರಿಗೆ ತಪ್ಪಿಸುವ ಯೋಜನೆಯಿದಲ್ಲ, ಇದ್ದೊಂದು ಖಂಡಿತ

———

[illegible] ಸ ಉಪಯೋಗಿಯ ಯಾವತ್ತೂ ಯೋಜನೆಗಳನ್ನು ಹಮ್ಮಿಕೊಂಡಿದ್ದರೆ ಬೇಸಾಯಗಾರರಿಗೆ ಬದುಕಿಕೊಳ್ಳಲು ಒಂದೇ ಒಂದು ಉಪಾಯ ತೋರುತ್ತದೆ. ಅದೇನಂದರೆ — ಸರಕಾರವು ತೀರ್ವೆಯ ಮಾನವನ್ನು ಅರ್ಧಾಂಶಕ್ಕಾದರೂ ಇಳಿಸಬೇಕು, ಬೇಸಾಯಗಾರರಿಂದ ಸಲ್ಲತಕ್ಕ ಸಾಲದ ಚೌಕಶಿ ಮಾಡಿ ಭಾವನಗರ ಸಂಸ್ಥಾನಿಕರು ಏರ್ಪಡಿಸಿದಂತೆ ಅದನ್ನು ಸರಕಾರಿ ಪ್ರಾಮೋಶರಿಯೊಳಗಿಂದ ತೀರಿಸಬೇಕು. ಈಗ ದಿನದಿನಾಸ ಕಷ್ಟ ಸಾಲ ಕೊಂಡವರಿಗೂ ಕಷ್ಟ, ಕೊಟ್ಟವರಿಗೂ ಕಷ್ಟ, ಸಾಲ ತೀರಿಸಲಾಗದ ಸಾಲ ಕೊಂಡವರಿಗೆ ಕಷ್ಟ, ಸಾಲ ವಸೂಲಾಗದ ಸಾವಕಾರರಿಗೆ ಕಷ್ಟ. ಸಾವಕಾರರು ಸಾಲದ ಒಂದು [illegible] ಸಮಾಧಾನಪಟ್ಟರಾಯಿತು. ಈ ಸ್ಥಿತಿಯಲ್ಲಿ ಇಂದಿಗೆ ಸಾಲ ವಸೂಲ ಬರುತ್ತಿದ್ದರೆ ಅವರು ನೂರಕ್ಕೆ ಒಂದು ಬಿಟ್ಟುಕೊಡಲಿಕ್ಕೂ ತಯಾರಿದ್ದಾರೆ. ಈ ಮನಸ್ಥಿತಿಯನ್ನು ಸರಕಾರವು ಗ್ರಹಿಸಿ ಸಾಲದ ರಕಮನ್ನು ಕಡಿಮೆ ಮಾಡಿ ಕೃಷಿಕರ ಸಂಕಟವನ್ನು ಪರಿಹರಿಸಿದರೆ ಸರಕಾರಕ್ಕೇನೂ ಹಾನಿ [illegible]. ಯಾಕಂದರೆ, ಒಕ್ಕಲಿಗರು ಸರಕಾರದ ಮೂಲಾಧಾರರು. ಅವರ ಸುಖವೇ ಸರಕಾರದ ಸುಖ. ಅವರು ಶ್ರೀಮಂತರಾಗಿದ್ದರೆ ಸರಕಾರಕ್ಕೆ ಬಂದಿಲ್ಲೆಂದು ತರದಿಂದ ತೆರಿಗೆ ತರುತ್ತಿರುತ್ತಾರೆ. ಸಾಲದ ಒತ್ತಾಯದಿಂದ ಅವರ ಬದುಕಿಗೆ ಹೊಂದಿದರೆ, ಅವರು ಒಳ್ಳೆ ಹುರುಪಿನಿಂದ ದುಡಿದು ಬೆಳೆಯನ್ನು ಉತ್ಪತ್ತಿ ಮಾಡಬಲ್ಲರು. ಬೇಸಾಯಗಾರರು ಮುಂದುಗಡೆ ಒಡ್ಡುಗಿಡ್ಡುಗಳು [illegible] ಎಂದು ಅವರಿಗೆ ಹೇಳುವಾಗ ಸರಕಾರವು ಕರ್ತವ್ಯಪರಾಙ್ಮುಖವಾಗಬಾರದು. ಶಾಸನ ಕೌನ್ಸಿಲಿನ ಸಭಾಸದರಾದ ರಾ| ಪಾಟೀಲರವರು ನುಡಿದಂತೆ, ದೊಡ್ಡ ದೊಡ್ಡ ಸಂಬಳ ತಿನ್ನುವ ಅಧಿಕಾರಿಗಳು ಒಕ್ಕಲಿಗರೊಡನೆ ಬೆರೆತು ಅವರ ಬಾಳ್ವೆಯನ್ನು ಅರಿತುಕೊಂಡರೆ ಮಾತ್ರ ಅವರ ಸುಖ-ದುಃಖ ತಿಳಿಯುವಂತಿದೆ. ಸಾಮಾನ್ಯ ಅಧಿಕಾರಿಗಳು ಮದ್ಯಪಾನ-ಸಿಗರೇಟು ಮೊದಲಾದ ವಿಲಾಸಗಳಿಗಾಗಿ ಖರ್ಚು ಮಾಡುವಷ್ಟು ರಕಮನ್ನು ಬೇಸಾಯಗಾರರು ಶುಭಕಾರ್ಯಕ್ಕೆ ಖರ್ಚು ಮಾಡುವದಿಲ್ಲ. ಮನುಷ್ಯನ ಪವಿತ್ರ ಅಧಿಕಾರಸ್ಥಾನದಿಂದ ಕೃಷಿಕರಿಗೆ ದೂಷಿಸುವದು ಭೂಷಣವಲ್ಲ. ಭಾವನಗರ ಸಂಸ್ಥಾನವಾಗಲಿ ಮೈಸೂರ ಸಂಸ್ಥಾನವಾಗಲಿ, ಮೈಸೂರ ಸಂಸ್ಥಾನವಾಗಲಿ ನಮ್ಮ ಭರತಖಂಡದ ಭಾಗಗಳೇ, ಅಲ್ಲಿಯ ನಿವಾಸಿಗಳೂ ಭಾರತೀಯರೇ! ಬ್ರಿಟಿಶರು ಸುಧಾರಿಸಿದ ಜನಾಂಗದವರು, ವಿಧವಿಧದ ಪ್ರಜಾ ಸೌಕರ್ಯಗಳನ್ನೇರ್ಪಡಿಸಿ ಮಾಂಡಲೀಕ ರಾಜ್ಯಗಳಿಗೆ ಆದರ್ಶಭೂತರಾಗಿರಬೇಕು. "ನಾವು ಪ್ರಜಾಜನರ ಸುಖಕ್ಕಾಗಿ ಅತುಲ ಪರಿಶ್ರಮಪಟ್ಟೆವು, ಪ್ರಜೆಗಳು ದಡ್ಡರು, ನಾವು ಜಾಣರು," ಎಂದ ಕೂಡಲೆ ಬ್ರಿಟಿಶರು ಜನತೆಯ ಮನ ಸೆಳೆಯಲಾರರು. ಆಪತ್ಪ್ರಸ್ತ ಸ್ಥಿತಿಯಲ್ಲಿ ಸಾರ್ವಭೌಮ ಪ್ರಜಾವತ್ಸಲ ಬ್ರಿಟಿಶ ಸರಕಾರವು ಬೇಸಾಯಗಾರರ ಹೀನ-ದೀನ ಸ್ಥಿತಿಯನ್ನು ಗ್ರಹಿಸಿ ಮುಂದಾಗಿ ಪ್ರಜಾ ಕಲ್ಯಾಣ ಯೋಜನೆ ಕಲ್ಪಿಸುವದು ಉಚಿತವಿತ್ತು. ಆ ಭಾಗ್ಯ ಭಾರತೀಯ ಪ್ರಜಾಜನರಿಗಿಲ್ಲ. ಮಾಂಡಲೀಕ ರಾಜ್ಯಗಳು ಉಪಕ್ರಮ ಕೈಕೊಂಡು ಮುಂದಾದಾಗ, ಸಾರ್ವಭೌಮ ಸರಕಾರವು ಹಿಂಬಾಲಿಸಬಾರದೇ?

———

೪ ಸಹಕಾರ ಖಾತೆಯ ರಜಿಸ್ಟ್ರಾರರಾದ ಮಿ| ಪಂಜಾಬಿಯವರಿಗೆ ಸಾಮಾನ್ಯವಾಗಿ ಒಕ್ಕಲಿಗರ ಕಷ್ಟಸ್ಥಿತಿಯು ಅರಿವಾಗಿದೆಂದು ನಾವು ಎಣಿಸಬಹುದು. ಸಹಕಾರಿ ಸಂಘಗಳ ಸಹಕಾರಿ ಏಜಂಟರಿಂದ [illegible] ಅಪೇಕ್ಷೆಯಂತೆ ಹಿತವಾಗಲಿಲ್ಲವೆಂಬ [illegible] ಧಾರ್ಢ್ಯದ ವಿಧಾನದಿಂದ [illegible] ದನ್ನು ಅವರು ಒಪ್ಪಿದಂತಿದೆ. ಸರಿ, ಬೇಸಾಯಗಾರರಿಗೆ ಸಹಕಾರಿ ಸಂಘಗಳ ಏಜಂಟರಿಂದ [illegible] ಸಾಮಾನ್ಯವಾಗಿ ಬಡ್ಡಿಯ ದರವು [illegible] ಇದ್ದಾಗ್ಯೂ [illegible] ರಂತೆ ಬಡ್ಡಿ ವಸೂಲು [illegible] ಪಂಚಕಮಿಟಿ [illegible] ನ್ಯಾಯಸ್ಥಾನಗಳು, ಅವರ [illegible] ಬಡ್ಡಿಗೆ [illegible] ರಂತೆ, [illegible] ರಂತೆ ಸಹ ಬಡ್ಡಿ [illegible] ವಿಧಿಸಿದ್ದಾರೆ. ಈ ಬಡ್ಡಿಯ ರಕಮು [illegible] ಕೊಂಡಿದ್ದರೆ ಇನ್ನು [illegible] ಈ ಪ್ರಕಾರ ಕ್ರಮ ನಡೆದಲ್ಲಿ ಕೃಷಿಕರಲ್ಲಿ [illegible] ಬಡ್ಡಿ [illegible] ಬಡ್ಡಿಯ [illegible] ಸಹಕಾರಿ ಕೋರ್ಟುಗಳಲ್ಲಿ [illegible] ಮುಂದಿನ ವರ್ಷದ ಕ್ರಮಕ್ಕೆ [illegible] ಸಹಕಾರಿ ಸಂಘವು [illegible] ಸಾವಕಾರರಿಗಿಂತ ಕಠಿಣವಾಗಿ [illegible]ರಿಗಿಂತ ಹೆಚ್ಚಿನ ಭದ್ರತೆ ಕೊಂಡು ಹೆಚ್ಚಿಚ್ಚಿನ ರಕಮು ವಸೂಲ ಮಾಡಿದರೂ ಲೋಕೋಪಕಾರದ ಬಿರುದಿಗೆ ಕುಂದಿಲ್ಲ. ಹೀಗಾಗುವದು ಕ್ಷೇಮಕರವಲ್ಲ. ಆದರಿಂದ ಮಿ| ಪಂಜಾಬಿಯವರು ವಿಚಾರಮಾಡಿ ಸರ್ಕ್ಯುಲರನ್ನು ಹೊರಡಿಸಿ ಫೈಸಲೆ ರಕಮು ನಾಲ್ಕರಿನ ಬಡ್ಡಿಯ ರಕಮನ್ನು ಕುಗ್ಗಿಸುವಂತೆ ಅಪ್ಪಣೆ ಮಾಡಬೇಕಾಗಿ ವಿನಂತಿ. ಫೈಸಲೆಯ ರಕಮು ಕಂತುಗಳಿಂದ ವಸೂಲಾಗುವಂತೆ ಏರ್ಪಡಿಸಬೇಕಾಗಿಯೂ ವಿನಂತಿ. ಸಹಕಾರಿ ಸಂಘಗಳಿಗೆ ಹಣದ ಅಡಚಣಿಯಿದ್ದರೆ, ಸರಕಾರವು ಸಾಲ ತೆಗೆದು ಪೂರೈಸಬಹುದು. ಶೇಕಡಾ ೩ ರಂತೆ ಬಡ್ಡಿಯಿಂದ ಸರಕಾರಕ್ಕೆ ಬೇಕಷ್ಟು ಸಾಲ ದೊರೆಯುತ್ತದೆ. ಈ ಸ್ಥಿತಿಯ ಪ್ರಯೋಜನ ಪಡೆದು ಸರಕಾರವು ಸಹಕಾರ ಸಂಘಗಳ ನೆರವಾದರೆ, ಸಹಕಾರದ ಪರೋಪಕಾರ ಸಾಗರದಲ್ಲಿ ಮುಳುಗಿ ಸಾಯುತ್ತಿರುವ ಬೇಸಾಯಗಾರರಿಗೆ ಜೀವದಾನ ಕೊಟ್ಟಂತಾಗುವದು. ಸಹಕಾರದ ಮೇಲೆ ಒಂದು ಲೋಕಾಪವಾದವು ದೂರವಾಗಿ ಸಹಕಾರವು ಸಾರ್ಥಕವಾಗುವದು. ಸದ್ಯಸ್ಥಿತಿಯಲ್ಲಿ ಸರಕಾರವು ಇಷ್ಟಾದರೂ ಉಪಕಾರ ಮಾಡಬಹುದಲ್ಲವೇ?

———

೫ 'ಒಡಿಸುವವರು ನಮ್ಮವರಿದ್ದರೆ ಎಲ್ಲಿ ಕೂತರೇನು?' ಎಂಬ ನಾಣ್ಣುಡಿ ಎಲ್ಲರಿಗೂ ಗೊತ್ತಿದ್ದ ವಿಷಯವೇ! ಮುಂಬಯಿ ಸರಕಾರವು ಪ್ರಾಥಮಿಕ ಶಿಕ್ಷಣ ಕಾಯಿದೆಯಲ್ಲಿ ಹೊಸ ಕಾನೂನನ್ನು ಏರ್ಪಡಿಸಿ ಈ ನಾಣ್ಣುಡಿಯ ಮಾತನ್ನು ಸಿದ್ಧಪಡಿಸಿದೆ. ಸರಕಾರವು ಕಳೆದ ಮಾರ್ಚ ೧೬ನೇ ತಾರೀಖಿಗೆ ಒಂದು ಜಾಹೀರನಾಮೆಯನ್ನು ಪ್ರಕಟಿಸಿ ಪ್ರಾಥಮಿಕ ಶಿಕ್ಷಣ ಕಾನೂನಿನಲ್ಲಿ ತಿದ್ದುಪಡಿ ಮಾಡಿದೆ. ಅದೇನಂದರೆ — ಗಂಡನಾಗಲಿ ಹೆಂಡತಿಯಾಗಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿದ್ದಲ್ಲಿ ಹೆಂಡತಿಯಾಗಲಿ ಗಂಡನಾಗಲಿ ಜಿಲ್ಲಾ ಬೋರ್ಡ ಇಲ್ಲವೆ ಸ್ಕೂಲ ಬೋರ್ಡಿನ ಸಭಾಸದರಾಗಲು ಅನರ್ಹರು. ಅಸ್ತಿಕರು ಸಂಸ್ಥೆಗಳಲ್ಲಿ ನೌಕರರಾಗಿದ್ದಲ್ಲಿ ಪಾರ್ಲ್ಯಾಮೆಂಟರಿ ಸಂಸ್ಥೆಯ ಸಭಾಸದರಾಗಬಾರದೆಂದು ಕಾಯಿದೆಯಲ್ಲಿ ಸ್ಪಷ್ಟ ನಿಯಮ

ವಿಜಯನಗರಂ ಡಾ|| ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಮತ್ತು ಸ್ಪ್ಲೀನ್ ಔಷದಗಳು.

ಒಬ್ಬ ಪ್ರಸಿದ್ಧ ಡಾಕ್ಟರರ ಅಭಿಪ್ರಾಯ —

'ಕಳೆದ ಹತ್ತು ವರ್ಷಗಳ ವೈದ್ಯಕೀಯ ಅನುಭವದ ಅಧಿಕಾರ ವಾಣಿಯಿಂದ ಹೇಳುವುದೇನಂದರೆ — ಶಿಶುವೈದ್ಯ ಪ್ರವೀಣ ಡಾ|| ಜಮ್ಮಿಯವರ ಲಿವರ ರೋಗದ ನಿವಾರಕ ಔಷಧಿಯು ಅತ್ಯಂತ ಫಲದಾಯಕವಾದುದು. ಇದರ ಪ್ರಚಾರದಿಂದ ಮಕ್ಕಳ ಮೃತ್ಯು ಸಂಖ್ಯೆಯು ಗಣನೀಯ ರೀತಿಯಲ್ಲಿ ಕಡಿಮೆಯಾಗಿದೆ!'

(ರುಜು) ಡಾ| ಟಿ ಕೆ ನಟೇಶನ್,

— ಮಕ್ಕಳ ಭಯಂಕರವಾದ ಲಿವರ್ ರೋಗವನ್ನು ನಿವಾರಿಸಿ ಆರೋಗ್ಯವಂತರನ್ನಾಗಿಯೂ ಆನಂದಭರಿತರನ್ನಾಗಿಯೂ ಮಾಡುವುದ ಅಂಗಡಿಗಳಲ್ಲಿ ದೊರಕುವ ಬೇರೆ ಮದ್ದುಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ!

ಜಮ್ಮಿ ವೆಂಕಟರಮಣಯ್ಯ, ಮೈಲಾಪುರ, ಮದ್ರಾಸ.

ಸೋಲ ಏಜಂಟ —

ಡಿ. ಎಸ್. ಕೋಳಿವಾಡಕರ್, ಕುಮಟಾ. (೮೫)

ಎದೆ ದಾಂಪತ್ಯದಷ್ಟು ನಿಕಟ ಸಂಬಂಧ ಲೋಕದಲ್ಲಿ ಬೇರೊಂದಿಲ್ಲ ಆದ್ದರಿಂದ ಸಭಾಸದರಾಗಿದ್ದರೆ, ಅವರ ಹೆಂಡತಿಗೆ ಹೆಚ್ಚಿನ ಅನುಕೂಲ್ಯ ದೊರೆತು ಇತರರಿಗೆ ಅನ್ಯಾಯವಾಗುತ್ತದೆಂದು ಈ ನಿಯಮದ ಏರ್ಪಾಟಾಗಿದೆ. ದಾಂಪತ್ಯ ಸಂಬಂಧವಿದ್ದಲ್ಲಿ ಪಕ್ಷಪಾತವಾಗುವದು ಸಹಜವಿದೆ. ಹೀಗಿದ್ದು ಸರಕಾರವು ಈ ಪಡ್ಡತನವನ್ನು ಹೀಗೆ ಮಾಡಿತೆಂದು ತಿಳಿಯುವದು ಕಠಿಣ.

೧೦ ಚೌಕಶಿ ಮಾಡಿದ್ದಲ್ಲಿ ಕುಲಾಬಾ ಜಿಲ್ಲೆಯ ಲಗಿನ ರಾ| ನಾ ನಾ ಪಾಟೀಲ ದಂಪತಿಗಳು ಈ ತಿದ್ದುಪಡಿಗೆ ಕಾರಣರೆಂದು ತಿಳಿಯುತ್ತದೆ. ರಾ| ಪಾಟೀಲರವರು ಕುಲಾಬಾ ಜಿಲ್ಲಾ ಬೋರ್ಡಿನ ಸಭಾಸದರು, ಸ್ಕೂಲ ಬೋರ್ಡಿನ ಚೇರಮನ್ನರು. ಅವರ ಪತ್ನಿ ಸ್ಕೂಲ ಬೋರ್ಡಿನಲ್ಲಿದ್ದ ಶಾಲೆಯ ಮುಖ್ಯಾಧ್ಯಾಪಿಕೆ. ಈ ಚುನಾವಣೆಯಾದದ್ದು ತಾರೀಖು ೩೦—೭—೧೯೩೩ನೇ. ಸ್ಕೂಲ ಬೋರ್ಡ ಮತ್ತು ಜಿಲ್ಲಾ ಬೋರ್ಡಗಳ ಕಾಯಿದೆಯಂತೆ ಅವರ ಸದಸ್ಯತ್ವವೂ, ಸಭಾಪತಿತ್ವವೂ ರದ್ದಾದವಾಗಿ ಪ್ರಕಟಣ ಹೊರಡಿಸಬೇಕೆಂದು ರಾ| ಸಪ್ರೇಯವರು ತಾ ೧೩—೮—೧೯೩೩ನೇ, ಮಧ್ಯ ದಕ್ಷಿಣ ಭಾಗದ ಕಮಿಶನರರ ಕಡೆ ಅರ್ಜಿ ಮಾಡಿದರು. ಆ ಪ್ರಕರಣ ಸರಕಾರದ ಕಡೆ ಕಳಿಸಿದರು. ತಾ ೧೪—೧೧—೧೯೩೩ನೇ ಕಮಿಶನರರ ಕಡೆಯಿಂದ ಉತ್ತರ ಬಂತು. ಡಿಸೆಂಬರ ತಿಂಗಳಿನಿಂದ ಸರಕಾರಕ್ಕೆ, ಗವ್ಹರ್ನರರ ಪ್ರೈವ್ಹೇಟ ಸೆಕ್ರೆಟರಿಗಳ ಕಡೆಗೆ, ಸಾ| ಗವ್ಹರ್ನರರಿಗೆ ರಾ| ಸಪ್ರೇಯವರು ಅರ್ಜಿ ಮಾಡಿಕೊಳ್ಳುತ್ತ ಬಂದರು. ತಾ ೨೪—೩—೧೯೩೪ನೇ ಸರಕಾರಿ ಗೆಝೆಟಿನಲ್ಲಿ ಪ್ರಕಟವಾದ ತಾ ೧—೩—೧೯೩೪ನೇ ನಿಯಮ ದುರುಸ್ತಿಯ ಪ್ರಕಟಣೆ ಹೊರಡಬೇಕಾಗಿ ತಾ ೨೩—೬—೧೯೩೪ನೇ ಅರ್ಜಿಗೆ ಉತ್ತರ ಬಂತು. ದಾಂಪತ್ಯ ಸಂಬಂಧವು ಅಪಾಯಕರವೆಂದು ಇದರ ಅಭಿಪ್ರಾಯ. ಈ ಪ್ರಕಟಣ ತಾ ೧೬—೩—೧೯೩೪ನೇ ಪ್ರಕಟವಾದಾಗ್ಯೂ, ತಾ ೩—೮—೧೯೩೪ನೇ ಯಿಂದ ಇದು ಜಾರಿಯಲ್ಲಿ ಬರುವದಾಗಿ ಪ್ರಕಟವಾದ ನಿಯಮ ಹುಟ್ಟುವ ೭ ತಿಂಗಳು ಮುಂಚೆಯೇ ಕಾಯಿದೆಯ ಅನುಲಬಾವಣೆ! ಅದಾಗ್ಯೂ, ರಾ| ಸಪ್ರೇಯವರ ಮತ್ತೊಂದು ಆಕ್ಷೇಪ. ರಾ| ಪಾಟೀಲರು ಚೇರಮನ್ನರಾದದ್ದು ತಾ ೩೦ ೭ ೩೩ ನೇ ಇಂದರೆ, ತಾ ೩-೮-೩೩ ನೇ ಪೂರ್ವದಲ್ಲಿ, ಅದರಿಂದ ಈ ನಿಯಮದ ಪ್ರಯೋಜನ ಅವರಿಗೆ ದೊರೆಯದೆಂದು ರಾ| ಸಪ್ರೇಯವರ ಆಕ್ಷೇಪ. ಒಂದು ಆಕ್ಷೇಪದ ವಿಚಾರವಾಗಲಿಕ್ಕೆ ಸರಾಸರಿ ೧ ವರ್ಷ ತಗಲಿತು! ಎರಡನೇ ಆಕ್ಷೇಪದ ವಿಚಾರವಾಗುವದರಲ್ಲಿ ಇನ್ನೆರಡು ವರ್ಷ ಕಳೆಯುತ್ತ ಬಂದರೆ, ಹೊಸ ಚುನಾವಣೆ ಸಮೀಪಿಸಿ ಬಂದದ್ದರಿಂದ ಈ ಆಕ್ಷೇಪದ ವಿಚಾರ ಮಾಡುವದು ಅವಶ್ಯವಿಲ್ಲವೆಂಗೆ ಶರಾ ಹೊಡೆದು ಉತ್ತರ ಕಳುಹಲನುಕೂಲ. ರಾ| ಪಾಟೀಲರು ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಿದ್ದಾರೇನೋ ನಿಜ. ಆದರೆ, ಮುಂಬಯಿ ಸರಕಾರವು ಸಮಾನ್ಯ ಸಭ್ಯತನವನ್ನು ಸಹ ತೊರೆದು ಅವರ ಅಭಿಮಾನ ಹಿಡಿಯುವದೇಕೆ? ರಾ| ಪಾಟೀಲರಾದರೂ ಸಭಾಸದ ಸಭಾಪತಿಸ್ಥಾನಗಳಿಗೆ ಹಾತೊರೆಯ ಸದೇಕೆ? ಒಳಗುಟ್ಟೇನಾದರೂ ಇರಲೇಬೇಕೆಂದು ಜನಸಾಮಾನ್ಯರು ತರ್ಕಿಸುತ್ತಾರೆ. ಇಷ್ಟೆಲ್ಲ ಗೊಂದಲ ಮಾಡುವದಕ್ಕಿಂತ ಬೋರ್ಡ ಕಾಯಿದೆಯ ಕಲಮುಗಳು ರಾ| ಪಾಟೀಲರ ಮಟ್ಟಿಗೆ ಲಾಗು ಇಲ್ಲವೆಂದು ಸರಕಾರವು ಪ್ರಕಟಣ ಹೊರಡಿಸಿಬಿಟ್ಟಿದ್ದರೆ, ರಾ| ಸಪ್ರೇಯವರು ನಿರುತ್ತರರಾಗುತ್ತಿದ್ದರು, ಸರಕಾರದ ಮನೋಗತವು ಸ್ಪಷ್ಟವಾಗುತ್ತಿತ್ತು.

೧೧ ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯ ತಯಾರಿ ಭರದಿಂದ ನಡೆದಿದೆ. ಮಹಾತ್ಮರ ಪ್ರಕಟಣೆಯಿಂದ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಬಹಳ ಮಹತ್ವ ಬಂದಿದೆ. ಈಗಿನಿಂದಲೇ ಪ್ರೇಕ್ಷಕ ಟಿಕೀಟುಗಳಿಗೆ ಬಹಳ ಗಿರಾಕಿ. ಸ್ವಾಗತ ಸಮಿತಿಯ ಸಭಾಸದರ ಟಿಕೀಟುಗಳು ಖರ್ಚಾದವು. ಒದರಿಂದ ಪ್ರೇಕ್ಷಕರ ಟಿಕೀಟು ಪಡೆಯಲು ಸರ್ವಸ್ತರೂ ಆತುರಪಡುತ್ತಾರೆ. ಸ್ವಾಗತ ಸಮಿತಿಯವರು ರೂ ೫೦೦೦, ರೂ ೩೦೦೦, ರೂ ೨೦೦೦, ರೂ ೧೦೦೦, ರೂ ೫೦೦, ರೂ ೧೦೦ ರ ಪ್ರೇಕ್ಷಕ ಟಿಕೀಟುಗಳನ್ನು ಹೊರಡಿಸಿದ್ದಾರೆ. ಬಡವರಿಗಾಗಿ ರೂ ೨ರ ಟಿಕೀಟುಗಳ ಏರ್ಪಾಟಾಗಿದೆ. ವಿಷಯ ನಿರ್ಧಾರಕ ಸಭೆಗೆ ಹೋಗಬಯಸುವ ಪ್ರೇಕ್ಷಕರು ರೂ ೨೫ರ ಟಿಕೀಟು ಪಡೆಯಬೇಕು. ಖಾದಿ ಪ್ರದರ್ಶನದ ಕಟ್ಟಡಕ್ಕಾಗಿ ದಿನಾ ೧೨೦೦ ಕೂಲಿ ಆಳುಗಳು ಕೆಲಸ ಮಾಡುತ್ತಿದ್ದಾರ. ಇದೇ ತಿಂಗಳ ೨೫ನೇ ತಾರೀಖಿಗೆ ಇದರ ಉದ್ಘಾಟನೆಯಾಗಿ ಇದರ ೧೨೦೦೦ ವಿದ್ಯುದ್ದೀಪಗಳ ವ್ಯವಸ್ಥೆಯಾಗಿದೆ. ಬಾಬು ರಾಜೇಂದ್ರ ಪ್ರಸಾದರವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗುವರು. ಅವರೊದನೆ ಸಮಸ್ತ ಮಾತನಾಡಿ ಕರತರುವ ಕಾರ್ಯಕ್ರಮ ನಿಶ್ಚಯಿಸಿ ಲೋಸುಗ ಮುಂಬಯಿಯಿಂದ ಸ್ವಾಗತ ಕಮಿಟಿಯ ಪ್ರತಿನಿಧಿಗಳು ಪಟಣಾ ಪಟ್ಟಣಕ್ಕೆ ಹೋಗುವರು. ಕಲ್ಯಾಣ ಸ್ಟೇಶನಿನಿಂದ ಬೋರಿಬಂದರ ಸ್ಟೇಶನಿಗೆ ಅಧ್ಯಕ್ಷರಿಗ ಕರತರುವದಕ್ಕಾಗಿ ಸ್ಪೇಶಲ ಉಗಿಬಂಡಿಯ ವ್ಯವಸ್ಥೆಯಾಗುವದು. ಅಕ್ಟೋಬರ ೨೫ನೇ ತಾರೀಖ ಕಾರ್ಯಕಾರಿ ಮಂಡಳದ ಸಭೆ ವಿಷಯ ಸೂಚನೆಗಳನ್ನು ಕಾರ್ಯಕಾರಿ ಮಂಡಳದಲ್ಲಿ ಸ್ವೀಕರಿಸುವವರಿದ್ದಾರೆ. ಅಖಿಲ ಭಾರತೀಯ ಕೇಂದ್ರ ಕಮಿಟಿಯಲ್ಲಿಯೂ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿಯೂ ಮಹಾತ್ಮರು ಹಾಜರಾಗುವರೇನೆಂಬುದು ಇನ್ನೂ ನಿಶ್ಚಿತವಾಗಿಲ್ಲ. ಅಂತು ಈ ತಿಂಗಳಲ್ಲಿ ಸೇರಲಿಕ್ಕಿದ್ದ ಮುಂಬಯಿಯೊಳಗಿನ ೪೮ ನೇ ರಾಷ್ಟ್ರೀಯ ಸಭೆಯ ಅಧಿವೇಶನವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿರಸ್ಮರಣೀಯವಾಗುವದೆಂಬುದರಲ್ಲಿ ಸಂದೇಹವಿಲ್ಲ.

— ಕುಮಾರಿ ಮಿಸ್ ಒ'ನೀಲವರು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟು ಸಂತೈಸಬೇಕು ಅತ್ಯವಶ್ಯವೆಂದು ಇಂಗ್ಲಂಡದಲ್ಲಿ ಪ್ರಚಾರ ಮಾಡಿ ತಾ ೩ ನೇಗೆ ಅಮೇರಿಕೆಗೆ ತೆರಳುತ್ತಾರೆ. ಅಲ್ಲಿಂದ ಅಕ್ಟೋಬರ ೩೦ ನೇ ತಾರೀಖಿಗೆ ಹೊರಟು ನವೆಂಬರ ಪಕ್ಷದಲ್ಲಿ ಬಂದು ನವೆಂಬರ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬಂದು ತಲ್ಪುವರು.

— ಜಪಾನ ದೇಶದಲ್ಲಿ ಕಳೆದ ವಾರ ಸಂಭವಿಸಿದ ಬಿರುಗಾಳಿ ಓಸಾಕಾ, ಕಿಯೋಟೊ, ಹಿಯೋಗೋ ಮೊದಲಾದ ಪ್ರದೇಶಗಳಲ್ಲಿ ಭಯಂಕರ ನಷ್ಟ ೬೦೦-೫೦೦ ಜನರು ಗಾಯಗೊಂಡರು ೭-೮ ಸಾವಿರ ಮನೆಗಳು ಬಿದ್ದುಹೋದವು, ೧೯೦ ಶಾಲೆಗಳು ಕುಸಿದುಬಿದ್ದವು. ಸೂಂಟರಗಾಳಿ ಮುಂಜಾವಿನ ಬೀಸಿತು. ವಿದ್ಯಾರ್ಥಿಗಳು ಶಾಲೆಗಳಲ್ಲಿ ನಾಶಕಳೆಯ ಕ್ಕಿದ್ದಾಗ ಈ ಅನರ್ಥ!

— ಕೊಲ್ಹಾಪುರ ಸಂಸ್ಥಾನದ ಒಂಕಲಿ-ಮಂಜರಿ ಗ್ರಾಮಗಳ ಮಧ್ಯದಲ್ಲಿ ಕೃಷ್ಣಾ ನದಿಯನ್ನು ದಾಟು ತ್ತಿದ್ದಾಗ ತೆರೆಯ ಪ್ರವಾಹಕ್ಕೆ ಹರಿಗೋಲು ಮುಗುಚಿ ಬಿತ್ತು. ದೋಣಿಯಲ್ಲಿ ೩೫ ಜನರಿದ್ದರು ೧೦ ಜನರು ಒಮುಕಿದರು. ೧೫ ಜನರು ತಿಂದುಕೊಂಡದ್ದರಿಂದ ಸಿಗಲಿಯುತ್ತದೆ. ಉಳಿದವರ ಪತ್ತೆಯಿಲ್ಲ. ಈ ಅನರ್ಥದಲ್ಲಿ ಹಿಂದುಸ್ಥಾನಿ ಸೇವಾದಳದ ರಾ| ಶ್ರೀನಿವಾಸ ನಾಯಕರೂ ಇದ್ದರಂತೆ.

— ಕಲ್ಕತ್ತಾದ ಸಂಸ್ಥಾನದ ಒಂದು ಪೇಟೆಯಲ್ಲಿ ೬ ಆಳುಗಳು ಸೊಪ್ಪಿಗೆ ಹೋಗಿದ್ದರು. ಒಂದು ಪೊದರಿನಲ್ಲಿ ಹಾವು ಕಂಡರು. ಹಾವಿಗೆ ಹೊಡೆಯ ಬೇಕನ್ನುವಷ್ಟರಲ್ಲಿ ಅದು ಪ್ರೊಂದು ಪೊದರು ಸೇರಿತು. ಹಾವು ಹೊಕ್ಕಿದ ಪೊದರಿಗೆ ಇವರು ಬೆಂಕಿ ಹಚ್ಚಿದರು. ವಿಷದ ಹೊಗೆ ಹಾರಿಬಂದು ೬ ಜನರು ಉರಿಕೊಂಡರು, ಒಬ್ಬನ ಕಣ್ಣು ಹೋಯಿತು! ವಿಷಪ್ರಾಣಿಗಳ ಗೊಡವೆಗೆ ಹೋಗುವವರು ಜಾಗೃತೆಗೊಳ್ಳಬೇಕು.

ಅಲ್ಲಲ್ಲಿ ಇಷ್ಟಿಷ್ಟು!

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

ಪಂಜಾಬ ಸರಕಾರವು ಒಂದು ಗಡಿಬಿಡಿಯಲ್ಲಿ ಬಿದ್ದಿದೆ. ಒಂದು ಬೀಜದ ಕತ್ತೆ ಕಳೆಯಿತು. ಅದಕ್ಕೆ ಮಹಮ್ಮದ ಎಂದು ಹೆಸರಿಟ್ಟದ್ದರಿಂದ ಅದರಿಂದ ಇಸ್ಲಾಮು ಧರ್ಮದ ಅವಮಾನವಾಯಿತೆಂದೂ, ಮುಸಲ್ಮಾನರ ಕನಸಿನ ಈ ದನರು ಪೋಯಿತೆಂದೂ ಒಬ್ಬ ಮುಸಲ್ಮಾನ ಹುಡುಗನು ಕತ್ತೆ ಸೆರೆಹಿಡಿದವರನ್ನು ಕೊಲ್ಲುವೆನೆಂದು ಹೊರಟಿದ್ದನೆಂದು ಒಂದು ವಾರ್ತೆಯಲ್ಲಿ ಆಗ ಹೊರಬಿದ್ದಿದೆ. ... ಆ ವಿಷಯದಲ್ಲಿ ಕತ್ತೆಯ ... ಮಾಲಿಕರ ... ರೋಚನೆಯಿಂದ ಆತ ಹಾಗೆ ಹೆಸರಿಟ್ಟನೆಂದೂ ಬಾವಿಯಲ್ಲಿ ಪೋಲೀಸರ ... ಹಿಡಿದು ಒಪ್ಪಿಸಿದರೆಂದೂ ಪ್ರಕಟವಾಗಿದೆ. ಕತ್ತೆಯ ಹೆಸರು 'ಮಹಮ್ಮದ' ಅಂದರೆ ದೇವರಲ್ಲ 'ಆಹದ ಕ' ಅಂದರೆ ... ಇದನ್ನು ಬದಲಿಸಿ ಪಂಜಾಬ ಸರಕಾರವು ಕತ್ತೆಗೆ 'ಬಿಡುಗಡೆ' ಎಂಬ ಹೆಸರನ್ನಿಟ್ಟಿದೆ.

* * *

ಕೋಟೀನ ಸಂಸ್ಥಾನದವರು ಕ್ರೈಸ್ತ ಸಂಘರ್ಷದ ಉಪಾಯಗಳನ್ನು ಸೂಚಿಸುವದಕ್ಕಾಗಿ ರಾಜಧಾನಿಯ ... ನವರಾಗಿರುವ ಅಧ್ಯಕ್ಷರಲ್ಲಿ ಕ್ರೈಸ್ತ ಹಸ್ತದ ಮಂಡ ಳವೊಂದನ್ನು ನೇಮಿಸಿ ವಿಚಾರ ನಡೆಸಿದೆ. ಆ ವಿಷಯದ ಮೇರೆ ಸಾವಿರಾರು ಜನ ಕ್ರೈಸ್ತರ ಪ್ರತಿಷ್ಠೆ ಬೇಕಾದರೆ ಕ್ರೈಸ್ತ ಧರ್ಮದಲ್ಲಿ ಇದ್ದು ಹಿಂದೂ ಆಗಬೇಕಾಗಿ ಅವರ ಸಂಘಟನೆ ... ಕಾಲದಲ್ಲಿ ದೊಡ್ಡ ದೊಡ್ಡ ಗ್ರಂಥಗಳು ಬಿಲ್ಲುಬಿಂದಲೇ ಬಾಯಿಪಾಠ ಮಾಡಿಕೊಂಡ ಪಂಡಿತ ಹಿತಕರವೆಂದು ಅವರ ಅಂಬೋಣ. ದೇಶಭಾಷೆಗಳಿಂದ ಬೋಧಕ ವಿಷಯಗಳನ್ನು ಕಲಿಸತಕ್ಕದ್ದು, ಬಜೆ ದಿನಗಳಲ್ಲಿ ದವಖಾನೆ ತೆರೆಯಬೇಕು, ... ಇವರ ಅಂಬೋಣ ಬ್ರಿಟಿಷ ಹಿಂದುಸ್ಥಾನದೊಳಗಿನ ವಿದ್ಯಾಧಿಕಾರಿಗಳು ವಿಚಾರ ಮಾಡತಕ್ಕ ವಿಷಯ.

* * *

ಬಿಹಾರ ಪ್ರಾಂತಗಳಲ್ಲಿ ನೆರೆಯಿಂದ ಬಹಳ ಕಷ್ಟ ದಿನಗಳಿಗೆ ಮುಕ್ಕಿಲ್ಲ. ಜನರಿಗೆ ಕಾಲಿಲ್ಲ. ಬಡ ಜನರು ಕೈಗೆ ಸಿಕ್ಕಿದ್ದನ್ನು ತಿಂದು ಬೇಸರಿದ್ದು ಸಾಯುತ್ತಿದ್ದಾರೆ. ಕಾಲರಾ, ಚಳಿಜ್ವರ, ಅತಿಸಾರ ಮೊದಲಾದ ಬೇನೆಗಳಿಂದ ಜನರು ನೊಣಗಳಂತೆ ಪರಲೋಕ ಸೇರುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ಹಲವೆಡೆ ... ಸಹ ಮಾಡುತ್ತಿದ್ದಾರೆ. ಮಕ್ಕಳಿಗೆ ಜೀವನ ಮಾರಲಾಗದ ಕಲ್ಲಿನಂಥವರೂ ಉಂಟು. ಉಪಚಾರ ಪಡೆಯಲಿಕ್ಕೆ ದವಾಖಾನೆಗಳಲ್ಲಿ ಔಷಧಗಳಿಲ್ಲ, ಬಂಗಾಲವು ಜನರಿಂದ ತುಂಬುತ್ತಿದೆ. ೨॥ ಲಕ್ಷ ಜನರು ಈ ಪ್ರಕಾರ ನರಳುತ್ತಿದ್ದಾರೆ. ಆದರೆ ಈ ದುಃಖದಲ್ಲಿ ಒಂದು ಸುಖ ಬಿಹಾರ ಕಾಂಗ್ರೆಸ್ಸಿನಲ್ಲಿ ಬಡ ಜನರಿಗೆ ಹೊಟ್ಟೆ ತುಂಬ ಸೇರಿ ಕೂಡಿಯ ಕೆಲಸವಂತೆ ಹೊಸ ಕಾಯಿದೆಯಾಗಿದೆ ಅದೊಂದು ಒಳ್ಳೆ! ಆದರಿಂದ ಹೆಂಡಗುಡುಕರು ರಾಜವಾಗದ ಮೇಲೆ ನರಿಗಳಂತೆ ಬಡಿದಾಡಿಕೊಳ್ಳುವದನ್ನು ನೋಡಲಾಗುವದಿಲ್ಲೆಂದು ಕಲಕತ್ತೆಯ 'ಅಮೃತ ಬಜಾರ' ಪತ್ರಿಕೆಯು ಮರುಗುತ್ತದೆ! ಇದೆಂಥ ನಮೂನೆ? ಕಾಗೆ ಗತಿಯಿಲ್ಲದ್ದಾಗಿ, ಹೆಂಡಗೇನೂ ತೊಂದರೆಯಿಲ್ಲ.

* * *

ಕೊನೆಗೆ ರಾಜಪುತ್ರ ಜಾರ್ಜರ ಮಂಗಲೋತ್ಸವದ ದಿನ ನಿಶ್ಚಯವಾಯಿತು! ನವಂಬರ ೨೯ನೇ ತಾರೀಖಿಗೆ ಬ್ರಿಟಿಶ ಸಾಮ್ರಾಜ್ಯದಲ್ಲೆಲ್ಲ ಆನಂದ ಸಾಮ್ರಾಜ್ಯ!! ಆ ದಿನ ಯುಗೋಸ್ಲಾವಿಯಾದ ರಾಜಪುತ್ರಿ ಮರಿನಾ ಅವರು ಜಾರ್ಜ ರಾಜಪುತ್ರರೊಡನೆ ಲಂಡನ್ನಿನಲ್ಲಿ ಮದುವೆಯಾಗುತ್ತಾರೆ. ರಾಜಪುತ್ರನು ಯಾರೊಡನೆ, ಹೇಗೆ ಹೋಗಬೇಕು, ಅವರ ಹಿಂದೆ ಚಕ್ರವರ್ತಿ ಪಂಚಮ ಜಾರ್ಜರು ಮಹಾರಾಣಿ ಮೇರಿಯವರೊಡನೆ ಹೇಗೆ ಕಾಲು ಹಾಕಬೇಕು, ಮೇರಿನಾ ರಾಜಪುತ್ರಿಯು ಹೇಗೆ ಹೋಗಬೇಕು, ಎಂಬುದರ ಕುರಿತು ಚರ್ಚೆಯಾಗಿ ಕಾರ್ಯಕ್ರಮವು ಸಿದ್ಧವಾಗುತ್ತಿದೆ. ಚಕ್ರವರ್ತಿ ಪಂಚಮ ಜಾರ್ಜ ಭೂಪಾಲರ 'ಬಕಿಂಗ್‌ಹ್ಯಾಮ'ದೊಳಗಿನ ಅರಮನೆಯಲ್ಲಿ ಆಗಿನ ಹೊಸ ಮರವಣಿಗೆಯ ಅಪ್ರತಿಮವಾದ ಒಂದು ನರ್ತನವಾಯಿತು. ಮಾಗಿಯ ಮೇರಿಯವರಿಗೆ ಇದನ್ನು ನೋಡಿ ಆಶ್ಚರ್ಯವಾಯಿತೆಂದು ಪ್ರಕಟವಾಗಿದೆ. ನರ್ತನದಲ್ಲಿ ಮರಿನಾ ರಾಜಪುತ್ರಿಯೂ ತುಂಬಾ ಪ್ರವೀಣಳೆಂದು ಲಂಡನ್ನಿನೊಳಗಿನ ಉಚ್ಚ ಸಮಾಜದವರಲ್ಲೆಲ್ಲ ಬಹಳ ಹೊಗಳಿಕೆ!

* * *

ರಷ್ಯದ ಜಪಾನಿಯರ ದುಸರಿಗಳು, ರಷ್ಯದ ಕ್ರೆಸ್ತ ಜಪಾನಿನ ಬಗೆ ಸೇರುವದಿಲ್ಲ! ಜಪಾನ ದೇಶದೊಳಗಿನ ಪತ್ರಿಕೆಗಳಲ್ಲಿ ಆ ದೇಶದೊಳಗಿನ ಕೆಲ ಸಂಗತಿಗಳು ಪ್ರಕಟವಾಗಿವೆ. ಅವುಗಳೊಳಗಿನ ಕೆಲ ಸಂಗತಿಗಳು ನಿಜವಾಗಿದ್ದರೆ ರಷ್ಯದ ಪ್ರಗತಿಯು ಸಾಕ್ಷಿಯಾಗಿದೆ. ರಷ್ಯಾ ದೇಶದಲ್ಲಿ ಇತ್ತೀಚೆಗೆ ಧನ-ಕರುಗಳ ಕೊರತೆ ಬಹಳ, ಆದದರಿಂದ ದನ ಕರುಗಳನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ರಷ್ಯಾ ದೇಶವು ನಿರ್ಬುದ್ಧಿಯಿಂದ ಸಾಕೊಡುತ್ತದೆ. ಕೈಗಾರಿಕೆಗಳನ್ನು ಅಭ್ಯಾಸಿಸುವದಕ್ಕಾಗಿ ಜನರಿಗೆ ಪ್ರೋತ್ಸಾಹಿಸುತ್ತಿದೆ! ಹಿಂದುಸ್ಥಾನ ಸರಕಾರವು ಈ ಉಪಾಯ ಕೈಕೊಳ್ಳಬಹುದು.

* * *

ಜಪಾನ ದೇಶದೊಳಗಿನ ಊರುಗಳಲ್ಲಿ ಇದೇ ಜುಲೈ ೧ನೇ ತಾರೀಖಿನಿಂದ ೧ನೇ ವರ್ಗದ ಪಟ್ಟಣಗಳಲ್ಲಿ ೩ನೇ ತರಗತಿಯವರ ಶೌಚಾಲಯಕ್ಕಾಗಿ ಬಚ್ಚಲ ... ಜಪಾನದೊಳಗಿನ ಟೋಕಿಯೋ 'ದೊಳಗಿನ ನಿಚಿನಿಚಿ ಪತ್ರಿಕೆಯು ಈ ಉಪಕ್ರಮವನ್ನು ಅಭಿನಂದಿಸುತ್ತದೆ. ಅನೇಕರು ಒಂದೇ ಯೋಗ್ಯತೆಯುಳ್ಳವರು ೧ನೇ ವರ್ಗದ ಟಿಕೀಟು ಕೊಳ್ಳುತ್ತಾರೆ ... ೧ನೇ ವರ್ಗದಲ್ಲಿ ಹೋಗುತ್ತಿದ್ದರು, ಹೀಗಾಗಿ ೩ನೇ ವರ್ಗದವರ ಕಷ್ಟಗಳನ್ನು ಮಾರಿಕೊಳ್ಳುತ್ತಿದ್ದಿಲ್ಲ. ೩ನೇ ವರ್ಗದ ಪ್ರವಾಸಿಗರಿಗೆ ಆರೋಗ್ಯವಾದದ್ದು ಈ ಪ್ರಕಾರ ನಿಚಿನಿಚಿ ಪತ್ರಿಕೆಯ ಅಭಿಪ್ರಾಯ ಹಿಂದುಸ್ಥಾನದಲ್ಲಿಯೂ ಇದೇ ಗತಿ. ಹಿಂದುಸ್ಥಾನದೊಳಗಿನ ಉಗಿಬಂಡಿಯ ೩ನೇ ತರಗತಿಯ ... ದನಗಳಂತೆ ಪ್ರವಾಸಿಗರಿಗೆ ಒಯ್ಯುತ್ತಾರೆ.

* * *

ಜಪಾನ ದೇಶದಲ್ಲಿ ಹೊಸ ಹೊಸ ಯಂತ್ರಗಳನ್ನು ತಯಾರಿಸುವ ಪ್ರಯೋಗ ನಡೆದಿದೆ. ... ಶಕ್ತಿಯಿಂದ ನಡೆಯುವ ಮೋಟಾರುಗಳನ್ನು ತಯಾರಿಸುತ್ತಿದ್ದಾರೆ! ಈ ನಮೂನೆಯ ಮೋಟಾರುಗಳು! ಮೊದಲನೇ ನವೆಂಬರ ೧೯೩೪ನೇ ಇಸ್ವಿ ಆಗಸ್ಟ ತಿಂಗಳಲ್ಲಿ ತಯಾರಾಗುವವು. ಉರುವಲು ಕಡಿಮೆ, ಸಾಹಿತ್ಯವೆಲ್ಲ ಜಪಾನ ದೇಶದೊಳಗಿನದೇ ಸಂಪೂರ್ಣವಾಗಿ ಸ್ವದೇಶೀ! ಬಾಂಗ್ಲಾ ಯಾನ ಒಡೆ ಇದ್ದಲಿಯಿಂದ ಮೋಟಾರುಗಳನ್ನು ಓಡಿಸುವ ವ್ಯವಸ್ಥೆಯಾಗುವದು! ಮೋಟಾರಿನ ಮುನ್ನಂತರದಲ್ಲಿ ಎಂಥೆಂಥ ಬದಲಾವಣೆಗಳಾಗುವವೋ ಕಾಣೆ!

* * *

ಬೆಳಗಾವಿ ಮ್ಯುನಿಸಿಪಾಲಿಟಿಯಲ್ಲಿ ಬಲು ದೊಡ್ಡ ಗದ್ದಲ! ಗವ್ಹರ್ನರರಾದ ಬ್ರೆಬರ್ನ ದೊರೆಗಳು ಅಕ್ಟೋಬರ ೩೧ನೇ ಆಗ ಅಲ್ಲಿ ಬರುತ್ತಾರೆ. ಮಾನಪತ್ರ ಕೊಡಬೇಕೋ, ಬಾರದೋ ಎಂಬ ಠರಾವಿನ ಮೇಲೆ ಬಿಸಿ-ಬಿಸಿ ಭಾಷಣಗಳಾದವು. ಮಾನಪತ್ರ ಕೊಡುವದರಿಂದ ಏನೂ ಪ್ರಯೋಜನವಿಲ್ಲವಾಗಿ ಡಾಕ್ಟರ ಕೀರಗುಂಡಿ ಮೊದಲಾದ ಸ್ವಾಭಿಮಾನಿ ಮೆಂಬರರು ಕಡು ವಿರೋಧ ಮಾಡಿದರು. ದುರ್ದೈವ ಠರಾವು ಬಹುಮತದಿಂದ ಮನ್ನಿಸಲಾಯಿತು. ನಾಗರಿಕರ ಪ್ರಚಂಡ ಸಭೆಯಾಗಿ ಮಾನಪತ್ರ ಕೊಡಬಾರದೆಂದು ಠರಾವಾಯಿತು. ದಳಕವಾಡಿಯೊಳಗಿನ ಮಾರ್ಗಕ್ಕೆ ಯಾವ ಹೆಸರು ಕೊಡಬೇಕೆಂಬುದರ ಕುರಿತು ಘನಘೋರ ಚರ್ಚೆ! 'ಕಾಂಗ್ರೆಸ ರೋಡ' ಎನ್ನಬೇಕೋ, 'ಮಹಮ್ಮದ ಅಲ್ಲಿ ರೋಡ' ಎನ್ನಬೇಕೋ, 'ಟಿಳಕ ರೋಡ' ಎನ್ನಬೇಕೋ, ಗವ್ಹರ್ನರರ ಆಗಮನದ ಪ್ರೀತ್ಯರ್ಥ 'ಬ್ರೆಬರ್ನ ರೋಡ' ಎನ್ನಬೇಕೋ? ಎಂಬುದೊಂದು ವಿವಾದ. ಮಹಮ್ಮದ ಅಲ್ಲಿ ಭಾವನವರು ಎಂಬುವರು ಇಲ್ಲಿನ ಶ್ರೀಮಂತ ಗೃಹಸ್ಥರಿದ್ದು, ಆ ಮಾರ್ಗಕ್ಕೆ ತಮ್ಮ ಹೆಸರು ಕೊಟ್ಟಲ್ಲಿ ತಾವು ೧೧೩೫ ನ್ನು ಕಾಣಿಕೆ ಕೊಡತಕ್ಕದ್ದಾಗಿ ಅವರು ತಿಳಿಸಿದ್ದರು. ಅನಾಯಾಸವಾಗಿ ಸಿಗುವ ಹಣವನ್ನು ಮ್ಯುನಿಸಿಪಾಲಿಟಿಯವರು ಸ್ವೀಕರಿಸಿ ಆ ಹೆಸರನ್ನು ಸಂಪಾದಿಸಿಕೊಳ್ಳಬೇಕಾಗಿತ್ತು. ಕೀರಗುಂಡಿಯವರು ಸೂಚಿಸಿದ ಸೂಚನೆ ಬಿದ್ದುಹೋಯಿತು. ಆ ಮೇಲೆ ಮೌಲ್ವಿ ಮಹಮ್ಮದ ಅಲ್ಲಿಯವರ ಸ್ಮಾರಕಾರ್ಥ 'ಮಹಮ್ಮದ ಅಲ್ಲೀ ಮಾರ್ಗ'ವೆಂದು ನಾಮಕರಣ ಮಾಡಬೇಕಾಗಿ ಶ್ರೀ ಮುಂಡರಗಿಯವರು ಸೂಚಿಸಿದ ಸೂಚನೆಯೂ ಬಿದ್ದುಹೋಯಿತು. 'ಕಾಂಗ್ರೆಸ ರೋಡ' ಎಂಬ ಸೂಚನೆಗೂ ಬಹುಮತ ಸಿಗಲಿಲ್ಲ. ಅಂತು 'ಟಿಳಕ ರೋಡ' ಎಂಬ ಸೂಚನೆಯೇ ಶಕ್ತವಾಗಿ ಬಹುಮತದಿಂದ ಮಾನ್ಯವಾಯಿತು. ಮಾನಪತ್ರ ಕೊಡುವ ಕುರಿತು ಬೆಳಗಾವಿಯಲ್ಲಿ ತೀವ್ರ ವಿರೋಧವಿದೆ. ಲೋಕ ಜಾಗೃತಿಯ ಲಕ್ಷಣ.

* * *

ನಮ್ಮ ಜಂಗಲ ಜಿಲ್ಹೆಗೂ ಒಂದು ಶುಭ ವರ್ತಮಾನ! ಜರ್ಮನಿಯೊಳಗಿನ 'ಮುಕ್ ಹಿವ್ ರೀನನ್' ಎಂಬುದೊಂದು ಸಕ್ಕರೆ ಕಾರಖಾನೆಯಿದೆ. ಅಲ್ಲಿ ಕಟ್ಟಿಗೆಯ ದಿಮ್ಮಿಯೊಳಗಿಂದ ೧ ಗ್ರಾಮದ ಸಕ್ಕರೆ ತಯಾರಿಸುತ್ತಿದ್ದರು, ದನಗಳಿಗೆ ಮತ್ತು ಹಂದಿಗಳಿಗೆ ಈ ಸಕ್ಕರೆ ಆಹಾರ ಸಿಗುತ್ತಿತ್ತು. ಇತ್ತೀಚೆಗೆ ಆ ಕ್ರಮವನ್ನು ಸುಧಾರಿಸಿ ಈಗ ತಯಾರಾಗುವ ಸಕ್ಕರೆ ಮನುಷ್ಯರಿಗೆ ಸಹ ಉಪಯೋಗವಾಗುವಂತೆ ವ್ಯವಸ್ಥೆಯಾಗಿದೆ. ಈ ಸಕ್ಕರೆ ತಯಾರಾಗಲು ಕ್ರಮಕ್ಕೆ ಎಷ್ಟು ವೆಚ್ಚ ಬೀಳುತ್ತದೆ ಎಂಬ ವಿವರ ಪ್ರಕಟವಾಗಿಲ್ಲ. ಆದರೆ ಬೆಟ್ಟಗಳಲ್ಲಿ ಹಾಳುಬಿದ್ದು ಹೋಗುವ ಕಟ್ಟಿಗೆಯಿಂದ ಪ್ರಾಪ್ತಿಯಾಗುವಂತಿದ್ದರೆ ಸರಕಾರವು ಪ್ರಯೋಗ ಮಾಡಿ ನೋಡಬಹುದು. ಜನರಿಗೊಂದು ಹೊಸ ಉದ್ದಿಮೆ ಹಚ್ಚಿಕೊಳ್ಳಲಿಕ್ಕಾಗುವದು.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು. ಇವೆ ಕಂಪೆನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents — D.K. NAYAK Bros.
Honavar Agent — R V PRABHU Esq.

K. Padmanabha Rao & Sons.
BELGAUM
Chief Agents for
Karnatak Districts & S. M. States

ಒಂದು ಸಾರೆ ಅನುಭವದಿಂದಲೇ
ಸತ್ಯತೆಯು ತಿಳಿಯುವದು!,
[ಶ್ರೀಶಪ್ರೇರಣೆಯಿಂದ
ಕೇರಳ ಪಾಶ್ಚಾತ್ಯ ಪದ್ಧತಿಗಳಿಂದ ಪರಿಶೀಲಿಸಿದ]

ಭಾವೀ ಫಲದಿಗ್ದರ್ಶನ.

ನಮ್ಮಾಲಯದಲ್ಲಿ ಜನ್ಮ ಟಿಪ್ಪಣಿಯನ್ನಾಗಲಿ ಜನ್ಮ ವೇಳೆಯನ್ನಾಗಲಿ ಇಲ್ಲವೆ ಪತ್ರ ಬರೆದ ವೇಳೆ, ಒಜವಾಸ್ ಪ್ರಾಯ ಒರೆನು ಕಾಲದ ವಿಷಯಕ್ಕೆ ತಕ್ಕ ಫಲ ತಯಾರಿಸಿ, ವ್ಹಿ. ಪಿ. ಯಿಂದ ಕಳಿಸಲ್ಪಡುವದು

ವರ್ಷಫಲಂಕ್ಕೆ ಪ್ರಶ್ನೆಗಕ್ಕೆ ಮೇಲಾಮೇಳಗಕ್ಕೆ
ರೂ ೨-೮-೦ ೧-೪-೦ ೧-೦-೦

ಇದಲ್ಲದೆ ಜಾತಕದ ಎಲ್ಲ ಕೆಲಸಗಳೂ ಗ್ರಹದೋಷ, ಬಾಲಗ್ರಹ, ದೃಷ್ಟಿ, ಪಿಶಾಚಬಾಧೆ ಇವು ಗಳ ನಿವಾರಣದ ಉಪಾಯಗಳೂ, ಪಕ್ಕೆ ರಕ್ಷೆಗಳೂ ತಯಾರಿಸಲ್ಪಡುತ್ತವೆ ಅಪೇಕ್ಷೆಯುಳ್ಳವರು ಹೆಚ್ಚಿನ ಮಾಹಿತಿಗ ಸ ಂಪ್ರು ಇಚ್ಛೆ ಪತ್ರ ದ್ವಾರ ಒರೆದಲ್ಲಿ ತಿಳಿಸಲ್ಪಡುವದು

ವಿಳಾಸ — ವಿ ರಾಂತಾರಾಮ,
ಬ್ರಹ್ಮಣಸ್ಪತಿ ಜ್ಯೋತಿಷಾಲಯ,
ಪೋ - ಶಿರಾಲಿ (ಚಿತ್ರಾಪುರ) ಜಿ ಉ ಕಾನಡಾ

ಒಂದಾಣೆ ಮಾಲೆ.

ಸಂಪಾದಕ — ಭಾಲಚಂದ್ರ ಘಾಣೇಕರ.

ವಾರ್ಷಿಕ ವರ್ಗಣಿ ಅಂಚೆ ಹೆಚ್ಚ ಸಂ೧ ರೂ ಮಾತ್ರ
ನಾನೇ ದಾಲಿಯ ಸಾಕ್ಷಿತ್ವ ಬಡವರ ರೊಟ್ಟಿ,
ತ್ಯಾಗದ ಗುಡಿ, ಸಿಡಿಲ ಕುಮಾರಿ, ಜೀವಮ್ರುಂಹ
ಎಂಬ ಪುಸ್ತಕಗಳು ಎಲ್ಲ ಕಡೆಗೂ ಪ್ರಖ್ಯಾತಗೊಂಡಿವೆ
ಬಿಡಿ ಪ್ರತಿಗ ೧|| ಆಣೆ ತಿಕೀಟು ಕಳಿಸಿರಿ
ಸಮಾಜೋನ್ನತಿ ಕಾರ್ಯಾಲಯ, ಧಾರವಾಡ

Siromani Udipi Narayan harya,
CHAUKHAMBA, BENARE ITY

S I N & CO
BENARES CITY

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಪೂರೈಸಿಕೊಳ್ಳಿರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32 ದರ 1ಕ್ಕೆ ರೂ 0 8 0ಯಿಂದ ರೂ. 100 ವರೆಗೆ, ಗೌರಿಶಂಕರ 1ಕ್ಕೆ ರೂ 3 8 0ದಿಂದ 35ರ ವರೆಗೆ ಮತ್ತು ಬೇರೆ ಮಾಲೆಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1 0ದ್ದಾಂಪು ಕಳಿಸಿದರೆ, 1ರಿಂದ ವರೆಗೆ 1 ವಿಶ್ವೇಶ್ವರನ ಪದ ನಮ್ಮ ಕಟಲಾಗು ಸಹ ಉಚಿತ ಕಳಿಸಲಾಗುವದು. ಪತ್ತೆ—

ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶೀ ಕ್ಷೇತ್ರ

कुमटा, अंकोला, कारवार.

प्र भा त ಪ್ರಭಾತ

या लाईनवर नियमित वक्तशीर जाणारी
एकच एक सर्वीस
दि प्रभात मोटर सर्विस.

THE PRABHAT MOTOR SERVICE.

THE ONLY SERVICE REGULARLY
& DAILY RUNNING BETWEEN

Kumta, Ankola & Karwar.

ಕುಮಟಾ, ಅಂಕೋಲಾ, ಕಾರವಾರ

ಈ ಲೈನಿನ ಮೇಲೆ ಪ್ರತಿ ನಿತ್ಯವೂ ನಿಯಮಿತವಾಗಿ
ಓಡ್ಯಾಡುವ ಒಂದೇ ಒಂದು ಸರ್ವಿಸ

ದಿ ಪ್ರಭಾತ ಮೋಟರ ಸರ್ವಿಸ.

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಸ್ಯದ ಪುಡಿ ಸುಲಭ ಕ್ರಯ,

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯುಲ್ಲಿಯ ರೋಗಗಳು. ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಇಲಿದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಹೋಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮಾತರು ಬೆಲ್ಲನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಮಾಡಿದರೆ ಬಹಳ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಯಾದರಿ ಸೀಸೆ ಖಚಿತ ಕಳಿಸಲಾಗುವದು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ ೨-೮-೦ ವಿ. ಪಿ. ೬ ಆ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

(Registered Trade Mark)

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦, ಮಾರ್ಕೆಟ್ಟಿನ ಮುಂದಾಸ

Notice.

The Canara Industrial & Banking Syndicate, Ltd., Kumta Branch.

The office hours of the above Branch will be as follows from 15th October 1934

on Week days:—

11 A.M. to 3-30 P.M.

on Saturdays:—

11 A.M. to 2 P.M.

Office:-Kumta, Dated 1 10 31. } *T. Ranga Pai, Agent.*

ಜಾಹೀರಾತು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಕುಮಟಾ ಬ್ರಾಂಚು

ಇದರ ಆಫೀಸು ಸಮಯವು ತಾ 15-10-34ರಿಂದ ಕೆಳಗೆ ಕಾಣಿಸಿದಂತೆ ಬದಲಾಯಿಸಲ್ಪಡುವದು

ಸೋಮವಾರದಿಂದ ಶುಕ್ರವಾರದ ವರೆಗೆ

ಪ್ರತಿ ದಿನ:—

೧೧ ಘಂಟೆಯಿಂದ ಸಾಯಂಕಾಲ ೩-೩೦ ರ ವರೆಗೆ

ಶನಿವಾರ ಮಾತ್ರ ಪ್ರತಿವಾರ:—

೧೧ ಘಂಟೆಯಿಂದ ಸಾಯಂಕಾಲ ೨ ಘಂಟೆಯ ವರೆಗೆ.

ಆಫೀಸು- ಕುಮಟಾ, ತಾರೀಕು 1-10-31 } ಟಿ. ರಂಗ ಪೈ, ಏಜಂಟ.

ಜಾಹೀರ ನೋಟೀಸು.

ಸ|| ಅಸರಿ ಅಗಸ್ತ್ಯಪುರ ಪ ಲಿಕ್ವಿಡೇಟರ ಬಳೆಗಾರ ಗ್ರಾಮ ಶೇತಕಿ ಸಹಕಾರಿ ಸಂಘ, ಅನಿಯಮಿತ ಇವರ ಕಡೆಯಿಂದ-

ಈ ನೋಟೀಸು ಮೂಲಕ ತಿಳಿಸುವದೇನಂದರೆ - ಯಲ್ಲಾಪುರ ತಾಲೂಕ ಬಳೆಗಾರ ಗ್ರಾಮ ಶೇತಕಿ ಸಹಕಾರಿ ಸಂಘ ಅನಿಯಮಿತ ಇದನ್ನು ಮೆ|| ರಜಿಸ್ಟ್ರಾರ ಸಾಹೇಬ ಬಹಾದ್ದೂರ ಸಹಕಾರಿ ಸಂಘಗಳು ಮುಂಬಯಿ ಇಲಾಖೆ—ಪುಣಾ ಇವರು ೧೯೨೫ನೇ ಇಸ್ವಿಯ ಸಹಕಾರಿ ಕಾನೂನ ೬ ಕಲಮು ೪೭ರನ್ವಯ ರದ್ದುಪಡಿಸಿ ಈ ಕೆಳಗ ಸಹಿಮಾಡಿದವನಿಗೆ ಅದರ ಲಿಕ್ವಿಡೇಟರನನ್ನಾಗಿ ನೇಮಿಸಿದ ಬಗ್ಗೆ ತಮ್ಮ ಹುಕುಮು ನಂ [illegible]-೧೬೯೩ ತಾರೀಕು ೨-೮-೧೯೩೪ ರನ್ವಯ ತಿಳಿಸಿದ್ದಾರೆ ಕಾರಣ, ಈ ನೋಟೀಸು ಜಾಹೀರ ಪಡಿಸಿದ ೨ ತಿಂಗಳೊಳಗಾಗಿ ಯಾರಿಗಾದರೂ ಈ ಸಂಘದಿಂದ ಏನಾದರೂ ಸಲ್ಲತಕ್ಕದಿದ್ದರೆ, ಆ ಬಗ್ಗೆ ಕೆಳಗೆ ಸಹಿ ಮಾಡಿದವನ ಕಡೆ ತಿಳಿಸಬೇಕು ಈ ಮುದ್ದತ್ತಿನೊಳಗ ತಿಳಿಸದೆ ಇದ್ದಲ್ಲಿ ಅವರ ಹಕ್ಕು ಯಾವದೇ ತರದಿಂದಲೂ ಉಳಿಯಲಾರದು

ತೊರ್ಕೆ, ತಾ. 24—9—1934.

V. P. Gaonkar,

ಅಸರಿ ಅಗಸ್ತ್ಯಪುರ ಪ ಲಿಕ್ವಿಡೇಟರ, ಬಳೆಗಾರಗ್ರಾಮ ಶೇತಕಿ ಸಹಕಾರಿಸಂಘ,ಅಂಕೋಲಾ

ವಿಜಯನಗರಂ ಡಾ|| ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಮತ್ತು ಸ್ಪ್ಲೀನ್ ಔಷಧಗಳು.

ಒಬ್ಬ ಪ್ರಸಿದ್ಧ ಡಾಕ್ಟರರ ಅಭಿಪ್ರಾಯ: —

" ಕಳೆದ ಹತ್ತು ವರ್ಷಗಳ ವೈದ್ಯಕೀಯ ಅನುಭವದ ಅಧಿಕಾರ ವಾಣಿಯಿಂದ ಹೇಳುವದೇನಂದರೆ — ಪ್ರಖ್ಯಾತ ಪ್ರವೀಣ ಡಾ|| ಜಮ್ಮಿಯವರ ಲಿವರ ರೋಗದ ನಿವಾರಕ ಔಷಧಿಯು ಅತ್ಯಂತ ಫಲದಾಯಕವಾದುದು. ಇದರ ಪ್ರಚಾರದಿಂದ ಮಕ್ಕಳ ಮೃತ್ಯು ಸಂಖ್ಯೆಯು [illegible] ಕಡಿಮೆಯಾಗಿದೆ!"

(ಸಹಿ) ಡಾ| ಟಿ. ಕೆ. ನಟೇಶನ್,

ಮಕ್ಕಳ ಭಯಂಕರವಾದ ಲಿವರ್ ರೋಗವನ್ನು ನಿವಾರಿಸಿ ಆರೋಗ್ಯವಂತರನ್ನಾಗಿಸಿ ಆನಂದ[illegible] ಮಾಡುವದು. ಅಂಗಡಿಗಳಲ್ಲಿ ದೊರಕುವ ಬೇರೆ ಮದ್ದುಗಳನ್ನು ತೆಗೆದುಕೊಂಡು ಮೋಸ ಹೋಗಬೇಡಿರಿ!

ಜಮ್ಮಿ ವೆಂಕಟರಮಣಯ್ಯ, ಮೈಲಾಪುರ, ಮದ್ರಾಸ.

ಸೋಲ ಏಜಂಟ

ಡಿ. ಎಸ್. ಕೋಳಿವಾಡಕರ್, ಕುಮಟಾ. (ಉ. ಕ.)



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಬಡವರಿಗೂ
ಒಮ್ಮೆಲೇ ಗುಣಕಾರಿಯಾದ ಶ್ರೇಷ್ಠ ಔಷಧ!
ಚಳಿಜ್ವರ, ಇನ್‌ಫ್ಲುಎಂಝಾ
ಮೊದಲಾದ ಜ್ವರಗಳ ವೈರಿ!!
ಮೆಡೋನ್ ಸನ್ಸ ಎಂಡ್ ಕೋ,
ಮುಂಬಯಿ ೨.

MADON SONS & Co
PHARMACEUTICAL CHEMISTS, BOMBAY

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: **1908.**

ಈ ಕಂಪನಿಯು ಪ್ರಾಚೀನ ಹಿಂದೀ ಇದ್ದು, ಇದರ ಶಂಕಿಸ ದರಗಳೂ, ಷರತ್ತುಗಳೂ ಬಹಳ ಸೋಯಿಯಾಗಿ ಇವೆ. ಕಂಪನಿಯ ಹಣವು ಸರಕಾರಿ ಪ್ರೊಮಿಸರಿ ನೋಟುಗಳಲ್ಲಿಯೂ—ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ವಿಸ್ತೃತ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents:- D.K. NAYAK Bros.
Honavar Agent - R. V. PRABHU Esq. }

K. Padmanabha Rao & Sons.
BELGAUM
Chief Agents for Karnatak Districts & S. M. States

ಮಹಾತ್ಮರ ದಿನಚರಿ.

[ಕುಮಾರಿ ಮೀರಾಬೆನ್‌ರು ಬರೆದುದು.]

[ಹರಿಜನೋದ್ಧಾರ ಸಂಚಾರ ಸಮಯ ಮಹಾತ್ಮರ ಸೇವೆ ಮಾಡುತ್ತಿದ್ದ ಕುಮಾರಿ ಮೀರಾಬೆನ್‌ರನ್ನು ಎಲ್ಲರೂ ನೋಡಿರಬಹುದು. ಅವರು ಇಂಗ್ಲಂಡ ದೇಶದೊಳಗಿನ ಸಂಚಾರ ಮುಗಿಸಿ, ಅಮೇರಿಕೆಗೆ ತೆರಳಿದ್ದರೆ. ಅವರು ಲಂಡನಿನೊಳಗಿನ 'ಸಂಡೇ ನ್ಯೂಜ' ಪತ್ರಿಕೆಯಲ್ಲಿ ಮಹಾತ್ಮರ ದಿನಚರಿಯನ್ನು ವರ್ಣಿಸಿದ್ದಾರೆ. ಅದನ್ನು ಶ್ರೀ ಸಿದ್ಧಲಿಂಗಪ್ಪನವರು ತಾಳೀಕೋಟೆ ಬಿ. ಎ. ಇವರು ಅನುವಾದಿಸಿ, ಬೆಳಗಾವಿಯೊಳಗಿನ 'ಲೋಕಸಂದೇಶ'ದಲ್ಲಿ ಪ್ರಕಟಿಸಿದ್ದಾರೆ. ಮಹಾತ್ಮರ ದಿನಚರ್ಯೆಯನ್ನು ಎಲ್ಲರೂ ತಿಳಕೊಳ್ಳುವದಕ್ಕೆ ಸಂಪಾದಕ]

[" ಕೆಲವು ಜನ ಇಂಗ್ಲಿಷರಲ್ಲಿ ಮಹಾತ್ಮರ ಚಾರಿತ್ರ್ಯದ ವಿಷಯಕ್ಕೆ ನಿಜ ಸಂಗತಿಗಳು ತೋರದೆ ಬೇರೆ ಬೇರೆ ಸುಳ್ಳು ಸಂಗತಿಗಳೇ ತೋರುತ್ತಿರುವ ಕಾರಣ ಅವುಗಳ ನಿವಾರಣೆಗೋಸುಗವೇ ಇದರ ವಿಷಯದಲ್ಲಿ ಬರೆಯುವ ಸುಪ್ರಸಂಗವು ನನಗೆ ಬಂದೊದಗಿತು. ಮಹಾತ್ಮರದು ಸಾರ್ವಜನಿಕ (*Public*) ಚಾರಿತ್ರ್ಯವೇ ಸ್ವಂತ ಚಾರಿತ್ರ್ಯವಾದುದರಿಂದ ಅವರಿಗೆ ಪ್ರತ್ಯೇಕವಾದ ಸ್ವಂತ ಚಾರಿತ್ರ್ಯವಿಲ್ಲವೆಂದು ಹೇಳುವದು ಅತಿಶಯೋಕ್ತಿಯಾಗಲಾರದು. ಇದಕ್ಕೆ ಅವರು ಸತತವಾಗಿ ಸಮೂಹದಲ್ಲಿರುವದೇ ಸಾಕ್ಷಿಯಾಗಿದೆ.

ಅವರು ಹೊರಹೊರಟರೆಂದರೆ ಜನರು ಎಡೆಬಿಡದೆ ಗುಂಪುಗುಂಪಾಗಿ ನೆರೆಯುವರು. ಅವರು ಮನೆಯೊಳಗೆ ಅಂಗಳದಲ್ಲಾಗಲಿ ಅಥವಾ ಇನ್ನಾವ ಹವೆಯುಳ್ಳ ವಿಸ್ತಾರವಾದ ಸ್ಥಳದಲ್ಲಾಗಲಿ ಇದ್ದಾಗ ಎಲ್ಲ ತರದ ವಿಚಾರವುಳ್ಳ ಜನರು ಹೋಗುವದು, ಬರುವದು ದಿನಾಲು ಇದ್ದೇ ಇರುತ್ತದೆ. ಮತ್ತು ನನಗೆ ಮಹಾತ್ಮರ ಅತಿ ನಿಕಟ ಸಂಬಂಧವಿದ್ದದ ಮೂಲಕ ಅವರಿಗೆ ಅವರ ಚರಿತ್ರವನ್ನು ನಿಜವಾದ ತಿಳಿಯುವಂತೆ ಮಾಡುವದು ನನಗೆ ಕಠಿಣವಾದ ಕೆಲಸವೆಂದು ತೋರುತ್ತದೆ. ಆದರೂ ಮಹಾತ್ಮಾ ಗಾಂಧಿಯವರ ಚಾರಿತ್ರ್ಯವು ಈ ತರಹದ್ದೇ ಇರುವದೆಂದು ನಿಮ್ಮೆಲ್ಲರಿಗೆ ನಾನು ಬಹಳ ಸಂತೋಷದಿಂದ ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಇವರ ಬಳಿಯಲ್ಲಿ ನನ್ನ ಇರುವಿಕೆ, ಮತ್ತು ಆರು ವರ್ಷಗಳ ವರೆಗೆ ನನ್ನ ಸರ್ವಸ್ವಕ್ಕೆ ಪಾತ್ರರಾದ ಇವರ ಸೇವೆಯನ್ನು ಮಾಡಲು ನನಗೆ ಸಮಯ ಹೇಗೆ ದೊರೆಯಿತೆಂಬುದನ್ನು ಇಲ್ಲಿ ಈಗ ಬಹು ಸಂತೋಷದಿಂದ ವಿವರಿಸುವೆನು. ನಾನು ಮಾತ್ರ ಅವರ ಸೇವೆಯಲ್ಲಿ ಆರು ವರ್ಷಗಳನ್ನು ಕಳೆದದ್ದರಿಂದ ಅವರ ದಿನಚರ್ಯೆಯ ಅಷ್ಟರಿಯುಳ್ಳ ನನ್ನ ವಿವರಕ್ಕೆ ಸಂದೇಹ ಬೇಡ. ಅದೇ ಅಷ್ಟರಿಯನ್ನು ಜನಸಾಮಾನ್ಯರು ಅರಿಯಲೆಂಬುದ್ದೇಶದಿಂದ ಅವರ ಸತ್ಯತೆಯನ್ನೇ ಪೂರ್ಣ ರೀತಿಯಲ್ಲಿ ಹೊರಹಾಕಲು ಪ್ರಯತ್ನ ಮಾಡುತ್ತೇನೆ.

ಮಹಾತ್ಮರ ಉಪದೇಶಗಳಿಗೆ ದಾಸಾನುದಾಸಳಾಗಿ

ಗಾಂಧೀಜಿಯವರ ಚರಿತ್ರ ಮತ್ತು ಉಪದೇಶಗಳನ್ನು ಓದಿ ಮನಸ್ಸು ಮಾಡಿದೊಡನೆಯೇ ನನ್ನದೆಲ್ಲವನ್ನು ಇಲ್ಲಿಯೇ ಬಿಟ್ಟು ಹಿಂದೂಸ್ಥಾನಕ್ಕೆ ಹೋಗಿ ಮಹಾತ್ಮರ ಸೇವೆಯನ್ನು ಕೈಕೊಳ್ಳಬೇಕೆಂಬ ನಿಶ್ಚಯವು ಮನದಲ್ಲಿ ಬಲಿಯಿತು. ಮಹಾತ್ಮರಲ್ಲಿ ಹೋಗಿ ಆಧ್ಯಾತ್ಮಿಕ ವಿಚಾರಗಳನ್ನು ಹೊಂದಬೇಕೆಂದು ತುಂಬಿಬಂದ ಉತ್ಸಾಹದ ಬಲವು ಈ ನನ್ನ ನಿಶ್ಚಯವನ್ನು ದೃಢಗೊಳಿಸಿದವು. ಮಹಾತ್ಮರನ್ನು ಹೊಂದಿ ಸಂಪಾದಿಸಬೇಕಾದ ಉಚ್ಚ ಪವಿತ್ರ ಜ್ಞಾನಕ್ಕಾಗಿ ಬೇಕಾದ ಯೋಗ್ಯತೆಯು ನನ್ನಲ್ಲಿಲ್ಲವೆಂದು ಕಂಡುಬಂದದ್ದರಿಂದ ಒಂದು ವರ್ಷದ ವರೆಗೆ ಆ ಯೋಗ್ಯತೆಗಾಗಿ ಸಿದ್ಧತೆಯನ್ನು ಮಾಡಲು ನಿರ್ಣಯಿಸಿದೆನು. ಅದರಂತೆ ಒಂದು ವರ್ಷವನ್ನು ಕಳೆದ ಮೇಲೆ ಅವರ ಆಶ್ರಮ ಸೇರಲು ನನಗೆ ಅನುಮತಿ ದೊರೆತ ಕಾರಣ ಹಡಗವನ್ನು ಹತ್ತಿ ೧೯೨೫ನೆಯ ಇಸ್ವಿಯ ನವಂಬರ ತಿಂಗಳಿನ ೬ನೆಯ ತಾರೀಖಿಗೆ ಮುಂಬಯಿಯನ್ನು ಬಂದು ತಲ್ಪಿದೆನು. ಅಲ್ಲಿಂದ ನೇರವಾಗಿ ಅಹಮದಾಬಾದಕ್ಕೆ ಹೋಗುವ ಟಿಕೀಟ (Ticket)ನ್ನು ತೆಗೆದುಕೊಂಡೆನು. ಅದೇ ನವಂಬರ ತಿಂಗಳಿನ ೭ ನೆಯ ತಾರೀಖಿನ ತೀರ ಮುಂಜಾವಿನಲ್ಲಿ ಸಾಬರಮತಿ ನದಿಯ ದಡದ ಮೇಲೆ ಶೋಭಿಸುವ ಸೌಮ್ಯವಾದ ಮಂದಿರಗಳುಳ್ಳ ಸುಂದರ ಆಶ್ರಮವನ್ನು ಸೇರಿದೆನು. ನನಗೆ ನೂತನ ಪ್ರಾಣವನ್ನು ತಂದುಕೊಟ್ಟ ಮೊದಲನೆಯ ದಿವಸವೆಂದರೆ ಅದೇ ೧೯೨೫ನೆಯ ಇಸ್ವಿಯ ನವಂಬರ ತಿಂಗಳಿನ ೭ನೇಯ ತಾರೀಖಿಗೆ ನನ್ನ ಉತ್ಪತ್ತಿ. ಆದರೆ ೧೮೯೨ ನೆಯ ಇಸ್ವಿಯ ನವಂಬರ ತಿಂಗಳಿನ ೨೨ ನೆಯ ತಾರೀಖಿಗೆ ಮಾತ್ರ ಆತ್ಮದ ಉತ್ಪತ್ತಿ (ವಿಕಾಸ)

ಆಶ್ರಮದಲ್ಲಿಯ ಅನೇಕ ತೋಟಗಳಲ್ಲಿ ಹಾಯ್ದು ಮುಂದಿದ್ದ ಒಂದು ದೊಡ್ಡ ದೀವಾನಖಾನೆಯೊಳಗೆ ಕಾಲಿಟ್ಟೆನು. ಅಲ್ಲಿಂದ ಸ್ವಲ್ಪ ದೂರದಲ್ಲಿದ್ದ ನಿವಾಸದ ಕೋಣೆಯೊಳಗೆ ಪ್ರವೇಶಿಸಿದೆನು. ಆಗ ಅಲ್ಲಿ ಮಹಾತ್ಮಾ ಗಾಂಧಿಯವರು ನೆಲದ ಮೇಲೆ ಕುಳಿತುಕೊಂಡು ಏನನ್ನೋ ಬರೆಯುತ್ತಿದ್ದರು. ನಾನು ಅವರ ಸನ್ನಿಧಿಯಲ್ಲಿ ಹೋದ ಕೂಡಲೇ ಅವರು ಕೂಡಲೇ ಎದ್ದು ಮುಗುಳುನಗೆಯೊಡನೆ ನನ್ನ ಕಡೆಗೆ ಬಂದರು. ಅವರ ಕಣ್ಣುಗಳೊಳಗಿಂದ ಪ್ರಕಾಶಿಸುತ್ತ ಹೊರಬೀಳುವ ಪ್ರೇಮದ ಮತ್ತು ಪಾವಿತ್ರ್ಯದ ಪ್ರಭಾವವನ್ನು ನೋಡಿ ನನ್ನ ಕಣ್ಣುಗಳೇ ಕುಕ್ಕುತ್ತಿದ್ದವು. ಸಹಜವಾಗಿ ನಾನು ನನ್ನ ಮೊಳಕಾಲೂರಲು ಅವರು ಮುಂದೆ ತಮ್ಮ ಕೈಗಳನ್ನು ಚಾಚಿದರು. ಅವುಗಳ ಮೇಲೆ ನಾನು ನನ್ನ ಮಸ್ತಕವನ್ನಿಡಬೇಕಾಯಿತು. ಅವರು ನನ್ನನ್ನು ಪೂರ್ಣವಾಗಿ ಮೇಲಕ್ಕೆತ್ತಿ ನನ್ನನ್ನು ಪ್ರೇಮದಿಂದ ಅಪ್ಪಿಕೊಂಡ ಮೇಲೆ " ನೀನು ನನ್ನ ಹೆತ್ತ ಮಗಳೇ ಸರಿ " ಎಂದು ನುಡಿದರು. ಆ ಮೇಲೆ ಅವರು ನನ್ನನ್ನು ಹತ್ತಿರದಲ್ಲಿಯೇ ಇರುವ ಅಡಿಗೆಮನೆಯ ಕಡೆಗೆ ಕರೆದುಕೊಂಡು ಹೋಗಿ ಅಲ್ಲಿರುವ ಶ್ರೀಮತಿ ಕಸ್ತೂರಿಬಾಯಿಯವರಿಗೆ ನನ್ನ ಪೂರ್ಣ ಪರಿಚಯ ಮಾಡಿಕೊಟ್ಟರು. ಅಂದಿನಿಂದ ನಾನು ಅವರ ಹೆತ್ತಮಗಳೇ ಆದೆನು. ಆ ಮೇಲೆ ನನ್ನ ಶಿಕ್ಷಣ ಕ್ರಮವು ಪ್ರಾರಂಭವಾಯಿತು. ಅಡಿಗೆ ಮಾಡುವದನ್ನು ಕಲಿತೆನು, ಸ್ವಂತ ಬಟ್ಟೆ ತೊಳೆಯುವದನ್ನು ಕಲಿತೆನು, ಕಸ ಬಳಿಯುವದರಲ್ಲಿ ಸ್ವಚ್ಛತನದಿಂದಿರುವದನ್ನು ಕಲಿತೆನು. ನೂಲುವ-ನೇಯುವ ಉದ್ಯೋಗವನ್ನು ಕಲಿತುಕೊಂಡೆನು. ಮತ್ತು ಹಿಂದೀ ಭಾಷೆಯನ್ನೂ ಕಲಿತುಕೊಂಡೆನು. ಸ್ವಲ್ಪ ದಿನಗಳಾದ ಮೇಲೆ ಬೇರೆ ಬೇರೆ ಭಾಷೆಗಳನ್ನು ಕಲಿಯುವದಕ್ಕಾಗಿಯೂ, ನೂಲುವ-ನೇಯುವದನ್ನು ಕಲಿಸುವದಕ್ಕಾಗಿಯೂ ಅನ್ಯ ಪ್ರಾಂತಗಳಿಗೆ ನನ್ನನ್ನು ಕಳುಹಿಸಿಕೊಟ್ಟರು.

ಸ್ವಯಂ ಬಟ್ಟೆ ತೊಳೆದುಕೊಳ್ಳುವಿಕೆ.

ಅನ್ಯ ಪ್ರಾಂತಗಳಿಗೆ ಹೋಗಿ ಬಂದ ಮೇಲೆ ಮಹಾತ್ಮಾ ಗಾಂಧಿಜಿಯವರ ವ್ಯಕ್ತಿತ್ವದ ವಿಷಯದಲ್ಲಿ ಸೇವೆ ಮಾಡುವದನ್ನು ವಹಿಸಿಕೊಂಡೆನು. ನಮ್ಮೆಲ್ಲರಿಗೆ ಸೇವಕರೇ ಇಲ್ಲ. ಕಾರ್ಯಗಳನ್ನು ನಮ್ಮೊಳಗೇನೇ ವಿಭಾಗಿಸಿಕೊಂಡು ಮಾಡಿಕೊಳ್ಳುತ್ತೇವೆ. ಶ್ರೀಮತಿ ಗಾಂಧಿಜಿಯವರು ವಯಸ್ಸಿನಿಂದ ಮುಪ್ಪಿನವರಾದ ಕಾರಣ ಅವರಿಗೆ ನೀರು ತರುವದು, ಬಟ್ಟೆ ತೊಳೆಯುವದು ಈ ಮೊದಲಾದ ಕಾರ್ಯಗಳು ಭಾರವಾಗಿ ಕಾಣುತ್ತಿರುವದರಿಂದ ಅವರ ಕಡೆಯಿಂದ ಅವನ್ನು ಮಾಡಲು ನಾನೇ ಸಿದ್ಧಳಾಗುವೆನು. ಇದನ್ನು ನಾನು ನನ್ನ ವಿಶೇಷ ಅಧಿಕಾರವೆಂದು ಭಾವಿಸುತ್ತೇನೆ. ಶ್ರೀಮತಿಜಿಯವರು ಅವಿಶ್ರಾಂತ ಶ್ರಮೋತ್ಸಾಹಗಳಿಂದ ಮೊದಲಿನಿಂದಲೂ ತಮ್ಮ ಪತಿಗಳ ಸೇವೆ ಮಾಡುತ್ತಿರುವದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಶ್ರೀಮತಿಜಿಯವರು ವಿವಾಹವಾದಂದಿನಿಂದ ತಮ್ಮ ಶ್ರೀಮಾನರಿಗೆ ಸಂಭವಿಸಿರುವ ಪ್ರತಿಯೊಂದು ಸಂಕಟದಲ್ಲಿ ಭಾಗವನ್ನು ವಹಿಸಿಯೇ ಇದ್ದರೆ. ನಾನು ಈಗ ಅವರಿಂದ ದೂರಾಗಿ ಇಂಗ್ಲಂಡದಲ್ಲಿದ್ದರೂ ಅಲ್ಲಿ ಅನ್ಯ ಮಿತ್ರರ ಸಹಾಯದಿಂದ ಪ್ರತಿಯೊಂದರ ವಿಷಯಕ್ಕೆ ಕಷ್ಟ ತೆಗೆದುಕೊಂಡು ಚೆಂತಿಸ್ ಸ್ಥಿರಪಡಿಸುವದನ್ನು ನಾನು ಬಲ್ಲೆನು. ಆದುದರಿಂದ ಅವರ ಸಹಾಯಕ್ಕಾಗಿ ಹಿಂದುಸ್ಥಾನಕ್ಕೆ ಮರಳಿ ಹೋಗಲು ಬಹಳ ಆತುರಪಡುತ್ತೇನೆ.

ನನ್ನ ತಿಳುವಳಿಕೆಯಂತೆ ಮಹಾತ್ಮರು ತಮ್ಮ ಪ್ರತಿಯೊಂದು ಕಾರ್ಯವನ್ನು ತಾವೇ ಮಾಡಬೇಕೆಂದು ಇಚ್ಛಿಸುತ್ತಿದ್ದರೂ ಸಾರ್ವಜನಿಕ ರಾಷ್ಟ್ರೀಯ ಕಾರ್ಯಗಳು ಅವರ ಸಮಯವನ್ನೆಲ್ಲ ತಮಗಾಗಿಯೇ ಕಳೆಯಲು ಬಿಡದಿರುತ್ತಿರುವದರಿಂದ ಹಾಗೆ ಮಾಡಲು ಅಸಮರ್ಥರಾಗಿರುವರು. ಹೀಗಿದ್ದರೂ ಅವರು ಎಷ್ಟೋ ಸಾರೆ ತಮ್ಮ ಬಟ್ಟೆಗಳನ್ನು ತೊಳೆದುಕೊಳ್ಳುತ್ತಾರೆ. ನಾವೆಲ್ಲರೂ ದುಂಡು ಮೇಜಿನ ಪರಿಷತ್ತಿಗಾಗಿ ಲಂಡನಕ್ಕೆ ಬರುವ ಕಾಲದಲ್ಲಿ ಅವರು ಬಟ್ಟೆಗಳನ್ನು ತಾವೇ ತೊಳೆಯುತ್ತಿದ್ದರು. ಈಗ ಅವರಿಗೆ ಬಿಡುವೂ ಸಹ ಸಿಕ್ಕುವದಿಲ್ಲ. ಶ್ರೀಮತಿ ಗಾಂಧಿಜಿಯವರು ಈ ಕಾಲದಲ್ಲಿ ಮಹಾತ್ಮರೊಡನೆ ಪ್ರವಾಸದಲ್ಲಿಲ್ಲದ್ದರಿಂದ ಮಹಾತ್ಮರು ತಮಗೆ ಬೇಕಾದ ವಸ್ತುಗಳನ್ನು ಪೂರೈಸಿಕೊಡಲು ನನಗೇ ಅಪ್ಪಣೆ ಕೊಟ್ಟಿದ್ದರು. ಪರಿಷತ್ತಿನ ಕೆಲಸವು ಬಹಳೇ ಇದ್ದದ್ದರಿಂದ ಅವರಿಗೆ ಸಮಯವು ದೊರೆಯದ ಕಾರಣ ಈ ರೀತಿಯಾಗಿ ಮಾಡಲು ನನಗೆ ಒಪ್ಪಿಗೆ ದೊರೆತಿದ್ದಿತು. ಲಂಡನ್ನಿನಲ್ಲಿ ಅವಿಶ್ರಾಂತ ಶ್ರಮ ತೆಗೆದುಕೊಂಡು ಮಾಡಿದಷ್ಟು ಕೆಲಸವನ್ನು ಮಹಾತ್ಮರು ಇನ್ನೆಲ್ಲಿಯೂ ಮಾಡಿದಂತೆ ನನಗೆ ತೋರುವದಿಲ್ಲ. ಹಗಲಿನಲ್ಲಿ ಇಷ್ಟು ಕೆಲಸ ಮಾಡಿದರೂ ವೇಳೆಯು ಪೂರೈಸದಂತಾಗಿ ರಾತ್ರಿ ೧-೨ ವರೆಗೆ. ಒಮ್ಮೊಮ್ಮೆ ಸೂರ್ಯೋದಯದ ವರೆಗೂ ಕೆಲಸದಲ್ಲಿ ತೊಡಗಿಯೇ ಇರುತ್ತಿದ್ದರು. ಇಷ್ಟಾದರೂ ಬೆಳಗಿನ ೩ ಘಂಟೆಗೆ ಏಳಬೇಕಾದ ಪ್ರಾರ್ಥನೆಗೆ ಮಾತ್ರ ತಪ್ಪುತ್ತಲೇ ಇರಲಿಲ್ಲ. ಮಹಾತ್ಮರ ಒಂದು ಸಾಮಾನ್ಯ ದಿನದ ನಿಜವಾದ ನಿತ್ಯಕರ್ಮಗಳು ಯಾವವೆಂಬುದನ್ನು ಕೂಡ ಇಲ್ಲಿ ಬಯಲುಪಡಿಸುವೆನು.

ಅವರು ದಿನಾಲು ಬೆಳಗಿನ ೩ ಘಂಟೆಗೆ ಎದ್ದರಲೇ ಮುಖಮಾರ್ಜನ ಸ್ನಾನಾದಿಗಳನ್ನು ಸಮಾಪ್ತಗೊಳಿಸಿದ ಮೇಲೆ ನಾಲ್ಕು ಘಂಟೆಗೆ ಆಗಬೇಕಾದ ಪ್ರಾರ್ಥನೆಯ ವರೆಗೆ ಬರೆಯುತ್ತ ಕುಳಿತುಕೊಳ್ಳುವರು. ಆ ಮೇಲೆ ಹಾಲು-ಹಣ್ಣು ಈ ರೂಪದ ಆಹಾರವನ್ನು ತೆಗೆದುಕೊಂಡು ಸೂರ್ಯೋದಯದ ವರೆಗೆ ಬರೆಯುವದರಲ್ಲಿಯೇ ತೊಡಗಿರುವರು; ಆ ಮೇಲೆ ಸಮಯ ದೊರೆತಲ್ಲಿ ಆ ಕಾಲಕ್ಕೆ ತಿರುಗಾಡಲು ಹೊರಡುತ್ತಾರೆ.

ಬಲು ಶಾಂತಿಯುಕ್ತ ನಿಮಿಷಗಳು

ಮಹಾತ್ಮರು ತಿರುಗಾಡಿ ಬಂದ ಮೇಲೆ ತಮ್ಮ ವೇಳೆಯನ್ನು ಪರಸ್ಪರ ಸಂದರ್ಶನ-ಸಂಭಾಷಣೆಗಳಿಗಾಗಿಯೂ, ಮನಃಪೂರ್ವಕ ಮುಂದೆ ಬರಬೇಕಾದ ನಿಶ್ಚಯ ಮಾಡುವದಕ್ಕಾಗಿಯೂ ಕೊಡುವರು. ಆ ಮೇಲೆ ೧೦-೩೦ ಕ್ಕೆ ಅವರ ಸ್ನಾನದ ಸಾಮಗ್ರಿಯನ್ನು ಸಿದ್ಧಗೊಳಿಸುವೆನು. ಅವರ ಸ್ನಾನದ ಸಾಮಗ್ರಿಯೆಂದರೆ ಒಂದು ಬಿಸಿನೀರಿನ ತೊಟ್ಟಿಯನ್ನು (*Bucket*) ಮತ್ತು ಕೆಲವು ತಸ್ತೀನ ತೊಟ್ಟಿಗಳನ್ನು, ಇನ್ನು ತೊಳೆದ ದಂಡೆ ಮಾಡಿಗಳನ್ನು ಕಲ್ಲಿನ ಹಾಸಿಗೆಯುಳ್ಳ ಕೋಣೆಯಲ್ಲಿಡುವದೇ ಆಗಿದೆ. ಸ್ನಾನದ ಸಾಮಗ್ರಿಯು ಸಿದ್ಧವಾಗಿದೆ ಎಂದು ನಾನು ಹೇಳಲು, ಮಹಾತ್ಮರು ತಮ್ಮ ಕೆಲಸದಿಂದ ಮುಕ್ತರಾದ ಕೂಡಲೇ ಸ್ನಾನ ಮಾಡುತ್ತಾರೆ.

ಸ್ನಾನ ಕಾಲದೊಳಗಾಗಿಯೇ ತಾವು ಮಾಡಬೇಕಾದ ಕೆಲವು ಮಹತ್ವದ ನಿರ್ಣಯಗಳಿಗಾಗಿ ಬೇಕಾದ ಪ್ರಶಾಂತವಾದ ಏಕಾಂತದ ಸ್ಥಳವೆಂದರೆ, ಅವರಿಗೆ ಸ್ನಾನದ ಗೃಹವೇ. ಆದುದರಿಂದ ಅಲ್ಲಿ ಕಳೆಯಬೇಕಾದ ನಿಮಿಷಗಳೇ ಶಾಂತಿಯುಕ್ತ ನಿಮಿಷಗಳೆಂದು ಅವರು ಸದಾ ಹೇಳುತ್ತಾರೆ. ಗಾಂಧಿಜೀಯವರು

[೧೧ನೇ ಪಾನಿನ ಮೇಲೆ ಮುಂದರಿಸಿದೆ.]

ಪತ್ರಕರ್ತರ ನುಡಿಗನ್ನಡಿ.

೧ ಶ್ರೀ ಕೆಕ್ಕಾರ ಶ್ರೀ ರಾಮಚಂದ್ರಾಪ್ರಭು ಮಾದ ಶ್ರೀ [illegible] ತಮ್ಮ ಸಂಸ್ಥಾನದಲ್ಲಿ ಉಪಯೋಗಕ್ಕಾಗಿ ದೀರ್ಘ ಪ್ರಯತ್ನಗಳಿಂದಲೂ, ಅತಿ ನಂದಸಿಂದ ಉತ್ಸಾಹದಿಂದಲೂ ತಯಾರಿಸಿಕೊಂಡಿರುವ ದಸ್ತಿದಂತದ ಸಿಂಹಾಸನ ಹೀರವನ್ನು ನಮ್ಮ ಜಿಲ್ಲೆಯ ಜನರು [illegible] ಒಗ್ಗ [illegible] ಸಪ್ಟೆಂಬರ ೨೦ನೇ ಉತ್ಸಾರದಲ್ಲಿ [illegible] ಣದಲ್ಲಿಯ ಶ್ರೀ [illegible] ತೆಂಬ ಸಂಗತಿ 'ವೃತ್ತ'ದ [illegible] ದದ್ದೇ ಮಾತು ಒನರಿಗೆ [illegible] ವೃತ್ತಾಂತವು [illegible] ಪ್ರಕಟವಾಗಿತ್ತು ಈ ಸಮಯದಲ್ಲಿ ನಮ್ಮಲ್ಲಿಯ [illegible] ಬಾರೆ ತಾಲೂಕಗಳ ಜನರು [illegible] ಒಲಿ ನಂದ ಸಮನೋಹರವಾಗಿರುವ ವಸ್ತು ನಮ್ಮ ದೇಶದಲ್ಲಿ ಇನ್ನು ನಡೆಯಾಗದುವ [illegible] ಕೌಶಲ್ಯದ ಒಗ್ಗ [illegible] ಈ ಹೀರವನ್ನು ಸಂದರ್ಶಿಸಿದ್ಯಾದರು ಈ [illegible] ನದ ಸಂಕ್ಷಿಪ್ತ ಕೆಲಸದ [illegible] ಗುವ ನಮ್ಮ ನಾಡಿನ ಕೈಗಾರಿಕೆಯ [illegible] ಮಾವಧಿಯ [illegible] ದ ತಕ್ಕ ಪ್ರಯೋಜನವು [illegible] ಗಿವೆ ಸಂಸ್ಥಾನಾಧಿಪತಿಗಳ ಅನುಕೂಲ [illegible] ಸ್ಥರಾಗಲಿಕೆ ಒದುವಂತೆ [illegible] ವಿಶಾಲವಾಗಿ ಮಾಡಿದ್ದಾರೆ ಸುಮಾರು [illegible] ಅಗಲವಾಗಿಯೂ, ಸುಮಾರು ೭ ಫೂಟು ಎತ್ತರವಾಗಿಯೂ ಇದೆ ಇದೀ ಸಿಂಹಾಸನವು [illegible] ಇತಿಹಾಸದ ವಿವಿಧ ಪ್ರಸಂಗಗಳ ಚಿತ್ರ [illegible] ದೃಶ್ಯಗಳಿಂದ ತುಂಬಿಕೊಂಡಿರುವದರಿಂದ [illegible] ಯವಾಗಿಯೂ ಅಭಿಮಾನಾಸ್ಪದವಾಗಿಯೂ [illegible] ತ್ರದೆಂಬುದರಲ್ಲಿ ಸಂದೇಹವಿಲ್ಲ [illegible] ಮೇಲ್ಭಾಗದ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿಂದ ಇಲ್ಲಿ ವರೆಗೆ ಅತಿ ಸೂಕ್ಷ್ಮವಾಗಿಯೂ [illegible] ಯೂ ನಯನಮನೋಹರವಾಗಿಯೂ ಕೆತ್ತಿ ಕೊರೆದಿರುವ ನವಾರು ೬ ಇಂಚು [illegible] ಇಂಚು ಅಗಲ [illegible] ದಸ್ತಿದಂತದ [illegible] ಗಳಂತೆ ಬಿನ್ನದ ತಗಡಿನ ಮೇಲೆ ಸಂಯೋಗಿ [illegible] ಸಿರುವದರಿಂದ ಸಿಂಹಾಸನವೆಲ್ಲ ದಸ್ತಿದಂತಮಯವಾಗಿದೆ ಕೆಳಗಿನ ಭಾಗದಲ್ಲೆಲ್ಲ ಹಿಂದೂ ಜನರಿಗೆ [illegible] ವರಣೀಯವಾಗಿರುವ ಮಹಾಭಾರತದ ಇತಿಹಾಸವೆಲ್ಲ ಅನುಕ್ರಮವಾಗಿ ತೋರುವಂತೆ ಬೇರೆ ಬೇರೆ ಪರ್ವಗಳಲ್ಲಿಯ ಕೆಲವು ಮುಖ್ಯ ಮುಖ್ಯ ಪ್ರಸಂಗಗಳು ಪರಿಶುದ್ಧವಾಗಿ ಕೆತ್ತಿ ಕೊರೆದು ತೋರಿಸಲ್ಪಟ್ಟಿವೆ ಚಿತ್ರದಲ್ಲಿ ಯೋಗ್ಯವಾಗಿ ವ್ಯಕ್ತಪಡಿಸುವ ಆಯಾಯ ಭಾವನೆಗಳೂ, ಚಿತ್ರಗಳ ಸಣ್ಣ ಸಣ್ಣ—ತನಶೀಲುಗಳಲ್ಲಿ ಕೂಡ ಕಂಡುಬರುವ ಶಾಸ್ತ್ರಶುದ್ಧತೆಯೂ ಮನೋವೇಧಕವಾಗಿ ಕಾಣುತ್ತವಲ್ಲದೆ ಅವಿಶ್ರಾಂತವಾಗಿಯೂ ಬುದ್ಧಿಪುರಸ್ಸರ ಸೂಕ್ಷ್ಮವಾಗಿಯೂ ನಡೆದ ಕೆಲಸದ ಬಗ್ಗೆ ಆದರವನ್ನು ನೆಲೆಗೊಳಿಸುತ್ತವೆ ಎಷ್ಟಾದರೂ ಸ್ಥಲವು ಖಾಲೀ ಬಿಡದೇ ದಶಾವತಾರ, ನವಗ್ರಹರಾಶಿ ಮೊದಲಾದವುಗಳ ಚಿತ್ರಗಳಿಂದ ಅತ್ರ ನಿಬಿಡವಾದ ಶೋಭೆಯ ಕೆತ್ತನೆಯಲ್ಲಿಯೂ ಅಲ್ಲಲ್ಲಿ ಪ್ರಸಂಗೋಚಿತ ಚಿತ್ರಗಳು ಅದಕಗೊಂಡಿವ ಹೀರದ ಎತ್ತರವಾದ ಪೃಷ್ಠಭಾಗದಲ್ಲಿ ಒಂದು ಬದಿಗೆ ರಾಮಾಯಣದ ಪೂರ್ವಾರ್ಧದ ಇನ್ನೊಂದು ಬದಿಗೆ ಉತ್ತರಾರ್ಧದ ಪ್ರಸಂಗಗಳು ಕಾಣಿಸುತ್ತಿದ್ದು ಸಂಸ್ಥಾನದೇವತೆಯಾದ ಶ್ರೀರಾಮಚಂದ್ರದೇವರ ಪಟ್ಟಾಭಿಷೇಕದ ಮನೋಹರವಾದ ದೃಶ್ಯವು ಮಧ್ಯಭಾಗದಲ್ಲಿ [illegible] ಇಂಥ ಕೆಲಸವನ್ನು ಕಣ್ಣಿಟ್ಟು ನೋಡಿ [illegible] ಪದಮಾಡಿಕೊಳ್ಳುವ [illegible] ಚಿತ್ರದಿಂದ ಅದರ ತಕ್ಕ ಕಲ್ಪನೆಯಾಗದ [illegible] ಕುಶಲ ಶಿಲ್ಪಕಲಾವಂತರು ಒಟ್ಟು [illegible] ವರ್ಷಗಳ ವರೆಗೆ ನಿರಂತರದ [illegible] ದಲ್ಲಿ [illegible] ನಮ್ಮಾ ನಾಡಿನಲ್ಲಿ [illegible] ಈ ಕಲೆಯು, ಇನ್ನು [illegible] ಬೇಕಂತಾಗಿದೆ [illegible] ಜೀವಂತ [illegible] ಪಾರಿತೋಷಿಕ [illegible] ಒತ್ತು [illegible] ಉತ್ಸಾಹದಿಂದ ಪ್ರೋತ್ಸಾಹನ ಕೊಟ್ಟು, ಇದೇ ಮಾಡಿದ್ದು [illegible] ಕೌತುಕಾಸ್ಪದವು. ಅವಿರತ [illegible] ವ್ಯವಸ್ಥೆಯಿಂದ [illegible] ನಾವು ಒಯ್ದ [illegible] ಅದರ [illegible] ಅಭಿನಂದಿಸ ಬೇಕು.

— [illegible] ವರ್ಗ [illegible] ಬಿಡದೆ [illegible] ಹಿಂದೂ [illegible] ಸಂಗದ ಮೂಲ ಕಾರಣಗಳು, ಕಾರಣಗಳು [illegible] ನವರು. ಮೋಪಲಾಯಿಯರಲ್ಲಿ [illegible] ಇತಿಹಾಸದ [illegible] ದಿಂದ ಹಿಂದು ಮುಸಲ್ಮಾನರೊಳಗೆ [illegible] ಕಾಲದಲ್ಲಿಯೇ ಎಂದು ಹೇಳಿದರೆ ಅತಿಶಯೋಕ್ತಿಯಾಗದು ಕುರಾನ ಗ್ರಂಥದಲ್ಲಿ [illegible] ಪ್ರತಿಬಂಧವಿಲ್ಲವಾಗಿ [illegible] ಮುಸಲ್ಮಾನರು ಕುರಾನ ವಚನಗಳಿಂದ [illegible] 'ಮುಹಿದಿಯ [illegible] ಮಾಡುತ್ತ ನಡಗರದಿಂದ [illegible] ನಮ್ಮದೇನೂ ಪ್ರತಿಬಂಧವಿಲ್ಲವಾಗಿ ಪ್ರಕಟಿಸಿದ್ದಾರೆ ಒಡೆಯರ ಸಂಸ್ಥಾನದವರು ಈ ಅರ್ಥದ ಮೇಜೆ ಬೇರಾದ ಕಡೆ ವಾದ್ಯ ಬಾರಿಸುತ್ತ ಜನರು ಉತ್ಸವ ಮಾಡದ [illegible] ಪ್ರಕಟಣೆಯನ್ನು ಹೊರಡಿಸಿದ್ದಾರೆ ಮುಸಲ್ಮಾನ ಬಾಂಧವರು ಕುರಾನ ಧರ್ಮಗ್ರಂಥವನ್ನು ಆಳವಾಗಿ ಪರಿಶೀಲಿಸಬೇಕು ಧರ್ಮದ ಹೆಸರಿನಿಂದ ಅಧರ್ಮಾಚರಣೆ ಮಾಡಕೂಡದು. ಇಸ್ಲಾಮ ಧರ್ಮವನ್ನು ಲೋಕಶಾಂತಿ [illegible] ಬೇರೊಂದಿಲ್ಲವಾಗಿ ಆ ಧರ್ಮದೊಳಗಿನ ಕೆಲ ಪದ್ಧತಿಗಳೇ ಜಗತ್ತಿಗೆ ಸಾರುತ್ತಿವೆ. ಇಂಥ ವಿಶ್ವಬಂಧುತ್ವವುಳ್ಳ ಧರ್ಮದ ಹೆಸರಿನಿಂದ ಲೋಕದಲ್ಲಿ ದೊಂಬಿ ನಡೆಯುವದೆಂದರೆ ದಡ್ಡತನವಲ್ಲವೇ?

---

೩ [illegible] ತಾಲೂಕಿನ ಹುಳಸೆಕೊಪ್ಪ ಪಿರ್ಕೆಯ ಹೆಗ್ಗಾರ ಗ್ರಾಮದ ರೈತರು ಕಲೆಕ್ಟರರಿಗೆ ಮಾಡಿಕೊಂಡ ಅರ್ಜಿಯ ವಿವರವನ್ನು ಕಳೆದ ಸಂಚಿಕೆಯಲ್ಲಿ ನಾವು ವಿವರಿಸಿದ್ದೇವೆ. ಹಿರಿಯರು ಒಂದು ಕೈಯಿಂದ ಚಿಕ್ಕ ಮಕ್ಕಳಿಗೆ ತಿಂಡಿ ಕೊಟ್ಟಂತೆ ಮಾಡಿ, ಮತ್ತೊಂದು ಕೈಯಿಂದ ಅದನ್ನು ಕಸಿದು ಹಾರಿಸಿ, ಮಕ್ಕಳು ಅಳುತ್ತಿರುವಾಗ ವಿನೋದ ಮಾಡುವಂತೆ, ಜಂಗಲ ಅಧಿಕಾರಿಗಳೂ, ಮುಲ್ಕಿ ಅಧಿಕಾರಿಗಳೂ ರೈತರೊಡನೆ ಕುಚೇಷ್ಟೆ ಮಾಡುತ್ತಾರೆಂದು ನಾವು ತಿಳಕೊಳ್ಳುತ್ತಿದ್ದೇವೆ, ಆದರೆ ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟವೆಂಬಂತೆ ರೈತರ ಅವಸ್ಥೆಯಾಗಿದೆ ರೈತರಿಗೆ ತೋಟಗಳ ಅನುಕೂಲತೆಗಾಗಿ, ಗೋಚರಾವಿಗಾಗಿ ಸರಕಾರವು ಮ್ಯಾನರ ಬೆಟ್ಟ ಬಿಟ್ಟಿದ [illegible] ಗಂಪದ ಕಡಿ ಹಚ್ಚಬಾರದಿತ್ತು "ಹಚ್ಚಿದರೇನಾಯಿತು? ಗೋಚರಾವಿಗೆ ಪ್ರತಿಬಂಧವೇನಿಲ್ಲ" ಹೀಗೆ ಅಧಿಕಾರಿಗಳು ಕೊಟ್ಟ ಹುಕುಮನ್ನಾದರೂ ಅಧಿಕಾರಿಗಳು ಪಾಲಿಸಹುದಿತ್ತು ಗಂಪದ ಕಡಿಗಳನ್ನು ಬೋಳಾಸ ಮಾಡುವೆ ನವದಿಂದ ಮ್ಯಾನರ ಬೆಟ್ಟಕ್ಕೆ ಬೆಂಕಿ ಕೆಟ್ಟು ಅದನ್ನು ನಿಯಂತ್ರಿಸಲಾಗದೆ, ಮ್ಯಾನರ ಬೆಟ್ಟವನ್ನು ಸುಟ್ಟು ರೈತರಿಗೆ ನಷ್ಟಪಡಿಸಿದ ಮಾತು ಒತ್ತಟ್ಟಿಗೇ ಉಳಿಯಿತು, ಜಂಗಲ ಖಾತೆಯವರು ಬೆಟ್ಟಕ್ಕೆ ಬೆಂಕಿ ಹಾಕಿ ಉಂಟುಮಾಡಿದ ತಪ್ಪಿಗಾಗಿ ರೈತರಿಂದ ಇಮ್ಮಡಿ ಗೋಚರಾವ ಸೀ ವಸೂಲ ಮಾಡುವ ಪ್ರಕಾರ ನೋಟಿ ನಾವು ಬೆರಗಾದೆವು ಇಂಥ ಪ್ರಕಾರ [illegible] ವಿಸುವ ಬಗೆ ಹೇಗೆ? ಎಂಬುದೇ ನಮಗೆ ತಿಳಿಯದು ಜಂಗಲ ದೂರುಗಳನ್ನು ವಿಚಾರಿಸಿ ಪರಿಹರಿಸುವದಕ್ಕಾಗಿ ನಮ್ಮ ಜಿಲ್ಲೆಯೊಳಗೆ ವರ್ಷಕ್ಕೆರಡಾವರ್ತಿ ಜಿಲ್ಲಾಧಿಪರ ಅಧ್ಯಕ್ಷತೆಯಲ್ಲಿ ಸಲ್ಲಾಗಾರ ಮಂಡಳದ ಸಭೆ ಸೇರುತ್ತದ ಆ ಸಭೆಯಲ್ಲಿ ಈ ವಿಷಯದ ವಿಚಾರ ಮಾಡಿ ರೈತರ ಕಷ್ಟವನ್ನು ಹೋಗಲಾಡಿಸಬೇಕಾಗಿ ನಮ್ಮ ವಿನಂತಿ ಹಳ್ಳಿಯೊಳಗಿನ ರೈತರು ಅಜ್ಞರು, ನಿರಪರಾಧಿಗಳು, ಅಂಥ ಜನರಿಗೆ ವಂಚಿಸುವದು, ದಣಿಸುವದು ಮಹದನ್ಯಾಯವು ಸರಕಾರಿ ಹುಕುಮುಗಳನ್ನು ಲಕ್ಷ್ಯ [illegible] ಇಲ್ಲವೆ ಬುದ್ಧಿಪೂರ್ವಕವಾಗಿ ಉಲ್ಲಂಘಿಸಿ ಪೀಡಿಸುವದು ಅಪರಾಧವಾಗುತ್ತದೆ ಜಿಲ್ಹಾಧಿಕಾರಿಗಳು ಇಂಥವರಿಗೆ ತಕ್ಕ ಶಾಸನ ಮಾಡಿದನಕ ಇಂಥ ಅನ್ಯಾಯಗಳ ಪರಿಹಾರವಾಗದು. ಗ್ರಾಮಾಂತರಗಳಲ್ಲಿ ಚಿಕ್ಕ-ಪುಟ್ಟ ಅಧಿಕಾರಿಗಳಿಂದ ಬರಬಾರದು, ಅವರ ಅನ್ಯಾಯವು ಮೇಲಧಿಕಾರಿಗಳ ಕಿವಿಮುಟ್ಟಿದಾಗ ಬಗೆಹರಿಯಬೇಕು, ಇಷ್ಟು ಕಲೆಕ್ಟರರು ಸ್ವಯಂ ಜಾಗ್ರತರಾಗಿ ಹೆಗ್ಗಾರ ಗ್ರಾಮದೊಳಗಿನ ಲೋಕಕಂಟಕ ಅಧಿಕಾರಿಗಳ ಬಂದೋಬಸ್ತ ಮಾಡುವರಾಗಿ ನಾವು ಕೋರುತ್ತೇವೆ

— ರಾಷ್ಟ್ರೀಯ ಸಭೆಗೆ ಸುಮಾರು ರೂ ೭ ಲಕ್ಷಕ್ಕೂ ಮಿಕ್ಕಿ ಖರ್ಚು ಬರುವದು ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಮುಂಬಯಿಗೆ ಇದೇ ತಾ ೧೯–೨೦ರೊಳಗೆ ಬಂದು ತಲ್ಪುವರು ತಾ ೧೫ನೇ ವರೆಗೆ ಅವರು ಬಿಹಾರದ ನೆರೆ ನಿರಾಶ್ರಿತರ ಕಷ್ಟ, ನಿವಾರಣೆ, ಇಲೆಕ್ಶನ್ ಕಾರ್ಯಕ್ರಮ ಮೊದಲಾದವುಗಳನ್ನು ತೀರಿಸಿಕೊಂಡು, ೪ ದಿನಗಳ ರಜೆ ಕೊಂಡು, ತಮ್ಮ ರಾಷ್ಟ್ರೀಯ ಸಭಾಪತಿಸ್ಥಾನದ ಭಾಷಣವನ್ನು ತಯಾರಿಸುವರು ಮುಂಬಯಿಗೆ ಬಂದ ಬಳಿಕ, ಭಾಷಣದಲ್ಲಿ ಅವಶ್ಯವುಳ್ಳ ತಿದ್ದುಪಡಿ ಮಾಡುವರು ಪಕ್ಕಾ ಭಾಷಣದ ಪ್ರತಿ ತಾರೀಖು ೨೩—೨೪ನೇ ಸುಮಾರಿಗೆ ತಯಾರಾಗಬಹುದಂತೆ

ಮಂತ್ರೋಪಚಾರ.

ಮಂತ್ರೋಪಚಾರದಿಂದ ವಿಷಬಾಧೆಯನ್ನು ಪರಿಹರಿಸುವ ಕ್ರಮವನ್ನು ಸಾಮಾನ್ಯರು ಬಲ್ಲಾದ ವಿಷಯ. ಮುಂಬಯಿಯಲ್ಲಿ 'ಹಾಪಕಿನ್ ಇನ್‌ಸ್ಟಿಟ್ಯೂಟ' ಎಂಬ ಪ್ರಯೋಗಶಾಲೆಯಿದೆ. ಅಲ್ಲಿ ವಿಧವಿಧದ ಕ್ರಿಮಿ-ಕೀಟಕ, ವಿಷ ಮೊದಲಾದವುಗಳ ವಿಷಯ ಕೂಲಂಕಷವಾಗಿ ಪ್ರಯೋಗ ನಡೆಯುತ್ತದೆ. ರೋಗ ಜಂತುಗಳ ಪತ್ತೆ ಮಾಡಿ ಅವುಗಳಿಂದ ಉಂಟಾಗುವ ರೋಗಬಾಧೆ, ಅವುಗಳ ಪರಿಹಾರ ಇವನ್ನೆಲ್ಲ ಇಲ್ಲಿ ಅಭ್ಯಾಸ ಮಾಡುತ್ತಾರೆ. ಇವರಿಗೆ ಮಂತ್ರದಲ್ಲಿ ಭಕ್ತಿಯಿಲ್ಲ. ಮಂತ್ರದಿಂದ ವಿಷಬಾಧೆ ಪರಿಹರಿಸುವವರಿಗೆ ಈ ಸಂಸ್ಥೆಯವರು ೧೦ ಸಾವಿರ ರೂಪಾಯಿಗಳ ಇನಾಮು ಜಾಹೀರುಪಡಿಸಿದ್ದಾರೆ. ಮಂತ್ರೋಪಚಾರದಿಂದ ಹಾವು ಕಚ್ಚಿದ ಮಂಗನನ್ನು ಗುಣಪಡಿಸಬೇಕೆಂದು ಅವರ ಅಂಬೋಣ.

* * *

ಈ ಸಮಯ ಪ್ರಯಾಗದ 'ಪಾಯೋನಿಯರ' ಪತ್ರಿಕೆಯಲ್ಲಿ ಒಂದು ವಿಲಕ್ಷಣವಾದ ಮಂತ್ರೋಪಚಾರದ ಸುದ್ದಿ ಪ್ರಕಟವಾಗಿದೆ. ಸಂಯುಕ್ತ ಪ್ರಾಂತದ ಬಹರಕ್ ಎಂಬ ಗ್ರಾಮದಲ್ಲಿ 'ವಾರ್ ರಲೀಫ್' ಎಂಬ ಸಂಸ್ಥೆಯಿದೆ. ಖಾನಸಾಹೇಬ ಎಸ್. ಸೈಜ ಮಹಮ್ಮದರವರು ಈ ಸಂಸ್ಥೆಯ ಅಧ್ಯಕ್ಷರು. ಇವರಿಗೆ ನಾಗರಹಾವಿನ ವಿಷ ಇಳಿಸುವ ಅದ್ಭುತ ಸಾಮರ್ಥ್ಯವಿದೆ. ಸೈಮ-ಉಲ್ಲಾರವರ ಹೆಂಡತಿಗೆ ಹಾವು ಕಚ್ಚಿತು, ಕೂಡಲೆ ವಿಷವೇರಿ ಅವಳು ಕಂಪ್ಯಾದಳು. ಈ ಸುದ್ದಿಯನ್ನು ಒಬ್ಬರು ಖಾನಸಾಹೇಬರಿಗೆ ಒಂದು ತಿಳಿಸಿದರು. ಖಾನಸಾಹೇಬರು ನೀರು ತುಂಬಿದ ಗ್ಲಾಸು ಹಿಡಿದು ಮಂತ್ರೋಚ್ಚಾರ ಮಾಡಿದರು, ಸುದ್ದಿ ತಂದವನಿಗೆ ಆ ನೀರು ಕುಡಿಯ ಹೇಳಿದರು. ಅದರಂತೆ ಈತನು ಕುಡಿದನು. ನೀರು ಕುಡಿದಂತೆ ನಿಶ್ಚೇಷ್ಟಳಾಗಿ ತನ್ನ ಮನೆಯಲ್ಲಿ ಬಿದ್ದ ಸೈಮ-ಉಲ್ಲಾರವರ ಹೆಂಡತಿಯ ವಿಷ ಇಳಿದು ಅವಳಿಗೆ ಸ್ಮೃತಿ ಬಂತು. ಇದೇ ಪ್ರಕಾರ ಖಾನಸಾಹೇಬರು ಬೇರೆ ಬೇರೆ ಜಿಲ್ಹೆಗಳಲ್ಲಿ ಹಾವು ಕಚ್ಚಿದವರಿಗೆ ಗುಣಪಡಿಸಿರುತ್ತಾರೆ. ಸುದ್ದಿ ತಂದವನಿಗೆ ನೀರು ಕುಡಿಸಿ ವಿಷಬಾಧೆ ಇಳಿಸುವ ಸಮಾಚಾರ ಮತ್ತೂ ಆಶ್ಚರ್ಯಕರವಾದದ್ದು!

* * *

ಸಿವ್ಹಿಲ್ ಸರ್ಜನ್‌ರಾದ ಕೆಪ್ಟನ್ ಭಾರ್ಗವರವರು ಖಾನಸಾಹೇಬರಿಗೆ 'ಹಾಪಕಿನ್ ಇನ್‌ಸ್ಟಿಟ್ಯೂಟ'ದವರ ಮುಂತೆ ಪ್ರತ್ಯಕ್ಷ ಪ್ರಯೋಗ ಮಾಡಿ ತೋರಿಸಿ ಇನಾಮು ಪಡೆಯಬೇಕೆಂದು ಸೂಚಿಸಿದರು. "ಗುಣಪಡಿಸಿದ ಬಗ್ಗೆ ಪ್ರತಿಫಲ ಕೊಳ್ಳಬಾರದೆಂದು ಹಿರಿಗುರುಗಳ ಆಜ್ಞೆಯಿದೆ, ಇನಾಮು ಬೇಡ, ಆದರೆ ಯಾವದೊಂದು ಸಂಸ್ಥೆಯವರ ಸಮಕ್ಷ ಪ್ರಯೋಗ ಮಾಡಿ ತೋರಿಸಲು ಸಿದ್ಧನಿದ್ದೇನೆ. ಒಂದು ಮಾತನ್ನು ಹೇಳಿಬಿಡುತ್ತೇನೆ, ನನ್ನ ಮುಂದೆ ಹಾವು ಯಾವದೇ ಪ್ರಾಣಿಗೆ ದಂಶ ಮಾಡಲಾರದು" ಹೀಗೆ ಖಾನಸಾಹೇಬರು ಉದ್ಗರಿಸಿದರು! ನೋಡಿರಿ, ಮಂತ್ರ ಮಹಿಮೆ!

* * *

ಮದ್ರಾಸದ 'ಸಂಡೇ ಟ್ಯಾಮ್ಸ' ಪತ್ರಿಕೆಯಲ್ಲಿ 'ಜಿ. ಎಸ್. ಆರ್'ರವರು ಬರೆಯುವದೇನೆಂದರೆ— ಮಂತ್ರೋಪಚಾರದಲ್ಲಿ "ಹಾಪಕಿನ್ ಇನ್‌ಸ್ಟಿಟ್ಯೂಟ"ನವರಿಗೆ ನಂಬಿಗೆಯಿಲ್ಲ. ಆದರೆ, ಮಂತ್ರೋಪಚಾರದಿಂದ ವಿಷಬಾಧೆ ಇಳಿಸುವ ಪ್ರಕಾರಗಳನ್ನು ಎಲ್ಲರೂ ಬಲ್ಲರು. ನಾನೊಬ್ಬ ಮಂತ್ರವಾದಿಗ ಬಲ್ಲೆ, ಆತನು ನಾಯಿ ಕಚ್ಚುವದನ್ನು ಮಂತ್ರದಿಂದ ನಿವಾರಿಸಬಲ್ಲನು. ಆತನ ಉಪಚಾರದ ಕ್ರಮ ಬಹು ಸುಲಭ. ಕಮ್ಮಪ ಮಕ್ಕಳಕ್ಕಯನ್ನು ಹಿಡಿದು, [ಕೆಮ್ಮು ಹೋಗುವದು] ಎಂದು ಆತನು ಆಶ್ವಾಸನ ಕೊಟ್ಟು ಬೆನ್ನ ಮೇಲೆ ತಟ್ಟುತ್ತಾನೆ, ಕೂಡಲೆ ಕೆಮ್ಮಿನ ಅಬ್ಬರ ಕಡಿಮೆಯಾಗಿ ವಿಕಾರವು ವಾಸಿಯಾದ ಕ್ರಮ. ಈತನು ಮೊದ್ದ ಮಂತ್ರವಾದಿ, ಆಪತ್ಕಾಲದಲ್ಲಿ ಮಂತ್ರಸಾಮರ್ಥ್ಯದಿಂದ ಬಹಳ ಮಂದಿಗಳಿಗೆ ಉಪಕರಿಸಿದ್ದಾನೆ. ಈ ಮಂತ್ರವಾದಿಯು ತನ್ನ ಕೆಲ ಅನುಭವಗಳನ್ನು ನನ್ನ ಕಡೆ ಹೇಳಿದನು. ಮಂತ್ರವಾದಿಗಳಿಗೊಂದು ನ್ಯೂನತೆಯಿದೆ, ಅವರ ಮಂತ್ರದಿಂದ ಅವರಿಗೆ ಪ್ರಯೋಜನವಾಗುವದಿಲ್ಲ. ಮಂತ್ರವಾದಿಯ ಮಗನು ಅಸ್ವಸ್ಥವಿದ್ದ ಕಾರಣಕ್ಕಾಗಿ ಇವನು ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರಿಗೆ ಕರೆತರಹೇಳಿದನು. ಆಫೀಸರರಲ್ಲಿ ಅವರ ೧೦ ವರ್ಷದ ಮಗಳು ಕಾಯಿಲೆಬಿದ್ದಿದ್ದಳು. ಅವಳ ಸ್ಥಿತಿ ಬಹಳ ಗಡುಚಾಗಿತ್ತು. ಅದರಿಂದ ಆಫೀಸರರು ಮತ್ತೊಬ್ಬ ಡಾಕ್ಟರರಿಗೆ ಕರೆಕಳಿಸಿದರು. ಇಬ್ಬರೂ ಹುಡುಗಿಗೆ ನೋಡಿ ಕೈಬಿಟ್ಟು ಹೊರಟು ಹೋಗುತ್ತಿರುವಾಗ ಮಂತ್ರೋಪಚಾರದಲ್ಲಿ ಹುರುಳಿಲ್ಲವಾಗಿ ಹಲವು ಹೇಳುತ್ತಿದ್ದರು, ಇದನ್ನು ಮಂತ್ರವಾದಿಗಳು ಕೇಳಿದರು. "ಮಂತ್ರದಿಂದ ನಾನು ಗುಣಮಾಡಿಕೊಡುತ್ತೇನೆಂದು" ಇವರು ಎದೆತಟ್ಟಿ ಹೇಳಲು, "ಗೆಳೆಯಾ, ಮೇಲೆ ಬಾ! ನಿನ್ನ ಸಾಮರ್ಥ್ಯ ತೋರಿಸು!" ಎಂದು ಹೇಳಿದರು. ಮಂತ್ರವಾದಿಗಳು ಹುಡುಗಿಗೆ ಹತ್ತಿ ಮಂತ್ರೋಪಚಾರ ನಡೆಸಿ ಕೆಳಬಂದು, "ಸ್ವಲ್ಪ ತಡೆಯಿರಿ, ಪ್ರಕೃತಿಯಲ್ಲಿ ಸುಧಾರಣೆಯಾದರೆ ನನಗೆ ತಿಳಿಸಿರಿ" ಎಂದು ಕೂತರು. ಕೆಲ ಹೊತ್ತಿನ ಮೇಲೆ ಮೂವರೂ ಮೇಲಕ್ಕೆ ಹೋದರು, ಸ್ಮೃತಿ ತಪ್ಪಿಬಿದ್ದ ಹುಡುಗಿಯು ಮಂಚದ ಮೇಲೆ ಕೂತುಕೊಂಡು, ತಂಗಿಯ ಬಳಿ ತೃಷೆ ಬೇಡುವದನ್ನು ಕಂಡರು! "ನನ್ನ ಪ್ರಕೃತಿ ಈಗ ಬಹಳ ಸುಧಾರಿಸಿದೆ, ಎದೆ ತ್ರಾಣವುಂಟು" ಹೀಗೆ ಆ ಹುಡುಗಿ ನುಡಿದಳು. "ಮುದಂತೆ ಈತ ನಡೆದನು" ಹೀಗೆ ಡಾ| ಮಾ| ಆಫೀಸರರು ಚಕಿತರಾಗಿ ನುಡಿದರು.

* * *

ಇವರು ಹೇಳಿದ ಮತ್ತೊಂದು ಅನುಭವ ಈಗಿನ ಡಾಕ್ಟರರ ಮನೋಭಾವವನ್ನು ಸೂಚಿಸುವದು: 'ನಮ್ಮಲ್ಲಿಯ ರೆವಿನ್ಯೂ ಖಾತೆಯ ಆಫೀಸರರ ಹೆಂಡತಿಗೆ ಬಹು ಕಾಯಿಲೆ. ನೀವು ನನಗೆ ಸಹಾಯ ಮಾಡಬೇಕು" ಹೀಗೆ ಆ ಮಂತ್ರವಾದಿಗಳ ಕಡೆ ಒಬ್ಬ ಡಾಕ್ಟರರು ಬಿನ್ನೈಸಿಕೊಂಡರು. ತಮ್ಮಿಂದಾದಷ್ಟು ಪ್ರಯತ್ನ ಮಾಡುತ್ತೇನೆಂದು ಮಂತ್ರವಾದಿಗಳು ಹೇಳಲು, ಡಾಕ್ಟರರು ಮುಂಜಾಗ್ರತೆ ಹೇಳಿದ್ದೇನಂದರೆ — "ನೀವು ಅವಳಿಗೆ ಪೂರ್ಣ ಗುಣ ಮಾಡಬಾರದು, ಯಾಕೆಂದರೆ, ನನಗೆ ತಿಂಗಳಿಗೆ ರೂ ೨೦೦ ನಷ್ಟವಾಗುತ್ತದೆ, ಅಷ್ಟು ಮಾತ್ರ ನೆನಪಿಟ್ಟುಕೊಳ್ಳಿರಿ!"

* * *

ಒಂದು ಬಾರಿ ಒಬ್ಬ ಕುಷ್ಟರೋಗದಿಂದ ನರಳುವ ಹುಡುಗನಿಗೆ ಇವರು ಮಂತ್ರೋಪಚಾರದಿಂದ ಗುಣ ಮಾಡಿದರು, ಕೆಲ ಕಾಲದ ತರುವಾಯ ಆತನು ತೀರಿಕೊಂಡನು. ಈ ಸುದ್ದಿ ಮಂತ್ರವಾದಿಗಳಿಗೆ ತಿಳಿದೊಡನೆ 'ಆರೋಗ್ಯದಿಂದ ಹೆಚ್ಚು ಕಾಲ ಬದುಕುವದು ಆತನ ಹಣೆಬರಹದಲ್ಲಿರಲಿಲ್ಲ'ವಾಗಿ ಉದ್ಗರಿಸಿ ಇವರು ಸಮಾಧಾನಪಟ್ಟರು.

* * *

ಇವರ್ಯಾರು? ಹೆಸರು ಪ್ರಕಟಿಸಲು ಇವರು ತಯಾರಿಲ್ಲ, ಇವರಿಗೆ ಪ್ರಸಿದ್ಧಿ ಬೇಡ, ಮಿತಭಾಷಿಗಳು, ದೊಡ್ಡ ಸರಕಾರಿ ಹುದ್ದೆದಾರರು. ನಿಸ್ಪೃಹತನದಿಂದ ಇವರು ಈ ಪರೋಪಕಾರದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಮೂಲಕ 'ಜಿ. ಎಸ್. ಆರ್' ರವರು ಅವರ ಪತ್ತೆಯನ್ನಾಗಲಿ, ಹೆಸರನ್ನಾಗಲಿ ಪ್ರಕಟಿಸಲಿಲ್ಲ.

* * *

ಅಚ್ಚಿನಲ್ಲಿದೆ! ತ್ವರೆ ಮಾಡಿರಿ!!

ಕರ್ಕಿಯ ವೇ| ಸೂರಿ ಕೃಷ್ಣ ಭಟ್ಟ ಹಾಗು ನೊಗೇರಿಯ ವೇ| ರಾಮಪ್ಪ ಅಡಿಗ ಇವರಿಂದ

ಸೂರ್ಯಸಿದ್ಧಾಂತ ರೀತ್ಯಾ ಗುಣಿಸಿ ಪರಿಶೋಧಿಸಲ್ಪಟ್ಟ

ಯುವ ಸಂವತ್ಸರ ಪಂಚಾಂಗವು

ಅಚ್ಚಿನಲ್ಲಿದೆ! ನವಂಬರ ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವದು!

ನಿಯಮಿತ ಪ್ರತಿಗಳು ತೆಗೆದಿರುವದರಿಂದ ಬೇಕಾದವರು ಮುಂದಾಗಿ ತಿಳಿಸಬೇಕು.

ಜಾಹೀರಾತುದಾರರು ತ್ವರೆ ಮಾಡಬೇಕು!!

ಪತ್ತೆ:— ಮೆನೇಜರ, "ಸ್ಟಾರ ಆಫ್ ಕೆನರಾ ಪ್ರೆಸ್", ಕುಮಟಾ. (ಉ. ಕನ್ನಡ)

ಕಾನಡಾವೃತ್ತ.

ಸ್ತಿ ಭಾವ ಸಂ। ಭಾದ್ರಪದ ವ। ೩೦ಸ್ಯ, ಸೋಮವಾರ

ಮಹಾತ್ಮರ ವರ್ಧಂತಿ.

ಮಹಾತ್ಮರಿಗೆ ಕಳೆದ ವಾರದಲ್ಲಿ ೬೬ ನೇ ವರ್ಷ ಮುಟ್ಟಿತು. ಆ ಸಮಯ ಇಡೀ ಹಿಂದುಸ್ಥಾನದಲ್ಲಿ ಪ್ರಚಂಡ ಸಭೆಗಳಾಗಿ ಮಹಾತ್ಮರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತಿಯಾಗಲೆಂದು ಜಗಚ್ಚಾಲಕನನ್ನು ಸಮಸ್ತರೂ ಪ್ರಾರ್ಥಿಸಿಕೊಂಡರು. ಮಹಾತ್ಮರು ರಾಷ್ಟ್ರೀಯ ಸಭೆಯ ಸೂತ್ರಚಾಲಕರು, ಕುಶಲ ಕರ್ಣಧಾರರು, ಸತ್ಯಶೋಧಕರು, ಅಹಿಂಸಾ ಪ್ರಚಾರಕರು, ಹರಿಜನೋದ್ಧಾರಕರು, ಸ್ವದೇಶೋದ್ಧಾರಕರು, ಸ್ವಧರ್ಮನಿಷ್ಠರು, ಪರಧರ್ಮ[illegible], ಅಜಾತಶತ್ರುಗಳು, ನಿಸ್ಪೃಹರು, [illegible], ಸಮಸ್ತ [illegible] ಸಾಮ್ರಾಜ್ಯದಲ್ಲಿ [illegible] ಮಾಡಬೇಕೆಂದು ಸದಾ ಬಯಸುವ [illegible]. ಲೋಕದೊಳಗೆ ಹಬ್ಬಿಕೊಂಡ ಲೋಕಕಂಟಕ ಬಲಾತ್ಕಾರವನ್ನಲ್ಲ ಆತ್ಮಕ್ಲೇಶದಿಂದ ಪರಿಹರಿಸಿಕೊಳ್ಳುವ ಅನುಪಮೀಯ ಸತ್ಯಾಗ್ರಹಿಗಳು. ಬಹುಜನಸಮಾಜದ ಕಲ್ಯಾಣವನ್ನೇ ಯಾವಾಗಲೂ ಚಿಂತಿಸಿಕೊಂಡು ಹಗಲಿರುಳು ಅದಕ್ಕಾಗಿ ಹೆಣಗಾಡುತ್ತಿರುವ ಸತತೋದ್ಯೋಗಿಗಳು. ಜನಸಾಮಾನ್ಯ ಸ್ತ್ರೀ-ಪುರುಷರಿಗೆಲ್ಲ ಅನುಕೂಲವಾಗುವಂತೆ ಕೈರಾಟಿಯ ಮೂಲಕ ಜೀವನೋಪಾಯವನ್ನು ಕಲ್ಪಿಸಿಕೊಟ್ಟ ಪುಣ್ಯಪುರುಷರು. ಖಾದಿಯನ್ನೇ ದೇಶತುಂಬ ಪ್ರಚುರಗೊಳಿಸಿ ದೇಶಬಾಂಧವರೊಳಗೆ ಸ್ವದೇಶಭಕ್ತಿಯನ್ನು ಪ್ರಚೋದಿಸಿ ರಾಷ್ಟ್ರೀಯ ಸಭೆಯ ಧ್ಯೇಯವನ್ನು ದೇಶತುಂಬ ಪ್ರಚಾರ ಮಾಡಿದ ಕಾರ್ಯಕುಶಲ ಲೋಕನಾಯಕರು. ಸತ್ಯ-ಅಹಿಂಸೆಗಳ ಪ್ರಚಾರದಿಂದ ಹಿಂಸಾಚಾರಿ ಶಸ್ತ್ರಧಾರಿ ರಾಷ್ಟ್ರಗಳಿಗೆ ಜಗತ್ತಿನಲ್ಲಿ ಶಾಂತತೆ ಪ್ರಸ್ಥಾಪಿಸುವ ಸುಲಭೋಪಾಯವನ್ನು ತೋರಿಸಿಕೊಟ್ಟ ಶಾಂತಿದೂತರು. ಇಂಥ ಪರಮ ಪುರುಷರು ನಮ್ಮ ಭಾರತವರ್ಷದಲ್ಲಿ ಹುಟ್ಟಿ ಬೆಳೆದದ್ದು ನಮ್ಮ ಹಿಂದವಾಸಿಯರ ಅಪೂರ್ವ ಭಾಗ್ಯ. ಇಂಥ ನರಪುಂಗವರಿಗೆ ಕಳೆದ ವಾರ ೬೫ನೇ ವರ್ಷ ಪೂರ್ತಿಯಾಗಿ ೬೬ನೇ ವರ್ಷ ಮುಟ್ಟಿತು. ಈ ಶುಭ ಪ್ರಸಂಗವನ್ನು ಒದಗಿಸಿತಂದ ಬಗ್ಗೆ ನಾವು ದಯಾಘನನ ಪರಮೋತ್ಕೃಷ್ಟ ಉಪಕಾರವ ಸ್ಮರಿಸುತ್ತೇವೆ. ಇಂಥ ವರ್ಧಂತಿಯ ಪ್ರಸಂಗಗಳನ್ನು ಮತ್ತೂ ಅನೇಕ ಸಲ ಒದಗಿಸೆಂದು ಮಹಾತ್ಮರ ಹೊಗಳಿಕೆಯನ್ನು ದೇಶಬಾಂಧವರಿಂದ ಮಾಡಿಸಿಕೊಳ್ಳಬೇಕಾಗಿಯೂ ಆವನೆಡೆಗೆ ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ.

ಆಹಹ! ಮಹಾತ್ಮರು ಧನ್ಯರು! ಸರ್ವರೂ ಪಕ್ಷಭೇದಗಳನ್ನೆಲ್ಲ ಮರೆತು ಮಹಾತ್ಮರಿಗೆ ಹೊಗಳುತ್ತಾರೆ. "ಗಾಂಧೀಜಿಯವರು ಮಾನವಕೋಟಿಯ ಇತಿಹಾಸದಲ್ಲಿ ಯುಗವಿಶೇಷವನ್ನೊಂದು ಹಚ್ಚಿಸಿದ್ದಾರೆ. ಲೋಕದಲ್ಲಿ ಜೀವನಕಲೆಯನ್ನು ತುಂಬಿ [illegible] ಪ್ರಾಪ್ತಿ ಮಾಡಿಕೊಳ್ಳಲು ಹಚ್ಚಿದ ಶಕಪುರುಷರಿವರು" ಹೀಗೆ ಕವಿಶ್ರೇಷ್ಠ ರವೀಂದ್ರನಾಥ ಠಾಕೂರರವರು ಮಹಾತ್ಮರಿಗೆ ಹಾಡುತ್ತಾರೆ. "ಕೈರಾಟಿಯನ್ನೂ ಖಾದಿಯನ್ನೂ ಉಪದೇಶಿಸಿ ಮಹಾತ್ಮರ ಬಡಬಗ್ಗರಿಗೆ ಸಂಜೀವನಿಯ ಉಪಾಯ ತೋರಿಸಿಕೊಟ್ಟು ದೇಶದೊಳಗೆ ಸಂಪತ್ತಿನ ಉದಯ ಮಾಡಿದರು." ಪಂಡಿತ ಮದನ ಮೋಹನ ಮಾಲವೀಯರವರು ದಿಲ್ಲಿಯೊಳಗೆ ಸೇರಿದ ಸಭೆಯಲ್ಲಿ ಸುತ್ತಿನ ಮಹಾತ್ಮರಿಗೆ ಹರಸಿದರು. [illegible] ಸಮ್ಯದ [illegible] ವರ್ಧಂತಿಯ ಶುಭಪ್ರಸಂಗದಲ್ಲಿ ಮಹಾತ್ಮರಿಗೆ ಅಭಿನಂದಿಸುವಾಗ [illegible] ಹೇಳಿದ್ದೇನಂದರೆ — 'ಸ್ವತಃ [illegible] ಬೇರೆಯವರಿಗೆ ೧೦ ವರ್ಷಗಳ ಅವಧಿಯಲ್ಲಿ [illegible] ಸ್ವಾತಂತ್ರ್ಯ [illegible] ಮಾಡಿ [illegible] ವರ್ಷದಲ್ಲಿ [illegible] ಮಹಾ ಪುರುಷರು ಬಂದು [illegible] ಇತಿಹಾಸದಲ್ಲಿ [illegible] ೧೫೦ ವರ್ಷಗಳ [illegible] ಸ್ವಾತಂತ್ರ್ಯಪಂಕದಲ್ಲಿ [illegible] ಹಿಂದೀ ಜನಾಂಗದ [illegible] ಸತ್ಯಾಗ್ರಹ ಸಂಗ್ರಾಮ [illegible] ಪಡೆದ ಸಂಪೂರ್ಣ ಶ್ರೇಯಸ್ಸು ಮಹಾತ್ಮರಿಗೇ ಸಲ್ಲತಕ್ಕದ್ದು.' ಹೀಗೆ [illegible] ಮಹಾತ್ಮರಿಗೆ ದಸ್ತೈವಜ [illegible]. [illegible] ಗಾಂಧೀಜಿಯವರ ಹೆಸರು ಅಪೂರ್ವ ಕ್ರಾಂತಿ ಪುರುಷರೆಂದು ಇತಿಹಾಸದಲ್ಲಿ [illegible] ಸ್ತ್ರೀ ಕನ್ನಡಿಯ [illegible] ಮಹಾತ್ಮರಿಗೆ [illegible] ಸಿದರು. [illegible] ಮಹಾತ್ಮರು [illegible] ಸಮಯ [illegible] ಹೀಗೆ [illegible] ಸರದಾರ [illegible] ಮಾರ್ಗದರ್ಶಿಗಳಾದವರು [illegible] ಸಮಯದ ಪ್ರಸಂಗದಲ್ಲಿ, [illegible] ಈ ಪ್ರತಿ [illegible] ಉದ್ಗರಿಸಿದ್ದನ್ನು ಕೇಳಿ ನಮಗೆ ಆನಂದವಾಗಿದೆ. ಮಹಾತ್ಮರಂಥ [illegible] ಕಾಲದಲ್ಲಿ ಜನ್ಮ ಕೊಟ್ಟ [illegible] ಜಗದೀಶನಿಗೆ ಕೃತಜ್ಞರಾಗಿರುವರು.

ಮಹಾತ್ಮರ ವರ್ಧಂತಿಯನ್ನು ಮಹಾತ್ಮರಿಗೆ ಸಂತೋಷವಾಗುವಂತೆ [illegible] ಅವರು ಒದ್ದರಿಂದ ಮಹಾತ್ಮರ [illegible] ಸಂಗ್ರಹ ಮಾಡುವದು ಕಠಿಣ ಕೆಲಸವಲ್ಲ. ಶೀರ ಸುಲಭವಾದ ಮಾತು ಕೈರಾಟಿಯ ನೂಲು ನೂಲಬೇಕು. ಆ ನೂಲಿನಿಂದ ತಯಾರಿಸಿದ ಖಾದಿಯನ್ನು ಕೊಳ್ಳಬೇಕು. [illegible] ಬರಿದೇ ಸ್ಪರ್ಶ ಮಾಡಬಾರದು. [illegible] ಕೈರಾಟಿಗಳಿಗೆ ಪ್ರೋತ್ಸಾಹ ಕೊಡಬೇಕು, ಮದ್ಯಸ್ಪರ್ಶಿಸಬಾರದು, ವ್ಯಸನಿ ಬಾಂಧವರಿಗೆ ಮದ್ಯಪಾನದಿಂದುಂಟಾಗುವ ಅನರ್ಥಗಳನ್ನು ತಿಳಿಸಬೇಕು. ಅಸ್ಪೃಶ್ಯತೆಯಿಂದ ಪರಿತ್ಯಕ್ತರಾಗುವ ಹರಿಜನರ ಉಚ್ಚನೀಚವೆಂಬ ಭೇದಭಾವವನ್ನು ತೊರೆದು ಹರಿಜನರು ಸ್ವಬಾಂಧವರೆಂದೇ ಎಣಿಸಿ ಅವರಿಗೆ ಸರಿಕರಂತೆ ನಡೆಸಿಕೊಳ್ಳಬೇಕು. ಹಿಂದೂ-ಮುಸಲ್ಮಾನರಲ್ಲಿ ಕಲಹ ಹುಟ್ಟಾಗದಂತೆ ಜಾಗ್ರತೆ ಕೊಳ್ಳಬೇಕು. ಐಕ್ಯ ನೆಲೆಗೊಳ್ಳುವಂತೆ ಅಂತಃಕರಣಪೂರ್ವಕವಾಗಿ ದುಡಿಯಬೇಕು, ಎಲ್ಲರೂ ಮಿತ್ರರು, ಒಂದವರು ಎಂಬ ಭಾವನೆಯಿಂದ ನಡಕೊಂಡು ದೇಶೋದ್ಧಾರ ಕಾರ್ಯನಿರತರಾಗಬೇಕು. ಸ್ವ-ಪರವೆಂಬ ಭೇದಭಾವವಿಲ್ಲದೆ ನಡಕೊಳ್ಳಬೇಕು. ಈ ಕಾರ್ಯದಲ್ಲಿ ಕಠಿಣವಾದದ್ದೇನಿದೆ? ಮಹಾತ್ಮರ ಪ್ರೀತಿಸಂಗ್ರಹಕ್ಕಾಗಿ ನಾವು ಈ ಕಾರ್ಯಗಳನ್ನು ಕೈಕೊಳ್ಳುತ್ತಿದ್ದಾಗ್ಯೂ ಅದರಿಂದ ನಮಗೇ ಶ್ರೇಯಸ್ಸಿದೆ. ಸಮಸ್ತರೂ ಶ್ರೇಯೋಭಾಗಿಗಳಾಗಬೇಕೆಂದು ಮಹಾತ್ಮರ ಸಕ್ಕಂಕಲ್ಪವಿದೆ.

ಇಂಥ ಗುಣಸಂಪನ್ನ, ದೇಶೋದ್ಧಾರಕಾರ್ಯನಿರತ, ಪೂರ್ಣಸ್ವರಾಜ್ಯಕಾಂಕ್ಷಿ, ಸತ್ಯಸಂಧ, ಸತ್ಯಾಗ್ರಹಿ, ಸತ್ಯಶೋಧಕ ಮಹಾತ್ಮರ ವರ್ಧಂತಿ ಉತ್ಸವವು ದೇಶತುಂಬ ನಡಯಿತು. ಅಲ್ಲಲ್ಲಿ ಸ್ವಯಂಸೇವಕರು ಮನೆಮನೆಗೆ ಹೋಗಿ ಖಾದಿಯ ಮಾರಾಟ ಮಾಡಿ ಮಹಾತ್ಮರ ಲೋಕೋದ್ಧಾರದ ಯೋಜನೆಯನ್ನು ದೇಶಬಾಂಧವರಿಗೆ ತಿಳಿಸಿಕೊಟ್ಟಿದ್ದಾರೆ. ಮಹಾತ್ಮರಿಗೆ ದನ್ಯವಾದಗಳನ್ನರ್ಪಿಸುವಾಗ, ಜಗಚ್ಚಾಲಕನ ಉಪಕಾರ ಸ್ಮರಿಸುವಾಗ ದೇಶಬಾಂಧವರು ಮಹಾತ್ಮರಿಗೆ ಪ್ರೀತಿಯಾಗುವ ಕಾರ್ಯದ ದೀಕ್ಷೆ ಪಡಕೊಂಡು ತಮ್ಮ ತಮ್ಮ ಬುದ್ಧಿಯಮಟ್ಟಿಗೆ, ತಮ್ಮ ತಮ್ಮ ಶಕ್ತಿಯಮಟ್ಟಿಗೆ ಮಹಾತ್ಮರ ಕಾರ್ಯಕ್ರಮ ಪಾಲಿಸಬೇಕಾಗಿ ನಮ್ಮ ಬಿನ್ನಹವಿದೆ. ಯಾಕೆಂದರೆ ಮಹಾತ್ಮರಿಗೆ ವಾಚಾಲತನಕ್ಕಿಂತ ಪ್ರತ್ಯಕ್ಷ ಆಚಾರವೇ ಸಂತೋಷಪ್ರದವಿದೆ. ಮಹಾತ್ಮರ ವರ್ಧಂತಿಯ ಸಮಯ ಇದಕ್ಕೂ ಹೆಚ್ಚಿಗೆ ಇನ್ನೇನು ಹೇಳುವದು? ಮಹಾತ್ಮರಿಗೆ ೬೬ನೇ ವರ್ಷ ಮುಟ್ಟಿದ ಬಗ್ಗೆ ಪುನಃ ಅಭಿನಂದಿಸಿ, ಇಂಥ ಅನೇಕ ಸುದಿನಗಳು ನಮಗಾಗುವಂತೆ ಕರುಣಿಸಬೇಕೆಂದು ಜಗನ್ನಿಯಾಮಕನಲ್ಲಿ ನಾವು ದೈನ್ಯಗೊಂಡು ಪ್ರಾರ್ಥಿಸುತ್ತೇವೆ.

ಸ್ಫುಟ ಸೂಚನೆಗಳು.

೧ ಮಹಾತ್ಮರ ಜಯಂತಿಯ ಪ್ರೀತ್ಯರ್ಥ ಹೊರಡಿಸಿದ ಖಾದಿ ಪತ್ರಿಕೆ ಸಂಚಿಕೆಯಲ್ಲಿ ಶ್ರೀ। ಹರಿಭಾವು ಗೋವಿಂದಜಿಯವರು ಪ್ರಕಟಿಸಿದ ಸಂಗತಿ ಚಿತ್ತವೇಧಕವಿದೆ. ಕೈರಾಟಿಯ ಮೂಲಕ ಮಹಾತ್ಮರು ನಡಿಸುವ ಲೋಕೋದ್ಧಾರದ ಕಲ್ಪನೆಯೂ ಜನರಿಗೆ ತಿಳಿಯುವಂತಿದೆ. ಶ್ರೀ। [illegible]ರು ಅನಂತಪುರದವರು. ಅಲ್ಲಿಂದ ೩ ಮೈಲಿನ ಮೇಲೆ ಸ್ವಂತ ಬಿಡಾರ ಎಂಬ ಗ್ರಾಮವಿದೆ. ಅಲ್ಲೊಬ್ಬ ಐಶ್ವರ್ಯವಂತ ಜೈನ ಸಾವಕಾರರಿದ್ದರು. ಮುಂದಿಗೆ ಹಣ ಕೊಟ್ಟು ಬಡ್ಡಿಯಿಂದ ಹೇರಳ ಸಂಪಾದನ ಮಾಡುತ್ತಿದ್ದರು. ಕಳೆದ ಎರಡು ವರ್ಷಗಳ ಹಿಂದೆ ಅವರು ಅಸ್ವಸ್ಥಬಿದ್ದು ಆಕಸ್ಮಾತ್ತಾಗಿ ತೀರಿಕೊಂಡರು. ಅವರಿಗೆ ಮೂರು ಮಕ್ಕಳು. ಕೇಶವ ಚಿಜಂಗ, ಸೋಮಚಂದ, ತೇಜಸಿಂಗ ಎಂದು. ಅವರ ಅನುಕ್ರಮವಾಗಿ [illegible] ೧೨, ೧೦ ವರ್ಷ ಪ್ರಾಯದವರು. ಸಾವಕಾರರು ತೀರಿದ ಬಳಿಕ [illegible] ಹೆಂಡತಿಯಿಂದ [illegible] ಕಡೆಯಿಂದ [illegible] ಬರಲಿಲ್ಲ, "[illegible] ಕೊಡುವದಿಲ್ಲ" ಎಂದು ಹೇಳಿದರು. ಅಸ್ವಸ್ಥರಲ್ಲಿ ಹುಡುಗರ ತಾಯಿಯೂ ತೀರಿಕೊಂಡಳು. ಹೀಗೆ ಆ ವರ್ಷಗಳಲ್ಲಿ ಐಶ್ವರ್ಯ ವಸ್ತಿಯೊಳಗಿರುತ್ತಿದ್ದ ಮಕ್ಕಳು ನಿರ್ಗತಿಕರಾದರು. ಕಾಯಕವನ್ನು ಮಾಡಲು ಕಲಿಸಲಿಲ್ಲ. ಈ ಪ್ರಕಾರ ಅವರ ಅವಸ್ಥೆಯಾಗಿರಲು, ಖಾದಿ ಭಂಡಾರದವರು ಅಲ್ಲಿ ಹೋಗಿ ಇವರಿಗೆ ಕೈರಾಟಿಯ ಮೇಲೆ ನೂಲುಗಳಿಸಿದರು. ಕೊಂಚ ಕಲಿಸಿದಂತೆ ಪ್ರವೃತ್ತಿ [illegible] ತನ್ನಂತಿರು ಈ ವ್ಯವಸಾಯದಿಂದ ತಿಂಗಳಿಗೆ [illegible] ಸಂಪಾ

ದನ ಮಾಡಿ ಈಗ ಸುಖದಿಂದಿದ್ದಾರ ಇವರ ಸ್ಥಿತಿ ನೋಡಿ ಗ್ರಾಮದಲ್ಲಿ ಅನೇಕರು ಸಾಲಗಳಿಂದ ಉದ್ಯೋಗಿಗಳಾಗಿದ್ದಾರೆ. ಕೈಗಾರಿಕೆಯಿಂದ ಈ ಪ್ರಕಾರ ಸ್ವಾವಲಂಬನ ಗ್ರಾಮಕ್ಕೆ ಕಲ್ಯಾಣವಾಗಿದೆ. ಇದರಂತೆಯೇ ಕೈಗಾರಿಕೆಯು ಸಮಸ್ತ ಗ್ರಾಮಗಳಲ್ಲಿ ಪ್ರಚಾರವಾದರೆ ದೇಶದಲ್ಲಿ ಹಬ್ಬಿದ ನಿರುದ್ಯೋಗವು ಬಯಲಾಗಿ, ಬಡಬಗ್ಗರಿಗೆ ಹೊಟ್ಟೆಯ ಗೋಳು ಪರಿಹರಿಸಲು ಅನುಕೂಲವಾಗುವಂತಿದೆ ಎಂದು ಹೋದ ವಾರ ಮಹಾತ್ಮಾ ಗಾಂಧಿಯವರು ಈ ಸಂಗತಿಯನ್ನು ಪ್ರಕಟಿಸಿದ್ದಾರೆ.

---

೬ ಈಗ ಬೇಕಾದರ ಶ್ವೇತಪತ್ರಿಕೆಯ ರಾಜ್ಯಯೋಜನೆ ಹಿಂದುಸ್ಥಾನದಲ್ಲಿ ಜಾರಿಗೆ ಬರಲೇಬೇಕು. ನಾವು ಉಚಿತ ವಿಚಾರವಂತರೆಂದು ಸರಕಾರ ಮಾನ್ಯತೆ ಪಡೆದ ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಈ ರಾಜ್ಯಯೋಜನೆಯನ್ನು ಹೀಯಾಳಿಸಲಾರಂಭಿಸಿದ್ದಾರೆ. ಸಮಸ್ತ ಪಂಗಡದವರು ಹಳಿದ ರಾಜ್ಯಯೋಜನೆಗಿಂತ ಶ್ವೇತಪತ್ರಿಕೆಯ ರಾಜ್ಯಯೋಜನ ಕೇವಲಗತಿಯದೆಂದು ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಮುಂಬಯಿಯ ಸಭೆಯಲ್ಲಿ ಸಾರಿದರು. ಸ್ವಸ್ಥ ಮಾತೆಯು ಉಂಡಿಯುದರದು ಅದನ್ನು ಹಿಂದೀಯರಿಗೊಪ್ಪಿಸಬೇಕು. ಅದಕ್ಕಾಗಿ ಹಿಂದೀಯರು ಸಿದ್ಧರಾಗಿರಬೇಕು. ಎಂಬದಾಗಿ ಸೈಮನ್ ರಿಪೋರ್ಟಿನಲ್ಲಿ ಸೂಚಿಸಿದ್ದು, ಶ್ವೇತಪತ್ರಿಕೆಯಲ್ಲಿ ಸ್ವಸ್ಥ ಮಾತೆಯ ಕಾರುಭಾರು ಒಪ್ಪಿಸುವ ಉಲ್ಲೇಖವಿಲ್ಲ, ಪ್ರಾಂತಿಕ ಸ್ವಾಯತ್ತತೆಯಲ್ಲಿಯಾಗಲಿ ಸೈಮನ್ ರಿಪೋರ್ಟ ಶ್ವೇತ ಪತ್ರಿಕೆಯ ಯೋಜನಗಿಂತ ಪ್ರಗತಿಪರವಾದದ್ದಿದೆ ಮಧ್ಯವರ್ತಿ ಸರಕಾರವನ್ನು ಹಿಂದೀಯರಿಗೊಪ್ಪಿಸಲು ಸೈಮನ್ ರು ತಯಾರಿದ್ದಿಲ್ಲ. ಶ್ವೇತ ಪತ್ರಿಕೆಯ ಯೋಜನೆಯಲ್ಲಿ ಮಧ್ಯವರ್ತಿ ಸರಕಾರವನ್ನು ಹಿಂದೀಯರಿಗೊಪ್ಪಿಸುವ ಸಂಕಲ್ಪವಿದೆ. ಆದರೆ, ಆ ಸಂಕಲ್ಪವು ವ್ಯಾಜಬಿಕ್ಕೂ ದೂರವಾಗಿದೆ, ಹೀಗೆ ನೇಕ ನಾಮದಾರ ಶಾಸ್ತ್ರಿಗಳು ಉದ್ಗರಿಸಿ, ಶ್ವೇತಪತ್ರಿಕೆಯನ್ನು ಧಿಕ್ಕರಿಸಬೇಕಾಗಿ ನುಡಿದರು. ನೇಕ ನಾಮದಾರ ಶಾಸ್ತ್ರಿಗಳಂಥ ರಾಜನಿಷ್ಠ ಲಿಬರಲ್ ಪಕ್ಷಪಾತಿ ಬ್ರಿಟಿಶರ ಅಭಿಮಾನಿ, ನಮ್ಮಿಹಾರಿ ಪ್ರಮುಖರು ಹೀಗೆ ಅಭಿಪ್ರಾಯಪಟ್ಟ ಬಳಿಕ, ಶ್ವೇತಪತ್ರಿಕೆಗೆ ಹಿಂದುಸ್ಥಾನದಲ್ಲಿ ಆಶ್ರಯವೆಲ್ಲಿ ತಿಗಬೇಕು?

---

೩ ಅದಾಗ್ಯೂ, ಬ್ರಿಟಿಶ ಮುತ್ಸದ್ದಿಗಳ ಕಪಟ ನಾಟಕಕ್ಕೇನು ಕೊಂದರೆಯುಳ್ಳ ಶ್ವೇತಪತ್ರಿಕೆಯ ರಾಜ್ಯಯೋಜನೆಯನ್ನು ಕೊಡಮಾಡಿದ್ದರಿಂದ ಮಿ| ಬೋಲ್ಡವಿನ್ನರವರ ರಾಜಪಕ್ಷದವರಲ್ಲಿ ದೊಡ್ಡ ಗಲಭೆ ಶ್ವೇತಪತ್ರಿಕೆಯ ಪುರಸ್ಕರ್ತರಾದ ಬ್ರಿಟಿಶ ಪ್ರಧಾನ ಮಂಡಳದ ಮಿ| ಬೋಲ್ಡವಿನ್ನರವರಿಗೂ, ಅದೇ ಪಕ್ಷದ ಪ್ರಮುಖರಾದ ಸರ್ ಹೆನ್ರಿ ಪೇಜಕ್ರೊಫ್ಟ್‌ರವರಿಗೂ ಬಲು ದೊಡ್ಡ ವಾದವೆದ್ದಿದೆ. ಕಳೆದ ಗುರುವಾರ ಬ್ರಿಸ್ಟಲದಲ್ಲಿ ರಾಜಪಕ್ಷದ ಸಭೆಯಾಗಿ ಶ್ವೇತಪತ್ರಿಕೆಯ ರಾಜ್ಯಯೋಜನೆಯ ಮೇಲಿನ ಕರಿ ಸ್ಕಾರ ಮರಿಹರಿಸಿಕೊಳ್ಳಬೇಕಾದರೆ ಸಾಕು ಬೇಕಾಯಿತು ಮಿ| ಬೋಲ್ಡವಿನ್ನರಿಗೆ ೫೪೩ ಮತಗಳು, ಪೇಜಕ್ರೊಫ್ಟರವರಿಗೆ ೫೨೦ ಮತಗಳು ಬಿದ್ದು ಬೋಲ್ಡವಿನ್ನರೇ ಗೆದ್ದರು "ಬಿದ್ದರೇನಾಯಿತು? ನಮ್ಮ ಮೀಸೆಗೆ ಮಣ್ಣು ಹತ್ತಿತೇ?" ಎಂದು ಪೇಜಕ್ರೊಫ್ಟ್ ಪಕ್ಷದ ಪ್ರತಿನಿಧಿಗಳು ಮತ್ತೊಬ್ಬರನ್ನು ನೋಡಿ ತಮ್ಮ ಬೆನ್ನು ತಟ್ಟಿಕೊಂಡರು. ಜ್ಯಾಂಟ ಪಾರ್ಲಿಮೆಂಟರಿ ಕಮಿಟಿಯ ರಿಪೋರ್ಟ ಪ್ರಕಟವಾದ ಬಳಿಕ, ರಾಜಪಕ್ಷದ ಸಭೆಯಾಗುವದಿದೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಸಭಾಸದರು ಶ್ವೇತಪತ್ರಿಕೆಗಾಗಿ ಲೋಕಸಂಗ್ರಹ ಮಾಡುವ ಸುದ್ದಿ ತಮಗ ತಿಳಿದು ಬಂದಿದೆಂದು ಎದೆಯೊಡೆದ ಚರ್ಚಿಲರು ಉದ್ಗರಿಸಿ, ರಾಜಪಕ್ಷದ ಸಭೆಯಲ್ಲಿ ಅಕಾಂಡ ತಾಂಡವ ಮಾಡಿದಾಗ 'ಡೈಲಿ ಮೇಲ್' ವಾರ್ತಾವಾಹಕರ ಸೃಷ್ಟಿ ಇದರ ಮೇಲಿಂದ ಬ್ರಿಟಿಶ ಮುತ್ಸದ್ದಿಗಳ ಬಂದಹಿತದ ಕಲ್ಪನ ಓದಬಂದದ ವರಿಗೆ ಗ್ರಹಿಕೆಯಾಗುವಂತಿದೆ. ಸೈಮನ್ ರಿಪೋರ್ಟ ನಿಷೇಧಿಸಲ್ಪಟ್ಟಿತೆಂದು ಇಂಗ್ಲಿಷ್ ದೊರೆಗಳು ಮರುಗುವದು ಸ್ವಮತಕ್ಕೆ ಹಾನಿ ರಾಜ್ಯಾಧಿಕಾರದ ಪಾತ್ರವನ್ನು ಹೊರಡಿಸಿ ಬ್ರಿಟಿಶ-ಹಿಂದೀ ಪ್ರಮುಖರನ್ನು ಕರಿಸಿಕೊಂಡು. ತಯಾರಿಸಿದ ಶ್ವೇತಪತ್ರಿಕೆಯ ರಾಜ್ಯಯೋಜನೆಯಲ್ಲಿ ಸೈಮನ್ ರಾಜ್ಯಯೋಜನೆಯಷ್ಟು ಸಹ ರಾಜ್ಯಾಧಿಕಾರವಿಲ್ಲದ ಬಗ್ಗೆ ಬ್ರಿಟಿಶರ ಕಾರಸ್ಥಾನವನ್ನು ಹೊಗಳಬೇಕೋ? ಅದನ್ನು ಅದಕ್ಕೆ ಸಹ ಬ್ರಿಟಿಶ ದೊರೆಗಳವರು ವಿರೋಧ ಮಾಡುವದರಿಂದ ಅದರೊಳಗೆ, ಕೆಲ ಮಟ್ಟಿಗೆ ಸ್ವಾತಂತ್ರ್ಯವಿರಬೇಕಾದ ಸಂಭವವಿದ್ದದರಿಂದ ಅವನ್ನು ಹಿಂದೀಯರು ಪುರಸ್ಕರಿಸದಿದ್ದರೆ, ಅಷ್ಟು ಅಧಿಕಾರ ಸಹ ಇಂದಿನ ಹಿತಕಲ್ಯಾಣದ ಸಹನ ಸಿಂಧುಕ ಸಿಗಬಹುದೆಂಬ ಸೋಗಿಗೆ ಮರುಳಾಗಬೇಕೇ? ಬ್ರಿಟಿಶ ಮುತ್ಸದ್ದಿಗಳಿಗೆ ಹಿಂದುಸ್ಥಾನಕ್ಕೆ ಹಿತ ಮಾಡಬೇಕೆಂಬ ಚಿಂತೆಯಿದ್ದ, ಬಾಂಧವರು ವಿರೋಧ ಮಾಡುತ್ತಾರೆ, ಆದರಿಂದ ಅವರ ನಿರುಪಾಯವಾಗಿದೆ. ಈ ನಾಟಕವನ್ನು ಹಿಂದೀಯರು ಸಾಂಕಿಗ್ಯ ಸ್ವರಾಜ್ಯಯುಗದಲ್ಲಿ ನೋಡಿದ್ದೆ, ಈಗ ಅನುಭವಿಸುವದು! ಪುನಃ ಪುನಃ ಅದೇ ನೀಚ ಬರಿಕೊಂಡು ಕುಣಿಯುವದರಿಂದೇನು ಪ್ರಯೋಜನ? ಈ ಯೋಜನೆ ಇಂಗ್ಲಿಷ್ ದೊರೆಗಳ ಪಾಸಾದರು ರಾಜ್ಯಪದ್ಧತಿಯು ಜಾಹೀರ ನಾಮಗಳಿಗೆ ತಕ್ಕದ್ದಲ್ಲವೆಂದೂ, ಅದನ್ನು ಪ್ರಚುರಪಡಿಸಿದ್ದಲ್ಲಿ ವಿಶ್ವಾಸಘಾತವಾಗುವದೆಂದೂ ನೇಕ ನಾಮದಾರ ಶಾಸ್ತ್ರಿಗಳೇ ಉದ್ಗರಿಸಿದ ಬಳಿಕ, ನಾವೇನು ಅವನ್ನು ಉಳಿಯಿತು? ಬೋಲ್ಡವಿನ್-ಪೇಜಕ್ರೊಫ್ಟರವರ ಕಪಟ ಕಾರಸ್ಥಾನಗಳ ಮರ್ಮ ಇನ್ನು ಹೇಳುವದುಳಿಯಿತೇ?

ವೃತ್ತಸಾರ.

— ಅಖಿಲ ಭಾರತೀಯ ಖಾದೀ ಪ್ರದರ್ಶನವನ್ನು ಗಡಿನಾಡಿನ ಗಾಂಧಿಗಳಾದ ಖಾನ ಅಬ್ದುಲ್ ಗಫಾರ ಖಾನರವರು ಅಕ್ಟೋಬರ ತಾ ೨೦ ನೇಗೆ ತೆರೆಯುತ್ತಾರ. ಮಹಾತ್ಮರು ಅಕ್ಟೋಬರ ತಾ ೨೦ ನೇಗ ಮುಂಬಯಿಗ ಬರುತ್ತಾರೆ. ಆ ದಿನ ಮಹಾತ್ಮರ ಜನ್ಮದಿನವಾಗ ವದಿದೆ. ಭಾಷಣ ಕೇಳುವವರಿಗೆ ೪-೪ ಆಣೆ ಟಿಕೇಟು ಇಟ್ಟಿದೆ. ಹೀಗೆ ಹುಟ್ಟಿದ ಉತ್ಪನ್ನವು ಕಾರಣಾಂತರ ಸಹಾಯಕನಿಧಿಗ ಅರ್ಪಿಸಲ್ಪಡುವದು.

— ಮೋಲವನ ಮ್ಯುನಿಸಿಪಾಲಿಟಿಯ ಸೆನಿಟರಿ ಕಮಿಟಿಗೆ ಇಬ್ಬರು ಹರಿಜನರಾದ ರಾ| ಗೋವೆಕರ ಎಂಬವರು ಮುಂಚೆ ಹರಿಜನರಾಗಿ ಆರಿಸಲ್ಪಟ್ಟರು. ಈ ಸಾರೆ ಸೆನಿಟರಿ ಕಮಿಟಿಯ ಇಬ್ಬರ ಸಭಾಸದರು ರಾಜೀನಾಮೆ ಕೊಟ್ಟದ್ದು ಖಾಲಿಯಾದ ಸ್ಥಳಕ್ಕೆ ರಾ| ಪಾಟೀಲ ಎಂಬವರು ಆರಿಸಿಬಂದರು, ಇವರು ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷರು. ಉಪಾಧ್ಯಕ್ಷರಿದ್ದದರಿಂದ ಮ್ಯು| ಆಕ್ಟಿನಂತೆ ತಾವೇ ಚೇರಮನ್ನರೆಂದು ರಾ| ಪಾಟೀಲ ರವರ ತಮಗೆ ಅರಿಸಿದ್ದರಿಂದ ತಾವು ಚೇರಮನ್ನರೆಂದು ರಾ| ಗೋವೆಕರರ ಸಾಧನ ಇರುವದು ಅಂದ ಚೇರಮನಿಯ ಮಾತೇ! ಇಬ್ಬರಿಗೆ ಅಲ್ಲಿ ಸ್ಥಳವಿಲ್ಲ. ಈ ಚೇರಮನಿಯ ವಾದದ ಮೂಲಕ ಸೆನಿಟರಿ ಸಭೆ ಕರೆಯುವದೇ ಇಲ್ಲ. ಕಲೆಕ್ಟರರು ವಿಚಾರ ಮಾಡುತ್ತಿದ್ದಾರಂತೆ.

— ರಾಣಿಬೆನ್ನೂರ ತಾಲೂಕಿನಲ್ಲಿ ಮಳೆಯಿಲ್ಲದೆ ಸ್ವಲ್ಪ ಉಳಿಗಿ ಹೋದ ಬೆಳೆ ಕಾಲೂಕಾಲು! ಹತ್ತಿ ಬಿತ್ತಲಿಲ್ಲ. ದನಗಳಿಗೆ ಮೇವ ಅಕ್ಕಿ ಹುಲ್ಲಿಲ್ಲ. ಕರೆ ಕಟ್ಟೆಗಳಲ್ಲಿ ನೀರಿಲ್ಲ. ಇನ್ನು ಮಳೆ ಬೀಳದಿದ್ದರೆ, ಬೇಸಿಗೆ ಸಹ ಬತ್ತಿಹೋಗುವವು, ಬರಗಾಲ ಬೀಳಬಹುದು. ದೇವೂರ ಗ್ರಾಮದಲ್ಲಿ ಜನರು ಒಬ್ಬ ಸಾವಕಾರರ ಮನೆ ನುಗ್ಗಿ ಹಗೇವನ್ನು ಒಡೆದು ಜೋಳ ಲೂಟಿ ಮಾಡಿಕೊಂಡರಂತೆ.

— ಪ್ರಕೃತಿಸ್ವಾಸ್ಥ್ಯಕ್ಕಾಗಿ ಲಂಡನಿಗೆ ಹೋದ ಡಾ| ಅನ್ಸಾರಿಯವರು ಶುಕ್ರವಾರ ಮುಂಬಯಿಗೆ ಬಂದು ತಲ್ಪಿದರು. ಬ್ರಿಟಿಶ ಪ್ರಧಾನ ಮಂಡಳದವರೊಡನೆ ನಾನು ಮಾತಾಡಿದೆ, ಶ್ವೇತಪತ್ರಿಕೆಯ ರಾಜ್ಯಯೋಜನೆಯಲ್ಲಿ ತಿದ್ದುಪಡಿ ಮಾಡುವ ಧೋರಣ ತೋರುವದಿಲ್ಲ, ಅದು ಮತ್ತೂ ಸಂಕುಚಿತವಾಗುವದು, ಜ್ಯಾಂಟ ಪಾರ್ಲಿಮೆಂಟ ಕಮಿಟಿ ಮಂಡಳವು ರಾಜ್ಯಯೋಜನೆಯನ್ನು ಮತ್ತೂ ಸಂಕೋಚಗೊಳಿಸುವಂತೆ ಸಲಹೆ ಕೊಟ್ಟಿರುವದಾಗಿ ತಿಳಿಯುತ್ತದೆ ಹೀಗೆಂದು ಪತ್ರಿಕಾಪ್ರತಿನಿಧಿಗಳ ಬಳಿ ನುಡಿದರು. ಮತ್ತೊಂದು ಅಡಚಣೆಯಿರುವದಾಗಿ 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಬಾತ್ಮಿ. ಹೊಸ ರಾಜ್ಯಯೋಜನೆಯನ್ನು ಅಮಲಿನಲ್ಲಿ ತರಲು ೭|| ಕೋಟಿ ರೂಪಾಯಿ ಖರ್ಚಿಗೆ ಬೇಕು. ಅಷ್ಟು ರಕಮಿನ ಪೂರೈಕೆ ಮಾಡಿಕೊಂಡನಕ ರಾಜ್ಯದಾನ ಮಾಡಬಾರದು, ಔದಾರ್ಯವಂತ ಬ್ರಿಟಿಶ ಮುತ್ಸದ್ದಿಗಳು ನೇತಾಟದಲ್ಲಿ ಬಿದ್ದಿದ್ದಾರೆ. "ವ್ಹೈಟಪೇಪರ ಟೆಕ್ಸ್" ಎಂಬ ಮೊಂದು ತೆರಿಗೆಯನ್ನು ಕೂಡ್ರಿಸಿದರ ಇಷ್ಟು ರಕಮು ಉತ್ಪನ್ನವಾಗಬಹುದು.

— ಈ ವಾರದಲ್ಲಿ ಬಾದಶಹರು ಪ್ರಿವ್ಹಿ ಕೌನ್ಸಿಲ್ ಸಭೆ ಸೇರಿಸಿ ತಮ್ಮ ಚಿರಂಜೀವಿ ಜಾರ್ಜರ ಮದುವೆಗೆ ರಾಜಮುದ್ರಾಂಕಿತ ಅನುಜ್ಞೆಯನ್ನು ಕೊಡತಕ್ಕವರಿದ್ದಾರೆ.

— ಸೌ| ಕಮಲಾ ನಹರೂರವರ ಪ್ರಕೃತಿ ಸುಧಾರಣೆ ಲಕ್ಷಣವಿಲ್ಲ. ಅದರ ಬಗ್ಗೆ ಪಂ| ಜವಾಹಿರಲಾಲರು ಅಲಹಾಬಾದಕ್ಕೆ ಬಂದ ಸಮಯದಲ್ಲಿ ಕಲಕತ್ತೆಯ ಡಾ| ಬಿಧಾನಚಂದ್ರ ರಾಯ್, ಡಾ| ಅನ್ಸಾರಿ, ಡಾ| ಒಯಂರಾಜ ಬಹಾದೂರರವರು ಸೌ| ಯವರ ಪರೀಕ್ಷೆ ಮಾಡಿದರು. ಅವರ ಸ್ಥಿತಿ ಕೆಟ್ಟಿದೆ. ಪುಪ್ಪುಸ ವಿಕಾರವಾಗಿದೆ, ಸಣ್ಣ ಜ್ವರವಿದೆ, ಅವರಿಗೆ ಹವೆ ಬದಲಾವಣೆಗಾಗಿ ಭೋವಾಲಿಗೆ ಒಯ್ಯಬೇಕಾಗಿ ಅಭಿಪ್ರಾಯ ಹೇಳಿದರು. ಅಷ್ಟರಲ್ಲಿ ಪಂ| ಜವಾಹಿರಲಾಲರ ೫ ತಾಸಿನ ಬಿಡುಗಡೆಯ ರಜೆ ಮುಗಿದದ್ದರಿಂದ ಅವರಿಗೆ ಪುನಃ ನೈನಿ ಜೈಲಿಗೆ ಒಯ್ಯಲಾಯಿತು.

— ಮದ್ರಾಸ ಇಲಾಖೆಯ ಗೋಗಾಯಿ ಗ್ರಾಮದಲ್ಲಿ ಅಕ್ಕಿಯ ಸಾವಕಾರರು ಪಕ್ಕನೆ ಅಕ್ಕಿಯ ದರ ಏರಿಸಿದರು. ಅದರಿಂದ ೪೦೦೦ ಜನರು ಊರ್ಯಾಗಳನ್ನು ನುಗ್ಗಿ ಅಕ್ಕಿ ಲೂಟಿ ಮಾಡಿ ಒಯ್ದರು.

ಸ್ಥಾನಿಕ ವೃತ್ತಾಂತ.

[illegible] — [illegible] ಬಿಸಿಲು ಬೀಳು[illegible] ಗಬನಿ ಬೆಳ[illegible] ತಯಾರಿ ನಡೆದಿದೆ

ಇಲ್ಲಿಯ ಮ್ಯುನಿಸಿಪಾಲಿಟಿಯು ಮೊನೇಜಮೆಂಟ ಕಮಿಟಿಯು ಬಜೆಟ್ಟನ್ನು ಸನ್ ೧೯೩೩-೩೪, ೧೯೩೪-೩೫ ಈ ೨ ವರ್ಷಗಳ ಮನೆಪಟ್ಟಿಯನ್ನು ೧೯೩೩ನೇ ಇಸವಿಯ ಮನೆಪಟ್ಟಿಯ ಲಿಸ್ಟಿನಂತೆ ನೋಟೀಸು ಹೊರಡಿಸಿ [illegible] ಮೇಲೆ ವಸೂಲಿಯು [illegible] ಕೈಕೊಳ್ಳಬೇಕಾಗಿರುವಾಗಿದೆ. ಈ ತೆರಿಗೆಯ ವಿಷಯವು [illegible] ಕೋರ್ಟಿನಲ್ಲಿ ಡಿಗ್ರೀದಾರರು ಮಾಡಿದ [illegible] ವಿಷಯದಲ್ಲಿ ಸೇರಿರುವದರಿಂದ ಈ ಕುರಿತು ವಿಚಾರ ಮಾಡಲು ಮೊನೇಜಮೆಂಟ ಕಮಿಟಿಗೆ ಹಕ್ಕಿಲ್ಲವಾಗಿಯೂ ವಿಚಾರ ಮಾಡಿ [illegible] ಕೈಕೊಂಡಿದ್ದು [illegible] ಅಪಮಾನವಾಗುತ್ತದೆ [illegible] ಜಾಹೀರನಾಮೆಯಂತೆ ಮಾಡಿದ [illegible] ಆದ್ದರಿಂದ ಅದನ್ನು ಅವರಿಗೆ [illegible] ಮಾಡಬೇಕಾಗಿದೆಯೂ [illegible] ಕಮಿಟಿಗೆ ನೋಟೀಸು ಕೊಟ್ಟಿರುತ್ತಾರೆ.

[illegible]

ಕಾರವಾರ— ಸುವಿಖ್ಯಾತ ಸರ್ ನಾರಾಯಣರಾವ ಚಂದಾವರಕರರ ಹಿರೇ ಮಗಂದಿರಾದ ಮತ್ತು ಮುಂಬೈ ವಿಶ್ವವಿದ್ಯಾಲಯದ ವ್ಹಾಯ್ಸ-ಚಾನ್ಸಲರರಾಗಿರುವ ಶ್ರೀ ವಿಠ್ಠಲರಾವ ಚಂದಾವರಕರ ಇವರು ತಮ್ಮ ಧರ್ಮಪತ್ನಿಯವರ, ತಮ್ಮ ತಂದೆಯ ಸೋದರಮಾವನವರೂ ಆದ ಇಲ್ಲಿಯ ರಾ| ಸಾ| ಮಂಜುನಾಥ ವಿಠಲ ಶ್ಯಾನಭಾಗ ಇವರ ತಮ್ಮ ಮಾಹೋಗಳಿಕ್ಕೆ ಈ ವಾರದಲ್ಲಿ ಸಪತ್ನೀಕರಾಗಿ ಇಲ್ಲಿ ಬಂದು ಎರಡು ದಿವಸ ಇಲ್ಲಿ ಅವರ ವಾಸ್ತವ್ಯವಾಯಿತು ತಾ ೧ ನೇ ಸೋಮವಾರ ಸಂಜೆಗೆ ಅವರು ಬಂದು ತಲ್ಪಿದರು ಬಂದರದಲ್ಲಿಯು ಬಹಳ ಪಾಟೀಲರೂ, ವಿ ತ್ರಣ ಅವರ ಎಟ್ಟಿಗೆ ಹೋಗುತ್ತಲಿದ್ದರು ಅವರಷ್ಟು ಎಳೆಯ ವೃದ್ಧಾಪ್ಯದಲ್ಲಿ ರುವ ತಮ್ಮ ಮಾವ ಶ್ರೀ ಪ್ರಖ್ಯಾತನ ಶ್ಯಾನಭಾಗ ಇವರ ಬಗೆಯಲ್ಲಿಯೇ ಕಳೆದ ಬೇಕಾಗಿ ಅವರ ಮನೀಷೆ ಇರು ವದರಿಂದ ವಿಶೇಷವಾಗಿ ನೀರೆ ಎಲ್ಲಿಯೂ ಅವರು ಹೋಗಲಿಕ್ಕಿಲ್ಲ ಮಂಗಳವಾರ ಸಂಜೆಗೆ ಇಲ್ಲಿಯ ಹಿಂದು ಸ್ಕೂಲಿನ ಶಿಕ್ಷಣ ಸಂಸ್ಥೆಗೆ ಅವರು ಪತ್ನಿಸಹಿತರಾಗಿ ಬೆಟ್ಟಿಯಿತ್ತು ಶಾಲೆಯ ಕೆಲಸವನ್ನು ನೋಡಿಕೊಂಡು ಆನಂದ ವ್ಯಕ್ತಪಡಿಸಿದರು ಶಾಲೆಯ ಹುಡುಗರನ್ನುದ್ದೇಶಿಸಿ ಭಾಷಣವನ್ನು ಮಾಡಿದರು ಮರುದಿವಸ ಅಂದರೆ ಬುಧವಾರ ಬೆಳಿಗ್ಗೆ ಈ ಪಟ್ಟಣದ ಒಂದು ನಿಯೋಜಿತ ಸ್ತ್ರೀ ಸಮಾಜದ ಕಾರ್ಯಾಲಯದಲ್ಲಿ ಮ್ಯಾಟ್ರಿಕ್ ಪರೀಕ್ಷೆಯ ಕೇಂದ್ರವನ್ನೊಂದನ್ನು ಪ್ರಾರಂಭಿಸುವ ಯೋಜನೆಯ ಕುರಿತು ಅವರನ್ನು ಸಂದರ್ಶಿಸಿತು ಸ್ತ್ರೀ ಸಮಾಜದ ಕೆಲಸವನ್ನು ಶಾಂತ ವೃತ್ತಿಯಿಂದ ಕೇಳಿಕೊಂಡು ಕೆಲವು ಮುಖ್ಯ ಸಂಗತಿಗಳ ಕುರಿತು ಅವರ ಸೂಚನೆ ನಡಿಸಿ ಅವಶ್ಯಕ ಎಲ್ಲ ಸಂಗತಿಗಳನ್ನು ತಿಳಿಸಿ ಅರ್ಜಿ ಮಾಡಿ ಪ್ರಯತ್ನಿಸಿರೆಂದೂ, ಅನ್ಯಾಯ ವಾಗದಂತೆ ತಾವು ನೆರವಾಗುವೆವೆಂದೂ ಉತ್ತರವನ್ನಿತ್ತರು ಬೆಳಿಗ್ಗೆ ೯ ಘಂಟೆಗೆ ಹಿಂದು ಸ್ಕೂಲಿನಲ್ಲಿ ಅವರ ಸನ್ಮಾನಾರ್ಥವಾಗಿ ಉಪಹಾರ ಸಮಾರಂಭವಿತ್ತು ಊರಲ್ಲಿಯ ಪ್ರಮುಖ ಜನರೆಲ್ಲರೂ ಉಪಸ್ಥಿತರಾಗಿದ್ದರು ಶ್ರೀಯುತ ಚಂದಾವರಕರರು, ಆ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಕುಳಕರ್ಣಿಯವರೂ ಅವರ ಸಹೋದರರೂ ಧ್ಯೇಯಪ್ರೇರಿತರಾಗಿ ಶಿಕ್ಷಣ ಕ್ಷೇತ್ರದಲ್ಲಿ ಪ್ರವರ್ತಿಸಿ ಈ ವರೆಗೆ ಮಾಡಿರುವ ಶಿಕ್ಷಣಸೇವೆಯನ್ನು ಕೊಂಡಾಡಿ ಮತ್ತು ತಮ್ಮ ಸಂತೋಷವನ್ನು ಪ್ರದರ್ಶಿಸಿ ನಾಲ್ಕು ಮಾತುಗಳನ್ನು ಆಡಿದರು ಸಂಜೆಗೆ ಇಲ್ಲಿಯ ಮಿತ್ರಸಮಾಜದ ಆಮಂತ್ರಣ ಇಲ್ಲಿಯ ನಾಗರಿಕರ ಪರವಾಗಿ ಮಿತ್ರಸಮಾಜದವರು ಸ್ವಾಗತ ಸನ್ಮಾನಾರ್ಥವಾಗಿ ಉಪಹಾರ ಸಮಾರಂಭಕ್ಕೆ ಕರೆದಿದ್ದರು ಡಿಸ್ಟ್ರಿಕ್ಟ ಜಜ್ಜರೇ ಮೊದಲಾದ ಸರಕಾರದ ಸಭಾಸದರೆಲ್ಲರೂ ನೆರೆದಿದ್ದರು ಉಪಹಾರದ ಸಮಾರಂಭವು ಸುವ್ಯವಸ್ಥಿತವಾಗಿ ಜರುಗಿದ ಬಳಿಕ, ಸಮಾಜದ ಪರವಾಗಿ ಸ್ವಾಗತಾರ್ಥವಾಗಿ ಮಾಡಿದ ಸನ್ಮಾನದ ಉತ್ತರಕ್ಕೆ ಶ್ರೀಯುತ ವಿಠ್ಠಲರಾಯರು ವಿನಯಶೀಲರಾಗಿ ಘನತೆಗೆ ಶೋಭಿಸುವಂತೆ ಕೆಲವು ಆತ್ಮನಿವೇದನಪರ ಅತಿ ಮಾತು ಹೇಳಿ ತಮ್ಮ ಮುಂಬಯಿ ನಗರ ಸಭೆಯಲ್ಲಿ [ಕಾರ್ಪೋರೇಶನ್ನಿನಲ್ಲಿ] ಸೇರಲಿಕ್ಕೆ ತಮ್ಮ ಮಿತ್ರರಲ್ಲೊಬ್ಬರು ದಿವಂಗತ ದಿವಾನ ಬಹಾದ್ದೂರ ಅನಂತ ಪೈ ಇವರು ಹ್ಯಾಗೆ ಕಾರಣೀಭೂತರಾದರೆಂದೂ ಪ್ರಸಂಗದ ಅನುಕೂಲತೆ ಮತ್ತು ದೈವಸಹಾಯವಾದದ್ದರಿಂದಲೇ ತಮ್ಮ ಹಿರಿಯರ ಹೆಸರಿನ ಮತ್ತು ಪರಿಚಯದ ವೇಳೆ ತಮಗೆ ಎಲ್ಲ ವರ್ಗದ ಜನರ ಪ್ರೇಮ ಭಾವ ದೊರಕು ತಾವು ನಗರಾಧ್ಯಕ್ಷ (*Mayor*) ತೆಯ ಸನ್ಮಾನವನ್ನು ಹುಕು ಕಾಲದಲ್ಲಿ ಪಡೆಯುವದು ಹ್ಯಾಗೆ ಸಾಧ್ಯವಾಯಿತೆಂದೂ, ತಾನು ಶ್ರೇಷ್ಠ ತಜ್ಞನಲ್ಲದೆ ವಿಶ್ವವಿದ್ಯಾಲಯದ ವ್ಹಾಯ್ಸ-ಚಾನ್ಸಲರನಂಥ ಉಚ್ಚ ಪದವಿಯನ್ನು ಸೇರುವದು ದೈವೀ ಅನುಕೂಲತೆಯಿಂದಲೇ ಹ್ಯಾಗೆ ಸಾಧ್ಯವಾಯಿತೆಂದೂ, ಇನ್ನು ಮುಂದೆ ಗಳಲ್ಲಿಯೂ ತನ್ನ ಗುಣಮೂಲಕ ದೊಡ್ಡಸ್ತಿಕೆಯಿಲ್ಲೆಂದೂ ಬಹಳ ವಿನಯಾರ್ಥಿಯಾಗಿ ತಮ್ಮ ನಿಗರ್ವಿತನಕ್ಕೆ ಕೋವಿ ಸುವಂತೆ ವಿಶದವಾಗಿ ಹೇಳಿದರು ಸಾರ್ವಜನಿಕ ಸೇವೆ ಮಾಡಲು ಬಯಸುವವರಿಗೆ ಮ್ಯುನಿಸಿಪಾಲಿಟಿಯು ಸಂಸ್ಥೆಯಲ್ಲಿ ಅವಕಾಶ ದೊರೆಯುತ್ತದೆಂದೂ, ನಿಸ್ವಾರ್ಥರಾಗಿಯೂ, ಪ್ರಾಮಾಣಿಕರಾಗಿಯೂ ಕಾರ್ಯಕರ್ತರಾದರೆ ತಕ್ಕಮಟ್ಟಿಗೆ ಸಾರ್ವಜನಿಕ ಹಿತ ಸಾಧಿಸಬಹುದೆಂದೂ ತಮ್ಮ ಅನುಭವದ ಅಭಿಪ್ರಾಯ ವ್ಯಕ್ತಪಡಿಸಿದರು ಸಾರ್ವಜನಿಕ ಸಂಸ್ಥೆಗಳಲ್ಲಿ, ಧರಿಸಾಧಿಕರಾಯುಳ್ಳ ಜಾತಿವಿಷ್ಟ ತತ್ತ್ವ ಸೇರಿದರೆ ಹಾಳಾಗಬಹುದಾದ ಧ್ಯೇಯದ ನಾಶದ ಕುರಿತು ಆಡಿ ತಮ್ಮ ಭಯವನ್ನು ವ್ಯಕ್ತಮಾಡಿ ತೋರಿಸಿದರು ಅವರ ಸೌಜನ್ಯದ ಕುರಿತು ಎಲ್ಲರ ಮನಸ್ಸಿನ ಮೇಲೆ ಪರಿಣಾಮವಾಯಿತು ಸಮಾರಂಭದಿಂದ ಸನ್ಮಾನ ಮಾಡಿದ ಬಗ್ಗೆ ಉಪಕಾರ ಎಣಿಸಿ ಅವರು ತಮ್ಮ ಭಾಷಣ ಮುಗಿಸಿದರು ತಾ ೫ ನೇಗೆ ದಿಂಡವಾಡದ ಕರ್ನಾಟಕ ಕಾಲೇಜಿನಲ್ಲಿ ವಾರ್ಷಿಕ ಸಮಾರಂಭದ ವೇಳೆಯಲ್ಲಿ ಅವರ ಭಾಷಣ ವಾಗತಕ್ಕದ್ದಿದ್ದುದರಿಂದ ತಾ ೪ ನೇ ದಿವಸ ಬೇಗ ಅವರು ದಾಂಡೇಲಿಕ್ಕೆ ಪ್ರಯಾಣ ಬೆಳೆಸಿದರು

ಉತ್ತಮ ಪ್ರತಿಯ ರಚನೆ, ಪರಮಾವಧಿಯ ಲಾಭವುಳ್ಳ

Kirloskar

'ಕಲ್ಯಾಣ' ನೆಲಗಡ್ಲೆಯ ಯಂತ್ರಕ್ಕೆ



ಮಿಗಿಲಾದ ಬೇರೆ ಯಂತ್ರವಿಲ್ಲ.

ಯಾಕೆಂದರೆ, ಘಂಟೆಗೆ ಒಂದರಿಂದ ೮೦ ಪೌಂಡು ನೆಲಗಡ್ಲೆಯನ್ನು ಸುಲಿಯುವಂತೆ ಇದರಲ್ಲಿ ಏರ್ಪಾಡಿದೆ, ಮೇಲಾಗಿ ಖರ್ಚು ತೀರ ಕಡಿಮೆ

ದೇಶತುಂಬ ನೂರಾರು ಜನರು ಇದನ್ನು ಉಪಯೋಗಿಸುತ್ತಾರೆ

ಸಚಿತ್ರ ಕಟಲಾಗಿಗ ಬರೆಯಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಹಾ- ಸಾತಾರಾ.)

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ! ಯೋಗ್ಯವಾದ ಧಾರಣೆ!!

ಯು. ಶಿವಾ ಎಂಡ್ ಬ್ರದರ್ಸ,

ಒಟೋಮೊಬೈಲ ಇಂಜಿನಿಯರ್ಸ ಎಂಡ್ ಬೊಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶವರಲೆಟ್, ಒಬ್ಯಾಕ, ಕ್ರಾಯಸಲರ, ಸಿಟ್ರೊನ್ ಡೊಜ್, ಡಿಸೋಟೊ, ಸ್ಟ್ಯಾಂಡರ್ಡ, ಎಸೆಕ್ಸ, ಎರಸ್ಕಿನ್, ಫಾರ್ಗೋ, ಸ್ಟ್ಯಾಂಡರ್ಡ ಜನರಲ್, ಫೋರ್ಡ ಎ, ಫೋರ್ಡ ವಿವಿ, ಹಪ್‌ಮೊಬೈಲ, ಹಡಸನ್, ಮೊರ್ಸವೇಲ್, ವ್ಹಿಪೆಟ್, ವಿಲೀಸ, ಸ್ಟುಡಬೇಕರ, ರಗ್ಬಿ, ಪ್ಲಿಮೌತ, ರಿಯೋ, ಇಂಗ್ರ ಮೊದಲಾದ ಯಾವತ್ತೂ ಮೋಟಾರುಗಳ ಮಾಡೆಲುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿನ ದರದಿಂದಲೂ ಮಾಡಿಕೊಡುವೆವು ಬೇಕಾದ ಸ್ಪ್ರಿಂಗು ಬೋಡಿಗಳು ನಮ್ಮಲ್ಲಿ ಮಾಡಿಕೊಡುತ್ತೇವೆ ಅದಲ್ಲದೆ—

ಎಕ್ಸ್ಯಾಕ್ಟ್ಲಿ ಜಮೀನಿಗೆ ಸುಲಭವಾಗಿ ನೀರು ಹಾಯುವ ಹಿತಾವು ಸಣ್ಣ ದೊಡ್ಡ ನೀರಿನ ಟಾಕಿಗಳನ್ನು ತಯಾರಿಸಿ ಬೇಕಾದಲ್ಲಿ ಫಿಟಿಂಗ ಮಾಡಿಕೊಡುವೆವು, ಬೊಡಿವಿಲ್ಡಿಂಗ, ಬೇಕಾದ ನಮೂನೆಯ ಖುರ್ಚಿಗಳೂ, ಬಾಂಕುಗಳೂ, ಕೇಟ್‌ಗಳೂ ಮಾಡಿಕೊಡುವೆವು, ಇದಗಿಯು ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ

ಶಿಟ್ಟಿ ಅಗ್ಗ; ಪೇಟೆಗೆ ತಕ್ಕ ಜೋಳ!

ಜಪಾನಿನ ಕೈಗಾರಿಕೆ.

[ಮೈಸೂರು ಫ್ಯಾಕ್ಟರೀಸ ಸ್ಯಾಯರಿಂಟೆಂಡೆಂಟ್ರಾದ ಶ್ರೀ ಪಿ. ಎಸ್. ಆರ್. ಚಾರಿಯವರು ಜಪಾನ ದೇಶದ ಪ್ರವಾಸ ವೃತ್ತವನ್ನು ಪ್ರಕಟಿಸುತ್ತಿದ್ದಾರೆ. ಒಂದು ಲೇಖನದಲ್ಲಿ ಜಪಾನದ ಕೈಗಾರಿಕೆಗಳನ್ನು ಅವರು ಒಣ್ಣಿಸಿದ್ದಾರೆ. ಇದು ಮದ್ರಾಸದ 'ಪ್ರಜಾಮತ' ಪತ್ರಿಕೆಯೊಳಗಿಂದ ಎತ್ತಿಕೊಟ್ಟಿದೆ. ಸಂ.]

ಜಪಾನ ದೇಶವು ವಿಸ್ತೀರ್ಣದಲ್ಲಿ ಸಣ್ಣದು. ಆದರೂ ಅದರಲ್ಲಿನ ಕೈಗಾರಿಕೆಗಳನ್ನು ನೋಡಿದರೆ ಆಶ್ಚರ್ಯವಾಗುವದು. ಇಡೀ ಜಗತ್ತಿನಲ್ಲೇ ಅತ್ಯಂತ ಶ್ರಮಸಹಿಷ್ಣುಗಳು ಜಪಾನರೆಂದರೆ ಅತಿಶಯೋಕ್ತಿಯಾಗಲಾರದು.

ಭೂದೇವಿಯ ಸಿಟ್ಟು.

ಜಪಾನಿನ ಮೇಲೆ ಭೂದೇವಿಯ ಸಿಟ್ಟು ಹೆಚ್ಚಿದ್ದ ಹಾಗೆ ತೋರುತ್ತದೆ. ಪ್ರತಿ ವರ್ಷವೂ ದೇಶದ ಒಂದಿಲ್ಲೊಂದು ಭಾಗದಲ್ಲಿ ಭೂಕಂಪವಾಗಿ ಇದು ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಆದರೆ ಜಪಾನರು ಅವನ್ನೆಲ್ಲ ಸಹಿಸಿಕೊಂಡು ಕೆಟ್ಟುಹೋದದ್ದನ್ನೆಲ್ಲ ಸರಿಪಡಿಸಿಕೊಂಡು ಮುಂದುವರಿಯುತ್ತಲೇ ಇದ್ದಾರೆ.

ಅಲ್ಲಿಯ ರಾಜಧಾನಿಯಾದ ಟೋಕಿಯೋ ನಗರವು ೭ ವರ್ಷಗಳ ಹಿಂದೆ ಭೂಕಂಪದಿಂದ ಸಂಪೂರ್ಣವಾಗಿ ನಾಶವಾಯಿತು. ಈ ದಿನ ನೋಡಿದರೆ ಪ್ರಪಂಚದ ಪಟ್ಟಣದಲ್ಲೆಲ್ಲ ನ್ಯೂಯಾರ್ಕ ಮೊದಲುಗೊಂಡು, ಎರಡನೆಯದೇ ಟೋಕಿಯೋ. ಈಗ ಟೋಕಿಯೋ ನಗರದಲ್ಲಿ ಭೂಕಂಪಕ್ಕೆ ಜಪಾನರು ಭಯಪಡರು. ಅಲ್ಲಿಯ ಮನೆಗಳೆಲ್ಲ ಬೆಂಕಿ ಮತ್ತು ಭೂಕಂಪದ ಭೀತಿಗೆ ಸಿಕ್ಕದ ಹಾಗೆ ಉಕ್ಕು, ಸಿಮೆಂಟ್ ಮೊದಲಾದವುಗಳಿಂದ ಕಟ್ಟಲ್ಪಟ್ಟಿವೆ.

ಕಡಿಮೆ ಕೂಲಿ?

ಈಗ ಜಪಾನಿನಲ್ಲಿ ಎತ್ತ ನೋಡಿದರೂ ಕಾರ್ಖಾನೆಗಳೇ. ಸರಕಾರದವರು ದೇಶದ ಎಲ್ಲ ಭಾಗಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿದ ಕಾರಣದ ಜನರು ಅದರ ಸಹಾಯದಿಂದ ಹಳ್ಳಿಗಳಲ್ಲಿ ಕೂಡ ಕೈಗಾರಿಕೆಗಳನ್ನು ಅಗ್ಗವಾಗಿ ನಡಿಸಲು ಸಾಧ್ಯವಾಗುತ್ತದೆ.

ಜಪಾನಿನ ಸಾಮಾನುಗಳು ಇತರ ಎಲ್ಲ ದೇಶಗಳಿಗಿಂತ ಬಹು ಅಗ್ಗವಾಗಿರುವದು ಅನೇಕರಿಗೆ ಒಂದು ಸೋಜಿಗ. ಕೆಲವು ದೇಶದವರು ಹೇಳುವದೇನಂದರೆ, ಜಪಾನಿನ ಧನಿಕರು ಅವರ ಕೆಲಸಗಾರರನ್ನು ಹಗಲು-ರಾತ್ರಿ ಎನ್ನದೆ ಕೆಲಸಮಾಡಿಸಿ ಸಾಕಷ್ಟು ದುಡಿಸುತ್ತಾರೆಂದು. ಇದು ಶುದ್ಧ ತಪ್ಪು. ಜಪಾನಿನಲ್ಲಿ ಕೆಲಸಗಾರರ ಕೂಲಿಯು ಬೇರೆ ದೇಶಗಳಲ್ಲಿರುವದಕ್ಕಿಂತ ಅಗ್ಗವೆಂಬುದು ನಿಜ. ಇದಕ್ಕಾಗಿಯೇ ಧನಿಕರು ಕೂಲಿಗಾರರನ್ನು ಸುಲಿಗೆ ಮಾಡುತ್ತಾರೆಂದು ಹೇಳಲಾಗದು. ಏಕೆಂದರೆ, ಜಪಾನಿನ ಮಾಲಿಕರು ದಿನವು ಕೆಲಸಮಾಡುವಂತಹದಲ್ಲ ಅಲ್ಲಿ ದಣುವಿಲ್ಲದೇ ಇತರ ದೇಶಗಳಲ್ಲಿ ಕೆಲಸ ಮಾಡುವ ದಕ್ಷಿಣಕ್ಕಿಂತಲೂ ಇನ್ನೂ ಹೆಚ್ಚು ಹೊತ್ತು ಕೆಲಸ ಮಾಡಬಲ್ಲರು. ಸ್ವಭಾವತಃ ಜಪಾನರು ಉದ್ಯೋಗಪ್ರಿಯರು. ಇಷ್ಟು ಕೆಲಸದಲ್ಲಿ ಅವರಿಗೆ ಇಷ್ಟು ಮನಃಪೂರ್ತಿ ಅವರು ಕೆಲಸ ಮಾಡುವದರಿಂದ ಮೇಲ್ವಿಚಾರಣೆ ಹೆಚ್ಚು ಬೇಕಾಗಿಲ್ಲ, ಅದಕ್ಕಿಂತಲೂ ಕೆಲಸದ ಮೇಲೆಯೇ ಅವರ ಗಮನ ಹೆಚ್ಚು. ಇನ್ನೊಂದೇನಂದರೆ ಜಪಾನರ ಆಹಾರ-ವ್ಯವಹಾರಗಳು ಬಹು ಸಾಮಾನ್ಯ. ಇತರ ದೇಶಗಳಲ್ಲಿರುವದಷ್ಟು ದುರಭ್ಯಾಸಗಳು ಅಲ್ಲಿಲ್ಲ. ದೇಶದಲ್ಲೆಲ್ಲ ಹೀಗೆ ಆಹಾರವು ರೀತಿ— ಮದ್ಯಪಾನವು ಬಹು ಕಡಿಮೆ. ಹೆಂಗಸರು ಸಾಮಾನ್ಯವಾಗಿ ಒಡವೆಗಳನ್ನು ಹಾಕಿಕೊಳ್ಳುವದೇ ಇಲ್ಲ. ಕೆಲವರು ಮದುವೆಯ ಉಂಗುರಗಳೆಂದು ಕಬ್ಬಿಣದ ಉಂಗುರಗಳನ್ನು ಹಾಕಿಕೊಳ್ಳುತ್ತಾರೆ. ಹೀಗಿರುವದರಿಂದ ಕೂಲಿ ಅಗ್ಗವಾಗಿ ಕಂಡರೂ ಜೀವನವು ಅಗ್ಗವಿರುವದರಿಂದ ಸುಖವಾಗಿಯೇ ನಡೆಯುತ್ತದೆ.

ಸರಕಾರದ ಹಿಡಿತ.

ಜಪಾನಿನ ಕಾರಖಾನೆಗಳ ರಚನೆಯಲ್ಲಿ ವಿಶೇಷವಾದದ್ದೆಂದರೆ ತಯಾರಿಕೆಯಲ್ಲಿ ಸ್ಪರ್ಧೆಯು ಇಲ್ಲದಿರುವಿಕೆ. ಎಲ್ಲ ಕೈಗಾರಿಕೆಗಳೂ ಸರಕಾರದ ಅಧಿಕಾರಕ್ಕೆ ಒಳಪಟ್ಟಿವೆ; ಕೆಲವಕ್ಕೆ ಸರಕಾರವು ಧನದಿಂದ ಸಹಾಯ ಮಾಡುತ್ತದೆ. ಯಾವ ವಿಧವಾದ ಕೈಗಾರಿಕೆಯಲ್ಲೇ ಆಗಲಿ ಸ್ಪರ್ಧೆಯು ನಡೆಯದ ಹಾಗೆ ಉಪಾಯದಿಂದ ವ್ಯವಸ್ಥೆಯು ಮಾಡಲಾಗಿದೆ. ಒಂದೊಂದು ಕಾರಖಾನೆಯು ಒಂದೊಂದು ಸಾಮಾನನ್ನು ಮಾಡುವದರಲ್ಲಿಯೇ ಪ್ರಸಿದ್ಧಿ ಹೊಂದುತ್ತದೆ. ಕೆಲವು ಕಾರಖಾನೆಗಳಲ್ಲಿ ಸಾಮಾನಿನ ಕೆಲವು ಭಾಗಗಳು ಮಾತ್ರ ತಯಾರಾಗುತ್ತವೆ. ಈ ವ್ಯವಸ್ಥೆಯಿಂದ ಒಂದೇ ಕಾರಖಾನೆಯು ಅನೇಕ ಸಾಮಾನುಗಳನ್ನು ತಯಾರು ಮಾಡುವ ಪ್ರಯತ್ನದಿಂದುಂಟಾಗುವ ವ್ಯರ್ಥ ನಷ್ಟಗಳು ಬಹು ಕಡಿಮೆಯಾಗುವವು.

ಹಾಳಿನಿಂದ ಹಣ.

ನಾವು ಕೆಲಸಕ್ಕೆ ಬಾರದೆಂದು ಬಿಸಾಟ ಸಾಮಾನುಗಳನ್ನು ಉಪಯೋಗಕ್ಕೆ ತರುವದರಲ್ಲಿ ಜಪಾನರು ಗಟ್ಟಿಗರು. ಪಾಶ್ಚಿಮಾತ್ಯ ದೇಶಗಳಲ್ಲಿ ಸಿಕ್ಕುವಂತೆ, ಕಬ್ಬಿಣ-ಕಲ್ಲಿದ್ದಲುಗಳು ಇಲ್ಲಿ ಸಿಕ್ಕುವದಿಲ್ಲ. ಆದುದರಿಂದ ಪ್ರಪಂಚದ ಇತರ ಭಾಗಗಳಲ್ಲಿ ಕೆಲಸಕ್ಕೆ ಬಾರದ್ದೆಂದು ಬಿಸಾಡಲ್ಪಟ್ಟ ಸಾಮಾನುಗಳನ್ನು ಕೂಡಿಸಿ ಜಪಾನರು ತಮ್ಮ ದೇಶಕ್ಕೆ ತರಿಸುತ್ತಾರೆ. ಆ ಹಳೆಯ ಕಬ್ಬಿಣ ತುಂಡುಗಳನ್ನು ಕರಗಿಸಿ, ಸ್ವಚ್ಛಗೊಳಿಸಿ, ಅದರಿಂದ ಉತ್ತಮ ಕರದ ಉಕ್ಕನ್ನು ತಯಾರಿಸಿ ತಮ್ಮ ದೇಶಕ್ಕೆ ಬೇಕಾದ ದೊಡ್ಡ ದೊಡ್ಡ ಯಂತ್ರಗಳನ್ನು ಕೂಡ ಮಾಡಿದ್ದಾರೆ!

ಬಡವೇರಿಯರನ್ನು ಜಪಾನರು ತಮ್ಮ ಕಾರಖಾನೆಗಳಿಗೆ ಬಿಡುವದಿಲ್ಲ. ಅವರ ಯಂತ್ರಗಳ ಗುಟ್ಟುಗಳು ಹೊರಬಿದ್ದಾವೆಂದು ಬಹು ಜಾಗರೂಕತೆಯಿಂದ ಇರುತ್ತಾರೆ. ಅವರು ಸಾಮಾನನ್ನು ಪೋಲು ಮಾಡದೆ ತುಂಬಾ ನಾಜೂಕಿನಿಂದ ಕೆಲಸಗಳನ್ನು ಸಾಗಿಸುವರೆಂಬುದು ಆಶ್ಚರ್ಯದ ವಿಷಯ.

ಸುಖಜೀವನ.

ನಾಗೋಯ ಎಂಬುದು ಜಪಾನಿನಲ್ಲೆಲ್ಲ ಕೈಗಾರಿಕೆಯ ಉನ್ನತಿಯಲ್ಲಿ ಎರಡನೆಯ ಪಟ್ಟಣ. ಇದರಲ್ಲಿ ಟೋಯೋಡಾ ಕಾಟನ್ ಮಿಲ್ ಎಂಬುದು ಬಹು ದೊಡ್ಡ ಹತ್ತಿ-ಬಟ್ಟೆಯ ಕಾರಖಾನೆ. ಇಲ್ಲಿ 'ಪ್ರೀ ಷಟ್ಲಿಂಗ್' ಎನ್ನುವ ಒಂದೇ ವಿಧವಾದ ಬಟ್ಟೆಯನ್ನು ತಯಾರಿಸುತ್ತಾರೆ. ಕೆಲಸಗಾರರಲ್ಲಿ ಗಂಡಸರ ಮೂರರಷ್ಟು ಹೆಂಗಸರಿದ್ದಾರೆ. ತಮ್ಮ ಕೆಲಸಗಾರರೆಲ್ಲರಿಗೂ ಮಿಲ್ಲಿನ ಮಾಲೀಕರು ಪುಕ್ಕಟೆಯಾಗಿ ಯೂನಿಫಾರಂ ಬಟ್ಟೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಕಾರಖಾನೆಯ ಹತ್ತಿರದಲ್ಲಿಯೇ ಚೊಕ್ಕಟವಾಗಿಯೂ, ಅಂದವಾಗಿಯೂ ಇರುವ ಮನೆಗಳು ಇವೆ. ವೈದ್ಯಕೀಯ ಸಹಾಯ, ಆಟಕ್ಕೆ ಜಾಗ ಮತ್ತು ಆಟದ ಸಾಮಾನುಗಳು, ತಿಂಗಳಿಗೆ ಎರಡು ಸಲ 'ಬಯಾಸ್ಕೋಪ' ಕೂಡ ಪುಕ್ಕಟೆಯಾಗಿ ಸಿಗುವವು. ಕಾರಖಾನೆಯಲ್ಲಿಯೇ ದವಾಖಾನೆಯಂತೆ ಎಲ್ಲ ಕೆಲಸಗಾರರಿಗೂ ಒಂದು ದೊಡ್ಡ ಊಟದ ಮನೆಯಿದೆ. ಅಲ್ಲಿ ತಿಂಗಳಿಗೆ ೧೦ ಯೆನ್ ಅಂದರೆ, ನಮ್ಮ ಏಳುವರೆ ರೂ. ಕೊಟ್ಟರೆ ಅವರಿಗೆ ದಿನಾಲು ನಾಲ್ಕು ಸಲ ಊಟ ದೊರೆಯುವದು. ಆಕಸ್ಮಾತ್ತಾಗಿ ಜ್ವರ, ತಲೆನೋವು ಮೊದಲಾದ ಬೇನೆಗಳಿಂದ ಕೆಲಸಕ್ಕೆ ಬಾರದ ದಿನ ಕೂಡ ಕೆಲಸಗಾರರಿಗೆ ಸಂಬಳ ಸಿಕ್ಕುತ್ತದೆ. ಸಾಮಾನ್ಯ ತಿಂಗಳಿಗೆ ೧೫ರಿಂದ ೪೦ ಯೆನ್— (೧ ಯೆನ್= ಎಂಟುವರೆ ಆಣೆ.) ಸಂಬಳ ಸಿಕ್ಕುತ್ತದೆ.

ಈ ಮಿಲ್ಲು ಹುಟ್ಟಿದಾಗಿನಿಂದ ಒಂದು ಕೂಲಿಕಾರರ ಮುಷ್ಕರ ಕೂಡ ಆಗಿಲ್ಲವಂತೆ. ವಿಶೇಷವೇನಂದರೆ, ಕೆಲಸಗಾರರ ಬಾಯಿಂದ ಒಂದಾದರೂ ದೂರನ್ನು ಕೇಳುವದೇ ಅಸಂಭವ. ಇಲ್ಲಿಯ ಹುಡುಗಿಯರು ೪-೫ ವರ್ಷ ಕೆಲಸ ಮಾಡಿ ಬೇಕಾದಷ್ಟು ಹಣ ಗಳಿಸಿ ನಂತರ ತಂತಮ್ಮ ಇಷ್ಟ ಪ್ರಕಾರ ಹೋಗುತ್ತಾರೆ.

ಶುದ್ಧ ಸುಳ್ಳು.

ಜಪಾನಿನ ಕಾರ್ಖಾನೆಯಾರ ಮೇಲಿನ ಮತ್ತೊಂದು ಅಪವಾದನೆಯೆಂದರೆ, ಅವರು ಮಕ್ಕಳಿಂದ ದುಡಿಸಿಕೊಳ್ಳುತ್ತಾರೆಂಬುದು. ಇದು ನಿಜವಾದ ಸಂಗತಿಯಲ್ಲ. ಪ್ರತಿ ಹುಡುಗ-ಹುಡುಗಿಯೂ ಶಾಲೆಗೆ ಹೋಗಲೇಬೇಕೆಂದು ಕಟ್ಟಳೆ ಇರುವದರಿಂದ ಅವರು ಕೆಲಸಕ್ಕೆ ಸೇರಲು ಸಾಧ್ಯವೇ ಇಲ್ಲ. ಕೆಲಸಕ್ಕೆ ಸೇರುವದಕ್ಕೆ ಮೊದಲು ಅವರು ವ್ಯಾಸಂಗ ಮಾಡಿಯೇ ತೀರಬೇಕಾಗುವದು. ವೃತ್ತಪತ್ರಿಕೆಗಳನ್ನು ಓದುವದಕ್ಕೆ ಕೂಡ ಯೋಗ್ಯರೇ ಇದ್ದಾರೆ. ಬಹುಶಃ ಈ ಅಪವಾದನೆಗೆ ಕಾರಣವು ಏನು ಇರಬಹುದೆಂದರೆ ೧೬-೧೮ ವರ್ಷದ ಜಪಾನು ಹುಡುಗ-ಹುಡುಗಿಯರು ಇತರ ಜನಾಂಗದವರ ೧೨ ವರ್ಷದವರಷ್ಟು ತೋರುವರು.

ಅಗ್ಗದ ಸರಕು.

ಜಪಾನಿನ ಸಾಮಾನೆಂದರೆ ಎಲ್ಲವೂ "ಅಗ್ಗದ ಸರಕು, ಮುಗ್ಗಿದ ಜೋಳ"ವೆಂದು ಅನ್ಯರ ಅಭಿಪ್ರಾಯ. ಆದರೆ ಅವರು ಮಾಡುವ ಎಲ್ಲ ಸಾಮಾನೂ ನಾವು ನೋಡುವ ಹಾಗೆ ಕಡಿಮೆ ದರ್ಜೆಯದಿರುವದಿಲ್ಲ. ಜಪಾನಿನವರು ಪ್ರಪಂಚದ ಎಲ್ಲ ಜನಾಂಗಗಳಿಗೂ ಸಾಮಾನನ್ನು ಸರಬರಾಯಿ ಮಾಡುವದರಿಂದ ಅವರವರ ಯೋಗ್ಯತೆಯ ಅನುಸಾರವಾಗಿ ಸಾಮಾನುಗಳನ್ನು ತಯಾರು ಮಾಡಿ ಕಳಿಸುವರು. ಜಪಾನಿನಿಂದ ಅಮೇರಿಕಕ್ಕೆ ಹೋಗುವ ಸಾಮಾನು ಅತ್ಯುತ್ಕೃಷ್ಟವಾದದ್ದು. ಏಕೆ ಅಂದರೆ ಅಮೇರಿಕದವರಿಗೆ ಬೆಲೆ ಹೆಚ್ಚಾದರೂ ಪರಿವೆ ಇಲ್ಲ, ಅವರಿಗೆ ಬೇಕಾದದ್ದು ಯಾವಾಗಲೂ ಉತ್ತಮವಾದ ಸಾಮಾನುಗಳೇ. ಇಂಡಿಯಕ್ಕೆ ಮಾತ್ರ ಎಲ್ಲ ಅಗ್ಗದ ಸಾಮಾನನ್ನು ಕಳಿಸುವದರಿಂದ ಜಪಾನಿಗೆ ಅಗ್ಗದ ರಾಜ್ಯವೆಂಬ ಹೆಸರು ಬಂದಿದೆ ಎಂದು ಜಪಾನಿನ ಒಬ್ಬ ದೊಡ್ಡ ಕೈಗಾರಿಕೆಗಾರನನ್ನು ಕೇಳಲು ಅದಕ್ಕೆ ಅವನು "ಅದು ನಮ್ಮ ತಪ್ಪಲ್ಲ. ನಿಮ್ಮ ದೇಶದ ವ್ಯಾಪಾರಸ್ಥರ ತಪ್ಪು. ಅವರಿಗೆ ಬೇಕಾದದ್ದು ಅಗ್ಗವಾದ ಬೆಲೆ" ಎಂದನಂತೆ!

ಜಪಾನಿನ ಕೆಲವು ಬೈಸಿಕಲ್‌ಗಳು ನಮ್ಮ ದೇಶದಲ್ಲಿ ೩೦ ರೂ.ಗಳೊಳಗೆ ಸಿಕ್ಕುತ್ತವೆ. ಬೆಲೆಯಂತೆಯೇ ಬಾಳಿಕೆಯೂ ಕೂಡ. ಆದರೆ ಜಪಾನಿನಲ್ಲಿ ಉಪಯೋಗಿಸಲ್ಪಡುತ್ತಿರುವ ಜಪಾನರ ಬೈಸಿಕಲ್‌ಗಳು ಬಹು ಸುಂದರವಾದವು, ಬಾಳಿಕೆ ಬರುವವು, ಹೆಚ್ಚು ಭಾರವನ್ನು ಸೈರಿಸಬಲ್ಲವು. ಜಪಾನಿನವರ ಅಭಿಪ್ರಾಯವೇನಂದರೆ, ಇಂಡಿಯಾದಲ್ಲಿ ಬೆಲೆ ಬಾಳುವ ಸಾಮಾನುಗಳನ್ನು ಕೊಂಡುಕೊಳ್ಳುವ ಜನರಿಲ್ಲವೆಂದು.

ಬರೀ ಕೂಗು.

ಜಪಾನಿನವರು ಬಹು ಅಗ್ಗವಾದ ಒಂದು ಮೋಟಾರು ಕಾರನ್ನು ತಯಾರಿಸಿ ಅದನ್ನು ಎಲ್ಲ ದೇಶಗಳಲ್ಲಿಯೂ ಮಾರುವರೆಂಬ ವದಂತಿ ಬಲವಾಗಿ ಹರಡಿದೆ. ಇದು ಬರೇ ಸುಳ್ಳು ಸುದ್ದಿ. ಜಪಾನಿನವರು ಕಾರುಗಳನ್ನು ಮಾಡದಿರಲಿಕ್ಕೆ ಕಾರಣವೇನೆಂದರೆ ಅಮೇರಿಕಾದಿಂದ ಅವರಿಗೆ ಅಗ್ಗವಾದ ಕಾರುಗಳು ದೊರೆಯುತ್ತಿರುವದರಿಂದಲೇ. ಮೋಟಾರುಕಾರಿನ ಎಲ್ಲ ಅಂಗಗಳನ್ನೂ ಜಪಾನಿನಲ್ಲಿ ಬೇರೆ ಬೇರೆಯಾಗಿ ತಯಾರು ಮಾಡುತ್ತಾರೆ. ಆದರೆ ಪೂರ್ತಿ ಕಾರನ್ನು ಮಾಡಿಲ್ಲ. ಮೋಟಾರು ಕಾರುಗಳನ್ನು ಯಾಕೆ ಮಾಡಬಾರದೆಂದು ಜಪಾನಿನ ಒಬ್ಬ ದೊಡ್ಡ ವ್ಯಾಪಾರಸ್ಥನನ್ನು ಕೇಳಿದಾಗ ಅವನು "ಸುಲಭ ಜೀವನಕ್ಕೆ ಅತ್ಯವಶ್ಯವಾದ ಎಷ್ಟೋ ಸಾಮಾನನ್ನು ರಫ್ತು ಮಾಡುವದರಲ್ಲಿ ನಮಗೆ ಲಾಭವಿದೆ. ಮೊದಲು ಅವಶ್ಯಕವಾದ ಸಾಮಾನು, ನಂತರ ಭೋಗ. ಇಂಡಿಯಾದಲ್ಲಿ ೧೦,೦೦೦ಕ್ಕೆ ಒಂದು ಬಸ್ಸನ್ನು ಮೋಟಾರನ್ನು ಕೊಂಡಾರು. ಆದರೆ, ಪ್ರತಿಯೊಬ್ಬನಿಗೂ ಬಟ್ಟೆ-ಬರೆಗಳು ಬೇಕಲ್ಲವೇ?" ಅಂದುಬಿಟ್ಟನಂತೆ!

ಮಹಾತ್ಮರ ದಿನಚರ್ಯೆ.

(೩ನೇ ಪಾನಿನಿಂದ ಮುಂದರಿದದ್ದು.)

ಸ್ನಾನ ಮಾಡುತ್ತಿರುವಾಗ ಶ್ರೀಮತಿ ಗಾಂಧೀಜಿಯವರು ಮತ್ತು ನಾನು ಕೂಡಿ ಉಪ್ಪಿಲ್ಲದ ಒಂದು ಸಂದು ಕಾಯಿ ಪಲ್ಯ ಮತ್ತು ಹಾಲು-ಹಣ್ಣುಗಳ ಆಹಾರವನ್ನು ಸಿದ್ಧಗೊಳಿಸುತ್ತೇವೆ. ಸ್ನಾನಗೃಹದಿಂದ ಬಂದೊಡನೆಯೇ ಅವರು ಆಹಾರವನ್ನು ತೆಗೆದುಕೊಳ್ಳುತ್ತಾರೆ. ಆಹಾರ ತೆಗೆದು ಕೊಂಡ ಮೇಲೆ ಸ್ವಲ್ಪ ಕಾಲದ ವರೆಗೆ ತಮ್ಮ ಚರಖ ದ ಮೇಲೆ ನೂಲನ್ನು ತೆಗೆಯುತ್ತಾರೆ. ಸಾಧ್ಯವೆಂದು ತೋರಿದಲ್ಲಿ ಸಂದರ್ಶನ, ಸಂಭಾಷಣೆ ಮತ್ತು ಕಬೆಗಳು ಜರುಗುವ ಪೂರ್ವದಲ್ಲಿಯೇ ೩೦-೪೦ ನಿಮಿಷಗಳ ವರೆಗೆ ಥಟಕ್ಕನೇ ನಿದ್ರೆ ಮಾಡುವರು. ಸಂಜೆಯ ೫ ಘಂಟೆಗೆ ಕೇವಲ ಹಣ್ಣಿನ ಆಹಾರವನ್ನು ತೆಗೆದುಕೊಳ್ಳುವರು. ಈ ವೇಳೆಯಲ್ಲಿ ಮಾತ್ರ ಹಾಗೆಯೇ ಕೆಲಸದಲ್ಲಿ ತೊಡಗಿರುತ್ತಲೇ ಇರುವರು. ಸಾಯಂಕಾಲದ ೭ ಘಂಟೆಯ ಪ್ರಾರ್ಥನೆಯಾದ ಮೇಲೆ ೯ ಅಥವಾ ೧೦ ಘಂಟೆಯ ವರೆಗೆ ಕೆಲಸ ಮಾಡಿ ಹಾಸಿಗೆ ಹೋಗುವರು.

ಹೆಚ್ಚು ಕಾರ್ಯಕರ್ತರುಳ್ಳವರಿಂದ ಮತ್ತು ಹೆಚ್ಚು ಖರ್ಚು ಮಾಡುವದರಿಂದ ಶರೀರದ ಭಾಗಗಳು ನೋಯಿಸಿದಲ್ಲಿ ಕೆಲವು ವೇಳೆ ಗಾಂಧೀಜಿಯವರು ತಮ್ಮ ಶ್ರೀಮತೀಜಿಯವರಿಂದ ಅವನ್ನು ಎಣ್ಣೆಯಿಂದ ತಿಕ್ಕಿಸಿಕೊಳ್ಳುವರು. ಅವರು ನಿದ್ರೆಗಾಗಿ ಹಾಸಿಗೆಯ ಮೇಲೆ ಮಲಗಲು ನಾವೆಲ್ಲರು ನೋಯುವ ಅವಯವಗಳನ್ನು ಒತ್ತುತ್ತೇವೆ. ಗಾಂಧಿಜಿಯವರು ಈಗ ೬೫ ವರ್ಷದವರಿರುವರು. ಇಷ್ಟು ಮುಪ್ಪಿನವರಾದರೂ ಅವರು ಇಷ್ಟು ಕೆಲಸವನ್ನು ಮಾಡಲು ಸಹಿಸಬಲ್ಲರು ಇದಕ್ಕಾಗಿ ಎಲ್ಲರೂ ಸೋಜಿಗಗೊಳ್ಳಬೇಕಾಗಿದೆ. ಅವರು ದಿನಾಲು ಮಾಡುತ್ತಿರುವ ಕಾರ್ಯಗಳನ್ನು ಸ್ವಲ್ಪ ಜನ ತರುಣರೇ ಮಾಡಲು ಸಮರ್ಥರೆಂದು ಕಂಡುಬರುತ್ತದೆ."

—ಕರ್ಮ ಸಂದೇಶ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ. ' ಇಂಡಸ್ಟ್ರಿಯಲ್ ವಿಮೆ ' ಎಂಬ ' ರೂಪಾಯಿ ಪೊಲಿಸಿ 'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಸುಲಭ ಕ್ರಯ.! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ,

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದಂದಿನಿಂದ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಬೇಕಾದ ಸರ್ವವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಬಹಳವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ್ ಕಳಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ.ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವಿ. ಪಿ. ೦-೬-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:— ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ.ಬಾ. ೫೧೦, ಪೋರ್ಟಟೌನ, ಮದರಾಸ.

ಶಾರದಾ ಪೂಜೆ, ದಶಮೀವಿಧಿ ಮೊದಲಾದ ಉಪಯುಕ್ತ ವಿಷಯಗಳಿಂದೊಡಗೂಡಿದ—

ಬಾಲಬೋಧ ಲಿಪಿಯ—

ನವದುರ್ಗಾ ಪೂಜಾವಿಧಿಃ

ಎಂಬ ನವರಾತ್ರೋಪಯೋಗಿ ಪುಸ್ತಕವು

ಮಾರಾಟಕ್ಕೆ ಸಿದ್ಧವಾಗಿದೆ!

ಬೆಲೆ ೧೦ ಆಣೆ. ಟ. ಖ. ಬೇರೆ

ಸಿಗುವ ಸ್ಥಳ:— ನಂದಿನೀ ಪುಸ್ತಕಾಲಯ,

ಶ್ರೀಕ್ಷೇತ್ರ ಗೋಕರ್ಣ.

ಒಂದು ಸಾರೆ ಅನುಭವಪಡಿಂದಲೇ ಸತ್ಯತೆಯು ತಿಳಿಯುವದು!

[ಶ್ರೀಶಪೋದನೆಯಿಂದ ಕೇರಳ ಪಾಶ್ಚಾತ್ಯ ಪದ್ಧತಿಗಳಿಂದ ವರ್ಣಿಸಿದ]

ಭಾವೀ ಫಲದಿಗ್ದರ್ಶನ.

ನಮ್ಮಾಲಯದಲ್ಲಿ ಜನ್ಮ ಟಿಪ್ಪಣಿಯನ್ನಾಗಲಿ ಜನ್ಮ ವೇಳೆಯನ್ನಾಗಲಿ ಇಲ್ಲವೆ ಪತ್ರ ಬರೆದ ವೇಳೆ, ಅಜಮಾಸ ಪ್ರಾಯ ಬರೆದು ಕೇಳಿದ ವಿಷಯಕ್ಕೆ ತಕ್ಕ ಫಲ ತಯಾರಿಸಿ, ವ್ಹಿ. ಪಿ. ಯಿಂದ ಕಳಿಸಲ್ಪಡುವದು.

ವರ್ಷಫಲ ೧ಕ್ಕೆ ಪ್ರಶ್ನೆ ೧ಕ್ಕೆ ಹೋರಾಮೇಲ ೧ಕ್ಕೆ

ರೂ. ೩-೮-೦ ೧-೪-೦ ೧-೦-೦

ಇದಲ್ಲದೆ ಜಾತಕದ ಎಲ್ಲ ಕೆಲಸಗಳೂ ಗ್ರಹದೋಷ, ಬಾಲಗ್ರಹ, ದೃಷ್ಟಿ, ಪಿಶಾಚಬಾಧೆ ಇವುಗಳ ನಿವಾರಣೆಗೆ ಉಪಾಯಗಳೂ, ತಕ್ಕ ರಕ್ಷೆಗಳೂ ತಯಾರಿಸಲ್ಪಡುತ್ತವೆ. ಅಪೇಕ್ಷೆಯುಳ್ಳವರು ಹೆಚ್ಚಿನ ಮಾಹಿತಿಗೆ ಸ್ಟಾಂಪು ಇಟ್ಟು ಪತ್ರ ದ್ವಾರ ಬರೆದಲ್ಲಿ ತಿಳಿಸಲ್ಪಡುವದು.

ನಿಲಿಸ— ವಿ ಶಾಂತಾರಾಮ,

ಬೃಹಸ್ಪತಿ ಜ್ಯೋತಿಷಾಲಯ,

ಪೋ:- ಶಿರಾಲಿ (ಚಿತ್ರಾಪುರ). ಜಿ. ಉ. ಕಾನಡಾ.

Siromani Udipi Narayanacharya,

CHAUKHAMBA, BENARES CITY.

ಮಹಾಶಯರೇ, ಮಂತ್ರಸಿದ್ಧಿಯುಕ್ತವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಇಷ್ಟಾರ್ಥ ಮನೋರಥವನ್ನು ಹೊಂದಿರಿ. ನಂ. 108ರ ಮಣಿ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಬಂದ ಹಾಗೆ ಕ್ರಯ ಹೆಚ್ಚುವದು. ಕಂಠಿ ಮಣಿ 32 ರ 1ಕ್ಕೆ ರೂ.0-8-0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 5ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ 1ಕಾಶೀ ನಕ್ಷೆ, 1 ವಿಶ್ವೇಶ್ವರನ ಪಟ, ನಮ್ಮ ಕೆಟಲಾಗು ಸಹ ಇನಾಂ ಕಳಿಸಲಾದೀತು. ಪತ್ತೆ:—

ಶಿರೋಮಣಿ ನಾರಾಯಣಾಚಾರ್ಯ,

ಚೌಖಾಂಬಾ, ಕಾಶೀ ಕ್ಷೇತ್ರ

THE

Canara Banking Corporation, Udipi, Ltd.

NOTICE

ಅಜಮೀರದೊಳಗಿನ ಅರ್ಜುನಪುತ್ರ ಶಾಲಶಾಲೆಯ ಅಧ್ಯಾಪಿಕೆಯರೆಲ್ಲ ಒಬ್ಬಿದ ನವಂಬರ ೧ನೇ ತಾರೀಖಿನಿಂದ ಉಪೋಷಣ ವ್ರತವನ್ನು ನಿರ್ಧಾರ ಮಾಡಿದ್ದಾರೆ. ಕಾರಣವೇನಂದರೆ, ಮ್ಯುನಿಸಿಪಾಲಿಟಿಯು ಆ ಭಾಗದಲ್ಲಿ ಹೊಸ ವಸ್ತುಗೃಹವನ್ನು ಕಟ್ಟಿದ್ದಲ್ಲಿ ಹುಡುಗಿಯರು ಅಲ್ಲಿ ಹೋಗಿ ತಮ್ಮ ಕಾಲವನ್ನು ಕಳೆಯಬೇಕಾಗುವದರಿಂದ ಅಧ್ಯಾಪಿಕೆಯರ ಅಂಬೋಣ. ಇದರಿಂದ ಅಲ್ಲಿ ಮಂದಿರ ಕಟ್ಟಗೊಡಬಾರದಾಗಿ ಹಿಂದಿನ ಮ್ಯುನಿಸಿಪಲ್ ಮ್ಯಾನೇಜಮೆಂಟ ಕಮಿಟಿಯು ಕಡ ಮಾಡಿಕೊಳ್ಳುವರು ಮುಂದಿನಿಂದ ಅಕ್ಷೇಪ ಮಾಡಿದ್ದರು. ಆದರಂತೆ ಸ್ಥಳದ ನಾಲ್ಕಿರಡ ಕಡೆಯಿಂದ ವನವಾಸ ಗೃಹಕ್ಕೆ ಈ ಮಂದಿರದ ಉಪದ್ರವಾಗಲಿಕ್ಕಿಲ್ಲವಾಗಿ ಸರ್ವರು ಒಪ್ಪಿಕೊಂಡು ಕಮಿಟಿಯವರು ಮಂದಿರ ಕಟ್ಟಗೊಟ್ಟರು. ಈಗ ಆ ಕೆಲಸ ದ್ವಿಗುಣವಾಗಿ ಕಮಿಟಿಯವರು ಎರಡನೇ ಟಿಕೆಟ್ ನೀಡುವ ಅವರಿಗೆ ಲೈಸೆನ್ಸು ಕೊಡತಕ್ಕದ್ದರಿದ್ದಾರೆ. ಅದರಿಂದ ಅಧ್ಯಾಪಿಕೆ ವರ್ಗದವರು ಮತ್ಯಾಗ್ರಹದಂತೆ ಆ ಉಪವಾಸವನ್ನು ಆರಂಭಿಸುವರು ನೋಟೀಸು ಕೊಟ್ಟಿದ್ದಾರೆ. ಅಜಮೀರದಲ್ಲಿ ಇತ್ತ ೧೯ ವರ್ಷಗಳಿಂದ ಮ್ಯುನಿಸಿಪಾಲಿಟಿಯಲ್ಲಿ ಸರಕಾರಿ ಮ್ಯಾನೇಜಮೆಂಟ ಕಮಿಟಿಯು ಕಾರ್ಯ ನಡೆಸಿದೆ!

Siromani Udipi Narayanacharya,
CHAUKHAMBA, BENARES CITY

ಮಹಾಶಯರೇ, ರುದ್ರನೇತ್ರೋದ್ಭವವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. ಪಿಂ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಗುರಿ ಸರ 32 ದರ1ಕ್ಕೆ ರೂ 0 8 0ಯಿಂದ ರೂ 100 ವರೆಗೆ ೧ ಪಿಂಡಿಕರ 1ಕ್ಕೆ ರೂ 3 8 0ರಿಂದ ೨೦ ವರೆಗೆ ಮತ್ತು ಬೇರೆ ಮಾಲಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ಸ್ಟಾಂಪು ಕಳಿಸಿದರೆ, 1ಕಾಶಿ ನಕ್ಷೆ, 1 ವಿಶ್ವೇಶ್ವರನ ಪಟ ಸಹ ಸಹ ಇನಾಮ ಕಳಿಸಲಾಗುವದು. ಪತ್ತೆ— ಶಿರೋಮಣಿ ನಾರಾಯಣಾಚಾರ್ಯ, ಚೌಖಂಬಾ, ಕಾಶೀ ಕ್ಷೇತ್ರ

ಸುಲಭ ಕ್ರಯ! ಡಾಕ್ಟರ ಜೇ ಬೀ ಯವರ ಸುಗಂಧಿ ನಸ್ಯದ ಪುಡಿ ಸುಲಭ ಕ್ರಯ!
ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಅನೇಕ ವರ್ಷಗಳಿಂದ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಸರ್ಟಿಫಿಕೇಟು ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ— ಪಿನಸ್, ಬಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕುಂಟಾಗತಕ್ಕ ಸರ್ವ ವ್ಯಾಧಿಗಳ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ತಂದಕ್ಕೆ ರಕ್ತ ಪಿತ್ತವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟದ ಸಾರದ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದ ಘಟಕವನ್ನು ಮಿಶ್ರಯಿಸಿದರೆ ಬಲವೂ ಪರಿಮಳವೂ ಆಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಪವಡರ ಸೀಸೆ ಧಕ್ಕಟ ಕಳಿಸಲಾಗುವದು.
ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦, ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ ೨-೮-೦ ವಿ ಪಿ ೦ ೫ ೦
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ
ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಮಾರ್ಕೆಟ್‌ನ ಮುಂದಿನ

ಜಾಹೀರ ನೋಟೀಸು.

ಇದರ ಮೂಲಕ [illegible]

ಗಣಪತಿ ಕೃಷ್ಣ ಭಟ್ಟ ಸಾ| ಕದೇಕೋಡಿ [illegible]

ಮಂಜನಾಥ [illegible] ಹೆಗಡೆ ಬಗ್ಗೋಣ,

ಕಥಾಕುಂಜದ
ವಿಶೇಷ ಸಂಚಿಕೆ

ವಿಶೇಷ ಸಂಚಿಕೆಯು [illegible]

ಬಿಡಿ ಸಂಚಿಕೆಗೆ ಹನ್ನೆರಡು ಆಣೆ

ವರ್ಷಾರಂಭದ (೧೯೩೪) ಚಂದಾದಾರರಿಗೆ

ಮಾತ್ರ ಉಚಿತ!!

[illegible]

ಜಾಹೀರಾತು ಕೊಡುವವರಿಗೆ ಸುವರ್ಣ ಸಂಧಿ! ದರಗಳಿಗಾಗಿ ಬರೆಯಿರಿ

ಕಥಾಕುಂಜ ಪ್ರಕಟನಾಲಯ,

[illegible]

Siromani Udipi Narayanacharya

CHAUKHAMBA, BENARES CITY

SUN & CO
BENARES CITY

ಮಹಾ ಶಿವ [illegible] ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ [illegible] ಹೊಂದಿರಿ. [illegible] 108ರ ಸರ 1ಕ್ಕೆ 0 6 0 ಯಿಂದ 10 ರೂಪಾಯಿ ವರೆಗೆ ಇದು [illegible] ಕಂಠಿ ಸರ 32 ದರ 1ಕ್ಕೆ ರೂ. 0 8 0 ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ 3 8 0 ರಿಂದ [illegible] ವರೆಗೆ ಮತ್ತು ಬೇರೆ ಮಾಲುಗಳ ವಿವರು ತಿಳಿಯಲು ಅಪೇಕ್ಷಿಸುವವರು 0 1 0 ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಪಟ ನಮ್ಮ ಕೆಟಲಾಗು ಸಹ ಇನಾಂ ಕಳಿಸಲಾಗುವದು [illegible]

ಶಿರೋಮಣಿ ನಾರಾಯಣಾಚಾರ್ಯ,

ಚೌಕಾಂಬಿ, ಕಾಶೀ ಕ್ಷೇತ್ರ

ಉತ್ತಮ ಪ್ರತಿಯ ರಚನೆ, ಪರಮಾವಧಿಯ ಲಾಭವುಳ್ಳ

Kirloskar

'ಕಲ್ಯಾಣ' ನೆಲಗಡ್ಲೆಯ ಯಂತ್ರಕ್ಕೆ



ಮಿಗಿಲಾದ ಬೇರೆ ಯಂತ್ರವಿಲ್ಲ.

[illegible]

ದೇಶತುಂಬ ನೂರಾರು ಜನರು

ಇದನ್ನು ಉಪಯೋಗಿಸುತ್ತಾರೆ

[illegible]

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಹಾ- ಸಾತಾರಾ.)

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು [illegible] ಇಂಡಿಯನ್ ಟ್ರಸ್ಟ ಎಕ್ಟಿನ [illegible] ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿವೆ

ಮಲ್ಟಿಪಲ್ ಬೆನಿಫಿಟ್ [illegible] ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

[illegible] ಪತ್ರದ್ವಾರದಿಂದ ಕೆಳಗಿನ [illegible]

Kumta Agents - D K NAYAK Bros
Honavar Agent R V PRABHU Esq.

K. Padmanabha Rao & Sons
BELGAUM
Chief Agents for
Karnatak Districts & S M States



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ ಚಿಕ್ಕವರಿಗೂ

ಒಮ್ಮೆಲೇ ಗುಣಕಾರಿಯಾದ ಶ್ರೇಷ್ಠ ಔಷಧ!

ಚಳಿಜ್ವರ, ಇನ್‌ಫ್ಲುಎಂಝಾ

ಮೊದಲಾದ ಜ್ವರಗಳ ಮೇಲೆ!!

ಮೆಡೊನ್ ಸನ್ಸ ಎಂಡ್ ಕೋ,

ಮುಂಬಯಿ ೨

MADON SONS & CO
PHARMACEUTICAL CHEMISTS BOMBAY

ಅಲ್ಲಲ್ಲಿ ಇಷ್ಟಿಷ್ಟು!

ಶ್ರೀ ಶೀ ಕ್ಷೇತ್ರದ ಜುನಾ ಅಖಾಡಾದಲ್ಲಿನ ಸಾಧು ಪ್ರಾಲಪುರಿ ಇವರು ಈ ನವರಾತ್ರಿಯಲ್ಲಿ ಯೋಗಬಲದಿ ಹಿಡಿದು ಕೂತುಕೊಂಡಿದ್ದಾರೆ. ಇವರಿಗೆ ಒಂದು ಕಾಲಿಯಲ್ಲಿ ಕಾಷ್ಟ ಮೇಲೆ ದಾರು ಮುಷ್ಟಿ ಅದರ ಮೇಲೆ ಗೋದಿ ಬಿತ್ತಿದ್ದಾರೆ. ಗೋದಿಯು ಈ ಒಂದು ಜೇಟು ಬೆಳೆದಿವೆ. ಆದಾಗ್ಯೂ ಸಾಧುಗಳು ನಿಶ್ಚೇಷ್ಟರಾಗಿ ಕುಳಿತುಕೊಂಡಿದ್ದಾರೆ. ಮೊನ್ನೆ ದಸರೆಗೆ ಅವರ ಸವಾರಿ ಸಾಗಿದವತ್ತಿದೆ. ಅವರ ದರ್ಶನಕ್ಕಾಗಿ ತಂಡತಂಡವಾಗಿ ಜನರು ಹೋಗುತ್ತಿದ್ದಾರೆ. ಸಾಧುಗಳು ಮಹಂತ ಶ್ರಾವಣಪುರಿಯವರ ಶಿಷ್ಯರು.

* *

ಕಾಂಗ್ರೆಸ ಕಾರ್ಯಕಾರಿ ಮಂಡಳವು ಜಾತೀಯ ನಿರ್ಣಯದ ಕುರಿತು ತ್ಯಕೊಂಡ ಧೋರಣ ಪಂಡಿತ ಮಾಲವೀಯರಿಗೆ ಒಪ್ಪಿಗೆಯಿಲ್ಲದ ಪಂಡಿತಜಿಯವರು ಪ್ರತ್ಯೇಕ ಪಂಗಡವನ್ನೇರ್ಪಡಿಸಿ ಮರು ಮಾಡಲು ಕೌನ್ಸಿಲಿನ ಚುನಾವಣೆಯಲ್ಲಿ ಹೋರಾಡುತ್ತಿದ್ದಾರೆ. ಅವರ ಕಾಂಗ್ರೆಸ ಪಕ್ಷದವರ ಬೇರೆ ಅವರಿಗೆ ಬೆಂಬತ್ತಿ, ಅದರ ಮೇಲೆ ಕಾಂಗ್ರೆಸ ಪಕ್ಷದವರ ಮತ್ತು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ತಮ್ಮ ಬೀಡಿನಿಂದ ಪ್ರತಿನಿಧಿಗಳ ಉಮೇದುವಾರರನ್ನು ನಿಲ್ಲಿಸಬೇಕಾದಾಗಿ ಈ ವರ್ಷ ಈ ಎಲ್ಲ ಕಾರ್ಯವನ್ನು ಮಾಡಿರುತ್ತಾರೆ. ಪಂಡಿತ ಮದನ ಮೋಹನ ಮಾಲವೀಯರು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದುವಾರರಾದ ಡಾ. ಭಗವಾನದಾಸರವರಿಗೆ ಪ್ರತಿಸ್ಪರ್ಧಿಗಳಲ್ಲಿದೆ ಪರಿಕಲ್ಪಿಸಿದರು. ಪಂಡಿತ ಮಾಲವೀಯರವರಿಗೆ ಅಲಹಾಬಾದ-ಝಾನ್ಸಿ ಮತದಾರ ಮಂಡಳದಲ್ಲಿ ಸರಿಯಾಗಿ ಅವರ ಹೆಸರು ಪ್ರತಿನಿಧಿಯಿಂದ ಅವರ ಉಮೇದ್ವಾರಿ ಪತ್ರಿಕೆ ಬಂದಿದ್ದಿಗದ ಡಾ। ಭಗವಾನದಾಸರು ಮಾಲವೀಯರ ವಿರುದ್ಧ ನಿಂತಿದ್ದಾರೆ. ಈ ವಿಷಯವು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿಗೆ ಕಳಿಸಲಾಗುತ್ತಿದೆ, ತಮ್ಮ ಮತದಾರ ಮಂಡಳದ ಸಲುವಾಗಿ ತಾವು ಉಮೇದ್ವಾರರಾಗಿ ನಿಲ್ಲುವುದಿಲ್ಲವೆಂದು ತಮ್ಮ ಸ್ಥಳದಿಂದ ಹಿಂತೆಗೆದು ಕೊಂಡಿದ್ದಾರೆ. ಈ ವಿಷಯವು ನಿಶ್ಚಿತ ಪತ್ರದಿಂದ ಬಿರುವಾದುದಾಗಿ ಪಂಡಿತರು ಇಂತಹ ಪ್ರಸಂಗದಲ್ಲಿ ತ್ಯಾಗಿಗಳ ದೇಶಸೇವಕರೂ ಬೇರೆ ದೇಶಗಳಲ್ಲಿ ಕಾಣಬಹುದೇನು? ಈ ಪ್ರೇಮ ಕಲಹ ನೋಡಿ ಅತ್ಯಂತ ಆನಂದವಾಗುತ್ತದೆ. ಇದೇ ಪ್ರವೃತ್ತಿ ಬೆಳೆದರೆ ಮುಕ್ತಿಯಿದ್ದಿತ್ತು, ದೇಶಕ್ಕೆ ಅದರಿಂದ ಅಹಿತವು ಆಗದೆ ಹಿತವಾದೀತು.

* *

ವಿಚಿತ್ರ ವ್ಯಾಜ್ಯಗಳು ನಡೆದಿವೆ. ಮಂಗಳೂರಿನ ಸಬ್‌ಜಡ್ಜ ಕೋರ್ಟಿನಲ್ಲಿ ಪತ್ನಿ ವಿಧವೆಯೊಬ್ಬಳು ಪ್ರಿಯಾಂತ ರಂಗನ ಎಂಬುವನ ಅಧಿಕಾರಕ್ಕಾಗಿ ವ್ಯಾಜ್ಯ ಮಾಡಿದ್ದಾಳೆ. ಸತೀಯರು ವಶಿಕರಿಲ್ಲ ಅವರಿಗೆ ಸ್ತ್ರೀ ಧನದ ಮೇಲಿನ ಹಕ್ಕು ಇಲ್ಲವೆಂದಿವೆ. ಉಭಯತರ ವಾದ ನಿಷ್ಕರ್ಷೆಯಾಗಿ ತನ್ನ ಪ್ರತಿಬಂಧ ಮಾಡಿದರು. ಹೀಗೆ ಸತೀಯರ ಅಂತ್ಯೋಪ ಸತೀಯ ಪರವಾಗಿ ಧರ್ಮಶಾಸ್ತ್ರಕಾರರ ಸಾಕ್ಷಿಯಾಗಿದೆ.

* *

ಎಲ್ಲೆಲ್ಲಿಯಲ್ಲಿ ತಂದೆ–ತಾಯಿಗಳಲ್ಲಿಗೆ ಒಂದು ವೇಳೆ ಮತ್ತು ದಂಪತಿಗಳಿಗೆ ಒಬ್ಬಳೇ ಮಗಳು, ೯ ವರ್ಷದವಳು. ತನ್ನ ತಮ್ಮನೊಡನೆ ಮಗಳ ಮದುವೆ ಮಾಡಬೇಕೆಂದು ಪಂಡಿತೆಯ ಅಪೇಕ್ಷೆ, ಗಂಡನಿಗೆ ಇದು ಸಮ್ಮತವಿರಲಿಲ್ಲ. ಹುಡುಗಿಯು ಶಾರದಾ ಸಮಿತಿಯ ಕಾಯಿದೆಯ ಆಜ್ಞೆ ಗಂಡನಿಗೆ ತಿಳಿಸದೆ ಹುಡುಗಿಗೆ ತಮ್ಮನೊಡನೆ ಮದುವೆ ಮಾಡಿಬಿಟ್ಟಳು. ಹುಡುಗಿಗೆ ಆಪಘಾತವೆಂದ ಆರೋಪ ಹೊರಿಸಿ ಗಂಡನು ಹೆಂಡತಿಯ ಮೇಲೆ ಮೊಕದ್ದಮೆ ಮಾಡಿದನು. ಮಗಳಿಗೆ ಮದುವೆ ಮಾಡಿದ್ದರಿಂದ ಅದರವಾಗುವದಿಲ್ಲವಾಗಿ ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟು ಮುಕದ್ದಮೆಯನ್ನು ತಿರಸ್ಕರಿಸಿದರು. ಗಂಡನು ಬಿಡಲಿಲ್ಲ. ಅಪೀಲು ಮಾಡಿದನು. ೯ ವರ್ಷದ ಹಸುಗೆಗೆ ಮದುವೆ ಮಾಡಿದ್ದು ಕಾಯದೆ ಶಾಸನವಿರುದ್ಧ ಅಪರಾಧವಾಗುತ್ತದಾಗಿ ಅಪೀಲು ಕೋರ್ಟಿನವರು ನಿರ್ಣಯಿಸಿ ರೀತಿಯಂತೆ ವಿಚಾರ ನಡೆಸಲು ಕೆಳಕೋರ್ಟಿಗೆ ಆಜ್ಞೆ ಮಾಡಿರುತ್ತಾರೆ. ಮಗಳ ಮದುವೆಯು ಮುರುಬಿಂದು ಕಲಹ ಕೇಳಿ!

* *

ರಾಜಪುತ್ರ ಜಾಜು ಹಾಗು ರಾಜಪುತ್ರಿ ಮರೀನಾರವರಿಗೆ ಇದೇ ನವೆಂಬರ ತಿಂಗಳಲ್ಲಿ ಆಗಲಿಕ್ಕಿರುವ ವಿವಾಹದ ಪ್ರೀತ್ಯರ್ಥ ಸರಕಾರವು ರಾಜಕೀಯ ಬಂದಿಗಳಿಗೆಲ್ಲ ಬಿಡುಗಡೆ ಮಾಡಬೇಕು ಬಾಗಿ "ಕ್ರಾನಿಕಲ್" ಪತ್ರಿಕೆಯಲ್ಲಿ ಒಬ್ಬರು ಸೂಚಿಸುತ್ತಾರೆ. ಸಂಸ್ಥಾನಿಕರಿಗೆ ಪಟ್ಟಾಭಿಷೇಕ ಪ್ರಸಂಗದಲ್ಲಿ, ರಾಜ್ಯಾರೋಹಣ ಸಮಾರಂಭವಾದಲ್ಲಿ ರಾಜಕೀಯ ಕೈದಿಗಳಿಗೆ ಬಿಡುಗಡೆ ಮಾಡುವ ಪ್ರಘಾತವಿದ್ದ, ಅದರಂತೆ ಸರ್ಕಾರ ನವರು ವರ್ತಿಸಲೆಂದು ನಮ್ಮಂತೆ ಅಪೇಕ್ಷೆ ಮಾಡಬಹುದಾಗಿ ಅಪೇಕ್ಷೆ.

* *

ಮಹಾರಾಷ್ಟ್ರದ ಜಹಾಗೀರದಾರ, ಸರದಾರ, ಇನಾಮದಾರರವರು ಕಳೆದ ಅನೇಕ ತಾಲೀಮಿನ ಪ್ರಜೆಯಲ್ಲಿ ನಾ। ಗವ್ಹರ್ನರರಿಗೆ ಮಾನಪತ್ರ ಕೊಟ್ಟರು, ಹೆಜ್ಜೆ ಇನ್ನಿತ್ತರು ಒಂದು ಬಗ್ಗೆಯ ತಿರುಗಿಸಲ್ಲಿ ಮಾನಪತ್ರವನ್ನು ಕೊಟ್ಟ ಸರದಾರರು ಸಾಲಗಾರರಿಗೆ ಆಶ್ರಯಿಸಿದರು. ಸಾಮಾನ್ಯರು ಮಾನಪತ್ರ ಸ್ವೀಕರಿಸಿ ಸರದಾರರಿಗೆ ಮಾನದ ಪತ್ರದಲ್ಲಿ ಉಲ್ಲೇಖಿಸಿದ ಯಾವದೇ ಅಧಿಕಾರ ಕಲಿಸಿಕ್ಕಿಲ್ಲವಾಗಿ ತುಂಡಿ ಹೇಳಿಬಿಟ್ಟರು. ದಿವಾನಿ ಅಧಿಕಾರ ಕೊಡಬಹುದಿಲ್ಲವಾಗಿ ಸೂಚಿಸುತ್ತದೆ. ನೀವು ಸಾಮಾನ್ಯ ಜನರಿಗೆ ಮಿತ್ರದವರೆಂದು ಎತ್ತಿಕೊಂಡಿದು "ಹೀಗೆ ದೊಷ್ಟ್ರ ವಹಿಸುವ ಸರದಾರರಿಗೆ ಸಾಮಾಡರು ಹೇಳಿದರು. ಅಕ್ಕದಾಳಿಗಳು ಹಿಡಿ ತೆಜೆ ಯಂತಾಗಿ ತಂದು ಪ್ರಜೆಯ ನೇತರ ಪ್ರತಿಕೂಲ ಓಟಿಸುತ್ತಿದೆ. ಸರದಾರರು ಇದರಿಂದ ಬುದ್ಧಿಗಲಿತು ಸಾಮಾನ್ಯ ಜನಾಂಗದವರೊಡನೆ ನಿಲಿತು ಸುಖದುಃಖಗಳ ಕೇಳಬೇಕು. ಮನಃಪೂರ್ವಕ ಜನಾಂಗದವರನ್ನರಲ್ಲಿ ಸೇರಿರದ ಬಗ್ಗೆ ನಾ। ಗವ್ಹರ್ನರರಿಗೆ ನಮ್ಮದೊಂದು ಅಭಿನಂದನೆ.

* *

ಕಾರವಾರ ಜಿಲ್ಲೆಯಲ್ಲಿ ಡಿ। ಬಿ। ಕಲೆಕ್ಟರರಾದ ಮಿ। ಆಸಾನಿರುವರಿಗೆ ಎರಡು ಯಿತ್ತೀಡ್ ಒಂದು ಮಾಡಿ ಸಬ್ಜೆಕ್ಟ, ಸರ್ಕಾರದ ಅವರಿಗೆ ಸ್ವಾಗತ ಹೂವಾಯು ಒಂದಿವೆ! ಕಾರವಾರ ಸೆಂಡು ಒಬ್ಬರಿಗೂ ಗೊತ್ತಿಲ್ಲ ಮಳೆ–ಬೇಸಾಯವಲ್ಲ ಮಾಗದ ಮೇಲೆ ಇವರು ಸೊಡಬಲ್ಲರವಿದ್ದಾಗಿ ಹೀಗೆ ದೇಶಾಂತರ ಎಂದು ಒಬ್ಬರ ಪೋಟು ಬಿನ ಮೇಲೆ ಇವರು ಸಾಗಿಹೋಗಿ ಅವರಿಗೆ ನಷ್ಟಪಡಿಸಿದ್ದರಿಂದ ಅವರು ಗಂಗಾಂಬಿಕೆಗಳ ವಸ್ತ್ರಭರಣಯಾಗಿ ಓಗೆದು ಮಾಡಿರುತ್ತಾರೆ. ನಸ್ಯಂತ ಆಗಲು ಏನು ಕಾರಣವೆಂದು ತಂದು ಮಿಲ್ಲ ಮುಸಲ್ಮಾನ ಕ್ಷೇತ್ರ ಘಂಟಿನಲ್ಲಿ ಇವರ ಅಂಗವಿದ್ದ ಅದರೊಳಗೆನೊ ಗಾಬರಿಯಾದ್ದರಿಂದ ಈ ಮುಕ್ತಾಯ ಒಂದಿದೆ ಹುಡಾಗಿ ಕೆಲಬ ಕರ್ಕ!

* *

ಅಹಮದಾಬಾದ ಮ್ಯುನಿಸಿಪಾಲಿಟಿಗೂ, ನಮ್ಮ ಮುಂಬಯಿ ಸರಕಾರಕ್ಕೂ ಒಂದು ತಕರಾರು. ಅಹಮದಾಬಾದ ಮ್ಯುನಿಸಿಪಾಲಿಟಿಯವರು ಸ್ಥಳೀಕ ಕೈಗಾರಿಕೆಗೆ ಉತ್ತೇಜನ ಕೊಡುವದಕ್ಕಾಗಿ ಅನ್ಯರ ಮೇಲಿನ ಮ್ಯುನಿಸಿಪಲ್ ತೆರಿಗೆಯನ್ನು ಕಿತ್ತಿಗೆದರು. ಇದರಿಂದ ಮ್ಯುನಿಸಿಪಾಲಿಟಿಗೆ ಬರ ತಕ್ಕ ನಷ್ಟವಾಯಿತು. ಹೀಗೆ ದೇಶೀ ಕೈಗಾರಿಕೆಗಳಿಗೆ ಉತ್ತೇಜನ ಕೊಡುವದು ಮ್ಯುನಿಸಿಪಾಲಿಟಿಯ ಕರ್ತವ್ಯವಲ್ಲ ರಾಜಕಾರಣದಲ್ಲಿ ಮ್ಯುನಿಸಿಪಾಲಿಟಿಯವರು ಭಾಗ ವಹಿಸಿದಂತಾಗುತ್ತದೆ, ಇದು ತಪ್ಪು ಹೀಗೆ ಮುಂಬಯಿ ಸರಕಾರದ ಆಕ್ಷೇಪ. ಮ್ಯುನಿಸಿಪಾಲಿಟಿಯಲ್ಲಿ ಈ ಕುರಿತು ಚರ್ಚೆಯಾಗಿ ತೀಕ್ಷ್ಣ ವಾದ ವಿವಾದವಾಯಿತು. ಮ್ಯುನಿಸಿಪಾಲಿಟಿಯು ರಾಜಕಾರಣವನ್ನು ತ್ಯಜಿಸಲಾರದೆಂದು ಅಧ್ಯಕ್ಷರಾದ ಶ್ರೀ ಬಳವಂತರಾವ ಠಾಕೂರರವರು ಉದ್ಗರಿಸಿ ಸರಕಾರಕ್ಕೆ ಈ ಪ್ರಕಾರ ಮ್ಯುನಿಸಿಪಾಲಿಟಿಯ ಆಡಳಿತದ ಮೇಲೆ ಟೀಕೆ ಮಾಡಬಾರದಿಲ್ಲವಾಗಿ ಸಾರಿದರು.

* *

ತಿರಸ್ಪುರದಲ್ಲಿ ಮಳೆಯಲ್ಲ ಸೊಯಬ್–ಅಮರಾವತಿ ನದಿಗಳು ಬತ್ತಿಹೋಗಿವೆ. ಹಲವು ಬಾವಿಗಳಲ್ಲಿಯೂ ನೀರಿಲ್ಲ. ಕಾಲುವೆಗಳ ಮಳೆ ನೀರು ಕೊಟ್ಟಿಯೂ ಊರಿ ಕೊಳೆಯುವ ಹಲವು ಹಗೇವುಗಳ ಒಳಗಿನವಾಯಿತು. ದನ–ಕರುಗಳು ಮೇವು ಇಲ್ಲದೆ ಅಲೆದಾಡುತ್ತವೆ. ಮೋಢ ರಾಜನಿಗೆ ಸಂತೈಸ ಮಳೆಗೆ ದಿಕ್ಕಿಲ್ಲ ಸುವ ಅಲ್ಲಿಂದ ಕೋಡಂಬಾವಿ ಎಂಬ ಕ್ಷೇತ್ರ ವಿಪ ಜನರಲ್ಲಿ ಹಾದ ಹೋಯಿತು, ಮಾಸ್ತರ ಪ್ರತಿಷ್ಠೆ ಬೆಳೆಯಿತು, ಅದರಿಂದ ಮಳೆ ಕೆಳಗಿಳಿಯಲು ಒಪ್ಪುವದಿಲ್ಲ. ಹೀಗೆ ಜನರದೊಂದು ಭಾವನೆ. ಅದರಿಂದ ಒಂದು ಮನುಷ್ಯಾಕೃತಿಯ ಗೊಂಬೆ ಮಾಡಿ ಅದರ ಹದೆ ಮಾಡುತ್ತಾರೆ. ಇದು ಮಾಸ ಮರುತಿಯ ಕೊಲೆ, ಈ ಕೊಲೆ ಮಾಡಿದ ಬಳಿಕ ಉತ್ತರಕ್ರಿಯೆಯಾಗುತ್ತದೆ, ಇದರಿಂದ ಮೇಘರಾಜನು ಸಂತುಷ್ಟನಾಗಿ ಮಳೆಗರೆಯುತ್ತಾನೆಂದು ಜನರದೊಂದು ಭಾವನೆ. ಅದರಂತೆ ಸ್ವಲ್ಪ ಮಳೆ ಹನಿಸಿತು, ಮಾತ್ರ ಮಳೆ ಬೇಕು.

* *

ಮೈಸೂರ ಆರನೆ ಜಿಲ್ಲೆಯಲ್ಲಿ ಮಳೆಯಿಲ್ಲ. ಅಲ್ಲಿ ಅಕ್ಟೋಬರ ೧ ನೇ ತಾರೀಖಿನಿಂದ ಪರ್ಜನ್ಯಜಪ ನಡೆದಿದೆ. ವೇದಶಾಸ್ತ್ರ ಸಂಪನ್ನ ೯ ಮಂದಿ ಬ್ರಾಹ್ಮಣರು ವಿಧಿಪೂರ್ವಕ ನೀರಿನಲ್ಲಿ ನಿಂತು ೬ ತಾಸಗಳ ಕಾಲ ಮಂತ್ರ ಹೇಳುತ್ತಾರೆ. ಮಂತ್ರ ಹೇಳಿ ಪರ್ಜನ್ಯ ದೇವತೆಯ ಆರಾಧನೆ ಮಾಡುತ್ತಾರೆ. ೧೧ ದಿವಸಗಳ ಕಾಲ ಈ ಅನುಷ್ಠಾನ ನಡೆಸುವದಿತ್ತು. ಕೆಲ ಬ್ರಾಹ್ಮಣರು ಮುಸ್ಲಿಮರಿಂದ ಹೋಮ ಮಾಡುತ್ತಿದ್ದಾರೆ. ಅನೇಕರು ಮುಸ್ಲಿಮರ ಮಳೆಯಲ್ಲದ ಜಪದ ಗೋಪಿಸುತ್ತಿದ್ದಾಗ ಆಮೇಲ್ದರ್ಜೆಯವರ ದೇವರ ರಾಜನು ಮುಸ್ಲಿಮರಿಗೆ ಮಸೀದಿ ಪ್ರಾರ್ಥನೆ ಕರೆದಂತೆ ಪರ್ಜನ್ಯ ಬಡವನಾಗಿ ಇರುವದು. ಮುಸ್ಲಿಮರ ಮಸೀದಿಯಲ್ಲಿ ಪ್ರಾರ್ಥನೆ ಮುಸಲ್ಮಾನರ ಪ್ರಾರ್ಥನೆ. ಮುಸ್ಲಿಮರ ಅಭಿಪ್ರಾಯವು ಮಳೆಯ ಪ್ರ. ಕ್ರಿಯೆಯ ಪ್ರಾರ್ಥಿಸಿದೆ ಇದಲ್ಲದೆ, ಇನ್ನು ಕೆಲ ಬ್ರಾಹ್ಮಣರು ಬೇರೆ ಬೇರೆ ವಿಧಿಗಳನ್ನು ಜಪ ಕಡಿತ್ತಿದ್ದರೆ ಇದಕ್ಕಾಗಿ ಮಹಾಜನ ಮಂಡಳವೊಂದು ಏರ್ಪಾಟಾಗಿದೆ. ಇದರಲ್ಲಿ ಸಂಸ್ಥಾನದ ಅಧಿಕಾರಿಗಳೂ ಸಹ ಸೇರುತ್ತಾರೆ.

* *

ಜಪ ಗಳಿಯ ಸರ್ವಸತ್ತಾಧಿಕಾರಿಗಳಾದ ಹರ್ ಹಿಟ್ಲರರವರೂ, ಇಟಾಲಿಯ ಸರ್ವಸತ್ತಾಧಿಕಾರಿಗಳಾದ ಮುಸೊಲಿನಿಯವರೂ ಸ್ತ್ರೀಯರನ್ನು ಗೃಹಿಣಿಯರನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಸ್ತ್ರೀಯರು ಪುರುಷರಂತೆಯೇ ಹೊರ ಚಟುವಟಿಕೆಗಳಲ್ಲಿ ಸೇರಿಕೊಂಡಿರಬೇಕೆಂಬುದೊಂದು ಸ್ವಾತಂತ್ರ್ಯ ವಿಚಾರವು ಇತ್ತೀಚೆ ಹಲವೆಡೆ ಹಬ್ಬಿಸಿದೆ. "ಇದು ಸ್ತ್ರೀಯರ ಕರ್ತವ್ಯವಲ್ಲ, ಮನೆ, ಪತಿ ಮಕ್ಕಳು, ಇವೇ ಸ್ತ್ರೀಯರ ಜಗತ್ತು, ಅಲ್ಲಿಯೇ ಸ್ತ್ರೀಯರು ತಮ್ಮ ಸರ್ವ ಸಾಮರ್ಥ್ಯವನ್ನೂ, ಸರ್ವ ಬುದ್ಧಿ ಮತ್ತೆಯನ್ನೂ ಉಪಯೋಗಿಸಬೇಕು, ತಮ್ಮ ತಮ್ಮ ಶಕ್ತಿಯ ಪುಟ್ಟಿಗೆ ಸಂತತಿ ಬೆಳೆಸೋಣ ಸ್ವನಿಕನ್ನೇ ಪಡಿಸಲು ಮನಮುಟ್ಟಿ" ಹೀಗೆ ಹಿಟ್ಲರರವರು ಸ್ತ್ರೀಯರಿಗೆ ಗರದಲ್ಲಿ ಸೇರಿದ ೩೦ ಸಾವಿರ ಸ್ತ್ರೀಯರ ಸಭೆಯಲ್ಲಿ ಸಾರಿದ್ದಾರೆ.

* *

ಅವಪ್ಪರ ಮುಟ್ಟಿಗೆ ನಾಪ್ರವೇ ಮದುವೆಯಾಗ ಸಂಸಾರ ವಹಿಸಬೇಕಾದವೇ ಇಟಾಲಿಯ ಸ್ತ್ರೀಯರ ಧ್ಯೇಯ ಎಂದು ಮುಸೋಲಿನಿಯವರ ಅಂಬೋಣ. ವಸ್ತುತಃ ಇದೇ ಸ್ತ್ರೀಯರ ಉಚ್ಚ ಧ್ಯೇಯವು ನಮ್ಮ ಜನ ಋಷಿ

(ಮುಂದೆ ೧ ನೇ ಪಾನಿನ ಮೇಲೆ ಮುಂದರಿಸಿದೆ)

ಶ್ರೀ| ಸಿದ್ದಪ್ಪ ಹೊಸಮನೆಯವರು.

ಅಲ್ಪ ಪರಿಚಯ.

ಶ್ರೀಯುತ ಸಿದ್ದಪ್ಪ ಹೊಸಮನೆಯವರು ಸಾಮಾನ್ಯ ಸ್ಥಿತಿಯ ಮನೆತನದವರು, ಹಿರಿಯರು ಮುಖ್ಯವಾಗಿ ಬೇಸಾಯವೇ ಇವರ ಮನೆತನದ ಉದ್ಯೋಗ. ೧೯೦೯ನೇ ಇಸ್ವಿಯಲ್ಲಿ ಇವರು ಹುಟ್ಟಿದರು. ಧಾರವಾಡ, ಪುಣೆ, ಮುಂಬಯಿ ಕಡೆಗಳಲ್ಲಿ ಇವರು ಶಿಕ್ಷಣ ಹೊಂದಿದರು. ೧೯೦೬ನೇ ಇಸ್ವಿಯಲ್ಲಿ ಇವರು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೦೮ನೇ ಇಸ್ವಿಯಲ್ಲಿ ಇವರು ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಪಾಸಾದರು. ಮುಂದೆ ಇವರು ಸರಕಾರಿ ನೌಕರಿಯಲ್ಲಿ ಸೇರಿ ಸಬ್-ಇನ್ಸಪೆಕ್ಟರರಾಗಿದ್ದರು, ಅದನ್ನು ಬಿಟ್ಟು ಹಾವೇರಿಯಲ್ಲಿ ವಕೀಲರಾದರು. ಹಾವೇರಿಯಲ್ಲಿ ವಕೀಲರಾಗಿ ಇವರು ಒಳ್ಳೇ ಕೀರ್ತಿ ಸಂಪಾದಿಸಿದ್ದಾರೆ, ಲೋಕಸೇವೆಯನ್ನೂ ಇವರು ನಡಿಸಿದ್ದಾರೆ. ೧೯೧೫ನೇ ಇಸ್ವಿಯಿಂದ ೧೯೨೫ನೇ ಇಸ್ವಿಯ ವರೆಗೆ ತಾಲೂಕ ಮತ್ತು ಜಿಲ್ಲಾ ಲೋಕಲ್ ಬೋರ್ಡಿನ ಸಭಾಸದರಿದ್ದರು, ೧೯೨೦ರಿಂದ ೧೯೨೫ನೇ ಇಸ್ವಿಯ ವರೆಗೆ ಸ್ಕೂಲ ಬೋರ್ಡಿನ ಚೇರಮನ್ನರಿದ್ದರು. ೧೯೨೫-೨೬ನೇ ಸಾಲಿನಲ್ಲಿ ಇವರು ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಾದರು. ೧೯೨೭ನೇ ಇಸ್ವಿಯಲ್ಲಿ ಇವರು ಹಾವೇರಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದರು. ೧೯೩೪ನೇ ಸಾಲಿನ ತನಕ ಇವರು ಅಧ್ಯಕ್ಷರಾಗಿ ನಡಿಸಿದ ಮ್ಯುನಿಸಿಪಾಲಿಟಿಯ ಸೇವೆಯನ್ನು ಹಾವೇರಿಯವರು ಇಂದಿಗೂ ಕೃತಜ್ಞತಾಬುದ್ಧಿಯಿಂದ ಸ್ಮರಿಸುತ್ತಾರೆ. ಇವರ ಸಂಘಟನಾಚಾತುರ್ಯದಿಂದಾಗಿ ಇವರು ಧಾರವಾಡದಲ್ಲಿ 'ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶೂರನ್ಸ ಕಂಪನಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ.

ಬ್ರಾಹ್ಮಣೇತರರಲ್ಲಿ ಬೇರೂರಿಕೊಂಡ ದ್ವೇಷ—ಮಾತ್ಸರ್ಯಗಳನ್ನು ಹೋಗಲಾಡಿಸುವದಕ್ಕಾಗಿ ಇವರು ತತ್ಪರತೆಯಿಂದ ದುಡಿದಿದ್ದಾರೆ. ಧರ್ಮಸಂಸ್ಥಾಪಕರಾದ ಬಸವೇಶ್ವರ ದೇವರು ಜಾತಿಭೇದದಿಂದ ಉಂಟಾದ ವಿಷಮತೆಯನ್ನು ನಷ್ಟಪಡಿಸುವದಕ್ಕಾಗಿ ವೀರಶೈವ ಧರ್ಮದ ಸಂಸ್ಥಾಪನೆ ಮಾಡಿದರೆಂದ ಇವರು ನಂಬುತ್ತಾರೆ. ಈ ಶ್ರದ್ಧೆಯಿಂದಲೇ ಹರಿಜನೋದ್ಧಾರಕ್ಕಾಗಿ ಇವರು ಪ್ರಮುಖ್ಯರಾಗಿ ದುಡಿಯುತ್ತಾರೆ. ಧಾರವಾಡದ ಹರಿಜನ ಸೇವಕ ಸಂಘದಲ್ಲಿ ಇವರು ಮಾಡುತ್ತಿರುವ ಸೇವೆ ಎಲ್ಲರೂ ಬಲ್ಲಂಥ ವಿಷಯ.

ಶ್ರೀ| ಹೊಸಮನೆಯವರು ಸ್ವತಃ ರೈತರಿದ್ದಾರೆ. ರೈತರ ಕಷ್ಟಗಳನ್ನು ಇವರು ಗ್ರಹಿಸಬಲ್ಲರು. ರೈತರ ಕಷ್ಟನಿವಾರಣೆಗಾಗಿ ಇವರು ಬಹಳ ಪ್ರಯತ್ನಪಡುತ್ತಿದ್ದಾರೆ. ಹುಬ್ಬಳ್ಳಿ ತಾಲೂಕ ರೈತ ಪರಿಷತ್ತಿನ ಮುಖ್ಯಸ್ಥರಿವರು. ೧೯೩೧ನೇ ಇಸ್ವಿಯಲ್ಲಿ ಬೆಳಗಾವಿ ಜಿಲ್ಹೆಯ ರೈತ ಸಭೆಯು ಸಂಕೇಶ್ವರದಲ್ಲಿ ಸೇರಿದ ಅಧಿವೇಶನದ ಅಧ್ಯಕ್ಷರು ಇವರೇ ಆಗಿದ್ದರು. ಸತ್ಯಾಗ್ರಹದಲ್ಲಿ ಸೇರಿದ ರೈತರ ಕಷ್ಟನಿವಾರಣೆಗಾಗಿ ಏರ್ಪಟ್ಟಾದ ರೈತ ಸಹಾಯಕ ನಿಧಿ ಮಂಡಳದ ಸದಸ್ಯರು ಇವರು.

೧೯೩೦ನೇ ಸಾಲಿನಲ್ಲಿ ಬೆಳಗಾವಿಯಲ್ಲಿ ಸೇರಿದ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತಿಗೆ ಶ್ರೀ| ಹೊಸಮನೆಯವರೇ ಅಧ್ಯಕ್ಷರಾಗಿದ್ದರು. ಕೊಂಗ್ರೆಸ ಲೋಕಪಕ್ಷವನ್ನು ಇವರು ಸ್ಥಾಪಿಸಿ ಬ್ರಾಹ್ಮಣೇತರ ಬಾಂಧವರಿಗೆಲ್ಲ ರಾಷ್ಟ್ರೀಯ ಸಭೆಗೆ ಸೇರುವಂತೆ ಹುರಿದುಂಬಿಸಿದ ಚಿತ್ತಾಕರ್ಷಕ ಸಂಗತಿ ಚಿರಸ್ಮರಣೀಯವಾದುದು.

೧೯೩೦ನೇ ಇಸ್ವಿಯಲ್ಲಿ ಸರಕಾರದ ಅವಕೃಪೆಯ ಏಕೆಂಬ ಗಣ್ಯ ಸ್ವತಃ ಶ್ರೀ ಹೊಸಮನೆಯವರು ಮಾಡಿ ಜನಗಳಿಗೆ ಕೆಚ್ಚು ಹಚ್ಚಿಕೊಟ್ಟರು. ರಾಷ್ಟ್ರೀಯ ಸಭೆಯ ಪ್ರಚಾರ ಕಾರ್ಯಕ್ಕೆ ಇವರಿಂದ ಒಳ್ಳೇ ಕಳೆಯೇರಿತು. ಜಿಲ್ಲಾ ಕೊಂಗ್ರೆಸ ಕಮಿಟಿಯ ಕಚೇರಿಯು ಧಾರವಾಡದಿಂದ ಹಾವೇರಿಗೆ ತರಬೇಕಾಯಿತು. ಶ್ರೀ| ಹೊಸಮನೆಯವರಿಗೆ ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷಸ್ಥಾನವನ್ನು ಕೊಡುವದು ಸರ್ವಸಮ್ಮತವಾಯಿತು.

೧೯೩೦ನೇ ಸಾಲಿನ ಚಳುವಳಿಯಲ್ಲಿ ಸರಕಾರದವರು ಶ್ರೀ ಹೊಸಮನೆಯವರಿಗೆ ರಾಜಶಾಸನ ಕಾಯಿದೆಯ ಸಂಕೆ ಒಪ್ಪದೇ ಪ್ರತಿಬಂಧಿಸಿ ಹಿಂಡಲಗಿಯ ಕಾರಾಗೃಹವಾಸದಲ್ಲಿ ೩ ತಿಂಗಳು ತನಕ ಪ್ರತಿಬಂಧಿಸಿಟ್ಟು, ಆ ಮೇಲೆ ಗಜೇಂದ್ರಗಡದಲ್ಲಿ ಇವರು ಉಳಿಯಬೇಕೆಂದೂ, ದಿನಾ ಪೋಲೀಸರಿಗೆ ಹಾಜರಿ ಕೊಡಬೇಕೆಂದೂ ವಿಧಿಸಲಾಯಿತು. ಇದಕ್ಕೆ ಮಾನ್ಯರಾದ ಶ್ರೀ| ಹೊಸಮನೆಯವರು ಒಪ್ಪಲಿಲ್ಲ. ಉಲ್ಲಂಘನೆಯ ಬಗ್ಗೆ ಇವರಿಗೆ ಒಂದು ವರ್ಷದ ಶಿಕ್ಷೆ, ೧| ಸಾವಿರ ರೂಪಾಯಿ ದಂಡ ವಿಧಿಸಲಾಯಿತು. ಇವರಿಗೆ ಸಿ ನೇ ತರಗತಿಯಲ್ಲಿ ದಬ್ಬಿದ್ದರು. ಮೆಜಿಸ್ಟ್ರೇಟರ ಅಪ್ಪಣೆ. ಶ್ರೀ| ಹೊಸಮನೆಯವರ ಕೆಲವು ನೇರ ರಾಷ್ಟ್ರೀಯ ಪತ್ರಿಯುಳ್ಳವರು, ಸಹಕಾರ ವೃತ್ತಾಂತದಲ್ಲಿ ಇವರು ರಾಜಕೀಯ ಬಂದೀವಾಸದಲ್ಲಿದ್ದು ಬಳಲಿದರು. ಇವರ ಮುಖ್ಯಸ್ಥನ ಮುಂದಾಳಾದ ಪರಮ ಗಣ್ಯರು ಈಗ ೧೪ ವರ್ಷಗಳಿಂದ ಮುಂದೆ ಬಂದು ರಾ. ಸಭೆಯ ಕಾರ್ಯ ಮಾಡುತ್ತಿದ್ದಾರೆ. ೧೯೩೦ನೇ ಸಾಲಿನಲ್ಲಿ ಶ್ರೀ ಹೊಸಮನೆಯವರ ಹೆಂಡತಿಯರೂ ಸಹ ಪತ್ನಿ ಮೊದಲಾದವರೂ ಕಾರಾಗೃಹವಾಸವನ್ನು ಅನುಭವಿಸಿದ್ದಾರೆ.

ಇಂಥ ಮಹನೀಯರಿಗೆ ಕೊಂಗ್ರೆಸ ಪಾರ್ಲಮೆಂಟರಿ ಬೋರ್ಡಿನವರು ನಮ್ಮ ದಕ್ಷಿಣ ಭಾಗದ ಪರವಾಗಿ ವರಿಷ್ಠ ಕಾಯಿದೆ ಕೌನ್ಸಿಲಿಗೆ ಉಮೇದವಾರರಾಗಿ ಆರಿಸಿದ್ದಾರೆ. ಶ್ರೀ ಹೊಸಮನೆಯವರಂಥ ನಿಸ್ಪೃಹ ದೇಶಸೇವಕರೂ, ರೈತರ ಅಭಿಮಾನಿಗಳೂ, ರಾಷ್ಟ್ರೀಯ ಸಭೆಯ ನಿತಾಂತ ಭಕ್ತರೂ ಬೇರೊಬ್ಬರಿಲ್ಲ. ಶ್ರೀ| ಸಿದ್ದಪ್ಪನವರು ಕನ್ನಡ-ಮರಾಠಿ-ಇಂಗ್ಲೀಷ ಈ ಮೂರೂ ಭಾಷೆಗಳಲ್ಲಿ ನಿಷ್ಣಾತರಿದ್ದಾರೆ. ಇವರಿಗೆ ಯಾವತ್ತೂ ಮತದಾರರು ಮತ ಕೊಟ್ಟು ಪ್ರಚಂಡ ಬಹುಮತದಿಂದ ದಕ್ಷಿಣ ಭಾಗದ ಪರವಾಗಿ ಆರಿಸಿ ಕಳುಹಬೇಕು.

ಕುಲಾಬಾ ಜಿಲ್ಹೆಯಲ್ಲಿ ದ. ಕಾ. ಕುಂಟೇ ಮೊದಲಾದ ವಕೀಲರೂ, ಮು. ನಾ. ಲಿಮಯೇ ಮೊದಲಾದ ಡಾಕ್ಟರರೂ, ರಾಮದಾಸ ವಿಠ್ಠಲದಾಸ ಮೊದಲಾದ ವ್ಯಾಪಾರಸ್ಥರೂ ಶ್ರೀ| ಹೊಸಮನೆಯವರಿಗೇ ಮತ ಕೊಡಬೇಕಾಗಿ ಪ್ರಕಟಣೆ ಹೊರಡಿಸಿದ್ದಾರೆ. ಶ್ರೀ| ಚನಬಸಪ್ಪಾ ಸಂಗನಬಸಪ್ಪಾ ಸಿಂದಿಹಾಳ ಮೊದಲಾದ ಕೋಣದೊಳಗಿನ ಪ್ರಮುಖರು ಇದೇ ಪ್ರಕಾರ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಬೆಳಗಾವಿಯ ಶ್ರೀ| ದತ್ತೋಪಂತ ಬೆಳವಿ, ಪೋತದಾರ ಮೊದಲಾದ ರಾಷ್ಟ್ರೀಯರೂ, ಸನಾತನ ಧರ್ಮಾಭಿಮಾನಿಗಳೂ ಶ್ರೀ| ಹೊಸಮನೆಯವರೇ ದಕ್ಷಿಣ ಭಾಗದ ಸಭಾಸದರಾಗಲು ಸರ್ವಥಾ ಅರ್ಹರೆಂಬ ಅಭಿಪ್ರಾಯಪಟ್ಟು, ಅವರಿಗೇ ಮತದಾನ ಮಾಡುವಂತೆ ಮತದಾರರಿಗೆ ಬೋಧಿಸುತ್ತಾರೆ. ಎಲ್ಲೆಲ್ಲಿಯೂ ದೇಶಭಕ್ತ ಹೊಸಮನೆಯವರಿಗೇ ಮತದಾನವಾಗುವಂತೆ ಜಿಲ್ಲೆಲ್ಲಿಯ ರಾಷ್ಟ್ರೀಯರು ಪ್ರಯತ್ನಪಡುತ್ತಿದ್ದಾರೆ. ಯೋಗ್ಯತೆಯಿಂದಲೂ, ದೇಶಸೇವೆಯಿಂದಲೂ, ಸ್ವಾರ್ಥತ್ಯಾಗದಿಂದಲೂ ಶ್ರೀಯುತ ಹೊಸಮನೆಯವರೇ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾಗಲು ಪಾತ್ರರೆಂದೇ ಸಮಸ್ತರ ಅಭಿಪ್ರಾಯ.

— ಶ್ರೀ| ದ್ವಾರಕಾಪ್ರಸಾದ ಮಿಶ್ರರವರು ದಿವಾಣರ ದಿವಾಣರ ಹುಕುಮಿನಂತೆ ರಾ| ಶರ್ಮಾರವರನ್ನು ಸಕ್ರೇಟರಿಗಳಾಗಿ ನೇಮಿಸಿಕೊಳ್ಳುದಿದ್ದ ಬಗ್ಗೆ ಇಡೀ ಜಬಲಪುರ ಮ್ಯುನಿಸಿಪಾಲಿಟಿಯನ್ನು ಮಧ್ಯಪ್ರಾಂತ ಸರಕಾರವು ರದ್ದುಪಡಿಸಿ ಸ್ವಾಧೀನಪಡಿಸಿಕೊಳ್ಳುವ ವಿಚಾರದಲ್ಲಿರುವದಾಗಿ ನಾಗಪುರದ 'ಹಿತವಾದ' ಪತ್ರಿಕೆಯ ವಾರ್ತೆ. ಸ್ಥಾನಿಕ ಸ್ವರಾಜ್ಯದ ಅಭಿಮಾನಿಗಳೆಲ್ಲರೂ ಚಿಂತಿಸತಕ್ಕ ಸಂಗತಿ.

ಅಚ್ಚಿನಲ್ಲಿದೆ! ತ್ವರೆ ಮಾಡಿರಿ!!

ಶ್ರೀ| ವೇ. ಮೊಗೇರಿ ಭಾಸ್ಕರ ಅಡಿಗಳಿಂದ

ತಿಥ್ಯಾದಿಗಳಲ್ಲಿಯೂ ಗ್ರಹಣಾದಿ ಪ್ರತ್ಯಕ್ಷ ವಿಷಯಗಳಲ್ಲಿಯೂ ಶಾಸ್ತ್ರವಿಹಿತವಾಗಿ ಹಾಗೂ ಸೂಕ್ಷ್ಮವಾಗಿರುವಂತೆ ಸೂರ್ಯ ಸಿದ್ಧಾಂತ ರೀತ್ಯಾ ಗುಣಿಸಲ್ಪಟ್ಟು, ಇವರ ಅಗ್ರಜ—

ಶ್ರೀ| ವೇ. ಸಿದ್ಧಾಂತಿ ರಾಮಪ್ಪ ಅಡಿಗಳು ಮತ್ತು ಶ್ರೀ| ವೇ. ಕಕ್ಕೆ ಸೂರಿ ಕೃಷ್ಣಭಟ್ಟರು ಇವರಿಂದ ಪರಿಶೋಧಿಸಲ್ಪಟ್ಟು,

ಕೆಕ್ಕಾರ ಶ್ರೀ ವಿಶ್ವನಾಥ ಧರ್ಮವಿದ್ಯಾಪರಿಷತ್ ಇವರಿಂದ ಆಶ್ರಯವನ್ನು ಹೊಂದಿದ

ಸಕಲ ಧಾರ್ಮಿಕ, ಲೌಕಿಕ ಕಾರ್ಯಗಳಿಗೂ ಉಪಯುಕ್ತವಾಗಿರುವ

ಯುವ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ! ನವಂಬರ ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವದು!

ನಿಯಮಿತ ಪ್ರತಿಗಳು ತೆಗೆದಿರುವದರಿಂದ ಬೇಕಾದವರು ಮುಂದಾಗಿ ತಿಳಿಸಬೇಕು!

ಜಾಹೀರಾತುದಾರರು ತ್ವರೆ ಮಾಡಬೇಕು!!

ಪತ್ತೆ:—

ಮೆನೇಜರ, "ಸ್ಟಾರ ಆಫ್ ಕೆನರಾ ಪ್ರೆಸ್", ಕುಮಟಾ. (ಉ. ಕನ್ನಡ)

ಎಸೆಂಬ್ಲಿ ಚುನಾವಣೆ.

ರಾ| ಜೋಗರಾಯರಿಗೆ ಜಾಹೀರ ಪ್ರಶ್ನೆಗಳು

ಮಾರವಾಡದ ರಾ| ಜೋಗರಾಯರು ಕಾಂಗ್ರೆಸ್ಸಿನ ಉಮೇದವಾರರ ವಿರುದ್ಧವಾಗಿ ವರಿಷ್ಠ ಕಾಯಿದೆ ಕೌನ್ಸಿಲಿಗೆ ನಿಂತಿರುವದನ್ನು ಕೇಳಿ ನಮಗೆ ಆಶ್ಚರ್ಯವಾಗಿರುವದು ಅವರು ತಾವು ಕಾಂಗ್ರೆಸ್ಸಿನವರು, ಸನಾತನಿಗಳ ಪಕ್ಷದವರು, ಸರಕಾರಕ್ಕೆ ಬೆಂಬಲ ಕೊಡದೆ ಇದ್ದವರು ಎಂದು ಹೇಳುತ್ತಿರುವದನ್ನು ಕೇಳಿ ನಮಗೆ ಮತ್ತಿಷ್ಟು ಆಶ್ಚರ್ಯವಾಗಿದೆ.

ಅವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಟ್ಟರೆ ಮತದಾರರಿಗೆ ವಿಚಾರ ಮಾಡಲಿಕ್ಕೆ ಅನುಕೂಲವಾಗುವದು.

(೧) ರಾ| ಜೋಗರವರು ಸದ್ಯಕ್ಕೆ ಕಾಂಗ್ರೆಸ ಕಮಿಟಿ ಮೆಂಬರರಿರುವರೋ? ಇದ್ದರ ಅವರು ಯಾವ ತಾರೀಖಿಗೆ ಮೆಂಬರರಾದರು? ಜೂನ ತಿಂಗಳಲ್ಲಿ ಕಾಂಗ್ರೆಸ ಕಮಿಟಿಗಳು ಕಾಯದೇಶೀರ ಆಗಿರುತ್ತಿದ್ದು, ಇದುವರೆಗ ಅವರು ಯಾಕೆ ಕಾಂಗ್ರೆಸ ಮೆಂಬರರಾಗಲಿಲ್ಲ? ಈಗ ಪಂಡಿತ ಮಾಲವೀಯ ಪಕ್ಷದವರಾಗುವ ಉದ್ದೇಶದಿಂದ — ಎಸೆಂಬ್ಲಿಗೆ ನಿಲ್ಲುವ ಉದ್ದೇಶದಿಂದ — ಕಾಂಗ್ರೆಸ ಮೆಂಬರರಾಗಿರುವರೆಂದು ಹೇಳುತ್ತಾರೋ?

(೨) ೧೯೩೦ರಲ್ಲಿ ರಾ| ಜೋಗರವರು ರಾಷ್ಟ್ರೀಯ ಸಭೆಯ ಸಹಾಯದಿಂದ ಅವರ ಪ್ರತಿಜ್ಞಾಪತ್ರಕ್ಕೆ ಸಹಿ ಕೊಟ್ಟು ಕಾಂಗ್ರೆಸ ಹೇಳಿದಂತೆ ಕೇಳುವೆನು ಎಂದು ವಚನ ಕೊಟ್ಟು ಮುಂಬಯಿ ಕೌನ್ಸಿಲಿಗೆ ಆರಿಸಿ ಬರಲಿಲ್ಲವೇನು? ೧೯೩೦ರಲ್ಲಿ ಲಾಹೋರ ಕಾಂಗ್ರೆಸಿನಲ್ಲಿ ಕೌನ್ಸಿಲ ಬಹಿಷ್ಕಾರದ ಠರಾವು ಪಾಸಾದ ನಂತರ ಕಾಂಗ್ರೆಸ್ಸಿನ ಆಜ್ಞೆಯಂತೆ ರಾ| ಜೋಗರವರು ನಡಕೊಂಡರೇನು? ನಡಕೊಳ್ಳದಿದ್ದರೆ ವಚನ ಭಂಗ ಮತ್ತು ಶಿಸ್ತಿನ ಭಂಗ ಈ ದೋಷಗಳು ಅವರ ಪಾಲಿಗೆ ಬರುವದಿಲ್ಲವೋ?

(೩) ೧೯೩೦ರಲ್ಲಿ ಕೌನ್ಸಿಲುಗಳಿಗೆ ಕಾಂಗ್ರೆಸ್ಸಿನ ಬಹಿಷ್ಕಾರವಿರುತ್ತಿರಲು, ರಾ| ಜೋಗರವರು ಕಾಂಗ್ರೆಸ ಆಜ್ಞೆಯನ್ನು ಅವಮಾನಿಸಿ ಮುಂಬಯಿ ಕೌನ್ಸಿಲಿಗೆ ನಿಂತರೋ, ಇಲ್ಲವೊ? ನಿಂತಿದ್ದರೆ ಅವರು ಕಾಂಗ್ರೆಸ್ಸಿನ ಆಜ್ಞಾಭಂಗದ ದೋಷಕ್ಕೆ ಗುರಿಯಿಲ್ಲವೋ?

(೪) ೧೯೩೦-೩೪ರ ವರೆಗೆ ರಾ| ಜೋಗರವರು ಕಾಂಗ್ರೆಸ್ಸಿನ ಯಾವ ಯಾವ ಕಾರ್ಯವನ್ನು ಮಾಡಿರುವರು? ಕಾಂಗ್ರೆಸ್ಸಿಗೆ ಯಾವ ಸಹಾಯ ಮಾಡಿರುವರು? ಹೀಗೆ ಯಾವ ಸಹಾಯ ಮಾಡದಿದ್ದರೂ ಅವರು ಕಾಂಗ್ರೆಸ್ಸಿನವರು ಎಂದು ಯಾವ ಮುಖದಿಂದ ಹೇಳಬಲ್ಲರು?

(೫) ರಾ| ಜೋಗರಾಯರು ಯಾವಾಗಲೂ ಖಾದೀ ಧಾರಣ ಮಾಡುವರೋ?

(೬) ರಾ| ಜೋಗರವರು ನಮ್ಮ ಜಿಲ್ಹೆಯೊಳಗಿನ ಸತ್ಯಾಗ್ರಹ ಕಷ್ಟ-ನಷ್ಟಕ್ಕೊಳಗಾದ ರೈತರ ಬಗ್ಗೆ ಯಾವ ಕಾರ್ಯವನ್ನು ಮಾಡಿರುವರು? ರೈತರ ಬಗ್ಗೆ ಕಾರ್ಯ ಮಾಡುವ ಇಲ್ಲಿಯ ಮುಖಂಡರಿಗೆ ಅವರು ಯಾವ ರೀತಿ ಸಹಾಯ ಮಾಡಿರುವರು?

(೭) ಕಾರವಾರ ರೈತರ ಕಷ್ಟನಿವಾರಕ ನಿಧಿಗೆ ಕೊಡಲು ತಮ್ಮ ಕಡೆಗೆ ಹಣವಿಲ್ಲ ಎಂದು ರಾ| ಜೋಗರವರು ಈಗ ಸುಮಾರು ಒಂದು ತಿಂಗಳು ಹಿಂದೆ ನಿಧಿ ಸಹಾಯಕ ಮಂಡಳದವರಿಗೆ ತಿರುಗಿ ಕಳುಸಿದ್ದು, ನಿಜವೋ? ಅದು ನಿಜವಿದ್ದರೆ ಕಾಯಿದೆ ಕೌನ್ಸಿಲಿನ ಚುನಾವಣೆಗೆ ಬೇಕಾಗುವ ಹುವಾರ ಸಾವಿರಾರು ಹಣ ಯಾವ ಭಂಡಾರದಿಂದ ದೊರೆಯಿತು?

(೮) ಕರ್ನಾಟಕದ ಕಾಂಗ್ರೆಸ ಮುಖಂಡರಾದ ಶ್ರೀ| ದತ್ತೋಪಂತ ಬೆಳವೀಯವರು, ರಾಷ್ಟ್ರೀಯ ಸಭೆಯ ವಿರುದ್ಧ ನೀವು ನಿಲ್ಲಬೇಡಿ ಎಂದು ರಾ| ಜೋಗರವರಿಗೆ ಹೇಳಿದ್ದು ನಿಜವೋ? ನಿಜವಿದ್ದ ಪಕ್ಷದಲ್ಲಿ ಅವರು ಅದನ್ನು ಯಾಕೆ ಉಲ್ಲಂಘಿಸಿದರು?

(೯) ಕರನಿರಾಕರಣ ಮಾಡಿದ ಅಂಕೋಲಾ, ಸಿದ್ದಾಪುರ ರೈತರಿಗಾಗಿ ರಾ| ಜೋಗರವರು ಏನೂ ಮಾಡದೇ ನಮ್ಮ ಉತ್ತರಕನ್ನಡಜಿಲ್ಹೆಯ ಮತಗಳನ್ನು ಪಡೆಯಲಿಕ್ಕೆ ಇವರಿಗೆ ಯಾವ ಅಧಿಕಾರವಿರುವದು?

(೧೦) ಇವರು ಮಹಾರಾಷ್ಟ್ರೀಯರೆಂದು ಇವರಿಗೆ ಮತ ಕೊಡಬೇಕು ಎಂದು 'ಕೇಸರಿ'ಕಾರರು ಬರೆದಿರುವರು. ಇವರು ಯಾವ ವ್ಯಾಖ್ಯೆಯ ಪ್ರಕಾರ ಮಹಾರಾಷ್ಟ್ರೀಯರೆಂದು ಗೊತ್ತಾಗಲಿಲ್ಲ. ಮಹಾರಾಷ್ಟ್ರೀಯರಿದ್ದರ ಕರ್ನಾಟಕದವರು ಯಾಕೆ ಮತ ಕೊಡಬೇಕು?

(೧೧) ಕರ್ನಾಟಕದಲ್ಲಿಯು ಇಲ್ಲವೆ ಮಹಾರಾಷ್ಟ್ರದಲ್ಲಿಯು ಯಾವ ವೃತ್ತಪತ್ರಗಳು ರಾ| ಜೋಗರವರಿಗೆ ಅನುಕೂಲವಿರುವವು? ಇದನ್ನು ಅವರು ಹೇಳಬಹುದೋ?

(೧೨) ಇವರು ಸನಾತನಿ ಅಂದುಕೊಂಡು ಸನಾತನಿ ಜನರ ಮತಗಳನ್ನು ಕೇಳುತ್ತಿರುವರು. ಇವರು ಯಾವ ವ್ಯಾಖ್ಯೆಯ ಪ್ರಕಾರ ಸನಾತನಿ ಇರುವರು? ಇವರು ಡಿಪ್ರೆಸ್ಡ ಕ್ಲಾಸ ಮಿಶನ್ನಿನ ಅಧ್ಯಕ್ಷರಿರಲಿಲ್ಲವೋ? ಇವರು ಗವ್ಹರ್ನರರ ಔತಣ ಸಮಾರಂಭಕ್ಕೆ ಹೋಗಿ ಅಲ್ಲಿ ಮಿಷ್ಟಾನ್ನಭೋಜನ ಮಾಡಿರುವರೋ ಇಲ್ಲವೋ? ತಾವು ಎಂಥ ಸನಾತನಿಗಳೋ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದೋ?

(೧೩) ಸನಾತನಿ ಜನರು ಕಾಂಗ್ರೆಸ್ಸಿನ ಉಮೇದವಾರನಿಗೆ ಯಾಕೆ ಮತ ಕೊಡಬಾರದು? ಇದನ್ನು ರಾ| ಜೋಗರವರು ಹೇಳುವರೇನು?

(೧೪) ರಾ| ಜೋಗರವರು ಪ್ರಜೆಯ ಡೆಮೊಕ್ರೆಟಿಕ್ ಸ್ವರಾಜ್ಯ ಪಾರ್ಟಿಯನ್ನು ಎಂದಿನಿಂದ ಕೂಡಿದರು? ಮಾಲವೀಯರ ಪಕ್ಷಕ್ಕೆ ಎಂದಿನಿಂದ ಸೇರಿದರು? ತಮ್ಮ ಮನಸ್ಸಿನಲ್ಲಿ ಎಸೆಂಬ್ಲಿಗೆ ನಿಲ್ಲಬೇಕು ಎಂದು ಬಂದೊಡನೆ ಒಮ್ಮೆಲೇ ಕಾಂಗ್ರೆಸ ಮೆಂಬರರು, ಡೆಮೊಕ್ರೆಟಿಕ್ ಸ್ವರಾಜ್ಯ ಪಾರ್ಟಿ ಮೆಂಬರರು ಮತ್ತು ಮಾಲವೀಯಪಕ್ಷದ ಸನಾತನಿಗಳು ಆದರೋ?

(೧೫) ಇವರು ಈಗ ಮೂರು-ನಾಲ್ಕು ವರ್ಷಗಳಲ್ಲಿ ಡಿ| ಬ| ಕಂಬಳಿಯವರ ಪಕ್ಷಕ್ಕೆ ಯಾವ ಬಗೆಯ ಬೆಂಬಲವನ್ನು ಕೊಟ್ಟಿಲ್ಲವೋ?

ಈ ಪ್ರಶ್ನೆಗಳಿಗೆ ಯೋಗ್ಯ-ಸಮರ್ಪಕ ಉತ್ತರಗಳನ್ನು ರಾ| ಜೋಗರಾಯರು ಕೊಟ್ಟು ಅವರ ವಿಷಯ ಜನಗಳಲ್ಲಿ ಉಂಟಾದ ಗ್ರಹಿಕೆಯನ್ನು ಹೋಗಲಾಡಿಸುವರೆಂದು ನಂಬಿಗೆ

ತಾ ೨೧-೧೦-೧೯೩೪. **ಮತದಾರರು.**

— ಗದಿನಾಡಿನ ಒಂದು ಕೋರ್ಟಿನಲ್ಲಿ ಒಂದು ಚಮತ್ಕಾರ! ಒಬ್ಬರ ಮೇಲಾದ ದಾವೆಯಲ್ಲಿ ಆಪಾದಿತನು ೧೭೦೦ ರೂ ಗಳ ಒಂದು ಪ್ರೊಮಿಸರಿ ನೋಟು ಕೋರ್ಟಿನಲ್ಲಿ ಹಾಜರಾಗಿರಲು ಪ್ರತಿವಾದಿಯು ಸಂಧಿ ಸಾಧಿಸಿ ಅದನ್ನು ಬಾಯೊಳಗೆ ಹಾಕಿ ನುಂಗಿಬಿಟ್ಟನು. ಅದಕ್ಕಾಗಿ ಆತನ ಮೇಲೆ ಕೋರ್ಟ ಅಪಮಾನದ ಖಟ್ಲೆ ನಡೆದು ರೂ ೧೦೦ ದಂಡವಾಗಿದೆ. ಮೇಲೆ ಪತ್ರಿಕೆಯನ್ನು ನಷ್ಟಪಡಿಸಿದ ಬಗ್ಗೆ ಆತನ ಮೇಲೆ ಸಿನಲ್ ಕೋಡಿನಂತೆ ಖಟ್ಲೆ ನಡೆಯುವದಿದೆ.

— ಕೋಚೀನದಲ್ಲಿ ವಿಲಿಂಗಡನ್ ದಂಡೆಯ ಸಮೀಪ ದೊಡ್ಡ ಬಿರುಗಾಳಿ ಬೀಸಿ ಒಂದು ದೋಣಿ ಮುಳುಗಿತು. ಭಯಂಕರ ಮಳೆ ಸುರಿಯಿತು. ಮುಳುಗಿದ ದೋಣಿಯಲ್ಲಿದ್ದ ಜನರಿಗೆ ಗಾಂಧಿ-ದೋಣಿಯು ಬದುಕಿಸಿತಾಗಿ 'ಯುನೈಟೆಡ್ ಪ್ರೆಸ್' ವಾರ್ತಾಪಾಪಕ ಸಂಸ್ಥೆಯ ಕೋಚೀನದೊಳಗಿನ ಸುದ್ದಿಗಾರರ ವಾರ್ತೆ. ವಿಲಿಂಗಡನ್ ಸೀಮೆಯೊಳಗಿನ ಬಿರುಗಾಳಿಯೊಳಗಿಂದ ಪಾರಗಾಣಬೇಕಾದರೆ ಗಾಂಧಿ-ದೋಣಿಯೊಳಗೇ ಕೂತುಕೊಳ್ಳಬೇಕು. ದಂಡೆಗೆ ಸರ್ವಾಧಿಪತಿ ವಿಲಿಂಗಡನ್‌ರವರ ಹೆಸರು ಕೊಡಲ್ಪಟ್ಟಿದೆ. ದೇವರು ಈ ಚಮತ್ಕಾರದಿಂದ ಮಹಾತ್ಮರನ್ನು ಅಪ್ರಿಯಿಸಲು ದೇಶಬಾಂಧವರಿಗೆ ಬೋಧಿಸಿರಬಹುದೇ?

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ 'ಇಂಡಸ್ಟ್ರಿಯಲ್ ವಿಮೆ 'ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಕಾನಡಾವೃತ್ತ.

ಮಿತಿ ಭಾವ ಸಂ। ಆಶ್ವೀನ ಶು। ೧೫ನೆ, ಸೋಮವಾರ

ರಾಷ್ಟ್ರ ಸಂಘಟಣೆ.

ನಾಳೆ ಮಂಗಳವಾರ ನಾಳಿನಿಂದಲೇ ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕಲಾಪಗಳಿಗೆ ಪ್ರಾರಂಭ. ರಾಷ್ಟ್ರೀಯರಲ್ಲಿ ಉಂಟಾದ ಜಾಡ್ಯವನ್ನು ಹೋಗಲಾಡಿಸಿ ರಾಷ್ಟ್ರವನ್ನು ಪುನರ್ಘಟಿಸುವದಕ್ಕಾಗಿ ಮಹಾತ್ಮರು ಹೆಣಗಾಡುತ್ತಿದ್ದಾರೆ. ರಾಷ್ಟ್ರೀಯ ಕಾರ್ಯಕರ್ತರಲ್ಲಿ ಅವಶ್ಯವುಳ್ಳ ಕಾರ್ಯದಕ್ಷತೆ ಇನ್ನೂ ಬಂದಿರಿಕೊಂಡಿಲ್ಲವಾಗಿ ಮಹಾತ್ಮರ ಅಂಬೋಣ. ಅದಕ್ಕಾಗಿ ಮಹಾತ್ಮರು ರಾಷ್ಟ್ರೀಯ ಸಭೆಯ ಘಟನೆಯಲ್ಲಿ ತಿದ್ದುಪಾಟಗಳನ್ನು ಸೂಚಿಸುವ ಸವಿಸ್ತರ ಪ್ರಕಟಣೆಯನ್ನು ಮಾಡಿಸಿದ್ದಾರೆ. ಅಪೇಕ್ಷೆಯಂತೆ ತಿದ್ದುಪಡಿಗಳಾಗದಿದ್ದಲ್ಲಿ ರಾಷ್ಟ್ರೀಯ ಸಭೆಯೊಳಗಿಂದ ತಾವು ಅಲಿಪ್ತವಾಗುತ್ತೇವಾಗಿಯೂ ಮಹಾತ್ಮರು ತಿಳಿಸಿದ್ದಾರೆ. ಮಹಾತ್ಮರ ಸೂಚನಗಳು ಈಗಿನ ರಾಷ್ಟ್ರೀಯ ಸಭೆಯ ಘಟನೆಯಲ್ಲಿ ವಿಶೇಷ ಕ್ರಾಂತಿಕಾರಕ ಸ್ವರೂಪದ್ದಿವೆ. ಅವನ್ನು ನಾವು ಸವಿಸ್ತರ ಪ್ರಕಟಿಸುತ್ತಿದ್ದೇವೆ, ಆದರೆ, ಅವುಗಳ ಮೇಲೆ ವಿಚಾರ ಪ್ರಕಟಿಸಲಿಕ್ಕೆ ತಕ್ಕಷ್ಟು ಅವಧಿ ಇಲ್ಲದ್ದರಿಂದಲೂ, ನಾಳಿನಿಂದ ವಿಷಯ ನಿರ್ಧಾರಕ ಸಭೆಯಲ್ಲಿ ಅವುಗಳ ಕೂಲಂಕುಷ ಚರ್ಚೆಯಾಗಿ ನಿರ್ಧಾರಗಳಾಗುವದಿದ್ದದರಿಂದಲೂ ಅವುಗಳನ್ನು ಸವಿಸ್ತರ ಪ್ರಕಟಿಸಿ ಪ್ರಯೋಜನವಿಲ್ಲ. ನಾಳೆ ವಿಷಯನಿರ್ಧಾರಕ ಸಭೆಯಲ್ಲಿ ಸ್ವತಃ ಮಹಾತ್ಮರೇ ಅವನ್ನು ಪ್ರಸ್ತಾಪಿಸಿ, ಲೋಕಪ್ರತಿನಿಧಿಗಳ ಅಭಿಪ್ರಾಯ ಗ್ರಹಿಸಿ ಮಾರ್ಪಾಟಗಳನ್ನು ಕೈಕೊಳ್ಳುವವರಿದ್ದಾರೆ. ಇಂಥ ಸಮಯ ಅವುಗಳ ಕುರಿತು ಸಮಾಲೋಚಿಸಬಹುದಾದ ನಾಲ್ಕು ಮಾತು ಬರೆದು ರಾಷ್ಟ್ರೀಯ ಸಭೆಗೆ ಪೂರ್ಣ ಸ್ವರಾಜ್ಯ ಸಂಪಾದಿಸಲು ಅವಶ್ಯವುಳ್ಳ ಸಂಘಟನಾ ಬುದ್ಧಿಯನ್ನು ದಯಪಾಲಿಸಬೇಕಾಗಿ ಪರಮಾತ್ಮನಲ್ಲಿ ನಾವು ಪ್ರಾರ್ಥಿಸಿಕೊಳ್ಳುವೆವು.

ಮಹಾತ್ಮರು ರಾಷ್ಟ್ರೀಯ ಸಭೆಯ ಪ್ರದರ್ಶನ-ಸಂಭ್ರಮ-ಪರಿವಾರಗಳನ್ನು ಆವಶ್ಯಕರ ಮಟ್ಟಿಗೆ ಕುಗ್ಗಿಸಿ ಕಾರ್ಯಕ್ಷಮತೆಯನ್ನು ಬೆಳಸಿಕೊಳ್ಳಲು ಹಾತೊರೆಯುತ್ತಿದ್ದಾರೆ. ಸಭಾಸದರು ಒಂದೆರಡು ಆಣೆ ಪಟ್ಟಿ ಕೊಟ್ಟು ಪಟದ ಮೇಲೆ ತಮ್ಮ ಹೆಸರು ದಾಖಲಪಡಿಸಿಕೊಂಡು ದೇಶಭಕ್ತರಾಗಿ ಮೆರೆಯುವದು ಮಹಾತ್ಮರಿಗೆ ಸಮ್ಮತವಿಲ್ಲ. ರಾಷ್ಟ್ರೀಯ ಸಭೆಯ ಸಭಾಸದರು ಒಂದು ತರದ ಸ್ಥಿರತೆಯಿಂದ ರಾಷ್ಟ್ರೀಯ ಸಭೆಯಲ್ಲಿ ಸೇರಬೇಕು, ಅವರಲ್ಲಿ ರಾಷ್ಟ್ರಪ್ರವೃತ್ತಿಯಿರಬೇಕು, ಅದಕ್ಕಾಗಿಯೇ ಮಹಾತ್ಮರು ಪ್ರತಿಯೊಬ್ಬ ಸಭಾಸದರು ತಮ್ಮ ಸಹಿಯನ್ನು ದೇವನಾಗರಿ ಲಿಪಿಯಲ್ಲಾಗಲಿ, ಉರ್ದು ಲಿಪಿಯಲ್ಲಾಗಲಿ ಸಭಾಸದ ಪತ್ರಿಕೆಯ ಮೇಲೆ ಬರೆಯಬೇಕೆಂಬ ಶರ್ತು ಹಾಕಿದ್ದಾರೆ. ಇದೇನು ದೊಡ್ಡ ಕಷ್ಟವಲ್ಲ. ಮಹಾತ್ಮರು ದಕ್ಷಿಣ ಪಕ್ಷದವರ ಕಷ್ಟದ ಬಗ್ಗೆ ಯಿಯುವರಿಗೆ ಇಷ್ಟರಲ್ಲಿ ಸಹಿಗೆ ತಕ್ಕಷ್ಟು ದೇವನಾಗರಿ ಅಕ್ಷರಗಳನ್ನು ಕಲಿಸುವದಾಗಿ ಬರೆಯುತ್ತಾರೆ. ಇಷ್ಟು ಪರಿಶ್ರಮ ಕೂಡ ರಾಷ್ಟ್ರೀಯ ಸಭೆಯ ಸಭಾಸದರು ತಯಾರಿರಾದಿದ್ದರೆ ಇವರಿಂದ ರಾಷ್ಟ್ರ ಕೆಲಸವೇನಾದೀತು? ಎಂಬದಾಗಿ ಮಹಾತ್ಮರು ಪ್ರಶ್ನಿಸುತ್ತಾರೆ. ಲಿಪಿಯಲ್ಲೇಕೆ ಸಹಿ? ಎಂಬದಾಗಿ ಕೆಲವರು ವಾದಿಸುವ ಸಂಭವ. ಮಹಾತ್ಮರ ಪಕ್ಷ ಏನೆಂದು ಕೇಳಿದರೆ, ಅವರ ಉತ್ತರ ಸ್ಪಷ್ಟವಿದೆ: ಜಪಾನಿಯರು ಜಪಾನಿ ಭಾಷೆಯಲ್ಲಿಯೇ ವ್ಯವಹಾರ ನಡೆಸಬೇಕೆಂದೇ ಜಪಾನದ ಪ್ರಧಾನರು ಸಾರ್ವತ್ರಿಕವಾಗಿ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಸ್ವದೇಶಾಭಿಮಾನ ಹುಟ್ಟಬೇಕಾದರೆ ಸ್ವಭಾಷೆಯ ಅಭಿಮಾನವಿರಬೇಕು. ಆದರೆ ಇವರು ದೇಶಾಭಿಮಾನಿಗಳೆಂದು ತಿಳಿಯಲಿಕ್ಕೂ ಮಹಾತ್ಮರು ರಾಷ್ಟ್ರಪ್ರವೃತ್ತಿಯ ಲಕ್ಷಣವೆಂದು ರಾಷ್ಟ್ರೀಯ ಸಭೆಯ ಸಭಾಸದರಿಗೆಲ್ಲ ದೇವನಾಗರಿ ಎಂಬುವ ಉತ್ತರ ಲಿಪಿಯ ಶರ್ತು ಹಾಕಿದ್ದಾರೆ.

ಮಹಾತ್ಮರ ಇನ್ನೊಂದು ಶರ್ತು ಶರೀರಶ್ರಮ. ಮಾನಸಿಕ ಶ್ರಮ ಶರೀರಕ್ಕೂ ಬೇಕು. ಸರ್ವದಾ ಕರ್ಮಪ್ರವಣರಾಗಿ ಪ್ರಯೋಗ ಇರಲಿ, ಆ ಕರಿತು ಟೀಕೆ ಮಾಡುವದರಿಂದ ಪ್ರಯೋಜನ ಏನು? ತಾವು ಸ್ವಾವಲಂಬನ ದಾರಿಯಿಂದ ರಾಷ್ಟ್ರಘಟನಾವಿಂದ ದೇಶವಾಸಿಗಳು ಉದ್ಧರಿಸಲ್ಪಡಬೇಕಾಗಿದೆ. ಈಗ ಪ್ರಯೋಜನವೇನಿದೆ? ನಾವು ಸ್ವಾವಲಂಬಿಗಳಾಗಬೇಕು. ಸ್ವಾವಲಂಬನವೇ ಪೂರ್ಣ ಸ್ವರಾಜ್ಯಂಗ್ರಹದ ಸುಲಭವಾದ ಸಾಧನ. ನಮ್ಮ ಪಾಶ್ಚಾತ್ಯ ಕೈಗಾರಿಕೆ ನಮ್ಮನ್ನಾಯಿತೆಂದು ಗೋಳು ಗುಟ್ಟುತ್ತಿರುವದಕ್ಕಿಂತ ಅವುಗಳನ್ನು ದ್ಧರಿಸಲು ಪ್ರಯತ್ನಪಡುವದು ವೀರರ ಲಕ್ಷಣ. ರಾಷ್ಟ್ರೋದ್ಧಾರಕರ ಕರ್ತವ್ಯ. ರಾಷ್ಟ್ರಸ್ವಾತಂತ್ರ್ಯಕ್ಕಾಗಿ ಹೋರಾಡುವ ರಾಷ್ಟ್ರೀಯರು ಪಡೆಯಬೇಕಾದ ಗುಣ ಸ್ವಾವಲಂಬನ ಬೇಕಾದುದೂ ಇದು! ಇದಕ್ಕಾಗಿ ಮಹಾತ್ಮರು ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘವನ್ನು ಏರ್ಪಡಿಸುವ ಸಂಕಲ್ಪ ಮಾಡಿದ್ದಾರೆ. ನಮ್ಮ ಸಲಹೆ ಕೊಂಡು ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಶ್ರೀ ಜೆ. ಸಿ. ಕುಮಾರಪ್ಪನವರು ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘದ ಘಟನೆಯನ್ನು ತಯಾರಿಸತಕ್ಕವರಾಗಿ ಮಹಾತ್ಮರ ಯೋಜನ. ಈ ಸಂಘದವರು ಗ್ರಾಮಗಳಲ್ಲಿದ್ದ ಪುರಾತನ ಕೈಗಾರಿಕೆಗಳನ್ನು ಪುನರುದ್ಧರಿಸಲು ಅವಶ್ಯವುಳ್ಳ ವಿಧಾನಗಳನ್ನು ಕೈಕೊಳ್ಳುವರು. ಗ್ರಾಮಗಳ ಪರಿಸ್ಥಿತಿಯನ್ನು ಪರಾಂಬರಿಸಿ ಪರಿಸ್ಥಿತಿಗೆ ತಕ್ಕದ್ದಾದ ಹೊಸ ಉದ್ದಿಮೆಗಳನ್ನು ಹೊರಡಿಸಲು ಜನರ ಮನವೊಲಿಸಿ ಸಂಘವು ಗ್ರಾಮದ ಸಂಪದಭ್ಯುದಯ ಮಾಡಲು ಉಪಾಯಯೋಜನೆ ಮಾಡುವದು. ಈ ಸಂಘದ ಏರ್ಪಾಟಿನಿಂದ ಗ್ರಾಮಗಳಲ್ಲಿ ಸ್ವದೇಶಿ ಕೈಗಾರಿಕೆಗಳ ಅಭಿಮಾನ ಹುಟ್ಟಿ, ಆವಶ್ಯಕರ ಮಟ್ಟಿಗೆ ಗ್ರಾಮಗಳು ಪರದೇಶದ ಸರಕುಗಳನ್ನು ಕೊಂಡು ಕೊಳ್ಳದೆ ಪುರಾತನ ಗ್ರಾಮಗಳಂತೆ ಸ್ವಯಂಪೂರ್ಣ ಗ್ರಾಮಗಳಾಗಿ ಪರಿಣಮಿಸಬೇಕೆಂಬದೇ ಮಹಾತ್ಮರ ಹಂಬಲ. ಗ್ರಾಮ ಕೈಗಾರಿಕೆಗಳು ನಷ್ಟ ಹೊಂದಿ ಗ್ರಾಮದವರು ಪರದೇಶಿ ಸರಕುಗಳ ಸೊಬಗಿಗೆ ಮನಸೋತು ಹೋದದ್ದರಿಂದ ಹಿಂದುಸ್ಥಾನವು ದಾರಿದ್ರ್ಯ ಪಂಕದಲ್ಲಿ, ಪಾರತಂತ್ರ್ಯಾಂಬರದಲ್ಲಿ ಸಿಲುಕಿ ಹೋರಾಡುತ್ತಿದೆ. ಅದನ್ನು ಬಗೆಹರಿಸಿಕೊಳ್ಳಬೇಕಾದರೆ ನಾವು ಸ್ವತಃ ಸ್ವಾವಲಂಬಿಗಳಾಗಬೇಕು. ನೆಂಟೂರಿಯವರಿಗೆ ಸ್ವಾವಲಂಬನದ ಉಪಾಯಗಳನ್ನು ಕಲ್ಪಿಸಿಕೊಡಬೇಕು. ಗ್ರಾಮಗಳೇ ನಮ್ಮ ಭಾರತವರ್ಷದ ಮೂಲಾಧಾರವಾದುದರಿಂದ ಅವುಗಳನ್ನು ಸ್ವಯಂಪೂರ್ಣವಾಗಿ ಪರಿಣಮಿಸಿದರೆ ನಮ್ಮ ಭಾಗ್ಯೋದಯವನ್ನು ಸಾಧಿಸಿದಂತಾಗುತ್ತದೆ.

ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ಅಧಿಕಾರತ್ಯಾಗ ಮಾಡಿ ತೋರಗಾಣಿಕೆಗೆ ಅಲಿಪ್ತರಾಗಬಹುದು. ತಾವು ಅಲಿಪ್ತರಾಗುವದು ಖಂಡಿತವಾದುದೆಂದು ಮೊನ್ನೆ ಮುಂಬಯಿಯಲ್ಲಿ 'ಎಸೋಸಿಯೇಟೆಡ್ ಪ್ರೆಸ್' ಪ್ರತಿನಿಧಿಗಳ ಬಳಿ ನುಡಿದರಾಗಿ ಪ್ರಕಟವಾಗಿದೆ. ಮಹಾತ್ಮರು ರಾಷ್ಟ್ರೀಯ ಸಭೆಯೊಳಗೆ ಕೆಲಸವಿರಲಿ, ಸೇರದಿರಲಿ, ಅವರು ಯಾವಾಗಲೂ ರಾಷ್ಟ್ರೀಯ ಸಭೆಯ ಕರೆಯನ್ನು ಮನ್ನಿಸಿ ರಾಷ್ಟ್ರಕಾರ್ಯ ನೆರವೇರಿಸಲು ಸಿದ್ಧರಿರುವರಾಗಿ ತಮ್ಮ ಪ್ರಕಟಣೆಯಲ್ಲಿ ಪ್ರಕಟಿಸಿದ್ದಾರೆ. ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘದ ಮಾರ್ಗದರ್ಶಕರೆಂತು ಅವರು ಇದ್ದೇ ಇರುವರು. ಆ ಸಂಘದ ವಿದ್ಯಮಾನ ರಾಷ್ಟ್ರೀಯ ಸಭೆಯ ಕಾರ್ಯವನ್ನು ಮಹಾತ್ಮರು ನೆರವೇರಿಸುವರು. ಮಹಾತ್ಮರಿಗೆ ಮುಖ್ಯವಾಗಿ ಬೇಕಾದುದು ರಾಷ್ಟ್ರೀಯ ಸಭೆಯವರ ರಾಷ್ಟ್ರಕಾರ್ಯದ ಆಸಕ್ತಿ; ರಾಷ್ಟ್ರಕಾರ್ಯ ಮಾಡುವ ಪ್ರವೃತ್ತಿ. ಅಲ್ಲಲ್ಲಿಯ ಪರಿಸ್ಥಿತಿಯನ್ನು ಗ್ರಹಿಸಿ ಕಾಲಮಾನಕ್ಕೆ ಉಚಿತವಾದ ಕೈಗಾರಿಕೆಗಳನ್ನೇರ್ಪಡಿಸಿ ಸ್ವಾವಲಂಬನದಿಂದ ಗ್ರಾಮದವರು ಗ್ರಾಮ ಸ್ವಾತಂತ್ರ್ಯವನ್ನು ಸಾಧಿಸುವರು. ರಾಷ್ಟ್ರೀಯ ಸಭೆಯ ಘಟನೆಯಲ್ಲಿ ಈ ಕಾರ್ಯಕ್ಕೆ ಪೋಷಕವಾಗುವಂತೆ ಮಹಾತ್ಮರು ತಿದ್ದುಪಾಟಗಳನ್ನು ಸೂಚಿಸಿದ್ದಾರೆ.

ನಾಳಿನಿಂದ ಯಾವತ್ತೂ ಸೂಚನೆಗಳ ಚರ್ಚೆಯಾಗಲಿಕ್ಕಿದೆ. ಮಹಾತ್ಮರು ಬಹುಮತಕ್ಕಾಗಿ ಹಂಬಲಿಸುವದಿಲ್ಲ, ಬೇಕಾದಷ್ಟು ಮತಾಧಿಕ್ಯವನ್ನು ಸಂಕಲ್ಪ ಮಾತ್ರದಿಂದ ಮಹಾತ್ಮರು ಸಂಪಾದಿಸಬಲ್ಲರು. ಮಹಾತ್ಮರಿಗೆ ಬೇಕಾದದ್ದು ನಿಸ್ಪಕ್ಷಪಾತದ ಅಂತಃಕರಣ ಮತ ಕೊಡುವವರು ಅಂತಃಕರಣಪೂರ್ವಕವಾಗಿ ಮನೋನಿಶ್ಚಯದಿಂದ, ದೃಢವಾದ ಸಂಕಲ್ಪದಿಂದ ಕೈಯನ್ನೆತ್ತಬೇಕೆಂದು ಮಹಾತ್ಮರು ತೀರ ನಮ್ರವಾಗಿ ರಾಷ್ಟ್ರೀಯ ಸಭೆಯವರ ಕಡೆ ವಿನ್ನೈಸಿಕೊಂಡಿದ್ದಾರೆ. "ನನ್ನ ದಾಕ್ಷಿಣ್ಯವನ್ನು ಬಿಟ್ಟುಬಿಡಿ, ಎಂದಿಗೂ ಹಿಡಿಯಬೇಡಿ, ನನ್ನ ಸೂಚನೆಗಳನ್ನು ಆಳವಾಗಿ ಕೂಲಂಕುಷವಾಗಿ ವಿಚಾರಿಸಿರಿ, ಮತ್ತು ಆ ಒಳಕೆ ನಿಮ್ಮ ಮತ ಕೊಡಿರಿ. ಮತ ಕೊಡುವ ಜವಾಬದಾರಿಯನ್ನು ಗ್ರಹಿಸಿ ಮತ ಕೊಡಬೇಕು" ಹೀಗ ಮಹಾತ್ಮರು ರಾಷ್ಟ್ರೀಯ ಸಭೆಯವರಿಗೆಲ್ಲ ಎಚ್ಚರಿಕೆಯನ್ನಿತ್ತಿದ್ದಾರೆ. ರಾಷ್ಟ್ರವು ಸಂಕಟದಲ್ಲಿ ಸಿಲುಕಿಕೊಂಡಿದೆ, ಪ್ರಜೆಗಳು ದೀನರಾಗಿರುತ್ತಾರೆ, ಹೊಟ್ಟೆಯ ಗೋಳು ತಾಳಲಾರದೆ ಸಂಕಷ್ಟದಲ್ಲಿದ್ದಾರೆ, ಉದ್ಯೋಗವಿಲ್ಲದೆ ಹೆಣಗಾಡುತ್ತಿದ್ದಾರೆ, ದಾರಿ ಕಾಣದೆ ದಿಗಿಲುಬಿದ್ದಿರುತ್ತಾರೆ, ಉದ್ಧಾರ ಮಾರ್ಗವನ್ನು ಪರಿಶೋಧಿಸುತ್ತಿದ್ದಾರೆ, ಇಂಥ ಸಮಯ ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯು ಜರುಗಲಾರಂಭಿಸಿದೆ. ತಿ ವರ್ಷಗಳ ತರುವಾಯ ಜರಗುವ ಅಧಿವೇಶನವಿದು! ಮಹಾತ್ಮರಾದಿ ರಾಷ್ಟ್ರಕಾರ್ಯನಿರ್ವಾಹಕರೆಲ್ಲರೂ ಸತ್ಯಾಗ್ರಹ ಸಂಗ್ರಾಮದ ಪರಿಸ್ಥಿತಿಯನ್ನೂ, ಆ ಒಳಕೆ ಉಂಟಾದ ಅವಸ್ಥಾಂತರವನ್ನೂ ಲಕ್ಷಿಸಿ ರಾಷ್ಟ್ರೀಯ ಸಭೆಯಿಂದ ರಾಷ್ಟ್ರೋದ್ಧಾರವಾಗುವಂತೆ ಕಾರ್ಯಕ್ರ

ಮು ಕೈಕೊಳ್ಳಲು ಮುಂಬಯಿಯಲ್ಲಿ ಆಲೋಚನೆ ನಡೆಸತೊಡಗಿದ್ದಾರೆ. ಈ ಸಮಯ ಹಿಂದುಸ್ಥಾನದ ನವಯುವಕರ ಪ್ರತಿನಿಧಿಯಾದ ಪಂಡಿತ ಜವಾಹಿರಲಾಲರು ಕಾರಾಗೃಹವಾಸದಲ್ಲಿರುವದು ಹಿಂದವಾಸಿಯರ ದುರ್ದೈವ ಅಲ್ಲವೆ, ಇದು ದುರ್ದೈವವೇ? ಪಂಡಿತ ಜವಾಹಿರಲಾಲರಂಥ ಪರಾಕ್ರಮಿ ಪುರುಷರ ಬಂದಿವಾಸದಿಂದ ಮುಂಬಯಿಯೊಳಗಿನ ರಾಷ್ಟ್ರೀಯ ಸಭೆಯಲ್ಲಿ ಒಂದು ಪ್ರಕಾರದ ನಿರ್ಧಾರವು ನೆಲೆಗೊಂಡು ರಾಷ್ಟ್ರೋದ್ಧಾರದ ಪ್ರಯತ್ನವು ಕಾರ್ಯಕ್ಷಮವಾಗುವಂತೆ ಮಾಡಿಸಲು ವಿಷಯನಿರ್ಧಾರಕ ಪ್ರತಿನಿಧಿಗಳಿಗೆಲ್ಲ ಒಂದು ಪ್ರಕಾರದ ಉತ್ಸಾಹವಾಗುವದು. ಪಂಡಿತ ಜವಾಹಿರಲಾಲರು ಕೈದುವಾಸೆಯಿಂದ ಪೂರ್ಣ ಸ್ವರಾಜ್ಯವನ್ನು ಕೈವಶ ಮಾಡಿಕೊಳ್ಳಲು ತ್ವರೆಪಡಿಸಬೇಕಾಗಿ ಕೇವಲ ಮನಶ್ಶಕ್ತಿಯಿಂದಲೇ ಆಜ್ಞೆ ಹೊರಡಿಸುವರು. ಅಂಥ ಪ್ರೇರಣೆಯಿಂದಲೇ ಮಹಾತ್ಮರೂ, ಇತರರೂ ರಾಷ್ಟ್ರೀಯ ಸಭೆಯನ್ನು ಪುನರ್ಘಟಿಸಲು ಸಂಕಲ್ಪ ಮಾಡಿರಬಹುದೆಂದು ನಾವು ತಿಳಿಯಬಹುದೇ?

ಎಡ್ರಿಯಾಟಿಕ್ ಸಮುದ್ರದ ಪಾರುಪತ್ಯ!

[ನಿರೀಕ್ಷಕನು ಬರೆದುದು]

ಯುಗೋಸ್ಲಾವಿಯಾದ ಅರಸರಾದ ಅಲೆಕ್ಝಾಂಡರರ ನಿಧನದಿಂದ ಪುನಃ ರಣದೇವತೆಯು ಯುರೋಪಖಂಡದಲ್ಲಿ ಆವಿರ್ಭೂತಳಾಗಬಹುದೆಂಬ ಅಂಜಿಕೆಯುಂಟಾಗಿದೆ. ಅಲೆಕ್ಝಾಂಡರ ಅರಸರಿಗೆ ಕೊಲ್ಲುವ ಗುಪ್ತ ಕಾರಸ್ಥಾನ ಜರ್ಮನಿಯಲ್ಲಿ ಒಂದು ದಿನ ಮುಂಚಿತವಾಗಿ ತಿಳಿದಿತ್ತೆಂದೂ, ಹಾರಿಸಿದ ಗುಂಡುಗಳು ಜರ್ಮನಿಯಲ್ಲಿ ತಯಾರಾದವುಗಳೆಂದೂ ಪ್ರೆಓವಾಗಿದ ಇತಾಲಿಯು ಅಂಗವಿರಬೇಕೆಂದೂ ಕೆಲವು ವರ್ತಮಾನಪತ್ರಿಕೆಗಳು ಅಭಿಪ್ರಾಯಪಡುತ್ತವೆ. ಅಲೆಕ್ಝಾಂಡರರವರಿಗೂ, ಇತಾಲಿಯ ಮುಸೋಲಿನಿಯವರಿಗೂ, ಜರ್ಮನಿಯ ಹಿಟ್ಲರರಿಗೂ ಆಗಿಂದಾಗ್ಗೆ ದ್ವೇಷವಿದ್ದಿತ್ತೆಂಬ ಮಾತು ಲೋಕವಿಸ್ತೃತವಾದದ್ದು. ಯುಗೋಸ್ಲಾವಿಯಾ ದೇಶದ ಪೂರ್ವಪಾರ್ಶ್ವದ ಡಾಲ್ಮೇಶಿಯಾ ಮತ್ತು ಅಲ್ಬೇನಿಯಾ ಪ್ರದೇಶಗಳನ್ನು ಕೈವಶ ಮಾಡಿಕೊಳ್ಳಲು ಮುಸೋಲಿನಿಯವರು ಹೊಂಚುಹಾಕಿದ್ದಾರೆ. ೧೯೧೫ ನೇ ಇಸ್ವಿಯಲ್ಲಿ ಬ್ರಿಟಿಶ-ಫ್ರೆಂಚಾದಿ ಮಿತ್ರರಾಷ್ಟ್ರಗಳ ಪರವಾಗಿ ಹೋರಾಡಬೇಕಾದರೆ, ಒಪ್ಪಂದ ಕಾಲದಲ್ಲಿ ಡಾಲ್ಮೇಶಿಯಾ ಪ್ರದೇಶವನ್ನು ಪಡೆಯುವ ಶರ್ತದ ಮೇಲೆಯೇ ಇತಾಲಿಯು ಮಹಾಯುದ್ಧದಲ್ಲಿ ಕಾದಾಡಿತೆಂದು ಈಗ ಗೌಪ್ಯಸ್ಫೋಟವಾಗಿದೆ. ಅಸ್ವಾಸ್ಥ್ಯಕಾಲದಲ್ಲಿ ಹಾಕಿಕೊಂಡ ಹರಕೆಗಳನ್ನು ಈಗ ತೀರಿಸಬೇಕಾಗಿ ಇತಾಲಿಯ ನಿಗ್ರಹ! ಡಾಲ್ಮೇಶಿಯಾ-ಆಲ್ಬೇನಿಯಾ ಪ್ರದೇಶಗಳು ಇತಾಲಿಗೆ ಅಧೀನವಾಗಿಲ್ಲದನಕ ಅಡ್ರಿಯಾಟಿಕ್ ಸಮುದ್ರದಲ್ಲಿ ನೌಕಾಬಲವನ್ನಿಟ್ಟು ಸ್ವದೇಶವನ್ನು ಪರಚಕ್ರದಿಂದ ರಕ್ಷಿಸಿಕೊಳ್ಳಲು ಮುಸೋಲಿನಿಯವರಿಗೆ ಸಾಧ್ಯವಿಲ್ಲ. ಆಡ್ರಿಯಾಟಿಕ ಸಮುದ್ರವು ಇತಾಲಿಯ ಪಾರ್ಶ್ವದಲ್ಲಿ ಹಡಗುಪಡೆಗಳು ನಿಲ್ಲುವದಕ್ಕೆ ತಕ್ಕಷ್ಟು ಆಳವಾಗಿರುವದಿಲ್ಲ. ಆದದರಿಂದ ಡಾಲ್ಮೇಶಿಯಾ-ಅಲ್ಬೇನಿಯಾ ಪ್ರದೇಶಗಳನ್ನು ಭಕ್ಷಿಸಿದನಕ ಇತಾಲಿಗೆ ಸಮಾಧಾನವಿಲ್ಲ. ಈ ಪ್ರದೇಶಗಳು ಇತಾಲಿಯ ಕೈವಶವಾದರೆ, ಆ ಪಾರ್ಶ್ವದಲ್ಲಿರುವ ಗ್ರೀಸ, ರುಮಾನಿಯಾ, ಯುಗೋಸ್ಲಾವಿಯಾ ಮೊದಲಾದ ಚಿಕ್ಕ ಚಿಕ್ಕ ರಾಷ್ಟ್ರಗಳು ತಲೆಯೆತ್ತಲಾರವು. ಅವು ಇತಾಲಿಗೆ ಬಗ್ಗಿಕೊಂಡೇ ಇರಬೇಕು. ಇದರಿಂದ ಯುಗೋಸ್ಲಾವಿಯಾದ ಅರಸರಾದ ಅಲೆಕ್ಝಾಂಡರರವರು ಮುಸೋಲಿನಿಯವರ ಕಡು ವಿರೋಧಿಗಳಾಗಿದ್ದರು. ಯುಗೋಸ್ಲಾವಿಯಾದೊಳಗಿನ ವರ್ತಮಾನಪತ್ರಗಳಲ್ಲಿ ಮುಸೋಲಿನಿಯವರಿಗೆ ನಿಷ್ಠುರತೆಯಿಂದ ಟೀಕೆಯಾಗುತ್ತಿತ್ತು. "ಇದು ಕ್ಷೇಮಕರವಲ್ಲ. ಪತ್ರಿಕೆಗಳು ಮುಂಜಾಗ್ರತೆ ವಹಿಸಬೇಕು. ಇದರಿಂದ ಇತ್ತಿಚ್ಛಿನವರೆಗಿನ ಸ್ನೇಹಭಾವಕ್ಕೆ ಕುಂದು ಬರುತ್ತಿದೆ" ಹೀಗೆ ಮುಸೋಲಿನಿಯವರು ಎಚ್ಚರಿಕೆ ಕೊಟ್ಟ ಮರುದಿನವೆಂಬಂತೆ ಅಲೆಕ್ಝಾಂಡರರ ಕೊಲೆಯಾಗಿದೆ. ಇತಾಲಿ-ಯುಗೋಸ್ಲಾವಿಯಾ ಗಡಿ ಪ್ರದೇಶದಲ್ಲಿ ಇತಾಲಿಯವರು ಅಗಲ ಬಗೆಯಿಂದ ಕೋಟೆಗಳನ್ನು ಕಟ್ಟಿಸಲಾರಂಭಿಸಿದ್ದರಂತೆ! ದೊಡ್ಡ ದೊಡ್ಡ ತೋಫುಗಳನ್ನಿಟ್ಟಿದ್ದಾರಂತೆ! ತೋಫು ಹತ್ತಿಸುವ ಗಾಬರಿಯಲ್ಲಿ ಪಕ್ಕನೆ ಒಂದು ತೋಫಿನ ಸ್ಫೋಟವಾಗಿ ಒಬ್ಬ ಸೈನ್ಯಾಧಿಕಾರಿಯೂ, ಇಬ್ಬ ಸೈನಿಕರೂ ತೀರಿಹೋದರಂತೆ! ದಕ್ಷಿಣ ಗಡಿಯಲ್ಲಿ ಅವಶ್ಯವುಳ್ಳ ಯುದ್ಧ ಸಾಹಿತ್ಯಗಳನ್ನು ತಯಾರಿಸಲಾರಂಭಿಸಿದ್ದಾರೆ. ಮುಸೋಲಿನಿಯವರಿಗೆ ತುರ್ಕಸ್ಥಾನ ಹಾಗು ಯುಗೋಸ್ಲಾವಿಯಾ ದೇಶಗಳೊಳಗಿನ ಆದ ಗುಪ್ತ ತಹನಾಮೆಯ ಸುಳಿವು ಹತ್ತಿದೆ. ಮಿ. ಮುಸ್ತಾಫಾ ಕೆಮಾಲ ಪಾಶಾರವರಿಗೂ, ಯುಗೋಸ್ಲಾವಿಯಾದ ಅರಸರಾದ ಅಲೆಕ್ಝಾಂಡರರವರಿಗೂ ಇತಾಲಿಯ ಮಹತ್ವಾಕಾಂಕ್ಷೆಯನ್ನು ನಿರ್ಬಂಧಿಸುವದಕ್ಕಾಗಿ ಗುಪ್ತವಾಗಿ ನಡೆದ ತಹನಾಮೆ ಪಕ್ಕನೆ ಜಿನಿವಾದಲ್ಲಿ ಹೊರಬಿದ್ದಿದೆ. ಫ್ರಾನ್ಸ ಮೊದಲಾದ ರಾಷ್ಟ್ರಗಳು ಗೌಪ್ಯರಕ್ಷಣೆ ಮಾಡಲು ಪ್ರಯತ್ನಪಟ್ಟರೂ ಗೌಪ್ಯಸ್ಫೋಟವಾಯಿತು! ಇದರಿಂದ ಮುಸೋಲಿನಿಯವರು ತಮ್ಮ ತಯಾರಿಯನ್ನು ಬಿಗಬಿಗಿಯಿಂದ ನಡಿಸಲಾರಂಭಿಸಿದ್ದಾರೆ. ಇತ್ತ ಫ್ರೆಂಚ ಸರಕಾರವೂ ಯುದ್ಧ ತಯಾರಿಯಲ್ಲಿ ಇದೆ. ೬ ಕೋಟಿ ಪವನಿನ ಸಾಲ ತೆಗೆದು ಶಸ್ತ್ರಾಸ್ತ್ರಗಳನ್ನು ತಯಾರಿಸಲಾರಂಭಿಸಿದೆ. ೧೯೧೪ನೇ ಇಸ್ವಿಯಲ್ಲಿ ನಡಿಸಿದಂತೆ ಶಸ್ತ್ರಾಸ್ತ್ರಗಳ ಒಂದು ಪ್ರತ್ಯೇಕ ಖಾತೆಯನ್ನೇ ನಿರ್ಮಾಣಿಸಿಕೊಂಡು ಬೇಕಾದ ಹಾಗೆ ಖರ್ಚು ಮಾಡಿ ಯುದ್ಧ ಸಾಹಿತ್ಯ ತಯಾರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕಾಗಿ ಫ್ರೆಂಚ ಸರಕಾರದ ಕೋಶ ಪ್ರಧಾನರಾದ ಜರ್ಮೇನ ಮಾರ್ಟೀನರವರು ಫ್ರೆಂಚ ಪಾರ್ಲಿಮೆಂಟ ಸಭೆಯಲ್ಲಿ ನುಡಿದರು. ದೊಡ್ಡ ದೊಡ್ಡ ತೋಫುಗಳನ್ನು ವಿಮಾನಗಳ ಮೇಲೆ ಹತ್ತಿಸಿ ಹಾರಿಸುವ ಪ್ರಯೋಗ ನಡೆದದೆ. ಹಿಂದಿನ ಮಹಾಯುದ್ಧದಲ್ಲಿ ಸೈನಿಕರಾಗಿ ಸೇವಾವೃತ್ತರಾದ ೧೧ ಸಾವಿರ ಜನರನ್ನು ಕರಸಿ ಕವಾಯಿತು ಕಲಿಸುವ ರಿವಾಜ ನಡೆದದೆ. ಜರ್ಮನಿಯಲ್ಲಿ ಹಿಟ್ಲರರು ಸರ್ವಸತ್ತಾಧಾರಿಗಳಾದರು. ಜರ್ಮನಿಯ ಆ ಹಿಂದಿನ ರಾಜ್ಯಘಟನೆಯಂತೆ 'ರೀಶ್‌ಸ್ಟಾಗ' ಎಂಬ ಪ್ರಜಾಪ್ರತಿನಿಧಿ ಸಭೆಗೆ ಅವರು ಜವಾಬದಾರರಿದ್ದರು. ಇನ್ನು ಮುಂದೆ ಅವರು ಸರ್ವಸ್ವತಂತ್ರರು. ಅವರು ಮಾಡಿದ್ದೇ ಪ್ರವರ್ದಿಕೆ. ಸಮಸ್ತ ಪ್ರಧಾನರು ಹಿಟ್ಲರ ರಾಜನಿಷ್ಠೆಯ ಪ್ರತಿಜ್ಞೆ ಕೊಳ್ಳಬೇಕಾಗಿ ವಿಧಿಸೋಣವಾಗಿದೆ. ಕೈಸರರ ಸ್ಥಳದಲ್ಲಿ ಈಗ ಹಿಟ್ಲರರು ಅಧ್ಯಕ್ಷರಾಗಿದ್ದಾರೆ. ಹಿಟ್ಲರರು ನೆರೆಹೊರೆಯ ಪೋಲಂಡ ದೇಶದ ಬೆಂಬಲ ಪಡಕೊಂಡಂತೆ ಕಾಣುತ್ತದೆ. ೧೯ ವರ್ಷದೊಳಗಿನ ಪ್ರಾಯದ ಹುಡುಗರೂ, ೧೫-೬೦ ರೊಳಗಿನ ಪ್ರಾಯದ ಗಂಡಸರೂ ಅವಶ್ಯವಾಗಿ ಸೈನ್ಯ ಶಿಕ್ಷಣ ಪಡೆಯಲೇ ಬೇಕೆಂದೂ, ತಪ್ಪಿಸಿಕೊಂಡಲ್ಲಿ ೨೦೦-೩೦೦ ಪವನು ದಂಡ ಕೊಡಬೇಕೆಂದೂ ಪೋಲಂಡ ಸರಕಾರವು ಜರ್ಮನಿಗೆ ನೆರವಾಗುವದಕ್ಕಾಗಿ ರಾಜಾಜ್ಞೆ ಹೊರಡಿಸಿದೆ. ಜರ್ಮನಿಯಲ್ಲಿ ಏನು ನಡೆದದೆಂಬ ವಾರ್ತೆ ಹೊರಬೀಳದು. ಆದರೆ, ಜಿನೆವಾದೊಳಗಿನ ರಾಷ್ಟ್ರಸಂಘದ ಸಭೆಯಲ್ಲಿ ರುಶ್ಯ ದೇಶದ ಪ್ರತಿನಿಧಿಗಳಾದ ಲಿಟ್ವಿನೊಫ್‌ರವರು ಯುದ್ಧಕ್ಕೆ ಅವಶ್ಯವುಳ್ಳ ಸರ್ವಸಿದ್ಧತೆ ಜರ್ಮನಿಯಲ್ಲಿ ತಯಾರಾಗುವದಾಗಿ ಅಂಕಿಗಳಿಂದ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳಿಗೆ ಸಮಾಧಾನ ಮಾಡಿಕೊಟ್ಟರಂತೆ. ೧೯೩೦ನೇ ಇಸ್ವಿಯಲ್ಲಿ ಮಹಾತ್ಮರಿಗೆ ಯರವಡಾ ಜೇಲಿನಲ್ಲಿ ಭೆಟ್ಟಿಯಾದ 'ಡೇಲಿ ಹೆರಲ್ಡ' ಪತ್ರಿಕೆಯ ಪ್ರತಿನಿಧಿಗಳಾದ ಜಾರ್ಜ ಸ್ಲೊಕೊಂಬರವರು 'Crisis in Europe' (ಯುರೋಪದ ಕ್ರಾಂತಿ) ಎಂಬ ಗ್ರಂಥವನ್ನು ಬರೆದಿದ್ದಾರೆ. ಮಹಾಯುದ್ಧದ ಪೂರ್ವಸ್ಥಿತಿಯೇ ಈಗ ಯುರೋಪಖಂಡದಲ್ಲಿ ಪುನಃ ಪ್ರಾದುರ್ಭೂತವಾಗಿರುವದಾಗಿಯೂ, ಜೆಕೊಸ್ಲೊವಾಕಿಯಾ, ಬಲ್ಗೇರಿಯಾ, ರುಮಾನಿಯಾ ಮೊದಲಾದ ಬಾಲ್ಕನ್ ಪ್ರದೇಶದಲ್ಲಿಯೇ ಯುದ್ಧ ಕಿಡಿ ಹಾರಬಹುದಾಗಿಯೂ ಅವರ ಊಹೆ! ಅದರಂತೆ ಅಲೆಕ್ಝಾಂಡರ ಅರಸರ ಕೊಲೆಯಾಗಿ ಬಾಲ್ಕನ್ ಪ್ರದೇಶವೆಲ್ಲ ಪ್ರಕ್ಷುಬ್ಧವಾಗಿದೆ. ಏನಾಬಿಪಿದೆಂದು ನನ್ನಿಂದ ದಾ-ಬರದು ಕಲಕತ್ತೆಯ ''ಅಮೃತ ಬಝಾರ'' ಪತ್ರಿಕೆಯಲ್ಲಿ 'ಎಸ್ ಕೇ' ಎಂಬವರು ಒಂದು ಅನುಮಾನ ಪ್ರಕಟಿಸಿದ್ದಾರೆ: ''ಬ್ರಿಟಿಶರು ಲೋಕಶಾಂತಿಯ ಸ್ಥಾಪನೆಗಾಗಿ ಶ್ವೇತಪತ್ರಿಕೆಯ ರಾಜ್ಯಘಟನೆಯನ್ನು ಸಂಕಲ್ಪಿಸಿಲ್ಲ, ಸನ್ನಿಕಟ ಮಹಾಯುದ್ಧವಾಗುವದಿದೆ. ಮಧ್ಯ ಏಶಿಯಾ ಖಂಡದೊಳಗಿನ ಪ್ರಾಬಲ್ಯಕ್ಕಾಗಿ ರುಶ್ಯರೂ, ಬ್ರಿಟಿಶರೂ ಹೋರಾಡುವರು. ಆ ಸಂಗ್ರಾಮದ ಪೂರ್ವಸಿದ್ಧತೆಗಾಗಿ ಅವಶ್ಯವುಳ್ಳ ಅಧಿಕಾರ ಪಡೆದಿಡಲು ಶ್ವೇತಪತ್ರಿಕೆಯ ಕಲ್ಪನೆಯಾಗಿದೆ'' ಹೀಗವರು ಬರೆಯುತ್ತಾರೆ. ರಶಿಯಾದೊಳಗಿನ ಕೊಮ್ಯುನಿಸ್ಟ ಪಂಥದ ಸಂಸ್ಥೆಗಳನ್ನು ಹಿಂದುಸ್ಥಾನ ಸರಕಾರವು ಬೇಕಾಯಿದೇಶೀರ ಮಾಡಿದ ಮರ್ಮವಾದರೂ ಇದೇ ಎಂದು 'ಎಸ್. ಕೇ' ಇವರ ಅಂಬೋಣ. ಮಧ್ಯ ಯುರೋಪಖಂಡದೊಳಗಿನ ಸೂತ್ರಗಳೂ ಮಧ್ಯ ಏಶಿಯಾ ಖಂಡದೊಳಗಿನ ರಾಜಕಾರಣದ ಸೂತ್ರಗಳೂ ಒಂದಕ್ಕೊಂದು ಸಂಲಗ್ನವಾಗಿರುತ್ತಿದ್ದು, ತೀರ ಸಂಕೀರ್ಣವಾದವುಗಳು. ಈ ರಂಗಸ್ಥಳದಲ್ಲಿ ಬ್ರಿಟಿಶ, ಜಪಾನ, ರಶಿಯಾ ಈ ಮೂರು ರಾಷ್ಟ್ರಗಳು ಕಾರಸ್ಥಾನ ನಡಿಸುತ್ತಿವೆ. ಸಮಯ ನೋಡಿ ಅವುಗಳನ್ನು ವಿವರಿಸುವೆನು. ಸದ್ಯಕ್ಕೆ ಹೇಳುವದಿಷ್ಟೇ: ಅಲೆಕ್ಝಾಂಡರರ ಕೊಲೆಪಾತಕದಿಂದ ಬಾಲ್ಕನ್ ಪ್ರದೇಶದೊಳಗಿನ ರಾಷ್ಟ್ರಗಳಲ್ಲಿ ಹೇಳಲಾರದಷ್ಟು ಪ್ರಕ್ಷೋಭವುಂಟಾಗಿದೆ. ಈ ಗಡಿಬಿಡಿಯಲ್ಲಿ ಇನ್ನೊಂದು ಯುದ್ಧದ ಕಿಡಿ ಹಾರುತ್ತದೇನೆಂಬದೊಂದು ಸಹಜವಾದ ಅಂಜಿಕೆಯುಂಟಾಗಿದೆ. ಎಲ್ಲ ಕಾರಭಾರ ಅಂತರಂಗದಿಂದ ನಡೆಯುತ್ತಿದ್ದದರಿಂದ ನಿಶ್ಚಿತವಾಗಿ ನಾವು ಮತ್ತೇನು ಹೇಳಲಿ?

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಗ್ರಾಮಗಳಲ್ಲಿಯೂ [illegible]

ಶ್ರೀ [illegible] ದೇವಸ್ಥಾನದಲ್ಲಿ ಅಹಿಂಸೆಯ [illegible] ದೇವಾಲಯಗಳಲ್ಲಿ [illegible] ಅಹಿಂಸೆಯ [illegible]

[illegible]

ಭಟ್ಕಳ— (ತಾ ೨೮ ೧೦-೩೮) ಇಲ್ಲಿಯ ಶ್ರೀ [illegible] ಭಜನೆ, ಕೀರ್ತನೆ [illegible] ಉತ್ಸವಕ್ಕಾಗಿ [illegible]

[illegible]

ಶಿರಸಿ— (೧೯ ೧೦-೩೮) [illegible]

[illegible]

ದಾ। ಕೆ ವಗಿರಿಯಾದ ಕೇಶವೈನಂದವರು ಮ್ಯುನಿಸಿಪಾಲಿಟಿಯನ್ನೆ ಈ ಹಿಂದೆ ಅಧ್ಯಕ್ಷರಾಗಿ ಬಹಳ ನಿಷ್ಪಕ್ಷಪಾತದಿಂದ ದುಡಿದವರು. ಈ ಬಾರಿಯ ಮ್ಯುನಿಸಿಪಾಲಿಟಿ ಇಲೆಕ್ಷನಿನಲ್ಲಿ ಉಮೇದ್ವಾರರಿಗೆ ಬಹಳ ಖರ್ಚು ಬಂದಿರುವದಾಗಿ ಈಗ ಅಲ್ಲಲ್ಲಿ ಹೇಳುತ್ತಿದ್ದಾರೆ. ಉಮೇದವಾರರು ಇಲೆಕ್ಷನ್ನಿನಲ್ಲಿ ಖರ್ಚು ಮಾಡಿದ ಅಂಕಿಗಳು ಈಗ ಹೊರಬೀಳಲಾಗುತ್ತಿವೆ. ಒಬ್ಬರಿಗೆ ರೂ ೩೦೦೦ ಕ್ಕೆ ಖರ್ಚು ತಗಲಿತಾಗಿ ಹೇಳುತ್ತಾರೆ. ಇಲೆಕ್ಷನ ಸಮಯದಿಂದ ವ್ಯಾಪಾರಕ್ಕೂ ಬಹಳ ಕಳೆಯಾಯಿತಂತೆ.

ನವರಾತ್ರಿಯ ದಶ ನವರಾತ್ರಿಯಲ್ಲಿ ಇಲ್ಲಿಯ ಶ್ರೀ ವರದ ಸ್ವಾಮಿ ದೇವಸ್ಥಾನದಲ್ಲಿ ಕೀರ್ತನೆಗಳಾಗುತ್ತಿವೆ. ರಾಷ್ಟ್ರೀಯ ವಕ್ತಾರರು ಶ್ರೀ ಬೆಟಗೇರಿ ಕೃಷ್ಣ ಶಾಸ್ತ್ರಿಗಳವರು ಕೀರ್ತನಕಾರರು ಸವಿಸ್ತಾರವಾಗಿ ಕೀರ್ತನೆ ಮಾಡುತ್ತಾರೆ.

ಇಲ್ಲಿಯ ಶ್ರೀ ವಿಷ್ಣು ಮಾರದಲ್ಲಿ ಬುದ್ಧ ೧೦ ನೆಯ ದಿನ ಭಜನೆ ಸಪ್ತಾಹವಾಯಿತು. ಈ ಸಪ್ತಾಹದಲ್ಲಿ ಶ್ರೀ ದೇವರಿಗೆ ಬೇರೆ ಬೇರೆ ಅವತಾರದ ಅಲಂಕಾರ ಮಾಡುತ್ತಿದ್ದರು. ದಿನಾ ರಾತ್ರಿ ೧೦ ಘಂಟೆಯ ಆರ್ತಿ ತಾಸು ಚಿಕ್ಕ ಚಿಕ್ಕ ಹುಡುಗರು ಕೋಲಿನ ಆಟ ಆಡುತ್ತಿದ್ದರು. ದಿನಾ ಜನರು ಕಿಕ್ಕಿರಿದು ಸೇರುತ್ತಿದ್ದರು. ಸೋಮವಾರ ಆದ್ದರಿಂದ ಜನಸಂದಣಿ ಹೆಚ್ಚಾಗಿತ್ತು. ಭಜನೆ ಮಂಡಳಿಯವರು ಬಹಳ ಉತ್ಸಾಹ ತೋರಿಸಿದರು. ಭಜನೆಗೆ ತಮ್ಮ ಪೂರ್ತಿ ಸಹಾಯ ಮಾಡಿದರು. ರವಿವಾರ ರಾತ್ರಿ ವಿಜಯದ ವೇಷ ಸೋಮವಾರ ರಾತ್ರಿ ಹನುಮಂತ ಸುಂದರ ವೇಷಗಳನ್ನು ಮಾಡಿ ತಂದಿದ್ದರು. ದೀಪಗಳ ವ್ಯವಸ್ಥೆ ಚೆನ್ನಾಗಿತ್ತು. ಆದಷ್ಟರ ಮಟ್ಟಿಗೆ ಕೈ ಬಿಗಿಹಿಡಿದು ಖರ್ಚು ಮಾಡಿ ಈ ಉತ್ಸವವನ್ನು ಪ್ರತಿ ವರ್ಷ ನಡೆಸಿದರೆ ಒಳ್ಳೇದು.

ಒ. ಘಾ. ದೇ. ಜಾ. ಕಾ. ಪ್ರಜಾ ಎಂಬ ಪತ್ರಿಕೆಯನ್ನು ಸುಳ್ಳಲ್ಲ. ಅಸಮ ಬಿಹಾರ ಸಂಯುಕ್ತ ಪ್ರಾಂತ ಮೊದಲಾದ ಕಡೆಗಳಲ್ಲಿ ಭೂಕಂಪ ನೆರೆಹಾವಳಿ ಮೊದಲಾದ ದೈವೀ ಉತ್ಪಾತಗಳಿಂದ ಜನರು ಗೋಳಿಡುತ್ತಿರುವಾಗ ಸರ್ಕಾರ ಧಿಪತಿ ವಿಲಿಂಗಡನ್ ದೊರೆಗಳು ಸುಮಾರು ರೂಪಾಯಿ ಖರ್ಚು ಮಾಡಿ ಮಹಾ ದೊಡ್ಡ ದಿಲ್ಲಿ ಸಮಾರಂಭ ಮಾಡಿದ್ದನ್ನು ನೋಡಿದೆವೋ ಏನೋ! ನಮ್ಮ ಊರೊಳಗಿನ ಅಡಿಕೆ ದಲಾಲರ ಸಂಘವು ಧರ್ಮದಾಯ ಫಂಡಿನೊಳಗಿಂದ ೧೦೦ ರೂಪಾಯಿ ಮಟ್ಟಿಗೆ ಖರ್ಚು ಮಾಡಿ ಊರ ಮುಖಂಡರುಗಳನ್ನೆಲ್ಲ ಆಹ್ವಾನ ಮಾಡಿಸುವ ಸಂಭ್ರಮದಲ್ಲಿ ತೊಡಗಿದೆ. ಧರ್ಮದಾಯ ಫಂಡು ಅಡಿಕೆ ದಲಾಲ್ಯ ಮೇಲಿನ ಮೊದಲಾದ ಸಾಧನಗಳ ತರುವ ಆದಾಯಗಳಿಂದ ಎತ್ತುವಳಿ ಮಾಡಿ ಕೂಡಿಸಿದ ಹಣ. ಮೊದಲು ಪ್ರತಿ ಖಂಡಿಗೆ ೧॥ ಆಣೆ ಎತ್ತುವಳಿ ಮಾಡುತ್ತಿದ್ದರು. ದೇವಸ್ಥಾನಗಳಿಗೆ ಸಹಾಯ ಮಾಡುವ ಬಗ್ಗೆಂದು ಇತ್ತು. ೨॥ ಆಣೆ ಏರಿಸಲ್ಪಟ್ಟ ಕೆಲ ವರ್ಷ ದೇವಸ್ಥಾನಗಳಿಗೆ ಸರಿಯಾದಂತೆ ಧರ್ಮದಾಯ ಹಂಚಲ್ಪಟ್ಟಿತು. ಇತ್ತ ೩ ವರ್ಷಗಳಿಂದ ರೂ ೧ ೪ ಆಣೆ ಮಾತ್ರ ದೇವಸ್ಥಾನಗಳಿಗೆ ಕೊಡಲಾಗಿದೆಯೋ ೧॥ ಆಣೆ ದರಮಿನಿಂದ ಧರ್ಮದಾಯ ಎತ್ತಲಾಗುತ್ತಿದೆ. ಅದರಂತೆ ೧೦ ೧॥ ಸಾವಿರ ರೂಪಾಯಿ ಖರ್ಚು ಮಾಡಿ ಧರ್ಮಶಾಲೆ ಕಟ್ಟಲಾಯಿತು. ಈ ಧರ್ಮಶಾಲೆಗೆ ದೇವಸ್ಥಾನಗಳಿಗೆ ಕೊಡುವ ಹಣ ಸಹ ಬಳಸಲಾಯಿತು. ಆದರಿಂದ ಇತ್ತ ೩ ವರ್ಷಗಳಿಂದ ದೇವಸ್ಥಾನಗಳಿಗೆ ಧರ್ಮದಾಯ ಫಂಡಿನಿಂದ ಹಣ ಕೊಟ್ಟಿಲ್ಲ. ಮುಂದಿನ ವರ್ಷದಿಂದ ಎಲ್ಲ ದೇವಸ್ಥಾನಗಳಿಗೆ ಕೊಡಬೇಕಾಗಿ ಬರಬಹುದು. ಈ ವರ್ಷ ರಹಿತವಾಗಿದ್ದರೆ ಮತ್ತೊಂದು ದೊಡ್ಡ ಆಗುವ ತನಕ ಈ ದರವು ಕಡಿಮೆ ಆಗಲಿಕ್ಕಿಲ್ಲ. ಈ ಧರ್ಮಶಾಲೆ ಕಟ್ಟಿಸುವ ಸ್ಥಳವೇನು ಪ್ರಸಿದ್ಧವಲ್ಲ. ಧರ್ಮಶಾಲೆಯಲ್ಲಿ ಮಾಂಧ್ಯರು ಹೋಗಿ ಉಳಕೊಳ್ಳುವ ಸಂಭವ ತೀರ ಕಡಿಮೆ. ಈ ಪ್ರಕಾರ ದೇವರ ಹೆಸರಿನ ಧರ್ಮದ ಹೆಸರಿನಿಂದ ಎತ್ತುವಳಿ ಮಾಡಿದ ಧರ್ಮದ ಫಂಡನ್ನು ಧರ್ಮಕ್ಕೆ ಹಲವಾರು ವಿನಿಯೋಗಿಸುವ ಪ್ರಕಾರವಿದು! ಈ ಫಂಡಿನೊಳಗಿಂದ ಕಾರವಾರ ಕ್ರೈಸ್ತಸಾ ಯುಕ ವಿಧಿಗೆ ಹಣ ಕೊಡುವುದಾಗಿ ತಾ ೧೨ ನೇಗ ಸೇರಿದ ಸಭೆಯಲ್ಲಿ ಒಬ್ಬರು ಬಿನ್ನೈಸಿಕೊಂಡರು. ಶ್ರೀ ಅಮ್ಮೆಂಬ್ರ ನಾಯಕರು ಸ್ಥಾಪಿಸಿದ ಗಾಂಧಿ ಸೇವಾಶ್ರಮಕ್ಕೆ ಧನ ಸಹಾಯ ಮಾಡಬೇಕಾಗಿ ಇನ್ನೊಬ್ಬರು ಕೇಳಿಕೊಂಡರು. ಇಬ್ಬರಿಗೂ ಒಂದೇ ಸರಕಾರಿ ಉತ್ತರ ಸಿಕ್ಕಿದೆ. ಹಣದ ಅಭಾವ! ಅದೇ ಸಂಘದವರು ಈ ಹಣದ ಅಭಾವದ ಪ್ರಸಂಗದಲ್ಲಿ ಈ ಫಂಡಿನೊಳಗಿಂದ ಐಕ್ಯ ಕರ್ನಾಟಕ ಮಹಾನುಭಾವರಿಗೆ ನಿವಳಿಸಿಕೊಂಡು ರೂ ೧೦೦ ರ ಮಟ್ಟಿಗೆ ಖರ್ಚು ಮಾಡಿ ಬರುವ ಸೋಮವಾರ ಧರ್ಮಶಾಲೆಯ ಉದ್ಘಾಟನ ಸಮಾರಂಭ ಮಾಡಬೇಕಾಗಿ ನಿರ್ಧರಿಸಿದ್ದಾರೆ. ದಾ। ವೋಟಿನಸರ ತಿಮ್ಮಯ್ಯ ಹೆಗಡೆಯವರೂ ಒತ್ತಿಗೆ ಗಣೇಶ ಭಟ್ಟರೂ, ಧಾಕಪ್ಪನ ಮಾಸ ದೇವಯ್ಯ ರೂ ಈ ಸೂಚನೆಯ ಮುಖ್ಯ ಪ್ರವರ್ತಕರು. ಆಸಾಮಿಗಳಿಂದ ಎತ್ತುವಳಿ ಮಾಡಿದ ಹಣದೊಳಗಿಂದ ಅವರಿಗೆ ಸಂಕಟ ಕಾಲದಲ್ಲಿ ಪ್ರಯೋಜನ ದೊರೆಯದಿದ್ದದ್ದು ಬೋಜನದ ಆಹ್ವಾನಕ್ಕೆ ಖರ್ಚಾಗುವದೇನು ನಿಜ. ದೇಶವಷ್ಟು ಆದರ್ಶ ಅಧಿಕ ದಲಾಲರು ಆಹ್ವಾನಕ್ಕೆ ತಮ್ಮ ಕೈಯೊಳಗಿಂದ ಪಟ್ಟಿ ಕೊಡಿಸದೆ ಧರ್ಮದಾಯ ಫಂಡು ಖರ್ಚು ಮಾಡುವದು ವಿಚಾರದ ತೀರುವಲ್ಲ. ಈ ಸಂಘದೊಳಗಿನ ಪ್ರಾಮಾಣಿಕ ಮನಸ್ಸಿಗೆ ಬಾರದೆ? ೪ ತಿಂಗಳ ಹಿಂದೆ ಅಮೋದ್ವೃದ್ಧ ಹೀಗೆ ಅಭಿನವ ದಲಾಲ ಶ್ರೀ ದೇವಪ್ಪ ಶೆಟ್ಟರು ದಾಕಪ್ಪನವರು ಸಂಘಕ್ಕೆ ರಾಜೀನಾಮೆ ಕೊಟ್ಟಿರುವ ರೀತಿ

ಹಳಿಯಾಳ — (ತಾ ೧೬–೧೦–೩೮)

ಮಳೆಗಾಲದಿಂದ ದಿನಾ ಚೆನ್ನಾಗಿ ಮಳೆ ಬೀಳುತ್ತಿತ್ತು. ಇದರಿಂದ ಬೆಳೆಗೆ ಬಹಳ ಅನುಕೂಲ. ಇದೇ ಮಳೆ ೧೫ ದಿನಗಳ ಹಿಂದೆ ಬಿದ್ದಿದ್ದರೆ ಮತ್ತೂ ಅನುಕೂಲವಿತ್ತು.

ಭತ್ತ ರಾಗಿ ಜೋಳ ಮೊದಲಾದವುಗಳ ದರ ಸಗ್ಗದ ರೀತಿಯಿಂದ ಇಳಿದಿದೆ. ಇದರಿಂದ ಜನರಿಗೆ ಇಮ್ಮಡಿ ನಷ್ಟ. ಸಗ್ಗದ ಹಂಗಾಮೆಂದರೆ ಕೀರ್ತಿ ಕೊಡುವ ಹಂಗಾಮು. ಆಗ ಬರಬೇಕಾದ್ದರಿಂದ ಕೀರ್ತಿ ಕುಂದಿತು. ಕ್ಷೇತ್ರದ ಕೆಲಸ ಮಾಡಿದ್ದಾಯಿತು, ಈಗ ಹೊಸಗೆ ಕಾಳು ತೆಗೆದು ಕೊಡುವ ಸಮಯ. ಮಾಡಿದ ಊಗ ಭತ್ತ ಕ್ವಿಂಟಲರ ಸಹಯಿಂದ ರೈತರು ಭತ್ತ ತಂದು ಮಾರಾಟ ಮಾಡುತ್ತಾರೆ. ಈಗ ತಂದ ಕಾಳಿಗೆ ೧॥ ರಷ್ಟು ಕಾಳು ಸಿಗ್ಗದ ಕ್ವಿಂಟಲಿಗೆ ಅಂದರೆ ೨–೩ ಆಣೆಗೆ ದರ ಸಿಲಬರ ಬೇಕಾದ ಸಂದರ್ಭ ಉಸ್ತುವಾರಿಯಾಯಿತು. ಹೀಗೆ ರೈತರಿಗೆ ವಿಪನ್ನಾವಸ್ಥೆ ಬಂದಿದೆ.

ಮಹಾಬಳೇಶ್ವರ ಸಂಸ್ಥಾನದೊಳಗಿಂದ ದೊಡ್ಡ ಸಸ್ಯಕ್ಕೆ ತಯಾರಿಸುವ ರಾಣಿ ಪತ್ರ ಕಡೆ ಸ್ಥಾಪನೆಯಾಗಬೇಕಾದ ಅತ್ತಿಕೇರಿ ಮಠದ ಸಮೀಪ ಒಂದು ದೊಡ್ಡ ಕೆರೆ ಕಟ್ಟಿಸುತ್ತ ಮುತ್ತು ಕಟ್ಟಿ ಬೆಳೆ ಸಸ್ಯಕ್ಕೆ ಅನುಕೂಲ ಮಾಡುವದರಿಂದ ಇದಕ್ಕಾಗಿ ಬಂಜರು ಬಿದ್ದ ಭೂಮಿ ಬೆಳೆ ಮಾಡುವದಕ್ಕಾಗಿ ಸಂಸ್ಥಾನದೊಳಗಿನ ನಾಗರಿಕರು ಇತ್ತ ಕಡೆ ಸಂಚರಿಸುತ್ತಿದ್ದಾರೆ. ಕೆರೆ ಕಟ್ಟುವ ಬಗ್ಗೆ ಅಳತೆಯಾಗಿದೆ, ಅಂದಾಜಾಗಿದೆ. ಒಂದು ದೊಡ್ಡ ಕಾಂಟ್ರಾಕ್ಟ ಕೊಟ್ಟು ಸಂಸ್ಥಾನದವರು ಕೆರೆ ಕಟ್ಟಿಸುವ ವ್ಯವಸ್ಥೆ ಮಾಡುವವರಾಗಿ ತಿಳಿಯುತ್ತದೆ.

ಅಂಕೋಲಾ — (ತಾ ೨೦ ೧೦ ೩೮)

ಬಾಂಗ್ಲೆ ಮಾಳ ತಾ ೧೬ ನೇಗ ಶ್ರೀ ಕಾರ್ನಾಡ ಸದಾಶಿವರಾಯರು ಅಲ್ಲಿನ ಪಟ್ಟಣದಲ್ಲಿ ತೀರ್ಮಾನಿತ ಮೆಜಿಸ್ಟ್ರೇಟರು ಶ್ರೀ ಸದಾ ವ್ಯಾಯದಿಂದ ರೂ ೩೦ ದಂಡ ವಿಧಿಸಿದರು. ದಂಡ ವಸೂಲಾದ್ದರಿಂದ ಶ್ರೀ ಕಾರ್ನಾಡ ಸದಾಶಿವರಾಯರು ರಾಷ್ಟ್ರೀಯ ಸಭೆಗಾಗಿ ಮುಂಬಯಿಗೆ ತೆರಳಿದರು.

ಇಲ್ಲಿಯ ಮುಸಲ್ಮಾನ ಮಹಮದ ಖಲೀಲ ವಿಚಾರವನ್ನು ಕಾರವಾರ ಸೆಶನ್ಸ ಕೋರ್ಟಿನಲ್ಲಿ ಮಾಡಿದ ಶಿಕ್ಷೆಯ ಹುಕ್ಮದ ಮೇಲೆ ಹಕೀಕತ ಇದ್ದುದಾಗಿ ಮುಂಬಯಿ ಹೈಕೋರ್ಟಿಗೆ ಮಾಡಿದ ಅಪೀಲು ದೊಡ್ಡದಾಗಿ ಮುಂಬಯಿ ಹೈಕೋರ್ಟಿನಲ್ಲಿ ನ್ಯಾಯಮೂರ್ತಿ ಮಾರ್ಲೆಯವರ ಮುಂದೆ ಕಳೆದ ಗುರುವಾರ ನಡೆದು ನ್ಯಾಯಮೂರ್ತಿಗಳು ಅರ್ಜಿಯನ್ನು ತಿರಸ್ಕರಿಸಿದ್ದಾಗಿ ಇಲ್ಲಿ ತಂತಿ ಬಂದಿದೆ. ರೀತಿಯಂತೆ ಬರೆದು ಬಂದ ಬಳಿಕ ವಿಚಾರ ನಡೆಸುವರು.

ಕಾರವಾರ — (ತಾ ೨೦–೧೦–೩೮)

ಶ್ರೀ ದಿವಾಕರ ರಂಗರಾವರವರಿಗೂ ಕ್ರೀಸ್ತರಿಗೂ ಬೈತಕೋಲ ಮೋಟಾರ ಸ್ಟಾಂಡಿನ ಬಳಿ ಒಂದು ಮನೋರಂಜಕ ವಿವಾದವಾಯಿತು. ಪೋಲೀಸರು ಶ್ರೀ ರಂಗರಾವರಿಗೆ ಹೆಸರು ಕೇಳಿದರು. ತಪ್ಪು ಹೆಸರು ಕೊಡುವದಿಲ್ಲವಾಗಿ ಶ್ರೀ ದಿವಾಕರರು ನುಡಿದರು. "ನಿಮ್ಮ ಹೆಸರು ಏಕೆ ಕೇಳುತ್ತೀರಿ?" ಎಂದು ಅವರು ಕೇಳಲು "ನೀವು ಖಾದಿ ಹಾಕಿಕೊಂಡಿದ್ದೀರಿ" ಎಂದು ಪೊಲೀಸ ಉತ್ತರಿಸಿದನು. ಬೇರೆಯವರು ಖಾದಿ ಹಾಕಿಕೊಂಡವರಿದ್ದಾರೆ. ಅವರಿಗೆ "ನೀವು ಯಾಕೆ ಹೆಸರ ಕೇಳುವದಿಲ್ಲ?" ಎಂದು ಪ್ರಶ್ನಿಸಲು "ನೀವು ಕಾಂಗ್ರೆಸ್ಸಿನವರು" ಎಂದು ಪೋಲೀಸ ನಾಯಕನು ನುಡಿದನು. "ಹೌದು ನಾನು ಕಾಂಗ್ರೆಸ್ಸಿನವನು. ಕಾಂಗ್ರೆಸ ಕೆಲಸಕ್ಕಾಗಿ ಬಂದಿದ್ದೇನೆ" ಎಂದ ಶ್ರೀ ದಿವಾಕರರು ನುಡಿದು ಕೊನೆಗೆ ತನಕ ಹೆಸರು ಕೊಡಲಿಲ್ಲ. "ನನಗೆ ಬೇಕಾದ ಮಾಡಲು ಹಕ್ಕು ಬಂದಿದೆ" ಎಂದು ಪೋಲೀಸನು ನುಡಿಯಲು, "ನಿಮ್ಮ ಬಳಿಯನ್ನು ಕಂಡದ್ದು ಆಗಿ ಹೋಗಿ ನನ್ನ ಹೆಸರು ಕೊಡುವುದು ನನ್ನ ಇಚ್ಛೆಯಿಲ್ಲ" ಹೀಗೆ ಶ್ರೀ ದಿವಾಕರರು ನುಡಿದು ಮುಂದಾದರು.

[ಸ್ಥಳ ಸಂಕೋಚದಿಂದ ಹಲವು ಸುದ್ದಿ ಪ್ರಕಟಿಸಲಿಲ್ಲ]

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಸ್ಯದ ಪುಡಿ ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರ ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯ ಪ್ರಶಸ್ತಿಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಗುಣವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು, ತಲೆಯ ಶ್ಲೇಷ್ಮ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಕಲಿದೇಶ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಮಂದಸ್ಮೃತಿ ಮೊದಲಾದ ವ್ಯಾಧಿಗಳನ್ನೂ ಸ್ಪಷ್ಟಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂಗಿಗೆ ಬಿಟ್ಟ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಅತಿ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ ಕಳಿಸಲಾಗುವದಿಲ್ಲ.

(Registered Trade Mark)

ಬಡ್ಡಿ ಒಂದಕ್ಕೆ ಕ್ರಯ ರೂ ೦-೬-೦ ಸ್ಟ್ಯಾಂಪ ಆಣೆ ಡಜನ್ ೧ ಕ್ಕೆ ರೂ ೨-೮-೦ ವಿ ಪಿ ೦-೫-೦ ಮಾಮೂಲಾಗಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ವಿಳಾಸ:— ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋಸ್ಟ್ ಬಾ. ೫೧೦ ಪೇಟೆ ಮೈಸೂರ

ಕೊಂಗ್ರೆಸ ಸುದ್ದಿಗಳು.

— ವರ್ಲಿಯಲ್ಲಿ ಅಬ್ದುಲ್ ಗಫಾರ ನಗರ ರಚನೆಯಾಗಿದೆ, ಮುಂಬಯಿಯಿಂದ ೫ ಮೈಲು ದೂರ ಒಂದು ಕಡೆಗೆ ಸಮುದ್ರ, ಮತ್ತೊಂದು ಬದಿಗೆ ತೋಪುಗಳು. ಇದರಿಂದ ಒಂದು ಪ್ರಕಾರದ ಸೃಷ್ಟಿಸೌಂದರ್ಯ ಪ್ರಾಪ್ತವಾಗಿದೆ ೩೦೦ ಎಕ್ರೆ ಸ್ಥಳದಲ್ಲಿ ಕಟ್ಟಿದ ನಗರದಲ್ಲಿ ೫ ಲಕ್ಷ ಜನರ ವ್ಯವಸ್ಥೆಯಾಗಿದೆ. ಇಷ್ಟು ದೊಡ್ಡ ಕೊಂಗ್ರೆಸ ನಗರ ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ಇದೇ ಮೊದಲು. ಖರ್ಚ ಸಹ ಕಟ್ಟಡಕ್ಕಾಗಿ ೧। ಲಕ್ಷ ರೂಪಾಯಿ ತಗಲೀತು. ಈ ಹಿಂದಿನ ಕರಾಚಿಯೊಳಗಿನ ಕೊಂಗ್ರೆಸ ನಗರಕ್ಕೆ ೩೫ ಸಾವಿರ ಖರ್ಚ ತಗಲಿತ್ತು. ಸ್ವಾತಂತ್ರ್ಯ ಧ್ವಜ ನಟ್ಟ ಲಾಹೋರ ಕೊಂಗ್ರೆಸಿನ ನಗರಕ್ಕೆ ೨೫ ಸಾವಿರ ರೂಪಾಯಿ ಖರ್ಚ ತಗಲಿತ್ತು.

— ಮಧ್ಯಭಾಗದಲ್ಲಿ ಧ್ವಜಸ್ತಂಭವಿದ್ದು ೧೧೦ ಫೂಟು ಎತ್ತರವಾದದ್ದು. ಇಡೀ ಮುಂಬಯಿಯಲ್ಲಿ ದೃಗ್ಗೋಚರವಾಗಬೇಕೆಂದು ಇದು ಇಷ್ಟು ಎತ್ತರ ಸ್ಥಾಪನೆಯಾಗಿದೆ. ರಾತ್ರೆ ಈ ಧ್ವಜಸ್ತಂಭದ ಮೇಲೆ ದೀಪ ಹಚ್ಚುವರು. ರಾಷ್ಟ್ರಧ್ವಜವು ರಾಷ್ಟ್ರೀಯ ಸಭೆಯ ಅಧಿವೇಶನ ಸಮಯ ಮುದದಿಂದ ಹಾರ್ಯಾಡುತ್ತ ಉಳಿಯುವದು.

— [illegible] ಸಭಾ ಮಂಟಪ ೪೫ ಸಾವಿರ ಜನರಿಗೆ ಸಾಲುವಂಥಾದ್ದು. ಮಧ್ಯಭಾಗದಲ್ಲಿ ವಕ್ತೃಸ್ಥಾನ, ಅಲ್ಲಲ್ಲಿ ಧ್ವನಿವಾಹಕ ಯಂತ್ರಗಳು, ಈ ವ್ಯವಸ್ಥೆಯಿಂದ ಎಲ್ಲರಿಗೂ ಭಾಷಣ ಕೇಳುವಂತಿದೆ.

— ಅಬ್ದುಲ್ ಗಫಾರ ನಗರದಲ್ಲಿ ಯಾವತ್ತೂ ವ್ಯವಸ್ಥೆಯದೆ. ಬೆಂಕು, ಟೆಲಿಫೋನು, ಟಪಾಲು, ಸಂತೆ, ಪೋಸ್ಟ ಅಫೀಸು, ರೇಲ್ವೆ ಅಫೀಸು, ಆಸ್ಪತ್ರೆ, ಉಪಹಾರಗೃಹ, ವಿನೋದ ಸಾಹಿತ್ಯ, ಉದ್ಯಾನ ಮೊದಲಾದ ಎಲ್ಲ ಸೌಕರ್ಯಗಳಿವೆ. ಮುಂಬಯಿಗೆ ಹೋಗಿಬರುವದಕ್ಕಾಗಿ ಮೋಟಾರುಗಳೂ, ಕುದುರೆಗಾಡಿಗಳೂ ತಯಾರಿವೆ.

— ಭೋಜನಗೃಹದಲ್ಲಿ ೧೦ ಸಾವಿರ ಜನರು ಊಟಮಾಡುವಷ್ಟು ವ್ಯವಸ್ಥೆಯಿದೆ. ೧ ಊಟಕ್ಕೆ ೮ ಆಣೆ, ೩ ಊಟಕ್ಕೆ ೧೨ ಆಣೆ ದಂಗಳವಾರದಿಂದ ಪ್ರತಿ ಊಟಕ್ಕೆ ಬೇಕಷ್ಟು ಕೊಳ್ಳಿರಿ!

— ಅಧ್ಯಕ್ಷರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರಿಗೆ ವೈಭವದಿಂದ ಸತ್ಕಾರ ನಿರ್ಮಾಣವಾಗಿದೆ. ಕಲ್ಯಾಣದಿಂದ ಶಿಂಗರಿಸಿದ ಸ್ಪೆಶಲ್ ಉಗಿಬಂಡಿಯಲ್ಲಿ ಬಾಬು ರಾಜೇಂದ್ರ ಪ್ರಸಾದರವರಿಗೆ ಕುಳ್ಳಿರಿಸಿಕೊಂಡು ಸ್ವಾಗತ ಸಮಿತಿಯವರು ಬೋರಿಬಂದರ ಸ್ಟೇಶನಿಗೆ ತಂದಿಳಿಸುವರು. ಅಲ್ಲಿಂದ ಕೊಂಗ್ರೆಸ ಹೌಸಿನ ತನಕ ಸಂಭ್ರಮದ ಮೆರವಣಿಗೆ. ನಿನ್ನೆ ರವಿವಾರ ಈ ಮೆರವಣಿಗೆಯಾಗುವದಿತ್ತು. ರಾಜಮಾರ್ಗಗಳಲ್ಲೆಲ್ಲ ಅಲ್ಲಲ್ಲಿ ಕಮಾನದ ತೋರಣ-ಪತಾಕೆಗಳನ್ನು ಹಾಕಿ ಜನರು ತಮ್ಮ ಉತ್ಸಾಹವನ್ನು ಪ್ರದರ್ಶಿಸುವರು. ಬಾಬು ರಾಜೇಂದ್ರ ಪ್ರಸಾದರವರು ಮುದ್ದಾಂ ರಚಿಸಿದ ಕುದುರೆ ಬಂಡಿಯ ಮೇಲೆ ಆರೂಢರಾಗುವರು. ೪ ಕುದುರೆಗಳ ಬಂಡಿಯದು. ಮಹಾತ್ಮರು ಲೌಂಡ ಮೇಜಿನ ಕಾರ್ಯ ಮುಗಿಸಿ ಮುಂಬಯಿಗೆ ಬಂದಿಳಿದಾಗ ಇದರೊಳಗೆ ಕುಳ್ಳಿರಿಸಿ ಮೆರವಣಿಗೆ ತೆಗೆಯಬೇಕೆಂದು ಸಂಕಲ್ಪ ಮಾಡಿದ್ದರು. ಮಹಾತ್ಮರು ಒಲ್ಲೆಂದ ಕಾರಣ ಆ ವಾಹನದ ಉಪಯೋಗ ಆಗ ಆಗಿದ್ದಿಲ್ಲ. ಬಾಬು ರಾಜೇಂದ್ರ ಪ್ರಸಾದರವರು ಮೆರವಣಿಗೆಯಿಂದ ಬರುವಾಗ ಈ ಬಂಡಿಯ ಮೇಲೆ ಪುಷ್ಪವೃಷ್ಟಿಯಾಗುವದು. ಜನರು ಮಾರ್ಗಗಳ ಮಧ್ಯಭಾಗದಲ್ಲಿ ತೂಗಹಾಕಿದ ಹೂ-ಬುಟ್ಟಿಗಳಿಂದ ಹೂಮಳೆಗರೆಯುವರು. ಶೇಕ ಮಹಮ್ಮದ ಸ್ಟ್ರೀಟ, ಜುಮ್ಮಾ ಮಸೀದಿ, ಝವೇರಿ ಬಜಾರ, ಭುಲೇಶ್ವರ, ಸಿ ಪಿ ಟೆಂಕ, ಪ್ರಾರ್ಥನಾ ಸಮಾಜ, ಕೊಂಗ್ರೆಸ ಹೌಸ, ಈ ಕಡೆಗಳಲ್ಲಿ ಹೆಚ್ಚಾಗಿ ತೋರಣಗಳು ಬಹು ಚಿತ್ತವೇಧಕವಿವೆ. ಅರಳಿಯ ದೇವಕಾರರು ಹಾಕಿದ ೧ ಅರಳಿಯ ತೋರಣಕ್ಕೆ ಅರ್ಧ ಲಕ್ಷ ರೂಪಾಯಿ ಖರ್ಚ ಬರುವದಂತೆ! ಇಂಥ ತೋರಣವನ್ನು ೧೯೦೫ ನೇ ಇಸ್ವಿಯಲ್ಲಿ ಯುವರಾಜರ ಆಗಮನವಾದಾಗ ಇಂಥ ತೋರಣ ಹಾಕಲ್ಪಟ್ಟಿತ್ತಾಗಿ ಹೇಳುತ್ತಾರೆ. ಇಡೀ ಹಿಂದುಸ್ಥಾನದಲ್ಲಿ ಇಡೀ ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ - ಏಕೆ? ಜಗತ್ತಿನಲ್ಲಿ ಮೊದಲನೇ ಪ್ರವಾಸ ಸ್ವಾಗತ ಸಮಯ ಇಂಥ ತೋರಣ ಹಾಕಿದ್ದಿಲ್ಲವಾಗಿ ಹೇಳುತ್ತಾರೆ. ಮುಂಬಾಪುರಿಗರೆಲ್ಲರೂ ರಾಷ್ಟ್ರೀಯ ಸಭೆಯವರಿಗೆ ತನು-ಮನ-ಧನದಿಂದ ಸತ್ಕಾರ ಮಾಡಿದ್ದಾರೆ. ಅಬ್ದುಲ್ ಗಫಾರ ನಗರವನ್ನು ದಿನಾ ಸಾವಿರಾರು ಜನರು ನೋಡಿ ಬಹು ಸಂತೋಷಪಟ್ಟಿದ್ದಾರೆ. ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ಈ ಸ್ವಾಗತವು ಅಪೂರ್ವವಾಗುವದೆಂಬುದರಲ್ಲಿ ಸಂದೇಹವಿಲ್ಲ.

— ೩೦೦೦ ಸ್ವಯಂಸೇವಕರ ದಳದ ನಿರ್ಮಾಣವಾಗಿದೆ. ಅದರಲ್ಲಿ ೧೭೧೦ ಮಂದಿ ಗಂಡಸರು, ೩೦೦ ಮಂದಿ ಸ್ತ್ರೀಯರು. ಕರಾಚಿಯಲ್ಲಿ ೪೦೦೦ ಸ್ವಯಂಸೇವಕರಿದ್ದರು. ಆದರೆ, ಮುಂಬಯಿಯೊಳಗಿನ ಸ್ವಯಂಸೇವಕರು ಅನುಭವಸ್ಥರಿದ್ದುದರಿಂದ ೩೦೦೦ ಸ್ವಯಂಸೇವಕರು ಯಾವತ್ತು ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ನಡೆಸಬಲ್ಲರಂತೆ.

— ಖಾನಸಾಹೇಬ ಅಬ್ದುಲ್ ಗಫಾರಖಾನರವರು ವರ್ಧಾದಿಂದ ತಾ ೧೯ ನೇಗೆ, ಮರುದಿನ ಮಹಾತ್ಮರು, ಆಮೇಲೆ ಅಂದರೆ ನಿನ್ನೆ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಮುಂಬಯಿಗೆ ಬರಲಿದ್ದರು. ನಾಳೆ ಮಂಗಳವಾರದ ಮಧ್ಯಾಹ್ನದಿಂದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿ ಸೇರಿ, ಆಮೇಲೆ ವಿಷಯನಿರ್ಧಾರಕ ಸಭೆ ಸೇರಿ ಠರಾವುಗಳು ತಯಾರಾಗುವವು. ಶುಕ್ರ ಶನಿ ರವಿವಾರ ೩ ದಿನ ಸಂಜೆ ರಾಷ್ಟ್ರೀಯಸಭೆಯ ಅಧಿವೇಶನ. ಶುಕ್ರವಾರ ಸಂಜೆ ೫ ಘಂಟೆಗೆ ರಾಷ್ಟ್ರೀಯಸಭೆಯ ಅಧಿವೇಶನಕ್ಕೆ ಪ್ರಾರಂಭ.

— ಸ್ವದೇಶಿ ಪ್ರದರ್ಶನದಲ್ಲಿ ಅಪರೂಪದ ವಸ್ತುಗಳನ್ನು ಸಂಗ್ರಹಿಸಿಡುವದಕ್ಕಾಗಿ ಸೌ. ಸರೋಜಿನಿ ದೇವಿಯವರು ಬಹಳ ಪ್ರಯತ್ನ ನಡೆಸುತ್ತಿದ್ದಾರೆ. ಕೆಲವು ಅಮೂಲ್ಯ ಹಸ್ತಕೌಶಲ್ಯ ಚಿತ್ರಗಳನ್ನು ಅವರು ಸಂಪಾದಿಸಿರುತ್ತಾರೆ. ಇವುಗಳ ಬೆಲೆಯೂ ೧। ಲಕ್ಷ ಇದ್ದಲ್ಲದೆ, ಕೆಲವು ಶಾಲುಗಳನ್ನು ಅವರು ಸಂಪಾದಿಸುತ್ತಾರೆ. ಕೆಲವು ೧೦ ಸಾವಿರಕ್ಕೂ ವಿಕ್ರಯದ ಬೆಲೆಯವು.

— ಗಡಿನಾಡಿನ ಗಾಂಧಿಗಳಾದ ಖಾನ ಅಬ್ದುಲ್ ಗಫಾರ ಖಾನರವರೂ ಅವರ ಅನುಜ ಡಾಕ್ಟರ ಖಾನ ಸಾಹೇಬರವರೂ ವರ್ಧಾ ಮೇಲ ಮುಂಜಾವಿಗೆ ಮುಂಬಯಿಗೆ ಇಳಿದರು. ಬೋರಿಬಂದರ ಸ್ಟೇಶನಿನಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ನರೀಮಾನರವರೂ, ಸರೋಜಿನಿದೇವಿಯವರೂ ಖಾನ ಸಾಹೇಬ ಬಂಧುಗಳಿಗೆ ಸ್ವಾಗತಪೂರ್ವಕ ಹೂಮಾಲೆಗಳನ್ನು ಹಾಕಿದ ಬಳಿಕ, ಅವರೆಲ್ಲರೂ ಗಾಡಿಯಿಂದ ಇಳಿದು ಸ್ವಾಗತ ಮಾಡಿದ ಪ್ರಮುಖರಿಗೆ ಅಭಿನಂದಿಸಿ, ಅಬ್ದುಲ್ಲ ಗಫಾರ ನಗರದೊಳಗಿನ ತಮ್ಮ ನಿವಾಸಸ್ಥಾನಕ್ಕೆ ತೆರಳಿದರು.

— ವಿಷಯ ನಿರ್ಧಾರಕ ಸಭೆಯಲ್ಲಿ ಪ್ರಾರಂಭಕ್ಕೆ ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ನಿವೃತ್ತರಾಗುವ ವಿಷಯವೇ ಚರ್ಚಿಸಲ್ಪಡುವದು. ಮಹಾತ್ಮರು ಮಂಗಳವಾರ ಮಧ್ಯಾಹ್ನ ಸವಿಸ್ತರ ಉಪನ್ಯಾಸ ಮಾಡಿ ರಾಷ್ಟ್ರೀಯ ಸಭೆಯೊಳಗಿಂದ ತಾವು ಅಲಿಪ್ತವಾಗುವ ಕಾರಣಪರಂಪರೆಯನ್ನೆಲ್ಲ ಸ ಪ್ರ ಮಾ ಣ ಪ್ರ ತಿ ಪಾ ದಿ ಸು ವ ರು. ವಿಷಯನಿರ್ಧಾರಕ ಸಭೆಯ ಪ್ರಮುಖರು ತಮ್ಮ ತಮ್ಮ ಅಭಿಪ್ರಾಯಗಳನ್ನರುಹುವರು. ಆದಷ್ಟರ ಮಟ್ಟಿಗೆ ಮಹಾತ್ಮರ ಮನವೊಲಿಸಿ ರಾಷ್ಟ್ರೀಯ ಸಭೆಯ ಸೂತ್ರ ಚಾಲಕತ್ವವನ್ನು ಅವರ ಕಡೆಗೇ ಇರುವಂತೆ ಪ್ರಯತ್ನ ಮಾಡುವದಾಗಿ ಹೇಳುತ್ತಾರೆ. ಪಂಡಿತ ಮದನಮೋಹನ ಮಾಲವೀಯರವರ ರಾಷ್ಟ್ರೀಯ ಪಕ್ಷದವರೂ, ಸಮಾಜ ಸತ್ತಾವಾದಿಗಳೂ ರಾಷ್ಟ್ರೀಯ ಸಭೆಯಲ್ಲಿ ತಮ್ಮ ಕಾರ್ಯಕ್ರಮವನ್ನು ಮನ್ನಿಸಿಕೊಳ್ಳುವಲ್ಲಿ ಪರಾಕಾಷ್ಠೆಯ ಪ್ರಯತ್ನ ಮಾಡುವರು. ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಆರೋಗ್ಯಪ್ರಾಪ್ತಿಗಾಗಿ ವರ್ಧಾಕ್ಕೆ ಬಂದು ಒಂದು ದಿನ ವಿಶ್ರಾಂತಿ ತೆಗೆದುಕೊಂಡು ಕಾರ್ಯಕ್ರಮದಂತೆ ಮುಂಬಯಿಗೆ ಹೋಗಬೇಕಾಗಿ ಮಹಾತ್ಮರು ಆಜ್ಞೆ ಮಾಡಿದ್ದರು. ಆರೋಗ್ಯ ಬಾಬು ರಾಜೇಂದ್ರ ಪ್ರಸಾದರು ಶುಕ್ರವಾರ ವರ್ಧಾಕ್ಕೆ ಹೋಗಿ ಮಹಾತ್ಮರ ಸಲಹೆ ಪಡೆದು ತಮ್ಮ ಅಧ್ಯಕ್ಷಪದದ ಭಾಷಣವನ್ನು ಪೂರ್ತಿಗೊಳಿಸಿಕೊಂಡಿದ್ದಾರಾಗಿ ವಾರ್ತೆ.

ಅಲ್ಲಲ್ಲಿ ಇಷ್ಟಿಷ್ಟು !

(೩ ನೇ ಪಾನಿನಿಂದ ಮುಂದರಿಸಿದ್ದು)

ಅಭಿವೃದ್ಧಿಗೈಯಬೇಕಾದರೆ ಹರೆಯದವರು ದಂಪತಿಗಳಾಗಿ ಸಂತತಿ ಅಭಿವೃದ್ಧಿಗೊಳಿಸಬೇಕು. ಅವಿವಾಹಿತರಾಗಿ ಇರುವದು ಸ್ವಧರ್ಮದ್ರೋಹವಾದುದು, ಯೌವನ ಕಾಲದಲ್ಲಿ ಮದುವೆಯಾಗದ ವೃದ್ಧ ವಿವಾಹ ಮಾಡಿಕೊಳ್ಳುವದರಿಂದ ದಾಂಪತ್ಯಸ್ವಾರಸ್ಯವುಳಿಯುವದಿಲ್ಲ. ಕಾಲ ಮೀರಿ ಮದುವೆ ಮಾಡಿಕೊಳ್ಳುವದರಿಂದ ಸಹಜ ಪ್ರವೃತ್ತಿಯಾದ ಪ್ರೇಮವು ಅತೃಪ್ತವಾಗಿ ಸ್ವಾಂತ್ವ ಹಿಂಗಿಹೋಗುತ್ತದೆ" ಹೀಗೆ ಮುಸೊಲಿನಿಯವರು ಅಭಿಪ್ರಾಯಪಟ್ಟು, ತಮ್ಮ ರಾಜ್ಯದಲ್ಲಿ ಹೆಚ್ಚೆಚ್ಚು ಮದುವೆಗಳಾಗುವಂತೆ ಪ್ರೋತ್ಸಾಹ ಕೊಡುತ್ತಾರಾಗಿ ಲಂಡನಿನ 'ಡೇಲಿ ಎಕ್ಸಪ್ರೆಸ' ಪತ್ರಿಕೆಯಲ್ಲಿ ಜೇಮ್ಸ ಡೊಗಲಾಸ್‌ರವರು ಬರೆಯುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಗಾಳಿ ಹ್ಯಾಗೆ ಪ್ರವಹಿಸುತ್ತದೆಂಬ ಸಂಗತಿ ಇದರ ಮೇಲಿಂದ ಗೃಹಿಕವಾಗುವಂತಿದೆ. ವೃದ್ಧವಿವಾಹ ವಾದಿಗಳು ಈ ವಿಚಾರಗಳನ್ನು ಲಕ್ಷಿಸಿ ವರ್ತಿಸಬೇಕು.

ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಔಷಧ.

— ಮಕ್ಕಳ ಭಯಂಕರವಾದ (ಲಿವರ್ ಕಂಪ್ಲೇಂಟ್), ಯಕೃತ್ತಿನ ಮಾಂದ್ಯತೆ ಯಕೃತ್ತಿನಲ್ಲಿ ರಕ್ತ ಶೇಖರಿಸುವಿಕೆ ಮತ್ತು ಜ್ವರಗಡ್ಡೆ ಮುಂತಾದ ಮಕ್ಕಳ ರೋಗದ ಮೇಲೆ ಆಶ್ಚರ್ಯಕರವಾಗಿ ಗುಣವನ್ನುಂಟುಮಾಡುವ ಸಿದ್ಧೌಷಧ

— ಮಕ್ಕಳ ಪ್ರಾಣವನ್ನು ಕಾಪಾಡುವ "ಸಂಜೀವನಿ"ಯೆಂದು ಪ್ರಸಿದ್ಧಿ-ಪಡೆದಿದೆ!

— ಮಹಾ ಮಹಾ ಡಾಕ್ಟರುಗಳೂ, ಪಂಡಿತರೂ ಇದನ್ನು ಅತಿ ಉತ್ಕೃಷ್ಟವಾದುದೆಂದು ಹೊಗಳಿದ್ದಾರೆ!!

ಹೆಚ್ಚಿನ ಮಾಹಿತಿಗೆ:—

ಜಮ್ಮಿ ವೆಂಕಟರಮಣಯ್ಯ, ಮೈಲಾಪುರ, ಮದ್ರಾಸ.

ಉತ್ತರ ಕರ್ನಾಟಕದ ಸೋಲ ಏಜಂಟ:—

ಡಿ. ಎಸ್. ಕೋಳಿವಾಡಕರ್, ಕುಮಟಾ (ಉ. ಕ.)

ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣಿ.

ದೇ। ಭ। ಹೊಸಮನೆಯವರ ಬಿನ್ನಹ.

ದೇ. ಭ. ಹೊಸಮನೆಯವರು ನಮ್ಮ ಕಡೆಗೆ ಪ್ರಕಟನೆಗಾಗಿ ಈ ಕೆಳಗಿನ ಪತ್ರಿಕೆಯನ್ನು ಕಳಿಸಿದ್ದಾರೆ —

ಮಹಾಶಯರೇ,

ಇದೇ ನವೆಂಬರ ೧೪ನೇ ತಾರೀಖಿಗೆ ಆಗತಕ್ಕ ಎಸೆಂಬ್ಲಿ ಚುನಾವಣಿಗೆ ನಾನು ಮುಂಬಯಿ ಇಲಾಖೆಯ ದಕ್ಷಿಣ ಭಾಗದ (ಬೆಳಗಾಂವ, ಧಾರವಾಡ, ವಿಜಾಪೂರ, ಕಾರವಾರ, ಕುಲಾಬಾ, ರತ್ನಾಗಿರಿ) ಪರವಾಗಿ ಹುರಿಯಾಳಾಗಿ ನಿಂತಿರುವೆನು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ನನ್ನನ್ನು ಹುರಿಯಾಳೆಂದು ಸ್ವೀಕರಿಸಿರುವರು ಭಾರತೀಯ ಪಾರ್ಲಿಮೆಂಟರಿ ಬೋರ್ಡಿನವರು ಅದಕ್ಕೆ ಸಮ್ಮತಿಯನ್ನು ಕೊಟ್ಟಿದ್ದಾರೆ

ನಾನು ಕಾಲೇಜದಲ್ಲಿರುವಾಗಿನಿಂದ ನನ್ನ ಅಲ್ಪ ಶಕ್ತಿಯ ಮಟ್ಟಿಗೆ ಸಾರ್ವಜನಿಕ ಕಾರ್ಯವನ್ನು ಮಾಡುತ್ತ ಬಂದಿದ್ದೇನೆ. ನಾನು ವಕೀಲಿಯನ್ನು ಮಾಡಲಿಕ್ಕೆ ಪ್ರಾರಂಭಿಸಿದ ಬಳಿಕ ಹಾವೇರಿ ಮ್ಯುನಿಸಿಪಾಲಿಟಿ, ಹಾವೇರಿ ತಾಲೂಕ ಲೋಕಲ್ ಬೋರ್ಡ್, ಧಾರವಾಡ ಜಿಲ್ಲಾ ಲೋಕಲ್ ಬೋರ್ಡ, ಧಾರವಾಡ ಜಿಲ್ಲಾ ಸ್ಕೂಲ ಬೋರ್ಡ ಇತ್ಯಾದಿ ಸಂಸ್ಥೆಗಳಲ್ಲಿ ನಾನು ಸಭಾಸದನಾಗಿಯೂ, ಅಧ್ಯಕ್ಷನಾಗಿಯೂ ಚೇರಮನ್ನನಾಗಿಯೂ ಕೆಲಸ ಮಾಡುತ್ತ ಬಂದಿರುವೆನು. ಈಗ ಅದಕ್ಕೂ ವಿಸ್ತೃತವಾದ ಕಾರ್ಯಕ್ಷೇತ್ರದಲ್ಲಿ ಕರ್ನಾಟಕದ ಪರವಾಗಿ ಕೆಲಸ ಮಾಡಬೇಕೆಂದು ಇಚ್ಛಿಸಿ ಎಸೆಂಬ್ಲಿಗೆ ನಿಂತಿದ್ದೇನೆ

ಇಡೀ ಭರತಖಂಡದಲ್ಲಿ ಈಗ ಸದ್ಯಕ್ಕೆ ಕಾಂಗ್ರೆಸ್ಸಿನಂತ ಬಲವುಳ್ಳ ಅನ್ಯ ರಾಜಕೀಯ ಸಂಸ್ಥೆ ಇನ್ನೊಂದಿಲ್ಲ ।ನಾನು ಆ ಸಂಸ್ಥೆಯ ತತ್ವಗಳನ್ನನುಸರಿಸಿ ಮತ್ತು ಅವರ ಆಜ್ಞೆಯಂತೆ ಯಾವಾಗಲೂ ನಡಕೊಳ್ಳುವೆನೆಂದು ಎಲ್ಲರಿಗೂ ಆಶ್ವಾಸನ ಕೊಡಬಲ್ಲೆನು

೧೯೩೦ನೇ ಇಸ್ವಿಯಲ್ಲಿ ನಾನು ಮೊದಲು ಕಾಂಗ್ರೆಸ ಸಂಸ್ಥೆಯನ್ನು ಸೇರಿದೆನು ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅಧ್ಯಕ್ಷಸ್ಥಾನದ ಮಾನವನ್ನು ನನಗೆ ಕೊಟ್ಟಿರುತ್ತಾರೆ ಇದಲ್ಲದೆ ಅದೇ ವರ್ಷ ಬೆಳಗಾಂವಿಯಲ್ಲಿ ಆದ ಬ್ರಾಹ್ಮಣೇತರ ಪರಿಷತ್ತಿಗೆ ಅಧ್ಯಕ್ಷನಾಗಿ ಬ್ರಾಹ್ಮಣೇತರರಲ್ಲದೂ ಕಾಂಗ್ರೆಸ ಸಂಸ್ಥೆಗಳನ್ನು ಸೇರಲಿಕ್ಕೆ ಬೇಕು ಎಂದು ಸಾರಿದೆನು. ಆ ಕಡೆಗೆ ಮಾನ ಕೊಟ್ಟು ಈಗ ಬ್ರಾಹ್ಮಣೇತರರನೇಕರು ಕಾಂಗ್ರೆಸ ಸಂಸ್ಥೆಗಳನ್ನು ಸೇರಿ ತ್ಯಾಗ ಮಾಡಿ ಅನೇಕರು ಕಷ್ಟ-ನಷ್ಟಗಳನ್ನು ಸಹಿಸಿದರೆಂಬುದು ಒಳ್ಳೇ ಸಮಾಧಾನದ ಸಂಗತಿಯು ೧೯೩೦ರಲ್ಲಿ ನನ್ನನ್ನು ಸಹ ಶಿಟಿಸ್ಸಾ ಎಂದು ಹಿಡಿದು ಒಂದು ವರ್ಷದ ಶಿಕ್ಷೆಯನ್ನು ವಿಧಿಸಿದರು

ಇನ್ನು ನನ್ನ ಕಾರವಾರ ಜಿಲ್ಹೆಯ ಬಾಂಧವರಿಗೆ ನಾನು ಒಂದು ವಿಶೇಷ ಸಂಗತಿಯನ್ನು ಹೇಳಬಲ್ಲೆನು ನಾನ ಸ್ವತಃ ರೈತನಿರುವೆನು ರೈತರ ಕಷ್ಟ-ನಷ್ಟಗಳನ್ನು ನಾನು ಬಲ್ಲೆನು ಹಲವೆಡೆಗ ರೈತ ಪರಿಷತ್ತುಗಳಿಗೆ ಅಧ್ಯಕ್ಷನಾಗುವ ಸುಸಂಧಿಯು ನನಗ ದೊರೆತದ್ದರಿಂದ ನಾನು ವಿಶೇಷವಾಗಿ ಅವರ ಅಡಚಣೆಗಳನ್ನು ಅಭ್ಯಸಿಸಿರುವೆನು ಕಾರವಾರದ ಜೀವಾಳವು ಅಡಿಕೆಯ ಹುಟ್ಟುವಳಿ ಮತ್ತು ಅದರ ವ್ಯಾಪಾರ ಇದರಲ್ಲಿದೆ ಎಂಬುದನ್ನು ನಾನು ಚನ್ನಾಗಿ ಅರಿತಿರುವೆನು ಆ ಹುಟ್ಟುವಳಿ ಮತ್ತು ವ್ಯಾಪಾರ ಇವು ಈಗ ದಿನ-ದಿನಕ್ಕೆ ಕುಗ್ಗುತ್ತಲಿವೆ ಹೀಗಾಗಬೇಕಾದರೆ ಅನೇಕ ಕಾರಣಗಳಿದ್ದರೂ ಪರದೇಶದಿಂದ, ಅಂದರೆ ಮಲಾಯಾ, ಸಿಂಗಾಪುರ ಮುಂತಾದ ಸ್ಥಳಗಳಿಂದ ಅನಿರ್ಬಂಧವಾಗಿ ಒಳುತ್ತಿರುವ ಅಡಿಕೆಯ ಪ್ರವಾಹವು ಒಂದು ಮುಖ್ಯ ಕಾರಣವಾಗಿದೆ. ಈ ಪೆಟ್ಟು ಕಾರವಾರ, ರತ್ನಾಗಿರಿ, ಮಲಬಾರ ಈ ಎಲ್ಲ ಭಾಗಗಳಿಗೂ ತಾಗಲಿದೆ ಆದ್ದರಿಂದ ಅಲ್ಲಿಯ ಸಭಾಸದರೊಡನೆ ಒಂದಾಗಿ ಪರದೇಶೀ ಅಡಿಕೆಯ ಮೇಲೆ ಕರವನ್ನು ಹೇರಿ ಇಲ್ಲಿಯ ವ್ಯಾಪಾರಕ್ಕೆ ಉತ್ತೇಜನ ಕೊಡುವದು ಶಕ್ಯವಿದೆ. ಆ ಪ್ರಯತ್ನವನ್ನು ಮಾಡುವದು ಶಕ್ಯವು ಮತ್ತು ಅವಶ್ಯವೆಂದು ನನ್ನ ಭಾವನೆಯು.

ನನ್ನ ಪ್ರಿಯ ಮತದಾರರೇ, ನೀವೆಲ್ಲರೂ ನನ್ನನ್ನೇ ಆರಿಸಿಕೊಟ್ಟು ತಮ್ಮೆಲ್ಲರ ಸೇವೆ ಮಾಡುವ ಸುಸಂಧಿಯನ್ನು ಕೊಡುವಿರೆಂದು ನಾನು ನಂಬಿದ್ದೇನೆ

೧೪—೧೦—೩೪ ಧಾರವಾಡ	ತಮ್ಮ ಅಡಿಯಾಳಾದ, ಹೊಸಮನೆ ಸಿದ್ದಪ್ಪ

— ಮುಂಬಯಿ ಇಲಾಖೆಯ ಗವ್ಹರ್ನರರು ಇದೇ ಬರುವ ಡಿಸೆಂಬರ ತಿಂಗಳಿನಲ್ಲಿ ಅಹಮದಾಬಾದಕ್ಕೆ ಬರುತ್ತಿರುತ್ತಾರೆ ಆ ಸಮಯ ಅವರಿಗೆ ಮಾನಪತ್ರವನ್ನರ್ಪಿಸಬಾರದಾಗಿ ಮ್ಯುನಿಸಿಪಾಲಿಟಿಯು ಠರಾಯಿಸಿದೆ.

— ಧಾರವಾಡದಲ್ಲಿ ಗವ್ಹರ್ನರರ ಆಗಮನದ ಸಮಯ ವಿಜಯಸಪ್ತಾಹದ ಕಾರ್ಯಕ್ರಮವಾಗ ನಡಿದೆ ಗವ್ಹರ್ನರರ ಪತ್ನಿಯರಾದ ದೊರೆಸಾನಿ ಪ್ರೈಬರ್ನರವರು ಈ ಸಪ್ತಾಹದ ಪ್ರಮುಖರು ದೊರೆಸಾನಿಯರಿಗೆ ಹೂಮಾಲೆ ಹಾಕಿ ಸತ್ಕರಿಸಬೇಕೆಂದು ಬಾಗಲಕೋಟೆಯ ಶೇಟ ಬಾಲಕೃಷ್ಣದಾಸ ವೆಂಕಟದಾಸರವರು ಪೇಚಾಡುತ್ತಿದ್ದಾರೆ. ದೊರೆಸಾನಿಯರಿಗೆ ಹೂಮಾಲೆ ಹಾಕಲಿಕ್ಕೆ ತಮಗೆ ಅಪ್ಪಣೆ ಕೊಟ್ಟಲ್ಲಿ ವಿಜಯಸಪ್ತಾಹ ಸಮಾರಂಭಕ್ಕೆ ರೂ ೩೦೦ ದೇಣಗಿಕೊಡುತ್ತೇವೆಂದು ಹೇಳಿದ್ದಾರಂತೆ ಧರ್ಮಕ್ಕೆಂಥ ಮರುಳು ?

— ರಂಗೂನ, ಬಂಕಾಕದೊಳಗಿನ ಅಕ್ಕಿಯ ವ್ಯಾಪಾರಿ ಕಂಪನಿಗಳೂ, ಲಂಡನಿನೊಳಗಿನ ಅಕ್ಕಿ ವ್ಯಾಪಾರ ಮಾಡುವ ಕಂಪನಿಗಳೂ ಒಕ್ಕಟ್ಟು ಮಾಡುವ ಆಲೋಚನೆಯಿಂದ ೨೫ ಸಾವಿರ ಪವನು ಭಂಡಲಿನ ಒಂದು ಹೊಸ ಕಂಪನಿಯನ್ನು ಇದೇ ಬರುವ ನವೆಂಬರ ೧ ನೇ ತಾರೀಖಿಗೆ ಲಂಡನಿನಲ್ಲಿ ಸ್ಥಾಪಿಸುವವರಿದ್ದಾರೆ. ಇದರಿಂದ ಅಕ್ಕಿಯ ದರ ಏರುವದಾಗಿ ಒಂದು ಅಭಿಪ್ರಾಯ.

— ಅಮೇರಿಕೆಯವರು ಬೆಳ್ಳಿಯನ್ನು ಖರೀದಿ ಮಾಡಹತ್ತಿದ್ದರಿಂದ ಬೆಳ್ಳಿಯ ದರ ಏರಲಾರಂಭಿಸಿದ. ತೊಲೆಗ ೧೦ ಆಣೆ ಕನಕ ದರವಾಗಿದೆ ಚೀನ ದೇಶದಲ್ಲಿ ಬೆಳ್ಳಿಯ ನಾಣ್ಯ, ಅದರಿಂದ ಅಲ್ಲಿಯ ಬೆಳ್ಳಿ ರಫ್ತಾಗಲಾರಂಭಿಸಿತು ಇದಕ್ಕೆ ತಡೆ ಹಾಕುವದಕ್ಕಾಗಿ ಚೀನ ಸರಕಾರವು ರಫ್ತಾಗುವ ಬೆಳ್ಳಿಯ ಮೇಲೆ ತೆರಿಗೆಯನ್ನಿಟ್ಟಿದ ಲಕ್ಷಾವಧಿ ತೊಲೆ ಚಿನ್ನ ರಫ್ತಾದಾಗ್ಯೂ ನಮ್ಮ ಹಿಂದುಸ್ಥಾನ ಸರಕಾರವು ಪ್ರತಿಬಂಧಗಳನ್ನೇ ಮಾಡಿಸಲಿಲ್ಲ. ವರ್ತಕರೂ, ಅರ್ಥಶಾಸ್ತ್ರಜ್ಞರೂ ಬೊಬ್ಬಿರಿದರೂ ಚಿನ್ನ ಹಾರಿದ್ದರಿಂದಲೇ ದೇಶಕ್ಕೆ ಕ್ಷೇಮವೆಂದು ಸರ್ಕಾರಿಪಕ್ಷಿಗಳು ಪ್ರತಿಪಾದಿಸಿದರು.

ಬನ್ನಿರಿ ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ !!

ಉತ್ತಮವಾದ ಕೆಲಸ ! ಯೋಗ್ಯವಾದ ಧಾರಣೆ !!

ಯು. ಶಿವಾ ಎಂಡ್ ಬ್ರದರ್ಸ,

ಒಟೊಮೊಬೈಲ ಇಂಜಿನಿಯರ್ಸ ಎಂಡ್ ಬೊಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶೆವರಲೆಟ್, ಬ್ಯೂಕ, ಕ್ರೈಸಲರ, ಸಿಟ್ರೊನ್, ಡೊಜ್, ಡಿಸೂಟೋ, ಪ್ಲೈಮೌಟ, ಎಸೆಕ್ಸ, ಎರಸ್ಕಿನ್, ಗ್ರಾಗೋರ್, ಫ್ಯಾಟ, ಜಿ ಎಮ್ ಸಿ., ಫೋರ್ಡ ಎ, ಫೋರ್ಡ ಎಮ್., ಹೆಪ್‍ಮೊಬೈಲ್, ಹಡಸನ್, ಮಿಸ್ಚೆಲ್, ಓವ್ಹರಲೆಂಡ್, ವ್ಹಿಪೆಟ್, ನಿಲೀಸ, ಸ್ಟುಡಬೇಕರ, ರಗ್ಬಿ, ಜ್ಯುಪಿಟೆರ, ರಿಯೋ, ಸಿಂಗರ ಮೊದಲಾದ ಯಾವತ್ತು ಮೋಟರ್‌ಕಾರಗಳ ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿಯ ದರದಿಂದಲೂ ಮಾಡಿಕೊಡುವೆವು ಬೇಕಾದ ಸ್ಪ್ರಿಂಗ ಬೋಲ್ಟ್‌ಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಇದಲ್ಲದೆ—

ಎಕ್ಸ್ ಕಟ್ಟಿ ಜವಾನಿಗೆ ಸುಲಭವಾಗಿ ನೀರು ಸೇಯುವ ಟಾಕಿಗಳು ಸಣ್ಣ-ದೊಡ್ಡ ಸೈಜಿನ ಗಾಡಿಗಳನ್ನು ತಯಾರಿಸಿ ಬೇಕಾದಲ್ಲಿ ಫಿಟಿಂಗ ಮಾಡಿಕೊಡುವೆವು, ಬೊಡಿಬಿಲ್ಡಿಂಗ, ಬೇಕಾದ ನಮೂನೆಯ, ಖುರ್ಚಿಗಳೂ, ಬಾಂಕುಗಳೂ, ಕೊಟ್‍ಗಳೂ ಮಾಡಿಕೊಡುವೆವು, ಒಡಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ

ॐ

'दशमूलारिष्ट.'
'ದಶಮೂಲಾರಿಷ್ಟ'

ಇದು ಒಮ್ಮೆ[illegible]ವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೆ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯ [illegible] ದುರ್ಲಭವಾಗಿರುವದರಿಂದ ಅದರ ಗುಣವು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. [illegible] ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ [illegible]ದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ [illegible] ಅಲ್ಲದೆ ಇಷ್ಟರೂ ಕೂಡ [illegible] ವೈದ್ಯರು [illegible] ತಿಳಿಸಿ [illegible] [illegible]

ಇದರಿಂದ ಅರುಚಿ, [illegible], ದಮ್ಮು, ಗುಲ್ಮ, (ವಾತ, ಕ್ಷಯ, [illegible]) ಕಾಮಿಲೆ ಪಾಂಡುರೋಗ, ರಕ್ತ ಸಂಬಂಧದ ಕಷ್ಟವ್ಯಾಧಿ, [illegible]ವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, [illegible]ರೋಗ, ಮೂತ್ರಕೃಚ್ಛ್ರ, ದಾಕಶ್ಲೇಷ್ಮ ಗರ್ಭಾಶಯ [illegible] ಮುಖ್ಯವಾಗಿ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದನಂತರ ಆಗುವಂಥ ವಿಕಾರಗಳಿಗೆ, ನರಗಳ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ [illegible] ಆದ ರೋಗಗಳಿಗೆ ಅತ್ಯಂತ ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದನಂತರ (ದಿನ ಎರಡಾದ ಮೇಲೆ) ಒಂದೊಂದು ಡೋಸು ನಂತರ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಬರಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೬ ಔಂಸ ಬಾಟ್ಲಿ ಒಕ್ಕೆ ರೂ ೧—೬—೦
,, ಬಾಟ್ಲಿ ಒಕ್ಕೆ ರೂ ೬—೧೨—೦
,, ಬಾಟ್ಲಿ ೧೨ಕ್ಕೆ ರೂ ೧೨—೦—೦

ಇದಲ್ಲದೆ ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ (ಉ ಕನ್ನಡ).

|| ಶ್ರೀರಾಮ ಪ್ರಸನ್ನ ||

ಡಾ| ಅಂಕಲೀಕರ ಎಮ್ ಬಿ, (ಎಮ್.ಡಿ.) ಸಂಕೇಶ್ವರ ಆಸ್ಪತ್ರಿ ಇವರು ದಮ್ಮು, ಕೆಮ್ಮು ಮೊದಲಾದ ಪುಪ್ಪುಸದ ರೋಗಗಳ ಮೇಲೆ ರಾಮಬಾಣ ಔಷಧವೆಂದು ಹೊಗಳಿದ—

(ಕೇವಲ ವನಸ್ಪತಿಗಳಿಂದಲೇ ತಯಾರಿಸಿದ)

ಕಲ್ಪತರು ಕಷಾಯ.

ಅಂದರೆ— ಮನೆತನದ ವೈದ್ಯ!

ದಮ್ಮು, ಶ್ವಾಸ, ಯಾವದೇ ತರದ ಕೆಮ್ಮು ಇವುಗಳ ಮೇಲೆ ರಾಮಬಾಣ ಔಷಧವು.

ಇದರ ಹೊರತು ಯಾವದೇ ತರದ ಜ್ವರ (ರೋಜಿ ಅಥವಾ ಸಾದಾ) ನಿಮೋನಿಯಾ (ವಾಯು ವಿಕಾರ), ಟಾಯಿಫಾಯಿಡ (ವಿಷಮಜ್ವರ), ಹೊಟ್ಟೆಶೂಲಿ, ಕಾಲರಾ, ಪ್ಲೇಗ ಇನ್‌ಫ್ಲುಎಂಝಾ ಸಂಧಿವಾತ, ಬಾಣಂತಿ ರೋಗ, (ಹೆರಿಗೆಯಾದ ಬಳಿಕ ಕಾಣಿಸಿಕೊಳ್ಳುವ ಬಾಣಂತಿ ರೋಗಗಳ ವೇಳೆ), ಚಿಕ್ಕ ಹುಡುಗರ ಅಪಸ್ಮಾರ, ಅಗ್ನಿಮಾಂದ್ಯ, ಮಲ [illegible] ಮೈನೋವು ಗಂಟಲು ನೋವು ಮತ್ತು ಗಡಾಯಿ ಜನರಿಗೆ ಧ್ವನಿ [illegible], ದಸ್ತುಹೊರಳಿಕೆ, ಅತಿಸಾರ, ತಂಬಾಕು ತಲೆಗೇರೋಣ, ವಾಂತಿಯಾಗೋಣ, ಯಾವದೇ ಕಾರಣದಿಂದ ಉಂಟಾದ ದುರ್ಬಲತೆ ಲಿವ್ಹರ (ಪ್ಲೀಹ), ಹೊಟ್ಟೆಯೊಳಗಿನ ಗಂಟು [illegible] ಹೊಟ್ಟೆಯೊಳಗಿನ ಯಾವದೇ ವಿಕಾರ, ಧಾತುಕ್ಷೀಣತೆ, ಸ್ವಪ್ನಾವಸ್ಥೆ, ಎಲ್ಲ ತರದ ಕಡಿತ, ಸ್ತ್ರೀಯರ ಮುಟ್ಟಿನ ದೋಷ ಮೊದಲಾದ ಎಲ್ಲಾ ರೋಗಗಳ ಮೇಲೆ [illegible] ಉಪಯುಕ್ತ ಔಷಧವಿರುತ್ತದೆ. ಈ ಔಷಧವು ತಕ್ಕೊಳ್ಳಲಿಕ್ಕೆ ಸ್ವಾದಿಷ್ಟವಿದ್ದು [illegible] ಚಿಕ್ಕ ಹುಡುಗರು ಕೂಡ ಪ್ರೀತಿಯಿಂದ ತಕ್ಕೊಳ್ಳುವರು. ಇದು ತಕ್ಕೊಳ್ಳುವದರಿಂದ ರಕ್ತಶುದ್ಧಿ ಹಾಗೂ ರಕ್ತವೃದ್ಧಿಯಾಗಿ ವೀರ್ಯವೃದ್ಧಿಯಾಗುವದು ಮತ್ತು [illegible] ಆದ ಕಳೆಯನ್ನು ಕಳೆದು ಮನಸ್ಸು ಆನಂದಿತ ಮಾಡು[illegible] [illegible]

ಈ ಔಷಧದ [illegible] ವರ್ಷಗಳಿಂದ ದಮ್ಮಿನ ರೋಗದಿಂದ ನರಳುತ್ತಿರುವ ರೋಗಿಗಳು [illegible] ಪಡೆದಿರುವರು. ಈಗ ದಮ್ಮು, ಶ್ವಾಸ ಮೊದಲಾದ ಅಸಾಧ್ಯ ರೋಗದ ಮೇಲೆ ಔಷಧವಿಲ್ಲ [illegible] ಕಾರಣವಿಲ್ಲದಾಗಿದೆ. ಈ ಔಷಧ ಉಪಯೋಗ ಮಾಡಿಕೊಂಡು ರೋಗಮುಕ್ತರಾಗಿರಿ. ಈ ವರೆಗೆ ಸಾವಿರಾರು ಜನರು ರೋಗಮುಕ್ತರಾಗಿರುವರು. ನಿರಾಶೆಯಿಂದ [illegible] ಜನರಿಗೆ ಇದರ ಮಾಹಿತಿಯಾಗಿ ಗುಣಪಡೆಯಬೇಕೆಂದು ಈ ಔಷಧದ ಜಾಹೀರಾತು ಪ್ರಕಟಿಸುತ್ತಿರುವೆವು. ಇದನ್ನು ಹಳ್ಳಿಗರು ಯಾರೂ [illegible] ಸಂಗ್ರಹದಲ್ಲಿ ಇಟ್ಟುಕೊಳ್ಳತಕ್ಕದ್ದು.

ನೆಗಡಿ, ಜ್ವರ, ಕೆಮ್ಮು [illegible] ಬಿಡುವಿಲ್ಲದ ಜನರು ನಿಷ್ಕಾಳಜಿಯಿಂದ [illegible] ಮೇಲೆ [illegible] ಜ್ವರವು ನಿಮೋನಿಯಾಗುವ ಸಂಭವವಿರುತ್ತದೆ. ಆ ಕಾರಣ ಶುರುವಾದ ಕೂಡಲೆ ಈ ಕಷಾಯ ಸೇವನೆಯಿಂದ ಮುಂದಿನ ತ್ರಾಸು ತಪ್ಪುವದು. ಇದು ಬಾಣಂತಿ ಮತ್ತು ಕೂಸು ಇವರಿಗೆ ಮೊದಲನೇ ದಿವಸದಿಂದ [illegible] ಮೂರು ತಿಂಗಳು ತನಕ ಚಾಲು ಇಡುವದು. ಹುಡುಗರಿಗೆ ಜೀವ ಔಷಧವು [illegible] ಚಿಕ್ಕವರು ಕೂಡ ಸೇವಿಸಬಹುದು. ಗರ್ಭಿಣಿ ಹೆಂಗಸರಿಗೆ [illegible] ಅನುಪಾನ ಪತ್ರಿಕೆಯು ಬಾಟಲಿಯ ಸಂಗಡ ಸಿಗುತ್ತದೆ.

ಲಕ್ಷ್ಮೀಬಾಯಿ ಕೊಲ್ಹಾಪುರಕರ ಸಂಸ್ಥಾನ ಬಡೋದಾ ಅಪ್ಪಣೆ [illegible] ತಮ್ಮ 'ಕಲ್ಪತರು ಕಷಾಯ' ಔಷಧವನ್ನು ನನ್ನ ಧ್ವನಿ [illegible] ಹೊತ್ತಿನಲ್ಲಿ ತಕ್ಕೊಳ್ಳುವ ಪ್ರಸಂಗ ಬಿದ್ದು [illegible] ಔಷಧ ತಕ್ಕೊಂಡ ಅರ್ಧ ತಾಸಿನಲ್ಲಿಯೇ ಮೊದಲಿನಂತೆಯೇ ಸುಸ್ವರದಿಂದ ಹಾಡಲಿಕ್ಕೆ ಹಿಂದಿನ ಧ್ವನಿ ಬಿದ್ದ ಕಲ್ಪನೆಯೇ ಉಳಿಯಲಿಲ್ಲ ತಾ ೧—೫—೧೯೪೩

ಶ್ರೀಯುತ ಪು. ಹ. [illegible]ರಸೇಕರ, ವಾ.[illegible] ಜಿಲ್ಲಾ [illegible] ತಾ ೧—೬—೪೪ ತಮ್ಮ "ಕಲ್ಪತರು ಕಷಾಯ"ವು ದಮ್ಮಿನ ಮೇಲೆ ಒಳ್ಳೇ ಉಪಯುಕ್ತ ನನ್ನ ಪತ್ನಿಗೆ ದಮ್ಮು ಇರುವದು ಅದಕ್ಕಾಗಿ ಅವರಿಗೆ ಕಷಾಯದ ಬಾಟ್ಲಿಗಳನ್ನು ರೇಲ್ವೆ ಪಾರ್ಸಲಿನಿಂದ ಕಳಿಸಿಕೊಡಿರಿ.

ಕಿಮ್ಮತ್ತು — ೧ರತ್ತಲ ಬಾಟ್ಲಿಗೆ ರೂ ೨॥ ಅರ್ಧ ರತ್ತಲ ಬಾಟ್ಲಿಗೆ ರೂ ೧॥, ೧ ರತ್ತಲ ಬಾಟ್ಲಿ[illegible] ಆಣೆ

ನಟರತ್ನ ಬಾಲಗಂಧರ್ವ, ಲಕ್ಷ್ಮೀಬಾಯಿ ಕೊಲ್ಹಾಪುರಕರ ಮೊದಲಾದ ಅನೇಕ ಮಹನೀಯರು ಉಪಯೋಗಿಸಿ ಪ್ರಶಂಸಾ ಪತ್ರಗಳನ್ನು ಕೊಟ್ಟಿರುತ್ತಾರೆ.

ಔಷಧೀ ದಂತಮಂಜನ

ಇದರಿಂದ ಹಲ್ಲುಗಳ ವಿವಿಧ ವಿಕಾರಗಳು ಕೀವು, ರಕ್ತ ಹಲ್ಲು-ವಸಡುಗಳ ರೋಗ [illegible] ವಾಸಿಯಾಗುತ್ತವೆ. ಈ ಔಷಧವನ್ನು ದಿನಾ ಒಂದಾವರ್ತಿ ಯಾ ಎರಡಾವರ್ತಿ ಹಲ್ಲುಗಳಿಗೆ ತಿಕ್ಕುವದಲ್ಲದೆ ನಾಲಿಗೆಗೂ ತಿಕ್ಕಬೇಕು. ಬೆಲೆ ಆಣೆ ೨

ಇದಲ್ಲದೆ, ಥಂಡಿ ಜ್ವರ, (ಮಲೇರಿಯಾ) ದ ಮೇಲೆ ಮಿಶ್ರಣ, ಶಕ್ತಿವರ್ಧಕ ಸವಿ ಔಷಧ, ಜಂತುನಾಶಕ ಕಷಾಯ, ಕಾಲೆರಾ (ಮಹಾಮಾರಿ) ಸ್ಪೆಸಿಫಿಕ್, ಸಂಧಿವಾತಕ್ಕೆ ಸ್ಪೆಶಲ್ ಔಷಧಗಳು ನಮ್ಮಲ್ಲಿ ಸಿಗುತ್ತವೆ.

ಶ್ರೀರಾಮ ಆಯುರ್ವೇದಿಕ ಫಾರ್ಮಸಿ. ಗಡಹಿಂಗ್ಲಜ. (ಕೊಲ್ಹಾಪುರ ಸಂ)

☞ ಕುಮಟೆಯಲ್ಲಿ ಸಿಗುವ ಪತ್ತೆ — ಕಲಘಟಗಿಕರ ದುಕಾನ, ಕುಮಟಾ

[illegible] ಪಾಂಡುರಂಗ ಕಾನಡೆ [illegible] (ಸಂಪಾದಕ) ಇವರು ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B 1270.

Monday, 29th October 1934

ವರ್ಷ ೧೭

ಪತ್ರದ ವರ್ಗಣಿ

ಕುಮುಟೆಯಲ್ಲಿ ಆಗಾವು
ರೂಪಾಯಿ 2-1-0
ಮನಿಯಾರ್ಡರಿನಿಂದ
ರೂ 3-1-0
ವ್ಹಿ. ಪಿ. ಆ ಸವೆಚ್ಚ ಸೇರಿ
ರೂಪಾಯಿ 3-4-0
ಗಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಸಂಚಿಕೆ ೧೯

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ 1-0-0
ಆ ನಂತ್ರ ಪ್ರತಿಸಾಲಿಗೆ 0-2-0
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—(ಕುಮುಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೯ ಮಾಹೆ ಅಕ್ಟೋಬರ ಸನ್ ೧೯೩೪ ನೇ ಇಸವಿ.)—

ಪ್ರೆಸಿಡೆನ್ಸಿ ವಿಮಾ ಕಂಪನಿಯ

ಅಪೂರ್ವ ಸವಲತ್ತು !!

ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಸೂರನ್ಸ ಕಂಪನಿ. ಲಿ. ಹೆಡ್ ಆಫೀಸ — ಗಿರ್ಗಾಂವ ಬಿಲ್ಡಿಂಗ, ಮುಂಬಯಿ

ಇದರ ಆಡಳಿತೆ ಸಂಪೂರ್ಣವಾಗಿ ಹಿಂದೀ ಜನರ ಕೈಯಲ್ಲಿದೆ! ಇದರ ದರ ತೆಯ ಬೇರೆ ಎಲ್ಲ ಕಂಪನಿಗಿಂತಲೂ ಕಡಿಮೆ. ಈ ಕಂಪನಿಯು ಮಾದಲಿನ ವ್ಹಾಲ್ಯುಏಶನ್ ರಿಪೋರ್ಟಿನಲ್ಲಿಯೇ ಲಾಭ ತೋರಿಸಿ ಲೋಕಪ್ರಿಯವಾಗಿದೆ. ಇದಕ್ಕೆ ಸರಕಾರ ಯಶಸ್ವಿ ದಿನೇ ದಿನೇ ಹೆಚ್ಚುತ್ತಲಿದೆ.

ಸರಕಾರ ಮನ್ನಣೆಯುಳ್ಳ ಎಕ್ಚ್ಯುಏರಿಯವರು ಈ ಕಂಪನಿಯ ಲೆಕ್ಕ ತಪಾಸಣೆ ಮಾಡುತ್ತಾರೆ. ಆದರಿಂದ ಇಡೀ ಹಿಂದುಸ್ಥಾನದಲ್ಲಿ ಈ ಕಂಪನಿಯ ಭದ್ರತೆ ಖ್ಯಾತಿಗೊಂಡಿದೆ. ಎಕ್ಚ್ಯುಏರಿಗಳಾದ ಶ್ರೀ| ಜಿ. ಎಸ್. ಮರಾಠೆಯವರು ತಮ್ಮ ರಿಪೋರ್ಟಿನಲ್ಲಿ ಒಡೆಯುವದೇನಂದರೆ — ವ್ಹಾಲ್ಯುಏಶನ್ ಮಾಡಿ ಬೋನಸ್ ಹಂಚುವ ವ್ಯವಸ್ಥೆ ಇರುವ ಕಂಪನಿ ಇಡೀ ಹಿಂದುಸ್ಥಾನದಲ್ಲಿ ಇದೊಂದೇ! ಹೊರತು ಬೇರೆ ಕಂಪನಿಯಿಲ್ಲ.

ಈ ಕಂಪನಿಯಲ್ಲಿ ಎಲ್ಲ ತರದ ವಿಮೆ ಇಳಿಸುವ ಏರ್ಪಾಟಿದೆ. ಡಾಕ್ಟರರ ತಪಾಸಣೆಯ ನಿರ್ಬಂಧವಿಲ್ಲ. ಪ್ರತಿ ತಿಂಗಳಿಗೆ ೬ ಆಣೆ, ೧ ರೂಪಾಯಿ, ೨ ರೂಪಾಯಿಗಳ ತನಕ ತುಂಬುವ ಅನುಕೂಲತೆಯಿದೆ. ಶಿರ ಒಡವರು ಸಹ ವಿಮೆ ಇಳಿಸಬಹುದು.

ಉತ್ತರ ಕನ್ನಡ ಜಿಲ್ಹೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಸಂಸ್ಥೆಗೆ ಏಜಂಟರು ಬೇಕು. ಏಜನ್ಸಿಯ ನಿಯಮಗಳ ಬಗ್ಗೆ ಹೆಡ್ ಆಫೀಸಿಗೆ ಯಾ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಎಮ್. ಪಿ. ರೇವಣಕರ ಹಳದೀಪುರ,
ಉತ್ತರ ಕಾನಡಾ ಜಿಲ್ಹೆಯ ಆರ್ಗನೈಝರರು
ಪೋ**ಕುಮುಟಾ** (ಉತ್ತರ ಕನ್ನಡ)

ನಿಮ್ಮ ಕಣ್ಣಿಗೆ (Corn) ಮದ್ದು

ಹತ್ತು ಗಿರಬಿಲ್ಲೆ ಸ್ಟಾಂಪು ಕಳಿಸಿದರೆ ಕಳಿಸುತ್ತೇವೆ. ವ್ಹಿ. ಪಿ. ಯಿಂದ ಖರ್ಚ ಹೆಚ್ಚು.

ಕಲಬಾಗ ಗಂಗಾಧರ ಎಂಡ್ ಸನ್ಸ
ಕುಮುಟಾ. (ಕಾರವಾರ)

The Canara Industrial & Banking Syndicate, Ltd

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೆಂಕಿಂಗ ಸಿಂಡಿಕೇಟ, ಲಿಮಿಟೆಡ್

Head Office — **Mukund Nivas, UDIPI**

Branches — Udipi, Bangalore City, Mangalore, [illegible] Car Street, Brahmavar, Honnavar, Karwar, Hubli, Belgaum, Sirsi, Kumta, Hungarkatta, Coondapur & Ankola. Other Agencies

Figures as at 30th September, 1934.

Authorised Capital (ಅಧಿಕೃತ ಮೂಲಧನ)	Rs 5,00,000
Subscribed Capital (ಚಂದಾ ಅರ್ಪಿಸಿದ್ದು)	Rs 1,31,700
Paid up (ತೆತ್ತು ಬಂದದ್ದು)	61,700
Reserve Fund (ರಿಝರ್ವ ಫಂಡ್)	30,500
Total Deposits (ಒಟ್ಟು ಠೇವಣಾತಿಗಳು)	11,16,693-3-7

☞ Deposits are received at favourable rates of interest.
Bills collected, drafts issued and every description of Banking business transacted.

For further particulars please apply to —

Kumta,
13—10—1934

T. RANGA PAI,
Agent at KUMTA

ಜಮ್ಮಿ ವೆಂಕಟರಮಣಯ್ಯನವರ

ಲಿವರ್ ಔಷಧ.

— ಮಕ್ಕಳ ಭಯಂಕರವಾದ (ಲಿವರ್ ಕಂಪ್ಲೇಂಟ್), ಯಕೃತ್ತಿನ ಮಾಂದ್ಯತೆ, ಯಕೃತ್ತಿನಲ್ಲಿ ರಕ್ತ ಶೇಖರಿಸುವಿಕೆ ಮತ್ತು ಜ್ವರಗಡ್ಡೆ ಮುಂತಾದ ಮಕ್ಕಳ ರೋಗದ ಮೇಲೆ ಅತ್ಯಾಶ್ಚರ್ಯವಾಗಿ ಗುಣವನ್ನುಂಟುಮಾಡುವ ಸಿದ್ಧೌಷಧ.

— ಮಕ್ಕಳ ಪ್ರಾಣವನ್ನು ಕಾಯುವ "ಸಂಜೀವನಿ" ಯೆಂದು ಪ್ರಸಿದ್ಧಿ ಪಡೆದಿದೆ!

— ಮಹಾ ಮಹಾ ಡಾಕ್ಟರರೂ, ಪಂಡಿತರೂ ಇದನ್ನು ಅತಿ ಉತ್ಕೃಷ್ಟವಾದುದೆಂದು ಹೊಗಳಿದ್ದಾರೆ!!

ಹೆಚ್ಚಿನ ಮಾಹಿತಿಗೆ —

ಜಮ್ಮಿ ವೆಂಕಟರಮಣಯ್ಯ, ಮೈಲಾಪುರ, ಮದ್ರಾಸ.

ಉತ್ತರ ಕರ್ನಾಟಕದ ಸೋಲ ಏಜಂಟ —

ಡಿ. ಎಸ್. ಕೋಳಿವಾಡಕರ್, ಕುಮುಟಾ. (ಉ. ಕ.)

ಕೊಂಗ್ರೆಸ ಸುದ್ದಿಗಳು.

ಉಬ್ಬಳ್ಳಿ ಗೆಪ್ಪೂರ ನಗರದ ವರ್ಣನೆ.

[illegible]

ಖಾದಿ ಪ್ರದರ್ಶನ.

[illegible]

ರಾಷ್ಟ್ರಧ್ವಜಾರೋಹಣ

[illegible]

ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ನಿವೃತ್ತಿ ತೆಗೆದುಕೊಂಡರು.

ಕೊಂಗ್ರೆಸ ಚರ್ಚೆ.

ಕೊಂಗ್ರೆಸಿನೊಳಗಿಂದ ಮಹಾತ್ಮರು ನಿವೃತ್ತರಾದರು

ಶನಿವಾರ ತಾ ೧೯ನೇಯಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳದ ಗುಪ್ತ ಸಭೆಗಳು ಮಹಾತ್ಮರ ಕುಟೀರದಲ್ಲಿ ಸೇರಿ ವಿಷಯನಿರ್ಧಾರಕ ಸಭೆಯ ಮುಂದ ಮಂಡಿಸತಕ್ಕ ಠರಾವುಗಳ ಚರ್ಚೆ ನಡೆಯಿತು ಮಹಾತ್ಮರ ನಿವೃತ್ತಿಯೇ ಮುಖ್ಯ ಚರ್ಚೆಯ ವಿಷಯವಾಗಿತ್ತು ಬಾಬು ರಾಜೇಂದ್ರ ಪ್ರಸಾದ, ಡಾ| ಅನ್ಸಾರಿ ಮೊದಲಾದವರೆಲ್ಲರೂ ಮಹಾತ್ಮರ ಮನವೊಲಿಸಲು ಪರಮಾವಧಿಯ ಪ್ರಯತ್ನ ಮಾಡಿದರು ಕೊನೆಯ ಪ್ರಯತ್ನ ಮಾಡುವದಕ್ಕಾಗಿ ಮದ್ರಾಸದಿಂದ ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೂ ತಗತ್ಯದ ತಂತಿ ಕಳುಹಿ ಕರಿಸಿಕೊಳ್ಳಲಾಯಿತು ಮಹಾತ್ಮರು ಎಲ್ಲರೊಡನ ತಮ್ಮ ಅನಾನುಕೂಲತೆಗಳನ್ನು ಅರುಹಿ ಇದರೊಳಗಿಂದ ತಮಗೆ ಬಿಡುಗಡೆ ಮಾಡಬೇಕಾಗಿ ಬಿನ್ನೈಸಿಕೊಳ್ಳುತ್ತಿದ್ದರು ಮಹಾತ್ಮರ ಪ್ರಾಸಾದಿಕ ತರ್ಕದ ಮುಂದೆ ಯಾರದೂ ಕಾಟ ನಡೆಯಲಿಲ್ಲ ಮಹಾತ್ಮರು ಕೊಂಗ್ರೆಸಿನಿಂದ ನಿವೃತ್ತರಾಗದಂತೆ ಮನವೊಲಿಸಹೋದವರು ಮಹಾತ್ಮರಿಗ ಸಮ್ಮತಿ ಕೊಟ್ಟು ಹಿಂತಿರುಗುತ್ತಿದ್ದರು ಮಹಾತ್ಮರು ಸೂಚಿಸಿದ ಕೊಂಗ್ರೆಸ ಘಟನೆಗಳ ಕುರಿತು ಕಾರ್ಯಕಾರಿ ಮಂಡಳದವರು ಉಪಸೂಚನೆಗಳನ್ನು ಸೇರಿಸಿಕೊಂಡು ವಿಚಾರಿಸಿದರು ಮಂಗಳವಾರ ತಾ ೨೩ನೇಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ ಸೇರಿತು ಮಧ್ಯಾಹ್ನ ಎಲ್ಲಿ ನೋಡಿದಲ್ಲಿ ಉತ್ಸಾಹವೇ ಉತ್ಸಾಹ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗ ೩೫೦ ಮಂದಿ ಸಭಾಸದರು ಕೆಲವು ಪ್ರಾಂತಗಳಲ್ಲಿ ಇನ್ನೂ ಇಲೆಕ್ಷನಿನ ಗಡಿಬಿಡಿ ನಡೆದದ್ದರಿಂದ ಕೆಲ ಸಭಾಸದರಿಗೆ ಬರಲಾಗಲಿಲ್ಲ. ಆದಾಗ್ಯೂ ಸುಮಾರು ೩೫೦ ಸಭಾಸದರು ಹಾಜರಿದ್ದರು ವ್ಯಾಸಪೀಠದ ಮೇಲೆ ಅಧ್ಯಕ್ಷರಾದ ಸರದಾರ ಪಟೇಲರೂ ಮಹಾತ್ಮರೂ, ಹೊಸ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರೂ, ಡಾ| ಅನ್ಸಾರಿ, ಡಾ| ಸಯ್ಯದ ಮಹಮೂದ, ಶ್ರೀ| ನರಿಮಾನ, ಭುಲಾಭಾಯಿ ದೇಸಾಯಿ, ಪಂಡಿತ ಮದನ ಮೋಹನ ಮಾಲವೀಯ, ಎಂ| ಅಣೆ ಪ್ರಭೃತಿ ಮಹನೀಯರೂ ಆರೂಢರಾಗಿದ್ದರು ವ್ಯಾಸಪೀಠದ ಇದಿರಿಗೆ ದೀರ್ಘ ವರ್ತುಲಾಕಾರದಿಂದ ಸಭಾಸದರು ಕೂತುಕೊಂಡಿದ್ದರು ವೃತ್ತಪತ್ರಿಕೆ-ವರ್ತಮಾನಪತ್ರಿಕೆಗಳ ಪ್ರತಿನಿಧಿಗಳು ವ್ಯಾಸಪೀಠದ ಎಡ-ಬಲ ಕೂತುಕೊಂಡಿದ್ದರು ಸುಮಾರು ೨೦೦ ಮಂದಿ ಪ್ರೇಕ್ಷಕರಿದ್ದರು. ಸ್ವಯಂಸೇವಕರು ವ್ಯವಸ್ಥೆಯನ್ನಿಡಲು ಸಜ್ಜಾಗಿ ನಿಂತಿದ್ದರು ಪಾಟಣ ಪಟ್ಟಣದಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ವೃತ್ತಾಂತದ ವಾಚನವಾದ ಬಳಿಕ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ವಿಷಯನಿರ್ಧಾರಕ ಮಂಡಳವಾಗಿ ಪರಿಣಮಿಸಿತು ಆಗ ೨ ಬಡಿದ ೧೦ ಮಿನಿಟಾಗಿತ್ತು. ಸರದಾರ ವಲ್ಲಭಭಾಯಿಯವರು ಎದ್ದುನಿಂತು ನುಡಿದದ್ದೇನಂದರೆ— "೬ ವರ್ಷಗಳ ನಂತರ ನಾವು ಸಭೆ ಸೇರಿದ್ದೇವೆ ರಾಷ್ಟ್ರೀಯ ಸಭೆಯ ಕಾರ್ಯವನ್ನು ನಡೆಸುವಲ್ಲಿ ನನಗ ನೆರವಾದ ಯಾವತ್ತೂ ಮಹನೀಯರಿಗೆ ನಾನು ಕೃತಜ್ಞನಿದ್ದೇನೆ ಇಂದಿಗೆ ಪಂಡಿತ ಜವಾಹಿರಲಾಲ ನಹರೂರವರು ಹಾಜರಿಲ್ಲ, ಇದೇ ನನಗೆ ವ್ಯಸನವಾಗಿದೆ, ಅವರಿದ್ದಿದ್ದರೆ ನಮಗೆ ಎಷ್ಟೋ ಸಹಾಯವಾಗುತ್ತಿದ್ದಿತು ಇಂದಿಗೆ ನಾನು ನಿಯೋಜಿತ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರಿಗೆ ಅಧಿಕಾರಾರ್ಪಣ ಮಾಡುತ್ತೇನೆ ತಾವೆಲ್ಲರೂ ಅವರಿಗೆ ನೆರವಾಗಬೇಕು." ಹೀಗ ಸರದಾರರು ಬಿನ್ನೈಸಿಕೊಂಡು, ಬಾಬು ರಾಜೇಂದ್ರ ಪ್ರಸಾದರಿಗೆ ಪುಷ್ಪಮಾಲೆಯನ್ನರ್ಪಿಸಿ ಅಧ್ಯಕ್ಷಾಧಿಕಾರವನ್ನರ್ಪಿಸಿದರು ಬಾಬು ರಾಜೇಂದ್ರಪ್ರಸಾದರವರು ಅಧ್ಯಕ್ಷಸ್ಥಾನಾಪನ್ನರಾಗಿ ನುಡಿದದ್ದೇನಂದರೆ -"ಈ ಮಾನವನ್ನು ಪ್ರೀತಿಯಿಂದ ನನಗರ್ಪಿಸಿದ್ದಕ್ಕಾಗಿ ನಾನು ನಿಮಗೆಲ್ಲರಿಗೆ ಕೃತಜ್ಞನಾಗಿದ್ದೇನೆ ನಾನು ಅಲ್ಪನು, ಅಶಕ್ತನು ಕಾರ್ಯವು ದೊಡ್ಡದಿದೆ. ನೀವು ಪ್ರೀತಿಯಿಂದ ನನಗರ್ಪಿಸಿದ ಅಧಿಕಾರಕ್ಕೆ ತಕ್ಕದ್ದಾಗಿ ನನ್ನ ವರ್ತಮಾನ ರಾಷ್ಟ್ರಕಾರ್ಯ ನಡೆಯಲು ನೀವೆಲ್ಲರೂ ತತ್ಪರತೆಯಿಂದ ನೆರವಾಗುವಿರೆಂದು ನಾನು ತುಂಬಾ ನಂಬಿಕೊಂಡಿದ್ದೇನೆ ನಮ್ಮ ರಾಷ್ಟ್ರ-ಮುಗಿಲು ಮತಭೇದದ ಮೋಡಗಳಿಂದ ಮುಸುಕಿಕೊಂಡಿದೆ ನೀವೆಲ್ಲರೂ ನನಗ ನೆರವಾಗಬೇಕಾಗಿ ವಿನಂತಿ ನಿಮ್ಮ ಸಹಕಾರದ ಮೇಲೆ ನಂಬಿಗೆಯನ್ನಿಟ್ಟು ನಾನೀ ಅಧಿಕಾರ ಕೈಕೊಂಡಿದ್ದೇನೆ ಈಗ ಮಹಾತ್ಮರು ರಾಷ್ಟ್ರೀಯ ಸಭೆಯಿಂದ ನಿವೃತ್ತರಾಗುವ ಕಾರಣಗಳನ್ನು ನಿವೇದಿಸುವರು ಅವನ್ನು ತಾವು ಪರಾಂಬರಿಸಬೇಕು " ಹೀಗೆ ನುಡಿದ ಬಳಿಕ, ಮಹಾತ್ಮರು ಧ್ವನಿವರ್ಧಕ ಯಂತ್ರದ ಮುಂದ ಕುಳಿತು ನುಡಿದದ್ದೇನಂದರೆ — "ನಾನು ಸರ್ವಾಧಿಕಾರಿಯಾಗಿದ್ದೆ, ಇನ್ನೊಂದು ತಾಸು ಸರ್ವಾಧಿಕಾರ ನಡೆಸುತ್ತೇನೆ ಈ ೧ ತಾಸಿನೊಳಗೆ ನನ್ನ ನಿವೃತ್ತಿಯ ಕುರಿತು ಯಾವತ್ತೂ ಚರ್ಚೆ ಮುಗಿಯತಕ್ಕದ್ದು" ಹೀಗೆ ಹೇಳಿ ಮಹಾತ್ಮರು ಮೊದಲು ಹಿಂದೀ ಭಾಷೆಯಲ್ಲಿಯೂ, ೬ ಮಾಳಿ ಪ್ರತಿನಿಧಿಗಳ ಆಗ್ರಹದ ಮೇರೆಗ ಇಂಗ್ಲಿಷಿನಲ್ಲಿಯೂ ೨೫ ಮಿನಿಟುಗಳ ತನಕ ಸಮಾಧಾನದಿಂದಲೂ, ಸ್ಥೈರ್ಯದಿಂದಲೂ ಮಾತನಾಡಿದರು ಮಹಾತ್ಮರು ನುಡಿದದ್ದೇನಂದರೆ — "ಈಗಿನ ಸ್ಥಿತಿಯಲ್ಲಿ ನಾನು ರಾಷ್ಟ್ರೀಯ ಸಭೆಯೊಳಗಿಂದ ನಿವೃತ್ತನಾಗುವದೇ ಹಿತಕರವು ನಾನು ರಾಷ್ಟ್ರೀಯ ಸಭೆಗಾಗಿ ಯಾವ ಗಳಿಗೆ ಮಡಿಯುತ್ತಿರುವೆನು. ನಾನು ದೀರ್ಘ ಆಲೋಚನೆಯಿಂದ ಕೈಕೊಂಡ ನಿರ್ಧಾರವನ್ನು ಬದಲಿಸಲಾರೆ. ರಾಷ್ಟ್ರೀಯ ಸಭೆಯ ಸ್ವಾಭಾವಿಕ ಬೆಳವಣಿಗೆಗೆ ನನ್ನಿಂದ ಪ್ರತಿಬಂಧವಾಗುತ್ತದಾಗಿ ನನ್ನ ಭಾವನೆ ಇತ್ತ ಕೆಲ ವರ್ಷಗಳಲ್ಲಿ ರಾಷ್ಟ್ರೀಯ ಸಭೆಯವರು ನನ್ನ ಅನುಜ್ಞೆಗಳನ್ನು ಕಣ್ಮುಚ್ಚಿ ಪಾಲಿಸುತ್ತಿದ್ದರೆ, ಈ ಸ್ಥಿತಿ ಹಿತಕರವಲ್ಲ ರಾಷ್ಟ್ರೀಯ ಸಭೆಯಲ್ಲಿ ನನ್ನಿಂದಾದಷ್ಟು ಕೆಲಸ ಮಾಡಿ ರಾಷ್ಟ್ರಕಾರ್ಯವನ್ನು ನಾನು ಮುಂದುವರಿಸಿದ್ದೇನೆ. ಇನ್ನು ನಾನು ಮುಂದುವರಿಸಲಾರೆ ನಾನು ನಿರ್ಬಲನೆಂದು ಹೊರಹೋಗುವದಿಲ್ಲ. ರಾಷ್ಟ್ರೀಯ ಸಭೆಯವರು ಸ್ವತಃ ವಿಚಾರ ಮಾಡಿ ಕಾರ್ಯಪ್ರವೃತ್ತರಾಗಬೇಕೆಂದು ನಾನು ಹೊರಹೋಗುತ್ತಿದ್ದೇನೆ ಈ ತನಕ ನೀವೆಲ್ಲರೂ ದಯೆಯಿಂದ ನನ್ನನ್ನು ಹಿಂಬಾಲಿಸಿದ್ದೀರಿ ಬೇಕಾದಾಗ ನಾನು ಹಿಂತಿರುಗಿ ಬರುವೆನು ನಾನು ನೂತನ ಪಕ್ಷವನ್ನು ಏರ್ಪಡಿಸಹೋಗುವದಿಲ್ಲ ೬೫ನೇ ವರ್ಷದಷ್ಟು ಇಳಿಪ್ರಾಯದಲ್ಲಿ ಹೊಸ ಪಕ್ಷವನ್ನು ನಿರ್ಮಿಸಿ ನಾನೇನು ಮಾಡಲಿ? ನೀವೆಲ್ಲರೂ ನನಗೆ ನಿವೃತ್ತನಾಗಲು ಅಪ್ಪಣೆ ಕೊಡಬೇಕು ವಿಷಯನಿರ್ಧಾರಕ ಸಭೆಯವರ ಆಲೋಚನೆ ಪಡೆಯುವದಕ್ಕಾಗಿ ನಾನೀ ಮಾತನ್ನು ನಿಮ್ಮ ಮುಂದೆ ಪ್ರಸ್ತಾವಿಸಿದ್ದೇನೆ ಕಾರ್ಯಕಾರಿ ಮಂಡಳದವರೊಡನೆ ನಾನು ಆಲೋಚನೆ ಮಾಡಿರುತ್ತೇನೆ. ಇದೊಂದು ಆಪತ್ತೆಂದು ಕೆಲವರು ಉದ್ಗರಿಸಿದರು, ಇದರಿಂದ ಕ್ಷೇಮವಿರುವದಾಗಿ ಇನ್ನು ಕೆಲವರು ಅಭಿಪ್ರಾಯಪಟ್ಟರು. ನಾನು ಸೂಚಿಸಿದ ಸೂಚನೆಗಳನ್ನು ಮನ್ನಿಸಿ ರಾಷ್ಟ್ರೀಯ ಸಭೆಯ ಘಟನೆಯಲ್ಲಿ ಬದಲಾವಣೆ ಮಾಡಿದಾಗ್ಯೂ ನಾನು ರಾಷ್ಟ್ರೀಯ ಸಭೆಯಲ್ಲಿ ಉಳಿಯಲಾರೆ ನಾವು ಈ ತನಕ ಸತ್ಯಾಗ್ರಹದ ಚೇಷ್ಟೆ ಮಾಡುತ್ತಿದ್ದೇವೆ ಹಿಂದು-ಮುಸಲ್ಮಾನರೊಳಗ ಐಕ್ಯಮತ್ಯವಾದನಕ ಸತ್ಯಾಗ್ರಹದಿಂದ ಕಾರ್ಯಭಾಗವಾಗದು ಆಚಾರ-ವಿಚಾರಗಳಿಂದ ನಾವು ಅಹಿಂಸಾತ್ಮಕತೆಯನ್ನು ತಳೆದಿದ್ದರೆ ರಾಜಶಾಸನಗಳಿಂದ ನಮಗೇನೂ ಬಾಧೆಯಾಗುತ್ತಿದ್ದಿಲ್ಲ. ಖಾನ ಅಬ್ದುಲ್ ಗಫೂರಖಾನರವರು ನನಗ ಭೆಟ್ಟಿಯಾದೊಡನೆ ಹೇಳಿದ್ದೇನಂದರೆ — 'ರಾಷ್ಟ್ರೀಯ ಸಭೆಗೆ ನಿಮ್ಮಿಂದ ಪ್ರಯೋಜನವಿಲ್ಲ, ನೀವು ನಿವೃತ್ತರಾಗುವದು ಲೇಸು' ಈ ಉಪದೇಶವನ್ನೇ ನಾನು ಅನುಸರಿಸಿದ್ದೇನೆ '

ಹೀಗೆ ಮಹಾತ್ಮರ ಭಾಷಣವಾದ ಬಳಿಕ, ಕೆಲವರು ಮಹಾತ್ಮರಿಗೆ ರಾಷ್ಟ್ರೀಯ ಸಭೆಯಲ್ಲುಳಿದು ಮಾರ್ಗದರ್ಶಕರಾಗಲು ಆಗ್ರಹ ಮಾಡಿದರು. 'ನೀವು ಸೇನಾಪತಿಗಳಾಗಿದ್ದಿರಿ, ಯುದ್ಧ ನಡೆದಿರುವಾಗ ನೀವು ನಿವೃತ್ತರಾಗುವ ಬಗೆಹೇಗ?" ಎಂದು ಒಬ್ಬರು ಕೇಳಿದರು ನಿಯಮಿತ ೧ ಘಂಟೆ ಮುಗಿಯಿತು. ಪಂ| ಮದನಮೋಹನ ಮಾಲವೀಯರು ಎದ್ದು ನಿಂತರು ನಿಯಮಿತ ಅವಧಿ ತೀರಿದಾಗ್ಯೂ ಮಾಲವೀಯರಿಗೆ ಒಲ್ಲೆನ್ನುವ ಶಕ್ತಿ ಬಾರದ ಮೇಲಿಲ್ಲವಾಗಿ ಮಹಾತ್ಮರು ಉದ್ಗರಿಸಿ ಪಂಡಿತ ಮಾಲವೀಯರಿಗೆ ಸತ್ಕರಿಸಿದ ಬಳಿಕ, ಮಾಲವೀಯರವರು ಸುಲಲಿತವಾದ ಹಿಂದೀ ಭಾಷೆಯಲ್ಲಿ ಸುಮಾರು ಅರ್ಧ ಘಂಟೆಯ ತನಕ ಅಂತಃಕರಣಪೂರ್ವಕವಾಗಿ ಮಹಾತ್ಮರಿಗ ರಾಷ್ಟ್ರೀಯ ಸಭೆಯನ್ನು ಬಿಟ್ಟುಹೋಗಬಾರದಾಗಿ ಬಿನ್ನೈಸಿಕೊಂಡರು

ಪಂಡಿತ ಮಾಲವೀಯರವರು ರಾಷ್ಟ್ರೀಯ ಸಭೆಯ ವಿರಹತಾಪವನ್ನೇ ಮಹಾತ್ಮರೆಡೆಗೆ ಅರುಹಿಕೊಂಡರು "ರಾಷ್ಟ್ರವು ಈಗ ಸ್ವಾತಂತ್ರ್ಯ ಸಂಗ್ರಾಮದ ನಡು-ನೀರಿನಲ್ಲಿ ನಿಂತಿದೆ, ಇಂಥ ಇಕ್ಕಟ್ಟಿನಲ್ಲಿ ತಾವು ನಿವೃತ್ತರಾಗಕೂಡದು, ಅನುಯಾಯಿಗಳಲ್ಲಿ ತಪ್ಪು-ತಪ್ಪುಗಳಿರಬಹುದು. ಆದರೆ, ಈ ಪ್ರಕಾರ ರಾಷ್ಟ್ರೀಯ ಸಭೆಯು ಗಂಡಾಂತರದಲ್ಲಿರುವಾಗ ಅದನ್ನು ತೊರೆಯಲು ಗಾಂಧಿಜಿಯವರಿಗ ಅಧಿಕಾರವೇ ಇಲ್ಲ ಇತ್ತಲಾಗಿ ಹಿಂದುಸ್ಥಾನದಲ್ಲಿ ನಡೆದ ಯಾವತ್ತೂ ರಾಜಕೀಯ ಜಾಗೃತಿಯ ಶ್ರೇಯಸ್ಸು ಮಹಾತ್ಮರದೇ ಹಿಂದೀಯರು ಇನ್ನು ಮುಂದುವರಿಯಲು ಕಾರಣರಾದರೂ ಗಾಂಧೀಜಿಯವರು ರಾಷ್ಟ್ರೀಯ ಸಭೆಯನ್ನು ಬಿಟ್ಟು ಹಿಡಿಯಹೋದಲ್ಲಿ ಪ್ರೀತಿಯಿಂದಲೂ, ಭಕ್ತಿಯಿಂದಲೂ ಅವರಿಗೆ ಹಿಂಬಾಲಿಸಿ ರಾಷ್ಟ್ರೀಯ ಸಭೆಯವರು ಎಳತರುವರು. ನಾವು ತಪ್ಪಿಕೊಂಡಿದ್ದರೆ ಹೇಳಿ ತಿದ್ದಿಕೊಳ್ಳುವೆವು, ನಮ್ಮನ್ನು ಬಿಟ್ಟು ಹೋಗಬೇಡಿರಿ ರಾಷ್ಟ್ರೀಯ ಸಭೆಯ ಹೊರಬಿಂತು ಮಾಡತಕ್ಕ

ಮಹಾತ್ಮರೆಡೆ ಪಂಡಿತ ಮಾಲವೀಯರ ಆಗ್ರಹದ, ಪ್ರೀತಿಯ ಪ್ರಾರ್ಥನೆ.

ಕಾರ್ಯವನ್ನು ರಾಷ್ಟ್ರೀಯಸಭೆಯು ಒಳನಿಂತು ರಾಷ್ಟ್ರೀಯ ಸಭೆಯವರಿಗೆ ಮಾರ್ಗದರ್ಶಕರಾಗಿ ಮಾಡಿರಿ ರಾಷ್ಟ್ರೀಯ ಸಭೆಯನ್ನು ತ್ಯಜಿಸುವ ಕಲ್ಪನೆ ನಿಮ್ಮ ಮನಸ್ಸಿಗೆ ಸೂಚಿಸಿತೆಂದು ನನಗೆ ತಿಳಿಯಿತು. ಮಹಾತ್ಮರು ಒಮ್ಮೆ ಮನೋನಿರ್ಧಾರ ಮಾಡಿದ ಮೇಲೆ ಅದನ್ನು ಅವರು ಎಷ್ಟಕ್ಕೂ ತ್ಯಜಿಸರೆಂದು ನನಗೆ ಗೊತ್ತಿದೆ. ಆದಾಗ್ಯೂ ರಾಷ್ಟ್ರೀಯ ಸಭೆಯವರು ರಾಷ್ಟ್ರಕಾರ್ಯಕ್ಕಾಗಿ ಪರಮಾವಧಿಯ ಲೋಕಸಂಗ್ರಹ ಮಾಡುವರಾಗಿ ನಾನು ಎಲ್ಲರ ಪರವಾಗಿ ಅಭಿವಚನವನ್ನೀಯುತ್ತೇನೆ. ತಮ್ಮಷ್ಟು ರಾಷ್ಟ್ರೀಯ ಸಭೆಯವರು ಎಂದಿಗೂ ನಿರ್ಮಲರಾಗಲಾರರು; ಹಾಗೆ ತಾವು ಅಪೇಕ್ಷೆ ಮಾಡುವದೂ ಉಚಿತವಾದದ್ದಲ್ಲ. ಲೋಕಶಾಹಿಯ ಪ್ರವರ್ತಕರು ತಾವು, ಬಹುಮತದ ನಿರ್ಣಯವನ್ನು ಮನ್ನಿಸಲು ತಾವು ಒಪ್ಪಬೇಕು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಸಭೆಯವರು ಅಹಿಂಸೆಯಿಂದ ಚ್ಯುತರಾಗಲಿಲ್ಲ, ಹಿಂಸಾಚಾರಕ್ಕೆ ಪ್ರವೃತ್ತರಾಗಲಿಲ್ಲ. ಪ್ರತಿಪಕ್ಷದವರು ಹಿಂಸೆ ಮಾಡುತ್ತಿದ್ದರು. ಎಲ್ಲಿಯೂ ಅಹಿಂಸಾ ನಿರ್ಬಂಧದ ರಾಷ್ಟ್ರೀಯ ಸಭೆಯವರಲ್ಲಿ ಈ ಕುರಿತು ಮತಭೇದವಿದೆ. ಆದಾಗ್ಯೂ ಸಮಸ್ತ ರಾಷ್ಟ್ರೀಯ ಸಭೆಯವರು ಒಮ್ಮನಸ್ಸಿನಿಂದ ರಾಷ್ಟ್ರಕಾರ್ಯ ಮಾಡಿದರು. ಮಹಾತ್ಮರು ಪುನರಾಲೋಚನೆ ಮಾಡಬೇಕು. ನಿಮ್ಮ ತ್ಯಾಗದಷ್ಟು ರಾಷ್ಟ್ರೀಯ ಸಭೆಯವರು ಮಹಾತ್ಮರಿಗೆ ಯಾವತ್ತೂ ಸಹಾಯ ನೀಡುವರಾಗಿ ನಾನು ಅಭಿವಚನವೀಯುತ್ತೇನೆ. ತಮ್ಮ ಮೇಲೆ ನನಗೆ ಪ್ರೀತಿಯಿದೆ, ಪೂಜ್ಯಭಾವವಿದೆ. ತಾವು ಈ ಸಮಯ ರಾಷ್ಟ್ರೀಯ ಸಭೆಯನ್ನು ಎಷ್ಟಕ್ಕೂ ತೊರೆದು ಹೋಗಕೂಡದಾಗಿ ಆಗ್ರಹದಿಂದ ಅರಿಕೆ ಮಾಡಿಕೊಳ್ಳುತ್ತೇನೆ" ಪಂಡಿತ ಮಾಲವೀಯರವರ ಭಾಷಣವಾದ ಬಳಿಕ, ಮಹಾತ್ಮರು ಉತ್ತರ ಕೊಟ್ಟದ್ದೇನಂದರೆ

"ಗೌರವಾರ್ಹ ತಪಸ್ವಿಯಾದ ಪಂಡಿತ ಮಾಲವೀಯರವರಿಗೆ ನಾನು ಜ್ಯೇಷ್ಠ ಸಹೋದರನೆಂದು ಎಣಿಸುತ್ತ ಬಂದಿದ್ದೇನೆ. ಅವರು ಹೇಳಿದ ಮಾತುಗಳು ನನಗೆ ಅಪ್ಪಣೆಗಳಾಗಿವೆ. ಆದರೆ, ಈಗಿನ ಪರಿಸ್ಥಿತಿಯಲ್ಲಿ ನಾನು ರಾಷ್ಟ್ರೀಯ ಸಭೆಯಲ್ಲಿ ಉಳಿಯುವದರಿಂದ ರಾಷ್ಟ್ರೀಯ ಸಭೆಯನ್ನು ಬಲಪಡಿಸುವದಕ್ಕಾಗಿ ನಾನು ಹೊರಹೋಗುತ್ತಿದ್ದೇನೆ. ರಾಷ್ಟ್ರೀಯ ಸಭೆಯವರಿಗೆ ನನ್ನ ಅಭಿಪ್ರಾಯವನ್ನು ಮನಗಾಣಿಸುವ ಶಕ್ತಿ ಈಗ ನನ್ನಲ್ಲಿಲ್ಲ. ರಾಷ್ಟ್ರೀಯ ಸಭೆಯ ಹಿತಕ್ಕಾಗಿಯೇ ನಾನು ಹೊರಹೋಗುತ್ತಿರುವಾಗ ನೀವು ನನಗೇಕೆ ಅಪ್ಪಣೆ ಕೊಡಬಾರದು? ನಾನು ಅಲಿಪ್ತನಾದರೆ ನಿಮಗೆ ಲಾಭವಿದೆ. ರಾಷ್ಟ್ರೀಯ ಸಭೆಗೆ ಸಹಾಯ ಮಾಡಲು ನಾನು ಒಗ್ಗಾಲಿನ ಮೇಲೆ ಸಿದ್ಧನಿದ್ದೇನೆ. ರಾಷ್ಟ್ರೀಯ ಸಭೆಯ ಕಿಂಕರನು ನಾನು, ಹೊರಹೋದಾಗ್ಯೂ ಕಿಂಕರನೇ. ರಾಷ್ಟ್ರೀಯ ಸಭೆಗೆ ನನ್ನ ಸೇವೆಯು ಅವಶ್ಯವೆಂದು ಕಂಡೊಡನೆ ನಾನು ಪುನಃ ರಾಷ್ಟ್ರೀಯ ಸಭೆಯಲ್ಲಿ ಬಂದು ಸೇರುವೆನು ಈ ಬಗ್ಗೆ ಸಂದೇಹವಿಲ್ಲ." ಹೀಗೆ ಮಹಾತ್ಮರು ಹೇಳಿದ ಬಳಿಕ, "೬ ತಿಂಗಳ ಅವಧಿ ಕೊಡಿ, ಮುಂದೇನು ಮಾಡಬೇಕೆಂದು ನಾವೆಲ್ಲರೂ ಕೂಡಿ ವಿಚಾರ ಮಾಡುತ್ತೇವೆ. ತಮ್ಮ ನಿವೃತ್ತಿಯಿಂದ ರಾಷ್ಟ್ರೀಯ ಸಭೆಯ ಶತ್ರುಗಳಿಗೆ ಆನಂದವಾಗುವದು, ಮಿತ್ರರಿಗೆ ದುಃಖವಾಗುವದು" ಹೀಗೆ ಮಾಲವೀಯರವರು ಪುನಃ ಬಿನ್ನೈಸಿಕೊಂಡರು. ಮಹಾತ್ಮರು ಪುನಃ ಉತ್ತರ ಕೊಟ್ಟದ್ದೇನಂದರೆ – "ನಾನು ಸೈನಿಕನು, ಯುದ್ಧಕೌಶಲ್ಯನಾಗಿದ್ದೆ. ಆದರೆ, ಈಗ ನಾನು ದುರ್ಬಲನಾಗಿದ್ದೇನೆ. ಮನಸ್ಸು ಕೆಲಸ ಮಾಡಲೊಪ್ಪುವದಿಲ್ಲ. ಅನೇಕ ರಾಷ್ಟ್ರೀಯ ಕಾರ್ಯಕರ್ತರು ನನ್ನೆಡೆ ಬಂದು ವಿವಿಧ ಪ್ರಶ್ನೆಗಳ ಮೇಲೆ ನನ್ನ ಸಲಹೆ ಕೇಳಿದರು. ನನ್ನಿಂದ ಅವರಿಗೆ ತಕ್ಕ ಮಾರ್ಗ-ಸಲಹೆ ಕೊಡಲಾಗಲಿಲ್ಲ. ಬಾರಡೋಲಿಯ ಪ್ರಶ್ನೆಯ ಮೇಲೆ ಗವ್ಹರ್ನರ ಜನರಲ್‌ರಾದ ರೀಡಿಂಗ ದೊರೆಗಳಿಗೆ ಆಹ್ವಾನ ಕೊಟ್ಟು ಇದಿರಾದ ವೀರ ಭಟನು ನಾನು. ಅಂಥವನು ರಣಾಂಗಣದಿಂದ ಪಲಾಯನ ಮಾಡುವದುಂಟೇ? ದೇವರು ನನಗೂ, ರಾಷ್ಟ್ರೀಯ ಸಭೆಯವರಿಗೂ ಅವಶ್ಯವಿದ್ದ ಸಾಮರ್ಥ್ಯವನ್ನು ಅನುಗ್ರಹಿಸಿ ಪುನಃ ನಮ್ಮೆಲ್ಲರ ಸಂಯೋಗ ಮಾಡಲಿ" ಹೀಗೆ ಮಹಾತ್ಮರು ಉದ್ಗರಿಸಿ ಸ್ತಬ್ಧರಾದರು. "ರಾಷ್ಟ್ರೀಯ ಸಭೆಯು ಕೆಡಕು ಸಂಸ್ಥೆಯಾದರೆ, ಮಹಾತ್ಮರಿಗೆ ಉಳಿಯಲು ಅನಾನುಕೂಲವಾಗುವಷ್ಟು ಪತಿತವಾದರೆ ನಾವೇಕೆ ಉಳಿಯಬೇಕು?" ಹೀಗೆ ಆನಂದವಾಣಿಯ ಪಾತ್ರರ ಪಟವರ್ಧನರವರು ನುಡಿದರು. ಮಹಾತ್ಮರು ಸನ್ಯಸ್ತರು, ಹೊರತು ಪಾತಕನಾತರಲ್ಲ. ಇಲ್ಲಿಯೇ ಮಹಾತ್ಮರು ಮನಸ್ಸಿನಿಂದ ಅಲಿಪ್ತರಾಗಿಬಿಟ್ಟರು. ಒಳಯುಕ್ತಿದ್ದ ಕೈಲಿಟಿಯ ಮೇರೆ ನಡೆಯುತ್ತ ಉಳಿದ ಮಹಾತ್ಮರು ಕಾರ್ಯಕಾರಿ ಮಂಡಳದ ಸಭಾಸದರಿದ್ದು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಗೆ ತಮ್ಮ ನಿವೃತ್ತಿಯ ಕುರಿತು ಚರ್ಚೆ ಮಾಡಲು ಸಾಕಷ್ಟು ಅವಕಾಶ ಕೊಡದೆ ನಿವೃತ್ತರಾದದ್ದು ಅಯೋಗ್ಯವಾಯಿತೆಂದೂ, ಮಹಾತ್ಮರು ರಾಷ್ಟ್ರೀಯ ಸಭೆಯಲ್ಲಿ ಉಳಿಯಬೇಕೆಂದೂ ಸಿಂಧ ಪ್ರಾಂತದ ಶ್ರೀ। ಸಿಧ್ವಾರವರು ವಿಷಯನಿರ್ಧಾರಕ ಸಭೆಯಲ್ಲಿ ರೀತಿಯಂತೆ ಠರಾವು ಸೂಚಿಸುವವರಿದ್ದಾರೆ.

ಈ ಪ್ರಕಾರ ಮಹಾತ್ಮರ ನಿವೃತ್ತಿಯ ಪ್ರಸ್ತಾಪ ಮುಗಿದ ಬಳಿಕ, ರೀತಿಯಂತೆ ವಿಷಯ ನಿರ್ಧಾರಕ ಸಭೆಯ ಕಾರ್ಯಕ್ಕೆ ಪ್ರಾರಂಭವಾಯಿತು.

ಕೌನ್ಸಿಲು ಪ್ರವೇಶಕ್ಕೆ ಸಮ್ಮತಿ

ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರ ಅಪ್ಪಣೆ ಮೇರೆಗೆ ಡಾ। ಅನ್ಸಾರಿಯವರು ಮೊದಲನೇ ಠರಾವನ್ನು ಸೂಚಿಸಿದರು. ೧೯೩೪ ನೇ ಇಸ್ವಿ ಮೇ ತಿಂಗಳಲ್ಲಿ ಕಾಂಗ್ರೆಸ ಕಾರ್ಯಕಾರಿ ಮಂಡಳದವರೂ, ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರೂ ಕೈಕೊಂಡ ನಿರ್ಣಯಗಳನ್ನು ರಾಷ್ಟ್ರೀಯ ಸಭೆಯು ಈ ಮೂಲಕ ಮನ್ನಿಸುತ್ತದೆ, ಪಾರ್ಲಿಮೆಂಟರಿ ಬೋರ್ಡನ್ನು ಘಟಿಸಿ ಕೈಕೊಂಡ ಧೋರಣವನ್ನೂ ಕಾರ್ಯಕ್ರಮವನ್ನೂ ಈ ಸಭೆಯು ಮನ್ನಿಸುತ್ತದೆ. ವಿಧಾಯಕ ಕಾರ್ಯಕ್ರಮಕ್ಕೂ, ಸ್ವದೇಶಿ ನಿರ್ಣಯಕ್ಕೂ, ಪರದೇಶಸ್ಥ ಹಿಂದೀಯರ ಅವಸ್ಥೆಯ ಕುರಿತು ಕೈಕೊಂಡ ಧೋರಣವನ್ನೂ ಈ ಸಭೆಯು ಮನ್ನಿಸುತ್ತದೆ. ಈ ಠರಾವನ್ನು ಸೂಚಿಸುವಾಗ ಡಾ। ಅನ್ಸಾರಿಯವರು ನುಡಿದದ್ದೇನಂದರೆ - "ಈ ಹಿಂದೆ ಕೈಕೊಂಡ ನಿರ್ಣಯಗಳ ಮೇಲೆ ಮತಭೇದವಿರುವ ಸಂಗತಿ ನಾ ಬಲ್ಲೆ. ವಿಷಯನಿರ್ಧಾರಕ ಸಭೆಯವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಆಕ್ಷೇಪವಿಲ್ಲ. ಆದರೆ ಬಹುಮತದಿಂದ ಒಮ್ಮೆ ನಿರ್ಣಯವಾದ ಬಳಿಕ ಭಿನ್ನಾಭಿಪ್ರಾಯದವರು ರಾಷ್ಟ್ರೀಯ ಸಭೆಗೆ ವಿರೋಧವಾಗಿ ನಡೆಯಕೂಡದು. ರಾಷ್ಟ್ರೀಯ ಸಭೆಯು ಲೋಕಶಾಹೀ ಸಂಸ್ಥೆಯಿದೆ, ಅಂದರೆ ಬಹುಮತದ ಅಭಿಪ್ರಾಯವನ್ನು ಪ್ರತಿ ಒಬ್ಬರು ನಿಷ್ಠೆಯಿಂದ ನಡಿಸಲು ಬದ್ಧರಿದ್ದಾರೆ. ಈ ಹಿಂದೆ ಭಿನ್ನಾಭಿಪ್ರಾಯವಾದಾಗ್ಯೂ ನಾವೆಲ್ಲರೂ ಒಮ್ಮನಸ್ಸಿನಿಂದ ದುಡಿದಿರುತ್ತೇವೆ. ಪಂ। ಜವಾಹಿರಲಾಲರಿಗೆ ಗಾಂಧಿ-ಇರ್ವಿನ್ ಒಡಂಬಡಿಕೆಯು ಸಮ್ಮತವಿದ್ದಿಲ್ಲ, ಆದರೆ ಕಾರ್ಯಕಾರಿ ಮಂಡಳದಲ್ಲಿ ಬಹುಮತದಿಂದ ಮಂಜೂರಾದ ಬಳಿಕ ಅದನ್ನು ಅವರು ಪಾಲಿಸಿ ಅದರಂತೆ ನಡಕೊಂಡಿದ್ದಾರೆ" ಹೀಗೆ ನುಡಿದ ಬಳಿಕ, ಶ್ರೀ। ಖುರ್ಶೇದ ನರಿಮಾನರವರು ಅನುಮೋದನವನ್ನಿತ್ತರು "ಮಾಲವೀಯ ಪಕ್ಷದವರಿಗೆ ತಮ್ಮ ಅಂಬೋಣವನ್ನು ರಾಷ್ಟ್ರೀಯ ಸಭೆಯ ಮುಂದೆ ಮಂಡಿಸಿ ರಾಷ್ಟ್ರಾಭಿಪ್ರಾಯ ಪಡೆಯಲು ಸಹಜವಾಗಿ ಸಂಧಿ ದೊರೆತಿದೆ. ಇಲ್ಲಿಯ ನಿರ್ಣಯದಂತೆ ಅವರು ವರ್ತಿಸುವರಾಗಿ ನಾನು ನಂಬಿದ್ದೇನೆ" ಹೀಗೆ ಶ್ರೀ। ನರಿಮಾನರ ಭಾಷಣವಾದ ಬಳಿಕ, ಉಪಹಾರಕ್ಕಾಗಿ ಸಭೆಯು ಅರ್ಧತಾಸು ತಹಕೂಬ ಆಯಿತು. ಉಪಹಾರದ ತರುವಾಯ ಪುನಃ ಸಭೆ ಸೇರಿತು. ಮಹಾತ್ಮರು ಈ ಸಭೆಗೆ ಬರಲಿಲ್ಲ. ಬಾಬು ಸಂಪೂರ್ಣಾನಂದರು ಪಾರ್ಲಿಮೆಂಟರಿ ಬೋರ್ಡಿಗೆ ಸಂಬಂಧಪಟ್ಟ ಉಲ್ಲೇಖಗಳನ್ನೂ, ಸಮಾಜಸತ್ತಾವಾದಿಗಳ ಕುರಿತು ಕೈಕೊಂಡ ನಿರ್ಣಯಗಳನ್ನೂ, ಸಂಪೂರ್ಣ ಸ್ವಾತಂತ್ರ್ಯದ ನಿರ್ಧಾರವನ್ನೂ ಮೇಲ್ಕಾಣಿಸಿದ ಠರಾವಿನೊಳಗಿಂದ ಲೋಪ ಮಾಡಬೇಕಾಗಿ ಉಪಸೂಚನೆ ತಂದರು. ಶ್ರೀ। ನರೇಂದ್ರ ದೇವರವರು ಅನುಮೋದನೆ ಕೊಟ್ಟು ಕಾಂಗ್ರೆಸ ಕಾರ್ಯಕಾರಿ ಮಂಡಳದ ಕಾರಸ್ಥಾನಗಳು ಅನುಚಿತವಾದವೆಂದು ಹೇಳಿದರು. ಒಕ್ಕಲಿಗರ ಸಂಘಗಳನ್ನೇರ್ಪಡಿಸಿ ಅವರಿಗೆ ಕವಾಯಿತು ಕಲಿಸಬೇಕಾಗಿ ಶ್ರೀ। ಕಾಸಿಟಿಕರರ ಸೂಚನೆ. ಪಂಡಿತ ಮಾಲವೀಯರವರು ಜಾತಿನಿರ್ಣಯವನ್ನು ಕಾರ್ಯಕಾರಿ ಮಂಡಳವು ತಿರಸ್ಕರಿಸುತ್ತದಾಗಿ ಠರಾವಿನಲ್ಲಿ ಉಲ್ಲೇಖವಿರಬೇಕಾಗಿ ಸೂಚಿಸಿದರು. ಜಾತಿನಿರ್ಣಯಕ್ಕೆ ಹಿಂದೂ-ಶೀಖರು ವಿರೋಧ ಬಗೆಯುವದರಿಂದ ಕಾರ್ಯಕಾರಿ ಮಂಡಳದವರು ಸ್ಪಷ್ಟವಾಗಿ ಅದನ್ನು ತಿರಸ್ಕರಿಸಬೇಕೆಂದು ಪಂಡಿತ ಮಾಲವೀಯರವರ ಆಗ್ರಹ. ಇದಕ್ಕೆ ಶ್ರೀ। ಮಾಧವರಾವ ಅಣೆಯವರ ಅನುಮೋದನ. ಕರಾಚಿಯ ಶ್ರೀ। ಸಿಧ್ವಾರವರೂ, ಪಂಜಾಬದ ಶ್ರೀ। ಚತ್ತರಜಿಯವರೂ ಹೊಸ ಪಕ್ಷವನ್ನು ನಿರ್ಮಿಸಿದ ಬಗ್ಗೆ ಮಾಲವೀಯರವರಿಗೆ ನಿವೇದಿಸಿದರು. ಚರ್ಚೆಯಾದ ಬಳಿಕ ಮೂಲ ಸೂಚಕರಾದ ಡಾ। ಅನ್ಸಾರಿಯವರು ಉತ್ತರ ಕೊಟ್ಟದ್ದೇನಂದರೆ.— "ಪಾರ್ಲಿಮೆಂಟರಿ ಬೋರ್ಡು ಯಾವಾಗಲೂ ರಾಷ್ಟ್ರೀಯ ಸಭೆಯ ಅಧೀನವಿದೆ. ರಾಷ್ಟ್ರೀಯ ಸಭೆಯ ಆಜ್ಞೆಗಳನ್ನು ಅದು ಶಿರಸಾ ಮನ್ನಿಸುವದು. ಪ್ರಜಾಪ್ರತಿನಿಧಿ ಸಭೆಯ ಏರ್ಪಾಟಿಗಾಗಿ ನಾವು ದೇಶತುಂಬ ಲೋಕಮತಸಂಗ್ರಹ ಮಾಡುವಾ, ಪ್ರಜಾಪ್ರತಿನಿಧಿ ಸಭೆಯ ಏರ್ಪಾಟಾದರೆ ಅದರಿಂದ ನಮಗೆ ಬೇಕಾದ ಸ್ವರೂಪದ ರಾಜ್ಯಘಟನೆಯನ್ನು ತಯಾರಿಸಿಕೊಳ್ಳಬರುತ್ತದೆ. ಜಾತಿನಿರ್ಣಯದ ತಿಪ್ಪುಗಾಟಕ್ಕಾಗಿ ನಾವು ಪರಸ್ಪರ ಮೋರೆ ನೋಡುವದು ಬೇಡ"

ಈ ಪ್ರಕಾರ ಚರ್ಚೆಯಾದ ಬಳಿಕ ಉಪಸೂಚನೆಗಳ ಮೇಲೆ ಮತ ಎಣಿಕೆ ಆಯಿತು. ಯಾವತ್ತೂ ಉಪಸೂಚನೆಗಳು ರದ್ದಾದವು. ಮಾಲವೀಯರವರ ಉಪಸೂಚನೆಗೆ ಬರೇ ೧೫ ಮತಗಳು ದೊರೆತವು, ಪ್ರತಿ

ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘ; ಸತ್ಯಾಗ್ರಹಿಗಳ ಅಭಿನಂದನೆ.

ಕೂಲ ೧೧೪ ಮತಗಳು. ಡಾ| ಅನ್ಸಾರಿಯವರ ಮೂಲ ಸೂಚನೆಗೆ ೯೫ ಅನುಕೂಲ, ೩೩ ಪ್ರತಿಕೂಲ, ಹೀಗೆ ಮತ ವಿಭಾಗವಾಗಿ ಡಾ| ಅನ್ಸಾರಿಯವರ ಮೂಲ ಠರಾವು ಮನ್ನಿಸೋಣಾಯಿತು. ಇಷ್ಟಕ್ಕೆ ೯ ಘಂಟೆ ರಾತ್ರಿ ಆದ್ದರಿಂದ ಅಂದಿನ ಸಭೆಯು ವಿಸರ್ಜನ ಹೊಂದಿತು.

ಕೈಗಾರಿಕೆ ಸಂಘದ ಏರ್ಪಾಟು.

ಬುಧವಾರ ತಾ ೨೪ನೇ ದಿನ ಮಧ್ಯಾಹ್ನ ಪುನಃ ವಿಷಯ ನಿರ್ಧಾರಕ ಸಭೆ ಸೇರಿತು. ಅಧ್ಯಕ್ಷರ ಬಲಕ್ಕೆ ಮಹಾತ್ಮರು ನೂಲುತ್ತಿದ್ದರು. ಎಡಪಾರ್ಶ್ವದಲ್ಲಿ ಸರದಾರ ವಲ್ಲಭಭಾಯಿಯವರು ವಿರಾಜಮಾನರಾಗಿದ್ದರು. ಸೌ| ಕಮಲಾ ನೆಹರೂರವರಿಗೆ ಆರೋಗ್ಯಪ್ರಾಪ್ತಿಯಾಗಲೆಂಬ ಠರಾವನ್ನು ಅಧ್ಯಕ್ಷರು ಮೊಟ್ಟಮೊದಲು ಮನ್ನಿಸಿಕೊಂಡ ಬಳಿಕ, ಮಹಾತ್ಮರು ಅಖಿಲ ಭಾರತೀಯ ಕೈಗಾರಿಕೆ ಸಂಘದ ಠರಾವನ್ನು ಸೂಚಿಸಿದರು "ದೇಶತುಂಬ ಸ್ವದೇಶಿ ಸಂಸ್ಥೆಗಳು ಎಲ್ಲೆಲ್ಲಿ ಹಬ್ಬಿಕೊಂಡಿವೆ. ಇವುಗಳಿಂದ ಜನರಿಗೆ ಯಾವುದು ಸ್ವದೇಶಿ, ಯಾವುದು ಪರದೇಶಿ ಎಂಬುದು ತಿಳಿಯಲು ಕಠಿಣವಾಗಿದೆ. ಗ್ರಾಮ ಸಂಘಟನೆಯೂ, ಗ್ರಾಮೋದ್ಧಾರವೂ ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮದಲ್ಲಿ ಸೇರುತ್ತವೆ, [illegible]ನ್ಯಾಯವಾದ, ಮೃತಹೊಂದಿದ ಗ್ರಾಮಗಳೊಳಗಿನ ಕೈಗಾರಿಕೆಗಳನ್ನು [illegible] ಉದ್ಧರಿಸಲು ರಾಷ್ಟ್ರೀಯ ಸಭೆಯು ಒಪ್ಪಿದೆ, ರಾಷ್ಟ್ರೀಯ ಸಭೆಯ ರಾಜಕಾರಣ ಕಾರ್ಯಕ್ರಮದ ವಿರಹಿತವಾಗಿ ಇದನ್ನು ನಡಿಸಲು ಶಕ್ಯವಿದೆ, ಅದರಿಂದ ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘವನ್ನು ಗಾಂಧೀಜಿಯವರ ಸಲಹೆಯ ಮೇರೆಗೆ ಘಟಿಸಲು ರಾಷ್ಟ್ರೀಯ ಸಭೆಯು ಈ ಮೂಲಕ ಶ್ರೀ| ಜೇ. ಸಿ. ಕುಮಾರಪ್ಪನವರಿಗೆ ಅಧಿಕಾರ ಕೊಡುತ್ತದೆ. ಗ್ರಾಮ ಕೈಗಾರಿಕೆಗಳ ಪರಿಶೋಧ ಮಾಡಿ ಈ ಸಂಘವು ಅವುಗಳನ್ನು ಉತ್ತೇಜಿಸಿ ಗ್ರಾಮದ ನೈತಿಕ, ಶಾರೀರಿಕ ಉನ್ನತಿಯನ್ನು ಸಾಧಿಸುವದು." ಈ ಠರಾವನ್ನು ಸೂಚಿಸುವಾಗ ಮಹಾತ್ಮರು ನುಡಿದದ್ದೇನಂದರೆ — "ಅಖಿಲ ಭರತಖಂಡದಲ್ಲಿ ನಾನು ಸಂಚರಿಸಿದಾಗ ಹಳ್ಳಿಗರೊಡನೆ ಪರಿಚಯವಾಯಿತು. ಅವರ ಮುಖ್ಯ ರೋಗ [illegible]ತನ. ಅವರು ತೀರ ದರಿದ್ರರು. ಒಕ್ಕಲತನಕ್ಕೆ ಅವಶ್ಯವಿಲ್ಲದ ಬಿಡುವು ಪ್ರಾಪ್ತಿಸಿ ಅವರಿಗೆ ಬೇರೆ ಮಾಡಲು ಅನುಕೂಲವಿಲ್ಲ. ಹಿಂದುಸ್ಥಾನವು ಇಷ್ಟು ಎಂದೂ ಬಡಬಿದ್ದಿದ್ದಿಲ್ಲ. ಕೋಟ್ಯವಧಿ ರೂಪಾಯಿಗಳ ಚಿನ್ನ ಪರದೇಶಗಮನ ಮಾಡಿತು. ಒಕ್ಕಲಿಗರು ತಮ್ಮ ಕಡೆಯಿದ್ದ ಚಿನ್ನವನ್ನು ಮಾರಿಬಿಟ್ಟರು. ಉಪಾಯಕಷ್ಟ ಮಾಡಲು ಜನರಿಗೆ ಬೇಸರ. ಇದರಿಂದ ಬಡತನ ಹಿಗ್ಗಿದೆ. ಕೈರಾಟಿಯಿಂದ ೨೦ ಲಕ್ಷ ೩೦ ಸಾವಿರ ಹಿಂದೂ-ಮುಸಲ್ಮಾನ ಸ್ತ್ರೀಯರು ನಿರ್ವಾಹ ಮಾಡುತ್ತಾರೆ. ೫-೬ ಸಾವಿರ ಗ್ರಾಮಗಳಲ್ಲಿ ಖಾದಿಯ ಕೇಂದ್ರಗಳಿವೆ. ಗ್ರಾಮಗಳಲ್ಲಿ ಮುಂಚೆ ಕುರಿ ಎಡಿಗಳಿದ್ದರು, ಈಗ ಕೈರಾಟಿ ಮಾಡುವಲ್ಲಿ ಎಡಿಗರು ದೊರಕುವದು ದುರ್ಲಭವಾಗಿದೆ. ಇವಕ್ಕೆ ಹೊರಗಿನವರು ಪಟ್ಟಣಿಗರು ಈ ಬಡ ಹಳ್ಳಿಗಳನ್ನು ಅಲಕ್ಷ ಮಾಡಿದ್ದಾರೆ. ಕೈರಾಟಿ ಸಂಘಕ್ಕೆ ಹಣ ಕೊಡಬೇಕೆಂಬ ನನ್ನ [illegible]ವಿಲ್ಲ. ಅವರೇ ಈ ಸಂಘದ ವಿದ್ಯಮಾನ ತಯಾರಾದ ವಸ್ತುಗಳನ್ನು ಕೊಂಡುಕೊಳ್ಳಬೇಕು. ನನಗೆ ಮನವೊಲಿಸುವದಕ್ಕಾಗಿ ಯಾರೂ ಈ ಠರಾವಿನ ಸಾಲಿ ಮತ ಕೊಡಬಾರದು. ಯುಕ್ತಾಯುಕ್ತತೆಯನ್ನು ವಿಚಾರಿಸಿ ಮತ ಕೊಡಬೇಕು. ನಾನು ರಾಷ್ಟ್ರೀಯ ಸಭೆಯೊಳಗಿಂದ [illegible] ತೆಗೆದುಕೊಂಡದ್ದರಿಂದ ಈ ಸಂಘದ ಘಟನೆಯನ್ನು ನಾನು ಕೈಕೊಳ್ಳುವದಿಲ್ಲ. ಶ್ರೀ| ಕುಮಾರಪ್ಪನವರು ಅನುಭವಿಕ ಅರ್ಥಶಾಸ್ತ್ರಜ್ಞರಿದ್ದಾರೆ. ಅವರೇ ಯಾವತ್ತೂ ಕಾರ್ಯವನ್ನು ನಿರ್ವಹಿಸುವರು. ಈ ಸಂಘಕ್ಕೆ ರಾಷ್ಟ್ರೀಯ ಸಭೆಯಿಂದ ದ್ರವ್ಯಸಹಾಯದ ಅಪೇಕ್ಷೆಯಿಲ್ಲ" ಹೀಗೆ ಹೇಳಿದ ಬಳಿಕ, ಅನುಮೋದಿಸುವಾಗ ಖಾನ ಅಬ್ದುಲ್ ಗಫೂರಖಾನರವರು ನುಡಿದದ್ದೇನಂದರೆ— ಗ್ರಾಮಗಳೇ ರಾಷ್ಟ್ರೀಯ ಸಭೆಯ ಮೂಲಾಧಾರ. ರಾಷ್ಟ್ರೀಯ ಸಭೆಯು ಗ್ರಾಮದ ಪ್ರತಿನಿಧಿಗಳೆಂದು ಹೇಳಿಸಿಕೊಳ್ಳುತ್ತದೆ. ಗ್ರಾಮದವರಿಗೆ ಕೂಳಿಗೆ ಗತಿಯಿಲ್ಲ. ಉಡಲು ಅರಿವೆ-ಅಂಚಡಿಗಳಿಲ್ಲ. ಮೇಲೆ ಯಾವತ್ತೂ ಪ್ರಕಾರದ ಬಲಾತ್ಕಾರ ನಡೆದಿದೆ, ಅದರಿಂದ ಅವರು ಸಂತಾಪಿಗಳಾಗಿದ್ದಾರೆ. ಅದರಿಂದ ಅವರಿಗೆ ಸುಧಾರಿಸಲು ನಾವು ಪ್ರಯತ್ನಪಡಲೇಬೇಕು. ನಾನು ವಂಗದೇಶದೊಳಗಿನ ಗ್ರಾಮಗಳಿಗೆ ಹೋಗಿದ್ದೆ. ನೂಲುಗಾರ ಸಂಘದ ಕೇಂದ್ರಗಳಲ್ಲಿ ಜನರಿಗೆ ಒಪ್ಪತ್ತಾದರೂ ಊಟ ಸಿಗುತ್ತಿತ್ತು. ಉಳಿದೆಡೆ ಅದಕ್ಕೂ ತೊಂದರೆ. ಕೈಗಾರಿಕೆಗಳನ್ನು ಪುನರುದ್ಧರಿಸುವದರಿಂದ ದೇಶದೊಳಗೆ ಹಬ್ಬಿಕೊಂಡ ಸೋಮಾರಿತನವು ಬಯಲಾಗಿ ಜನರಿಗೆ ಸ್ವಯಂಪೂರ್ಣರಾಗಲು ಅನುಕೂಲವಾಗುವದು. ಈ ಠರಾವನ್ನು ಮನ್ನಿಸಿ ದೇಶದೊಳಗೆ ಬೇರೂರಿಕೊಂಡಿದ್ದ ಬಡ-ಬಗ್ಗರ ಸಂಕಷ್ಟಗಳನ್ನು ಪರಿಹರಿಸುವ ಮಹಾಕಾರ್ಯದಲ್ಲಿ ಮಹಾತ್ಮರಿಗೆ ನೆರವಾಗಬೇಕು. ಹೀಗೆ ಭಾಷಣಗಳಾದ ಬಳಿಕ, ಡಾ| ಸನ್ಯಾಲರವರು ಹಿಂದಿನ ಉದ್ದಿಮೆಗಳನ್ನು ಪುನರುದ್ಧರಿಸುವದಕ್ಕಿಂತ [illegible] ಮಾಡಿ ಈಗಿನ ಪರಿಸ್ಥಿತಿಗೆ ತಕ್ಕ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ಸೂಚನೆ ತಂದರು. ಕೈಗಾರಿಕೆ ಸಂಘವು ರಾಷ್ಟ್ರೀಯ ಸಭೆಯ ಅಂತರ್ಗತವಾಗಬೇಕೆಂದು ಶ್ರೀ| ವಸಂತ ಕುಮಾರ ಮುಝುಮದಾರರವರು ಸೂಚಿಸಿದರು "ಈ ವಿಷಯವನ್ನು ರಾಜಕಾರಣದಿಂದ ಹೊರಗಿಡುವದು ಸಾಧ್ಯವಿಲ್ಲ; ದೇಶದೊಳಗಿನ ಆರ್ಥಿಕ ಸೂತ್ರಗಳೆಲ್ಲ ಸರಕಾರದ ಕೈಯಲ್ಲಿವೆ, ಅವುಗಳ ಮೂಲಕವಾಗಿಯೇ ಗ್ರಾಮ ಕೈಗಾರಿಕೆಗಳು ನಷ್ಟವಾದವು. ಅದರಿಂದ ಈ ಸಂಸ್ಥೆಯು ರಾಷ್ಟ್ರೀಯ ಸಭೆಯ ಅಧೀನವಾಗಿರಬೇಕು [ಮಹಾತ್ಮರನ್ನುದ್ದೇಶಿಸಿ,] 'ತಾವು ನಿನ್ನೆ ಇಲ್ಲಿದ್ದಿರಿ, ಇಂದು ಇಲ್ಲಿದ್ದೀರಿ, ನಾಳೆ ಇಲ್ಲಿರುವಿರಿ! ರಾಷ್ಟ್ರೀಯ ಸಭೆಯನ್ನು ಬಿಟ್ಟುಹೋದಾಗ್ಯೂ ನೀವು ಇಲ್ಲೇ ಇರುವಿರಿ!! ಆದ ಕಾರಣ ಇತ್ತ ಬನ್ನಿ! ರಾಷ್ಟ್ರೀಯ ಸಭೆಯ ಅಧಿಪತ್ಯದಲ್ಲಿ ಕೈಗಾರಿಕೆ ಸಂಘವನ್ನೇರ್ಪಡಿಸಿರಿ" ಹೀಗೆ ಮದ್ರಾಸದ ಶ್ರೀ| ಟಿ. ಪ್ರಕಾಶಂರವರು ಆವೇಶದಿಂದ ನುಡಿದರು. "ಸಂಘವು ರಾಷ್ಟ್ರೀಯ ಸಭೆಗೆ ಅಧೀನವಾಗಿರಕೂಡದು, ಅದರಿಂದ ರಾಷ್ಟ್ರೀಯ ಸಭೇತರ ಸ್ವದೇಶಿ ಪುರಸ್ಕರ್ತರಿಗೆ ತೊಂದರೆಯುಂಟಾಗುತ್ತದೆ" ಹೀಗೆ ಶ್ರೀ| ಗೋಖಲೆಯವರು ನುಡಿದರು; ಕೊಂಗ್ರೆಸ ನಗರದ ರಚನೆಗಾಗಿ ಬೇನಿ ಬಡಿಗರನ್ನು ನೇಮಿಸಿಕೊಂಡದ್ದು ಆಕ್ಷೇಪಾರ್ಹವದ್ದೆಂದೂ ಶ್ರೀ| ಗೋಖಲೆಯವರು ಉದ್ಗರಿಸಿದರು. ಮಹಾತ್ಮರು ರಾಷ್ಟ್ರೀಯ ಸಭೆಯನ್ನು ಬಿಟ್ಟುಹೋಗುತ್ತಿದ್ದಾರೆ, ಅವರಿಗೆ ಕಲಸ ಪೂರೈಸಿಕೊಡುವದು ರಾಷ್ಟ್ರೀಯ ಸಭೆಯವರ ಕರ್ತವ್ಯ, ದಿನಾ ೨೦ ತಾಸು ಅವರು ಕೆಲಸ ಮಾಡುತ್ತಾರೆ; ಅದರಿಂದ ಕೈಗಾರಿಕೆ ಸಂಘದ ಕಾರುಪತ್ಯವನ್ನು ಅವರೇ ನಡಿಸಬೇಕು. ಹೀಗೆ ಶ್ರೀ| ಬಾಳು ಕಾಕಾ ಕಾನಿಟಕರರು ಉದ್ಗರಿಸಿದರು. ಠರಾವಿನಲ್ಲಿ ಮಹಾತ್ಮರು ಕಾರುಪತ್ಯಗಾರರೆಂದು ಬರೆಯಲಿಲ್ಲ, ಮೇಲ್ವಿಚಾರಕರೆಂದು ಬರೆದದೆ, ಹೀಗೆ ಅಧ್ಯಕ್ಷರು ಖುಲಾಸೆ ಮಾಡಲು, ಮಹಾತ್ಮರ ಮೇಲ್ವಿಚಾರವೆಂದರೆ, ಪ್ರತ್ಯಕ್ಷ ಕಾರುಪತ್ಯವೇ ಎಂದು ಶ್ರೀ| ಬಾಳು ಕಾಕಾ ಕಾನಿಟಕರರು ಉದ್ಗರಿಸಿದೊಡನೆ ಸಭೆ ತುಂಬ ಹಾಸ್ಯ! ಮಹಾತ್ಮರೂ ನಕ್ಕರು! ಮಹಾತ್ಮರು ಉತ್ತರ ಕೊಟ್ಟದ್ದೇನಂದರೆ —"ಮೃತ ಹೊಂದಿದ ಕೈಗಾರಿಕೆಗಳ ಚೌಕಶಿಯೆಂದರೆ, ಪರಿಸ್ಥಿತಿಯ ವಿಚಾರ ಬಂತು. ಖುದಾಯಿ ಖಿದಮತಗಾರರಂತೆ ಗ್ರಾಮಾಂತರಗಳಿಗೆ ಸಂಘದವರು ಹೋಗಿ ಅಲ್ಲಲ್ಲಿಯ ಪರಿಸ್ಥಿತಿಯನ್ನು ವಿಚಾರಿಸಿ ಅದಕ್ಕೆ ತಕ್ಕದ್ದಾಗಿ ಉಪಾಯಯೋಜನೆ ಮಾಡುವದಿದೆ. ಕೈಗಾರಿಕೆ ಸಂಘದ ಘಟನೆಯಿಂದ ಗ್ರಾಮದವರ ಸಂಪದಭ್ಯುದಯ ಮಾಡುವದೊಂದೇ ಉದ್ದೇಶವಿಲ್ಲ, ಅವರ ನೀತಿಮತ್ತೆಯನ್ನೂ ಬೆಳಸುವದಿದೆ. ಹಳ್ಳಿಗರ ಸ್ಥಿತಿ ತೀರ ಕಠಿಣವಾಗಿದೆ. ದಿನಾ ೧೪ ತಾಸು ಮೈಮುರಿದು ದುಡಿದಾಗ್ಯೂ ಅವರಿಗೆ ಹೊಟ್ಟೆತುಂಬ ಕೂಳು ಸಿಗುವದಿಲ್ಲ. ನಾನು ರಾಷ್ಟ್ರೀಯ ಸಭೆಗೆ ಗ್ರಾಮ ಕೈಗಾರಿಕೆಗಳ ಕುರಿತು ರಿಪೋರ್ಟ ಮಾಡುವೆನು. ಕಾರ್ಯಾರಂಭ ಮಾಡಿದಂದಿನಿಂದ ನಡೆದಿದ್ದ ಕಾರ್ಯವನ್ನೂ, ಕಾರ್ಯದ ಪರಿಣಾಮವನ್ನೂ ಅಂಕೆ ಮಾಡಿಕೊಳ್ಳುವೆನು. ಹಿಂದುಸ್ಥಾನದಲ್ಲಿ ಏಳು ಲಕ್ಷ ಗ್ರಾಮಗಳಿವೆ. ಇಷ್ಟು ದೊಡ್ಡ ಕೆಲಸ ಮಾಡಲು ಸಮರ್ಥರಿರಬೇಕು. ರಾಷ್ಟ್ರೀಯ ಸಭೆಯಿಂದ ಈ ಸಂಘವು ಅಲಿಪ್ತವಾಗಿರಲು ಒಂದು ಕಾರಣವಿದೆ. ರಾಷ್ಟ್ರೀಯ ಸಭೆಯ ರಾಜಕಾರಣದ ಆಂದೋಲನಗಳಿಂದ ಈ ಸಂಘಕ್ಕೆ ಬಾಧೆ ತಪ್ಪಲಾರದು. ಕೊಂಗ್ರೆಸ ಸಂಸ್ಥೆಗಳು ಬೇಕಾಯಿದೆಶೀರ ಆದಾಗ್ಯೂ, ಅಖಿಲ ಭಾರತೀಯ ನೂಲುಗಾರ ಸಂಘವು ಬೇಕಾಯಿದೆಶೀರ ಆಗಿದ್ದಿಲ್ಲ. ಇದನ್ನು ಲಕ್ಷದಲ್ಲಿಡಬೇಕು. ಯಂತ್ರಗಳ ಏರ್ಪಾಟಿನಿಂದ ಹಳ್ಳಿಗರ ಕೈಗಾರಿಕೆಗಳಿಗೆ ಉಂಟಾದ ನಷ್ಟವನ್ನು ಹೋಗಲಾಡಿಸಿ ಅವುಗಳಿಂದ ಹಳ್ಳಿಗರಿಗೆ ಉಪಯೋಗವಾಗುವಂತೆ ಈ ಸಂಘವು ಉಪಾಯಯೋಜನೆ ಮಾಡುವದು" ಈ ಪ್ರಕಾರ ಮಹಾತ್ಮರು ಉತ್ತರ ಕೊಟ್ಟ ಬಳಿಕ, ಉಪಸೂಚನೆಗಳೆಲ್ಲ ರದ್ದಾಗಿ ಮಹಾತ್ಮರ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು.

ಸತ್ಯಾಗ್ರಹಿಗಳ ಅಭಿನಂದನೆ

ಆಮೇಲೆ "ಭಾರತದ ಸ್ತ್ರೀ-ಪುರುಷರೂ, ಎಳೆಪ್ರಾಯದವರೂ ಸತ್ಯಾಗ್ರಹವನ್ನಾಚರಿಸಿ ದೇಶಕ್ಕಾಗಿ ಅಪಾರವಾಗಿ ಕಷ್ಟ-ನಷ್ಟಪಟ್ಟ ಸತ್ಯಾಗ್ರಹಿಗಳನ್ನು ಅಭಿನಂದಿಸಿ ಅಹಿಂಸಾಮಯ ಅಸಹಯೋಗವನ್ನು ಆಶ್ರಯಿಸಿದ್ದರಿಂದಲೇ ದೇಶತುಂಬ ಇಷ್ಟು ಲೋಕಜಾಗೃತಿಯಾಯಿತು. ಸತ್ಯಾಗ್ರಹಕ್ಕೆ ತಡೆಯಾಗುವ ಪರಿಸ್ಥಿತಿಯು [illegible] ಅಹಿಂಸಾಮಯ ಅಸಹಯೋಗದಲ್ಲಿಯೂ, ಸವಿನಯ ಕಾಯಿದೆಭಂಗದಲ್ಲಿಯೂ ರಾಷ್ಟ್ರೀಯ ಸಭೆಯು ಈ ಮೂಲಕ ಶ್ರದ್ಧೆಯನ್ನು ಪ್ರಕಟಿಸುತ್ತದೆ. ಮತ್ತು ಹಿಂಸಾಚಾರದಿಂದ ಪ್ರಜಾಪೀಡಕರಿಗೂ ಪೀಡಿತರಿಗೂ ನಷ್ಟವಾಗುತ್ತದಾಗಿ ಅಭಿಪ್ರಾಯಪಡುತ್ತದೆ" ಈ ಠರಾವನ್ನು

[ಮುಂದಿನ ಪುರವಣಿ ನೋಡಿರಿ]

ಸ್ವಾಗತ ಸಮಿತಿಯ ಅಧ್ಯಕ್ಷರಾದ
ಶ್ರೀ। ಖುರ್ಶೇದ ನರಿಮಾನರವರು



ಕಾಂಗ್ರೆಸ್ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ
ಬಾಬು ರಾಜೇಂದ್ರ ಪ್ರಸಾದರವರು

ರಾಷ್ಟ್ರೀಯ ಸಭೆಯ ನಿವೃತ್ತ ಅಧ್ಯಕ್ಷರಾದ
ಸರದಾರ ವಲ್ಲಭಭಾಯಿ ಪಟೇಲರವರು

ಕೊಡಮಾಡಿದ ರಾಜ್ಯಘಟನೆಯಲ್ಲಿ ಹುರುಳಿಲ್ಲ; ತಿರಸ್ಕಾರಾರ್ಹವಾದುದು.

ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರ ಭಾಷಣದ ಸಾರಾಂಶ.

ಮುಂಬಯಿಯಲ್ಲಿ ಸೇರಿದ ಕಾಂಗ್ರೆಸ್ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಅಧ್ಯಕ್ಷಸ್ಥಾನದಿಂದ ಹಿಂದೀ ಭಾಷೆಯಲ್ಲಿ ನುಡಿದುದರ ಸಾರಾಂಶವು— ಕೀರ್ತಿಶೇಷರಾದ ಸಮಸ್ತ ಲೋಕನಾಯಕರಿಗೆ ನಾನು ಈ ವೇಳೆಯಲ್ಲಿ ಅಭಿನಂದಿಸುತ್ತೇನೆ. ಅವರ ವಿಯೋಗದಿಂದ ರಾಷ್ಟ್ರಕ್ಕೆ ಅಪಾರವಾದ ಹಾನಿಯುಂಟಾಗಿದೆ. ಕಾರಾಗೃಹವಾಸದಲ್ಲಿದ್ದ ಪಂ। ಜವಾಹಿರಲಾಲರಿಗೂ ಪರದೇಶದಲ್ಲಿದ್ದ ಸುಭಾಷಚಂದ್ರ ಬೋಸರಿಗೂ ದೇಶಸೇವೆಯ ಬಗ್ಗೆ ನಾನು ಕೃತಜ್ಞತಾಪೂರ್ವಕವಾಗಿ ಶ್ಲಾಘನೆ ಮಾಡುತ್ತೇನೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿವಿಧ ಕಷ್ಟಗಳನ್ನನುಭವಿಸಿದ ಬಂಧು-ಭಗಿನಿಯರಿಗೆಲ್ಲ ನಾನು ವಂದನೆಗಳನ್ನರ್ಪಿಸುತ್ತೇನೆ. ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಮರ್ಪಿಸಿ ಮಹಾ ದೊಡ್ಡ ಜವಾಬದಾರಿಯನ್ನು ನೀವು ನನ್ನ ಮೇಲೆ ಹೊರಿಸಿರುವಿರಿ. ನನ್ನ ಬಿಹಾರ ಪ್ರಾಂತಕ್ಕೊದಗಿದ ಭೂಕಂಪದ ವಿಪತ್ತಿನಲ್ಲಿ ಔದಾರ್ಯದಿಂದ ತಾವು ಮಾಡಿದ ಧನ-ಜಿನಸಸಹಾಯವನ್ನು ನಾನೆಂದೂ ಮರೆಯಲಾರೆನು. ಆ ಬಗ್ಗೆ ತಮಗೆಲ್ಲರಿಗೆ ನಾನು ತುಂಬಾ ಕೃತಜ್ಞನಾಗಿರುವೆನು. ಗಾಂಧಿ-ಇರ್ವಿನ್ ಒಡಂಬಡಿಕೆ ಸರಕಾರಕ್ಕೆ ಸಮ್ಮತವಿರಲಿಲ್ಲ. ಮಹಾತ್ಮರು ರೌಂಡ ಟೇಬಲ್ ಪರಿಷತ್ತಿಗೆ ಹೋದ ಸಮಯದಲ್ಲಿ ಸರಕಾರವು ಅಂತರಂಗದಿಂದ ರಾಷ್ಟ್ರೀಯ ಸಭೆಯವರೊಡನೆ ಸಮರ ನಡೆಸುವ ಸಂಕಲ್ಪ ಮಾಡಿ ಮಹಾತ್ಮರಿಗೆ ಮರಳಿ ಬರುವಲ್ಲಿ ಕಾಲಿಡುವದರ ಮೊದಲೇ ಸೆರೆಹಿಡಿದು ರಾಷ್ಟ್ರದೊಡನೆ ಕಾಲು ಕೆದರಿ ಜಗಳ ಹೂಡಿತು. ರಾಜ್ಯಶಾಸನೆಯನ್ನು ಸ್ತಬ್ಧಪಡಿಸುವದು, ಕ್ರಾಂತಿಕಾರಕರನ್ನು ನಡೆಬಡಿಯುವದು ಎಂಬ ದ್ವಿಮುಖ ರಾಜ್ಯಧೋರಣವನ್ನು ಸರಕಾರವು ಪ್ರಕಟಿಸಿ ಮುಖ್ಯವಾಗಿ ಲೋಕಕಂಟಕ ಧೋರಣವನ್ನೇ ಪುರಸ್ಕರಿಸಿತು. ಕಠಿಣ ಕಾಯಿದೆ, ರಾಜಾಜ್ಞೆಗಳನ್ನು ಹೊರಡಿಸಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ನಿಷ್ಠುರತನದಿಂದ ಅಪಹರಿಸಿತು. ರಾಜ್ಯಸುಧಾರಣೆಯ ಪುರಸ್ಕಾರ ಮಾತ್ರ ಹಾತಿಸಿಂದಲೇ ನಡೆದದೆ. ಮೂರು ರೌಂಡ ಟೇಬಲ್ ಪರಿಷತ್ತುಗಳಾದವು. ಬೇರೆ ಬೇರೆ ವಿಷಯಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಚರ್ಚಿಸಲೋಸುಗ ಸಂಗಡಗಳೂ ಕೂಟಗಳೂ ನೇಮಿಸಲ್ಪಟ್ಟವು. ಜಾಯಿಂಟ ಪಾರ್ಲಿಮೆಂಟರಿ ಮುಂದಿದ್ದ ವಿಚಾರ ಇನ್ನೂ ಮುಗಿಯದು. ಆರು ವರ್ಷಗಳತನಕ ಎಡೆಬಿಡದೆ ರಾಜ್ಯಸುಧಾರಣೆಯ ವಿಚಾರ ನಡೆದಿದೆ. ಆರು ವರ್ಷ ಕಳೆದರೂ ಇನ್ನೂ ವಿಚಾರವೇ ಕಡೆಗಾಣದು. ಶ್ವೇತಪತ್ರಿಕೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯಾಧಿಕಾರವಿಲ್ಲ. ಪರದೇಶಗಳ ಸಂಬಂಧವು ಈಗಿನಂತೆ ಮುಂದೆಯೂ ಬ್ರಿಟಿಶರ ಅಂಕೆಯಲ್ಲಿಯೇ ಇರುವದು, ಸೈನ್ಯಾಧಿಕಾರವೂ ಅವರಿಗೇ ಅಧೀನವಾಗಿರುವದು. ಆರ್ಥಿಕ ವ್ಯವಸ್ಥೆಯನ್ನೂ ಅವರೇ ನಡಿಸುವರು. ಇಂಥ ಪ್ರಸಕ್ತಿಯಲ್ಲಿ ಈ ರಾಜ್ಯಘಟನೆ ಪೂರ್ಣ ಸ್ವರಾಜ್ಯಕ್ಕಾಗಿ ಹಂಬಲಿಸುವ ರಾಷ್ಟ್ರೀಯ ಸಭೆಗೆ ಹೇಗೆ ಮಾನ್ಯವಾದೀತು? ಈಗಿನ ರಾಜ್ಯಶಾಸನಕ್ಕಿಂತ ಮುಂದಿನ ರಾಜ್ಯಕ್ರಮವು ಮತ್ತೂ ಏಕತಂತ್ರಿಯಾಗುವದು. ನಮ್ಮ ಕಾಯಿದೆ ಕೌನ್ಸಿಲುಗಳಲ್ಲಿ ಸಂಸ್ಥಾನಿಕರ ಪ್ರತಿನಿಧಿಗಳೂ ಜಾತಿ ಪ್ರತಿನಿಧಿಗಳೂ ಗೋರೆ ಜಾತಿಪ್ರತಿನಿಧಿಗಳೂ ಲೋಕಕಾರ್ಯಕ್ಕೆ ಉಪಾಧಿ ಕಡಿವಾಣ ಹಾಕುವರು. ಹೆಚ್ಚಾಗಿ ಪ್ರಾಂತಾಧಿಪರ ಸರ್ವಾಧಿಕಾರಗಳ ಅನುಭವವನ್ನು ದಿವಾನರು ಯಾರಾಗಲಿ ಹಿಂದಿನ ಮುದ್ರೆಯಿಂದಲೇ ನಡಿಸುತ್ತಿರುವಂತೆ ಹೊಸ ರಾಜ್ಯಕ್ರಮದಲ್ಲಿ ಏರ್ಪಾಟಾಗಿದೆ. ದಿವಾಣರ ಯಾವದೇ ಅಧಿಕಾರವನ್ನು ಪ್ರಾಂತಾಧಿಪರು ಬೇಕಾದಾಗ ಸ್ವಾಧೀನಪಡಿಸಿಕೊಳ್ಳಬಹುದು. ಲೋಕದಲ್ಲಿ ಹಿಂದುಸ್ಥಾನದ ಹಸ್ತು ಬೆಳೆಸುವ ನವನವಾದ ಸವಲತ್ತುಗಳು ಬೇರೆಯವರ ಕೈಸೇರಬಹುದು. ಅಲ್ಪಸಂಖ್ಯಾಕರ ಹಕ್ಕುಗಳನ್ನು ರಕ್ಷಿಸಲೋಸುಗ ಸರ್ವಾಧಿಪತಿಗಳಿಗೆ ಸರ್ವಾಧಿಕಾರ ಕೊಡೋಣಾಗಿದೆ. ಇದರಿಂದ ಮುಸಲ್ಮಾನ ಮೊದಲಾದ ದೇಶಬಾಂಧವರು ಹುರುಳುಗೊಂಡಾರು. ಈ ಅಧಿಕಾರದ ಪ್ರಯೋಜನ ಆವಾಗೆಂದರೂ ದೊರೆಯದು. ಹಿಂದುಸ್ಥಾನಕ್ಕೆ ಸ್ವಾರ್ಥ ಸಾಧಿಸಲು ಬರುವ ಬ್ರಿಟಿಶರಿಗಾಗಿ ಈ ಅಧಿಕಾರದ ಪ್ರಯೋಗವಾಗುವದು. ಹಿಂದುಸ್ಥಾನ ದೇಶವು ನಮ್ಮದು. ಅಧಿಕಾರಿಗಳು ನಮ್ಮ ಸೇವಕರೆಂದು ನೇಮಿಸಲ್ಪಟ್ಟವರು. ಆದರೆ ಈ ಸೇವಕರ ಮೇಲೆ ನಮ್ಮ ಅಂಕೆಯಿಲ್ಲ. ಬ್ರಿಟಿಶ ವರ್ತಕರಿಗೆ ನಿಯಂತ್ರಿಸುವ ಅಧಿಕಾರ ನಮಗಿಲ್ಲ, ಅವರಿಗೆ ದೇಶದಲ್ಲಿ ಬೇಕಾದ ಹಾಗೆ ಸೂರೆ

ಸಹಿಸುವಾಗ ಸೌ ಸರೋಜಿನಿ ದೇವಿಯವರು ನುಡಿದದ್ದೇನಂದರೆ "ಬಂದೂಕಿನ ಗುಂಡಿನ ಸಂಗ್ರಾಮವನ್ನು ನೋಡಿ ಅಂಜಿಕೆ ಬಾರದಂತ ಮಾರ್ಗ ತೋರಿಸಿಕೊಟ್ಟದ್ದರ ಸತ್ಯಾಗ್ರಹದ ಸಂಗ್ರಾಮ ತುಪಾಕಿಗಳಿಲ್ಲ, ಸತ್ಯಾಗ್ರಹಿಗಳು ದ್ವೇಷ ಕೊಂದಿಲ್ಲಿ, ಅಷ್ಟದ ಸಾಹಸವು ಮಿಗಿಲಾಗಿದ, ಸ್ವಾತಂತ್ರ್ಯಯು ಗಟ್ಟಿಗನಿದ್ದಾನೆ, ಸತ್ಯಾಗ್ರಹದ ಕಷ್ಟದಿಂದ ಇದೀ ದೇಶವೊಳಗೆ ಘನ ಚಿನ್ನ ಪಡೆಂತಸ್ತರು ಒಮ್ಮನವನಂಗಿದ್ದಾರೆ ವಾಪಸ ಮೂರತಿಯಂಥ ಒಕ್ಕಪುರ ಪನು ಹೇಳದ ವಚನವನ್ನು ಸವ ಸ್ವರಾಜ್ಯ ಸಾಧಿಸಿ ಸತ್ಯಾಗ್ರಹಕ್ಕ ಹೊರಟ ನೇತೃ ಅಪೂರ್ವದಿದ್ದು, ನಮಗಂದೂ ಸೋಲಿಲ್ಲ ನಾವು ಸ್ವಾತಂತ್ರ್ಯ ಸ್ಥನಿಕರಿದ್ದೇವ ವಿಶ್ರಮಿಸಲು ಸತ್ಯಾಗ್ರಹಕ್ಕೆ ತಡೆ ಹಾಕುವ ಮಹಾತ್ಮರು ನಮ್ಮನ್ನು ತಿಳಿಸಿದ್ದಾರೆಂದು ನೀವು ತಿಳಿಯಬೇಡಿ ಮಹಾತ್ಮರಂದರೆ ಎದಿ ತ್ರಿ ಪ್ರಾಣಿ! ಮಹಾತ್ಮರು ಕಾಂಗ್ರೆಸಿನಿಂದ ಹೊರಬಿದ್ದರೂ ಅವರು ಯಾವಾಗಲೂ ನಮ್ಮ ಜೊತೆಗೆ ಇರುವವರು" ಹೀಗೆ ಸೌ| ಸರೋಜಿನಿಯವರ ಭಾಷಣದ ಬಳಿಕ ಸರದಾರ ಶಾರ್ದೂಲಸಿಂಗ ಕವೀಶ್ವರರವರು ಅನುಮೋದನ ಕೊಟ್ಟರು ಬಹಿಂಸೆಯ ಮೇಲೆ ಶ್ರದ್ಧೆಯಿರುತ್ತದೆಂಬ ಕಲ್ಲೆಮವನ್ನು ಲೋಪ ಮಾಡಬೇಕಾಗಿ ಶ್ರೀ| ಪುರುಷೋತ್ತಮದಾಸ ಟಂಡನರವರು ತಂದ ಉಪಸೂಚನೆಯೂ ಇನ್ನು ಕೆಲವ ಉಪಸೂಚನೆಗಳೂ ಬಿದ್ದುಹೋಗಿ, ಸೌ| ಸರೋಜಿನಿಯವರ ಠರಾವು ಬಹುಮತದಿಂದ ಮಂಜೂರಾದ ಬಳಿಕ, ಉಪಹಾರವಾಗಿ ಪುನಃ ಚರ್ಚೆಗೆ ಪ್ರಾರಂಭವಾಯಿತು ಮದ್ರಾಸದ ಡಾ| ಪಟ್ಟಾಭಿಸೀತಾರಾಮಯ್ಯನವರು ಸ್ವದೇಶಿ ಪ್ರದರ್ಶನದ ಏರ್ಪಾಟನ್ನು ಅಖಿಲ ಭಾರತೀಯ ನೂಲುಗಾರ ಸಂಘದವರೂ ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘದವರೂ ಇನ್ನು ಮುಂದ ಕೈಕೊಳ್ಳತಕ್ಕದ್ದೆಂದೂ ಪ್ರದರ್ಶನದಲ್ಲಿ ಜನರಿಗೆ ಬೇಕಾಗುವಂತೆ ಗ್ರಾಮದ ಜೀವನೋಪಾಯವನ್ನಲ್ಲ ಪ್ರದರ್ಶಿಸಬೇಕಾಗಿಯೂ ಠರಾವನ್ನು ಸೂಚಿಸಿದರು ಈ ಠರಾವಿಗೆ ಮೇಲಿಂದ ಸಮರ್ಥಿಸಿ ಡಾ ಮುಕ್ಯನವರು ಸರಸವಾಗಿ ಹಿಂದೀ ಭಾಷೆಯಿಂದ ಮಾತನಾಡಿದರು ಶ್ರೀ| ಸೀತಾರಾಮಯ್ಯನವರು ಮದ್ರಾಸಿನವರು, ಅವರು ಪ್ರೈಲಿನಲ್ಲಿದ್ದಾಗ ಹಿಂದೀ ಭಾಷೆ ಕಲಿತರು ಸುಶ್ರಾವ್ಯ ಭಾಷಣ ಮಾಡಿದರು ತ ಪ್ರಕಾಶ ಸ್ವದೇಶಿಗಳ ಅಂಬಾಲಾದ ಸೌ| ಲೀಲಾವತಿ ಮುನ್ಶಿಯವರು ಅನುಮೋದನ ಕೊಡುವಾಗ ಹಿಂದೀ ಭಾಷೆಯಲ್ಲಿಯೇ ಮಾತನಾಡಿದರು ಈ ಠರಾವಿನ ಚರ್ಚೆಯು ಕಡೆಗೆ ಅಖಿಲ ಭಾರತೀಯ ನೂಲುಗಾರ ಸಂಘದ ಪ್ರೇರಣೆಯ ಮೇರೆಗ ಪೂರ್ಣದಾಬಾದೊಳಗಿನ ಖಾದಿಯ ವ್ಯವಸಾಯದವರಿಗೆ ಪ್ರದರ್ಶನ ಮಂಡಳದವರು ಸರಿಯಾಗಿ ನಡೆಸಿದ್ದರಿಂದ, ಪ್ರದರ್ಶನದ ವ್ಯವಸ್ಥೆಯನ್ನು ಅಖಿಲ ಭಾರತೀಯ ನೂಲುಗಾರ ಸಂಘಕ್ಕೆ ಒಪ್ಪಿಸಬೇಕೆಂದು ಕಾರ್ಯಕಾರಿ ಸಭೆಯವರ ಕಡೆಗೆ ತಿಳಿಸಬೇಕೆಂದು ಡಾ| ಸನ್ಯಾಲರವರು ಉದ್ಗರಿಸಿ ಠರಾವನ್ನು ವಿರೋಧಿಸಿದರು ಆದರಿಂದ ಈ ಚರ್ಚೆ ಇಷ್ಟಕ್ಕೇ ನಿಂತಿತು ಬಂಗಾಲದ ಸಭೆ ಮುಂದೆ ಹೋದನ್ನು ರಾಷ್ಟ್ರೀಯ ಸಭೆಯು ಮನ್ನಿಸುತ್ತದಾಗಿಯೂ, ಈ ಬೋರ್ಡಿನ ಹೊಸ ಚುನಾವಣೆ ಒಂದು ವರ್ಷದಲ್ಲಿ ನಡೆಯಬೇಕೆಂದಾಗಿಯೂ ಪಂಡಿತ ಗೋವಿಂದವಲ್ಲಭ ಪಂತರವರು ಸೂಚಿಸಿದ ಠರಾವು ಸರ್ವಾನುಮತದಿಂದ ಮಂಜೂರಾದ ಬಳಿಕ ಊಟದನಂತರದ ಕೆಲಸ ಮುಗಿಯಿತು

ಅಚ್ಚಿನಲ್ಲಿದೆ! ತ್ವರೆ ಮಾಡಿರಿ!!

ಶ್ರೀ| ವೇ. ಮೊಗೇರಿ ಭಾಸ್ಕರ ಅಡಿಗಳಿಂದ

"ಪ್ರಾಚೀನ ಗ್ರಂಥಗಳಲ್ಲಿಯೂ ಗ್ರಹಣಾದಿ ಪ್ರತ್ಯಕ್ಷ ವಿಷಯಗಳಲ್ಲಿಯೂ ಅತ್ಯಂತ ನಿಖರವಾಗಿ ಹಾಗೂ ಸೂಕ್ಷ್ಮವಾಗಿ ದೃಕ್ಸಿದ್ಧವಾಗುವಂತೆ ಸಂಗಣಿತ ಸಿದ್ಧಾಂತ ರೀತ್ಯಾ ಗುಣಿಸಲ್ಪಟ್ಟು ಇವರ ಆಜ್ಞೆ—

ಶ್ರೀ| ವೇ. ಸಿದ್ಧಾಂತಿ ರಾಮಪ್ಪ ಅಡಿಗಳು ಮತ್ತು ಶ್ರೀ| ವೇ. ಕರ್ಕಿ ಸೂರಿ ಕೃಷ್ಣಭಟ್ಟರು ಇವರಿಂದ ಪರಿಶೋಧಿಸಲ್ಪಟ್ಟು,

ಕೆಕ್ಕಾರ ಶ್ರೀ ವಿಶ್ವನಾಥ ಧರ್ಮವಿದ್ಯಾಪರಿಷತ್ ಇವರಿಂದ ಆಶ್ರಯವನ್ನು ಹೊಂದಿದ

ಸಕಲ ಧಾರ್ಮಿಕ, ಲೌಕಿಕ ಕಾರ್ಯಗಳಿಗೂ ಉಪಯುಕ್ತವಾಗಿರುವ

ಯುವ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದ! ನವಂಬರ ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವದು!

ನಿಯಮಿತ ಪ್ರತಿಗಳು ತೆಗೆದಿರುವದರಿಂದ ಬೇಕಾದವರು ಮುಂದಾಗಿ ತಿಳಿಸಬೇಕು!

ಜಾಹೀರಾತುದಾರರು ತ್ವರೆ ಮಾಡಬೇಕು!!

ಪತ್ತೆ—

ಮೆನೇಜರ, "ಸ್ಟಾರ ಆಫ್ ಕೆನರಾ ಪ್ರೆಸ್", ಕುಮಟಾ. (ಉ ಕನ್ನಡ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!

ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ

ಪೊಲಿಸಿದಾರರಿಗೆ ಎರಡನೇ ವರ್ಷದ ಬೋನಸ್ ಘೋಷಿಸಲಾಯಿತು! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ ಸೂ ಇಂಡಸ್ಟ್ರಿಯಲ್ ವಿಮಾ ೨೫೦ ರೂಪಾಯಿ ಪೊಲಿಸಿಗಳ ಸುಲಭ ಕಂತಿನ ವಿಮಾ ಯೋಜನೆ ಇದರ ವಿಶೇಷ]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು.

ಹೆಚ್ಚಿನ ವಿವರಕ್ಕೆ ಈಗಲೇ ಬರೆದುಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.



ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ. ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವಂದರೆ— ಪಿನಸಿ, ಜಂಟಿತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಕಾಣುವ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಲಾಭವು ಪರಿಪೂರ್ಣವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ನಮಗೆ ಸೀಸೆ ಪ್ಯಾಕೆಟ ಕಳಿಸಲಾದೀತು. ಬುದ್ದಿ ಒಂದಕ್ಕೆ ಕ್ರಯ ರೂ ೦-೫-೦ ಸ್ಯಾಂಪಲ ಡಜನ್‌ಗಳಿಕ್ಕೆ ರೂ ೩-೮-೦ ವಿ ಪಿ ಅಂಚೆ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦ ಮಾರ್ಕೆಟ್‌ನ ಮದರಾಸ

ಸ್ಥಾನಿಕ ವೃತ್ತಾಂತ.

(೯ ನೇ ಪಾನಿನಿಂದ ಮುಂದರಿಸಿದ್ದು)

ಕಾರವಾರ ಕನ್ನಡ ಶಾಲೆಯ ಹೆಡ್ ಮಾಸ್ತರರಾದ ರಾ| ವೈಕುಂಠ ಶ್ರೀನಿವಾಸ ಪ್ರಭು ಇವರು ಈ ತಿಂಗಳ ಅಂತ್ಯಕ್ಕೆ ನಿವೃತ್ತರಾಗುತ್ತಾರೆ. ಅವರಿಗೆ ಆದರ ವ್ಯಕ್ತಪಡಿಸುವದಕ್ಕಾಗಿ ತಾ. ೨೧ ನೇಗೆ ಈ ತಾಲೂಕಿನ ಶಿಕ್ಷಕರೂ, ಗೆಳೆಯರೂ ಮಾರಿ ಹುಡುಗರ ಶಾಲೆಯಲ್ಲಿ ಮುಂಜಾನೆ ೮ ಘಂಟೆಗೆ ಸೇರಿ ರಾ| ಎಸ್. ಎಸ್. ಜಾನಭಾಗ, ಎಮ್. ಎ. ಎಲ್‌ಎಲ್. ಬಿ. ವಕೀಲ ಇವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಸಭೆಗೆ ಊರೊಳಗಿನ ಸಭ್ಯ ಗೃಹಸ್ಥರೆಲ್ಲ ಬಂದಿದ್ದರು. ಶಿಕ್ಷಕರೂ ಸಾಬೆಕರೂ ರಾ| ಪ್ರಭು ಮಾಸ್ತರರ ವಿದ್ಯಾದಾನದ ನಿಪುಣತೆಯನ್ನು ಹೊಗಳಿದರು. ಹುಡುಗರಿಗೆ ಮನರಂಜನವಾಗುವಂತೆ ಅವರು ಪಾಠ ಹೇಳುತ್ತಿದ್ದರಾಗಿಯೂ, ತಕ್ಕ ವೇಳೆಗೆ ಶಾಲೆಗೆ ಬರುತ್ತಿದ್ದರಾಗಿಯೂ, ಶಿಕ್ಷಕರಿಗೆ ಶಿಕ್ಷಣದಲ್ಲಿ ಪ್ರೀತಿಯಿಂದ ಪಡಿಸಿಕೊಳ್ಳುತ್ತಿದ್ದರಾಗಿಯೂ ಟ್ರೇನಿಂಗ ಕಾಲೇಜು ಬಿಟ್ಟಾಗ್ಯೂ ವಿದ್ಯಾಭ್ಯಾಸವನ್ನು ಮುಂದರಿಸಿ ಸಂಸ್ಕೃತ ಗ್ರಂಥಗಳನ್ನು ಅಭ್ಯಾಸಿಸಿದರಾಗಿಯೂ ಪ್ರಶಂಸಿಸಿ, ಅವರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತಿಯಾಗಲೆಂದು ಹಾರೈಸಿದರು. ರಾ| ವೆಂಕಟೇಶ ರಾವ ಚಂದ್ರಪ್ರಭು ಇವರು ರಾ| ಪ್ರಭು ಮಾಸ್ತರರ ಸ್ತುತಿಪರ ಬರೆದ ಸಂಸ್ಕೃತ ಕವಿತೆಗಳನ್ನು ಅವರಿಗೆ ಅರ್ಪಿಸಿ ತಮ್ಮ ಆದರವನ್ನು ವ್ಯಕ್ತಪಡಿಸಿದರು. ಉಡುಗೊರೆ ಹಾಗು ಹಾರ ಸಮರ್ಪಣ, ಅಧ್ಯಕ್ಷರ ಮಾತುಗಳಾಗಿ ಸಮಾರಂಭ ವಿಸರ್ಜನ ಹೊಂದಿತು.

(ತಾ. ೨೮-೧೦-೩೪) ಈ ಜೋಡು ಕನ್ನಡ ಶಾಲೆಯ ಹೆಡ್‌ಮಾಸ್ತರರು ಹುಡುಗರ ಶಾಲೆಯಲ್ಲಿ ರಾ| ವೈಕುಂಠ ಶ್ರೀನಿವಾಸ ಪ್ರಭು ಇವರಿಗೆ ಎಡ್‌ಮಿನಿಸ್ಟ್ರೇಟಿವ್ ಆಫೀಸರರಾದ ರಾ| ವ್ಹಿ. ಆರ್. ವರ್ನೇಕರ ಇವರ ಅಧ್ಯಕ್ಷತೆಯಲ್ಲಿ ಮಾನಪತ್ರ ಸಮರ್ಪಣ ಮಾಡಿದರು. ಈ ಸಮಾರಂಭಕ್ಕೆ ಎಗ್ಝಿಕ್ಯೂಟಿವ್ಹ್ ಇಂಜನಿಯರರಾದ ಮಿ| ಮುರ್ಡೇಶ್ವರರೂ, ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ| ಚಂದಾವರಕರರೂ ಬಂದಿದ್ದರು.

ನಾ| ಗವರ್ನರರ ಇಲ್ಲಿಯ ಕಾರ್ಯಕ್ರಮವೇನಂದರೆ — ಬುಧವಾರ ತಾ. ೩ ನೇ ಮುಂಜಾನೆ ಇಲ್ಲಿಂದ ದ ಮೇಲೆ ಕಲೆಕ್ಟರರೂ ಮ್ಯುನಿಸಿಪಾಲಿಟಿಯ ಅಧ್ಯಕ್ಷರೂ ಊರ ಪ್ರಮುಖರೂ ಗವರ್ನರರಿಗೆ ಇದಿರುಗೊಂಡು, ಸಿವ್ಹಿಲ್ ಆಸ್ಪತ್ರೆಗೆ ಕರೆದೊಯ್ದು ಪಾರ್ತಿಕಾಗ್ರಹದ ಸಂಸ್ಥಾಪನೆಯ ಸಮಾರಂಭವನ್ನು ನೆರವೇರಿಸಿಕೊಂಡು ಮಿ. ಶ್ರೀನಿವಾಸ ಶಾನಭಾಗರಲ್ಲಿಗೆ ಕರೆತರುತ್ತಾರೆ. ಅಲ್ಲಿ ಬೋರ್ಡ-ಮ್ಯುನಿಸಿಪಾಲಿಟಿಗಳ ಮಾನಪತ್ರಾರ್ಪಣ ಸಮಾರಂಭವಾಗುತ್ತದೆ. ಜಿಲ್ಲೆಯೊಳಗಿನ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಸುಮಾರು ೫೦೦ ವಿದ್ಯಾರ್ಥಿಗಳು

ಸಂಜೆ ೪ ಘಂಟೆಗೆ ಕಾಡಿ ನಾ| ಗವರ್ನರರಿಗೆ ಸಲ್ಲಾಪ ಕೊಡಲಿರುವ ಸಮಾರಂಭವಾಗುವದು. ಆ ಮೇಲೆ ಗವರ್ನರರು ಊರಿಗೆ ಹತ್ತಿ ಮರಳುವರು.

ಮೊದಲೇ ಛಟ್ಟಂ ಜಾತಿ, ವಂಚಕರ... ಹೆಸರು— ಪತ್ರ ಪೂರೈಸಿದನಿಕ ನಿಂತು ಕಳಿಸಿದ ಸುದ್ದಿ ಪ್ರಕಟವಾಗಲೆಂದು

ಶಿದ್ದಾಪುರ — ಇಲ್ಲಿಯ ಹರಿಜನ ಸೇವಕ ಸಂಘದಲ್ಲಿ ರವ್. ಪಿ. ವಡ್ಡಿ ಹಾನಗಲ ಇವರು ಸಭಾಸದರೆಂದು ಹಿಂದೆ ಬರೆದಿದ್ದ, ಆ ಹೆಸರಿನವರು ಯಾರೂ ಇಲ್ಲ. ನಮ್ಮ ಮುಗಸ್ಥಾನದ ರವ್. ಟಿ. ವಡ್ಡಿ ಬಿ. ಎ., ಎಂದು ಅಂಕಿತ ಈ ಸಂಘದಲ್ಲಿ ಸಭಾಸದನಿಲ್ಲವೆಂದು ಹಾವನೂರ ಶಾಲಾ ಮಾಸ್ತರ ಬಿ. ಟಿ. ಮಾ ವಡ್ಡಿ ಅವರು ತಿಳಿಸುತ್ತಾರೆ.

ಸಾಭಾರ ಸ್ವೀಕಾರ.

ಪ್ರಜಾಮತ- ಮದ್ರಾಸ, ಸ್ವದೇಶಾಭಿಮಾನಿ- ಮಂಗಳೂರ- ಇವೆರಡೂ ಪತ್ರಿಕೆಗಳ ದಸರೆಯ ವಿಶೇಷ ಸಂಚಿಕೆಗಳು ನಮ್ಮ ಕೈಸೇರಿವೆ. ವಿವಿಧ ಲೇಖಗಳಿಂದ ಊ ಛಾಯಾಚಿತ್ರಗಳಿಂದಲೂ ಸಂಚಿಕೆಗಳು ಸಂಗ್ರಾಹ್ಯವಾಗಿವೆ. ಕನ್ನಡ ಪತ್ರಿಕೆಗಳ ಸಾಹಸ ಅಭಿನಂದನೀಯವಿದೆ.

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ ! ಯೋಗ್ಯವಾದ ದಾರಣೆ !!

ಯು. ಶಿವಾ ಎಂಡ್ ಬ್ರದರ್ಸ,

ಒಟೋಮೋಬೈಲ ಇಂಜನಿಯರ್ಸ ಎಂಡ್ ಬೊಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶವರಲೆಟ್ ಬ್ಯೂಕ, ಕ್ರೈಸಲರ ಸಿಟ್ರೋನ್, ಡೊಜ್, ಡಿಸೊಟೊ ಡ್ಯುರಂಟ, ಎಸೆಕ್ಸ, ಎರ್ಸ್ಕಿನ್, ಫಾರ್ಗೋ, ಫ್ಲಾಂಟ, ಜಿ ಎಮ್ ಸಿ, ಫೊರ್ಡ ಎ, ಫೋರ್ಡ ವಿ8, ಹಪ್‌ಮೊಬೈಲ್, ಹಡಸನ್, ವಿಪ್ಪೆಟ್, ಓವರ್‌ಲೆಂಡ, ಪ್ಲಿಮತ್, ಪಿಯರ್ಸ್, ಸ್ಟುಡಬೇಕರ, ರುಗ್ಬಿ, ಸ್ಲೀಪೌಥ, ರಿಯೋ, ಸಿಂಗರ ಮೊದಲಾದ ಯಾವತ್ತೂ ಮೋಟರ್ಸ್ಗಳ ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿಯ ದರದಿಂದಲೂ ಮಾಡಿಕೊಡುವೆವು. ಬೇಕಾದ ನ್ಯಾಜಿನ ಬೋಡ್ಯಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಇದಲ್ಲದೆ—

ಎಕ್ಸೆಗಟ್ಟಿ ಜಮಾನಿಗೆ ಸುಲಭವಾಗಿ ನೀರು ಹಾಯಿಸುವ ಟಿಕಾವ್ಹ ಸಣ್ಣ-ದೊಡ್ಡ ಸೈಜಿನ ರಾಟಗಳನ್ನು ತಯಾರಿಸಿ ಬೇಕಾದಲ್ಲಿ ಫಿಟಿಂಗ ಮಾಡಿಕೊಡುವೆವು, ಬೊಡಿಬಿಲ್ಡಿಂಗ, ಬೇಕಾದ ನಮೂನೆ ಯ ಮಿಚಿಂಗಳೂ ಟ್ಯಾಂಕುಗಳೂ, ಕೊಟ್ಟಿಗೆಯೂ ಮಾಡಿಕೊಡುವೆವು, ಬಡಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ.

ಉತ್ತಮ ಪ್ರತಿಯ ರಚನ, ಪರಮಾವಧಿಯ ಲಾಭವುಳ್ಳ

Kirloskar

'ಕಲ್ಯಾಣ' ನೆಲಗಡ್ಲೆಯ ಯಂತ್ರಕ್ಕೆ

ಮಿಗಿಲಾದ ಬೇರೆ ಯಂತ್ರವಿಲ್ಲ.

ಯಾಕೆಂದರೆ, ಘಂಟೆಗೆ ೫೦ರಿಂದ ೬೦ ಶೇರು ನೆಲಗಡ್ಲೆಯನ್ನು ಸುಲಿಯುವಂತೆ ಇದರಲ್ಲಿ ವಿಸ್ತಾರವಿದೆ, ಮೇಲಾಗಿ ಖರ್ಚು ತೀರ ಕಡಿಮೆ

ದೇಶತುಂಬ ನೂರಾರು ಜನರು ಇದನ್ನು ಉಪಯೋಗಿಸುತ್ತಾರೆ.

ಸಚಿತ್ರ ಕೆಟಲಾಗಿಗೆ ಬರೆಯಿರಿ.



ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಹಾ- ಸಾತಾರಾ.)

Siromani Udipi Narayanacharya,

CHAUKHAMBA, BENARES CITY.

SUJNCO
BENARES CITY

ಮಹಾಶಯರೇ, ರುದ್ರಸೇವ್ಯ ಶ್ರೇಷ್ಠವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಇಷ್ಟಾರ್ಥವನ್ನು ಹೊಂದಿರಿ. ೫೪ ೦ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ದರ 1ಕ್ಕೆ ರೂ. 0 8 0 ಯಿಂದ ರೂ 100 ವರೆಗೆ. ಗೌರಿಶಂಕರ 1ಕ್ಕೆ ರೂ. 3 8-0ರಿಂದ ೨೫ ವರೆಗೆ ಮತ್ತು ಬೇರೆ ಮಾಲುಗಳ ವಿವರ, ತಿಳಿಯಲು ಅಪೇಕ್ಷಿಸುವವರು 0 1-0ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಪಟ ನಮ್ಮ ಕೆಟಲಾಗು ಸಹ ಇನಾಮ ಕಳಿಸಲಾಗುವದು. ಪತ್ತೆ:—

ಶಿರೋಮಣಿ ನಾರಾಯಣಾಚಾರ್ಯ,

ಚೌಖಾಂಬಾ, ಕಾಶೀ ಕ್ಷೇತ್ರ.

ಗಡಿನಾಡಿನ ಗಾಂಧಿಗಳಾದ
ಖಾನ ಅಬ್ದುಲ್ಲ ಗಫೂರಖಾನರವರು

ರಾಷ್ಟ್ರೀಯ ಸಭೆಯ ಸ್ಥಾಪಕರ
ಜನವರ್ಗದ ಅನುಕೂಲತೆಗಾಗಿ ನಿವೃತ್ತರಾದ
ಮಹಾತ್ಮಾ ಗಾಂಧಿಯವರು.

ರಾಷ್ಟ್ರೀಯ ಸಭೆಯ ನಿಸ್ಸೀಮ ಭಕ್ತರಾದ
ಪಂ| ಮದನಮೋಹನ ಮಾಲವೀಯರವರು.

ಕೊಂಗ್ರೆಸ ಉಮೇದ್ವಾರರಿಗೇ ಮತಕೊಟ್ಟು ರಾಷ್ಟ್ರೀಯ ಸಭೆಯ ಪ್ರತಿಷ್ಠೆ ಕಾಪಾಡಿರಿ.

ಹಾಕಲು ತುಂಬಾ ಇಂಬಿದೆ ನಾವದನ್ನೆಲ್ಲ ಕಣ್ಣಾರೆ ನೋಡುತ್ತಿರಬೇಕು ಒಂದೆರಡು ಉದಾಹರಣೆಗಳನ್ನು ನಿಮಗರುಹುತ್ತೇನೆ ಬ್ರಿಟಿಶ ಕಲ್ಲಿದ್ದಲಿಯ ವರ್ತಕರಿಗೆ ಹಿಂದುಸ್ಥಾನದಲ್ಲಿ ಬೇಕಾದಷ್ಟು ಸೌಕರ್ಯಗಳಿವೆ ಅಗ್ಗ ದರದಿಂದ ಜಹಜು ತರಗತಿಯವರೆಲ್ಲ ದ್ದಲಿಯ ಗಣಿಗಳು ಅವರಿಗೆ ದೊರೆಯುತ್ತವೆ ಕಲ್ಲಿದ್ದಲಿಯನ್ನು ಬೇಕಾದ ಕಡೆ, ಬೇಕಾದ ಹಾಗೆ ಒಯ್ಯಲು ಜಕಾತಿ ಸಿದ್ಧವಿದೆ ಆದರೆ ಹಿಂದೀ ವರ್ತಕರಿಗೆ ದುಡ್ಡು ಕೊಟ್ಟರೂ ಒಳ್ಳೇ ಪ್ರತಿಯ ಗಣಿ ಸಿಗಲಾರವು, ನಿಕೃಷ್ಟ ಗಣಿಗಳೊಳಗಿಂದ ಕಲ್ಲಿದ್ದಲಿ ಒಯ್ಯಲು ಜಕಾತಿಗಳ ಸ್ವಾರ್ಥತೆಯಾಗದೆ ವರ್ತಕರು ಸೋಸಾಡಬೇಕು ಜಕಾತಿಯ ಹಾಸಲಿನ ಚಮತ್ಕಾರವೊಂದನ್ನು ಕೇಳಿದರೆ ನಿಮಗೆ ಆಶ್ಚರ್ಯವಾಗುವದು ಅಖಿಲ ಭಾರತೀಯ ಚರ್ಮ ಸಂಘದ ಕಾರ್ಯಕಾರಿ ಮಂಡಳದಲ್ಲಿ ನಾನಿದ್ದೆ ತಿರುಪುರ್ ಪ್ರದೇಶದಲ್ಲಿ ಮದುರಾ, ಕೋಮಲ ಎಂಬ ಎರಡು ಗ್ರಾಮಗಳ ಸೀಮಿನಲ್ಲಿ ಹತ್ತಿ ವಿಪುಲವಾಗಿ ಬೆಳೆಯುತ್ತದೆ ಕೋಮಲದಿಂದ ಮದುರಾಕ್ಕೆ ಅರಳೆ ಗಂಟು ತರಲು ಇರುವಷ್ಟು ರೇಲ್ವೆ ಹಾಸಲಿನಿಂದ ಮುಂಬಯಿಯಿಂದ ಜಪಾನಕ್ಕೆ ಅರಳೆ ಕಳಿಸಬಹುದು "ದಕ್ಷಿಣ ಆಫ್ರಿಕೆಯಿಂದ ಹಿಂದುಸ್ಥಾನದೊಳಗಿನ ಗಿರಣಿಗಳಿಗೆ ಕಲ್ಲಿದ್ದಲಿ ಆಮದು ಮಾಡಲು ತಗಲುವಷ್ಟು ಖರ್ಚು ಹಿಂದುಸ್ಥಾನದಲ್ಲಿ ಬಳಿಯಲ್ಲಿದ್ದ ಗಣಿಗಳೊಳಗಿಂದ ಕಲ್ಲಿದ್ದಲಿ ತರಲು ತಗಲುತ್ತದೆ ಈ ರಾಜ್ಯಘೋರಣದಿಂದ ಯಾರಿಗೆ ಉಪಕಾರ, ಯಾರಿಗೆ ಅಪಕಾರ? ಎಂದು ನೀವೇ ಗ್ರಹಿಸಿದರಾಯಿತು ಈ ಘೋರಣವನ್ನು ನೂತನ ರಾಜ್ಯಭಾರದಲ್ಲಿ ತಿದ್ದುಪಾಟ ಮಾಡಲು ನಮಗೆ ಸಾಧ್ಯವಿಲ್ಲ ಯಾಕೆಂದರೆ ಜಕಾತಿಯ, ಹಾಸಲು ಪತ್ತವನ್ನೇ ಹೊಸ ರಾಜ್ಯಭಾರದಲ್ಲಿ ನಮ್ಮಿಂದ ಸೆಳೆದು ಕೊಳ್ಳಲಾಗಿದೆ ಬೊಕ್ಕಸದ ಕೀಲಿ ಈಗ ನಮ್ಮ ಕೈಯಲ್ಲಿಲ್ಲ, ಮುಂದೆಯೂ ಅಲ್ಲಿ ನಮ್ಮ ಕೈಸಿಲುಕದು ೧೦೦ಕ್ಕೆ ಎಂಭತ್ತು ಹಣ ಸೈನ್ಯ, ದೊಡ್ಡ ದೊಡ್ಡ ಅಧಿಕಾರಿಗಳು, ಪೆನ್ಶನ, ಸಾಲದ ಕಂತು-ಬಡ್ಡಿ ಇವುಗಳಿಗೆ ಖರ್ಚಾಗಿ ಹೋಗುತ್ತದೆ ಪಂಚಮಾಂಶದ ಹಣವನ್ನು ಹಿಂದೀ ದಿವಾಣರು ಹಂಚಿಕೊಂಡಂತೆ ಹಂಚಿಕೊಂಡು, ತಮ್ಮ ತಮ್ಮ ವಿಭಾಗಗಳ ನಿರ್ವಾಹ ಮಾಡಬೇಕು ಈ ಹಣ ವಿಭಾಗ ಸಾಲದು ಸುಮಾರು ೧೦ ಕೋಟಿ ರೂಪಾಯಿ ಈ ಹೊಸ ಸುಧಾರಣೆಗೆ ಬೇಕು. ಮುಂದೆಯೂ ಹೇರಳ ತೆರಿಗೆ ತೆತ್ತ ಪ್ರಜೆಗಳು ಬಳಲಿದ್ದಾರೆ. ಅಂದಲ್ಲಿ ಈ ಬಡವರಂತ ಹೊಸ ಕರ ಹೇಗೆ? ಅದನ್ನು ಹೊರುವವರಾದರೂ ಯಾವ ಸಾಮರ್ಥ್ಯಶಾಲಿಗ?

ರಾಷ್ಟ್ರದ ಘಾತಣೆಗೆ ಪೋಷಕವಾದ ಯಾವದೇ ಯೋಜನೆ ನೂತನ ರಾಜ್ಯಭಾರದಲ್ಲಿಲ್ಲ. ಸಂಸ್ಥಾನಿಕರ ಪ್ರತಿನಿಧಿಗಳೂ ಬ್ರಿಟಿಶ ಸರಕಾರದ ಜೊತೆಗೆ ನಮ್ಮ ಘಾತುಪತ್ಯ ಮಾಡಬರುವರು, ಸಂಸ್ಥಾನಗಳ ರಾಜ್ಯಭಾರದಲ್ಲಿ ಸುಧಾರಣೆ ಮಾಡಲು ನಮಗೆ ಅಧಿಕಾರ ಹಿಂದೀ ಪ್ರತಿನಿಧಿಗಳಿಗಿಲ್ಲ ಇದರ ಪರಿಣಾಮವೇನಂದರೆ— ಸಂಸ್ಥಾನಿಕರೂ, ಬ್ರಿಟಿಶರೂ ಒಂದಾಗಿ ಇನ್ನು ಮುಂದೆ ಹಿಂದುಸ್ಥಾನದೊಳಗಿನ ಪೂರ್ಣಸ್ವರಾಜ್ಯ ಚಳವಳಿಯ ಗೋಣು ಮುರಿಯಲು ಒಟ್ಟಾಗಿ ಕಟಿಬದ್ಧರಾಗುತ್ತಾರೆ ಇದರಿಂದ ಸಂಸ್ಥಾನಿಕರು ತಮ್ಮ ಗೋಣೂ ಮುರಿಕೊಂಡು ಸಂಪೂರ್ಣವಾಗಿ ಬ್ರಿಟಿಶರ ಕೈಗೊಂಬೆಯಾಗುವರೆಂಬ ಮಾತು ಬೇರೆ.

ಸತ್ಯಾಗ್ರಹವು ನೈತಿಕ ಸಂಗ್ರಾಮವಿದೆ ಅಂತರಂಗದಲ್ಲಿಂದು, ಬಹಿರಂಗದಲ್ಲಿಂದು, ಹೀಗೆ ಕಪಟ ನೀತಿಗೆ ಸತ್ಯಾಗ್ರಹದಲ್ಲಿ ಎಡೆಯಿಲ್ಲ ಆತ್ಮಕ್ಲೇಶ ಸಹಿಸಿ ಪ್ರತಿಸ್ಪರ್ಧಿಗಳಿಗೆ ಮನಃಪೂರ್ವಕವಾಗಿ ಜಯಿಸುವದೇ ಸತ್ಯಾಗ್ರಹಿಯ ಧ್ಯೇಯ. ಸತ್ಯಾಗ್ರಹಿಗಳು ನೈತಿಬಲವನ್ನು ದೃಷ್ಟಿಯಿಂದ ಆಶ್ರಯಿಸದೆ ಸಂಕಾರವು ಕಪೋಲಕಲ್ಪನದಿಂದ ಮಾಡಿದ ಜಪ್ತಿಯ ಕ್ರಮಕ್ಕೂ, ದಂಡದ ಕ್ರಮಕ್ಕೂ ಪ್ರಜೆಗಳು ಹೆದರಿದ್ದರಿಂದ ಸತ್ಯಾಗ್ರಹಕ್ಕೆ ತಡವಾಕುವ ಪ್ರಸಂಗ ಬಂತು ಆದಾಗ್ಯೂ ಯಾರೂ ಎದೆಗುಂದುವ ಕಾರಣವಿಲ್ಲ ಹಿಂದುಸ್ಥಾನವನ್ನು ವಿಶಾಲವಾದ ದಾಸ್ಯವನ್ನು ಪಾರತಂತ್ರ್ಯದಿಂದ ವಿಮೋಚನ ಮಾಡುವ ಕಾರ್ಯ ಸಾಮಾನ್ಯವಲ್ಲ, ಅತ್ಯಂತ ಕಠಿಣವಾದ ಕೆಲಸವಿದು ಕಾಲ-ಕಾಲಕ್ಕೆ ಒದಗುವ ತಪ್ಪು-ತಡೆಗಳನ್ನು ನಾವು ವಿಮರ್ಶಿಸಿ ಅವನ್ನು ಪರಿಹರಿಸಿಕೊಳ್ಳಲು ಪ್ರಯತ್ನ ಮಾಡಬೇಕು ಅದಕ್ಕಾಗಿಯೇ ಮಹಾತ್ಮರು ಕಳೆದ ಏಪ್ರಿಲ ೭ನೇ ತಾರೀಖಿಗೆ ಪ್ರಕಟಣೆಯನ್ನು ಹೊರಡಿಸಿ ಕೌನ್ಸಿಲು ಪ್ರವೇಶಕ್ಕೆ ಸಮ್ಮತಿಯನ್ನಿತ್ತರು. ಅದಕ್ಕಾಗಿ ಕೊಂಗ್ರೆಸ ಪಾರ್ಲಮೆಂಟರಿ ಬೋರ್ಡಿನ ಸ್ಥಾಪನೆಯಾಯಿತು ಈಗ ನಾವೆಲ್ಲರೂ ವರಿಷ್ಠ ಕಾಯಿದೆ ಕೌನ್ಸಿಲಿನ ಇಲೆಕ್ಷನುಗಳಲ್ಲಿ ರಾಷ್ಟ್ರೀಯ ಸಭೆಯ ಜಯವು ಯಾಗುವಂತೆ ಪ್ರಚಾರ ನಡಿಸಲು ತೊಡಗಿದ್ದೇವೆ ಕೌನ್ಸಿಲು ಪ್ರವೇಶ ಕಾರ್ಯಕ್ರಮದ ಉಲ್ಲೇಖ ಮಾಡಿದ ಬಳಿಕ ಜಾತಿನಿರ್ಣಯದ ಮೇಲೆ ಉಂಟಾದ ಮತಭೇದವನ್ನು ನಾನು ಅರುಹಬೇಕು. ಬ್ರಿಟಿಶ ಸರಕಾರವು ಮುಂದಿನ ಕಾಯಿದೆ ಕೌನ್ಸಿಲುಗಳಲ್ಲಿ ಯಾವ ಯಾವ ಜಾತಿಗಳ ಎಷ್ಟೆಷ್ಟು ಮಂದಿ ಕಳಿಸಬೇಕೆಂಬುದರ ಕುರಿತು ಜಾತಿ ನಿರ್ಣಯದ ಪತ್ರಿಕೆಯನ್ನು ಹೊರಡಿಸಿದೆ ಇದರಿಂದ ರಾಷ್ಟ್ರಕ್ಕೆ ಬೇರೆ ಬೇರೆ ಜಾತಿಗಳೊಳಗೆ ಹಂಚಿಹಾಕಿ ಏಕರಾಷ್ಟ್ರೀಯ ಭಾವನೆಗೆ ಭಂಗ ತರಲಾಗಿದೆ ಆದರಿಂದ ಇದು ರಾಷ್ಟ್ರಹಿತವಿಘಾತಕವಾದುದೆಂದು ಎಲ್ಲರೂ ಅಭಿಪ್ರಾಯಪಟ್ಟಿರುತ್ತಾರೆ ಇವರೊಳಗೆ ಮುಸಲ್ಮಾನರಿಗೆ ಕೆಲ

ಅನುಕ ಲಕ್ಷ [illegible] ಪಕ್ಷ [illegible] ಅವರನ್ನು ಕೊಂದು [illegible] ಎತ್ತಿಹಿಡಿಯು [illegible] ಸಮಾ [illegible] ಬಳಿ [illegible] ವಿದ್ದರಿಂದ ಹಿಂದು [illegible] ಸಮಾಜಗಳು [illegible] ಇದರಿಂದ [illegible] ರಾಷ್ಟ್ರೀಯ [illegible] ಸಂಗದವ ಪಕ್ಷ [illegible] ಮತ್ತು [illegible] ಮಾಡಿದ್ದು [illegible] ಗ್ರೆಸ [illegible] ನ್ನು [illegible] ಇದೀ [illegible] [illegible]

[illegible] ಉತ್ಸಾಹದಿಂದ [illegible] ಯಾಗಿ [illegible] ರಾಷ್ಟ್ರೀಯ [illegible]

[illegible] ಅಂಗೀಕರಿಸಿದೆ ಮತದಾರರು ರಾಷ್ಟ್ರೀಯ ಸಭೆಯ ಉಮೇದ್ವಾರರನ್ನು ಆರಿಸಿ [illegible] ಯ ಸಭೆಯು [illegible] ಪ್ರಾತಿನಿಧಿಕ ಸಂಸ್ಥೆಯೆಂದು ಸಿದ್ಧಪಡಿಸಬೇಕು ಸರಕಾರವು [illegible] ನಿಂದ [illegible] ಸ್ವಾತಂತ್ರ್ಯ [illegible] ಇವು ನಮ್ಮ ಅಮೋಘವಾದ [illegible] ಕ್ರಿಯಾ [illegible] ಸತ್ಯ [illegible] ನಮ್ಮ [illegible] ಸತ್ಯಾಗ್ರಹ [illegible] ಜಯಘೋಷದಲ್ಲಿ ನಮ್ಮ [illegible] ಮುಗಿಸಿದರು

ಮುಂಬಯಿಯಲ್ಲಿ ರಾಷ್ಟ್ರೀಯ ಸಭೆಯ ೪೮ನೇ ಅಧಿವೇಶನದ ಲೋಕವೈಭವ!

ಒಂದು ಲಕ್ಷಕ್ಕೆ ಮಿಕ್ಕ ಪ್ರತಿನಿಧಿ-ಪ್ರೇಕ್ಷಕ ಜನಸಮುದಾಯ !

[ಸ್ವಂತ ಪ್ರತಿನಿಧಿಗಳಿಂದ ಬಂದ ತಂತಿ ವಾರ್ತೆಗಳ ಮೇಲಿಂದ]

ಪಂ| ಮಾಲವೀಯರ ಉಪಸೂಚನೆ ರದ್ದಾಗಿ, ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಧೋರಣಕ್ಕೆ ಒಪ್ಪಿಗೆ

ಕಾಂಗ್ರೆಸು ಇನ್ನೆರಡು ದಿನ ನಡೆಯುವದು!

ಮುಂಬಯಿಯೊಳಗಿನ [illegible] ರಾಷ್ಟ್ರೀಯ ಸಭೆಯ ಲೋಕವೈಭವವನ್ನು ಬಣ್ಣಿಸಲು [illegible] ಯಾವತ್ತು ಅಧಿವೇಶನಗಳಿಗಿಂತ ಈ ಅಧಿವೇಶನ [illegible] ಸ್ವಾಗತ [illegible] ಅಪೂರ್ವ [illegible] ಶುಕ್ರವಾರ ಸಂಜೆ ೭ ಘಂಟೆಗೆ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಪ್ರಾರಂಭ, ಮಧ್ಯಾಹ್ನ [illegible] ಲೋಕೋತ್ತರ ಪ್ರವಾಹವು ಅಲ್ಲಲ್ಲಿ [illegible] ನಗರಕ್ಕೆ [illegible] ಸ್ವಯಂಸೇವಕರು ಪ್ರಚಂಡ ಜನಸಮುದಾಯಕ್ಕೆ [illegible] ಪ್ರಶಂಸನೀಯವಾದ ಸ್ವಯಂಸೇವಕ ದಲವು ಮಂಟಪವನ್ನು [illegible] ಸರಿಯಾಗಿ ಸಂಜೆ ೭| ಘಂಟೆಗೆ ರಾಷ್ಟ್ರೀಯ ಸಭಾಕಾರ್ಯಕ್ಕೆ ಪ್ರಾರಂಭವಾಯಿತು ರಾಷ್ಟ್ರೀಯ ಸಭೆಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ನರಿಮಾನರವರು ರಾಷ್ಟ್ರೀಯ ಸಭೆಗೆ ಬಂದ ಪ್ರತಿನಿಧಿ ಪ್ರೇಕ್ಷಕರ ಸ್ವಾಗತ ಮಾಡಿ ಸ್ವಾಗತಪತ್ರಿಕೆಯನ್ನು ಓದಿದರು [illegible] ಹಿಂದುಸ್ಥಾನ [illegible] ಯೋಜನೆಯಿಂದ [illegible] ರಾಜ ಪದ್ಧತಿಯನ್ನು ಸ್ಥಿರಪಡಿಸುವದಕ್ಕಾಗಿ ಈ ಯೋಜನೆಯಾಗಿದೆಂಬದು

[illegible] ಪಂ| ಮದನಮೋಹನ ಮಾಲವೀಯರವರ [illegible] ಪ್ರಚಂಡ [illegible] ಪಂ| ಮದನಮೋಹನ ಮಾಲವೀಯರವರ ರಾಷ್ಟ್ರೀಯ ಸಭೆಯ [illegible] ಶ್ರೀ ನರಿಮಾನರವರ [illegible] ಹೊಸ ಪಕ್ಷವನ್ನು [illegible] ರಾಷ್ಟ್ರೀಯ ಸಭೆಯಲ್ಲಿ ಜಾತೀಯ [illegible] ಎಡೆಯಿಲ್ಲವೆಂದು [illegible]

ಮಹಾತ್ಮರ [illegible] ರಾಷ್ಟ್ರೀಯ ಸಭೆಯ ಘಟನೆಯಲ್ಲಿ ತಿದ್ದುಪಾಟು ಮಾಡಲು [illegible] ಮಂಡಲದವರು ಏಕಮತದಿಂದ ಒಪ್ಪಿ [illegible] ಸಮಾಜ [illegible]

[illegible] ಮಹಾತ್ಮರ [illegible] ರಾಷ್ಟ್ರೀಯ ಸಭೆಯ ಅಧಿವೇಶನವು ಮಂಗಳವಾರದ ತನಕ ನಡೆಯಬಹುದು

ರಾಷ್ಟ್ರೀಯ ಸಭೆಯ ಹೊಸ ಘಟನೆಯಲ್ಲಿ ಪ್ರತಿನಿಧಿ ಸಂಖ್ಯೆಯನ್ನು ೬೦೦೦ದಿಂದ ೧೦೦೦ಕ್ಕೆ ಇಳಿಸ [illegible] ಕಾಂಗ್ರೆಸ ಸಂಸ್ಥೆಗಳ ಅಧಿಕಾರಿಗಳೂ ಪ್ರತಿನಿಧಿ [illegible] ಸ್ವಂತ [illegible] ಇಲ್ಲಿಗೆ ಕಾಂಗ್ರೆಸ ಕಾರ್ಯಕಾರಿ ಮಂಡಳ [illegible] ಮಾಡಿದಂತೆ [illegible] ಸಮ್ಮತಿ [illegible] ಬಹುಮತ [illegible] ಯಾವ [illegible]

ರಾಷ್ಟ್ರೀಯ ಸಭೆಯ ಪ್ರಥಮ ದಿವಸ [illegible] ಉಪಸ್ಥಿತರಿದ್ದರು [illegible] ರಾಷ್ಟ್ರೀಯ ಸಭೆ [illegible] ಅಧ್ಯಕ್ಷರು [illegible] ತಿರಸ್ಕರಿಸಿದರು [illegible] ಎಂಬ ಸಂಗತಿಗಳನ್ನು ತಿಳಿದುಕೊಳ್ಳದೆ [illegible] ಅಧ್ಯಕ್ಷರ ಆಸನ [illegible]

— ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಮುಂಬಯಿಗೆ [illegible] ಭಾಷಣ [illegible] ಮಹಾತ್ಮರು [illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಗವ್ಹರ್ನರರ [illegible] ದೊರೆಗಳ ಆಗಮನಕ್ಕಾಗಿ [illegible] ವ್ಯವಸ್ಥೆ [illegible] ಗವ್ಹರ್ನರರ ಆಗಮನದ ಕಾರ್ಯಕ್ರಮವು [illegible] ನಾಳೆ ಬೆಳಗಿನ [illegible] ಘಂಟೆಗೆ [illegible] ಗವ್ಹರ್ನರರು [illegible] ಬಂಗಲೆಯಲ್ಲಿ [illegible] ಘಂಟೆಗೆ [illegible] ಭೋಜನ [illegible] ಅಲ್ಲಿಂದ ಹೊರಟು [illegible]

ಮೆಸ್ಸೆ [illegible]

ಭಟಕಳ— (ತಾ [illegible]) [illegible] ಗಂಜಿಯ [illegible]

ಶಿರಸಿ— (ತಾ [illegible]) [illegible]

[illegible]

ಸಿದ್ದಾಪುರ— (ತಾ [illegible]) [illegible] ಘಂಟೆಗೆ [illegible]

ಅವ್ವಸರ್ಗ— (ತಾ [illegible]) [illegible]

ಹೊನವಾರ— (ತಾ [illegible]) [illegible]

[ಮುಂದೆ ಇನೇ (ರ) ಪಾನು ನೋಡಿರಿ]

ಬಾಬು ರಾಜೇಂದ್ರ ಪ್ರಸಾದರವರು.

ಅಲ್ಪ ಪರಿಚಯ.

ಮುಂಬಯಿಯಲ್ಲಿ ಕಳೆದ ಶುಕ್ರವಾರ ಶನಿವಾರ ರವಿವಾರ ಸೇರಿದ ೪೮ ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಚಂಪಾರಣ್ಯದಿಂದಲೂ ವೀರ ಮಹಾದಾಯಕರೊಬ್ಬರು, ಮಹಾತ್ಮರ ನಿಷ್ಠಾವಂತ ಅನುಯಾಯಿಗಳು, ಒಡನಾಡಿಗಳ ಹಿತಕ್ಕಾಗಿ ದಣಿಯದೆ ದುಡಿಯುವಂಥವರು, [illegible] ಇವರ [illegible], ದೇಶೋದ್ಧಾರವೇ ಜೀವನದ ಇತಿಕರ್ತವ್ಯ ಎಂದು ಪೂರ್ಣ ತ್ಯಾಗ [illegible]. ಉತ್ತರ ಬಿಹಾರ ಪ್ರಾಂತದ ಸಾರನ ಜಿಲ್ಹೆಯ ಜೀರದೇಯಿ ಗ್ರಾಮದ ಕುಲೀನ ಕಾಯಸ್ಥ ಮನೆತನದಲ್ಲಿ ಸಂವತ್ ೧೯೪೧ ನೇ ವಿಕ್ರಮ ಸಂ॥ ಪೂರ್ಣ [illegible] ೨೬ ಅಂದರೆ, ತಾ ೩-೧೨-೧೮೮೪ ನೇ ಜನ್ಮ ತಾಳಿದರು. ಇವರ ತಂದೆಯ ಹೆಸರು ಮಹಾದೇವ ಸಹಾಯ ಎಂದು. ವಂಶ ಪರಂಪರೆಯಿಂದ [illegible] ರಾಜೇಂದ್ರರು ಮನೆಯ ವರ [illegible] ನೇ ವಯಸ್ಸಿನಲ್ಲಿ [illegible] ರಾಜೇಂದ್ರರ ತಂದೆ ಮಹಾದೇವ ಸಹಾಯರವರ ೧೯೦೭ ನೇ ಇಸ್ವಿಯಲ್ಲಿ ದಿವಂಗತರಾದ ತರುವಾಯ ರಾಜೇಂದ್ರರ ಜ್ಯೇಷ್ಠ ಸಹೋದರರಾದ [illegible] ಮಹೇಂದ್ರ ಪ್ರಸಾದರವರು ಪ್ರೀತಿಯಿಂದ ನಡಿಸಿದರು. ಮಹೇಂದ್ರ ಪ್ರಸಾದರು ಲೋಕಸೇವಾಸ್ವಾತಂತ್ರ್ಯವನ್ನೂ, ರಾಜಕೀಯ ಸ್ವಾತಂತ್ರ್ಯವನ್ನೂ ಪಡೆದ [illegible] ರಂದೇ ದಿವಂಗತರಾದರು. ಮಹೇಂದ್ರ ಪ್ರಸಾದರವರು ನಿಸ್ಪೃಹ ಲೋಕಸೇವಕರು. ಸಹಕಾರಿ ಸಂಘ, ಬ್ಯಾಂಕು, [illegible] ಮೊದಲಾದ ಚಳುವಳಿಕೆಗಳಲ್ಲಿ ಒಳ್ಳೇ ಮಾನ್ಯತೆ ಪಡೆದಿದ್ದರು. ೧೮೯೩ ನೇ ಇಸ್ವಿಯಲ್ಲಿ ಛಪ್ರಾ ಶಾಲೆಯಲ್ಲಿ ರಾಜೇಂದ್ರ ಪ್ರಸಾದರ ವಿದ್ಯಾಭ್ಯಾಸಕ್ಕೆ ಪ್ರಾರಂಭವಾಯಿತು. ೧೯೦೨ ನೇ ಇಸ್ವಿಯಲ್ಲಿ ಅಂದರೆ ೧೮ ನೇ ವರ್ಷ ವಯಸ್ಸಿನಲ್ಲಿಯೇ ಇವರು ಕಲಕತ್ತೆಯ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿಯೇ ಒಳ್ಳೇ ಹೆಸರು ಪಡೆದು ತೇರ್ಗಡೆ ಹೊಂದಿದರು, ಮೊದಲನೇ ನಂಬರು ಪಡೆದರು. ಆ ಕಾಲದಲ್ಲಿ ಬಿಹಾರ-ಬಂಗಾಲ ಪ್ರದೇಶಗಳು ಒಟ್ಟಿಗಿದ್ದವು. ಬಿಹಾರಿಗಳು ಅಗ್ರಸ್ಥಾನ ಪಡೆದದ್ದು ಇದೇ ಮೊದಲು. ಇದರಿಂದ ಬಿಹಾರ ಪ್ರಾಂತದಲ್ಲೆಲ್ಲ ಒಂದು ಪ್ರಕಾರದ ಆನಂದವೇ ಹಬ್ಬಿಕೊಂಡಿತು. ಆ ಮೇಲೆ ರಾಜೇಂದ್ರ ಪ್ರಸಾದರು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜನ್ನು ಸೇರಿದರು. ಇಂಟರಮೀಡಿಯೆಟ್ ಪರೀಕ್ಷೆಯಲ್ಲಿ ಪುನಃ ೧ನೇ ನಂಬರು ಪಡೆದರು. ಬಿ. ಎ. ಪರೀಕ್ಷೆಯಲ್ಲಿಯೂ ೧ನೇ ನಂಬರು. ಆ ಮೇಲೆ ಎಮ್. ಎ. ಪರೀಕ್ಷೆಯಲ್ಲಿಯೂ, ವಕೀಲಿ ಪರೀಕ್ಷೆಯಲ್ಲಿಯೂ ಇವರು ತೇರ್ಗಡೆ ಹೊಂದಿದರು. ಎಮ್. ಎಲ್. ಪರೀಕ್ಷೆಯಲ್ಲಿ ಅಂದರೆ, ವಕೀಲಿಯ ಕೊನೆಯ ಪರೀಕ್ಷೆಯಲ್ಲಿ ಪುನಃ ೧ ನೇ ನಂಬರು ಪಡೆದರು. ಇವರಿಗೆ ದೊರೆತಷ್ಟು ಗುಣಗಳು ಹಿಂದೆ ಯಾವ ವಿದ್ಯಾರ್ಥಿಗೂ ದೊರೆತಿದ್ದಿಲ್ಲ. ಇಂಗ್ಲಿಷ ಭಾಷೆಯಲ್ಲಂತೂ ಇವರು ಒಳ್ಳೇ ನಿಪುಣರಿದ್ದರು. ಎಮ್. ಎ. ಪರೀಕ್ಷೆಗೆ ಇಂಗ್ಲಿಷ ವಿಷಯವೇ ಇವರ ಮುಖ್ಯ ವಿಷಯವಾಗಿದ್ದಿತು. 'ನಮ್ಮ ಈ ಕಾಲೇಜಿನಲ್ಲಿ ಇಂಗ್ಲಿಷ ಒಳ್ಳೆವನೆಂದರೆ ರಾಜೇಂದ್ರನು," ಹೀಗೆ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರು ಆಗಿಂದಾಗ ನುಡಿಯುತ್ತಿದ್ದರು. ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ಬಳಿಕ, ರಾಜೇಂದ್ರ ಪ್ರಸಾದರವರು ಮುಜಫ್ಫರಪುರದ [illegible] ಗ್ರಿಯರ ಕಾಲೇಜಿನಲ್ಲಿ ೧ ವರ್ಷದ ತನಕ ಪ್ರೊಫೆಸರರಾದರು. ಆ ಮೇಲೆ ಕಲಕತ್ತೆಗೆ ಬಂದು ಒಬ್ಬ ವಕೀಲರ ಕಡೆ ಉಮೇದ್ವಾರರಾಗಿ ನಿಂತರು. ಅಲ್ಲಿ ಉಮೇದ್ವಾರಿ ನಡಿಸಿದ ಬಳಿಕ ವಕೀಲಿ ನಡಿಸಲಾರಂಭಿಸಿದರು.

ಮುಂಬಸಂತೆಯೇ ರಾಜೇಂದ್ರರಿಗೆ ಲೋಕಸೇವೆಯ ಆಸಕ್ತಿ. ಕಾಲೇಜಿನಲ್ಲಿ ಸೇರಿದೊಡನೆ ಇವರೊಂದು ಬಿಹಾರಿ ಕೂಟವನ್ನು ಸ್ಥಾಪಿಸಿದರು. ಕಲಕತ್ತೆಗೆ ಬರುವ ಬಿಹಾರಿ ವಿದ್ಯಾರ್ಥಿಗಳಿಗೆ ಅಲ್ಲಿ ಉಳಕೊಳ್ಳುವ ವ್ಯವಸ್ಥೆ ಮಾಡುವದೇ ಈ ಕೂಟದ ಉದ್ದೇಶವು. ೧೯೦೫ ರಲ್ಲಿ [illegible] ಚಟುವಟಿಕೆಗಳು ಬೆಳೆದವು. ವಂಗಭಂಗದ ವಿರುದ್ಧ ಬೀಸಲಾರಂಭಿಸಿತು. ಆದರಿಂದ ಈ ಕೂಟವು ಬಿಹಾರಿ ವಿದ್ಯಾರ್ಥಿಗಳ ಪರಿಷತ್ತಾಗಿ ಪರಿಣಮಿಸಿತು. ಆ ಕಾಲದ ಸ್ವದೇಶಿ ಪುರಸ್ಕಾರ, ಪರದೇಶಿ ಬಹಿಷ್ಕಾರ ವಂಗಭಂಗದ ಧಿಕ್ಕಾರ ಮೊದಲಾದವುಗಳಲ್ಲಿ ರಾಜೇಂದ್ರರು ಮನಸ್ಪೂರ್ತಿ ಪರಿಶ್ರಮ ಪಡುತ್ತಿದ್ದರು. ಆ ಮೇಲೆ ಇದೇ ಬಿಹಾರ-ಬಂಗಾಲ ಪ್ರಾಂತಗಳಲ್ಲಿ ವಿದ್ಯಾರ್ಥಿ ಸಂಘಗಳೂ, ಪರಿಷತ್ತುಗಳೂ ಸ್ಥಾಪಿಸಲಾರಂಭಿಸಿದವು. 'ವಂದೇ ಮಾತರಮ್' ಎಂಬ [illegible] ಆಗ ಸರಕಾರಿ ಪ್ರತಿಬಂಧವಿತ್ತು, ರಾಜೇಂದ್ರರು ತಪ್ಪನ ಅದನ್ನು ಉಲ್ಲಂಘಿಸಿ, ಬಿಹಾರ ಪ್ರಾಂತದಲ್ಲಿ ನಡಿಸಿದ ಪ್ರಚಂಡ ಪ್ರಚಾರ ಕಾರ್ಯವನ್ನು ಮಾಡಿದರು. ವಿದ್ಯಾರ್ಥಿ ಸಂಘಗಳ ಪರಿಷತ್ತನ್ನು ಮಾನ್ಯ ಮುಂದಾಳುಗಳ ನೇತೃತ್ವದಲ್ಲಿ ಸೇರಿಸಿ ಇಡೀ ವಿದ್ಯಾರ್ಥಿ ವರ್ಗದ ಮನಸ್ಸನ್ನು ಇವರು ಸೆಳೆದುಕೊಂಡರು. ಲೋಕಸೇವೆಯ ರಚನ ಮುಗಿದೊಡನೆ ಇವರು ಪುನಃ ಕಲಕತ್ತೆಗೆ ಹೋಗಿ ವಕೀಲಿ ನಡಿಸುತ್ತಿದ್ದರು. ರಾಜೇಂದ್ರರ ವಕೀಲಿಯನ್ನು ಸಹಕಾರಿಗಳೆಲ್ಲರೂ ಪ್ರಶಂಸಿಸುತ್ತಿದ್ದರು. ೧೯೧೬ ನೇ ಇಸ್ವಿಯಲ್ಲಿ ಬಿಹಾರ ಪ್ರಾಂತದ ರಾಜಧಾನಿಯಾದ ಪಾಟಣಾ ಪಟ್ಟಣದಲ್ಲಿ ಹೈಕೋರ್ಟು ಸ್ಥಾಪನೆಯಾಯಿತು. ಅಂದಿನಿಂದ ರಾಜೇಂದ್ರರ ಕಾರ್ಯಕ್ಷೇತ್ರವು ಬಿಹಾರ ಪ್ರಾಂತವಾಯಿತು. ಲೋಕಸೇವೆಯಿಂದ ರಾಜೇಂದ್ರರ ಕೀರ್ತಿ ಉದ್ದಿಮೆಗೆ ಒಂದು ಪ್ರಕಾರದ [illegible] ಅಪೇಕ್ಷೆಗೆ ಮೀಕ್ಕಿ ಆವರಿಗೆ ಸಂಪಾದನೆಯಾಗುತ್ತಿತ್ತು. ಬಿಹಾರ ಪ್ರಾಂತದೊಳಗಿನ ಯಾವತ್ತು ಸಂಸ್ಥೆಗಳಲ್ಲಿ ಇವರ ಅಂಗವಿದ್ದಿತು. ಪಾಟಣಾ ವಕೀಲರ ಸಂಘದ ಪ್ರಮುಖರಿವರು. ವಿಶ್ವವಿದ್ಯಾಲಯ, ನಾಗರಿಕರಸಭೆ, ವಿದ್ಯಾರ್ಥಿ ಸಂಘ ಮೊದಲಾದವುಗಳಲ್ಲಿ ಇವರು ಒಳ್ಳೇ ಪರಿಶ್ರಮಪೂರ್ವಕವಾಗಿ ದುಡಿಯುತ್ತಿದ್ದರು. ವಿಶ್ವವಿದ್ಯಾಲಯದ ಪರವಾಗಿ ಇವರು ಹಿಂದೀ ಭಾಷೆಗೆ ಸರಕಾರಮಾನ್ಯತೆ ಪಡಕೊಂಡರು. ದೇಶಭಾಷೆಗಳಿಂದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕಾಗಿ ನಿಯಮ ಮಾಡಿದರು. ರಾಜೇಂದ್ರರಿಗೆ ಕೈ॥ ವಾ॥ ಗೋಖಲೆಯವರು ಭಾರತ ಸೇವಕ ಸಮಾಜದ ಸಭಾಸದರಾಗಿ ಸೇರಬೇಕೆಂದು [illegible] ರಾಜೇಂದ್ರರಿಗೆ ಮನಸ್ಸಿತ್ತು, ಆದರೆ ಪಿತೃಸ್ಥಾನದಲ್ಲಿದ್ದ ಅಣ್ಣಂದಿರಾದ ಮಹೇಂದ್ರರು ಅಪ್ಪಣೆ ಕೊಡದ್ದರಿಂದ ರಾಜೇಂದ್ರರ ನಿರುಪಾಯವಾಯಿತು. ೧೯೧೦ನೇ ಇಸ್ವಿಯಲ್ಲಿ ಅಣ್ಣಂದಿರ ಕಡೆ ಅಪ್ಪಣೆ ಬೇಡುವಾಗ ರಾಜೇಂದ್ರರು ಬರೆದದ್ದೇನಂದರೆ — 'ನಾನು ಭಾವನಾವಶನಾಗಿದ್ದೇನೆ, ನಮ್ಮಕ್ಷ ಮಾತನಾಡಲಾರೆ. ನಿಮಗೆ ಸಂಕಷ್ಟದಲ್ಲಿ ಹಾಕಿ ಕೃತಘ್ನನಾಗಲಾರೆ. ೩೦ ಕೋಟಿ ಜನಾಂಗಕ್ಕಾಗಿ ನೀವು ಸ್ವಾರ್ಥತ್ಯಾಗ ಮಾಡಬೇಕು. ಗೋಖಲೆಯವರ ಸಂಪರ್ಕ ಸೇರಿದ್ದರಿಂದ ನಾನೇನು ಸ್ವಾರ್ಥತ್ಯಾಗ ಮಾಡಿದಂತಾಗುವದಿಲ್ಲ. ಯಾಕಂದರೆ, ನಾನು ಬೇಕಾದ ಸ್ಥಿತಿಯಲ್ಲಿ ಉಳಿಯಬಲ್ಲೆ, ನನ್ನ ಶಿಕ್ಷಣವೇ ಹಾಗಿದೆ. ನನ್ನ ಶಿಕ್ಷಣವು ತೀರ ಸಾಮಾನ್ಯವಾದುದು ಎನಿಸಿದ್ದರೂ ನನಗೆ ಸುಖವೇ. ಆದರೆ, ನಿಮ್ಮ ಮಾತು ಹಾಗಲ್ಲ. ನನ್ನ ಮೇಲೆ ನೀವು ಒಳ್ಳೇ ಆಶೆ ಮಾಡಿದ್ದೀರಿ. ನಾನು ಭಾರತ ಸೇವಕನಾದರೆ ಯಾವತ್ತು ಆಶೆಗಳು ಬಯಲಾಗುತ್ತವೆ. ಜಗತ್ತು ಕ್ಷಣಭಂಗುರವಾದದ್ದು. ಐಶ್ವರ್ಯ, ಪ್ರತಿಷ್ಠೆ, ಗೌರವ ಎಲ್ಲವೂ ಇಲ್ಲಿ ನಾಶಹೊಂದುವವು. ಐಶ್ವರ್ಯಪ್ರಾಪ್ತಿಯಾದ ಹಾಗೆ ನಮಗೆ ಅದರ ಹೆಚ್ಚು ಐಶ್ವರ್ಯ ಪ್ರಾಪ್ತಿಯಿಂದ ಸಮಾಧಾನವಾಗದಾಗಿ ಹೇಳುವವರ ಕಡೆ ಕೇಳಿರಿ. ಬಾಹ್ಯ ಅನುಕೂಲತೆಗಳಿಂದ ಸುಖಪ್ರಾಪ್ತಿಯಿಲ್ಲ. ಒಂದೆರಡು ರೂಪಾಯಿಗಳಿಂದ ಬಡಬಗ್ಗರು ಆನಂದದಲ್ಲಿರುತ್ತಾರೆ, ಆಷ್ಟು ಸಂತೋಷ ಲಕ್ಷಾಧೀಶರಿಗಿರದು. ಆದರಿಂದ ದಾರಿದ್ರ್ಯವನ್ನು ನಾವು ತಿರಸ್ಕರಿಸಕೂಡದು. ಜಗತ್ತಿನಲ್ಲಿ ದೊಡ್ಡವರೆಂದು ಖ್ಯಾತಿಗೊಳ್ಳುವವರು ತೀರ ಬಡವರಿರುತ್ತಾರೆ. ನನ್ನಿಂದ ದೇಶಕ್ಕೆ ಕಿಂಚಿತವಾದರೂ ಸೇವೆಯಾಗಬೇಕಾಗಿ ನಾನು ಹಂಬಲಿಸುತ್ತೇನೆ. ಇದಕ್ಕೊ ನನಗೆ ಹೆಚ್ಚಿನ ಆಶೆಯಿಲ್ಲ. ಗೋಖಲೆಯವರನ್ನು ಕೀರ್ತಿ ಸಂಸ್ಥಾಪಿಕರೆಂದಾದರೂ ತಿಳಿಯುವದೇನು? ಅವರು ಬಡವರಲ್ಲವೇ?" ಈ ಪ್ರಕಾರ ರಾಜೇಂದ್ರರು ಬರೆದಾಗ್ಯೂ, ಮಹೇಂದ್ರರಿಂದ ಅಪ್ಪಣೆ ಸಿಗಲಿಲ್ಲ. ಈ ಸಂಕಲ್ಪವೇ ಬೇರೆಯಿರಬೇಕು. ಮಹಾತ್ಮರ ಅನುಯಾಯಿಗಳಾಗಿ, ರಾಷ್ಟ್ರೀಯ ಸಭೆಯ ನಿಷ್ಠಾವಂತ ಸೇವಕರಾಗಿ ಅವರಿಂದ ದೇಶೋದ್ಧಾರವಾಗುವದಿದೆ.

೧೯೧೭ ನೇ ಇಸ್ವಿಯಲ್ಲಿ ಚಂಪಾರಣ್ಯದ ಸತ್ಯಾಗ್ರಹದಲ್ಲಿ ಮಹಾತ್ಮರ ಸಹವಾಸ ರಾಜೇಂದ್ರರಿಗಾಯಿತು. ಚಂಪಾರಣ್ಯದ ಚೌಕಶಿ ಕ್ರಮದಲ್ಲಿ ರಾಜೇಂದ್ರರು ಮಹಾತ್ಮರೊಡನೆ ದುಡಿದು ಅಲ್ಲಿಯ ಒಕ್ಕಲಿಗರ ಕಷ್ಟಪರಿಹಾರ ಮಾಡಿದರು. ೧೯೧೯ನೇ ಇಸ್ವಿಯ ತನಕ ರಾಜೇಂದ್ರರು ವಾಡಿಕೆಯಂತೆ "ಸನದಶೀರ" ಚಳುವಳಿಯಿಂದಲೇ ದೇಶೋದ್ಧಾರವಾಗುವದೆಂದು ಭಾವಿಸಿದ್ದರು. ಬಿಹಾರ ಪ್ರಾಂತಿಕ ಸಂಘದ ವಿದ್ಯಮಾನ ಸುಧಾರ ನಿರ್ಧಾರದ ಮಂಡಳದಲ್ಲಿ ಇವರು ಸಾಕ್ಷಿ ಕೊಟ್ಟಿರುತ್ತಾರೆ. ಪಂಜಾಬದ ಜಾಲಿಯನವಾಲಾಬಾಗ ಕೊಲೆಯಿಂದ ರಾಜೇಂದ್ರರು ಸಂತಪ್ತರಾದರು. ಮಹಾತ್ಮರು ಹೂಡಿಸಿದ ಸತ್ಯಾಗ್ರಹದಲ್ಲಿ ಸೇರಿದರು. ಅಧರ್ಮದ ಕಾನೂನುಗಳನ್ನು ಉಲ್ಲಂಘಿಸುವ ಪತ್ರಿಕೆಯ ಮೇಲೆ ಸಹಿ ಮಾಡಿದರು. ಕಲಕತ್ತೆಯ ರಾಷ್ಟ್ರೀಯ ಸಭೆಯಲ್ಲಿ ಅಸಹಕಾರದ ಠರಾವಾದೊಡನೆ ಒಳ್ಳೇ ಪ್ರಸಿದ್ಧಿಯುಳ್ಳ ವಕೀಲಿಯನ್ನು ತೊರೆದರು, ವಿಶ್ವವಿದ್ಯಾಲಯದೊಳಗಿನ ಸದಸ್ಯತ್ವವನ್ನು ತೊರೆದರು. ಅಂದಿನಿಂದ ರಾಜೇಂದ್ರ ಪ್ರಸಾದರು ಅಸಹಕಾರ, ಸತ್ಯಾಗ್ರಹ ಕಾಯಿದೆ ಭಂಗ ಮೊದಲಾದ ಉಪಕ್ರಮಗಳಲ್ಲಿ ತನು ಮನ ಧನದಿಂದ ದುಡಿದಿದ್ದಾರೆ. ಕಾಂಗ್ರೆಸ ಕಾರ್ಯಕಾರಿ ಸಮಿತಿಯೂ, ಕಾರ್ಯಕಾರಿ ಮಂಡಳದ ಸದಸ್ಯ

ನಾಗಿಯೂ ಇವರು ಮಾಡಿದ ಲೋಕಸೇವೆಯನ್ನು ಸರಕಾರವು ಇವರಿಗಿತ್ತ ಸೆರೆಮನೆಗಳ ವ್ಯಾಸಿಸಿದೆ ೬ ಬಾರಿ ೬-೬ ತಿಂಗಳ ಶಿಕ್ಷೆಯಾಯಿತು, ೩ ನೇ ಬಾರಿಗೆ, ವರ್ಷದ ಶಿಕ್ಷೆ ಕಳೆದ ೧೯೩೪ ನೇ ಇಸ್ವಿ ಜನವರಿ ೧೫ ನೇ ತಾರೀಖಿನ ಬಿಹಾರದಲ್ಲಿ ಭೂಕಂಪ ವಾದಾಗ ರಾಜೇಂದ್ರರು ಜೈಲಿನಲ್ಲಿದ್ದರು ೨ ದಿನಗಳಲ್ಲಿಯೇ ಅವರಿಗೆ ಬಿಡುಗಡೆಯಾಯಿತು ರಾಜೇಂದ್ರರವರು ಭೂಕಂಪಗ್ರಸ್ತರಿಗೆ ಮಾಡಿದ ಸೇವೆ ಚಿರಸ್ಮರಣೀಯವಾದುದು ಅಸಹಕಾರದ ಪ್ರಮುಖರಾದಾಗ್ಯೂ, ಸತ್ಯಾಗ್ರಹಿಗಳಾದಾಗ್ಯೂ ಬಡ ದೇಶಬಾಂಧವರ ಉದ್ಧಾರಕ್ಕಾಗಿ ಇವರು ಸರಕಾರದೊಡನೆ ಸಹಕಾರ ಮಾಡಿ ಭೂಕಂಪಗ್ರಸ್ತರಿಗೆ ನೆರವಾಗಿದ್ದಾರೆ. ೩೦-೩೫ ಲಕ್ಷ ರೂಗಳನ್ನು ಸ್ವಯಂಸ್ಫೂರ್ತಿಯಿಂದ ಎತ್ತುವಳಿ ಮಾಡಿ ರಾಜೇಂದ್ರರ ಮೇಲೆ ಇರುವ ಶ್ರದ್ಧೆಯನ್ನು ಹಿಂದಿನ ಸಿಯರು ವ್ಯಕ್ತಪಡಿಸಿದ್ದಾರೆ ಈಗ ಬಿಹಾರದಲ್ಲಿ ನೆರೆಯಿಂದ ಬಳಲುವ ಜನರಿಗಾಗಿ ರಾಜೇಂದ್ರರು ದುಡಿಯುತ್ತಿದ್ದರು ಈ ಸಂಗತಿಯೂ ಲೋಕವಿಶ್ರುತನಾದುದು

ರಾಜೇಂದ್ರರ ಜೀವನಕ್ರಮ ತೀರ ಸಾಮಾನ್ಯವಾದುದು, ವನಸ್ಪತ್ಯಾಹಾರಿಗಳು ನಿರ್ವ್ಯಸನಿಗಳು. ಸಾತ್ವಿಕ ಉಡಿಗೆ—ತೊಡಿಗೆಗಳನ್ನು ಧರಿಸುವವರು. ಸಜ್ಜನರು, ಯಾರಿಗೂ ನೋಯಿಸುವವರಲ್ಲ. ವಿಶಾಲ ಹೃದಯದವರು, ವಿದ್ವಾಂಸರು ಸತ್ಯಾಗ್ರಹದ ಪ್ರಮುಖರಾದಾಗ್ಯೂ, ಸತ್ಯಾಗ್ರಹೇತರರು ಸಹ ಇವರಿಗೆ ಮಾನ್ಯತೆಯನ್ನೀಯುತ್ತಾರೆ ೧೯೩೪ ನೇ ಇಸ್ವಿಯಲ್ಲಿ ಮುಂಬಯಿಯಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಗೆ ಇವರು ಅಧ್ಯಕ್ಷರಾಗಿ ಸೂಚಿಸಲ್ಪಟ್ಟಿದ್ದರು ಆದರೆ, ಸರಕಾರವು ರಾಷ್ಟ್ರೀಯ ಸಭೆಯನ್ನು ಸೇರಿಸಲು ತೊಂದರೆ ಮಾಡಿದ್ದರಿಂದ ಆ ಕಾಲದಲ್ಲಿ ಅವರಿಗೆ ಅಧ್ಯಕ್ಷರಾಗಲಾಗಲಿಲ್ಲ ರಾಜೇಂದ್ರರ ಯುರೋಪ ಖಂಡವನ್ನೂ ನೋಡಿದ್ದಾರೆ. ಕಲಕತ್ತೆಯ ವಿಶ್ವವಿದ್ಯಾಲಯದವರೊಳಗಿನ ವಿದ್ಯಾಭ್ಯಾಸ ಮುಗಿಸಿದ ಬಳಿಕ ಯುರೋಪ ಖಂಡದಲ್ಲೆಲ್ಲ ಸಂಚರಿಸಬೇಕೆಂದು ಇವರಿಗೆ ಮನಸ್ಸಿತ್ತು ಆದರೆ, ಆ ಕಾಲದಲ್ಲಿ ಯೋಗ ಕೂಡಿಬರಲಿಲ್ಲ ೧೯೨೮ ನೇ ಇಸ್ವಿಯಲ್ಲಿ ಪ್ರಸಂಗವೊದಗಿತು. ಒಂದು ವ್ಯಾಜ್ಯವು ಪ್ರಿವ್ಹಿ ಕೌನ್ಸಿಲಿಗೆ ಹೋಗಿತ್ತು ಅದಕ್ಕಾಗಿ ಬಾಬು ರಾಜೇಂದ್ರ ಪ್ರಸಾದರು ಲಂಡನಿಗೆ ತೆರಳಿದರು ಅಲ್ಲಿಂದ ಫ್ರಾನ್ಸ ದೇಶಕ್ಕೆ ಹೋಗಿ ಶಾಂತತಾವಾದಿಗಳಾದ ರೋಮೇನ ರೋ ದವರೊಡನೆ ಮಾತನಾಡಿ ಅಲ್ಲಿಂದ ಅಸ್ಟ್ರಿಯಾ ದೇಶಕ್ಕೆ ಬಂದು ವೇದನಾಗ ನಡೆಸಿದ ಒಂದು ಭಾಷಣದಲ್ಲಿ ಶಾಂತತಾವಾದದ ವಿರೋಧಿಗಳು ಇವರಿಗೆ ಹೊಡೆದರು ಈ ಬಗ್ಗೆ ಇವರು ಕೆಲ ಕಾಲ ಉಪಚಾರಗೊಂಡು ಸ್ವಿಟ್ಝರಲೆಂಡಿನಿಂದ ಸ್ವದೇಶಕ್ಕೆ ಬಂದರು

ಇಂಥ ಅನುಭವಿ, ನಿಸ್ಪೃಹ, ನಿರಲಸ, ಸತತೋದ್ಯೋಗಿ ಪುರುಷರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ರಾಷ್ಟ್ರಕಾರ್ಯದ ಭಾರವನ್ನು ಈ ಪರಿಸ್ಥಿತಿಯಲ್ಲಿ ಹೊತ್ತುಕೊಂಡಿದ್ದಾರೆ ತಮ್ಮಂತೆಯೇ ಸರ್ವರೂ ದೇಶಸೇವೆ ಮಾಡಿ ಪೂರ್ಣ ಸ್ವರಾಜ್ಯ ಸಂಗ್ರಾಮವನ್ನು ಕಡೆಗಾಣಿಸಿಕೊಳ್ಳಬೇಕೆಂಬುದೇ ಅವರ ಹಂಬಲ

— ನೆಲ್ಲೂರು ಪುರದೊಳಗಿನ ರಾಜಾ ಧನರಾಜ ಗಿರಜಿ ಆಸ್ಪತ್ರೆಯಲ್ಲಿ ೨೦-೨೫ ವರ್ಷ ಪ್ರಾಯದ ಒಬ್ಬ ತರುಣನವರ ಹೊಟ್ಟೆಗೆ ಶಸ್ತ್ರಕ್ರಿಯೆ ಮಾಡಲು, ಅಲ್ಲಿ ಸ್ತ್ರೀಯರಿಗಿರುವ ಗರ್ಭಾಶಯವೂ, ಸ್ತ್ರೀ-ಬೀಜಗ್ರಂಥಿಗಳೂ ದೊರೆತವು! ಬಾಹ್ಯೇಂದ್ರಿಯಗಳೆಲ್ಲ ಪುರುಷನಂತೆ! ಮುಂಚೆ ಈತನು ಪುರುಷನಿದ್ದವ, ಈಗ ಸ್ತ್ರೀಯಲ್ಲಿ ರೂಪಾಂತರವಾಗುತ್ತಿದ್ದಾನೆಂದು ಡಾಕ್ಟರರ ತರ್ಕ.

ನೇಪಾಳ ಮಹಾರಾಣಿಯವರ ಪಾದಚಾರಿ ತೀರ್ಥಾಟಣ.

ನೇಪಾಳ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಮಹಾರಾಜಾ ಸರ್ ಚಂದ್ರ ಸಮ್ಶೇರಜಂಗ ಬಹಾದ್ದೂರರವರ ವಿಧವೆ ಮಹಾರಾಣಿಯವರು ಹಿಂದುಸ್ಥಾನದಲ್ಲಿ ಪಾದಚಾರಿಗಳಾಗಿ ಯಾತ್ರೆ ಮಾಡಲಾರಂಭಿಸಿದ್ದಾರೆ ಈಗಾಗಲೇ ೪೦೦ ಮೈಲುಗಳ ಪ್ರವಾಸ ಮಾಡಿ, ಹರಿದ್ವಾರ, ಕೇದಾರನಾಥ, ಬದರಿನಾಥ, ರಾಣಿಖೇಟ ಯಾತ್ರೆಗಳನ್ನು ಮುಗಿಸಿದರು ಹರಿದ್ವಾರದಿಂದ ರಾಣಿಖೇಟದ ವರೆಗೆ ಒಟ್ಟು ೪೦೦ ಮೈಲು ಪ್ರವಾಸವಾಯಿತು. ಮಹಾರಾಣಿಯವರು ರಾಜಮನೆತನದವರು, ಮೇಲಾಗಿ ಅಬಲೆಯರು ಪಾದರಕ್ಷೆಯನ್ನು ಸಹ ಹಾಕಿಕೊಳ್ಳದೆ, ಬೆಳಗಿನ ೩ ಘಂಟೆಗೆ ಎದ್ದು ಪರಿವಾರದವರಿಗೆಲ್ಲ ಹಿಂದೆ ಬಿಟ್ಟು ಅಂಗರಕ್ಷಕ-ರಕ್ಷಕಿಯರಿಗೆ ಮಾತ್ರ ಜೊತೆಗೆ ಕರಕೊಂಡು ಜನರಿಗೆ ಕಾಣಿಸಿಕೊಳ್ಳದೆ ಪಯಣ ಮಾಡುತ್ತಾರೆ ಬದರಿನಾದ-ಕೇದಾರನಾಥದೊಳಗಿನ ಮಾರ್ಗಗಳು ಒಂದು ಕಡೆ ಎತ್ತರ, ಒಂದು ಕಡೆ ತಗ್ಗು, ಮಳೆ-ಚಳಿ-ಬಿಸಿಲು ಇವುಗಳನ್ನು ಲೆಕ್ಕಿಸದೆ ಭಕ್ತಿಭಾವದಿಂದ ಇವರು ಪ್ರವಾಸ ಮಾಡುವದನ್ನು ನೋಡಿ ಹರ್ಷವಾಗುತ್ತದೆ ದಾರಿಯ ಮೇಲೆ ಮುಕ್ಕಾಮು ಮಾಡಿದ್ದಲ್ಲೆಲ್ಲ ಅಲ್ಲಲ್ಲಿರುವ ಲೋಕಹಿತದ ಸಂಸ್ಥೆಗಳಿಗೆ, ಬಡಬಗ್ಗರಿಗೆ, ಬ್ರಾಹ್ಮಣರಿಗೆ ಮಹಾರಾಣಿಯವರು ಧರ್ಮ ಮಾಡುತ್ತಾರೆ ಕೇದಾರನಾಥದಲ್ಲಿ ನೇಪಾಳ ಯಾತ್ರೆಕರಿಗೆ ಇಳುಕೊಳ್ಳುವದಕ್ಕಾಗಿ ಮಹಾರಾಣಿಯವರು ೧೦ ಸಾವಿರ ರೂಪಾಯಿಗಳನ್ನರ್ಪಿಸಿದ್ದಾರೆ. ಬದರಿನಾಥ ದೇವರಿಗೆ ಮಹಾರಾಣಿಯವರು ಹಲವು ಅಮೂಲ್ಯ ಆಭರಣಗಳನ್ನೂ, ರತ್ನಗಳನ್ನೂ ಅರ್ಪಿಸಿದರು ಅಲ್ಲಿ ಉಳಿದ ೮ ದಿನಗಳ ತನಕ ಮಹಾರಾಣಿಯವರು ಭೋಗ-ಒತ್ತಿ ಮೊದಲಾದ ಯಾವತ್ತೂ ವಿನಿಯೋಗ ನಡಿಸಿದರು ದೇವಸ್ಥಾನದ ಒಂದು ಪಾರ್ಶ್ವದ ಗೋಡೆ ಕುಸಿದು ಬಿದ್ದಿತ್ತು, ಅದನ್ನು ಪುನಃ ಕಟ್ಟಿಸುವದಕ್ಕಾಗಿ ೧೫ ಸಾವಿರ ರೂಪಾಯಿಗಳನ್ನರ್ಪಿಸಿದ್ದಾರೆ ಧರ್ಮಶಾಲೆಯನ್ನು ಕಟ್ಟಿಸುವದಕ್ಕಾಗಿ ೧೫ ಸಾವಿರ ರೂಪಾಯಿಗಳನ್ನರ್ಪಿಸಿದರು ಮಹಾರಾಣಿಯವರು ವಿಕ್ಷಣಾಲಯಗಳಿಗೂ ದಾನ ಮಾಡಿದರು ನೈನಿತಾಲದಲ್ಲಿ ೧ ತಿಂಗಳ ತನಕ ವಿಶ್ರಮಿಸಿಕೊಂಡು ಶ್ರೀ ಕಾಶಿ ಯಾತ್ರೆಗೆ ಹೊರಟಿದ್ದಾರೆ ಮಹಾರಾಣಿಯವರ ಪರಿವಾರ ದೊಡ್ಡದಿದೆ ಇಪ್ಪತ್ತು ಸೈನಿಕರಿದ್ದಾರೆ, ೫೦-೬೦ ಮಂದಿ ಧನವಂತ ಸ್ತ್ರೀಯರಿದ್ದಾರೆ, ಅನೇಕ ದಾಸಿಯರಿದ್ದಾರೆ ಇಂಥ ಭಕ್ತಿಯನ್ನು, ಧರ್ಮಬುದ್ಧಿಯನ್ನು ನೋಡಿ ಬಹು ಸಂತೋಷವಾಗುತ್ತದೆ ಮಹಾರಾಣಿಯವರಂಥವರ ಧರ್ಮಬಲದಿಂದಲೇ ನಮ್ಮ ಹಿಂದುಸ್ಥಾನವೂ, ಹಿಂದುಧರ್ಮವೂ ದಿಗಂತಕೀರ್ತಿತವಿವೆ

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ

ಸ್ಥಾಪನೆ. 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳು, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ, ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ವಿಸ್ತೃತ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

Kumta Agents:-
D K NAYAK Bros
Honavar Agent -
K V PRABHU Esq

K. Padmanabha Rao & Sons.
BELGAUM
Chief Agents for
Karnatak Districts & S. M. States



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಬಡವರಿಗೂ
ಒಳ್ಳೇ ಗುಣಕಾರಿಯಾದ ಶ್ರೇಷ್ಠ ಔಷಧ!
ಚಳಿಜ್ವರ, ಇನ ಫ್ಲುಎಂಝಾ
ಮೊದಲಾದ ಜ್ವರಗಳ ಮೇಲೆ !!
ಮೆಡಾನ್ ಸನ್ಸ ಎಂಡ್ ಕೋ,
ಮುಂಬಯಿ

MADON SONS & Co
PHARMACEUTICAL CHEMISTS BOMBAY

NOTICE.
THE BOMBAY LIFE ASSURANCE CO., LTD.

Messrs (1) Krishna Laxuman Naik, Merchant Gersappa and (2) Venkatrai Phondu Naik Merchant, Gersappa holders of our Policy Nos 6579 and 6828 respectively having notified that they have either lost or misplaced their Policys and having requested us to issue a duplicate thereof in their favour notice is hereby given that a duplicate Policy will be issued to them by the Company should there be no objection recorded in our office to our doing so, within a month of this notice
30-10-1934

Sd Jyotendra L Mehta
Manager
Bombay Life Assurance Co, Ltd



ಡಾ| ಹಳಕಾರ ಇವರ
ಕುಟುಂಬ ವೈದ್ಯ
ಎಂದರೆ—

ಹುಡುಗರು-ಮಕ್ಕಳು ಇದ್ದ ಮನೆಯಲ್ಲಿ ಆಗುವ ಸಾಮಾನ್ಯ ಬೇನೆಗಳಿಗೆ ತಾತ್ಕಾಲಿಕ ಔಷಧ ಪೂರೈಸುವ ಪೆಟ್ಟಿಗೆ

ಜ್ವರ, ಕೆಮ್ಮು, ದಮ್ಮು, ವಾಯುವಿಕಾರ, ಅತಿಸಾರ, ಗ್ರಹಿಣಿ ಮೊದಲಾದ ರೋಗಗಳ ಮೇಲೆ ಅವಶ್ಯವುಳ್ಳ ಮದ್ದಿನ ಸಂಗ್ರಹವಿದೆ

ಇದಲ್ಲದೆ ಹಲ್ಲುನೋವು, ತಲೆನೋವು, ಬಾಲಗ್ರಹ, ಹುಣ್ಣು ಕಡಿದ ಗಾಯಗಳಿಗೆ ಮತ್ತು ಗಜಕರ್ಣ ಇವುಗಳಿಗೆ ಅವಶ್ಯವುಳ್ಳ ಅತ್ಯುತ್ತಮ ಗುಣಕಾರಿ ಮದ್ದುಗಳು ಈ ಪೆಟ್ಟಿಗೆಯಲ್ಲಿವೆ

ಬೆಲೆ ರೂಪಾಯಿ ೩ ಮಾತ್ರ.

ಡಾ| ಎಸ್. ಕೇ. ಬಟ್ಟೆ ಹಳಕಾರ,
ಎಲ್ ಎ ಎಮ್ ಎಸ್ ಮತ್ತು ಏ. ಪ್ಪಿ, (ಮೈಸೂರ)
ಕುಮಟಾ. (ಉ ಕನ್ನಡ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!

ಪ್ರೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,
ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೊಲೀಸ್ ಖಾತರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ ಸೂ ' ಇಂಡಸ್ಟ್ರಿಯಲ್ ವಿಮೆ 'ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆ ಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಕಥಾಕುಂಜದ.
ವಿಶೇಷ ಸಂಚಿಕೆ.

ವಿಶೇಷ ಸಂಚಿಕೆಯು ಸಮಾಜ ಸುಂದರ ಪ್ರತಿಗ ಳಿಂದ ಭೂಷಿತವಾಗಿ ಕನ್ನಡಕ್ಕೆ ಹೆಮ್ಮೆಯ ವಸ್ತುವಾಗುವದ ಕನ್ನಡಿಗರ ಉತ್ಕೃಷ್ಟ ಬರಹಗಾರರ ಕತೆ, ಕವನ, ಲೇಖನಗಳಿಂದಲೂ, ಆಕರ್ಷಕ ಚಿತ್ರಗಳಿಂದಲೂ, ಮನೋಹರವಾದ ವ್ಯಂಗ್ಯಚಿತ್ರಗಳಿಂದಲೂ ಸಾಹಿತ್ಯದ ಸವಿಯೂಟವನ್ನೇ ಕೊಡುವದು

ಬಿಡಿ ಸಂಚಿಕೆಗೆ ಹನ್ನೆರಡು ಆಣೆ!

ವರ್ಷಾರಂಭದ (೧೯೩೪) ಚಂದಾದಾರರಿಗೆ ಮಾತ್ರ ಉಚಿತ!!

ಒಂದೇ ಸಂಚಿಕೆ ಬೇಡುವವರು ೧ ರೂ ಕಳಿಸ ಬೇಕು ಏಜಂಟರಾಗುವವರು ಮುಂಗಡ ಹಣ ಕಳಿಸಿ ಹೆಸರು ರಜಿಸ್ಟರ ಮಾಡಿಕೊಳ್ಳಬೇಕು

ಜಾಹೀರಾತು ಕೊಡುವವರಿಗೆ ಸುವರ್ಣ ಸಂಧಿ! ದರಗಳಿಗಾಗಿ ಬರೆಯಿರಿ

ಕಥಾಕುಂಜ ಪ್ರಕಟನಾಲಯ,
ಮಾರುತಿ ಬೀದಿ, ಬೆಳಗಾವಿ

Siromani Udipi Narayanacharya
CHAUKHAMBA BENARES CITY

SUN & CO BENARES CITY

ಸಾಕ್ಷಾತ್ ಶಿವನೇ ರುದ್ರಾಕ್ಷಿಗಳನ್ನು ಶ್ರೇಷ್ಠವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿಕೊ ಳ್ಳಿರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32 ದರ 1ಕ್ಕೆ ರೂ. 0 8 0 ಯಿಂದ ರೂ 100 ವರೆಗೆ. ಗೌರಿಶಂಕರ 1ಕ್ಕೆ ರೂ 3 8 0 ರಿಂದ 50 ವರೆಗೆ ಮತ್ತು ಬೇರೆ ಮಾಲುಗಳ ವಿವರ, ತಿಳಿಯಲು ಅಪೇಕ್ಷಿಸುವವರು 0 1 0 ಸ್ಟ್ಯಾಂಪು ಕಳಿಸಿದರೆ, 1 ಸೂಚೀಪತ್ರ, 1 ವಿಶ್ವೇಶ್ವರನ ಫೋಟೋ ಸಮ್ಮ ಕೆಟಲಾಗು ಸಹ ಇನಾಮ ಕಳಿಸಲಾದೀತು ಪತ್ತೆ—
ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ



ಸ್ಕ್ವಿಬ್ಸ್ ಏಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಎಳೆಯರಿಗೂ
ಒಮ್ಮೆಲೇ ಗುಣಕಾರಿಯಾದ ಶ್ರೇಷ್ಠ ಔಷಧ!
ಚಳಿಜ್ವರ, ಇನ್‌ಫ್ಲುಎಂಝಾ
ಮೊದಲಾದ ಜ್ವರಗಳ ಮೇಲೆ!!
ಮೆಡೋನ್ ಸನ್ಸ ಎಂಡ್ ಕೋ,
ಮುಂಬಯಿ ೨.

MADON SONS & Co
PHARMACEUTICAL CHEMISTS BOMBAY

ರಾಷ್ಟ್ರೀಯ ಸಭೆ.

ಈ ಮೊದಲೇ ನಿಶ್ಚಯಿಸಿದಂತೆ, ಶುಕ್ರವಾರ ಸಂಜೆ ೭ ಘಂಟೆಗೆ ವರ್ಲಿಯೊಳಗಿನ ವಿಸ್ತಾರ ಪ್ರಾಕಾರದೊಳಗೆ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಪ್ರಾರಂಭವಾಯಿತು. ಮುಂಚಾಗಿ ಪ್ರಕಟಿಸಿದಂತೆ ಈ ಪ್ರಾಕಾರಕ್ಕೆ ಚಪ್ಪರ ಹಾಕಿದ್ದಿಲ್ಲ, ನಭೋಮಂಡಲವೇ ರಾಷ್ಟ್ರೀಯ ಸಭೆಯ ಮೇಲ್ಛಾವಣಿ! ಲೋಕಸಮುದಾಯಕ್ಕೆ ಅನುಕೂಲವಾಗುವಂತೆ ಚಪ್ಪರ ಹಾಕಲು ಅಸಾಧ್ಯವಾಗಿ ಸ್ವಾಗತ ಸಮಿತಿಯವರು ಸಾಯಂಕಾಲದ ಸಮಯವನ್ನು ರಾಷ್ಟ್ರೀಯ ಸಭೆಯ ಸಭಾಕಾರ್ಯಕ್ಕೆ ಗೊತ್ತುಪಡಿಸಿಕೊಂಡಿದ್ದರು. ಇಡೀ ಪ್ರಾಕಾರವು ವಿದ್ಯುದ್ದೀಪಗಳಿಂದ ಶೋಭಾಯಮಾನವಾಗಿದ್ದಿತು. ಆಕಾಶದೊಳಗಿನ ನಕ್ಷತ್ರಗಣವೇ ರಾಷ್ಟ್ರೀಯ ಸಭೆಯ ದರ್ಶನೋತ್ಸುಕವಾಗಿ ಅಲ್ಲಲ್ಲಿ ತಂಡುಗಟ್ಟಿ ಸೇರಿದಂತೆ ಭಾಸವಾಗುತ್ತಿತ್ತು. ಮಧ್ಯಭಾಗದಲ್ಲಿ ವಕ್ತೃತ್ವಪೀಠದ ಚಿತ್ತವೇಧಕ ಗೋಪುರವು ನಿರ್ಮಿಸಲ್ಪಟ್ಟಿತ್ತು. ಇಲ್ಲಿಂದ ಸುಮಾರು ೫೦ ಅಡಿ ದೂರ ಮಹಾನುಭಾವರ ವ್ಯಾಸಪೀಠದ ರಚನೆಯಾಗಿತ್ತು. ಅಲ್ಲಲ್ಲಿ ಧ್ವನಿವಾಹಕ-ಧ್ವನಿವಿಸ್ತಾರಕ ಯಂತ್ರಗಳ ಕಹಳೆಗಳು ಕೂಡ್ರಿಸಲ್ಪಟ್ಟಿದ್ದವು. ಈ ಎಲ್ಲ ವ್ಯವಸ್ಥೆಯಿಂದ ಎಲ್ಲಿ ಕುಳಿತುಕೊಂಡರೂ ಸಭೆಯೊಳಗಿನ ಕಾರ್ಯಕಲಾಪಗಳು ಜನರಿಗೆ ದೃಗ್ಗೋಚರವಾಗುತ್ತಿದ್ದವು. ಸರಿಯಾಗಿ ೭॥ ಘಂಟೆಗೆ ಅಧ್ಯಕ್ಷರ ನಿವಾಸಸ್ಥಾನದಿಂದ ಮಹಾನುಭಾವರು ಮೆರವಣಿಗೆಯಿಂದ ಬಂದು ಸಭಾಸ್ಥಾನವನ್ನು ಸೇರಿದೊಡನೆ "ಬಾಬು ರಾಜೇಂದ್ರ ಪ್ರಸಾದಕಿ ಜೈ", "ಮಹಾತ್ಮಾ ಗಾಂಧೀಕಿ ಜೈ", 'ಭಾರತ ಮಾತಾಕಿ ಜೈ" ಮೊದಲಾದ ಜಯಘೋಷಗಳಿಂದ ಜಯಜಯಕಾರಗಳು ಮೊಳಗಿದವು. ಗಡಿನಾಡಿನ ಗಾಂಧಿಯೆಂದು ಖಾನ ಅಬ್ದುಲ್ಲ ಗಫಾರಖಾನರು ಸ್ವಯಂಸೇವಕರೆಂದು ಅಭಿಮಾನದಿಂದ ಹೇಳುತ್ತಾರೆ. ಆದರಿಂದ ಅವರು ಮಹಾತ್ಮಾ ಗಾಂಧಿ, ಪಂ| ಮದನಮೋಹನ ಮಾಲವೀಯ, ಸರದಾರ ವಲ್ಲಭಭಾಯಿ ಪಟೇಲ, ಡಾ| ವಲ್ಲಭಭಾಯಿ ಪಟೇಲ, ಡಾ| ಅನ್ಸಾರಿ ಮೊದಲಾದ ಲೋಕನಾಯಕರೊಡನೆ ಸಭಾಸ್ಥಾನದಲ್ಲಿ ಸೇರದೆ, ಮೆರವಣಿಗೆಯನ್ನು ಹಿಂಬಾಲಿಸುತ್ತಿದ್ದ ಸ್ವಯಂಸೇವಕ ಪಥಕದ ಹಿಂಭಾಗದಲ್ಲಿದ್ದರು. ಜನರಿಗೆ ಇವರ ದರ್ಶನವಾದೊಡನೆ "ಖಾನ ಅಬ್ದುಲ್ಲ ಗಫಾರಖಾನಕಿ ಜೈ" ಎಂಬ ಉತ್ಸಾಹಭರಿತವಾದ ಜಯಘೋಷವು ರಭಸದಿಂದ ಎದ್ದಿತು. ಬಾಬು ರಾಜೇಂದ್ರ ಪ್ರಸಾದ ಮೊದಲಾಗಿ ಸರ್ವರೂ ವ್ಯಾಸಪೀಠವನ್ನಲಂಕರಿಸಿದ ಬಳಿಕ ಸಭೆಯಲ್ಲಿ ಶಾಂತತೆಯಾಯಿತು. ಆಮೇಲೆ ಮಾತೃಭೂಮಿಯ ವಂದನ, ರಾಷ್ಟ್ರಗೀತ-ರಾಷ್ಟ್ರ ಗೌರವಪರ ಪದ್ಯಗಳಾದ ಬಳಿಕ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ| ಖುರ್ಷೀದ ನರಿಮಾನರವರು ಆಸನಮುದ್ರೆಯಿಂದ ವಕ್ತೃತ್ವಪೀಠವನ್ನೇರಿ ಭಾಷಣ ಮಾಡಿದರು. ಆ ಕಾಲದಲ್ಲಿ ಜನಸಮುದಾಯದಲ್ಲಿ ನೆಲೆಗೊಂಡಿದ್ದ ಪ್ರಶಾಂತತೆಯನ್ನು ಎಷ್ಟೆಂದು ಬಣ್ಣಿಸುವದು? ಕೈ-ತಪ್ಪಿ ಗುಂಡುಸೂಜಿ ಬಿದ್ದಾಗ್ಯೂ ಆ ಸಪ್ಪಳ ಕೇಳಬರುತ್ತಿತ್ತೆಂತೆ. ಪ್ರಶಾಂತ ಸಮುದ್ರ, ಮಂದ ಮಾರುತ, ಸಂಧ್ಯಾಕಾಲದ ಪವಿತ್ರ ಮುಹೂರ್ತ, ಇವುಗಳಿಂದ ಸಭೆಗೆ ಅಪೂರ್ವವಾದ ಸೌಂದರ್ಯ ಪ್ರಾಪ್ತವಾಗಿದ್ದಿತು. ಶಾಂತಿದೇವಿಯೂ, ಜನತಾಜನಾರ್ದನನೂ ಪ್ರಸನ್ನವದನರಾಗಿ ಕಂಗೊಳಿಸುತ್ತಿದ್ದರು. ಶ್ರೀ| ನರಿಮಾನರು ಆಗಿಂದಾಗ ಚಪ್ಪಾಳೆಗಳ ಘೋಷದಿಂದ ತಮ್ಮ ಭಾಷಣಕ್ಕೆ ಲೋಕಸಮ್ಮತಿಯನ್ನು ಪಡೆಯುತ್ತ ಅದನ್ನು ಮುಗಿಸಿ, ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷಸ್ಥಾನವನ್ನು ಒಪ್ಪಿಸಿಕೊಂಡು ರಾಷ್ಟ್ರೀಯ ಸಭೆಯ ಕಾರ್ಯಭಾರವನ್ನು ನಡಿಸಬೇಕಾಗಿ ಬಿನ್ನೈಸಿಕೊಂಡಾಗ ಸರ್ವರೂ ಒಂದೇಭಾವನೆಯಿಂದ ಪ್ರಚಂಡವಾದ ಚಪ್ಪಾಳೆಯ ಘೋಷ ಮಾಡಿ ಸಮ್ಮತಿಯನ್ನಿತ್ತರು. ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷಸ್ಥಾನವನ್ನಲಂಕರಿಸಿದ ಬಳಿಕ, ಕಾರ್ಯದರ್ಶಿಗಳಾದ ಶ್ರೀ| ಜಯರಾಮದಾಸ ದೌಲತರಾಮರವರು ದೇಶವಿದೇಶಗಳಿಂದ ಬಂದ ಮುಖ್ಯ ಮುಖ್ಯ ಶುಭಚಿಂತನಪರ ಸಂದೇಶಗಳನ್ನು ಓದಿತೋರಿದರು. ಬಳಿಕ, ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ವ್ಯಾಸಪೀಠದ ಮೇಲಿಂದ ವಕ್ತೃತ್ವ-ಗೋಪುರ ಸೇರಿದರು. ಆ ಸಮಯ 'ಬಾಬು ರಾಜೇಂದ್ರ ಪ್ರಸಾದಕಿ ಜೈ' ಎಂಬ ಜಯಘೋಷದಿಂದಲೂ, ಚಪ್ಪಾಳೆಗಳ ಘೋಷದಿಂದಲೂ ಅಭೂತಪೂರ್ವವಾದ ನಿನಾದದಿಂದಲೂ ಕಿವಿಗಳು ಗಡಚಿಕ್ಕಿದವು. ಸ್ತಬ್ಧತೆಯುಂಟಾದ ಬಳಿಕ, ಬಾಬು ರಾಜೇಂದ್ರ ಪ್ರಸಾದರವರು ತಮ್ಮ ಹಿಂದೀ ಭಾಷಣದೊಳಗಿನ ಅರ್ಧ ತಾಸಿನ ಪರ್ಯಂತ ಕೆಲವಂಶಗಳನ್ನು ಓದಿತೋರಿದರು. ಪಂಡಿತ ಜವಾಹರಲಾಲ, ಸುಭಾಷಚಂದ್ರ ಬೋಸರವರ ನಾಮನಿರ್ದೇಶವಾದೊಡನೆ ಲೋಕಸಮುದ್ರವು ಉಕ್ಕೇರಿ ಬಂದಂತೆ ಆ ಸಮಯವಾಯಿತು. ಅಧ್ಯಕ್ಷರ ಭಾಷಣ ಮುಗಿದ ಬಳಿಕ, ಡಾ| ಅನ್ಸಾರಿಯವರು ಕೌನ್ಸಿಲು ಪ್ರವೇಶದ-ಸತ್ಯಾಗ್ರಹದ ಪ್ರತಿಬಂಧದ ಠರಾವನ್ನು ಸೂಚಿಸಿದರು. ಡಾ| ಅನ್ಸಾರಿಯವರ ಭಾಷಣವು ತೀರ ಚಿಕ್ಕದು. 'ಕೇಂದ್ರ ಪರಿಷತ್ ಕಾಯಿದೆ ಕೌನ್ಸಿಲಿನಲ್ಲಿ ಸೇರಿದವರು ಒಪ್ಪಂದ ಠರಾವು, ರಾಜಕಾರಣ ಮೊದಲ ಪ್ರಕರಣ ಸಮ್ಮತಿಯನ್ನಿತ್ತು ಹಿಂದೀ ಪ್ರಜಾಜನರ ಸೂಟೆ ಮುರಿದಿದ್ದರೆ ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ಕೌನ್ಸಿಲಿನಲ್ಲಿ ಕೈಕೊಂಡ ಧೋರಣವನ್ನು ಕಾಂಗ್ರೆಸ ಕಾರ್ಯಕಾರಿ ಮಂಡಳವು ಮನ್ನಿಸಿದ. ಜಾತಿ ನಿರ್ಣಯದ ಕುರಿತು ಕಾಂಗ್ರೆಸ ಕಾರ್ಯಕಾರಿ ಮಂಡಳವು ಕೈಕೊಂಡ ಧೋರಣವೇ ತೀರ ಯೋಗ್ಯವಾದುದು. ಪ್ರಜಾಪ್ರತಿನಿಧಿ ಸಭೆಯನ್ನು ಏರ್ಪಡಿಸಿಕೊಂಡು ಈ ವಿಷಯ ನಾವು ಇನ್ನು ವಿಚಾರಿಸಬಹುದು, ಬ್ರಿಟಿಶರು ಮಾಡಿದ ಜಾತಿನಿರ್ಣಯವನ್ನು ಬದಲಿಸಿ ಪ್ರಜಾಪ್ರತಿನಿಧಿ ಸಭೆಯಲ್ಲಿ ರಾಷ್ಟ್ರಸಮ್ಮತವಾಗುವಂತೆ ಉಪಾಯಯೋಜನೆಯನ್ನು ಮಾಡಬಹುದು. ವಿವಾದಾಸ್ಪದ ಪ್ರಶ್ನೆಗಳ ಮೇಲೆ ಚರ್ಚೆ ನಡಿಸಿ ರಾಷ್ಟ್ರವನ್ನು ಇಬ್ಭಾಗ ಮಾಡುವದು ಈಗಿನ ಪರಿಸ್ಥಿತಿಯಲ್ಲಿ ಉಚಿತವಲ್ಲ.' ಹೀಗೆ ಡಾ| ಅನ್ಸಾರಿಯವರು ಭಾಷಣ ಮಾಡಿದ ಬಳಿಕ, ಶ್ರೀ| ನರಿಮಾನರವರು ಅನುಮೋದನ ಕೊಟ್ಟರು. 'ಜಾತಿನಿರ್ಣಯದಿಂದ ರಾಷ್ಟ್ರಕ್ಕೆ ಕ್ಷೇಮವಿಲ್ಲ, ಅದನ್ನು ನಾವು ರದ್ದುಪಡಿಸಲೇಬೇಕು. ಆದರೆ, ಅದಕ್ಕಾಗಿ ರಾಷ್ಟ್ರವನ್ನು ಇತ್ತಂಡ ಮಾಡುವದು ಸರಿಯಲ್ಲ. ಪಂ| ಮದನ ಮೋಹನ ಮಾಲವೀಯರವರು ಹೊಸ ಪಕ್ಷವನ್ನು ಈಗಲಾದರೂ ಚದರಿಸಿ ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನಲ್ಲಿ ಕೂಡಿಕೊಳ್ಳಬೇಕು"

ಹೀಗೆ ಭಾಷಣವಾದ ಬಳಿಕ, ಪಂ| ಮದನ ಮೋಹನ ಮಾಲವೀಯರವರು ತಮ್ಮ ಉಪಸೂಚನೆಯನ್ನು ಸೂಚಿಸಿದರು "ಜಾತಿ ನಿರ್ಣಯವನ್ನು ಶ್ರೀಯುತ ನರಿಮಾನರು ಹಳಿಯುತ್ತಾರೆ. ಅದನ್ನೇಕೆ ಠರಾವಿನಲ್ಲಿ ನಮೂದಿಸಲೇ ಇಲ್ಲ? ವ್ಯಕ್ತಿಗಿಂತ ಸಂಸ್ಥೆ ದೊಡ್ಡದೆಂಬ ಮಾತನ್ನು ನಾನೊಪ್ಪುತ್ತೇನೆ. ಆದರೆ, ಸಂಸ್ಥೆಗಿಂತ ರಾಷ್ಟ್ರ ದೊಡ್ಡದು, ಜಾತಿ ನಿರ್ಣಯವು ರಾಷ್ಟ್ರಕ್ಕೆ ಘಾತುಕವಾದದು. ಕಾಂಗ್ರೆಸ ಕಾರ್ಯಕಾರಿ ಮಂಡಳದವರು ಅದನ್ನು ಸ್ಪಷ್ಟವಾಗಿ ನಿಷೇಧಿಸಿ ರಾಷ್ಟ್ರೀಯ ಸಭೆಯವರು ರಾಷ್ಟ್ರಪ್ರವೃತ್ತಿಯ ಸುಲೋಕಕ್ಕೆ ಸಿದ್ಧಪಡಿಸಬೇಕಾಗಿದ್ದಿತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ನಿರ್ಣಯ ಮಾಡುವೆವೆಂದು ಡಾ| ಅನ್ಸಾರಿಯವರು ಸಮಾಧಾನ ಮಾಡುತ್ತಾರೆ. ಹಾಗಾದರೆ, ಶ್ವೇತಪತ್ರಿಕೆಯನ್ನು ಒಳ್ಳೆಯ ನಿರೋಧಿಸಬಹುದಲ್ಲವೆ? ರಾಷ್ಟ್ರೀಯ ಸಭೆಯವರು ಪೂರ್ವದಿಂದ ನಿಪಕ್ಷ ಮತದಾರ ಸಂಘಗಳನ್ನು ನಿಷೇಧಿಸುತ್ತಿದ್ದಾರೆ. ಆ ಪರಂಪರೆಗೆ ಈಗಿನ ಧೋರಣವು ಅನುಚಿತವಾದದ್ದಿದೆ. ಜಾತಿ-ಜಾತಿಗಳೊಳಗಿನ ವೈಮನಸ್ಸ ನಷ್ಟವಾದನಕ ರಾಷ್ಟ್ರಕ್ಕೆ ಕ್ಷೇಮವಿಲ್ಲ. ಆದರಿಂದ ನನ್ನ ಉಪಸೂಚನೆಯನ್ನು ಮನ್ನಿಸಿ ಜಾತಿ ನಿರ್ಣಯವನ್ನು ಧಿಕ್ಕರಿಸುವಂತೆ ಮೂಲ ಠರಾವಿನಲ್ಲಿ ತಿದ್ದುಪಡಿ ಮಾಡಬೇಕು" ಈ ಉಪಸೂಚನೆಗೆ ಶ್ರೀ| ಮಾಧವರಾವ ಅಣೆಯವರು ಅನುಮೋದಿಸಿ ಕಾಂಗ್ರೆಸ ಕಾರ್ಯಕಾರಿ ಮಂಡಳದ ಧೋರಣವು ಮೂಲ ಪರಂಪರೆಗೆ ವಿರೋಧವಾದದ್ದೆಂದು ಪ್ರತಿಪಾದಿಸಿದರು. ಇಷ್ಟರಲ್ಲಿ ರಾತ್ರಿ ೧೧॥ ಬಡಿಯಿತು. ಆದರಿಂದ ಅಂದಿನ ಸಭೆ ವಿಸರ್ಜನ ಹೊಂದಿತು.

ಮಾರನೇ ದಿನ ಶನಿವಾರ ಪುನಃ ಸಂಜೆ ೬ ಘಂಟೆಗೆ ಸಭೆ ಸೇರಿತು. ವಾಡಿಕೆಯಂತೆ ಅಧ್ಯಕ್ಷರು ಮೆರವಣಿಗೆಯಿಂದ ಬಂದು ವ್ಯಾಸಪೀಠವನ್ನಲಂಕರಿಸಿದ ಬಳಿಕ, ರಾಷ್ಟ್ರಗೀತಗಳು ಇಂಪಾಗಿ ಹಾಡಲ್ಪಟ್ಟವು. ಆ ಮೇಲೆ ಆಚಾರ್ಯ ನರೇಂದ್ರ ದೇವರವರು ತಮ್ಮ ಉಪಸೂಚನೆಯನ್ನು ಸೂಚಿಸಿದರು. 'ಕೌನ್ಸಿಲು ಪ್ರವೇಶವನ್ನು ಧಿಕ್ಕರಿಸಬೇಕೆ, ಸಮಾಜ ಸತ್ತಾವಾದವನ್ನು ಅಂಗೀಕರಿಸಿ ಅದಕ್ಕೆ ತಕ್ಕದ್ದಾಗಿ ಠರಾವಿನಲ್ಲಿ ಮಾರ್ಪಾಡಾಗಬೇಕು' ಈ ಉಪಸೂಚನೆಗೆ ಶ್ರೀಮತಿ ಕಮಲಾದೇವಿಯವರು ಅನುಮೋದನ ಕೊಟ್ಟರು. ಕೆಲವರು ಸಮಾಜವಾದಿಗಳಾಗಿ ಮೆರೆಯಬೇಕು. ಕೋಟ್ಯಾವಧಿ ಜನರು ಉಪವಾಸ ಸಾಯಬೇಕು, ಇದು ನಿಜವಾದ ರಾಮರಾಜ್ಯವಾದದ್ದಲ್ಲ. ಆದರಿಂದ ಸಮಾಜಸತ್ತಾವಾದವನ್ನು ರಾಷ್ಟ್ರೀಯ ಸಭೆಯವರು ಪುರಸ್ಕರಿಸಬೇಕು" ಆಮೇಲೆ ಕಲಕತ್ತೆಯ ಶ್ರೀ| ಜೆ. ಸಿ. ಗುಪ್ತರವರು ತಮ್ಮ ಉಪಸೂಚನೆಯನ್ನು ಸೂಚಿಸಿದರು. "ಕಾಂಗ್ರೆಸನವರಾಗಿ ಆರಿಸಿ ಕಳುಹಿದ ಸಭಾಸದರಿಗೆ ಜಾತಿ ನಿರ್ಣಯದ ಕುರಿತು ಇಷ್ಟ ಬಂದಂತೆ ಮತ ಕೊಡಲು ಇಂಬಿರಬೇಕು" ಈ ಸೂಚನೆಗೆ ಡಾ| ಸೇನಗುಪ್ತರವರು ಅನುಮೋದಿಸಿದರು. ಆಮೇಲೆ ಮತ್ತೊಂದು ಉಪಸೂಚನೆ ಬಂತು-(೧) ಭೂಮಿಯ ಉತ್ಪಾದನ ಶಕ್ತಿಯನ್ನು ಬೆಳಸಲೋಸುಗ ಒಕ್ಕಲಿಗರ ಸಂಘಗಳನ್ನೇರ್ಪಡಿಸಬೇಕು, (೨) ಹಳ್ಳಿಗರಲ್ಲಿ ಸಾಹಸವನ್ನು ಬೆಳಸುವದಕ್ಕಾಗಿಯೂ, ಆತ್ಮರಕ್ಷಣ ಸಾಮರ್ಥ್ಯವನ್ನು ಉಂಟುಮಾಡುವದಕ್ಕಾಗಿಯೂ ಅವರಿಗೆ ಲಾಠಿ — ಕವಾಯಿತು ಕಲಿಸಬೇಕ

(೩) ಊರೂರಲ್ಲಿ ಗ್ರಾಮ ಪಂಚಾಯತಗಳನ್ನು ಸ್ಥಾಪಿಸಬೇಕು ಈ ಉಪಸೂಚನೆಯನ್ನು ಶ್ರೀ| ಬಾಳು ಕಾಕಾ ಕಾನಿಟಕರರು ಸೂಚಿಸಿ ಒಕ್ಕಲಿಗರ ದುರವಸ್ಥೆಯನ್ನು ನಿವೇದಿಸಿದರು ರಾಷ್ಟ್ರೀಯ ಸಭೆಯಿಂದಲೇ ಬಡಬಗ್ಗರು ಕಂಗೆಟ್ಟಂತಾದೊಂದು [illegible] ಗ್ರಹಿಕೆಯುಂಟಾಗಿದೆ, ಅದರಿಂದ ಒಕ್ಕಲಿಗರೊಳಗ ಪ್ರತಿಕಾರ ಶಕ್ತಿಯನ್ನುಂಟುಮಾಡುವದು ರಾಷ್ಟ್ರೀಯ ಸಭೆಯ ಕರ್ತವ್ಯವಿದೆ, ಎಂಬುದಾಗಿ ಮಾತನಾಡಿದರು. ಬಳಿಕ, ಶ್ರೀ| ಜೋಶಿಯವರು ಅನುಮೋದನ ಕೊಟ್ಟರು. ಈ ಪ್ರಕಾರ ಮೂಲ-ಉಪಸೂಚನೆಗಳು [illegible] ಬಳಿಕ, ಅನುಕೂಲ-ಪ್ರತಿಕೂಲ ಭಾಷಣಗಳಾದವು. ಮಾ| ಅಣೆ [illegible] ಸದ್ಯದವರು ಪಂ| ಮಾಲವೀಯರ ಉಪಸೂಚನೆಗೆ [illegible] ತ್ತರು ರಾಷ್ಟ್ರೀಯ ಸಭೆಯು [illegible] ಯುವಂತ ನಡೆಕೊಳ್ಳಬೇಕಾಗಿ ಕರೆ [illegible] ಪಂಡಿತ ಮಾಲವೀಯರ [illegible] ಸಮಾಜಸತ್ತಾವಾದಿಗಳು [illegible] ಬ್ಬಿಸಕೂಡದು, ಮಹಾತ್ಮರಂಥ [illegible] ಬೇಕಾಗಿಲ್ಲ, ಸಮಾಜಸತ್ತಾವಾದಿಗಳಂದ ಏಕನಿಗಿ ಜಿಂದಗಿ ನಷ್ಟಮಾಡಿ [illegible] ಅಹಿಂಸೆಯು ಆಶ್ರಯ [illegible] ಅನುಚಿತವಾದದ್ದು, [illegible] ಬಳಿಕ, ಸರದಾರ ವಲ್ಲಭಭಾಯಿ [illegible] ತ್ತಿಂದವ ಗದ್ದುಗೆಯನ್ನು [illegible] ಘೋಷವಾಯಿತು. ಸರದಾರ [illegible] "ಮಹಾತ್ಮರಂತೆಯೇ ಪಂ| ಮಾಲವೀಯರವರೂ ನನಗೆ ಪೂಜ್ಯರೇ. ಜಾತಿನಿರ್ಣಯವನ್ನು ಒಪ್ಪಲೀ ತಿರಸ್ಕರಿಸಬೇಕಾಗಿ ಪಂಡಿತ ಮಾಲವೀಯರವರ ಆಗ್ರಹ ಕೊಂಗ್ರೆಸಿಗೆ ಇಷ್ಟು ಗಾಬರಿ ಮಾಡಬೇಕೆಂದೆನಿಸುವದಿಲ್ಲ ಕಾರ್ಯಕಾರಿ ಮಂಡಳಿಯಲ್ಲಿ ಶ್ರೀ| ಅಣೆಯವರ [illegible] ಈಗಿನ ನಿರ್ಣಯವನ್ನು ಮನ್ನಿಸಿದ್ದರೆ ಮರೆಯಾಯಿತೆಂದು ಪ್ರತಿ ಒಬ್ಬ [illegible] ಕ ಪಕ್ಷ ಹೂಡಿಸಲುದ್ಯುಕ್ತರಾದರ [illegible] ಕೆಟ್ಟು ಪ್ರಗತಿಯು ಕುಂಠಿತವಾಗುವದು. ಮಹಾತ್ಮರೂ, ಕಾರ್ಯಕಾರಿ ಮಂಡಳಿಯವರೂ ತಪ್ಪು ಮಾಡಿರುವರೆಂದು ಗ್ರಹಿಸುವಾ ಅವರೆ, ಕೊಂಗ್ರೆಸಿನ ಹೆಸರಿನಲ್ಲಿ ಬೇರೊಂದು ಪಕ್ಷ ಹೂಡುವದು ಭಯಂಕರ ತಪ್ಪಿದೆ" ಉತ್ತರ ಕೊಡುವಾಗ ಡಾ| ಅನ್ಸಾರಿಯವರು ನುಡಿದದ್ದೇನಂದರೆ.— "ಜಾತಿ ನಿರ್ಣಯದ ಕುರಿತು ಮಾಡಿದ ಠರಾವನ್ನು ಸಹಕಾರಿಗಳೊಡನೆ ಆಲೋಚಿಸಿ ನಾನು ನಿರ್ಧರಿಸಿದ್ದೆ, ಅದರೊಳಗೆ ಹೆಚ್ಚು-ಕಡಿಮೆ ಮಾಡಿದ್ದಲ್ಲಿ ಯಾವತ್ತೂ ಪರಿಸ್ಥಿತಿಯನ್ನು ಪುನರಾಲೋಚಿಸಬೇಕಾದೀತೆಂದು ನಾನು ಸ್ಥಾನಿಯನ್ನಾಗಿಂದ ತಂತಿ ಮಾಡಿದ್ದೆ, ರಾಷ್ಟ್ರೀಯ ಮುಸಲ್ಮಾನರಿಗೆ ಜಾತಿನಿರ್ಣಯ ಒಪ್ಪಿಗೆಯಿಲ್ಲ, ರಾಷ್ಟ್ರೀಯ ಮುಸಲ್ಮಾನರು ರಾಷ್ಟ್ರಕಲ್ಯಾಣಕ್ಕಾಗಿ ಬೇಕಾದ ಸ್ವಾರ್ಥತ್ಯಾಗ ಮಾಡಿದ್ದಾರೆ, ಇನ್ನು ಮುಂದೆ ಸ್ವಾರ್ಥತ್ಯಾಗ ಮಾಡಲಿಕ್ಕೂ ಸಿದ್ಧರಿದ್ದಾರೆ ಜಾತಿನಿರ್ಣಯವು ಕಲಂಕವೆಂದು ನಾನೂ ಒಪ್ಪುತ್ತೇನೆ, ಆದರೆ ಆ ಕುರಿತು ಠರಾವಿನಲ್ಲಿ ಹೆಚ್ಚು-ಕಡಿಮೆ ಮಾಡಿ ರಾಷ್ಟ್ರೀಯ ಸಭೆಯ ಮಧ್ಯಸ್ಥ ವೃತ್ತಿಯನ್ನು ಭಂಗಿಸಕೂಡದು' ಉಪಸೂಚನೆಗಳನ್ನೆಲ್ಲ ತಿರಸ್ಕರಿಸಿ ಮೂಲ ಸೂಚನೆಯನ್ನು ಮನ್ನಿಸಬೇಕಾಗಿ ಡಾ| ಅನ್ಸಾರಿಯವರು ಬಿನ್ನೈಸಿಕೊಂಡರು. ಸ್ವಸ್ಥಾನಾಪನ್ನರಾದರು ಅಧ್ಯಕ್ಷರು ಮತ ಎಣಿಕೆ ಮಾಡಲು ಯಾವತ್ತು ಉಪಸೂಚನೆಗಳು ಪ್ರಚಂಡ ಬಹುಮತದಿಂದ ತಿರಸ್ಕರಿಸಲ್ಪಟ್ಟವು ಮೂಲ ಸೂಚನೆ ಮಂಜೂರಾಯಿತು ಮತ ಎಣಿಕೆಯಾಗಬೇಕಾಗಿ ಕೆಲ ಪ್ರತಿನಿಧಿಗಳು ಅಧ್ಯಕ್ಷರ ಬಳಿ ಕೇಳಿಕೊಂಡರು. ಒಂದು ಬದಿಗ ಪ್ರಚಂಡ ಬಹುಮತವಿರಲಿಕ್ಕಾಗಿ, ಮತ ಎಣಿಕೆ ಮಾಡುವ ಗರಜಿಲ್ಲವಾಗಿ ಅಧ್ಯಕ್ಷರು ಅಭಿಪ್ರಾಯಪಟ್ಟು ಮತ ಎಣಿಕೆ ಮಾಡಲೊಪ್ಪಲಿಲ್ಲ. ಈ ಪ್ರಕಾರ ಕೌನ್ಸಿಲು ಪ್ರವೇಶದ ಠರಾವು ಮಂಜೂರಾದ ಬಳಿಕ ಸೌ| ಸರೋಜಿನಿ ನಾಯಡುರವರು ಸತ್ಯಾಗ್ರಹಿಗಳಿಗೆ ಅಭಿನಂದಿಸುವ ಠರಾವನ್ನು ಸೂಚಿಸಿದರು

ಸತ್ಯಾಗ್ರಹಿಗಳ ಅಭಿನಂದನ.

ಸೌ| ಸರೋಜಿನಿ ನಾಯಡುರವರು ಸತ್ಯಾಗ್ರಹಿಗಳಿಗೆ ಅಭಿನಂದಿಸುವ ಠರಾವನ್ನು ಸೂಚಿಸುವಾಗ ಸತ್ಯಾಗ್ರಹಿಗಳ ಪರಾಕ್ರಮವನ್ನು ಕಾವ್ಯಮಯವಾಗಿ ವರ್ಣಿಸಿದರು ' ರಾಷ್ಟ್ರಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹಿಗಳು ನಡಿಸಿದ ಹೋರಾಟವು ತೀರ ನೂತನವಾದದ್ದು ಹಿಂದವಾಸಿಯರು ಸ್ವಾತಂತ್ರ್ಯ ಸಂಪಾದನೆಯ ನೂತನ ಮಾರ್ಗವನ್ನೇ ಜಗತ್ತಿಗೆ ಪ್ರತ್ಯಕ್ಷ ಮಾಡಿ ಹೇಳಿತೋರಿಸಿದ್ದಾರೆ ಸತ್ಯಾಗ್ರಹಿಗಳಿಗೆ ನಾವು ಅಭಿನಂದಿಸುವದು [illegible] ಎಲ್ಲ-ಇಲ್ಲ [illegible] ಯುವ ಸ್ತ್ರೀ-ಪುರುಷರು ಒಮ್ಮನಸ್ಸಿನಿಂದಲೂ, ಏಕಾಗ್ರತೆಯಿಂದಲೂ ಶತ್ರುಗಳ ಮೇಲೆ ಸಾಗಿಸಿದ ಸಂಗ್ರಾಮವನ್ನು ನಾವು ಪುನಃ ಕಾಣಲಾರೆವು ಎನ್ನುವ [illegible] ತುಹೋದವೆಂದು ತಿಳಿಯುವವರಾಗಲ್ಲ ನಾನು ಇಲ್ಲಿಂದ ಆಹ್ವಾನವನ್ನೇ ಕೊಟ್ಟು ಸತ್ಯಾಗ್ರಹದ ಶ್ರದ್ಧೆಯನ್ನೂ, ನಿರ್ಧಾರವನ್ನೂ ಜಾಹೀರಪಡಿಸುತ್ತೇನೆ ಈ ವರೆಗೆ ಸ್ವಾತಂತ್ರ್ಯಸಂಪಾದನ ಮಾಡಿದ್ದು ಅತ್ಯಾಚಾರದ ಉಪಾಯಗಳಿಂದ, ನೆತ್ತರದ ನದಿಗಳನ್ನು ಹರಿಸಿ ಜನಾಂಗಗಳು ಸ್ವಾತಂತ್ರ್ಯಸಂಗ್ರಹ ಮಾಡಿವೆ ವಾಮನನೋವಾದಿಯಲ್ಲಿದ್ದ ಮಹಾತ್ಮರು ಸತ್ಯಾಗ್ರಹದ ಹೊಸ ಮಂತ್ರೋಪದೇಶ ಮಾಡಿ ಮಾನವನಿಗೆ ಉಚ್ಚ ಶಿಖರದಲ್ಲಿ ಕೂಡ್ರಿಸಿದ್ದಾರೆ ಇದರಿಂದ ಹೊಸ ಪಾಶ್ಚಾತ್ಯ ಸಂಸ್ಕೃತಿಯು ದೊಡ್ಡ ದೊಡ್ಡ ಪುರುಷಾರ್ಥದಲ್ಲಿ ಬಿಯಲಾಗಿದೆ, ಇನ್ನೂ ಸ್ವಾತಂತ್ರ್ಯಸಂಗ್ರಾಮ ಮುಗಿಯಲಿಲ್ಲ ನಾವು ದಣಿವಾರಿಸಿಕೊಳ್ಳುತ್ತಿದ್ದೇವೆ ಸತ್ಯಾಗ್ರಹ ಪ್ರವೃತ್ತಿಯನ್ನು ನಾವು ಎಷ್ಟಕ್ಕೂ ತೊರೆಯಲಾರೆವು ಸ್ವಾತಂತ್ರ್ಯ ಪ್ರಾಪ್ತಿಯಾಗುವ ತನಕ ನಾವು ಕಾದಾಡುವೆವು" ಈ ಠರಾವಿಗೆ ಸರದಾರ ಶಾರ್ದೂಲಸಿಂಗ ಕವೀಶ್ವರರವರು ಅನುಮೋದನ ಕೊಡುವಾಗ ನುಡಿದದ್ದೇನಂದರೆ — "ನಮ್ಮ ಹಿಂದಭೂಮಿಗೆ ಗುಲಾಮರ ಜನಾಂಗ,ಹೇಡಿಗಳ ಬೀಡು,ಎಂದು ಹಳಿಯುತ್ತಿದ್ದರು ಮಹಾತ್ಮರು ಆತ್ಮಕ್ಲೇಶದ ಉಪದೇಶ ಮಾಡಿ ಈ ಕಲಂಕವನ್ನು ಅಚ್ಚೆ ತೊಳೆದುಬಿಟ್ಟಿದ್ದಾರ ಅಣ್ಣಾ ವಿಠ್ಠಲಭಾಯಿಯವರ ನಿಧನವಾದಾಗ ಸರತು ಕರಾರು ಪಡೆದು ವಲ್ಲಭಭಾಯಿಯವರಿಗೆ ಬಿಡುಗಡೆ ಮಾಡಲು ಸರಕಾರವು ಒಪ್ಪಿಕೊಂಡಿತ್ತು, ಆ ಸಂಕಷ್ಟ ಕಾಲದಲ್ಲಿ ಸಹ ವಲ್ಲಭಭಾಯಿಯವರು ಕರಾರು ಬರೆದು ಕೊಡಲೊಪ್ಪಲಿಲ್ಲ ತಮಗೆ ಬಿಡುಗಡೆ ಮಾಡಬೇಕಾಗಿ ಸರಕಾರಕ್ಕೆ ಒಂದು ಶಬ್ದ ಬರೆದರೆ, ಇಂದಿಗೆ ಪಂ| ಜವಾಹಿರಲಾಲರಿಗೆ ಬಿಡುಗಡೆಯಾಗುತ್ತದೆ, ಕೊಂಚ ಸಹ ಬಗ್ಗಲು ಪಂ| ಜವಾಹಿರಲಾಲರು ತಯಾರಿಲ್ಲ ಇಷ್ಟು ಹಿಂದುಸ್ಥಾನದೊಳಗೆ ಈಗ ಸ್ಥಿತ್ಯಂತರವುಂಟಾಗಿದೆ. ಪುನಃ ಸಂಗ್ರಾಮವಾದರೆ ೫ ಲಕ್ಷ ಜನರನ್ನು ಸತ್ಯಾಗ್ರಹ ಧ್ವಜದ ಕೆಳಗೆ ಸೇರಿಸಬಹುದು"

ಆ ಮೇಲೆ ಸಮಾಜಸತ್ತಾವಾದಿಗಳದೊಂದು ಉಪಸೂಚನೆ, ಬಾಬು ಪುರುಷೋತ್ತಮದಾಸ ಟಂಡನ್‌ರವರದೊಂದು ಉಪಸೂಚನೆ, ಹೀಗೆ ಎರಡು ಉಪಸೂಚನೆಗಳು ಬಂದವು ಎರಡೂ ಉಪಸೂಚನೆಗಳ ಅರ್ಥ ಒಂದೇ: ಸ್ವಾತಂತ್ರ್ಯ ಸಂಪಾದಿಸಲು ಅಹಿಂಸೆಯಿಂದ ಹೆಚ್ಚಿನ ಪ್ರಯೋಜನವಾಗುತ್ತಿಲ್ಲದ್ದರಿಂದ ಅಹಿಂಸೆಯ ಮಾರ್ಗವನ್ನು ರಾಷ್ಟ್ರೀಯ ಸಭೆಯು ಅಂಗೀಕರಿಸುತ್ತದಾಗಿ ಸೂಚಿಸಿತ್ತು. ಅಹಿಂಸೆಯ ಮೇಲಿನ ನಿತಾಂತ ನಿಷ್ಠೆಯ ಉಲ್ಲೇಖವನ್ನು ಲೋಪ ಮಾಡಬೇಕಾಗಿ ಅವರು ಸೂಚಿಸಿದ್ದರು ಈ ಉಪಸೂಚನೆಗಳು ರದ್ದಾಗಿ ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು ಆ ಮೇಲೆ ಸೌ| ಕಮಲಾ ನೆಹರೂರವರ ಅಸ್ವಾಸ್ಥ್ಯದಿಂದ ನೆಹರೂರವರ ಕುಟುಂಬಕ್ಕೆ ಉಂಟಾದ ಚಿಂತೆಯಲ್ಲಿ ರಾಷ್ಟ್ರೀಯ ಸಭೆಯೂ ಪಾಲುಗಾರವಿರುತ್ತದೆಂದೂ, ಕಮಲಾ ನೆಹರೂರವರಿಗೆ ಸ್ಥಳಾಂತರದಿಂದ ಬೇಗನೆ ಗುಣವಾಗಲೆಂದೂ ಪ್ರಾರ್ಥನೆ ಮಾಡಿಕೊಳ್ಳುವ ಠರಾವನ್ನು ಅಧ್ಯಕ್ಷರೇ ಸೂಚಿಸಿ ಮನ್ನಿಸಿಕೊಂಡರು ಪರ್ಥಾದಲ್ಲಿ ತಾ| ೧೧ ೧೯೩೪ನೇಗೆ ಸೇರಿದ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಸಭೆಯಲ್ಲಿ ಮಂಜೂರಾದ ಠರಾವಿನಂತ ಈಗಿನ ಬೋರ್ಡ ಮೇ ೧ನೇ ತಾರೀಖಿನ ವರಗ ಉಳಿಯಬೇಕಾಗಿಯೂ, ಆ ಮೇಲೆ ಬೇರೆ ಬೋರ್ಡನ್ನು ನೇಮಿಸಬೇಕಾಗಿಯೂ ಠರಾವಾಯಿತು ಇಷ್ಟಾಗಲಿಕ್ಕೆ ರಾತ್ರಿ ೧೧|| ತಾಸಾಯಿತು. ಇದರಿಂದ ಆ ದಿನದ ಸಭೆ ವಿಸರ್ಜನ ಹೊಂದಿತು

ಹೊಸ ಘಟನೆ.

ಈಮೂರ್ತಿ ರವಿವಾರವಿದ್ದದರಿಂದ ಪ್ರೇಕ್ಷಕರ ಗಲಾಟೆ ಹೇಳಲಾಗಲ್ಲ ಸಭೆಯ ಪ್ರಾಕಾರದೊಳಗೂ, ಪ್ರಾಕಾರದ ಹೊರಗೂ ಎಲ್ಲಿ ನೋಡಿದಲ್ಲಿ ಲೋಕಗಂಗೆಯ ಪ್ರವಾಹವು ಹರಿಯುತ್ತಿತ್ತು. ಸೂರ್ಯಾಸ್ತವಾದಂತೆ ಜನಸಂದಣಿ ಮತ್ತೂ ಬೆಳೆಯಿತು ಮಹಾತ್ಮರಿಗೆ ಬರಲು ಅರ್ಧ ತಾಸು ವಿಳಂಬವಾಯಿತು. ಮಹಾತ್ಮರಿಗೆ ನೋಡಿದೊಡನೆ ಎಲ್ಲರೂ ಏಕಮನಸ್ಸಿನಿಂದ ಕರತಾಡನ ಮಾಡಿ ಸತ್ಕರಿಸಿದರು ವಾಡಿಕೆಯಂತೆ ವಂದೇಮಾತರಂ ಆದ ಬಳಿಕ, ಡಾ| ಪಟ್ಟಾಭಿಸೀತಾರಾಮಯ್ಯನವರು ಅಖಿಲ ಭಾರತೀಯ ಗ್ರಾಮ-ಕೈಗಾರಿಕೆ ಸಂಘದ ಸ್ಥಾಪನೆಯ ಠರಾವನ್ನು ಸೂಚಿಸಿದರು. "ಗ್ರಾಮೋದ್ಧಾರಕ್ಕಾಗಿ ಗ್ರಾಮ-ಕೈಗಾರಿಕೆಗಳನ್ನು ಪುನರ್ನಿರ್ಮಿಸಲೋಸುಗ ರಾಷ್ಟ್ರಸಭೆಯು ಸಂಕಲ್ಪ ಮಾಡಿದೆ ಬಾರಿಯಿಂದ ನಿರ್ಗತಿಕರಿಗೆ ಜೀವನೋಪಾಯ ದೊರೆತಿದೆ ರಾಷ್ಟ್ರೀಯ ಸಭೆಯು ಟಕು ವರ್ಷಗಳಿಂದ ಹಳ್ಳಿಗರ ಸುಖದ ವಿಚಾರ ಒಮ್ಮೆ ಮಾಡಿಲ್ಲ ಇತ್ತಲಾಗಿ ಆ ಕುರಿತು ವ್ಯವಸ್ಥೆಯಾಗಹತ್ತಿದೆ, ಗ್ರಾಮಗಳನ್ನು ಸ್ವಯಂಪೂರ್ಣ ಮಾಡುವದೇ ಈ ಸಭೆಯ ಉದ್ದೇಶ' ಹೀಗೆ ಪಟ್ಟಾಭಿಸೀತಾರಾಮಯ್ಯನವರು ಹೇಳಿದರು. ಕೈರಾಟೆ-ಕೈಮಗ್ಗಗಳಿಂದ ಬಡ ಒಕ್ಕಲಿಗರಿಗೆ ಎರಡು ಕಾಳು ಸಿಗುವ ವಿಚಾರವಾಗಿರುವದಾಗಿ ಖಾಸ ಅಬ್ದುಲ್ಲ ಗಫೂರ ಖಾನರವರವರು ಅಭಿಪ್ರಾಯಪಟ್ಟು ಠರಾವಿಗೆ ಅನುಮೋದಿಸಿದ ಬಳಿಕ, ಶ್ರೀ| ವಸಂತ ಕುಮಾರ ಮುಝುಮದಾರರವರು ಈ ಸಂಘಕ್ಕೆ

ರಾಷ್ಟ್ರೀಯ ಸಭೆಯು ಅಂಗೀಕರಿಸಬೇಕೆಂಬ ಉಪಸೂಚನೆಯನ್ನು ಸೂಚಿಸಿದರು. ವಿಷಯನಿರ್ಧಾರಕ ಸಭೆಯಲ್ಲಿ ಪ್ರಚಂಡ ಬಹುಮತದಿಂದ ಬಿದ್ದುಹೋದ ಸೂಚನೆಗಳನ್ನು ಪುನಃ ಸೂಚಿಸಿ ಕಾಲಾಪವ್ಯಯ ಮಾಡಬಾರದಾಗಿಯೂ, ಈ ಹೊತ್ತಿಗೇ ಸಭೆಯ ಕಾರ್ಯವನ್ನು ಪರಿಸಮಾಪ್ತಿಗೊಳಿಸಬೇಕಾಗಿಯೂ ಅಧ್ಯಕ್ಷರು ಹೇಳಿದಾಗ್ಯೂ ಡಾ| ವಸಂತ ಕುಮಾರರು ಕೇಳಲಿಲ್ಲ. ಇವರ ಉಪಸೂಚನೆಗೆ ಅನುಮೋದಕರು ದೊರೆಯುವದು ದುರ್ಲಭವಾಯಿತು. ಆಗ ಅಸಂಸದೀಯರಾದ ಸೌ| ಹೇಮಪ್ರಭಾ ಮುಜುಮದಾರರವರು ಅನುಮೋದನೆ ಕೊಟ್ಟರು. ಆ ಮೇಲೆ ಬಂದ ಎರಡು ಉಪಸೂಚನೆಗಳಿಗೆ ಅನುಮೋದಕರು ದೊರೆಯಲಿಲ್ಲ. ಚರ್ಚೆಯಾಗಿ ಎಲ್ಲ ಉಪಸೂಚನೆಗಳು ರದ್ದಾಗಿ ಮೂಲ ಠರಾವು ಮಂಜೂರಾಯಿತು. ವಿಷಯನಿರ್ಧಾರಕ ಸಭೆಯವರು ಚರ್ಚೆಯಾಗದ ಉಳಿದ ವಿಷಯಗಳನ್ನೆಲ್ಲ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ನಿರ್ಣಯಿಸಲೊಪ್ಪಿಸಿದ್ದಾರೆ, ಇದು ಉಚಿತವಲ್ಲ, ನಿಷೇಧವೆಂದು ರಾಷ್ಟ್ರೀಯ ಸಭೆಯ ಕಾರ್ಯವನ್ನು ಕೆಲ ಕಾಲ ನಿಲ್ಲಿಸಬೇಕಾಗಿ ಒಬ್ಬರ ಸೂಚನೆಯಿತ್ತು. ಅದು ನಿಯಮಬಾಹ್ಯವೆಂದು ಅಧ್ಯಕ್ಷರು ತೀರ್ಮಾನಿಸಿ ಅದನ್ನು ಸೂಚಿಸಗೊಡಲಿಲ್ಲ. ಸ್ವದೇಶಿ ಪ್ರದರ್ಶನದ ವ್ಯವಸ್ಥೆಯನ್ನು ಅಖಿಲ ಭಾರತೀಯ ನೂಲುಗಾರರ ಸಂಘಕ್ಕೂ, ಗ್ರಾಮ-ಕೈಗಾರಿಕೆ ಸಂಘಕ್ಕೂ ಒಪ್ಪಿಸಬೇಕೆಂಬ ಠರಾವನ್ನು ಅಧ್ಯಕ್ಷರೇ ಸೂಚಿಸಿ ಮಂಜೂರ ಮಾಡಿಕೊಂಡ ಬಳಿಕ, ಕೊಂಗ್ರೆಸ ಘಟನೆಯಲ್ಲಿಗ ತಿದ್ದುಪಡಿ ಮಾಡುವ ಸೂಚನೆಯನ್ನು ಮಹಾತ್ಮರು ಸೂಚಿಸುತ್ತಾರಾಗಿ ಅಧ್ಯಕ್ಷರು ಸಭೆಗೆ ತಿಳಿಸಿದೊಡನೆ "ಮಹಾತ್ಮಾ ಗಾಂಧೀಕೀ ಜೈ!" ಎಂಬ ಜಯಘೋಷದಿಂದ ಅಬ್ದುಲ್ಲಗಫೂರ ನಗರವು ಮಾರ್ದುಮಿಸಿತು. ಮಹಾತ್ಮರು ತಮ್ಮ ಠರಾವನ್ನು ಸೂಚಿಸುವಾಗ ನುಡಿದದ್ದೇನಂದರೆ — "ಈಗ ರಾಷ್ಟ್ರೀಯ ಸಭೆಗೆ ೬೦೦೦ ಪ್ರತಿನಿಧಿಗಳಿದ್ದಾರೆ, ಇದು ಅತಿ-ಘನ್ನವಾದ ಸಂಖ್ಯೆ, ಆ ಸಂಖ್ಯೆಯನ್ನೀಗ ೨೦೦೦ಕ್ಕೆ ಇಳಿಸಬೇಕೆಂದು ಗೊತ್ತಾಗಿದೆ. ಈ ತನಕ ಮತದಾರರಿಗೂ, ಕೊಂಗ್ರೆಸ ಪ್ರತಿನಿಧಿಗಳಿಗೂ ನಿಕಟ ಸಂಬಂಧವಿದ್ದಿಲ್ಲ, ಹೊಸ ಘಟನೆಯಲ್ಲಿ ಆ ವ್ಯವಸ್ಥೆಯಾಗಿದೆ. ೬ ತಿಂಗಳ ತನಕ ಕೊಂಗ್ರೆಸ ಪಟದ ಮೇಲೆ ಇದ್ದ ೫೦೦ ಸಭಾಸದರಿಗೆ ಒಬ್ಬರ ಪ್ರತಿನಿಧಿಗಳನ್ನು ಆರಿಸಿಕಳುಹಬೇಕು. ಯಾವದೊಂದು ಪ್ರಾಂತದಲ್ಲಿ ೫೦೦ ಸಭಾಸದರಿರದಿದ್ದರೆ ಅವರಿಗೆ ಕೊಂಗ್ರೆಸ ಪ್ರತಿನಿಧಿ ಕಳುಹುವ ಅಧಿಕಾರವಿಲ್ಲ. ಮತದಾರರ ಸಂಖ್ಯೆ ತೀರ ಕಡಿಮೆಯೆಂದೂ ನಾನೊಪ್ಪುತ್ತೇನೆ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ೮೦೦೦ ಮತದಾರರಿಗೊಬ್ಬರಂತೆ ಮೆಂಬರರು ಆರಿಸಲ್ಪಡುತ್ತಾರೆ. ಆದಾಗ್ಯೂ ಈ ಮತದಾರರ ಸಂಖ್ಯೆಗೆ ನನ್ನ ಒಪ್ಪಿಗೆಯಿದೆ. ಹಳ್ಳಿಗರಿಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಲು ಅನುವಾಗಬೇಕೆಂದು ಮುಕ್ಕಾಲು ಅಂಶ ಪ್ರತಿನಿಧಿಗಳು ೧೦೦೦೦ ಲೋಕಸಂಖ್ಯೆಗೆ ಕಡಿಮೆಯಾಗಿರುವ ಹಳ್ಳಿಗಳಿಂದ ಆರಿಸಲ್ಪಡಬೇಕೆಂದು ಗೊತ್ತಾಗಿದೆ. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯಲ್ಲಿ ಈಗ ೩೫೦ ಮಂದಿ ಸಭಾಸದರಿದ್ದಾರೆ. ಇಷ್ಟು ಜನರು ಎಂದೂ ಕಮಿಟಿಯ ಸಭೆಗೆ ಬಂದಿದ್ದಿಲ್ಲ. ಹೋಗಿ ಬರುವ ಪ್ರಯಾಣದ ಖರ್ಚು ಬಹಳ ತಗಲುತ್ತದೆ. ಹೊಸ ಘಟನೆಯಲ್ಲಿ ಈ ಸಂಖ್ಯೆ ೧೬೬ಕ್ಕೆ ಇಳಿಸಿದೆ. ಈಗ ಸ್ವಾಗತ ಸಮಿತಿಯವರು ಪ್ರಾಂತಿಕ ಕೊಂಗ್ರೆಸ ಕಮಿಟಿಗಳ ಸಲಹೆ ಪಡೆದು ಅಧ್ಯಕ್ಷರನ್ನಾರಿಸತಕ್ಕದ್ದಿದೆ. ಹೊಸ ಘಟನೆಯಂತೆ ಪ್ರತಿನಿಧಿಗಳೇ ಅಧ್ಯಕ್ಷರನ್ನು ಆರಿಸಬೇಕು. ಕೊಂಗ್ರೆಸ ಸಭಾಸದರು ವಾರ್ಷಿಕ ವರ್ಗಣಿ ೪ ಆಣೆ ತೆರಬೇಕು. ಆದರೆ ಕೊಂಗ್ರೆಸ ಕಮಿಟಿಗಳ ಮೇಲೆ ಸಭಾಸದರಾಗುವವರೂ, ಪ್ರತಿನಿಧಿಗಳೂ ಖಾದಿಯನ್ನೇ ಧರಿಸುವವರಾಗಬೇಕು, ಕೈರಾಟಿಯ ಮೇಲೆ ನೂಲಬೇಕು, ಇಲ್ಲವೆ ಬಡಿಗ ಮೊದಲಾದ ಕಾಯಕಷ್ಟ ಮಾಡುವವರಿರಬೇಕು. ಪ್ರತಿನಿಧಿಗಳಾಗಲಿ, ಕೊಂಗ್ರೆಸ ಕಮಿಟಿಗಳ ಸಭಾಸದರಾಗಲಿ, ಕೊಂಗ್ರೆಸ ಕಾರ್ಯಕಾರಿ ಮಂಡಳವು ಅರಾಷ್ಟ್ರೀಯವೆಂದು ಜಾಹೀರಪಡಿಸಿದ ಸಂಸ್ಥೆಗಳ ಸಭಾಸದರಿರಕೂಡದು. ಇವೇ ಮುಂತಾದ ತಿದ್ದುಪಾಟುಗಳನ್ನು ಮಹಾತ್ಮರು ಸೂಚಿಸಿ ರಾಜ್ಯಘಟನೆಯನ್ನು ಸ್ವೀಕೃತಿಯಿಂದ ಅಂಗೀಕರಿಸಿ ದಕ್ಷತೆಯಿಂದ ರಾಷ್ಟ್ರಕಾರ್ಯ ನಡಿಸಬೇಕಾಗಿ" ೧| ತಾಸಿನ ತನಕ ಮಹಾತ್ಮರು ಒಬ್ಬ ಚಿತ್ತಾಕರ್ಷಕ-ಹೃದಯಭೇದಕ ಮಾತನಾಡಿದರು. ಮಹಾತ್ಮರ ಮುಂಭಾಗದಲ್ಲಿ ಧ್ವನಿವಾಹಕ ಯಂತ್ರಗಳನ್ನಿಟ್ಟಿದ್ದರು. ಒಂದರಿಂದ ಇಡೀ ಸಭಾಮಂಟಪದಲ್ಲಿ ಮಹಾತ್ಮರ ಭಾಷಣ ಕೇಳಬರುತ್ತಿತ್ತು; ಮತ್ತೊಂದರೊಳಗಿಂದ ಮಹಾತ್ಮರ ಭಾಷಣವನ್ನು ಫಿಲ್ಮ ಕಂಪನಿಯವರು ಕೊಂಗ್ರೆಸ ಫಿಲ್ಮಿಗಾಗಿ ಸಂಗ್ರಹಿಸುತ್ತಿದ್ದರು. ಶ್ರೀ| ಕನ್ಹಯಲಾಲ ಮುನಶಿಯವರು ಅನುಮೋದನೆ ಕೊಟ್ಟ ಬಳಿಕ, ಠರಾವಿನ ಮೇಲೆ ಲೋಕಮತವನ್ನು ತಿಳಕೊಂಡು ಆ ಮೇಲೆ ಮುಂದಿನ ಅಧಿವೇಶನದಲ್ಲಿ ಈ ವಿಷಯ ವಿಚಾರವಾಗಬೇಕಾಗಿ ಸಮಾಜಸತ್ತಾವಾದಿಗಳು ಉಪಸೂಚನೆ ತಂದರು. ಅದು ರದ್ದಾಯಿತು. ಪಂ| ಹರಿಹರ ಶಾಸ್ತ್ರಿಗಳವರು ಖಾದಿಧಾರಣದ ಉಲ್ಲೇಖವನ್ನು ಲೋಪ ಮಾಡಬೇಕಾಗಿ ಸೂಚಿಸಿದರು. ಈ ಉಪಸೂಚನೆಯೂ ರದ್ದಾಯಿತು. ಸರದಾರ ಶಾರ್ದೂಲಸಿಂಗರವರು ಮಹಾತ್ಮರ ಠರಾವನ್ನು ಪುರಸ್ಕರಿಸಿ ಭಾಷಣ ಮಾಡಿದ ಬಳಿಕ, ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಆ ಮೇಲೆ ಕರಾಚಿಯ ಶ್ರೀ| ಸಿಧ್ವಾರವರು ಮಹಾತ್ಮರಿಗೆ ಕೃತಜ್ಞತೆಯನ್ನು ಪ್ರದರ್ಶಿಸುವ ಠರಾವು ಸೂಚಿಸಿದರು. 'ಮಹಾತ್ಮರ ನಿವೃತ್ತಿಯನ್ನು ಈ ಸಭೆಯು ನಿರುಪಾಯದಿಂದ ಮನ್ನಿಸುತ್ತದೆ. ರಾಷ್ಟ್ರೀಯ ಸಭೆಗೆ ಅವಶ್ಯ ಕಂಡಾಗ ಸಲಹೆ ಕೊಡುತ್ತೇನಾಗಿ ಮಹಾತ್ಮರು ಕೊಟ್ಟ ಅಭಿವಚನದಿಂದ ರಾಷ್ಟ್ರೀಯ ಸಭೆಗೆ ಸಮಾಧಾನವಾಗಿದೆ. ಈ ತನಕ ಮಾಡಿದ ಅಮೂಲ್ಯ ದೇಶಸೇವೆಯಿಂದ ರಾಷ್ಟ್ರಕ್ಕೆ ಉಪಕಾರವಾಗಿದೆ.' ಈ ಠರಾವನ್ನು ಶ್ರೀ| ಸಿಧ್ವಾರವರು ಸೂಚಿಸಿ ಮಹಾತ್ಮರು ಈ ಕಾಲದಲ್ಲಿ ನಮ್ಮನ್ನು ಅಗಲಿಹೋಗಬಾರದಿತ್ತೆಂದೂ, ಅವರು ನಿರ್ಧಾರ ಮಾಡಿದ್ದರಿಂದ ಅವರ ಅಮೂಲ್ಯ ಸೇವೆಯಿಂದ ರಾಷ್ಟ್ರಕ್ಕುಂಟಾದ ಲೋಕಗೌರವವನ್ನು ನೆನಿಸಿ ಅವರ ಉಪಕಾರ ಮನ್ನಿಸಲಿಕ್ಕೂ, ತಾವು ಈ ಠರಾವನ್ನು ಸೂಚಿಸಿದ್ದೇವೆಂದರು. ಶ್ರೀ| ರಾಜಗೋಪಾಲಾಚಾರ್ಯರು ಈ ಠರಾವಿಗೆ ಅನುಮೋದನವನ್ನಿತ್ತರು. "ಮಹಾತ್ಮರಿಗೆ ರಾಷ್ಟ್ರೀಯ ಸಭೆಯಲ್ಲಿ ಸೇರಿರಲು ನಾನು ಪರಮಾವಧಿಯ ಪ್ರಯತ್ನ ಮಾಡಿದೆ, ನನ್ನ ಪ್ರಯತ್ನಗಳೆಲ್ಲ ನಿಷ್ಫಲವಾದವು, ಆದರಿಂದ ಈ ಠರಾವನ್ನು ನಾನು ಅನುಮೋದಿಸನಿಂತಿದ್ದೇನೆ. ಅವರ ಅಪೇಕ್ಷೆಯಂತೆ ನಾವು ನಮ್ಮ ನಡಾವಳಿಯನ್ನು ಸುಧಾರಿಸಿಕೊಂಡು ಪುನಃ ಅವರ ಸೇವೆ ಪಡೆಯಲು ನಾವು ಅರ್ಹರಾಗಬೇಕು." ಬಾಬು ಪುರುಷೋತ್ತಮದಾಸ ಟಂಡನ್‌ರವರು ರಾಷ್ಟ್ರೀಯ ಸಭೆಗುಂಟಾದ ವಿಷಣ್ಣತೆಯನ್ನು ಪ್ರದರ್ಶಿಸಿ, "ನಾವು ನಿಮ್ಮನ್ನೇ ಹಾರೈಸುತ್ತಿರುವೆವು!" ಹೀಗೆ ನುಡಿದು ಠರಾವನ್ನು ಪುರಸ್ಕರಿಸಿದ ಬಳಿಕ, ಠರಾವು ಸರ್ವಾನುಮತಿಯಿಂದ ಮಂಜೂರಾಯಿತು. ಮುಂದಿನ ರಾಷ್ಟ್ರೀಯ ಸಭೆಯನ್ನು ಪಂಡಿತ ಗೋವಿಂದ ವಲ್ಲಭ ಪಂತರವರು ತಮ್ಮ ಸಂಯುಕ್ತ ಪ್ರಾಂತಕ್ಕೆ ನಿಮಂತ್ರಿಸಿದರು. ನಿಮಂತ್ರಣ ಸ್ವೀಕಾರದ ಠರಾವಾದ ಬಳಿಕ, ಸಭಾಕಾರ್ಯವೆಲ್ಲ ಮುಗಿಯಿತು. ಇಷ್ಟಕ್ಕೆ ಮಧ್ಯರಾತ್ರಿಯಾಯಿತು. ಪ್ರತಿನಿಧಿಗಳು ಸ್ವಾಗತ ಸಮಿತಿಯವರ ಆಭಾರ ಮನ್ನಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ| ನರಿಮಾನರವರು ಆಭಾರ ಸ್ವೀಕರಿಸಿದ ಬಳಿಕ, ಸೌ| ಲೀಲಾವತಿ ಮುನಶಿಯವರು ಅಧ್ಯಕ್ಷರ ಆಭಾರ ಮನ್ನಿಸಿದರು.

ಸಮಾರೋಪ ಮಾಡುವಾಗ ಅಧ್ಯಕ್ಷರು ನುಡಿದದ್ದೇನಂದರೆ "ನಾನು ಇತ್ತ ಕಡೆ ಬಂದು ೬ ದಿನಗಳಾದವು. ಕಲ್ಯಾಣದಿಂದ ನನಗೆ ಸ್ವಾಗತವಾಯಿತು. ನಾನು ಬಿಹಾರದೊಳಗಿನ ಒಂದು ಚಿಕ್ಕ ಹಳ್ಳಿಯವನು, ಹಾಗೂ ಮುಂಬಯಿಯೆಂದರೆ ಒಂದು ದೊಡ್ಡ ಪಟ್ಟಣ, ಹಿಂದುಸ್ಥಾನದ ರಾಜಧಾನಿಯಂತೆ. ನೀವು ಮಾಡಿದ ಗೌರವವು ನನ್ನದಲ್ಲ, ರಾಷ್ಟ್ರೀಯ ಸಭೆಯದು. ಅಂಥ ಗೌರವವೇ ನನ್ನ ಸ್ವಾಗತಕಾಲದಲ್ಲಿ ಪ್ರಕಟವಾಗಿತ್ತು. ರಾಷ್ಟ್ರ ಸಭೆಯ ಮೇಲಿನ ಪ್ರೀತಿಯೂ, ರಾಷ್ಟ್ರೀಯ ಸಭೆಯು ಮಾಡಿದ ಅಮೂಲ್ಯ ದೇಶಸೇವೆಯೂ ಆ ಸ್ವಾಗತಕ್ಕೆ ಕಾರಣೀಭೂತವಾದವುಗಳು. ವಿದೇಶಗಳಲ್ಲಿ ಬೇಕಾದವರು ಬೇಕಾದ್ದನ್ನು ಹೇಳಿಕೊಳ್ಳಲಿ, ರಾಷ್ಟ್ರೀಯ ಸಭೆಯು ಹಿಂದುಸ್ಥಾನದ ಪ್ರಾತಿನಿಧಿಕ ಸಂಸ್ಥೆಯೆಂದು ಈ ಅಧಿವೇಶನದಿಂದ ಸಿದ್ಧವಾಗಿದೆ. ರಾಷ್ಟ್ರೀಯ ಸಭೆಯ ಆಶ್ರಯದಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡಿಸಲು ಭಾರತೀಯರು ಸಿದ್ಧರಿರುವರಾಗಿಯೂ, ಈ ಅಧಿವೇಶನವು ಲೋಕಕ್ಕೆ ಜಾಹೀರು ಮಾಡಿದೆ. ಈ ಅಧಿವೇಶನದಲ್ಲಿ ಕೈಕೊಂಡ ಹೊಸ ಘಟನೆಯಂತೆ ಭಾರತೀಯರು ನಡಕೊಂಡು ರಾಷ್ಟ್ರೀಯ ಸಭೆಯನ್ನು ಬಲಪಡಿಸಬೇಕು. ಲಕ್ಷಾವಧಿ ಜನರು ಕೊಂಗ್ರೆಸ ಪಟದ ಮೇಲೆ ತಮ್ಮ ಹೆಸರುಗಳನ್ನು ದಾಖಲಪಡಿಸಿಕೊಳ್ಳಬೇಕು. ವರಿಷ್ಠ ಕಾಯಿದೆ ಕೌನ್ಸಿಲಿನ ಮತದಾರರೆಲ್ಲರೂ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರರಿಗೇ ಮತ ಕೊಟ್ಟು, ರಾಷ್ಟ್ರೀಯ ಸಭೆಯ ಪ್ರಾಬಲ್ಯವನ್ನು ಸರಕಾರಕ್ಕೆ ಪ್ರತ್ಯಕ್ಷ ಸಿದ್ಧಮಾಡಿ ತೋರಿಸಬೇಕು" ಈ ಪ್ರಕಾರ ಅಧ್ಯಕ್ಷರು ಸಮಾರೋಪ ಮಾಡಿದ ಬಳಿಕ, ಪ್ರಚಂಡ ಜಯಘೋಷವಾಯಿತು. ಆ ಮೇಲೆ ಎಲ್ಲರೂ ಎದ್ದು ನಿಂತರು. ಮೂವರು ಕುಮಾರಿಯರು "ವಂದೇ ಮಾತರಮ್!" ರಾಷ್ಟ್ರಗೀತವನ್ನು ಇಂಪಾಗಿ ಹಾಡಿದ ಬಳಿಕ, ರಾಷ್ಟ್ರೀಯ ಸಭೆಯ ಅಧಿವೇಶನವು ರವಿವಾರ ಮಧ್ಯರಾತ್ರಿ ವಿಸರ್ಜನೆ ಹೊಂದಿತು.

ಆ ದಿವಸದ ಒಂದು ದೃಶ್ಯವನ್ನು ಯಾರೂ, ಎಂದಿಗೂ ಮರೆಯರು. ಮಹಾತ್ಮರಿಗೆ ಅಂದು ಸಭೆಗೆ ಬರಲು ಅರ್ಧ ತಾಸು ವಿಳಂಬವಾಯಿತೆಂದು ಬರೆದದೆ. ಮಹಾತ್ಮರು ಬಂದಾಗ ಎಲ್ಲರೂ ಆಸನಸ್ಥರಾಗಿದ್ದರು. ಮಹಾತ್ಮರಿಗೆ ಪ್ರಾಕಾರದಲ್ಲಿ ಕಂಡೊಡನೆ ಎಲ್ಲರೂ ಎದ್ದು ನಿಂತು ಮಹಾತ್ಮರಿಗೆ ಮನ್ನಿಸಿದ ನೋಟ ನೋಡಿ ಎಲ್ಲರೂ ಬೆರಗಾದರು. ಹಿಂದಭೂಮಿಯಲ್ಲಿ ಇಷ್ಟು ಅದ್ವಿತೀಯ ಲೋಕಪ್ರಭುಗಳು ಬೇರೊಬ್ಬರಿರಲಿಕ್ಕಿಲ್ಲವೆಂದು ಎಲ್ಲರಿಗೂ ಅನಿಸಿತು. ಮಹಾತ್ಮರ ಕಾರ್ಯಕ್ರಮದ ಬಗ್ಗೆ ಮತಭೇದವಿದೆ, ಆದಾಗ್ಯೂ ಮಹಾತ್ಮರ ಪ್ರಾಬಲ್ಯ ನೋಡಿ, ಕೇಳಿ ಬಹು ಆನಂದವಾಗುತ್ತದೆ!!

ವಂದೇ ಮಾತರಮ್!

ಮತದಾನ ರಾಣ್ಯಗಳಲ್ಲಿ ರಾಷ್ಟ್ರೀಯ ಸಭೆಯ ಪ್ರತಿಷ್ಠೆಯನ್ನು ಸಿದ್ಧಗೊಳಿಸಿರಿ!

ಕಾನಡಾವೃತ್ತ.

ಮಿತಿ ಭಾವ ಸಂ। ಕಾರ್ತಿಕ ಶು ೧೯೩೪ ಸೋಮವಾರ

ಯಾರಿಗೆ ಮತ?

ಬುದವಾರ ನವಂಬರ ತಾ ೧೪ ನೇಗೆ ವರಿಷ್ಠ ಶಾಯಿದೆ ಕೌನ್ಸಿಲಿನ ಚುನಾವಣೆ, ಆ ದಿನ ಮತದಾರರಿಗಲ್ಲರಿಗೂ ತಮ್ಮ ತಮ್ಮ ಮತದಾರ ರಾಣ್ಯಗಳಿಗೆ ಹೋಗಿ "ನನಗೆ ಮತ ಕೊಡಬೇಕು, ನಾನು ದೇಶಹಿತ ಮಾಡಿದವನು, ನನ್ನಿಂದಲೇ ಹಿಂದೆ ದೇಶೋದ್ಧಾರವಾಗಿದೆ, ಮುಂದ ದೇಶೋದ್ಧಾರವಾದರೆ ನನ್ನಿಂದಲೇ ಆಗಬೇಕು, ಆಗುವದು, ಅದರಿಂದ ನನಗೇ ಮತ ಕೊಟ್ಟು ಆರಿಸಿ ಕಳುಹಿರಿ, ನಾನು ಸನಾತನ ದರ್ಮಾಭಿಮಾನಿಯು, ಈ ತನಕ ದರ್ಮರಕ್ಷಣೆಗಾಗಿ ಹೆಣಗಾಡಿದ್ದೇನೆ, ಮುಂದಯೂ ಆ ಕುರಿತು ಹಿಂದಿನಂತೆ ಪ್ರಯತ್ನ ಮಾಡುತ್ತಿರುವೆನು, ನನಗೇ ಮತ ಕೊಟ್ಟು ಸನಾತನ ದರ್ಮದ ಮೇಲಿನ ಆಪತ್ತನ್ನು ಪರಿಹರಿಸಿಕೊಳ್ಳಿರಿ" ಈ ಪ್ರಕಾರ ಉಮೇದ್ವಾರರು ಉಮೇದಿಯ ಮಾತುಗಳನ್ನೂ, ಉಮೇದಿಯ ವಚನಗಳನ್ನೂ, ಉಮೇದಿಯ ಪತ್ರಿಕೆಗಳನ್ನೂ ಹೊರಡಿಸಲಾರಂಭಿಸಿದ್ದಾರೆ ಧಾರವಾಡದ 'ಕರ್ನಾಟಕ ಟೈಮ್ಸ' ಪತ್ರಿಕೆಯು ರಾವಬಹಾದ್ದೂರ ಬಸನಗೌಡಾ ಲಿಂಗನಗೌಡಾ ಪಾಟೀಲರವರಿಗೇ ಮತದಾನ ಮಾಡಿ ದೇಶದ ಹಿತವನ್ನು ಸಾಧಿಸಬೇಕಾಗಿ ನಿತ್ಯ ಪ್ರಕಟಣೆಗಳನ್ನು ಹೊರಡಿಸಿ ರಾವಬಹಾದ್ದೂರರ ಸೇವೆಯನ್ನು ನಿಷ್ಠೆಯಿಂದ ಜರಗಿಸುತ್ತಿದೆ ಧಾರವಾಡದ 'ವಿಜಯ' ಪತ್ರಿಕೆಯಂತು ರಾ। ಜೋಗ ವಿಶ್ವನಾಥರಾಯರ ವಕೀಲಿಯನ್ನು ನಡಿಸಲಾರಂಭಿಸಿದ ದಕ್ಷಿಣ ಭಾಗದ ತುಂಬ ವಿಶ್ವನಾಥರಾಯರ ಉಮೇದ್ವಾರಿಗೇ ಎಲ್ಲೆಲ್ಲೂ ಬೆಂಬಲವಿರುವದಾಗಿ ವಿಜಯ ದುಂದುಭಿ ಮೊಳಗುತ್ತಿದೆ! ಹಾವೇರಿಯ ವಿಖ್ಯಾತ, ದೇಶಸೇವಕರಾದ ಶ್ರೀ। ಸಿದ್ದಪ್ಪ ಹೊಸಮನೆಯವರಿಗೇ ಮತದಾನ ಮಾಡಬೇಕಾಗಿ ಬೆಳಗಾವಿಯ "ಸಂಯುಕ್ತ ಕರ್ನಾಟಕ" ನಿತ್ಯಪತ್ರಿಕೆಯು ಮತದಾರರಿಗೆ ಪರಿಪರಿಯಿಂದ ವಿನ್ನೈಸಿಕೊಳ್ಳುತ್ತಿದೆ ಬೇರೆ ಬೇರೆ ಜಿಲ್ಲೆಗಳಲ್ಲಿ ಶ್ರೀ। ಹೊಸಮನೆಯವರಿಗೇ ಬೆಂಬಲ ಸಿಗುವದಾಗಿಯೂ, ಸಿಗಬೇಕಾಗಿಯೂ, ಕರ್ನಾಟಕದ ಪ್ರಮುಖರೆಲ್ಲರೂ ಶ್ರೀ। ಹೊಸಮನೆಯವರಿಗೇ ಅತ್ಯಾಗ್ರಹದಿಂದ ಇಲೆಕ್ಷನಿಗೆ ನಿಲ್ಲಿಸಿದವರಾಗಿಯೂ, ಶ್ರೀ। ಹೊಸಮನೆಯವರಂಥ ನಿಷ್ಣಾತ ವಕೀಲರು ದಕ್ಷಿಣ ವಿಭಾಗಕ್ಕೆ ದೊರಕುವದು ದುರ್ಲಭವೆಂದೂ, ಕೊಂಗ್ರೆಸ್ಸ್ ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ। ಹೊಸಮನೆಯವರಿಗೇ ಪುರಸ್ಕರಿಸುತ್ತಾರೆಂದೂ 'ಸಂಯುಕ್ತ ಕರ್ನಾಟಕ' ಕರ್ತರ ಅಂಬೋಣ ಇಂಥ ಪ್ರಸಕ್ತಿಯಲ್ಲಿ ಯಾರಿಗೆ ಮತ ಕೊಡಬೇಕೆಂದು ಮತದಾರರು ಕಲಕಾಲ ಗೊಂದಲದಲ್ಲಿ ಬೀಳುವದು ಸಹಜ. ಅದರಿಂದ ಇಂದಿಗೆ "ಯಾರಿಗೆ ಮತ ಕೊಡಬೇಕು?" ಎಂಬ ಪ್ರಶ್ನೆಯನ್ನು ನಾವು ಎತ್ತಿದ್ದೇವೆ

ಮೂವರೂ ಸಜ್ಜನರು, ಮೂವರೂ ವಕೀಲರು ಆದರೆ ನಮಗೆ ಬೇಕಾದ ವಕೀಲರ್ಯಾರು? ಎಂಬುದೇ ಪ್ರಶ್ನೆ ರಾ। ಬ। ಪಾಟೀಲರ ವಕೀಲಿ ನಮಗೆ ಬೇಡ ಕಾರಣವೇನೆಂದು ಬಲ್ಲಿರಾ? ಶ್ವೇತ ಪತ್ರಿಕೆಗೆ ಮಾನ್ಯತೆ ಕೊಡುವದಕ್ಕಾಗಿಯೇ ಅವರು ವರಿಷ್ಠ ಶಾಯಿದೆ ಕೌನ್ಸಿಲಿಗೆ ಆರಿಸಿ ಹೋಗುತ್ತಾರೆ ಬ್ರಿಟಿಶರ ಕೈಯೊಳಗಿಂದ ಅಧಿಕಾರ ಸೆಳಕೊಳ್ಳುವ ಯೋಜನೆಗೆ ರಾವಬಹದ್ದೂರರ ಸಮ್ಮತಿಯಿಲ್ಲ ಬ್ರಿಟಿಶ ಸಾಮ್ರಾಜ್ಯಕರ್ತರು ಹಿತಕರವೆಂದು, ಪಥ್ಯಕರವೆಂದು ಹೇಳಕೊಟ್ಟ ರಾಜ್ಯಯೋಜನೆಯನ್ನು ಸ್ವೀಕರಿಸಿ ರಾವಬಹದ್ದೂರರು ಮನ್ನಿಸಿ ಅದರಂತೆಯೇ ತಮ್ಮ ನಡವಳಿಯನ್ನು ನಡಿಸಲು ಬಯಸಿದ್ದಾರೆ ಶ್ವೇತ ಪತ್ರಿಕೆಯು ತ್ಯಾಜ್ಯವೆಂದು ರಾವಬಹದ್ದೂರರೂ ಒಪ್ಪುತ್ತಾರೆ ಅಂಥ ಒಳಿತ್ತ, ರಾವಬಹದ್ದೂರರ ವಕೀಲಿ ನಮಗೆ ಇಷ್ಟವೇನು? ರಾ। ಬ। ರ ಈ ಕೆಲಸ ನಮ್ಮ ಪ್ರತಿನಿಧಿಗಳಾಗಿ ಆರಿಸಿ ಹೋಗಲು ಸರ್ವಥಾ ಅಪಾತ್ರರೆಂದು ಅವರ ಗೆಳೆಯರಾದ ಬೆಳಗಾವಿಯ ದಿವಾಣ ಬಹಾದ್ದೂರ ಒಡ್ಡೀಯವರು ಹೇಳಿದ ಬಳಿಕ, ಅವರಿಗ ಎಷ್ಟಕ್ಕೂ ಯಾರೂ ಮತ ಕೊಡಬಾರದೆಂದು ನಾವು ಪ್ರತ್ಯೇಕ ಹೇಳುವದುಳಿಯಿತೇನು?

ಧಾರವಾಡದ ರಾ। ಜೋಗ ವಿಶ್ವನಾಥರಾಯರೆಂದರೆ, ಅದೊಂದು ದೊಡ್ಡ ಪ್ರಶ್ನೆ ಇವರಿಗೆ ರಾಷ್ಟ್ರೀಯ ಸಭೆಯ ಅಭಿಮಾನವೂ ಉಂಟು 'ಕೋಮವಾರ ನಿರ್ಣಯದ' ಬಗ್ಗೆ ಅವರಪ್ರೀತಿಯೂ ತುಂಬ ಉಂಟು! ಜಾತೀಯ ನಿರ್ಣಯದ ನಿಷೇಧವನ್ನು ಇವರು ಇತ್ತ ಮಾಡಲಾರಂಭಿಸಿದ್ದಾರೆ ಮೇಲೆ ಕಾಯಿದೆ ಕೌನ್ಸಿಲುಗಳಲ್ಲಿ ತಾವು ಇತ್ತ ೨೦ ವರ್ಷಗಳಿಂದ ಮಾಡಿದ ದೇಶಸೇವೆ ಮಾಡಿದವರಾಗಿ ಬೆನ್ನ ತಟ್ಟಿಕೊಳ್ಳುತ್ತಾರೆ ಮಾಲವೀಯ ಪಕ್ಷದ ಆಶೀರ್ವಾದವನ್ನು ಇವರು ಸಂಗ್ರಹಿಸಿಕೊಂಡಿದ್ದಾರೆ ಲೋಕಮಾನ್ಯರ ತರುವಾಯ ಪುಣೆಯಲ್ಲಿ ಉಂಟಾದ ಲೋಕಶಾಹಿ ಸ್ವರಾಜ್ಯ ಪಕ್ಷದ ಬೆಂಬಲವೂ ಇವರಿಗದೆ ವರ್ಣಾಶ್ರಮ ಸ್ವರಾಜ್ಯ ಸಂಘದವರೂ ಇವರಿಗೆ ಹರಸಿದ್ದಾರೆ ಮೇಲಾಗಿ ಐಶ್ವರ್ಯವಂತರು ಇಲೆಕ್ಷನಿನಲ್ಲಿ ೧-೨೦ ಸಾವಿರ ರೂಪಾಯಿಗಳ ತನಕ ವೆಚ್ಚ ಒಂದರೇ ಮಾಡುವಂದವರು, ಇವರ ಬಿರುದುಗಳನ್ನೂ, ಬೆಂಬಲವನ್ನೂ ನೋಡಿಕೊಂಡು ಮತದಾರರು ಬೆರಗಾಗುವದು ಸಹಜವಿದೆ ಆದರೆ, ಇವರ ಎಲ್ಲ ಚಟುವಟಿಕೆಗಳ ಗುರಿಯೊಂದೇ ಕಾಯಿದೆ ಕೌನ್ಸಿಲಿನ ಖುರ್ಚಿ! ಆ ಖುರ್ಚಿ ಪ್ರಾಪ್ತಿಯಾಗುತ್ತಿದ್ದರೆ ಇವರು ಯಾವದೇ ಪಕ್ಷಕ್ಕೆ, ಯಾವದೇ ಕಾಲದಲ್ಲಿ ಸೇರಲು ಸಿದ್ಧರಿದ್ದಾರೆ ಇಲೆಕ್ಷನು ಕಾಲಕ್ಕೆ ಕೊಟ್ಟ ವಚನಗಳನ್ನು ತಟ್ಟನೆ ಮುರಿಯಲು ಇವರಂದಿಗೂ ಹಿಂಜರಿಯರು ಒಂದು ಉದಾಹರಣೆಯನ್ನೇ ಕೊಡುವೆವು "ಕಾನ್ಸೇ ಇನ್ಸಿಯಲ್ಲಿ ರಾಷ್ಟ್ರೀಯ ಸಭೆಯ ವಿಸ್ತು ಪಾಲಿಸುವ ಕರ್ತಿನ ಮೇಲೆ ಇವರು ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾಗಿ ಆರಿಸಲ್ಪಟ್ಟರು ೧೯೨೯ ನೇ ಇಸ್ವಿಯಲ್ಲಿ ಪಂ। ಜವಾಹಿರಲಾಲರು ಲಾಹೋರಿನಲ್ಲಿ ಸಂಪೂರ್ಣ ಸ್ವಾತಂತ್ರ್ಯ ಧ್ವಜದ ಆರೋಹಣ ಮಾಡಿದ ಬಳಿಕ್ಕೆ, ರಾಷ್ಟ್ರೀಯ ಸಭೆಯ ಪರವಾಗಿ ಆರಿಸಿಹೋದ ಸಭಾಸದರು ಕೌನ್ಸಿಲಿಗೆ ರಾಜಿನಾಮೆ ಕೊಡಬೇಕಾಗಿ ರಾಷ್ಟ್ರಾಜ್ಞೆ ಹೊರಟಿತು, ಅದನ್ನು ರಾ। ಜೋಗ ವಿಶ್ವನಾಥರಾಯರು ಮನ್ನಿಸಿದರೇ? ಮನ್ನಿಸಬೇಕೆಂದು ಅವರಿಗೆ ಅನಿಸಲೂ ಇಲ್ಲ ಈಗಲೂ ತಮ್ಮ ತಪ್ಪಾಯಿತೆಂದು ಅವರು ಒಪ್ಪುವದೂ ಇಲ್ಲ *'Everything is fair in love and war'* ಪ್ರೇಮ-ಯುದ್ಧಗಳ ಯಶಸ್ಸಿಗಾಗಿ ಮಾಡಿದ ಯಾವತ್ತು ಪ್ರಯತ್ನಗಳು ಪ್ರಶಸ್ತವೆಂಬಂತೆ, ಕಾಯಿದೆ ಕೌನ್ಸಿಲಿನ ಖುರ್ಚಿ ಸಂಪಾದನೆಗಾಗಿ ಇವರು ಕೊಟ್ಟ ವಚನವನ್ನು ಗಾಂಭೀರ್ಯದಿಂದ ಪಾಲಿಸಲೊಪ್ಪಲಿಲ್ಲ, ಪಾಲಿಸುವ ಆಲೋಚನೆಯಿಂದ ಅವರು ಆ ವಚನ ಕೊಟ್ಟದ್ದೇ ಅಲ್ಲ ಮೇಲಾಗಿ ಇವರಿಗೆ ನಮ್ಮ ಜಿಲ್ಲೆಯ ಕಡೆ ಮತ ಬೇಡುವ ಅಧಿಕಾರವೇ ಇಲ್ಲ ಜಾದವ ಪ್ರೋಟೆಸ್ಟ ತೆರಿಗೆಯ ಕುರಿತು ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ನಿಷೇಧದ ಠರಾವು ಚರ್ಚೆಗೆ ಬಂದಾಗ ರಾ। ಜೋಗ ವಿಶ್ವನಾಥರಾಯರು ಅದಕ್ಕೆ ಬೆಂಬಲ ಕೊಡಲಿಲ್ಲ. ಆ ಕಾಲದಲ್ಲಿ ಅವರು ನಮ್ಮ ಜಿಲ್ಲೆಯನ್ನು ಸಂಪೂರ್ಣ ಮರತಿದ್ದರು ಅಂಥವರ ಸ್ಮರಣೆಯನ್ನು ನಾವೀಗ ಏಕೆ ಮಾಡಬೇಕು? ಕಷ್ಟನಷ್ಟಪಟ್ಟ ಸತ್ಯಾಗ್ರಹಿಗಳಿಗಾಗಿ ಸಹಾಯ ನಿಧಿ ಬೇಡಹೋದಾಗ ಬೇಡಬಂದವರಿಗ ಕಾಸು ಕೊಡದೆ ಬಂದ ಕಳುಹಿದ ಮಹಾನುಭಾವರು ಇವರೇ ಅಲ್ಲವೇ? ಇವರ ಸನಾತನ ದರ್ಮಾಭಿಮಾನವನ್ನು ನಾವು ಅರಿಯೆವು. ನಮ್ಮೆಲ್ಲರಂತ ಇವರು ಹಿಂದುಗಳಿದ್ದು ನಾವು ಒಲ್ಲೆವು ಗನ್ನರ್ ಗರೊಡನ ವೇಷ ಹೊದೆಯಲಿಕ್ಕೆ ಇವರಿಗ ಸನಾತನ ದರ್ಮಾಭಿಮಾನವು ಎಷ್ಟಕ್ಕೂ ಅಡ್ಡ ಬರಲಿಲ್ಲ ವರ್ಣಾಶ್ರಮಿಗಳು ಈ ವಿಷಯವನ್ನು ಗಮನಿಸಿಕೊಂಡರಾಯಿತು ನಮ್ಮ ಅಭಿಪ್ರಾಯದಲ್ಲಿ ರಾ। ಜೋಗ ವಿಶ್ವನಾಥರಾಯರಿಗೆ ನಮ್ಮ ಜಿಲ್ಲೆಯಲ್ಲಿ ಮತ ಪಡೆಯಲು ಅಧಿಕಾರವಿಲ್ಲ, ನಾವು ಮತಕೊಡಲಿಕ್ಕೂ ಬದ್ಧರಲ್ಲ ರಾ। ಜೋಗ ವಿಶ್ವನಾಥರಾಯರ ವಕೀಲಿ ಮಾಡಬಂದ ವಕೀಲರಿಗೆ ಮತದಾರರು ಈ ಮಾತನ್ನು ನಿರ್ದಾಕ್ಷಿಣ್ಯದಿಂದ ಹೇಳಿ ಕಳಿಸಬೇಕೆಂದು ನಮ್ಮ ಅರಿಕೆ

ಶ್ರೀ। ಹೊಸಮನೆ ಸಿದ್ದಪ್ಪನವರ ಕುರಿತು ನಾವು ವಿಸ್ತಾರವಾಗಿ ಚರ್ಚೆ ಮಾಡುವದನವಶ್ಯಕ ಶ್ರೀ। ಸಿದ್ದಪ್ಪನವರು ಸತ್ಯಾಗ್ರಹಿಗಳು, ಕಾರ್ಯಕುಶಲ ಲೋಕಸೇವಕರು ಸಂಪನ್ನರಿದ್ದರೂ ಬಡಬಗ್ಗರಿಗಾಗಿ ತಲ್ಲಣಿಸುವ ಅಂತಃಕರಣಗಳು, ರಾಷ್ಟ್ರೀಯ ಸಭೆಯ ನಿತಾಂತ ಸೇವಕರು, ಮಹಾತ್ಮರ ನಿಷ್ಠಾವಂತ ಅನುಯಾಯಿಗಳು ಬಡಬಗ್ಗರಿಗಾಗಿ ಪರಿಪರಿಯ ಕಷ್ಟಗಳನ್ನು ಅವರು ಅನುಭವಿಸಿದ್ದಾರೆ ತಾವಾಗಿ ಅವರು ಕಾಯಿದೆ ಕೌನ್ಸಿಲಿನ ಉಮೇದ್ವಾರರಾಗಿ ನಿಲ್ಲಲಿಲ್ಲ ಕರ್ನಾಟಕದೊಳಗಿನ ಪ್ರಮುಖರೆಲ್ಲರೂ ಆಗ್ರಹಪೂರ್ವಕ ಉಮೇದ್ವಾರರಾಗಿ ನಿಲ್ಲುವಂತ ಅವರಿಗೆ ಪ್ರೋತ್ಸಾಹ ಕೊಟ್ಟು, ಬಳಿಕ ಅವರು ಉಮೇದ್ವಾರರಾಗಿ ನಿಂತಿದ್ದಾರೆ, ರಾಷ್ಟ್ರೀಯ ಸಭೆಯ ಪ್ರತಿನಿಧಿಗಳವರು ಹಿಂದುಸ್ಥಾನದಲ್ಲೀಗ, ದೇಶಬಂಧು ಚಿತ್ತರಂಜನ ದಾಸರವರು ನುಡಿದಂತೆ, ರಾಷ್ಟ್ರೀಯ ಸಭೆಯು ಪ್ರಬಲವೋ, ಸರಕಾರವು ಪ್ರಬಲವೋ? ಎಂಬ ಪ್ರಶ್ನೆ ಭಾರತೀಯ ಅಂತಃಕರಣದ ಒಡೆಯನಾರು? ಹೋರ-ವಿಲಿಂಗಡನ್ನಾದಿ ಬ್ರಿಟಿಶ ಸಾಮ್ರಾಜ್ಯಕರ್ತರೋ? ಮಹಾತ್ಮರಾದಿ ರಾಷ್ಟ್ರೀಯ ಸಭೆಯವರೋ? ಇದೇ ಪ್ರಾಮುಖ್ಯವಾದ ಪ್ರಶ್ನೆ ಈ ಪ್ರಶ್ನೆಗೆ ಮುಂಬಯಿಯಲ್ಲಿ ರಾಷ್ಟ್ರೀಯ ಸಭೆ ಸೇರಿಸಿ ಹಿಂದವಾಸಿಯರು ಉತ್ತರ ಕೊಟ್ಟು ರಾಷ್ಟ್ರೀಯ ಸಭೆಯ ಪ್ರಾಬಲ್ಯವನ್ನು ಲೋಕಕ್ಕೆ ಸಿದ್ಧಪಡಿಸಿದ್ದಾರೆ

[ಮುಂದೆ ೯ನೇ ಪಾನು ನೋಡಿರಿ]

ಸೇ॥ ನಾ॥ ಗವ್ಹರ್ನರ ಬ್ರೆಬರ್ನ ದೊರೆಗಳಿಗೆ ಅರ್ಪಿಸಿದ ಮಾನಪತ್ರಗಳು.

ಮುಂಬಯಿಯ ಗವ್ಹರ್ನರರಾದ ಸೇ॥ ನಾ॥ ದರಾಂ ಬ್ರೆಬರ್ನ ದೊರೆಗಳು ತಾ ೨–೧೧–೧೯೩೪ ನೇ ಕಾರವಾರಕ್ಕೆ ಚಿತ್ತೈಸಿದಾಗ, ಜಿಲ್ಲಾ ಲೋಕಲ್ ಬೋರ್ಡು, ಕಾರವಾರ ಮ್ಯುನಿಸಿಪಾಲಿಟಿ, ಕಾರವಾರ ತಾಲೂಕ ಬೋರ್ಡು, ಈ ಮೊದಲಾದ ಸ್ಥಾನಿಕ (ಸ್ವರಾಜ್ಯ) ಸಂಸ್ಥೆಗಳು ತಮ್ಮ ತಮ್ಮ ಸಂಸ್ಥೆಗಳ ಪರವಾಗಿ ದೊರೆಗಳಿಗೆ ಮಾನಪತ್ರಗಳನ್ನರ್ಪಿಸಿದರು ಅವುಗಳ ವಿವರ ಈ ಕೆಳಗೆ ಕೊಟ್ಟಿದೆ –

ಜಿಲ್ಲಾ ಬೋರ್ಡಿನ ಮಾನಪತ್ರ.

ಮೊಟ್ಟಮೊದಲು ಗವ್ಹರ್ನರರು ತಮ್ಮ ಕಾರಕೀರ್ದಿಯ ಪ್ರಥಮ ವರ್ಷದಲ್ಲಿ ನಮ್ಮ ಜಿಲ್ಲೆಗೆ ಅನುಗ್ರಹಿಸಿದ ಬಗ್ಗೆ ಸಂತೋಷವಾಗುತ್ತದೆ. ಧನ್ಯರಾಗುವವರಾಗುವಷ್ಟರಲ್ಲಿ ನಮ್ಮ ಮಾನ್ಯ ದೊರೆಗಳು ದಯಮಾಡಿಸಿದಾಗ ಸ್ವಾಗತವೆಂಬ ಕೋರಿಕೆ. ಈ ತರಹ ಸರಕಾರಿ ಭೇಟಿಗಳು ನಮಗೆ ನೆರವಾದ ಬಗ್ಗೆ ನಾವು ಕೃತಜ್ಞರಾಗಿದ್ದೇವೆ. ಹಳ್ಳಿಗಳ ಉದ್ಧಾರಕ್ಕಾಗಿ ಸಾಲ್ಬ್ಯ ಬಗೆಯಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ. ದೊರೆಗಳಿಗೆ ಸಮಯವಿದ್ದಲ್ಲಿ ಒಳಭಾಗದ ಪ್ರಸಿದ್ಧ ಗ್ರಾಮಗಳ ಸ್ಥಿತಿಯನ್ನು ಕಣ್ಣಾರೆ ಕಾಣಬಹುದಿತ್ತು. ಹಳ್ಳಿಗಳಿಗೆ ಅವಶ್ಯವಿರುವ ಸಾಧನಸೌಕರ್ಯಗಳನ್ನಾಗಲಿ, ಔಷಧೋಪಚಾರದ ಅನುಕೂಲತೆಗಳನ್ನಾಗಲಿ ಪೂರೈಸಲು ನಮ್ಮ ಕಡೆ ಹಣವಿಲ್ಲ. ತಕ್ಕಮಟ್ಟಿಗೆ ಶೇಕಡಾ ೮೦ ರಷ್ಟು ಭಾಗದಲ್ಲಿ ಬೆಳ್ಳ ಕಾಡು ಇದೆ. ಅಖಿಲ ಭಾರತ ವರ್ಷದ ಮತ್ತು ಜಗತ್ತಿನ ಹಿತಕ್ಕಾಗಿ ಬೆಳೆದ ರಕ್ಷಿಸಲಾಗುತ್ತಿದೆ. ಅದರ ಪ್ರಯೋಜನ ಈ ಜಿಲ್ಲೆಗೆ ಆಗುವದಿಲ್ಲ. ಆದರಿಂದಾಗುವ ತೊಂದರೆ ಉಪದ್ರವ ಮಾತ್ರ ಈ ಜಿಲ್ಲೆಯವರು ಸಹಿಸಬೇಕು. ಇದರಿಂದ ನಮ್ಮ ಜಿಲ್ಲೆಯೊಳಗಿನ ಲೋಕವಸ್ತಿಯೂ ಸಾಗ ಭೂಮಿಯೂ ಕುಗ್ಗಿ ಬೋರ್ಡಿಗೆ ನಷ್ಟ. ಮೇಲೆ ಜಂಗಲ ಖಾತೆಯವರ ಉಪಯೋಗಕ್ಕಾಗಿ ಮಾರ್ಗ ಕಟ್ಟಿಸುವ ಖರ್ಚು ಬೋರ್ಡಿನ ಮೇಲೆ ಬೀಳುತ್ತದೆ. ದಾಂಡೇಲಿ ಅಗಿಕುಂಬಿಯ ಜಾಸ್ತಿಯನ್ನು ಮುಂದರಿಸಿದ್ದರೆ, ಕಾಗದ ಮಾಡುವ ಕಾರಖಾನೆ ಹೊರಡಿಸಿದ್ದರೆ ನಮ್ಮ ಜಿಲ್ಲೆಗೆ ಹೆಚ್ಚಿನ ಪ್ರಯೋಜನ ದೊರೆಯುತ್ತಿತ್ತು. ಈ ಜಿಲ್ಲೆಯು ಸ.ತಿ.ರಾ. ಜಿಲ್ಲೆಯನ್ನು ದೊಡ್ಡದಿದ್ದು ಇಲ್ಲಿ ಕಾಯಿದೆ ಕೌನ್ಸಿಲಿಗೆ ೩ ಜನ ಸಭಾಸದರನ್ನು ಕಳುಹುವ ಅಧಿಕಾರವಿದೆ. ಈ ಜಿಲ್ಲೆಗೆ ಮಾತ್ರ ಒಬ್ಬರೇ ಸಭಾಸದರು. ಕಾನಡಾ ಜಿಲ್ಲೆಯ ಹೀರ್ವರಿಯ ಮಾನ ಇದೀ ಇಲಾಖೆಯಲ್ಲಿ ಹೆಚ್ಚು, ಆನಳತೆಯ ಒಳಗೂ ಹೀರ ಕಡಿಮೆ ಬೆಟ್ಟ ಪ್ರದೇಶವಿದ್ದ ಗ್ರಾಮಗಳಲ್ಲಿ ಮಾರ್ಗಗಳಿಲ್ಲ. ಹೊಳೆ–ಹಳ್ಳಗಳು, ಬೆಟ್ಟ–ಕಂದರಗಳಿದ್ದು ಅವು ಬಿನ್ನಬಿನ್ನವಾಗಿವೆ. ಕಾಡು ಮೇರೆಗಳ, ಕಾವುಗಳ ಕಾಟ, ಚಳಿಜ್ವರದ ಸಂಕಟ ೮ ಮೈಲು ಅತ್ತ–ಇತ್ತ ಹಲವು ಗ್ರಾಮಗಳಿಗೆ ಮಾರ್ಗ ಕಾಣವದೇ ದುರ್ಲಭ. ೧೦ ಮೈಲಿನ ಸುತ್ತುಮುತ್ತು ಶಾಲೆಗಳಿಲ್ಲ. ೧೫ ಮೈಲು ಪ್ರದೇಶದಲ್ಲಿ ಚಿಕಿತ್ಸಾಲಯಗಳಿಲ್ಲ. ೧ ಶತಮಾನದ ತನಕ ಮಾಸಾತ್ರವಾಗಿ ತೀರ್ವೆ ಕೆತ್ತಾಗ್ಯೂ ಹಳ್ಳಿಗರು ಇದ್ದಲ್ಲಿಯೇ ಇದ್ದಾರೆ, ಹಳ್ಳಿಗರ ಸ್ಥಿತಿ ಬದಲಲಿಲ್ಲ. ಮೇಲೆ ಅಧಿಕ ನಾರಗಳಿಗೆ ಕೊಳ ರೋಗ, ಯಾಲಕ್ಕಿ ಬಳ್ಳಿಗಳಿಗೆ ಕಟ್ಟೆ ರೋಗ, ನಿಷ್ಟ ಮಾರಿಗಳು ನೋಡದ ಗಿಂಸಪ್ಪವು ಒಂದರವು ಮಾಣಿಸಿದ ರಾಣಿಯ ಒಂದರವಾಗಿದ್ದಿತು. ಇಲ್ಲಿ ವಿದೇಶಗಳಿಂದ ದೊಡ್ಡ ದೊಡ್ಡ ಹಡಗಗಳು ಸಹ ಬರುತ್ತಿದ್ದವು, ಈ ಬಂದರವು ಈಗ ಹಾಳುಬಿದ್ದಿದೆ. ಅರಮನೆಗಳಿದ್ದಲ್ಲಿ ದೇವಸ್ಥಾನಗಳಿದ್ದಲ್ಲಿ ಈಗ ಕಾಗಿನ ತೋಟವಾಗಿದೆ. ೬೦ ವರ್ಷಗಳಲ್ಲಿ ಇಷ್ಟು ಅವನತಿಯಾಗಿದೆ. ಕಟ್ಟೆ–ಕೊಳೆ ರೋಗಗಳ ಪತ್ತೆ ಇನ್ನೂ ಬೇಕಾದ ಖಾತೆಗೆ ದೊರೆಯಲಿಲ್ಲ. ತಮ್ಮ ಪೂರ್ವಾಧಿಕಾರಿಗಳು "ಇಂಪೀರಿಯಲ್ ಎಗ್ರಿಕಲ್ಚರಲ್ ರಿಸರ್ಚ ಕೌನ್ಸಿಲ್" ಎಂಬ ಬೇಸಾಯ ಸಂಶೋಧನ ಸಂಸ್ಥೆಗೆ ಈ ಕುರಿತು ಕಳಿಸಿದ ಯೋಜನೆ ವಿನಾಯಿತಿಯು ಮಂಜೂರಾಗಲಿಲ್ಲ, ಪ್ರತಿ ತೋಟಕ್ಕೆ ಹೋಗಿ ನೋಡಿ ವಿವಾರಿಸೋಣವೆಂದು ಕೈಕೊಳ್ಳಲು ಬೇಸಾಯ ಖಾತೆಯವರ ಕಡೆ ಹಣವಿಲ್ಲ. ವಿಷಧೋಪಚಾರಕ್ಕಾಗಿ ವರ್ಷಕ್ಕೆ ಒಂದಾವರ್ತಿ ಬಂದು ಹೋಗಿ ನೋಡಲು ಸರಕಾರದ ಕಡೆ ಹಣವಿಲ್ಲ. ಆದರೆ, ಜಂಗಲ ಮಾರ್ಗಗಳಷ್ಟು, ಸಾಗಳಷ್ಟು ಎಂದು ಜೋಳ್ಕ ಗಣತವಿದೆ. ಹಳ್ಳಿಗಳಲ್ಲಿ ಬಾಳೆಹಣ್ಣು ವಿಪ್ರಲ ಬೆಳೆಯುತ್ತದೆ. ಅದಕ್ಕೆ ೧೦೦ ಊಳಕಾಯಿಗೆ ಕ್ಕೆಗೆ ತ್ರವೆ. ಅವುಗಳನ್ನು ಪೇಟೆಗೆ ತಂದು ಮಾರಲು ಮಾರ್ಗಗಳಿಲ್ಲ. ಈ ಜಿಲ್ಲೆಯಲ್ಲಿ ಹತ್ತಿ ಬೆಳೆಯುವದಿಲ್ಲ. ದನಗಳಿಗೆ ಬೇಕಾದ ಹತ್ತಿಕಾಳನ್ನು ಪರ ಜಿಲ್ಲೆಗಳಿಂದ ತರುವದು ಮಾಡಬೇಕು. ಸಾಗಣ ಸೌಕರ್ಯದ ಅಭಾವದಿಂದಲೂ, ಬೊಲಕಟ್ಟೆಗಳ ಹಾಳಿನ ದುಬಲಿತ್ವ ದನಗಳನ್ನು ಸಾಕುವದು ಕಷ್ಟವಾಗಿದೆ. ಉಪವಾಸ ತಗೆಯುವ ದನಗಳು ಕಾಡು ಮೃಗಗಳಿಗೆ ಬಲಿಬೀಳುತ್ತವೆ. ಕಾರಾಟಿಯಿಂದ ಹೊನ್ನಾವರದ ಒಳಗಿನ ೧೧ ಮೈಲು ಅಂತರದಲ್ಲಿದ್ದ ೩ ಮ್ಯುನಿಸಿಪಲ್ ಟೋಲ, ೧ ತಾಲೂಕ ೧ ಪ್ರಾಂತಿಕ ಟೋಲು ಇವೆ. ಇದರಿಂದ ಮೋಟರ ಸರ್ವಿಸಿನವರಿಗೆ ಬಹು ಕಷ್ಟವಾಗಿದೆ. ಮೇಲಾಗಿ ಮಾರ್ಗಗಳು ಚನ್ನಾಗಿಲ್ಲ. ಪ್ರತಿ ಅತ್ತ ಕಡೆ ಒಳ್ಳೇ ಮಾರ್ಗಗಳಿವೆ. ಗಲೀಜ ಪ್ರಸ್ತಕವಿಲ್ಲ, ತಾಡಿಗಳಿಲ್ಲ; ಮಳೆಗಾಲದಲ್ಲಿ ಸರಿ ಕಟ್ಟುವ ಬೀತಿಯಿಲ್ಲ, ರಾತ್ರಿ ಮೋಟರ ನಡೆಸಲು ಪ್ರತಿಬಂಧವಿಲ್ಲ. ಮೋಟರಿನಲ್ಲಿ ೨೦ ಪ್ರಯಾಣಿಕರನ್ನು ಒಯ್ಯುವಿರುತ್ತಾರೆ, ಆದರೆ ಇಲ್ಲಿ ಎಲ್ಲ ಉಪದ್ರವಗಳಿವೆ. ಪ್ರಯಾಣಿಕರ ಸಂಖ್ಯೆ ೧೫, ಪೆಟ್ರೋಲಿನ ದರ ಹೆಚ್ಚು. ದೂರ ದೂರದ ಗ್ರಾಮಗಳ ಮಾಲು ಹಾಗಿರಲಿ, ಸಮೀಪದ ನಡುವಿರುವ ಹೇರೂರ ಗ್ರಾಮವು ಮಳೆಗಾಲದಲ್ಲಿ ಹುಡೇ ಬಂದರ ದ್ವೀಪವಾಗುತ್ತದೆ. ಹೊಳೆ–ಹಳ್ಳಗಳಿಗೆ ಸಂಕಗಳಿಲ್ಲದ್ದರಿಂದ ವರ್ಷದಲ್ಲಿ ೫ ತಿಂಗಳ ತನಕ ಹೊಂಪ್ರದೇಶಕ್ಕೆ ಆ ಹಳ್ಳಿಗರು ಸಂಬಂಧವಿರುವದು ಕಷ್ಟ. ಜಿಲ್ಲೆಯೊಳಗಿನ ಆರೋಗ್ಯ ಶಾಲೆಗಳಿಗೆ ಸ್ವಂತ ಇಮಾರತುಗಳಿಲ್ಲ. ಇದ್ದ ಆರೋಗ್ಯ ಇಮಾರತುಗಳು ತೀರ ಜೀರ್ಣವಾಗಿವೆ. ಹೇರೂರದ ಬಳಿ ಒಂದು ಗ್ರಾಮದಲ್ಲಿ ಒಂದು ಶಾಲೆ ಮಾಡಿದರು. ಬೀಳತಯಾರಾಗಿತ್ತು. ಮಾಸ್ತರರು ಅದನ್ನು ನೋಡಿ ಅಲ್ಲಿ ಶಾಲೆ ಮಾಡಬಾರದಾಗಿ ಪ್ರತಿಬಂಧಿಸಿದರು. ಬಿಟ್ಟ ಕೆಲ ದಿನಗಳಲ್ಲಿ ಅಲ್ಲಿ ಹೋಗಿ ನೋಡಿದ ಬಳಿ ವಿಳಯಲು ಒಂದು ನಾಗರಹಾವು ಭುಸುಗುಟ್ಟುತ್ತ ಹೊರಬಂತು. ಇಂಥ ಪರಿಸ್ಥಿತಿಯಲ್ಲಿ ಎಷ್ಟೋ ಕನ್ನಡ ಜಿಲ್ಲೆಯೊಳಗಿನ ಮಾದರಿಯ ಮೇಲೆ ಬಂದು ಸೊನ್ನೆ ತೆಗೆದು ಹೊಸ ಇಮಾರತುಗಳನ್ನು ಕಟ್ಟಿಸಬೇಕಾಗಿ ಬೋರ್ಡಿನ ಧರಾವಾಗಿದೆ. ಈ ಸಾಹಸಕ್ಕೆ ಸರಕಾರವು ಮಂಜೂರಿ ಕೊಡಬೇಕು. ಈ ಬೋರ್ಡಿನ ಕಡೆ ೭೨೮ ಮೈಲು ಉದ್ದ ಮಾರ್ಗವಿದೆ. ಈ ಹಿಂದೆ ೪೫ ಮಾರ್ಗ ಮಾರ್ಗಕ್ಕೆ ಸರಕಾರದಿಂದ ಪ್ರತಿಯೊಂದಕ್ಕೆ ಕೃತ್ತು, ಆದ ಬಗ್ಗೆ ೫೦ ಸಾವಿರ ಆಗಿದೆ. ಇಂಜಿನಿಯರ ಖಾತೆಯವರು ಕೈಕೊಳಗಿದ್ದ ಮಾರ್ಗದ ಉದ್ದಳತೆ ಇದೆ, ಖರ್ಚು ೨೪ ಸಾವಿರದ ೧೦ ಪಟ್ಟು! ಆದಾಗ್ಯೂ ಆ ಮಾರ್ಗಗಳು ನೆಟ್ಟಗಿಲ್ಲ. ನಮಗೆ ೫೦ ಸಾವಿರ ರೂಪಾಯಿಗಳನ್ನು ಕೊಡಬೇಕು. ಜಂಗಲ ಖಾತೆಯ ಉತ್ಪನ್ನದ ಮೇಲೆ ರೂಪಾಯಿಗೆ ೧ ಆಣೆಯಂತೆ ಹಣ ಕೊಡಬೇಕು. ರಂಗೂನ ಜಿಲ್ಲೆಯಲ್ಲಿ ಹಾಗೆ ಬೆಳೆಯ ಕೃತಿಯಂತೆ ಕಾಲ ಬೋರ್ಡಿಗೆ ಸಿಗುತ್ತದೆ. ಜಂಗಲ ಪ್ರದೇಶದೊಳಗಿನ ಶಾಲೆಗಳಲ್ಲಿ ಸರಕಾರಿ ನಿಯಮದಂತೆ ಹುಡುಗರ ಹಾಜರಿ ಕಾಣಬರುವದಿಲ್ಲ. ಆದರಿಂದ ಲೆಕ್ಕ ತಪಾಸಕರು ಸರಕಾರಿ ಗ್ರಾಂಟಿನ ರಕಮಿನಲ್ಲಿ ರೂ. ೧೦ ಸಾವಿರ ಕತ್ತರಿಸಿದ್ದಾರೆ, ತಾ. ೧೬–೧೧–೩೩ ನೇಗೆ ವಿದ್ಯಾಖಾತೆಯ ಡೈರೆಕ್ಟರರಾದ ಮಿ। ಟೆಕ್‌ಟರು ಇಲ್ಲಿ ಬಂದಾಗ ಇಲ್ಲಿಯ ಸ್ಥಿತಿ ಕೇಳಿಕೊಂಡು ಈ ನಿಯಮವನ್ನು ಈ ಜಿಲ್ಲೆಯ ಮಟ್ಟಿಗೆ ಸಡಿಲು ಮಾಡಬೇಕಾಗಿ ಸರಕಾರಕ್ಕೆ ಬರೆಕೊಂಡಿದ್ದರು. ಅವರ ಉತ್ತರಾಧಿಕಾರಿಗಳು ಈ ಜಿಲ್ಲೆಯ ಪ್ರಕಾರ ಬೇರೆ ನಿಯಮ ಮಾಡಲು ಒಪ್ಪಲಿಲ್ಲ. ಮಾನಸಲ್ಯಾನ ಹುಡುಗಿಯರ ಸಂಖ್ಯೆ ಬೆಳವದ್ದರಿಂದ ೭ ಹೆಚ್ಚಿನ ಶಿಕ್ಷಕರನ್ನು ನೇಮಿಸಿಕೊಳ್ಳಬೇಕಾಯಿತು. ಸರಕಾರಿ ಲೆಕ್ಕದ ತಪಾಸಕರು ಈ ಹೆಚ್ಚಿನ ಖರ್ಚನ್ನು ಅಮಾನ್ಯ ಮಾಡಿದ್ದಾರೆ. ಆರ್ಥಿಕ ಮುಗ್ಗಟ್ಟಿನಲ್ಲಿ ಈ ಜಿಲ್ಲೆ ಕಂಗೆಟ್ಟಿರುವದೇನೋ ನಿಜ. ಆದರೆ, ಇಲ್ಲಿಯ ಸ್ಥಿತಿ ಬೇರೆ ಕಾರಣಗಳಿಂದಲೂ ವಿಶೇಷ ಕಂಗೆಟ್ಟಿದೆ. ತೀರ್ವೆಯಲ್ಲಿ ಶೇಕಡಾ ೮೦ ರಷ್ಟು ರಕಮು ಸರಕಾರಿ ಕೆರೆಗಳಿಂದ ಪ್ರಕೃತಿಕರೂಪಾಗುವ ನೀರಿನ ಒಗ್ಗಂದು ಎತ್ತುವಳಿಯಾಗುತ್ತದೆ. ಆ ಕೆರೆಗಳೆಲ್ಲ ಈಗ ಮಣ್ಣು ತುಂಬಿ ನೀರಿನ ಪೂರೈಕೆ ಮಾಡುವದಿಲ್ಲ. ಅವುಗಳ ದುರುಸ್ತಿಯಾಗುವದಿಲ್ಲ. ಹೀಗೆ ತೀರ್ವೆಯಲ್ಲಿ ನೀರ–ತೆರಿಗೆ ಸೇರಿಸಿ ಎತ್ತುವಳಿ ಮಾಡುವದು ಈ ಜಿಲ್ಲೆಯಲ್ಲಿಯೇ। ಸಿಂದ ಮೊದಲಾದ ಇಲಾಖೆಯ ಇತರ ಜಿಲ್ಲೆಗಳಲ್ಲಿ ಸರಕಾರವು ತೀರ್ವೆಯನ್ನು ಸೂಟ ಬಿಟ್ಟಿದೆ. ಇಲ್ಲಿ ಕೊಳೆ ರೋಗವಿದ್ದಾಗ್ಯೂ, ಅಪರಿಮಿತ ಮಳೆ ಬಿದ್ದು ಪೈರು ನಷ್ಟವಾದಾಗ್ಯೂ ಸರಕಾರದ ಲಕ್ಷವಿಲ್ಲ. ಗೋಚರವಾಗಿಸಿ ಸ್ಥಳವಿಲ್ಲ, ಸ್ಥಳ ಬಿಟ್ಟಲ್ಲಿ ಮೇವಿಲ್ಲ, ಆದಾಗ್ಯೂ ಗೋಚರಾವಿನ ಫೀ ವಸೂಲಾಗುತ್ತಿದೆ. ಪೂರ್ವ ಕಾಲದಲ್ಲಿ ಈ ಜಿಲ್ಲೆಯೊಳಗೆ ಗೋಚರಾವಿ ಫೀಯಿರಲಿಲ್ಲ. ಹೀಗಿದ್ದು ಕಾರವಾರ ಕಡೆಯಲ್ಲಿ ಗೋಚರದಾವಿ ಫೀಯಿಲ್ಲ. ಕಾರವಾರದಂತೆ ಸರಾಸರಿ ದಂಡ ಗುಂಟ ಇರುವ ಮಾನತ್ತು ಪ್ರದೇಶಗಳಲ್ಲಿ ಗೋಚರಾವಿ ಫೀ ವಸೂಲ ಮಾಡಲಾಗದು. ರಾಯ ಮೊದಲಾದ ಜಿಲ್ಲೆಗಳಲ್ಲಿ ಬೇಸಾಯ ಗಾಂಧ ದನಗಳಿಗೆ ಗೋಚರಾವಿ ಫೀ ಇಲ್ಲ. ರೋಗಿಗಳಿಂದ ವಿನಾ ಔಷಧ ಖರ್ಚಾಗಿ ೧ ಆಣೆ ಎತ್ತುವಳಿ ಮಾಡಬೇಕಾಗಿ ಸರಕಾರವು ಮಾಡಿದ ಹುಕುಮಗಳನ್ನು ಈ ಜಿಲ್ಲೆಯ ಮಟ್ಟಿಗೆ ರದ್ದುಪಡಿಸಬೇಕಾಗಿ ಸರಕಾರಕ್ಕೆ ಮಾಡಿಕೊಂಡ ವಿನ್ನಹವನ್ನು ಸರಕಾರವು ಮನ್ನಿಸುವದಾಗಿ ಕೋರಿಕೆ. ಇಲ್ಲಿಯ ಭೂಮಿ ಫಲವತ್ತಾದದ್ದು ಆದರೆ, ಜಂಗಲ ಧೋರಣದಿಂದ ಜನವಸ್ತಿ ಕುಗ್ಗುತಿದೆ. ಅದಕ್ಕಾಗಿ ಸನ್ನಿಧಾನದಲ್ಲಿ ಬೇಡಿಕೊಳ್ಳುವದೇನಂದರೆ– (೧) ಇಡೀ ಜಿಲ್ಲೆಯಲ್ಲಿ ತೀರ್ವೆಯನ್ನು ಬಹುಮಟ್ಟಿಗೆ ಇಳಿಸಬೇಕು, ಸರಕಾರದಲ್ಲಿ ತೆಗಿನ ತೋಟಗಳಿದ್ದ ಗ್ರಾಮಗಳಲ್ಲಿ ಪೂರ್ತಿಯಾಗಿ ತೀರ್ವೆ ಇಳಿಸಬೇಕು (೨) ಘಟ್ಟದ ಕೆಳಗಿನ ಗ್ರಾಮಗಳಲ್ಲಿ ಗೋಚರಾವಿ ಫೀಯನ್ನು ರದ್ದುಪಡಿಸಬೇಕು, ಘಟ್ಟದ ಮೇಲಿನ ಗ್ರಾಮಗಳಲ್ಲಿ ಗೋಚರಾವಿಗೆ ಜಾಗ ಪ್ರದೇಶವಿದ್ದಲ್ಲಿ ಮಾತ್ರ ಫೀ ರದ್ದುಪಡಿಸಬೇಕು (೩) ಜಂಗಲ ಧೋರಣದಿಂದ ಉಂಟಾದ ಕಾಡು ಮೃಗ ಹಾವಳಿಯಿಂದ ಜನ–ಜಾನುವಾರಗಳನ್ನೂ, ಬೆಳೆಯನ್ನೂ ರಕ್ಷಿಸಬೇಕು (೪) ಕಟ್ಟೆ–ಕೊಳೆ ರೋಗವನ್ನು ಪರಿಹರಿಸುವ ಉಪಾಯ ಯೋಜನೆಯಾಗಬೇಕು (೫) ಉಪಾಯವಿಲ್ಲದೆ ತೀರ್ವೆ ತೆರಲು ಗತಿಯ ಸರಕಾರ ಜಪ್ತಿ ಮಾಡಿದ ಮನೆ–ಮಠ–ಭೂಮಿಗಳನ್ನು ಅವರವರಿಗೆ ತಿರುಗಿ ಒಪ್ಪಿಸಬೇಕು (೬) ಟ್ರೆಲು ಕಟ್ಟೆಗಳನ್ನು ತೆಗೆಯಬೇಕು, ಹಾಳಗೆರೆ ಸಂಕ ಕಟ್ಟಿಸಬೇಕು. (೭) ಸಾಗುವ ಭೂಮಿಗಳ ಮೇಲಿನ ತೀರ್ವೆಯನ್ನು ಸೂಟ ಬಿಡಬೇಕು ಸಾಗುವ ಭೂಮಿಯ ಮೇಲೆ ಮಾತ್ರ ತೀರ್ವೆ ಎತ್ತುವಳಿಯಾಗಬೇಕು. ಈ ಪ್ರಕಾರ ಸಿಂದ ಪ್ರಾಂತದಲ್ಲಿ ಪ್ರಚಾರವಿದೆ. ಈ ವಿಷಯದಲ್ಲಿ ಕೆಲ ನಿರ್ವಿ ರಕಮನ್ನು ಸೂಟ ಬಿಡಬೇಕು. (೮) ಮಾರ್ಗ–ಶಾಲೆ–ಔಷಧೋಪಚಾರಗಳಿಗೆ ಅವಶ್ಯವಿದ್ದ ಹಣ ಪೂರೈಸಬೇಕು. ಸೇ॥ ನಾಮದಾರರ ಕಾರಕೀರ್ದಿಯು ಸ್ಥಾನಿಕ ಸ್ವರಾಜ್ಯದ ಇತಿಹಾಸದಲ್ಲಿ ಅಜರಾಮರವಾಗಿರುವಂತೆ ಆಲೋಚಿಸುವವರಿಗೆಲ್ಲ ಸುಖ–ಸಂಪತ್ತು ಪ್ರಾಪ್ತವಾಗಲೆಂದು ಶ್ರೀಹರಿ ದೊರೆಗಳಿಗೂ, ದೊರೆಸಾನಿಗಳವರಿಗೂ ಈ ಮಾ ಕೃತಜ್ಞತೆಯನ್ನು ಪ್ರದರ್ಶಿಸಿ, ಶ್ರೇಯೋವೃದ್ಧಿ ಪ್ರಸನ್ನರಾಗುವ ಸಮಾಗಲೆಂದೂ ಬಯಸುತ್ತೇವೆ.

ಕಾರವಾರ ಮ್ಯುನಿಸಿಪಾಲಿಟಿಯ ಮಾನಪತ್ರ.

ಕಾರವಾರವು ನಮ್ಮ ಇಲಾಖೆಯಲ್ಲಿ ಸೃಷ್ಟಿಸೌಂದರ್ಯದಿಂದ ತುಂಬಿತುಳುಕುತ್ತಿದೆ. ಅದಕ್ಕಾಗಿಯೇ ಪ್ರಾಂತಾಧಿಪರು ಇತ್ತ ೩ ವರ್ಷಗಳೊಳಗೆ ಎರಡಾವರ್ತಿ ಇತ್ತ ಅನುಗ್ರಹಿಸಿದರೆಂದು ನಾವು ಅಭಿಮಾನದಿಂದ ತಿಳಿದು ಸಂತಸಪಡುತ್ತೇವೆ. ಆದಾಗ್ಯೂ, ಕಾರವಾರ ಪಟ್ಟಣವು ಅಷ್ಟು ಆರೋಗ್ಯಕರವಾಗಿರುವದಿಲ್ಲ. ಸುಧಾರಣೆಯ ಸಾಧನಗಳಿಲ್ಲ. ಆದರಿಂದ ನಾವು ದೂರದೃಷ್ಟಿ ನಾವು ಅರಿಕೆ ಮಾಡಿಕೊಳ್ಳುವದಕ್ಕೆ ಕಾರಣವಾಗಿದ್ದೇವೆ. ಸರಕಾರಕ್ಕೆ ಹಣದ ಅಡಚ

ನೇಕ ನಾಮದಾರ ಗವ್ಹರ್ನರ ದೊರೆಗಳ ಸಹಾನುಭೂತಿಪರ ವಚನಗಳು.

...ಯುವ ಸಂಗತಿಯನ್ನು ನಾವು ಬಲ್ಲೆವು. ಆದರೆ ನಾಮದಾರರು ಪ್ರತ್ಯಕ್ಷ ಅನುಗ್ರಹಿಸಿದಾಗ ನಮ್ಮ ಅವಸ್ಥೆಯನ್ನು ಕೆಲ ಮಟ್ಟಿಗೆ ದರ್ಶವಡಿಸಬಹುದೆಂಬ ಆಸೆಯಿಂದ ನಾವು ಕೆಲ ಸೂಚನೆಗಳನ್ನು ಮಾಡಿಕೊಳ್ಳಬಯಸುತ್ತೇವೆ. ಇತ್ತಲಾಗಿ ನಮ್ಮ ಪಟ್ಟಣದೊಳಗೆ ಪ್ಲೇಗು ಕಾಲಿಟ್ಟಿದೆ. ಇದನ್ನು ಹೊರಹಾಕಲು ನಾವು ಬಹು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಕಂಗಾಲ ಬಾಳ [illegible] ಕೇರಿಗಳಲ್ಲಿ ಬಹು ಹೊಲಸು ತುಂಬಿಕೊಂಡಿದೆ. ಅಲ್ಲಿ ಕಟ್ಟಿರುವ ಮನೆಗಳು ಹೊಲಸಿನ ಬೀಡ. ಆದರಿಂದ ಅವನ್ನು ಮುರಿದು ತೆಗೆದು ಈಗಿನ ಪದ್ಧತಿಯಂತೆ ನಗರರಚನೆ ಮಾಡುವದಗತ್ಯವಿದೆ. ಅದಕ್ಕಾಗಿ ಮ್ಯುನಿಸಿಪಾಲಿಟಿಗೆ ಅವಶ್ಯವಿದ್ದ ಅಧಿಕಾರ ಕೊಡಲೇಬೇಕು. ಇದಲ್ಲದೆ ಪ್ಲೇಗು ಬಂದಾಗ ಇಲ್ಲಿ ಕ್ಯಾಂಪ್ ಕಟ್ಟಿಕೊಳ್ಳಲು ಸ್ಥಳವಿಲ್ಲ. ಅದನ್ನು ಅನುಗ್ರಹಿಸಬೇಕಾಗಿ ನಾವು ತಮ್ಮ ಪ್ರಾಂತಾಧಿಕಾರಿಗಳ ಕಡೆ ಅರಿಕೆ ಮಾಡಿಕೊಂಡಿದ್ದೇವೆ. ಇದಕ್ಕಾಗಿ ಸಾರ ಮುರಿದ ತೋಪನ್ನು ಕಡಿದು ತೆಗೆಯುವ ಅಗತ್ಯವಿಲ್ಲ. [illegible] ಉತ್ತರ ಪಶ್ಚಿಮ ದಕ್ಷಿಣ ಭಾಗದ ಕೆಲ [illegible] ಇದನ್ನು [illegible] ಅನುಗ್ರಹಿಸಬೇಕಾಗಿ ನಮ್ಮ ಪ್ರಾರ್ಥನೆ. ಊರೊಳಗಿನ [illegible] ಸಮುದ್ರ [illegible] ಇದರಿಂದ ಮನೆಗಳ ಸುತ್ತುಮುತ್ತ ವರ್ಷದಲ್ಲಿ ೬-೭ ತಿಂಗಳು ನೀರು ನಿಂತು ಕೊಳೆತು ಕ್ರಿಮಿಕೀಟಕಗಳಾಗಿ ಪಟ್ಟಣಿಗರ ಆರೋಗ್ಯವು ಬಹಳ ಮಟ್ಟಿಗೆ ಕುಗ್ಗಿದೆ. ಮಳೆ ನೀರನ್ನೂ ಹೊಲಸು ನೀರನ್ನೂ ಸಮುದ್ರಕ್ಕೆ ಬಿಡುವ ವ್ಯವಸ್ಥೆ ಪಟ್ಟಣಿಗರಿಗೆ ಅಗತ್ಯವಾಗಿದೆ. ಆದರೆ ಸರಕಾರವು ಒಬ್ಬ ಇಂಜನಿಯರರ ಮುಖಾಂತರ ಟೀಕೆ ತಯಾರಿಸಿ ಉಪಾಯ ಸೂಚಿಸಬೇಕು. ಅವಶ್ಯವಿದ್ದ ಖರ್ಚನ್ನು ಸರಕಾರವು ಸಹಿಸಬೇಕು. ಈ ಪಟ್ಟಣವು ಈ ಜಿಲ್ಲೆಯ ಮುಖ್ಯ ಸ್ಥಳ. ಇಲ್ಲೊಂದು ಪ್ರಸೂತಿಗೃಹವಿರಬೇಕು. ಅದಕ್ಕಾಗಿ ಸ್ತ್ರೀ ಡಾಕ್ಟರರು ಬೇಕು. ದನಗಳ ಆಸ್ಪತ್ರೆ [illegible] ರಾ॥ [illegible] ನವರು ರೂ ೧೫೦೦೦ ಕೊಟ್ಟು ಪ್ರಸೂತಿಗೃಹವನ್ನು [illegible] ಎಲ್ಲ ವ್ಯವಸ್ಥೆಯಾಗಿದೆ. ಇದಕ್ಕೆ ಸರಕಾರವು ಒಬ್ಬ ಸ್ತ್ರೀ ಡಾಕ್ಟರರನ್ನು ನೇಮಿಸುವ ಖರ್ಚು ಸಹಿಸಬೇಕು. ದನಗಳ ಆಸ್ಪತ್ರೆಯ ಖರ್ಚನ್ನು ಸರಕಾರವು ಸಹಿಸಬೇಕು. ಮಕ್ಕಳಿಗೆ ಆಡಲಿಕ್ಕೂ ಓಡಲಿಕ್ಕೂ ನಗರವಾಸಿಗಳಿಗೆ ಮನೋರಂಜನ ಮಾಡಿಕೊಳ್ಳಲಿಕ್ಕೂ ಬಯಲು ಪ್ರದೇಶಗಳನ್ನೂ ಉದ್ಯಾನಗಳನ್ನೂ ಪೂರೈಸುವದು ಮ್ಯುನಿಸಿಪಾಲಿಟಿಯ ಕರ್ತವ್ಯವಿದೆ. ಅದಕ್ಕಾಗಿ ಮ್ಯುನಿಸಿಪಾಲಿಟಿಯವರು ತಮ್ಮ ಕಚೇರಿಯ ಹಿಂದಿನ ಸ್ಥಳವನ್ನು ಸಂಪಾದಿಸಿದ್ದಾರೆ. ಬೈತಕೋಲ ಬಂದರ ಸರಕಾರದ ಒಂದು ಸ್ಥಳವಿದೆ. ಇದನ್ನು ನಮ್ಮಲ್ಲಿ ಕೊಟ್ಟಲ್ಲಿ ಲೋಕೋಪಯೋಗಿಯಾಗುವಂತಿದೆ—ಇಲ್ಲಿ ದನಗಳಿಗೆ ಮೇಯಲು ಸ್ಥಳಾನುಕೂಲತೆಯಿಲ್ಲ. ನಾಮದಾರ ಗವ್ಹರ್ನರರು ಅನುಗ್ರಹಿಸಿ ಇದನ್ನೊಂದು ಬೇಗನೇ ಪೂರೈಸಬೇಕಾಗಿ ಪ್ರಾರ್ಥನೆ. ತಮ್ಮ ಅನುಗ್ರಹದಿಂದ ಈ ನಮ್ಮ ಜಿಲ್ಲೆಯೊಳಗೆ ಸುಖ ಸಂತೋಷಗಳು ನೆಲೆಗೊಳ್ಳಲೆಂದು ನಾವು ಪ್ರಾರ್ಥಿಸುತ್ತೇವೆ. ಇಲ್ಲಿಯ ಸೃಷ್ಟಿಸೌಂದರ್ಯದ ಸ್ಮರಣೆಯು ಸನ್ನಿಧಾನದ ದಿವ್ಯ ಚಿತ್ತದಲ್ಲಿ ನಿರಂತರವಾಗಿ ಉಳಿಯಲೆಂದೂ ಪ್ರಾರ್ಥಿಸಿಕೊಳ್ಳುತ್ತೇವೆ.

ಕಾರವಾರ ತಾಲೂಕ ಬೋರ್ಡಿನ ಮಾನಪತ್ರ.

ಕಾರವಾರ ತಾಲೂಕಿನ ಪ್ರಜೆಗಳ ಪರವಾಗಿ ದೊರೆಗಳಿಗೂ ದೊರೆಸಾನಿಯವರಿಗೂ ಸ್ವಾಗತ ಮಾಡುತ್ತೇವೆ. ಈ ತಾಲೂಕಿನ ಜನರು ಬಹು ಬಕ್ಕಲಿಗರು. ಬಡವರಾಗಿ ಅವರ ಪ್ರದೇಶವೆ ಅವರ ನಿವಾಸ. ಇದರಿಂದ [illegible] ಒಂದೆ ವಿಶೇಷ [illegible] ೧ ಆಣೆ ಫೀಯು ಹೆಚ್ಚಾದುದರಿಂದ ದನಗಳಿಗೆ ಇದರ ಭಾರ ಸಹಿಸುವದು ಕಠಿಣವಾಗಿದೆ. ಆದರಿಂದ ಆ ಫೀಯನ್ನು ನಿಶ್ಶೇಷ ತೆಗೆದುಬಿಡಬೇಕಾಗಿ ನಾವು ಪ್ರಾರ್ಥಿಸಿಕೊಳ್ಳುತ್ತೇವೆ. ಗದ್ದೆ ಮತ್ತು ಬೆಟ್ಟ ಜಮೀನುಗಳಲ್ಲಿಯೂ ಜನವಸ್ತಿಯಿರುವ ಹಳ್ಳಿಗಳಲ್ಲಿಯೂ [illegible] ಆದರಿಂದ ದನಗಳಿಗೆ ಮೇಯಲು ಸ್ಥಳವಿಲ್ಲ. [illegible] ದನಗಳನ್ನು ಮೇಯಿಸಬೇಕೆಂಬ ಕಟ್ಟಳೆಯಿದೆ. ಅದರಿಂದ ಜನರಿಂದ [illegible] ಇದನ್ನು ನಿಲ್ಲಿಸಬೇಕಾಗಿ ಪ್ರಾರ್ಥನೆ. ಈ ತಾಲೂಕಿನ ಮಧ್ಯಭಾಗದಲ್ಲಿ ಕಾಳಿ ನದಿ, ಎರಡೂ ದಂಡೆಗಳಲ್ಲಿ [illegible] ಇವುಗಳ ಮಾಲಿಕ [illegible] ಕೆಲ ಗ್ರಾಮಗಳಲ್ಲಿನ [illegible] ಇದೇ ವರ್ಷ [illegible] ೧೦ ೧೫ ಮೈಲು ದೂರ ಹೋಗಬೇಕಾದ [illegible] ನಾಲ್ಕು [illegible] ಗಳಿಂದ ಉದಬಾರವಿಲ್ಲದೆ ಅನೇಕರು ತಿರುಗಿಕೊಂಡಿರುತ್ತಾರೆ. ಇದರಿಂದ ಹಲವರು ಗ್ರಾಮ ಬಿಟ್ಟು ಪಟ್ಟಣದ [illegible] ಆದರಿಂದ ಬೇಸಾಯದ ಉದ್ದಿಮೆಯು ಕ್ರಮವಾಗಿ [illegible] ಆದರಿಂದ ನಾಮದಾರರು [illegible] ಹಳ್ಳಿ—ಹಳ್ಳಿಗಳಲ್ಲಿ ಪ್ರವಾಸ ಮಾಡಬೇಕಾಗಿ [illegible] ಮನೆಗಳಲ್ಲಿ ಜನವಸ್ತಿಯಾಗಿ ಬೇಸಾಯದ ಉದ್ಧಾರವಾಗುವದು. ಈ ತಾಲೂಕಿನಲ್ಲಿ ಮಾರ್ಗಗಳ ಅನಾನುಕೂಲತೆ ಬಹಳ. ಹಲವರು ತಮ್ಮ [illegible] ಮಾರ್ಗ ಮಾಡಿ [illegible] ಖರ್ಚನ್ನು ನಡೆಸಲು ಲೋಕಲ್ ಬೋರ್ಡಿಗೆ ಕೇಳಿಕೊಂಡಿದ್ದಾರೆ. ಆದರೆ, ಜಿಲ್ಲಾ ಬೋರ್ಡಿನ ಮಾರ್ಗಗಳ ಗ್ರಾಂಟು [illegible] ನಮಗೆ [illegible] ಗ್ರಾಂಟು [illegible] ಮಾರ್ಗಗಳ [illegible] ಬಕ್ಕಲಿಗರಿಗೆ [illegible] ಆದರಿಂದ ಜಿಲ್ಲಾ ಬೋರ್ಡಿಗೆ ಮಾರ್ಗಗಳ ಬಗ್ಗೆ ಗ್ರಾಂಟು ಕೊಡುವಾಗ ತಾಲೂಕ ಬೋರ್ಡುಗಳಿಗೆ ಪ್ರತ್ಯಪ್ರತ್ಯೇಕ ಗ್ರಾಂಟು ಹಂಚಿಕೊಡುವಂತೆ ವಿಧಿಸಬೇಕಾಗಿಯೂ ನಮ್ಮ ಬಿನ್ನಹವಿದೆ. ದನಗಳ ದವಾಖಾನೆಯು ಇಲ್ಲಿಂದ ೪೦ ಮೈಲು ದೂರ [illegible] ಆದರಿಂದ ಅಷ್ಟು ದೂರದಲ್ಲಿರುವ ಪ್ರದೇಶಗಳಲ್ಲಿ ದನಗಳ ರೋಗ ಬಂದಲ್ಲಿ ದನಗಳ ಡಾಕ್ಟರರು ಬಂದು ತಲುಪುವದರೊಳಗೆ ಎಷ್ಟೋ ದನಗಳು ತೀರಿಕೊಳ್ಳುತ್ತವೆ. ಇದರಿಂದ ಬಕ್ಕಲಿಗರು [illegible] ಆದರಿಂದ [illegible] ದನಗಳ [illegible] ಜನ ಜಾನುವಾರಗಳು [illegible] ಆದರಿಂದ ಈ ಜಿಲ್ಲೆಗೆ [illegible] ಡಾಕ್ಟರರನ್ನು ನೇಮಿಸಿ ನಮ್ಮ ತಾಲೂಕಿನ ಮಟ್ಟಿಗೆ ಪ್ರತ್ಯೇಕ [illegible] ಡಾಕ್ಟರರನ್ನು ನೇಮಿಸಿ ಉಪಕರಿಸಬೇಕಾಗಿ ಪ್ರಾರ್ಥನೆ. ದೊರೆ—ದೊರೆಸಾನಿಯವರ ಆಗಮನದಿಂದ ಈ ತಾಲೂಕಿನಲ್ಲಿ ನೂತನ ಯುಗಾಂತರವು ಪ್ರಾರಂಭವಾಗುವದೆಂದು ನಾವೆಲ್ಲರೂ ಹಾರೈಸುತ್ತೇವೆ.

ಮಾನಪತ್ರಸಮರ್ಪಣ ಸಮಾರಂಭ

ಕಾರವಾರ, ತಾ ೨—೧೧—೩೪

ಮುಂಬಯಿ ಗವ್ಹರ್ನರರಾದ ನೇಕ ನಾಮದಾರ ಬ್ರೆಬರ್ನ್ ದೊರೆಗಳು ಸಹಧರ್ಮಿಣಿಯವರಾದ ದೊರೆಸಾನಿಯವರೊಡನೆ ಮೊನ್ನೆ ಸಾಯಂಕಾಲ ೪॥ ಘಂಟೆ ಸುಮಾರಿಗೆ ಇಲ್ಲಿ ಬಂದು ಸೇರಿದರು. [illegible] ಹಡಗದಿಂದ [illegible] ಇಳಿದುಕೊಂಡರು. [illegible] ಬಾಗಿ ದೀಪಸ್ತಂಭಗಳಲ್ಲಿ [illegible] ಹಚ್ಚಿದ್ದರಿಂದ ದೊರೆ—ದೊರೆಸಾನಿಗಳು ಪರಿವಾರ ಸಹಿತ ಬೆಳಿಕಾನ ಮಾರ್ಗವಾಗಿ ಸಮುದ್ರ ಪರ್ಯಟನ ಮಾಡದೆ ನೆಟ್ಟಗೆ ಅಂಕೋಲಾ ಮಾರ್ಗವಾಗಿ ಮೋಟಾರಿನಿಂದ ಇತ್ತ ಬಂದಿದ್ದರು. ನಿನ್ನೆ ಇಡೀ ದಿನ ಮಳೆ [illegible] ಮಳೆ ಬಿದ್ದು ಉತ್ಸವದ ಉತ್ಸಾಹಕ್ಕೆ ಭಂಗ ಬರುತ್ತದೆಂದು ಜನರು ಚಿಂತಾತುರರಾಗಿದ್ದರು. ಸುಮಾರು ೪॥ ಘಂಟೆಗೆ ನೇಕ ನಾಮದಾರ ಗವ್ಹರ್ನರರು ದೊರೆಸಾನಿಗಳೊಡನೆ ಬಂದರದಲ್ಲಿ [illegible] ಘಂಟೆಗೆ [illegible] ಸಿದ್ಧವಾಯಿತು. [illegible] ಜಿಲ್ಲಾಧಿಕಾರಿಗಳೂ [illegible] ನಾಗರಿಕರು ಸೇರಿ ಪ್ರಾಂತಾಧಿಪರ [illegible] ೧೦ ಘಂಟೆಗೆ ದೊರೆ—ದೊರೆಸಾನಿಯವರು ಬಂದರದ ಮೇಲೆ ಕಾಲಿಟ್ಟ ಕೂಡಲೆ ಹಡಗದ ಮೇಲಿಂದ ಸನ್ಮಾನಾರ್ಥ ತೋಫು [illegible] ಜಿಲ್ಲಾಧಿಪತಿಗಳಾದ ರಾ॥ [illegible] ದೊರೆಗಳಿಗೆ [illegible] ಪರಿಚಯ ಮಾಡಿಕೊಟ್ಟರು. ಆ ಮೇಲೆ ಸ್ವಾಗತ [illegible] ಪರಿಚಯ ಮಾಡಿಕೊಡಲಾಯಿತು. ಪರಸ್ಪರ ಪರಿಚಯದ [illegible] ಬಳಿಕ ದೊರೆಗಳು ಪ್ರಸೂತಿಗೃಹದ ಅಡಿಗಲ್ಲು ಇಡಲು ಸಿವ್ಹಿಲ್ ಆಸ್ಪತ್ರೆಗೆ ತೆರಳಿದರು. ಅಲ್ಲಿ ನಿಮಂತ್ರಿತ ಮಹನೀಯರಿಗೆ ಕೂಡ್ರಲು ಸುಂದರವಾದ ಹಂದರದ ವ್ಯವಸ್ಥೆಯಾಗಿತ್ತು. [illegible] ದೊರೆ ದೊರೆಸಾನಿಗಳು ಆಸನವನ್ನಲಂಕರಿಸಿದ ಬಳಿಕ ಡಿ॥ ಡಿ॥ [illegible] ಗಣಪತರಾವ ತೆಲಂಗರವರಿಗೂ [illegible] ಸೇವೆ ಮಾಡಿ [illegible] 'M B E' ಎಂಬ ಪದಕವನ್ನರ್ಪಿಸಿದರು, ಕಾಮಾಟಿಭಾಗದಲ್ಲಿ ವಿಶೇಷ ಸೇವೆ ಮಾಡಿದ ಬಗ್ಗೆ ರಾ॥ ತೆಲಂಗರವರಿಗೆ 'ರಾವಸಾಹೇಬ' ಬಿರುದನ್ನು ಅರ್ಪಿಸಿದರು. ಈ ಕಾರ್ಯ ದೊರೆಗಳು ಸಮಯೋಚಿತ [illegible] ನಗೆಮೊಗದಿಂದ [illegible] ಬಳಿಕ, ಪ್ರಸೂತಿಗೃಹಕ್ಕೆ ರೂ ೧೫೦೦೦ ನಿಧಿಯನ್ನರ್ಪಿಸಿದ ರಾ॥ [illegible] ರವರ ಪರಿಚಯ ಮಾಡಿಕೊಡಲಾಯಿತು. ಬಳಿಕ [illegible] ಪ್ರಸೂತಿಗೃಹದ [illegible] ಧನಸಹಾಯ ಮಾಡಿದವರ ಹೆಸರುಗಳನ್ನು [illegible] ದೊರೆಗಳಿಗೆ ನಿವೇದಿಸಿ ಪ್ರಸೂತಿಗೃಹದ ಶಂಕುಸ್ಥಾಪನೆ ಮಾಡಿ ಹರಸಬೇಕಾಗಿ ದೊರೆಗಳಿಗೆ ಬಿನ್ನೈಸಿಕೊಂಡರು. ದೊರೆಗಳು ಅಲ್ಲಿ ಹೋಗಿ ಶಂಕುಸ್ಥಾಪನೆ ಮಾಡಿದರು. [illegible] 'ಪ್ರಸೂತಿಗೃಹ'ವೆಂಬ [illegible] ಬಳಿಕ, ದೊರೆಗಳು [illegible] ರಾ॥ [illegible] ದ್ರವ್ಯಸಹಾಯ ಮಾಡಿ ಈ ಗೃಹ ಕಟ್ಟಲು ಅನುಕೂಲತೆ ಮಾಡಿಕೊಟ್ಟ ಬಗ್ಗೆ ಅವರೆಲ್ಲರ ಉಪಕಾರ ಮನ್ನಿಸುತ್ತೇನೆ. ಈ ಪಟ್ಟಣದಲ್ಲಿ ಅವಶ್ಯವಾಗಿ ಇಂಥದೊಂದು [illegible] ಇತರರೂ ಇನ್ನೂ ಹೆಚ್ಚಾಗಿ ದ್ರವ್ಯಸಹಾಯ ಮಾಡಿ ಸಂಸ್ಥೆ ಪ್ರಯೋಜನ ಪಡೆಯುವರೆಂದು [illegible] ಆ ವೇಳೆ ದೊರೆಗಳು [illegible] ಬೇರೆ ಬೇರೆ ಮಾರ್ಗಗಳಲ್ಲಿ [illegible] ಮೇಲೆ [illegible] 'ಮಿತ್ರಸಮಾಜ'ಕ್ಕೆ ತೆರಳಿದರು. ಇಲ್ಲಿ ಬಾಲಚರರು ರಾ॥ [illegible] ನೇತೃತ್ವದಲ್ಲಿ ದೊರೆಗಳಿಗೆ ಸಲಾಮಿ ಕೊಟ್ಟ ಬಳಿಕ ದೊರೆಗಳು ಮಿತ್ರಸಮಾಜದಲ್ಲಿ ಪ್ರವೇಶಿಸಿದರು. ಮಿತ್ರಸಮಾಜ ಮಂದಿರವು [illegible] ಬಹು ಸುಶೋಭಿತವಾಗಿ ಸಿಂಗರಿಸಲಾಗಿತ್ತು. ದೊರೆ—ದೊರೆಸಾನಿಗಳಿಗೆ [illegible] ಉಚ್ಚಾಸನಗಳ ವ್ಯವಸ್ಥೆಯಾಗಿತ್ತು, ದೊರೆಗಳು ಆಸನಸ್ಥರಾದ ಬಳಿಕ, ಜಿಲ್ಲಾ ಬೋರ್ಡಿನ ಅಧ್ಯಕ್ಷರ [illegible] ಜಿಲ್ಲಾ...

ಕೊಂಗ್ರೆಸ ಉಮೇದವಾರರಾದ ಶ್ರೀ। ಹೊಸಮನೆ ಶಿದ್ದಪ್ಪನವರಿಗೆ ಮತ ಕೊಡಿರಿ.

ವರು ವಹಿಸಿಕೊಟ್ಟ ಬಳಿಕ ಜಿಲ್ಹಾ ಬೋರ್ಡಿನ ಅಧ್ಯಕ್ಷರಾದ ರಾ। ಗಂಗೋಳಿಯವರು ಮಾನಪತ್ರವನ್ನೋದಿ ಬೋರ್ಡಿನ ಸಭಾಸದರ ಪರಿಚಯ ಮಾಡಿಕೊಟ್ಟರು. ದೊರೆ-ದೊರೆಸಾನಿಯರು ಹಸನ್ಮುಖದಿಂದ ಎಲ್ಲರೊಡನೆ ಹಸ್ತಾಂದೋಲನ ಮಾಡಿದರು. ಆ ಮೇಲೆ ಕಾರವಾರ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ। ಚೇದಾಮರಕರರವರು ಮ್ಯುನಿಸಿಪಾಲಿಟಿಯ ಮಾನಪತ್ರವನ್ನೂ ತಾಲೂಕ ಬೋರ್ಡಿನ ಅಧ್ಯಕ್ಷರಾದ ರಾ। ದತ್ತಾತ್ರಯ ಸುಬ್ಬಾ ನಾಯಕರವರು ತಾಲೂಕ ಬೋರ್ಡಿನ ಮಾನಪತ್ರವನ್ನೂ ಓದಿ ಹೇಳಿ ಸಭಾಸದರ ಪರಿಚಯ ಮಾಡಿಕೊಟ್ಟ ಬಳಿಕ ಹಸ್ತಾಂದೋಲನದ ಸುತೋಪಚಾರ ಕೊನೆಗಂಡಿತು. ರಾ। ದತ್ತಾತ್ರಯ ಸುಬ್ಬಾ ನಾಯಕರು ಬೋರ್ಡಿನ ಮಾನಪತ್ರವನ್ನು ಕನ್ನಡದಲ್ಲಿ ಓದಿಹೇಳಿದ್ದೊಂದು ವಿಶೇಷ! ಇಷ್ಟಾದ ಬಳಿಕ, ದೊರೆಗಳು ಮೂರೂ ಮಾನಪತ್ರಗಳಿಗೆ ಉತ್ತರ ಕೊಡುವಾಗ ನುಡಿದದ್ದೇನೆಂದರೆ - ಇಲ್ಲಿಯ ಮ್ಯುನಿಸಿಪಾಲಿಟಿಯವರು ತಮ್ಮ ಕಾರ್ಯವನ್ನು ಶ್ರದ್ಧೆಯಿಂದ ನಡೆಸಿದ ಬಗ್ಗೆ ನಾನವರಿಗೆ ಅಭಿನಂದಿಸುತ್ತೇನೆ. ಈ ಪಟ್ಟಣವು ಭೂಕಂಪದ ಮೇಲೆ ನೆಲೆಸಿಗಿರುವದು ಇನ್ನು ಪ್ಲೇಗಿನ ವಿಚಾರ ಬಾರಿ ಕಳವಳಗೊಳಗಿನ ಮನೆ ನು ಧಿಮ ನಿ ವ್ಯವಸ್ಥಿತವಾದ ಯೋಜನೆಯಿಲ್ಲ ಅನಾರೋಗ್ಯಕರ ಕೇರಿಗಳು ಪ್ಲೇಗಿನ ತವರುಮನೆಯೆಂಬ ಮಾತು ನಿಜ. ಈ ಪಟ್ಟಣದಲ್ಲಿ ಪ್ಲೇಗು ಹರಡುವದು ದುರ್ದೈವ. ವ್ಯವಸ್ಥಿತವಾದ ಯೋಜನೆಯನ್ನು ಸಾದರಪಡಿಸಿದ್ದಲ್ಲಿ ನನ್ನ ಸರಕಾರವು ಅದನ್ನು ಸಹಾನುಭೂತಿಯಿಂದ ವಿಚಾರ ಮಾಡುವದು. ಮ್ಯುನಿಸಿಪಲ್ ಲಿಮಿಟಿನ ಗಡಿಗನೇ ಕಲಮಿನಂತೆ ಮನೆಗಳ ಮಾಲೀಕರು ಸುತ್ತುಮುತ್ತಲಿನ ಸ್ಥಳವನ್ನು ಸ್ವಚ್ಛ ಮಾಡಲು ಬಿಡದಿದ್ದರೆ ಅದಾಗ್ಯೂ ಈ ಕುರಿತು ನಿಶ್ಚಿತವಾದ ಯೋಜನೆ ತಯಾರಿಸಿ ಕಳುಹಿದ್ದಲ್ಲಿ ಸರಕಾರಿ ಖರ್ಚಿನಿಂದ ಇಂಜಿನಿಯರರನ್ನು ಕಳಿಸುವ ವಿಚಾರ ಮಾಡಬಹುದು. ಬಿನ್ನಹ ಮಾಡಿಕೊಂಡಂತೆ ಪ್ಲೇಗು ಬಂದಾಗ ಕೆಂಪ್ ಕಟ್ಟಿಕೊಳ್ಳಲು ಸ್ಥಳ ಸಿಗುವದು ಬೃಹತ್ಕಾರ್ಯ. ಬಿಕ್ಕ ಬೇಡಿದ ಸ್ಥಳವು ಉದ್ಯಾನರಚನೆಗೆ ಪ್ರಶಸ್ತವಲ್ಲದ್ದರಿಂದ ಅದನ್ನು ಕೊಡಬರುವದಿಲ್ಲ. ಪೂರ್ವ ಪಾರ್ಶ್ವದಲ್ಲಿ ಯೋಗ್ಯ ಸ್ಥಳ ಬೇಡಿದರೆ ವಿಚಾರ ಮಾಡುವ ಅನುಕೂಲವಿದೆ. ಪ್ರಸೂತಿ ಗೃಹಕ್ಕೆ ಸ್ತ್ರೀ-ಡಾಕ್ತರರನ್ನು ಕೊಟ್ಟಲ್ಲಿ ವರ್ಷ ವರ್ಷ ಹೆಚ್ಚಿನ ಹಣ ಪೂರೈಸಬೇಕಾಗುತದೆ.

ಇಂಥ ಖರ್ಚು ಹೊರಬಾರದಾಗಿ ಈಗಿನ ಧೋರಣವಿದೆ. ಆದರಿಂದ ರಾ। ಶಾಂತಾದಾಸ ಅಳಕರ್ಣಿಯವರಂಥ ಉದಾರವಂತ ಗೃಹಸ್ಥರ ಸಹಾಯದಿಂದ ದ್ರವ್ಯ ಸಹಾಯ ದೊರೆತು ನೀವು ಸಂಸ್ಥೆ ವ್ಯವಸ್ಥೆ ಮಾಡಿಕೊಳ್ಳಬೇಕು. ಜಿಲ್ಹಾ ಬೋರ್ಡಿನ ಮಾನಪತ್ರದಲ್ಲಿ ಅಧ್ಯಕ್ಷರು ದೂರದೃಷ್ಟಿ ವಿಚಾರಗಳನ್ನು ಒಂದೆಡೆಗೆ ಒಪ್ಪಿಸಿಕೊಟ್ಟಿದ್ದಾರೆ. ಅದರಿಂದ ಅದಕ್ಕೆ ಉತ್ತರ ಕೊಡುವದು ಕಠಿಣವಾಗಿದೆ. ಇದರ ಮೇಲಿಂದ ಅಧ್ಯಕ್ಷರು ಜಿಲ್ಹೆಯ ಕುರಿತು ವಿಲಕ್ಷಣವಾಗಿ ಉತ್ಸಾಹಪ್ರದರ್ಶನ ಮಾಡಿದ್ದಾರೆ. ಕೆಲವು ವಿಷಯಗಳು ಜಿಲ್ಹಾ ಬೋರ್ಡಿಗೆ ಸಂಬಂಧಪಟ್ಟವುಗಳಲ್ಲ. ಪಟ್ಟಣಗಳೂ, ಗ್ರಾಮಗಳೂ ದೂರ ದೂರ ಅಂತರದಲ್ಲಿರುವದರಿಂದ ಮಾರ್ಗಗಳ ಬಗ್ಗೆ ಹೆಚ್ಚೆಂದು ನಾನೊಪ್ಪುತ್ತೇನೆ. ಮಾರ್ಗಗಳಿಗಾಗಿ ಈ ಜಿಲ್ಹೆಯಲ್ಲಿ ಖರ್ಚಾಗುವಷ್ಟು ಹೆಚ್ಚಿನ ಹಣ ಇನ್ನಾವ ಜಿಲ್ಹೆಯಲ್ಲಿಯೂ ಖರ್ಚಾಗಲಿಕ್ಕಿಲ್ಲ. ಈ ವರ್ಷ ಪಿಡಬ್ಲ್ಯೂಡಿ ತರಗತಿಗಳಿಂದ ೬॥ ಲಕ್ಷ ರೂಪಾಯಿಗಳು ಮಾರ್ಗಗಳ ದುರಸ್ತಿಗಾಗಿ ಕೊಡಲ್ಪಟ್ಟಿವೆ. ಸರಕಾರವು ಈ ಜಿಲ್ಹೆಯ ಕಡೆ ಅಲಕ್ಷ ಮಾಡುತ್ತದೆಂಬ ಸಂಗತಿ ನಿಜವಲ್ಲ. ಇತ್ತ ೫೦ ವರ್ಷಗಳಲ್ಲಿ ಒಳ್ಳೆಯ ಗುಣಸಂಪನ್ನ ಅಧಿಕಾರಿಗಳನ್ನು ಸರಕಾರವು ಈ ಜಿಲ್ಹೆಗೆ ಕಳಿಸಿದೆ. ಕೊಳೆರೋಗದ ಉಪದ್ರವ ಸರಕಾರದ ಲಕ್ಷ್ಯಕ್ಕೆ ಬಂದಿದೆ. ಸಿದ್ದಾಪುರ ತಾಲೂಕಿನಲ್ಲಿ ೪೦೦೦೦ ಎಕ್ರೆ ಕ್ಷೇತ್ರದ ವ್ಯವಸ್ಥೆ ಈ ವರ್ಷ ಕೈಕೊಳ್ಳಲ್ಪಡುವದು. ಕೊಳೆರೋಗದ ಬಂದಲ್ಲಿ ಮದ್ದು ಹಾಕುವದಕ್ಕಾಗಿ ಸಾಹಿತ್ಯ ಕೊಂಡುಕೊಳ್ಳಲು ರೂ ೧೦೦೫೦ ತಗಾವಿ ಸಾಲ ಕೊಡಬೇಕೆಂದು ಗೊತ್ತಾಗಿದೆ. ಶಾಲೆಗಳ ಗ್ರಾಂಟು ಕಡಿಮೆಯಾದ್ದಲ್ಲಿ ಗ್ರಾಂಟು ಕೊಡಬಾರದೆಂಬ ಧೋರಣದಲ್ಲಿ ತಿದ್ದುಪಾಟವಾಗಿದೆ. ಆದಾಗ್ಯೂ ಕತ್ತರಿಸಿದ ಗ್ರಾಂಟನ್ನು ಕುರಿತು ಅರ್ಜಿ ಮಾಡಿಕೊಂಡಲ್ಲಿ ಸಹಾನುಭೂತಿಯಿಂದ ವಿಚಾರವಾಗುವದು. ಜಿಲ್ಹಾ ಬೋರ್ಡಿನವರು ದವಾಖಾನೆಗೆ ಅನುದಾನ ಕೊಟ್ಟಕೊಟ್ಟಲ್ಲಿ ಸರಕಾರವು ಸಹಾಯ ಮಾಡಬಹುದು. ತಾಲೂಕ ಬೋರ್ಡಿನ ಪರವಾಗಿ ಮಾನಪತ್ರ ಸ್ವೀಕರಿಸಿದ್ದು ಇದೇ ಮೊದಲು. ಸಭಾಸದರಿಗೆ ನೋಡಿ ನನಗೆ ಆನಂದವಾಯಿತು. ತಾಲೂಕ ಬೋರ್ಡಿನ ವಿಷಯಗಳೆಲ್ಲ ಜಿಲ್ಹಾ ಬೋರ್ಡಿನ ಮಾನಪತ್ರದಲ್ಲಿ ಬಂದಿರುವದರಿಂದ ಆ ಕುರಿತು ಪ್ರತ್ಯೇಕವಾಗಿ ಉತ್ತರ ಕೊಡುವ ಕಾರಣವಿಲ್ಲ ಜಿ. ಬೋರ್ಡಿನವರು ದನಗಳ ದವಾ-

ಖಾನೆಯ ಬಗ್ಗೆ ಅನುದಾನ ಕಟ್ಟಿ ಕೊಟ್ಟಲ್ಲಿ ಸರಕಾರಿ ಖರ್ಚಿನಿಂದ ಒಬ್ಬ ಅ। ವೆಟರ್ನರಿ ಸರ್ಜನರನ್ನು ಕೊಡಲಿಕ್ಕೆ ಅಡ್ಡಿಯಿಲ್ಲ. ಶಿರ್ಸಿಗಿಂತ ಯಲ್ಲಾಪುರದೊಂದು ಮಧ್ಯಭಾಗದಲ್ಲಿ ದವಾಖಾನೆ ಸ್ಥಾಪಿಸುವದು ವಿಹಿತ. ನಮಗೆಲ್ಲರಿಗೆ ಈ ಸೊಬಗಿನ ಪಟ್ಟಣ ಸಂದರ್ಶಿಸಲು ಆನಂದವಾಗುತ್ತದೆ" ಈ ಪ್ರಕಾರ ನೇಕ ನಾಮದಾರರು ಉತ್ತರ ಕೊಟ್ಟು ಕಲೆಕ್ಟರರ ಬಂಗ್ಲೆಗೆ ಹೋದರು. ಅಲ್ಲಿ ಮೇಜವಾನಿ ಮುಗಿಯಿತು. ಆ ಬಳಿಕ, ದೊರೆಸಾನಿಯವರು ಇಲ್ಲಿಯ ಕಾನ್ವೆಂಟು ಶಾಲೆಗೆ ಭೆಟ್ಟಿ ಕೊಟ್ಟರು. ದೊರೆಗಳು ಕೋಡಿಬಾಗದೊಳಗಿನ ಜಂಗಲ ಖಾತೆಯ ಕಟ್ಟಿಗೆ ಡಿಪೋ ನೋಡಿ ಬಂದರು. ಸಂಜೆ ೫ ಘಂಟೆಗೆ ಮ್ಯುನ್ಸಿಪಾಲಿಟಿ ಮ್ಯಾಕಾರ್ಥಿ ಪಬ್ಲಿಕ ಗಾರ್ಡನದಲ್ಲಿ ಜಿಲ್ಹೆಯೊಳಗಿನ ಹುಡುಗರೆಲ್ಲ ಕೂಡಿದ್ದರು. ದೊರೆ-ದೊರೆಸಾನಿಗಳು ಹುಡುಗರ ಕಸರತ್ತು ನೋಡಿ ಆನಂದಪಟ್ಟರು. ಈ ಪ್ರೋಗ್ರಾಮ ಮುಗಿಸಿ ಸ್ಕೌಟ್ಸ್ ಕ್ಯಾಂಪ ನೋಡಿದ ಬಳಿಕ ದೊರೆಸಾನಿಯವರು ಬಾಲಕರಿಗೆ ಬಹುಮಾನ ಹಂಚಿದರು. ಅಷ್ಟರಲ್ಲಿ ೬॥ ಘಂಟೆಯಾಯಿತು. ದೊರೆ-ದೊರೆಸಾನಿಗಳು ಟೀ ಪಾರ್ಟಿ ಮುಗಿಸಿ ಘೋಷದಲ್ಲಿ ಮೋಟಾರಿನ ಮೂಲಕ ಬೈತಕೋಲಕ್ಕೆ ಹೋದರು. ಹಡಗ ಹತ್ತಿ ನಾಳೆ ಮುಂಜಾವಿಗೆ ಗೋವಾ ತಲುಪಿ ಮುಂಬಯಿಗೆ ಬೀಳಲಿದ್ದರು.

(೩ನೇ ಪಾನಿನಿಂದ ಮುಂದುವರಿದಿದ್ದು)

ಆದನ್ನು ಮದರಾಸ ರಾಜ್ಯಗಳಲ್ಲಿ ಕೊಂಗ್ರೆಸ ಉಮೇದ್ವಾರರಿಗೇ ಮತ ಕೊಟ್ಟು ಸಿದ್ಧಪಡಿಸಬೇಕೆಂದು ಮಹಾತ್ಮರೂ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರೂ ಆಜ್ಞೆ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ। ನರಿಮಾನರವರು ಕೊಂಗ್ರೆಸೇತರ ಉಮೇದ್ವಾರರಿಗೆ ಮತ ಕೊಟ್ಟಲ್ಲಿ ನಿಶ್ಚಿತವಾಗಿ ಬ್ರಿಟಿಶರ ಗುಲಾಮರಾಗಿರಲು ಮತ ಕೊಟ್ಟಂತಾಯಿತು ! ಎಂದು ಮುಂಜಾಗ್ರತೆ ಕೊಟ್ಟಿರುತ್ತಾರೆ. ಮತದ ನಡೆ ರಾಜ್ಯಗಳಲ್ಲಿ ನಡೆಯುವ ಸಂಗ್ರಾಮವು ಸರಕಾರ ಹಾಗು ರಾಷ್ಟ್ರೀಯ ಸಭೆಗಳ ನಡುವೆ, ಬೇರೆ ಪಕ್ಷಗಳು ಅಲ್ಲಿ ಗೌಣ. ದಶ ನಾವು ರಾಷ್ಟ್ರೀಯ ಸಭೆಯ ಅಭಿಮಾನಿಗಳು ಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರೆ, ಈಗಿನ ರಾಜ್ಯಯೋಜನೆಯಲ್ಲಿ ಅಮೂಲಾಗ್ರ ತಿದ್ದುಪಡಿಯಾಗಬೇಕೆಂದು ನಾವು ಕಾಂಕ್ಷಿಸುತ್ತಿದ್ದರೆ ಈಗಿನ ರಾಜ್ಯಭಾರದಿಂದ ಪ್ರಜಾಸುಖವಾಗುವದಿಲ್ಲವಾಗಿ ಗ್ರಹಿಕೆಯಾಗಿದ್ದರೆ ಶ್ವೇತಪತ್ರಿಕೆಯು ತಿರಸ್ಕರಣೀಯವೆಂದು ಅಭಿಪ್ರಾಯವಿದ್ದರೆ ನಾವು ಯಾರಿಗೆ, ಮತ ಕೊಡಬೇಕೆಂದು ಈ ನವ ಮುಂಬಯಿ ಸಭಾದಾರರು ತಾವಾಗಿ ಸತ್ಯಾತ್ಯರಿಂದ ವಿಚಾರಿಸಿ ಶ್ರೀ। ಹೊಸಮನೆ ಸಿದ್ದಪ್ಪನವರಿಗೆ ಮತ ಕೊಟ್ಟು ಆರಿಸಿ ಕಳುಹಬೇಕೆಂದು ತಪ್ಪನೆ ಹೇಳುವೆವು. ಮತದಾರರೆಲ್ಲರೂ ಸೂಜ್ಞರು. ಹೀಗಿರುವಾಗ ಯಾರಿಗೆ ಮತ ಕೊಡಬೇಕೆಂದು ನಾವು ಮತದ ರಂಗಳಿಸಿ ಹೇಳಬೇಕೇ?

ಜಾಹೀರ ನೋಟೀಸು.

ನಮ್ಮ ತಂದೆ ಸೈಯ್ಯದ ಇಬ್ರಾಹೀಮ ವಲ್ಲದ ಸೈಯ್ಯದ ಇಸೂಫ, ಪ್ರಾಯ ವರ್ಷ ೨೨ ಇವನಿಗೆ ಅಜಮಾಸ ೬ ತಿಂಗಳ ಲಾಗಾಯ್ತು ಬಹಳ ಮತಿಭ್ರಾಂತಿ ಆಗಿ ಚಿತ್ತಭ್ರಮೆ ಆಗಿರುತ್ತದೆ. ಅವನು ನಾಹಕ್ಕ ಸ್ಥಿರ-ಚರ ಆಸ್ತಿ ಪರಾಧೀನ ಮಾಡಲು ತೊಡಗಿದ್ದಾನೆ. ಈ ಪ್ರಕಾರ ಸ್ಥಿತಿಯುಳ್ಳ ಆತನಿಂದ ಯಾರೂ ಏನೂ ಕ್ರಯ ವ್ಯವಹಾರ ಏನೂ ಹಕ್ಕು ಮಾಡಿಕೊಂಡಲ್ಲಿ ಅದು ನಿಂದು ತಿಳಿಯುವ ಕುರಿತು ಸದರ ನೋಟೀಸು ಕುಮಟಾ, ೩೧—೧೦—೧೯೩೬

ಸೈಯ್ಯದ ಅಲ್ಲಿ ವ॥ ಸೈಯ್ಯದ ಇಬ್ರಾಹೀಮ.

ಉತ್ತಮ ಪ್ರತಿಯ ರಚನೆ, ಪರಮಾವಧಿಯ ಲಾಭವುಳ್ಳ

Kirloskar

'ಕಲ್ಯಾಣ' ನೆಲಗಡ್ಲೆಯ ಯಂತ್ರಕ್ಕೆ

ಮಿಗಿಲಾದ ಬೇರೆ ಯಂತ್ರವಿಲ್ಲ.

ಯಾಕೆಂದರೆ, ಘಂಟೆಗೆ ೨೫ರಿಂದ ೩೦ ಚೀಲ ನೆಲಗಡ್ಲೆಯನ್ನು ಸುಲಿಯುವಂತೆ ಇದರಲ್ಲಿ ವಿಶೇಷ ಟಿಪ ಮಾಡಿ ಖರ್ಚು ತೀರ ಕಡಿಮೆ



ಬೇಕಾದಷ್ಟು ನೂರಾರು ಜನರು ಇದನ್ನು ಉಪಯೋಗಿಸುತ್ತಾರೆ

ಸಚಿತ್ರ ಕಟಲಾಗಿಗೆ ಬರೆಯಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಹಾ- ಸಾತಾರಾ.)

ಸ್ವಾಗತಾಧ್ಯಕ್ಷರಾದ ಶ್ರೀ। ನರಿಮಾನರ ಭಾಷಣ.

ಪ್ರತಿನಿಧಿ ಬಂಧು ಭಗಿನಿಯರೇ—ಗೆಳೆಯರೇ,

೪೮ನೇ ಹಿಂದೀ ರಾಷ್ಟ್ರೀಯ ಸಭೆಯ ಸ್ವಾಗತ ಸಮಿತಿಯ ಪರವಾಗಿ ಮುಂಬಯಿ ನಾಗರಿಕರ ಪರವಾಗಿ, ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವಾದ ಹಿಂದೀ ವ್ಯಾಪಾರದ ಪ್ರಮುಖ ಪಟ್ಟಣವಾದ ಮುಂಬಾಪುರಿಯಲ್ಲಿ ನಿಮಗೆಲ್ಲರಿಗೆ ಹೃತ್ಪೂರ್ವಕ ಸ್ವಾಗತ ಕೋರುತ್ತೇನೆ. ೧೬ ವರ್ಷಗಳ ಹಿಂದೆ ಇಲ್ಲಿ ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನವಾಯಿತು. ಅಂದಿನಿಂದ ಈ ನಗರವು ರಾಜಕಾರಣದಲ್ಲಿ ಮುಂದುವರಿಯುತ್ತಿದ್ದೇವೆ. ವಿಶೇಷ ಅಧಿವೇಶನದಲ್ಲಿ ಆ ಕಾಲದ ರಾಜ್ಯಘಟನೆಯ ಚರ್ಚೆಯಾಗಿ ಅದು ನಿರಾಶಾಜನಕವಾದದ್ದೆಂಬ ನಿರ್ಣಯ ಕೈಕೊಳ್ಳಲಾಯಿತು. ೧ ವರ್ಷದ ತರುವಾಯ ಪ್ರಸಿದ್ಧ ಲೋಕಮಾನ್ಯರ ನಿಧನವಾಯಿತು. ಅವರಂತೆ ಚಳವಳಿಯ ಮಂತ್ರಗಳ ಮೆರವಣಿಗೆಯೂ ಜರುಗಿತು. ಪ್ರಿನ್ಸ್ ಆಫ್ ವೇಲ್ಸರ ಆಗಮನ ಕಾಲವಾಗಿ ನಾವು ನಡೆಸಿದ್ದೇವೆ. ಮುಂಬಯಿಯು ರಾಷ್ಟ್ರೀಯ ಸಭೆಗೆ ಹಿಂದಿನ ಕೆಲವು ಅಧ್ಯಕ್ಷರನ್ನು ಕೊಟ್ಟಿದೆ. ೧೮೮೫ರಲ್ಲಿ ಇಲ್ಲಿಯೇ ಸಭೆ ಜನ್ಮ ತಾಳಿತು, ಆ ಕಾಲದ ಅಧ್ಯಕ್ಷರಾಗಿ, ೧೮೮೯ನೇ ಇಸ್ವಿಯಲ್ಲಿ ನಡೆದ ಸಭೆಯ ಅಧ್ಯಕ್ಷರಾಗಿದ್ದರು. ಇಂದಿನ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆ ಇವರ ಹಿಂದಿನ ತಲೆಮಾರಿನವರಲ್ಲಿ ಒಕ್ಕಲಿಗರು. ಇದರಿಂದ ಶ್ರೀ। ವಿಠ್ಠಲಭಾಯಿ ಪಟೇಲ, ದೇಶಪ್ರಿಯ ಸೇನಗುಪ್ತ, ಡಾ। ಅನ್ಸಾರಿ ಮೊದಲಾದವರಿಗೆ ನಿರ್ದಯ ಕಾಲನು ಅಪಹರಿಸಿದ್ದಾನೆ. ಆದರೆ ಅವರು ಮಾಡಿದ ಲೋಕಸೇವೆಯ ಸ್ಮರಣೆ ನಾವು ಇಂದು ಮುಂದುವರಿಸುತ್ತೇವೆ. ಈಗ ರಾಷ್ಟ್ರೀಯ ಸಭೆಯ ಧ್ಯೇಯವು ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವಾಯತ್ತತೆಯಲ್ಲ, ಆದರೆ ಪೂರ್ಣ ಸ್ವರಾಜ್ಯವಾಗಿದೆ. ಅದರ ಪ್ರಾಪ್ತಿಗಾಗಿ ಅಹಿಂಸೆ, ನಿಷೇಧದ ಉಪಾಯಗಳನ್ನು ತ್ಯಜಿಸಿ ಯೋಗ್ಯ ಮತ್ತು ಸಭ್ಯ ಪ್ರತ್ಯಕ್ಷ ಉಪಾಯಗಳನ್ನು ಕೈಕೊಂಡಿದೆ. ಸತ್ಯಾಗ್ರಹವನ್ನಾಕ್ರಮಿಸಿ ಯುವಕರಿಗೆ ಮಾಡಿದ ಬಹಿಷ್ಕಾರವೂ ಟಿಳಕ ಸ್ವರಾಜ್ಯ ನಿಧಿಗೆ ಕೂಡಿಸಿದ ೩೦ ಲಕ್ಷ ರೂಪಾಯಿಗಳೂ, ಮುಂಬಯಿಯು ಈ ಕಾರ್ಯದಲ್ಲಿ ಮಾಡಿದ ಸಾಹಸವೂ ಚಿರಸ್ಮರಣೀಯವಾಗಿವೆ. ಲಾಹೋರ ರಾಷ್ಟ್ರೀಯ ಸಭೆಯಲ್ಲಿ ಆದ ನಿರ್ಣಯದಂತೆ, ಪ್ರಾರಂಭಿಸಿದ ಸತ್ಯಾಗ್ರಹದ ಕಾರ್ಯಕ್ರಮದಲ್ಲಿ ಮುಂಬಾಪುರದವರು ಕೈಕೊಂಡ ಉಪಕ್ರಮಗಳಿಂದ ರಾಷ್ಟ್ರೀಯ ಸಭೆಗೆ ಪ್ರಾಪ್ತವಾದ ದಿಗ್ವಿಜಯವು ಜಗತ್ಪ್ರಸಿದ್ಧವಿದೆ. ಅಭೂತಪೂರ್ವ ಮೆರವಣಿಗೆಗಳಿಂದ ಸ್ವಾತಂತ್ರ್ಯ ಸಂಗ್ರಾಮದ ಪ್ರಚಾರ ಮಾಡಲಾಯಿತು. ಲೋಕಮತವು ಜಾಗೃತವಾಗಿತ್ತು. ಅಧಿಕಾರಿಗಳ ಅಧಿಕಾರವು ನಡೆಯದೆಂದು ಇವುಗಳ ಮೇಲಿಂದ ಸಿದ್ಧವಾಯಿತು. ಹಿಂಸಾತ್ಮಕ ಪೋಲೀಸರಿಗೂ, ಅಹಿಂಸಾತ್ಮಕ ಸತ್ಯಾಗ್ರಹಿಗಳಿಗೂ ನಡೆದ ಕದನಗಳಲ್ಲಿ ಅಹಿಂಸಾವಾದಿಗಳು ಪಡೆದ ವಿಜಯಶ್ರೀಯನ್ನು ಇಂದಿಗೂ ಯಾರೂ ಮರೆಯರು. ನೆಲ್ಲೂ ಪುರ ದಿನ, ಝೇಂಡಾ ವಂದನ, ಬೋರಿಬಂದರ ಮೆರವಣಿಗೆ, ವಡಾಲಾ ಉಪ್ಪಿನ ಆಗರಗಳ ಮೇಲಿನ ದಾಳಿ ಇವುಗಳಿಂದ ರಾಷ್ಟ್ರೀಯ ಸಭೆಯವರು ಪೋಲೀಸರಿಗೆ ಸೋಲಿಸಿದರು. ಪಿಕೆಟಿಂಗಿನಿಂದ ಮಾಡಿದ ವಿದೇಶೀ ಸರಕುಗಳ ಬಹಿಷ್ಕಾರದಿಂದ ರಾಷ್ಟ್ರೀಯ ಸಭೆಯ ಸಂಗ್ರಾಮಕ್ಕೆ ಕಳೆಯೇರಿತು. ಸರಕಾರವು ಕೈಕೊಂಡ ದಬ್ಬಾಳಿಕೆಯಿಂದ ರಾಷ್ಟ್ರೀಯ ಸಭೆಯ ಗೌರವವು ಹೆಚ್ಚಿತಲ್ಲದೆ ಕುಗ್ಗಲಿಲ್ಲ. ನೂರಾರು ಜನರಿಗೆ ಗಾಯಗಳಾದಾಗ್ಯೂ ರಾಷ್ಟ್ರೀಯ ಸಭೆಯ ಕಾರ್ಯಕ್ರಮಗಳಲ್ಲಿ ಸಾವಿರಾರು ಜನರು ಮುಂದಾಗಿ ಬರುತ್ತಿದ್ದರು, ಪ್ರಾಣಾರ್ಪಣ ಮಾಡಲಿಕ್ಕೂ ಹಿಂಜರಿಯುತ್ತಿದ್ದಿಲ್ಲ. ಸ್ವಾತಂತ್ರ್ಯ ಯಜ್ಞಕುಂಡದೊಳಗೆ ಬೊರಿಬಂದರದಲ್ಲಿ ಧ್ವಜ ಹಿಡಿದು ಹಂಜೀವನ ಲಾಲಜಿಯು ಪ್ರಾಣಾಹುತಿ ಕೊಟ್ಟನು. ವರಳೀ ಜವಳಿಯ ಬಹಿಷ್ಕಾರ ಕಾರ್ಯದಲ್ಲಿ ಕಾಳಬಾದೇವಿಯ ಮಾರ್ಗದ ಮೇಲೆ ಶ್ರೀ। ಬಾಬು ಗೇನು ಎಂಬವನು ಮೋಟರಿನಡಿ ಬಿದ್ದು ಆತ್ಮಾರ್ಪಣ ಮಾಡಿದನು, ಕ್ರಿಸ್ಮಸ್ ರೋಡಿನ ಮೇಲೆ ಶಾಂತಿಸಂಕರನು ಪೋಲೀಸ ಬಡಿಗೆಗೆ ತುತ್ತಾದನು. 'ಮಾಯ ಪೂರದ ಮುಂಬಾಪುರಿಯು' ಅಂದು ಜನರಿಗೆ ಕಂಡಿರಬೇಕೋ? ಆಹುದು, ಸ್ವಾತಂತ್ರ್ಯಪ್ರಾಪ್ತಿಗಾಗಿ ಪುಂಗರು ಅರ್ಪಿಸಿದ ಬಲಿದಾನ ನೋಡಿ ಹಿಗ್ಗಿದರು. ಯುವ ಮಂಡಳಗಳ ಕಾರ್ಯ, ವಾನರ ಸೈನ್ಯ, ಸೇವಾದಳ, ಸ್ವಯಂಸೇವಕರು, ಇವು ಆ ಕಾಲದಲ್ಲಿ ಸಂಪೂರ್ಣವಾಗಿ ಕ್ರಾಂತಿ ಹೊಂದಿದವು. ಸ್ತ್ರೀಯರೂ ಮಾನರಕ್ಷಣೆಯ ಹಾದಿಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರದರ್ಶಿಸಿದ ಉತ್ಸಾಹವನ್ನೂ, ಪೋಲೀಸರ ಕಡೆಯಿಂದ ಹೊಂದಿದ ಕಷ್ಟಗಳನ್ನೂ ಮರೆಯುವಂತಿಲ್ಲ. ಅದರಿಂದ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ ಬುಲೆಟಿನ್ ಪತ್ರಿಕೆಯನ್ನು ಹೊರಡಿಸಿ ಮುದ್ರಣ ಶಾಸನಕ್ಕೆ ರಾಷ್ಟ್ರೀಯ ಸಭೆಯು ಸೆಡ್ಡು ಹೊಡೆಯಿತು. ಆ ಬುಲೆಟಿನವು ಗಾಂಧಿ-ಇರ್ವಿನ್ ಒಪ್ಪಂದದವರೆಗೆ ನಡೆಯಿತು. ಈ ಒಪ್ಪಂದವು ಆಗಿರುವಂತೆ ಇಲ್ಲಿಯ ನಿರಂಕುಶ ಅಧಿಕಾರಿಗಳ ಸತತ ಕಳ್ಳತನ ಇತ್ತು. ಅಂದಿಲ್ಲಿ ೧ ವರ್ಷದ ತನಕ ಗುಪ್ತವಾಗಿ ಹರಡಿದ ಈ ಪತ್ರಿಕೆ ಸತ್ಯಾಗ್ರಹ ಹೂಡುವ ಪ್ರಸಂಗ ಬಂತು. ಒಂದರ ಹಿಂದೊಂದು ದಬ್ಬಾಳಿಕೆಗಳು ಹೊರಟವು. ೬ ತಿಂಗಳ ತನಕ ರಾಷ್ಟ್ರೀಯರು ಬಳ್ಳೀ ವೀರ್ಯ ಪ್ರದರ್ಶಿಸಿದರು. ಮುಂದೆ ದುರ್ದೈವದಿಂದ ರಾಷ್ಟ್ರೀಯರೊಳಗೆ ಭಿನ್ನಾಭಿಪ್ರಾಯ ಪ್ರವೇಶಿಸಿತು. ಈ ಪ್ರಕಾರ ಕಾದಾಟದ ಆಸ್ಥಿರವು ಕಳೆಗುಂದಿದ ಹಾಗೆ ಸರಕಾರದ ರಾಜ್ಯಸುಧಾರಣಾ ಚಿತ್ರವೇ ಚಿತ್ರವು ಬದಲಾಗಿ ಈಗಂತು ಶ್ವೇತಪತ್ರ ರೂಪವಾಗಿದೆ. ಆ ಮೇಲೆ ಕೌನ್ಸಿಲು ಪ್ರವೇಶದ ಪ್ರಸ್ತಾಪ ಬಂದು ಗಾಂಧೀಜಿಯವರು ಪಾಟಣಾದಲ್ಲಿ ಕೊಂಗ್ರೆಸ ಪಾರ್ಲಿಮೆಂಟರಿ ಬೋರ್ಡಿಗೆ ಸಮ್ಮತಿ ಕೊಟ್ಟರು. ಕಾಂಗ್ರೆಸ್ಸಿನ ಮೇಲಿನ ಸರಕಾರಿ ಬಹಿಷ್ಕಾರವು ಕಡಿಮೆಯಾಯಿತು. ಇಂದಿಗೆ ರಾಷ್ಟ್ರೀಯ ಸಭೆಯು ಸ್ವಂತ ಪರಿಶ್ರಮದಿಂದ ಸಭೆ ಸೇರಲಿಲ್ಲ. ವಿರೋಧಕರ ಕೃಪೆಯಿಂದ ನಾವೀಗ ಸಭೆ ಸೇರಿದ್ದೇವೆ. ಸರಕಾರವು ಪ್ರಕಟಿಸಿದ ನಿರ್ಣಯವಾದರೂ ತೀರ ಸಂಕುಚಿತವಾಗಿದ್ದರೆ ರಾಷ್ಟ್ರೀಯ ಸಭೆಯೊಡನೆ ಬೇರೆ ಯಾವ ಬೇರೆ ಅದರ ಕೆ. ಡಿಯು-ಖಿದಮತಗಾರ, ಹಿಂದುಸ್ಥಾನಿ ಸೇವಾದಲ ಮೊದಲಾದ ಸಂಸ್ಥೆಗಳು ಇನ್ನೂ ಬೇಕಾಯಿದೇ ಶೀರ ಇವೆ. ರಾಷ್ಟ್ರಸೇವಕರು ಇನ್ನೂ ಪ್ರತಿಬಂಧದಲ್ಲಿದ್ದಾರೆ. ಪಂ। ಜವಾಹಿರಲಾಲರಿಗೆ ನಮ್ಮಲ್ಲಿ ಬಂದು ಸೇರಕೊಳ್ಳಲು ಸರಕಾರದ ಒಪ್ಪಿಗೆಯಿಲ್ಲ. ಅನ್ನಿಷ್ಟ ಪತ್ನಿಯ ಶುಶ್ರೂಷೆ ಮಾಡಲಿಕ್ಕೂ ಸರಕಾರದ ಅನುಗ್ರಹವಿಲ್ಲ. ರಾಷ್ಟ್ರವೀರ ಪಂಡಿತರ ಧೈರ್ಯವನ್ನು ಯಾರಿಗೂ ಎಳ್ಳಷ್ಟು ಕುಂದಿಸಲು ಭೂತಲದ ಮೇಲೆ ಸಾಧ್ಯವಿಲ್ಲ. ಸರಕಾರವು ಅವರ ಮೇಲೆ ಹೇರಿದ ಕಷ್ಟಗಳಿಂದ ಅವರ ಪರಾಕ್ರಮವು ಮತ್ತೂ ಪ್ರಖರವಾಗಿ ಪ್ರಕಾಶಿಸುವದು. ಕರ್ನಾಟಕ, ಗುಜರಾಥ, ಸಂಯುಕ್ತ ಪ್ರಾಂತ ಮುಂತಾದ ಗಡಿನಾಡುಗಳಲ್ಲಿ ಸತ್ಯಾಗ್ರಹಿಗಳನೇಕರು ಅಪಾರವಾದ ಕಷ್ಟ—ನಷ್ಟಗಳನ್ನನುಭವಿಸಿದ್ದಾರೆ. ಅವರ ಕಷ್ಟನಿವಾರಣೆಗಾಗಿ ರಾಷ್ಟ್ರೀಯ ಸಭೆಯು ಪ್ರಯತ್ನ ಮಾಡುವದು ಆವಶ್ಯವಿದೆ. ರಾಷ್ಟ್ರೀಯ ಸಭೆಯನ್ನು 'ಟೆರಿಟೋರಿಯಲ್ ಮೈದಾನ' ಸ್ಥಳದಮೇಲೆ ನೆರಿಸಬೇಕೆಂಬ ಮನಸ್ಸಿತ್ತು. ಈ ಸ್ಥಳ ಮಾಡುವದು ಪ್ರಶಸ್ತವಿತ್ತು. ಅದಕ್ಕೆ ಬೇಕಾಗುವ ಹಣವನ್ನು ಸಿದ್ಧಪಡಿಸಿದ್ದೆವು. ಆದರೆ ಮುಂಬಯಿ ಸರಕಾರವು ಆ ಸ್ಥಳ ರಾಷ್ಟ್ರೀಯ ಸಭೆಗಾಗಿ ಕೊಡಲೊಪ್ಪಲಿಲ್ಲ. ಈ ಸ್ಥಳದಿಂದ ಸರಕಾರಕ್ಕೆ ಯಾವದೇ ಪ್ರಯೋಜನವಿಲ್ಲ. ಜನರ ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿ ಸಮುದ್ರ ಹೂಳಿ ತಯಾರಿಸಿದ ಸ್ಥಳವಿದು. ಈ ಸ್ಥಳ ರಾಷ್ಟ್ರೀಯ ಸಭೆಯಂಥ ಲೋಕಪ್ರತಿನಿಧಿ ಸಂಸ್ಥೆಯ ಅಧಿವೇಶನಕ್ಕಾಗಿ ನಮ್ಮಿಂದ ದೊರಕಿಸಲಾಗಲಿಲ್ಲ. ಇದರ ಮೇಲಿಂದ ಸ್ವದೇಶದಲ್ಲಿ ನಮಗೆಷ್ಟು ಅಧಿಕಾರವುಂಟೆಂಬ ಸಂಗತಿ ಸಿದ್ಧವಾಗುತ್ತದೆ. ಆದೇ ಸರಕಾರಿ ಅಧಿಕಾರಿಗಳಿಗೆ, ಜುಗಾರಿ ಮುಂತಾದ್ದಕ್ಕೆ ಸಹ ಬೇಕಷ್ಟು ಪ್ರಶಸ್ತ ಸ್ಥಳ ಸಿಗುತ್ತದೆ. ಇದರಿಂದ ಸರಕಾರದ ಸಂಕಲ್ಪದಂತೆ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ನ್ಯೂನತೆ ಬರಲಿಲ್ಲ. ರಾಷ್ಟ್ರೀಯ ಸಭೆಯು ಹಿಮಾಲಯದ ಬೆಟ್ಟ ಪ್ರದೇಶದಲ್ಲಿ ಜರುಗಲಿ, ಕುಮಾರಿ ಭೂಶಿರದ ಉಸುಬಿನ ಗುಡ್ಡದ ಮೇಲೆ ಜರುಗಲಿ, ಸಾವಿರಾರು ಜನರು ಯಾತ್ರೆಯೆಂದು ಅಲ್ಲಿ ಬಂದೇ ಸೇರುವರು. ಮುಂಬಯಿ ಮ್ಯುನಿಸಿಪಾಲಿಟಿಯವರು ಸ್ವಾಗತ ಸಮಿತಿಯವರೊಡನೆ ಸರ್ವ ಪರಿಯಿಂದ ಸಹಕಾರ ಮಾಡಿ ಈ ಅಧಿವೇಶನದ ತಾಪತ್ರಯಗಳನ್ನು ಹಿಂದೆ—ಮುಂದೆ ಮಾಡಬೇಕಾಗಿ ಹಲವು ಸೂಚನೆಗಳು ಬಂದಿದ್ದವು. ಆದರೆ ಪಾಟಣಾ ಪಟ್ಟಣದಲ್ಲಿ ಸೇರಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ನಿರ್ಣಯವನ್ನು ಆಕ್ಷೇಪಿಸುವ ಕೌನ್ಸಿಲು ಸನ್ಯಾಸಿಗಳಿಗೂ, ಪಂ। ಮಾಲವೀಯರಂಥವರಿಗೂ ರಾಷ್ಟ್ರೀಯ ಸಭೆಯ ಅಭಿಪ್ರಾಯವನ್ನು ಮನಗಾಣಿಸಲು ಅನುಕೂಲವಾಗಬೇಕೆಂದು ಈ ಅಧಿವೇಶನವು ಈ ೩ ದಿನಗಳಲ್ಲಿಯೇ ಸೇರಬೇಕೆಂದು ಗೊತ್ತಾಯಿತು. ಪಂ। ಮಾಲವೀಯರವರು ನಿಷ್ಠೆಯ ರಾಷ್ಟ್ರೀಯ ಸಭಾಧಿಪತಿಗಳು. ಅವರು ಇಲ್ಲಿಯ ನಿರ್ಣಯಗಳನ್ನು ಮಾನ್ಯಿಸುವರೆಂಬ ಹಾರೈಕೆ. ಈ ಅಧಿವೇಶನದಿಂದ ಕೊಂಗ್ರೆಸ ಉಮೇದ್ವಾರರಿಗೇ ಮತ ಕೊಟ್ಟು ಅರಿಸಿ ಕಳುಹಲು ಸಹಜವಾಗಿ ಪ್ರಚಾರವಾಗುವಂತೆ ಇದೆ. ೧೯೩೦—೧೯೩೪ನೇ ಸಾಲುಗಳೊಳಗಿನ ಸರಕಾರದ ದೃಷ್ಟಿಕೋನವನ್ನು ನಾನೀಗ ಪರಾಂಬರಿಸುವೆನು. ಸತ್ಯಾಗ್ರಹ ನಡೆದಾಗ, ಸತ್ಯಾಗ್ರಹಕ್ಕೆ ತಡೆಹಾಕಿದ್ದಲ್ಲಿ ನಾವೆಲ್ಲರೂ ಕೂಡಿ ವಿಚಾರ ಮಾಡಿ ಸರ್ವಸಮ್ಮತವಾಗುವಂಥ ರಾಜ್ಯಯೋಜನೆಯನ್ನು ತಯಾರಿಸಬಹುದೆಂದು ಸರಕಾರವು ಜಾಹೀರಾತು ಹಚ್ಚುತ್ತ, ರಾಜನೀತಿಜ್ಞರೂ, ಉದಾರ ಮತವಾದಿಗಳೂ ಇದನ್ನು ನಂಬಿ ಕೊಂಗ್ರೆಸಿಗೆ ಹೇಳಿದರು. ಈ ಜಾಹೀರಾತು ಖರೇ ಸೋಗೆಂದು ರಾಷ್ಟ್ರೀಯ ಸಭೆಯ ಅಭಿಪ್ರಾಯವಿತ್ತು. ಈಗೇನು ಸತ್ಯಾಗ್ರಹವಿಲ್ಲ, ಆ ಜಾಹೀರಾತಿನಂತೆ ಈಗ ಸರಕಾರವು ನಡೆಯುತ್ತದೇನು? ಹಾಗೆ ನಡೆಯುವದಾಗ್ಯೂ ರಾಜನಿಷ್ಠರೂ, ನೇಮಸ್ತರೂ ಅವರೊಡನೆ ಸಹಕಾರ ಮಾಡುವದು ವಿಹಿತವೇನು? ದಬ್ಬಾಳಿಕೆಗೆ ಒಂದು ಆಧಾರ ಸಿಗಬೇಕೆಂದು ರಾಜ್ಯಸೂತ್ರಧಾರರು ಹೂಡಿದ ನಾಟಕ ಹೊರಹೊಮ್ಮುತ್ತದೆ. ಇದನ್ನು ಸ್ಪಷ್ಟವಾಗಿ ಪ್ರಕಟಿಸುವದಕ್ಕಾಗಿ ರಾಷ್ಟ್ರೀಯ ಸಭೆಯವರು ಕೌನ್ಸಿಲು ಪ್ರವೇಶವನ್ನು ಕೈಕೊಂಡಿದ್ದಾರೆ. ರಾಷ್ಟ್ರೀಯ ಸಭೆಯವರಿಗೆ ನೀವು ಮತ ಕೊಟ್ಟರೆ ಬ್ರಿಟಿಶರ ಗುಲಾಮಗಿರಿಗೆ ನೀವು ಮತ ಕೊಟ್ಟಂತೆಯೇ! ಜಾತೀಯ ನಿರ್ಣಯದ ಕುರಿತು ಬಹುಮಾನವರಿಂದ ಪ್ರಯೋಜನವಿಲ್ಲ. ನಮ್ಮ ಸ್ವಾಗತ ಸಮಿತಿಯಲ್ಲಿ ಜಾತಿನಿರ್ಣಯವಿಷ್ಟು ಜಾತಿಪ್ರಾತಿನಿಧ್ಯದ ಲಕ್ಷ್ಯವಿಲ್ಲ, ಆದಾಗ್ಯೂ, ಎಲ್ಲ ಜಾತಿಯವರೂ ಎಲ್ಲ ಪಂಥದವರೂ ತಮ್ಮ ಗುಣವೈಶಿಷ್ಟ್ಯದಿಂದ ಆರಿಸಿ ಬಂದಿರುತ್ತಾರೆ. ನನ್ನ ಸಮಾಜವು ತೀರ ಸಣ್ಣದು, ಆದಾಗ್ಯೂ ನಾನು ಸ್ವಾಗತ ಸಮಿತಿಯ ಅಧ್ಯಕ್ಷನಾಗಿ ನೇಮಿಸಲ್ಪಟ್ಟಿದ್ದೇನೆ. ಜಾತಿ ನಿರ್ಣಯದ ಕುರಿತು ಪಂಡಿತ ಮಾಲವೀಯ ಮತ್ತು ಶ್ರೀ। ಅಣೆ ಇವರೊಡನೆ ಉಂಟಾದ ಮತಭೇದದಿಂದ ಶತ್ರುಗಳಿಗೆ ಆನಂದವಾಗಿದೆ. ಆದರೆ ಪ್ರಶ್ನೆಯ ಮುಖ್ಯ ಮರ್ಮವನ್ನು ಪಂಡಿತಜಿಯವರು ಬಲ್ಲರು. ರಾಷ್ಟ್ರೀಯ ಸಭೆಯ ನಿರ್ಣಯವನ್ನು ಅವರು ಸಹ ಮನ್ನಿಸುವರೆಂದು ನಾನು ನಂಬಿದ್ದೇನೆ. ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ಅಲಿಪ್ತರಾಗುವ ಸಂಗತಿಯನ್ನು ತಿಳಿದು ಎಲ್ಲರೂ ದಿಙ್ಮೂಢರಾಗಿದ್ದಾರೆ. ರಾಷ್ಟ್ರೀಯ ಸಭೆಯವರು ಸ್ವತಂತ್ರ ವಿಚಾರ ಮಾಡಿ ಸ್ವತಂತ್ರ ನಿರ್ಣಯ ಕೈಕೊಳ್ಳಬೇಕೆಂ

ವೂ, ತಮ್ಮ ಸಾನ್ನಿಧ್ಯದಿಂದ ಆಚಾರ-ವಿಚಾರ ಸ್ವಾತಂತ್ರ್ಯಕ್ಕೆ ಉಂಟಾಗುವ ಪ್ರತಿಬಂಧವನ್ನು ತೊಲಗಿಸಬೇಕೆಂದೂ ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ಹೊರಗೆ ತೆಗೆದುಕೊಳ್ಳಲು ಪ್ರಯತ್ನಿಸಿದ್ದರೆ ಮಹಾತ್ಮರು ರಾಷ್ಟ್ರೀಯ ಸಭೆಯೊಳಗಿಂದ ಅಲಿಪ್ತರಾದರೂ ಪ್ರಜಾಹಿತಕಾರ್ಯ ಅರಿದಾಗಲು ಅವರು ಯಾವಾಗಲೂ ಸಿದ್ಧರಿದ್ದಾರೆ. ಮುಂದಿನ ಕಾರ್ಯಕ್ರಮವನ್ನು ನಾವು ನಿಶ್ಚಯಿಸಿಕೊಳ್ಳಬೇಕು. ಸಂಪೂರ್ಣ ರಾಷ್ಟ್ರಸ್ವಾತಂತ್ರ್ಯವೇ ನಮ್ಮ ಧ್ಯೇಯವಾಗಿದೆ. ಕಾಲಮಾನಕ್ಕನುಕೂಲವಾದ ಸಾಧನಗಳನ್ನು ನಾವು ಸ್ವೀಕರಿಸಿಕೊಳ್ಳತಕ್ಕದ್ದು, ಇದು ಬೇರೆ ಹೇಳಿಕೊಳ್ಳುವ ಕಾರಣವಿಲ್ಲ. ಮುಂದಿನ ಕಾರ್ಯಕ್ರಮದ ಯೋಜನೆ ಮಾಡುವ ಸಮಯವಿದು! ರಾಷ್ಟ್ರೀಯ ಸಭೆಯವರೂ, ಕೌನ್ಸಿಲು ಪ್ರವೇಶಕರೂ, ಕಾಂಗ್ರೆಸ ರಾಷ್ಟ್ರೀಯ ಪಕ್ಷದವರೂ, ಕಾಂಗ್ರೆಸ ಸಮಾಜಸತ್ತಾವಾದಿಗಳೂ ಒಟ್ಟಿಗೆ ಕೂಡಿ ವಿಚಾರ ಮಾಡಬೇಕು. ರಾಷ್ಟ್ರಕ್ಕೆ ಕಳೆದುಹೋದ ಸ್ವಾತಂತ್ರ್ಯವನ್ನು ಪುನಃ ಸಂಪಾದಿಸಲು ಯಾವ ಕಾರ್ಯಕ್ರಮ ಪ್ರಯೋಜನಕಾರಿಯೆಂಬುದನ್ನೇ ವಿಚಾರಿಸಬೇಕು. ರಾಷ್ಟ್ರೀಯ ಸಭೆಯು ಮಾಡಬೇಕಾದ ಕೆಲಸವು ಸಭೆಯಲ್ಲಿ ಸಂಕಲ್ಪ ಸಮ್ಮತ ಮಾಡುವದಲ್ಲಿಯೂ, ಸರಕಾರದ ತೊಂದರೆಗಳಿಂದಲೂ, ನಾಳೆಗಾಲದ ಮೂಲಕವಾಗಿಯೂ ಅಲ್ಲದ್ದಲ್ಲಿ ಗಲ್ಲಿಯ ನಗರವನ್ನು ನಾವು ಬೆಳೆಸಬೇಕಾಯಿತು. ಅರ್ಥಾತ್ ಮೊಗ್ಗಬ್ಬದ ಮೂಲಕ ಅಪೇಕ್ಷೆಯಂತೆ ದ್ರವ್ಯಸಹಾಯ ದೊರೆಯಲಿಲ್ಲ, ಆದಾಗ್ಯೂ, ಪರ್ತಕರೂ, ಅಭ್ಯಾಗತರೂ ಬಂದಿರುವರೂ ಎಲ್ಲರೂ ಸ್ವಾಗತ ಸಮಿತಿಗೆ ಅಂತಃಕರಣಪೂರ್ವಕ ನೆರವಾದರು. ಅವರೆಲ್ಲರಿಗೆ ನಾನು ಈ ಮೂಲಕ ಆಭಾರ ಮನ್ನಿಸುತ್ತೇನೆ. ಸ್ವಾತಂತ್ರ್ಯಕ್ಕಾಗಿ ನಾವು ತಮ್ಮೆಲ್ಲರ ಪ್ರಯತ್ನವಾಗಬೇಕೆಂದು ಬೇಡುತ್ತೇನೆ. ನಮ್ಮ ಕಾರ್ಯದಲ್ಲಿ ಜಗನ್ನಿಯಾಮಕನಾದ ಪರಮಾತ್ಮನು ಬುದ್ಧಿಯನ್ನು, ಶಕ್ತಿಯನ್ನು ಅನುಗ್ರಹಿಸಿ ಹರಸಲಿ ಎಂದು, ನನ್ನ ಭಾಷಣ ಮುಗಿಸುತ್ತೇನೆ.

ವಂದೇ ಮಾತರಮ್ !!

— ತ್ರಿವೇಂದ್ರಮ್‌ದೊಳಗಿನ ಅನಂತಶಯನ ದೇವರ ಕಳೆದ ದಿವಸ ೩ ಸಾವಿರ ಬಂಗಾರದ ಚೆಂಬು ಹತ್ತು ೧ ಲಕ್ಷ ರೂಪಾಯಿಗಳ ನಷ್ಟ. ದೇವಸ್ಥಾನದ ಗರ್ಭಗೃಹದಲ್ಲಿ, ಶ್ರೀ ದೇವರ ಮೂರ್ತಿಗಳಲ್ಲಿ ಏನೂ ಬಾಧೆಯಾಗಲಿಲ್ಲ. ವಾಹನಗಳೂ ಇತರ ಆಭರಣಗಳೂ ನಾಶವಾಗಿವೆ. ಸಭಾಮಂಟಪದ ಕೆಲಭಾಗಕ್ಕೆ ಬೆಂಕಿ ಹತ್ತಿ ಕಡಲಿತು. ಸಭಾಮಂಟಪದ ಮೇಲ್ಛಾವಣಿ ಸುಟ್ಟು ಹೋಯಿತು. ಬೆಂಕಿ ಹತ್ತಿದ ಸುದ್ದಿ ಹತ್ತಿರದೊಳಗೆ ತ್ರಾವಣಕೋರದ ಮಹಾರಾಜರೂ, ದಿವಾನರೂ ರಾತ್ರಿ ೧೧ ೧೨ ಘಂಟೆಯಾದಾಗ್ಯೂ ಸ್ವತಃ ಹೋಗಿ ಬೆಂಕಿ ನಂದಿಸಿದ ಬಗ್ಗೆ ವ್ಯವಸ್ಥೆ ಮಾಡಿದರು. ಮಾರನೇ ದಿನ ಬೆಳಿಗ್ಗೆ ಕಷ್ಟದಿಂದ ಬೆಂಕಿ ನಂದಿಸಿದ ಸೈನಿಕರಿಗೆ, ಪೋಲೀಸರಿಗೆ, ದಿನವರಿಗೂ, ಒಂದೋಂದು ಪೋಲೀಸನಿಗೆ ೫೦೦೦ ರೂಪಾಯಿಗಳ ಇನಾಮು ಕೊಟ್ಟಿದ್ದಾರೆ. ಅನಂತಶಯನದ ಮೂರ್ತಿ ಶ್ರೀ ಪದ್ಮನಾಭಸ್ವಾಮಿ ದೇವರು. ತ್ರಾವಣಕೋರ ಸಂಸ್ಥಾನದ ಒಡೆತನವೆಲ್ಲ ಶ್ರೀ ಪದ್ಮನಾಭಸ್ವಾಮಿ ದೇವರದು, ಮಹಾರಾಜರು ಬರೇ ಆಡಳಿತಗಾರರು, ಎಂಬ ಭಾವನೆಯಿಂದ ಶ್ರೀಮನ್ಮಹಾರಾಜರು ಕಾರಭಾರ ನಡೆಸುತ್ತಾರೆ. ಈ ದೇವಸ್ಥಾನವು ದಕ್ಷಿಣ ಹಿಂದುಸ್ಥಾನದ ಒಂದು ಐಶ್ವರ್ಯವಂತ ದೇವಸ್ಥಾನವು. ಮಹಾರಾಜರವರು ಪ್ರತಿ ವರ್ಷ ಸಾವಿರಾರು ರೂಪಾಯಿಗಳ ಕಾಣಿಕೆ ತೆರಬೇಕು. ಶ್ರೀ ದೇವರ ಭಂಡಾರದಲ್ಲಿ ಎಷ್ಟು ಚಿನ್ನ ತುಂಬಿಕೊಂಡಿದೆಯೆಂದು ಯಾರಿಗೂ ಪತ್ತೆ ಹತ್ತದು. ಕೋಠಿಗಳು ತುಂಬಿವೆ. ಸರ್ವಕಾಲದಲ್ಲಿಯೂ ನೂರಾರು ಜನರಿಗೆ ಬ್ರಾಹ್ಮಣಭೋಜನವಾಗುತ್ತಿದೆ. ಮಲಯಾಳದಲ್ಲಿ ಶ್ರೀಮನ್ಮಹಾರಾಜರವರು ಭೋಜನ ಹಾಕುವ ಏರ್ಪಾಡು ಮಾಡಿದ್ದಾರೆ. ಬ್ರಾಹ್ಮಣರಿಗೆ ದಕ್ಷಿಣೆಯೂ ಸಿಗುತ್ತದೆ. ನಂಬೂದ್ರಿ ಬ್ರಾಹ್ಮಣರ ಪ್ರಸ್ಥ ಹೆಚ್ಚು. ನಂಬೂದ್ರಿಗಳೆಂದರೆ ಶ್ರೀಮತ್ ಶಂಕರಾಚಾರ್ಯರ ವಂಶಜರು. ನಂಬೂದ್ರಿ ಬ್ರಾಹ್ಮಣರು ಬಹಳ ವಿದ್ಯಾವಂತರೂ ನಿಷ್ಠಾವಂತರೂ ಇರುತ್ತಾರೆ.

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ! ಯೋಗ್ಯವಾದ ಧಾರಣೆ!!

ಯು. ಶಿವಾ ಎಂಡ್ ಬ್ರದರ್ಸ,

ಒಟೋಮೊಬೈಲ ಇಂಜಿನಿಯರ್ಸ ಎಂಡ್ ಬೋಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶವರ್ಲೆಟ್, ಬ್ಯೂಕ, ಕ್ರೈಸಲರ, ಡಿಸೋಟೊ, ಡೋಜ್, ಡಿಸೋಟೊ, ಪ್ಲೈಮೌತ್, ಎಸೆಕ್ಸ, ಹಡ್ಸನ್, ಹ್ಯಾಂಡಿ, ಸ್ಯಾಕ್ಸನ, ಬಿ. ಎಸ್. ಎ., ಫೋರ್ಡ ವಿ, ಫೋರ್ಡ ಏ, ಮಾರಿಸ್, ಓವರ್‌ಲೆಂಡ್, ವಿಪೆಟ್, ಓಕ್ಲೆಂಡ್, ಫ್ಲಿಯೆಟ್, ವಿಲೀಸ, ಸ್ಟುಡಿಬೇಕರ, ರುಗ್ಬಿ, ಪ್ಲೈಮೌತ ಓವರ, ಹಿಂದೆ ಮೊದಲಾದ ಯಾವತ್ತೂ ಮೇಕರ್ಸುಗಳ ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ನಿಪುಣತೆಯ ದರದಿಂದಲೂ ಮಾಡಿಕೊಡುವೆವು. ಬೇಕಾದ ನ್ಯಾಶನ ಬೋಡ್ಯಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಇದಲ್ಲದೆ—

ಎಕ್ಸ್ಟ್ರಾ ಜನರಿಗೆ ಸುಲಭವಾಗಿ ನೀರು ಸೇಯುವ ಟಿನ್ನಿನ ಸಣ್ಣ-ದೊಡ್ಡ ನೀರಿನ ಟಾಕಿಗಳನ್ನು ತೆಗೆದು ಟಾಕಾದಲ್ಲಿ ಫಿಟಿಂಗ ಮಾಡಿಕೊಡುವೆವು, ಬೋಡಿಬಿಲ್ಡಿಂಗ, ಬೇಕಾದ ನಮೂನೆಯ ಗಾಡಿಗಳ ಬಾಂಕುಗಳೂ, ಕೊಟ್‌ಗಳೂ ಮಾಡಿಕೊಡುವೆವು, ಒದಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯ ಪ್ರೀಮಿಯಮ್ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರತ್ತುಗಳೂ ಬಹಳ ಸುಲಭ ಇವೆ, ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮ್ಯುಚುವಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ವಿಸ್ತೃತ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents – D.K NAYAK Bros
Honavar Agent – R V PRABHU Esq

K. PadmanabhaRao & Sons.
BELGAUM
Chief Agents for
Karnatak Districts & S M States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ,

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಪೋಲ್ಸಟ್ರ್ಯಾರಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಿಯಿಸಿದರೆ ಅದೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ್ ಕೇಸರಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೧-೦, ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವಿ. ಪಿ. ೦-೫-೦. ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

—ಜೀ. ಬೀ. ಲಿಮಿಟೆಡ್ ಪೋ. ಬಾ. ೫೧೦, ಮಾರ್ಕೆಟ್‌ನ ಮದರಾಸ

(Registered Trade Mark)



ಸಿದ್ದಾಪುರ ತಾಲೂಕಿನಲ್ಲಿ ಸೇರಿದ ರೈತರ ಸಭೆಯಲ್ಲಿ ಮಂಜೂರಾದ ಠರಾವುಗಳು.

[ತಾ. ೧೮-೧೦—೧೯೩೪]

೧. ತೀರ್ವೆ ಸೂಟ ಮತ್ತು ತಹಕೂಬ ಮಾಡುವ ಬಗ್ಗೆ ನಡೆಯುವ ಸರಕಾರ ಹಿಂದಿನ ಅಗವಾಡಿ ಸರಕಾರದ ಸಂಕಲ್ಪದಂತೆ ನಡೆಯುವದಿಲ್ಲ ವಸ್ತುಸ್ಥಿತಿಗೆ ವಿಪರೀತವಾಗಿ ನಡೆಯುತ್ತದೆ. ಈಗ ಬೆಳೆ ಸ್ಥಿತಿಯಲ್ಲಿ ನಿಂತಿದೆ. ಕಾರಣ ಸರಕಾರದಿಂದ ಪುನಃ ನ್ಯಾಯದಂತೆ ಆಣೆವಾರಿಯಾಗುವಂತೆ ವಿನಂತಿ ಮಾಡಿಕೊಳ್ಳತಕ್ಕದ್ದು.

[ಸೂಚಕರಾದ ರಾ| ದೊಡ್ಮನೆ ಕೃಷ್ಣಯ್ಯ ಹೆಗಡೆಯವರು ಆಣೆವಾರಿಯ ನಿಯಮಗಳನ್ನು ಸ್ಪಷ್ಟೀಕರಿಸಿ ಹೇಳಿದರು ಕಳೆದ ವರ್ಷ ತಹಕೂಬಾದ ಗ್ರಾಮಗಳಲ್ಲಿ ಮಾತ್ರ ರೈತರ ಪರವಾಗಿ ಪಂಚರನ್ನು ಹಾಜರಿಟ್ಟುಕೊಂಡು ಆಣೆವಾರಿಯಾಗಿರುವದಾಗಿಯೂ, ಉಳಿದ ಗ್ರಾಮಗಳಲ್ಲಿ ಈ ಪದ್ಧತಿ ಅನುಸರಿಸಲ್ಪಡಲಿಲ್ಲವಾಗಿಯೂ ಸೂಚಕರು ಹೇಳಿದರು. ರಾ। ಕಿಬ್ಬರ ಗಣೇಶ ಹೆಗಡೆ, ಹೊಸಕೊಪ್ಪ ಗಣೇಶ ಹೆಗಡೆ, ದೊಡ್ಮನೆ, ಅಡ್ಡಿತೋಟ ಇವರು ಸಮಯೋಚಿತ ಭಾಷಣ ಮಾಡಿದರು.]

೨ ಈ ವರ್ಷ ಬೆಳೆಯ ಮಾನ ಕಡಿಮೆ. ಕೊಳೆ ರೋಗದಿಂದ ಅಡಿಕೆ ಉದುರಿ ನಷ್ಟ ಜಾಸ್ತಿ ಇದೆ. ೩-೪ ವರ್ಷಗಳಿಂದ ಬೆಳೆಯಿಲ್ಲದ ರೈತರಿಗೆ ಸಂಕಟ. ಈ ವರ್ಷ ಜೀವನ ನಡೆಸುವದು ಕಠಿಣ ಆದರಿಂದ ತೀರ್ವೆಯನ್ನು ಚತುರ್ಥಾಂಶದಿಂದ ಅರ್ಧಾಂಶದವರೆಗೆ ತಹಕೂಬ ಮಾಡಬೇಕು ತಗಾವಿ ವಸೂಲಿಯ ಕ್ರಮ ನಡೆಯಕೂಡದು ಪ್ರೋತ್ಸಾಹನ ಯೋಜನೆಯ ಮೇರೆಗೆ ಸೂಟ ಆಗಬೇಕು. ೩-೪ ವರ್ಷಗಳಿಂದ ತಹಕೂಬ ಆದ ತೀರ್ವೆ ಸೂಟ ಆಗಬೇಕು. ಈ ಪ್ರಕಾರ ಸರಕಾರದ ಕಡೆ ವಿನಂತಿಸಿಕೊಳ್ಳತಕ್ಕದ್ದು

[ಸೂಚಕರಾದ ರಾ| ಕಿಬ್ಬರ ಗಣೇಶ ಹೆಗಡೆಯವರು ರೈತರ ದುಃಸ್ಥಿತಿಯನ್ನು ವಿವರವಾಗಿ ತಿಳಿಸಿ ಹೇಳಿದರು. ೫-೬ ವರ್ಷಗಳಿಂದ ಕೊಳೆಗೆ ಗತಿಯಿಲ್ಲದೆ ಜನರು ಪವಿತ್ರವಾದ ಸಂಗ್ರಹದೊಡನೆಯಿದ್ದ, ಆಪದ್ಧನ ರೂಪದಲ್ಲಿದ್ದ ಚಿನ್ನ-ಬೆಳ್ಳಿಯ ದಾಗಿನಗಳನ್ನು ಮಾರಾಟ ಮಾಡಿ ಜೀವಿಸಿದರು, ಹಲವರು ಕಂಚು-ತಾಮ್ರದ ಪಾತ್ರೆ, ದನ-ಕರುಗಳನ್ನು ಮಾರಾಟ ಮಾಡಿ ಹೊಟ್ಟೆ ಹೊರಕೊಂಡರು. ಈಗ ಮಾರಲಿಕ್ಕೆ ಜಿಂದಗಿ ಇಲ್ಲ ಉತ್ಪನ್ನವಂತೂ ಕೇಳಬೇಡಿ. ತೀರ್ವೆ ಕೊಟ್ಟರೆ ಊಟಕ್ಕೆ ಇಲ್ಲ. ಹಿಂದೆ ತಹಕೂಬಾದ ತೀರ್ವೆ-ತಗಾವಿ ತೀರಿಸಲಿಕ್ಕೆ ಮಾರ್ಗವಿಲ್ಲ. ೩-೪ ವರ್ಷಗಳಿಂದ ಭೂಮಿಗೆ ಗೊಬ್ಬರ ಇಲ್ಲದೆ ಕೊಳೆ ಬೆಳೆಯಿತು ಇಂಥ ಪ್ರಸಕ್ತಿಯಲ್ಲಿ ಬಡ ಪ್ರಜೆಗಳನ್ನು ದಯಾಘನ ಸರಕಾರವೇ ಕಾಯಬೇಕು. ರಾ| ಕೃಷ್ಣಯ್ಯ ಹೆಗಡೆ ದೊಡ್ಮನೆ ಇವರು ಅನುಮೋದನೆ ಕೊಟ್ಟರು]

೩ ಹಲವು ಗ್ರಾಮಗಳಲ್ಲಿ ಗೋಚರಾವಿಗೆ ಸ್ಥಳದ ಕೊರತೆ ಇದ್ದಿದ್ದ ದನ-ಕರುಗಳನ್ನು ಮಾಲ್ಕಿ ಸ್ಥಳಗಳಲ್ಲಿಯೇ ಮೇಯಿಸುತ್ತಾರೆ ಆದ ಕಾರಣ ಹಿಂದಿನ ಗೋಚರಾವ ಫೀ ಮಾಫಿ ಆಗಬೇಕು

[ಸೂಚಕರಾದ ರಾ| ರಾಮಚಂದ್ರ ಮಂಜಯ್ಯ ಹೆಗಡೆ ಮ ವಳ್ಳಿ ಇವರು ನುಡಿದದ್ದೇನಂದರೆ— ಗೋಚರಾವಿಗೆ ಬಿಟ್ಟ ಮೈದಾನದ ಜಂಗಲು ೨ ಮೈಲು ಆಚೆ-ಈಚೆ ಇದೆ ಅಲ್ಲಿ ದನಗಳು ಎಂದೂ ಮೇಯ ಹೋಗುವದಿಲ್ಲ ಅಲ್ಲಿ ಹೋದಲ್ಲಿ ಹುಲಿಗೆ ಹೊಡೆಯಬಹುದೆಂದು ನಾನು ಪ್ರೈವೇಟ, ಆಫೀಸರಿಗೆ ತಿಳಿಸಿದೆ. ಆದರೆ ಅವರು ಆ ಮಾತನ್ನು ಧಿಕ್ಕರಿಸಿ ಕೊಟ್ಟಿಗೆಯೊಳಗಿನ ದನ-ಕರುಗಳ ಲೆಕ್ಕದಂತೆ ಗೋಚರಾವ ಫೀಯನ್ನು ವಸೂಲ ಮಾಡಿದರು ರಾ, ಹೊಸಕೊಪ್ಪ ಗಣೇಶ ಹೆಗಡೆಯವರು ಅನುಮೋದಿಸಿದರು]

೪ ಒಂದು ಸರ್ವೆ ನಂಬರದಲ್ಲಿ ಬೇರೆ ಬೇರೆ ಮಾಲೀಕರಿದ್ದು ಅವರವರ ಹಕ್ಕಿನ ಸ್ಥಳ ಬೇರೆ ಬೇರೆಯಾಗಿರುತ್ತದೆ. ಅವಕ್ಕೆ ಭಿನ್ನ ಭಿನ್ನ ಪೋಟಹಿಸ್ಸೆಗಳೂ ಆಗಿರುತ್ತವೆ. ಒಬ್ಬ ಮಾಲೀಕರು ತಮ್ಮ ಹಕ್ಕಿನ ಸ್ಥಳದ ತೀರ್ವೆ ಕೊಡದಿದ್ದಲ್ಲಿ ಇಡೀ ನಂಬರ ಸರಕಾರ ಜಪ್ತ ಮಾಡೋಣಾಗುತ್ತದೆ. ಈ ಅನ್ಯಾಯ ದೂರ ಪಡಿಸಬೇಕು

[ಸೂಚಕರಾದ ರಾ| ಹೊಸಕೊಪ್ಪ ರಾಮಯ್ಯನವರು ಈ ಕ್ರಮದಿಂದ ಉಂಟಾದ ಅನ್ಯಾಯವನ್ನು ನಿವೇದಿಸಿದರು ಸರಕಾರವು ಪೋಟಹಿಸ್ಸಾ ಅಳತೆ ಮಾಡಿ ಅದರ ಖರ್ಚನ್ನು ನಮ್ಮಿಂದ ಪ್ರತ್ಯೇಕ ವಸೂಲ ಮಾಡುತ್ತಿರುವಾಗ ಈ ಪ್ರಕಾರ ಒಬ್ಬರ ತಪ್ಪಿಗೆ ಮತ್ತೊಬ್ಬರಿಗೆ ನಷ್ಟಪಡಿಸುವದು ಅನ್ಯಾಯ ಎಂದರು ಇದಕ್ಕೆ ರಾ| ಅಡವಿತೋಟ ಗಣೇಶ ಭಟ್ಟರವರು ಅನುಮೋದಿಸಿದರು.

ತಾ. ೧೯—೧೦—೧೯೩೪.

[ಈ ಹೊತ್ತು ರಾವಸಾಹೇಬ ಚನ್ನಬಸಪ್ಪಾ ಹೆಗ್ಗೋಡನವರನ್ನೆ ಇವರು ಸಭೆಗೆ ಚಿತ್ತೈಸಿದ್ದರು. ಅವರ ಸತ್ಕಾರವಾದ ಬಳಿಕ, ಸಭಾಕಾರ್ಯ ಮುಂದರಿಯಿತು]

೫ ರೈತರ ಮೇಲೆ ಸಾಲದ ಹೊರೆ ಬೆಳೆದಿದೆ ಅದರಿಂದ ಧನಕೋಶದ ಕಡೆಯಿಂದ ಪರಿಸ್ಥಿತಿಗನುಸರಿಸಿ ಸೂಟ ಇಲ್ಲವೆ ಕಂತುಬಂದಿಯಿಂದ ಸುಗಮ ಪರಿಹಾರದ ಯೋಜನೆ ಮಾಡಿಸಿಕೊಳ್ಳಬೇಕು. ಕೌನ್ಸಿಲು ಸಭಾಸದರ ವಿದ್ಯಮಾನ ಪ್ರಯತ್ನ ಮಾಡಬೇಕು. ಕೋರ್ಟ ಡಿಕ್ರಿಗಳ ವಸೂಲಿಯ ಕ್ರಮ ಈ ವರ್ಷದ ಮಟ್ಟಿಗೆ ತಹಕೂಬ ಆಗುವಂತೆ ಸಾವಕಾರರಿಗೂ, ಸರಕಾರಕ್ಕೂ ವಿನ್ನೈಸಿಕೊಳ್ಳಬೇಕು.



ಡಾ| ಹಳಕಾರ ಇವರ

ಕುಟುಂಬ ವೈದ್ಯ

ಎಂದರೆ—

ಹುಡುಗರು ಮಕ್ಕಳು ಇದ್ದ ಮನೆಯಲ್ಲಿ ಆಗುವ ಸಾಮಾನ್ಯ ಬೇನೆಗಳಿಗೆ ತಾತ್ಕಾಲಿಕ ಔಷಧ ಪೂರೈಸುವ ಪೆಟ್ಟಿಗೆ

ಜ್ವರ, ಕೆಮ್ಮು, ದಮ್ಮು, ವಾಯುವಿಕಾರ, ಅತಿಸಾರ, ಗ್ರಹಿಣಿ ಮೊದಲಾದ ರೋಗಗಳ ಮೇಲೆ ಅವಶ್ಯವಾದ ಮದ್ದಿನ ಸಂಗ್ರಹವಿದೆ.

ಇದಲ್ಲದೆ ರಕ್ತಿಸ್ರಾವ, ತಲೆನೋವು, ಬಾಲಗ್ರಹ, ಹುಣ್ಣು, ಕಡಿದ ಗಾಯಗಳಿಗೆ ಮತ್ತು ಗಜಕರ್ಣ ಇವುಗಳಿಗೆ ಅವಶ್ಯವಾದ ಉತ್ಕೃಷ್ಟ ಗುಣಕಾರಿ ಮದ್ದುಗಳು ಈ ಪೆಟ್ಟಿಗೆಯಲ್ಲಿವೆ

ಬೆಲೆ ರೂಪಾಯಿ ೩ ಮಾತ್ರ

ಡಾ| ಎಸ್. ಕೇ. ಭಟ್ಟ ಹಳಕಾರ,

ಎಲ್. ಸಿ ಎಮ್ ಎಸ್. ಮತ್ತು ಎ ಸ್ಸಿ., (ಮೈಸೂರ)

ಕುಮಟಾ. (ಉ. ಕನ್ನಡ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಕಂಪನಿ.

ಪಾಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ ಸೂ ' ಇಂಪೆರ್ಸ್ಟಿಯಲ್ ವಿಮೆ ' ಎಂಬ ' ರೂಪಾಯಿ ಪಾಲಿಸಿಗಳ ' ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಏಜಂಟರು ಬೇಕು !

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುತ್ತದೆ.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—

ಪ್ರಭಾಕರ ಕಂಪನಿ, 415 ಕೇಳ ಮೆಮನ್ ರಸ್ತೆ, ಮುಂಬಯಿ.

[ರಾ| ಕಿಲಾರ ಗಣೇಶ ಹೆಗಡೆ ಸೂಚನೆ, ರಾ| ಹೋಬಳಿ ಗಣಪಭಟ್ಟರ ಅನುಮೋದನೆ]

೬ ಹಿಂದ ಸಂಪನ್ನ ಸ್ಥಿತಿಯಲ್ಲಿದ್ದಾಗ ಪ್ರವಾಸ ನ ಧರ್ಮ, ವಂತಿಗೆ, ಸರತಿ, ಸಂಭಾವನೆ ಎಂಬ ಧರ್ಮ ಕೊಡುವ ಪದ್ಧತಿ ಇತ್ತು. ೧ ವರ್ಷದ ತನಕ ಈ ಪದ್ಧತಿಯನ್ನು ನಿಲ್ಲಿಸಬೇಕು ಕುಂಟ-ಕುರುಡ ಮೊದಲಾದ ಅಂಗಹೀನರಿಗೆ ಹೊರತು ಪಡಿಸಿ ಉಳಿದವರಿಗೆ ಭಿಕ್ಷೆ ಕೊಡದೆ ದುಡಿದು ಜೀವನ ನಡಿಸುವಂತೆ ಉಪದೇಶ ಮಾಡಬೇಕು

[ಸೂಚಕರಾದ ರಾ| ಕಿಲಾರ ಗಣೇಶ ಹೆಗಡೆಯವರು ನುಡಿದದ್ದೇನೆಂದರೆ— ವಂತಿಗೆ, ಸರತಿ, ಸಂಭಾವನೆ ಕೊಡುವ ಕಾಲ ಇದಲ್ಲ. ಈಗಿನ ಭಿಕ್ಷಾ ಪದ್ಧತಿಯಿಂದ ನಿರುದ್ಯೋಗಿಗಳಿಗೂ, ವ್ಯಸನಿಗಳಿಗೂ ತುಂಬಾ ಸಹಾಯ ಮಾಡಿದಂತಾಗುತ್ತದೆ. ಇದು ಪುಣ್ಯವಲ್ಲ, ಪಾಪ ವೇ| ನಿಲೆಮಾಂವ ಹೋಬಳಿ ಗಣಪಭಟ್ಟರು ಧರ್ಮದ ವ್ಯಾಖ್ಯೆ ಹೇಳಿದರು. ಅನ ಪ್ರಯದಿಂದ ಸಮಾಜದ ಅಪಕರ್ಷವಾಗಿದೆ, ಆದರಿಂದ ಇಂಥ ಧರ್ಮ ನಿಲ್ಲಿಸಿ ಸಮಾಜದ ಉತ್ಕರ್ಷ ಸಾಧಿಸಬೇಕು ವೇ| ಎಲೂಗಾರ ಗಜಾನನ ಭಟ್ಟರೂ, ರಾ| ಹೂವಿನಮನೆ ತಿಮ್ಮಯ್ಯ ಹೆಗಡೆರೂ, ರಾ| ಅಳಗೋಡ ತಿಮ್ಮಯ್ಯ ಹೆಗಡೆರೂ ವಿರೋಧಿಸಿದರು ಹಿರಿಯರು ಪ್ರಾಸ್ತ್ರ ಮಾಡಿದ ಧರ್ಮ, ಸರತಿ, ಸಂಭಾವನೆಗಳನ್ನು ನಿಲ್ಲಿಸಿ ಪಾಶ್ಚಾನ ಅಪ ನಾರ ಮಾಡಿದ್ದರಿಂದ ಪಾಪಕ್ಕೆ ಎಷ್ಟುಕ್ಕೂ ಗುರಿಯಾಗ ಬಾರದೆಂದು ಕಡುತರವಾಗಿ ವಿರೋಧಿಸಿದರು. ವೇ| ಗಣಪತಿ ಚಿದಂಬರ ಜೋಯಿಸರೂ, ಆಡವಿತೋಟದ ದೇವರುಭಟ್ಟರೂ, ನೆಲಮಾಂವ ಗಣಪಭಟ್ಟರೂ ಠರಾವಿಗೆ ಬೆಂಬಲ ಕೊಟ್ಟರು. ಧರ್ಮ ಕೊಳ್ಳುವವರು ನಾವಾಗಿ ಈ ಠರಾವು ನಮ್ಮ ಸ್ವಾರ್ಥಕ್ಕೆ ವಿರುದ್ಧವಿದ್ದಾಗ್ಯೂ ಹೀಗೆ ಅಪ್ರಿಯವಾಗುವದು. ತನಗ ಇಷ್ಟವಿಲ್ಲವಾಗಿಯೂ, ಹೀಗೆ ಈ ಸ್ಥಿತಿಯಲ್ಲಿ ಧರ್ಮ ಕೊಡ-ಕೊಳ್ಳುವದು ಅಧಃಪತನವೆಂದೂ, ಇಂಥ ಧರ್ಮ ಸ್ವೀಕಾರ ಮಾಡಲು "ಮನೋದೇವತೆ ಒಪ್ಪುವದಿಲ್ಲವಾಗಿಯೂ ನುಡಿದರು. ವಾದ ಬೆಳೆಯುತ್ತ ನಡೆಯಿತು. ಆಗ ರಾ| ರಾಮಚಂದ್ರ ನಾರಾಯಣ ಭಟಕಳಿಕರರವರು ಐಕ್ಯಮತ್ಯದ ಉಪದೇಶ ಮಾಡಿದರು ಒಡಕು ಮಾಡಿಕೊಳ್ಳಬೇಡಿ ಅದರಿಂದ ಕ್ಷೇಮವಿಲ್ಲ, ನಾವು ಒಕ್ಕಟ್ಟಾಗಬೇಕು, ಈಗಿನ ಪ್ರಸಂಗ ಕಠಿಣವಿದೆ, ಅನೇಕರು ಉಪವಾಸಬೀಳುತ್ತಿದ್ದಾರೆ. ಆದರಿಂದ ಕೆಲ ಕಾಲದ ವರೆಗೆ ಈ ಧರ್ಮ ನಿಲ್ಲಿಸಬೇಕು ಎಂಬರ್ಥದ ಠರಾವನ್ನು ಮಾಡಿರಿ ಎಂದು ಮಧ್ಯಸ್ಥಿಕೆ ಸೂಚಿಸಿದಂತೆ ಮೂಲ ಠರಾವಿನಲ್ಲಿ ತಿದ್ದುಪಡಿಯಾಗಿ ಮೇಳ್ಯಾಣಿಸಿದ ಠರಾವು ಮಂಜೂರಾಯಿತು.

೭ ಅಡವಿ ಬೆಳೆದು ಕಾಡು ಮೃಗಗಳ ಉಪಟಳ ವಿಪರೀತ; ಅದರಿಂದ ಜನವಸ್ತಿಗೆ ಹೊಂದಿಕೆಯಾಗಿರುವ ಬೆಟ್ಟ ಕಡಿದು ಕುಮರಿ ಸುಡಲಿಕ್ಕೂ, 'ಸ್ಟ್ರೀಪ್' ಕಡಿಯಲಿಕ್ಕೂ ಅನುಕೂಲತೆ ಮಾಡಿಕೊಡಬೇಕು

[ಸೂಚಕರು ಬಡವಿತೋಟದ ರಾ| ಗಣೇಶ ಭಟ್ಟರು ಅನುಮೋದಕರು ರಾ| ಸೋನಿನಕೊಪ್ಪದ ರಾಮಯ್ಯನವರು.]

೮. ಈ ಸಭೆ ಸೇರುವ ಸಂಗತಿ ಈ ತಾಲೂಕಿನ ಯಾವತ್ತು ಭಾಗಗಳಿಗೆ ತಪ್ಪಿಲಿಲ್ಲ, ಆದರಿಂದ ಎಲ್ಲ ಮುಂದಾಳುಗಳಿಗೆ ಬರಲಾಗಲಿಲ್ಲ ಕಾರಣ, ಮಾರ್ಗಶೀರ್ಷ ವದ್ಯ ೫ ಮಿ ಬುಧವಾರ ತಾ. ೨೬-೧೨-೩೪ ರ ಸೇಗೆ ವೈದಿಕ ವರ್ಗದ ಮತ್ತೊಂದು ಮಹಾ ಸಭೆ ಸೇರಿಸಬೇಕು ಈ ಸಭೆಯ ವ್ಯವಸ್ಥೆಯನ್ನು ಈ ಕೆಳಗೆ ಕಾಣಿಸಿದ ಐವರು ನಡಿಸತಕ್ಕದ್ದು. ೧ ರಾವಸಾಹೇಬ ಮೆಗ್ಗೀಹಮನೆ ಚನ್ನಬಸಪ್ಪ ಗೌಡರು, ೨ ರಾ| ದೊಡ್ಮನೆ ಕೃಷ್ಣಯ್ಯ ಹೆಗಡೆರು, ೩ ಕಿಲಾರ ಗಣೇಶ ಹೆಗಡೆರು, ೪ ಹಗ್ಗರ ಶಾಲಿಶಾಯ್ಕರು, ೫ ರಾಮಚಂದ್ರ ನಾರಾಯಣ ಭಟಕಳಿಕರರು.

ಈ ಪ್ರಕಾರ ಠರಾವುಗಳಾದ ಬಳಿಕ, ಅಧ್ಯಕ್ಷರಾದ ರಾ| ಮಹಾಬಲೇಶ್ವರ ಕೃಷ್ಣಯ್ಯ ಹೆಗಡೆ ಕೊಡಸರ ಇವರ ಆಭಾರಮನ್ನಣೆ ಮಾಡಲಾದ ಠರಾವು ಗಳಾದ ಬಳಿಕ ಸಭೆಯು ವಿಸರ್ಜನ ಹೊಂದಿತು.

ಜಾಹೀರ ನೋಟೀಸು.

ನಮ್ಮ ತಂದೆ ಸೈಯ್ಯದ ಇಬ್ರಾಹೀಮ ವಲ್ಲದ ಸೈಯ್ಯದ ಇಸೂಫ, ಪ್ರಾಯ ವರ್ಷ ೭೫ ಇವನಿಗೆ ಅಜಮಾಸ ೬ ತಿಂಗಳ ಲಾಗ್ಯಾತು ಬಹಳೇ ಮಾಡಿ ಭ್ರಾಂತಿ ಆಗಿ ಚಿತ್ತಭ್ರಮ ಆಗಿರುತ್ತದೆ. ಆವನು ಸಾಹಕ್ಕ ಸ್ಥಿರ-ಚರ ಆಸ್ತಿ ಪರಾಧೀನ ಮಾಡಲು ತೊಡಗಿದ್ದಾನೆ ಈ ಪ್ರಕಾರ ಸ್ಥಿತಿಯುಳ್ಳ ಆತನಿಂದ ಯಾರೂ ಏನೂ ಕ್ರಯ ಪತ್ಯೆರೆ ಏನೂ ಹಕ್ಕು ಮಾಡಿಕೊಂಡಲ್ಲಿ ಅದು ಸಿಂದು ಆಗಲಾರದು. ತಿಳಿಯಬೇಕು

ಕುಮಟಾ, ೩೧—೧೦—೧೯೩೪

ಸೈಯ್ಯದ ಆಲ್ಲಿ ವ|| ಸೈಯ್ಯದ ಇಬ್ರಾಹೀಮ.

'ಕಿರ್ಲೋಸ್ಕರ' ವೆಂದರೇ ಶ್ರೇಷ್ಠತೆ.



ಕಿರ್ಲೋಸ್ಕರ ಕಂಪನಿಯ ನೆಲಗಡ್ಲೆ ಸುಲಿಯುವ ಯಂತ್ರ ಹಚ್ಚುವದರಲ್ಲಿ ಬಹಳ ಲಾಭ ಸಿಗುತ್ತದೆ ಅದರಿಂದ ಖರ್ಚು ಕಡಿಮೆ ಬಿದ್ದು ಕೆಲಸವು ಹೆಚ್ಚಾಗುತ್ತದೆ ಯಂತ್ರ ಶಾಸ್ತ್ರ ತತ್ವದಂತೆ ಇವುಗಳನ್ನು ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲರಿಗೂ ಸಮಾಧಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು, ಇಂಜಿನುಗಳಿಂದಲೂ ನಡಿಸಬಹುದು

ಪತ್ರ ಬರಕೊಂಡಲ್ಲಿ ಸಚಿತ್ರ ಕೆಟಲಾಗು ಕಳಿಸಲ್ಪಡುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಬಡವರಿಗೂ

ಒಮ್ಮೆಲೇ ಗುಣಕಾರಿಯಾದ ಶ್ರೇಷ್ಠ ಔಷಧ!

ಚಳಿಜ್ವರ, ಇನ್‌ಫ್ಲುಎಂಝಾ

ಮೊದಲಾದ ಜ್ವರಗಳ ಮೇಲೆ !!

ಮೆಡೊನ್ ಸನ್ಸ ಎಂಡ್ ಕೋ,

ಮುಂಬಯಿ ೨.

MADON SONS & Co

PHARMACEUTICAL CHEMISTS, BOMBAY

ಎಲ್ಲಿ ನೋಡಿದಲ್ಲಿ ಯುದ್ಧ ತಯಾರಿ!

[ನಿರೀಕ್ಷಕನು ಬರೆದುದು]

ಯುದ್ಧ ಮಾಡಬೇಕೆಂದು ಯಾರಿಗೂ ಅಪೇಕ್ಷೆ ಇಲ್ಲ, ಆದರೆ, ಯುದ್ಧ ಖಂಡಿತವಾಗಿ ಒದಗುತ್ತದೆ, ಅದಕ್ಕಾಗಿ ನಾವು ಸಿದ್ಧರಿರಬೇಕು, ಹೀಗೆ ಎಲ್ಲರೂ ಅಂಬೋಣ. ಯುದ್ಧ ಕಿಡಿ ಯಾವಲ್ಲಿಂದ ಹಾರೀತೆಂದು ಹೇಳಲಾಗದು. ಮಹಾಯುದ್ಧ ಕಾಲದಲ್ಲಿ ಮುಖ್ಯ ಪ್ರಧಾನರಾಗಿದ್ದ ಲ್ಯಾಯ್ಡ ಜೋರ್ಜರು ನುಡಿದಂತೆ ಯಾವತ್ತು ರಾಷ್ಟ್ರಗಳು ಹಲ್ಲು ಕಡಿಯುತ್ತವೆ.' ಪ್ರಾರಂಭದಲ್ಲಿ ವೈಮನಸ್ಯ ಹಾರಿ, ಕಿಡಿದು ಯುದ್ಧ ಹೂಡಬಹುದು. ಪರಿಷತ್ತುಗಳಿಂದ ಯುದ್ಧ ಪರಿಹಾರವಾಗದು. ಈ ಪರಿಷತ್ತುಗಳನ್ನೆಲ್ಲ ನಾ ಒಲ್ಲೆ, ಅವುಗಳಿಂದ ಪ್ರಯೋಜನವಿಲ್ಲ " ಈ ಪ್ರಕಾರ ಲ್ಯಾಯ್ಡ ಜೋರ್ಜರು ನುಡಿಯುತ್ತಾರೆ. ಇಟಾಲಿಯ ಸರ್ವಸತ್ತಾಧಿಕಾರದ ಮುಸೊಲಿನಿಯವರು ೭ ವರ್ಷದ ಮಕ್ಕಳಿಗೆ ಲಷ್ಕರಿ ಶಿಕ್ಷಣ ಕೊಡುವ ಏರ್ಪಾಟು ಮಾಡಿದ್ದಾರೆ. "ಇಟಾಲಿಯರಲ್ಲಿ ಲಷ್ಕರಿ ಪ್ರವೃತ್ತಿಯನ್ನು ನಾವು ಹುಟ್ಟುಮಾಡಬೇಕು, ಪ್ರಬಲ ರಾಷ್ಟ್ರಗಳೇ ಊರ್ಜಿತಾವಸ್ಥೆಗೆ ಏರಬಲ್ಲವು. ಯುದ್ಧದ ಕರೆ ಬಂದೊಡನೆ ಇಟಾಲಿಯವರೆಲ್ಲರೂ ಒಮ್ಮನಸ್ಸಿನಿಂದ ಮುಂದಾಗಿ ಓಡಿಬರಬೇಕು," ಹೀಗೆ ಮುಸೊಲಿನಿಯವರು ನುಡಿದು ಯುದ್ಧಪ್ರವೃತ್ತಿಯನ್ನು ತಮ್ಮ ಪ್ರಜೆಗಳಲ್ಲಿ ಬಿಂಬಿಸುತ್ತಿದ್ದಾರೆ. "ಶಾಶ್ವತವಾಗಿ ಶಾಂತಿ ಉಳಿಯುವದೆಂದು ನಾವು ನಂಬುವದಿಲ್ಲ, ಹೆಂಗಸರಿಗೆ ಮಾತೃಪದ ಹೇಗಿರುವಂತೆ ಗಂಡಸರಿಗೆ ರಣಕ್ಷೇತ್ರವಾಗಿದೆ, ಯುದ್ಧ ಮಾಡಿದರೆ ಮಾತ್ರ ಮನುಷ್ಯನ ಬಾಳ್ವೆ," ಹೀಗೆ ಸಹ ಮುಸೊಲಿನಿಯವರು ಹುರಿದುಂಬಿಸುತ್ತಿದ್ದಾರೆ. ಇಟಾಲಿಯ ಪ್ರಜೆಗಳಿಗೆ ತಿಂದುಣ್ಣಲು ಸಾಕಷ್ಟು ಕಾಳು-ಕಡಿಗಳಿಲ್ಲ. ಹೀಗೆ ವಿಪರೀತ ಮುಸೊಲಿನಿಯವರು ೩–೪॥ ಕೋಟಿಯಷ್ಟು ನೌಕಾದಲಕ್ಕಾಗಿಯೂ, ವೈಮಾನಿಕ ದಲಕ್ಕಾಗಿಯೂ ಖರ್ಚು ಮಾಡುವ ಸಂಕಲ್ಪ ಮಾಡಿರುತ್ತಾರೆ. ಇಷ್ಟಾಗಿ ಮುಸೊಲಿನಿಯವರು ಲೋಕದಲ್ಲಿ ಶಾಂತಿಸ್ಥಾಪನೆ ಮಾಡಲೋಸುಗ ಹಣಗಾಸುವವರಂತೆ, ಯುದ್ಧವಾಗಬಾರದೆಂದು ಪರಮಾವಧಿಯ ಪ್ರಯತ್ನ ಮಾಡುವವರಂತೆ, ವ್ಯವಹಾರಕುಶಲರು, ವಿಧಾಯಕ ಪ್ರವೃತ್ತಿಯವರು, ಈ ಪ್ರಕಾರ ಲ್ಯಾಯ್ಡ ಜೋರ್ಜರು ಶಿಫಾರಸು ಮಾಡುತ್ತಾರೆ.

ಬ್ರಿಟಿಶರ ಪ್ರವೃತ್ತಿಯಾದರೂ ಇದೇ. 'ಇನ್ನೊಂದು ಯುದ್ಧವಾದರೆ ನಮ್ಮ ಪಾಶ್ಚಾತ್ಯ ಸಂಸ್ಕೃತಿಯೆಲ್ಲ ಖಂಡಿತವಾಗಿ ನಿರ್ನಾಮವಾಗುವದು," ಎಂದು ಬ್ರಿಟಿಶ ಪ್ರಧಾನರಾದ ಮಿ॥ ಬೋಲ್ಡ್‌ವಿನ್‌ರವರು ಹೇಳಿ ಮುಂದಿನ ಯುದ್ಧದ ಬಗ್ಗೆ ಭೀತಿಪಡುತ್ತಿದ್ದಾಗ್ಯೂ, ನೌಕಾದಲ-ವೈಮಾನಿಕ ದಲಗಳಿಗಾಗಿ, ಮದ್ದುಗುಂಡುಗಳಿಗಾಗಿ ಯಾವತ್ತು ಸಿದ್ಧತೆಗಳನ್ನು ರಭಸದಿಂದ ನಡಿಸಲಾರಂಭಿಸಿದ್ದಾರೆ. ದೇಶದಲ್ಲಿ ಈಗ ಇದೇ ತಯಾರಿ ದೊಡ್ಡ ದೊಡ್ಡ ಕಾರಖಾನೆಗಳಲ್ಲಿ ವಿಮಾನಗಳೂ, ಹಡಗುಪಡಗಳೂ, ಅಂತರ್ಜಲ ಹಡಗುಗಳೂ ತಯಾರಾಗುತ್ತಿವೆ. ಶಾಂತಿ ಕಾಲದಲ್ಲಿ ಸಕ್ಕರೆ, ಸಾಬುಕಾರ, ಔಷಧ ಸಾಹಿತ್ಯ ತಯಾರಾಗುವ ಕಾರಖಾನೆಗಳನ್ನು ಕ್ಷಣಮಾತ್ರದಲ್ಲಿ ಮದ್ದು-ಗುಂಡು ತಯಾರಿಸಬರುವಂತೆ ಏರ್ಪಾಟಾಗಿದೆ. ಇಲ್ಲಲ್ಲಿಯ ಕಾರಖಾನೆಯವರಿಂದ ಗುಪ್ತವಾಗಿ ರಿಪೋರ್ಟ ತರಿಸಿ ಸರಕಾರವು ವ್ಯವಸ್ಥೆ ಮಾಡಲಾರಂಭಿಸಿದೆ. ವಿಮಾನ ಕವಾಯತ್ತುಗಳನ್ನು ಏರ್ಪಡಿಸಿ ೧೨ ೧೫ ಮಿನಿಟುಗಳಲ್ಲಿ ೨೦ ಸಾವಿರ ಫೂಟು ಎತ್ತರ ವಿಮಾನದಿಂದ ಬಾಂಬು ಒಗೆಯುವ ತಾಲೀಮು ನಡೆಯುತ್ತದೆ. ನೆಲದ ಮೇಲೆ ನಿಂತು ಅಂತರ್ಜಲ ನಾವೆಗಳನ್ನು ಸಹಿಸಲ್ಲದ ನಡಿಸಿ ಶತ್ರುಗಳ ಹಡಗುಪಡೆಗಳ ಮೇಲೆ ಒಮ್ಮಿಂದೊಮ್ಮೆಗೆ ಗುಂಡು ಹಾರಿಸಿ ಅವುಗಳಿಗೆ ಜಲಸಮಾಧಿ ಕೊಡಲು ಯಾಂತ್ರಿಕ ವ್ಯವಸ್ಥೆಯಾಗುತ್ತಿದೆ. ವಿಮಾನಗಳ ಮೇಲೆ ಬಿನ್‌ತಂತಿ ಯಂತ್ರದ ಮೂಲಕ ಸಂದೇಶ ತಪ್ಪಿಸುವ ವ್ಯವಸ್ಥೆಯಾಗಿದ. ರೇಡಿಯೋ ಯಂತ್ರದಿಂದ ಅಂತರ್ಜಲ ನಾವೆಗಳ ಮೇಲಿನ ಸವಿಕರಿಗೆ ಅಗಿಂದಾಗ ಸೂಚನೆ ಕೊಟ್ಟು ಶತ್ರುನಾಶ ಮಾಡುವ ಕ್ರಮವು ಶೋಧಿಸಲಾಗಿದೆ. ತರತರದ ವಿಷಾರಿ ಹೊಗೆಗಳನ್ನು ತಯಾರಿಸುತ್ತಿದ್ದಾರೆ. ಶತ್ರು ರಾಷ್ಟ್ರದಿಂದ ವಿಷಾರಿ ಹೊಗೆ ಹಾರಿಸಲ್ಪಟ್ಟಲ್ಲಿ ಅವುಗಳ ಬಾಧೆಯಾಗದಂತೆ ಕೈಕೊಳ್ಳಬೇಕಾದ ಪ್ರತಿಕಾರ ಉಪಾಯ ಕವಚಗಳು ಏರ್ಪಾಟಾಗಿದೆ. ಕೆಲ್ಸಿಯಂತೆ ಶಿಶು ಈ ಕವಚಗಳನ್ನು ಧರಿಸಿ ವಿಷಾರಿ ಹೊಗೆಯ ಬಾಧೆಯನ್ನು ೧೫ ತಾಸಿನ ತನಕ ತಪ್ಪಿಸಿಕೊಂಡರಂತೆ. ಮತ್ತಷ್ಟು ಪ್ರಯೋಗಗಳು ನಡೆಯುತ್ತವೆ. ಸ್ವಸೈನ್ಯದ ನಾಶವಾಗಕೂಡದು, ಶತ್ರುಸೈನ್ಯದ ನಾಶವಾಗಬೇಕು, ಹೀಗೆ ಬ್ರಿಟಿಶರು ಪ್ರಯತ್ನಪಡುತ್ತಿದ್ದಾರೆ. ವಿದೇಶಗಳಲ್ಲಿಯೂ ಇಂಥ ಪ್ರಯೋಗಗಳೇ ನಡೆದಿವೆ. ಶತ್ರುನಾಶಕ್ಕಾಗಿ ಹೊಸ ಹೊಸ ವಿಷ ಹೊಗೆಗಳನ್ನು ತಯಾರಿಸುವದು, ಆತ್ಮರಕ್ಷಣೆಗಾಗಿ ಕವಚಗಳನ್ನು ತಯಾರಿಸುವದು, ಈ ಕ್ರಮ ಎಲ್ಲೆಲ್ಲಿಯೂ ನಡೆದಿದೆ. ಫ್ರಾನ್ಸ, ಜರ್ಮನಿ, ಅಮೇರಿಕಾ ಮೊದಲಾದ ದೇಶಗಳಲ್ಲಿ ಇದೇ ಸ್ಥಿತಿ. ಫ್ರಾನ್ಸದೇಶದಲ್ಲಿ ಜರ್ಮನಿಯ ಹಿಟ್ಲರರ ಬಲಾತ್ಕಾರದ ಕಡೆ ಬೊಟ್ಟು ತೋರಿಸಿ ಆತ್ಮರಕ್ಷಣೆಗೆಂದು ಫ್ರೆಂಚ ಸರಕಾರವು ಕೋಟ್ಯಾವಧಿ ರೂಪಾಯಿಗಳನ್ನು ಖರ್ಚು ಮಾಡಿ ಸೈನ್ಯ ಬಲವನ್ನೂ, ವಿಮಾನಗಳನ್ನೂ ಬೆಳೆಸುತ್ತಿದೆ. ಮದ್ದು-ಗುಂಡು, ತೋಫು, ತುಬಾಕಿಗಳು ಲೆಕ್ಕವಿಲ್ಲದೆ ತಯಾರಾಗುತ್ತಿವೆ. ನೂತನವಾಗಿ ಫ್ರೆಂಚ ಸಂಶೋಧಕರು 'ಮರಣ ಕಿರಣ' (*death ray*) ವನ್ನು ಶೋಧಿಸಿದ್ದಾರೆ. ಈ ಕಿರಣ ಪ್ರಕಾಶ ವೈರಿಯ ಮೇಲೆ ಬಿದ್ದೊಡನೆ ಮರಣ ಪ್ರಾಪ್ತಿಯಾಗುತ್ತದಂತೆ. ಇದಕ್ಕಾಗಿ ಫ್ರೆಂಚ ಸರಕಾರವು ಸಂಶೋಧಕರಿಗೆ ಒಳ್ಳೇ ಪ್ರಶಸ್ತಿ ಮಾಡಿದೆ. ಅಮೇರಿಕೆಯು ಒಂದನೇ ದೊಡ್ಡ ಸಂಭಾವಿತ ರಾಷ್ಟ್ರವೆಂದು ಲೋಕದಲ್ಲಿ ಖ್ಯಾತಿ. ಅಮೇರಿಕೆಯವರಿಗೂ, ಜಪಾನದವರಿಗೂ ಮತ್ಸರವಿದೆ. ಹಡಗುಪಡಗಳನ್ನು ಆತ್ಮರಕ್ಷಣೆಯ ನೆವದಿಂದ ಅಮೇರಿಕೆಯ ಸರಕಾರದವರು ಬೆಳೆಸುತ್ತಿದ್ದಾರೆ. ಜಪಾನಿಯರೂ ಬೆಳೆಸುತ್ತಿದ್ದಾರೆ. ವಿಮಾನಗಳ ಸಂಖ್ಯೆಯೂ ಬೆಳೆಯುತ್ತಿದೆ. ಆಕಾಶಮಾರ್ಗದಿಂದ ಅದ್ಭುತ ಹಲ್ಲೆಯಾದಾಗ್ಯೂ ಅದಕ್ಕೆ ಇದಿರಾಗಿ ಸೋಲಿಸಿ ಓಡಿಸುವಷ್ಟು ಪ್ರಚಂಡ ವಿಮಾನ ಬಾಣ್ಯಗಳನ್ನು ಕಟ್ಟಿಸುವ ಏರ್ಪಾಟು ನಡೆದಿದೆ. "೨ ದಿನಗಳಲ್ಲಿ ಇಡೀ ಜಪಾನ ದೇಶವನ್ನು ನಿರ್ನಾಮ ಮಾಡುವಂಥ (*wipe out Japan in two days*) ವೈಮಾನಿಕ ದಳವನ್ನು ನಾವು ತಯಾರಿಸಬೇಕು " ಹೀಗೆ ಅಮೇರಿಕೆಯ ಸೇನಾಪತಿಗಳಾದ ಮಿಚೆಲ್‌ರವರು ಉದ್ಗರಿಸುತ್ತಾರೆ. ಅಮೇರಿಕೆಯ ರಸಾಯನ ಶಾಸ್ತ್ರ ಸಂಶೋಧಕರೊಬ್ಬರು ಒಂದು ನೂತನಸ್ವರೂಪದ ವಿಷಾರಿ ಹೊಗೆಯನ್ನು ತಯಾರಿಸಿದ್ದಾರೆ. ಇದರಿಂದ ಶತ್ರು ಸೈನ್ಯಕ್ಕೆ ಒಳ್ಳೇ ಪ್ರತಿಬಂಧವಾಗ ಬಲ್ಲುದಾಗಿ ಬಲ್ಲಿದರ ಅಂಬೋಣ. ಈ ಶೋಧ ನೋಡಿ ಅಮೇರಿಕೆಯಲ್ಲೆಲ್ಲ ಅತ್ಯಾನಂದವಾಗಿರುವದೆಂದು ಮಿ॥ ಲ್ಯಾಯ್ಡ ಜೋರ್ಜರವರು ಬರೆದು ವ್ಯಸನಪಡುತ್ತಾರೆ. ಜರ್ಮನಿಯಲ್ಲಿಯೂ ಇದೇ ಸ್ಥಿತಿ. ವ್ಹರ್ಸೇಲಿಸದಲ್ಲಿ ಒಪ್ಪಂದವಾಗಿ ಮಹಾಯುದ್ಧದ ಪರಿಸಮಾಪ್ತಿಯಾಯಿತು. ಈ ತಹನಾಮೆಯಿಂದ ಕಲ್ಲಿದ್ದಲಿ, ಕಬ್ಬಿಣ ಗಣಿಗಳುಳ್ಳ ಜರ್ಮನಿಯ ಸಂಪನ್ನ ಪ್ರದೇಶವಾದ ಸಾರ ಪ್ರಾಂತವು ಜರ್ಮನಿಯ ಕೈತಪ್ಪಿ ಹೋಯಿತು. ಇದನ್ನು ತಿರುಗಿ ಪಡಕೊಳ್ಳುವದಕ್ಕಾಗಿ, ಮಹಾಯುದ್ಧದ ಅಪಜಯದಿಂದ ಉಂಟಾದ ಅಪಕೀರ್ತಿಯನ್ನು ಅಳಿಸಿ ಕೊಳೆಯುವದಕ್ಕಾಗಿ ಜರ್ಮನಿಯ ಹಿಟ್ಲರರು ಎಡೆಬಿಡದೆ ದುಡಿಯುತ್ತಿದ್ದಾರೆ. ಶಸ್ತ್ರಾಸ್ತ್ರಗಳನ್ನು ಜರ್ಮನ್ ರಾಷ್ಟ್ರವು ತಯಾರಿಸಿಡಬಾರದೆಂದು ವ್ಹರ್ಸೇಲಿಸ ಒಪ್ಪಂದದಲ್ಲಿ ಕಟ್ಟಪ್ಪಣೆಯಿದೆ. ಆದರಿಂದ ಬೇರೆ ಬೇರೆ ಸಾಮುಗ್ರಿಗಳ ಕಾರಖಾನೆಗಳನ್ನು ತಯಾರಿಸಿ ಆ ಕಾರಖಾನೆಗಳು ನಿಮಿಷಾರ್ಧದಲ್ಲಿ ಸ್ಫೋಟಕ ದ್ರವ್ಯ ತಯಾರಿಸಲನುಕೂಲವಾಗುವಂತೆ ಯಂತ್ರ ಸಾಹಿತ್ಯದ ನಿರ್ಮಾಣವಾಗಿದೆ. ಪ್ರಯಾಣ ಸೌಕರ್ಯಕ್ಕಾಗಿ ತಯಾರಿಸಲಾದ ವಿಮಾನಗಳು ಯುದ್ಧಪ್ರಸಂಗದಲ್ಲಿ ಶತ್ರುಗಳ ಮೇಲೆ ಬಾಂಬು ಹಾರಿಸಲು ಪ್ರಯೋಜನವಾಗಬೇಕು. ವೈಮಾನಿಕರಿಗೆ ಬಾಂಬು ಹಾರಿಸುವ ಶಿಕ್ಷಣ ಕೊಡಲಾಗುತ್ತದೆ. ಅಮೇರಿಕೆಯ ಗ್ರಿಫಿಥ್ಸ ಜೋನ್ಸನ್ ದಂಪತಿಗಳು ಜರ್ಮನಿಗೆ ಹೋದಾಗ 'ಸ್ಟೋರ್ಮಟ್ರೂಪ್ಸ' ದಂಡಿನ ಕವಾಯಿತು ನೋಡಹೋದ ಸಮಯ ಗುಪ್ತವಾಗಿ ಛಾಯಚಿತ್ರ ಕೊಂಡರಂತೆ. ಅದಕ್ಕಾಗಿ ಗುಪ್ತ ಪೋಲೀಸರು ಅವರಿಗೆ ಸೆರೆ ಹಿಡಿದು ಝಡತಿ ಮಾಡಿ ೭-೮ ತಾಸು ಸೆರೆಮನೆಯಲ್ಲಿಟ್ಟು ಜೈಲ ರೊಟ್ಟಿ ತಿನ್ನಿಸಿ ಬಿಡುಗಡೆ ಮಾಡಿದರಂತೆ. ಅಮೇರಿಕೆಯ ರಾಯಭಾರಿಗಳೊಡನೆ ಅವರಿಗೆ ಮಾತಾಡಲೊಡಲಿಲ್ಲ. ಇದರಿಂದ ದೊಡ್ಡ ಗಲಭೆಯುಂಟಾಗಿದೆ. ಈಗ ಸಾರ ಪ್ರದೇಶದಲ್ಲಿ ಬಹು ದೊಡ್ಡ ಗಡಿಬಿಡಿ. ಜನವರಿ ೧೩ನೇ ತಾರೀಖಿಗೆ ಅಲ್ಲಿ ಮತಗಳ ಎಣಿಕೆಯಾಗುವದಿದೆ. ಸಾರ ಪ್ರಾಂತವನ್ನು ಜರ್ಮನಿಗೆ ಒಪ್ಪಿಸಬೇಕೋ? ಈಗಿನಂತೆ ರಾಷ್ಟ್ರಸಂಘದ ಸ್ವಾಧೀನದಲ್ಲಿಡಬೇಕೋ? ಫ್ರಾನ್ಸ ದೇಶಕ್ಕೆ ಒಪ್ಪಿಸಬೇಕೋ? ಎಂಬ ೩ ಪ್ರಶ್ನೆಗಳಿಗೆ ಒಂದು ಉತ್ತರವನ್ನು ಸಾರ ನಿವಾಸಿಗಳು ಕೊಡಬೇಕು. ಅದಕ್ಕಾಗಿ ಹಿಟ್ಲರರೂ, ಫ್ರೆಂಚರೂ ಒಳ್ಳೇ ತಯಾರಿ ನಡಿಸುತ್ತಿದ್ದಾರೆ. ಸಾರ ಪ್ರಾಂತವನ್ನು ಜರ್ಮನಿಗೆ ಒಪ್ಪಿಸಿದರೆ ಮಹಾಯುದ್ಧವನ್ನು ಗೆದ್ದೂ ಪ್ರಯೋಜನವಿಲ್ಲವಾಗಿ ಫ್ರೆಂಚ ಮುತ್ಸದ್ದಿಗಳ ಅಭಿಪ್ರಾಯ. ಯುದ್ಧದಲ್ಲಿ ಆದ ಜಯವು ಶಾಂತಿಕಾಲದಲ್ಲಿ ಅಪಜಯರೂಪ ತಾಳಿತೆಂದು ಫ್ರೆಂಚ ಪ್ರಧಾನರಾದ ಎಮ್. ತಾರ್ಡಿಯೋರವರು ಅಭಿಪ್ರಾಯಪಡುತ್ತಾರೆ. ಸಾರ ಪ್ರದೇಶದೊಳಗಿನ ಮತಗಳನ್ನು ತಮ್ಮ ತಮ್ಮ

ಕಡೆ ಸೇರಿಕೊಳ್ಳುವದಕ್ಕಾಗಿ ಜರ್ಮನ್ ದೇಶದಿಂದ ಪ್ರತಿ ತಿಂಗಳಿಗೆ ೩೦ ಲಕ್ಷ ಮಾರ್ಕುಗಳೂ, ಫ್ರಾನ್ಸ ದೇಶದಿಂದ ೧೦ ಲಕ್ಷ ಮಾರ್ಕುಗಳೂ ಸಾರ ಪ್ರದೇಶ ನಿವಾಸಿಗಳಿಗೆ ರವಾನೆಯಾಗುತ್ತವಾಗಿ ಲಂಡನಿನ 'ನ್ಯೂಸ ಕ್ರೊನಿಕಲ್' ಪತ್ರಿಕೆಯ ವ್ಹರ್ನನ್ ಬಾರ್ಟಲೆಟ್‌ರವರು ಬರೆಯುತ್ತಾರೆ. ಸಾರ ಪ್ರದೇಶವನ್ನು ಫ್ರೆಂಚ ಸರಕಾರಕ್ಕೆ ಒಪ್ಪಿಸಲು ಮತ ದೊರೆಯುವದು ದುರಂತವಾದದು. ಈಗಿನ ಪರಿಸ್ಥಿತಿಯನ್ನು ಕಾಪಾಡಲು ತಕ್ಕಷ್ಟು ಮತಸಂಗ್ರಹವಾಗುವದೂ ಕಠಿಣವಿದೆ. ಜರ್ಮನಿಗೆ ಸಾರ ಪ್ರದೇಶವನ್ನು ಒಪ್ಪಿಸುವದಕ್ಕಾಗಿ ಪ್ರಚಂಡ ಮತ ಸಂಗ್ರಹವಾಗುವದು, ಇದು ನಿಶ್ಚಿತ. ಸಾರ ಪ್ರದೇಶದಲ್ಲಿ 'ಜರ್ಮನ್ ಫ್ರಂಟ್' ಎಂಬದೊಂದು ಸಂಸ್ಥೆಯು ನಿರ್ಮಾಣವಾಗಿದೆ. ಈ ಸಂಸ್ಥೆಯಲ್ಲಿ ಮುಕ್ಕಾಲು ಪಾಲು ಅಂದರೆ ಸುಮಾರು ೪ ಲಕ್ಷ ಸಾರ ಮತದಾರರಿದ್ದಾರೆ. ಇದರಿಂದ ಜರ್ಮನಿಗೇ ನಿಶ್ಚಯವಾಗಿ ಬಹುಮತ ದೊರೆಯುವದೆಂದು ಹೇಳಲಿಕ್ಕೆ ಏನೂ ಪ್ರತ್ಯವಾಯವಿಲ್ಲ. ಈ ಪ್ರದೇಶವನ್ನು ಜರ್ಮನಿಗೆ ಒಪ್ಪಿಸಿದರೆ ವ್ಹರ್ಸಲೀಸ ತಹನಾಮೆಯಂತೆ ಫ್ರಾನ್ಸ ದೇಶಕ್ಕೆ ನಷ್ಟಭರಪಾಯಿ ರಕಮು ಕೊಡಬೇಕು. ಮಹಾ ಯುದ್ಧದಲ್ಲಿ ಜರ್ಮನ್‌ರು ಸುಳಿಗಾಳಿಯಂತೆ ಫ್ರಾನ್ಸ ದೇಶದ ಆಲ್ಸಾಸ ಲೊರೇನ ಪ್ರದೇಶವನ್ನು ನುಗ್ಗಿ ಅಲ್ಲಿಯ ಗಣಿಗಳನ್ನು ನಾಶ ಮಾಡಿಬಿಟ್ಟರು. ಆದಕ್ಕಾಗಿ ಸಾರ ದೇಶದ ಪ್ರಯೋಜನವನ್ನು ೧೫ ವರ್ಷಗಳ ತನಕ ಫ್ರೆಂಚರು ಪಡೆಯುವಂತೆ ವ್ಹರ್ಸಲೀಸ ತಹನಾಮೆಯಲ್ಲಿ ಕರಾರಾಗಿದೆ. ಸಾರ ಪ್ರದೇಶವನ್ನು ಜರ್ಮನಿಗೆ ಒಪ್ಪಿಸಬೇಕಾದ್ದನ್ನ ಫ್ರೆಂಚ ಸರಕಾರಕ್ಕೆ ಅಬ್ಜಾವಧಿ ರೂಪಾಯಿಗಳ ನಷ್ಟಭರಪಾಯಿ ಮಾಡಿಕೊಡಬೇಕು. ಈ ಹಣ ಜರ್ಮನಿಯಿಂದ ಹೇಗೂ ತೆರಲಾಗುವದಿಲ್ಲ. ಜರ್ಮನ್ ಸರಕಾರದ ಕಡೆ ಹಣವಿಲ್ಲ, ಲೋಕದಲ್ಲಿ ದಿವಾಳಿ ತೆಗೆದ ರಾಷ್ಟ್ರವದು! ಹಣದ ಅಡಚಣೆಯಿಂದು ಸಾವಕಾರ ರಾಷ್ಟ್ರಗಳು ಬೇರೆ ಬೇರೆ ತಹನಾಮೆ ಮಾಡಿಕೊಂಡು ತಮ್ಮ ಹಣವಸೂಲ ಕೊಳ್ಳುವಯೋಜನ ಕಲ್ಪಿಸಿಕೊಳ್ಳುತ್ತವೆ. ಆದರೆ, ಹಣ ತೀರಿಸುವ ಸಮಯ ಒಂದೊಡನೆ ಪುನಃ ಮುಂಚಿನದೇ ಅವಸ್ಥೆ. "ನೆರೆಹೊರೆಯ ದೇಶದವರು ನಮ್ಮ ಸರಕು ಕೊಳ್ಳಲೊಪ್ಪುವದಿಲ್ಲ. ಆದರಿಂದ ನಮ್ಮ ಉತ್ಪತ್ತಿಯಿಲ್ಲ, ಹಣ ತೆರುವ ಬಗೆ ಹೇಗೆ?" ಎಂದು ಜರ್ಮನ್ ಸರಕಾರವು ಸಾವಕಾರ ರಾಷ್ಟ್ರಗಳೇ ಅನ್ಯಾಯ ಮಾಡುತ್ತವೆಂದು ದೂರಿಕೊಳ್ಳುತ್ತದೆ. "ನಿಮ್ಮ ಸರಕು ಕೊಳ್ಳದಲ್ಲಿ ಸ್ವದೇಶದ ಸರಕುಗಳನ್ನು ಖರ್ಚು ಮಾಡುವದಿಲ್ಲ?" ಎಂದು ಇತರ ರಾಷ್ಟ್ರಗಳ ಪ್ರಶ್ನೆ. ಜರ್ಮನಿಯು ಈಗ ಹೊಸ ಹೊಸ ಶಾಸ್ತ್ರಶೋಧಗಳಿಂದ ತಮಗೆ ಬೇಕಾಗುವ ಕಚ್ಚಾ ಸರಕುಗಳನ್ನು ತಯಾರಿಸಿ ಸ್ವಯಂಪೂರ್ಣವಾಗಲು ಹವಣಿಸುತ್ತಿದೆ. ಕಲ್ಲಿದ್ದಲಿಯಿಂದ 'ಮೋಟರ ಎಣ್ಣೆ' ಮಾಡುವ ಪ್ರಯತ್ನ ನಡೆದಿದೆ. ಅವಶ್ಯರು ಮಕ್ಕಳಿಗೆ ಆಹಾರ ಸಾಮಗ್ರಿಗಳನ್ನು ಸರಿಯಾಗಿ ಹಂಚುವದಕ್ಕಾಗಿ ಹಿಟ್ಲರರು ಜರ್ಮನಿಯಲ್ಲಿ ಬೆಳೆಯುವ ಗೋದಿ ಬೆಳೆಯನ್ನೆಲ್ಲ ಸರಕಾರದ ಸ್ವಾಧೀನ ಮಾಡುವ ಹುಕುಮು ಹೊರಡಿಸಿದ್ದಾರೆ. ಸರಕಾರವೇ ನಿಶ್ಚಿತ ದರದಿಂದ ಇದನ್ನು ಮಾರುವದು. ಇಂಥ ಸ್ಥಿತಿಯಲ್ಲಿ ಜರ್ಮನ್ ಸರಕಾರವು ಸಾರ ಪ್ರದೇಶದ ಕಲ್ಲಿದ್ದಲಿ, ಕಬ್ಬಿಣ ಗಣಿಗಳ ಲೆಕ್ಕಕ್ಕೆ ಅಬ್ಜಾವಧಿ ರೂಪಾಯಿಗಳನ್ನು ತೆರುವ ಬಗೆ ಹೇಗೆ? ಆಪನ್ನಿಧಿಯಿಂದ ಸರಕಾರದ ಕಡೆ ಕೆಲ ಕೋಟಿ ರೂಪಾಯಿಗಳ ಚಿನ್ನವಿದೆ. ಕಲ್ಲಿದ್ದಲಿ ಗಣಿಗಳ ಬೆಲೆ ತಕ್ಕ ಮಟ್ಟಿಗೆ ಇದರ ಒಪ್ಪಿ ನಷ್ಟಭರಪಾಯಿಯಾಗದಿದ್ದರೆ ಸಾರ ಪ್ರಾಂತದಲ್ಲಿ ಅನುಕೂಲ ಮತಸಂಗ್ರಹವಾದಾಗ್ಯೂ ಅದು ಜರ್ಮನಿಯ ಸ್ವಾಧೀನವಾಗದು. ಇಂಥ ಪ್ರಸಕ್ತಿಯಲ್ಲಿ ಯುರೋಪ ಖಂಡದಲ್ಲಿ ಶಾಂತಿಪ್ರಸ್ಥಾಪನೆಯಾಗುವ ಬಗೆ ಹೇಗೆ? ಬ್ರಿಟಿಶ ದೇಶವು ಯುರೋಪ ಖಂಡದೊಳಗಿನ ಗೊಂದಲದಲ್ಲಿ ಸಿಲುಕದೆ ಅಲಿಪ್ತವಾಗಿರಲು ಅಸಾಧ್ಯವಿದೆ. ಬೇರೆ ಬೇರೆ ತಹನಾಮೆಗಳಿಂದ ಬ್ರಿಟಿಶರು ಬೇರೆ ಬೇರೆ ರಾಷ್ಟ್ರಗಳಿಗೆ ಸಂಕಟ ಕಾಲದಲ್ಲಿ ನೆರವಾಗಲು ಬದ್ಧರಿದ್ದಾರೆ. ಮೇಲಾಗಿ ಬ್ರಿಟಿಶ ದೇಶವನ್ನು ವೈಮಾನಿಕ ಹಲ್ಲೆಯಿಂದ ರಕ್ಷಿಸಿಕೊಳ್ಳಲು ಫ್ರಾನ್ಸ ದೇಶದಲ್ಲಿ ವಿಮಾನ ಠಾಣ್ಯಗಳನ್ನು ರಚಿಸಬೇಕು ಅಂದ ಬಳಿಕ, ಬ್ರಿಟಿಶ-ಫ್ರೆಂಚರು ಒಮ್ಮನಸ್ಕರಾಗಿ ಯುದ್ಧದಲ್ಲಿ ಹೋರಾಡಬೇಕೆಂದು ಸ್ಪಷ್ಟವಾಯಿತು. ಈ ಪ್ರಕಾರ ಸಾರ ಪ್ರದೇಶವೇ ಯುದ್ಧದ ಮೂಲವಾಗುವದೇನೆಂಬದೊಂದು ಮಿ| ವ್ಹರ್ನನ್ ಬಾರ್ಟಲೆಟ್‌ರವರ ಊಹೆ. ಯುಗೊಸ್ಲಾವಿಯಾದ ಅರಸರಾದ ಅಲೆಕ್ಝಾಂಡರರ ಕೊಲೆಪಾತಕದಿಂದ ಬಾಲ್ಕನ್ ಪ್ರದೇಶದ ಬಲ್ಗೇರಿಯಾ, ರುಮಾನಿಯಾ, ಆಸ್ಟ್ರಿಯಾ, ಹಂಗೇರಿ ಮೊದಲಾದ ದೇಶಗಳಲ್ಲಿ ವಿಲಕ್ಷಣವಾದ ಗಡಿಬಿಡಿಯುಂಟಾದದ್ದು. ಈ ಹಿಂದೆಯೇ ಪ್ರಾಂಬರಿಸೋಣಾಗಿದೆ. ಮಹಾಯುದ್ಧದಿಂದ ಅತ್ತಕಡೆ ಪ್ರಕಾರವೇ ಬದಲಿಹೋಗಿದೆ. ಹಂಗೇರಿಯಾ ದೇಶದ ತುಂಡು ತುಂಡು ಮಾಡಿ ಕೆಲ ಭಾಗ ಬಲ್ಗೇರಿಯಾ ದೇಶಕ್ಕೆ, ಕೆಲ ಭಾಗ ಯುಗೋಸ್ಲಾವಿಯಾ ದೇಶಕ್ಕೆ, ಕೆಲ ಭಾಗ ರುಮಾನಿಯಾ ದೇಶಕ್ಕೆ, ಹೀಗೆ ಹಂಗೇರಿಯು ಹರಿದು ಹಂಚಿ ಹೋಗಿದೆ. ಈಗ ಉಳಿದ ಭಾಗವು ಮುಂಚಿನ ತೃತೀಯಾಂಶದಷ್ಟು ಸಹ ಇಲ್ಲ. ಇದರಿಂದ ಹಂಗೇರಿಯನ್‌ರೆಲ್ಲರೂ ಒಕ್ಕಟ್ಟಾಗಿ ಆ ಪ್ರದೇಶದಲ್ಲಿ ಯುದ್ಧ ಬೀಜಗಳನ್ನು ಬಿತ್ತುತ್ತಿದ್ದಾರೆ. ಈಗ ಬ್ರಿಟನ್, ಅಮೇರಿಕಾ, ಜಪಾನ ಈ ಮೂರು ದೇಶದ ರಾಯಭಾರಿಗಳು ಲಂಡನಿನಲ್ಲಿ ನೌಕಾದಳದ ಪರಿಮಾಣವನ್ನು ನಿಶ್ಚಯಿಸತೊಡಗಿದ್ದಾರೆ. ೧೯೨೨ನೇ ಇಸ್ವಿಯಲ್ಲಿ ಅಮೇರಿಕೆಯ ವ್ಹಾಶಿಂಗಟನ್‌ದಲ್ಲಿ ಆದ ತಹನಾಮೆಯಂತೆ ೫—೫—೩ ಈ ಪ್ರಮಾಣದಲ್ಲಿ ಅನುಕ್ರಮವಾಗಿ ಬ್ರಿಟನ್-ಅಮೇರಿಕಾ-ಜಪಾನ ಈ ೩ ದೇಶಗಳ ನೌಕಾದಳದ ಪರಿಮಾಣವಿರಬೇಕಾಗಿ ಗೊತ್ತಾಗಿದ್ದಿತು. ಈ ಪರಿಮಾಣಕ್ಕೆ ಈಗ ಜಪಾನರ ಒಪ್ಪಿಗೆಯಿಲ್ಲ. ಬ್ರಿಟಿಶ—ಅಮೇರಿಕೆಯವರಂತೆಯೇ ಸಮಾನವಾಗಿ ನೌಕಾದಳವನ್ನೇರ್ಪಡಿಸಲು ತಮಗೆ ಅಧಿಕಾರವಿರಬೇಕಾಗಿ ಜಪಾನ ರಾಯಭಾರಿಗಳ ಆಗ್ರಹ. ಇದಕ್ಕೆ ಅಮೇರಿಕೆಯ ಒಪ್ಪಿಗೆಯಿಲ್ಲ. ಹೀಗೆ ಜಪಾನ ದೇಶಕ್ಕೆ ಸ್ವಾತಂತ್ರ್ಯ ಕೊಟ್ಟರೆ ಜಗತ್ತಿನಲ್ಲಿ ಶಾಂತತೆ ಕಾಪಾಡುವದು ಕಠಿಣವೆಂದು ಅಮೇರಿಕೆಯ ರಾಯಭಾರಿಗಳ ಅಂಬೋಣ. ಬ್ರಿಟಿಶರು ಜಪಾನಿಯರೊಡನೆ ಗುಪ್ತವಾಗಿ ತಹನಾಮೆ ಮಾಡುವ ಆಲೋಚನೆಯಲ್ಲಿದ್ದಾರೆಂದು ಗಾಳಿ ಸುದ್ದಿ. 'ಛೇ! ನಾವೆಂದಿಗೂ ಗುಪ್ತ ತಹನಾಮೆ ಮಾಡಿಕೊಳ್ಳುವವರಲ್ಲ" ವಾಗಿ ಬ್ರಿಟಿಶ ರಾಯಭಾರಿಗಳ ಅಂಬೋಣ.

ಈ ಪ್ರಕಾರ ಬೇರೆ ಬೇರೆ ರಾಷ್ಟ್ರಗಳಲ್ಲಿ ಶಸ್ತ್ರಾಸ್ತ್ರ-ಮದ್ದುಗುಂಡು-ಹಡಗುಪಡೆ, ತೋಪು-ಬಂದೂಕಿಗಳ ಸಂಗ್ರಹ ಮಾಡುವ ರಭಸ ನಡೆದಿದೆ. ಮುಖ್ಯ ಪ್ರಧಾನರಾದ ಮೆಕಡೋನಲ್ಡರವರ ಅಂಬೋಣದಂತೆ "*Arms make for war*" ಶಸ್ತ್ರಾಸ್ತ್ರಗಳ ಗುರಿ ಯುದ್ಧ! ಎಂದ ಬಳಿಕ, ಎಲ್ಲಿ ನೋಡಿದರಲ್ಲಿ ಯುದ್ಧ ತಯಾರಿಯೇ ಕಾಣುತ್ತದಾಗಿ ನಾನು ಹೇಳುವದು ಯಥಾರ್ಥವಲ್ಲವೇ?

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ! ಯೋಗ್ಯವಾದ ಧಾರಣೆ!!

ಯು. ಶಿವಾ ಎಂಡ್ ಬ್ರದರ್ಸ,

ಒಟೊಮೊಬೈಲ ಇಂಜಿನಿಯರ್ಸ ಎಂಡ ಬೊಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶವರಲೆಟ್, ಬ್ಯೂಕ, ಕ್ರಾಯಸ್ಲರ, ಸಿಟ್ರೊನ್, ಡೊಜ್, ಡಿಸೊಟೊ, ಡ್ಯೂರಂಟ, ಎಸೆಕ್ಸ, ಎರಸ್ಕಿನ್, ಫಾರ್ಗೋ, ಫ್ಯಾಟ, ಜಿ. ಎಮ್. ಸಿ., ಫೋರ್ಡ ವಿ, ಫೋರ್ಡ ಎ., ಹುಪಮೊಬೈಲ್, ಹಡಸನ್, ಮಸ್ಕವೆಲ್, ಓವ್ಹರಲೆಂಡ್ ವ್ಹಿಪೆಟ್, ಪಿಲೀಸ, ಸ್ಟುಡಬೇಕರ, ರಗ್ಬಿ, ಪ್ಲಿಮಾಥ, ರಿಯೋ, ಸಿಂಗರ ಮೊದಲಾದ ಯಾವತ್ತು ಮೇಕರ್ಸಗಳ ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿಯ ದರದಿಂದಲೂ ಮಾಡಿಕೊಡುವೆವು. ಬೇಕಾದ ಸ್ಟಾಯಿಲ ಬೋಡ್ಯಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಇದಲ್ಲದೆ—

ಎಕ್ರೀಕಲ್ಚರಲ ಜಮೀನಿಗೆ ಸುಲಭವಾಗಿ ನೀರು ಸೇದುವ ಟೆಕಾಪು ಸಣ್ಣ-ದೊಡ್ಡ ನೀರಿನ ರಾಟೆಗಳನ್ನು ತಯಾರಿಸಿ ಜಾಗದಲ್ಲಿ ಫಿಟಿಂಗ ಮಾಡಿಕೊಡುವೆವು, ಬೊಡಿಬಿಲ್ಡಿಂಗ, ಹೊಸ ನಮೂನೆಯ ಖುರ್ಚಿಗಳೂ, ಬಾಂಕುಗಳೂ, ಕೊಟ್‌ಗಳೂ ಮಾಡಿಕೊಡುವೆವು, ಒದಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ.

ಕಾನಡಾವೃತ್ತ.

೨೧ನೇ ಭಾದ್ರ ಸಂ॥ ಕಾರ್ತಿಕ ಶು ೬ಷ್ಟಿ ಸೋಮವಾರ

ನಾಲನೇ ಶೂಲ.

ದೇಶಗಳಿ, ವ್ಯಕ್ತಿಗಳಿ ತಮ್ಮ ಹೊಂದಿದ ಆಯಕ್ಕೆ ಮಿಕ್ಕಿ ವ್ಯಯವ ಗಹತ್ತಿದರೆ ಗಾಳಿವಾಗ ತ್ತದೆ ದೇಶದ ವಿಚಾರ ಮಾಡುವ ಗ ಆಮದ-ರಫ್ತ ಎಕ್ಕ ಹಿಡಿಯ ತ್ತಾರೆ ಆಮದಿಗಂತ ರಫ್ತು ಹೆಗ್ಗ ೨ದರೆ ಆ ದೇಶವು ಆಸ ರ ಪಾಟೀಗ ಸಂಪನ್ನವಾದ ದ್ದಾವಳಿಕೆ ರಫ್ತಿಗಂತ ಆಮದು ಹೆಚ್ಚ ದರ ಆ ಮಾ ನದಿಂದ ಆ ದೇಶವು ವಿಪನ್ನವಸ್ಥೆಯದು ಇದಕ್ಕ ಗಿಯೇ ಜರ್ಮನಿಯಿಂದ ನಿ ಳ ತೆರಿಗೆಗುವವಿಲ್ಲ ಸರಕು ಹೆಚ್ಚೆತ್ತ್ಕಗಿ ರಫ್ತುವನಕ ದೇಶದ ಸಂಪತ್ತಿ, ಬೆಳೆಯುವವಿಲ್ಲ, ಸಂಪದಭ್ಯುದಯ ವ ದನಕ ಋಣ ವಿಮೋಚನನಾಗುವದಿಲ್ಲ ಅದಕಾ ಗಿ ಒಮ್ಮೆ ಸಿಯೆಸಿ ಗಿನ ಸಂಶೋಧಕರು ಒದೇಶ ದ ಆಮದ ಗುವ ಕಚ್ಚಾ ಸರಕುಗಳನ್ನು ರಸಾ ಯನ ಶಾಸ್ತ್ರ ಪ್ರಯೋಗ ದಿಂದ ಸ್ವದೇಶದಲ್ಲಿಯೇ ತಯಾರಿಸಿ ಸ್ವಯಂಪೂರ್ಣ ಮಾಡುವಣೆಸುತ್ತಿದ್ದಾರೆ ಅಂಥ ಹಿಂದಿನ ದೇಶದವರು ಒಟ ಟಿಯಿಂದ ಪೆಟ್ರೋಲನ್ನು ತಯಾರಿಸಲಾರಂಭಿಸಿ ದ್ದಾರೆ, ಹಾಲು ಕಟ್ಟಿಗೆಯಿಂದ ಇದ್ದಲಿಯನ್ನು ತಯಾ ರಿಸಿ ಕಲ್ಲಿದ್ದಲಿಯ ಆವ ದಿಗೆ ತಡೆಹಾಕಿದ್ದಾರೆ ಮೇಲಿ ಹೇಳಿದಂತೆ ತಮ್ಮ ಹೊಂದಿದ ದೇಶದ ವ್ಯಯವನ್ನು ತಗ್ಗಿಸಿ ಆಯವನ್ನು ಹೆಚ್ಚಿಸುವದು ಅತ್ಯವಶ್ಯ ನಂತರೆ ಸ್ವದೇಶದಲ್ಲಿ ಬೆಳೆಯುವ ಸರಕುಗಳನ್ನೇ ಸ್ವದೇಶದವರು ಉಪಯೋಗಿಸಿ ಪ್ರೋತ್ಸಾಹ ಮಾಡ ಬೇಕು, ಅಲ್ಲದೆ, ಅನುಕೂಲತೆಯಿದ್ದರೂ, ಅಗ್ಗವಾಗಿ ಸಿಗುತ್ತಿದ್ದರೂ ವಿದೇಶಿ ಒಡವೆಗಳನ್ನು ಕೊಂಡುಕೊಳ್ಳ ಕೂಡದು, ಅದಕ್ಕಾಗಿ ವ್ಯಗ ಸ್ವಂತ ಉತ್ಪತ್ತಿ ಮಾಡಿ ದಂದ ಸಾಮುಗ್ರಿಗಳ ಮೇಲಿಂದಲೇ ಸಂಸಾರ ಸಾಗಿಸ ಬೇಕು. ಅಲ್ಲದೆ, ಪೇಟೆಯಿಂದ ಖರೀದಿ ಮಾಡಿ ಸಂಸಾರ ಸಾಹಿತ್ಯವನ್ನು ಪೂರೈಸಿಕೊಳ್ಳ ಕೂಡದು ಜನರು ಈ ವಿಚಾರ ಹಿಡಿಯದೆ, ತಮ್ಮ ವಿಪತ್ತಿನ ಗ್ರಹಿಕೆ ಪಡೆಯದೆ ಅಂತೆಗಟ್ಟು ಖರ್ಚು ಮಾಡಿದ್ದ ರಿಂದ ಸಾಲವಾಗಲು ಒಂದು ಕಾರಣವಾಗಿದೆ ಸಾಲ ದ ಮೂಲ ಇದು. “ರಾಜಾ ಕಾಲಸ್ಯ ಕಾರಣಂ” ಎಂಬಂತೆ ರಾಜ್ಯಧೋರಣವೂ, ರಾಜ್ಯಪದ್ಧತಿಯೂ, ತೆರಿಗೆ ಎತ್ತುವಳಿಯೂ ಕೆಲ ಮಟ್ಟಿಗೆ ಜನರ ಸಾಲಕ್ಕೆ ಕಾರಣವಾಗಿದೆ ಜೊತೆಗೆ ಜನರ ಅವಿಚಾರವೂ ದರೂ ಒಂದು ಕಾರಣವೇ

ಮಹಾತ್ಮಾಜಿಯವರೂ ಇದೇ ಮಾತು ಹೇಳಿ ಜನರಿಗೆ ಖರ್ಚು ಕಡಿಮೆ ಮಾಡಲಿಕ್ಕೂ ಉತ್ಪತ್ತಿಯನ್ನು ಬೆಳೆ ಸಲಿಕ್ಕೂ ಉಪದೇಶಿಸುತ್ತಾರೆ ಅಖಿಲ ಭಾರತೀಯ ಗ್ರಾಮ ಕೈಗಾರಿಕೆ ಸಂಘವನ್ನು ಮಹಾತ್ಮರು ಏರ್ಪ ಡಿಸಿ ಜನರ ವಿಲಾಸ ವೃತ್ತಿಯಿಂದ ಅಪ್ರಯೋಜನ ವಾಗಿ ನಷ್ಟಹೊಂದಿದ ಕೈಗಾರಿಕೆಗಳನ್ನು ಪುನರುದ್ಧರಿ ಸಿ ಗ್ರಾಮಗಳೊಳಗಿನ ಸಂಪತ್ತನ್ನು ಬೆಳೆಸಲಿಕ್ಕೂ, ಗ್ರಾಮಗಳನ್ನು ಸ್ವಯಂಪೂರ್ಣ ಮಾಡಲಿಕ್ಕೂ ಪೂರ್ವದ ಪದ್ಧತಿಯಂತೆ ಪ್ರಯತ್ನಿಸುತ್ತಾರೆ ಪೂರ್ವಕಾಲದಲ್ಲಿ ಈಗಿನಂತೆ ದೃಷ್ಟಪ್ರಮಾಣ ಹಸ್ಸ ಪಟ್ಟಣಗಳಿಗೆ ಹರಿದುಹೋಗುತ್ತಿ ದ್ದಿಲ್ಲ ಒಗಿಗರೂ, ಕಮ್ಮಾರರೂ, ಕಂಬಾರರೂ ಅಲ್ಲಿ ಲ್ಲಿಯ ಜನರಿಗೆ ಆಗತ್ಯವಿದ್ದ ಸಾಮುಗ್ರಿಗಳನ್ನು ಪೂರೈ ಸಿ ತಮ್ಮ ನಿರ್ವಾಹವನ್ನೂ, ಗ್ರಾಮದವರ ನಿರ್ವಾ ಹವನ್ನೂ ಸಾಗಿಸುತ್ತಿದ್ದರು ಈಗ ಆ ಉದ್ದಿಮೆಗಳೇ ನಷ್ಟವಾಗಿವೆ ಒಂದು ಸೂಜಿ ಬೇಕಾದರೆ ಪಟ್ಟಣದ ಪೇಟೆಗೆ ಬರಬೇಕು ಪಟ್ಟಣದವರು ಪರದೇಶಗಳಿಂ ದ ಆಮದು ಮಾಡಿ ಗ್ರಾಮದವರಿಗೆ ಪೂರೈಸುತ್ತಾರೆ ಈ ಸ್ಥಿತಿಯಿಂದ ಗ್ರಾಮದವರು ಕ್ರಮವಾಗಿ ಒಡವೆ ಪ್ರಿಯರಾದರು ಪ್ರಬಲವಾಗಿ ನೂತನ ಸಂಸ್ಕೃತಿಯ ಪರಿಣಾಮಗಳೂ, ಕಾಯ-ಕಷ್ಟದ ಪರಾಙ್ಮುಖತೆಯೂ, ದೊಡ್ಡಸ್ತ ನದ ವಿಪರೀತ ಕಲ್ಪನೆಯೂ ಹಬ್ಬಿಕೊಂಡು ಜನರು ಸಾಲದಲ್ಲಿ ಮುಳುಗಿ ಬಿದ್ದಿದ್ದಾರೆ ಸಾಲದೊಳಗಿಂದ ಪಾರಾಗಬೇಕಾದರೆ ಮೊಟ್ಟಮೊದಲು ನಾವು ಆತ್ಮ ನಿರೀಕ್ಷಣ ಮಾಡಿ ಸಂಸಾರ ಖರ್ಚನ್ನು ಬರಬರುತ್ತ ತಗ್ಗಿಸಬೇಕು. ಅಂದರೆ ಮಾತ್ರ ಉಳಿಗಾಲವಿದೆ

ಸರಕಾರಿ ಅಧಿಕಾರಿಗಳಾದರೂ ಇದೇ ಮಾತನ್ನು ಈಗ ಹೇಳತೊಡಗಿದ್ದಾರೆ. ಪ್ರಾಂತ ಸಾಹೇಬರಾದ ಮಿ॥ ಕೋಯಿಮತ್ತೂರರವರು ಇದೇ ಮಾತನ್ನು ಹೇರೆಯ ಬೇಸಾಯ ಪ್ರದರ್ಶನದಲ್ಲಿ ಹೇಳಿದರು “ನಿಮಗೆ ಬೇಕಾಗುವ ಜೀನಸುಗಳನ್ನು ನಿಮ್ಮ ಸ್ವಂತ ಹೊಲ ಮನೆಗಳ ಬೆಳೆಸಿಕೊಳ್ಳಿರಿ, ಪೇಟೆಯಲ್ಲಿ ಕೊಂಡುಕೊಳ್ಳ ಹೋಗಬೇಡಿ. ಕಾಯಕಷ್ಟ ಮಾಡಿ,” ಎಂಬುದಾಗಿ ಸಲಹೆ ಕೊಟ್ಟರೆ ತ್ತರೆ ಪ್ರಾಂತ ಸಾಹೇ ಬರು ಕೊಟ್ಟ ಸಲಹೆಯು ಮಹತ್ವದ್ದಿದ್ದ ಗ್ರಾಮದ ವರಿಗೆ ಸ್ವಾವಲಂಬಿಗಳಾಗಿಯೂ, ಸ್ವಯಂಪೂರ್ಣ ರಾಗಿಯೂ ಉಳಿಯಲು ಅವರು ಬಾಧ್ಯರು ಕ್ಕಾರೆ ಗ್ರಾಮದವರು ಆಗಾಗಿ ಆತ್ಮನಿರೀಕ್ಷಣೆ ಮಾಡಿ ಸಂಸಾರಕ್ಕೆ ಆವಶ್ಯವಾಗಿರುವ ಜೀನಸುಗಳ್ಯಾವವು? ಅನಾವಶ್ಯಕವಾದ ಜೀನಸುಗಳ್ಯಾವವು? ಅವಶ್ಯಕವಾದ ಜೀನಸುಗಳನ್ನು ಸ್ವಂತ ಪೂರೈಸಿಕೊಳ್ಳಬಹುದೂ ಹೇಗೆ? ಹಾಗೆ ಪೂರೈಸಿಕೊಳ್ಳಲಾಗದಿದ್ದರೆ ಯಾವ ವ್ಯವಸ್ಥೆ ಮಾಡಬಹುದು? ಅವುಗಳ ಒದಲಿಗೆ ಸ್ವತಃ ಪೂರೈಸಿಕೊಳ್ಳಬಹುದಾದ ಜೀನಸುಗಳನ್ನು ತಯಾರಿಸಬಹುದೋ ಹೇಗೆ? ಎಂಬ ವಿಚಾರವನ್ನು ಕೂಲಂಕುಷವಾಗಿ ನಡಿಸಿ ಹಾಸಿಗೆ ತಕ್ಕದ್ದಾಗಿ ಕಾಲು ಚಾಚಿಕೊಂಡು ನಿರ್ವಾಹ ಮಾಡುವ ವ್ಯವಸ್ಥೆ ಮಾಡ ಬೇಕು ಆಯ-ವ್ಯಯ ನೋಡದೆ ತಾನು ನೂರು ಎಂಬುದನ್ನು ವಿಚಾರಿಸದ ಖರ್ಚು ಮಾಡುತ್ತ ಹೋದದ್ದರಿಂದ ಜನರಿಗೆ ಸಾಲವಾಗಿದೆ ವಿಶೇಷವಾಗಿ ಕಾಯ-ಕಷ್ಟ ಪರಾಙ್ಮುಖತೆಯಿಂದ ಜನರ ಬಡತನ ಹೆಚ್ಚಿದೆ ಅದಕ್ಕಾಗಿ ರಾಷ್ಟ್ರೀಯ ಸಭೆಯವರು ಮಹಾ ತ್ಮರ ಸಲಹೆಯ ಮೇರೆಗೆ ಕಾಯಕಷ್ಟದ ಶರ್ತವನ್ನು ರಾಷ್ಟ್ರೀಯ ಸಭೆಯ ಘಟನೆಯಲ್ಲಿ ಸೇರಿಸಿದ್ದಾರೆ ಕಾಯಕಷ್ಟದ ಅಭಿರುಚಿ ಜನರೊಳಗೆ ಒದಗುಮಾಡಬೇ ಕು, ಕಾಯಕಷ್ಟಕ್ಕೆ ಲೋಕದಲ್ಲಿ ಮಾನ್ಯತೆಯಿರಬೇ ಕು ಈಗಿನಂತೆ ತಿರಸ್ಕಾರವಾಗಕೂಡದು, ಎಂಬದೇ ರಾಷ್ಟ್ರೀಯ ಸಭೆಯ ಉದ್ದೇಶ ನಿಶಕಾರವೂ, ರಾಷ್ಟ್ರೀ ಯಸಭೆಯವರೂ ಐಕ್ಯಮತ್ಯ ಹೊಂದುವದು ಯಾವಾ ಗಲೂ ಉಪಯುಕ್ತ ಅದರೆ, ಈ ವಿಷಯದಲ್ಲಿ ಇತ್ತಟ್ಟಿ ನವರೂ ಒಮ್ಮತಕ್ಕೆ ನವರಾಗಿರುತ್ತಾರೆ ಜನರು ಕಾಯ ಕಷ್ಟವನ್ನು ಕೈಕೊಳ್ಳುವದರಿಂದ ಯಾವತ್ತೂ ಋಣ ಒಮ್ಮೆಲೇ ಪರಿಹಾರವಾಗುವದೆಂದು ನಮ್ಮ ತಿಳಕೆ ಯಿಲ್ಲ ರಾಜ್ಯ ಧೋರಣದಲ್ಲಿಯೂ ತಕ್ಕ ತಿದ್ದುಪಾಟ ವಾಗಬೇಕು ಈ ಕುರಿತು ನಾವು ವಿವರಿಸುವವರಿದ್ದೇವೆ ಆದರೆ ಜನರು ಕಾಯಕಷ್ಟದ ಪ್ರವೃತ್ತಿಯವರಾ ದರೆ ಭವಿಷ್ಯದಲ್ಲಿ ಪುನಃ ಅವರು ಸಾಲದಲ್ಲಿ ಬೀಳಲಿ ಕ್ಕಿಲ್ಲವಾಗಿ ನಾವೆಣಿಸಿ ಮುಂದಿನ ಯೋಜನೆ ಮಾಡ ಒರುತ್ತದ ಇಚ್ಛಿಸಿದ್ದರೆ, ರಾ॥ ಸಾ॥. ಎನ್ ಮೇಥಾ ಆಯ್ ಸಿ ಎಸ್ ಇವರು ಒರೆಯುವಂತೆ, ಈಗಿನ ಋಣಪರಿಹಾರವಾದ ಒಳಕ ಪ್ರಶ್ನೆ ಜನರು ಸಾಲ ಗಾರರಾಗುವ ಭೀತಿಯುಂಟು ರಾ॥ ಸಾ॥ ಎನ್ ಮೇಥಾರವರು ತನ ಘನಕ ಅಧಿಕಾರಿಗಳಿದ್ದು, ಕಾಕ್ಕೀ ರ-ಜಮ್ಮು ಸಂಸ್ಥಾನಗಳಲ್ಲಿ ತೆರಿಗೆ ಎತ್ತುವಳಿಯ ಪದ್ಧತಿಯನ್ನು ಅಭ್ಯಾಸ ಮಾಡಿದವರಿದ್ದಾರೆ ‘ತಂ ನಾ ರತವರ್ಷ’ವೆಂಬ ಮಾಸಪತ್ರಿಕೆಯಲ್ಲಿ ಒಕ್ಕಲಿ ಗರ ಋಣಪರಿಹಾರದ ಯೋಜನೆಯ ಕುರಿತು ಸರ ಕಾರವೂ, ಸಹಕಾರಿ ಸಂಘಗಳೂ ಕೈಕೊಳ್ಳಬಹುದಾದ ಉಪಾಯಗಳನ್ನು ಅವರು ಸೂಚಿಸಿದ್ದಾರೆ. ಆ ಲೇಖನ ಮನನೀಯವಿದೆ ಅದನ್ನು ಈ ಮುಂದೆ ಪರಿಚಿಂಬನಿನ ಮೇಲ ನಮ್ಮಕ್ಕೆ ಹೇಳುವದಿಷ್ಟೇ ಋಣ ಪರಿಹಾರದ ಯೋಜನೆ ಕೈಕೊಳ್ಳುವ ಪೂರ್ವದಲ್ಲಿ ಒಕ್ಕಲಿಗರು ಋಣಪರಿಹಾರದ ಪಾತ್ರತೆಯನ್ನು ಸಿದ್ಧ ಪಡಿಸಬೇಕು ಋಣವಾಗದಂತೆ ಜಾಗರೂಕತೆಯ ನ್ನು ಕೊಳ್ಳಬೇಕು. ಜೀವನಕ್ರಮದಲ್ಲಿ ತಕ್ಕ ಮಾ ರ್ಪಾಟುಗಳನ್ನು ಮಾಡಬೇಕು ಅಂದರೆ ಮಾತ್ರ ಯಾವದೊಂದು ಯೋಜನೆಯಿಂದ ಶಾಶ್ವತವಾದ ಪ್ರಯೋಜನವಾಗಬಲ್ಲದ. ಜೀವನಕ್ರಮ ಸುಧಾರಿಸಿ ಕೊಳ್ಳದ ಇಂದಿನ ಋಣಪರಿಹಾರ ಮಾಡಿ ಪ್ರಯೋ ಜನವೇನಿದ?

ಸ್ಫುಟ ಸೂಚನೆಗಳು.

೧ ಜಬಲಪುರ ಮ್ಯುನಿಸಿಪಾಲಿಟಿಯ ಅಧ್ಯಕ್ಷ ರಾದ ಶ್ರೀ॥ ದ್ವಾರಕಾಪ್ರಸಾದ ಮಿಶ್ರರವರಿಗೂ, ಮಧ್ಯ ಪ್ರಾಂತ ಸರಕಾರಕ್ಕೂ ಒಳ್ಳೇ ಸಂಗ್ರಾಮ ನಡೆದಿದೆ ಶ್ರೀ॥ ಮಿಶ್ರರವರು ಸತ್ಯಾಗ್ರಹಿ ವೀರರು ಪ್ರಾಂತಿಕ ಸರಕಾರದ ಬೆದರಿಕೆಗೆ ಸೊಪ್ಪುಹಾಕದೆ ಮ್ಯುನಿಸಿಪಾ ಲಿಟಿಯ ಖರ್ಚಿಗೆ ಆವಶ್ಯವುಳ ಹಣವನ್ನು ಸ್ವತಃ ಚೆಕ್ ಬರದು ತರಿಸಿಕೊಂಡು ಮ್ಯುನಿಸಿಪಾಲಿಟಿಯ ಕೆಲಸವನ್ನು ಸುಸೂತ್ರವಾಗಿ ನಡಿಸಿದರು ಪ್ರಾಂತಿಕ ಸರಕಾರಕ್ಕೆ ಇದು ಅಸಹ್ಯವಾಯಿತು ಮ್ಯುನಿಸಿಪಾ ಲಿಟಿಯ ಕಾರ್ಯದರ್ಶಿಗಳಾಗಿ ನೇಮಿಸಿದ ಸತ್ಯಾ ಗ್ರಹ ವಕೀಲರಾದ ಮಿ॥ ಸೀಲರವರಿಗೆ ಪದಚ್ಯುತ ಮಾಡಲೇಬೇಕೆಂದೂ, ಸರಕಾರಿ ಆಶ್ರಯ ಹೊಂದಿದ ರಾ॥ ವರ್ಮಾರವರಿಗೆ ಕಾರ್ಯದರ್ಶಿಗಳಾಗಿ ನೇಮಿಸಿ ಕೊಳ್ಳಲೇಬೇಕೆಂದೂ ರಾಕ್ಷಸೀ ಮಹತ್ವಾಕಾಂಕ್ಷೆ ಹಿಡಿದು ಸಭೆಯಲ್ಲಿ ಈ ವಿಷಯ ಆಲೋಚಿಸಿ ನಿರ್ಣ ಯಿಸಬೇಕಾಗಿ ಡಪ್ಯುಟಿ ಕಮಿಶನರರ ಕಡೆಯಿಂದ ಅಪ್ಪಣೆಯಾದಂತೆ, ನವಂಬರ ೧ನೇ ತಾರೀಖಿನ ಸಂ ಜೆ ಅಧ್ಯಕ್ಷರು ಸಭೆ ಸೇರಿಸಿದರು ಡಿ॥ ಮೆಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಜರ ಕೋಡಿನ ೧೪೪ನೇ ಕಲಮಿ ನಂತೆ ಹುಕುಮು ಹೊರಡಿಸಿ ಸಭೆಯ ೧ ತಾಸು ಮುಂಚೆ, ಸಭೆ ಮುಗಿದ ೧ ತಾಸಿನ ತನಕ ಮ್ಯುನಿಸಿ ಪಾಲಿಟಿಯಲ್ಲಿ ಜನರ್‍ಯಾರೂ ಹೋಗಬಾರದೆಂದು ವಿಧಿ ಸಿ ಅಜೆ-ಬಾಜೆ, ಒಳ-ಹೊರಗೆ ಸಶಸ್ತ್ರ ಪೋಲೀಸ ಪಹರೆ ಕಠೋರ ಕಾವಲಿಟ್ಟರು ಪೋಲೀಸ ಸುಪರಿಂಟೆಂಡೆಂಟರೂ ಮೆಜಿಸ್ಟ್ರೇಟರೂ ಸ್ವತಃ

ಶಾಸಕರು ಸಿದ್ಧರಾಗಿ ಕುಳಿತಿದ್ದರು ನಾಗರಿಕರಿಗೂ, ಮ್ಯುನಿಸಿಪಾಲಿಟಿಯ ಅಧಿಕಾರಿಗಳಿಗೂ ಸಭೆಗೆ ಹೋಗಲು ಹುಕುಮಿನಲ್ಲಿ ಪ್ರತಿಬಂಧವಿದ್ದಿಲ್ಲ. ಆದಾಗ್ಯೂ, ಕಾರ್ಯದರ್ಶಿಗಳಾದ ಮಿ| ಸೀಲರವರಿಗೂ, ಪತ್ರಿಕಾ ಪ್ರತಿನಿಧಿಗಳಿಗೂ ಒಳಗೆ ಹೋಗಗೊಡಲಿಲ್ಲ. ರಾ| ರವರ್ಮಾರವರ ವಿರುದ್ಧ ಮತ ಕೊಟ್ಟಲ್ಲಿ ಕಾರಾಗೃಹವಾಸಕ್ಕಾಗಿ ಹಾಕಲ್ಪಟ್ಟಿತೆಂದು ಸಭಾಸದರಾದ ಶ್ರೀಮತಿ ಸುಭದ್ರಾಕುಮಾರಿ ಚವ್ಹಾಣರವರು ಉದ್ಗರಿಸಿದರು. ಸಭೆ ಸೇರಿದೊಡನೆ ಪೋಲೀಸರಿಗೆ ಸಭಾಮಂದಿರದೊಳಗಿಂದ ಹೊರಹಾಕಲ್ಪಡಬೇಕ ಸಭಿಕರು ಸ್ವತಂತ್ರವಾಗಿ ಈ ವಿಷಯವನ್ನು ಚರ್ಚಿಸಿ ಮತ ಕೊಡಬಾರದಾಗಿ ಶ್ರೀ| ವಿಷ್ಣುದಯಾಳ ಭಾರ್ಗವರವರು ಉದ್ಗರಿಸಿ, ಸಭೆಯನ್ನು ಇಷ್ಟಕ್ಕೇ ವಿಸರ್ಜಿಸಬೇಕಾಗಿ ಸೂಚನೆ ತಂದರು. ಅಂತೆಯೇ ಅಧ್ಯಕ್ಷರು ಸಭೆಯನ್ನು ವಿಸರ್ಜಿಸಿ ೧೬ ಸಭಾಸದರೊಡನೆ ಸಭೆಯೊಳಗಿಂದ ಎದ್ದು ನಡೆದರು. ಈ ಪ್ರಕಾರ ನೋಡಿ ಎಲ್ಲರೂ ಚಕಿತರಾಗಿದ್ದಾರೆ.

---

೩ ಮ್ಯುನಿಸಿಪಾಲಿಟಿಯ ಕಾಯಿದೆಯಂತೆ ಸಭೆಯ ವ್ಯವಸ್ಥೆಯನ್ನು ಕಾಪಾಡುವ ಸಂಪೂರ್ಣ ಜವಾಬದಾರಿ ಸಭಾಪತಿಗಳಾದ ಅಧ್ಯಕ್ಷರದು. ಇದರೊಳಗೆ ಡಿ| ಮೆಜಿಸ್ಟ್ರೇಟರಿಗಾಗಲಿ, ಡಿ| ಸುಪರಿಂಟೆಂಡೆಂಟರಿಗಾಗಲಿ ಏನೊಂದೂ ಸಂಬಂಧವಿಲ್ಲ. ಹೊರ ಜನರು ಶಾಂತತೆಯಿಂದ ನಡೆಕೊಳ್ಳದಿದ್ದಲ್ಲಿ ಅವರಿಗೆ ಹೊರತಳ್ಳುವ ಅಧಿಕಾರವು ಕಾಯಿದೆಯಂತೆ ಸಭಾಪತಿಗಳಿಗಿದೆ. ಹೀಗಿದ್ದು, ಡಿ| ಮೆಜಿಸ್ಟ್ರೇಟರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಿಗೆ ಕೇಳದೆ ಹುಕುಮು ಹೊರಡಿಸಿದ್ದನ್ನು ನೋಡಿ ಸಖೇದಾಶ್ಚರ್ಯವಾಗಿದೆ. ಮ್ಯುನಿಸಿಪಾಲಿಟಿಯಲ್ಲಿ ಜನರು ತಂಡುಗಟ್ಟಿ ಸೇರ್ದಲ್ಲಿ ಸಭಿಕರಿಗೆ ಸ್ವತಂತ್ರವಾಗಿ ಮತದಾನ ಮಾಡಲಾಗದೆ ತೊಂದರೆಯಾಗಬಹುದೆಂದು ಡಿ| ಮೇಜಿಸ್ಟ್ರೇಟರು ಕಲ್ಪಿಸಿ ಪ್ರತಿಬಂಧಕ ಹುಕುಮನ್ನು ಪ್ರಾಮಾಣಿಕತನದಿಂದ ಹೊರಡಿಸಿ ಮೆಂಬರರ ಮತಸ್ವಾತಂತ್ರ್ಯ ಕಾಪಾಡಿದ ಬಗ್ಗೆ ನಾವು ಅವರಿಗೆ ಹೊಗಳುತ್ತಿದ್ದೆವು. ಆದರೆ ಸಶಸ್ತ್ರ ಪೋಲೀಸ ಬಂದೋಬಸ್ತನ್ನಿಟ್ಟು ಮೆಂಬರರಿಗೆ ಸರಕಾರಿ ಕೈಗೊಂಬೆಯಾಗಿ ರಾ| ರವರ್ಮಾರವರಿಗೆ ಮತ ಕೊಡಲು ಬಲಾತ್ಕಾರ ಮಾಡುವದು ಲೋಕಶಾಹಿಯ ವಿಡಂಬನೆಯಲ್ಲದೆ ಮತ್ತೇನು? ಶ್ರೀ| ಮಿಶ್ರರವರು ಇಂಥ ಬಲಾತ್ಕಾರಗಳಿಗೆ ಸೊಪ್ಪು ಹಾಕುವಷ್ಟು ದುರ್ಬಲಮನಸ್ಕರಲ್ಲ. ರಾಷ್ಟ್ರೀಯ ಸಂಗ್ರಾಮದ ಕಿಡುಗಲಿಗಳವರು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಅವರೊಂದು ಪತ್ರ ಬರೆದು ಅದರೊಳಗೆ ೨೦ ಪ್ರಶ್ನೆಗಳ ಖುಲಾಸ ಮಾಡಲು ಅರಿಕೆ ಮಾಡಿಕೊಂಡಿದ್ದಾರೆ. ಅಧಿಕಾರಿಗಳ ಕೈಸ್ವಾಧೀನಸ್ಥಾನಗಳಲ್ಲಿ ಈಗ ಬಯಲಾಗುವವು, ಸ್ಥಾನಿಕ 'ಸ್ವರಾಜ್ಯ' ಸಂಸ್ಥೆಗಳೊಳಗಿನ ಸ್ವರಾಜ್ಯಾಂಶವು ಪರಿಸ್ಫುಟವಾಗುವವು.

---

೪ "ಊರಿದ್ದಲ್ಲಿ ಹೊಲಗೇರಿ" ಎಂಬ ನಾಣ್ಣುಡಿಯಂತೆ ಜಬಲಪುರ ಮ್ಯುನಿಸಿಪಾಲಿಟಿಯಲ್ಲಿಯೂ ತೊಲಗಿಂರಿಯಿದ ಶ್ರೀ| ಮಿಶ್ರರವರು ಸಭೆಯನ್ನು ವಿಸರ್ಜಿಸಿ ಸಭಾಸ್ಥಾನದಿಂದ ಎದ್ದು ಬಂದ ಬಳಿಕ ಉಳಿದವರು ಉಪಾಧ್ಯಕ್ಷರಾದ ರಾ| ರವರ್ಮಾರವರಿಗೆ ಸಭಾಪತಿಗಳನ್ನಾಗಿ ನೇಮಿಸಿಕೊಂಡು ಪ್ರಾಂತಿಕ ಸರಕಾರದ ಹುಕುಮಿನಂತೆ ರಾ| ರವರ್ಮಾರವರಿಗೆ ಕಾರ್ಯದರ್ಶಿಗಳಾಗಿ ನೇಮಿಸಿದರು. ರಾ| ಸೀಲರವರು ಕೂಡಲೆ ಅಧಿಕಾರತ್ಯಾಗ ಮಾಡಬೇಕಾಗಿ ರರಾಯಿಸಿದರು. ರಾ| ರವರ್ಮಾರವರಿಗೆ ಪ್ರಾಂತಿಕ ಸರಕಾರದ ಹುಕುಮಿನಂತೆ ಹಿಂದಿನ ಸಂಬಳ ಹಿಡಿದುಕೊಡಬೇಕಾಗಿ ರರಾಯಿಸಿದರು. ಅಧ್ಯಕ್ಷರಾದ ರಾ| ಮಿಶ್ರರವರು ಮಾರನೇ ದಿನ ಮುನ್ಸಿಪಲ್ ಆಫೀಸಿಗೆ ಈ ಠರಾವುಗಳಂತೆ ನಡೆಕೊಳ್ಳದೆ ಉಪಾಧ್ಯಕ್ಷರಾದ ರಾ| ವರ್ಮಾರವರು ಈ ಠರಾವಿನಂತೆ ವಿಚಾರಿಸುವದಕ್ಕಾಗಿ ದಿನವಾಗಿದೆ. ಅಧ್ಯಕ್ಷರ ಚೆಕ್ ತಗೆಯಲು ಇದ್ದ ಅಧಿಕಾರ ರದ್ದುಪಡಿಸಲಾಗಿದೆ. ಅದರಂತೆ ರಾ| ಸೀಲರವರು ತಮ್ಮ ಅಧಿಕಾರವನ್ನು ರಾ| ರವರ್ಮಾರವರಿಗೆ ಒಪ್ಪಿಸಲೊಪ್ಪಲಿಲ್ಲ. ಅಧಿಕಾರವನ್ನು ಒಪ್ಪಿಸದಿದ್ದರೆ ಅತಿಕ್ರಮದ ಫಿರ್ಯಾದಾಗುವದಾಗಿ ಗದ್ದರಿಸಲು ರಾ| ಸೀಲರವರು ನುಡಿದದ್ದೇನೆಂದರೆ— "ನಾನು ಪಕೀಲನಿದ್ದೇ. ಕಾಯಿದೆ ಬಲ್ಲೆ. ನನ್ನ ಹಕ್ಕು ಬಲ್ಲೆ, ಜವಾಬದಾರಿ ಬಲ್ಲೆ. ಅದರಿಂದ ನನಗೆ ಹೆದರಿಕೆ ಪ್ರಯೋಜನವಿಲ್ಲ. ನೋಲಾಗಿ ಜೈಲಿಗೆ ಹೋಗಬಂದರೂನಿಷ್ಟೇ, ಇನ್ನೊಮ್ಮೆ ಹೋಗಲಿಕ್ಕೂ ಸಿದ್ಧನಿದ್ದೆನ" ಹೀಗೆ ಸಮಾಧಾನದಿಂದ ಅವರು ಗದ್ದರಿಸಿದವರಿಗೆ ಹೇಳುತ್ತಿದ್ದರು. ಅಂತು ರಾ| ವರ್ಮಾರವರ ಅಪ್ಪಣೆಯಂತೆ ರಾ| ಸೀಲರವರು ತಮ್ಮ ಅಧಿಕಾರ ಒಪ್ಪಿಸಿಕೊಡಲಿಲ್ಲ. ಅಧಿಕಾರಿಗಳು ಮ್ಯುನಿಸಿಪಾಲಿಟಿಯಲ್ಲಿ ಇಷ್ಟೊಂದು ರಚಿಸಿ ಪರಸ್ಪರ ಕಲಹ ಹೂಡುವ ಪ್ರಕಾರ ನೋಡಿ ಮನಸ್ಸು ಬೇಸರಗೊಳ್ಳುತ್ತದೆ. ಇಂಥ ಅಧಿಕಾರಿಗಳಿಂದ ಹಿಂದುಸ್ಥಾನಕ್ಕೆ ಆತ್ಮಸಂತೋಷದಿಂದ ಎಂದಿಗೂ ಸ್ವಾತಂತ್ರ್ಯಪ್ರಾಪ್ತಿಯಾಗಬಲ್ಲದೇನು? ಅಧಿಕಾರಿಗಳ ಕಡೆ ಯಾವತ್ತೂ ಕಷ್ಟಗಳನ್ನು ಸಹಿಸ ತಯಾರಾಗಿ ಹೋರಾಡುವ ಸತ್ಯಾಗ್ರಹಿ ವೀರರಾದ ಶ್ರೀ| ದ್ವಾರಕಾಪ್ರಸಾದ ಮಿಶ್ರರವರಿಗೂ, ಶ್ರೀ| ನಿತ್ಯಾನಂದನಾಥ ಸೀಲರವರಿಗೂ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಸ್ಥಾನಿಕ ಸ್ವರಾಜ್ಯದ ಸೋಗು ತ್ವರಿತದಲ್ಲಿ ಬಯಲಾಗಲೆಂದೂ ಕೋರುತ್ತೇವೆ.

---

೫. ಈಗ ನಡೆಯಲಿರುವ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ಮುಖ್ಯ ಪಕ್ಷಗಳು, ಕಾಂಗ್ರೆಸ್ಸಿನ ನಿರೂಪಿಸಿದಂತೆ, ರಾಷ್ಟ್ರೀಯ ಪಕ್ಷ ಮತ್ತು ಸರಕಾರ ರಾಷ್ಟ್ರೀಯ ಸಭೆಯನ್ನು ಸೋಲಿಸುವದಕ್ಕಾಗಿ ಯಾವತ್ತೂ ಕಾಂಗ್ರೆಸ್ಸಿನವರನ್ನು ಅಧಿಕಾರಿಗಳು ಗುಪ್ತವಾಗಿ ಕೃತಕಾರ್ಯವಾಗದಂತೆ ಮಾಡುವ ಸಹಜ ಆಸೆ, ಅಲಿಪ್ತತೆಯ ಅತ್ಯ ಸರಪಣಿಯನ್ನು ಲೋಕಪಕ್ಷದ ಹಿಡಿತವನ್ನು ಹಿಡಿದಿ ಅಧಿಕಾರಿಗಳು ಹೂಡುತ್ತಾರೆಂದು ನಾವು ಹೇಳಿದ್ದಿಲ್ಲ. ದಿವಾಣರಾದ ದಿ| ಬ| ಕೆಂಬಳಿಯವರು ಇದೇ ಸಮಯ ಸರಕಾರಿ ಪಕ್ಷಪಾತದ ಸಂಭಾಷಣೆ ಉದ್ಗರಿಸುವದನ್ನು ಪ್ರಕಟಿಸಿದರು. ರಾ| ಬ| ಪಾಟೀಲರವರ ಪಕ್ಷಪಾತಿಯಾಗಿ ಮತದ ಬಗ್ಗೆ ದುರುಪಯೋಗ ಮಾಡುತ್ತಾರೆಂಬ ಆರೋಪ ವರ್ತಮಾನ ಪತ್ರಗಳಲ್ಲಿ ಈ ಹಿಂದೆ ಪ್ರಕಟವಾಗಿದ್ದಿತ್ತು. ಆದಾಗ್ಯೂ, ನಾವು ಆ ವಿವಾದಕ್ಕೆ ಆಸ್ಪದವೆಂದು ಬೆಲೆ ಕೊಡಲಿಲ್ಲ. ಕಳೆದ ಗುರುವಾರದ ಮುಂಬಯಿಯ 'ಟ್ಯಾಯಿಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ದಿ| ಬ| ಕೆಂಬಳಿಯವರು ರಾ| ಬ| ಪಾಟೀಲರ ಪರವಾಗಿ ದುಡಿಯುತ್ತಾರೆಂದು ಓದಿ ಆಶ್ಚರ್ಯವಾಗಿದೆ. ಸರಕಾರಿ ಅಧಿಕಾರಿಗಳು ಚುನಾವಣೆಯಲ್ಲಿ ಅಲಿಪ್ತರಾಗಿರಬೇಕೆಂಬದೊಂದು ಲೋಕಶಾಹಿಯ ಮೂಲಭೂತ ತತ್ವವಿದೆ. ಲೋಕಮತಕ್ಕೆ ಯಾವದೇ ಪ್ರಕಾರ ಬಲಾತ್ಕಾರದ ಅಂಕುಶವಿರಕೂಡದು, ಸ್ವತಂತ್ರ ವಾತಾವರಣದಲ್ಲಿ ಮತದಾನವಾಗಬೇಕು. ಈ ತತ್ವವನ್ನು ಸರಕಾರವು ಪ್ರತಿಸಾರಿ ಪ್ರಕಟಣೆಗಳನ್ನು ಹೊರಡಿಸಿದ್ದಾರೆ. ದಿವಾಣರು ಸರಕಾರಿ ನೌಕರರು ಹೀಗಿದ್ದು, ದಿ| ಬ| ಕೆಂಬಳಿಯವರು ಯಾವತ್ತೂ ಎಷ್ಟನ್ನು ದಿಕ್ಕರಿಸಿ ಚುನಾವಣೆಯಲ್ಲಿ ಪ್ರವೇಶವಾದ ಬಗ್ಗೆ ಹೀಗೆ ದಿವಾಣರ ಮಟ್ಟಿಗೆ ಈ ನಿಯಮ ರದ್ದಾಗಿರುವದೇನು? ಆದರೆ ಇಂಥ ಕುಚೋದ್ಯಗಳಿಂದ ಮತದಾರರು ಎಚ್ಚರದಿಂದಿರಬೇಕು. ಸರಕಾರಪೂರಕ ಸಂಸ್ಥೆ ಹೂಡಿದ ರಾಷ್ಟ್ರೀಯ ಸಭೆಯ ಅಭಿಮಾನಿ. ದಿ| ಬ| ಕೆಂಬಳಿಯವರ ದುರ್ಬೋಧನೆಗೆ ಎಷ್ಟಕ್ಕೂ ಒಳಗಾಗಲು ಒಳಗಾಗಲಾರರು. ದಿ| ಬ| ಕೆಂಬಳಿಯವರೂ, ರಾ| ಬ| ಪಾಟೀಲರೂ ಜಾತಿಯ ದುರಭಿಮಾನವನ್ನು ಹುಟ್ಟಿಸುವ ಮರ್ಮ ಈಗ ಎಲ್ಲರೂ ಬಲ್ಲದ ವಿಷಯ. ಅದರಿಂದ ಕಾಂಗ್ರೆಸ ಉಮೇದ್ವಾರರಾದ ಶ್ರೀ| ಸಿದ್ದಪ್ಪಾ ಹೊಸಮನೆಯವರಿಗೆ ನಿಗತಕ್ಕ ಬೆಂಬಲಕ್ಕೇನೂ ಕುಂದುಬರದು. ರಾ| ಬ| ಪಾಟೀಲರಿಗೆ ಬೀಳುವ ಪ್ರತಿಯೊಂದು ಮತವು ಹಿಂದಿನ ದರ್ಬಾರಕ್ಕಲ್ಲ, ಬ್ರಾಹ್ಮಣೇತರ ಪಕ್ಷಕ್ಕಲ್ಲ, ದಿ| ಬ| ಕೆಂಬಳಿಯವರಿಗಲ್ಲ, ಹಾಗಾದರೆ ಯಾರಿಗೆ? ಈಗಿನ ರಾಜ್ಯಪದ್ಧತಿಗೆ ಎಂಬ ಸಿದ್ಧಾಂತ ಸ್ವಯಂಸ್ಪಷ್ಟವಿದೆ. ಈಗಿನ ರಾಜ್ಯಪದ್ಧತಿಯನ್ನು ಆವಶ್ಯ ತಿದ್ದುಪಡಿಸಬೇಕೆಂದು ಹವಣಿಸುವವರೆಲ್ಲರೂ ರಾಷ್ಟ್ರೀಯ ಸಭೆಯ ಉಮೇದ್ವಾರರಾದ ಶ್ರೀ| ಸಿದ್ದಪ್ಪಾ ಹೊಸಮನೆಯವರಿಗೇ ಮತದಾನ ಮಾಡಬೇಕು. ಇನ್ನಾರಿಗೂ ಮತದಾನ ಮಾಡಕೂಡದು. ರಾಷ್ಟ್ರೀಯ ಸಭೆಯಿಂದಲೇ ಹಿಂದಭೂಮಿಯ ಕಲ್ಯಾಣವಾಗಬೇಕಲ್ಲವೇ?

— ರತ್ನಾಗಿರಿ ಮ್ಯುನಿಸಿಪಾಲಿಟಿಯವರು ಲೋಕ ನಾಮದಾರ ಪ್ರಿನ್ಸ್ ದೊರೆಗಳಿಗೆ ತಾ ೫ ನೇ ಮಾನಪತ್ರವನ್ನರ್ಪಿಸಿ ಪ್ರಸ್ಥಮಸವಾರಿಯ ಬೀಡಿದ್ದರು. ಮ್ಯುನಿಸಿಪಾಲಿಟಿಯ ಹದ್ದಿನೊಳಗೆ ನೀರು ಪೂರೈಸುವ ವ್ಯವಸ್ಥೆಗೆ ಸರಕಾರವು ಯಥೇಚ್ಛ ಹಣ ಖರ್ಚು ಮಾಡಿ ಮ್ಯುನಿಸಿಪಾಲಿಟಿಯವರು ಬರಪಾಯಿ ಮಾಡಿಕೊಡಬೇಕಾಗಿ ಒಂದು ಪ್ರಕರಣ ನಡೆದದೆ. ಈ ಹಣ ಪೂರೈಸುವ ಜವಾಬದಾರಿ ತಮ್ಮದಲ್ಲವಾಗಿ ಮ್ಯು| ಯವರು ಹಾಲ ಹಣ ಕೊಡುವದಿಲ್ಲ. ಈ ಕುರಿತು ಮಾನಪತ್ರದಲ್ಲಿ ಉಲ್ಲೇಖವಿದ್ದು ಅದಕ್ಕೆ ಯುವರಾಜರು ನುಡಿದದ್ದೇನೆಂದರೆ— ಮ್ಯುನಿಸಿಪಾಲಿಟಿಯ ಕಡೆ ಹಣವಿಲ್ಲೆಂದು ಸರಕಾರವು ಆ ಕೆಲಸ ಕೈಕೊಂಡಿತ್ತು. ಆ ಹಣ ಮ್ಯುನಿಸಿಪಾಲಿಟಿಯವರೇ ತೆರಬೇಕು. ಹಣದ ಅಡಚಣೆಯಿದ್ದರೆ ಪ ನತೆರಿಗೆ ಏರಿಸಿಕೊಳ್ಳಿ, ಆರೋಗ್ಯತೆರಿಗೆ ಆಕರಿಸಿರಿ, ಆಕಸ್ಮಾತ್ತು ತೆರಿಗೆ ಬೇಡಿಕೊಳ್ಳಿ, ಮತ್ತು ಸರಕಾರಕ್ಕೆ ಸಲ್ಲತಕ್ಕ ರಕಮನ್ನು ಸಲ್ಲಿಸಿಬಿಡಿ. ಸ್ವಾವಲಂಬಿಗಳಾಗಿರಿ. ರಾಜಪ್ರತಿನಿಧಿ, ಹಿರಿಯ ಗವರ್ನರರ ಆಗಮನಕಾಲಕ್ಕೆ ರತ್ನಾಗಿರಿಯ ಮ್ಯುನಿಸಿಪಾಲಿಟಿಯವರು ಮಾನಪತ್ರ ಕೊಟ್ಟು ಮಾಡಿದ ಅಮೂಲ್ಯ ಸಂಪಾದನೆಯಿದು?

— ಸೌ| ಕಮಲಾ ನೆಹರೂರವರ ಪ್ರಕೃತಿ ಪುನ ಕೆಟ್ಟಿದೆ. ಕಸ ವಿಕಾರ ಪುನಃ ಹೆಚ್ಚಾಗಿದೆ. ತಾ| ಬಾಷ್ಪನಯ ಕ್ರಿಯೆ ನಿಂತು ನೌಾಯವರಿಗೆ ಮೂರ್ಛೆ ಬಂದಂತಾಯಿತು. ಪಂ| ಜವಾಹರಲಾಲ ನೆಹರೂರವರಿಗೆ ಕೇಳಿಕೊತ್ತು ಅವರಿಗೆ ಕಾಣ ಬಿಟ್ಟಿದ್ದರು. ಆದರಂತೆ ಅವರು ನೋಡಿಕೊಂಡು ಪುನಃ ಜೈಲು ಸೇರಿದರು. ಪತ್ನಿಯ ಪ್ರಕೃತಿ ನೋಡಿ ಪಂ| ಜವಾಹರಲಾಲರಿಗೆ ಬಹಳ ವ್ಯಸನವಾಯಿತು.

ಸ್ಥಾನಿಕ ವೃತ್ತಾಂತ.

ಕುಮಟಾ— ೩-೩ ದಿವಸಗಳಿಂದ ಮಳೆ ಹನಿ ಗಾಳಿ ಬೀಸಿ ಒಳ್ಳೇ ಚಳಿ. ಬೆಕ್ಕಲಿಗರೆಲ್ಲರೂ ಬೆಳೆಕೊಯ್ಲಿನ ಕೆಲಸದಲ್ಲಿ ತೊಡಗಿದ್ದಾರೆ. ಹಳ್ಳಗಳಲ್ಲಿಯ ಕ ಊರಲ್ಲಿಯೂ, ವಸತಿ ಸ್ಥಳ, ಬಳಿಜ್ಜರ ಮೊದಲಾದ ಉಪದ್ರವಿಗಳ ದಿನಗಳಿಗೆ ಕಾಲು-ಬಾಯಿ ಬೇನೆ ಬಂದಿದೆ. ಕೆಲವೆಡೆ ಇಲಿ ಬೇನೆಯೂ ಕೂಡ ಸುದ್ದಿ ತಿಳಿಯಬೇಕು. ... ಹಳ್ಳಿಗಳಿಂದ ತಿಳಿಕೊಂಡಿವೆ.

ನೇಕ ಸಾವ ದಾರ ಗವರ್ನರ ಬೈರ್ನ ಮೋಟರ-ದಾರಿ ಹೋಗಿಗಳು ತಾ ೧ ನೇ ಗುರುವಾರ ಸಂಜೆ ೪-॥ ಘಂಟೆ ಸುಮಾರಿಗೆ ಈ ಮಾರ್ಗದಿಂದ ಕುಂದಾಪುರಕ್ಕೆ ತೆರಳಿದರು. ಕುಮಟಾದ ಮಾಮಲೇದಾರ ಕಾರ್ಯಕ್ರಮದಂತೆ ಬೆಳಿಗ್ಗೆ ಮಾರ್ಗವಾಗಿ ಹೋಗ ಹತ್ತಿ ಕುಂದಾಪುರಕ್ಕೆ ಚಿತ್ತೈಸಿಲ್ಲ ಆದರಿಂದ ಸ್ವಾಗತ ... ತಯಾರಿ ನಿರರ್ಥಕವಾಯಿತು. ... ಬಿಡದ ಇದ್ದ ದೂರಿ ... ಜನರ ... ಬಂದು ... ಹೂ-ಹಣ್ಣುಗಳನ್ನು ... ಗವರ್ನರರ ಆಗಮನದ ಸ್ವಾಗತಕ್ಕಾಗಿ ... ಹುಡುಗರು ... ಬೋರ್ಡುಗಳು ... ಕಾರ್ಯಕ್ರಮವು ... ಮಾಡದೆ ... ಜನರು ... ದೊರೆಗಳು ... ಮೋಟರ ... ಹಳ್ಳಿಗಳ ಹುಡುಗರು ... ಒಬ್ಬರು ತಿಳಿಸುತ್ತಾರೆ ... ದೊರೆಗಳಿಗೆ ... ಮಾಡಿತ್ತು.

ಶ್ರೀ ಸಿದ್ದ ರಾ ಮೋಹನನು, ದತ್ತಾತ್ರೇಯ ಕಾಮತ, ... ಈ ಸ ತರುಣರು ... ವಾರದ ಪ್ರಮುಖರಾದ ಶ್ರೀ ಸುಬ್ರಾವ ರಾಮಚಂದ್ರಯ್ಯ ... ಹೊನ್ನಾವರ ಕಡೆ ತೆರಳಿದರು ... ಶ್ರೀ ಸಿದ್ಧಪ್ಪ ... ಸಮುಗುರುವಿಂದ ... ಬೆಳಗಿನ ಘಂಟೆ ... ಸಂಜೆ ... ಹೋಗಿ ... ಇನ್ನೊಂದು ... ಶ್ರೀ ಸಿದ್ಧಪ್ಪ ... ಹೊನ್ನಾವರದ ಭಟ್ಕಳ ಕಡೆ ಸಂಚರಿಸಿ, ನಿನ್ನೆ ಸಾಯಂಕಾಲ ಇಲ್ಲಿ ಬಂದು ... ಕಡೆ ತೆರಳಿದರು.

ಗೋಕರ್ಣಕ್ಷೇತ್ರದಲ್ಲಿ ... ತಿಳಿಸುವದೇನಂದರೆ - ... ದೇವಾಲಯ ... ಸರಕಾರಿ ಅಧಿಕಾರಿಗಳಿಗಾಗಿರುವ ಈ ತಾಲೂಕಿನ ... ಮ ರಾ ಆರ್ ಕೇ ನಾಯ್ಕ ವ್ಹಿ. ಎಸ್ ... ಇವರು ... ಸರಕಾರಿ ... ಸರಕಾರದ ... ಗಾಂವಕರ ... ಇಲ್ಲಿಗೆ ... ಹೀಗೆ ... ಆಗಬೇಕು ... ಇತ್ಯಾದಿ

ಹೊನ್ನಾವರ— (ತಾ ೪ ೧೧-೧೯೩೪) ಕಳೆದ ಬುಧವಾರ ಬೆಳಿಗ್ಗೆ ದಕ್ಷಿಣ ಗಾಳಿಗೆ ಪ್ರಾರಂಭವಾಗಿ ... ಸುರಿಯಿತು. ಗದ್ದೆಯಲ್ಲಿ ಕೊಯ್ದು ಹಾಕಿದ ಬೆಳೆ ತೋಯ್ದು ಬೆಕ್ಕಲಿಗರು ದೇಬಾಡುತ್ತಿದ್ದಾರೆ. ನಿನ್ನೆಯಿಂದ ಮಳೆಯಿಲ್ಲ, ಬಿಸಿಲು ಬೀಳಹತ್ತಿದೆ.

ಗವರ್ನರರ ದೊರೆಗಳು ಇಲ್ಲಿ ಗುರುವಾರ ಸಂಜೆ ... ಚಿತ್ತೈಸುವರೆಂಬ ಪ್ರಕಟಿಸಲಾಗಿತ್ತು. ... ಮಾರ್ಗ ... ಅಲಂಕರಿಸಿದ್ದರು ... ದೊರೆಗಳು ... ಬರುವಾಗ ... ದೊರೆಗಳು ... ಸ್ವಾಗತಕ್ಕೆ ... ಮ್ಯುನಿಸಿಪಾಲಿಟಿ ... ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅಧ್ಯಕ್ಷರು ... ದೊರೆಗಳ ದರ್ಶನಕ್ಕಾಗಿ ... ಸುಮಾರು ೪೦೦-೫೦೦ ಮಂದಿ ನೆರೆದಿದ್ದರು ... ದೊರೆಗಳ ಜೊತೆಗೆ ... ಕುಮಟೆ ಕಡೆ ತೆರಳಿದರು.

ಬುಧವಾರ ದಿನಗಳಿಗೆ ಕಾಲು ಬಾಯಿ ಬೇನೆ ಬಂದಿದೆ ... ದನಗಳು ... ಸಂಕಟದಲ್ಲಿ ಬೀಳುವರು.

ಮ್ಯುನಿಸಿಪಾಲಿಟಿಯ ಸಭೆಯಾಗಿ ... ರಾ ಎನ್ ಎಸ್ ... ಮುನ್ಸಿಪಲ ... ರಾ ಎಸ್ ... ನೇಮಿಸಲ್ಪಟ್ಟಿದ್ದಾರೆ.

(ತಾ ೧೧-೧೧-೩೪) ಇಲ್ಲಿ ಹುಡುಕರಣಗಿ ಏಕೆ? ಮ್ಯುನಿಸಿಪಾಲಿಟಿ ... ಶ್ರೀ ... ದಕ್ಷಿಣ ... ದಿನ ... ಮಂಜುನಾಥ ... ಶ್ರೀ ... ದತ್ತಾತ್ರೇಯ ... ವಿಜಯ ಪತ್ರಿಕೆಯ ... ಇಲ್ಲಿ ... ಜನರ ...

ಈ ಕಾಲೇಜಿನ ಹಳೆವಿದ್ಯಾರ್ಥಿ-ಜೋಗನವರ ... ದೇವರ ಗುಡಿಯಲ್ಲಿ ... ತಾರೀಖ ೬॥ ೧೧ ನೇ ದಿನ ಸಂಜೆ ... ಘಂಟೆಯ ವರೆಗೆ ... ಪದ್ಧತಿಯಿಂದ ... ಚಿತ್ರ ... ವಿನಂತಿ.

ಭಟಕಳ— (ತಾ ೩ ೧೧-೧೯೩೪) ... ತಿಳಿಸುವದೇನಂದರೆ - ... ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ... ಈ ಮುಂಚೆ ... ಇತ್ಯಾದಿ

ಈ ಜಿಲ್ಲಾ ಕಾಲೇಜ ... ರಾ ... ದಿನ ... ಸ್ವಾತಂತ್ರ್ಯ ... ಗುಣ ... ದೊರೆಗಳಿಂದ ... ನನ್ನ ... ಸ್ವಜಾತಿಯ ... ಹಿಂಸಾಚಾರ ... ರಾ ವೈಕುಂಠ ಭಟ್ಟರ ... ಇತ್ಯಾದಿ ಬರೆಯುತ್ತಾರೆ.

ಇದಕ್ಕೆ ಈ ವಿಷಯದ ಚರ್ಚೆ ಸಾಕು.
ಸಂಪಾದಕ ಕಾ. ವೃ.

ಹಳಿಯಾಳ— (ತಾ ೮ ೧೧ ೩೪) ... ಬೆಳೆಯ ... ವಾರ್ತೆಯಿದೆ ... ಹಂಗಾಮು.

ತಾ ೨೦-೧೦-೩೪ ನೇಗೆ ಮ್ಯುನಿಸಿಪಾಲಿಟಿಯ ಸಭೆ ... ರಾ ... ಅಧ್ಯಕ್ಷರಾಗಿ ... ರಾ ... ಸರಕಾರದ ... ಇದರಿಂದ ... ಠರಾವು ... ವಿಚಾರ ... ಸಭೆ ... ಅಧ್ಯಕ್ಷರನ್ನು ... ಮ್ಯುನಿಸಿಪಾಲಿಟಿಯ ... ಅಧ್ಯಕ್ಷರ ...

ದೂರದಲ್ಲಿ ಈವಾಗ ನಷ್ಟವಾಗ.ವದಾಗಿಸೂ ಅರ್ಜಿ ಮಾಡಿಕೊಂಡು ಮ್ಯುನಿಸಿಪಾಲಿಟಿಯ ಮೇಲೆ ಪ್ರತಿಬಂಧಕ ಹುಕುಮು ಬೇಡಿದರು. ಡಿ| ಜಜ್ಜರು ಆಕ್ಷೇಪದ ಹಿರಿಕ ಕೇಳಿಕೊಂಡು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ...

ಈ ತಾಲೂಕಿನ ...

ಕಾರವಾರ— ...

ಬಾಲಚರ ...

ಕೆಲ ಟ್ರಸ್ಟಿಗಳು ಹಸ್ತಿಯ ... ಮಾಡಿ ತೋರಿ ... ಜನಮನರಂಜನ ...

...

ಇ.ಥಾನಿನ ...

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪ್ರಾರಂಭದಿಂದ ... ಕಂಪನಿಯ ... ಇಂಡಿಯನ್ ಟ್ರಸ್ಟ ಎಕ್ಟಿನ ... ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಹಸಿಸ್ತಾರ ... ಅಥವಾ ಪತ್ರದ್ವಾರದಿಂದ ... ಬರೆದಲ್ಲಿ ಸಿಗುವದು.

Kumta Agents:- D K NAYAK Bros
Honavar Agent- R V PRABHU Esq

K. Padmanabha Rao & Sons.
BELGAUM
Chief Agents for
Karnatak Districts & S. M. States

ಅಥ ಕ್ರಿಯಾ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಸ್ಯದ ಪುಡಿ ... ಕ್ರಿಯಾ,



... ಸುಗಂಧ ನಸ್ಯದ ಪುಡಿಯು ... ಹಿಡಿಯುವದು ... ಗಳು ಇದನ್ನು ಉಪಯೋಗಿಸಿ, ... ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ... ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ... ವ್ಯಾಧಿಗಳು, ... ವ್ಯಾಧಿಗಳು ... ಈ ಸುಗಂಧ ನಸ್ಯದ ಪುಡಿಯಲ್ಲಿ ... ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ... ಉಪಯೋಗಿಸುತ್ತಾರೆ ... ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ— ಗುರುಬಸವ ಆಂಡ್ ಕಂಪನಿ ಲಿಮಿಟೆಡ್, ಪೋ. ಬಾ. ... ಬೆಂಗಳೂರು ...

ಅಲ್ಲಲ್ಲಿ ಇಷ್ಟಿಷ್ಟು!

ಮಹಾತ್ಮರು ಈಗ ವರ್ಧೆಯಲ್ಲಿದ್ದಾರೆ. ರಾಷ್ಟ್ರೀಯ ಸಭಾ ಸದಸ್ಯತ್ವದ ತಮ್ಮ ರಾಜೀನಾಮೆಯನ್ನು ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರಿಗೆ ಅವರು ಕಳಿಸಿದರು. ಅದನ್ನೋದಿ ಅಧ್ಯಕ್ಷರಿಗೆ ಕಣ್ಣೀರು ಒಡೆದಾಗಿ ಮಾತುಗಳು ಕಟ್ಟಿಹೋದವೆಂದು ಸುದ್ದಿಗಾರರು ಬರೆಯುತ್ತಾರೆ. ಮಹಾತ್ಮರು ಈಗ ಗ್ರಾಮೋದ್ಯೋಗ ಸಂಘದ ಯೋಜನೆಯನ್ನು ತಯಾರಿಸಲಾರಂಭಿಸಿದ್ದಾರೆ. ಮಹಾತ್ಮರ ಆಶ್ರಮವಾಸಿಗಳೊಳಗಿನ ಗುಣವಾದ ವಿದ್ಯಾರ್ಥಿಯರಲ್ಲಿ ಉಳಕೊಂಡು ಗ್ರಾಮೋದ್ಯೋಗ ಸಂಘದ ಕಾರ್ಯಕರ್ತರನ್ನು ಅಲ್ಲಲ್ಲಿ ಪ್ರಚಾರಕ್ಕಾಗಿ ಕಳಿಸುವರಂತೆ. ಹಳ್ಳಿಗಳಲ್ಲಿ ಯಾವ್ಯಾವ ಉದ್ದಿಮೆಗಳಿದ್ದವು? ಎಂಬುದರ ಕುರಿತು ಮಹಾತ್ಮರು ಮಾಹಿತಿ ಸಂಗ್ರಹಿಸಲಾರಂಭಿಸಿದ್ದಾರೆ. ವರ್ಧೆಯೊಳಗಿನ ಸತ್ಯಾಗ್ರಹಾಶ್ರಮದವರೂ ಈ ಕಾರ್ಯದಲ್ಲಿ ನೆರವಾಗುವರು. ತಮ್ಮ ಮಟ್ಟಿಗೆ ೧೯-೧೫ ರ ದಾಖಲೆಗಳನ್ನು ಒಪ್ಪಿಸ್ಕೊಂಡರ ಸ್ವಾಧೀನ ಕೊಡಬೇಕೆಂದು ಗೊತ್ತಾಗಿರುವದಂತೆ. ಮಹಾತ್ಮರ ಕೋಟ್ಯಾಧೀಶ ಗೆಳೆಯರೊಬ್ಬರು ಈ ಸಂಘದ ಕಾರ್ಯಕ್ಕಾಗಿ ಮಹಾತ್ಮರ ಕಡೆ ೨೦ ಲಕ್ಷ ರೂಪಾಯಿಗಳನ್ನು ಒಪ್ಪಿಸಿದ್ದಾರಂತೆ. ಯಾವತ್ತು ಯೋಜನೆ ಇನ್ನೊಂದು ತಿಂಗಳಲ್ಲಿಯೇ ಪ್ರಕಟವಾಗುವದು.

* * *

ಶ್ವೇತಪತ್ರಿಕೆಯಂತೆ ಬ್ರಿಟಿಶ ಸಾಮ್ರಾಜ್ಯಕರ್ತರು ಕೊಡಮಾಡಿದ ರಾಜ್ಯಯೋಜನೆಯ ಚರ್ಚೆಗಾಗಿ ನೇಮಿಸಿದ ಜಾಯಿಂಟ ಸಿಲೆಕ್ಟ ಕಮಿಟಿಯ ರಿಪೋರ್ಟ ತಯಾರಾಗಿ ಸಾಮ್ರಾಜ್ಯ ಸರಕಾರಕ್ಕೆ ಸಾದರಪಡಿಸಲಾಗಿದೆ. ಅದು ಬ್ರಿಟಿಶ ದೇಶದಲ್ಲಿಯೇ ಮುದ್ರಿಸಲ್ಪಟ್ಟು ಹಡಗದಿಂದ ಇಲ್ಲಿ ರವಾನಿಸಲ್ಪಡುವದು. ಹಸ್ತಪ್ರತಿ ವಿಮಾನದ ಮೂಲಕ ಹಿಂದುಸ್ಥಾನಕ್ಕೆ ಕಳಿಸಿ ಹಿಂದುಸ್ಥಾನದಲ್ಲಿ ಮುದ್ರಿಸುವ ಪರ್ಯಾಯ ಮಾಡಿದ್ದಲ್ಲಿ ೧೦ ದಿವಸ ಮುಂಚೆಯಾಗಿಯೇ ರಿಪೋರ್ಟ ಕೈಸೇರುವದೆಂದು ಪಾರ್ಲಿಮೆಂಟಿನಲ್ಲಿ ಬಂದ ಸೂಚನೆ ತಿರಸ್ಕರಿಸಲ್ಪಟ್ಟಿತು. ರಿಪೋರ್ಟ ಇದೇ ತಾ ೨೨ನೇ ಪ್ರಕಟಿಸಲ್ಪಡುವದು. ವಿಳಂಬವಾಗಬಾರದೆಂದು ಹಿಂದುಸ್ಥಾನದಲ್ಲಿಯೂ, ಇಂಗ್ಲಂಡದಲ್ಲಿಯೂ ಒಮ್ಮೆಲೇ ಪ್ರಕಟಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಭಾರತ ಮಂತ್ರಿ ಮೊದಲಾದ ಸಾಮ್ರಾಜ್ಯ ಸರಕಾರವಾದಿಗಳು ದರ್ಪ ಮನ್ನಿಸಿಕೊಂಡಿದ್ದಾರೆ. ಅಂತು ಸುಮಾರು ೧-೧॥ ವರ್ಷಗಳ ಮೇಲೆ ರಿಪೋರ್ಟ ತಯಾರಾದಂತಾಯಿತು. ಇನ್ನು ೬ ೮ ತಿಂಗಳುಗಳಲ್ಲಿ ಹಿಂದುಸ್ಥಾನ ಸರಕಾರದ ಹೊಸ ರಾಜ್ಯಘಟನೆಯು ಕಾಯಿದೆ ಕಟ್ಟಾಗುವದು. ಇದೇ ಬರುವ ಮೇ ತಿಂಗಳಲ್ಲಿ ಬಾದಶಹಾ ರಾಜ್ಯಾರೋಹಣದ ರಜತ ಮಹೋತ್ಸವವಿದೆ. ಆ ಸಮಯಾ ಹಿಂದೀ ಪ್ರಜಾಜನರೆಲ್ಲರೂ ಆನಂದದಿಂದ ಉಬ್ಬಿ ಹೋಗಬೇಕೆಂದು ಬಾದಶಹರ ಕಲ್ಪನೆಯಿದೆ. ಆಗ ಸಾಮ್ರಾಜ್ಯದಲ್ಲೆಲ್ಲ ಸಂಭ್ರಮದಿಂದ ಉತ್ಸವಗಳಾಗಬೇಕೆಂದೂ ಬಾದಶಹರು ಅಪೇಕ್ಷಿಸುತ್ತಾರೆ. ಹಿಂದುಸ್ಥಾನದೊಳಗಿನ ಪ್ರಜೆಗಳ ಸಂತೋಷಕ್ಕಾಗಿ ಬಾದಶಹರು ಆಗ ನೂತನ ರಾಜಪ್ರತಿನಿಧಿಯ ದ್ವಾರಾ ಅಪ್ಪಣೆಯೋಕ್ತಪತ್ರ ದತ್ತಿಯರಿಗೆ ಇತ್ತ ಕಡೆ ರವಾನಿಸುವ ಯೋಜನೆ ಮಾಡಿರುವರಂತೆ. ಹಿಂದೀ ಜನರಿಗೆ ರಾಜಪ್ರತಿನಿಧಿ ದರ್ಶನದಿಂದ ರಾಜನಿಷ್ಠೆಯು ಪ್ರವೃತ್ತಿ ವಿಗಿಲಾಗಿ ಬ್ರಿಟಿಶ-ಹಿಂದುಸ್ಥಾನ ದೇಶಗಳೊಳಗಿನ ಪರಸ್ಪರ ಸಂಬಂಧಗಳ್ಳಬೇಕೆಂದು ಬಾದಶಹರು ಪ್ರಧಾನ ಮಂಡಳದ ಆಲೋಚನೆ ಪಡೆದು ರಾಜಪ್ರತಿನಿಧಿಗೆ ಇತ್ತ ಕಡೆ ಕಳಿಸುತ್ತಾರೆ. ಅಂಥ ಸಮಯದ ದತ್ತನ ರಾಜ್ಯಾಧಿಕಾರ ಕೊಟ್ಟು ಪ್ರಜೆಗಳಿಗೆ ಸಂತೈಸುವದು ಅತ್ಯವಶ್ಯವೆಂದು ಆಕ್ಷೆಯ ಅಭಿಪ್ರಾಯವಾಗಿರುವದಾಗಿ 'ಮುಂಬಯಿ ಕ್ರಾನಿಕಲ' ಪತ್ರಿಕೆಯ ಲಂಡನಿನ ಸುದ್ದಿಗಾರರು ಬರೆಯುತ್ತಾರೆ. ಜಾಯಿಂಟ ಸಿಲೆಕ್ಟ ಕಮಿಟಿಯ ಸಭಾಸದರಾದ ಮಿ॥ ಎಟೊಕ್ಸ್ಟರವರು ಹಿಂದುಸ್ಥಾನ ಹಾಗು ಬ್ರಿಟಿಶ ದೇಶಗಳೊಳಗಿನ ಮನಸ್ಸು ಒಂದಕೊಂದಕ್ಕೆ ಕೂಡಿಕೊಳ್ಳದಿದ್ದರೆ ಜಗತ್ತಿನಲ್ಲಿ ಶಾಂತಿ ಕಾಯುವದು ಕಠಿಣವಾಗುವದಾಗಿ ಮೊನ್ನೆ ಸ್ಕಾಟಲಂಡದೊಳಗಿನ ಒಂದು ಸಭೆಯಲ್ಲಿ ಉದ್ಗರಿಸಿದ್ದಾರೆ. "ಬಲಾತ್ಕಾರದಿಂದ, ಶಸ್ತ್ರ ಬಲದಿಂದ ಹಿಂದುಸ್ಥಾನವನ್ನು ಆಳಬೇಕೆಂದರೆ ಅದರಿಂದ ಕ್ಷೇಮವಿಲ್ಲ. ಪ್ರಜಾ ಸಮ್ಮತಿಯಿಂದಲೇ ಕಾರಭಾರ ನಡೆಸುವದು ಯೋಗ್ಯವಾದದ್ದು. ಇದೇ ಬ್ರಿಟಿಶ ಮುತ್ಸದ್ದಿತನ," ಹೀಗೆ ಮಿ॥ ಫುಟ್ಲಂಡವರು ಉದ್ಗರಿಸುತ್ತಾರೆ. ಈಗಿನ ರಾಜ್ಯಯೋಜನೆ ಸಮಾಧಾನಕರ ರಾಜ್ಯಯೋಜನೆಯೆಂದು ಲಂಡನಿನಲ್ಲಿ ಸೇರಿದ ಹಿಂದೂ ಸಭೆಯ ಸದಸ್ಯರಲ್ಲಿ ಚರ್ಚೆಯಾಗಿದೆ. ಆದ್ದರಿಂದ ರಿಪೋರ್ಟ ೧೦ ದಿನಗಳಲ್ಲಿ ಪ್ರಕಟವಾಗುತ್ತದೆ. ಪಯೊನೀರ್ ಪತ್ರದವರ ಸಲ್ಲಂಕ್ಷೆಪದ ಯೋಜನೆಯ ಸ್ವರೂಪ ಆಗ ಪ್ರಕಟವಾಗುವದು.

* * *

ಕೋಚೀನ ಸರಕಾರದವರು ಕಾಳ ಕಾಡಿಯ ಪದ್ಧತಿಯನ್ನು ಸುಧಾರಿಸದ್ದರಿಂದ ಲೀಕಶಾ ೧೫॥ ಯಂತ ನಿರ್ದೇಶದಲ್ಲಿ ಕಾಡಿದ ಕೊಡಬೇಕಾಗಿ ಪ್ರಕಟಣೆಯನ್ನು ಹೊರಡಿಸಿದ್ದಾರೆ. ನಮ್ಮ ಬ್ರಿಟಿಶ ಸರಕಾರವೂ ಇದೇ ಪ್ರಕಾರ ಪ್ರಕಟಣೆಯನ್ನು ಹೊರಡಿಸುವದೆಂದು ಎಲ್ಲರೂ ನಿರೀಕ್ಷಿಸುತ್ತಿದ್ದಾರೆ. ನಾ॥ ಗವ್ಹರ್ನರರು ಇತ್ತ ಕಡೆ ಆಡಳಿತ ಎಲ್ಲ ಪರಿಸ್ಥಿತಿಯನ್ನು ಕಣ್ಣಾರೆ ಕಂಡ. ಹೋದದ್ದರಿಂದ ಕೈಲ್ಯಾದರೂ ಲಾಭವಾಗದೆ ಉಳಿಯುದಾಗಿ ಹಲವರ ನಂಬಿಗೆ. ನವಂಬರ ೩ನೇ ತಾರೀಖಿಗೆ ರಾಜಪತ್ರ ಜೋಡಣೆ ಪ ಮುತೆ, ಆ ಸಮಯ ಹೊರಡಿಸಿ ಹೊಂದಿಸುವೆಂದ ಕೇಳುವರ ಇದೆ.'

* * *

ಅಹಮದಾಬಾದದ ಡಿ॥ ಜಸ್ತು ಬಳ್ಳೀ ತಿವಾರಿಯನು ಕೊಟ್ಟಿದ್ದರೆ ಸರಕಾರ ಹಾಳೆಯ ಸ್ವರೂಪದ ನಾ॥ ಪೊಲೀಸ ಅಲವರ ಮಗಂದಿರು ಸತ್ಯಾಗ್ರಹಿಗಳು. ನಾಗನ ಮೇಲೆ ಒಪ್ಪಿಯಾಗಿ ರೂ ೧೦೦೦ ದಂಡ ವಿಧಿಸಲಾಯಿತು. ಆ ದಂಡವನ್ನು ಪೋಲೀಸರು ಕಡೆಯಿಂದ ವಸೂಲ ಮಾಡಿದರು. ತಂದೆ ಮಗಂದಿರ ಪಾಲು ಬೇರೆಯಾಗಿತ್ತು. ಆದರೆ, ಮಗನು ಜ್ಯಾಮೀನೊಳಗಿಂದ ಬಿಡುಗಡೆ ಮಾಡುವ ಕೃತ್ಯ ತಂದೆಯವರನ್ನ ಉಳಿದದ್ದರಿಂದ ಅವರ ಬಿಡುತ್ತಿದ್ದಾರೆಂದು ಪೋಲೀಸರ ಮೇಲೆ ವಸೂಲಿಯ ಕೃತ್ಯ ನಡೆಯಿತು. ಪೋಲೀಸರು ದಾವೆ ಮಾಡಿ ಸರಕಾರದ ಮೇಲೆ ಫಿರ್ಯಾದಿ ಹಚ್ಚಿದರು. ಈ ಫಿರ್ಯಾದಿ ಅಸ್ವಾಭಾವಿಕವೆಂದು ಸರಕಾರದ ಪರವಾಗಿ ದಾಖಲಾದ ದಲೀಲನ್ನು ನಾ॥ ಜಜ್ಜರು ತಿರಸ್ಕರಿಸಿದ್ದಾರೆ. ತನ್ನ ಮಗಂದಿರು ಸಹಜ ಪ್ರೀತಿಯಿಂದ ಬಿಟ್ಟಬಗ್ಗೆ ಉಳಿದದ್ದರ ಮೇಲಿಂದ ಅವರು ಜವಾಬ್ದಾರರಾಗುವದಿಲ್ಲವಾಗಿ ಡಿ॥ ಜಜ್ಜರು ಅಭಿಪ್ರಾಯಪಟ್ಟಿದ್ದಾರೆ.

* * *

ನಿಜಾಮ ರಾಜ್ಯದ ರಾಯಚೂರ ಜಿಲ್ಲೆಯೊಳಗಿನ ಭಯಂಕರ ಬರ ಕಾಲ್ಪನಿಕ ತಾಲೂಕಿನಲ್ಲಿ ಎಲ್ಲರಿಗೂ ಒಪ್ಪಿತ್ತು. ಊಟ ಇದೇ ದಿನ ವ್ಯವಹಾರದ ದಾಖಲೆಗೆ ೧ ಜನ ಸಂಬಳಗುವದು ಕಠಿಣ. ಸರಕಾರವು ೧॥ ಲಕ್ಷ ರೂಪಾಯಿಗಳ ಕಾಮ ತೆಗೆದು ಕೊಟ್ಟರೆ ತಲೆಗೆ ೧೫-೨೦ ರೂ ಬಿ ಬೆಲೆ ತಕ್ಕ ಜನರಿಗೆ ಸಾಲದು. ಕೋಣನ ಗ್ರಾಮದೊಳಗಿನವರು ಹೊಟ್ಟೆಯ ಗೋಳು ಪರಿಹರಿಸಲಾರದ ತೀರ ನಿರಾಶರಾದರು. ಪ್ರಮುಖನಾದ ಡಾ॥ ದೇಸಾಯಿಯವರ ಬಳಿ ಅವರು ಹೋಗಿ ನುಡಿದದ್ದೇನಂದರೆ — "ಹೊಟ್ಟೆಯ ವ್ಯವಸ್ಥೆಯಾಗದಿದ್ದರೆ ನಾವು ದೇಶಾಂತರ ಮಾಡುತ್ತೇವೆ, ಇಲ್ಲವೆ ಪ್ರಾಣಘಾತ ಮಾಡಿಕೊಳ್ಳುತ್ತೇವೆ!" ಈ ಅವಸ್ಥೆ ನೋಡಿ ದೇಸಾಯಿಯವರು ಕಳವಳ ತಾಳಿದರು. ಅವರು ತಮ್ಮ ಹಗೇವನ್ನು ಒಡೆದು ೪೨೦ ಚೀಲ ಜೋಳ ಕಾಳನ್ನು ಪಂಚಿದರು. ಕಲೆಕ್ಟರರು ಜನರಿಗೆ ನೆರವಾಗುವದಕ್ಕಾಗಿ ಯಥಾಶಕ್ತಿ ಪ್ರಯತ್ನಗಳನ್ನು ಮಾಡುತ್ತಿರುವರು.

* * *

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಹೊಸ ಸಭಾಸದರು ಕೊಂಗ್ರೆಸ ಕಾರ್ಯಕಾರಿ ಮಂಡಳ ನೇಮಿಸಿಕೊಂಡರು. ಯಾರ್‍ಯಾರೆಂದರೆ - ೧ ಬಾಬು ರಾಜೇಂದ್ರ ಪ್ರಸಾದ (ಅಧ್ಯಕ್ಷ), ೨ ಡಾ॥ ಸಯ್ಯದ ಮಹಮೂದ ಮತ್ತು ೩ ಆಚಾರ್ಯ ಕೃಪಲಾನಿ (ಕಾರ್ಯದರ್ಶಿಗಳು), ೪ ಶೇಟ ಜಮನಾಲಾಲ ಬಜಾಜ (ಕೋಶಾಧ್ಯಕ್ಷ), ೫ ಸರದಾರ ವಲ್ಲಭಭಾಯಿ ಪಟೇಲ, ೬ ಖಾನ ಅಬ್ದುಲ ಗಫ್ಫಾರಖಾನ, ೭ ಸೌ॥ ಸರೋಜಿನಿ ನಾಯುಡು, ೮ ಸರದಾರ ಶಾರ್ದೂಲಸಿಂಗ, ೯ ಡಾ॥ ಅನ್ಸಾರಿ, ೧೦ ಮೌ॥ ಅಬುಲ ಕಲಾಮ ಆಝಾದ, ೧೧ ಶ್ರೀ॥ ಚಕ್ರವರ್ತಿ ರಾಜಗೋಪಾಲಾಚಾರ್ಯ, ೧೨ ಶ್ರೀ॥ ಗಂಗಾಧರರಾವ ದೇಶಪಾಂಡೆ, ೧೩ ಡಾ॥ ಪಟ್ಟಾಭಿ ಸೀತಾರಾಮಯ್ಯ, ೧೪ ಶ್ರೀ॥ ಜಯರಾಮದಾಸ ದೌಲತರಾಮ, ಪಂಡಿತ ಜವಾಹರಲಾಲ ನೆಹರೂರವರು ೩ ನೇ ಕಾರ್ಯದರ್ಶಿಗಳು. ನೇಮಿಸಲ್ಪಟ್ಟಿದ್ದಾರೆ. ಆದರೆ ಅವರು ಕಾರಾಗೃಹದಲ್ಲಿರುವದರಿಂದ ಅವರಿಗೆ ಬಿಡುಗಡೆಯಾಗುವ ತನಕ ಶ್ರೀ॥ ನರಿಮಾನರವರು ಅವರ ಬಗ್ಗೆ ಕಾರ್ಯದರ್ಶಿಗಳ ಕೆಲಸ ಮಾಡಬೇಕಾಗಿ ಗೊತ್ತಾಗಿದೆ. ಕಾರ್ಯಕಾರಿ ಮಂಡಳದಲ್ಲಿ ಬಂಗಾಲ ದೇಶದ ಪ್ರಮುಖರ ಸಲುವಾಗಿ 'ಅಮೃತ ಬಝಾರ ಪತ್ರಿಕಾ' ಮೊದಲಾದ ಪತ್ರಿಕೆಗಳು ಆಕ್ಷೇಪಿಸುತ್ತವೆ. ರಾಷ್ಟ್ರೀಯ ಸಭೆಗೆ ಒಪ್ಪಿದ ೨೧ ಪ್ರಾಂತಗಳಿದ್ದು ಅಧ್ಯಕ್ಷರು ೧೫ ಜನರನ್ನು ನೇಮಿಸಿಕೊಳ್ಳಬೇಕಾಗಿರುವದರಿಂದ ಒಂದಿಲ್ಲೊಂದು ಪ್ರಾಂತವನ್ನು ಬಿಟ್ಟುಬಿಡಬೇಕಾಗುವದೆ, ಇದರಿಂದ ಬಂಗಾಲ ಪ್ರಾಂತಕ್ಕೆ ಧಿಕ್ಕಾರ ಮಾಡಲಾಯಿತೆಂದು ಎಣಿಸಬಾರದಾಗಿ ಅಧ್ಯಕ್ಷರು ಖುಲಾಸೆ ಮಾಡಿದ್ದಾರೆ.

* * *

ರಾಷ್ಟ್ರೀಯ ಸಭೆಗೆ ದೇಶ-ವಿದೇಶಗಳಿಂದ ಸುದ್ದಿ ಸಂಗ್ರಹ ಮಾಡುವದಕ್ಕಾಗಿ ೬೦೦ ಮಂದಿ ಪತ್ರಿಕಾ ಪ್ರತಿನಿಧಿಗಳು ಹಾಜರಿದ್ದರು. ಯಾವತ್ತೂ ವ್ಯವಸ್ಥೆ ಚೊಕ್ಕವಿತ್ತಾಗಿಯ ಲ್ಲ, ಸ್ವಯಂಸೇವಕರು ಶಿಸ್ತಿನಿಂದಲೂ, ದಕ್ಷತೆಯಿಂದಲೂ ಸಹಕಾರ್ಯವನ್ನು ನೆರವೇರಿಸಿದರಾಗಿಯೂ ಮುಂಬಯಿಯ 'ಟೈಮ್ಸ ಆಫ್ ಇಂಡಿಯಾ' ಪತ್ರಿಕೆಯ ಪ್ರತಿನಿಧಿಗಳು ಹೊಗಳುತ್ತಾರೆ. ಸ್ವಾಗತ ಸಮಿತಿಯವರು ಈ ಬಾರಿ ಒಂದು ಹೊಸ ಏರ್ಪಾಟು ಮಾಡಿದ್ದರು. ಅಬ್ದುಲ್ ಗಫ್ಫಾರ ನಗರದ ಬಳಿಯಲ್ಲಿಯೇ ಬಂದ 'ಲಿನೋಟೈಪ' ಯಂತ್ರವನ್ನಿಟ್ಟು ಅದರ ಮೇಲೆ ಕೊಂಗ್ರೆಸಿಗೆ ಸಂಬಂಧಪಟ್ಟ ಠರಾವುಗಳನ್ನೂ, ಅಧ್ಯಕ್ಷರ ಭಾಷಣಗಳನ್ನೂ ಅಲ್ಲಿಯೇ ಜೋಡಿಸಿ ಮುದ್ರಿಸುತ್ತಿದ್ದರು. ದೇವನಾಗರಿ ಲಿಪಿಯಲ್ಲಿಯೂ, ಇಂಗ್ಲೀಷ ಲಿಪಿಯಲ್ಲಿಯೂ ಮುದ್ರಣ ಕೆಲಸಗಳು ಸಾಗುತ್ತಿದ್ದವು! ಇನ್ನೊಂದು ನಮೂದಿಸತಕ್ಕಂಥ ಸಂಗತಿಯೆಂದರೆ - ಕೊಂಗ್ರೆಸ ಘಟನೆಯಲ್ಲಿ ತಿದ್ದುಪಡಿ ಮಾಡುವದಕ್ಕಾಗಿ ನೇಮಿಸಿದ ಸಭೆಯದು. ಮಹಾತ್ಮರ ಬಂಬೋಣದಂತೆ ವಿಷಯ ನಿರ್ಧಾರಕ ಸಭೆಯೊಳಗಿಂದ ಯಾವತ್ತು ಪ್ರಾಂತಗಳ ೧೫ ಪ್ರತಿನಿಧಿಗಳನ್ನು ಆರಿಸಿಕೊಂಡು ಈ ಸಭೆಯು ವಿಚಾರ ನಡೆಯಿತು. ಮಹಾತ್ಮರು ನಿರ್ದಾರವಂತ ಪುರುಷರು, ಆಲೋಚನೆ ಮಾಡುತ್ತ ಹೊತ್ತು ಕಳೆಯಗೊಡುವವರಲ್ಲ. ರಾತ್ರಿ ೧೨ ಘಂಟೆಯ ತನಕ ಆಲೋಚನೆ ನಡೆಯಿತು. ಆ ಬಳಿಕ ಕಮಿಟಿಯವರು ಮಲಗಿಕೊಂಡರು. ಮಹಾತ್ಮರು ೧ ಘಂಟೆಯ ತನಕ ಕುಳಿತು ರಿಪೋರ್ಟಿನಲ್ಲಿ ಅವಶ್ಯಕವಾದ ತಿದ್ದುಪಾಟು ಮಾಡಿದರು. ಕಾರ್ಯದರ್ಶಿಗಳು ಅದೇ ರಾತ್ರಿ ಜಾಗರಣೆ ಮಾಡಿ ರಿಪೋರ್ಟ ಬರೆದು ಮುಂಜಾವಿಗೆ ಮಂಡಳದ ಸಭಾಸದರಿಗೆಲ್ಲ ಹಂಚುವ ವ್ಯವಸ್ಥೆ ಮಾಡಿದರು; ಮಹಾತ್ಮರ ರಾಷ್ಟ್ರಕಾರ್ಯವೆಂದರೆ ಹೀಗೆ ವಿಶ್ರಾಂತಿಗೆ ಅಂಜಿಸ್ತ! ಹೀಗೆ ದುಡಿದರೆ ರಾಷ್ಟ್ರದ ಕಾರ್ಯವು ತ್ವರೆಯಿಂದ ಸಾಗಬಲ್ಲದು.

* * *

ತ್ರಿವೇಂದ್ರಮ್ಮದೊಳಗಿನ ಅನಂತಶಯನ ದೇವಸ್ಥಾನದ ದುರಸ್ತಿಯ ಕೆಲಸ ಭರದಿಂದ ಸಾಗಿದೆ. ಈ ದೇವಸ್ಥಾನ

ಸ್ಥಳದ ಸಾಧನವು. ಇದು ಹೀಗೆ ಈ ದೇವಸ್ಥಾನವಿದ್ದ ಸ್ಥಳ ಪೂರ್ವಕಾಲದಲ್ಲಿ 'ಆನಂದನ ಕಾಡು' ಎಂಬ ಬೆಟ್ಟ. ಈ ಬೆಟ್ಟದಲ್ಲಿ ಅಸ್ಪೃಶ್ಯ ಪುಲಯಾ ಜಾತಿಯ ಗಂಡ-ಹೆಂಡರು ಹುಲ್ಲಿಗೆ ಹೋದಾಗ ಶಿಶುವಿನ ಅಳುವನ್ನು ಕೇಳಿದರು, ಆ ದನಿಯಿದ್ದಲ್ಲಿಗೆ ಹೋಗಿ ನೋಡಿದರೆ ಒಂದು ಮಗು! ಅದಕ್ಕೆ ಅಲ್ಲಿಯೇ ಹಾಲು-ಗಂಜಿ ಹಾಕಿ ಸಾಕಿದರು. ಒಯ್ಯುವಲ್ಲಿಯೇ ಅದರ ಬೆಳವಣಿಗೆ. ಆ ಕೂಸಿಗೆ ಒಂದು ಮರದಡಿ ಬಿಟ್ಟು ಅವರು ಬೆಟ್ಟಕ್ಕೆ ಹೋಗುತ್ತಿದ್ದರು. ಒಂದು ದಿನ ಅದೇ ಮರದ ಬಳಿ ಬರಲು ಆ ಕೂಸಿನ ಮೇಲ್ಭಾಗದಲ್ಲಿ ೫ ಹೆಡೆಯ ಹಾವು ಹೆಡೆ ಬಿಚ್ಚಿಕೊಂಡು ನಿಂತಿತ್ತು. ನೋಡನೋಡುತ್ತಿರುವಾಗ ಹಾವು ಕೂಸನ್ನು ಕೊಂಡು ಬಿಲದಲ್ಲಿ ಸೇರಿತು. ಆ ವೇಳೆ ಗಂಡ-ಹೆಂಡರು ಬಂದು ಕಾಯಿ-ಚಿಪ್ಪಿನಲ್ಲಿ ಹಾಲು-ಗಂಜಿ ಹಾಕಿ ಆ ಬಿಲದ ಬಳಿ ಇಡುತ್ತಿದ್ದರು. ಸಂಸ್ಥಾನದ ಮಹಾರಾಜರು ಈ ಕಥೆ ಕೇಳಿ ಅಲ್ಲೊಂದು ದೇವಸ್ಥಾನ ಕಟ್ಟಿಸಿದರು. ಆ ದೇವಸ್ಥಾನ ಇದೇ! ಇದು ಎಂದು ಕಟ್ಟಿದರೆಂದು ತಿಳಿಯುವದಸಾಧ್ಯ. ಆದರೆ, ದೇವಸ್ಥಾನದಲ್ಲಿ ಮಲೆಯಾಳ ಶಕದ ೩೪೦ ನೇದರ ಒಂದು ತಾಮ್ರಶಾಸನವಿದೆ. ಅಂದರೆ ಕ್ರಿಸ್ತ ಶಕ ೧೧೬೫ನೇದು. ಈ ತಾಮ್ರಶಾಸನದಲ್ಲಿ ದೇವಸ್ಥಾನ ವಿಸ್ತಾರ ಮಾಡಿದ ಉಲ್ಲೇಖವಿದೆ. ಆದರಿಂದ ಮೂಲ ದೇವಸ್ಥಾನವು ಇದಕ್ಕೂ ಮುಂಚಿತವಾಗಿ ಕಟ್ಟಿಸಿದ್ದಿರಬೇಕು. ದೇವಸ್ಥಾನಕ್ಕೆ ಒಂದು ದೊಡ್ಡ ಗೋಪುರವಿದೆ. ಅದನ್ನು ಮಾರ್ತಾಂಡವರ್ಮ ಮಹಾರಾಜರವರು ಕಟ್ಟಿಸಿದರು. ಮಾರ್ತಾಂಡವರ್ಮರವರು ಹೊಸದಾದ ಅರಸರು. ಅವರ ಕಾಲದಲ್ಲಿ ತ್ರಾವಣಕೋರವು ಇಷ್ಟು ದೊಡ್ಡ ಸಂಸ್ಥಾನವಿರಲಿಲ್ಲ. ಅಲ್ಲಲ್ಲಿ ಚಿಕ್ಕ-ಚಿಕ್ಕ ಸಂಸ್ಥಾನಗಳಿದ್ದವು, ಅವುಗಳನ್ನೆಲ್ಲ ಮಾರ್ತಾಂಡವರ್ಮರವರು ಸೋಲಿಸಿ ತ್ರಾವಣಕೋರ ಸಂಸ್ಥಾನಕ್ಕೆ ಸೇರಿಸಿಕೊಂಡು ಕುಟುಂಬಸಹಿತವಾಗಿ ಸಮೇತ ಶ್ರೀ ದೇವಸ್ಥಾನಕ್ಕೆ ಹೋಗಿ ಇಡೀ ಸಂಸ್ಥಾನವನ್ನು ಶ್ರೀ ಪದ್ಮನಾಭ ಸ್ವಾಮಿ ದೇವರ ಚರಣಾರವಿಂದಗಳಲ್ಲಿ ಅರ್ಪಿಸಿದರು. ಅಂದಿನಿಂದ ತ್ರಾವಣಕೋರ ಸಂಸ್ಥಾನಿಕರು ಸಂಸ್ಥಾನದ ಪಾಲಕರಾಗಿ ರಾಜ್ಯಕಾರಭಾರ ನಡೆಸುತ್ತಿದ್ದಾರೆ.

.:.

ಕೊಚ್ಚೀನ ಸಂಸ್ಥಾನದಲ್ಲಿ ಈ ಹಿಂದೆ ದೇವಾಲಯಗಳ ಸಂಗತಿ ಎಲ್ಲರಿಗೂ ಗೊತ್ತಿದೆ. ದೇವಾಲಯವನ್ನು ಮಾಡಿಯು ವದಕ್ಕಾಗಿ ಸರಕಾರ ಸಹಾಯದ ಬಗ್ಗೆ ಮಾಡಿ ರಿಪೋರ್ಟ ಮಾಡುವದಕ್ಕಾಗಿ ಮಹಾರಾಜರು ಒಂದು ಕಮಿಟಿ ನೇಮಿಸಿದ್ದರು. ಆ ಕಮಿಟಿಯು ರಿಪೋರ್ಟ ಸಾದರಾದ ಬಳಿಕ, ಮಹಾರಾಜರು ೧೩ ದೇವಾಲಯಗಳಿಗೆ ವರ್ಷಾಸನ ಕೂವಾರು ೧೫೦೦ ರಿಂದ ೧೫೦ ರೂ ಗಳ ವರೆಗೆ ದೊರೆಯುವ ಶಾಶ್ವತ ವ್ಯವಸ್ಥೆ ಮಾಡಿದ್ದಾರೆ.

.:.

ಬೋರಸದದ ಶ್ರೀ ಜೀವಾಭಾಯಿ ಪಟೇಲರವರು ಒಳ್ಳೇ ಸಂಪನ್ನ ಸ್ಥಿತಿಯವರಿದ್ದರು. ತಕ್ಕ ಮಟ್ಟಿಗೆ ೬೦ ಸಾವಿರ ರೂಪಾಯಿಗಳ ಆಸ್ತಿಯಿತ್ತು. ಸತ್ಯಾಗ್ರಹದಲ್ಲಿ ಧನವೆಲ್ಲ ಆಸ್ತಿಯನ್ನು ಕಳಕೊಂಡರು. ಈಗ ಅವರ ಜೀವನೋಪಾಯವೆಂದರೆ ಕೈಮಗ್ಗ! ಕೈಮಗ್ಗ-ಕೈರಾಟಗಳಿಂದ ಅವರು ಸಂಸಾರ ನಡಿಸಿಕೊಂಡು ಬರುತ್ತಾರೆ. ಮುಂಬಯಿಯ ಖಾದಿಯ ಪ್ರದರ್ಶನದಲ್ಲಿ ಅವರು ಖಾದಿಯ ಮಹಿಮೆಯನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿ ತೋರಿಸಿದರು.

.:.

ಜಪಾನ ಸರಕಾರವು ಮದ್ಯನಿಷೇಧ ಚಳವಳಿಕ್ಕಾಗಿ ಒಳ್ಳೇ ಪ್ರಯತ್ನ ಮಾಡುತ್ತಿದೆ. ಮುಖ್ಯ ಪ್ರಧಾನರು ಸರ್ಕ್ಯುಲರನ್ನು ಹೊರಡಿಸಿ ಸರಕಾರಿ ಅಧಿಕಾರಿಗಳೆಲ್ಲ ಮದ್ಯಪಾನನಿಷೇಧ ಮಂಡಳಗಳಿಗೆ ಉತ್ತೇಜನ ಕೊಡಬೇಕೆಂದು ವಿಧಿಸಿದ್ದಾರೆ. ಮದ್ಯಪಾನ ಬಿಟ್ಟಲ್ಲಿ ಜಪಾನದೊಳಗಿನ ರಾಷ್ಟ್ರೀಯ ಅಭಿಮಾನವು ಸಿಗಲಾಗುವದೆಂದೂ, ಅಂಗ ಸಾಮರ್ಥ್ಯ ಬೆಳೆಯುವದೆಂದೂ ಅಲ್ಲಿಯ ಮುಖ್ಯ ಪ್ರಧಾನರ ಅಂಬೋಣ. ಜಪಾನ ದೇಶದಲ್ಲಿ ವಿಲಕ್ಷಣ ದೇಶಾಭಿಮಾನವಿರುವದರಿಂದ ಈಗ ಮದ್ಯಪಾನದ ನಿಷೇಧದ ವಾಗುವದಾಗಿ ತಿಳಿಯಲಿಕ್ಕೆ ಯಿಲ್ಲ. ಮದ್ಯಪಾನ ಬಿಟ್ಟಲ್ಲಿ ಜಪಾನಿ ಸರಕಾರಗಳ ಬೆಳೆ ಇನ್ನೂ ಹೆಚ್ಚುವದಾಗಿದೆ. ಜಪಾನಿ ಸರಕಾರಗಳ ಪ್ರಭಾವವನ್ನು ಇನ್ನೂ ಬೆಳಸಬಹುದಾಗಿಯೂ ಜಪಾನಿನ ರೀತಿ ಉಪದೇಶಿಸಲಾಗಿದೆ. ಈ ಬಿಲ್ಲದ ದೆಸೆಯಿಂದ ಜಪಾನಿಯರಲ್ಲಿ ಒಳ್ಳೇ ಉತ್ಸಾಹವುಂಟಾಗಿದೆ. ಮದ್ಯಪಾನ ಬಿಟ್ಟದ್ದರಿಂದ ಮಾನವನ ಉತ್ಪಾದಕ ಶಕ್ತಿ ಬೆಳೆಯುತ್ತದಾಗಿ ತೋರಿಸುವಂಥ ಪತ್ರಿಕೆಗಳು ಪ್ರಕಟವಾಗುತ್ತಿವೆ. ಸ್ವತಂತ್ರ ದೇಶದೊಳಗಿನ ಮದ್ಯನಿಷೇಧ ಚಳವಳಿಯ ಕಾರ್ಯಕ್ರಮವು ಕೇಳಿದರೆ ಆನಂದವಾಗುತ್ತದೆ. ಆದರೆ ಇಂದಿನ ದೇಶಗಳಿಗೆ ರಕ್ತ ಮಾಂಸಗಳು ಆಗಿ ಇಂಥ ಸರಾಯಿಯನ್ನು ಹಣಕ್ಕಾಗಿಯೇ ಜಪಾನ ಸರಕಾರದ ಪ್ರತಿಬಂಧವಿಲ್ಲ. ಮದ್ಯಪಾನ ಕೇವಲ ಪರದೇಶಗಳಿಗಾಗಿ ಮಾತ್ರ ಉಪಯೋಗಿಸುವ ಸ್ವಾರ್ಥ ಕ್ಷೇಮಕರವಲ್ಲ.

.:.

ಜಾಯಿಂಟ ಸಿಲೆಕ್ಟ ಕಮಿಟಿಯ ರಿಪೋರ್ಟಿನ ಮುದ್ರಣ ಮುಗಿದು ಅವು ಹಡಗ ಹತ್ತಿ ಹೊರಟಿವೆ. ೩೦ ಸಾವಿರ ಪ್ರತಿಗಳು ೩ ಹಡಗುಗಳಿಂದ ಕಳಿಸಲ್ಪಟ್ಟಿವೆ. ೧೦ ಸಾವಿರ ಪ್ರತಿಗಳು 'ವ್ಹೈಸರಾಯ್-ಆಫ್-ಇಂಡಿಯಾ' ಹಡಗದ ಮೇಲೆ, ಇನ್ನು ೧೦ ಸಾವಿರ ಪ್ರತಿಗಳು 'ಸ್ಟ್ರಥನೇವರ್' ಹಡಗದ ಮೇಲೆ ಬರುತ್ತವೆ. ನವಂಬರ ೩೦ನೇ ತಾರೀಖಿಗೆ ಬ್ರಿಟಿಶ ಹಿಂದುಸ್ಥಾನದೊಳಗಿನ ಮುಂಜಾವಿನ ಪತ್ರಿಕೆಗಳಲ್ಲಿ ಆ ರಿಪೋರ್ಟು ಪ್ರಕಟವಾಗುವದು. ರಿಪೋರ್ಟಿನ ಗ್ರಂಥಗಳು ೩. ೧ ಗ್ರಂಥದಲ್ಲಿ ರಿಪೋರ್ಟವು, ೨ನೇದರಲ್ಲಿ ಕಮಿಟಿಯ ವೃತ್ತಾಂತವಿದೆ, ೩ನೇದರಲ್ಲಿ ಭಾರತ ಮಂತ್ರಿಗಳ ಜ್ಞಾಪಕಪತ್ರಗಳಿವೆ. ಮೂರು ಗ್ರಂಥಗಳಿಗೆ ಬೆಲೆ ೮ ಪೌಂಡ ಕಿರ ಅಗ್ಗವಾಗದು. ಇಂಗ್ಲಂಡ ದೇಶದಲ್ಲಿ ಈ ರಿಪೋರ್ಟಿಗೆ ೫ ಶಿಲಿಂಗ ಬೆಲೆ. ಅಂದರೆ ಸುಮಾರು ೩॥ ರೂಪಾಯಿ. ಇಲ್ಲಿ ಜನರು ಅದನ್ನು ಹಚ್ಚಿಗೆ ಓದಿ ಬ್ರಿಟಿಶ ಸಾಮ್ರಾಜ್ಯಶಾಹಿಯರು ಕೊಡುವದಾದ ನೂತನ ಸ್ವರಾಜ್ಯದಿಂದ ಹಾಗೆ ಸಂತ ಮಾಡಿ ಲಾಭ ಪಡೆಯಬೇಕೆಂದು ಬುದ್ಧಿ ಆ ಹಾಗೆ ಬೆಲೆ ಇಟ್ಟರು. ಈ ರಿಪೋರ್ಟಿನನ್ವಯ ಹಿಂದುಸ್ಥಾನ ಸರಕಾರದ ಕಾಯಿದೆಯು ಬರೆಯಲ್ಪಡುವದಾಗಿದೆ. ಇದರೊಳಗೆ ೩೦೦-೪೦೦ ಕಲಮುಗಳಿವೆ. ೬ ತಿಂಗಳ ತನಕ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುವದು. ಪೊನಸೋಲ ವಾದ-ವಿವಾದವಾಗುವದು. ಭಾರತ ಮಂತ್ರಿಗಳು ಸುಮಾರು ೩೦೦ ಕ್ಕೆ ಮಿಕ್ಕಿ ಭಾಷಣ ಮಾಡಿ ಕಾಯಿದೆಯು ಸಮರ್ಥನ ಮಾಡಬೇಕಾಗುವದು. ಇಷ್ಟೆಲ್ಲ ಸಂಕಟದೊಳಗಿಂದ ಕಾಯಿದೆ ಮಂಜೂರಾಗಿ ಬಾದಶಹರ ಅನುಮತಿ ಪಡೆಯುವ ತನಕ ೧೯೩೫ ನೇ ಇಸ್ವಿ ನಿಂತಾಳ ಹಬ್ಬ ಬರುವದಂತೆ. ಇಷ್ಟೆಲ್ಲ ಬವಣೆ-ಬವಣೆಗಳು ಸ್ವರಾಜ್ಯಾಧಿಕಾರವನ್ನು ರಾಜ್ಯಘಟನೆಗೆ ತಗಲಿದ ಖರ್ಚ ಪ್ರತ್ಯಕ್ಷ ರಾಜ್ಯಾಧಿಕಾರ ಸಿಗುವ ರಾಜ್ಯಯೋಜನೆಗಾಗಿ ಬ್ರಿಟಿಶ ಮುತ್ಸದ್ದಿಗಳಿಗೆ ಎಷ್ಟು ಕಷ್ಟವಾಗುವದೆಂದು ಆಲೋಚಿಸಿದರೆ ತಲೆ ಗರಗರನೆ ತಿರುಗುತ್ತದೆ.

.:.

ಕರಾಚಿಯಲ್ಲಿ ಹಿಂದೀ ವರ್ತಕ ಸಂಘಕ್ಕೂ, ಪ್ರಿಟಿಶ ವರ್ತಕ ಸಂಘಕ್ಕೂ ನಡೆದ ವಿವಾದವು ಬಗೆಹರಿಯಿತು. ವರ್ತಕರೊಳಗೆ ವ್ಯಾಪಾರದ ವಿವಾದವಿದ್ದಲ್ಲಿ ಅದನ್ನು ಯುರೋಪಿಯನ್ ಪಂಚರ ಮುಖಾಂತರವೇ ಇತ್ಯರ್ಥ ಮಾಡಿಸಿಕೊಳ್ಳಬೇಕಾಗಿದ್ದಿತು. ಈಗ ಹಿಂದೀ ವರ್ತಕರಿಗೂ ಪಂಚರನ್ನಾಗಿ ನೇಮಿಸಬಹುದೆಂದು ಇತ್ತಟ್ಟಿನಲ್ಲಿ ಬಹಳ ಬಹಿಷ್ಕಾರದಿಂದ ಕರಾಚಿಯ ಹಿಂದೀ ವರ್ತಕರು ಯುರೋಪಿಯನ್ ವರ್ತಕರ ಮೇಲೆ ಹಾಕಿದ ಬಹಿಷ್ಕಾರ ಅಂತ್ಯವಾಯಿತೆನ್ನಬಹುದು.

Siromani Udipi Narayanacharya,
CHAUKHAMBA, BENARES CITY.

SUNRED BENARES CITY

ಮಹಾಶಯರೇ, ಮದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿಕೊಳ್ಳಿರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ. ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ದರ1ಕ್ಕೆ ರೂ.0-8-0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0ರಿಂದ 50 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟ್ಯಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಫೋಟೋ ಸಹ ಇನಾಂ ಕಳಿಸಲಾಗುವದು.

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ

ಅಚ್ಚಿನಲ್ಲಿದೆ! ತ್ವರೆ ಮಾಡಿರಿ!!

ಶ್ರೀ। ವೇ. ಮೊಗೇರಿ ಭಾಸ್ಕರ ಅಡಿಗಳಿಂದ

ತಿಪ್ಪಣಿಗಳಲ್ಲಿಯೂ ಗ್ರಹಣಾದಿ ಪ್ರತ್ಯಕ್ಷ ವಿಷಯಗಳಲ್ಲಿಯೂ ಶಾಸ್ತ್ರನಿರ್ಣಿತವಾಗಿ ಹಾಗೂ ಸೂಕ್ಷ್ಮವಾಗಿ ರುವಂತೆ ಸೂರ್ಯ ಸಿದ್ಧಾಂತ ರೀತ್ಯಾ ಗುಣಿಸಲ್ಪಟ್ಟು, ಇವರ ಅಗ್ರಜ—

ಶ್ರೀ। ವೇ. ಸಿದ್ಧಾಂತಿ ರಾಮಪ್ಪ ಅಡಿಗಳು ಮತ್ತು ಶ್ರೀ। ವೇ. ಕರ್ಕಿ ಸೂರಿ ಕೃಷ್ಣಭಟ್ಟರು ಇವರಿಂದ ಪರಿಶೋಧಿಸಲ್ಪಟ್ಟು,

ಕರ್ಕಿಯ ಶ್ರೀ ವಿಶ್ವನಾಥ ಧರ್ಮವಿದ್ಯಾಪರಿಷತ್ತಿನವರಿಂದ ಆಶ್ರಯವನ್ನು ಹೊಂದಿದ

ಸಕಲ ಧಾರ್ಮಿಕ, ಲೌಕಿಕ ಕಾರ್ಯಗಳಿಗೂ ಉಪಯುಕ್ತವಾಗಿರುವ

ಯುವ ಸಂವತ್ಸರದ ಪಂಚಾಂಗವು

ಅಚ್ಚಿನಲ್ಲಿದೆ! ನವಂಬರ ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವದು!

ನಿಯಮಿತ ಪ್ರತಿಗಳು ತೆಗೆದಿರುವದರಿಂದ ಬೇಕಾದವರು ಮುಂದಾಗಿ ತಿಳಿಸಬೇಕು!

ಜಾಹೀರಾತುದಾರರು ತ್ವರೆ ಮಾಡಬೇಕು!!

ಪತ್ತೆ:—
ಮೆನೇಜರ, "ಸ್ಟಾರ ಆಫ್ ಕೆನರಾ ಪ್ರೆಸ್", ಕುಮಟಾ. (ಉ. ಕನ್ನಡ)

ಹೊಟ್ಟೆಗಿಲ್ಲವೆಂದು ಅಳುವ ರೈತರಿಗೆ ಗ್ರಾಮ-ಪಂಚಾಯತಿಗಳ ಉಪಯೋಗವೇನು?

(ಲೇಖಕ:— ಒಬ್ಬ ಒಕ್ಕಲಿಗ)

ಇತ್ತಲಾಗಿ ಹಳ್ಳಿಯ ಜನರಿಗೆ ತಮ್ಮ ಊರಲ್ಲಿ ಗ್ರಾಮ-ಪಂಚಾಯತಿಯನ್ನು ಸ್ಥಾಪಿಸಿ ತಮ್ಮ ಉದ್ಧಾರ ಮಾಡಲಿಕ್ಕೆ ಸರಕಾರದವರು ಉಪದೇಶ ಮಾಡಹತ್ತಿದ್ದಾರೆ. ಜನರಿಗಂತೂ ಈ ಗ್ರಾಮ-ಪಂಚಾಯತಿಗಳು ಬಗ್ಗೆ ಭ್ರಾಂತಿಯನ್ನುಂಟು ಮಾಡುವ ಮಾತಿದು. ಮನೆಗೆ ಹೋಗಿ ಕಾಣಿಸಹತ್ತಿದ ಬಂಗಾಲದಲ್ಲಿ ಹೊಟ್ಟೆಗೆ ಕೂಳಿಲ್ಲೆಂದು ಗೋಳಿಡುತ್ತಿರುವ ರೈತ ಜನರಿಗೆ “ಸಕ್ಕರೆ ತಿನ್ನಿರಿ” ಎಂದು ಹೇಳಿದ ಬೋರಬನ ರಾಣಿಯ ಮಾತಿನ ನೆನಪಾಗುತ್ತದೆ. ಸರಕಾರದ ಮನಸ್ಸಿನಲ್ಲಿ ನಿಜವಾಗಿ ರೈತರ ಕಲ್ಯಾಣವಾಗಬೇಕು, ಹಳ್ಳಿಗಳು ಸುಧಾರಣೆಯಾಗಬೇಕು, ಒಕ್ಕಲಿಗರು ಸುಖಿಗಳಾಗಬೇಕು ಎಂದು ಅನಿಸುತ್ತಿದ್ದಲ್ಲಿ, ಸರಕಾರವು ಮೊದಲು ಅವರ ಮೇಲೆ ಒದಗಿರುವ ಮುಖ್ಯ ಅಡಚಣೆಯನ್ನು ದೂರಪಡಿಸುವ ಆಲೋಚನ ಮಾಡತಕ್ಕದ್ದು. ಅವರಿಗಿರುವ ಯಾ ತಮ್ಮ ಕೈಯಿಂದ ಉಂಟಾಗಿರುವ ಸಣ್ಣ-ದೊಡ್ಡ ತೊಂದರೆಗಳನ್ನು ಪರಿಹರಿಸತಕ್ಕದ್ದು, ಭೂಮಿಯ ಒಕ್ಕಲಿಗೆ ಅವಶ್ಯವಿರುವ ಎಲ್ಲ ಮುಖ್ಯ ಸೌಕರ್ಯಗಳನ್ನು ಪೂರೈಸಿಕೊಡತಕ್ಕದ್ದು. ಈ ಕಡೆಗೆ ಲಕ್ಷ್ಯಕೊಡದೆ, ಗ್ರಾಮ-ಪಂಚಾಯತಿಗಳನ್ನು ಸ್ಥಾಪಿಸಿ ತಮ್ಮ ಸ್ಥಿತಿ ಸುಧಾರಿಸಿಕೊಳ್ಳಿರಿ ಎಂದು ಹೇಳಿದರೆ ರೈತರು ಆ ಮಾತಿಗೆ ಹೇಗೆ ಕಿವಿಗೊಡಬಲ್ಲರು!

ಮನುಷ್ಯನಿಗೆ ಪ್ರಥಮ ಚಿಂತೆ ಕೂಳಿನದು. ಇಡೀ ವರ್ಷ ದುಡಿದ ಗೇಣಿ ಸಾಕಷ್ಟು ಕೂಳು ಸಿಗದಿದ್ದರೆ ಗ್ರಾಮ-ಪಂಚಾಯತಿಗಳಂತಹ ಆಡಂಬರಗಳ ಕಡೆಗೆ ಅವರ ಮನಸ್ಸು ಹೋಗುವ ಬಗೆಯೆಂತು? ಹೊಟ್ಟೆಯುರಿಯು ಶಾಂತವಾದ ಮೇಲಲ್ಲವೇ ಜನರು ಬೇರೆ ವಿಚಾರ ಮಾಡುವದು?

ಆದ್ದರಿಂದ ಒಕ್ಕಲಿಗರ ಹಾಗೂ ಒಕ್ಕಲತನದ ಸ್ಥಿತಿಯನ್ನು ಸುಧಾರಿಸುವ ಕಡೆಗೇ ಸರಕಾರವು ಮೊದಲು ಲಕ್ಷ್ಯಗೊಡಬೇಕು. ಅವರ ಅಡಚಣೆಗಳನ್ನು ದೂರಪಡಿಸಬೇಕು. ಈ ವರೆಗೆ ಸರಕಾರವು ಇತ್ತ ಕಡೆಗೆ ಮನಸ್ಸುಕೊಟ್ಟಿಲ್ಲ; ಅಷ್ಟೇ ಅಲ್ಲ! ಅವರ ಜಂಗಲ ಖಾತೆಯ ಕಾರಭಾರದಿಂದಲೂ, ಕರ-ಹೇರಿಕೆಯ ಕ್ರಮದಿಂದಲೂ ರೈತ ಜನರ ಸ್ಥಿತಿಯು ದಿನೇ ದಿನೇ ಕೆಂಗೆಡುತ್ತ ನಡೆದುದ, ಒಕ್ಕಲತನವು ತೀರ ಕಷ್ಟಮಯವಾಗಿ ಹೋಗಿರುತ್ತದೆ.

ಇದು ನಿಜವೋ ಅಲ್ಲವೆಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುವೆನು. ಅವುಗಳ ಮೇಲಿಂದ ನಾನು ಮಾಡಿದ ಸಿದ್ಧಾಂತವು ಸಾಧಾರವಿರುವ ಸಂಗತಿಯು ವಾಚಕರಿಗೆ ಮನದಟ್ಟಾಗುವದು.

ಹಿಂದೆ ಸರ್ವೇ ಸೆಟ್ಲಮೆಂಟ ಆದ ಕಾಲಕ್ಕೆ ಪ್ರತಿ ಊರಿನ ದನಗಳಿಗೆ ಮೇಯುವ ಬಗ್ಗೆ ಸಾಕಷ್ಟು ಕಿರಿಬೆಟ್ಟ ಯಾನೆ ಮ್ಯಾನರ ಜಂಗಲುಗಳು ಪ್ರತ್ಯೇಕವಾಗಿ ಬಿಟ್ಟಿವೆಯೆಂದು ಸೆಟ್ಲಮೆಂಟ ರಿಪೋರ್ಟಿನಲ್ಲಿ ಸ್ಪಷ್ಟವಾಗಿ ಬರೆದಿದೆ. ಅದೇ ಸೆಟ್ಲಮೆಂಟ ರಿಪೋರ್ಟಿನಲ್ಲಿ (712/1873) ರೆವಿನ್ಯೂ ಕಮಿಶನರರು ಹೇಳುತ್ತಾರಲ್ಲ — “ಪ್ರತ್ಯೇಕ ಗೋಚರಾವಿನ ಬಗ್ಗೆ ಈಗ ಬಿಟ್ಟಷ್ಟೇ ಕ್ಷೇತ್ರ ಕಾಯಂ ಎಂದು ತಿಳಿಯಕೂಡದು. ಇದಕ್ಕೂ ಹೆಚ್ಚು ಕ್ಷೇತ್ರ ಬಿಡುವ ಔದಾರ್ಯವನ್ನು ನಾವು ತೋರಿಸತಕ್ಕದ್ದು.” ಅದೇ ರಿಪೋರ್ಟಿನ ಕಲಂ ೫೨ದಲ್ಲಿ “ಪ್ರತ್ಯೇಕವಾಗಿ ದನಗಳು ಮೇಯುವ ಬಗ್ಗೆ ಬೆಟ್ಟ ಕ್ಷೇತ್ರವನ್ನು ನಾವು ಸ್ಪಷ್ಟ ಹಾಕಿ ನಿಶ್ಚಯಿಸಿದ್ದೇವೆ, ಜನರು ತಕರಾರು ಮಾಡಿದ ಬೆಟ್ಟವನ್ನು ಬಿಟ್ಟುಕೊಟ್ಟಿದ್ದೇವೆ.” ಹೀಗೆ ಸರ್ವೇ ಕಾಲಕ್ಕೆ ಪ್ರತ್ಯೇಕ ಗೋಚರಾವಿನ ಬಗ್ಗೆ ಬಿಟ್ಟುಕೊಟ್ಟ ಕಿರಿಬೆಟ್ಟಗಳಲ್ಲಿ ದನಗಳು ಮೇಯುವ ಬಗ್ಗೆ ಮುಂದೆ ಕೆಲವು ಕಾಲದ ಮೇಲೆ ಹುಲ್ಲುಬನ್ನಿ ಆಕರಣಿಯಾಗಹತ್ತಿತು. ಇದ್ಯಾವ ನ್ಯಾಯ? ಇದು ರೈತರ ಉದ್ಧಾರದ ಬಗ್ಗೆ ಮಾಡಿದ ಆಕರಣಿಯೋ? ಗೋಚರಾವಿನ ಬಗ್ಗೆ ಕಿರಿಬೆಟ್ಟ ಬಿಡುವಲ್ಲಿಯೂ ಕೂಡ ದುರ್ವರ್ತನ ಮಾಡಿದ ಉದಾಹರಣೆಗಳಿವೆ. ಸಿರ್ಸಿ ತಾಲೂಕ ಬನವಾಸಿ ಗ್ರಾಮದಲ್ಲಿ ೫೩೦ ದನಗಳಿದ್ದು ಆ ಗ್ರಾಮಕ್ಕೆ ೧೨೪ ಎಕರೆ ಕಿರಿಬೆಟ್ಟ ಬಿಟ್ಟಿದೆ. ಆ ಪೈಕಿ ೫ ಎಕರೆಗೂ ಕಡಿಮೆ ಬೆಟ್ಟ ಮಾತ್ರ ಊರ ಹತ್ತರವಿದ್ದು, ಬಾಕಿ ೧೧೭ ಎಕರೆ ಬೆಟ್ಟವು ಹೊಳೆಯ ಆಚೆ ಬದಿಗೆ ಬಿಟ್ಟಿದ್ದಾರೆ! ಈ ಬೆಟ್ಟಕ್ಕೆ ದನಗಳು ಹೋಗುವದು ಹೇಗೆ? ಬಿಸಲಕೊಪ್ಪ ಗ್ರಾಮದಲ್ಲಿ ೩೦೦ಕ್ಕಿಂತ ಹೆಚ್ಚು ದನಗಳಿದ್ದು, ಆ ಗ್ರಾಮಕ್ಕೆ ೧೬೨ ಎಕರೆ ಬೆಟ್ಟ ಬಿಟ್ಟಿದೆ. ಅಲ್ಲಿ ದನಗಳು ಹೋಗಿ ಮೇಯುವದು ಸಾಧ್ಯವೇ ಇಲ್ಲ!

ಸರಕಾರಿ ನಿಯಮದಂತೆ ಪ್ರತಿ ಒಂದು ಜಾನುವಾರಕ್ಕೆ ಎರಡು ಎಕರೆ ಬೆಟ್ಟ ಹುಲ್ಲುಬನ್ನಿ ಬಗ್ಗೆ ಬಿಡಬೇಕು. ಎಷ್ಟೋ ಹಳ್ಳಿಗಳಿಗೆ ಈ ನಿಯಮದಂತೆ ಬೆಟ್ಟ ಬಿಟ್ಟಿಲ್ಲ, ಇಲ್ಲಿಯೂ ಕೂಡ ಅಧಿಕಾರಿಗಳು ಚಾತುರ್ಯವನ್ನೇ ತೋರಿಸಿರುವರು. ಎಲ್ಲಿ ಜನವಸ್ತಿ ಇಲ್ಲವೋ ದನಗಳಿಲ್ಲವೋ ಅಂಥಲ್ಲಿ ಹೆಚ್ಚು ಬೆಟ್ಟ ಬಿಟ್ಟಿರುತ್ತಾರೆ. ೨೦೬ ದನಗಳಿದ್ದ ತೆಪ್ಪಾರ ಗ್ರಾಮಕ್ಕೆ ೧೦೨ ಎಕರೆ ಬೆಟ್ಟ! ೧೫೬ ದನಗಳಿದ್ದ ಬೆನಗಾಂವಕ್ಕೆ ೧೧೦೦ ಎಕರೆ ಬೆಟ್ಟ! ೧೯೪ ದನಗಳಿದ್ದ ಒಂಡಲೆ ಗ್ರಾಮಕ್ಕೆ ೧೫೦೫ ಎಕರೆ ಬೆಟ್ಟ! ಆದರೆ ೫೩೦ ದನಗಳಿದ್ದ ಬನವಾಸಿಗೆ ೧೨೪ ಎಕರೆ ಬೆಟ್ಟ! ೩೦೦ ದನಗಳಿದ್ದ ಬಿಸಲಕೊಪ್ಪ ಊರಿಗೆ ಬರೇ ೧೬೨ ಎಕರೆ ಬೆಟ್ಟ! ತಾಲೂಕಿನಲ್ಲಿ ಎಲ್ಲಾದರೂ ಬೆಟ್ಟ ಬಿಟ್ಟು, ತಾಲೂಕಿನೊಳಗಿನ ಒಟ್ಟು ದನಗಳಿಗೆ ಬೆಟ್ಟದ ಪ್ರಮಾಣ ಸರಿಬೀಳುವಂತೆ ಮಾಡಿದ ಅಧಿಕಾರಿಗಳ ಚಾತುರ್ಯವನ್ನು ಹೊಗಳುವಷ್ಟು ಕಡಿಮೆಯಲ್ಲವೇ?

ಪ್ರತ್ಯೇಕ ಮೇವಿಗೆ ಬಿಟ್ಟ ಕ್ಷೇತ್ರದಲ್ಲಿ ಮೇಯುವ ದನಗಳಿಗೆ ಹುಲ್ಲುಬನ್ನಿ ಆಕರಣಿ ಮಾಡಿಯೇ ಜಂಗಲ ಖಾತೆಯ ಅಧಿಕಾರಿಗಳು ತೃಪ್ತಿ ಹೊಂದಲಿಲ್ಲ! ಗೋಚರಾವಿಗೆ ಬಿಟ್ಟ ಕ್ಷೇತ್ರದಲ್ಲಿ ಇತ್ತೀಚೆಗೆ ಗಂಧದ ಸಸಿಗಳನ್ನು ನೆಡಲಾರಂಭಿಸಿದ್ದಾರೆ. ಸಿರ್ಸಿ ತಾಲೂಕಿನಲ್ಲಿ ಒಡ್ಡಲು ಮತ್ತು ಬೆಳ್ಳನಕೇರಿಯ ಕಿರಿಬೆಟ್ಟಗಳಲ್ಲಿ ನೆಟ್ಟ ಸಸಿಗಳನ್ನು ನಾನು ನೋಡಿದ್ದೇನೆ, ಬೇರೆ ಕಡೆ ನೆಟ್ಟಿದ್ದು ಕೇಳಿದ್ದೇನೆ. ಜಂಗಲ ಕಮಿಟಿಯ ಮುಂದೆ ಈ ಕುರಿತು ತಕರಾರು ಮಾಡಲಾಗಿ, ಇನ್ನು ಮುಂದೆ ಈ ಕ್ರಮವನ್ನು ನಿಲ್ಲಿಸುತ್ತೇವೆಂದು ಹೇಳಿದರು. ನಿಲ್ಲಿಸಿದ್ದು ಮಾತ್ರ ಇಲ್ಲ! ರೈತರು ಮಾ|| ಕಲೆಕ್ಟರ ಸಾಹೇಬರ ಕಡೆಗೆ ದೂರಿಕೊಂಡದ್ದಕ್ಕೆ ಸಾಹೇಬರು ಇದರಿಂದ ನಿಮಗೇನೂ ಹಾನಿಯಾಗದು ಎಂತ ಸಂದಿಗ್ಧ ಉತ್ತರವನ್ನು ದಯಪಾಲಿಸುತ್ತಾರೆ. ಈಗ ನೆಟ್ಟ ಗಂಧದ ಸಸಿಗಳು ಮುಂದೆ ರೈತರನ್ನು ಎಂಥ ಕಷ್ಟಗಳಿಗೆ ಗುರಿಪಡಿಸುವವೆಂಬುದು ದೇವರೇ ಬಲ್ಲನು!

ಗೋಚರಾವಿನ ಬೆಟ್ಟವೇ ಇಲ್ಲದಿದ್ದ ಊರೊಳಗಿನ ದನಗಳಿಗೆ ಹುಲ್ಲುಬನ್ನಿ ತಪ್ಪುವದಿಲ್ಲ! ಎಂದ ಮೇಲೆ ಹುಲ್ಲುಬನ್ನಿ ಬೆಟ್ಟ ಕಡಿಮೆಯೆಂದು ತಕರಾರು ಮಾಡಿದರೆ ಕೇಳುವರ್ಯಾರು?

ಕೆಲವು ಕಡೆಗಂತೂ ಕಾದಿಟ್ಟ ಬೆಟ್ಟವು ಮನೆಗಳ ತನಕ ಬಂದು ತಲ್ಪಿದೆ. ಮನುಷ್ಯರ ಸಮೀಪವೇ ಹುಲಿ-ಹಂದಿಗಳು ವಾಸ್ತವ್ಯ ಮಾಡಹತ್ತಿವೆ. ಮನೆಯಲ್ಲಿ ದನ-ಪಶುಗಳು ನಿಲ್ಲದಂತೆ ಮಾಡಲಿಕ್ಕೆ ಈ ಬೆಟ್ಟದೊಳಗಿನ ಕಿರಿಕಂಟಿಗಳನ್ನಾದರೂ ಸುಟ್ಟುಹಾಕಲಿಕ್ಕೆ ಸಾಧ್ಯವುಂಟೇ? ಸುಟ್ಟರೆ ಪ್ರಕರಣವನ್ನು ಬೆಳಸಿ ಕಂಜನ ಸೋಸಲ-ದಂಡ-ಶಿಕ್ಷೆ-ಶಿಕ್ಷೆಗಳ ಚಕ್ರವನ್ನು ಬಿಡುವರು! ಈ ಜಂಗಲ ಬೆಳವಣಿಗೆಯಿಂದ ದನಗಳು ಹುಲಿಯ ಪಾಲಾದವು! ಮನುಷ್ಯರು ಚಳಿಜ್ವರಕ್ಕೆ ತುತ್ತಾದರು! ಸಾಗು ಭೂಮಿಗಳು ಪಡ ಬಿದ್ದು ಜಂಗಲುಗಳಾಗಹತ್ತಿದವು! ೧೯೧೦ ನೇ ಇಸ್ವಿಯಲ್ಲಿ ಸಿರ್ಸಿ ತಾಲೂಕಿನೊಳಗಿನ ರೈತರ ಕಬಜೆಯಲ್ಲಿರುವ ಭೂಮಿಯ ಪೈಕಿ ೩೪೪೬೩ ಎಕರೆ ಸಾಗು ಮತ್ತು ೨೪೪೭೪ ಎಕರೆ ಭೂಮಿ ಪಡ ಇತ್ತು. ೧೯೩೦ನೇ ಇಸ್ವಿಯಲ್ಲಿ ೨೪೬೬೦ ಎಕರೆ ಸಾಗು ಉಳಿದು ಪಡ ಕ್ಷೇತ್ರವು ೩೦೧೨೪ ಎಕರೆ ಆಯಿತು. ಈ ನಾಲ್ಕು ವರ್ಷಗಳಲ್ಲಿಂತೂ ಬಹಳೇ ಭೂಮಿಗಳು ಸರಕಾರದಿಂದ ಜಪ್ತಾಗಿ ಇಲ್ಲವೆ ರೈತರು ರಾಜಿನಾಮೆ ಕೊಟ್ಟು ಪಡ ಬೀಳಹತ್ತಿವೆ. ಸಾರಾಂಶ ಜಂಗಲವು ಬೆಳೆಯುತ್ತ ನಡೆದುದು, ಸಾಗವಳಿ ಕ್ಷೇತ್ರವು ಕಡಿಮೆಯಾಗುತ್ತ ಹೋಗಿದೆ.

ಜನಸಂಖ್ಯೆಯನ್ನು ನೋಡಿದರಲ್ಲ, ೧೮೭೨ರಲ್ಲಿ ಸಿರ್ಸಿ ತಾಲೂಕಿನ ಜನಸಂಖ್ಯೆಯು ೭೯೬೦೭ ಇತ್ತು; ೧೯೩೧ರಲ್ಲಿ ಅದು ೪೮೯೨೭ಕ್ಕೆ ಇಳಿಯಿತು. ಇದೇ ಪ್ರಮಾಣದಿಂದ ಜನಸಂಖ್ಯೆಯು ಕಡಿಮೆಯಾಗುತ್ತ ಹೋದರೆ, ಸಿರ್ಸಿ ತಾಲೂಕು ಇನ್ನೆಷ್ಟು ವರ್ಷ ಬದುಕುವದೆಂದು ವಾಚಕರೇ ಲೆಕ್ಕ ಮಾಡಲಿ.

ದನಗಳ ಬೆಳವಣಿಗೆಯು ಸರಿಯಾಗಿ ನಡೆದರೆ ೧೦ ವರ್ಷಗಳಲ್ಲಿ ಅವು ಇಮ್ಮಡಿಯಾಗುತ್ತವೆ. ಆದರೆ, ಸಿರ್ಸಿ ತಾಲೂಕಿನಲ್ಲಿ ೧೯೦೦ ನೇ ಇಸ್ವಿಯಲ್ಲಿ ೪೦೭೧೯ ರಷ್ಟು ಇದ್ದ ದನಗಳು ೧೯೩೪ನೇ ಇಸ್ವಿಯಲ್ಲಿ ೩೧೪೭೪ ಆದವು. ವರ್ಷ ವರ್ಷಕ್ಕೂ ಪರಜಿಲ್ಲೆಗಳಿಂದ ಸಾವಿರಾರು ದನ-ಕರುಗಳು ಈ ತಾಲೂಕಿಗೆ ಬರುತ್ತಿದ್ದದರಿಂದ ಇಷ್ಟು ದನಗಳು ಆದವು. ಇಲ್ಲವಾದರೆ ಎಷ್ಟು ಇಳಿಯುತ್ತಿದ್ದವೋ ಏನೋ!

ನಮ್ಮ ಜಿಲ್ಲೆಯಲ್ಲಿ ಕಾಡು ಹಂದಿ, ಕಾಡಾನೆ, ಮಂಗ ಮುಂತಾದ ವನ್ಯ ಪ್ರಾಣಿಗಳಿಂದ ಪೈರಿಗೆ ಬಾಧೆಯಾಗುತ್ತದೆಂತಲೂ ಆ ಬಾಧೆಯ ನಿವಾರಣೆಗೆ ತುಪಾಕಿಗಳ ಬೇಕಷ್ಟು ಲೈಸೆನ್ಸುಗಳನ್ನು ಕೊಡುವ ವ್ಯವಸ್ಥೆಯಾಗಬೇಕೆಂತಲೂ ಸೆಟ್ಲಮೆಂಟ ಅಧಿಕಾರಿಗಳು ಶಿಫಾರಸು ಮಾಡಿರುತ್ತಾರೆ. ಸರಕಾರದವರು ಈ ಶಿಫಾರಸನ್ನು ಎಷ್ಟರ ಮಟ್ಟಿಗೆ ಮನ್ನಿಸುತ್ತಾರೆಂದು ನೋಡುವಿರಾ? ನಮ್ಮ ಸಿರ್ಸಿ ತಾಲೂಕಿನಲ್ಲಿ ೬ ಸಾವಿರಕ್ಕೆ ಮೇಲ್ಪಟ್ಟು ರೈತರಿದ್ದಾರೆ. ತುಪಾಕಿಯ ಪರವಾನೆಗಳು ಮಾತ್ರ ೬೦೦ಕ್ಕೆ ಮಿಕ್ಕುವದಿಲ್ಲ. ಈ ಪೈಕಿ ೧೦೦ ತುಪಾಕಿಗಳು ಪರವಾಸಿಗಳಿಗೆ ಕೊಟ್ಟಿವೆ. ಉಳಿದ ೫೦೦ ತುಪಾಕಿಗಳಿಂದ ೬ ಸಾವಿರ ರೈತರು ೨೫ ಸಾವಿರ ಎಕರೆ ಭೂಮಿಗಳೊಳಗಿನ

ಬೆಳೆಯನ್ನು ರಕ್ಷಿಸುವದೆಂತು? ಮತ್ತು ಆ ಬೆಳೆಯು ಸುರಕ್ಷಿತವಾಗಿ ರೈತರ ಬೊಕ್ಕಸದಲ್ಲಿ ಬಂದುಬೀಳುವದೆಂತು?

ತೋಟಗಳ ಸಾಗುವಳಿಯ ಅನುಕೂಲತೆಯ ಬಗ್ಗೆ ಸರಕಾರದವರು ತೋಟಗಳಿಗೆ ಬೆಟ್ಟ ಬಿಟ್ಟು ಕೊಟ್ಟಿದ್ದಾರೆ. ಬೆಟ್ಟದ ತೀರ್ವೆಯನ್ನು ತೋಟಗಳ ತೀರ್ವೆಯಲ್ಲೇ ಕೂಡಿಸಿರುತ್ತಾರೆ. ಈ ಬೆಟ್ಟಗಳ ತೀರ್ವೆ ರೂಪದಿಂದ ಸರಕಾರಕ್ಕೆ ೪೯ ಸಾವಿರ ಉತ್ಪನ್ನ ಸಿಗುತ್ತದೆ. ಈ ಬಗ್ಗೆ ೧ ಪೈ ಸಹ ಖರ್ಚ ಬೀಳುವದಿಲ್ಲ. ಈ ರೀತಿ ಬೆಟ್ಟಗಳು ರೈತರ ಕಬಜೆಯಲ್ಲಿದ್ದು ಅವರು ಆ ಬಗ್ಗೆ ಪರ್ಯಾಯದಿಂದ ತೀರ್ವೆ ತೆರುತ್ತಿರುವಾಗ, ಅವನ್ನು ರೈತರ ಖಾತೆಗೆ ಹಾಕಿಕೊಡಲಿಕ್ಕೆ ಅಡ್ಡಿಯೇನು? ಹಾಗ ಮಾಡಲಿಕ್ಕೆ ಸರಕಾರದವರು ಒಪ್ಪಿಗಯಿಲ್ಲ! ರೈತರಿಗೆ ಜ್ಞಾನವಿಲ್ಲವಂತೆ! ಬೆಟ್ಟಗಳ ಖಾತೆ ರೈತರ ಹೆಸರಲ್ಲಿ ಮಾಡಿಕೊಟ್ಟರೆ ಅವರು ಬೆಟ್ಟಗಳನ್ನು ಹಾಳುಗೆಡವಿ ಮತ್ತೆ ಬೆಟ್ಟ ಬಿಡುವರಂತೆ!

ಇಷ್ಟೇ ಅಲ್ಲ, ಈಗೊಂದು ಹೊಸ ನಿಯಮ ಬಂದಿದೆ. ಗಿಡಕ್ಕೊಂದು ರೂಪಾಯಿಯಂತೆ ಪಾಸಲು ಕಟ್ಟಿದರೆ ರೈತರು ಈ ಬೆಟ್ಟಗಳೊಳಗಿನ ಗಿಡಗಳನ್ನು ಕಡಿಯಬಹುದೆಂದು ನಿಯಮ. ಹೀಗೆ ಪಾಸಲು ಕಟ್ಟಿ ಗಿಡ ಕಡಿದರ ಬೆಟ್ಟ ಹಾಳಾಗುವದಿಲ್ಲ! ಪಾಸ ತೆಕೊಟ್ಟರೆ ಮಾತ್ರ ಗಿಡಗಳ ನಾಶ ಮಾಡಿ ರೈತರು ಬೆಟ್ಟವನ್ನು ಹಾಳು ಮಾಡುವರು. ಒಟ್ಟಾರೆ ರೈತರಿಂದ ದುಡ್ಡು ಎತ್ತುವ ಯೋಜನೆಗಳೇ ಹೊರತು ಬೇರೊಂದಿಲ್ಲ.

ಮೇಲಿನ ಹೊಸ ನಿಯಮದ ಅಮಲಬಜಾವಣೆಗಾಗಿ ಒಬ್ಬ ಬೆಟ್ಟದ ಆಫೀಸರನು ನೇಮಿಸಲ್ಪಟ್ಟಿದ್ದಾನೆ. ಅವನು ತೋಟಗಳ ಜಾತಿಯ ವನ, ಬೆಟ್ಟಗಳ ಒತನ ಹ್ಯಾಗೆ ಮಾಡಬೇಕೆಂದು ತೋಟಿಗರಿಗೆ ಕಲಿಸುವದು ಅವನ ಮುಖ್ಯ ಕೆಲಸವಂತೆ! ತೋಟಿಗರು ಇತ್ತೀಚಿಗೆ ಅಸ್ತಿತ್ವದಲ್ಲಿ ಬಂದವರಲ್ಲ, ಬೆಟ್ಟಗಳೂ ಹೊಸದಲ್ಲ. ನೂರಾರು ವರ್ಷಗಳಿಂದ ತೋಟ-ಬೆಟ್ಟಗಳ ಸಾಗುವಳಿ-ಜೋಪಾಸನೆಗಳನ್ನು ಮಾಡುತ್ತ ಬಂದಿರುವ ತೋಟಿಗರಿಗೆ ಬೆಟ್ಟಗಳ ರಕ್ಷಣೆ ಮಾಡುವ ಪ್ರಕಾರಗಳನ್ನು ಕಲಿಸಲಿಕ್ಕೆ ಈಗ ಈ ಬೆಟ್ಟದ ಆಫೀಸರನು ಬೇಕಾದನೇ?

ಹಿಂದೆ ಮಿ|| ಟಪ್ಪರ್ ಸಾಹೇಬರು ಕಲೆಕ್ಟರರಿರುವ ಕಾಲದಲ್ಲಿ ಜಂಗಲ ಖಾತೆಯವರು ಸೊಪ್ಪಿನ ಡಿಪೋಗಳನ್ನು ತೆರೆದಿದ್ದು, ರೈತರು ಸೊಪ್ಪನ್ನು ಡಿಪೋಗಳಲ್ಲಿ ಮಾರಾಟಕ್ಕೆ ಒಯ್ಯಬೇಕೆಂತ ಮಾಡಿದ್ದು ಕೆಲವರಿಗೆ ನೆನಪಿರಬಹುದು. ಆಗ ಮಿ|| ಟಪ್ಪರರಂಥ ರೈತರ ಪಕ್ಷಪಾತಿ ಕಲೆಕ್ಟರರಿದ್ದದರಿಂದ ಜನರ ತಕರಾರು ಮಾನ್ಯವಾಗಿ ಸೊಪ್ಪಿನ ಡಿಪೋಗಳು ಬಂದಾದವು.

ಸಂಕ್ಷಿಪ್ತದಲ್ಲಿ ಹೇಳಬೇಕಾದರೆ ನಮ್ಮ ಜಿಲ್ಲೆಯು ಜಂಗಲ ಖಾತೆಯವರ ಮುಟಿಗೆಯಿಂದ ವಿಪನ್ನಾವಸ್ಥೆಗೆ ಬಂದು ಮುಟ್ಟಿದೆ. ನಾನಾತರದಿಂದ ಜಂಗಲ ಖಾತೆಯವರು ರೈತರಿಂದ ಹಣವನ್ನು ಸುಲಿಯುತ್ತಾರೆ, ಅವರ ಹಕ್ಕುಗಳನ್ನು ಸಂಪೂರ್ಣದಲ್ಲಿ ತುಳಿಯುತ್ತಾರೆ. ಭೂಮಿಯ ಸಾಗುವಳಿಗೆ ಅವಶ್ಯವಿರುವ ಸೊಪ್ಪು, ಕಟ್ಟಿಗೆ, ಬಳ್ಳಿ, ಬಿದಿರುಗಳನ್ನು ಪುಕ್ಕಟೆಯಾಗಿ ಇಲ್ಲವೆ ಸುಲಭವಾಗಿ ಪೂರೈಸುವದಿಲ್ಲ. ಚಿಕ್ಕ-ಪುಟ್ಟ ಗುನ್ಹೆಗಳಿಗಾಗಿ ಖಟ್ಲೆಗಳನ್ನು ಮಾಡಿ ದಣಿಸುತ್ತಾರೆ ಎಂದ ಮೇಲೆ ರೈತರು ಬಡವರಾಗದೆ ಹೇಗೆ ಉಳಿದಾರು? ಅವರ ಜಮೀನುಗಳು ಸಾವುಕಾರರಿಗೆ ಅಡವು-ಕ್ರಯವಾಗದೇ ಹ್ಯಾಗೆ ಉಳಿದಾವು? ಮೊನ್ನೆಯಾದ ಸೆಟ್ಲಮೆಂಟ ರಿಪೋರ್ಟಿನಲ್ಲಿ ನಮೂದಿಸಲ್ಪಟ್ಟಂತೆ ನೂರಕ್ಕೆ ೮೦ರಷ್ಟು ರೈತರು ಸಾಲದ ಬಲೆಯಲ್ಲಿ ಸಿಲುಕಿದ್ದು ಆಶ್ಚರ್ಯವೇ! ಸಾಗು ಕ್ಷೇತ್ರವು ಹೆಚ್ಚದೆ ಪಡಕ್ಷೇತ್ರವು ಹೆಚ್ಚುತ್ತ ನಡೆದದ್ದು ಅದ್ಭುತವೇ?

ಇದಾಯಿತು ಜಂಗಲಖಾತೆಯ ಅನುಗ್ರಹ! ಈಗ ರೆವಿನ್ಯೂ ಖಾತೆಯವರ ಕಥೆ ಕೇಳಿರಿ. ತೀರ್ವೆ ರಿವಿಜನ್ ಮಾಡಲಿಕ್ಕೆ ಒಂದೊಂದು ಆಳಿಸಿದರು. ರೈತರ ಒದರಿಕೆಯನ್ನು ನೋಡಿ ಕ್ಷೋಭಿಸಲಾಗುತ್ತದೆ! ರೈತರು ಸಾಲವಿಗೂಡಿದಷ್ಟು ಒದೆಯುತ್ತಾರೆ! ಇನ್ನೆಲ್ಲಿ ಮಾರುಗಿ ತೀರ್ವೆಯನ್ನು ರೂಪಾಯಿಗೆ ನಾಲ್ಕಾಣೆ, ಆಠಾಣೆವರೆಗೆ ಹೆಚ್ಚಿಸಲಿಕ್ಕೆ ಶಿಫಾರಸು ಮಾಡುತ್ತಾರೆ! ಸೆಟ್ಲಮೆಂಟ ಆಫೀಸರರು ಕೃಪೆಯಿಂದ ಜಿಲ್ಲೆಯವರೂ ವ್ಯವಹಾರ ಜತನದವರೂ ಇರಬಹುದು. ಅವರಿಗೆ ಒಕ್ಕಲಿಗನ ಮತ್ತು ಒಕ್ಕಲತನದ ಸ್ಥಾನಮಾನದ ಜ್ಞಾನವಿರದ ಕಾರಣದಿಂದ ಹೀಗಾಗಲಿಕ್ಕೆ ಕಾರಣವಾಯಿತು. ಒಕ್ಕಲಿಗರು ಹೇಳುತ್ತಾರೆ: ಅವರು ಅನುಭವವನ್ನು ರೈತರ ಕಡೆಯಿಂದ ಎಲ್ಲ ಮಾಹಿತಿಯನ್ನು ಕೇಳಿಕೊಂಡು, ರೈತರ ಅಡಚಣಿ-ತೊಂದರೆಗಳನ್ನು ತಿಳಿಕೊಂಡು ರಾಜ-ಪ್ರಜೆಗಳ ನಡುವೆ ನಡೆದಿರುವ ಲೇವಾ-ದೇವಿಯ ಲೆಕ್ಕಾಚಾರವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಮಾಡುತ್ತಿದ್ದರೆ ಹೀಗ ಅನ್ಯಾಯವಾಗುತ್ತಿದ್ದಿಲ್ಲ.

ಪ್ರಿಯರೇ, ಒಮ್ಮೆ ಹಿಂದಿನ ನಮ್ಮ ಭಾಗದ ರೈತರ ಸ್ಥಿತಿಯು ಹ್ಯಾಗಿತ್ತೆಂಬುದನ್ನು ಸ್ವಲ್ಪ ನೋಡಿರಿ. ನಮ್ಮ ಜಿಲ್ಲೆಯು ೧೮೦೧ರಲ್ಲಿ ಬ್ರಿಟಿಶರ ಕೈಸೇರಿತು. ಆ ವರ್ಷದಲ್ಲಿ ಸ್ವಾದಿಯ ಅರಸು ಮನೆತನದವರು ಇಲ್ಲಿ ರಾಜ್ಯವಾಳುತ್ತಿದ್ದರು. ಆ ಕಾಲದಲ್ಲಿ ಸ್ವಾದಿಯನ್ನು ಕಣ್ಣಾರೆ ಕಂಡ ಡಾ| ಬುಕೆನನ್ನ ಎಂಬವರು ತಮ್ಮ ಪ್ರವಾಸದ ವೃತ್ತಾಂತದಲ್ಲಿ ಬರೆದಿಟ್ಟ ಮಾಹಿತಿಯಿದು — 'ಸ್ವಾದಿಯ ರಾಜ್ಯದಿಂದ ೯| ಲಕ್ಷ ರೂಪಾಯಿಯ ಸರಕುಗಳು ರಫ್ತಾಗುತ್ತಿದ್ದವು. ೧|| ಲಕ್ಷ ರೂಪಾಯಿಯ ಸರಕುಗಳು ಆಮದಾಗುತ್ತಿದ್ದವು. ೬೦ ಸಾವಿರ ರೂಪಾಯಿ ತೀರ್ವೆ ವಸೂಲಾಗುತ್ತಿತ್ತು. ರಾಜಧಾನಿಯ ಸುತ್ತು ಮುತ್ತಲು ಪಡಭೂಮಿಯೆಂಬುದು ಇದ್ದಿಲ್ಲ. ತರಿ ಭೂಮಿಗೆ ಎಕರೆ ೧ಕ್ಕೆ ರೂ ೧ ಆ ೪ ಯಂತೆ ತೀರ್ವೆ ಕೊಡಬೇಕಿತ್ತು. ಯಾವ ರೈತನೂ ತನ್ನ ಭೂಮಿಯನ್ನು ಬಿಟ್ಟು ಕೊಟ್ಟಿದ್ದಿಲ್ಲ. ಯಾವನಾದರೂ ರೈತನಿಗೆ ಪರ ಊರಿಗೆ ಹೋಗಬೇಕೆಂದು ಅನಿಸುತ್ತಿದ್ದರೆ, ಅವನು ಭೂಮಿ ಮಹಸೂಲಿನ ವಸೂಲಿಯ ಅಧಿಕಾರಿಗಳಿಗೆ ತಿಳಿಸಿದರಾಯಿತು. ಅವರು ಅವನ ಭೂಮಿಯನ್ನು ಬೇರೊಬ್ಬನಿಗೆ ಕ್ರಯಕ್ಕೆ ಕೊಟ್ಟು ಬಂದ ಹಣವನ್ನು ಆ ರೈತನಿಗೆ ಕೊಡುತ್ತಿದ್ದರು. ಜಂಗಲ ನಿರ್ಬಂಧನಗಳು ಇದ್ದಿಲ್ಲ. ಗಂಧದ ಗಿಡಗಳಷ್ಟೇ ಗ್ರಾಮಾಧಿಕಾರಿಗಳ ತಾಬೆಯಲ್ಲಿರುತ್ತಿದ್ದವು; ತೋಟದ ಸಾಗುವಳಿಗೆ ಬೆಟ್ಟ ಬೇಕಾದರೆ ೧೦ ರೂಪಾಯಿ ಮಾಲ್ಕಿ ಆಕಾರ ಕೊಟ್ಟು ೧ ಎಕರೆ ಬೆಟ್ಟ ಪಡೆಯಬಹುದಿತ್ತು. ಈ ಬೆಟ್ಟಕ್ಕೆ ಮೊದಲಿನ ೧೨ ವರ್ಷ ತೀರ್ವೆ ಮಾಫಿ ಸಿಗುತ್ತಿತ್ತು. ಬೆಟ್ಟದಲ್ಲಿ ಯಾಲಕ್ಕಿ, ಮೆಣಸು, ಬಾಳೆ ಮುಂತಾದ ಬೆಳೆಗಳನ್ನು ಬೆಳೆಸಿದರೆ ತೀರ್ವೆ ಕೊಡುತ್ತಿದ್ದಿಲ್ಲ. ೧೨ ವರ್ಷ ಮುಗಿದ ತರುವಾಯ ೬ ವರ್ಷಗಳ ತನಕ ಎಕರೆಗೆ ರೂ. ೩ರಂತೆ ತೀರ್ವೆ, ಮುಂದೆ ಎಕರೆ ೧ಕ್ಕೆ ರೂ. ೬ ತೀರ್ವೆ. ಇದು ಉತ್ತಮ ತರದ ಅಡಿಕೆ-ತೋಟಗಳ ತೀರ್ವೆಯು. ಕಡಿಮೆ ತರಗತಿಯ ತೋಟಗಳಿಗೆ ತೀರ್ವೆ ಪ್ರಮಾಣವು ಕಡಿಮೆಯಾಗುತ್ತಿತ್ತು. ಜಂಗಲ ಕಾನೂನು ಇದ್ದಿಲ್ಲ. ರೈತರು ಸುಖಸಮಾಧಾನದಿಂದ ಇದ್ದು ದೇಶವು ಸಂಪನ್ನ ಸ್ಥಿತಿಯಲ್ಲಿತ್ತು.'

ಹಿಂದಿನ ಸ್ಥಿತಿಗೂ ಈಗಿನ ಸ್ಥಿತಿಗೂ ತುಲನೆ ಮಾಡಿದರೆ ಎಷ್ಟು ಅಂತರ ಕಂಡು ಬರುತ್ತದೆ? ಬ್ರಿಟಿಶರ ಆಳಿಕೆಯಲ್ಲಿ ರೈತರು ಹೀನ-ದೀನರಾಗಲಿಕ್ಕೆ ಕಾರಣವೇನು? ಸಂಪನ್ನ ಸ್ಥಿತಿ ಹೋಗಿ ವಿಪನ್ನ ದಶೆ ಬಂತೆಂತು? ಇದರ ವಿಚಾರ ಮಾಡುವದು ಬೇಡವೇ?

ಇಷ್ಟು ಬರೆಯುತ್ತಹೋದರೆ ಹನುಮಂತನ ಬಾಲ ಮುಗಿಯಲಿಕ್ಕಿಲ್ಲ. ಈಗಿನ 'ದುರವಸ್ಥೆ' ಜಂಗಲ ಖಾತೆಯ ಸ್ವಾರ್ಥೀ ಕಾರಬಾರದಿಂದಲೂ, ರೆವಿನ್ಯೂ ಖಾತೆಯ ದುರ್ಲಕ್ಷ್ಯದಿಂದಲೂ ನಮ್ಮ ಕಡೆ ಸ್ವತಃ ಜನರು ಬಡವರಾಗುತ್ತ ಹೋಗಿದ್ದಾರೆ. ಒಕ್ಕಲತನವು ಹಾಳಾಗಿ ಹೋಗಿದೆ. ರೈತರಿಗೆ ಉದರ ಭರಣದ ಚಿಂತೆಯೇ ದೊಡ್ಡದಾಗಿದೆ. ಅವರಿಗೆ ನಿಮ್ಮ ಗ್ರಾಮಪಂಚಾಯತಿಗಳು ಬೇಡ! ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಬೇಡ! ಕಾಯಿದೆ-ಕೌನ್ಸಿಲುಗಳು ಬೇಡ. ಉಪ್ಪಿಗೆ ನೀರು ಬೇಕು, ಕರಗಳ ಒತ್ತಡವು ಕಡಿಮೆಯಾಗಬೇಕು, ಭೂಮಿಯ ಸಾಗುವಳಿಗೆ ಅನುಕೂಲ ಸೌಕರ್ಯಗಳು ಬೇಕು. ಹೊಟ್ಟೆ ತುಂಬ ಅನ್ನ ದೊರೆತ ಮೇಲೆ ಅವರು ಸಾವಕಾಶ ನಿಮ್ಮ ಗ್ರಾಮಪಂಚಾಯತ ಮೊದಲಾದ ಸಂಸ್ಥೆಗಳ ವಿಚಾರ ಮಾಡುವರು. ಉದರಾಗ್ನಿಯು ಉರಿಯುತ್ತಿರುವವರಿಗೆ ನಿಮ್ಮ ಉಪದೇಶಕ್ಕೆ ಅವರು ಕಿವಿಗೊಡಲಿಕ್ಕಿಲ್ಲ.

— ಸಾರ್ವಭೌಮರು ಅಪ್ಪಣೆ ಮಾಡಿರುವಂತೆ, ನವೆಂಬರ ತಾರೀಕ ೧೧ಕ್ಕೆ ೧೧ ಘಂಟೆಗೆ ಎಲ್ಲರೂ ೨ ನಿಮಿಷ ಮೌನ ಮತ್ತು ಕೆಲಸ ತಡೆಹಿಡಿಯುವದನ್ನು ಆಚರಿಸಿ ಮಹಾಯುದ್ಧದ ಸಮಾಪ್ತಿಯ ದಿವಸದ ಸ್ಮರಣೆ ಮಾಡಲ್ಪಟ್ಟಿತು.

Siromani Udipi Narayanacharya

CHAUKHAMBA, BENARES CITY.

ಮಹಾಶಯರೇ, ರುದ್ರಾಕ್ಷಿ ಶ್ರೇಷ್ಠವಾದ ರುದ್ರಾಕ್ಷಿಗಳನ್ನು ಧರಿಸಿಕೊಂಡು ತಮ್ಮ ಮನೋರಥವನ್ನು ಹೊಂದಿರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸ್ವಲ್ಪದಾಗುತ್ತ ಆಗುತ್ತ ಕ್ರಯ. ಕಟ್ಟುವ ಕಂಠಿ ಸರ 32 ರ 1ಕ್ಕೆ ರೂ.0-8-0ಯಿಂದ ರೂ 100 ವರೆಗೆ, ೧ ಮುಖದ 1ಕ್ಕೆ ರೂ. 3-8 0ರಿಂದ ೫೦ ರ ವರೆಗೆ ಮತ್ತು ಬೇರೆ ಮಾಹಿತಿಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1 0ಸ್ಟಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಪಟ ಮತ್ತು ಕೆಟಲಾಗ ಸಹ ಉಚಿತ ಕಳಿಸಲಾಗುವದು.

ಪತ್ತೆ:- ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶೀ ಕ್ಷೇತ್ರ.

ಈಗಿನ ಪ್ರಪಂಚ.

ಶಸ್ತ್ರಾಸ್ತ್ರಗಳ ಸನ್ನಾಹ

"ಯುದ್ಧ ಬೇಡ! ಯುದ್ಧವಾದಲ್ಲಿ ಮಾನವ ಜಾತಿಯ ಸಂಹಾರವಾದೀತು! ಸುಧಾರಣೆಯು ಅಳಿದು ಹೋಗುವದು! ಆದ್ದರಿಂದ ಶಸ್ತ್ರಾಸ್ತ್ರಗಳ ಹಾಗೂ ಯುದ್ಧ ಸಾಮಗ್ರಿಗಳಿಗೆ ತಡೆಹಾಕಬೇಕು. ಎಲ್ಲೆಲ್ಲಿಯೂ ಶಾಂತಿ-ಸಂಸ್ಥಾನಗಳನ್ನು ಪ್ರಸ್ಥಾಪಿಸಬೇಕು" ಎಂದು ರಾಜಕಾರಣಿ ಮುತ್ಸದ್ದಿಗಳು ಮೇಲಿಂದ ಮೇಲೆ ಬೋಧ ಮಾಡುತ್ತಿರುವದನ್ನು ನಾವು ಕೇಳುತ್ತೇವೆ. ರಾಷ್ಟ್ರಸಂಘ ಮೊದಲಾದ ಪರಿಷತ್ತುಗಳು ಕೂಡಿ ಈ ಬಗ್ಗೆ ಆಲೋಚನೆ-ನಿರ್ಣಯಗಳನ್ನು ಮಾಡುತ್ತಿರುವ ವೃತ್ತಾಂತವನ್ನೂ ನಾವು ಓದುತ್ತೇವೆ. ಆದರೆ ಈ ಬೋಧದಲ್ಲೂ ಆಲೋಚನೆ-ನಿರ್ಣಯಗಳಲ್ಲೂ ಎಷ್ಟು ಹುರುಳಿತ್ತೆಂದು ತಿಳಿಯಬೇಕಾಗಿದೆ. ಇತ್ತ ಮುತ್ಸದ್ದಿಗಳ ಶಾಂತಿ-ಪಾಠವು ಮುಕ್ತಕಂಠದಿಂದ ನಡೆದಿರುವಾಗ, ಅತ್ತ ಅವರವರ ಸರಕಾರಗಳು ಭರದಿಂದ ಯುದ್ಧದ ತಯಾರಿ ನಡಿಸಲಾರಂಭಿಸಿವೆ, ಶಸ್ತ್ರಾಸ್ತ್ರಗಳನ್ನು ಕಟ್ಟಿಸುತ್ತಿವೆ, ಯುದ್ಧ-ಸಾಮಗ್ರಿಗಳನ್ನು ಪೂರೈಸಿಕೊಳ್ಳುತ್ತಿವೆ, ಸೈನ್ಯವನ್ನು ಬೆಳಿಸುತ್ತಿವೆ! ದೊಡ್ಡ ದೊಡ್ಡ ರಾಷ್ಟ್ರಗಳಷ್ಟೇ ಅಲ್ಲ, ಚಿಕ್ಕ ಪುಟ್ಟ ದೇಶಗಳು ಸಹ ಯುದ್ಧಸನ್ನಾಹದ ಈ ಪಂದ್ಯಾಟದಲ್ಲಿ ಸೇರಿಕೊಂಡಿವೆ. "ವರ್ಲ್ಡ್ ಇವೆಂಟ್ಸ್" ಪತ್ರಿಕೆಯಲ್ಲಿ ಆಯಾ ದೇಶಗಳಲ್ಲಿ ನಡೆದಿರುವ ಯುದ್ಧ ಸನ್ನಾಹದ ಚಟುವಟಿಕೆಗಳ ಸಂಕ್ಷಿಪ್ತ ವಿವರವು ಪ್ರಕಟವಾಗಿದೆ. ಅದನ್ನು ಓದಿಕೊಂಡರೆ ವಾಚಕರಿಗೆ ಮುಂದಿನ ಪಂದ್ಯಾಟದ ಕಲ್ಪನೆಯು ಸುಲಭವಾಗಿ ಆಗುವಂತಿದೆ.

* * *

"ವರ್ಲ್ಡ್ಸ್ ಇವೆಂಟ್ಸ್" ಪತ್ರಿಕೆಯು ದೊರಕಿಸಿದ ಮಾಹಿತಿಯು ಈ ಕೆಳಗಿನಂತಿದೆ. ಆಸ್ಟ್ರೇಲಿಯಾ ಸರಕಾರವು ೪ ಹೊಸ ಕ್ರೂಝರ ಬೋಟುಗಳನ್ನು, ೫ ವಿನಾಶಿಕಾ ಬೋಟುಗಳನ್ನೂ ಕಟ್ಟುವ ತಯಾರಿ ಮಾಡಿದೆ, ವಿಮಾನಗಳನ್ನು ಹೆಚ್ಚಿಸುತ್ತಿದೆ, ಶತ್ರುಗಳ ವಿಮಾನಗಳನ್ನು ಹಾರಿಸಿ ಬಿಡುವ ತೋಫುಗಳನ್ನು ತಯಾರಿಸತೊಡಗಿದೆ, ಹಿಂದೆ ಎಂದೆಂದಿಗೂ ಮಾಡದಷ್ಟು ಚಿಲ್ಲರೆ ಶಸ್ತ್ರಾಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ಮಾಡಿಸತೊಡಗಿದೆ. ಆಸ್ಟ್ರಿಯಾ ದೇಶದಲ್ಲಿ ಮುಸೋಲಿನಿಯವರ ಬೆಂಬಲದಿಂದ ಶಸ್ತ್ರಾಸ್ತ್ರಗಳ ಪುರವಠೆಯ ಕೆಲಸವು ಬಿತ್ತರದಿಂದ ಸಾಗಿದೆ. ಬೆಲ್ಜಿಯಮ್‌ದಲ್ಲಿ ಸೈನಿಕರ ಉಪಯೋಗಕ್ಕೆ ಶಕ್ಯವಿದ್ದಷ್ಟು ಬೂಟುಗಳನ್ನು ತಯಾರಿಸಲು ಕಾರಖಾನೆಗಳಿಗೆ ಆಜ್ಞೆಯಾಗಿದೆ, ಯುದ್ಧ-ವಿರೋಧಿಗಳ ಬಾಯಿಗೆ ಲಗಾಮು ಹಾಕುವ ಕಾಯಿದೆಗಳು ಘಟನೆಯಾಗುತ್ತಿವೆ. ಹೇರಳ ಖರ್ಚುಮಾಡಿ ಹಳೇ ಕೋಟೆಗಳು ದುರುಸ್ತ ಮಾಡಲ್ಪಡುತ್ತಿವೆ, ಹೊಸ ಕೋಟೆಗಳು ನಿರ್ಮಾಣವಾಗುತ್ತಿವೆ. ಬೋಲಿವ್ಹಿಯಾ (ದಕ್ಷಿಣ ಅಮೇರಿಕೆಯೊಳಗೆ ಸಣ್ಣದೊಂದು) ದೇಶವು ಯುದ್ಧ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಿದೆ, ತನ್ನ ಹಗೆಯಾದ ಪೆರಗ್ವೆ ದೇಶಕ್ಕೆ ಅರ್ಜೆಂಟಿನಾ ದೇಶದಿಂದ ೩೦ ಲಕ್ಷ ಬಂದೂಕಿ ಗುಂಡುಗಳು ರವಾನೆಯಾದ ಬಗ್ಗೆ ಮಾತ್ರ ದೂರುತ್ತಿದೆ. ಕಾನಡಾ ದೇಶದಿಂದ ಇಡೀ ಜಗತ್ತಿಗೆ ಶಸ್ತ್ರಾಸ್ತ್ರಗಳ ತಯಾರಿಗೆ ಬೇಕಾದ ನಿಕಲ ಧಾತುವಿನ ಪುರವಠೆಯಾಗುತ್ತದೆ. ಸರಕಾರವು ಇದಕ್ಕೆ ತಡೆಹಾಕಲು ಒಪ್ಪುವದಿಲ್ಲ. ಚೆಕೋಸ್ಲೋವಾಕಿಯದಿಂದ ಹೇರಳ ಕಬ್ಬಿಣ, ಉಕ್ಕು, ಸೀಸಗಳು ಜಪಾನಕ್ಕೆ ಕಳಿಸಲ್ಪಟ್ಟಿವೆ, ೯೪ ಸಾವಿರ ಟನ್ನು "ನಾಯಟ್ರೇಟ" ಎಂಬ ಸ್ಫೋಟಕದ್ರವ್ಯ ಯುರೋಪ ಖಂಡಕ್ಕೆ ರವಾನಾಗಿದೆ. ಚೀನ ದೇಶದಲ್ಲಿ, ಜರ್ಮನಿಯ ಸೇನಾನಾಯಕರಿಗೆ ಕರೆತರಿಸಿ ಸೈನ್ಯದ ಪುನರ್ಘಟನೆ ಮಾಡಿಸಹತ್ತಿದ್ದಾರೆ. ಯುದ್ಧ-ವಿರೋಧಕ ಚಲಚ್ಚಿತ್ರಪಟಗಳನ್ನು ತೋರಿಸಬಾರದಾಗಿ ದೇಶದಲ್ಲೆಲ್ಲ ಪ್ರತಿಬಂಧಕ ಹುಕುಮು ಹೊರಟಿದೆ. ಕೊಲಂಬಿಯಾ ದೇಶದಲ್ಲಿ ಲಷ್ಕರಿ ಖರ್ಚು ಈ ವರ್ಷ ಐದ್ಮಡಿಯಾಗಿದೆ, ಇನ್ನು ಹೆಚ್ಚು ಹಣ ಬೇಕಾಗಿ ಸೈನ್ಯಾಧಿಪತಿಯವರು ಆಗ್ರಹ ಮಾಡುತ್ತಾರೆ, ಎರಡು ಹೊಸ ಕ್ರೂಝರುಗಳನ್ನು ಕೊಂಡುಕೊಂಡಿದ್ದಾರೆ. ಸೈನ್ಯಖಾತೆಯ ಕಾರಭಾರದ ಮೇಲೆ ಟೀಕೆ ಮಾಡದಂತೆ ಶಾಸನ ಪಾಸಾಗಿದೆ.

* * *

ಚೆಕೋಸ್ಲೋವಾಕಿಯಾ ದೇಶದ "ಸ್ಕೋಡ" ಕಾರಖಾನೆಗೆ ಪರಸತ್ತೆ ಇಲ್ಲ. ಜರ್ಮನಿಯ ರಾಸಾಯನಿಕ ದ್ರವ್ಯಗಳ ಮೇಲೆ ಅವಲಂಬಿಸಿದೆ, ಸ್ವತಂತ್ರರೀತಿಯಿಂದ ರಸಾಯನಗಳನ್ನು ನಿರ್ಮಿಸುವ ಬಗ್ಗೆ ಈ ಕಾರಖಾನೆಯು ಪ್ರಯತ್ನ ಮಾಡುತ್ತದೆ. ಪರರಾಷ್ಟ್ರಗಳಿಂದ ಬಂದ ಮಾಗಣಿಗಳನ್ನು ಪೂರೈಸುವದಕ್ಕೆ "ಬಾಟಾ" ಎಂಬ ವಸ್ತ್ರ ಕಾರಖಾನೆಯು ೧ ಸಾವಿರ ಹೊಸ ನೌಕರರನ್ನು ನೇಮಿಸಿಕೊಂಡಿದೆ. ಡೆನ್ಮಾರ್ಕದೊಳಗೆ ಸೈನಿಕರನ್ನು ಪೋಲೀಸ ಖಾತೆಯಲ್ಲಿ ಸೇರಿಸಬೇಕೆಂದು ಮಾಡಲು ಗೊತ್ತುಗೊತ್ತು ಈಗ ಈ ಕ್ರಮವು ನಿಲ್ಲಿಸಲ್ಪಟ್ಟಿದೆ. ಒಟ್ಟರಮೇಲೆ ಎಂಬಲ್ಲಿ ಸ್ವಸಂರಕ್ಷಣೆಯ ಬಗ್ಗೆ ಕಾಯಿದೆಯನ್ನು ತೆರೆದಿದ್ದಾರೆ. ಇಂಗ್ಲಂಡದೊಳಗೆ ಹೊಸದೊಂದು ಗುಂಡಿನ ಶೋಧವಾಗಿದೆ. ಯುದ್ಧ-ನೌಕೆಯ ತಗಡುಗಳು ಎಷ್ಟು ದಪ್ಪವಿದ್ದಾಗ್ಯೂ ಅವನ್ನು ಭೇದಿಸಿಕೊಂಡು ಈ ಗುಂಡು ಮುಂದೆ ಹೋಗುವದು. ಬಹಳ ಎತ್ತರದವರೆಗೆ ಹಾರಿ ಹೋಗುವವಂತೆ ವಿಮಾನಗಳಿಂದ ಸೌಲಭ್ಯಕ್ಕೆ ಇದು ಯುಕ್ತವೆಂದು ಕಂಡಿದೆ. ಅಲ್ಲಲ್ಲಿ ಯುದ್ಧದ ನಾಟಕಗಳನ್ನು ಆಡಿ ತೋರಿಸುತ್ತಾರೆ. ೫೫ ಹೊಸ ಕ್ರೂಝರುಗಳು ಬೇಕೆಂದು ನೌಕಾ ಸೈನ್ಯದ ಖಾತೆಯವರು ಒತ್ತಾಯಪಡಿಸುತ್ತಾರೆ. ಶತ್ರು ಕ್ಷೇತ್ರದಲ್ಲಿ ಬಾಂಬ ಗುಂಡುಗಳನ್ನು ಹಾರಿಸುವರೆ ವಿಮಾನುಗಳ ಕಟ್ಟಲ್ಪಡುತ್ತಿವೆ. ವಿಷದ ಗ್ಯಾಸಿನ ಪ್ರಯೋಗಗಳು ನಡದಿವೆ. ಬಾಂಬುಗುಂಡು ಹಾರಿಸುವವರಿಗೆ 'ರೇಡಿಯೋ' ಮುಖಾಂತರ ಸಂದೇಶಗಳನ್ನು ಮುಟ್ಟಿಸುವ ವ್ಯವಸ್ಥೆಯಾಗಹತ್ತಿದೆ. ಅಲ್ಲಲ್ಲಿ ಗುಪ್ತವಾಗಿ ಸುರಂಗಗಳನ್ನು ಇಡುವ ವಿದ್ಯೆಯು ಕಲಿಸಲ್ಪಡುತ್ತದೆ. ಈ ವರ್ಷ ನೌಕಾಬಲದ ವೃದ್ಧಿಗಂದು ಹೆಚ್ಚು ಖರ್ಚಿನ ಮಂಜೂರಿಯಾಗಿದೆ. ಎಸ್ಥೋನಿಯಾ ದೇಶದವರು ಧಾನ್ಯದ ಪಸುಗಳನ್ನು ಕೊಟ್ಟು ೪ ವಿನಾಶಿಕಾ ಬೋಟುಗಳನ್ನೂ, ೨ ಜಲಾಂತರ್ಗತ ಬೋಟುಗಳನ್ನೂ ಕೊಂಡುಕೊಳ್ಳಲಿಕ್ಕೆ ಹವಣಿಸುತ್ತಾರೆ.

* * *

ಫ್ರಾನ್ಸದೊಳಗೆ ಪಾರೀಸ ಪಟ್ಟಣದಲ್ಲಿ (ವಿಷವಾಯು ಗ್ಯಾಸದಿಂದ ರಕ್ಷಣೆ ಮಾಡುವರೆ) ೨೫ ಸಾವಿರ ಗ್ಯಾಸ-ಚೀಲುಗಳನ್ನು ನಿಲ್ಲಿಸಿದ್ದಾರೆ. ಈಗ ೫೩೦೦ ವಿಮಾನಗಳಿವೆ. ಈ ವರ್ಷ ಮುಗಿಯುವದರೊಳಗಾಗಿ ಇನ್ನೂ ೩೦೦ ವಿಮಾನಗಳು ಕಟ್ಟಿಸಲ್ಪಡುವವು. ಸೈನಿಕರಿಗೆಲ್ಲ ಗ್ಯಾಸ ಮುಖ-ರಕ್ಷಕಗಳು ಕೊಡಲ್ಪಟ್ಟಿವೆ. ನಭೋಮಂಡಳದಲ್ಲಿ "ಅಜಯ್ಯ" ರಾಗಬೇಕಾದರೆ, ೩ ಅಬ್ಜ ಫ್ರಾಂಕು ಖರ್ಚು ತಗಲುವದೆಂದು ಲೆಕ್ಕ ಹಾಕಿದ್ದಾರೆ. ಶಸ್ತ್ರಾಸ್ತ್ರಗಳನ್ನು ತಯಾರಿಸುವ "ಶ್ನೈಡರ" ಕಾರಖಾನೆಗೆ ಕಳೆದ ವರ್ಷ ೩½ ಕೋಟಿ ಫ್ರಾಂಕು ಲಾಭ ಉಳಿದಿದೆ!

* * *

ಜರ್ಮನಿಯ ಲಷ್ಕರಿ ಖರ್ಚು ೧೯೩೩ನೇ ಇಸ್ವಿಯಲ್ಲಿ ೬೭ ಕೋಟಿ ಮಾರ್ಕು ಇದ್ದದ್ದು ೧೯೩೪ನೇ ಇಸ್ವಿಯಲ್ಲಿ ೧ ಅಬ್ಜ ೨೦ ಕೋಟಿಗೆ ಮುಟ್ಟಿದೆ. ಮದ್ದು ಗುಂಡುಗಳನ್ನು ತಯಾರಿಸುವ "ಕ್ರುಪ್ಪ" ಕಾರಖಾನೆಯಲ್ಲಿ ೧೪ ಸಾವಿರ ಹೊಸ ನೌಕರರನ್ನು ನೇಮಿಸಿಕೊಂಡಿದ್ದಾರೆ. ರಾಸಾಯನಿಕ ದ್ರವ್ಯಗಳ ಉತ್ಪಾದನೆಯ ಕೆಲಸವು ಜೋರಿನಿಂದ ನಡೆದಿದೆ.

* * *

ಇಟಲಿಯಲ್ಲಿ ಹುಡುಗರ ಹುಡುಗರಿಗೆ ಯಾಂತ್ರಿಕ ತೋಫುಗಳ ಶಿಕ್ಷಣ ಕೊಡಲಾಗುತ್ತದೆ. ೯ ಭಾರವಾದ ಮತ್ತು ೧೦ ಹಗುರಾದ "ಕ್ರೂಝರ" ಬೋಟುಗಳು ತಯಾರಾಗುತ್ತ ಬಂದಿವೆ. ೫೦ ಲಕ್ಷ ಹುಡುಗರಿಗೆ ಪದ್ಧತಿಯ ಲಷ್ಕರಿ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿದ್ದಾರೆ. ಜಪಾನದಲ್ಲಿ ತರುಣ ಹುಡುಗರಿಗೆ ವಿಮಾನ—ಹೋರಾಟದ ಕಲೆಯನ್ನು ಕಲಿಸುತ್ತಾರೆ. "ಅದ್ಭುತ" ಯುದ್ಧ ನೌಕೆಗಳ ಮೇಲೆ "ಗುಪ್ತ" ತೋಫುಗಳನ್ನು ಇಡಹತ್ತಿದ್ದಾರೆ! ೩ ವಿಮಾನ ಒಯ್ಯುವ ಹಡಗುಗಳನ್ನೂ, ೩ ಸಣ್ಣ ಕ್ರೂಝರುಗಳನ್ನೂ, ೧೪ ವಿನಾಶಿಕಾ ಬೋಟುಗಳನ್ನೂ, ೬ ಜಲಾಂತರ್ಗತ ಬೋಟುಗಳನ್ನೂ, ನೂರಾರು ಟೋರ್ಪೆಡೋ ಯಂತ್ರಗಳನ್ನೂ ಕಟ್ಟಿಸಲಿಕ್ಕೆ ಸಂಭಾರದವರು ವ್ಯವಸ್ಥೆ ಮಾಡಿರುತ್ತಾರೆ.

* * *

ಅಮೇರಿಕೆಯ ಸರಕಾರವು ನೌಕಾ ಸೈನ್ಯದ ಪುನರ್ಘಟನೆಯ ಬಗ್ಗೆ ೧ ಮಹಾಪದ್ಮ ಡಾಲರು (ಅಂದಾಜು) ಗಳ ಖರ್ಚಿಗೆ ಮಂಜೂರಿ ಕೊಟ್ಟಿದೆ. ರಾಸಾಯನಿಕ ಕಾರಖಾನೆಗಳು ಬೇಕಾದಷ್ಟು ವಿಷದ ಹೊಗೆಯನ್ನು ತಯಾರಿಸುವ ಕೆಲಸಕ್ಕೆ ಉಪಯೋಗವಾಗುವಂತೆ ಏರ್ಪಾಟಾಗಿವೆ. ಸೈನ್ಯದ ಖರ್ಚು ಉತ್ತರೋತ್ತರ ಹೆಚ್ಚುತ್ತ ನಡೆದದೆ. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ ಕೊಡುವ ವ್ಯವಸ್ಥೆಯಾಗಿದೆ.

* * *

ಇರಾಕದಲ್ಲಿ ಸಕ್ತಿಯ ಲಷ್ಕರಿ ಶಿಕ್ಷಣದ ಕಾಯಿದೆಯಾಗಿದೆ. ಆಯರ್ಲಂಡದಲ್ಲಿ ೨೪ ಸಾವಿರ ಸೈನಿಕರ ಹೊಸ ದಂಡು ತಯಾರಾಗುತ್ತದೆ. ನ್ಯೂಝೀಲಂಡದಲ್ಲೂ ಯುದ್ಧ ಸಾಮಗ್ರಿಗಳ ಬವಣೆಗೆ ನಡದದೆ. ಸಯಾಮದಲ್ಲಿ ಲಷ್ಕರಿ ಖಾತೆಯವರು ೮ ಪ್ಯ ಕಾರಭಾರವನ್ನು ತಮ್ಮ ಕೈಯಲ್ಲಿ ಕೊಂಡಿದ್ದಾರೆ. ತುರ್ಕಸ್ಥಾನದವರು ವಿಮಾನ ದಳವನ್ನು ಹೆಚ್ಚಿಸುತ್ತಿದ್ದಾರೆ. ಸ್ವಿತ್ಸರ್ಲಂಡದಲ್ಲಿ ವಿಮಾನಗಳ ದಾಳಿಯಾದಲ್ಲಿ ಹೇಗೆ ಆತ್ಮರಕ್ಷಣ ಮಾಡಿಕೊಳ್ಳಬೇಕೆಂದು ಕಲಿಸುವರೆ ತಾಲೀಮು ಗಳು ನಡೆದಿವೆ, ಮದ್ದು-ಗುಂಡುಗಳ ಖರೇದಿಗೆ ಹೇರಳ ಹಣ ತೆಗದಿಟ್ಟಿದ್ದಾರೆ. ರಶಿಯಾದವರು ನಗರಗಳಲ್ಲೆಲ್ಲ ಸೈನ್ಯದ ತಾಲೀಮುಗಳನ್ನು ಮಾಡಿ ತೋರಿಸುತ್ತಾರೆ. ವಿಷದ ಹೊಗೆಯನ್ನು ಹ್ಯಾಗೆ ಬಿಡಬೇಕೆಂಬ ಪ್ರಯೋಗಗಳನ್ನು ಮಾಡಿತೋರಿಸುತ್ತಾರೆ.

ಹೆಣ್ಣು ಮಕ್ಕಳಿಗೂ ಯಾಂತ್ರಿಕ ತೋಫುಗಳ ಸಿದ್ಧಿಯನ್ನು ಕಲಿಸುತ್ತಾ ಜಪಾನ ದೇಶದ ಸವಿಸ್ತಾರ ಪೂರ್ವ ಸ್ವಾಬಲ್ಯಿಯಾದಲ್ಲಿ ಹೇರಳ ಸೈನ್ಯವನ್ನು ಒಟ್ಟುಗೂಡಿಸಿಟ್ಟಿರುತ್ತಾರೆ.

***

ಈ ರೀತಿ ಎಲ್ಲ ರಾಷ್ಟ್ರಗಳು ಯುದ್ಧತಯಾರಿಯನ್ನು ಮಾಡುತ್ತಿರುವದನ್ನು ಕಂಡರೆ, ಮುತ್ಸದ್ದಿಗಳ ಶಾಂತಿಪಾರವಲ್ಲಿ ಕೇವಲ ಕಪಟತನವೇ ಇರುತ್ತಿದ್ದು ನಿಜವಾದ ಸಾರವೇನೂ ಇಲ್ಲವೆಂದು ತಿಳಿಯಬೇಕಾಗಿದೆ. ಯುದ್ಧದ ತಯಾರಿಯು ಪೂರ್ಣವಾಗುವ ತನಕ ಕಾಲ ಕಳೆಯುವದಕ್ಕೆ ಈ ಶಾಂತಿ ಪರಿಷತ್ತುಗಳು ಹೇಳಲ್ಪಡುತ್ತಿವೆಯೆಂದು ಊಹಿಸಿದರೆ ತಪ್ಪಾಗುವದೇ ?

***

ಮಹಾತ್ಮರಿಗೆ ಒಬ್ಬ ಲಕ್ಷಾಧೀಶರು ಹಳ್ಳಿ-ಔದ್ಯೋಗಿಕ ಪುನರ್ಘಟನೆಯ ಬಗ್ಗೆ ೨೦ ಲಕ್ಷ ರೂಪಾಯಿ ಕೊಟ್ಟಿರುತ್ತಾರಾಗಿಯೂ ಅಖಿಲ ಭಾರತೀಯ ಗ್ರಾಮ-ಉದ್ದಿಮೆಗಳ ಸಂಘದ ಮಧ್ಯವರ್ತಿ ಕಚೇರಿಯು ಅಹಮದಾಬಾದದಲ್ಲಿ ಇಡಲಾಗುವದೆಂದೂ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿತ್ತಷ್ಟೇ. ಈ ಎರಡೂ ಸುದ್ದಿಗಳು ನಿರಾಧಾರವೆಂದು ಮಹಾತ್ಮರು ಪ್ರಕಟಿಸುತ್ತಾರೆ. ಮಹಾತ್ಮರಿಗೆ ೨|| ಸಾವಿರ ರೂಪಾಯಿಗಳ ವಚನಗಳು ದೊರಕಿವೆ. ರೂ ೫೦೦ ರೋಖು ಸಿಕ್ಕಿದೆ. ಮಹಾತ್ಮರು ಬರೆಯುವದೇನೆಂದರೆ "ಔದ್ಯೋಗಿಕ ಸಂಘಕ್ಕೆ ಹಣ ಬೇಕು ನಿಜ. ಅದರ ಹೊರತಾಗಿ ಕಾರ್ಯಕರ್ತರ ಆವಶ್ಯಕತೆಯೇ ಹೆಚ್ಚು. ಅದ್ದರಿಂದ ಕಾರ್ಯ ಮಾಡಲಿಚ್ಛಿಸುವವರು ತಮ್ಮ ಹೆಸರುಗಳನ್ನು ತಿಳಿಸಬೇಕು. ಹಳ್ಳಿಗಳಲ್ಲಿ ಹೋಗಿ ಕೆಲವು ಹೊತ್ತಾದರೂ ಅಲ್ಲಿ ದುಡಿಯಲಿಕ್ಕೆ ಸಾಧ್ಯವಿದ್ದವರು ನಮಗೆ ಬೇಕು. ಗ್ರಾಮ ಸಂಘಟನೆಯ ಕೆಲಸವು ಪ್ರಥಮ ದರ್ಶನಕ್ಕೆ ಅಷ್ಟೊಂದು ರಮ್ಯ ಕಾಣದು. ಕಾರ್ಯಕರ್ತರು ಮಾಡತಕ್ಕ ಕೆಲಸವು ನಾಲ್ಕು ಬಗೆಯದು (೧) ಪ್ರೋತ್ಸಾಹನವಿಲ್ಲದ್ದರಿಂದ ಮೃತ್ಯು ಪಂಥಕ್ಕೆ ಎಳೆದಿರುವ ಉದ್ದಿಮೆಗಳಿಗೆ ಉತ್ತೇಜನ ಕೊಟ್ಟು, ಅವುಗಳಲ್ಲಿ ಸುಧಾರಣೆ ಮಾಡುವದು (೨) ಆ ಉದ್ದಿಮೆಗಳಿಂದ ತಯಾರಾಗುವ ಸರಕುಗಳನ್ನು ಒಟ್ಟುಗೂಡಿಸಿ ವ್ಯಾಪಾರ ಮಾಡಿಸುವದು (೩) ಪುನರುಜ್ಜೀವನ ಮಾಡಬಹುದಾದ ಉದ್ದಿಮೆಗಳ ಮಾಹಿತಿಯನ್ನು ಕೂಡಿಸುವದು (೪) ಹಳ್ಳಿಗರ ಆರೋಗ್ಯದ ಜೋಪಾಸನೆ ಮಾಡುವದು. ಸಂಘದ ಘಟನೆಯು ತಯಾರಾಗಿ ಸಂಘದ ಕಾರ್ಯಕ್ರಮವು ನಿಶ್ಚಿತವಾಗುವವರೆಗೆ ನನ್ನ ಸಹಕಾರಿಗಳು ಕೈಯಿಂದಲೇ ಭತ್ತ ಕುಟ್ಟುವದು, ಬೀಸುಕಲ್ಲುಗಳ ಮೇಲೆ ಗೋದಿ ಬೀಸುವದು, ಬೆಲ್ಲ ಮಾಡುವ ಉದ್ಯೋಗಕ್ಕೆ ಪ್ರೋತ್ಸಾಹ ಕೊಡುವದು, ಮತ್ತು ಈ ಸರಕುಗಳು ಹಸನಾಗಿ ಮಾಡುವಂತೆ ಜಾಗ್ರತೆ ಕೊಳ್ಳುವದು, ಈ ಕೆಲಸ ಮಾಡಬೇಕಾಗಿ ನನ್ನ ಸೂಚನೆ. ಈ ಮೂರು ಉದ್ದಿಮೆಗಳ ಸಂಬಂಧ ಕಾರ್ಯಕರ್ತರು ನಿಜವಾದ ಮಾಹಿತಿಯನ್ನು ಸಂಪಾದಿಸಿ, ಆ ಮಾಹಿತಿಯನ್ನೂ ಅವರ ದೃಷ್ಟಿಗೆ ಕಾಣಬಹುದಾದ ಕೈಗಾರಿಕೆಗಳ ಮಾಹಿತಿಯನ್ನೂ ಅವರು ನನ್ನ ಬಳಿ ಕಳಿಸಿ ಕೊಡಬೇಕು. ಈ ಔದ್ಯೋಗಿಕ ಸಂಘವು ರಾಜಕಾರಣದಿಂದ ಪೂರ್ಣವಾಗಿ

(೭ನೇ ಪಾನಿನ ೩ನೇ ಕಾಲಂ ನೋಡಿರಿ)

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟದ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ವತಃ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents – D K NAYAK Bros
Honawar Agent R V. PRABHU Esq

K. PadmanabhaRao & Sons.
BELGAUM
Chief Agents for
Karnatak Districts & S. M. States

ಸುಂದರ ಸ್ತ್ರೀಯರೇ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ ಸುಂದರ ಸ್ತ್ರೀಯರು, ಲೋಕಪ್ರಸಿದ್ಧರಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಕಾಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಇಂಥಕ್ಕೆ ಹುಟ್ಟಿದ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬೆಟ್ಟನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಬಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು.

(Registered Trade Mark)

ಒಂದು ಡಬ್ಬಿಗೆ ಕ್ರಯ ರೂ ೦-೬-೦ ವ್ಹಿ ಪಿ ೪ ಬಣೆ ಡಜನ್ ೧ಕ್ಕೆ ರೂ. ೩-೮-೦ ವಿ ಪಿ. ೦-೫-೦. ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಏಜೆಂಟ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦, ಮಾರ್ಕೆಟ್‌ನ ಮದರಾಸ.



ಸ್ಕ್ವಿಬ್ಸ್ ಎಗ್ಯು ಸ್ಪೆಸಿಫಿಕ್.

ದೊಡ್ಡವರಿಗೂ, ಬಡವರಿಗೂ
ಒಮ್ಮೆಲೇ ಗುಣಕಾರಿಯಾದ ಶ್ರೇಷ್ಠ ಔಷಧ!
ಚಳಿಜ್ವರ, ಇನ್‌ಫ್ಲುಎಂಝಾ
ಮೊದಲಾದ ಜ್ವರಗಳ ವೈರಿ!!
ಮೆಡೊನ್ ಸನ್ಸ ಎಂಡ್ ಕೋ,
ಮುಂಬಯಿ ೨.

MADON SONS & Co
PHARMACEUTICAL CHEMISTS, BOMBAY

ಕರ್ನಾಟಕವೃತ್ತ.

ಮಿತಿ ಭಾವ ಸಂ। ಕಾರ್ತಿಕ ಶು। ೧೩, ಸೋಮವಾರ

ಜನತೆಯ ತೀರ್ಪು.

ಕಳೆದ ವಾರದೊಳಗೆ ಹಿಂದುಸ್ಥಾನದ ಎಲ್ಲ ಪ್ರಾಂತಗಳಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಗಳು ಮುಗಿದವು. ಕೆಲವು ಚುನಾವಣೆಗಳ ನಿಷ್ಪತ್ತಿಯು ಹೊರಬಿದ್ದಿದೆ, ಉಳಿದವುಗಳ ಪರಿಣಾಮವು ಈ ವಾರ ಮುಗಿಯುವದರೊಳಗಾಗಿ ಪ್ರಕಟವಾಗುವವು.

ಈ ತನಕ ಕೈಗೆ ಸಿಕ್ಕ ವರ್ತಮಾನಗಳ ಮೇಲಿಂದ ಎಲ್ಲೆಲ್ಲಿಯೂ ರಾಷ್ಟ್ರೀಯ ಸಭೆಯ ಹುರಿಯಾಳುಗಳೇ ಪ್ರಚಂಡ ಬಹುಮತದಿಂದ ಆರಿಸಿಬರುವರೆಂದು ಕಂಡು ಬರುತ್ತಿದೆ. ಆಸಾಮ ಪ್ರಾಂತದಲ್ಲಿ ರಾಷ್ಟ್ರೀಯ ಸಭೆಯ ಪರವಾಗಿ ನಿಂತ ಶ್ರೀ। ಬಾರದೋಲಿ ಮತ್ತು ವಸಂತ ಕುಮಾರದಾಸ ಇವರು ಹಿಂದೂ ಮಹಾಸಭೆಯ ಹಾಗೂ ರಾಷ್ಟ್ರೀಯ ಪಕ್ಷದ ಹುರಿಯಾಳುಗಳನ್ನು ಸೋಲಿಸಿ ವಿಜಯಶಾಲಿಗಳಾಗಿರುತ್ತಾರೆ. ಮದ್ರಾಸದಿಂದ ಶ್ರೀ। ಸತ್ಯಮೂರ್ತಿಯವರು ಆರಿಸಿಬಂದವರು. ಮದ್ರಾಸ ಇಲಾಖೆಯ ಇತರ ಸ್ಥಳಗಳಲ್ಲಿ ಈಗಿನ ಎಸೆಂಬ್ಲಿಯ ಅಧ್ಯಕ್ಷರಾದ ಸರ ಷಣ್ಮುಖಂ ಚೆಟ್ಟಿಯವರನ್ನು ಧಿಕ್ಕರಿಸಿ, ರಾಷ್ಟ್ರೀಯ ಸಭೆಯವರು ತಮ್ಮಿಂದು ಚುನಾವಣೆಗೆ ನಿಂತ ಶ್ರೀ। ವೆಂಕಟಾಚಲಮ ಚೆಟ್ಟಿಯವರನ್ನೇ ಆರಿಸಿಕೊಟ್ಟಿದೆ. ಬಹುತರ ಎಲ್ಲ ಸ್ಥಳಗಳಲ್ಲಿ ರಾಷ್ಟ್ರೀಯ ಸಭೆಯ ಉಮೇದವಾರರೇ ಆರಿಸಿ ಬರುತ್ತಿರುವರು. ಒಂದೆರಡು ಕಡೆ ಮಾತ್ರ ಪಂಡಿತ ಮಾಲವೀಯರ ರಾಷ್ಟ್ರೀಯ ಪಕ್ಷದವರು ಕೊಂಗ್ರೆಸ ಹುರಿಯಾಳುಗಳನ್ನು ಸೋಲಿಸಿರುತ್ತಾರೆ.

ಚುನಾವಣೆಯ ಪರಿಣಾಮಗಳನ್ನು ತಿಳಿಸುವ ಬದಲು ಚುನಾವಣೆಯ ಕ್ರಮಗಳನ್ನೂ ಮತ ಕೊಟ್ಟ ಮತದಾರರ ಸಂಖ್ಯೆಯನ್ನೂ ಮತ ದೊರಕಿಸುವ ಬಗ್ಗೆ ಆಯಾ ಪಕ್ಷಗಳ ಹುರಿಯಾಳುಗಳು ಮಾಡಿದ ಪ್ರಯತ್ನ-ಪರಿಶ್ರಮಗಳನ್ನೂ ಪರ್ಯಾಲೋಚಿಸಿದರೆ, ಮತದಾರರಲ್ಲಿ ಎಷ್ಟು ಜಾಗೃತಿಯಾಗಿದೆಯೆಂಬುದು ಕಂಡುಬರುತ್ತಿದೆ. ಕೆಲವೆಡೆಗಳಲ್ಲಿ ಶೇಕಡಾ ಲೆಕ್ಕದ ಮೇಲೆ ಪಟ್ಟಿ ಮತದಾರರ ಮತ ಕೊಟ್ಟಿರುವರು. ಕೆಲವೆಡೆ ಶೇಕಡಾ ೭೦ಕ್ಕಿಂತ ಹೆಚ್ಚು ಮತದಾರರು ಮತಪ್ರದಾನ ಮಾಡಿರುವರು. ಇಂಗ್ಲಂಡದಂಥ ಮುಂದುವರಿದ ರಾಷ್ಟ್ರದಲ್ಲಿ ಕೂಡ ಇಷ್ಟು ಪ್ರಮಾಣದ ಮೇಲೆ ಮತ ಹಾಕಿದ್ದು ವಿರಳವೇ. ಹಿಂದುಸ್ಥಾನದಲ್ಲಂತೂ ಇಷ್ಟು ಮತದಾರರು ಹಿಂದೆ ಎಂದೆಂದಿಗೂ ಮತ ಹಾಕಿದ್ದಿಲ್ಲ. ದಿಲ್ಲಿಯೊಳಗಿನ ಸರಕಾರಿ ಅಧಿಕಾರಿಗಳು ಹಿಂದಿನ ಯಾವ ಚುನಾವಣೆಯಲ್ಲೂ ಮತ ಹಾಕಿದ್ದಿಲ್ಲವಂತೆ. ಈ ಸಾರೆ ಎಲ್ಲ ಅಧಿಕಾರಿಗಳು— ಸೇನಾಧಿಪತಿಗಳೂ, ನೇಕ ನಾಮದಾರ ನ್ಯಾಯಮೂರ್ತಿಗಳು, ವಾಯಸರಾಯರ ಕಾರ್ಯಕಾರಿ ಮಂಡಳದ ಸಭಾಸದರೂ ಕೂಡ— ಮತಪ್ರದಾನದ ಚೌಕಿಗಳಿಗೆ ಬಂದು ಮತ ಹಾಕಿ ಹೋದರಂತೆ. ಸ್ವಾತಂತ್ರ್ಯದಿಂದ ಲಾರ್ಡ ವಿಲಿಂಗ್ಡನ್ನ ದೊರೆಗಳು ಕೂಡ ಮತದಾರರ ಯಾದಿಯಲ್ಲಿ ದಾಖಲಾಗಿದ್ದಿಲ್ಲ. ದಾಖಲು ಇದ್ದಿದ್ದರೆ ಅವರು ಸಹ ಮತ ಹಾಕಲು ಬರುತ್ತಿದ್ದರು. ದಿಲ್ಲಿಯ ಅಧಿಕಾರಿಗಳಂತೆ ಬೇರೆ ಕಡೆಗೂ ಸರಕಾರಿ ಅಧಿಕಾರಿಗಳು ಉತ್ಸಾಹದಿಂದ ಮತ ಹಾಕಿರುವರೆಂದು ತಿಳಿಯಲಿದ್ದೆಯಲ್ಲ. ರಾಷ್ಟ್ರೀಯ ಸಭೆಯವರು ಚುನಾವಣೆಯಲ್ಲಿ ಪ್ರವೇಶ ಮಾಡಿದ್ದರಿಂದಲೇ ಇಷ್ಟೆಲ್ಲ ಉತ್ಸಾಹವೂ ಜಾಗೃತಿಯೂ ಉಂಟಾಗಲಿಕ್ಕೆ ಕಾರಣವಾಗಿದೆ. ರಾಷ್ಟ್ರೀಯರು ಸೇರದಿದ್ದರೆ ಚುನಾವಣೆಗಳು ನೀರಸವಾದ ತಮಾಷೆಗಳೇ ಆಗಿ ಹೋಗುತ್ತಿದ್ದವು.

ಈ ಚುನಾವಣೆಯಿಂದ ನಿರ್ಣಯವಾದ ಅತ್ಯಂತ ಮಹತ್ವದ ವಿಷಯವೆಂದರೆ ರಾಷ್ಟ್ರೀಯ ಸಭೆಯ ಪ್ರಾಬಲ್ಯವು. ರಾಷ್ಟ್ರ ವಿರೋಧಕ ಕಟ್ಟಳೆಗಳಿಂದಲೂ, ಉಗ್ರವಾದ ದಬ್ಬಾಳಿಕೆಯಿಂದಲೂ ರಾಷ್ಟ್ರೀಯ ಸಭೆಯು ನಾಶ ಹೊಂದುವದು. ರಾಷ್ಟ್ರೀಯ ಸಭೆಯು ನಿರ್ಜೀವವಾಯಿತು, ರಾಷ್ಟ್ರೀಯ ಸಭೆಗೆ ಜನತೆಯ ಬೆಂಬಲವಿಲ್ಲ, ಹೀಗೆ ಅಧಿಕಾರಿಗಳು ಹೇಳುತ್ತಿದ್ದರು, ಸ್ವತಃ ನಂಬಿಕೊಂಡಿದ್ದರು. ಬೇರೆಯವರಿಗೂ ನಂಬಿಗೆ ಹುಟ್ಟಿಸುತ್ತಿದ್ದರು. ಮುಂಬಯಿಯಲ್ಲಿ ಜರುಗಿದ ರಾಷ್ಟ್ರೀಯ ಸಭೆಯ ವೈಭವದ ಅಧಿವೇಶನವನ್ನು ಕಂಡು ಅವರ ಮೋಹವು ಕೆಲಮಟ್ಟಿಗೆ ದೂರವಾಗಿದೆ. ಈ ಚುನಾವಣೆಯಿಂದಂತೂ ಅವರು ಸೃಷ್ಟಿಸಿಕೊಂಡ ಮೋಹಜಾಲವು ಸಂಪೂರ್ಣವಾಗಿ ಬಯಲಾಗಬೇಕು.

ರಾಷ್ಟ್ರೀಯ ಸಭೆಯು ಸತ್ತಿಲ್ಲ! ರಾಷ್ಟ್ರೀಯ ಸಭೆಯು ನಿಸ್ತೇಜವಾಗಿಲ್ಲ! ರಾಷ್ಟ್ರೀಯ ಸಭೆಯ ವರ್ಚಸ್ಸು ಕುಂದಿರುವದಿಲ್ಲ! ರಾಷ್ಟ್ರೀಯ ಸಭೆಯ ಮೇಲಿನ ಜನತೆಯ ವಿಶ್ವಾಸವು, ಪ್ರೇಮವು ಕಡಿಮೆಯಾಗಿರುವದಿಲ್ಲ. ಇಷ್ಟೇ ಅಲ್ಲ, ಕಳೆದ ಸತ್ಯಾಗ್ರಹ-ಸಂಗ್ರಾಮದಲ್ಲಿ ರಾಷ್ಟ್ರೀಯ ಸಭೆಯವರು ತೋರಿಸಿದ ಧೈರ್ಯ-ಸಾಹಸಗಳಿಂದಲೂ, ಅನುಪಮೇಯ ಸ್ವಾರ್ಥತ್ಯಾಗದಿಂದಲೂ ರಾಷ್ಟ್ರೀಯ ಸಭೆಯ ವರ್ಚಸ್ಸು ಹೆಚ್ಚಾಗಿ ಬೆಳೆದದ, ರಾಷ್ಟ್ರೀಯ ಸಭೆಯು ತೇಜಸ್ವಿ, ಬಲಿಷ್ಠ, ಅಮರ ಸಂಸ್ಥೆಯಾಗಿ ಪರಿಣಮಿಸಿದ. ಜನತಾ-ಜನಾರ್ದನನ ಪ್ರೇಮ-ವಿಶ್ವಾಸಗಳ ನಿಧಿಯಾಗಿದೆ. ರಾಷ್ಟ್ರೀಯ ಸಭೆಯ ಹುರಿಯಾಳುಗಳಿಗೆ, ತಾವು ಕೂಡ ರಾಷ್ಟ್ರೀಯ ಸಭೆಯವರು ಎಂದು ಹೇಳುತ್ತಿರುವ ರಾಷ್ಟ್ರೀಯ ಪಕ್ಷದವರಿಗೂ, ತಮ್ಮ ಅಸಂಖ್ಯ ಮತಗಳನ್ನು ಹಾಕಿ ಮತದಾರರು ಈ ಸಂಗತಿಯನ್ನು ಸ್ಪಷ್ಟಗೊಳಿಸುತ್ತಿರುವರು.

ನಾವು ಹೇಳುವ ತತ್ವವು ಅಧಿಕಾರಿಗಳಿಗೂ ಗೋಚರವಾಗತಕ್ಕದ್ದು. ಸರ ಷಣ್ಮುಖಂ ಚೆಟ್ಟಿಯವರ ಸೋಲಿನ ಕಾರಣಗಳ ವಿಮರ್ಶೆಯನ್ನು ಮಾಡುವಾಗ ದಿಲ್ಲಿಯ ಸರಕಾರಿ ಅಧಿಕಾರಿಗಳು ಸರ್ ಸಾಹೇಬರು ರಾಷ್ಟ್ರೀಯ ಸಭೆಯ ಮೇಲೆ ಬಾಯಿಗೆ ಬಂದಂತೆ ಟೀಕೆ ಮಾಡಿದ್ದೇ ಅವರ ಸೋಲಿಗೆ ಮುಖ್ಯ ಕಾರಣವಾಯಿತೆಂದು ಹೇಳುತ್ತಿರುವರಾಗಿ ದಿಲ್ಲಿಯ ಬಾತ್ಮೀದಾರರು ತಿಳಿಸುತ್ತಾರೆ! ಮುಂಬಯಿಯ ಟೈಮ್ಸ ಆಫ್ ಇಂಡಿಯಾ' ಪತ್ರಿಕೆಯ 'Through Nationalist Eyes' ಎಂಬ ಪ್ರಸಿದ್ಧ ಲೇಖಕರೂ ಇದೇ ರೀತಿ ಅಭಿಪ್ರಾಯಪಡುತ್ತಾರೆ. ಇವರ ಮೇಲೆ ರಾಷ್ಟ್ರೀಯ ಸಭೆಯ ಪ್ರತಿಷ್ಠೆಯು ಹಿಂದುಸ್ಥಾನದಲ್ಲಿ ಅಪಾರವಾಗಿ ಬೆಳೆದಿದೆಂದು ಸ್ಪಷ್ಟವಾಗುವದು.

ಈ ಸಲದ ಕೊಂಗ್ರೆಸ ಹುರಿಯಾಳುಗಳಿಗೆ ಇದಿರಾಳುಗಳಾಗಿ ನಿಂತ ಗೃಹಸ್ಥರು, ಇತರ ದೃಷ್ಟಿಗಳಿಂದ ಪರೀಕ್ಷಿಸಿದರೆ, ಕೊಂಗ್ರೆಸ್ಸಿನ ಹುರಿಯಾಳುಗಳಿಗಿಂತ ಹೆಚ್ಚು ಲಾಯಖಿಯುಳ್ಳವರಿರಬಹುದು, ಅನುಭವಿಕರೂ, ವಿದ್ಯಾವೃದ್ಧರೂ, ಕರ್ತೃತ್ವಶಾಲಿಗಳೂ ಆಗಿರಬಹುದು. ಆದರೆ ಮತದಾರರು ರಾಷ್ಟ್ರೀಯ ಸಭೆಯ ಲೋಕಪ್ರತಿಷ್ಠೆಯನ್ನು ಸಿದ್ಧಪಡಿಸಲೋಸುಗ ಕೊಂಗ್ರೆಸ ಉಮೇದವಾರರಿಗೆ ಆರಿಸಿಕೊಟ್ಟಿದ್ದಾರೆ ಮತ್ತು ರಾಷ್ಟ್ರೀಯ ಸಭೆಯ ಮೇಲಿನ ತಮ್ಮ ಶ್ರದ್ಧೆ-ಪ್ರೀತಿಗಳನ್ನು ವ್ಯಕ್ತಗೊಳಿಸಿದ್ದಾರೆ. ರಾಷ್ಟ್ರೀಯ ಸಭೆಯೇ ಹಿಂದೀ ಜನತೆಯ 'ಏಕಮೇವಾದ್ವಿತೀಯ' ಪ್ರಾತಿನಿಧಿಕ ಸಂಸ್ಥೆಯೆಂದು ತೀರ್ಮಾನ ಕೊಟ್ಟಿದ್ದಾರೆ. ರಾಷ್ಟ್ರೀಯ ಸಭೆಯ ಮತವೇ ಹಿಂದೀ ರಾಷ್ಟ್ರದ ಮತವೆಂದು ಸರಕಾರಕ್ಕೂ, ಜಗತ್ತಿಗೂ ಸಾರಿ ಹೇಳಿದ್ದಾರೆ.

ಸ್ಫುಟ ಸೂಚನೆಗಳು.

೧ ವಿಜಾಪೂರ ಮ್ಯುನಿಸಿಪಾಲಿಟಿಯ ಸಭೆಯ ಹಾಲಕ್ಕೆ ಕ್ರಿ. ಪ್ರೋ. ಕೋಡ ಕಲಂ ೧೪೪ರನ್ವಯ ಹುಕುಮು ಹೊರಡಿಸಿ, ಡಿ। ಮೆಜಿಸ್ಟ್ರೇಟರು ಮಾಡಿದ ಅತ್ಯಾಚಾರವನ್ನು ನಾವು ಕಳೆದ ಸಂಚಿಕೆಯಲ್ಲಿ ವಾಚಕರ ಲಕ್ಷಕ್ಕೆ ತಂದಿದ್ದೇವೆ. ಕಳೆದ ಮಂಗಳವಾರ-ಬುಧವಾರ ನಡೆದ ವೃತ್ತಾಂತವನ್ನು ಈ ಸಂಚಿಕೆಯಲ್ಲಿ ಇನ್ನೊಂದೆಡೆಯಲ್ಲಿ ನಾವು ಸಾಗ್ರವಾಗಿ ವಿವರಿಸಿದ್ದೇವೆ. ಗುರುವಾರ ಪುನಃ ಬುಧವಾರದಂತೆಯೇ ಕ್ರಮ ನಡೆಯಿತು. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ। ವಿ. ವೆಂಕಟೇಶಪ್ರಸಾದ ಮಿಶ್ರರವರು ಶ್ರೀ। ಶರ್ಮಾರವರನ್ನು ಸಕ್ರೆಟರಿ ಜಾಗಕ್ಕೆ ನೇಮಿಸಿಕೊಳ್ಳಲಿಕ್ಕೆ ಒಪ್ಪಿಗೆ ಕೊಡುವದಿಲ್ಲ. ಸರಕಾರಿ ಪಕ್ಷದ ಸ್ವಗೊಂಬೆಗಳಾದ ಉಪಾಧ್ಯಕ್ಷರು ಪೋಲೀಸರ ಸಹಾಯದಿಂದ ಶ್ರೀ। ಸೀಲಿಂಪರನ್ನು ಪದಚ್ಯುತ ಮಾಡಿ ಶ್ರೀ। ಶರ್ಮಾರವರನ್ನು ಸಕ್ರೆಟರಿಯ ಜಾಗದಲ್ಲಿ ಸ್ಥಾಪಿಸಬೇಕೆಂದು ಪ್ರಯತ್ನಪಡುತ್ತಾರೆ, ಕಚೇರಿಯ ಬೀಗಗಳನ್ನು ಮುರಿಯುತ್ತಾರೆ. ಪೋಲೀಸರೂ, ಮೆಜಿಸ್ಟ್ರೇಟರೂ ಉಪಾಧ್ಯಕ್ಷರ ಸಂಗಡ ಬಂದು ಈ ಎಲ್ಲ ಹಾಸ್ಯಾಸ್ಪದ ಕೃತ್ಯಗಳಿಗೆ ಸಹಾಯ ಮಾಡುತ್ತಾರೆ! ಡಿ। ಮೆಜಿಸ್ಟ್ರೇಟರು ಮಾಡಿದ ಅವಿಚಾರದ ಫಲವಿದು! ಶ್ರೀ। ಮಿಶ್ರರವರು ಜನರಲ್ ಸಭೆಯನ್ನು ವಿಸರ್ಜಿಸಿ ಎದ್ದು ಹೋದ ಮೇಲೆ ಬಾಕಿ ಉಳಿದ ಮೆಂಬರರು ಮುಂದುವರಿಸಿದ ಸಭೆಯು ಕಾಯಿದೇಶೀರ ಇರುತ್ತದೋ ಹ್ಯಾಗ, ಶ್ರೀ। ಶರ್ಮಾರವರ ನೇಮಣೂಕಿಯು ಕಾಯದೇಶೀರ ಆಗಿದೆಯೋ ಹ್ಯಾಗೆ? ಎಂಬದನ್ನು ಕಾಯಿದೆ ಪಂಡಿತರು ನಿರ್ಣಯಿಸತಕ್ಕದ್ದು. ಅದವಾ ಕೋರ್ಟುಗಳಲ್ಲಿ ನಿರ್ಣಯವಾಗುವದು. ಆ ರೀತಿ ಶಾಂತ ರೀತಿಯಿಂದ ನಿರ್ಣಯ ಮಾಡಿಕೊಳ್ಳದೆ ಪೋಲೀಸಿಯ ಬಲದಿಂದ ಉಪಾಧ್ಯಕ್ಷರು ಅಧ್ಯಕ್ಷರ ಉಪಮರ್ದ ಮಾಡುವದು ಮತ್ತು ಮೆಜಿಸ್ಟ್ರೇಟ ಮೊದಲಾದ ಅಧಿಕಾರಿಗಳು ಅವರಿಗೆ ಬೆಂಬಲ ಕೊಡುವದು ಯಾವ ಪದ್ಧತಿ? ಈ ಪ್ರಕರಣವು ಬಿಹಾರ ಸರಕಾರದ ತನಕ ಮುಟ್ಟಿರುತ್ತದಾಗಿಯೂ, ಬಿಹಾರ ಸರಕಾರದ ಮಂತ್ರಿಮಂಡಳವು ಮೊನ್ನೆ ಸಭೆ ಸೇರಿ ಪ್ರಕರಣದ ವಿಚಾರಣೆ ಮಾಡುವದಿತ್ತಾಗಿಯೂ ತಿಳಿಯುತ್ತದೆ. ನಾಳೆ-ನಾಡದು ಈ ಪ್ರಕರಣದ ನಿಕಾಲೆ ತಿಳಿಯುವದು.

೨ ಈ ಸಲದ ಚುನಾವಣೆಯಲ್ಲಿ ಮತದಾನದ ಸ್ಥಳಗಳ ಸಂಖ್ಯೆಯನ್ನು ನಿರ್ಣಯಿಸುವವರಲ್ಲಿಯೂ, ಮತದಾನದ ಸ್ಥಳಗಳನ್ನು ಆರಿಸುವವರಲ್ಲಿಯೂ, ಆಯಾ ಹಳ್ಳಿಗಳನ್ನು ಆಯಾ ಮತದಾನದ ಸ್ಥಳಗಳಿಗೆ ಜೋಡಿಸುವವರಲ್ಲಿಯೂ ಅಧಿಕಾರಿಗಳು ಅಕ್ಷಮ್ಯ ದುರ್ಲಕ್ಷ್ಯವನ್ನು ತೋರಿಸಿದ್ದಾರೆಂದು ಹೇಳಬೇಕಾಗಿದೆ. ಮುಂಬಯಿ ಶಹರದಲ್ಲಿ ೧೫ ೧೬ ಸಾವಿರ ಮತದಾರರಿದ್ದಾಗ್ಯೂ ಅಲ್ಲಿ ೩೦ ಮತದಾನದ ಸ್ಥಳಗಳ ಏರ್ಪಾಟು ಮಾಡಲಾಗಿತ್ತು. ಆದರೆ ೬೦ ಸಾವಿರ ಮತದಾರರಿದ್ದ ಮುಂಬಯಿಯಲ್ಲಿ ಒಟ್ಟು ೪ ಮತದಾನದ ಸ್ಥಳಗಳನ್ನು ಏರ್ಪಡಿಸಿದ್ದರು. ಮತ ತೆಗೆಯುವ ಅಧಿಕಾರಿಗಳ ಸಂಖ್ಯೆಯಾದರೂ ಸಾಕಷ್ಟಿತ್ತೋ? ಅದೂ ಇಲ್ಲ. ಹೀಗಾಗಿ ಮುಂಬಯಿಯಲ್ಲಿ ಮತ ಹಾಕುವ ದಿವಸ ಬಹಳ ಗೊಂದಲವಾಯಿತು. ಮತದಾರರು ತಾಸುಗಟ್ಟಲೆ ಹಾದಿ ನೋಡುತ್ತ ನಿಲ್ಲಬೇಕಾಯಿತು. ಅನೇಕ ಮತದಾರರು ಬೇಸರಪಟ್ಟು ಮತ ಹಾಕದೆ ಹಿಂತಿರುಗಿ ಹೋದರಂತೆ! ಕನಿಷ್ಠ ೫ ಸಾವಿರ ಮತದ ದರಿಗೊಂದರಂತೆ ೯–೧೦ ಮತದಾನದ ಸ್ಥಳಗಳನ್ನು ಏರ್ಪಡಿಸಿದ್ದರೆ ಏನು ಗಂಟು ಖರ್ಚಾಗುತ್ತಿತ್ತು?

---

೩. ನಮ್ಮ ಕುಮಟಾ ತಾಲೂಕಿನ ವ್ಯವಸ್ಥೆಯನ್ನೇ ನೋಡಿರಿ. ೨೭ ಮತದ ದರಿದ್ದ ಕೋಡ್ಕಣಿಯನ್ನು ಅರ್ಧ ಮೈಲು ಅಂತರದಲ್ಲಿರುವ ಮಿರ್ಜಾನ ಗ್ರೂಪಿಗೆ ಜೋಡಿಸದೆ ಹೊಳೆಯ ಆಚೆ ಇದ್ದಿರುವ ಬಾಗಿಲ ಗ್ರೂಪಿಗೆ ಜೋಡಿಸಿದ್ದರು! ಹೊಲನಗದ್ದೆ, ಧಾರೇಶ್ವರ ಮುಂತಾದ ಕುಮಟಾ–ಹೊನ್ನಾವರ ರಸ್ತೆಯ ಮೇಲಿರುವ ಹಳ್ಳಿಗಳನ್ನು ಕುಮಟಾ ಗ್ರೂಪಿಗೆ ಜೋಡಿಸದೆ ಕುಡ್ಲೆ ಗ್ರೂಪಿಗೆ ಜೋಡಿಸಿದರು! ಹೊಲನಗದ್ದೆ–ಧಾರೇಶ್ವರದವರು ಕೂಜಳ್ಳಿಗೆ ಹೋಗಬೇಕಾದರೆ ಕುಮಟೆಯ ಪೇಟೆಯೊಳಗಿಂದ ಹಾದು ಹೋಗಿ ಕೂಜಳ್ಳಿಗೆ ಮುಟ್ಟಬೇಕು. ಅವರಿಗೆ ಕುಮಟೆಯಲ್ಲಿ ಮತ ಕೊಡುವ ಅನುಕೂಲತೆ ಮಾಡಿಕೊಟ್ಟಿದ್ದರೆ ಎಷ್ಟು ಒಳ್ಳೇದಾಗುತ್ತಿತ್ತು? ಆಯಾಯ ಗ್ರೂಪಿನಲ್ಲಿ ೫೦–೬೦ ಮತದಾರರನ್ನು ಹಾಕುವ ದೃಷ್ಟಿಯಿಂದ ಈ ವ್ಯವಸ್ಥೆ ಮಾಡಿತ್ತೆಂದು ಅಧಿಕಾರಿಗಳು ಹೇಳಬಹುದು. ಆದರೆ ಒಂದೊಂದು ಗ್ರೂಪಿನಲ್ಲಿ ೧೦೦–೧೫೦ ಮತದಾರರನ್ನಿಟ್ಟು ಮತ ಕೊಳ್ಳಲು ಅಧಿಕಾರಿಗಳಿಗೆ ಅಷ್ಟೇನು ಶ್ರಮ ಬೀಳುತ್ತಿದ್ದಿಲ್ಲವೆಂದು ನಮಗನಿಸುತ್ತದೆ. ತಾಲೂಕಿನ ನಕಾಶೆಯನ್ನು ಕಣ್ಮುಂದಿಟ್ಟು ಪ್ರಯಾಣದ ಸೌಕರ್ಯದ ಕಡೆಗೆ ದೃಷ್ಟಿಕೊಟ್ಟು ಆಯಾಯ ಹಳ್ಳಿಗಳನ್ನು ಆಯಾಯ ಮತದಾನದ ಸ್ಥಳಗಳಿಗೆ ಜೋಡಿಸಿದ್ದರೆ ಮತದಾರರ ತೊಂದರೆ ಅಷ್ಟು ಆಗುತ್ತಿದ್ದಿಲ್ಲ. ಈ ಸಾರೆ ಆದದ್ದು ಆಗಿಹೋಯಿತು. ಇನ್ನು ಮುಂದಾದರೂ ಅಧಿಕಾರಿಗಳು ಈ ಸಲ ಆದ ಅಡಚಣೆಗಳನ್ನು ನೆನಸಿಕೊಂಡು ಮುಂದಾಗುವ ಚುನಾವಣೆಗಳಲ್ಲಿ ಯೋಗ್ಯ ವ್ಯವಸ್ಥೆ ಮಾಡುವರೆಂದು ನಂಬಿದ್ದೇವೆ.

ಶಿರ್ಸಿ— ಏನೂ ಕೊರತೆಯಿಲ್ಲದ ಎಸೆಂಬ್ಲಿ ಚುನಾವಣೆಯು ಮುಗಿಯಿತು. ಈ ತಾಲೂಕಿನ ೮ ಮತದಾನದ ಸ್ಥಳಗಳಲ್ಲಿ ಕೂಡಿ ೫೯೯ ಮತದಾರರು [illegible] ಮತದಾರರು ಮತ ಕೊಟ್ಟರು. ಶ್ರೀ [illegible] ವರಿಗೆ ೩೫೦ ಶ್ರೀ [illegible] ರಿಗೆ [illegible] ಮತಗಳು ಬಿದ್ದಿವೆಯೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಶ್ರೀಯುತ [illegible] ಬಹುಮತದಿಂದ [illegible] ಈ ಚುನಾವಣೆಯೊಳಗಿನ ವಿಶೇಷ

ಈಗಿನ ಪ್ರಪಂಚ.

([illegible])

ಏರ್ಪಡಿಸುವದು, ಹಿಂದೀ ಹೆಣ್ಣುಗಳ ಆರ್ಥಿಕ ನೈತಿಕ ಹಾಗೂ ಆರೋಗ್ಯ ವಿಷಯಕ ಉನ್ನತಿ ಮಾಡುವದೇ ಈ ಸಂಘದ ಉದ್ದೇಶವು. ಭಿನ್ನ ಭಿನ್ನ ಪಂಗಡಗಳ ಜನರು ಸಹ ಸಂಘಕ್ಕೆ ಕೂಡಿ ಕೆಲಸ ಮಾಡಬಹುದು. ಕಾರ್ಯದ ಬಗ್ಗೆ ಪೂರ್ಣ ಸಮಾನ ಜಾತಿಯವರಾಗಿ ದೇಶಸೇವೆಯ ಪ್ರತ್ಯಕ್ಷ ಕೆಲಸ ಮಾಡುವವರಿಗೆ ಸಂಘದಲ್ಲಿ ಸ್ಥಾನವಿದೆ.

•••

ರಾಷ್ಟ್ರಸಂಘದಲ್ಲಿ ೬೦ ರಾಷ್ಟ್ರಗಳು ಸಭಾಸದರಾಗಿವೆ. ಅವುಗಳಲ್ಲಿ ೨೦ ರಾಷ್ಟ್ರಗಳು ತಮ್ಮ ವರ್ಷಾಸನದ ಕಾಯದೆಶಕ್ಕ ವರ್ಗಣಿಯನ್ನು ಕೊಟ್ಟಿಲ್ಲ. ಸಂಪನ್ನರಾದ ಬ್ರಿಟಿಶ ರಾಷ್ಟ್ರದವರನ್ನೇ ೬೧೦ ಲಕ್ಷ ೬ ನೂರು ಫ್ರಾಂಕು ವರ್ಗಣಿ ಬಾಕಿ ಇಟ್ಟ ಮಾರೆ ದೊಡ್ಡ ರಾಷ್ಟ್ರಗಳೂ ಕೂಡ ಪ್ರಿನ್ಸಿಪಲ್ ವರ್ಗಣಿ ಕೊಟ್ಟಿರುವದಿಲ್ಲ! ಒಂದು ಹಿಂದುಸ್ಥಾನ ಮಾತ್ರ ತನ್ನ ವರ್ಗಣಿಯನ್ನು ತಪ್ಪದೆ ಕೊಡುತ್ತದೆ!

•••

ಕಾಯಿದೆಯ ಎರಡನೇ ತಿದ್ದುಪಡಿ ಪಂಡಿತ ಮದನ ಮೋಹನ ಮಾಲವೀಯರವರು ಮತದಾರರ ಯಾದಿಯಲ್ಲಿ ತಮ್ಮ ಹೆಸರನ್ನು ತಿದ್ದುಪಡಿ ಮಾಡಬೇಕಾಗಿ ಗವರ್ನರ ಜನರಲ್‌ರಿಗೆ ಅರ್ಜಿ ಮಾಡಿಕೊಂಡಿದ್ದರು. ಅವಕ್ಕೆ ಈ ತಿದ್ದುಪಡಿ ಮಾಡುವದಿಲ್ಲವಾಗಿಯೂ, ಇಲೆಕ್ಷನ್ ಆದ ಬಳಿಕ ವಿಚಾರ ಮಾಡಲಾಗುವದೆಂದೂ ಹುಕುಮು ಬಂತು! ಇಲೆಕ್ಷನ ಆದ ಬಳಿಕ ತಿದ್ದುಪಡಿ ಆದರೇನು? ಆಗದಿದ್ದರೇನು? ಆದರೆ ಪಂಡಿತರಂತೆ ಯೂರೋಪಿಯನ್ ಉಮೇದ್ವಾರರಾದ ಮಿ| ರೋಮಸ್ ಸ್ಕಾಟ್ ಇವರ ಹೆಸರೂ ತಪ್ಪಿತ್ತು. ಅವರ ಅರ್ಜಿ ಬಂದೊಡನೆ ಗವರ್ನರ ಜನರಲ್‌ರು ಹೆಸರನ್ನು ತಿದ್ದುಪಡಿ ಮಾಡಲು ಕೂಡಲೇ ಹುಕುಮ ಕೊಟ್ಟರು. ಈಗಿನ ಇಲೆಕ್ಷನ ಮತದಾರರ ಯಾದಿಯಲ್ಲಿ ತಿದ್ದುಪಡಿ ಮಾಡಬೇಕಾಗಿ ಹುಕುಮ! ಪಂಡಿತ ಮಾಲವೀಯರಿಗೊಂದು ರೀತಿ, ಸ್ಕಾಟರಿಗೆ ಇನ್ನೊಂದು ರೀತಿ ಯಾಕಾಯಿತೆಂದು ಪ್ರಭಾತ 'ಲೀಡರ' ಪತ್ರಿಕೆಯು ಪ್ರಶ್ನಿಸುತ್ತದೆ. ಸರಕಾರದ ದೊರೆಗಳು ಸ್ಪಷ್ಟ ಪಕ್ಷಪಾತ ಮಾಡಿದರೆಂದು ಆ ಪತ್ರಿಕೆಯು ಸೂಚಿಸುತ್ತದೆ.

•••

ಆಸ್ಸಾಮ ಪ್ರಾಂತದ ಗೌಹತಿ ಬಳಿಯ ಬಾಲಿಹೀರಾ ಗ್ರಾಮದೊಳಗೆ ಒಂದು ಚಮತ್ಕಾರ ಕಂಡುಬಂದಿದೆ. ಅಲ್ಲಿ ಒಬ್ಬ ಸಾಧುಗಳ ಸಮಾಧಿಯುಂಟು. ಈ ಸಾಧುಗಳು ಸದ್ಯಕ್ಕೆ ತೀರಿಕೊಂಡರು. ಸಾಯುವಾಗ ಅವರಿಗೆ ೯೦ ವರ್ಷ ಪ್ರಾಯ. ಮುಂಚೆ ಬೇಟೆಗಾರರಿದ್ದರು. ಮೃಗಯೆಯ ಛಂದವಿತ್ತು. ಮುಂದೆ ಪಶ್ಚಾತ್ತಾಪವಾಗಿ ಮನೆಮಾರು ಬಿಟ್ಟು ತೀರ್ಥಾಟನ ಮಾಡಿ, ಬಾಲಿಹೀರಾ ಬಳಿ ೭ ವರ್ಷಗಳ ಹಿಂದೆ ಒಂದು ಆಶ್ರಮವನ್ನು ಸ್ಥಾಪಿಸಿಕೊಂಡು ಉಳಿದಿದ್ದರು. ಇವರ ಸಮಾಧಿಯ ಒಳಗೆ ಒಂದು ಸರ್ಪವಿದೆ. ಅದು ಸಮಾಧಿಯನ್ನು ಬಿಟ್ಟು ಅಗಲದು. ಸಾಧುಗಳ ಶಿಷ್ಯರು ಆ ಸರ್ಪವನ್ನು ಓಡಿಸಲು ಬಹಳ ಪ್ರಯತ್ನ ಮಾಡಿದರು. ಜನರು ಬಡಿದರು, ಆದರೂ ಆ ಸರ್ಪವು ಒಬ್ಬರಿಗೆ ಸಹ ಕಚ್ಚಹೋಗುವದಿಲ್ಲ, ಯಾವತ್ತೂ ಕ್ಲೇಶಗಳನ್ನು ಅದು ಸಹಿಸುತ್ತಿದೆ. ಹಿಂಸಾತ್ಮಕ ಪ್ರಾಣಿಯು ಆಚರಿಸುತ್ತಿರುವ ಅಹಿಂಸೆಯ ಪ್ರತ್ಯಕ್ಷ ಉದಾಹರಣೆಯಿದು.

•••

ಮುಲ್ತಾನದ ಡಿ| ಮೆಜಿಸ್ಟ್ರೇಟರ ಮುಂದೆ ಖೊಟ್ಟಿ ನಾಣ್ಯಗಳನ್ನು ತಯಾರಿಸಿದ ಬಗ್ಗೆ ಕೆಲವರ ಮೇಲೆ ಖಟ್ಲೆ ನಡೆದಿತ್ತು. ಅಲ್ಲಾ ವರ್ಯಾ ಎಂಬ ಆರೋಪಿಯು ಗವರ್ನರು ತನ್ನ ಪ್ರಾವೀಣ್ಯವನ್ನು ಪೋಲೀಸರಿಗೆ ತೋರಿಸಲಿಕ್ಕೆ ಪರವಾನಗಿ ಬೇಡಿದನು. ಮೆಜಿಸ್ಟ್ರೇಟರು ಅವನಿಗೆ ಪರವಾನಗಿ ಕೊಟ್ಟು, ಆ ನೋಟವನ್ನು ನೋಡಲಿಕ್ಕೆ ಬೇರೆ ಅಧಿಕಾರಿಗಳನ್ನು ಸಹ ನಿಮಂತ್ರಿಸಿದ್ದರು. ಅಲ್ಲಾನು ಅರ್ಧ ತಾಸಿನೊಳಗೆ ಎರಡು ರೂಪಾಯಿಗಳನ್ನು ತಯಾರಿಸಿದನು. ಸರಕಾರಿ ಟ್ರೆಜರಿಯ ಅಧಿಕಾರಿಯು ಇವು ಖರೇ ರೂಪಾಯಿಗಳೆಂದು ಅಭಿಪ್ರಾಯಪಟ್ಟನು!!

•••

ಎಂಗ್ಲೋ-ಇಂಡಿಯನ್ ಜನರು ಈ ತನಕ ತಾವು ಆಳುವ ಜಾತಿಯವರೆಂದು ತಿಳಿದು ಉಡಿಗೆ-ತೊಡಿಗೆಗಳಲ್ಲಿ, ಆಚಾರ-ವಿಚಾರದಲ್ಲಿ ಆಂಗ್ಲರ ಅನುಕರಣೆಯನ್ನೇ ಮಾಡುತ್ತಿದ್ದರು. ದೇಶಭಾಷೆಗಳನ್ನು ಕಲಿಯಲಿಕ್ಕೆ, ಆಡಲಿಕ್ಕೆ ಅವರು ನಾಚುತ್ತಿದ್ದರು. ಇತ್ತೀಚೆಗೆ ಅವರ ಕಣ್ಣು ತೆರೆಯಲಾರಂಭಿಸಿದ್ದಾರೆ. ಸಂಯುಕ್ತ ಪ್ರಾಂತದ ಎಂಗ್ಲೋ ಇಂಡಿಯನ್‌ರು ದೇಶಭಾಷೆಯ ಶಿಕ್ಷಣವನ್ನು ಎಲ್ಲ ಎಂಗ್ಲೋ ಇಂಡಿಯನ್ ಮತ್ತು ಯುರೋಪಿಯನ್ ಶಾಲೆಗಳಲ್ಲಿ ಕಡ್ಡಾಯವಾಗಿ ಮಾಡಬೇಕೆಂತಲೂ ದೇಶಭಾಷೆ ಕಲಿಸದ ಶಾಲೆಗಳಿಗೆ ಸರಕಾರದವರು ಗ್ರಾಂಟು ಕೊಡಬಾರದೆಂತಲೂ ಠರಾಯಿಸಿದ್ದಾರೆ. ಎಂಗ್ಲೋ ಇಂಡಿಯನ್‌ರು ಜನತೆಯಿಂದ ಅಲಿಪ್ತರಾಗಿ ಉಳಿಯುವದು ಉಚಿತವಲ್ಲೆಂತ ಅವರಿಗೆ ತಿಳಿಯಹತ್ತಿದೆ.

•••

ಶ್ರೀಮತಿ ಸೌ| ಕಮಲಾ ನೆಹರುರವರ ಪ್ರಕೃತಿಯು ನಡುವೆ ಸುಧಾರಿಸಿ ಅವರ ತೂಕವು ೫ ರತ್ತಲು ಬೆಳೆದಿರುತ್ತದಾಗಿ ವಾರ್ತೆ ಬಂದಿತ್ತು. ಆದರೆ, ತಾಜಾ ಸುದ್ದಿಗಳ ಮೇಲಿಂದ ಅವರ ಪುಪ್ಪುಸ ವಿಕಾರವು ಹೆಚ್ಚಾಗಿದ್ದು, ಪ್ರಕೃತಿಯು ಚಿಂತಾಜನಕವಾಗಿರುತ್ತದಾಗಿ ತಿಳಿಯುತ್ತದೆ.

ಜಾಹೀರ ನೋಟೀಸು.

ನಾಗಪ್ಪಾ ರಾಮಯ್ಯಾ ನಾಯ್ಕ ಮುಕ್ಕಾಮ ಮನೆ ಸಾ| ಕೋಡ್ಕಣಿ ಈತನು ಇದರ ಮೂಲಕ ಜಾಹೀರಪಡಿಸುವದೇನಂದರೆ ಮಿರ್ಜಾನದಲ್ಲಿ ದೊಡ್ಡಮನೆ ಗ್ರಾಮದಲ್ಲಿ ಇರುವ ವ್ಯಾಪಾರಿ ಕಸಬಿನ ಸ್ವದೇಶಿ ಇಮಾಮ ವ|| ಸ್ವದ ಇಬ್ರಾಹಿಮಸಾಬ ಇವರು ರವಾನೆ ಸಲಾಯಿಸದೆ ಬೆಂಗಳೂರಾವಲೆಯ ೨೫—೮—೦ ಮೂವತ್ತೈದು ರೂಪಾಯಿಗಳ ಪ್ರೋಮಿಸರಿ ನೋಟು ಒಂದನ್ನು ನನ್ನಿಂದಾ ಬರಿಸಿಕೊಂಡಿರುತ್ತಾರೆ. ಅದ್ದರಿಂದ ಸದರಿ ಪ್ರೊಮಿಸರಿ ನೋಟಿನ ಪ್ರಕಾರ ಅವರಾಗಲೀ ಬೇರೆಯವರಾಗಲೀ ಹಣಾ ಪಡೆಯಲಿಕ್ಕೆ ಹಕ್ಕುದಾರರಲ್ಲಾ ತಿಳಿಯುವದು.

ತಾ. 17—11—1934

☞ ಈ ಎಡಗೈ ಹೆಬ್ಬೆಟ್ಟಿನ ಗುರ್ತ

ನಾಗಪ್ಪಾ ರಾಮಯ್ಯಾ ನಾಯ್ಕ ಇವರದು

ಸ್ಥಾನಿಕ ವೃತ್ತಾಂತ.

ಕುಮಟಾ— ವಿಚಿತ್ರ ಜ್ವರ ಊರಲ್ಲಿ ಜ್ವರ ವಿಷಮಜ್ವರ ಮುಂತಾದ ಬೇನೆಗಳಿವೆ ಅಲ್ಲಲ್ಲಿ ಪ್ಲೇಗಿನ ಇಲಿ ಬಿದ್ದ ವಾರ್ತೆಯಿದೆ ಜನರು ಜಾಗ್ರತರಾಗಿರಬೇಕು.

ಬುಧವಾರ ತಾ. ೧೪ ನೇ ಈ ತಾಲೂಕಿನ ಕುಮಟಾ ಗೋಕರ್ಣ, ಅಂಕೋಲೆ ... ಕಸಬೆಗಳಲ್ಲಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಚುನಾವಣೆಯಾಯಿತು ಈ ಚುನಾವಣೆಗೆ ... ಮತದಾರರಿದ್ದು ... ಜನರು ಮತ ಕೊಟ್ಟರು ... ಮತಗಳು ರಾಷ್ಟ್ರೀಯ ಪಕ್ಷದ ಉಮೇದ್ವಾರರಾದ ಶ್ರೀ ಹೊನ್ನಾವರ ... ಬಂದು ... ಮತಗಳು ರಾ. ... ರಾವ ... ಶ್ರೀ ವಿಶ್ವನಾಥರಾವ ಜೋಗ ಇವರೊಳಗೆ ಹಂಚಿಹೋಗಿರಬೇಕು. ... ಮತ್ತು ಶ್ರೀಯುತ ವಿಶ್ವನಾಥರಾವ ಜೋಗರ ವರಾ... ಇಲ್ಲಿ ಬೆಳಗಾವಿ ... ಮತಸಂಗ್ರಹ ಮಾಡಲು ವಿಶೇಷ ಪ್ರಯತ್ನ ನಡೆದುದಾಗಿ ಅವಶ್ಯ ... ರಾ. ವಿಶ್ವನಾಥರಾವ ಜೋಗ ಇವರನ್ನು ... ರಾ. ಮಂಜನಾಥ ಭಟ್ಟ ... ಇವರು ... ಇಲ್ಲಿಗೆ ... ಶ್ರೀ ಹೊನ್ನಾವರ ... ಅವರು ... ರಾ. ... ಇಲ್ಲಿ ... ಸರಕಾರ ಪಕ್ಷದವರಿಂದ ... ಬೆಳಗಾವಿಯ ... ದಕ್ಷಿಣ ಬಾಗದೊಳಗಿನ ... ಶ್ರೀ ಹೊನ್ನಾವರ ... ಮತ ಬಿದ್ದ ವಾರ್ತೆಯಿದೆ ... ಶ್ರೀ ಹೊನ್ನಾವರ ... ಬರಹದು.

ಇಲ್ಲಿಯ ಮ್ಯಾನೇಜಮೆಂಟ ಕಮಿಟಿ ... ವರ ಮಾಗಡದ ... ವರ ... ಉದ್ಯೋಗದಲ್ಲಿ ... ವರ್ಷ ವರ್ಷಕ್ಕೆ ... ಮ್ಯುನಿಸಿಪಾಲಿಟಿಯ ... ಮ್ಯಾನೇಜಮೆಂಟ ಕಮಿಟಿ ... ಗುತ್ತಿಗೆ ... ಮ್ಯಾನೇಜಮೆಂಟ ಕಮಿಟಿ ... ತೀರ್ಮಾನಿಸಬೇಕು.

ಶನಿವಾರ ತಾ. ೧೭—೧೧—೧೯೩೪ ನೇ ಸಂಜೆ ... ರಾ. ಗೋಪಾಲಕೃಷ್ಣ ... ಭಟ್ಟ ... ಮಗುವನ್ನು ... ಹುಲಿಯು ... ಹುಡುಗನ ... ಹುಲಿ ಮುಟ್ಟಲಿಲ್ಲ.

ತಾರೀಖು ೫ ನೇಗೆ ... ಜಾತಿ ಯುವನೊಬ್ಬನ ... ಪೋಲೀಸರು ... ಭಯಂಕರ ... ಒಂದು ...

ಹೊನ್ನಾವರ— ಎಸಂಬ್ಲಿ ಚುನಾವಣೆಯು ... ರೀತಿಯಿಂದ ನಡೆಗುತ್ತಿದೆ ... ಪೋಲಿಂಗ ಸ್ಟೇಶನುಗಳಲ್ಲಿ ... ಜನರು ಮತ ಕೊಟ್ಟರು ... ಮತಗಳು ...

ಸಿದ್ಧಪ್ಪ ... ಮತಗಳು ಶ್ರೀ ಜೋಗ ವಿಶ್ವನಾಥರಾಯರಿಗೂ ... ಮತಗಳು ರಾ. ... ಬಿದ್ದಿವೆಯೆಂದು ... ಶ್ರೀ ... ಕೆಲಸ ... ಶ್ರೀ ... ವಿಶ್ವನಾಥ ... ರಾಯರ ... ಮಾಡುತ್ತಿದ್ದರು.

ಶ್ರೀ ಜೋಗರಾಯರ ಮುಖ್ಯ ಏಜಂಟರಾದ ... ಭಟ್ಟ ವಕೀಲರು ... ಪೋಲಿಂಗ ಸ್ಟೇಶನ್ನಿಗೆ ... ಮತಗಳು ... ಭಟ್ಟರು ... ಜೋಗರಾಯರು ... ಮತಗಳನ್ನು ... ತಿಳಿಯುತ್ತದೆ ... ಸಂಪಾದಿಸಿದಂತಾಯಿತು!

ಭಟಕಳ— ಈ ಜಿಲ್ಲೆಯ ಎರಡು ಪೋಲಿಂಗ ಸ್ಟೇಶನುಗಳಲ್ಲಿ ... ಮತಗಳು ಬಿದ್ದಿವೆ ... ಮತಗಳು ಶ್ರೀ ಹೊನ್ನಾವರ ... ಜೋಗರಾಯರಿಗೆ ಬಿದ್ದವೆಂದು ತರ್ಕ.

ಸಿದ್ದಾಪುರ— (ತಾ ೧೬—೧೧—೧೯೩೪) ಈ ತಾಲೂಕಿನ ... "... ಸ್ವಾಮಿ!" ಎಂಬ ... ಇಲ್ಲಿ ... ವೈದ್ಯ ... ಕೆಲಸ ... ಭಟ್ಟ ... ವೈದ್ಯ ಮಾಸ್ತರರಿಗೆ ... ವೈದ್ಯ ... ರಾ. ಭಟ್ಟ ಮಾಸ್ತರರು ಚಾರ್ಜ ... ವೈದ್ಯ ಮಾಸ್ತರರು ತಾ. ೧೬—೩—೧೯೩೪ ನೇ ... ರಾ. ... ಭಟ್ಟರು ... ವೈದ್ಯ ಮಾಸ್ತರರು ಚಾರ್ಜ ಕೊಟ್ಟು ಸ್ಕೂಲ ಬೋರ್ಡಿನ ... ರಾಮಭಟ್ಟರ ... ವಯಸ್ಸು" ೬೩ ವರ್ಷ!! ರಾ. ವೈದ್ಯ ಮಾಸ್ತರರಿಗಿಂತ ರಾ. ರಾಮಭಟ್ಟ ಮಾಸ್ತರರ ... ಬಿದ್ದಿದ್ದಾರೆ ತಪ್ಪು ಗ್ರಹಿಕೆಯಾಗಿದೆಂದು ರಾ. ವೈದ್ಯ ಮಾಸ್ತರರು ಹೇಳುತ್ತಿದ್ದರಂತೆ ... ರಾ. ಮಂಜ... ಭಟ್ಟ ... ಅರ್ಜಿ ಮಾಡಿಕೊಂಡಲ್ಲಿ ... ಕೆಲವರು ಹೇಳಿದಂತೆ ಇವರ ಅರ್ಜಿ

ಮಾಡಿಕೊಂಡರಂತೆ! 'ನಾನು ವಿ. ಎಲ್. ಪರೀಕ್ಷೆ ತನಕ ಕಲಿತಿದ್ದೇನೆ, ಇದುವರೆಗೆ ೩೦ ವರ್ಷದ ತನಕ ಕೆಲಸ ಮಾಡಿದವನಿದ್ದೇನೆ, ನನ್ನಿಂದೇನೂ ತಪ್ಪುಗಳಿಲ್ಲ, ಎಲ್ಲರೂ ನನ್ನ ಕೆಲಸ ಸೆಟ್ಟಿಗಿರುವರಾಗಿ ... ಹೀಗೆ ... ಕೆಲಸ ಮಾಡಿದವರಿಗೆ ... ಸರ್ಟಿಫಿಕೇಟು ... ಶಾಳೆಯಲ್ಲಿ ... ರಾ. ... ಗಣಪತಿ ಭಟ್ಟ ... ಸರ್ಟಿಫಿಕೇಟ ಕೊಟ್ಟು ... ಕೊಟ್ಟಿದ್ದಾರೆ ... ವನು ... ಅರ್ಜಿ ಮಾಡಿಕೊಂಡಿದ್ದರು ... ಜಿಲ್ಲೆಯ ... ವೈದ್ಯ ಮಾಸ್ತರರು ... ಕಮಿಟಿ ... ವೈದ್ಯ ಮಾಸ್ತರರು ... ಅರ್ಜಿ ಮಾಡಿಕೊಂಡಿದ್ದಾರೆ ಜಿಲ್ಲಾ ಬೋರ್ಡಿನ ನ್ಯಾಯವು ... ಇತ್ಯಾದಿ.

ಹಳಿಯಾಳ— (ತಾ ೧೬—೧೧—೩೪) ನಿನ್ನೆ ದಿವಸ ... ಚುನಾವಣೆಯು ಕೆಲಸ ... ರೀತಿಯಿಂದ ... ಮತಗಳು ಶ್ರೀ ಹೊನ್ನಾವರ ... ರಾ. ... ತೇಲಂಗ, ... ರಾ. ತೇಲಂಗರು ... ಪೋಲಿಂಗ ... ಶ್ರೀ ಹೊನ್ನಾವರರ ಏಜಂಟ ... ಪೋಲಿಂಗ ... ರಾ. ತೇಲಂಗರಿಗೆ ... ತೇಲಂಗರು ... ಕೆಲಸ ಮಾಡಿದರು.

ಕಾರವಾರ— (ತಾ ೧೬—೧೧—೩೪) ಅಕಸ್ಮಾತ್ ... ರಾ. ಜಜ್ಜರಾದ ರಾ. ... ಜಜ್ಜರು ... ಮಂಗಳವಾರ ... ಚಾರ್ಜ ... ರಾ. ... ಜಜ್ಜರಾದ ರಾ. ... ರಾ. ... ಚಾರ್ಜ ... ಜಜ್ಜರಾಗಿದ್ದರು.

ಹೊಸ ಕಲೆಕ್ಟರರಾದ ರಾ. ... ತಾ. ೧೬ ನೇಗೆ ಬಂದು ಚಾರ್ಜ ತೆಗೆದುಕೊಂಡಿದ್ದಾರೆ ... ಕಲೆಕ್ಟರ ಭಟ್ಟ ... ರಾ. ... ಕಲೆಕ್ಟರಾಗಿದ್ದ ರಾ. ... ಮೆನೇಜಮೆಂಟ ... ಸ್ಥಿತಿಯಲ್ಲಿ ...

ಎಸೆಂಬ್ಲಿಯ ಚುನಾವಣೆಯಲ್ಲಿ ಕಾರವಾರ ... ೧೬೫ ಜನರು ಮತ ಕೊಟ್ಟರು ... ಮತಗಳು ... ಹೊನ್ನಾವರರಿಗೆ ಬಿದ್ದಿರಬೇಕು ... ಮತದಾರರು ... ಒಂದು ...

ಹೋದರು ಅಕ್ಷರಸ್ಥರು ವೃದ್ಧರು ಮತ್ತು ಸ್ತ್ರೀಯರ ಪಾಕ್ಯ ಶ್ರೀ ಕಳವೆಕ್ಷರಕರ ಬಂಧು ಗುರು ದಾಸ ಕಾರಿನಲ್ಲಿ ಕರೆತರಲ್ಪಟ್ಟಿದ್ದರು. ಹಿಂದಿನ ಸಾಲಿನ ಹರಿದೀಕ್ಷಿತರರು, ಅವರ ಅನುಯಾಯಿಗಳು ಕಾಂಗ್ರೆಸ್ ಉಮೇದವಾರರ ಒಗ್ಗೆ ಚಳವಳಿ ಪ್ರಚಾರ ಪಟ್ಟು ದುಡಿದರು. ಶ್ರೀ ಶಾಂತಾರಾಮ ಶಿಂಡೆ ಉಳವಿ ಫೋಲಿಂಗ ಸ್ಟೇಶನ್ನಿನಲ್ಲಿ ಕೂಡ ಹೊಸಮನೆಯವರಿಗೇ ಹೆಚ್ಚು ಮತಗಳು ಬಿದ್ದವೆಂದು ಸುದ್ದಿ ಬಂದಿದೆ. ವಾಡಾ [illegible] ರಾ|| ರಾ|| ದಾಟೀಲರಿಗೆ ಹೆಚ್ಚು ಮತಗಳು ಸಿಕ್ಕಿರುತ್ತವೆಂದು ವಾರ್ತೆ.

ಕಳೆದ ತಾ ೧೭–೧೧–೩೪ಕ್ಕೆ ಕಾರವಾರ ಹರಿಜನ ಸೇವಕ ಸಂಘದ ವತಿಯಿಂದ ಒಡೆಯರಿಗಿನ ಸ್ವಾತಂತ್ರ್ಯ ಸ್ಕೂಲಿನ ಕಟ್ಟಡದಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ಹಂಚುವ ಸಮಾರಂಭವು ಜರುಗಿತು. ಪೂರ್ವ ನಿಯೋಜಿತ ಅಧ್ಯಕ್ಷರಾದ ಶ್ರೀ ಸುಬ್ರಾಯ ಹಳದೀಪುರಕರ ಇವರು ಪರಊರಿಗೆ ಹೋದದ್ದರಿಂದ ಅವರ ಅನುಪಸ್ಥಿತಿಯಲ್ಲಿ ಶ್ರೀ [illegible] ಕಳವೀಕರ ವಕೀಲರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಮಾರಂಭಕ್ಕೆ ಸಂತೋಷದ ಭಾಗಗಳಿಂದ ಅನೇಕ ನಾಗರಿಕರು ವಿದ್ಯಾರ್ಥಿಗಳೂ ಬಂದಿದ್ದರು. ಕಾರವಾರ ಹೈಸ್ಕೂಲಿನ ಶ್ರೀ ವೆಂಕಟೇಶ ಪ್ರಭುಗಳು ಮಾಡಿದ ಸ್ವಾಗತ ಪದ್ಯಗಳನ್ನು ಹರಿಜನ ಬಾಲ–ಬಾಲಿಕೆಯರು ಬಹು ಸೊಗಸಾಗಿ ಹಾಡಿದರು. [illegible] ದಾಸಗುಪ್ತ ಮೆಸರ್ಸ್ ಎನ್ ಡಿ ನಾಡಕರ್ಣಿ ಮತ್ತು ಮಾರುತಿ [illegible] ಇವರು ಇವರು ಸಂಘದ ಕಾರ್ಯಕಲಾಪಗಳನ್ನು ಸಭಿಕರಿಗೆ ತಿಳಿಸಿದರು. ಆ ಮೇಲೆ ಅಧ್ಯಕ್ಷರ ಕೈಯಿಂದ ಹರಿಜನ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪಾಟಿ, ಪುಸ್ತಕ, ದೌತಿ, ಪೆನ್ಸಿಲ್ ಮುಂತಾದ ಬಹುಮಾನಗಳು ಕೊಡಲ್ಪಟ್ಟವು. ಒಬ್ಬ ಇಂಗ್ಲೀಷ ಸ್ಕೂಲಿನ [illegible] ನೇ ಇಯತ್ತೆಯಲ್ಲಿ ಕಲಿಯುತ್ತಿದ್ದ ಹರಿಜನ ವಿದ್ಯಾರ್ಥಿ [illegible] ಹುಡುಗನಿಗೆ ಸ್ಕಾಲರಶಿಪ್ ಕೊಡಲ್ಪಟ್ಟಿತು. ಸಭೆಯಲ್ಲಿ ಈ ಹುಡುಗನು ಚಿಕ್ಕದೊಂದು ಇಂಗ್ಲೀಷ ಭಾಷಣ ಮಾಡಿದ್ದನು. ಅಧ್ಯಕ್ಷರು ಒಂದು ಸಣ್ಣದಲ್ಲಿ ಸ್ವಾರಸ್ಯವಾದ ಭಾಷಣ ಮಾಡಿ ಅದರ ಕರ್ತವ್ಯದ ಪ್ರತಿಪಾದಿಸಿದರು. ಶ್ರೀ ರಂಗಪ್ಪ [illegible] ದೇಸಾಯಿ ವಾಂಜನಾಥ ಜೋಶಿ, ವೆಂಕಟೇಶ ರಾ ಪ್ರಭು ಕೇ ಎಚ್ ನಾಯ್ಕ ಇವರು ಸಹ ಯೋಜಿತ ಭಾಷಣಗಳನ್ನು ಮಾಡಿದರು. ಕೊನೆಗೆ ರಾಷ್ಟ್ರಗೀತದೊಂದಿಗೆ ಸಭೆಯು ವಿಸರ್ಜನವಾಯಿತು. ಸ್ವಯಂಸೇವಕರಿಂದ ಬಾಲಕರಿಗೆ ಶ್ರೀ ಪತ್ರಾವೋ ದೇಸಾಯಿಯವರು ಸಂಘದ ಬಾಲಕರಿಗೆ ಚಹಾ ಫರಾಳ ಸಹಾಯ ಮಾಡಿದರು.

ಅಂಕೋಲಾ— ಅಂಕೋಲಾ ತಾಲೂಕಿನಲ್ಲಿ ಲೋಕಲ್ ಬೋರ್ಡ ಎಲೆಕ್ಷನ್ನಿನ ಬಗ್ಗೆ ಮತದಾರರ ಸಂಖ್ಯೆ [illegible] ರಷ್ಟಿದ್ದು ೧೩೩ ಮತದಾರರು ಮತದಾನ ಮಾಡಿದ್ದರು. ೧೩೦ ಮತಗಳು ದೇಶಭಕ್ತ ಸಿದ್ದಪ್ಪಾಜೆನವರಿಗೆ ಬಿದ್ದವೆ. ಉಳಿದ ೩ ಮತಗಳು ರಾ|| ಶಾ|| ದಾಟೀಲರಿಗೆ ದೊರೆತವು. ಶ್ರೀ ಜೋಗಳೇಕರರಿಗೆ ಸಮಾಧಾನದಿಂದ ಸೋತಿದ್ದ ಪಟ್ಟವು. ಶ್ರೀ ಕಾಮತರವರ ನೇತೃತ್ವದಲ್ಲಿ ಕಾಂಗ್ರೆಸ ಕೆಲಸಗಾರರು ಒಳ್ಳೇ ಪರಿಶ್ರಮ ವಹಿಸಿದ್ದರು. ದೂರದೂರದಲ್ಲಿರುವ ಹಳ್ಳಿಗಳಿಂದ ಮತದಾರರನ್ನು ಎಬ್ಬಿಸಿ ತಂದು ಮತ ಹಾಕಿದ್ದಾರೆ.

ದಂತ ಚಿಕಿತ್ಸೆ! ತ್ವರೆ ಮಾಡಿರಿ!!

ಸ್ವಲ್ಪೇ ದಿವಸ ಮುಕ್ಕಾಮು !!

ಡಾ|| ಹಳಕಾರ ಕುಮಟಾ ಇವರ ದವಾಖಾನೆಯಲ್ಲಿ ಸ್ಥಾಪಿಸಿದ ದಂತ ಚಿಕಿತ್ಸಾಲಯದಲ್ಲಿ ಹಲ್ಲಿನ ಎಲ್ಲ ತರದ ಕೆಲಸಗಳನ್ನು ಮಾಡುತ್ತೇವೆ. ಹೆಚ್ಚಿನ ಮಾಹಿತಿ ನೋಡ್ರಿ.

ಡಾ|| ಕೊಪ್ಪಳ, ಡೆಂಟಿಸ್ಟ, ಕುಮಟಾ.

— ಹಿರಲಿ ಬಹಾಸಿ ಪಟ್ಟಣದಲ್ಲಿ ನಾಲ್ವರು ಪರದೇಶಿಗಳಿಗೆ ಕೊಟ್ಟ ದೇಹಾಂತ ಶಿಕ್ಷೆಯನ್ನು, ರದ್ದುಪಡಿಸಿ ಕಾಲಕತ್ತಾ ಹೈಕೋರ್ಟಿನವರು ಅವರಿಗೆ ಕರಿನೀರಿನ ಶಿಕ್ಷೆ ವಿಧಿಸಿದ್ದು, ಬಂಗಾಲಿ ಸರಕಾರವು ಈ ತೀರ್ಪಿನ ವಿರುದ್ಧ ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡುವರಂತೆ!

— ಬಾಬು ಸುಭಾಷಚಂದ್ರ ಬೋಸರ ಪ್ರಕೃತಿಯು ಇನ್ನೂ ಸುಧಾರಿಸಿಲ್ಲ. ಧಾತು ಗುಣವೃದ್ಧಿ ಸೇವನ ಪ್ರಯೋಗದಿಂದ ಅವರು ಪ್ರಾಪಿಸಾಗುವ ಲಕ್ಷಣಗಳು ತೋರದ್ದರಿಂದ ಅವರಿಗೆ ಶಸ್ತ್ರಕ್ರಿಯೆ ಮಾಡಿಸಬೇಕೆಂದು ಡಾಕ್ಟರ ಅಭಿಪ್ರಾಯವಾಗಿದೆ.

— ಗುಜರಾಥ ವಿದ್ಯಾಪೀಠದ ಇಮಾರತಿಗಳನ್ನು ಸರಕಾರವು ವಿದ್ಯಾಪೀಠದ ಟ್ರಸ್ಟಿಯರಿಗೆ ಹಿಂತಿರುಗಿಸಿದ್ದು ಶ್ರೀ ಸರದಾರ ವಲ್ಲಭಭಾಯಿ ಪಟೇಲರವರ ಕಬಜಾ ವಹಿಸಿಕೊಟ್ಟಿದೆ.

— ಶ್ರೀ ವೆಂಕಟಾಚಲಮ್ ಚೆಟ್ಟಿಯವರು ಪರಿಷತ್ ಕಾಯದೆ ಕೌನ್ಸಿಲಿಗೆ ಆರಿಸಿ ಬಂದದ್ದರಿಂದ ಅವರ ಪ್ರಾಂತಿಕ ಕೌನ್ಸಿಲಿನ ಜಾಗೆಯು ಒದಗಿರುತ್ತದೆ. ಆ ಸ್ಥಳಕ್ಕೆ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರನ್ನು ಉಮೇದವಾರರಾಗಿ ನಿಲ್ಲಿಸಬೇಕೆಂದು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ನಿಶ್ಚಯಿಸಿದ್ದಾರೆ.

'ಕಿರ್ಲೋಸ್ಕರ' ವೆಂದರೇ-ಶ್ರೇಷ್ಠತೆ.



ಕಿರ್ಲೋಸ್ಕರ ಕಂಪನಿಯ ನಲಿಗದ್ದೆ ಸಲಿ ಯುವ ಯಂತ್ರ ಹಚ್ಚಿದ್ದಲ್ಲಿ ಒಳೆ ಲಾಭವಾಗುತ್ತದೆ. ಅದರಿಂದ ಖರ್ಚು ಕಡಿಮೆ ಬಿದ್ದು ಕೆಲಸವು ದಕ್ಷತೆ ಗುತ್ತದೆ. ಯಂತ್ರ ಶಾಸ್ತ್ರ ಪ್ರಕಾರದಂತೆ ಇವುಗಳನ್ನು ತಯಾರಿಸಿದ್ದು ಇವುಗಳ ಒಗ್ಗೆ ಎಲ್ಲರಿಗೂ ಸಮಾಧಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು, ಇಂಜನುಗಳಿಂದಲೂ ನಡಿಸಬಹುದು.

ಪತ್ರ ಬರೆಕೊಂಡಲ್ಲಿ ಸಚಿತ್ರ ಕೆಟಲಾಗು ಕಳಿಸಲ್ಪಡುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ! ಯೋಗ್ಯವಾದ ಧಾರಣೆ!!

ಯು. ಶಿನಾಯ ಎಂಡ್ ಬ್ರದರ್ಸ,

ಒಟೋಮೋಬೈಲ ಇಂಜಿನಿಯರ್ಸ ಎಂಡ್ ಬೋಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಸೆವರಲೇಟ್ ಬ್ಯೂಕ, ಕ್ರಾಯಸಲರ, ಸಿಟ್ರೋನ್, ಡೋಜ್, ಡಿಸೋಟೋ, ಡ್ಯುರಾಂಟ, ಎಸೆಕ್ಸ, ಎರಸ್ಕಿನ್, ಪಾಗುರ್, ಫ್ಯಾಟ, ಜಿ ಎಮ್ ಸಿ, ಫೋರ್ಡ ಎ, ಫೋರ್ಡ ಎಎ, ಹುಪ್‌ಮೊಬೈಲ್, ಹಡಸನ್, ಮೊಸ್ಕವೆಲ್, ಓವರಲೆಂಡ ವ್ಹಿಪೆಟ್, ಪಿಲೀಸ, ಸ್ಟುಡಬೇಕರ, ರಗ್ಬಿ, ಪ್ಲೀಮೌಥ, ರಿಯೋ, ಸಿಂಗರ ಮೊದಲಾದ ಯಾವತ್ತು ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿಯ ದರದಿಂದಲೂ ಮಾಡಿಕೊಡುವೆವು. ಬೇಕಾದ ಪ್ಯಾಸೆಂಜರ ಬೋಡ್ಯಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಇದಲ್ಲದೆ—

ಎಕ್ರೆಗಟ್ಟಲೆ ಜಮಿನಿಗೆ ಸುಲಭವಾಗಿ ನೀರು ಹಾಯಿಸುವ ಚಿಕ್ಕವು ಸಣ್ಣ-ದೊಡ್ಡ ಸೀರಿನ ಆಯಿಲ ಯಂತ್ರಗಳನ್ನು ತಯಾರಿಸಿ ಸೇತುವೆಗಳಲ್ಲಿ ಫಿಟಿಂಗ ಮಾಡಿಕೊಡುವೆವು, ಬೋಡಿಬಿಲ್ಡಿಂಗ, ಬೇಕಾದ ನಮೂನೆಯ ಖುರ್ಚಿಗಳೂ, ಬಾಂಕ ಗಳೂ, ಕೆಟ್ಟೆಗಳೂ ಮಾಡಿಕೊಡುವೆವು. ಒದಗಿಯೂ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ.

ಅಲ್ಲಲ್ಲಿ ಇಷ್ಟಿಷ್ಟು!

ಈ ವಾರದ ಮುಖ್ಯ ಸದ್ದಿಗಳೆಂದರೆ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯ ಸದ್ದಿಗಳು. ಯಾವ ಪತ್ರಿಕೆಯನ್ನು ತೆರೆದರೂ ಅದು ಚುನಾವಣೆಯ ವೃತ್ತಾಂತಗಳಿಂದ ತುಂಬಿಕೊಂಡಿದೆ. ಯಾರು ಆರಿಸಿ ಬಂದರು, ಎಲ್ಲಿ ಚುನಾವಣೆಯಾಯಿತು, ಎಷ್ಟು ಮತದಾರರು ಮತ ಕೊಟ್ಟರು, ಯಾರ ಆರಿಸಿಬಂದರು, ಯಾರಿಗೆ ಮತ ಕೊಡಬೇಕು ಯಾರಿಗೆ ಕೊಡಬಾರದು ಮೊದಲಾದ ಸುದ್ದಿ ಸಂದೇಶಗಳಿಂದಲೂ, ಟೀಕೆ-ಪ್ರತಿಟೀಕೆಗಳಿಂದಲೂ ಪತ್ರಿಕೆಗಳಲ್ಲಿ ವ್ಯಾಪಿಸಿವೆ.

.·.

ಆಸಾಮ ಪ್ರಾಂತದಿಂದ ಶ್ರೀ. ನವೀನಚಂದ್ರ ಬಾರದೋಲಿ ಮತ್ತು ಶ್ರೀ ವಸಂತ ಕುಮಾರದಾಸ ಎಂಬ ಇಬ್ಬರು ರಾಷ್ಟ್ರೀಯ ಸಭೆಯ ಹುರಿಯಾಳುಗಳು ಆರಿಸಿಬಂದಿರುವರು. ಅವರ ಪ್ರತಿಸ್ಪರ್ಧಿಗಳಾದ ರಾಷ್ಟ್ರೀಯ ಪಕ್ಷದ ಶ್ರೀ. ಫೂಕನರೂ, ಹಿಂದು ಮಹಾಸಭೆಯ ಶ್ರೀ ಗಣೇಶೀರಾಮ ಗಾಂಧಿಯವರೂ ಸೋತರು. ಆಸಾಮ ಪ್ರಾಂತದ ಮುಖ್ಯ ಪ್ರಧಾನರ ಶ್ರೀಯ ನಿರ್ಣಯಕ್ಕೆ ಕಡು ವಿರೋಧ ಮಾಡುವ ಪ್ರಾಂತಗಳಲ್ಲೊಂದಾಗಿರುವದ.

.·.

ಮದರಾಸ ನಗರದ ಪರವಾಗಿ ರಾಷ್ಟ್ರೀಯ ಸಭೆಯ ಪಕ್ಷದಿಂದ ಶ್ರೀ ಸತ್ಯಮೂರ್ತಿಗಳು ನಿಂತಿದ್ದರು. ಜಸ್ಟಿಸ ಪಕ್ಷದ ಪರವಾಗಿ ದಿವಾಣ ಬಹದ್ದೂರ ರಾಮಸ್ವಾಮಿ ಮುದಲಿಯಾರರು ನಿಂತಿದ್ದರು. ಮುದಲಿಯಾರರು ದುಂಡು ಮೇಜಿನ ಪರಿಷತ್ತಿನಲ್ಲಿ ಕೀರ್ತಿ ಪಡೆದವರೂ, ಈಗಣ ಎಸೆಂಬ್ಲಿಯ ಸಭಾಸದರೂ ಆಗಿರುತ್ತಾರೆ. ನೇಕ ನಾಮದಾರ ಲೊರ್ಡ ವಿಲಿಂಗ್ಡನ್ ದೊರೆಗಳ ಪ್ರೀತಿ ಸಂಪಾದಿಸಿದವರು. ಇಷ್ಟೆಲ್ಲ ಬಿರುದುಗಳಿಂದ ವಿಭೂಷಿತರಿದ್ದಾಗ್ಯೂ ಅವರಿಗೆ ಜಯಶ್ರೀಯು ಮಾಲೆ ಹಾಕಲಿಲ್ಲ!

.·.

ಈ ಎಲ್ಲ ಸುದ್ದಿಗಳಗಿಂತ ಸರ್ ಷಣ್ಮುಖಂ ಚೆಟ್ಟಿಯವರ ಸೋಲಿನ ಕಥೆಯೇ ಬಹಳ ಮಹತ್ವದ ಕಥೆಯಾಗಿದೆ. ಈ ಮಹಾಶಯರು ಮದ್ರಾಸ ಇಲಾಖೆಯ ವರ್ತಕ ಸಂಘದ ಪರವಾಗಿ ಚುನಾವಣೆಗೆ ನಿಂತಿದ್ದರು. ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ|| ಸ್ವಾಮಿ ವೆಂಕಟಾಚಲಮ್ ಚೆಟ್ಟಿಯವರನ್ನು ಕಾಂಗ್ರೆಸ್ ಹುರಿಯಾಳಾಗಿ ಅವರಿದಿರಿಗೆ ನಿಲ್ಲಿಸಿದ್ದರು. ಸರ್ ಷಣ್ಮುಖಂರವರು ಪ್ರಯಾಸಪಟ್ಟು ಇಡೀ ಇಲಾಖೆಯಲ್ಲಿ ಅಡ್ಡಾಡಿ ತಮ್ಮ ಬಗ್ಗೆ ಪ್ರಚಾರ ಮಾಡಿದ್ದರು. ಆದಾಗ್ಯೂ ಶ್ರೀ|| ಸ್ವಾಮಿ ವೆಂಕಟಾಚಲಮ್‌ರಿಗೆ ೭೫೭ ಮತಗಳೂ, ಸರ್ ಸಾಹೇಬರಿಗೆ ೬೩೦ ಮತಗಳೂ ಬಿದ್ದು ಶ್ರೀ|| ಸ್ವಾಮಿ ವೆಂಕಟಾಚಲಮ್‌ರು ಜಯಶಾಲಿಗಳಾಗಿ ಬಂದರು!

.·.

ಸರ್ ಷಣ್ಮುಖಂರವರು ನ್ಯಾಯಿಸರಕಾರಿಯ ದೊರೆಗಳ ಮಾನಸ ಪುತ್ರರಂತೆ. ಈಗಣ ಎಸೆಂಬ್ಲಿಯ ಅಧ್ಯಕ್ಷರು, ಬ್ರಿಟಿಶ ಒಪ್ಪಂದದ ಪ್ರವರ್ತಕರೂ, ಆಧಾರ ಸ್ತಂಭಗಳೂ ಆಗಿರುತ್ತಾರೆ. ದಿಲ್ಲಿಯ ಅಧಿಕಾರಿಗಳ ಗಳಿಸಿದವನ್ನೂ, ಮಾನ-ಮರ್ಯಾದೆಗಳನ್ನೂ ಸಂಪಾದಿಸಿದವರು. ಇವರು ಸೋತ ಸುದ್ದಿಯು ದಿಲ್ಲಿಯಲ್ಲಿ ತಿಳಿಯುತ್ತಲೇ ಸರಕಾರಿ ಮಂಡಲಗಳಲ್ಲಿ ಚಿಂತೆಯುಂಟಾಯಿತು! ದೊರೆಗಳಗಂತೂ ಎಷ್ಟು ವ್ಯಸನವಾಗಿರುವದೋ ಏನೋ? ಒಂದು ಎಂದ ಸುದ್ದಿಗಳು ಮೇಲಿಂದ ಕೊಂಗ್ರೆಸ ಉಮೇದವಾರರೇ ಯಶಸ್ವಿಗಳಾಗಿ ಆರಿಸಿ ಬರುವದನ್ನು ಕಂಡು ಅಧಿಕಾರಿಗಳು ದಿಙ್ಮೂಢರಾಗಿರುವರಂತೆ! ರಾಷ್ಟ್ರೀಯ ಸಭೆಯವರೇ ಎಸೆಂಬ್ಲಿಯಲ್ಲಿ ಬಹುಸಂಖ್ಯರಾಗಿ ಬರುವರೆಂದು ಅವರಿಗೆ ಖಚಿತಯಾಗಿದೆಯಂತೆ. ಭಾವೀ ಎಸೆಂಬ್ಲಿಯ ಅಧ್ಯಕ್ಷರು ಕೂಡ ರಾಷ್ಟ್ರೀಯ ಸಭೆಯವರೇ ಆಗುವರೆಂತ ತರ್ಕ-ವಿತರ್ಕಗಳು ನಡೆದಿವೆಯಂತ!!

.·.

ಸರ ಷಣ್ಮುಖಂ ಚೆಟ್ಟಿಯವರು ಚುನಾವಣೆಯಲ್ಲಿ ಸೋತ ವರ್ತಮಾನ ಕೇಳಿ, ವಿಲಾಯತಿಯೊಳಗಿನ 'ಮೋರ್ನಿಂಗ ಪೋಸ್ಟ' ಪತ್ರಿಕೆಗೂ ದೊಡ್ಡ ಚಿಂತೆಯುಂಟಾಗಿದೆ. 'ಸಂಯುಕ್ತ ಕಮಿಟಿಯ ವರದಿಯು ಪ್ರಸಿದ್ಧವಾಗಲಿಕ್ಕಿರುವಾಗ ರಾಷ್ಟ್ರೀಯ ಸಭೆಯ ಹುರಿಯಾಳುಗಳು ವಿಜಯಶಾಲಿಗಳಾಗಿ ಬರುವದೇನು ಶುಭ ಚಿನ್ಹವಲ್ಲ!' ಎಂದು ಆ ಪತ್ರಿಕೆಯು ಬರೆಯುತ್ತದೆ. ಶ್ವೇತ ಪತ್ರಿಕೆಯಲ್ಲಿ ಕಾದಿಟ್ಟ ಖಾತೆಗಳ ಕಾರಭಾರವನ್ನು ಸಹ ಲೋಕಪ್ರತಿನಿಧಿಗಳಿಗೆ ಒಪ್ಪಿಸಬೇಕೆಂದು ಒತ್ತಾಯ ಮಾಡುತ್ತಿರುವ ರಾಷ್ಟ್ರೀಯ ಸಭೆಯವರು ಎಸೆಂಬ್ಲಿಯನ್ನು ಆಕ್ರಮಿಸಹತ್ತಿದ್ದು ನೋಡಲಾಗಿ, ಸಂಪೂರ್ಣ ಜವಾಬದಾರಿಯನ್ನು ಭಾರತೀಯರಿಗೆ ಒಪ್ಪಿಸಿದ್ದಲ್ಲಿ ಮುಂದೇನಾಗುವದೆಂದು ಸ್ಪಷ್ಟವಾಗಿ ಕಂಡುಬರುತ್ತಿದೆ. ಹಿಂದುಸ್ಥಾನದಲ್ಲಿ "ಬನಿಯಾರಾಜ್ಯ"ವೇ ಸುರುವಾಗುವದು, ಹೀಗೆ ಆ ಪತ್ರಿಕೆಯ ಹೇಳಿಕೆಯು!

.·.

ಮದ್ರಾಸ ಇಲಾಖೆಯ ಮಧುರಾ-ರಾಮನಾಡ ಜಿಲ್ಹೆಗಳ ಪರವಾಗಿ ಕೊಂಗ್ರೆಸ ಪಕ್ಷದ ಹುರಿಯಾಳಾದ ಶ್ರೀ|| ಕುಮಾರ ಸ್ವಾಮಿ ರಾಜಾರವರು ಪ್ರಚಂಡ ಬಹುಮತದಿಂದ ಆರಿಸಿಬಂದರು. ಅವರ ಪ್ರತಿಸ್ಪರ್ಧಿಗಳಾದ ಶ್ರೀ|| ಪಿಳ್ಳೇಯವರಿಗ ಒರೇ ೧೯೦ ಮತಗಳು ಬಿದ್ದದರಿಂದ ಅವರ ರೂ. ೫೦೦ರ ಠೇವು ಸರಕಾರ ಜಪ್ತಾಯಿತು.

.·.



ಡಾ|| ಹಳಕಾರ ಇವರ

ಕುಟುಂಬ ವೈದ್ಯ

ಎಂದರೆ—

ಹುಡುಗರು-ಮಕ್ಕಳು ಇದ್ದ ಮನೆಯಲ್ಲಿ ಆಗುವ ಸಾಮಾನ್ಯ ಬೇನೆಗಳಿಗೆ ತಾತ್ಕಾಲಿಕ ಔಷಧ ಪೂರೈಸುವ ಪೆಟ್ಟಿಗೆ.

ಜ್ವರ, ಕೆಮ್ಮು, ದಮ್ಮು, ವಾಯುವಿಕಾರ, ಅತಿಸಾರ, ಗ್ರಹಣಿ ಮೊದಲಾದ ರೋಗಗಳ ಮೇಲೆ ಅವಶ್ಯವುಳ್ಳ ಮದ್ದಿನ ಸಂಗ್ರಹವಿದೆ.

ಇರಸ್ಲಿದ ತಲೆ ನೋವು, ತಲೆಸೂಲ್ಲ, ಬಾಲಗ್ರಹ, ಹುಣ್ಣು, ಕಡಿದ ಘಾಯಗಳಿಗೆ ಮತ್ತು ಗಜಕರ್ಣ ಇವುಗಳಿಗೆ ಅವಶ್ಯವಿಲ್ಲ ಉತ್ಕೃಷ್ಟ ಗುಣಕಾರಿ ಮದ್ದುಗಳು ಈ ಪೆಟ್ಟಿಗೆಯಲ್ಲಿವೆ.

ಬೆಲೆ ರೂಪಾಯಿ ೩ ಮಾತ್ರ.

ಡಾ|| ಎಸ್. ಕೇ. ಶೆಟ್ಟಿ ಹಳಕಾರ,

ಎಲ್ ಎ ಎಮ್ ಎಸ್ ಮತ್ತು ಏ ಪ್ಲಿ, (ಮೈಸೂರ)

ಕುಮಟಾ. (ಉ ಕನ್ನಡ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!

ಪೋಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಕಂಪನಿ.

ಪೋಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ 'ಇಂಡಸ್ಟ್ರಿಯಲ್ ವಿಮಾ' ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಎಸೆಂಬ್ಲಿಯ ಅಧ್ಯಕ್ಷರಾಗಿರುವ ಸರ್ ಷಣ್ಮುಖಂ ಚೆಟ್ಟಿಯವರು ತಾವು ಸ್ಥಾನಭ್ರಷ್ಟರಾದರೆಂದು ರಾಜಿನಾಮೆ ಕೊಟ್ಟರಾಯಿತು. ರಾಜಿನಾಮೆಯನ್ನು ಕೊಡದೆ ಅವರು ತಮ್ಮ ಪದಕ್ಕೆ ಅಂಟಿಕೊಂಡು ಉಳಿದರೆ ಅವರಿಗೆ ಡಿಸೆಂಬರ ತಿಂಗಳ ಕೊನೆಯ ತನಕ ದರಮಹಾ ೪ ಸಾವಿರ ರೂಪಾಯಿ ಪಗಾರು ಸಿಗಲಿಕ್ಕೆ ಅಡ್ಡಿಯಿಲ್ಲವಂತೆ! ಪದಭ್ರಷ್ಟರಾದಾಗ್ಯೂ ಪಗಾರು ಕೊಳ್ಳುವದು ಯುಕ್ತವೇ? ಯಾತರ ಬಗ್ಗೆ ಈ ವೇತನವೆಂಬದೊಂದು ಗೂಢವೇ ಸರಿ!

***

ಪಶ್ಚಿಮ ಪಂಜಾಬ ವಿಭಾಗದ ಪರವಾಗಿ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಭಾಯಿ ಪರಮಾನಂದರವರು ಆರಿಸಿಬಂದಿರುತ್ತಾರೆ. ರಾಷ್ಟ್ರೀಯ ಸಭೆಯ ಉಮೇದ್ವಾರರಾಗಿದ್ದ ದಿವಾಣ ಚಮನಲಾಲರು ಸೋತಿರುವರು.

***

ಮೌಲಾನಾ ಶೌಕತ ಆಲ್ಲಿಯವರು ತಮ್ಮ ಪ್ರತಿಸ್ಪರ್ಧಿಗಳಾದ ಡಾ| ರಫೀಕ ಅಹಮ್ಮದಖಾನರನ್ನು ಸೋಲಿಸಿ ಆರಿಸಿಬಂದಿರುವರು.

***

ಮುಂಬಯಿ ಇಲಾಖೆಯಲ್ಲಿ ಚುನಾವಣೆಗಳು ಕಳೆದ ಬುಧವಾರ ನಡೆದವು. ಮತಗಳ ಎಣಿಕೆಯು ಬರುವ ಗುರುವಾರ ಆಗಿ, ಚುನಾವಣೆಯ ಪರಿಣಾಮವು ಅಂದೇ ಹೊರಬೀಳುವದು. ಆದಾಗ್ಯೂ ಈ ಯಾ ಕರ್ಹಾಡ ಅನುಭವದ ಮೇಲಿಂದ ಎಲ್ಲಕಡೆಯಲ್ಲಿ ಕಾಂಗ್ರೆಸ ಹುರಿಯಾಳುಗಳೇ ಆರಿಸಿಬರುವರೆಂದು ತೋರುತ್ತದೆ. ಗುಜರಾಥದಿಂದ ಶ್ರೀ| ಭುಲಾಭಾಯಿ ದೇಸಾಯಿಯವರು ಆರಿಸಿಬರುವದಂತೂ ಖಂಡಿತ. ಪ್ರತಿಸ್ಪರ್ಧಿಗಳಾದ ಮಿ| ಠಕ್ಕೆ ಸಾಯಿಯಾರವರ ಠೇವಿನ ರಕಮು ಜಪ್ತಾಗದಿದ್ದರೆ ಸಾಕು! ಮುಂಬಯಿಯಲ್ಲಿ ರಾಷ್ಟ್ರೀಯ ಪಕ್ಷದ ಶ್ರೀ| ಜಮನಾದಾಸ ಮೆಹತಾರವರಿಗೆ ವಿಶೇಷ ಮತಗಳೇನೂ ಬೀಳಲಿಲ್ಲ. ಸರ್ ಕಾವಸಜಿ ಜಹಾಂಗೀರರಿಗೆ ಪಾರ್ಸಿ ಜನರ ಮತಗಳು ಬಹಳ ಬಿದ್ದಿವೆ. ಅಧಿಕಾರಿಗಳೂ, ಯುರೋಪಿಯನ್ ವರ್ತಕರ ನೌಕರರೂ ಅವರಿಗೆ ಬೆಂಬಲ ಕೊಟ್ಟಿರುವರು. ಆದಾಗ್ಯೂ ಕಾಂಗ್ರೆಸ ಹುರಿಯಾಳುಗಳಾದ ಡಾ| ದೇಶಮುಖ ಮತ್ತು ಶ್ರೀ| ಕನ್ನೈಯಲಾಲ ಮುನಶಿಯವರೇ ಆರಿಸಿಬರುವರಾಗಿ ಒಪ್ಪಿರುವರ [illegible]ಯವಿದೆ.

***

ಇನ್ನು ನಮ್ಮ ಕರ್ನಾಟಕದಲ್ಲಿ ಶ್ರೀ| ಹೊಸಮನೆಯವರಿಗೇ ಬಹಳ ಮತಗಳು ಬಿದ್ದಿವೆಯೆಂದು ಅಲ್ಲಲ್ಲಿಯ ಸುದ್ದಿಗಳ ಮೇಲಿಂದ ತಿಳಿಯುತ್ತದೆ. ಬೆಳಗಾಂವ ಜಿಲ್ಹೆಯಲ್ಲಿ ಒಟ್ಟು ಹಾಕಿದ ಮತಗಳು ೮೫೪೬. ಅವುಗಳಲ್ಲಿ ೩೩೩೨ ಮತಗಳು ಕಾಂಗ್ರೆಸ ಪಕ್ಷಕ್ಕೆ ಬಿದ್ದಿವೆಯೆಂದು ತರ್ಕ. ವಿಜಾಪೂರ ಜಿಲ್ಹೆಯಲ್ಲಿ ಶ್ರೀ| ಹೊಸಮನೆಯವರಿಗೆ ೧೩೫೭, ರಾ| ಬ| ಪಾಟೀಲರಿಗೆ ೩೩೩ ಮತ್ತು ಶ್ರೀ| ಜೋಗರಾಯರಿಗೆ ೧೧೯ ಮತಗಳು ಬಿದ್ದಿರಬಹುದಂತೆ. ಧಾರವಾಡ ಜಿಲ್ಹೆಯಲ್ಲೂ, ಕಾರವಾರ ಜಿಲ್ಹೆಯಲ್ಲೂ ಶೇಕಡಾ ೭೫ ರಷ್ಟು ಮತಗಳು ಕಾಂಗ್ರೆಸ್ಸಿಗೆ ಬಿದ್ದಿವೆ. ರತ್ನಾಗಿರಿ ಜಿಲ್ಹೆಯಲ್ಲಿ ಶೇಕಡಾ ೪೦ ಕ್ಕೂ ಮಿಕ್ಕ ಮತಗಳೂ, ಕುಲಾಬಾ ಜಿಲ್ಹೆಯಲ್ಲಿ ಶೇಕಡಾ ೫೫ ಮತಗಳೂ ಶ್ರೀ| ಹೊಸಮನೆಯವರಿಗೆ ಬಿದ್ದಿವೆಯೆಂದು ತಿಳಿಯುತ್ತದೆ.

***

ಜಬಲಪೂರ ಮ್ಯುನಿಸಿಪಾಲಿಟಿಯ ಪ್ರಕರಣವು ಈ ವಾರದಲ್ಲಿ ಇನ್ನೂ ವಿಕೋಪಕ್ಕೆ ಮುಟ್ಟಿದೆ. ಸರಕಾರಿ ಹುಕುಮಿನಂತೆ ರಾ| ಬಿರೆಂಜಿಲಾಲ ವರ್ಮಾರವರಿಗೆ ಸೆಕ್ರೆಟರಿ ಜಾಗೆಯ ಚಾರ್ಜನ್ನು ವಹಿಸಿಕೊಡಲಿಕ್ಕೆ ಕಳೆದ ಮಂಗಳವಾರ ಇಬ್ಬರೂ ವ್ಹಾಯಿಸ-ಪ್ರೆಸಿಡೆಂಟರು ವರ್ಮಾರವರನ್ನು ಕರಕೊಂಡು ಮ್ಯುನಿಸಿಪಲ್ ಕಚೇರಿಗೆ ಬಂದರು. ಜತೆಯಲ್ಲಿ ಶಹರ ಮೆಜಿಸ್ಟ್ರೇಟರೂ, ಪೋಲೀಸರೂ ಬಂದಿದ್ದರು. ಸೆಕ್ರೆಟರಿ ಜಾಗೆಯನ್ನು ಖಾಲಿ ಮಾಡಿಕೊಡಲಿಕ್ಕೆ ಉಪಾಧ್ಯಕ್ಷರು ಅಪ್ಪಣೆ ಮಾಡಲಾಗಿ, ರಾ| ನಿತ್ಯೇಂದ್ರನಾಥ ಸೀಲರು ಅಧ್ಯಕ್ಷರ ಅಪ್ಪಣೆಯಾದನಕ ಜಾಗ ಬಿಟ್ಟುಕೊಡಬರುವದಿಲ್ಲವಾಗಿ ಉತ್ತರ ಕೊಟ್ಟರು. ಉಪಾಧ್ಯಕ್ಷರೂ, ಮೆಜಿಸ್ಟ್ರೇಟರೂ ಆಲೋಚನೆ ಮಾಡಿ, ಅಕ್ರಮ ಪ್ರವೇಶ ಮಾಡಿದ ಆರೋಪದ ಮೇಲೆ ರಾ| ಸೀಲರನ್ನು ಕೈದು ಮಾಡಿ ಕೊತವಾಲ ಕಚೇರಿಗೆ ಕಳಿಸಿಕೊಟ್ಟರು. ಮತ್ತು ರಾ| ವರ್ಮಾರವರನ್ನು ಸೆಕ್ರೆಟರಿ ಜಾಗೆಯಲ್ಲಿ ಪ್ರತಿಷ್ಠೆ ಮಾಡಿ, ಕಚೇರಿಯ ನೌಕರರೆಲ್ಲ ವರ್ಮಾರವರ ಅಪ್ಪಣೆಯಂತೆ ನಡೆಯಲಿಕ್ಕೆ ಹೇಳಿದರು. ಇಷ್ಟಾಗುವಷ್ಟರಲ್ಲಿ ಮ್ಯು| ಯ ಅಧ್ಯಕ್ಷರಾದ ಶ್ರೀ| ದ್ವಾರಕಾಪ್ರಸಾದ ಮಿಶ್ರರವರು ಬಂದು ಮುಟ್ಟಿದರು ಮತ್ತು ಮೆ ಬ್ಯಾಂಟರ ವರ್ತನೆಯಾ. ಕೃತಿಯು ಕ್ರಾಪತೀರ ಇರುವದಿಲ್ಲವಾಗಿ ಲೇಖಿ ಪ್ರತಿಷೇಧ ಮಾಡಿದರು ಮತ್ತು ಮೆಜಿಸ್ಟ್ರೇಟರು ಉತ್ತರ ಕೊಡಲಿಲ್ಲ. ಆಗ ಪೋಲೀಸರು ರಾ| ಸೀಲರವರನ್ನು ಸೆರೆಹಿಡಿದ ಬಗ್ಗೆ ನಿಷೇಧವೆಂತ ಮ್ಯುನಿಸಿಪಲ್ ಕಚೇರಿಯನ್ನೇ ಬಂದು ಮಾಡಿ ಮನೆಗೆ ಹೋದರು.

***

ಅತ್ತ ರಾ| ಸೀಲರವರು ಜಾಮೀನು ಕೊಟ್ಟು ಕೋತವಾಲಿಯಿಂದ ಬಿಡುಗಡೆ ಮಾಡಿಕೊಂಡರು. ಮರುದಿನ ಅಂದರೆ ಬುಧವಾರ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಕಚೇರಿಗೆ ಬಂದು ತಮ್ಮ ಕೆಲಸಕ್ಕೆ ಹತ್ತಿದರು. ತಾವು ಅಧ್ಯಕ್ಷರಿರುವ ತನಕ ರಾ| ವರ್ಮಾರವರನ್ನು ಸೆಕ್ರೆಟರಿಯಾಗಿ ಮನ್ನಿಸಲಿಕ್ಕಿಲ್ಲವೆಂದು ಅಧ್ಯಕ್ಷರು ಸ್ಪಷ್ಟವಾಗಿ ಆಡಿ ತೋರಿಸಿದರು. ಅಷ್ಟರಲ್ಲಿ ರಾ| ವರ್ಮಾರವರು ಬಂದರು. ಸಂಗಡ ಉಪಾಧ್ಯಕ್ಷರಾದ ಮಿ| ತಿವಾರಿ ಹಾದಿಯವರೂ, ಶಹರ ಮೆಜಿಸ್ಟ್ರೇಟರೂ, ಪೋಲೀಸ ಸುಪರಿಂಟೆಂಡೆಂಟರೂ, ದೊಡ್ಡ ಪೋಲೀಸ ದಳವೂ ಬಂದಿತ್ತು. ಅಧ್ಯಕ್ಷ ಶ್ರೀ| ಮಿಶ್ರರ ಅಪ್ಪಣೆಯನ್ನು ಕೇಳದೆ ವರ್ಮಾರವರು ಬೀಗವನ್ನು ಮುರಿದು ಸೆಕ್ರೆಟರಿಯ ಖುರ್ಚಿಯ ಮೇಲೆ ಹೋಗಿ ಕುಳಿತು ಸಂಜೆ ತನಕ ಅಲ್ಲೇ ಉಳಿದರು. ಸಾಯಂಕಾಲಕ್ಕೆ ರಾ| ವರ್ಮಾರವರು ಹೊರಟು ಹೋದ ಮೇಲೆ ಅಧ್ಯಕ್ಷರು ಸೆಕ್ರೆಟರಿಗಳ ಕೋಣೆಗೆ ಹೊಸ ಬೀಗ ಹಾಕಿ, ಕೈಕೆಳಗಿನ ಜನರಿಗೆ ವರ್ಮಾರವರ ಹುಕುಮನ್ನು ಮನ್ನಿಸಬಾರದಾಗಿ ಕಟ್ಟಪ್ಪಣೆ ಕೊಟ್ಟು ತೆರಳಿಹೋದರು. ಮುಂದೆ ಏನಾಗುತ್ತದೆಂದು ನೋಡುವಾ.

***

ಬಾಯುವೆಬಂಗವು ಹಿಂತೆಗೆದುಕೊಳ್ಳಲ್ಪಟ್ಟ ಕೂಡಲೆ ಪಂ| ಜವಾಹಿರಲಾಲ, ಶ್ರೀ| ಶರಚ್ಚಂದ್ರ ಬೋಸ ಮೊದಲಾದ ಕೈದಿಗಳನ್ನು ಸರಕಾರವು ಬಿಡುಗಡೆ ಮಾಡಬೇಕಿತ್ತು. ಹಾಗೆ ಮಾಡಲಿಕ್ಕೆ ಕವಲ ವಚನ ಒಪ್ಪಿರಿದ್ದರು. ಆದರೆ ಸರಕಾರವು ಇನ್ನೂ ಅವರನ್ನು ಬಿಟ್ಟಿಲ್ಲ. ಈ ಕುರಿತು ದೀನ ಬಂಧು ಆಂಡ್ರ್ಯೂಸರವರು ಭಾರತ ಮಂತ್ರಿಗಳನ್ನು ಕಂಡು, ರಾಜಬಂದಿಗಳ ಬಿಡುಗಡೆ ಮಾಡುವದು ಅವಶ್ಯವೆಂದು ಅವರಿಗೆ ತಿಳಿಸಿಹೇಳಿದರು. ಅದಕ್ಕೆ ಭಾರತ ಮಂತ್ರಿಗಳು ಈಗಿನ ಪರಿಸ್ಥಿತಿಯಲ್ಲಿ ಬಿಡುಗಡೆ ಮಾಡುವದು ಸಾಧ್ಯವಿಲ್ಲೆಂತಲೂ, ಬಿಡುಗಡೆಯು ಸುರಕ್ಷಿತವೆಂದು ತೋರುತ್ತಲೇ ಅವರು ಬಿಡುಗಡೆ ಹೊಂದುವರೆಂತಲೂ ಉತ್ತರ ಕೊಟ್ಟರಾಗಿ ತಿಳಿಯುತ್ತದೆ.

***

“ಡೇಲಿ ಗ್ಯಾಝೆಟ್” ಪತ್ರಿಕೆಯಲ್ಲಿ ಇನ್ನೊಂದು ಸುದ್ದಿ. ಆ ಪತ್ರಿಕೆಯ ದಿಲ್ಲಿ ಸುದ್ದಿಗಾರನು ತಿಳಿಸುವದೇನಂದರೆ – ಪಂಡಿತ ಜವಾಹಿರಲಾಲರನ್ನು ಜನವರಿ ತಿಂಗಳೊಳಗಾಗಿ ಬಿಡುಗಡೆ ಮಾಡುವ ಆಲೋಚನೆ ನಡೆದಿರುತ್ತದಾಗಿ ಅಧಿಕಾರಿಗಳ ಮಾತು-ಕತೆಗಳಿಂದ ತಿಳಿದು ಬರುತ್ತದೆ. ಹಿಂದುಸ್ಥಾನ ಸರಕಾರದ ಗೃಹಮಂತ್ರಿಗಳಾಗಿದ್ದ ಸರ್ ಹೆರಿ ಹೇಗರವರು ಡಿಸೆಂಬರ ತಿಂಗಳ ೧-೩ ನೇ ವಾರದಲ್ಲಿ ಸಂಯುಕ್ತ ಪ್ರಾಂತಗಳ ಗವ್ಹರ್ನರರ ಸೂತ್ರ ವಹಿಸುವರು. ಅನಂತರ ಅವರು ಯಾವತ್ತೂ ಪರಿಸ್ಥಿತಿಯನ್ನು ಪರಾಂಬರಿಸಿ ಸಾರ್ವಜನಿಕ ಶಾಂತತೆಗೆ ಪಂಡಿತರ ಬಿಡುಗಡೆಯಿಂದ ಭಂಗ ಬರಲಿಕ್ಕಿಲ್ಲವೆಂದು ಕಂಡರೆ, ತವರು ಅವರ ಬಿಡುಗಡೆಯ ಬಗ್ಗೆ ಹಿಂದುಸ್ಥಾನ ಸರಕಾರಕ್ಕೆ ಶಿಫಾರಸು ಮಾಡುವರು. ಸರ್ ಹೇಗರು ಡಿಸೆಂಬರ ತಿಂಗಳ ಕೊನೆಗೆ ದಿಲ್ಲಿಗೆ ಬರುವವರಿದ್ದಾರೆ. ಆಗ ಈ ಪ್ರಶ್ನೆಯು ನಿರ್ಣಯವಾಗುವದು” ಎಂದು. ಪಂಡಿತಜಿಯವರ ಮುಕ್ತತೆಯು ಸರ್ ಹೆರಿ ಹೇಗರವರನ್ನು ಅವಲಂಬಿಸಿದೆ.

***

ಈ ಸಲದ ಚುನಾವಣೆಯಲ್ಲಿ ದಿಲ್ಲಿಯ ಸರಕಾರಿ ಅಧಿಕಾರಿಗಳೆಲ್ಲರೂ ಮತ ಕೊಡುವ ಸ್ಥಳಕ್ಕೆ ಹೋಗಿ ಮತ ಕೊಟ್ಟರು. ನ್ಯಾಯಸರಾಯರ ಕಾರ್ಯಕಾರಿ ಮಂಡಳದ ಸಭಾಸದರೂ, ಸೇನಾಪತಿ ಸಾಹೇಬರೂ, ಆರ್ಯ ಸೆಕ್ರೆಟರಿಗಳೂ ಕೂಡ ಮತ ಹಾಕಿ ಹೋದರು. ಈ ಹಿಂದಿನ ಚುನಾವಣೆಗಳಲ್ಲಿ ಅವರು ಮತ ಕೊಟ್ಟಿದ್ದಿಲ್ಲವಂತೆ. ವಿಶೇಷ ಕೌತುಕದ ಸಂಗತಿಯೆಂದರೆ ಲಾರ್ಡ ವಿಲಿಂಗ್ಡನ್‌ರವರು ದಿಲ್ಲಿಯ ನಾಗರಿಕರಿದ್ದು ಮತಾಧಿಕಾರಕ್ಕೆ ಪಾತ್ರರಿದ್ದು ಕೂಡ ಅವರ ಹೆಸರು ಮತದಾರರ ಯಾದಿಯಲ್ಲಿ ದಾಖಲಾಗಲಿಲ್ಲ! ಮತದಾರರ ಯಾದಿಗಳನ್ನು ಎಷ್ಟು ಜಾಗ್ರತೆ (?) ಯಿಂದ ತಯಾರಿಸಿದ್ದಾರೆಂದು ಇದರ ಮೇಲಿಂದ ಸ್ಪಷ್ಟವಾಗುತ್ತದೆ.

ಜಾಹೀರ ನೋಟೀಸು.

ನನ್ನ ಹಿರೇ ಮಗ [illegible]ರಾಯನು ಇತ್ತಲಾಗಿ ಕೆಟ್ಟ ಜನರ ಸಹವಾಸದಲ್ಲಿ ಸೇರಿ, ಶಾಲೆಯಲ್ಲಿ ಕಲಿಯುವದನ್ನು ಬಿಟ್ಟು ತಲೆಕೆಟ್ಟು ಮನವಮಾನೆ ತಿರುಗುತ್ತಲಿದ್ದಾನೆ ಮತ್ತು ಮನೆಯ ಬದುಕು ರೂ ೨೦೦ ಮಟ್ಟಿಗೆ ಹಾಳು ಮಾಡಿದನು. ಕಾರಣ ಈತನ ಪೆಸರಲ್ಲಿರುವ ವ ನನ್ನ ಹೆಸರಲ್ಲಿರುವ ಅವಿಭಕ್ತ ಕುಟುಂಬದ ಯಾವದೇ ಚರ-ಸ್ಥಿರಸೊತ್ತಿಗೆ ಹಕ್ಕುದಾರನಲ್ಲ. ಕದಾಚಿತ್ ಯಾರಾದರೂ ಈತನಿಂದ ಏನಾದರೂ ಹಕ್ಕು ಮಾಡಿಕೊಂಡರೆ ಸಿಂಧುವಾಗಲಾರದು. ತಿಳಿಯುವದು. ತಾರೀಖು ೧೭—೧೧—೧೯೩೪

ನಾರಾಯಣ ರಾಮರಾವ ಧಾರೇಶ್ವರ,
ಮು|| ಧಾರೇಶ್ವರ.

ಅಲ್ಲಲ್ಲಿ ಇಷ್ಟಿಷ್ಟು!

ಕರ್ನಾಟಕದ ಚುನಾವಣೆಯ ನಿಕಾಲೆಯು ಮೊನ್ನೆ ಗುರುವಾರ ದಿನ ಬೆಳಗಾಗುವದರೊಳಗೆ ದಕ್ಷಿಣ ಭಾಗದ ಕಮಿಶನರರ ಕಚೇರಿಯಲ್ಲಿ ಆಯಿತು. ರಾಷ್ಟ್ರೀಯ ಸಭೆಯ ಹುರಿಯಾಳುಗಳಾದ ಡಾ|| ಭಾ|| ಸಿದ್ಧಪ್ಪ ಕರಿಯಪ್ಪ ಹೊಸಮನಿಯವರಿಗೆ [illegible] ಮತಗಳು, ರಾ| ವಿಶ್ವನಾಥರಾವ ಜೋಗಳಿಗೆ [illegible] ಮತಗಳು ಮತ್ತು ರಾ| ಬ| ಬಸನಗೌಡಾ ಪಾಟೀಲರಿಗೆ [illegible] ಮತಗಳು ಬಿದ್ದಿದ್ದವು. ಆಗಾಗಿ ಡಾ| ಭಾ| ಹೊಸಮನಿಯವರು ಅತಿಪ್ರಚಂಡ ಬಹುಮತದಿಂದ ಅಸೆಂಬ್ಲಿಗೆ ಆರಿಸಿ ಬಂದಿರುತ್ತಾರೆ. ದಕ್ಷಿಣ ಭಾಗದ ಒಟ್ಟು ಮತದಾರರ ಸಂಖ್ಯೆ [illegible]. ಮತ ಕೊಟ್ಟವರ [illegible]. ಅಂದರೆ ಶೇಕಡಾ [illegible] ಮತದಾರರು ಮತ ಪ್ರದಾನ ಮಾಡಿದವರು. ಅಸ್ಪೃಶ್ಯ? ಶೇಕಡಾ [illegible]ಕ್ಕಿಂತ ಹೆಚ್ಚು ಮತದಾರರು ಡಾ. ಭಾ. ಹೊಸಮನಿಯವರಿಗೆ ಮತಕೊಟ್ಟಂತಾಯಿತು! ರಾಷ್ಟ್ರೀಯ ಸಭೆಯು ಕರ್ನಾಟಕದಲ್ಲಿ ಜಯಶಾಲಿಯಾದಬಗ್ಗೆ ಇಡೀ ಕರ್ನಾಟಕವು ಅತ್ಯಾನಂದದಲ್ಲಿ ತೇಲಾಡುತ್ತಿದೆ.

*

ಆಯಾ ಜಿಲ್ಲೆಯೊಳಗಿನ ಮತಪತ್ರಗಳನ್ನು ಹಾಕಿದ ಪೆಟ್ಟಿಗೆಗಳನ್ನು ತೆರೆದು, ಮತಪತ್ರಗಳನ್ನೆಲ್ಲ ಒಟ್ಟುಗೂಡಿಸಿ ಮತಗಳ ಎಣಿಕೆಯಾಯಿತು. ಆದ್ದರಿಂದ ಆಯಾ ಹುರಿಯಾಳುಗಳಿಗೆ ಆಯಾ ಜಿಲ್ಲೆಯಲ್ಲಿ ಎಷ್ಟೆಷ್ಟು ಮತಗಳು ದೊರೆತವೆಂದು ತಿಳಿಯಲಿಕ್ಕೆ ಸಾಧ್ಯವಾಗಲಿಲ್ಲ. ಮತಗಳ ಎಣಿಕೆಯ ಕೆಲಸಕ್ಕೆ ೪ ಕಾರಕೂನರನ್ನು ನೇಮಿಸಿದ್ದರೆಂದು ತಿಳಿದುಬಂದಿದೆ.

**

ವಿಜಯದ ವಾರ್ತೆ ತಿಳಿದ ಕೂಡಲೇ ಡಾ. ಭಾ. ಹೊಸಮನಿಯವರು ಈ ಕೆಳಗಿನಂತ ಸಂದೇಶವನ್ನು ಕಳಿಸಿದ್ದಾರೆ:" ಇದು ವ್ಯಕ್ತಿಯ ವಿಜಯವಲ್ಲ, ರಾಷ್ಟ್ರದ ವಿಜಯವು. ಇತರ ಪ್ರಾಂತದವರಂತೆ ಕರ್ನಾಟಕದ ಜನತೆಯು ಕೂಡ ರಾಷ್ಟ್ರನಿಷ್ಠೆಯನ್ನೂ, ಜಾತಿ ವೈಷಮ್ಯವನ್ನೂ ತೊರೆದು, ಜಾತಿಭೇದಗಳನ್ನೂ ಮರೆತು, ಶುದ್ಧ ರಾಷ್ಟ್ರೀಯ ಭಾವನೆಯಿಂದ ರಾಷ್ಟ್ರೀಯ ಸಭೆಯಲ್ಲಿ ಅನನ್ಯವಿಶ್ವಾಸವಿಟ್ಟದ್ದು ನೋಡಿ ನನ್ನ ಅಂತಃಕರಣವು ಹರ್ಷಭರಿತವಾಗಿದೆ. ಜನರು ನನ್ನ ಅಲ್ಪ ಸೇವೆಯನ್ನು ಸವಿಮಾಡಿಕೊಳ್ಳಲಿ! ನನ್ನ ಬಗ್ಗೆ ದುಡಿದ ಯಾವತ್ತೂ ಜ್ಞಾತ-ಅಜ್ಞಾತ ಕಾರ್ಯಕರ್ತರಿಗೆ ನನ್ನ ವಂದನೆಗಳು "

**

ಮುಂಬಯಿಯ ನಗರದೊಳಗಿನ ಎಸೆಂಬ್ಲಿ ಚುನಾವಣೆಯ ಮತಗಳ ಎಣಿಕೆಯೂ ಸಹ ಗುರುವಾರವೇ ಆಯಿತು. [illegible] ಜನರು ಮತ ಕೊಟ್ಟರು. ಡಾ| ಜಿ. ವಿ. ದೇಶಮುಖ ಇವರಿಗೆ [illegible] ಮತಗಳು, ಸರ ಕಾವಸಜಿಯವರಿಗೆ [illegible], ಶ್ರೀ| 'ಕನ್ಹಯ ಲಾಲ ಮುನಶಿಯವರಿಗೆ [illegible] ಮತ್ತು ಶ್ರೀ| ಓಮನಾನಾಸ ಮೊಹತಾರವರಿಗೆ [illegible] ಮತಗಳು ಬಿದ್ದಿದ್ದವು. ಮೊದಲಿನ ಇಬ್ಬರು ಆರಿಸಿಬಂದರು. ರಾಷ್ಟ್ರೀಯ ಸಭೆಯ ಹುರಿಯಾಳುಗಳಿಗೆ ಮತ ಹಾಕಿದ್ದ ಮತದಾರರು ತಮ್ಮ ಮತಗಳನ್ನು ಇಬ್ಬರಲ್ಲೂ ಸರಿಯಾಗಿ ಹಂಚಿಹಾಕಿದ್ದರೆ ಇಬ್ಬರೂ ಒದುತ್ತಿದ್ದರೆಂದು ಮೇಲಿನ ಸಂಖ್ಯೆಗಳ ಮೇಲಿಂದ ಸ್ಪಷ್ಟವಾಗುತ್ತದೆ. ಆದೇ ಮೇರೆಗೆ ರಾಷ್ಟ್ರೀಯ ಪಕ್ಷದ ಜಮುನಾದಾಸರು ಗೊಂದಲಪಡಿಸದಿದ್ದರೆ ಅವರಿಗೆ ಬಿದ್ದ ಮತಗಳು ರಾಷ್ಟ್ರೀಯ ಸಭೆಯವರಿಗೆ ಬೀಳುತ್ತಿದ್ದವು. ಇದಂತಿರಲಿ. ಮತದಾನ ಮಾಡಿದವರ ಶೇಕಡಾ [illegible]ಕ್ಕಿಂತ ಹೆಚ್ಚು ಮತದಾರರು ರಾಷ್ಟ್ರೀಯ ಸಭೆಯವರಿಗೇ ಮತ ಹಾಕಿ ಮುಂಬಯಿಯಲ್ಲಿ ಒಹುಜನ ಮತವು ರಾಷ್ಟ್ರೀಯ ಸಭೆಗೆ ಅಂಕಿತವಾಗಿರುತ್ತವೆಂದು ತೋರಿಸಿಕೊಟ್ಟಿದ್ದಾರೆ.

**

ನಾಗಪೂರ ವಿಭಾಗದ ಪರವಾಗಿ ರಾಷ್ಟ್ರೀಯ ಸಭೆಯವರು ಶ್ರೀ| ಎಮ್. ಎಸ್. ಅಭ್ಯಂಕರ ಇವರನ್ನು ನಿಲ್ಲಿಸಿದ್ದರು. ರಾಷ್ಟ್ರೀಯ ಪಕ್ಷದ ಹಾಗೂ ಹಿಂದೂ ಮಹಾಸಭೆಯ ಪರವಾಗಿ ಡಾ. ಮುಂಜೇಯವರು ನಿಂತಿದ್ದರು. ನಾಗಪೂರ ಭಾಗವು ಮಹಾಸಭೆಯ ಹಾಗೂ ಡಾ| ಮುಂಜೆಯವರ ಅನುಯಾಯಿಗಳ ಕೇಂದ್ರವೆಂದು ಜನರ ತಿಳುವಳಿಕೆಯಿತ್ತು. ಆದರೆ ಚುನಾವಣೆಯಲ್ಲಿ ಶ್ರೀ| ಅಭ್ಯಂಕರರಿಗೆ [illegible] ಮತ್ತು ಡಾ| ಮುಂಜೆಯವರಿಗೆ [illegible] ಮತಗಳು ಬಿದ್ದು ಅಭ್ಯಂಕರರು ಆರಿಸಿಬಂದರು. ಡಾಕ್ಟರ ಸಾಹೇಬರ ಪರಾಭವವಾಯಿತು.

**

ಒಂದೇ ಮಧ್ಯ ಪ್ರಾಂತದ ಪರವಾಗಿ ಕೊಂಗ್ರೆಸ ಹುರಿಯಾಳುಗಳಾದ ಶೇಟ ಗೋವಿಂದ ದಾಸ ಮತ್ತು ಶ್ರೀ| ಘನಶ್ಯಾಮ ಸಿಂಗ ಗುಪ್ತಾ ಇವರು ಆರಿಸಿಬಂದಿದ್ದಾರೆ. ಪ್ರತಿಸ್ಪರ್ಧಿಗಳಾದ ಸರ್ ಹರಿಸಿಂಗ ಗೌರರು ಸೋತು ಹೋದರು.

**

ಮದ್ರಾಸ ಇಲಾಖೆಯಿಂದ ಶ್ರೀ| ವ್ಹಿ. ವ್ಹಿ. ಗಿರಿ, ಡಿ ಕ್ರೂಡ ರಾಜನ್, ಮುಥುಲಿಂಗ ಮುದಲಿಯಾರ, ಅನಂತಶಯನ ಅಯ್ಯಂಗಾರ, ಕುಮಾರಸ್ವಾಮಿ ರಾಜಾ, ಎನ್. ಜಿ. ರಂಗಾ, ಅವಿನಾಶಲಿಂಗ ಚೆಟ್ಟಿ, ಕೆ. ನಾಗೇಶ್ವರರಾವ ಮತ್ತು ಸ್ಯಾಮ್ಯುಯೆಲ್ ಆರಾನ ಇವರು ರಾಷ್ಟ್ರೀಯ ಸಭೆಯ ಹುರಿಯಾಳುಗಳಾಗಿ ನಿಂತವರು ಜಯಶಾಲಿಗಳಾಗಿರುವರು. ಮದ್ರಾಸ ಪ್ರಾಂತದಲ್ಲಿ ರಾಷ್ಟ್ರೀಯ ಸಭೆಯವರು ೧೧ ಜನರನ್ನು ಚುನಾವಣೆಗೆ ನಿಲ್ಲಿಸಿದ್ದರು. ಅಷ್ಟೂ ಜನರು ಪ್ರಚಂಡ ಬಹುಮತ ಸಿಕ್ಕಿ ಆರಿಸಿ ಬಂದಿರುತ್ತಾರೆ!! ಹಿಂದು ಮತದಾರರ ಪ್ರಾಬಲ್ಯವಿರುವ ಪಶ್ಚಿಮ ಕರಾವಳಿಯವರು ಶ್ರೀ| ಪ್ರಭಾಕರ ಥಂಪನ್ನರಿಗೆ ಸಿಕ್ಕ ಮತಗಳ ಆರು ಪಟ್ಟು ಮತಗಳನ್ನು ಕೊಟ್ಟು ಕ್ರಿಶ್ಚನ್ನ ಮತದ ಶ್ರೀ| ಆರಾನರನ್ನು ಆರಿಸಿದ್ದು ಪ್ರಶಂಸನೀಯವಿದೆ!

**

ಬಿಹಾರದಿಂದ ಶ್ರೀ| ಸತ್ಯನಾರಾಯಣ ಸಿಂಗ, ಬಿ. ದಾಸ, ನೀಲಕಂಠ ದಾಸ, ಶ್ರೀ| ಕೃಷ್ಣಸಿಂಹ ಪಗ್ಗೆರೆ ೭ ರಾಷ್ಟ್ರೀಯ ಸಭೆಯ ಹುರಿಯಾಳುಗಳು ಆರಿಸಿಬಂದಿದ್ದಾರೆ. ಅಂತು ೮ ಸ್ಥಳಗಳ ಬಗ್ಗೆ ರಾಷ್ಟ್ರೀಯ ಸಭೆಯು ಹೋರಾಟ ನಡಿಸಿತ್ತು. ಈತನಕ ೭ ಸ್ಥಳಗಳಲ್ಲಿ ಜಯ ಸಿಕ್ಕಿದೆ. ಒಂದು ಸ್ಥಳದ ಪರಿಣಾಮವು ಈ ವಾರದಲ್ಲಿ ಪ್ರಕಟವಾಗುವದು.

**

ಗಡಿನಾಡು "ಗಡಿನಾಡಿನ ಗಾಂಧಿ"ಯೆಂದು ಕರೆಯಲ್ಪಡುವ ಖಾನ ಅಬದುಲ ಗಫ್ಫರಖಾನರ ತಮ್ಮಂದಿರಾದ ಡಾ| ಖಾನ ಸಾಹೇಬರನ್ನು ಆರಿಸಿಕೊಟ್ಟಿದೆ. ಖಾನ ಸಾಹೇಬರೂ ಅಬದುಲ ಗಫ್ಫರಖಾನರೂ ಈಗ "ವನವಾಸ" ಅನುಭವಿಸುತ್ತಿರುವರು. ಅವರಿಗೆ ತಮ್ಮ ನಾಡಿಗೆ ಹೋಗಲು ಪ್ರತಿಬಂಧವಿದೆ. ಖಾನ ಸಾಹೇಬರ ಗೈರ ಹಾಜರಿಯಲ್ಲಿ ಕೂಡ ಅವರಿಗೆ ತಮ್ಮ ಸಂಗಡಕ್ಕೆ ಬಂದ ಪ್ರತಿಸ್ಪರ್ಧಿಗಿಂತ [illegible] ಮತಗಳು ಹೆಚ್ಚು ಬಿದ್ದಿವೆ!

**

ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೆ ಕೊಲ್ಹಾಪೂರ ಮಹಾರಾಜರು ೧ ಲಕ್ಷ ಮತ್ತು ಸಾವಂತವಾಡಿಯ ಸಂಸ್ಥಾನಿಕರು ೧೦ ಸಾವಿರ ರೂಪಾಯಿಗಳ ದಾನ ಮಾಡಿರುತ್ತಾರೆ.

**

'ಕಿರ್ಲೋಸ್ಕರ' ಸಂದರೆ- ಶ್ರೇಷ್ಠತೆ.



ಕಿರ್ಲೋಸ್ಕರ ಕಂಪನಿಯ ನೆಲಗಡ್ಲೆ ಸುಲಿಯುವ ಯಂತ್ರ ಕಟ್ಟೆದ್ದಲ್ಲಿ ಒಳ್ಳೆ ಲಾಭ ಸಿಗುತ್ತದೆ. ಅದರಿಂದ ಖರ್ಚು ಕಡಿಮೆ ಬಿದ್ದು ಕೆಲಸವು ಹೆಚ್ಚಾಗುತ್ತದೆ. ಯಂತ್ರಶಾಸ್ತ್ರ ತಜ್ಞರು ಇವುಗಳನ್ನು ತಯಾರಿಸಿದ್ದು ಇವುಗಳ ಬಗ್ಗೆ ಎಲ್ಲರಿಗೂ ಸಮಾಧಾನವಾಗಿದೆ. ಇವನ್ನು ಕೈಯಿಂದ ನಡಿಸಬಹುದು; ಇಂಜಿನ ಗೊಂಡಲೂ ನಡಿಸಬಹುದು.

ಪತ್ರ ಬರಕೊಂಡಲ್ಲಿ ಸಚಿತ್ರ ಕೆಟಲಾಗು ಕಳಿಸಲ್ಪಡುವದು.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಜಿಲ್ಹಾ- ಸಾತಾರಾ.)

ಜೊಯಿಂಟ ಪಾರ್ಲಿಮೆಂಟರಿ ಸಿಲೆಕ್ಟ ಕಮಿಟಿಯ ವರದಿ.

ಅತ್ಯಂತ ಪ್ರತಿಗಾಮಿ ಸೂಚನೆಗಳು.

[ಶ್ವೇತ ಪತ್ರಿಕೆಯನ್ನು ಪರೀಕ್ಷಿಸಿ ಭಾವೀ ಹಿಂದೀ ರಾಜ್ಯಘಟನೆಯ ಬಗ್ಗೆ ಯುಕ್ತ ಕಂಡ ಯೋಜನೆಯನ್ನು ಸೂಚಿಸಲಿಕ್ಕೆ ಬ್ರಿಟಿಶ ಪಾರ್ಲಿಮೆಂಟಿನವರು ಜೊಯಿಂಟ ಸಿಲೆಕ್ಟ ಕಮಿಟಿಯನ್ನು ನೇಮಿಸಿದ್ದು ವಾಚಕರು ಬಲ್ಲರು. ಕಮಿಟಿಯವರು ೧|| ವರ್ಷದ ತನಕ ದುಡಿದು ತಮ್ಮ ವರದಿಯನ್ನು ತಯಾರಿಸಿ ೧|| ತಿಂಗಳ ಹಿಂದೆ ಪಾರ್ಲಿಮೆಂಟಿಗೆ ಸಾದರ ಮಾಡಿದರು. ಅದು ನೊನ್ನೆ ಗುರುವಾರ ಪ್ರಸಿದ್ಧವಾಯಿತು. ಕಮಿಟಿಯ ವರದಿಯು ಬಹು ದೊಡ್ಡದಿರುತ್ತದೆ. ಅದರ ಸಾರಾಂಶ ಈ ಕೆಳಗೆ ಕೊಟ್ಟಿದೆ]

ಕಮಿಟಿಯವರು ತಮ್ಮ ವರದಿಯ ಪ್ರಾಸ್ತಾವಿಕ ಭಾಗದಲ್ಲಿ ಹಲವು ರಾಜ್ಯಘಟನೆಯ ಮೂಲ ತತ್ವಗಳ ವಿವೇಚನೆಯನ್ನು ಮಾಡಿರುತ್ತಾರೆ. ಯಾವದೊಂದು ಜನಾಂಗದೊಳಗಿನ ಅಶಿಕ್ಷಿತ ವರ್ಗದ ಸ್ಥಿತಿ-ಗತಿಯ ಮೇಲಿಂದ ಇಡೀ ಜನಾಂಗದ ರಾಜಕೀಯ ಜಾಗೃತಿಯನ್ನು ಅಳೆಯುವದು ಮೂರ್ಖತನವೆಂದು ಕಮಿಟಿಯ ಅಭಿಪ್ರಾಯ. ಹಿಂದೀಯರ ಆಕಾಂಕ್ಷೆಗಳನ್ನು ಅರಿತುಕೊಂಡಷ್ಟಕ್ಕೆ ಹಿಂದುಸ್ಥಾನದ ಸಮಸ್ಯೆಯನ್ನು ಬಿಡಿಸುವದು ಕಠಿಣವಾಗುತ್ತದೆಂತಲೂ ಕಮಿಟಿಯ ಮತವಿದೆ.

ಬಂಧನಗಳು ಅವಶ್ಯ.

ಹಿಂದುಸ್ಥಾನದಲ್ಲಿ ಪಾರ್ಲಿಮೆಂಟರಿ ಪದ್ಧತಿಯ ರಾಜ್ಯವು ಸರಿಯಾಗಿ ಸಾಗಬೇಕಾದರೆ ರಾಜ್ಯಘಟನೆಯಲ್ಲೇ ಕೆಲವೊಂದು ಸಂರಕ್ಷಕ ಬಂಧನಗಳು ಏರ್ಪಡು ಮಾಡುವದು ಅವಶ್ಯವಿದೆ. ಬ್ರಿಟಿಶ ರಾಜ್ಯಘಟನೆಯಲ್ಲಿ ಇಂಥ ಕಟ್ಟುಗಳಿಲ್ಲವೆಂಬುದು ನಿಜ. ಆದರೆ ಆ ದೇಶದೊಳಗಿನ ಪದ್ಧತಿ-ಪರಂಪರೆಗಳು ಸಂರಕ್ಷಕ ಬಂಧನಗಳಂತೇ ಕಾರ್ಯ ಮಾಡುತ್ತವೆ. ಹಿಂದುಸ್ಥಾನದ ರಾಜ್ಯಪದ್ಧತಿಯು ಇಂಗ್ಲಂಡದಿಂದ ಭಿನ್ನವಾದ ಮಾರ್ಗದಿಂದ ಪ್ರಗತಿ ಹೊಂದುವ ಸಂಭವವುಂಟು.

ಪ್ರಾಂತಿಕ ಸ್ವಾಯತ್ತತೆ

ಹಿಂದುಸ್ಥಾನದ ಹೊಸ ರಾಜ್ಯಘಟನೆಯ ಕಟ್ಟಡವನ್ನು ಪ್ರಾಂತಿಕ ಸ್ವಾಯತ್ತತೆಯ ತಳಹದಿಯ ಮೇಲೆಯೇ ಕಟ್ಟಬೇಕೆಂದು ಕಮಿಟಿಯ ಸೂಚನೆ. ಪ್ರಸ್ತುತಕ್ಕೆ ಹಿಂದುಸ್ಥಾನದಲ್ಲಿ ಗವ್ಹರ್ನರರಿದ್ದ ೧೧ ಪ್ರಾಂತಗಳವೆ. ಆ ಪೈಕಿ ಬ್ರಹ್ಮದೇಶವು ಈ ಮುಂದೆ ಸ್ವತಂತ್ರವಾಗುವದು. ಸಿಂಧ ಮತ್ತು ಓರಿಸಾ ಪ್ರಾಂತಗಳನ್ನು ಸ್ವತಂತ್ರ ಪ್ರಾಂತಗಳನ್ನಾಗಿ ಮಾಡಬೇಕಾಗಿ ಕಮಿಟಿಯವರು ಶಿಫಾರಸು ಮಾಡಿರುತ್ತಾರೆ. ಪ್ರಾಂತಾಧಿಪರ ವಿಶೇಷ ಜವಾಬದಾರಿಯ ಅಧಿಕಾರಗಳು ರಾಜ್ಯಘಟನೆಯಲ್ಲೇ ಸಮಾವಿಷ್ಟವಾಗಿರಬೇಕಾಗಿ ಕಮಿಟಿಯ ಅಭಿಪ್ರಾಯ. ಈ ಜವಾಬದಾರಿಗಳ ಸ್ಪಷ್ಟ ವ್ಯಾಖ್ಯೆ ಮಾಡುವದು ಅವಶ್ಯವಿಲ್ಲ; ಸರ್ವಸಾಧಾರಣ ಸ್ವರೂಪ ಕೊಟ್ಟರೆ ಸಾಕು; ಗವ್ಹರ್ನರರ ಜವಾಬದಾರಿಗಳು ಯಾವ ತರದ್ದಾಗಿರಬೇಕೆಂದು ಶ್ವೇತ ಪತ್ರಿಕೆಯಲ್ಲಿ ಸ್ಪಷ್ಟ ಉಲ್ಲೇಖವಿದೆ. ವರ್‍ಹಾಡ ಪ್ರಾಂತವು ಮಧ್ಯ ಪ್ರಾಂತಕ್ಕೇ ಜೋಡಿಸಲ್ಪಡುವದು. ಮಧ್ಯಪ್ರಾಂತದ ಗವ್ಹರ್ನರರು ವರ್‍ಹಾಡದ ಹುಟ್ಟುವಳಿಯ ಯೋಗ್ಯ ಭಾಗವನ್ನು ವರ್‍ಹಾಡದ ಬಗ್ಗೆ ವೆಚ್ಚ ಮಾಡುವ ವ್ಯವಸ್ಥೆ ಮಾಡತಕ್ಕದ್ದು.

ಕಾಯಿದೆ ಮತ್ತು ಸುವ್ಯವಸ್ಥೆ.

ಕಾಯಿದೆ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಪ್ರಾಮಾಣಿಕ ನ್ಯಾಯದಾನ ಮಾಡುವದು ರಾಜ್ಯಕಾರಬಾರದ ಮುಖ್ಯಕೆಲಸವು. ಇದರ ಹೊಣೆಯು ಅಧಿಕಾರ ವರ್ಗದ ಮೇಲೆ ಇದ್ದು ಅದರ ಪಾಲು ಕಾನೂನು ಮಂಡಳಗಳಿಗೆ ಕೊಡಲಾಗದು. ಈ ವಿಷಯದಲ್ಲಿ ಕಾರ್ಯಕಾರಿ ಮಂಡಳವು ಸ್ವತಂತ್ರವಿರಬೇಕಾಗಿ ರಾಜ್ಯ ಘಟನೆಯಲ್ಲಿ ಸ್ಪಷ್ಟ ಉಲ್ಲೇಖವಿರಬೇಕು.

ಸಂಯುಕ್ತ ರಾಜ್ಯಘಟನೆ

ಅಖಿಲ ಭಾರತ ಸಂಯುಕ್ತ ರಾಜ್ಯಯೋಜನೆಯ ವಿಚಾರವು ಕಮಿಟಿಗೆ ಸಮ್ಮತವಿದೆ. ಪ್ರಾಂತಿಕ ಸ್ವಾಯತ್ತತೆಯು ಪೂರ್ಣವಾದ ಮೇಲೆಯೇ ಮಧ್ಯವರ್ತಿ ಸರಕಾರದಲ್ಲಿ ಬದಲಾವಣೆಯನ್ನು ಮಾಡಬೇಕು. ಆದರೆ, ಪಾರ್ಲಿಮೆಂಟಿನ ಮನೋಗತವು ಸ್ಪಷ್ಟವಾಗುವ ಬಗ್ಗೆ ಪ್ರಾಂತಿಕ ಸ್ವಾಯತ್ತತೆಯ ಬಗ್ಗೆ ಆಗುವ ಕಾನೂನಿನಲ್ಲೇ ಸಂಯುಕ್ತ ರಾಜ್ಯಘಟನೆಯ ಉಲ್ಲೇಖವನ್ನು ಮಾಡಬೇಕಾಗಿ ಕಮಿಟಿಯವರು ಸೂಚಿಸಿದ್ದಾರೆ. ಸಂಯುಕ್ತ ರಾಜ್ಯಘಟನೆಯು ಎಂದು ಸ್ಥಾಪಿತವಾಗುವದೋ ಏನೋ ಎಂಬ ಪರಿಸ್ಥಿತಿಯು ಉಳಿಯಬಾರದು. ಪ್ರಾಂತಿಕ ಸ್ವಾಯತ್ತತೆಯು ಜಾರಿಯಲ್ಲಿ ಬಂದ ಕೂಡಲೆ ಶಕ್ಯವಿದ್ದಷ್ಟು ತ್ವರಿತವಾಗಿ ಸಂಯುಕ್ತ ರಾಜ್ಯಘಟನೆಯನ್ನು ನಿರ್ಮಿಸಬೇಕಾಗಿ ಕಮಿಟಿಯವರು ಹೇಳಿದ್ದಾರೆ. ಈ ಯೋಜನೆಯು ಜಾರಿಯಲ್ಲಿ ಬರುವ ತನಕ ಈಗಿದ್ದ ಮಧ್ಯವರ್ತಿ ಸರಕಾರದ ಘಟನೆಯೇ ಅಸ್ತಿತ್ವದಲ್ಲಿರತಕ್ಕದ್ದು. ಮಧ್ಯವರ್ತಿ ಸರಕಾರದ ಕಾರ್ಯಕಾರಿ ಮಂಡಳದಲ್ಲಿ ಬದಲಾವಣೆ ಮಾಡುವದು ಅಗತ್ಯವಿಲ್ಲ. ಪ್ರಾಂತಿಕ ಸ್ವರಾಜ್ಯವು ಪ್ರಾರಂಭವಾದ ಮೇಲೆ ಮಧ್ಯವರ್ತಿ ಸರಕಾರದ ಅಧಿಕಾರ ಕ್ಷೇತ್ರಗಳಲ್ಲಿ ಹಲವು ವ್ಯತ್ಯಾಸಗಳಾಗುವವು. ಪ್ರಾಂತಗಳ ಅಧಿಕಾರಗಳನ್ನು ಕಾಯಿದೆಯಿಂದ ನಿರ್ಣಯಿಸಿ ಶೇಷಾಧಿಕಾರಗಳನ್ನು ಮಧ್ಯವರ್ತಿ ಸರಕಾರಕ್ಕೆ ಒಪ್ಪಿಸಬೇಕೆಂದು ಕಮಿಟಿಯ ಸೂಚನೆಯಿದೆ.

ಮತಾಧಿಕಾರ.

ಮತಾಧಿಕಾರದ ವಿಷಯದಲ್ಲಿ ಲೋಥಿಯನ್ ಕಮಿಟಿಯವರು ಮಾಡಿರುವ ಸೂಚನೆಗಳಿಗೆ ಕಮಿಟಿಯು ಒಪ್ಪಿಗೆಯನ್ನಿತ್ತಿದೆ. ಸ್ತ್ರೀ-ಮತದಾರರ ಸಂಖ್ಯೆಯು ಬೆಳೆಯುವಂತೆ ಇನ್ನೂ ಕೆಲವು ಸೂಚನೆಗಳನ್ನು ಕಮಿಟಿಯವರು ಮಾಡಿರುತ್ತಾರೆ. ಮುಖ್ಯ ಪ್ರಧಾನರ ಜಾತೀಯ ನಿರ್ಣಯಕ್ಕೆ ಕಮಿಟಿಯು ಮನ್ನಿಸುತ್ತದೆ. ಯೆರವಡಾ ಕರಾರಿನ ವಿಷಯ, ಕಮಿಟಿಯ ಅಭಿಪ್ರಾಯವೇನೆಂದರೆ:—ಹರಿಜನರ ಹಿತದೃಷ್ಟಿಯಿಂದಲೂ, ನ್ಯಾಯ ದೃಷ್ಟಿಯಿಂದಲೂ ಮುಖ್ಯ ಪ್ರಧಾನರ ನಿರ್ಣಯವೇ ಯೋಗ್ಯ ನಿರ್ಣಯವಿತ್ತು. ಆದೇನಿದ್ದಾಗ್ಯೂ ಯೆರವಡಾ ಕರಾರನ್ನು ಈಗ ರದ್ದುಗೊಳಿಸುವದು ಶಕ್ಯವಿಲ್ಲ. ಬಂಗಾಲದಲ್ಲಿ ಹರಿಜನರಿಗೆ ಕೊಟ್ಟ ಪ್ರತಿನಿಧಿ ಸಂಖ್ಯೆ ಕಡಿಮೆ ಮಾಡಿ ಅದನ್ನು ಬೇರೆ ಪ್ರಾಂತಗಳೊಳಗೆ ಹಂಚಿಕೊಟ್ಟರೆ ಒಳಿತಾಗುವದೆಂದು ಕಮಿಟಿಯು ಅಭಿಪ್ರಾಯಪಟ್ಟಿದೆ.

ಅಪ್ರತ್ಯಕ್ಷ ಚುನಾವಣೆ.

ಮಧ್ಯವರ್ತಿ ಕಾನೂನ ಮಂಡಳಗಳ ಪ್ರತಿನಿಧಿಗಳನ್ನು ಈಗಿನಂತೆ ಪ್ರತ್ಯಕ್ಷ ಚುನಾವಣೆಯಿಂದ ಆರಿಸುವ ಪದ್ಧತಿಗೆ ಕಮಿಟಿಯು ಒಪ್ಪಿಗೆಯಿಲ್ಲ. ಪ್ರಾಂತಗಳೊಳಗಿನ ಕಾನೂನು ಮಂಡಳಗಳ ಸಭಾಸದರೇ ಮಧ್ಯವರ್ತಿ ಕಾನೂನು ಮಂಡಳದ ಸಭಾಸದರನ್ನು ಆರಿಸಿಕೊಡಬೇಕೆಂದು ಕಮಿಟಿಯ ಸೂಚನೆಯು. ಅಪ್ರತ್ಯಕ್ಷ ಚುನಾವಣೆಯ ಅನುಭವವನ್ನು ಕೆಲ ಕಾಲ ಕೊಂಡು, ಅದು ಇಷ್ಟವೆಂದು ಕಂಡುಬರದಿದ್ದಲ್ಲಿ, ಮಧ್ಯವರ್ತಿ ಕಾಯಿದೆ ಮಂಡಳದವರು ಯಾವ ತರದ ಬದಲಾವಣೆಗಳನ್ನು ಮಾಡಬೇಕೆಂಬ ಕುರಿತು ಪಾರ್ಲಿಮೆಂಟಿಗೆ ತಿಳಿಸಬೇಕು.

ಮಧ್ಯವರ್ತಿ ಕಾರ್ಯಕಾರಿ ಮಂಡಳಗಳು.

ಮಧ್ಯವರ್ತಿ ಸರಕಾರದಲ್ಲಿ ೨ ಮಂಡಳಗಳು ಇರುವವು: (೧) ಹಿರಿಯರ ಮಂಡಳ. (೨) ಕಿರಿಯರ ಮಂಡಳ. ಹಿರಿಯರ ಮಂಡಳದಲ್ಲಿ ೨೬೦ ಸಭಾಸದರಿರುವರು. ೧೫೬ ಬ್ರಿಟಿಶ-ಹಿಂದುಸ್ಥಾನದ ಪ್ರತಿನಿಧಿಗಳೂ, ೧೦೪ ಸಂಸ್ಥಾನಿಕರ ಪ್ರತಿನಿಧಿಗಳೂ ಇರುವರು. ಬ್ರಿಟಿಶ ೧೫೬ ಪ್ರತಿನಿಧಿಗಳೊಳಗೆ ೧೫೦ ಚುನಾಯಿತರೂ, ೬ ಸರಕಾರನಿಯುಕ್ತರೂ ಇರುವರು. ಈ ಮಂಡಳಕ್ಕೆ ಒಮ್ಮೆ ಆರಿಸಿಬಂದವರು ೯ ವರ್ಷದ ತನಕ ಸಭಾಸದರಾಗಿರುವರು. ಆದರೆ ಪ್ರತಿ ವರ್ಷಕ್ಕೊಮ್ಮೆ ⅓ ದಷ್ಟು ಸಭಾಸದರು ನಿವೃತ್ತರಾಗಿ ಅವರ ಸ್ಥಳಗಳಲ್ಲಿ ಹೊಸ ಚುನಾವಣೆಗಳಾಗುವವು. ಈ ಮಂಡಳದಲ್ಲಿ ೧೦ ಸ್ಥಳಗಳು ಕ್ರಿಶ್ಚನ್, ಎಂಗ್ಲೋ ಇಂಡಿಯನ್ ಮತ್ತು ಯುರೋಪಿಯನ್‌ರಿಗಾಗಿ ಕಾದಿಡಲ್ಪಡುವವು.

ಮಧ್ಯವರ್ತಿ ಕಿರಿಯರ ಸಭೆಯ ಹೆಸರು 'ಫೆಡರಲ್ ಎಸೆಂಬ್ಲಿ' ಎಂದು ಇರುವದು. ಅದರ ಸಭಾಸದರ ಸಂಖ್ಯೆ ೩೭೫. ೨೫೦ ಮಂದಿ ಬ್ರಿಟಿಶ-ಹಿಂದುಸ್ಥಾನದ ಪ್ರತಿನಿಧಿಗಳು, ೧೨೫ ಸಂಸ್ಥಾನಿಕರ ಪ್ರತಿನಿಧಿಗಳು. ಈ ಎರಡೂ ಸಭೆಗಳಿಗೆ ಬ್ರಿಟಿಶ-ಹಿಂದುಸ್ಥಾನದಿಂದ ಆರಿಸಲ್ಪಡುವ [illegible] ದಷ್ಟು ಸಭಾಸದರು ಮುಸಲ್ಮಾನರಿರಬೇಕೆಂದು ಕಮಿಟಿಯು ಒಪ್ಪಿಕೊಳ್ಳುತ್ತದೆ.

ಮಧ್ಯವರ್ತಿ ಅಧಿಕಾರಿ ಮಂಡಳವು

ಮಧ್ಯವರ್ತಿ ಸರಕಾರದಲ್ಲಿ ಗವ್ಹರ್ನರ ಜನರಲ್‌ರಿಗೆ ಕಾರ್ಯಕಾರಿ ಮಂಡಳ ಮತ್ತು ಮಂತ್ರಿ ಮಂಡಳ ಹೀಗೆ ಎರಡು ಮಂಡಳಗಳು ಸಹಾಯ ಮಾಡುವವು. ಕಾರ್ಯಕಾರಿ ಮಂಡಳದಲ್ಲಿ ೩ ಜನ ಸಭಾಸದರನ್ನು ಗವ್ಹರ್ನರ ಜನರಲ್ಲರು ನೇಮಿಸುವರು. ಈ ಹೊರತು ಆರ್ಥಿಕ ವಿಷಯಗಳಲ್ಲಿ ಸಲಹೆ ಕೊಡುವರೆ ಒಬ್ಬ ಅರ್ಥಶಾಸ್ತ್ರಪ್ರವೀಣ ಸಲಹೆಗಾರನನ್ನು ಗವ್ಹರ್ನರ ಜನರಲ್ಲರು ನೇಮಿಸಿಕೊಳ್ಳಬೇಕು. ಮಧ್ಯವರ್ತಿ ಸರಕಾರವು ಕಾಯಿದೆ ಮಂಡಳಗಳಿಗೆ ಜವಾಬದಾರವಿರುವದು. ಆದರೆ, ಸೈನ್ಯ, ಪರರಾಷ್ಟ್ರೀಯ ರಾಜಕಾರಣ, ಧರ್ಮಖಾತೆ ಮತ್ತು ಬ್ರಿಟಿಶ ಬಲುಚಿಸ್ಥಾನದ ಕಾರಭಾರ ಇವುಗಳ ಕಾಯಿದೆ ಮೇಲೆ ಮಂಡಳಗಳ ಅಧಿಕಾರವು ನಡೆಯದು. ಇವುಗಳ ಅಂತಿಮ ಜವಾಬದಾರಿಯು ಗವ್ಹರ್ನರ ಜನರಲ್ಲರ ಮೇಲೆಯೇ ಇರುವದು.

ಏಡನ್ ಬಂದರವು

ಏಡನ್ ಬಂದರದ ಕಾರಭಾರವು ಈ ಮುಂದೆ ಹಿಂದುಸ್ಥಾನ ಸರಕಾರದ ಕೆಳಗೆ ಇರಲಿಕ್ಕಿಲ್ಲ. ಅದನ್ನು ಬ್ರಿಟಿಶ ಸರಕಾರಕ್ಕೆ ಒಪ್ಪಿಸಬೇಕು.

ಅಲ್ಪಸಂಖ್ಯಾಕರ ಹಿತರಕ್ಷಣೆ.

ಅಲ್ಪಸಂಖ್ಯಾಕ ಸಮಾಜಗಳ ಹಿತರಕ್ಷಣೆ ಮಾ

ಡುವ ಕುರಿತು ಹಾಗೂ ಆ ಸಮಾಜದವರನ್ನು ಸರಕಾರಿ ನೌಕರಿಗಳಲ್ಲಿ ಸಮಾವೇಶ ಮಾಡಿಕೊಳ್ಳುವ ಕುರಿತು ಗವ್ಹರ್ನರರಿಗೂ, ಗವ್ಹರ್ನರ-ಜನರಲ್ಲರಿಗೂ ಸೂಚನೆಗಳು ಮಾಡಲಾಗುವವು

ಫೆಡರಲ್ ಕೋರ್ಟು.

ಮಧ್ಯವರ್ತಿ ಸರಕಾರಕ್ಕೂ ಪ್ರಾಂತಿಕ ಸರಕಾರ ಮತ್ತು ಸಂಸ್ಥಾನಿಕರಿಗೂ ಕಲಹಗಳು ಉಂಟಾದಲ್ಲಿ ಅವುಗಳ ನಿಕಾಲೆ ಬಗ್ಗೆ ಫೆಡರಲ್ ಕೋರ್ಟು ಸ್ಥಾಪಿಸುವ ಸೂಚನೆಯು ಕಮೀಟಿಯವರಿಗೆ ಮಾನ್ಯವಿದೆ. ಈಗಿರುವ ಹೈಕೋರ್ಟುಗಳ ಮೇಲೆ ಅಧಿಕಾರ ನಡಿಸಲಿಕ್ಕೆ ಸುಪ್ರೀಮ ಕೋರ್ಟು ಸ್ಥಾಪಿಸಬೇಕೆಂದು ಕೆಲವರು ಮಾಡಿದ ಸೂಚನೆಯು ಕಮೀಟಿಗೆ ಮಾನ್ಯವಾಗಲಿಲ್ಲ ಫೆಡರಲ್ಲ ಕೋರ್ಟಿನ ಕಾರ್ಯಕ್ಷೇತ್ರವನ್ನೇ ಬೆಳಿಸಿದರೆ ಸಾಕೆಂದು ಅವರ ಅಂಬೋಣವಿರುತ್ತದೆ

ಭಾರತ ಮಂತ್ರಿಗಳ ಕೌನ್ಸಿಲು.

ಭಾರತ ಮಂತ್ರಿಗಳ ಕೌನ್ಸಿಲು ಇನ್ನು ಮುಂದೆ ರದ್ದಾಗುವದು ಅವರು ಸಣ್ಣದೊಂದು ಸಲಹೆಗಾರ ಮಂಡಳವನ್ನು ನೇಮಿಸಿಕೊಳ್ಳುವರು. ಸರ್ವಿಸ ನೌಕರರ ನೇಮಣೂಕಿಯ ವಿಷಯದಲ್ಲಿ ಮಾತ್ರ ಈ ಸಲಹೆಗಾರರ ಸಲಹೆಯು ಭಾರತ ಮಂತ್ರಿಗಳ ಮೇಲೆ ಬಂಧನಕಾರಕವಿರುವದು.

ಮುಂಬಯಿ-ಮದರಾಸುಗಳಿಗೂ ಎರಡೆರಡು ಕಾಯಿದೆ ಮಂಡಳಗಳು

ಮುಂಬಯಿ, ಮದ್ರಾಸ, ಬಂಗಾಲ, ಸಂಯುಕ್ತ ಪ್ರಾಂತ ಮತ್ತು ಬಿಹಾರ ಈ ೫ ಪ್ರಾಂತಗಳಲ್ಲಿ ಹಿರಿಯರ ಸಭ (Upper chamber) ಮತ್ತು ಕಿರಿಯರ ಸಭೆ (Lower chamber) ಹೀಗೆ ಎರಡೆರಡು ಸಭೆಗಳನ್ನು ಏರ್ಪಡಿಸಬೇಕಾಗಿ ಕಮಿಟಿಯ ಸೂಚನೆಯಿದೆ ಮುಂಚೆ ಕೊನೆಯ ೩ ಪ್ರಾಂತಗಳಲ್ಲಿ ಮಾತ್ರ ದ್ವಿದಲ ಕಾಯ್ದೆ ಮಂಡಳಗಳನ್ನು ಸ್ಥಾಪಿಸಬೇಕೆಂದು ಯೋಜನೆಯಾಗಿತ್ತು

ವರಿಷ್ಠ ಅಧಿಕಾರಿಗಳ ನೇಮಣೂಕಿ

ಇಂಡಿಯನ್ ಸಿವ್ಹಿಲ ಸರ್ವಿಸ, ಪೋಲೀಸ ಸರ್ವಿಸ ಮುಂತಾದ ವರಿಷ್ಠ ಅಧಿಕಾರಿಗಳನ್ನು ಈಗ ಭಾರತ ಮಂತ್ರಿಗಳು ನೇಮಿಸುತ್ತಾರೆ. ಮುಂದೆ ಸಹ ಅನೇ ಕ್ರಮ ನಡಿಯಬೇಕಾಗಿ ಕಮಿಟಿಯು ಸೂಚಿಸಿದೆ ಗವ್ಹರ್ನರ-ಜನರಲ್ಲರಿಗೆ ಈ ಅಧಿಕಾರ ಕೊಡಲಿಕ್ಕೆ ಕಮಿಟಿಯ ಒಪ್ಪಿಗೆಯಿಲ್ಲ. ಆದರೆ ಈ ನೇಮಣೂಕಿಗಳು ಹಿಂದುಸ್ಥಾನದೊಳಗೇ ಆಗಬೇಕಾಗಿಯೂ, ಯೋಗ್ಯ ಪ್ರಮಾಣದಲ್ಲಿ ಹಿಂದೀ ಜನರು ನೇಮಿಸಲ್ಪಡಬೇಕಾಗಿಯೂ ಮಾಡಿದ ಸೂಚನೆಯು ಕಮಿಟಿಗೆ ಮಾನ್ಯವಾಗಿದೆ ಈ ಸಂಬಂಧ ೫ ವರ್ಷಗಳ ನಂತರ ಪುನರ್ವಿಚಾರವಾಗಬೇಕೆಂದು ಶ್ವೇತಪತ್ರಿಕೆಯಲ್ಲಿ ನಮೂದಿಸಿತ್ತು ಹೀಗೆ ಪುನರ್ವಿಚಾರಕ್ಕೆ ಕಾಲಾವಧಿ ಹಾಕಿಡುವದು ಯುಕ್ತವಲ್ಲೆಂದು ಕಮಿಟಿಯ ಅಭಿಪ್ರಾಯ

ವ್ಯಾಪಾರಿ ಭೇದಭಾವ.

ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಆಮದಾಗುವ ಸರಕುಗಳ ಮೇಲೆ ಕರಹೇರಿಕೆ ಮಾಡಿ ಅನ್ಯಾಯವಾಗುವ ಪ್ರಸಂಗ ಬಂದಲ್ಲಿ ಹಾಗು ಹಿಂದುಸ್ಥಾನದೊಳಗೆ ವ್ಯಾಪಾರ-ಉದ್ಯೋಗ ಮಾಡುವ ಬ್ರಿಟಿಶ ಸಂಸ್ಥೆಗಳ ಹಿತಸಂಬಂಧಕ್ಕೆ ಪೆಟ್ಟು ತಗಲುವ ಸಂದರ್ಭದಲ್ಲಿ ಆ ರೀತಿ ಅನ್ಯಾಯವಾಗದಂತೆ ಏರ್ಪಾಟು ಮಾಡಲಿಕ್ಕೆ ಗವ್ಹರ್ನರ ಜನರಲ್‌ರಿಗೆ ಅಧಿಕಾರವಿರಬೇಕು. ಅಂದ ಭೇದಭಾವ ಮಾಡುವ ಕಾಯಿದೆಗಳನ್ನು ಕಾಯಿದೆ ಮಂಡಳಗಳು ಘಟಿಸಿದ್ದಲ್ಲಿ, ಅವಕ್ಕೆ ತಡೆಹಾಕುವ ಅಧಿಕಾರವು ಗವ್ಹರ್ನರರಿಗೂ, ಗವ್ಹರ್ನರ ಜನರಲ್‌ರಿಗೂ ಕೊಡಲ್ಪಡುವದು. ಬ್ರಿಟಿಶ ನಾಗರಿಕರ ಮತ್ತು ಬ್ರಿಟಿಶ ಕಂಪನಿಗಳ ಮೇಲೆ ಯಾವದೇ ತರದ ಪ್ರತಿಬಂಧ ಹಾಕಲಾಗದಂತೆ ವ್ಯವಸ್ಥೆಯಿರಬೇಕು. ಪಿಲಾಯತಿಯ ವೈದ್ಯಕೀಯ ಬಿರುದುಗಳಿಗೆ ಹಿಂದೀ ಅಧಿಕಾರಿಗಳು ಮಾನ್ಯತೆ ಕೊಡದಿದ್ದರೆ ಆಯಾ ಜನರಿಗೆ ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡುವ ಹಕ್ಕು ಇರತಕ್ಕದ್ದು

ಪ್ರಜೆಗಳ ಮೂಲಭೂತ ಹಕ್ಕುಗಳು

ಪ್ರಜೆಗಳ ಮೂಲಭೂತ ಹಕ್ಕುಗಳನ್ನು ನಿರ್ದಿಷ್ಟ ಮಾಡಬೇಕೆಂಬ ಸೂಚನೆಯು ಕಮಿಟಿಗೆ ಮಾನ್ಯವಾಗಲಿಲ್ಲ ಸಾರ್ವಜನಿಕ ಅಧಿಕಾರಸ್ಥಾನಗಳಲ್ಲಿ ಸಮಸ್ತ ಬ್ರಿಟಿಶ ಪ್ರಜೆಗಳು — ಹಿಂದುಸ್ಥಾನದವರೂ, ಹೊರಗಿನವರೂ, ಸಂಸ್ಥಾನದ ಪ್ರಜೆಗಳೂ ಸಹ — ಒಂದೇ ತರದ ಹಕ್ಕುಳ್ಳವರೆಂದು ಸಾರಬೇಕಾಗಿ ಕಮಿಟಿಯ ಅಂಬೋಣವು ಸಾರ್ವಜನಿಕ ಹಿತಕ್ಕಲ್ಲದೆ ಬೇರೆ ಯಾವದೇ ಕಾರಣದಿಂದ ಯಾರೊಬ್ಬರ ಆಸ್ತಿ-ಪಾಸ್ತಿಯನ್ನು ಕಸಕೊಳ್ಳಲು ಆಗದಂತೆ ವ್ಯವಸ್ಥೆಯಾಗಬೇಕು

ಇತರ ವಿಷಯಗಳು

ರಿಝರ್ವ ಬೇಂಕ, ರೇಲ್ವೆ ಬೋರ್ಡ ವಗೈರೆ ಸಂಸ್ಥೆಗಳ ಸ್ಥಾಪನೆ ಬಗ್ಗೆ ಕಮಿಟಿಯವರು ಶಿಫಾರಸು ಮಾಡಿದ್ದಾರೆ ಹೊಸ ಘಟನೆಯು ಅಮಲಿನಲ್ಲಿ ಬರುವ ಮುಂಚಿತವಾಗಿ ಹಿಂದುಸ್ಥಾನದ ಆರ್ಥಿಕ ಪರಿಸ್ಥಿತಿಯ ಸಾದ್ಯಂತ ವೃತ್ತಾಂತವನ್ನು ಪಾರ್ಲಿಮೆಂಟಿಗೆ ತಿಳಿಸಬೇಕೆಂದು ಸೂಚಿಸಲಾಗಿದೆ

ಘಟನೆಯಲ್ಲಿ ತಿದ್ದುಪಡಿ

ರಾಜ್ಯಘಟನೆಯಲ್ಲಿ ಏನಾದರೂ ತಿದ್ದುಪಡಿಗಳಾಗಬೇಕಾದಲ್ಲಿ ಹಿಂದೀ ಕಾಯಿದೆ ಮಂಡಳಗಳು ತಮ್ಮ ಸೂಚನೆಗಳನ್ನು ಬ್ರಿಟಿಶ ಪ್ರಧಾನ ಮಂಡಳಕ್ಕೆ ಕಳಿಸಿಕೊಡಬೇಕು, ಪ್ರಧಾನ ಮಂಡಳವು ತಮ್ಮ ಅಭಿಪ್ರಾಯದೊಂದಿಗೆ ಅವನ್ನು ಪಾರ್ಲಿಮೆಂಟಿಗೆ ಸಾದರಪಡಿಸುವದು

ಕಮಿಟಿಯ ವರದಿಯ ಮುಖ್ಯಾಂಶಗಳು.

ಕಮಿಟಿಯವರು ಸೂಚಿಸಿದ ಮುಖ್ಯ ಸಂಗತಿಗಳು ಈ ಕೆಳಗಿನಂತಿವೆ.— (೧) ಅಖಿಲ ಭಾರತೀಯ ಸಂಯುಕ್ತ ರಾಜ್ಯಘಟನೆಯನ್ನು ಸ್ಥಾಪಿಸುವದೇ ಬ್ರಿಟಿಶರ ಕೊನೆಯ ಧ್ಯೇಯವು. (೨) ಮೊಟ್ಟಮೊದಲು ಪ್ರಾಂತಿಕ ಸ್ವಾಯತ್ತತೆಯನ್ನು ಸ್ಥಾಪಿಸತಕ್ಕದ್ದು. (೩) ಆದರೆ, ಪ್ರಾಂತಗಳ ಹಾಗು ಮಧ್ಯವರ್ತಿ ಸರಕಾರಗಳ ಘಟನೆಗಳನ್ನು ಒಂದೇ ಕಾನೂನಿನಿಂದ ರಚಿಸಬೇಕು. ಹೀಗೆ ಮಾಡಿದ್ದರಿಂದ ಪಾರ್ಲಿಮೆಂಟಿನ ಉದ್ದೇಶವು ಸ್ಪಷ್ಟವಾಗುವದು (೪) ಪ್ರಾಂತಿಕ ಸ್ವಾಯತ್ತತೆಯ ಸ್ಥಾಪನೆಗೂ, ಮಧ್ಯವರ್ತಿ ಸಂಯುಕ್ತ ಸರಕಾರದ ಸ್ಥಾಪನೆಗೂ ನಡುವೆ ಕಾಲಹರಣವಾಗಕೂಡದು (೫) ಪ್ರಾಂತಿಕ ಸ್ವಾಯತ್ತತೆಯು ಅಮಲಿನಲ್ಲಿ ಬಂದ ಕೂಡಲೆ ಮಧ್ಯವರ್ತಿ ಸರಕಾರದ ಅಧಿಕಾರಕ್ಷೇತ್ರವನ್ನು ಕೆಲ ಮಟ್ಟಿಗೆ ಸಂಕುಚಿತ ಮಾಡಬೇಕಾಗುವದು (೬) ಸಿಂಧ ಮತ್ತು ಒರಿಸಾ ಪ್ರಾಂತಗಳು ಸ್ವತಂತ್ರ, ಗವ್ಹರ್ನರರ ಪ್ರಾಂತಗಳಾಗುವವು (೭) ವರ್‍ಹಾಡ ಪ್ರಾಂತದ ಕಾರಭಾರವನ್ನು ನಿಜಾಮರ ಹೆಸರಲ್ಲಿ ಮಧ್ಯಪ್ರಾಂತ ಸರಕಾರವು ನಡಿಸಬೇಕು, ವದು (೮) ಪ್ರಾಂತಿಕ ಸರಕಾರಗಳ ಅಧಿಕಾರಗಳನ್ನು ನಿರ್ದಿಷ್ಟ ಮಾಡಿ ಶೇಷಾಧಿಕಾರಗಳು ಗವ್ಹರ್ನರ-ಜನರಲ್‌ರಿಗೆ ಕೊಡಲ್ಪಡುವವು (೯) ಕಾರ್ಯಕಾರಿ ಅಧಿಕಾರಿಗಳು ಸ್ವತಂತ್ರವಿರುವ ದೃಷ್ಟಿಯಿಂದ ಗವ್ಹರ್ನರರಿಗೂ, ಗವ್ಹರ್ನರ-ಜನರಲ್‌ರಿಗೂ ವಿಶೇಷಾಧಿಕಾರಗಳು ಕೊಡಲ್ಪಡುವವು, ವಿಶೇಷ ಜವಾಬದಾರಿಯು ಅವರ ಮೇಲೆ ಹೇರಲ್ಪಡುವದು (೧೦) ಕಾರ್ಯಕಾರಿ ಮಂಡಳವು ಕಾನೂನು ಮಂಡಳಕ್ಕೆ ಅಧೀನವಿರತಕ್ಕದ್ದಾದರೂ ಕಾಯಿದೆ ಮತ್ತು ಸುವ್ಯವಸ್ಥೆಯ ಜವಾಬದಾರಿಯು ಕಾರ್ಯಕಾರಿ ಮಂಡಳದ ಮೇಲೆಯೇ ಇರುವದು. (೧೧) ರಾಜ್ಯಕಾರಭಾರವು ಸರಿಯಾಗಿ ನಡೆಯಲಿಕ್ಕೂ ಪರಸ್ಪರ ವಿರೋಧಿ ಹಿತಸಂಬಂಧಗಳ ಕಲಹದಿಂದ ರಾಜ್ಯಭಾರವು ಕೆಡದಂತೆ ಮಾಡಲಿಕ್ಕೂ ಸಂರಕ್ಷಕ ಬಂಧನಗಳ ಯೋಜನೆಯಾಗಬೇಕು (೧೨) ಈಗಣ ದ್ವಿದಲ ರಾಜ್ಯಪದ್ಧತಿ ನಿಲ್ಲಿಸಿ ಎಲ್ಲ ಪ್ರಾಂತಿಕ ಕಾರಭಾರವನ್ನು ದಿವಾಣರ ಕೈಯಲ್ಲಿ ಕೊಡಬೇಕು (೧೩) ದಿವಾಣರು ಕಾಯಿದೆ ಮಂಡಳದ ಸಭಾಸದರೊಳಗಿಂದ ಆರಿಸಲ್ಪಡಬೇಕು ಗವ್ಹರ್ನರರು ಎಲ್ಲ ಕಾರಭಾರವನ್ನು ದಿವಾಣರ ಸಲಹೆಯಿಂದಲೇ ಮಾಡಬೇಕು (೧೪) ಪ್ರಾಂತಗಳ ಕಾರಭಾರದ ಕೊನೆಯ ಜವಾಬದಾರಿಯು ಪ್ರಾಂತಾಧಿಪರ ಮೇಲಿರುವದರಿಂದ ಅವರು ದಿವಾಣರ ಸಲಹೆಯನ್ನು ತಿರಸ್ಕರಿಸಬಹುದು, ಕಾಯಿದೆ ಮಂಡಳದ ಕಾನೂನುಗಳನ್ನು ನಿರಾಕರಿಸಬಹುದು, ಸ್ವತಃ ಕಾಯಿದೆಗಳನ್ನು ಮಾಡಬಹುದು ಮತ್ತು ಅವಶ್ಯ ಕಂಡಂತೆ ಬೊಕ್ಕಸದೊಳಗಿಂದ ಹಣ ಖರ್ಚ ಮಾಡಬಹುದು (೧೫) ಗವ್ಹರ್ನರರ ಸಮ್ಮತಿ ಕೊಂಡನಕ ಪೋಲೀಸ ಕಾಯಿದೆಯಲ್ಲಿ ತಿದ್ದುಪಡಿ ಮಾಡಲಾಗದು. (೧೬) ಗುಪ್ತ ಪೋಲೀಸರ ಖಾತೆಯು ಗವ್ಹರ್ನರರ ಅಧೀನವಿರುವದು. (೧೭) ಕ್ರಾಂತಿಕಾರಕರ ಸಮಾಚಾರ ಕೊಡುವ ಎಲ್ಲ ಅಧಿಕಾರವು ಪ್ರಾಂತಾಧಿಪರಿಗೆ ಒಪ್ಪಿಸಿದೆ (೧೮) ಪ್ರಾಂತಿಕ ಕಾಯಿದೆ ಮಂಡಳಗಳ ಮತದಾರರ ಸಂಖ್ಯೆಯು ಈಗ ೭೦ ಲಕ್ಷವಿದೆ, ಅದನ್ನು ೩॥ ಕೋಟಿಗೆ ಬೆಳಸಬೇಕು ಹಾಲ ೩ ಲಕ್ಷ ೧೫ ಸಾವಿರ ಸ್ತ್ರೀಯರು ಮತದಾರರಿರುತ್ತಾರೆ. ಅವರ ಸಂಖ್ಯೆ ೬೦ ಲಕ್ಷಕ್ಕೆ ಬೆಳಸಬೇಕು. (೧೯) ಮುಂಬಯಿ, ಮದ್ರಾಸ, ಸಂಯುಕ್ತ ಪ್ರಾಂತ, ಬಿಹಾರ, ಬಂಗಾಲ ಈ ೫ ಪ್ರಾಂತಗಳಲ್ಲಿ ಎರಡೆರಡು ಕಾನೂನು ಮಂಡಳಗಳನ್ನು ಏರ್ಪಡಿಸಬೇಕು ವರಿಷ್ಠರ ಸಭೆಯ ⅓ ಸಭಾಸದರು ಸರತಿಯಂತೆ ನಿವೃತ್ತರಾಗಿ ಹೊಸಬರು ಆರಿಸಲ್ಪಡಬೇಕು. (೨೦) ಯೆರವಡಾ ಕರಾರಿನಂತೆ ತಿದ್ದುಪಡಿಯಾದ ಜಾತೀಯ ನಿರ್ಣಯ ಕಮಿಟಿಗೆ ಮಾನ್ಯವಿದೆ ಆದರೆ, ಬಂಗಾಲದ ಅಸ್ಪೃಶ್ಯರಿಗೆ ಕೊಟ್ಟ ಕೆಲವು ಸ್ಥಳಗಳನ್ನು ಕಡಿಮೆ ಮಾಡಿ ಬೇರೆ ಪ್ರಾಂತಗಳಿಗೆ ಹಂಚಿಕೊಡಬಹುದಾಗಿ ಕಮಿಟಿಯ ಸೂಚನೆಯಿದೆ (೨೧) ನಿರ್ದಿಷ್ಟಗೊಳಿಸಿದ ಸಂಖ್ಯೆಯಷ್ಟು ಸಂಸ್ಥಾನಿಕರು ಸೇರಿದರೆ ಮಾತ್ರ ಸಂಯುಕ್ತ ರಾಜ್ಯಘಟನೆಯನ್ನು ಸ್ಥಾಪಿಸಬೇಕು (೨೨) ಮಧ್ಯವರ್ತಿ ಕಾಯಿದೆ ಮಂಡಳಗಳ ಮೇಲಿನ ಸಂಸ್ಥಾನಿಕ ಪ್ರತಿನಿಧಿಗಳು ಸಂಸ್ಥಾನಿಕರಿಂದಲೇ ನೇಮಿಸಲ್ಪಡಬೇಕು (೨೩) ಹಿಂದೀ ಸಂಸ್ಥಾನಿಕರ ಮೇಲೆ ಈಗ ಗವ್ಹರ್ನರ-ಜನರಲ್ ಇನ್-ಕೌನ್ಸಿಲ್‌ರವರಿಗಿದ್ದ ಸರ್ವಾಧಿಕಾರವು ಸಾರ್ವಭೌಮರಿಗೆ ಒಪ್ಪಿಸಲಾಗಿ

ತು ಸಮ್ರಾಟರ ಪ್ರತಿನಿಧಿಗಳಾಗಿ ಸರ್ವಾಧಿಪತಿಗಳು ಅದನ್ನು ನಡಿಸುವರು. ಆ ಅಧಿಕಾರವು ಮಧ್ಯವರ್ತಿ ಸರಕಾರಕ್ಕೆ ಕೊಡಲ್ಪಡಲಿಕ್ಕಿಲ್ಲ. (೨೬) ಏಡನ್ ಬಂದರವು ಸಾಮ್ರಾಜ್ಯ ಸರಕಾರಕ್ಕೆ ಒಪ್ಪಿಸಲಾಗುವದು (೨೭) ಗವ್ಹರ್ನರ-ಜನರಲ್‌ರು, ೩ ಸಲಹೆಗಾರರು, ಮತ್ತು ಮಧ್ಯವರ್ತಿ ಕಾನೂನು ಮಂಡಳಗಳಿಂದ ಆರಿಸಲ್ಪಟ್ಟ ಮಂತ್ರಿಗಳ ಮಂಡಳವು ಕೂಡಿ ಮಧ್ಯವರ್ತಿ ಸರಕಾರವಾಗುವದು. ಸಲಹೆಗಾರರು ಕಾಯಿದೆ ಮಂಡಳಕ್ಕೆ ಅಧೀನವಾಗಿರಲಾರರು ಸೈನ್ಯ ಖಾತೆ, ಪರರಾಷ್ಟ್ರೀಯ ರಾಜಕಾರಣ, ಧರ್ಮ ಖಾತೆ, ಮತ್ತು ಬ್ರಿಟಿಶ ಬಲುಚಿಸ್ಥಾನದ ಕಾರಭಾರ ಇವಿಷ್ಟು ಸಲಹೆಗಾರರ ತಾಬೆಯಲ್ಲಿರುವವು. ಅವಶಿಷ್ಟ ಖಾತೆಗಳ ಕಾರಭಾರವು ಮಂತ್ರಿಗಳ ವಶಕ್ಕೆ ಒಪ್ಪಿಸಲಾಗುವದು. (೨೮) ಸಂಯುಕ್ತ ಸರಕಾರದ ಸಾಂಪತ್ತಿಕ ಸ್ಥಿತಿಯನ್ನೂ, ಪತ್ತನ್ನೂ ಕಾಪಾಡಿಕೊಳ್ಳುವದು ಸರ್ವಾಧಿಪತಿಗಳ ವಿಶೇಷ [illegible] ಯ ಕೆಲಸವು ಆ ಬಗ್ಗೆ ಅವರು ಒಬ್ಬ ಆರ್ಥಿಕ ಸಲಹೆಗಾರರನ್ನು ನೇಮಿಸಿಕೊಳ್ಳಬೇಕು. (೨೯) ಸರ್ವಾಧಿಪತಿಗಳ ಸಲಹೆಗಾರರೂ, ಮಂತ್ರಿಮಂಡಳವೂ ಆದಷ್ಟರ ಮಟ್ಟಿಗೆ ವಿಚಾರ ಕೂಡಿ ಮಾಡಬೇಕು (೩೦) ಹಿಂದೀ ಲಷ್ಕರ ಖಾತೆಯ ಕಾರಭಾರದ ಬಗ್ಗೆ ಕಾಯಿದೆಯಿಂದ ಕಮಿಟಿ ನೇಮಿಸುವದು ಅಗತ್ಯವಿಲ್ಲ ಸರ್ವಾಧಿಪತಿಗಳು ಬೇಕಾದರೆ ತಮಗೊಂದು ಸಲಹೆಗಾರ ಮಂಡಳವನ್ನು ನೇಮಿಸಿಕೊಳ್ಳಬಹುದು (೩೧) ಮಧ್ಯವರ್ತಿ ಸರಕಾರದ ಕರಿಯರ ಕಾನೂನು ಮಂಡಳಕ್ಕೆ ಬ್ರಿಟಿಶ ಹಿಂದುಸ್ಥಾನದೊಳಗಿಂದ ಆರಿಸಬೇಕಾದ ಪ್ರತಿನಿಧಿಗಳನ್ನು ಪ್ರಾಂತಿಕ ಕಾನೂನು ಮಂಡಳಗಳು ಆರಿಸತಕ್ಕದ್ದು (೩೨) ಎರಡು ಕಾನೂನು-ಮಂಡಳಗಳಿದ್ದ ಪ್ರಾಂತಗಳಲ್ಲಿ ಅಲ್ಲಿಯ ಹಿರಿಯರ ಕಾನೂನ-ಮಂಡಳದ ಸಭಾಸದರು, ಮಧ್ಯವರ್ತಿ ಹಿರಿಯರ ಕಾನೂನು ಮಂಡಳದ ಸಭಾಸದರನ್ನು ಆರಿಸಿಕೊಡಬೇಕು ಉಳಿದ ಪ್ರಾಂತಗಳಲ್ಲಿ ಹಿರಿಯರ ಚುನಾವಣೆಯ ಬಗ್ಗೆ ಇದೇ ನಮೂನೆಯ ಮತದಾರ ಸಂಘಗಳನ್ನು ನಿರ್ಮಾಣಿಸತಕ್ಕದ್ದು (೩೩) ಇಂಡಿಯನ್ ಸಿವ್ಹಿಲ್ ಸರ್ವ್ಹಿಸ್ ಮತ್ತು ಪೋಲೀಸ ಸರ್ವ್ಹಿಸಗಳೊಳಗಿನ ನೌಕರರನ್ನು ಭಾರತ ಮಂತ್ರಿಗಳು ನೇಮಿಸಬೇಕು (೩೪) ಅಲ್ಪಸಂಖ್ಯಾಕ ಸಮಾಜದವರಿಗೆ ಸರಕಾರಿ ನೌಕರಿಗಳು ನ್ಯಾಯ್ಯ ಪ್ರಮಾಣದಲ್ಲಿ ಸಿಗುವಂತೆ ಪ್ರಾಂತಾಧಿಪರೂ, ಸರ್ವಾಧಿಪತಿಗಳೂ ನೋಡಿಕೊಳ್ಳತಕ್ಕದ್ದು (೩೫) ಫೆಡರಲ್ ಸುಪ್ರೀಮ ಕೋರ್ಟಿನ ಸ್ಥಾಪನೆಯಾಗಬೇಕು. (೩೬) ವಿಲಾಯತಿಯಿಂದ ಆಮದಾಗುವ ಬ್ರಿಟಿಶ ಸರಕುಗಳಿಗೆ ಭೇದಭಾವ ತೋರಿಸುವ ಬಂಧನಗಳಿಗೆ ತಡೆಹಾಕಲು ಸರ್ವಾಧಿಪತಿಗಳಿಗೆ ವಿಶೇಷಾಧಿಕಾರವಿರತಕ್ಕದ್ದು. (೩೭) ಬ್ರಿಟಿಶ ವ್ಯಾಪಾರಿ ಹಿತಸಂಬಂಧಗಳಿಗೂ ಹಿಂದುಸ್ಥಾನದೊಳಗಿನ ಅವರ ವ್ಯಾಪಾರ-ಉದ್ದಿಮೆಗಳಿಗೂ ಭೇದ-ಭಾವ ತೋರಿಸದಂತೆ ಕಾಯಿದೆಯೊಳಗೆ ನಿರ್ಬಂಧವಿರಬೇಕು. ಕಾರಭಾರದಲ್ಲೂ ಕೂಡ ಭೇದಭಾವವಾಗದಂತೆ ವ್ಯವಸ್ಥೆಯಾಗಬೇಕು. (೩೮) ವಿಲಾಯತಿಯೊಳಗಿನ ಬ್ರಿಟಿಶ ಪ್ರಜೆಗಳ ಮೇಲೂ, ವಿಲಾಯತಿಯೊಳಗೆ ಸ್ಥಾಪನೆ ಹೊಂದಿದ ವ್ಯಾಪಾರಿ ಸಂಸ್ಥೆಗಳ ಮೇಲೂ, ಬ್ರಿಟಿಶ ಹಿಂದುಸ್ಥಾನದಲ್ಲಿ ಈಗಿರುವ ಹಾಗು ಮುಂದಾಗುವ ಬ್ರಿಟಿಶ ಸಂಸ್ಥೆಗಳ ಮೇಲೂ ಯಾವದೇ ತರದ ನಿರ್ಬಂಧವನ್ನುಂಟು ಮಾಡಲಿಕ್ಕೆ ಹಿಂದೀ ಕಾಯಿದೆ ಮಂಡಳಗಳಿಗೆ ಅಧಿಕಾರವಿರಬಾರದು ಆದರೆ ಬ್ರಿಟಿಶರು ಹಿಂದೀಯರ ವಿರುದ್ಧ ಯಾವದೇ ವಿಷಯದಲ್ಲಿ ಭೇದಭಾವ ತೋರಿಸಿದರೆ ಆ ವಿಷಯಗಳ ಪೂರ್ತ ಬ್ರಿಟಿಶರ ಮೇಲೆ ನಿರ್ಬಂಧಗಳನ್ನು ಹಾಕಲಿಕ್ಕೆ ಕಾಯಿದೆ ಮಂಡಳಗಳಿಗೆ ಅಧಿಕಾರವಿರುವದು. ನಾವಿಕ ಧಂದೆಯ ಬಗ್ಗೆ ವಿಶೇಷ ವ್ಯವಸ್ಥೆಯಾಗತಕ್ಕದ್ದು. (೩೯) ರಿಝರ್ವ ಬೇಂಕಿನ ಕಾಯಿದೆಯಲ್ಲಿ ಸರ್ವಾಧಿಪತಿಗಳ ಸಮ್ಮತಿಯ ಹೊರತು ತಿದ್ದುಪಡಿ ಮಾಡಲು ಬರಲಾರದು. (೪೦) ರೇಲ್ವೆ ಕಾರಭಾರವು ರೇಲ್ವೆ ಬೋರ್ಡಿನ ವಶಕ್ಕೆ ಒಪ್ಪಿಸತಕ್ಕದ್ದು (೪೧) ಭಾರತ ಮಂತ್ರಿಗಳ ಇಂಡಿಯಾ ಕೌನ್ಸಿಲು ರದ್ದಾಗುವದು (೪೨) ಬ್ರಹ್ಮದೇಶವು ಹಿಂದುಸ್ಥಾನದಿಂದ ವಿಂಗಡಿಸಲ್ಪಡಬೇಕು ಉಭಯ ಸರಕಾರಗಳ ನಡುವೆ ವ್ಯಾಪಾರಿ ಕರಾರು ಆಗಬೇಕು ೧೨ ತಿಂಗಳ ನೋಟೀಸು ಕೊಟ್ಟು ಆ ಕರಾರು ರದ್ದುಪಡಿಸುವ ಅಧಿಕಾರವು ಇತ್ತಂಡದವರಿಗೂ ಇರುವದು.

ನೋಟೀಸಿಗೆ ಉತ್ತರ.

ತಾ. ೧೯-೧೧-೩೪ ನೇ "ಕನ್ನಡ ವೃತ್ತ"ದ ಸಂಚಿಕೆಯಲ್ಲಿ ಕೋಡ್ಕಣಿಯ ನಾಗಪ್ಪ ರಾಮಯ್ಯ ನಾಯ್ಕ ಧುಮ್ಮನಮನೆ ಇವರು ಕೊಟ್ಟ ನೋಟೀಸಿನ ಮಜಕೂರು ಸುಳ್ಳು ಇರುತ್ತದೆ ರೇಮು ಮೊಬಾದ್ಲೆ ತಕ್ಕೊಂಡೇ ಅವರು ನನಗೆ ಪ್ರೊಮಿಸರಿ ನೋಟು ಬರಕೊಟ್ಟಿರುತ್ತಾರೆ. ನೋಟು ಬಂದ ಮೊಬಾದ್ಲೆಯ ದಂಟ ಅವರ ಸಾಧನೆಯು ನಡಿಯದು.

ತಾ ೨೪-೧೧-೧೯೩೪

ಸೈಯ್ಯದ ಇಮಾಮ ವ|| ಸೈಯದ ಇದ್ರುಸ ಸಾಹೇಬ, ಮಿರ್ಜಾನ

ದಂತ ಚಿಕಿತ್ಸೆ! ತ್ವರೆ ಮಾಡಿರಿ!!

ಸ್ವಲ್ಪೇ ದಿವಸ ಮುಕ್ಕಾಮು !!

ಡಾ| ಹಳಕಾರ ಕುಮಟಾ ಇವರ ದವಾಖಾನೆಯಲ್ಲಿ ಸ್ಥಾಪಿಸಿದ ದಂತ ಚಿಕಿತ್ಸಾಲಯದಲ್ಲಿ ಹಲ್ಲಿನ ಎಲ್ಲ ತರದ ಕೆಲಸಗಳನ್ನು ಮಾಡುತ್ತೇವೆ ಹೆಚ್ಚಿನ ಮಾಹಿತಿ ನೋಡ್ರಾ

ಡಾ|| ಕೊಪ್ಪಳ, ಡೆಂಟಿಸ್ಟ, ಕುಮಟಾ.

Siromani Udipi Narayanacharya,

CHAUKHAMBA, BENARES CITY.

SUN & CO BENARES CITY

ಮಹಾಶಯರೇ, ರುದ್ರನೇತ್ರ್ಯೇ ತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ಶಿವ ಸಮಾನ ಮನೋರಥವನ್ನು ಹೊಂದಿರಿ. ಕೈರಿ 1000 ಹರ 1ಕ್ಕೆ 0-6-0 ಯಿಂದ 10 ರೂಪಾಯಿ. ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಹರ 32 ಹರ1ಕ್ಕೆ ರೂ 0 8 0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8 0ರಿಂದ ೨೦ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1 0ಸ್ಟಾಂಪು ಕಳಿಸಿದರೆ, 1 ಕಾಶಿ ನಕ್ಷೆ, 1 ವಿಶ್ವೇಶ್ವರನ ಫೋಟೋ ಇನಾಂ ಕಳಿಸಲಾಗುವದು

ಪತ್ತೆ:— ಶಿರೋಮಣಿ ನಾರಾಯಣಾಚಾರ್ಯ, ಚೌಕಾಂಬಾ, ಕಾಶೀ ಕ್ಷೇತ್ರ.

ಬನ್ನಿರಿ! ಬಾಳಿಕೆ ಬರುವ ಕೆಲಸಗಳನ್ನು ಮಾಡಿಸಿಕೊಳ್ಳಿರಿ!!

ಉತ್ತಮವಾದ ಕೆಲಸ ! ಯೋಗ್ಯವಾದ ಧಾರಣೆ !!

ಯು. ಶಿವಾ ಎಂಡ್ ಬ್ರದರ್ಸ,

ಓಟೋಮೊಬೈಲ ಇಂಜಿನಿಯರ್ಸ ಎಂಡ್ ಬೊಡಿ-ಬಿಲ್ಡರ್ಸ,

ಕುಮಟಾ. (ಉ. ಕನ್ನಡ.)

ನಮ್ಮ ಕಾರಖಾನೆಯಲ್ಲಿ

ಶೆವರಲೆಟ್, ಬ್ಯೂಕ, ಕ್ರಾಯ್ಸಲರ, ಸಿಟ್ರೋನ್, ಡೋಜ್, ಡಿಸೋಟೋ, ಡ್ಯೂರಂಟ, ಎಸೆಕ್ಸ ಎರಸ್ಕಿನ್, ಫಾರ್ಗೋ, ಫ್ಯಾಟ, ಜ. ಎಮ್ ಸಿ., ಫೋರ್ಡ ಎ, ಫೋರ್ಡ ವಿ ೮., ಹಪ್‌ಮೊಬೈಲ್, ಹಡಸನ್, ಮೆಕ್ಸವೆಲ್, ಓವರಲೆಂಡ್, ವ್ಹಿಪೆಟ್, ಪಿಲೀಸ, ಸ್ಟುಡಬೇಕರ, ರುಗ್ಬಿ, ಸ್ಟಾರ, ರಿಯೋ, ಸಿಂಗರ ಮೊದಲಾದ ಯಾವತ್ತೂ ಮೇಕರ್ಸ್‌ಗಳ ಮೋಟರುಗಳ ರಿಪೇರಿ ಕೆಲಸವು ಉತ್ತಮವಾಗಿಯೂ ಸವಲತ್ತಿಯ ದರದಿಂದಲೂ ಮಾಡಿಕೊಡುವವು ಬೇಕಾದ ಸ್ಪ್ರಿಂಗ ಬ್ಲೇಡ್ಸಗಳು ನಮ್ಮಲ್ಲಿ ಮಾಡಿಕೊಡುತ್ತೇವೆ. ಇದಲ್ಲದೆ—

ಎತ್ತಿನಗಟ್ಟಿ ಜವಿನಾಸಿಗೆ ಸುಲಭವಾಗಿ ನೀರು ಸೇಯುವ ಟಿಕಾವು ಸಣ್ಣ-ದೊಡ್ಡ ನೀರಿನ ರಾಟಗಳನ್ನು ತಯಾರಿಸಿ ಬೇಕಾದಲ್ಲಿ ಫಿಟಿಂಗ ಮಾಡಿಕೊಡುವೆವು, ಬೊಡಿಬಿಲ್ಡಿಂಗ, ಬೇಕಾದ ನಮೂನೆಯ, ಖುರ್ಚಿಗಳೂ, ಬಾಂಕುಗಳೂ, ಕೊಟ್‌ಗಳೂ ಮಾಡಿಕೊಡುವೆವು, ಬಡಗಿಯ ಅನೇಕ ಕೆಲಸಗಳು ಸಹ ಮಾಡಿಕೊಡಲ್ಪಡುತ್ತವೆ

ಕಾನಡಾವೃತ್ತ.

ಮನ್ಮಥ ನಾಮ ಸಂ|| ಕಾರ್ತಿಕ ಬ|| ೫ಮಿ, ಸೋಮವಾರ.

ಚುನಾವಣೆಯ ಇತ್ಯರ್ಥ.

ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಗಳಂತೂ ಮುಗಿದವು ಮುಸಲ್ಮಾನೇತರ ಮತದಾರರು ೫೪ ಸಭಾಸದರನ್ನು ಆರಿಸಿಕೊಡತಕ್ಕದ್ದ ಈ ೫೪ ಸ್ಥಳ ಗಳಲ್ಲಿ ೫೦ ಸ್ಥಳಗಳಿಗೆ ಮಾತ್ರ ರಾಷ್ಟ್ರೀಯ ಸಭೆಯವರು ತಮ್ಮ ಹುರಿಯಾಳುಗಳನ್ನು ನಿಲ್ಲಿಸಿದ್ದರು. ಉಳಿದ ನಾಲ್ಕು ಸ್ಥಳಗಳನ್ನು ಪಂಡಿತ ಮದನ ಮೋಹನ ಮಾಲವೀಯ, ಬಾಬು ಶರಚ್ಚಂದ್ರ ಬೋಸ [illegible] ಲಾಲಚಂದ [illegible] ಮಾಧವರಾವ ಅಣೆ [illegible]ಯ ಪಕ್ಷದವರಿಗೆ ಬಿಟ್ಟುಕೊಟ್ಟಿದ್ದರು. [illegible] ಪಂಡಿತ ಮಾಲವೀಯರವರ ಬುದ್ಧಿದ್ದಾರಿಗೆ ಕಾಯಿದೆಯ ಅಜ್ಞೆಯುಂಟಾದ್ದರಿಂದ ಅವರಿಗೆ ಬಿಟ್ಟ ಸ್ಥಳಕ್ಕೂ ರಾಷ್ಟ್ರೀಯ ಸಭೆಯವರು ತಮ್ಮ ಹುರಿಯಾಳು ನಿಲ್ಲಿಸಿದರು. ಈ ರೀತಿ ೫೧ ಮುಸಲ್ಮಾನೇತರ ಸ್ಥಳಗಳ ಬಗ್ಗೆ ರಾಷ್ಟ್ರೀಯ ಸಭೆಯವರು ಹೋರಾಟ ನಡಿಸಿದ್ದರು ಈ ತನಕ ಪ್ರಕಟವಾದ ಚುನಾವಣೆಯ ಪರಿಣಾಮಗಳನ್ನು ಪರೀಕ್ಷಿಸಿದರೆ ನಾಲ್ಕು ಸ್ಥಳಗಳಲ್ಲಿ ಮಾತ್ರ, ಕೊಂಗ್ರೆಸ ಹುರಿಯಾಳುಗಳು ಸೋತಿರುವರು ಬಾಕಿ ಯಾವತ್ತು ಸ್ಥಳಗಳಲ್ಲಿ ಪ್ರಚಂಡ ಬಹುಮತದಿಂದ ರಾಷ್ಟ್ರೀಯ ಸಭೆಯವರೇ ಆರಿಸಿಬಂದಿರುತ್ತಾರೆ ೨-೩ ಚುನಾವಣೆಗಳ ಪರಿಣಾಮವು ಇನ್ನೂ ಪ್ರಕಟವಾಗತಕ್ಕದ್ದಿದೆ ಅಲ್ಲೂ ರಾಷ್ಟ್ರೀಯ ಸಭೆಯವರೇ ಆರಿಸಿಬರುವರೆಂದು ಅಪೇಕ್ಷೆಯುಂಟು. ಅಂತು ರಾಷ್ಟ್ರೀಯಸಭೆಯು ನಿಲ್ಲಿಸಿದ ೫೧ ಹುರಿಯಾಳುಗಳಲ್ಲಿ ೪೭ರಷ್ಟು ಜನರನ್ನು ಮತದಾರರು ಆರಿಸಿಕೊಟ್ಟಿರುತ್ತಾರೆ. ಇದೇನು ಸಾಮಾನ್ಯ ವಿಜಯವೇ?

ಇನ್ನೊಂದು ವಿಷಯ ರಾಷ್ಟ್ರೀಯ ಸಭೆಯ ಹುರಿಯಾಳುಗಳು ನಾಲ್ಕೆಂಟು, ಹತ್ತುಹತ್ತು, ನೂರಿನ್ನೂರು ಮತಗಳು ಹೆಚ್ಚು ಬಿದ್ದು ಆರಿಸಿಬಂದಿಲ್ಲ ಸಾವಿರಗಟ್ಟಲೆ ಹೆಚ್ಚು ಮತಗಳನ್ನು ಸಂಪಾದಿಸಿ ಆರಿಸಿಬಂದಿರುತ್ತಾರೆ. ಗುಜರಾಥದಲ್ಲಿ ಶ್ರೀ|| ಭುಲಾಭಾಯಿ ದೇಸಾಯಿಯವರು ತಮ್ಮ ಪ್ರತಿಸ್ಪರ್ಧಿಗಿಂತ ಇಪ್ಪತ್ತೆರಡುವರೆ ಸಾವಿರ ಹೆಚ್ಚಿಗೆ ಮತಗಳನ್ನು ದೊರಕಿಸಿದರು ಮಹಾರಾಷ್ಟ್ರದೊಳಗೆ ಶ್ರೀ|| ಜೇಧೆ ಮತ್ತು ಗಾಡಗೀಳರು ಮೂರನೇ ಸ್ಥಾನಕ್ಕೆ ಒಂದ ಶೇಟ ವಾಲಚಂದ ಹಿರಾಚಂದರಿಗಿಂತ ೫೦-೫೫ ಸಾವಿರ ಹೆಚ್ಚಿಗೆ ಮತಗಳನ್ನು ಸಂಪಾದಿಸಿದ್ದಾರೆ ನಮ್ಮ ಕರ್ನಾಟಕದಲ್ಲಿ ರಾ|| ಬ|| ಪಾಟೀಲರಿಗೂ, ಶ್ರೀ|| ವಿಶ್ವನಾಥರಾವ ಜೋಗರಿಗೂ ಕೂಡಿ ಬಿದ್ದ ಮತಗಳ ಇಮ್ಮಡಿ ಮತಗಳು ದೇ|| ಭ|| ಹೊಸಮನಿ ಸಿದ್ಧಪ್ಪನವರಿಗೆ ಬಿದ್ದಿದ್ದವು. ಮುಂಬಯಿಯಲ್ಲಿ ಒಟ್ಟು ಬಿದ್ದ ೬೦ ಸಾವಿರ ಮತಗಳೊಳಗೆ ೩೬ ಸಾವಿರ ಮತಗಳು ರಾಷ್ಟ್ರೀಯ ಸಭೆಯ ಹುರಿಯಾಳುಗಳಾದ ಡಾ|| ದೇಶಮುಖ ಮತ್ತು ಶ್ರೀ|| ಮಸಾನಿಯವರಿಗೆ ಬಿದ್ದಿದ್ದವು ಇಡೀ ಮುಂಬಯಿ ಇಲಾಖೆಯೊಳಗಿನ ಮತದಾನದ ಲೆಕ್ಕ ಮಾಡಿದಲ್ಲಿ ನೂರಕ್ಕೆ ೭೭ರಷ್ಟು ಮತಗಳು ರಾಷ್ಟ್ರೀಯ ಸಭೆಯವರಿಗೆ ಬಿದ್ದಿದ್ದವೆಂದು ತಿಳಿಯುತ್ತದೆ ಮದ್ರಾಸ, ಬಿಹಾರ, ಸಂಯುಕ್ತಪ್ರಾಂತ ಮುಂತಾದ ಕಡೆಗೆ ಇನ್ನೂ ಹೆಚ್ಚಿಗೆ ಪ್ರಮಾಣದಲ್ಲಿ ರಾಷ್ಟ್ರೀಯ ಸಭೆಯವರಿಗೆ ಮತಗಳು ಬಿದ್ದಿವೆ ಸಾರಾಂಶ ಶೇಕಡಾ ೭೫ಕ್ಕಿಂತ ಹೆಚ್ಚಿಗೆ ಮತದಾರರು ರಾಷ್ಟ್ರೀಯ ಸಭೆಯವರಿಗೇ ತಮ್ಮ ಮತ ಕೊಟ್ಟು, ರಾಷ್ಟ್ರೀಯ ಸಭೆಯ ಕಾರ್ಯಕ್ರಮಕ್ಕೂ, ಕಾರ್ಯಪದ್ಧತಿಗೂ ತಮ್ಮ ಸಂಪೂರ್ಣ ಬೆಂಬಲವುಂಟೆಂದು ದೃಢೀಕರಿಸಿದ್ದಾರೆ.

ರಾಷ್ಟ್ರೀಯ ಸಭೆಯ ಸಾಮರ್ಥ್ಯ-ಪ್ರತಿಷ್ಠೆಗಳನ್ನು ಅಳೆಯಲಿಚ್ಛಿಸುವವರಿಗೆ ನಾವು ಮಹಾರಾಷ್ಟ್ರದೊಳಗಿನ ನೋಟವನ್ನು ನೋಡಲು ಬಿನ್ನೈಸುತ್ತೇವೆ ಮಹಾರಾಷ್ಟ್ರದ "ಕೇಸರಿ" ಪತ್ರದ ಅಂಕಿತದಲ್ಲಿದ್ದ ಪ್ರಾಂತವ, ಕೇಳಕರ ಪ್ರಕಟಿಸುತ್ತಿದ್ದ ಲೋಕಶಾಹಿ ಸ್ವರಾಜ್ಯ [illegible] ಅವರಮನೆಯು 'ಕೇಸರಿ ಸ್ತೋತ್ರ' ಧಾರವಾಡದ ಶ್ರೀ|| ಜೋಗ ವಿಶ್ವನಾಥರಾಯರ ಪರವಾಗಿ ಪ್ರಚಾರ ಮಾಡಹತ್ತಿದ್ದ ಕಂಡು ನಮ್ಮ ಕರ್ನಾಟಕದಲ್ಲಿ ಕೆಲಮಟ್ಟಿಗೆ ಗಡಿಬಿಡಿಯಾಗಹತ್ತಿತು "ಕೇಸರಿ" ಪತ್ರದ ಪ್ರಸ್ಥವು ಅಷ್ಟು ದೊಡ್ಡದು! ಕೇಸರಿ ಪತ್ರವು ರಾಷ್ಟ್ರೀಯ ಸಭೆಯನ್ನು ಹೀಯಾಳಿಸಿ ರಾಷ್ಟ್ರೀಯ ಪಕ್ಷದ ಹುರಿಯಾಳುಗಳಿಗಿಂತ ಶೇಟ ವಾಲಚಂದರಿಗೂ, ಶ್ರೀ|| ಗುಂಜಾಳರಿಗೂ ಆರಿಸಿಕೊಡಿರೆಂದು ಮಹಾರಾಷ್ಟ್ರೀಯರಿಗ ಬೋಧ (?) ಮಾಡಿತ್ತು ಅದರ ಪರಿಣಾಮವೇನಾಯಿತು? ಚುನಾವಣೆಯಲ್ಲಿ ಇಬ್ಬರೂ ರಾಷ್ಟ್ರೀಯ ಸಭೆಯ ಹುರಿಯಾಳುಗಳು ಆರಿಸಿಬಂದರು! "ಕೇಸರಿ"ಪಕ್ಷದ ಹುರಿಯಾಳುಗಳು ಮೂಲೆಗುಂಪಾದರು!! 'ಕೇಸರಿ'ಯು ರಾಷ್ಟ್ರೀಯ ಸಭೆಯ ಮೇಲೆ ಬಿದ್ದ ಪಸಲ್ದಿರಿಂದಲೇ ಹೀಗೆ ಅವರ ಪಕ್ಷದ ಅಧಃಪಾತಕ್ಕೆ ಕಾರಣವಾಯಿತೆಂದು ನಮ್ಮ ತರ್ಕವಿದೆ ರಾಷ್ಟ್ರೀಯ ಸಭೆಯ ಪ್ರತಿಷ್ಠೆಗೆ ಕುಂದು ತರಲಿಚ್ಛಿಸುವವರೆಲ್ಲರೂ ತಮ್ಮ ಹಿತಶತ್ರುಗಳೆಂದು ಜನತೆಗೆ ಭಾಸವಾಗಹತ್ತಿದೆ ರಾಷ್ಟ್ರೀಯ ಸಭೆಯು ರಾಷ್ಟ್ರಕ್ಕೆ ಪರಮ ಪೂಜ್ಯ ಸಂಸ್ಥೆಯಾಗಿ ಪರಿಣಮಿಸಿದೆ. ರಾಷ್ಟ್ರೀಯ ಸಭೆಯ ವಿರೋಧಿಗಳ ಬೆನ್ನು ಒಡೆಯಲಿಕ್ಕೆ ಜನತೆಯು ಎಷ್ಟಕ್ಕೂ ಸಿದ್ಧವಿಲ್ಲ.

ಚುನಾವಣೆಗೆ ನಿಲ್ಲಬೇಕಾದರೆ ರಾಷ್ಟ್ರೀಯ ಸಭೆಯವರು ತಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿ ಜನತೆಯ ಮುಂದೆ ಇಟ್ಟಿರುತ್ತಾರೆ. (೧) ಶ್ವೇತಪತ್ರಿಕೆಯ ತಿರಸ್ಕಾರ, (೨) ಸ್ವರಾಜ್ಯದ ಘಟನೆಯನ್ನು ತಯಾರಿಸಲಿಕ್ಕೆ ಪ್ರಜಾಪ್ರತಿನಿಧಿಗಳ ಸಭೆಯನ್ನು ಕೂಡಿಸಲು ಸರಕಾರಕ್ಕೆ ಒತ್ತಾಯಪಡಿಸುವದು ಮತ್ತು (೩) ದಬ್ಬಾಳಿಕೆಯ ಕಾಯಿದೆಗಳನ್ನು ರದ್ದುಪಡಿಸುವದು; ಈ ಮೂರು ಉದ್ದೇಶಗಳನ್ನು ಮುಂದಿಟ್ಟು ರಾಷ್ಟ್ರೀಯ ಸಭೆಯವರು ಪ್ರಚಾರದಲ್ಲಿ ಮತಯಾಚನೆ ಮಾಡಿದ್ದರು. ಈ ಉದ್ದೇಶಗಳು ಪೂರ್ಣ ಮಾನ್ಯವಾದ್ದರಿಂದಲೇ ಜನತೆಯು ಅತಿ ಪ್ರಚಂಡ ಬಹುಮತದಿಂದ ರಾಷ್ಟ್ರೀಯ ಸಭೆಯವರಿಗೆ ಆರಿಸಿಕೊಟ್ಟಿದೆಯೆಂದು ತಿಳಿಯಬೇಕಲ್ಲವೇ?

ಅಂತು ಈಗಿನ ರಾಜ್ಯಕಾರಭಾರವು ಜನತೆಗೆ ಸಮ್ಮತವಿಲ್ಲ, ಶ್ವೇತಪತ್ರಿಕೆಯ ಸ್ವರಾಜ್ಯ (?) ವಾಗಲಿ, ಅದರಲ್ಲಿ ಕೆಲಕೆಲ ತಿದ್ದುಪಡಿಗಳನ್ನು ಮಾಡಿ ತಯಾರಿಸಬಹುದಾದ ಇನ್ನಾವ ಯೋಜನೆಯಾಗಲಿ ಹಿಂದೀ ರಾಷ್ಟ್ರಕ್ಕೆ ಬೇಕಾಗಿಲ್ಲ, ದಬ್ಬಾಳಿಕೆಯ ಕಾಯಿದೆಗಳನ್ನು ಅಸ್ತಿತ್ವದಲ್ಲಿಡಲಿಕ್ಕೆ ಜನಾಂಗವು ಒಪ್ಪಿಗೆಯನ್ನೀಯದು. ರಾಷ್ಟ್ರೀಯ ಸಭೆಯವರು ಬೇಡುವಂತೆ, ಪ್ರಜಾಪ್ರತಿನಿಧಿಗಳು ಒತ್ತಟ್ಟಿಗೆ ಕೂಡಿ ತಮ್ಮ ಪರಂಪರೆಗೂ ಸ್ಥಿತಿ-ಗತಿಗೂ ಅನುಗುಣವಾಗಿ, ನಿರ್ಮಿಸಿದ ಸ್ವರಾಜ್ಯದ ಯೋಜನೆಯು ಬೇಕು, ಸ್ವಯಂನಿರ್ಣಯದ ಅಧಿಕಾರ ಬೇಕು. ಈ ಚುನಾವಣೆಯಲ್ಲಿ-ಮತದಾರರು-ಪರ್ಯಾಯದಿಂದ ರಾಷ್ಟ್ರವು-ಮಾಡಿರುವ ಖಡಾ-ಖಂಡ ನಿರ್ಣಯವು ಇದೇ.

ಸ್ಫುಟ ಸಂಚನೆಗಳು.

೧. ಬ್ರಿಟಿಶ ಪ್ರಧಾನ ಮಂಡಳದ "ಶ್ವೇತಪತ್ರಿಕೆ"ಯನ್ನು ಕೂಲಂಕುಷವಾಗಿ ಪರಾಂಬರಿಸಿ, ಹಿಂದೀ ರಾಜ್ಯ [illegible] ರಾಜ್ಯಘಟನೆಯನ್ನು ಸೂಚಿಸಲಿಕ್ಕೆ ನೇಮಕವಾದ ಜೊಯಿಂಟ ಪಾರ್ಲಿಮೆಂಟರಿ ಸಿಲೆಕ್ಟ ಕಮಿಟಿಯ ವರದಿಯು ಕಳೆದ ಗುರುವಾರ ಹಿಂದುಸ್ಥಾನದಲ್ಲೂ, ವಿಲಾಯತಿಯಲ್ಲೂ ಪ್ರಕಟವಾಯಿತು. ಕಮಿಟಿಯ ವರದಿಯು ೪೦೦ ಪುಟಗಳ ಒಂದು ದೊಡ್ಡ ಪುರಾಣದಂತಿದ್ದು, ನಮ್ಮ ಕೆಲವು ಹಳೇ ಪುರಾಣಗಳನ್ನು ಓದುವಾಗ ಬೇಸರ ಬರುವಂತೆ ಕಮಿಟಿಯ ಪುರಾಣವನ್ನೋದುವಾಗಲೂ ಮನಸ್ಸಿಗೆ ಬೇಸರ ಬರುತ್ತದೆ. ವರದಿಯ ಸಾರಾಂಶವನ್ನೂ, ಮುಖ್ಯಾಂಶಗಳನ್ನೂ ಈ ಸಂಚಿಕೆಯಲ್ಲಿ ಇನ್ನೊಂದೆಡೆ ಕೊಟ್ಟಿದ್ದೇವೆ. ಅವುಗಳನ್ನು ಚೆನ್ನಾಗಿ ಪರೀಕ್ಷಿಸಿದರೆ, ಕಮಿಟಿಯು ಸೂಚಿಸುವ ರಾಜ್ಯಘಟನೆಯೊಳಗೆ ಸ್ವರಾಜ್ಯವೂ ಇಲ್ಲ, ಸ್ವಾಯತ್ತತೆಯೂ ಇಲ್ಲ; ಸ್ವರಾಜ್ಯದ ಸೋಗೂ ಸಹ ಕಾಣುವದಿಲ್ಲ. ಇಲ್ಲಿಂದಲ್ಲಿ ತನಕ ಕಾನೂನು ಮಂಡಳಗಳು, ಮಂತ್ರಿ ಮಂಡಳಗಳು, ಸಲಹೆಗಾರ ಮಂಡಳಗಳು ತುಂಬಿ ತುಳುಕುತ್ತವೆ! ಅಂಥ ಆಡಂಬರಗಳಿಗೇನು ಕಡಿಮೆಯಿಲ್ಲ! ಅಧಿಕಾರ ಮಾತ್ರ ಪ್ರಾಂತಾಧಿಪರ ಮತ್ತು ಸರ್ವಾಧಿಪರ ಕೈಯಲ್ಲಿ! ಮಂತ್ರಿಮಂಡಳಗಳ ಸಲಹೆಯನ್ನು ತಿರಸ್ಕರಿಸಲಿಕ್ಕೆ ಅವರಿಗೆ ಅಧಿಕಾರವಿದೆ, ಕಾಯಿದೆ ಮಂಡಳದ ಸಹಾಯವಿಲ್ಲದೆ ಕಾಯಿದೆ ಮಾಡುವ ಅಧಿಕಾರವಿದೆ, ಲೋಕಪ್ರತಿನಿಧಿಗಳು ಮಾಡಿದ ಕಾನೂನುಗಳನ್ನು ನಿರಾಕರಿಸುವ ಅಧಿಕಾರವಿದೆ! ಬೊಕ್ಕಸದೊಳಗಿಂದ ಬೇಕಾದಷ್ಟು ಹಣ ಬೇಕಾದಂತೆ ತೆಗೆದು ವೆಚ್ಚ ಮಾಡಲಿಕ್ಕೂ ಅವರಿಗೆ ಅಧಿಕಾರವಿದೆ! ಪ್ರಸಂಗ ವಿಶೇಷಗಳಲ್ಲಿ — ಅವು ಯಾವವೆಂದು ಎಲ್ಲೂ ವ್ಯಾಖ್ಯೆ ಮಾಡಿಲ್ಲ — ಇಡೀ ರಾಜ್ಯಕಾರಭಾರವನ್ನು ತಮ್ಮ ಕೈಯಲ್ಲಿ ಕೊಳ್ಳಲಿಕ್ಕೂ ಅವರಿಗೆ ಅಧಿಕಾರವಿದೆ! ಅಂತೂ ಈ ಸರ್ವಾಧಿಕಾರ ಸಂಪನ್ನರಾದ ನಿರಂಕುಶ ಪ್ರಾಂತಾಧಿಪರು ನಮಗೆ ಬಿಟ್ಟುಕೊಡುವಷ್ಟೇ ಉಚ್ಛಿಷ್ಟ ಅಧಿಕಾರ ನಮಗೆ ಇಷ್ಟಲ್ಲ ಸಂಭ್ರಮದಿಂದ ಕೊಡಮಾಡಿದ ಸ್ವರಾಜ್ಯವು!

೨ ಮಧ್ಯವರ್ತಿಸರಕಾರದ ಘಟನೆಯನ್ನು ಪರೀಕ್ಷಿಸಿ ನೋಡುವ ಮೊಟ್ಟಮೊದಲು ಕಾನೂನು ಮಂಡಳಗಳಲ್ಲಿ ಇದಷ್ಟು ಸಂಸ್ಥಾನಿಕರ ಪ್ರತಿನಿಧಿಗಳನ್ನು ತಂದಿಟ್ಟು ನಮ್ಮ ಕೊರಳಿಗೆ ಕುಂಟೆ ಕಟ್ಟಿದ್ದಾರು. ಸಂಸ್ಥಾನಗಳ ಪ್ರತಿನಿಧಿಗಳನ್ನು ಸಂಸ್ಥಾನಿಕರೇ ಆರಿಸತಕ್ಕದ್ದು, ಪ್ರಜೆಗಳಲ್ಲ! ಸಂಸ್ಥಾನಿಕರ ಪ್ರತಿನಿಧಿಗಳು ಸರಕಾರದ ಪಕ್ಷ ಬಿಟ್ಟು ಲೋಕಪಕ್ಷಕ್ಕೆ ಕೊಡುವ

...ರೆಂಬ ಕಲ್ಪನೆಯೇ ಸಾಧ್ಯವಿಲ್ಲ. ಇನ್ನುಳಿದ ಕೆಲ ಸಭಾಸದರಲ್ಲಿ ಯುರೋಪಿಯನ್—ಎಂಗ್ಲೋ-ಇಂಡಿಯನ್ ವಗೈರೆ ವರ್ಗಗಳ ಪ್ರತಿನಿಧಿಗಳೂ ನಾನಾ ತರದ ವಿಶಿಷ್ಟ ಹಿತ-ಸಂಬಂಧಗಳ ಪ್ರತಿನಿಧಿಗಳೂ ಒಳಗೇ ಇರುವರು. ಇದೇ ಕಾನೂನು-ಮಂಡಳದಲ್ಲಿ ಲೀಕದಾಳಿಗರನ್ನು ನಿಜವಾದ ಲೋಕಪ್ರತಿನಿಧಿಗಳು ಸಿಕ್ಕರೆ ನಮ್ಮ ಸುದೈವವೇ ಸರಿ! ಈ ಕಾಯಿದೆ ಮಂಡಳಗಳಿಗೆ ಅಧಿಕಾರವಾದರೂ ಪೂರ್ಣ ಕೊಟ್ಟಿದೆಯೋ? ಸ್ವಸ್ವಾತಂತ್ರ್ಯ, ಪರರಾಷ್ಟ್ರೀಯ ರಾಜಕಾರಣ ಇವು ಕಾದಿಟ್ಟ ಖಾತೆಗಳು! ಮಧ್ಯವರ್ತಿ ಸರಕಾರದ ಆರ್ಥಿಕ ಸ್ಥಿತಿಯನ್ನೂ ಪತ್ತನ್ನೂ ಕಾಪಾಡಿಕೊಳ್ಳುವ ವಿಶೇಷ ಜವಾಬದಾರಿಯು (?) ಸರ್ವಾಧಿಪತಿಗಳ ಮೇಲಿರುವದರಿಂದ, ಬೊಕ್ಕಸದ ಕೀಲಿಕೈಯು ಅವರ ಕೈಯಲ್ಲೇ ಉಳಿಯಬೇಕಾದ್ದು ಕ್ರಮಪ್ರಾಪ್ತ ಸಂಗತಿ! ರಿಝರ್ವ ಬೇಂಕಿನ ಕಾಯಿದೆಗೆ ಮುಟ್ಟಬೇಡಿರಿ! ರೇಲ್ವೆ ಕಾರಭಾರಕ್ಕೆ ಕೈಹಚ್ಚಬೇಡಿರಿ! ಬ್ರಿಟಿಶರ ನೋಟದಿಂದ ಉದ್ಯೋಗ-ಉದ್ದಿಮೆಗಳನ್ನು ಸಂರಕ್ಷಿಸಲಿಕ್ಕೆಂದು ಬ್ರಿಟಿಶರ ಮೇಲೆ ನಿರ್ಬಂಧಗಳನ್ನು ಹಾಕಬೇಡಿರಿ! ಮೇಲಾಗಿ ಸರ್ವಾಧಿಪತಿಗಳಿಗೆ ವಿಶೇಷ ಜವಾಬದಾರಿಗಳಿವೆ, ವಿಶೇಷಾಧಿಕಾರಗಳಿವೆ. ಅವರಿಗೆ ಇಚ್ಛೆಯಾದರೆ "ಸರ್ವಾಧಿಕಾರಿ" (*Dictator*) ಯಾಗಲು ಸಹ ಅಧಿಕಾರವಿದೆಯೆಂತ ಹೇಳಿದರೂ ಹೇಳಬಹುದು!!

---

೩. ಮೇಲ್ಮ ಅಧಿಕಾರಿಗಳಾದರೂ ಹಿಂದೀ ದಿವಾಣರ ಅಂಕಿತದಲ್ಲಿರುವರೆಂದು ಆಶೆ ಮಾಡಲಿಕ್ಕೆ ಇಂಬು ಇಲ್ಲ. ಅವರ ನೇಮಣೂಕಿಗಳು ಈಗಿನಂತೆ ಭಾರತ ಮಂತ್ರಿಗಳ ಕೈಯಲ್ಲಿರುವವು. ನೌಕರಿಯ ಹಿಂದೀಕರಣದ ಬಗ್ಗೆ ಉಲ್ಲೇಖವಿಲ್ಲ. ಲಷ್ಕರಿ ಖಾತೆಯನ್ನು ಹಿಂದೀ ಜನತೆಗೆ ಒಪ್ಪಿಸಬೇಕೆಂದು ಕೂಲಿಕಾರ ಪಕ್ಷದವರು ಮಾಡಿದ ಸೌಮ್ಯ ಸೂಚನೆಯು ಸಹ ಜೋಯಿಂಟ ಕಮಿಟಿಗೆ ಮಾನ್ಯವಾಗಲಿಲ್ಲ. ಸಂಯುಕ್ತ ರಾಜ್ಯತಂತ್ರವು ಇಂತಿಷ್ಟೇ ಅವಧಿಯೊಳಗೆ ಅಮಲಿನಲ್ಲಿ ಬರುವದೆಂದು ನಿರ್ದೇಶವಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಕೂಡ ಕಮಿಟಿಯ ವರದಿಯು ನಿರಾಶೆಯನ್ನೇ ಉಂಟುಮಾಡುತ್ತದೆ. ಅದನ್ನು ನೋಡಿ ನೆಮಸ್ತರು ಸಹ ಅಸಂತುಷ್ಟರಾಗಿದ್ದಾರೆ. ಕಮಿಟಿಯ ಯೋಜನೆಯು ಸಮಾಧಾನಕರವಿಲ್ಲೆಂತಲೂ, ಅದಕ್ಕೆ ದೇಶದಲ್ಲಿ ಬಲ ಸಿಗುವದಿಲ್ಲೆಂತಲೂ ಮುಂಬಯಿಯ "ಟೈಮ್ಸ"ದಂತಹ ಸರಕಾರಪಕ್ಷೀಯ ಪತ್ರಿಕೆಯು ಹೇಳಬೇಕಾದರೆ ಅದು ಎಷ್ಟು ಪ್ರತಿಗಾಮಿ ಸ್ವರೂಪದ್ದಿರಬೇಕೆಂದು ವಾಚಕರೇ ಊಹಿಸಬಹುದು. ಶ್ರೀ| ತುಳಸೀ ಚರಣ ಗೋಸ್ವಾಮಿಯವರು ನುಡಿದಂತೆ, "ಈ ವರದಿಯಿಂದ ಬ್ರಿಟಿಶರು ಬುದ್ಧಿಪುರಸ್ಸರ ಹಿಂದೀ ರಾಷ್ಟ್ರದ ಅಪಮಾನ ಮಾಡಿರುತ್ತಾರೆ. ರೊಟ್ಟಿಗಾಗಿ ಕೈ ಮುಂದೆ ಮಾಡಿದ ರಾಷ್ಟ್ರದ ಕೈಯೊಳಗೆ, ರೊಟ್ಟಿಯ ಬದಲು ಕಲ್ಲುಗುಂಡು ಕೊಟ್ಟಿರುತ್ತಾರೆ!"

---

೪. ಜಬಲಪೂರ ಮ್ಯುನಿಸಿಪಾಲಿಟಿಯಲ್ಲಿ ನಡೆದ ಗೊಂದಲವನ್ನು ವಾಚಕರು ಮರೆತಿರಲಿಕ್ಕಿಲ್ಲ. ಅಧ್ಯಕ್ಷರಾದ ಪಂಡಿತ ದ್ವಾರಕಾಪ್ರಸಾದ ಮಿಶ್ರರವರು ಸರಕಾರಿ ಹುಕುಮಿಗೆ ಮಣಿಯದ್ದು ನೋಡಿ, ಪ್ರಾಂತಿಕ ಸರಕಾರವು ಕೊನೆಗೆ ಪಂಡಿತ ಮಿಶ್ರರನ್ನೇ ಅಧ್ಯಕ್ಷಪದದಿಂದ ತಳ್ಳಿ ಅವರ ಸ್ಥಳದಲ್ಲಿ ಜಾವಾ ಅಸಿಸ್ಟಂಟ ಕಮಿಶನರರನ್ನು ಅಧ್ಯಕ್ಷರಾಗಿ ನೇಮಿಸಿದ್ದಾರೆ. ಸರಕಾರದ ಈ ಜುಲುಮಿಯ ಕೃತ್ಯದ ನಿಷೇಧವೆಂದು ಮ್ಯುನಿಸಿಪಾಲಿಟಿಯ ೧೭ ಸಭಾಸದರು ತಮ್ಮ ಸಭಾಸದತ್ವಕ್ಕೆ ರಾಜಿನಾಮೆ ಕೊಟ್ಟು ಪಂಡಿತ ಮಿಶ್ರರ ಪಕ್ಷವನ್ನು ಹಿಡಿದ್ದಾರೆ. ಈ ರಾಜಿನಾಮೆಯಿಂದ ಬರಿದಾದ ಸ್ಥಳಗಳ ಬಗ್ಗೆ ಈಗ ಚುನಾವಣೆ ಮಾಡಬೇಕಾಗಿದೆ. ಈ ಚುನಾವಣೆಯಲ್ಲಿ ನಾಗರಿಕರು ಪಂಡಿತ ಮಿಶ್ರರವರ ಅನುಯಾಯಿಗಳನ್ನೇ ಆರಿಸಿ ಕೊಟ್ಟು ಸರಕಾರಕ್ಕೆ ಯೋಗ್ಯ ಉತ್ತರ ಕೊಡುವರೆಂದು ಅಪೇಕ್ಷೆಯಿದೆ.

ಎಸೆಂಬ್ಲಿಗೆ ಅಧ್ಯಕ್ಷರಾರು?

ಎಸೆಂಬ್ಲಿಯ ಚುನಾವಣೆಯು ಈಗ ಮುಗಿಯುತ್ತ ಬಂದದ್ದರಿಂದ ದಿಲ್ಲಿಯಲ್ಲಿ ರಾಜ್ಯಕರ್ತರೂ, ರಾಜಕಾರಣಿಗಳೂ ಎಸೆಂಬ್ಲಿಯಲ್ಲಿ ಕೊಂಗ್ರೆಸ ಪಕ್ಷದ ಬಲಾಬಲವನ್ನು ನಿರ್ಣಯಿಸುವದರಲ್ಲಿ ತೊಡಗಿದ್ದಾರೆ. ರಾಷ್ಟ್ರೀಯ ಸಭೆಯ ಪ್ರತಿನಿಧಿಗಳ ಸಂಖ್ಯೆಯು ೫೦ ಆಗಬಹುದೆಂದು ಅನುಮಾನವಿದೆ. ಪಂಡಿ[illegible] ರಾಷ್ಟ್ರೀಯ ಪಕ್ಷದ ೭ ಸಭಾಸದರು ಜಾತೀಯ ನಿರ್ಣಯವೊಂ[illegible] ಉಳಿದ ವಿಷಯಗಳಲ್ಲಿ ರಾಷ್ಟ್ರೀಯ ಸಭೆಯವರೊಡನೆ ಸಹ[illegible] ಮಾಡುವರು. ಹೀಗೆ ಜಾತೀಯ ಪ್ರತಿನಿಧಿಗಳು ಕೊಂಗ್ರೆಸ ಪಕ್ಷಕ್ಕೆ ಸೇರುವರೆಂಬ ಬಗ್ಗೆ ಸಂದೇಹವೇ ಇಲ್ಲ. ಇನ್ನುಳಿದವರು ಮುಸಲ್ಮಾನರು. ಬ್ಯಾ| ಜಿನ್ನಾರವರೂ, ಅವರ ಅನುಯಾಯಿಗಳೂ ಮಹತ್ವದ ವಿಷಯಗಳಲ್ಲಿ ರಾಷ್ಟ್ರೀಯ ಸಭೆಯವರಿಗೆ ತಮ್ಮ ಬೆಂಬಲ ಕೊಟ್ಟಾರೆಂದು ತರ್ಕ ಮಾಡಬಹುದು. ಮುಸ್ಲೀಮ ಯುನಿಟಿ ಬೋರ್ಡದ ಪರವಾಗಿ ಆರಿಸಿ ಬಂದ ಮಹಮ್ಮದೀಯರು ಕೆಲಕೆಲವು ವಿಷಯಗಳಲ್ಲಿ ಕೊಂಗ್ರೆಸ ಪಕ್ಷದವರ ಕೂಡ ಸಹಕಾರವನ್ನು ಮಾಡುವರೆಂದು ಅನುಮಾನ ಮಾಡಲಾಗಿದೆ. ಅಂತು ಎಸೆಂಬ್ಲಿಯೊಳಗಿನ "ವಿರೋಧಿ ಪಕ್ಷ"ದ ಬಲವು ಕನಿಷ್ಠ ಪಕ್ಷಕ್ಕೆ ೭೦ ಜನರದಿರುವದೆಂತಲೂ, ಕೆಲ ಕೆಲವು ವಿಷಯಗಳಲ್ಲಿ ಅದು ೭೦ಕ್ಕೆ ಮಿಕ್ಕಿ ಹೋಗಬಹುದೆಂತಲೂ ಎಣಿಸಲಾಗಿದೆ. ಪಂಡಿತ ಮೋತಿಲಾಲರ ಸ್ವರಾಜ್ಯ ಪಕ್ಷಕ್ಕಿಂತ ಈಗಿನ ಕೊಂಗ್ರೆಸ ಪಕ್ಷವೇ ಹೆಚ್ಚು ಬಲಿಷ್ಠವಾಗಿದೆಯೆಂದು ದಿಲ್ಲಿಯ ರಾಜಕಾರಣಿಗಳು ಹೇಳುತ್ತಾರೆ.

***

ಎಸೆಂಬ್ಲಿಯ ಅಧ್ಯಕ್ಷರಾದ ಸರ್ ಷಣ್ಮುಖಮ್ ಚೆಟ್ಟಿಯವರು ಚುನಾವಣೆಯಲ್ಲಿ ಸೋತುಹೋದದ್ದರಿಂದ, ಮುಂದಿನ ಎಸೆಂಬ್ಲಿಯಲ್ಲಿ ಯಾರು ಅಧ್ಯಕ್ಷರಾಗುವರೆಂಬ ಬಗ್ಗೆ ತರ್ಕ-ವಿತರ್ಕಗಳಾಗಹತ್ತಿವೆ. ಕೆಲವರು ಕಾಶಿಯ ಡಾ| ಭಗವಾನದಾಸರ ಹೆಸರು ಸೂಚಿಸುತ್ತಾರೆ. ಭಗವಾನದಾಸರು ಬೇರೆ ಬೇರೆ ದೇಶಗಳ ರಾಜ್ಯಘಟನೆಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದ ಘಟನಾಶಾಸ್ತ್ರಕೋವಿದರಂತೆ. ಆದರೆ, ಎಸೆಂಬ್ಲಿಯ ಅಧ್ಯಕ್ಷಪದಕ್ಕೆ ಕಾಯಿದೆ ಪಂಡಿತರೂ, ಕಾಯಿದೆ ಕೌನ್ಸಿಲುಗಳ ಕಾರ್ಯದ ಅನುಭವಪೂರ್ಣರೂ ಅವಶ್ಯವೆಂದು ಸರಕಾರದ ಅಭಿಪ್ರಾಯವಿರುವದರಿಂದ ಡಾ| ಭಗವಾನದಾಸರಿಗೆ ಅಧ್ಯಕ್ಷಸ್ಥಾನ ಸಿಗುವ ಸಂಭವವು ಕಡಿಮೆಯಂತೆ. ಕೆಲವರು ಸರ್ ಅಬ್ದುರ್ ರಹೀಮರ ಹೆಸರು ಸೂಚಿಸುತ್ತಾರೆ. ಇವರು ಪ್ರಖ್ಯಾತ ಕಾಯಿದೆ ಪಂಡಿತರಿದ್ದಾರೆ. ಬಹಳ ಕಾಲ ಹ್ಯಾಕೋರ್ಟಿನ ನ್ಯಾಯಾಧೀಶರಾಗಿ ಕೆಲಸ ಮಾಡಿದವರಿದ್ದಾರೆ, ಕಾರ್ಯಕಾರಿ ಕೌನ್ಸಿಲರರಾಗಿ ರಾಜ್ಯಭಾರದ ಅನುಭವ ಪಡೆದವರಿದ್ದಾರೆ. ಎಸೆಂಬ್ಲಿಯಲ್ಲಿ ಸ್ವತಂತ್ರ ಪಕ್ಷದ ಅಧ್ಯಕ್ಷರಾಗಿ ಮೆರೆದವರಿದ್ದಾರೆ. ಇವರ ಹೆಸರು ಮುಂದೆ ಬಂದರೆ ಸರಕಾರವು ವಿರೋಧಿಸಲಿಕ್ಕಿಲ್ಲೆಂದು [illegible]ಕ್ಷೆಯಾಗಿದೆ. ಕೊಂಗ್ರೆಸ ಪಕ್ಷದವರೂ ಕೂಡ ಅವರಿಗೆ ಮನ್ನಣೆ [illegible]ಬಹುದೆಂದು ಕಾಣುತ್ತದೆ. ಆದರೆ ಸರ ಅಬ್ದುರ್ ರಹೀಮ[illegible]ರವರು ಒಪ್ಪುವರೋ ಹ್ಯಾಗೆಂಬ ಕುರಿತು ಸಂದೇಹವಿದೆ. ಸರ್ ಸಾಹೇಬರು ವೃದ್ಧರಾಗಿದ್ದು ಅವರ ಪ್ರಕೃತಿಯು ನೆಟ್ಟಗಿರುವದಿಲ್ಲ. ಎಸೆಂಬ್ಲಿಯ ಅಧ್ಯಕ್ಷಪದದ ಶ್ರಮ ಸಹಿಸಲು ಅವರಿಂದ ಆಗುವದೋ ಏನೆಂಬ ಪ್ರಶ್ನೆ! ಕೆಲವು ಜನರು ಮಿ| ಜಿನ್ನಾರವರ ಹೆಸರು ಸೂಚಿಸಿರುತ್ತಾರೆ. ಆದರೆ ಜಿನ್ನಾರವರ ಮನೋವೃತ್ತಿಯು ಅಧ್ಯಕ್ಷಪದ ಸ್ವೀಕರಿಸಲಿಕ್ಕೆ ಒಪ್ಪುವದೆಂದು ತೋರವದಿಲ್ಲ. ಅಧ್ಯಕ್ಷರಾದವರು ಬಾಯಿಗೆ ಬೀಗ ಹಾಕಬೇಕು, ರಾಜಕಾರಣದಲ್ಲಿ ತಟಸ್ಥ ವೃತ್ತಿಯನ್ನು ತಳೆಯಬೇಕು. ಬ್ಯಾ| ಜಿನ್ನಾರಂಥ ವಿವಾದಪಟುಗಳೂ, ಪ್ರಮುಖ ನಾಮಿ ಮುಸಲ್ಮಾನರ ಮುಖಂಡರೂ ಪ್ರತ್ಯಕ್ಷ ರಣಕ್ಷೇತ್ರವನ್ನು ಬಿಟ್ಟು, ಮೇಲೆ ಪ್ರೇಕ್ಷಕಗಣದಲ್ಲಿ ಹೋಗಿ ಕೈಚಾಚಿ ಕೂಡ್ರಲಿಕ್ಕೆ ಸನ್ನದ್ಧರಾದಾರೆಂದು ಕಾಣುವದಿಲ್ಲ.

— ಜೊಯಿಂಟ ಪಾರ್ಲಿಮೆಂಟರಿ ಕಮಿಟಿಯ ವರದಿಯ ಸಮಾಚಾರ ತಿಳಿಯ್ಕೊಳ್ಳಲು ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ಬರುವ ತಾ| ೫ನೇಗೆ ಪಾಟಣಾದಲ್ಲಿ ಕೂಡುವದು. ಪಾರ್ಲಿಮೆಂಟರಿ ಬೋರ್ಡಿನ ಸಭೆ ಸಹ ಅದೇ ಸಮಯಕ್ಕೆ ಅಲ್ಲಿಯೇ ಕರೆಯಲ್ಪಟ್ಟಿದೆ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಶೇರಿನ ದರಗಳೂ, ಡೈರೆಕ್ಟರರೂ ಬಹಳ [illegible] ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದು [illegible].

Kumta Agents.—
D K. NAYAK Bros
Honavar Agent—
R V. PRABHU Esq

K. Padmanabha Rao & Sons.
BELGAUM
Chief Agents for
Karnatak Districts & S. M. States

ಯುದ್ಧ ನವ ಬೇಕು !

[ನಿರೀಕ್ಷಕನು ಬರೆದುದು]

ರಾಜಕಾರಣಧುರಂಧರರ ಮಾತಿಗೂ ಕೃತಿಗೂ ಹೋಲಿಕೆ. ಅಭ್ಯಂತರ ರಾಷ್ಟ್ರಗಳು ತಮ್ಮ ತಮ್ಮೊಳಗ ಯುದ್ಧ ಹೂಡಿಕೊಂಡು ನಷ್ಟಪಡಬಾರದೆಂದು ಜಿನಿವಾದಲ್ಲಿ ರಾಷ್ಟ್ರಸಂಘದ ಸ್ಥಾಪನೆಯಾಯಿತ. ಬೇರೆ ಬೇರೆ ಕಲಹ ಕಾರಣಗಳನ್ನು ಪರಿಹರಿಸಿಕೊಳ್ಳುವದಕ್ಕಾಗಿ ಬೇರೆ ಬೇರೆ ರಾಷ್ಟ್ರಗಳು ಈ ೧೪ ವರ್ಷಗಳಲ್ಲಿ ೩೪೩೮ ಕರಾರುಗಳನ್ನು ಮಾಡಿಕೊಂಡವು. ಅವೆಲ್ಲ ೧೪೩ ಗ್ರಂಥಗಳಲ್ಲಿ ಅಚ್ಚಾಗಿ ಪ್ರಕಟವಾಗಿವೆ. ಪ್ರತಿಯೊಂದು ೪೦೦-೫೦೦ ಪುಟಗಳ ಗ್ರಂಥವಾಗಿದೆ. ಆದಾಗ್ಯೂ ಕಲಹ ಕಾರಣಗಳು ಸಂಪೂರ್ಣವಾಗಿ ಪರಿಹಾರವಾಗಲೊಲ್ಲವು. ಬ್ರಿಟಿಶ, ಅಮೇರಿಕಾ, ಜಪಾನ ದೇಶಗಳು ತಮ್ಮ ತಮ್ಮ ನೌಕಾಬಲವನ್ನು ಹೆಚ್ಚಿಸುವದಕ್ಕಾಗಿ ಲಂಡನಿನಲ್ಲಿ ಗುಪ್ತವಾಗಿ ಚರ್ಚೆ ನಡೆಸುತ್ತಿವೆ. ಜಪಾನ ದೇಶದ ನೌಕಾಬಲವನ್ನು ಹೆಚ್ಚಿಸಗೊಡಬಾರದೆಂದು ಬ್ರಿಟಿಷ್ ಅಮೇರಿಕಾ [illegible] ಕಾರಸ್ಥಾನ [illegible] ಅವಲಂಬಿಸಿದ್ದಾರೆ, ಹೆಚ್ಚಿಸಿಕೊಂಡಹೊರತು [illegible]ನ ದೇಶದ ರಾಜ್ಯಭಾರಿಗಳಾದ ಮಿ|ಮಿತ್ಸುದಾರಾ ರವರಿಗೆ ಸಮಾಧಾನವಿಲ್ಲ. ಆದರಿಂದ ಒಪ್ಪಂದದ ಮಾತು-ಕತೆ ಮುರಿದು ಹೋಯಿತೆಂದು ವಾರ್ತೆ ಹಬ್ಬಿತ್ತು, ಮುರಿದು ಹೋಗಲಿಲ್ಲವಾಗಿ ಬ್ರಿಟಿಶ ಸರಕಾರದ ರಾಜ್ಯಭಾರಿಗಳಾದ ಸರ್ ಜ್ಹೋನ್ ಸೈಮನ್‌ರವರು ನಿರಾಕರಿಸುತ್ತಾರೆ. ಆದಾಗ್ಯೂ ಒಪ್ಪಂದದ ಮಾತು ಕತೆ ಯಶಸ್ಸು ಹೊಂದುವ ಲಕ್ಷಣಗಳಿಲ್ಲ. ಇಂದಿಲ್ಲ, ನಾಳೆ ಅದು ಮುರಿದು ಹೋಗಲೇ ಬೇಕು. ಕಾರಣವಾದರೂ ಸ್ಪಷ್ಟವಿದೆ. ಜರ್ಮನಿಗ ಸುತ್ತುಗಟ್ಟಿ ಕಣ್ಣಿಗೆ ತರುವದಕ್ಕಾಗಿ ಫ್ರೆಂಚ ಸರಕಾರವು ರಶಿಯಾ ಸರಕಾರದೊಡನೆ ಒಡಂಬಡಿಕೆ ಮಾಡಿಕೊಂಡಿದೆ. ಜರ್ಮನಿಯೊಡನೆ ಫ್ರೆಂಚ ಸರಕಾರವು ಯುದ್ಧ ಮಾಡುವ ಪ್ರಸಂಗದಲ್ಲಿ ರಶಿಯಾ ದೇಶದ ಸರಕಾರವು ಫ್ರೆಂಚರಿಗೆ ತಮ್ಮ ಕಡೆಯ ಸಹಾಯವನ್ನೂ ಸೈನ್ಯ ಕೊಡಮಾಡುವ ಅಭಿವಚನ ಕೊಟ್ಟಿರುವದಾಗಿ ಕಳೆದ ಶುಕ್ರವಾರ ತಾ ೨೩ನೇಗೆ ಪಾರೀಸದಲ್ಲಿ ಸೇರಿದ ಚೇಂಬರ ಯಾನೆ ಫ್ರೆಂಚ ಲೋಕಪ್ರತಿನಿಧಿ ಸಭೆಯಲ್ಲಿ ಸೈನ್ಯ ಖಾತೆಯ ಅರ್ಚಬೊಂಡರವರು ಉದ್ಗರಿಸಿದ್ದಾರೆ. ರಶಿಯಾ ದೇಶದ ವೈಮಾನಿಕ ದಳದಷ್ಟು ಪ್ರಚಂಡ ದಳವು ಲೋಕದಲ್ಲಿ ಇನ್ನೆಲ್ಲಿಲ್ಲವಾಗಿಯೂ ಅವರು ಹೇಳಿದರು. ಜರ್ಮನಿಯವರು ರ್ಹೈನ ನದಿಯ ಪ್ರದೇಶದಲ್ಲಿ ಸೈನ್ಯಗಳ ಓಡಾಟಕ್ಕೆ ಅವಶ್ಯವಿರುವ ಸಂಕಗಳನ್ನೂ, ಮೋಟಾರ ಮಾರ್ಗವನ್ನೂ ಕಟ್ಟಿಸುತ್ತಿರುವರಾಗಿಯೂ ಅವರು ಹೇಳಿ ೮೦ ಕೋಟಿ ಫ್ರೆಂಕುಗಳನ್ನು ಸೈನ್ಯ ಖಾತೆಗೆ ಹೆಚ್ಚಿಗೆ ಮಂಜೂರ ಮಾಡಬೇಕಾಗಿ ಲೋಕಪ್ರತಿನಿಧಿ ಸಭೆಯಲ್ಲಿ ಬೇಡಿಕೊಂಡಿದ್ದಾರೆ. ರಶಿಯಾ ದೇಶವು ಫ್ರಾನ್ಸ ದೇಶದ ಪಕ್ಷಪಾತಿಯಾಗಿ ರಣಕ್ಷೇತ್ರದಲ್ಲಿಳಿದರೆ ಜಪಾನ ದೇಶವು ಜರ್ಮನಿಯ ಪಕ್ಷಕ್ಕೆ ಸೇರುವದು ಖಂಡಿತ. ಜರ್ಮನಿ-ಜಪಾನ ದೇಶಗಳೊಳಗೆ ಗುಪ್ತ ತಹನಾಮೆಯಾದ ವಾರ್ತೆಯಿದೆ. ಯುಗೋಸ್ಲಾವಿಯಾದ ಅರಸರಾದ ಅಲೆಕ್ಝಾಂಡರರಿಗೆ ಹಂಗೇರಿಯಾ ಸರಕಾರದಿಂದ ಕೊಲ್ಲಲಾಯಿತೆಂದು ಯುಗೋಸ್ಲಾವಿಯಾ ಸರಕಾರವು ಜಿನೇವಾ ರಾಷ್ಟ್ರಸಂಘದಲ್ಲಿ ಕಳೆದ ರವಿವಾರ ದೂರಿಕೊಂಡಿದೆ. ಯುಗೋಸ್ಲಾವಿಯಾ ರುಮಾನಿಯಾ ಸರಕಾರಗಳು ಹಂಗೇರಿಯಾ ಸರಕಾರದ ಮೇಲಿನ ಆರೋಪವನ್ನು ಎತ್ತಿಹಿಡಿದು ರಾಷ್ಟ್ರಸಂಘಕ್ಕೆ ಈ ಕುರಿತು ತಕ್ಕ ಇಲಾಜು ಕೈಕೊಳ್ಳಲು ಆಗ್ರಹ ಮಾಡುತ್ತಿವೆ. ಇದೇ ರಾತ್ರೆ ಹಂಗೇರಿಯಾ ಸರಕಾರದ ರಾಜ್ಯಭಾರಿಗಳಾದ ಎಮ್ ಎಖಾರ್ಡ ರವರು ಬೇರೊಂದು ಕಾರಣದ ಸಂಬಂಧ ಜಿನೇವಾಕ್ಕೆ ತಲ್ಪಿದ್ದರು. ಯುಗೋಸ್ಲಾವಿಯಾ ದೇಶದ ಆರೋಪ ಕೇಳಿದೊಡನೆ ಅವರು ತೀಕ್ಷ್ಣ ನಿಷೇಧ ಮಾಡಿ ಹಂಗೇರಿಯಾ ಸರಕಾರದ ಗೌರವಹಾನಿ ಮಾಡುವ ಉದ್ದೇಶದಿಂದ ಈ ಆರೋಪ ಸೃಷ್ಟಿಸಲಾಗಿದೆಂದು ಆಕ್ಷೇಪ ಮಾಡಿದರು. ಜಪಾನ—ರಶಿಯಾ ದೇಶಗಳೊಳಗೆ ಮಂಚೂರಿಯಾ ಪ್ರದೇಶದ ಕುರಿತು ಕಲಹವಿದೆ. ಸದ್ಯಕ್ಕೆ ಅಲ್ಲಿ ೩೦ ಗ್ರಾಮುಗಳನ್ನು ಜಪಾನದ ಸೈನ್ಯಾಧಿಕಾರಿಗಳು ನಿರ್ದಯದಿಂದ ಸುಟ್ಟುಹಾಕಿರುವದಾಗಿ ದಿಲ್ಲಿಯ "ಹಿಂದುಸ್ಥಾನ ಟೈಮ್ಸ" ಪತ್ರಿಕೆಯ ಟೋಕಿಯೋದ ಸುದ್ದಿಗಾರರು [illegible] ಹೀಗೆಲ್ಲ [illegible] ವಾತಾವರಣವು ಯುದ್ಧದ [illegible]ಯಿಂದ ತುಂಬಿ ಹೋಗಿದೆ. ಸೋಂಟರಗಾಳಿ ಬೀಸದ, ಮಂದ ಮಾರುತನ ಸಂಚಾರ ರೂಪದಿಂದ ಒಂದು ನವ ಕಿಡಿ ಬಿದ್ದರೂ ಸಾಕು ಹೊಗೆಯಿಂದ ಕಿಡಿ ಎದ್ದು ಪ್ರಚಂಡ ರಣಯಜ್ಞಕುಂಡ ಉರಿಯಬಹುದು.

ವೃತ್ತಸಾರ.

— ರತ್ನಾಗಿರಿ ಜಿಲ್ಹೆಯ ದಾಪೋಲಿ ಸಬಜಡ್ಜ ಕೋರ್ಟಿನಲ್ಲಿ ಒಂದು ಮನೋರಂಜಕ ದಾವೆಯ ಇತ್ಯರ್ಥವಾಯಿತು. "ಪೂರಣಪೋಳಿಯ ದಾವೆಯದು." ದಾವೆಯ ಹಕೀಕತು ಹೀಗೆ — ೧೭೭೭ನೇ ಇಸ್ವಿಯಲ್ಲಿ ಪ್ರತಿವಾದಿ ಜಗನ್ನಾಥ ಹರಿ ಪರಾಂಜಪೆ ಮೊದಲಾದ ಮೂವರ ಹಿರಿಯರು ಜಳಗಾಂವಿಯ ಶ್ರೀ ಲಕ್ಷ್ಮೀನಾರಾಯಣ ದೇವರಲ್ಲಿ ಪ್ರತಿ ರಾಮನವಮಿಯ ಮಹೋತ್ಸವಕ್ಕೆ ಊರ-ಪರಊರ ಗೃಹಸ್ಥರಿಗೆ 'ಪೂರಣಪೋಳಿ' ಹೋಳಿಗೆಯ ಊಟ ಹಾಕುವದಾಗಿ ಕರಾರು ಮಾಡಿದ್ದರಾಗಿಯೂ, ಆ ಕರಾರಿನಂತೆ ಹರಿ ಪರಾಂಜಪೇಯವರು, ಅವರ ತರುವಾಯ ಪ್ರತಿವಾದಿ ಜಗನ್ನಾಥ ಪರಾಂಜಪೇಯವರು ಪ್ರತಿ ವರ್ಷ ಔತಣ ಮಾಡುತ್ತ ಬಂದಿದ್ದರಾಗಿಯೂ, ಇತ್ತಲಾಗಿ ಔತಣ ಕೊಡಲಿಕ್ಕೆ ನಿರಾಕರಿಸುತ್ತಿರಾಗಿಯೂ ವಾದಿಯ ಸಾಧನ. ಪ್ರತಿವಾದಿರಿಂದ ಔತಣ ಪಡೆಯಲಿಕ್ಕೆ ತಮಗೆ ಮಾಮೂಲ ಹಕ್ಕು ಇರುತ್ತದಾಗಿ ದೇವಸ್ಥಾನದ ಕಾರಭಾರಿಗಳೂ, ಹಳ್ಳಿಯ ಪ್ರಮುಖರೂ ಈ ದಾವೆ ತಂದಿದ್ದರು. ವಾದಿರಿಗೆ ಇಂಥ ದಾವೆ ತರಲಿಕ್ಕೆ ಹಕ್ಕಿಲ್ಲವಾಗಿಯೂ, ಕಾಯಿದೆಯಂತೆ ೧೭೭೭ನೇ ಇಸ್ವಿಯ ಕರಾರಿನಿಂದ ತಮ್ಮ ಮೇಲೆ ಯಾವದೇ ಪ್ರಕಾರದ ಜವಾಬದಾರಿ ಇರುವದಿಲ್ಲವಾಗಿಯೂ ಪ್ರತಿವಾದಿ ತಕರಾರು ಮಾಡಿದರು. ಸಬಜಡ್ಜರು ಪ್ರತಿವಾದಿರ ತಕರಾರನ್ನು ಮನ್ನಿಸಿ ದಾವೆಯನ್ನು ರದ್ದುಪಡಿಸಿದ್ದಾರೆ. ಶ್ರೀ ಲಕ್ಷ್ಮೀನಾರಾಯಣ ದೇವರಿಗೆ 'ಪೂರಣಪೋಳಿ'ಯ ನೈವೇದ್ಯ ತಪ್ಪಿದಂತಾಯಿತು!

— ಇದೇ ಕಳೆದ ನವಂಬರ ೧ನೇ ತಾರೀಖಿನಿಂದ 'ಇಂಟರನೆಶನಲ್ ರಾಯ್ಸ ಕಂಪನಿ' ಯೆಂಬವೊಂದು ಪ್ರಚಂಡ ಕಂಪನಿಯು ಲಂಡನಿನಲ್ಲಿ ಸ್ಥಾಪಿತವಾಗಿದೆ. ಅಕ್ಕಿಯ ವ್ಯಾಪಾರದಲ್ಲಿ ಏಕಸೈ ಮಾಡುವದೇ ಈ ಕಂಪನಿಯ ಉದ್ದೇಶವಿರಬೇಕು. ಕಂಪನಿಯ ಬಂಡವಲು ಅರ್ಧ ಲಕ್ಷ ಪವನು. ರೆಲ್ಲಿ ಬ್ರದರ್ಸ ಕಂಪನಿಯವರೂ, ರಂಗೂನಿನ ಬ್ಲೇಕ್‌ವುಡ್ ಕಂಪನಿಯವರೂ, ಇತರೇ ಅಕ್ಕಿ ವ್ಯಾಪಾರದ ಕಂಪನಿಗಳೂ ಈ ಕಂಪನಿಯಲ್ಲಿ ಸೇರಿವೆ. ಮಲಬಾರ, ಕೊಂಕಣ ಪ್ರದೇಶ, ಬಂಗಾಲ ಹಾಗು ರಂಗೂನದೊಳಗಿನ ಅಕ್ಕಿಯ ದರ ಈ ಮುಂದೆ ಈ ಕಂಪನಿಯ ನಿರ್ಣಯ ಮೇಲೆ ಅವಲಂಬಿಸಿರುವದು. ಕಂಪನಿಯವರು ಈ ಮುಂದೆ ಈ ಕಂಪನಿ ಬೇಕಾದ ದರಕಟ್ಟಿ ಒಕ್ಕಲಿಗರಿಗೆ ಸುಲಿಯಹತ್ತಿದರೆ, ಒಕ್ಕಲಿಗರ ರಕ್ಷಣೆ ಮಾಡುವದು ಹಿಂದುಸ್ಥಾನ ಸರಕಾರಕ್ಕೆ ಸಾಧ್ಯವಾಗದು. ಯಾಕಂದರೆ, ಬ್ರಿಟಿಶ ಕಂಪನಿಗಳ ಹಿತಕ್ಕೆ ಹಾನಿ ತಟ್ಟುವಂಥ ಯಾವದೇ ಉಪಾಯ ಮಾಡಲಿಕ್ಕೆ ಹಿಂದುಸ್ಥಾನ ಸರಕಾರಕ್ಕೆ ಅಧಿಕಾರವಿಲ್ಲ. ಅಕ್ಕಿ ಬೆಳೆಸುವ ರೈತರ ಮೇಲೆ ಇದೊಂದು ದೊಡ್ಡ ಆಪತ್ತು ಬಂತು!

— ತಾ ೧೬-೧೧-೩೪ನೇ [illegible] ದಿನ ತ್ರಿವೇಂದ್ರಮ್‌ದಲ್ಲಿ ಶ್ರೀ| ಅನಂತ ಪದ್ಮನಾಭ ಸ್ವಾಮಿ ದೇವರ ಅವಭೃತ ಸಮಾರಂಭವಾಯಿತು. ಮುಂಚಿನ ದಿನ ತ್ರಾವಣಕೋರದ ಮಹಾರಾಜರು ಉಪೋಷಣ ಮಾಡಿದ್ದರು. ಉತ್ಸವದ ಕಾಲಕ್ಕೆ ಒಳೇ ಧೋತರವನ್ನುಟ್ಟು ಬರಿಮೈಯಿಂದ, ಬರಿಗಾಲಿನಿಂದ ಬಿಚ್ಚುಗತ್ತಿಹಿಡಿದು ಪಲ್ಲಕ್ಕಿಯ ಮುಂಭಾಗದಲ್ಲಿ ನಡೆದಿದ್ದರು. ಬ್ರಾಹ್ಮಣರು ವೇದಘೋಷ ಮಾಡುತ್ತಿದ್ದರು. ಕುದುರೆ ಸವಾರರೂ ಸಂಭ್ರಮದಿಂದ ಕೂಚು ಮಾಡುತ್ತಿದ್ದರು. ಮೆರವಣಿಗೆಯು ೩ ಮೈಲು ದೂರವಿರುವ ಸಮುದ್ರಕ್ಕೆ ಹೋಗಿ ಅಲ್ಲಿ ಎಲ್ಲರೂ ಸ್ನಾನ ಮಾಡಿದರು. ಆ ಮೇಲೆ ಪಲ್ಲಕ್ಕಿಯು ಶ್ರೀ ದೇವಸ್ಥಾನಕ್ಕೆ ಹಿಂದಿರುಗಿ ಬಂದ ಬಳಿಕ ಸಮಾರಂಭವು ಸಮಾಪ್ತವಾಯಿತು.

— ಆಸಾಮ ಪ್ರಾಂತದ ರಾಜಧಾನಿಯಾದ ಗೌಹತಿ ನಗರದಿಂದ ೫೦ ಮೈಲು ಅಂತರದಲ್ಲಿ ದುರಮಾರ್ಗ ಎಂಬ ಗ್ರಾಮವಿದೆ. ಈ ಗ್ರಾಮದ ಒಬ್ಬನಿಗೆ ಕನಸು ಬಿತ್ತು. ಆ ಊರ ಕೆರೆಯ ಆಗ್ನೇಯ ಪಾರ್ಶ್ವದಲ್ಲಿ ಒಂದು ವಿಶಾಲವಾದ ಮರವಿದೆ. ಆ ಮರದ ಬುಡದಲ್ಲಿ ಒಂದು ಶಿವಾಲಯವಿದೆ, ಹೀಗೆ ಆ ಕನಸು. ಕನಸಿನ ವೃತ್ತಾಂತ ನೋಡಲಿಕ್ಕೆ ಅಲ್ಲಿ ಅಗಿದು ನೋಡಲಾಗಿ ನೆಲದ ಅಡಿಗ ಕಲ್ಲಿನಿಂದ ಕಟ್ಟಿದ ಒಂದು ಪುರಾತನ ದೇವಾಲಯವು ಕಂಡುಬಂತು. ದೇವಾಲಯದಲ್ಲಿ ೩ ಮೂರ್ತಿಗಳೂ, ಕೆಲವು ಖಡ್ಗಗಳೂ ದೊರೆತವು. ಹಳ್ಳಿಗರು ಈಗ ದೇವರ ಪೂಜೆಗಾಗಿ ಒಬ್ಬ ಅರ್ಚಕರನ್ನು ನೇಮಿಸಿದ್ದಾರೆ. ಈ ಊರ ಕೆರೆಯು ಪುರಾತನ ಕಾಲದ್ದಿದ್ದು ಬಹಳ ವಿಸ್ತೀರ್ಣವಿದೆ. ಕೆರೆಯ ಬಳಿಯಲ್ಲಿ ಹಿಂದೆ ಒಂದು ಕೋಟೆಯಿತ್ತಾಗಿಯೂ, ಆ ಕೋಟೆಯೊಳಗಿನ ಜನ-ಜಾನುವಾರಗಳಿಗೆ ನೀರು ಪೂರೈಸಲು ಅರಿಮರ್ದ ಎಂಬ ಹಿಂದು ಅರಸರು ಈ ಕೆರೆ ಕಟ್ಟಿಸಿದ್ದರಾಗಿಯೂ ಜನರು ಹೇಳುತ್ತಾರೆ.

— ಸುಪ್ರಸಿದ್ಧ ಎಮ್ ಎನ್ ರೊಯ್ ರವರು ಬರೇಲಿ ಜೈಲಿನಲ್ಲಿ ಬಹಳ ಅಸ್ವಸ್ಥ ಸ್ಥಿತಿಯಲ್ಲಿರುತ್ತಾರೆಂದು ವಾರ್ತೆ. ಅವರು ತಮಗಾದ ಶಿಕ್ಷೆಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಅನುಭವಿಸಿ ತೀರಿಸಿದ್ದಾರೆ. ಆದ್ದರಿಂದ ಸರಕಾರದವರು ಅವರನ್ನು ಮುಕ್ತಪಡಿಸಬೇಕಾಗಿ ಶ್ರೀಮತಿ ಸರೋಜಿನಿ ನಾಯಡು ರವರು ಅರಿಕೆ ಮಾಡಿದ್ದಾರೆ. ಹಾಗೆ ಮಾಡಲು ಒಪ್ಪಿಗೆಯಿಲ್ಲದಿದ್ದಲ್ಲಿ ರೊಯ್‌ರಿಗೆ ಒಳ್ಳೇ ವೈದ್ಯಕೀಯ ಉಪಚಾರ ಮಾಡಿಸುವ ವ್ಯವಸ್ಥೆ ಮಾಡಬೇಕೆಂದು ಬಿನ್ನೈಸಿದ್ದಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ದಿನಗಳ [illegible] ಬೀಳುತ್ತಿರುವ [illegible] ಊರ ಬೀದಿ [illegible] ಊರೊಳಗಿನ ಮಾರ್ಗಗಳ ಮೇಲೆಲ್ಲ [illegible] ಧೂಳು [illegible] ಬೇಗನೆ ನೀರು [illegible] ವ್ಯವಸ್ಥೆಯಾದರೆ ಒಳ್ಳೇದಾಗುವದು.

೨ ಮೇಲೆ ವರ್ಣಿಸಿದ ಸವಲತ್ತುಗಳನ್ನು ಪಡೆಯಬಿಚ್ಛಿಸುವವನು ತನಗೆ ಎಲ್ಲಿಂದ ಪತ್ರಗಳು ಮುಟ್ಟುವವೋ ಆ ಆಫೀಸಿನ ಪೋಸ್ಟ ಮಾಸ್ತರನಿಗೆ ಅರ್ಜಿ ಮಾಡಿ ಪರವಾನಗಿ ಪಡೆಯಬೇಕು ಈ ಪರವಾನಗಿಗೆ ವರ್ಷವೊಂದಕ್ಕೆ ೧೦ ರೂ ಫೀಯನ್ನು ಜೊತೆಯಲ್ಲಿಯೇ ಕಳಿಸತಕ್ಕದ್ದು ತರುವಾಯ ಪೋಸ್ಟ ಮಾಸ್ತರ ಜನರಲ್ ರವರಿಂದ ಒಪ್ಪಿಗೆಯ ಪರವಾನಗಿ ದೊರಕು ಅದು ಒಂದು ವರ್ಷದ ವರೆಗೆ ಜಾರಿಯಲ್ಲಿರುತ್ತದೆ ಮತ್ತು ಅದರ ಮುದ್ದತನ್ನು ಪುನಃ ಫೀ ತುಂಬಿ ಬೆಳೆಯಿಸಲಿಕ್ಕೆ ಬರುತ್ತದೆ

೩ "ಬಿಝಿನೆಸ್ ರಿಪ್ಲಾಯ ಕಾರ್ಡ" ವ್ಯಾಪಾರಿ ಜನ ಬಿಸಿ ಕಾರ್ಡುಗಳನ್ನು ತಮ್ಮದನ್ನು ತಾವೇ ತಯಾರ ಮಾಡಬೇಕಾಗುತ್ತದೆ ಮತ್ತು ಅದರ ಸಂಬಂಧಿ ನಿಯಮಗಳು ಇತರ ಖಾಸಗೀ ಕಾರ್ಡಿನಂತೆ ಇರುತ್ತವೆ

೪. ಈ ವಿಶಿಷ್ಟ ಪತ್ರಗಳ ಮೇಲೆ "ಬಿಝಿನೆಸ್ ರಿಪ್ಲಾಯ ಕಾರ್ಡ ಅಥವಾ ಬಿ ರಿ ಎನ್‌ವ್ಹೆಲಪ್" ಎಂದು ಸ್ಪಷ್ಟವಾಗಿ ಬರೆದಿರಲಿಕ್ಕೆ ಬೇಕು ಅದರಂತೆಯೇ ಪರವಾನಗಿ ನಂಬರನ್ನು ಮತ್ತು ಪರವಾನಗಿ ಎಲ್ಲಿಂದ ದೊರೆಯಿತೋ ಆ ಆಫೀಸಿನ ಹೆಸರನ್ನೂ ಬರೆದಿರಲಿಕ್ಕೆ ಬೇಕು ಪರವಾನಗಿ ದೊರಕಿದವನ ಹೆಸರು ಮತ್ತು ಪೂರ್ಣ ವಿಳಾಸವೂ ಇರಬೇಕು ಈ ಬಿಝಿನೆಸ್ ರಿಪ್ಲಾಯ್ ಕಾರ್ಡುಗಳಿಗೆ ಮುಂಚೆನೇ ಹಾಸಲು ಕೊಡುವದರಿಂದ ಹಿಂದುಸ್ಥಾನದಲ್ಲಿಯ ಯಾವದೇ ಅಂಚೆ (ಪೋಸ್ಟ)ಯಲ್ಲಿ ಹಾಕಿದರೂ ಹಾಸಲು ಕೊಡುವ ಅವಶ್ಯಕತೆಯಿಲ್ಲ ಮತ್ತು ಡಿಲಿವ್ಹರಿ ತೆಗೆದುಕೊಳ್ಳುವವನು ಹಾಸಲು ಕೊಡುವನು ಎಂದು ಹಾಕಿಟಿನ ಮೇಲೆ ಅವನಾ ಸ್ಪಷ್ಟ ಶಬ್ದಗಳಲ್ಲಿ ಬಿಝಿನೆಸ ಕಾರ್ಡಿನ ಮೇಲೆ ಬರೆದಿರಲಿಕ್ಕೆ ಬೇಕು. ಪೋಸ್ಟಿನ ಹಾಸಲ ಸಲುವಾಗಿ ಸ್ಥಳ ಬಿಡಬೇಕೆಂದು ಹೇಳಬೇಕಾದುದಿಲ್ಲ

೫ ಜವಾಬಿನ ಪಾಕೀಟನ್ನು ಬೇರೆ ಪಾಕೀಟಿನಲ್ಲಿ ಹಾಕಿ ಕಳಿಸಬೇಕೆಂಬುದು ಸ್ಪಷ್ಟವಿದೆ ಉತ್ತರದ ಕಾರ್ಡನ್ನೂ ಹೀಗೆಯೇ ಕಳಿಸಬೇಕು ಅಥವಾ ಖಾಸಗೀ ರೀತಿಯಿಂದ ತಯಾರು ಮಾಡಿದ ಇಮ್ಮಡಿ ಕಾರ್ಡಿನ ಅರ್ಧವನ್ನು ಉತ್ತರದ ಕಾರ್ಡೆಂದು ಕಳುಹಿಸಬೇಕು ಮೊದಲಿನ ಅರ್ಧ ಪತ್ರದ (ಅಂದರೆ ಮುಖ ಕೂರಿನ ಪತ್ರದ ಹಾಸಲನ್ನು ಕೊಡಲೇ ಬೇಕು ಏಕೆಂದರೆ ಹಾಸಲು ಕೊಡದ ಪತ್ರವನ್ನು ಕಳಿಸಲಾಗುವದಿಲ್ಲ

೬ ಸಾಧಾರಣ ಕಾರ್ಡ—ಪಾಕೀಟುಗಳ ಹಾಸಲು ಈ "ಬಿಝಿನೆಸ ರಿಪ್ಲಾಯ" ಪಾಕೀಟುಗಳಿಗೂ ಅನ್ವಯಿಸುತ್ತದೆ

೭ ಪರವಾನಗಿ ದೊರೆತವನು ಈ ಕಾರ್ಡ ಪಾಕೀಟುಗಳ ಹಾಸಲನ್ನು ಕೊಡಲೊಪ್ಪದಿದ್ದರೆ ಅವನ ಪರವಾನಗೆಯು ರದ್ದು ಮಾಡಲ್ಪಡುವದು

೮ ಮೇಲಿನ ಯೋಜನೆಯು ಕೇವಲ ಕಾರ್ಡು ಪಾಕೀಟುಗಳಿಗಷ್ಟೇ ಇದೆ ಬುಕ್ಕ ಪಾಕೀಟ ಗಳಿಗಿಲ್ಲ ವೆಂಬುದನ್ನು ಲಕ್ಷದಲ್ಲಿಡಬೇಕು.

ಪತ್ರಕರ್ತರ ನುಡಿಗನ್ನಡಿ.

ಗ ಜೋನಸುಗಳ ದರ ಪಿಸರೀತವಾಗಿ ಇಳಿದು ಹೋಗಿ ಯುಗಾದಿಗುಂಟಾದ ದೀನ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಪಂಜಾಬ ಸರಕಾರವು ಕೈಕೊಳ್ಳಲಿಚ್ಛಿಸ್ಸ ಉಪಕ್ರಮವು ವಿಚಾರಾರ್ಹವಿದೆ ಕಳೆದ ತಾರೀಕ ೧೯ ನೇಗೆ ಪಂಜಾಬದ ಗವರ್ನರರಾದ ಸರ್ ಹರ್ಬರ್ಟ ಎಮರಸನ್‌ನವರು ಲಾಯಲ್ ಪುರದೊಳಗಿನ ಹತ್ತಿಯ ಗಿರಣಿಯ ಉದ್ಘಾಟನ ಸಮಾರಂಭ ಮಾಡಿದರು ಆ ಸಮಯ ಬೇಸಾಯ ಗಾರರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ತೀರ್ವ ಆಕರಣ ಮತ್ತು ವಸೂಲಿಯ ಕ್ರಮವನ್ನು ಅವರು ಸೂಚಿಸಿದರು ಎಂದರೆ ಪ್ರಸ್ತುತ ವರ್ಷದಲ್ಲಿ ತೀರ್ವೆಯನ್ನು ಆಕರಿಸುವಾಗ ಹತ್ತಿಗೆ ನಿಮಿಷ್ಟ ದರ ಹಿಡಿಯುವರು ಆದರೆ ವಸೂಲಿಯ ಕಾಲಕ್ಕೆ ಆ ತೀರ್ವೆ ವಸೂಲಾಗದು ಪ್ರತಿ ವರ್ಷ ತೀರ್ವೆ ವಸೂಲು ಮಾಡುವಾಗ ಹಿಂದಿನ ವರುಷ ಆದ ಹತ್ತಿಯ ದರವನ್ನು ತಿಳಿದು, ಅದಕ್ಕೆ ತೀರ್ವೆ ಆಕರಿಸುವಾಗ ಹಿಡಿದ ನಿರ್ಣಯ ದರಕ್ಕೂ ಭೇದವಿದ್ದಲ್ಲಿ ಆ ಮಾನದಿಂದ ಆಕರಿಸಿದ ತೀರ್ವೆಯನ್ನು ಏರಿಳಿಸಿ ವಸೂಲು ಮಾಡುವರು. ಹತ್ತಿಯ ದರ ಇಳಿದರೆ ಇಳಿದ ಮಾನದಿಂದ ತೀರ್ವೆ ವಸೂಲಾಗುವದು, ಹತ್ತಿಯ ದರ ಏರಿದರೆ ಏರಿದ ಮಾನದಿಂದ ವಸೂಲಾಗುವದು ಈ ಉಪಕ್ರಮದಿಂದ ತಕ್ಕ ಮಟ್ಟಿಗೆ ರೈತರಿಗೆ ಅನುಕೂಲವಾಗುವಂತೆ ಈಗಿನ ತೀರ್ವೆಯಲ್ಲಿ ಸಂಬಂಧ ದೂರಮಾಡುವದಾಗಿ ಗವರ್ನರರು ಎಣಿಕೆ ಮಾಡಿದ್ದಾರೆ. ಪಂಜಾಬ ಸರಕಾರದ ಹೊಸ ಉಪಕ್ರಮದಲ್ಲಿ ನಾವೀನ್ಯವಿದೆ, ಕಲ್ಪಕತೆಯಿದೆ. ಕೆಲ ಮಟ್ಟಿಗೆ ಇದರಿಂದ ಬೇಸಾಯಗಾರರಿಗೆ ಅನುಕೂಲವಾಗಿ ತಕ್ಕಂತೆ ಈ ವರ್ಷ ಬಂದಂತೆ ನಿಕ್ಕಿ ತೀರ್ವೆಯನ್ನು ಯಾವ ತ್ತು ಸ್ಥಿತಿಯಲ್ಲಿ ಬೇಸಾಯಗಾರರು. ಕೊಟ್ಟೇ ತೀರಬೇಕೆಂಬ ಕಠೋರ ಕಾಯಿದೆ ಸರಿಯಲ್ಲವೆಂಬುದಕ್ಕೆ ಈಗಿನ ಬೇಸಾಯಗಾರರ ಸ್ಥಿತಿಯೇ ಪ್ರಮಾಣವು. ಮುಂಬಯಿ ಸರಕಾರವು ವಿಚಾರ ಮಾಡಿ ಇಂಥ ಉಪಕ್ರಮವನ್ನು ಕೈಕೊಳ್ಳಬೇಕಾದರೆ ಒಂದು ಸೂಚನೆ ಏನೆಂದರೆ, ಶಿದ್ಧಾಂತ ಪೂರ ಕರೆ ತೀರ್ವೆ ಪುನರಾಲೋಚನೆ ಗೋಳ ಸೆಟ್ಲಮೆಂಟ ಆಫೀಸರರಾದ ೧೯| ದೇಸಾಯಿಯವರು ಈ ಉಪಕ್ರಮವನ್ನು ಮುಂಬಯಿ ಇಲಾಖೆಯ ಪರಿಸ್ಥಿತಿಗನುರೂಪವಾಗಿ ಹೊಸ ಯೋಜನೆಯನ್ನೇ ಕಲ್ಪಿಸಿದರೆ ಬೇಸಾಯಗಾರರು ಅವರಿಗೆ ಋಣಿಯಾಗುವರು

ರಾಜಾಶ್ರಯವಿದ್ದರೆ ರಾಷ್ಟ್ರದಲ್ಲಿ ಉದ್ದಿಮೆ ಬೆಳೆಯುತ್ತದೆಂಬು ಬಗ್ಗೆ ಸಂಸ್ಥಾನಿಕರ ಉದಾಹರಣೆ ಕೊಟ್ಟು ನಾವು ಈ ಹಿಂದೆ ಪ್ರತಿಪಾದಿಸಿದ್ದೇವೆ. ಮಹಾತ್ಮರು ಹರಿಜನ' ಪತ್ರಿಕೆಯಲ್ಲಿ ಬರೆದ ಸವಿಸ್ತಾರ ಬ್ರಿಟಿಶ ರಾಜ್ಯದೊಳಗಿನ ಉದಾಹರಣೆಯಿಂದ ಇದೇ ಸಂಗತಿ ಸಿದ್ಧವಾಗುತ್ತದೆ ಮಹಾಯುದ್ಧ ಕಾಲವದು ಹಿಂದುಸ್ಥಾನದಿಂದ ಮಹಾಯುದ್ಧಕ್ಕೆ ಸಾಮಗ್ರಿ ಪೂರೈಸುವ ವ್ಯವಸ್ಥೆ ಮಾಡಬೇಕಾಗಿತ್ತು. ಹಿಂದ ಸ್ಥಾನ ಸರಕಾರವು ಮ್ಯುನಿಶನ್ ಬೋರ್ಡ ಎಂಬ ಹೊಸ ಖಾತೆಯನ್ನು ನಿರ್ಮಿಸಿ ಯುದ್ಧಕ್ಕೆ ಅವಶ್ಯವಿದ್ದ ಸಾಮಗ್ರಿಗಳನ್ನು ಪೂರೈಸಿಕೊಳ್ಳುವ ಯೋಜನೆ ಮಾಡಿತ್ತು ಯುದ್ಧದಲ್ಲಿ ಬೇಕಾಗುವ ಅನುವಾಗಿ ಒದಗುವ ಹೊಸ ಸಾಮಗ್ರಿಗಳು ಬರದಾದವನ್ನು ಬ್ರಿಟಿಶ ದೇಶದಿಂದ ಈ ದೇಶಕ್ಕೆ ಬರತಕ್ಕ ಹಡಗುಗಳು ಬರಲಾಗಲಿಲ್ಲ, ಅವನ್ನು ಈ ದೇಶದವರಿಂದಲೇ ಮ್ಯುನಿಶನ್ ಬೋರ್ಡಿನವರು ಪೂರೈಸಿಕೊಳ್ಳಬೇಕಾಯಿತು ಚರ್ಮ, ಮಾತ್ರ, ಕಂಬಳಿಗಳ ಕಾರ್ಖಾನೆಗಳಿಗೆ ಬೇಕಾಗುವ ಉಣ್ಣೆ ಕೂಡ ನಾಲ್ಕು ಇಂಗ್ಲಂಡ ದೇಶದಿಂದ ಇಲ್ಲಿಗೆ ಬರುತ್ತಿದ್ದವು. ಕೈಮಗ್ಗ ಜಾತಿಯವರು ಅವನ್ನು ಇಲ್ಲಿ ತಯಾರಿಸಿಕೊಡುತ್ತಿದ್ದರು. ಕುರಿತು ವಿಚಾರ ಮಾಡಲಿಲ್ಲ ಆದರೆ ಅವಶ್ಯವಾದ ಬಳಿಕ ಸರಕಾರವು ಉದ್ಯೋಗಕ್ಕೆ ಕೈಹಾಕಿ ದೇಶೀ ಕಮ್ಮಾರರ ತಪಾಸಣೆ ಮಾಡಿತು, ಗ್ರಾಮಗಳಲ್ಲಿನ ಕಮ್ಮಾರರು ಬಡಿಗರಿಂದ ಅವಶ್ಯವಿದ್ದ ಸಾಮಗ್ರಿಗಳನ್ನು ಪೂರೈಸಿ ಮ್ಯುನಿಶನ್ ಬೋರ್ಡಿಗೆ ಒಳ್ಳೆ ಉಪಕಾರ ಮಾಡಿದರು ಈ ಸಂಗತಿಯನ್ನು ಮುಂಬಯಿಯ ಹಿಂದೀ ವರ್ತಕ ಸಂಘದ ಕಾರ್ಯದರ್ಶಿಗಳಾಗಿ ೧೯೧೭ನೇ ಇಸ್ವಿಯಲ್ಲಿ ಮ್ಯುನಿಶನ್ ಬೋರ್ಡಿನ ಸಹಾಯಕರಾಗಿ ಸರಕಾರದಿಂದ ನೇಮಿಸಲ್ಪಟ್ಟ ಶ್ರೀ| ಜಯಸುಖಲಾಲ ಮೆಹತಾರವರು ಮಹಾತ್ಮರಿಗೆ ಬರೆದ ಪತ್ರದ ಭಾರತೀಯ ಗ್ರಾಮೋದ್ಯೋಗ ಸಂಘಕ್ಕೆ ಒಂದು ದಾರಿ ತೋರಿಸಿ ಕೊಡುತ್ತಿದ್ದಾರೆ. ಹಾಲೀ ಮಹಾಯುದ್ಧ ಒಕ್ಕೆ ಸೃಷ್ಟಿ ಜನಸಮುಗಳಿಗಾಗಿ ವ್ಯಯವಾದ ಹಣ ಹಿಂದುಸ್ಥಾನದಿಂದ ವಿದೇಶಗಳಿಗೆ ಹೋಗುತ್ತದೆ. ಸರಕಾರವು ದೇಶದೊಳಗೆ ಚಳವಳಿ ಮಾಡಿ ಯಾವ್ಯಾವ ವಸ್ತುಗಳನ್ನು ಸ್ವದೇಶದಲ್ಲಿ ಹುಟ್ಟಿಸಬಹುದೆಂಬುದನ್ನು ತಿಳಿಕೊಂಡ ಮೇಲೆ ಅವರ ಗ್ರಾಮಗಳ ಉದ್ಧಾರವಾಗುವಂತೆ ಗ್ರಾಮೋದ್ಧಾರ ಯೋಜನಾ ಆದರ ಗ್ರಾಮಗಳ ಸಂಪತ್ತು ಬೆಳೆಸುವ ಯೋಜನ, ಗ್ರಾಮಗಳಲ್ಲಿ ಮನೆ ಮಾಡಿಕೊಂಡಿದ್ದ ಸ್ವಾವಲಂಬನೆಯನ್ನು ಹೋಗಲಾಡಿಸುವ ಕೆಲಸ ಕಾಲಚಕ್ರದಲ್ಲಿ ಬಾರಿ ಬಾಕಿ ಕಾರಣವಾ ಮೂಲಕ ನಿಲ್ಲಿಸಿಕೊಂಡು ನಾಮಶೇಷವಾದ ಗ್ರಾಮೋದ್ಯೋಗಗಳನ್ನು ಪುನರುದ್ಧರಿಸುವ ಉಪಕ್ರಮ, ಈ ಮರ್ಮವನ್ನು ಮಹಾತ್ಮರು ತಿಳಕೊಂಡು ರಾಜಕಾರಣದ ಸ್ಪರ್ಶವಿಲ್ಲದ 'ಗ್ರಾಮೋದ್ಯೋಗ ಸಂಘ' ವನ್ನು ನಿರ್ಮಾಣಿಸಿದ್ದಾರೆ ಎಲ್ಲಿಲ್ಲಿಯ ಮಹನೀಯರಲ್ಲಿಯೂ ಈ ಸಂಘದಿಂದ ತಮ್ಮ ತಮ್ಮ ಗ್ರಾಮಗಳಲ್ಲಿ ಪ್ರಯೋಜನ ಹೊಂದಬೇಕು

ಗ್ರಾಮೋದ್ಧಾರ ಎಂದರೆ ಗ್ರಾಮಗಳ ಸಂಪತ್ತು ಬೆಳೆಸುವ ಯೋಜನ, ಆದರೆ ವ ಜಿಲ್ಲಾ ಮಾವದಲ್ಲ, ಈಗ ಒಂದಲ್ಲದೊಂದು ಸರಕಾರಿ ಅಧಿಕಾರಿಗಳು ಸಹ ಅಭಿಪ್ರಾಯಪಡುತ್ತಾರೆ ಗ್ರಾಮಗಳ ದಾರಿದ್ರ್ಯವೇ ಈಗಿನ ದುರವಸ್ಥೆಗೆ ಕಾರಣವೆಂದೂ ಅವರ ಅಭಿಪ್ರಾಯ ಡಾ| ಸಿ ಡಿ ಬೆಂಟ್ಲೀ ಇವರು ೩೦ ವರ್ಷಗಳ ತನಕ ಬಂಗಾಲ ಸರಕಾರದ ಆರೋಗ್ಯ ಇಲಾಖೆಯ ಡಾಯರೆಕ್ಟರಾಗಿದ್ದರು ೩೦ ವರುಷಗಳ ತನಕ ಅವರು ಈ ಅಧಿಕಾರ ನಡೆಸಿದ್ದಾರೆ ಅವರು ಪ್ರಕಟಿಸಿದ ಒಂದು ಲೇಖದಲ್ಲಿ ಬರೆಯುವದೇನಂದರೆ – ' ಒಂದು ಬಂಗಾಲ ಪ್ರಾಂತದಲ್ಲಿ ಪ್ರತಿ ವರ್ಷ ೧೫ ಲಕ್ಷ ಜನ ಸಾಯುತ್ತಾರೆ. ಇವರೊಳಗೆ ೧೫ ವರ್ಷದ ಒಳಗಿನ ಹುಡುಗರು ೬|| ಲಕ್ಷ ತಕ್ಕೆ ೪ ಪರ್ವತಾರ ಮಾಡಿದರೆ ೪ ಲಕ್ಷ ಜನರನ್ನಾದರೂ ಬದುಕಿಸಿಕೊಳ್ಳಬಹುದು. ಬಂಗಾಲದೊಳಗಿನ ಎಕ್ಕಲಿಗರು ಕೊಳ್ಳುವ ಆಹಾರವು ತೀರ ಪರಿ ಪ್ರಮಾಣವು ಇದರ ಮೇಲೆ ಹೆಗ್ಗಣಗಳು ನಾಶಗತ್ತರಣೆ ಒದಕಿ ಬಗ್ಗೆ ಆರವು ಇಂಥ ಸತ್ವಹೀನ್ಯ ಆಹಾರದಿಂದ ಜನರ ಜೈವನ್ಯಶಕ್ತಿಯು ಕ್ಷೀಣ ಹೊಂದಿದೆ ಇದರಿಂದ ಸಾಂಕ್ರಾಮಿಕ ರೋಗಗಳಾದ ಸಹಿಸಿಕೊಳ್ಳುವ ಶಕ್ತಿಯು ಜನರಲ್ಲಿಲ್ಲ ಕಾಲರಾ ರೋಗದಿಂದ ೧ ಲಕ್ಷ ೩೦ ಸಾವಿರ ಜನರು ತೀರಿದರು, ಚಳಿಜ್ವರದಿಂದ ೩|| ಲಕ್ಷ ಜನರು ತೀರಿದರು. ಕ್ಷಯ ರೋಗದಿಂದ ಸರಾಸರಿ ೩|| ಲಕ್ಷ ಜನರು ತೀರಿದರೆ, ಸಂ ಸರಿ ೩೬ ಸಾವಿರ ಹಿರಿಯರು ತೀರಿಕೊಳ್ಳುತ್ತವೆ ಹೀಗೆ ೧೫ ವರ್ಷದ ಒಳಗಿನ ಮಕ್ಕಳು ತೀರಿಕೊಂಡದ್ದರಿಂದ ವರ್ಷಕ್ಕೆ ಸಾಧಾರಣ ೩ ಕೋಟಿ ರೂಪಾಯಿ ಜನರಿಗೆ ನಷ್ಟ ಆರೋಗ್ಯ ಸುಧಾರಣ ಮಾಡುವದು ಅತಿ ಅಗತ್ಯವಿದೆ ನನ್ನ ಅಂತಃಕರಣವನ್ನು ಸರಕಾರಿ ಅಧಿಕಾರಿಗಳಿಗೂ ಲೋಕನಾಯಕರಿಗೂ ಸ್ಪಷ್ಟ ಮಾಡಿ ನನ್ನ ಮನಗಾಣಿಸಬಲ್ಲೆನು ಓ ಒಮ್ಮನಸ್ಸಿನಿಂದ ಬೇರೆ ಯಾವತ್ತು ಕಾರ್ಯಕ್ರಮ ಧಿಕ್ಕರಿಸಿ, ಒಮ್ಮನಸ್ಸಿನಿಂದ ಆರೋಗ್ಯ ಸುಧಾರಣೆಯ ಕಾರ್ಯಕ್ರಮವನ್ನೇ ಪುರಸ್ಕರಿಸದಿದ್ದರೆ ಬಂಗಾಲ ಇಲಾಖೆಯ ವ್ಯವಸ್ಥೆಯೇ ಇತರ ಯಾವತ್ತು ಪ್ರಾಂತಗಳಲ್ಲಿದೆ. ಜನಸಾಮಾನ್ಯರು ಚೈತನ್ಯಹೀನರಾದ್ದರಿಂದಲೇ ೧೯೧೮ನೇ ಇಸ್ವಿಯಲ್ಲಿ ಇನ್ಫ್ಲುಯೆಂಝಾ ರೋಗದಿಂದ ೧| ಕೋಟಿ ಜನರು ಒಂದೆರಡು ತಿಂಗಳಲ್ಲಿ ತೀರಿ ಹೋದರು. ಕರ್ನಲ್ ನಾನ್ಸ್‌ಲ್ಡ ಡಾಕ್ಟರರ ಲೆಕ್ಕದಂತೆ ಹಿಂದುಸ್ಥಾನದಲ್ಲಿ ಪ್ರತಿದಿನ ವರ್ಷಕ್ಕೆ ೫೦—೬೦ ಲಕ್ಷ ಜನರು ಸಾಯುತ್ತಾರೆ. ಕೊರತೆಯಿಂದ ೧೦ ಲಕ್ಷ ಜನರು " ಡಾಕ್ಟರ ಬೆಂಟ್ಲೀ" ಯವರು ಬಂಗಾಲದ ಗೃಹಸ್ಥರಲ್ಲಿ, ಜವಾಬದಾರ ಅಧಿಕಾರಿಗಳು ಬಂಗಾಲ ಇಲಾಖೆಯಲ್ಲಿ ನಡೆದ ಪ್ರಕಾರಗಳನ್ನು ನೋಡಿ ಅವರ ಅಂತಃಕರಣ ಕರಗಿ ಹೋಗಿದೆ. ಆರೋಗ್ಯ ಕಾಲಮಾನ ಸಮಸ್ಯೆ ರಾಷ್ಟ್ರ ಕಾರ್ಯಕ್ರಮಗಳ ಪ್ರಧಾನ ಕರ್ತವ್ಯವೆಂದು ಅವರ ನಿಶ್ಚಿತಾಭಿಪ್ರಾಯ. ಆರೋಗ್ಯ ಸುಧಾರಣೆಯೆಂದರೆ ದಾರಿದ್ರ್ಯ ನಿವಾರಣೆ ಒದಗಿದ ಮೂಲಕವಾಗಿಯೇ ಜನಸಾಮಾನ್ಯರು ಹೆಗ್ಗಣಗಳೂ ತಿನ್ನಲಾರದಂಥ ಸತ್ವಹೀನ ಆಹಾರವನ್ನು ತಿಂದು 'ಆತ್ಮಾನಂ ಸತತಂ ರಕ್ಷೇತ್' ಎಂಬ ಉಕ್ತಿಯಂತೆ ದೇಹದಲ್ಲಿ ಪ್ರಾಣರಕ್ಷಣೆ ಮಾಡಿಕೊಂಡು ಉಳಿದಿದ್ದಾರೆ ಆರೋಗ್ಯ ಸುಧಾರಣೆಯಾಗಬೇಕಾದರೆ ಜನರ ಸಂಪತ್ತು ಬೆಳೆಯಬೇಕು ಸಂಪತ್ತು ಬೆಳೆಯಬೇಕಾದರೆ ಗ್ರಾಮಗಳಲ್ಲಿ ಉದ್ದಿಮೆ ಬೆಳೆಯಬೇಕು, ಗ್ರಾಮದವರಿಗೆ ಸ್ವಾವಲಂಬನದಿಂದ ಕಾಲ ಕಳೆಯುವಂತೆ ವ್ಯವಸ್ಥೆ ಮಾಡಬೇಕು. ' ಸಾವಿರ ಸುತ್ತು ಹಾಕಿದರೂ ಗಂಟು ಒಂದೇ ಎಂಬ ನಾಣ್ಣುಡಿಯಂತೆ ದಾರಿದ್ರ್ಯದೊಳಗಿನ ಜನರು ಸುಖದಿಂದ ಇರಬೇಕೆಂದು ಬಯಸುವವರೆಲ್ಲರೂ ಸಾಮಾನ್ಯ ಜನರ ಸಂಪತ್ತು ಬೆಳೆಸಲು ಉಪಾಯಯೋಜನೆ ಮಾಡಬೇಕು ಸಂಪತ್ತು ಬೆಳೆದರೆ ಸತ್ವಪೂರ್ಣ ಆಹಾರ ಕೊಳ್ಳಬರುತ್ತದೆ, ಆರೋಗ್ಯ ಸುಧಾರಣೆಯಾಗುತ್ತದೆ. ಸಂಪತ್ತಿನ ಅಭಿವೃದ್ಧಿಯೇ ಆರೋಗ್ಯ ಸುಧಾರಣೆಯ ಮೂಲ ಸರಕಾರಿ ಅಧಿಕಾರಿಗಳೂ, ಲೋಕನಾಯಕರೂ ಒಮ್ಮನಸ್ಸಿನಿಂದ ದುಡಿದು ನಡೆಕೊಂಡರೆ ಹಿಂದುಸ್ಥಾನದಲ್ಲೆಲ್ಲ ಸುಖಸಮೃದ್ಧಿಯ ಸ್ಥಾಪನೆಯಾದೀತು ಮಹಾತ್ಮರು ಎತ್ತಿಕೊಂಡ ಈ ದೇಶೀಯ ಗ್ರಾಮೋದ್ಯೋಗಿಕ ಸಂಘವನ್ನು ಸ್ಥಾಪಿಸಿ ಸದರ ಧ್ಯೇಯ ಮಹ

[೧೯ನೇ ಪಾನದಲ್ಲಿ ಮುಂದುವರಿದಿದೆ]

ಯುದ್ಧದ ಪಡಿನೆಳಲು ಕಾಣಲಾರಂಭಿಸಿದೆ!

[ನಿರೀಕ್ಷಕನು ಬರೆದುದು]

ಜಗತ್ತಿನ ರಾಜಕಾರಣದೊಳಗಿನ ಬೇರೆ ಬೇರೆ ಆಚಾರ-ವಿಚಾರತಂತುಗಳನ್ನು ರಾ| ಬ್ಹಿ. ವಿ. ಚಿತಳೇಯವರು ವರ್ಣಿಸಿದ್ದಾರೆ. ರಾ| ಚಿತಳೇಯವರಿಗೆ ಅಂತರ್ರಾಷ್ಟ್ರೀಯ ರಾಜಕಾರಣದ ವ್ಯಾಸಂಗವಿದೆ. ವಿಶ್ವವಿದ್ಯಾಲಯದೊಳಗಿನ ವಿದ್ಯಾರ್ಥಿಗಳಿಗೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ತಿಳಿಸಿಕೊಡುವದೇ ಇವರಿಗೆ ಪ್ರೀತಿ. ಉತ್ತರ ಹಿಂದುಸ್ಥಾನದ ಅಲಹಾಬಾದ, ದಿಲ್ಲಿ, ಲಖನೌ ಮೊದಲಾದ ಕಡೆ ರಾ| ಚಿತಳೇಯವರು ಉಪನ್ಯಾಸ ಮಾಡಿದರು. ಅವುಗಳ ತಾತ್ಪರ್ಯ ಕೊಟ್ಟಿರುವದಲ್ಲದೇ, ಆ ಮೇಲೆ ನನಗೆ ಕಂಡುಬಂದ ಈ ವಾರದೊಳಗಿನ ಸಂಗತಿಗಳನ್ನು ಪರಾಂಬರಿಸುವೆನು. ರಾ| ಚಿತಳೇಯವರು ನುಡಿಯುವದೇನೆಂದರೆ— "ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿಚಾರಿಸಿದರೆ ಎಲ್ಲರೂ ಪ್ರಚಂಡವಾದ ಮಹಾಯುದ್ಧದ ಕಡೆಗೇ ಓಡುತ್ತಿರುವರೆಂದು ಸ್ಪಷ್ಟ ಕಾಣುತ್ತದೆ. ಮುಂದಿನ ಯುದ್ಧದ ಕಲ್ಪನೆ ಮಾಡಿದರೆ ಈ ಹಿಂದಿನ ಮಹಾಯುದ್ಧವು ತೀರ ತಿರಸ್ಕಾರಾರ್ಹವೆಂದು ಹೇಳಬಹುದು. ಯುದ್ಧಪ್ರೇರಕ ಯಾವತ್ತೂ ಪರಿಸ್ಥಿತಿ ಈಗ ಸಿದ್ಧವುಂಟು. ಒಂದು ವರುಷದ ಹಿಂದ ಸಂಧಿಪ್ರಸ್ತಾಪದ ಮಾತುಗಳಾದರೂ ಕೇಳಬರುತ್ತಿದ್ದವು, ಈಗ ಎಲ್ಲರೂ ಯುದ್ಧದ ಕಥೆಯನ್ನೇ ಆಡುತ್ತಲಿದ್ದಾರೆ. ಯಾರ‍್ಯಾರು ಯಾವ್ಯಾವ ಪಕ್ಷದಿಂದ ಹೋರಾಡುವರೆಂದು ಈಗ ನಿರ್ದಿಷ್ಟವಾಗಿ ಹೇಳಬರದು. ಆ ಸಂಗತಿ ಇನ್ನೂ ಉಂಟಾಗಲಿಕ್ಕಿದೆ. ಸಧ್ಯದಲ್ಲಿ ಎಲ್ಲವೂ ಸ್ಫುಟವಾಗುವದು. ಇಂದಿಗೆ ಜಗತ್ತಿನೊಳಗಿನ ಸಮಸ್ತ ಶಸ್ತ್ರಾಸ್ತ್ರಗಳಿಗಾಗಿ ೫ ಮಹಾಪದ್ಮ ಡಾಲರು (=೩ ರೂಪಾಯಿ)ಗಳನ್ನು ವೆಚ್ಚ ಮಾಡುತ್ತಿವೆ. ಶಾಂತತೆಯ ಕಾಲದಲ್ಲಿ ೫೦ ಲಕ್ಷ ಸೈನಿಕರಿದ್ದರು. ಈಗ ಸಂಘಟಿತ ಸೈನ್ಯ ೩ ಕೋಟಿ ೩೦ ಲಕ್ಷವಿದ್ದ ಮೇಲಾಗಿ ಸೈನ್ಯ ವ್ಯವಸಾಯದಲ್ಲಿಲ್ಲದ ಸೈನ್ಯ ಶಿಕ್ಷಣ ಪಡೆದ ಕೋಟ್ಯಾವಧಿ ಜನರಿದ್ದಾರೆ. ಕಳೆದ ಮಹಾಯುದ್ಧದಲ್ಲಿ ೭೭ ಲಕ್ಷ ಜನರು ತೀರಿದರು. ಘಾಯಪಟ್ಟವರ, ಕಾಣೆಯಾದವರ ಸಂಖ್ಯೆ ೨ ಕೋಟಿ ೯೦ ಲಕ್ಷ. ಇಂಪೀರಿಯಲಿಝಮ್ ಯಾನೆ ಪರದೇಶ ಸುಲಿದು ಸ್ವದೇಶದ ಅಭ್ಯುದಯ ಮಾಡುವ ಯೋಜನೆಯಿಂದ ಅಲ್ಲಲ್ಲಿ ಶತ್ರುಗಳುಂಟಾಗಿದ್ದಾರೆ. ಪ್ರತಿಯೊಂದು ಕಡೆ ವಸಾಹತುಗಳು ಬೊಂಬ ಮಾಡಲಾರಂಭಿಸಿವೆ. ಕೂಲಿಕಾರರು ಸಾವಕಾರರಿಗೆ ವಿರೋಧವಾಗಿ ಹೋರಾಡುತ್ತಿದ್ದಾರೆ. ಪ್ರಯೋಗ ಶಾಲೆಗಳಲ್ಲಿ ತಯಾರಾಗುವ ವಿನಾಶಕ ದ್ರವ್ಯಗಳಿಂದ ಮುಂದಿನ ಮಹಾಯುದ್ಧದಲ್ಲಿ ಸರ್ವನಾಶವಾಗಲಿಕ್ಕಿದೆ. ಲೋಕಶಾಹಿಯನ್ನು ಕಾಲಡಿ ನೂಕಿ ಸರ್ವ ಸತ್ತಾಧಾರಿಗಳು ಸರ್ವರಾಜಾಧಿಕಾರ ಅಪಹರಿಸಿಕೊಂಡಿದ್ದಾರೆ. ಹೀಗೆ ಜನರಿಗೂ, ರಾಜ್ಯಾಧಿಕಾರಿಗಳಿಗೂ ಪ್ರತಿಯೊಂದು ದೇಶದಲ್ಲಿ ವಿರೋಧವಿದೆ.

"ಇನ್ನು ರಾಷ್ಟ್ರಗಳ ವಿಷಯ. ರಾಷ್ಟ್ರ-ರಾಷ್ಟ್ರಗಳಲ್ಲಿ ಸ್ನೇಹ ವಿರೋಧಭಾವಗಳಿವೆ. ಇಂಗ್ಲಂಡ-ಫ್ರಾನ್ಸ ದೇಶಗಳು ಅನ್ಯೋನ್ಯವಾದ ಇಬ್ಬರೂ ಒಂದು ದೋಣಿಯಲ್ಲಿದ್ದಾರೆ. ಫ್ರಾನ್ಸ ದೇಶ ಮುಳುಗಿದರೆ ಇಂಗ್ಲಂಡವೂ ಮುಳುಗುತ್ತದೆ. ಆದರೆ ಜರ್ಮನಿಗೆ ಶಸ್ತ್ರಾಸ್ತ್ರ ಬೆಳೆಸಲು ಪ್ರೋತ್ಸಾಹ ಕೊಡುವವರು ಫ್ರೆಂಚರ ಗೆಳೆಯರಾದ ಇಂಗ್ಲೀಷರು. ಇವಕ್ಕೆ ರಷ್ಯರ ಮೇಲಿನ ದ್ವೇಷವೇ ಕಾರಣ. ರಷ್ಯರ ದ್ವೇಷದಿಂದಲೇ ಜಪಾನದ ಮೇಲೆ ಇಂಗ್ಲೀಷರಿಗೆ ಮಮತೆ. ಅಮೇರಿಕಾ, ಜಪಾನ, ಬ್ರಿಟಿಷ ದೇಶಗಳೊಳಗೆ ವ್ಯಾಪಾರ ಕ್ಷೇತ್ರದಲ್ಲಿ ವಿಪರೀತವಾದ ಪೈಪೋಟಿದೆ. ತಂತಮ್ಮ ವ್ಯಾಪಾರದ ಸಾಮ್ರಾಜ್ಯವನ್ನು ಎಲ್ಲ ಇಲ್ಲೆ ಎಲ್ಲೆಲ್ಲಿಗೆ ಬೆಳಿಸಬೇಕೆಂದು ಮೂವರೂ ನಾ ಮುಂದು, ನೀ ಮುಂದು ಎಂದು ಒತ್ತರಿಸಿ ಮುಂದಾಗುತ್ತಿದ್ದಾರೆ. ಈ ಮೂಲಕ ಅಮೇರಿಕಾ-ಜಪಾನ ದೇಶಗಳೊಳಗೆ ಒಳ್ಳೇ ಅಸಮಾಧಾನವುಂಟಾಗಿದೆ. ಅಮೇರಿಕೆಗೆ ಸಾಧ್ಯವಾಗುವದು ಮುಂದಿನ ಜನ್ಮದಲ್ಲಿ. ಚೀನ ದೇಶದೊಳಗಿನ ವ್ಯಾಪಾರಕ್ಕಾಗಿ ಇಬ್ಬರೂ ಜಗಳಾಡುತ್ತಿದ್ದಾರೆ. ಬ್ರಿಟಿಷರಿಗೆ ಒಳ್ಳೇ ಹೆಚ್ಚು ಅಮೇರಿಕೆಯವರು ಬ್ರಿಟಿಷರ ಮಿತ್ರರು. ಜಪಾನಿಯರ ಜೀವನ ಗಳಿಕೆಯು ಇತ್ತಿತ್ತಲಾಗಿ ಸ್ಪರ್ಧಿಸಿ ಬರೋಣ ಆದ ಪ್ಯಾಲೆಸ್ಟೈನಗೆ ವ್ಯಾಪಾರವನ್ನು ಆಕ್ರಮಣದಿಂದ ಪಡಿಸಿಕೊಳ್ಳಲು ಬ್ರಿಟಿಷರ ಕಾರಸ್ಥಾನ ನಡದದೆ. ಆದರಿಂದ ಪೆಸಿಫಿಕ್ ಮಹಾಸಾಗರದಲ್ಲಿ ಕೋಲಾಹಲವುಂಟಾಗಿದೆ. ಇದು ನೌಕಾ ಪರಿಷತ್ತಿನಿಂದ ಒಗಟಾದದ್ದು. ವಾಶಿಂಗಟನ್ ತಹನಾಮೆಯನ್ನು ಜಪಾನ ಧಿಕ್ಕರಿಸಿ ಯುದ್ಧ ಹಡಗುಗಳನ್ನು ಕಟ್ಟಲಾರಂಭಿಸಿದೆ. ಪ್ರತಿ ೩ ಹಡಗುಗಳಿಗೆ ಪ್ರತಿಯಾಗಿ ಅಮೇರಿಕೆಯವರು ೫ ಹಡಗುಗಳನ್ನು ಕಟ್ಟಿಸುವ ತಯಾರಿ ನಡಿಸಿದ್ದಾರೆ.

"ರಷ್ಯರು ರಾಷ್ಟ್ರಸಂಘದಲ್ಲಿ ಸೇರುವ ಕಾರಣವೇ ಬೇರೆ. ಜರ್ಮನಿ, ಪೋಲಂಡಗಳೊಡನೆ ವಿರೋಧ ಭಾವವಿದೆ. ಇವರ ನ್ಯಾಯದಿಂದ ಮಾರ್ಗಶೋಧನೆಗೆ ಶಿಕ್ಕಿದಷ್ಟು ಲಾಭವನ್ನು ತೆಗೆದುಕೊಳ್ಳುವ ಉದ್ದೇಶದಿಂದ ರಷ್ಯರು ರಾಷ್ಟ್ರಸಂಘದಲ್ಲಿ ಸೇರಿಕೊಂಡಿದ್ದಾರೆ. ಜರ್ಮನಿ-ಇಟಾಲಿ ದೇಶಗಳೊಳಗೆ ವೈರಭಾವವಿದ್ದಾಗ್ಯೂ ಅವರು ಒಕ್ಕಟ್ಟಾಗುವರಾಗಿ ಕಾಣುತ್ತದೆ. ಯುದ್ಧವಾಗಿದ್ದಲ್ಲಿ ಲೋಕಕಂಟಕ ಸತ್ತಾಧಾರಿಗಳ ಪ್ರಜಾಪೀಡನೆಯನ್ನು ಸಹಿಸಲಾರದೆ ಯಾದವೀಯಾಗುವ ಲಕ್ಷಣಗಳಿವೆ. ಒಟ್ಟಾರೆಯಾಗಿ ಯುದ್ಧವು ಪೆಸಿಫಿಕ್ ಮಹಾಸಾಗರದ ಒಡಲ ಒಡೆಯಬೇಕು" ಹೀಗೆ ರಾ| ಚಿತಳೇಯವರು ಸಂಕ್ಷಿಪ್ತವಾಗಿ ಬೇರೆ ಬೇರೆ ರಾಷ್ಟ್ರಗಳೊಳಗಿನ ಶತ್ರು-ಮಿತ್ರ ಕಾರಣಗಳನ್ನು ವಿವರಿಸಿದ್ದಾರೆ. ಈ ಮೂಲಪೀಠಿಕೆ ಗ್ರಹಿಸಿದರೆ ಆಗಿಂದಾಗ ನಡೆಯುತ್ತಿರುವ ಸಂಗತಿಗಳ ಗ್ರಹಿಕೆಯಾಗಲು ಅನುಕೂಲವಿದೆ.

ಮುಖ್ಯವಾದ ಘಟನೆಗಳನ್ನು ಈಗ ಹೇಳಬಯಸುತ್ತೇನೆ. ಸಿಂಗಾಪುರದಲ್ಲಿ ಹಕ್ಕಿ–ಪ್ರತಿ ಹಡಗಳ ತಾಲೀಮಾಯಿತು. ಸಿಂಗಾಪುರ ಬಂದರವು ವಿಮಾನಸ್ಥಳ. ಅಲ್ಲಿ ಬ್ರಿಟಿಷರು ದೊಡ್ಡ ದೊಡ್ಡ ಕೋಟೆಗಳನ್ನು ಕಟ್ಟಿದ್ದಾರೆ, ಹಡಗುಪಡೆಗಳನ್ನಿಟ್ಟಿದ್ದಾರೆ. ಶತ್ರುಗಳು ಥಟ್ಟನೆ ನಮ್ಮ ಹಿಂದುಸ್ತಾನದ ಕಡೆ ಸಾಗಿಬಂದಲ್ಲಿ ಅವರಿಗೆ ತಡೆಹೊಡಿಸಲು ಸಿಂಗಾಪುರವು ಸಮರ್ಥವಿದೆಯೋ ಹೇಗೆಂಬರ ಕುರಿತು ಈ ನಾಟಕವಾಯಿತು. ಸಿಂಗಾಪುರದ ಮೇಲೆ ಚೀನ ದೇಶದೊಳಗಿಂದ ಬ್ರಿಟಿಷ ದೇಶದ ೯೨ ಹಡಗಪಡೆಗಳೂ, ೨೪ ವಿಮಾನಗಳೂ, ಒಂದು ಜಲಸೇನೆಯೂ ಒಮ್ಮೆಲೇ ಸಾಗಿಬಂದವು. ಅವುಗಳಿಗೆ ಇದಿರಾಗುವದಕ್ಕಾಗಿ ಸಿಂಗಾಪುರದವರು ಒಳ್ಳೇ ತಯಾರಿ ಮಾಡಿದ್ದರು. ನಾಟಕದ ಪ್ರವೇಶಸಂಕಲ್ಪದಂತೆ ಸಿಂಗಾಪುರದವರೇ ಎಂದಹಲ್ಲೆಯನ್ನು ಸಿಂಗಾಪುರವು ಶೌರ್ಯದಿಂದ ಎದುರಾಳಿಗಳನ್ನು ಸೋಲಿಸಿ ಓಡಿಸಿತೆಂದು ಪ್ರಕಟವಾಗಿದೆ. ಸ್ವತಃ ಪ್ರದೇಶದಲ್ಲಿ ಏನು ಗೊಂದಲವೆಂದು ನನಗೇನೂ ತಿಳಿಯದ ಮಾತ. ಬ್ರಿಟಿಶ, ಇಟಾಲಿ ಮೊದಲಾದ ಪ್ರಮುಖ ದೇಶಗಳೊಳಗಿಂದ ಬಂದೋಬಸ್ತಿಗಾಗಿ ಸೈನ್ಯದಳಗಳು ರವಾನೆಯಾಗಿವೆ. ಮತದಾನದ ಕಾಲಕ್ಕೆ ಬಂದೋಬಸ್ತಿಯನ್ನಿಡಲು ತೀರ್ಮಾನವಾಯಿತು ಬಾಕಿ, ತಸ್ತ್ರಾಗಳಿಕೆ ಕಳೆದ ವಾರದಲ್ಲಿ ಈ ಸೈನ್ಯದ ಮುಖ್ಯ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪಾಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಘ.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!–

[ವಿ. ಸೂ. ' ಇಂಡಸ್ಟ್ರಿಯಲ್ ವಿಮೆ ' ಎಂಬ ' ರೂಪಾಯಿ ಪೊಲಿಸಿ 'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರ —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು - ಮೆ॥ ಜೀವನ ಏಜನ್ಸಿ, ಕಾರವಾರ

ದೀಕ್ಷಾಂಗಳಾದ ಮಿ| ಜಸ್ಟಿನ್ ಎಂಬವರು ಮೋಟರಾರೂಢರಾಗಿ ಸಹಜ ಅಡ್ಡಾಡುತ್ತಿದ್ದಾಗ ಒಬ್ಬರ ವೇಟಿಂರು ಹಂಗೆರಿಯ ವೈಷಮ್ಯದಿಂದ ಹಾದು ಹೋಯಿತಂತೆ. ಜನರು ಜಸ್ಟಿನ್‌ರ ಮೇಲೆ ಹಾರಿಬಂದರಂತೆ. ಜಸ್ಟಿನ್‌ರು ಪಿಸ್ತೂಲು ಹಾರಿಸಿ ಕೆಲವರಿಗೆ ಕೊಂದರಂತೆ. ಆಕಸ್ಮಿಕವಾಗಿ ದೊಡ್ಡ ಗದ್ದಲ. ಮಿ| ಜಸ್ಟಿನ್‌ರಿಗೆ ಪದಚ್ಯುತ ಮಾಡಲಾಗಿದೆ. ಗುಪ್ತವಾಗಿ ವಿಚಾರ ನಡೆಯುತ್ತಿದೆ. ರಾಜಕಾರಣವೇನಿಲ್ಲೆಂದು ಪ್ರಕಟಣೆ. ರಾಜಕಾರಣದ ಅಭಾವದಲ್ಲಿ ಇಷ್ಟೆಲ್ಲ ಗಲಾಟೆಯೇಕೆಂದು ನನಗೆ ತಿಳಿಯದು. ಸಾರ ಪ್ರದೇಶದೊಳಗಿನ ರಾಷ್ಟ್ರ ಕಾರಸ್ಥಾನ ತಿಳಕೊಳ್ಳುವದೇ ಕಠಿಣ. ಅಲ್ಲಿ ಮಹಾಯುದ್ಧವಾದಂದಿನಿಂದ ನೊಕ್ಸ ಎಂಬ ಬ್ರಿಟಿಶರು ರಾಷ್ಟ್ರಸಂಘದ ಪರವಾಗಿ ಆಡಳಿತೆ ನೋಡುತ್ತಾರೆ. ಮುಖ್ಯಾಧಿಕಾರಿಗಳವರು “ಜರ್ಮನ್ ಗುಪ್ತಚಾರರ ಉಪಟಳ ವಿಪರೀತ. ಆರೆಂಟು ತಿಂಗಳ ತನಕ ನನಗೆ ಅಡಿಗೆ ಬಡಿಸಲಿಕ್ಕಿದ್ದ ಬಟ್ಲರನು ಜರ್ಮನ್ ಸರಕಾರದ ಗುಪ್ತಚಾರನಿದ್ದನು. ಇತ್ತ ಕಡೆಯ ವಾರ್ತೆಗಳನ್ನು ಗುಪ್ತವಾಗಿ ತಿಳಕೊಳ್ಳುವದಕ್ಕಾಗಿಯೇ ಅತನು ನನ್ನಲ್ಲಿದ್ದನು.” ಹೀಗೆ ನೊಕ್ಸರವರು ಗುಪ್ತಚಾರರ ಉಪಟಳದ ಕುರಿತು ರಾಷ್ಟ್ರಸಂಘಕ್ಕೆ ಸಲ್ಲಿಸಿದ ರಿಪೋರ್ಟಿನಲ್ಲಿ ನಮೂದಿಸಿದ್ದಾರೆ. ಈ ರಿಪೋರ್ಟನ್ನು ತಪಾಸ ಮಾಡುವ ರಾಷ್ಟ್ರಸಂಘದ ಅಧಿಕಾರಿಗಳು ಗುಪ್ತಚಾರರ ಉಪಟಳದ ವರ್ತಮಾನ ಸುಳ್ಳೆಂದು ಶರಾ ಹೊಡೆಯುತ್ತಾರೆ. ಜರ್ಮನಿ ಪಕ್ಷದಿಂದ ಲಂಚ ತಿಂದು ಹೀಗ ಶರಾ ಹೊಡೆದರೆಂದು ರಾಷ್ಟ್ರಸಂಘದ ಅಧಿಕಾರಿಗಳ ಮೇಲೆ ಆರೋಪ, ಫ್ರೆಂಚರ ಕಡೆಯಿಂದ ಲಂಚ ಸಿಕ್ಕಿದ್ದರಿಂದ ನೊಕ್ಸರವರು ಗುಪ್ತಚಾರರ ಸುಳ್ಳು ರಿಪೋರ್ಟ ಬರೆದರೆಂದು ನೊಕ್ಸರವರ ಮೇಲೆ ಆರೋಪ. ದೊಡ್ಡ ದೊಡ್ಡವರು ಈ ಪ್ರಕಾರ ಪರಸ್ಪರ ವಿರುದ್ಧ ಪ್ರಕಟಣೆಗಳನ್ನು ಹೊರಡಿಸುವಾಗ ಅಲ್ಲಿಯ ಸ್ಥಿತಿಯ ಕುರಿತು ನನ್ನಂಥ ಸಾಮಾನ್ಯ ಮಾನವನು ನಿಶ್ಚಿತವಾಗಿ ಏನು ಹೇಳಬಹುದು?

ಜರ್ಮನ್-ಫ್ರೆಂಚರೊಳಗೆ ಸಂಧಿಯಾದ ವಾರ್ತೆ ತೋರಗಾಣಿಕೆಯದು. ಅಂತಃಕರಣದಲ್ಲಿ ಸ್ವಾರ್ಥಪ್ರಸೂಯೆಯೂ ವೈರಭಾವವೂ ಬೇರೂರಿಕೊಂಡಿವೆ, ಅವು ಪರಿಹಾರವಾಗವು. ಇಲೆಕ್ಷನಿಗೆ ಇನ್ನು ಮೂರು ವಾರಗಳು ಉಳಿದವು. ಅಷ್ಟರೊಳಗೆ ಏನೇನಾದೀತೆಂದು ನಾನು ಹೇಳಲಾರೆ. ಜರ್ಮನಿಯಲ್ಲಿಂತು ಹೊಸ ಹೊಸ ಏರ್ಪಾಟುಗಳಾಗುತ್ತಿವೆ. ಎಳೆ ಪ್ರಾಯದ ಪಾದ್ರಿಗಳಿಗೆ ಧರ್ಮೋಪದೇಶ ಮಾಡಲು ಸರ್ಟಿಫಿಕೇಟು ಪಡೆಯಬೇಕಾದರೆ ಅವರು ೧|| ವರ್ಷದ ತನಕ ಕುಸ್ತಿಯ ಶಿಕ್ಷಣ ಪಡಕೊಳ್ಳಬೇಕು. ಎಳೆ ಪ್ರಾಯದ ವಕೀಲರಿಗೆ ಸನದು ಸಿಗಬೇಕಾದರೂ ಇದೇ ನಿರ್ಬಂಧವಿದೆ. ಎಳೆ ಪ್ರಾಯದ ಡಾಕ್ಟರರಿಗೂ, ಶಿಕ್ಷಕರಿಗೂ ಇದೇ ಪ್ರಕಾರ ಕುಸ್ತಿ ಶಿಕ್ಷಣ ಪಡೆಯಬೇಕಾಗಿ ಹಿಟ್ಲರರು ವಿಧಿಸಿದ್ದಾರೆ. ಹೀಗೆ ಜರ್ಮನಿಯೊಳಗಿನ ಎಳೆ ಪ್ರಾಯದವರಿಗಲ್ಲಿ ಸೈನ್ಯಶಿಕ್ಷಣ ಕೊಟ್ಟು ಮುಂದಿನ ಯುದ್ಧ ತಯಾರಿಯ ಕ್ರಮ ನಡೆದದೆಂದು ನಾನು ಹೇಳಿದರೆ ವಸ್ತುಸ್ಥಿತಿಯ ನಿದರ್ಶನವಾಗದೇನು? ರೋಮು ಪಟ್ಟಣದಲ್ಲಿ ಇಟಾಲಿ, ಆಸ್ಟ್ರಿಯಾ, ಹಂಗೇರಿ ಈ ಮೂರು ದೇಶಗಳ ರಾಜ್ಯಭಾರಿಗಳು ಒಕ್ಕಟ್ಟಾಗಿ ಸಂಧಿ ಮಾಡಿಕೊಂಡರೆಂದು ಪ್ರಕಟವಾಗಿದೆ. ಈ ಸಂಧಿಯಿಂದ ಇಟಾಲಿಯು ಮತ್ತಷ್ಟು ಪ್ರಬಲವಾಗಿದೆ. ರ| ಚಿತಲಂಡುವರು ತರ್ಕಿಸಿದಂತೆ, ಈ ಸಂಧಿಯಿಂದ ಜರ್ಮನಿಯೊಡನೆ ಮುಸೋಲಿನಿಯವರು ಒಕ್ಕಟ್ಟಾಗ ಬಯಸುತ್ತಾರೆಂದು ನನ್ನ ಊಹೆ. ಮುಸೋಲಿನಿಯವರು ಶಾಂತತೆ ವಾದಿಗಳಲ್ಲ, ಯುದ್ಧಪಕ್ಷಪಾತಿಗಳು. ಇಟಾಲಿಯಲ್ಲಿ ಇತ್ತ ಕಡೆ ಏರ್ಪಾಟಾಗುವ ಬಾಲೂನುಗಳಿಂದ ಇಡೀ ಇಟಾಲಿ ರಾಷ್ಟ್ರವನ್ನು ಸೈನ್ಯ ರಾಜ್ಯವಾಗಿ ಅವರು ಪರಿಣಮಿಸುತ್ತಾರೆಂದು ಸ್ಪಷ್ಟವಾಗಿ ಕಾಣುತ್ತದೆ. ೮ ವರ್ಷ ಪ್ರಾಯದ ವಿದ್ಯಾರ್ಥಿಗಳು ಸಹ ಪರೀಕ್ಷೆಗೆ ಕೂಡ್ರಬೇಕಾದರೆ ಸೈನ್ಯ ಶಿಕ್ಷಣ ಪಡೆಯಬೇಕು. ನೌಕರರಿಗೆ ಸೈನ್ಯ ಶಿಕ್ಷಣ ಪಡೆಯಲು ಸಾವುಕಾರರು ಅವಸರ ಕೊಡದಿದ್ದರೆ ಅವರ ನೌಕರಿ ಬಿಟ್ಟುಹೋಗುವದು. ಹುಡುಗರಿಗೆ ಎಳೆಯಂದಿನಿಂದ ಕೂಡಿಸಿ ಇಟಾಲಿಯವರು ಯುದ್ಧ ಕಾಲದಲ್ಲಿ ನಡಿಸಿದ ಪರಾಕ್ರಮಗಳನ್ನು ವರ್ಣಿಸಿ ಅವರೊಳಗೆ ಲಷ್ಕರಿ ಪ್ರವೃತ್ತಿ ಬೆಳಸಬೇಕು, ಲೋಕದಲ್ಲಿ ಇಟಾಲಿಯ ಪ್ರತಿಷ್ಠೆ ಬೆಳೆಯಬೇಕು, ವಸಾಹತುಗಳನ್ನು ಬೆಳಸತಕ್ಕದ್ದು, ಈ ಪ್ರಕಾರ ಇಟಾಲಿಯ ಮಹತ್ವಾಕಾಂಕ್ಷೆಯಿರುವದಾಗಿ ‘ಟೀರಿಯದ’ ಎಂಬ ಪತ್ರಿಕೆಯು ಹೊಸ ವಾಯಿದೆಯ ಪ್ರಶಂಸೆ ಮಾಡುತ್ತದೆ. ಯುದ್ಧ ತಯಾರಿಯ ಯಾವದೇ ವಾರ್ತೆಯನ್ನು ಯಾರೂ ಎಷ್ಟಕ್ಕೂ ಪ್ರಕಟಿಸಕೂಡದು. ಪತ್ರಿಕೆಗಳ ಮೇಲಂತು ಕಠಿಣ ಕಾವಲು. ಮಾರ್ಗ, ಉಗಿಬಂಡಿ, ಕೋಟೆ, ವಿಮಾನ ಯಾತ್ರೆ, ಹಡಗುಪಡೆ, ಮದ್ದುಗುಂಡು ಇವುಗಳ ವಾರ್ತೆಯನ್ನು ಎಲ್ಲಿಯೂ ಯಾರೂ ಸರಕಾರದ ಪ್ರಕಟಣೆ ಹೊರತು ಪ್ರಕಟಿಸಕೂಡದು. ಸರಕಾರಿ ಖಾತೆಯ ಅಧಿಕಾರಿಗಳೂ ತಮ್ಮ ಹೆಂಡರು ಮಕ್ಕಳಿಗೆ ಸಹ ಈ ಸಂಗತಿಯನ್ನು ಹೇಳಕೂಡದು. ಸ್ವಪ್ನದಲ್ಲಿ ಸೇರಲು ಸರಕಾರದ ಕಡೆ ಬಂದ ಸಂಗತಿಯನ್ನು ಬಿಟ್ಟರೆ ತಿಳಿಸಕೂಡದು. ಪ್ರಜೆಗಳು ಇಟಾಲಿಯವರು ತಮ್ಮ ಜವಾಬದಾರಿಯನ್ನು ಅರಿತು ನಡಕೊಳ್ಳಬೇಕಾಗಿ ಸರಕಾರದ ಎಚ್ಚರಿಕೆ. ಈ ಪ್ರಕಾರ ಇಟಾಲಿಯಲ್ಲಿ ರಣದುಂದುಭಿಯ ಆರ್ಭಟ ನಡೆದಿದೆ. ಆಫ್ರಿಕೆಯ ಸೋಮಾಲಿ ಪ್ರದೇಶದೊಳಗೆ ನಡೆದ ಕಾರಸ್ಥಾನದ ಪ್ರಕಾರದ ಮೇಲಿಂದ ಇಟಾಲಿಯ ಮನಸ್ಥಿತಿಯ ಕಲ್ಪನೆ ಬಂದೀತು. ಸೋಮಾಲಿ ಪ್ರದೇಶವು, ಅಬಿಸೀನಿಯಾ ಪ್ರದೇಶವು ಹೊಂದಿಕೆಯಾಗಿವೆ. ಉಲವೆಲ್ ಗ್ರಾಮವು ಅಬಿಸೀನಿಯಾದ ಗಡಿನಾಡ. ಈ ಗ್ರಾಮ ತಮ್ಮದೆಂದು ಇಟಾಲಿಯ ಸಾಧನ. ಕಳೆದ ೬ನೇ ತಾರೀಖಿಗೆ ಇಲ್ಲಿ ಇಟಾಲಿಯವರಿಗೂ ಅಬಿಸೀನಿಯಾದವರಿಗೂ ದೊಡ್ಡ ಕಾದಾಟವಾಗಿ ಇಟಾಲಿಯವರು ಆ ಗ್ರಾಮವನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡಿದ್ದಾರೆ. ಅಬಿಸೀನಿಯಾ-ಸೋ

[ಎರಡನೇ ಪಾನಿನ ಮೇಲೆ ಮುಂದವರಿಸಿದೆ.]

ಮುಂಬಯಿ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,



THE VEGETABLE SOAP WORKS; Props: SAIT N.P. & Co. CALICUT.

ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು:— ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ. (ಉ ಕನ್ನಡ)

ಕಾನಡಾವೃತ್ತ

ಮಿತಿ ಭಾದ್ರ ಶುಂ ಮಾರ್ಗಶೀರ್ಷ ಬ|| ೬ಗೆ, ಸೋಮವಾರ

ಮೂಕ ರಾಜ್ಯದಾನ!

ಹಿಂದುಸ್ಥಾನಕ್ಕೆ ರಾಜ್ಯಾಧಿಕಾರ ಅರ್ಪಣ ಮಾಡುವ ಸಮಾನೆ ಕೇಳಿದರೆ ನೋಡಿದರೆ ಒಮ್ಮೆ ನಗೆ ಬರುತ್ತದೆ, ಒಮ್ಮೆ ವ್ಯಸನವಾಗುತ್ತದೆ. ಈ ಕೌತುಕ್ಕೆಗಳನ್ನು ಬ್ರಿಟಿಶ ರಾಜಕಾರಣಿಗಳು ಯಾಕೆ ಮಾಡುತ್ತಾರೆಂಬುದು ನಾವರಿಯದ ಮಾತು. ಹಿಂದಿನ ತಾರೀಖಿನೇಗೆ ಪಾರ್ಲಮೆಂಟಿನ ಸಭೆಯಲ್ಲಿ ಭಾರತ ಮಂತ್ರಿಗಳು ರಾಜ್ಯಕಾರಭಾರಸುಧಾರಣೆಯ '*Dummy Bill*' ಯಾನೆ ಮೂಕ ಕಟ್ಟಳೆಯನ್ನು ಮೂಕತನದಿಂದಲೇ ಸೂಚಿಸಿದರಂತೆ! ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವ ಬ್ರಿಟಿಶ ರಾಜಕಾರಣ ಧುರಂಧರರ ಔದಾರ್ಯ ನೋಡಿ ಪ್ರಧಾನ ಮಂಡಳದ ಪಕ್ಷಪಾತಿಗಳು ಉಲ್ಲಾಸದಿಂದ ಚಪ್ಪಾಳೆಯ ಘೋಷ ಮಾಡಿ ಮನ್ನಿಸಿದರಂತೆ!! ಕಟ್ಟಳೆ ಬರೆದ ಕಾಗದದ ಮೇಲೆ ಕಟ್ಟಳೆಯ ನಾಮನಿರ್ದೇಶ ಮಾತ್ರ, ಇತ್ತು; ಕಲಮುಗಳಿರಲಿಲ್ಲ. ಜನವರಿ ತಿಂಗಳ ತರುವಾಯ ಈ ಮೂಕ ಕಟ್ಟಳೆಗೆ ವಾಚೆ ಹುಟ್ಟಿ ಅದು ಸವಿಸ್ತರ ಪ್ರಕಟವಾಗುವದಾಗಿ ಮುಖ್ಯ ಪ್ರಧಾನರಾದ ಮಿ. ಲಾಯಿಡ್‌ಜೋರ್ಜರವರು ಮರುದಿನ ಪಾರ್ಲಮೆಂಟಿನ ಸಭೆಯಲ್ಲಿ ಉದ್ಗರಿಸಿದರು. ಯಾವದೇ ಕಾಯಿದೆಯು ಶಾಸನವಾಗಬೇಕಾದರೆ ಕಾಯಿದೆಯ ಸಂಪೂರ್ಣ ವಿವರವನ್ನು ಸಭೆಗೆ ಅರುಹುವದು ಲೋಕಸಭೆಯ ಮುಖ್ಯತತ್ವ. ಸೂಚನೆ ಸಮಯ ಕಾಯಿದೆಯ ಯುಕ್ತಾಯುಕ್ತತೆಯನ್ನು ಚರ್ಚಿಸುವ ಅಧಿಕಾರವು ಲೋಕಪ್ರತಿನಿಧಿಗಳಿಗುಂಟು. ಲೋಕಸಭೆಯು ತನ್ನ ಮನೆಯೆಂದು ಖ್ಯಾತಿಗೊಂಡ ಬ್ರಿಟಿಶ ಪಾರ್ಲಮೆಂಟಿನ ಸಭಾಸದರು ಹಿಂದುಸ್ಥಾನದ ಹಿತಕ್ಕಾಗಿ (?) ಈ ಅಧಿಕಾರ ಕಳಕೊಳ್ಳಲಿಕ್ಕೂ ತಯಾರಾದರು. ಏನಾಟವಿದೆಂದು ಯಾರಿಗೂ ತಿಳಿಯದೆ ಎಲ್ಲರೂ ಬೆರಗಾಗಿ ಬಿದ್ದಿದ್ದಾರೆ!

ಮೂಕ ಕಾಯಿದೆಗಳನ್ನು ಸೂಚಿಸುವ ಪದ್ಧತಿಯು ಸಾಮಾನ್ಯವಲ್ಲ; ಅಸಾಮಾನ್ಯವಾದುದು. ಮಹಾಯುದ್ಧಕಾಲದಲ್ಲಿ ಯುದ್ಧ ಸಾಮಗ್ರಿಗಳ ಪರಿಮಿತಿ ಶತ್ರುಗಳಿಗೆ ತಿಳಿಯಬಾರದೆಂದು ಅಂಕಿಗಳಿಲ್ಲದ ಕಾಗದಗಳನ್ನು ಪಾರ್ಲಮೆಂಟಿಗೆ ಸಾದರಪಡಿಸಿ ಮನ್ನಿಸಿಕೊಂಡು, ನಿರಂಕುಶವಾಗಿ ಪ್ರಧಾನರು ಯುದ್ಧ ಪುರಸ್ಕರಿಸಲು ಖರ್ಚು ಮಾಡುತ್ತಿದ್ದರಂತೆ. ಈ ಸಂಗತಿಯನ್ನು ದಿಲ್ಲಿಯೊಳಗಿನ ಮಹನೀಯರೊಬ್ಬರು 'ಮುಂಬಯಿ ಕ್ರೋನಿಕಲ್' ಪತ್ರಿಕೆಯ ಸುದ್ದಿಗಾರರಿಗೆ ತಿಳಿಸಿ, ಈ ಪದ್ಧತಿಯ ಮರ್ಮವನ್ನರುಹಿದ್ದಾರೆ. ಆದರೆ ಈಗ ಯುದ್ಧ ಪರಿಸ್ಥಿತಿ ಇಲ್ಲ; ಗೌಪ್ಯರಕ್ಷಣ ಮಾಡಿಕೊಳ್ಳಬೇಕಾದಂಥ ಶತ್ರುಗಳನ್ನೆಂದು ನಾವು ಬಾಡವು, ಇಂಥ ಪ್ರಸಕ್ತಿಯಲ್ಲಿ ಮೂಕತನವೇಕೆ? ಸಾಮ್ರಾಜ್ಯ ಸರಕಾರವೂ ಹಿಂದುಸ್ಥಾನ ಸಂರಕಾರವೂ ರಾಜ್ಯಸುಧಾರಣೆಯ ಮುನೂಕಿಸ್ಸಿಯನ್ನು ಇನ್ನೂ ಮಾಡಿಲ್ಲವೇ?

ಏಕಾದಶೀಚಳುವಳಿಯ ದೆಹ್ಲಿಯ ಪಾರ್ಲಮೆಂಟಿನ ಕಮಿಟಿಯ ವರದಿಯನ್ನು ಸಂಪೂರ್ಣವಾಗಿ ಪರಿಶ್ರಮಿಸಿದ್ದಾರೆ ಎಂಬ ಸ್ಥಿತಿ ಇದ್ದಂತೆ ಇಂಗ್ಲೆಂಡಿನ ಟ್ರಿಬ್ಯೂನ ಸ್ಥಳದವರು ಹೇಳುತ್ತಾರೆ, ಹಿಂದಿನೊಳಗಿನ 'ಲೀಡರ' ಪತ್ರಿಕೆಯು ಸಂಪಾದಕರಾದ ರಾ|| ಚಿಂತಾಮಣಿಯವರು ಅಭಿಪ್ರಾಯಪಡುತ್ತಾರೆ. ರಾ|| ಚಿಂತಾಮಣಿಯವರು ಶಾಸ್ತ್ರಿಯವರು, ಸೋಮಸ್ವರು, ಇನ್ನೊಬ್ಬ ಸೋಮಕ್ಕ ಪ್ರಮುಖರಾದ ರಾ|| ರಘುನಾಥರಾವ ಪರಾಂಜಪೇಯವರೂ ಇದೇ ಪ್ರಕಾರ ಮತ ಪ್ರಕಟಣೆ ಮಾಡಿದ್ದಾರೆ. ಮಿ. ಬ್ರೇಲ್ಸಫರ್ಡರವರಂಥ ವಿಚಾರವಂತ ಇಂಗ್ಲಿಷ ಗ್ರಂಥಕಾರ ಪ್ರತಿನಿಧಿಗಳು 'ದನೋತ್ಕಾಲ ವೀಕ್ಲಿ' ಪತ್ರಿಕೆಯಲ್ಲಿ ಪಾರ್ಲಮೆಂಟಿನ ಕಮಿಟಿಯ ವರದಿಯು ಹಿಂದೀಯರಿಗೆ ವಂಚಿಸುವದಕ್ಕಾಗಿ ಕೈಕೊಂಡ ಕಪಟ ನಾಟಕವೆಂದು ಸ್ಪಷ್ಟ ಪ್ರತಿಪಾದಿಸಿದ್ದಾರೆ. ಇದರಂಥ ಇಂಗ್ಲಿಷರು ಸ್ವತಃ ಸ್ಪಷ್ಟವಾಗಿ ನಿಶ್ಚಿತಾಭಿಪ್ರಾಯಪಟ್ಟಿದ್ದಾರೆ. ಮುಂಬಯಿಯ 'ಇಂಡಿಯನ್ ಸೋಶಲ್ ರಿಫಾರ್ಮರ' ಪತ್ರಿಕೆಯ ಸಂಪಾದಕರಾದ ರಾ|| ಕಾಮಾಕ್ಷಿ ನಟರಾಜನ್‌ರವರು ಈ ವರದಿ ಅಂಗೀಕಾರಕ್ಕೆ ಅನರ್ಹವೆಂದೂ, ಸಾರ್ವಭೌಮ ಸಂಚವ, ಜೋಗಾವು ಐಕ್ಯ ಮಹೋತ್ಸವದ ಸಮಯ ರಾಜಾಧಿಕಾರದ ಪದ ಹೊಸ ಬಾಹಿರ ನಾಮ ಹೇರಬೇಕೆಂದೂ ಬಿನ್ನೈಸಿದ್ದಾರೆ. ರಾ|| ನಟರಾಜನ್‌ರವರು ಯಾವದೇ ಪಕ್ಷದವರಲ್ಲ, ಸ್ವತಂತ್ರ ವಿಚಾರದವರೆಂದು ಅವರ ಖ್ಯಾತಿಯಿದೆ. ಅವರಿಂದ ಹೇಳಲಾದ ರಾಜಕಾರಣದುರಂಧರರು ರಾಜ್ಯಸುಧಾರಣೆಯ ವಿಚಾರವನ್ನು ಪುನರಾಲೋಚಿಸತಕ್ಕದ್ದೇನು?

ಬ್ರಿಟಿಶ ಸಂಸ್ಥಾನದ ಪ್ರಧಾನ ಮಂಡಳದವರಿಗೆ, ಪಾರ್ಲಮೆಂಟಿನಲ್ಲಿ ಕಡು ವಿರೋಧ ಮಾಡಿದ ಚರ್ಚಿಲ್ ಜೋಯಿನ್ಸನ್ ಹಿಕ್ಸ್ ಮೊದಲಾದ ರಾಜಕಕ್ಷದವರ ಮಾನಸ ಇನ್ನೂ ಅಂತರಂಗದಲ್ಲಿ ಬಿರಿದಿಲ್ಲ. ಮಿ. ಮಾಂಟೆಗೂ ಸಾಹೇಬರು ಮೊದಲಿಂದಲೂ ಹಿಂದೀಯರಿಗೆ ವಂಚಿಸುವದಕ್ಕಾಗಿ ನಡೆದ ರಾಜ್ಯಸುಧಾರಣಾ ವಿಚಾರದ ನಾಟಕದೊಳಗಿನ ಬೇರೆ ಬೇರೆ ಪಾತ್ರಗಳನ್ನು ಪಾರ್ಲಮೆಂಟಿನಲ್ಲಿ ಚರ್ಚೆಯಾದ ಬಳಿಕ ನಡೆದ ಔತಣ ಸಮಾರಂಭದಿಂದ ಮಿ|| ಬ್ರೇಲ್ಸಫರ್ಡರವರ ಅಂಗೀಕಾರ ಪ್ರತ್ಯಕ್ಷ ಸಿದ್ಧವಾಗಿದೆ. ಪಾರ್ಲಮೆಂಟಿನಲ್ಲಿ ಹೋದವರು ಪುರಸ್ಕರ ಮಾಡಿದ ಬ್ಯೊಂಟ ಪಾರ್ಲಮೆಂಟ ಕಮಿಟಿಯ ವರದಿ ಪ್ರಚಂಡ ಬಹುಮತದಿಂದ ಮಂಜೂರಾಯಿತಷ್ಟೇ. ಹೋದರಿಗೆ ಆಗಿನ ಮತಗಳು ಅನುಕೂಲ ದೊರೆತವು! ಪ್ರತಿಪಕ್ಷಗಳಿಗೆ ವಿಶೇಷ ಸಾಹಸದಿಂದ ದೊರೆತ ಮತಗಳು ಬರೇ ೫೭. ಈ ವಿಜಯದಿಂದ ಭಾರತ ಮಂತ್ರಿ ಹೋದರಿಗೂ ಸಹಜವಾಗಿ ಅತ್ಯಾನಂದವಾಯಿತು, ಪರಮಾನಂದವಾಯಿತು; ಅವರ ಉಲ್ಲಾಸಕ್ಕೆ ಸೀಮೆಯಿರಲಿಲ್ಲ. ಮಾರನೇ ದಿನವೇ ಹೋದರು ತಮ್ಮ ಮನೆಯಲ್ಲಿ ಜೀವದ ಗೆಳೆಯರಿಗೆ ನಿಮಂತ್ರಿಸಿ ಔತಣ ಸಮಾರಂಭ ನೆರವೇರಿಸಿದರು. ಈ ಸಮಾರಂಭಕ್ಕೆ ಹೋದರ ಸಂಕಲ್ಪಿತ ಹಿಂದೀ ರಾಜ್ಯಸುಧಾರಣೆಗೆ ಕಡು ವಿರೋಧ ಬಗೆದ ಚರ್ಚಿಲ್-ಜೋಯಿನ್ಸನ್ ಹಿಕ್ಸ್ ಮೊದಲಾದ ಪಾರ್ಲಮೆಂಟಿನ ಸಭಾಸದರೂ, ಲಿಟನ್, ಡರ್ಬಿ, ಕರ್ಜನ ಮೊದಲಾದ ಮೊರೆ-ಮೊರೆಸಾಹೇಬರ ದಯಮಾಡಿಸಿದ್ದರು. ಎಲ್ಲರೂ ತಮ್ಮ ತಮ್ಮ ಪಾತ್ರ ಕಾರ್ಯವನ್ನು ಚೊಕ್ಕವಾಗಿ ಪಾರ್ಲಮೆಂಟಿನ ರಂಗಸ್ಥಳದ ಮೇಲೆ ನಟಿಸಿದ ಬಗ್ಗೆ ಪರಸ್ಪರ ಪ್ರಶಂಸೆ ಮಾಡಿಕೊಂಡರಂತೆ! ಈ ಸಂಗತಿ ಎಲ್ಲಿಯೂ ಪ್ರಕಟವಾಗಲಿಲ್ಲ. ಈ ಔತಣ ಸಮಾರಂಭವು ಸಾರ್ವಜನಿಕವಿರಲಿಲ್ಲ. ಆದರೆ, ಪುಣೆಯ 'ಕೇಸರಿ' ಪತ್ರಿಕೆಯ ಸುದ್ದಿಗಾರರು ಬಹು ಯುಕ್ತಿಯಿಂದ ಆ ಔತಣ ಸಮಾರಂಭದಲ್ಲಿ ಪ್ರವೇಶಿಸಿ ಅಲ್ಲಿ ಸಮಸ್ತರಲ್ಲಿ ಪ್ರಕಟವಾದ ಸಹಕಾರವನ್ನೂ, ಸ್ನೇಹಭಾವವನ್ನೂ, ಸ್ವದೇಶಾಭಿಮಾನವನ್ನೂ, ಲೋಕವಂಚನೆಯ ನಾಟಕವನ್ನೂ ಪ್ರಕಟಿಸಿದ್ದಾರೆ. ಪ್ರತ್ಯಕ್ಷ ಸಂಭಾಷಣವನ್ನು ಅವರು ಕೊಟ್ಟಿಲ್ಲ. ಕಲ್ಪನೆಯಿಂದ ಮಾಡಿದ ಸಂಭಾಷಣವನ್ನೆಂದು ತಮ್ಮ 'ಕೇಸರಿ' ಪತ್ರಿಕೆಗೆ ಕಳಿಸಿದ್ದಾರೆ. ಇದರ ಮೇಲಿಂದ ಒಂದು ಮಾತು ಸಿದ್ಧವಾಗುತ್ತದೆ. ಪಾರ್ಲಮೆಂಟಿನ ವಿರೋಧವೆಂಬುದು ತೋರಿಕೆಯದು. ಪರಿಸ್ಥಿತಿಯನ್ನು ಗ್ರಹಿಸಿ ಸರ್ ಸ್ಯಾಮ್ಯುಅಲ್ ಹೋರ್ ಮೊದಲಾದ ಪ್ರಧಾನರು ರಾಜ್ಯಸುಧಾರಣೆ ಕೈಕೊಂಡಲ್ಲಿ ಯಾರದೂ ಆಕ್ಷೇಪವಿಲ್ಲ. ಪ್ರಧಾನ ಮಂಡಳವು ವರದಿಯ ಮೇಲೆ ಪ್ರಕಟ ಹೊಂದಿದ ಲೋಕಮತವನ್ನು ಗ್ರಹಿಸಿ ಮನೋನಿಶ್ಚಯ ಮಾಡಲೋಸುಗ ಮೂಕ ಕಟ್ಟಳೆಯ ಮೂಕವಾಚನವನ್ನು ಮೂಕತನದಿಂದಲೇ ಮನ್ನಿಸಿಕೊಂಡಿರುತ್ತಾರಾಗಿ ನಾವು ಎಣಿಸಬಹುದೇ?

ಬ್ರಿಟಿಶರು ವ್ಯವಹಾರಕುಶಲರು, ಪರಿಸ್ಥಿತಿಗೆ ಬಗ್ಗಲು ಯಾವಾಗಲೂ ಸಿದ್ಧರು. ಪರಿಸ್ಥಿತಿಯು ಗ್ರಹಿಕೆಯಾದಲ್ಲಿ ಅದಕ್ಕೆ ತಕ್ಕದಾಗಿ ತಮ್ಮ ನಡಾವಳಿಯನ್ನಿಡಲು ಅವರು ಸಿದ್ಧರಿದ್ದಾರೆ. ಬೋಯರ ಯುದ್ಧ ಮುಗಿದು ದಕ್ಷಿಣ ಆಫ್ರಿಕೆಗೆ ರಾಜ್ಯಾಧಿಕಾರ ಕೊಡುವ ಆಲೋಚನೆಯಾದಾಗ, ಈಗಿನಂತೆಯೇ ರಾಜ್ಯ ಯೋಜನೆಯಲ್ಲಿ ಅನೇಕ ರಕ್ಷಾಬಂಧನಗಳಿದ್ದವು. ಆ ಕಾಲದಲ್ಲಿ ಕೆಂಪೆಲ್ ಬೆನರಮನ್‌ರವರು ಪ್ರಧಾನ ಮಂಡಳದಲ್ಲಿದ್ದರು. ಬ್ರಿಟಿಶರ ಹಿತಸಂಬಂಧದ ರಕ್ಷಣೆಯು ಶಾಸನಗಳಿಂದ ರಕ್ಷಣೆಯಾಗುವದಿಲ್ಲ; ಪ್ರತಿಪಕ್ಷಿ ಬೋಯರ ಸೇನಾಪತಿಗಳಾದ ಬೋಥಾರವರಿಗೆ ಮನವೊಲಿಸುವಂತೆ ಔದಾರ್ಯದಿಂದ ರಾಜ್ಯದಾನವಾಗಬೇಕಾಗಿಯೂ, ಪ್ರಜಾಸಂತೋಷವೇ ಬ್ರಿಟಿಶರ ಮುಖ್ಯ ಆಧಾರವೆಂದೂ ಪ್ರಧಾನ ಮಂಡಳದಲ್ಲಿ ೧೯೦೬ನೆಯ ಕೆಂಪೆಲ್ ಬೆನರಮನ್‌ರವರು ಭಾಷಣ ಮಾಡಿದೊಡನೆ ರಕ್ಷಾಬಂಧನಗಳೆಲ್ಲವು ಒಮ್ಮೆಲೇ ಬಯಲಾದವಾಗಿ ಲ್ಯೊಡ್ ಜೋರ್ಜರವರು ಹೇಳುತ್ತಾರೆ. ಬೋಯರರ ಮನವೊಲಿಸಬೇಕಾಗಿ ದಿವಂಗತ ಎಡ್ವರ್ಡ ಬಾದಶಹರೂ ಅಪೇಕ್ಷಿಸಿದ್ದರಂತೆ! ಆದರಿಂದ ದಕ್ಷಿಣ ಆಫ್ರಿಕೆಯವರಿಗೆ ಮಹಾಪತು ಸ್ವರಾಜ್ಯ ಸಿಕ್ಕಿ, ಸಾಮ್ರಾಜ್ಯಕ್ಕೆ ಒಳ್ಳೇ ಕಸುವುಂಟಾಯಿತು. ಮಹಾತ್ಮರು 'ಮೆಂಚೆಸ್ಟರ ಗಾರ್ಡಿಯನ್' ಪತ್ರಿಕೆಯ ಸುದ್ದಿಗಾರರ ಬಳಿ ನುಡಿದಂತೆ, ಹಿಂದೀಯರಲ್ಲಿ ಕಸುವಿದೆಯೆಂದು ಬ್ರಿಟಿಶರಿಗೆ ಇನ್ನೂ ಗ್ರಹಿಕೆಯಾಗಿಲ್ಲ. ಕಸುವು ಪ್ರಾಪ್ತವಾಗಿದೆಂದು ಬ್ರಿಟಿಶರು ಮನಗಂಡರೆ ನಿವಿವಾದದಲ್ಲಿ ರಾಜ್ಯಾಧಿಕಾರ ಅರ್ಪಿಸಲ್ಪಡುವದು. ಕಾಯಿದೆ ಕೌನ್ಸಿಲಿನ ಇಲೆಕ್ಷನಿನಲ್ಲಿ ರಾಷ್ಟ್ರೀಯ ಸಭೆಯ ಪುರಸ್ಕರ್ತರಿಗೆ ಸಿಕ್ಕಿದ ಲೋಕಬೆಂಬಲದಿಂದ ಹೋರಾಡಿ ಬ್ರಿಟಿಶ ರಾಜಕಾರಣಿಗಳು ರಾಜ್ಯಘೋರಣದಲ್ಲಿ ವಿಶೇಷ ಸೂಕ್ಷ್ಮಸ್ಥಿತಿ ಮಾಡುವ ವಿಚಾರದಿಂದ ಈ ಮೂಕ ಕಾಯಿದೆಯನ್ನು ಸೂಚಿಸಿರಬಹುದೇ? ಮೂಕ ಕಟ್ಟಳೆಗೆ ಅಸಾಮಾನ್ಯ ಕ್ರಮದಿಂದ ಇಲ್ಲದ ವಾಕ್ ಶಕ್ತಿಯು ಹುಟ್ಟುತ್ತದೆ ನಿರಾಶೆಯಾದರೂ ಅತಿಜೆನ್ನು ಬಿಡದು.

ಯುದ್ಧದ ಕಿಡಿನೆಳಲು ಕಾಣುತ್ತಿದೆ!

[೩ನೇ ಪಾನಿನಿಂದ ಮುಂದರಿಸಿದ್ದು]

ಸೋಮಾಲಿ ಪ್ರದೇಶಗಳೊಳಗಿನ ಸೀಮೆಗಳನ್ನು ನಿಶ್ಚಯಿಸಿಕೊಳ್ಳಬೇಕೆಂದು ಈಗ ಸುಮಾರು ೩೦ ವರ್ಷಗಳಿಂದ ವಿವಾದ ನಡೆದಿದೆ. ೧೯೦೮ನೇ ಇಸ್ವಿಯಲ್ಲಿ ಇಟಾಲಿಯವರಿಗೂ, ಅಬಿಸೀನಿಯಾದವರಿಗೂ ಆದ ಕರಾರಿನಲ್ಲಿ ಗಡಿಯನ್ನು ನಿಶ್ಚಯಿಸಬೇಕಾಗಿ ಶರ್ತವಿದೆ. ೧೯೨೮ನೇ ಇಸ್ವಿಯಲ್ಲಿ ಆದ ಕರಾರಿನಂತೆ ವಿವಾದ ವಿಷಯವನ್ನು ಪಂಚಾಯತಿಯಿಂದ ನಿರ್ಣಯಿಸಿಕೊಳ್ಳುವ ಶರ್ತವಿದೆ. ಆದಾಗ್ಯೂ ಇಟಾಲಿಯವರು ಬಲಾತ್ಕಾರ ನಡೆಸುತ್ತಾರೆ. ಅಬಿಸೀನಿಯಾದವರು ಮುಂಚೆ ತಮ್ಮ ಸೋಮಾಲಿ ಸೈನ್ಯದ ಮೇಲೆ ಗುಂಡು ಹಾರಿಸಿದರು; ಅದರಿಂದ ತಮಗೆ ನಷ್ಟವಾಗಿದೆ; ೨೦ ಸಾವಿರ ಪವನು ನಷ್ಟಭರಪಾಯಿ ಕೊಡಬೇಕು, ಕ್ಷಮಾಯಾಚನೆ ಮಾಡಬೇಕು; ಇಟಾಲಿಯ ಧ್ವಜಕ್ಕೆ ಸಲಾಮು ಮಾಡಬೇಕು, ಗುಂಡಿನಿಂದ ಸತ್ತವರಿಗಾಗಿ, ಗಾಯಪಟ್ಟವರಿಗಾಗಿ ನಷ್ಟಭರಪಾಯಿ ಕೊಡಬೇಕು, ಹೀಗೆ ಇಟಾಲಿಯ ಮುಸೋಲಿನಿಯವರು ತೀರ್ಪು ಕೊಟ್ಟು ಬಿಟ್ಟಿದ್ದಾರೆ. ಯಾರ ತಪ್ಪು, ಯಾರ ಒಪ್ಪು? ಎಂಬುದನ್ನು ರಾಷ್ಟ್ರಸಂಘದ ಮುಂದಿಟ್ಟು ನಿರ್ಣಯಿಸಿಕೊಳ್ಳಬೇಕಾಗಿ ಅಬಿಸೀನಿಯಾ ರಾಷ್ಟ್ರದವರು ಸೂಚಿಸಿದರೆ ಮುಸೋಲಿನಿಯವರು ಒಪ್ಪುವದಿಲ್ಲ. ಅಬಿಸೀನಿಯಾದವರ ಸಾಧುತ್ವ ಸ್ಪಷ್ಟ ಕಾಣುತ್ತದೆ; ನಿರ್ಣಯಿಸುವಂಥದ್ದೇನಿಲ್ಲ, ಹೀಗೆ ಅಬಿಸೀನಿಯಾದ ಅರಸರಿಗೆ ಅವರು ತಿಳಿಸಿದ್ದಾರೆ. ಕೆಲ ಇಟಾಲಿಯರು ೫೭ ವರ್ಷಗಳಿಂದ ಉಲವೆಲ್ ಗ್ರಾಮದಲ್ಲಿ ವಾಸಿಸಿಕೊಂಡಿದ್ದಾರೆ. ಆ ಗ್ರಾಮವನ್ನು ಆಕ್ರಮಿಸಲು ಇಟಾಲಿಯವರ ಕಾರಸ್ಥಾನ. ಸಾಮಾನ್ಯ ಜನರು ಗಡಿಯಾಳೆಯನ್ನು ಸರಿಸಿ ಜಗಳಾಡುವಂತೆ, ಇಟಾಲಿಯವರು ಜಗಳಾಡಹತ್ತಿದ್ದಾರೆಂದು ನಾನು ಹೇಳಿದರೆ ಅಯಥಾರ್ಥವಾದೀತೇನು? ಆಫ್ರಿಕಾ ಖಂಡವು ಜರ್ಮನಿ, ಇಂಗ್ಲಂಡ, ಫ್ರಾನ್ಸ, ಇಟಾಲಿ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಹಂಚಿಹೋಗಿದೆ ಅಬಿಸೀನಿಯಾ, ಮೊರೊಕ್ಕೊ ಇವೆರಡೇ ಸ್ವತಂತ್ರ ದೇಶಗಳು. ಅವುಗಳಿಗೂ ಸುಖ ಕೊಡಬಾರದೆಂದು ಇಟಾಲಿಯ ದುರಾಶೆ ಇದ್ದಿರಲಿ, ಇದರಮೇಲಿಂದ ಇಟಾಲಿಯ ಮುಸೋಲಿನಿಯವರ ಬಲಾತ್ಕಾರದಿಂದ ಒಂದು ಸಂಗತಿ ಸ್ಪಷ್ಟವಿದೆ ಅದೇನಂದರೆ:- ಸ್ವಾರ್ಥಕ್ಕೆ ಕಣ್ಣಿಲ್ಲ, ವಿಚಾರವಿಲ್ಲ, ನವ ತಿಕ್ಕದರೆ ಬಲಾತ್ಕಾರ ಮಾಡಲಿಕ್ಕೆ ಇಟಾಲಿಯವರು ಸಿದ್ಧರಿದ್ದಾರೆ

ಅಫಘಾಣಿಸ್ಥಾನ-ಇರಾಣ ಸರಕಾರಗಳೊಳಗೆ ಗಡಿನಾಡಿನರೋರಾಬಾದ ಪ್ರದೇಶದಲ್ಲಿ ೨೫ ಗ್ರಾಮಗಳ ಲೂಟಿಯಾಯಿತು. ಮೂವರು ಕಾವಲುಗಾರರ ಕೊಲೆಯಾಯಿತು ೨೦೦೦ ಇರಾಣಿಯರಿಗೆ ಸೆರೆಹಿಡಿದೊಯ್ದರು ಹೀಗೆ ಟೆಹರಾನದಿಂದ ಒಂದು ವಾರ್ತೆ ಪ್ರಕಟವಾಗಿತ್ತು ಆದರೆ ಅಫಘಾಣಿಸ್ಥಾನ-ಇರಾಣ ದೇಶಗಳೊಳಗೆ ವೈರಭಾವವಿಲ್ಲವಾಗಿಯೂ, ಈ ವಾರ್ತೆ ಅತಿಶಯೋಕ್ತಿಯಿಂದೂ ದಿಲ್ಲಿಯೊಳಗಿನ ಅಫಘಾನ ರಾಯಭಾರಿಗಳು ತಿಳಿಸುತ್ತಾರೆ; ಕಾಬೂಲದೊಳಗಿನ 'ಇಸ್ಲಾ' ಪತ್ರಿಕೆಯು ಇದೇ ಪ್ರಕಾರ ಅಭಿಪ್ರಾಯ ಪಡುತ್ತದೆ! "ರೋರಾಬಾದವು ಅಫಘಾಣಿಸ್ಥಾನ-ಇರಾಣ ಪ್ರದೇಶಗಳೊಳಗಿನ ಗಡಿನಾಡು. ಈ ಸೀಮೆಯಲ್ಲಿ ಪಾಳೆಗಾರರಿರುತ್ತಾರೆ. ಅವರು ಒಮ್ಮೆ ಅಫಘಾನ ದೇಶದ ಗಡಿಯೊಳಗ, ಒಮ್ಮೆ ಇರಾಣ ದೇಶದ ಗಡಿಯೊಳಗೆ ಹೀಗೆ ಸಂಚರಿಸುತ್ತಿರುತ್ತಾರೆ ಇವರು ಸ್ವಾತಂತ್ರ್ಯ ಜನರು. ಯಾವಾಗಲೂ ಯುದ್ಧಕ್ಕೆ ಸಿದ್ಧರೇ. ಇವರ ಕಡೆ ಶಸ್ತ್ರಾಸ್ತ್ರಗಳೂ ಸಿದ್ಧವಿರುತ್ತವೆ, ಜಗಳ ಮಾಡಲು ಒಗ್ಗಿರುವ ಪೋಲೀಸರು. ಇವರಿಗೂ ಇರಾಣ ಗಡಿನಾಡಿನ ದೇಶದ ಅಧಿಕಾರಿಗಳಿಗೂ ಯಾವಾಗಲೂ ಜಗಳವಿದೆ. ಅಫಘಾನ-ಇರಾಣ ಸರಕಾರಗಳೊಡನೆ ಇವರಿಗೆ ಜಗಳವಿಲ್ಲ. ಇವೆರಡೂ ದೇಶಗಳಿಗೆ ಅಧೀನವಾಗಿಯೇ ಇವರು ನಡೆಯುತ್ತಾರೆ. ಪಾಳೆಯಗಾರರಿಗೂ, ಗಡಿನಾಡಿನಲ್ಲಿರುವ ಇರಾಣೀ ಅಧಿಕಾರಿಗಳಿಗೂ ವಿತುಷ್ಟ ಉಂಟಾದ್ದರಿಂದ ಪಾಳೆಯಗಾರರು ಅಫಘಾಣಿಸ್ಥಾನದ ಗಡಿಯಲ್ಲಿ ಸೇರಲಾರಂಭಿಸಿದ್ದಾರೆ" ಹೀಗೆ 'ಇಸ್ಲಾ' ಪತ್ರಿಕೆಯೂ, ಅಲ್ಲಿಯ ಪರಿಸ್ಥಿತಿ ಬಲ್ಲವರದೂ ಅಭಿಮತ ಇತ್ತಿಟ್ಟೆನ ಸೀಮೆಯು ಕುರಿತು ವಿವಾದವಿರುವದೇನೋ ನಿಜ. ಪಂಚಾಯತರನ್ನು ನೇಮಿಸಿ ಅದನ್ನು ನಿರ್ಣಯಿಸಬೇಕಾಗಿ ಇತ್ತಿಟ್ಟೆನವರೂ ಸದ್ಯಕ್ಕೆ ತುರ್ಕಸ್ಥಾನ ಸರಕಾರಕ್ಕೆ ಬಿನ್ನೈಸಿಕೊಂಡಿದ್ದಾರೆ ಈ ಗಡಿಪ್ರದೇಶವು ಬಹಳ ಫಲವತ್ತಾದದ್ದಂತೆ! ಸರಕಾರಗಳೊಳಗಿನ ಮಿತ್ರಭಾವವಿದ್ದಲ್ಲಿ ಇರಾಣದೊಳಗಿನ ವರ್ತಮಾನ ಪತ್ರಿಕೆಗಳು ಈ ಪ್ರಕಾರಗಳ ಕುರಿತು ಅಫಘಾನ ಸರಕಾರದ ಮೇಲೆ ಅಧಿಕ್ಷೇಪ ಮಾಡುವ ಕಾರಣವೇನೆಂದು ನನಗೆ ತಿಳಿಯದು. ಈ ಮಾತನ್ನು ಇಷ್ಟಕ್ಕೇ ಬಿಡಬೇಕಾಗಿದೆ.

ಇನ್ನೊಂದೆರಡು ಸಂಗತಿ ನಮೂದಿಸಿ ಇಂದಿನ ನಿರೀಕ್ಷಣ ಮುಗಿಸಿಬಿಡುತ್ತೇನೆ. ಫ್ರೆಂಚ ಸರಕಾರವು ಸಿಂಹಲ ದ್ವೀಪದಲ್ಲಿ ತೆಂಗಿನಕಾಯಿ ಪರಟೆಯ ಇದ್ದಲಿಯನ್ನು ಹೆಚ್ಚಾಗಿ ಖರೇದಿ ಮಾಡಲಾರಂಭಿಸಿದೆ. ಕಳೆದ ಸಪ್ಟಂಬರ ತಿಂಗಳಲ್ಲಿ ಸುಮಾರು ೮೦೦ ಟನ್ನು ಖರೇದಿಯಾಯಿತು. ಸಿಂಹಲ ದ್ವೀಪದಿಂದ ಫ್ರಾನ್ಸ ದೇಶಕ್ಕೆ ಇತ್ತಲಾಗಿ ಹಡಗ ತುಂಬಿಹೋಗಿವೆ. ಇದೇ ೯ ತಿಂಗಳಲ್ಲಿ ೧೭ ಸಾವಿರ ಪವನಿನ ಪರಟೆಯ ಇದ್ದಲಿ ರವಾನೆಯಾಯಿತು. ಈ ಇದ್ದಲಿಯಿಂದ ಗ್ಯಾಸ ಮುಚ್ಚಳ (*Gas masks*) ತಯಾರಿಸಲು ಪ್ರಯತ್ನ ಜನವಾಗುತ್ತಿದೆ ಒಂದು ಮುಚ್ಚಳಕ್ಕೆ ಅರ್ಧ ರತ್ತಲ ಇದ್ದಲಿ ತಗಲುತ್ತದೆ ಇದಲ್ಲದೆ, ಫ್ರಾನ್ಸ ದೇಶದವರಿಗೂ, ರುಶ್ಯರಿಗೂ ಗುಪ್ತವಾದ ಕರಾರು ಆಗಿರುವದಾಗಿ ಲಂಡನಿನ 'ಸ್ಟಾರ' ಪತ್ರಿಕೆಯ ವರ್ತಮಾನವಿದೆ ಜರ್ಮನಿಯವರು ದಾಳಿ ಮಾಡಿದರೆ ರಶಿಯಾದ ಮೇಲೆ ಜಪಾನವು ಸಾಗಿಬಂದರೆ ಫ್ರೆಂಚರು ರಶ್ಯರಿಗೆ ೧೭ ಕೋಟಿ ಪವನ, ಬೆಲೆಯ ಯುದ್ಧಸಾಮುಗ್ರಿಗಳನ್ನು ಪೂರೈಸಬೇಕು; ಜರ್ಮನಿಯು ಫ್ರೆಂಚರ ಮೇಲೆ ಸಾಗಿಬಂದರೆ ರುಶ್ಯ ಅಷ್ಟೇ ಬೆಲೆಯ ಕಾಳು ಕಡಿಗಳನ್ನು ಪೂರೈಸಬೇಕು, ಇದಲ್ಲದೆ ಇತ್ತಿಟ್ಟೆನ ಒಪ್ಪಂದ ಬಾತೆಯಿಂದಾಗಲೀ, ವಿಮಾನದ ಬಾತೆಯಿಂದಾಗಲೂ, ಸಹಕಾರದಿಂದ ನಡಕೊಳ್ಳಬೇಕು" ಈ ಸುದ್ದಿಯಲ್ಲಿ ಸತ್ಯದ - ಲವಲೇಶವಿಲ್ಲವಾಗಿಯೂ, ಅದು ಸಂಪೂರ್ಣವಾಗಿ ನಿರಾಧಾರವಾದದ್ದೆಂದೂ ಹೇಳಿ ರುಶ್ಯ-ಫ್ರೆಂಚ ಸರಕಾರಗಳ ಲಂಡನಿನೊಳಗಿನ ರಾಯಭಾರಿಗಳು ನಿರಾಕರಿಸುತ್ತಾರೆ: ಯುರೋಪ ಖಂಡದಲ್ಲಿ ಶಾಂತತೆಯನ್ನು ಕಾಪಾಡುವ ದೃಷ್ಟಿಯಿಂದ ಇತ್ತಿಟ್ಟೆನಲ್ಲಿ ಒಂದು ಗ್ರಹಿಕೆ ಮಾಡಿಕೊಳ್ಳುವದಕ್ಕಾಗಿ ಪ್ರೊರನ್ಸಿಯವರೊಡನೆ ಕರಾರು ಮಾಡಿಕೊಳ್ಳಬೇಕಾದರೆ ಒಬ್ಬರಿನೊಬ್ಬರು ಮುಂದಾಗಿ ತಿಳಿಸಬೇಕು. ಇಷ್ಟೇ ಇತ್ತಿಟ್ಟೆನಲ್ಲಿ ಸಂಧಿಯಾಗಿದೆ ಇದಕ್ಕೂ ವಿಶೇಷವೇನಿಲ್ಲ" ಹೀಗೆ ರಾಯಭಾರಿಗಳ ಅಂಬೋಣ. ಇಂಗ್ಲಂಡ ದೇಶದೊಳಗಿನ ದೊಡ್ಡ ದೊಡ್ಡ ಅಧಿಕಾರಿಗಳು ಟಿಫಿ ಅಳವೆಯ ಒಳಭಾಗದಿಂದಾಗಿ ಹೋಗುತ್ತಿದ್ದಾರೆ. ಅಳವೆ ದಂಡೆಯ ಅಭ್ಯಾಸಕ್ಕಾಗಿ ಅತ್ತ ಕಡೆ ಹೋಗುತ್ತಾರಾಗಿ ಪ್ರಕಟವಾಗಿದೆ ಆದರೆ ಟಿಫಿ ಅಳವೆಯಲ್ಲಿ ಇಂಜನಿಯರರೂ ಸನೆ—ಯವರೂ ಕೆಲಸ ಮಾಡುತ್ತಿದ್ದಾರೆ. ಸರ ಪೆಟ್ರಿಕ ಡಪ ಎಂಬ ಇಂಜನಿಯರ ಖಾತೆಯ ಮುಖ್ಯಾಧಿಕಾರಿಗಳೂ, ಈಜಿಪ್ತದ ಸರಕಾರದ ಕಡೆ ಆಸ್ವಾಸ ಕಟ್ಟಿನ ಯೋಜನೆ ನಡೆಸಿದ ಡಾ| ಹರ್ಸ್ಟರವರೂ ಅಲ್ಲಿ ಹೋಗಿದ್ದಾರೆ. ಸರಕಾರವು ಆಚೆ-ಈಚೆಯ ಹೊಲಗಳನ್ನು ಖರೇದಿ ಮಾಡಲಾರಂಭಿಸಿದೆ ಬಳಿಯಲ್ಲಿಯೇ ನೌಕಾದಳದವರು ಸುರಂಗವನ್ನು ಕೊರೆಯಲಾರಂಭಿಸಿದ್ದಾರೆ ಟಿಫಿ ಅಳವೆಯಲ್ಲಿ ಹಡಗುಪಡೆಗಳನ್ನೂ ವಿಮಾನಗಳನ್ನೂ ಇಡುವ ಅನುಕೂಲತೆಯಿದೆ. ಲೋಕದಲ್ಲಿ ಶಾಂತತೆ ಸ್ಥಾಪನೆಗಾಗಿ ಎಲ್ಲರೂ ಪ್ರಾಮಾಣಿಕತನದಿಂದ ಹೆಣಗಾಡುತ್ತಿದ್ದರೆ ಯುದ್ಧ ಸಾಹಿತ್ಯದ ಗುಪ್ತ ತಯಾರಿ ಏಕೆ? ಡಾ| ಚಿತಳೇಯವರಂತೆ, ಯುದ್ಧದ ಕಿಡಿನೆಳಲು ಕಾಣಬರುತ್ತದೆಂದೂ ನಾನೂ ಒಂದು ಅಭಿಪ್ರಾಯ ಹೇಳಿದರೆ ವಸ್ತುಸ್ಥಿತಿಯ ವಿಪರ್ಯಾಸವಾಗುವದೇನು?

ಬೇಕು!

ನುರಿತ ಟ್ರೇಂಡ ಶಿಕ್ಷಕರೊಬ್ಬರು ನಮ್ಮ ಸಂಸ್ಥೆಯಲ್ಲಿ ದುಡಿಯಲು ಬೇಕಾಗಿದ್ದಾರೆ ಸೇರಬಯಸುವವರು ಸಮಕ್ಷ ಭೆಟ್ಟಿಯಾಗತಕ್ಕದ್ದು.

ಕೆಕ್ಕಾರ, ವ್ಯಾನೇಜರ್,

ತಾ 19-12-34. ಶ್ರೀ ಸಿದ್ಧಿವಿನಾಯಕ ವಿದ್ಯಾಲಯ, ಕೆಕ್ಕಾರ.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಬಾಬ್ತು ರಿಯಾಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ವಿಸ್ತೃತ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರವ್ಯವಹಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ತಿಳಿಯುವದು.

Kumta Agents:

D. K. Nayak Bros.
D. S. Pai.
K. N. Nayak.

Honavar Agent

R. V. Prabhu Esq.

K. Padmanabha Rao & Sons.

BELGAUM

Chief Agents for

Karnatak Districts & S. M. States

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ಇಲ್ಲಿಯ ಸರಕಾರಿ [illegible]

ಕಾರವಾರ— [illegible]

ಹೊನ್ನಾವರ— [illegible]

[illegible] ಕಾಲ ಕರ್ನಾಟಕ ವಿದ್ಯಾರ್ಥಿಗಳ [illegible]

ಇಂದಿನ ವರ್ಷಗಳ ಮಳೆ ತರಿಗೆಯು [illegible] ಉತ್ತಮವಾಗಿಲ್ಲ [illegible] ತಿಳಿಸಿದ್ದಾರಂತೆ.

ಇಲ್ಲಿಯ ಸಂಟ ಥೊಮಸ್ ಹೈಸ್ಕೂಲಿನ [illegible] ಅಧ್ಯಕ್ಷತೆಯಲ್ಲಿ ಜರುಗಿತು.

[illegible] ಬಾಲಕರ [illegible] ಬಾಲಕರ ಗೀತಗಳನ್ನು [illegible] ಜನರಿಗೆ ಆನಂದವೆನಿಸಿತು.

ಮುರ್ಡೇಶ್ವರ— ಎರಡು ವರ್ಷಗಳ ಹಿಂದೆ ಇಲ್ಲಿ 'ಪಬ್ಲಿಕ ಲೈಬ್ರರಿ' ಎಂಬ ಸಾರ್ವಜನಿಕ ಪುಸ್ತಕಾಲಯದ ಸ್ಥಾಪನೆಯಾಗಿತ್ತು. ಈ ಸಂಸ್ಥೆಗೆ ಸ್ವತಂತ್ರ ಕಟ್ಟಡವಿಲ್ಲ [illegible] ಉದಾರ ದಾನಿಗಳು [illegible] ಅಧ್ಯಕ್ಷರು [illegible] ಬರೆಯುತ್ತಾರೆ.

ಭಟಕಳ— [illegible]

ಎರಡು ಹೊಲಗಳು-

ಎರಡೂ ಹೊಲಗಳಲ್ಲಿ ಒಂದೇ ಮಳೆ! ಹೀಗಿರುವಾಗ ಒಂದರೊಳಗಿನ ಪೈರು ನಿಷ್ಕೃಷ್ಟವಾಗಿ ಎರಡನೆ ಹೊಲದೊಳಗಿನ ಪೈರು ಉತ್ತಮವಾಗುವ ಕಾರಣವೇನು? ಭೂಮಿಯು ಊಳುವುದರಲ್ಲಿ ಭೇದವಿದ್ದುದರಿಂದಲೇ ಬೆಳೆಯಲ್ಲಿ ಭೇದವಾಗಿದೆ!

ಕಿರ್ಲೋಸ್ಕರ
ಕಬ್ಬಿಣದ ರೆಂಟೆ

ಉಪಯೋಗಿಸಿದರೆ, ಭೂಮಿಯ ಊಳಿಕೆಯು ಉತ್ಕೃಷ್ಟವಾಗಿ ಬೆಳೆಯೂ ಉತ್ತಮವಾಗುತ್ತದೆ

೩,೦೦,೦೦೦ ರೈತರು ಈ ರೆಂಟೆಗಳನ್ನೇ ಉಪಯೋಗಿಸುತ್ತಾರೆ.
ಮಾಹಿತಿಪತ್ರಿಕೆ ಒಗ್ಗೆ ಬರೆಯಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್,
ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)

[illegible]

ಯಲ್ಲಾಪುರ— [illegible]

[illegible]

ಕಾರವಾರ— [illegible]

[illegible]

Siromani Udipi Narayanacharya

CHAUKHAMBA, BENARES CITY

[illegible] 108ರ ಸರ 1ಕ್ಕೆ 0-6-0 [illegible] 10 [illegible] 3½ [illegible] 0 8 0 [illegible] 100 [illegible] 0 1 0 [illegible]

ಪತ್ತೆ— ಶಿರೋಮಣಿ ನಾರಾಯಣಾಚಾರ್ಯ ಚೌಖಂಬಾ, ಕಾಶೀ ಕ್ಷೇತ್ರ

ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ

[illegible]

ಪತ್ತೆ— ಗುರುಬಸವ ಅಂಡ್ ಕಂಪನಿ [illegible]

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಘಟನೆ.

ಭಾರತಖಂಡದೊಳಗಿನ ಹಳ್ಳಿಗಳ ಪುನರ್ಘಟನೆ ಮಾಡಿ, ಹಳ್ಳಿಗಳೊಳಗಿನ ಚಿಕ್ಕ ಪುಟ್ಟ ಉದ್ಯಮಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯವನ್ನು ಕೈಕೊಳ್ಳುವ ಅಖಿಲ ಭಾರತ ಗ್ರಾಮೋದ್ಯೋಗ ಸಂಘವನ್ನು 'ಪ್ರತ್ಯೇಕವಾಗಿ ಸ್ಥಾಪಿಸಬೇಕಾಗಿಯೂ, ಅದರ ನೇತೃತ್ವವು ಮಹಾತ್ಮಾ ಗಾಂಧಿಯವರ ಕಡೆ ಇರತಕ್ಕದ್ದಾಗಿಯೂ ಮುಂಬಯಿಯ ರಾಷ್ಟ್ರೀಯ ಸಭೆಯಲ್ಲಿ ತೀರ್ಮಾನವಾಗಿತ್ತಷ್ಟೇ. ರಾಷ್ಟ್ರೀಯ ಸಭೆಯು ಮುಗಿದಂದಿನಿಂದ ಈ ಕುರಿತು ವಿಚಾರ ಮಾಡಿ ಮಹಾತ್ಮರು ತಯಾರಿಸಿದ ಸಂಘದ ಘಟನೆಯು ಕಳೆದ [illegible] ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಸಂಘದ ಘಟನೆಯ ಪ್ರಸ್ತಾವನೆಯಲ್ಲಿ ಮಹಾತ್ಮರು ಹೇಳುವವರೇನಂದರೆ— ಸಂಘದ ಧೋರಣ ಮತ್ತು ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗಲಿಕ್ಕೆ ಧೋರಣದ ಬಗ್ಗೆ ವಿಶ್ವಾಸವುಳ್ಳ, ಕಾರ್ಯಕ್ರಮದ ವ್ಯವಹಾರಿಕತೆಯ ಬಗ್ಗೆ ನಂಬಿಗೆಯುಳ್ಳ ಮತ್ತು ತಮ್ಮ ಪೂರ್ತ ವೇಳೆಯನ್ನು ಸಂಘದ ಕಾರ್ಯದಲ್ಲಿ ವಿನಿಯೋಗಿಸಲು ಸಿದ್ಧರಾಗಿರುವ ಜನರ ವ್ಯವಸ್ಥಾಪಕ ಮಂಡಳವನ್ನು ಸ್ಥಾಪಿಸುವ ವಿಚಾರವಿದ್ದದರಿಂದ ನಾನೂ ಶ್ರೀ ಕುಮಾರಪ್ಪನವರೂ ಈ ಬಗ್ಗೆ ದೀರ್ಘ ಆಲೋಚನೆ ಮಾಡಬೇಕಾಯಿತು. ಹಳ್ಳಿಗಳಲ್ಲಿ ತನ್ನದೆಂದಾಗಿ, ಹಳ್ಳಿಗರ ಜೀವನವನ್ನು ಸುಧಾರಿಸಿ ಅವರ ಉನ್ನತಿಯನ್ನು ಸಾಧಿಸುವದೇ ತಮ್ಮ ಜೀವನದ ಮುಖ್ಯ ಧ್ಯೇಯವನ್ನಾಗಿ ಮಾಡಿರುವ ಜನರಿಂದ ರೂಪಗೊಂಡಿದ ಸ್ವತಂತ್ರ ಹಾಗೂ ಸ್ವಾವಲಂಬನೆಯಿಂದ ಇರುವ ಸಂಘವನ್ನು ನಿರ್ಮಿಸುವದೇ ರಾಷ್ಟ್ರೀಯ ಸಭೆಯ ಅಭಿಪ್ರಾಯವಾಗಿದ್ದರಿಂದ ಶ್ರೀ ಕೃಷ್ಣದಾಸ ಜಾಜೂಜಿ ಮತ್ತು ೮ ಜನ ಗೃಹಸ್ಥರು ಸಂಘದ ವ್ಯವಸ್ಥಾಪಕ ಕಾರ್ಯದ ಪೂರ್ಣ ಜವಾಬ್ದಾರಿಯನ್ನು ವಹಿಸಿ ಸಂಘದಲ್ಲಿ ಸೇರುತ್ತಾರೆ. ಅವರೇ ಈ ಸಂಘದ ಸಂಸ್ಥಾಪಕರೂ ಪ್ರಥಮ ವ್ಯವಸ್ಥಾಪಕ ಮಂಡಳದ ಸಭಾಸದರೂ ಆಗಿರುತ್ತಾರೆ. ಇವರು ತಮ್ಮ ಮಂಡಳದಲ್ಲಿ ಹೆಚ್ಚಿಗೆ ಸದಸ್ಯರನ್ನು ಸೇರಿಸಿಕೊಳ್ಳಬಹುದು.

ವ್ಯವಸ್ಥಾಪಕ ಮಂಡಳವು ಮಾಡತಕ್ಕ ಮುಖ್ಯ ಕಾರ್ಯಗಳು ಈ ಕೆಳಗೆ ಕಾಣಿಸಿದಂತೆ ಇರುವವು. ಹಳ್ಳಿಗಳ ಪುನರ್ಘಟನೆಯ ಬಗ್ಗೆ ಮೇಲಿಂದ ಮೇಲೆ ಕಾರ್ಯಕ್ರಮ ನಿಶ್ಚಯಿಸುವದು, ಬೇರೆ ಬೇರೆ ಭಾಗಗಳಲ್ಲಿ ನಡೆಸುವ ಕಾರ್ಯ ಪದ್ಧತಿಗಳಲ್ಲಿ ಏಕಸೂತ್ರತೆಯನ್ನು ಕಾಯುವದು, ಹಳ್ಳಿಗಳೊಳಗಿನ ಊರ್ಜಿತಾವಸ್ಥೆಯೊಳಗಿರುವ ಹಾಗೂ ವಿನಾಶೋನ್ಮುಖವಾಗಿರುವ ಉದ್ಯಮಗಳ ಸಂಬಂಧವಾಗಿ ಕಾರ್ಯಕರ್ತರು ಸಂಗ್ರಹಿಸಿದ ಮಾಹಿತಿಯನ್ನು ಕೂಡಿಹಾಕಿ ಪ್ರಸಿದ್ಧಪಡಿಸುವದು, ಅದೇ ಮೇರೆಗೆ ಹಳ್ಳಿಗರ ಆರ್ಥಿಕ, ನೈತಿಕ ಮತ್ತು ಶಾರೀರಿಕ ಪರಿಸ್ಥಿತಿಯ ಮಾಹಿತಿಯನ್ನು ಸಂಗ್ರಹಿಸಿ ಪ್ರಕಟಿಸುವದು, ತಜ್ಞರ ಸಹಾಯದಿಂದ ಸಂಶೋಧನ ಕಾರ್ಯ ಮಾಡುವದು, ಹಳ್ಳಿಗಳಲ್ಲಿ ತಯಾರಾಗುವ ಸರಕುಗಳ ಮಾರಾಟದ ಬಗ್ಗೆ ವ್ಯವಸ್ಥೆ ಮಾಡುವದು.

ಈ ಎಲ್ಲ ಕಾರ್ಯಗಳಿಗೆ ಅವಶ್ಯವಿರುವ ನಿಧಿಯನ್ನು ಮಂಡಳವು ಕೂಡಿಸುವದು. ಹಳ್ಳಿಗರಿಗೆ ಸ್ವಾವಲಂಬನ ಕಲಿಸಿ, ತಮಗೆ ಬೇಕಾಗಿರುವ ವಸ್ತುಗಳನ್ನು ತಾವೇ ತಯಾರಿಸಬೇಕೆಂದು ಕಲಿಸುವದೇ ಸಂಘದ ಕಾರ್ಯವು. ಅದಕ್ಕೆ ವಿಶೇಷ ಖರ್ಚು ಬರಲಾರದು. ಆದಷ್ಟು ಕಡಿಮೆ ಬಂಡವಲಿನಲ್ಲೇ ಕಾರ್ಯ ನಡಿಸಬೇಕೆಂದು ನಮ್ಮ ಯೋಜನೆಯಾಗಿದೆ.

ಸಂಘದ ಕಾರ್ಯವು ಸುರಳಿತ ಸಾಗಬೇಕಾದರೆ ಬೇರೆ ಬೇರೆ ಕಡೆಗಳಲ್ಲಿ ಕೇಂದ್ರಗಳನ್ನು ತೆರೆಯುವದು ಅವಶ್ಯವಿದೆ. ಆದ ಕಾರಣ ಎಷ್ಟು ಜನ ಕಾರ್ಯಕರ್ತರು ಲಭಿಸುವರೋ ಅಷ್ಟು ಕೇಂದ್ರಗಳನ್ನು ತೆರೆಯಬೇಕೆಂದು ನನ್ನ ನಿರ್ಧಾರವಾಗಿದೆ. ಈ ಕಾರ್ಯಕರ್ತರು ಸಂಘದ ವ್ಯವಸ್ಥಾಪಕ ಮಂಡಳದ ಕೈಕೆಳಗೆ ತಮ್ಮ ತಮ್ಮ ಕೇಂದ್ರಗಳಲ್ಲಿ ಸಂಘದ ಕಾರ್ಯಕ್ರಮವನ್ನು ಪ್ರಚಾರಪಡಿಸುವರು. ತಮ್ಮ ಸಂಸಾರದ ಖರ್ಚಕ್ಕೆ ಬೇಕಾಗುವಷ್ಟು ತೆಗೆದುಕೊಂಡು ಇಡೀ ಕಾಲವನ್ನು ಸಂಘದ ಕೆಲಸದಲ್ಲಿ ಕಳೆಯಬಹುದಾದ ಜನರನ್ನೇ ಕಾರ್ಯಕರ್ತರೆಂತಾಗಲಿ, ಪ್ರತಿನಿಧಿಗಳೆಂತಾಗಲಿ ಆರಿಸಲಾಗುವದು. ಪ್ರತಿನಿಧಿಗಳಿಗೆ ಸಂಬಳ ಸಿಗದು. ತಮ್ಮ ಕೇಂದ್ರದಲ್ಲಿ ಅವಶ್ಯವಿರುವ ನಿಧಿಯ ಸಂಗ್ರಹ ಮಾಡುವದೇ ಪ್ರತಿನಿಧಿಗಳ ಕಾರ್ಯ. ಸಂಬಳದ ಅಪೇಕ್ಷೆ ಮಾಡದ ಪ್ರತಿನಿಧಿಗಳು ಸಾಕಷ್ಟು ಸಿಗದಿರಬಹುದು. ಆದ್ದರಿಂದ ಕೆಲವು ಜಿಲ್ಲೆಗಳಲ್ಲಷ್ಟೇ ಸಂಘವು ಕಾರ್ಯವನ್ನು ಆರಂಭಿಸಿ ಅಲ್ಲಿ ತನ್ನ ಕಾರ್ಯವನ್ನು ಯಶಸ್ವಿ ಮಾಡಿ ತೋರಿಸುವದು. ಪ್ರತಿನಿಧಿಗಳ [illegible] ಕಾಲಕಾಲಕ್ಕೆ ಪ್ರಕಟವಾಗುವದು.

ಸಂಘದ ಕೆಲಸಕ್ಕೆ ತಜ್ಞ ಜನರ ಆಗತ್ಯವಿದೆ. ತಮ್ಮ ಕಾಲಸರ್ವಸ್ವವನ್ನು ಸಂಘಕ್ಕೆ ಅರ್ಪಿಸುವ ತಜ್ಞರು ಸಿಗುವದು ದುರ್ಲಭ. ಆದುದರಿಂದ ಈ ಕೆಳಗಿನ ಮಹನೀಯರನ್ನು ಅವರ ಸಮ್ಮತಿಯಿಂದ ಸಲಹೆಗಾರರ ಮಂಡಳದ ಮೇಲೆ ನೇಮಿಸಿಕೊಂಡಿದೆ —

ಡಾ|| ರವೀಂದ್ರನಾಥ ಟಾಗೋರ, ಸರ್ ಜಗದೀಶಚಂದ್ರ ಬೋಸ, ಸರ್ ಪ್ರಫುಲ್ಲಚಂದ್ರ ರೋಯ್, ಸರ್ ಸಿ. ವ್ಹಿ ರಾಮನ್, ಸರ್ ರಾಮದಾಸ ಪಂತುಲು, ಜಮಾಲ ಮಹಮ್ಮದ ಸಾಹೇಬ, ಶ್ರೀ ಬಿರ್ಲಾ, ಸರ್ ಪುರುಷೋತ್ತಮದಾಸ ಠಾಕೂರದಾಸ, ಸರ್ [illegible] ಜಹಾಂಗೀರವಾಲಾ, [illegible] ಹಿಗ್ಗಿನಬೋಥಮ್, ಡಾ|| ಜೀವರಾಜ ಮೆಹತಾ, ಡಾ|| ಅನ್ಸಾರಿ, ಮೇಜರ ಜನರಲ್ ಸರ್ ರೋಬರ್ಟ ಮೆಕ್ಕರಿಸನ್, ಡಾ|| ಪಟೇಲ, ಡಾ|| ಸುಬ್ಬರಾವ, ಡಾ|| ಬಿಧನಚಂದ್ರ ರಾಯ ಮತ್ತು ಡಾ|| ಪುರುಷೋತ್ತಮ ಪಟೇಲ.

ವರ್ಧಾ ನಗರವು [illegible] ಭವ್ಯವಾದ ಹಳ್ಳಿಯಿಂದ [illegible]. ಅದಲ್ಲದೆ ವರ್ಧಾ ನಗರವು [illegible] ಮಾರ್ಗಗಳ ಸಂಗಮ (ಜಂಕ್ಷನ್) ವಾಗಿದೆ. ಆದ್ದರಿಂದ ಸಂಘದ ಮುಖ್ಯ ಕಚೇರಿಯನ್ನು ವರ್ಧಾದಲ್ಲಿಡಬೇಕೆಂದು ನಿಶ್ಚಯವಾಗಿರುತ್ತದೆ.

ಸಂಘದ [illegible] ಅನೇಕ ಸೂಚನೆಗಳು ನನ್ನ ಮುಂದಿವೆ. ಅವರೆಲ್ಲರೂ ಸಂಘದ ಕಾರ್ಯದರ್ಶಿಗಳಾದ ಶ್ರೀ ಜೆ. ಸಿ. ಕುಮಾರಪ್ಪನವರಿಗೆ ಬರೆದುಕೊಳ್ಳಬೇಕೆಂದು ನನ್ನ ಸೂಚನೆ. ನನಗೆ ಬಂದ ಸಹಾಯದ್ರವ್ಯವನ್ನೂ, ಕಾಗದಪತ್ರಗಳನ್ನೂ ನಾನು ಕಾರ್ಯದರ್ಶಿಗಳಿಗೆ ಒಪ್ಪಿಸಿರುತ್ತೇನೆ.

ಸಂಘದ ಘಟನೆ.

ಸಂಘದ ಹೆಸರು 'ಅಖಿಲ ಭಾರತ ಗ್ರಾಮೋದ್ಯೋಗ ಸಂಘ' ವೆಂದು ಇರುವದು.

ಹಳ್ಳಿಗಳಲ್ಲಿ ಪುನರ್ಘಟನೆ ಮಾಡುವದು ಮತ್ತು ಹಳ್ಳಿಗಳೊಳಗಿನ ಉದ್ಯಮಗಳ ಪುನರುಜ್ಜೀವನ ಮಾಡಿ ಸುಧಾರಣೆ ಮಾಡುವದು ಮತ್ತು ಹಳ್ಳಿಗರ ನೈತಿಕ ಹಾಗೂ ಶಾರೀರಿಕ ಸುಧಾರಣೆ ಬೆಳಿಸುವದು ಈ ಸಂಘದ ಉದ್ದೇಶವಿರುತ್ತದೆ.

ತನ್ನ ಕಾರ್ಯದ ಸಾಧನೆಗಾಗಿ ಸಂಘವು ನಿಧಿಯನ್ನು ಸಂಗ್ರಹಿಸುವದು, ಸಂಶೋಧನೆ ಮಾಡುವದು, ವಾಙ್ಮಯವನ್ನು ಪ್ರಸಿದ್ಧ ಮಾಡುವದು, ಪ್ರಚಾರ ಮಾಡುವದು, ಅಲ್ಲಲ್ಲಿ ಪ್ರತಿನಿಧಿಗಳನ್ನು ನೇಮಿಸುವದು, ಹಳ್ಳಿಗರ ಹತ್ಯಾರುಗಳನ್ನು ಸುಧಾರಿಸುವ ಬಗ್ಗೆ ಉಪಾಯ ಯೋಜನೆ ಮಾಡುವದು, ತನ್ನ ಉದ್ದೇಶವನ್ನು ಸಾಧ್ಯ ಮಾಡಿಕೊಳ್ಳಲಿಕ್ಕೆ ಅವಶ್ಯವಿರುವ ಯಾವತ್ತೂ ಕ್ರಮಗಳನ್ನು ಕೈಕೊಳ್ಳುವದು.

ಮಹಾತ್ಮರ ನೇತೃತ್ವದಲ್ಲೇ ಸಂಘವು ಕೆಲಸ ಮಾಡುವದು.

ಈ ಸಂಘದಲ್ಲಿ (ಅ) ವ್ಯವಸ್ಥಾಪಕ ಮಂಡಳವೊಂದು (ಬ) ಸದಸ್ಯರು, (ಕ) ಪ್ರತಿನಿಧಿಗಳು, (ಡ) ಬಿನ್‌ಪಗಾರ ಕಾರ್ಯಕರ್ತರು, (ಇ) ಸಂಬಳ ತಕ್ಕೊಂಡು ಇಡೀ ದಿನ ಕೆಲಸ ಮಾಡುವ ಕಾರ್ಯಕರ್ತರು, (ಎಫ್) ಸಹಕಾರಿ[illegible] ಈ ರೀತಿ ವಿವಿಧ ಕಾರ್ಯಕರ್ತರಿರುವರು, ಒಂದು ಸಲಹೆಗಾರರ ಮಂಡಳವೂ ಇರುವದು.

ಈ ಕೆಳಗೆ ಕೊಟ್ಟ ಪ್ರತಿಜ್ಞಾಪತ್ರಕ್ಕೆ ರುಜು ಮಾಡಿದವನೊಬ್ಬ ಸದಸ್ಯನ ಕಡೆಯಿಂದ ಯಾ ಪ್ರತಿನಿಧಿಯ ಕಡೆಯಿಂದ ಶಿಫಾರಸು ಪಡೆಯುವ ಸ್ತ್ರೀ-ಪುರುಷರು ಸಂಘದ ಸದಸ್ಯರಾಗುವರು. ಸದಸ್ಯರಾಗಿ ಮಾಡಿಕೊಳ್ಳುವ ಅಧಿಕಾರವು ವ್ಯವಸ್ಥಾಪಕ ಮಂಡಳದ್ದು.

ಸಂಘದ ಉದ್ದೇಶದ ಬಗ್ಗೆ ಸಹಾನುಭೂತಿಯುಳ್ಳವರಾಗಿ ಯಾರು ವರ್ಷಾಲು ರೂ ೧೦೦ ವಂತಿಗೆ ಕೊಡುವರೋ ಅವರು ಸಂಘದ ಸಹಕಾರಿಗಳೆಂದು ಎನಿಸ್ಪಡುವರು, ಒಮ್ಮೆಗಲೇ ರೂ ೧೦೦೦ ಕೊಡುವವರು ಆಜೀವ ಸಹಕಾರಿಗಳಾಗುವರು.

ತಮ್ಮ ವ್ಯವಸಾಯದಲ್ಲಿ ಅಡಚಣೆಯಾಗದಂತೆ ಸಂಘಕ್ಕೆ ಅವಶ್ಯ ಬಿದ್ದಾಗ, ವೇತನಾಪೇಕ್ಷೆ ಮಾಡದೆ, ತಮ್ಮ ವಿಶೇಷ ಜ್ಞಾನಾನುಭವಗಳ ಪ್ರಯೋಜನ ಮಾಡುವವರು ಸಲಹೆಗಾರರೆಂದು ಎನಿಸಲ್ಪಡುವರು.

ಶ್ರೀ ಶ್ರೀಕೃಷ್ಣದಾಸ ಜಾಜೂಜಿ, ಜೆ. ಸಿ. ಕುಮಾರಪ್ಪಾ, ಶೂರಜಿ ವಲ್ಲಭದಾಸ, ಶಂಕರಲಾಲ ಬ್ಯಾಂಕರ, ಲಕ್ಷ್ಮೀದಾಸ ಆಸರ, ಡಾ|| ಖಾನಸಾಹೇಬ, ಡಾ|| ಪ್ರಫುಲ್ಲಚಂದ್ರ ಘೋಷ ಮತ್ತು ಶ್ರೀಮತಿ ಗೋಶಿಬೇನ ಕ್ಯಾಪ್ಟನ್ ಇವರು ಸಂಘದ ಆದ್ಯ ವ್ಯವಸ್ಥಾಪಕ ಮಂಡಳದ ಸದಸ್ಯರಿರುವರು. ೩ ವರ್ಷಗಳ ತನಕ ಇದೇ ವ್ಯವಸ್ಥಾಪಕ ಮಂಡಳಕ್ಕೆ ಅಧಿಕಾರ ನಡಿಸತಕ್ಕದ್ದು. ಆ ಮೇಲೆ ಪ್ರತಿ ೩ ವರ್ಷಕ್ಕೊಮ್ಮೆ ಸಂಘದ ಸದಸ್ಯರು ಹೊಸ ವ್ಯವಸ್ಥಾಪಕ ಮಂಡಳವನ್ನು ಆರಿಸುವರು. ಸಂಘದ ಯಾವತ್ತೂ ಕಾರಭಾರವು ನಿಧಿ, ಆಸ್ತಿಯು ಕೂಡಾ ವ್ಯವಸ್ಥಾಪಕ ಮಂಡಳದ ತಾಬೆಯಲ್ಲಿರುವದು. ಮಂಡಳವು ಅವಶ್ಯವಿದ್ದಾಗ ಹೆಚ್ಚಿಗೆ ಸದಸ್ಯರನ್ನು ಕೂಡಿಸಿಕೊಳ್ಳಬಹುದು. ಆದರೆ ಸದಸ್ಯರ ಒಟ್ಟು ಸಂಖ್ಯೆಯು [illegible]ಕ್ಕೆ ಮಿಕ್ಕಬಾರದು. ಮಂಡಳವು ಯೋಗ್ಯ ಲೆಕ್ಕಪತ್ರವನ್ನಿಟ್ಟು, ಹಿಸಾಬ ಮಾಡಿಸಿ, ಸಾರ್ವಜನಿಕರಿಗೆ ನೋಡಗೊಡಬೇಕು.

ಸಂಘದ ಉದ್ದೇಶ ಸಾಧಿಸಿಕೊಳ್ಳಲಿಕ್ಕೆ ಅವಶ್ಯವಿರುವ ಉಪನಿಯಮಗಳನ್ನು ಮಾಡುವ ಅಧಿಕಾರವು ವ್ಯವಸ್ಥಾಪಕ ಮಂಡಳಕ್ಕುಂಟು. ಮಂಡಳದ ೩ ಸಭಾಸದರ ಸಮ್ಮತಿಯಿಂದ ಈ ಘಟನೆಯಲ್ಲಿ ತಿದ್ದುಪಡಿ ಮಾಡುವ ಅಧಿಕಾರವು ಮಂಡಳಕ್ಕಿದೆ.

ಸಂಘದ ಪರವಾಗಿ ಹಣ ಮತ್ತು ಆಸ್ತಿ [illegible] ಬಗ್ಗೆ ಟ್ರಸ್ಟಿಗಳನ್ನು ನೇಮಿಸಬಹುದು.

ಪ್ರತಿಜ್ಞಾ ಪತ್ರ

ಸಂಘದ ಸದಸ್ಯರು ಬರೆಕೊಡಬೇಕಾದ ಪ್ರತಿಜ್ಞಾಪತ್ರವು ಈ ಮೇರೆಗೆ ಇರುವದು.— "ನಾನು ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಘಟನೆಯನ್ನು ಸಾಮಾಗ್ರವನ್ನು ಓದಿಕೊಂಡು, ಆ ಸಂಘದ ಸದಸ್ಯನಾಗಬಯಸುತ್ತೇನೆ. ದೇವರ ಕೃಪೆಯಿಂದ ಸದರಿ ಸಂಘದ ಪ್ರಧಾನ ಉದ್ದಿಷ್ಟವಾಗಿರುವ ಭಾರತೀಯ ಹಳ್ಳಿಗರ ಸರ್ವತ್ರಿಕ ಕಲ್ಯಾಣಸಾಧನೆಗಾಗಿ ನಾನು ಕೈಲಾದಮಟ್ಟಿಗೆ ಹೆಣಗುವೆನೆಂದು ಈ ಮೂಲಕ ವಚನ ಕೊಡುತ್ತೇನೆ. ನಾನು ಈ ಸಂಘದ ಸದಸ್ಯನಿರುವ ವರೆಗೆ ಯಾವದೇ ಕಾಯಿದೆ ಭಂಗದ ಚಳವಳಿಯಲ್ಲಿ ಸೇರಲಿಕ್ಕಿಲ್ಲ. ಸಂಘದ ಕಾರ್ಯವನ್ನು ಮಾಡುತ್ತಿರುವಾಗ, ರಾಜಕಾರಣದಲ್ಲಿ ಪಕ್ಷಭೇದವಿದ್ದವರು ಸಹ ಸಹಕಾರ ಮಾಡಲು ಸಿದ್ಧತೆ ತೋರಿಸಿದಲ್ಲಿ ಅವರ ಸಹಾಯವನ್ನು ಅವಶ್ಯ ಪಡೆಯುವೆನು. [illegible] ಸಂಘದ ಧ್ಯೇಯವನ್ನೇ ಕಣ್ಮುಂದಿಟ್ಟು, ನಾನು ವರ್ತಿಸುವೆನು, ಬೇರೆ ಸರಕುಗಳಿಗಿಂತ ಹಳ್ಳಿಗಳಲ್ಲೇ ತಯಾರಾಗುವ ಸರಕುಗಳನ್ನು ಕೊಂಡುಕೊಳ್ಳುವೆನು. ಹಳ್ಳಿಗರ ಸೇವೆ ಮಾಡುವಾಗ ನಾನು ಮನುಷ್ಯ-ಮನುಷ್ಯರೊಳಗಿನ ಯಾವದೇ ಬಗೆಯ ಭೇದಭಾವವನ್ನು ಲೆಕ್ಕಿಸಲಿಕ್ಕಿಲ್ಲ."

ಪತ್ರಕರ್ತರ ನುಡಿಗನ್ನಡಿ.

(ಹಿಂದಿನ ಪಾನಿನಿಂದ ಮುಂದರಿಸಿದ್ದು)

ದ್ವಾರ ಕಾರ್ಯದಲ್ಲಿ ನೆರವಾಗ ನಿಮಂತ್ರಿಸಿದ್ದಾರೆ. ಸರಕಾರವು ಈ ನಿಮಂತ್ರಣೆಯನ್ನು ಸ್ವೀಕರಿಸಿ ಗ್ರಾಮೋದ್ಯೋಗ ಸಂಘಕ್ಕೆ ಆಶ್ರಯವನ್ನಿತ್ತರೆ ಹಿಂದು ಸ್ಥಾನವು ಪುರಾತನ ಕಾಲದಲ್ಲಿ ಹೆಸರು ಪಡೆದಂತೆ ಸುವರ್ಣ ಭೂಮಿಯೆಂದು ಲೋಕದಲ್ಲಿ ಪುನಃ ಖ್ಯಾತಿ ಹೊಂದುವದು ಬ್ರಿಟಿಶರು ಈ ಪ್ರಕಾರ ರೂಪಾಂತರ ಮಾಡಿದ ಬಗ್ಗೆ ದಿಗಂತ ಕೀರ್ತಿ ಪಡೆಯುವರು, ಭರತ ಭೂಮಿಯಲ್ಲೆಲ್ಲ ಸುಖ-ಸಂತೋಷ ಸಾಮ್ರಾಜ್ಯ ನೆಲೆಗೊಳ್ಳುವದು ಅಧಿಕಾರಿಗಳು ಡಾ| ಬೆಂಟ್ಲೀಯವರಂಥ ಅನುಭವಪಟ್ಟ ಪ್ರಜಾವತ್ಸಲ ಅಧಿಕಾರಿಗಳ ಅಭಿಪ್ರಾಯವನ್ನು ಮನ್ನಿಸಿ ತಮ್ಮ ಧೋರಣವನ್ನು ನಿಶ್ಚಯಿಸಬಹುದಲ್ಲವೇ ?

೪. ವರ್ಧಾದಿಂದ ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘದ ಪ್ರಕಟಣೆ ಕಳೆದ ಬುಧವಾರ ಹೊರಟಿದೆ. ಸಂಘದವರು ತಜ್ಞರ ಅಭಿಪ್ರಾಯ ಸಂಬಂಧಿಸಿ ಈ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಜನರ ಆರೋಗ್ಯ ಕೆಡಲು ದಾರಿದ್ರ್ಯವೊಂದು ಮೂಲಭೂತ ಕಾರಣವೇನೇಂಬದೇನೋ ನಿಜ. ಜೊತೆಗೆ ಈಗಿನ ಸುಧಾರಣೆಯ ಮನ್ವಂತರದಲ್ಲಿ ಜನರಿಗೆ ಹಿಡಿದ ಕೆಲವು ದುರಭ್ಯಾಸಗಳೂ ವಿಪರೀತ ಕಲ್ಪನೆಗಳ ಅನಾರೋಗ್ಯತೆಗೆ ಕಾರಣವಿವೆ. ಪಾಶ್ಚಾತ್ಯ ಸುಧಾರಣೆಯ ಹೊರಗಿನ ಆಡಂಬರಕ್ಕೆ ಜನರು ಮನಸೋತಿದ್ದಾರೆ. ಆಹಾರ ಸಾಮಗ್ರಿಗಳ ಗುಣದೋಷಗಳನ್ನು ವಿಚಾರಿಸದೆ, ಸುಧಾರಿಸಿದ ಸಾಮಗ್ರಿಗಳನ್ನು ಇವರು ಸ್ವೀಕರಿಸಲಾರಂಭಿಸಿದರು. ಹೊಸ ಆಹಾರದಿಂದ ಹೊಸ ಹೊಸ ರೋಗಗಳು ಪ್ರಾದುರ್ಭೂತವಾದವು ಮುಂಚಿನ ಕಾಲದಲ್ಲಿ ಗಿರಣಿಯ ಅಕ್ಕಿ, ಗಿರಣಿಯ ಎಣ್ಣೆ, ಗಿರಣಿ ಸಕ್ಕರೆ, ಗಿರಣಿ ಹಿಟ್ಟು ಮೊದಲಾದ ಚಂದ-ಚಂದ ಜಿನಸುಗಳನ್ನು ಜನರು ತಿನ್ನುತ್ತಿದ್ದಿಲ್ಲ ಬೀಸುಗಲ್ಲಿನ ಮೇಲೆ ಬೀಸಿದ ಹಿಟ್ಟಿನ ರೊಟ್ಟಿ ಇಲ್ಲವೆ ಮೆರೆದ ಅಕ್ಕಿಯ ಅನ್ನ ಊಟ ಮಾಡುತ್ತಿದ್ದರು ಕಟ್ಟಿಗೆಯ ಗಾಣದ ಮೇಲೆ ತಯಾರಿಸಿದ ಬೆಲ್ಲ ತಿನ್ನುತ್ತಿದ್ದರು, ಊರ ಗಾಣಿಗರು ಗಾಣದ ಮೇಲೆ ಹಿಂಡಿದ ಎಣ್ಣೆ ಉಪಯೋಗಿಸುತ್ತಿದ್ದರು ಈಗ ಯಾವತ್ತು ಜಿನಸುಗಳು ಗಿರಣಿಗಳ ಮೇಲೆ ತಯಾರಾಗಿ ಚೀಲ-ಡಬ್ಬಿಗಳಲ್ಲಿ ತುಂಬಿ ಗ್ರಾಮಗಳಲ್ಲಿ ತಯಾರಾಗಿ ಸೇರುತ್ತವೆ. ಗ್ರಾಮದವರು ಆ ಜಿನಸುಗಳ ಆರ್ಭಟ ನೋಡಿ ಅವುಗಳನ್ನೇ ಖರೀದಿ ಮಾಡಲಾರಂಭಿಸಿದ್ದಾರೆ ಮೋಟಾಗಿ ಅವು ಅಗ್ಗ! 'ಅಗ್ಗ ಕಟ್ಟೆ ಮುಗ್ಗು ಜೋಳ' ಎಂಬ ಗಾದೆ ಮಾತನ್ನು ಜನರು ಅಲಕ್ಷಿಸಿ ಗಿರಣಿಯ ಸಾಮಗ್ರಿಗಳಿಗೆ ಆಶ್ರಯ ಕೊಡಲಾರಂಭಿಸಿದ್ದರಿಂದ ಗ್ರಾಮಗಳೊಳಗಿನ ಕೆಲಸಗಾರರಿಗೆ ಉಪವಾಸ ತೆಗೆಯುವ ಪ್ರಸಂಗ ಎಂತು! ಗ್ರಾಮದವರ ಆರೋಗ್ಯವು ಕೆಟ್ಟುಹೋಯಿತು! ಪೇಟೆಗಳಲ್ಲಿ ಸಿಗುವ ಎಣ್ಣೆ, ಹಿಟ್ಟು ಮೊದಲಾದ ಜಿನಸುಗಳು ಪರಿಶುದ್ಧವಲ್ಲವೆಂದೂ ಇವುಗಳ ಸೇವನದಿಂದ ಆರೋಗ್ಯಬಾಧೆಯಾಗುತ್ತದೆಂದೂ ಗ್ರಾಮೋದ್ಯೋಗಿಕ ಸಂಘದವರು ತಜ್ಞರ ಅಭಿಪ್ರಾಯ ಪಡೆದು ಇವುಗಳಿಗೆ ಆಶ್ರಯ ಕೊಡಬಾರದೆಂದು ವಿಧಿಸುತ್ತಾರೆ ಊರ ಅಕ್ಕಿ, ಊರ ಹಿಟ್ಟು ಮತ್ತು ಬೆಲ್ಲ ಇವು ಗಿರಣಿ ಅಕ್ಕಿ, ಗಿರಣಿ ಹಿಟ್ಟು, ಗಿರಣಿ ಸಕ್ಕರೆ ಇವುಗಳಿಗಿಂತ ಶರೀರಕ್ಕೆ ಹಿತಕರವೆಂದೂ ಯಾವತ್ತೂ ಡಾಕ್ಟರರು ನಿಶ್ಚಿತಾಭಿಪ್ರಾಯ ಕೊಡುತ್ತಾರಾಗಿ ಗ್ರಾಮೋದ್ಯೋಗಿಕ ಸಂಘದವರ ಪ್ರಕಟಣೆ ಊರ ಗಾಣಿಗರು ತಯಾರಿಸುವ ಎಣ್ಣೆಯ ಕುರಿತು ಮತಭೇದವಿದೆ ಗಿರಣಿ ಎಣ್ಣೆಗಿಂತ ಇವರೊಳಗೆ ಹೆಚ್ಚಿನ ಗುಣಗಳಿಲ್ಲವಾಗಿ ಕೆಲವರ ಅಭಿಪ್ರಾಯ. ಗಿರಣಿ ಎಣ್ಣೆಗಿಂತ ಇದು ಶರೀರಕ್ಕೆ ಹಿತಕರವೆಂದೂ ಹಲವರ ಅಭಿಪ್ರಾಯ. ಮತಭೇದವಿದ್ದಾಗ್ಯೂ ಬಹುಮತವು ಗಾಣಿಗರ ಎಣ್ಣೆಯ ಪಕ್ಷಕ್ಕೇ ಎಂದು ಗ್ರಾಮೋದ್ಯೋಗಿಕ ಸಂಘದ ಪ್ರಕಟಣೆ ಗ್ರಾಮಗಳಲ್ಲಿ ಆರೋಗ್ಯ ಬೆಳಸುವದಕ್ಕಾಗಿ ಕೆರೆ, ಬಾವಿಗಳನ್ನು ಸ್ವಚ್ಛವಾಗಿ ಕಾಪಾಡುವಲ್ಲಿ ವಿದ್ಯಾವಂತರು ಗ್ರಾಮದವರಿಗೆ ಪಾಠ ಹೇಳಿಕೊಡಬೇಕಾಗಿಯೂ ಹೊಲಸು ತೆಗಿಸಿ ಗ್ರಾಮಸ್ವಚ್ಛತೆ ಕಾಪಾಡಿಕೊಂಡು ಗ್ರಾಮದವರ ಆರೋಗ್ಯಪಾಲನವಾಗುವಂತೆ ಜ್ಞಾನಸಂಪನ್ನರು ಹೇಳಿಕೊಡಬೇಕಾಗಿಯೂ ವರ್ಧಾ ಪ್ರಕಟಣೆಯಲ್ಲಿ ಅಪ್ಪಣೆಯಿದೆ ಡಾ| ಬೆಂಟ್ಲೀಯವರ ಅಭಿಪ್ರಾಯದಂತೆ, ಆರೋಗ್ಯ ರಕ್ಷಣೆಯೇ ಹಿಂದುಸ್ಥಾನದಲ್ಲಿ ಅವಶ್ಯವುಳ್ಳ ಪ್ರಧಾನ ಸಾರ್ವಜನಿಕ ಕರ್ತವ್ಯ. ಈ ಕಾರ್ಯವನ್ನು ಗ್ರಾಮೋದ್ಯೋಗಿಕ ಸಂಘದವರು ಪುರಸ್ಕರಿಸುತ್ತಾರೆ ಅವರಿಗೆ ಎಲ್ಲರೂ ಮನಮುಟ್ಟಿ ಯಾವತ್ತೂ ಮತಭೇದಗಳನ್ನು ದೂರಸಾರಿ ನೆರವಾಗಬೇಕಾಗಿ ನಮ್ಮ ಸೂಚನೆ

೫. ಊರ ಅಕ್ಕಿಯ ಕುರಿತು 'ಹರಿಜನ' ಪತ್ರಿಕೆಯಲ್ಲಿ ಪ್ರಕಟವಾದ ಕೆಲ ವಿವರ ಮನನೀಯವಿದೆ. ಮಹಾತ್ಮರು ಈ ವಿವರವನ್ನು ಪ್ರಕಟಿಸಿ ಮಹದುಪಕಾರ ಮಾಡಿರುತ್ತಾರೆ. ಮದ್ರಾಸ ಇಲಾಖೆಯ ಗುಂಟೂರ ಜಿಲ್ಲೆಯಲ್ಲಿ ಕಳೆದ ವರುಷ ಮಹಾತ್ಮರ ಜಯಂತಿಯ ದಿನ (*Hand pounded Rice Association*) ಅಕ್ಕಿ ಮೆರೆಯುವ ಸಂಘ ಸ್ಥಾಪನೆಯಾಯಿತು. ಈ ಸಂಘದ ಚಾಲಕರು ಶ್ರೀ| ಜಿ ಸೀತಾರಾಮ ಶಾಸ್ತ್ರಿಯವರು ಗಿರಣಿಯಲ್ಲಿ ೪೦ ಜನರು ರೂಪಾಯಿ ೨೫ ಖರ್ಚು ಮಾಡಿ ದಿನಾ ೩೦೦ ಚೀಲ ಭತ್ತದ ಅಕ್ಕಿ ಮಾಡುತ್ತಾರೆ. ಇಷ್ಟೇ ಕೆಲಸಕ್ಕೆ ಇಷ್ಟೇ ಅವಧಿಯಲ್ಲಿ ೬೦೦ ಜನರು ಬೇಕು, ೧೦೦ ರೂಪಾಯಿ ಖರ್ಚು ತಗಲುತ್ತದೆ. ಅಂದರೆ ೫೬೦ ಜನರಿಗೆ ರೂಪಾಯಿ ೭೫ ಹಂಚಿದಂತಾಯಿತು ಗ್ರಾಮಗಳಲ್ಲಿ ಈ ಕೆಲಸ ಮಾಡುವವರು ಬಹುತರವಾಗಿ ಹೆಂಗಸರು ಪಟ್ಟಣಗಳಲ್ಲಿ ಹೆಂಗಸಿಗೆ ಕೂಲಿ ೩ ಆಣೆ, ಹಳ್ಳಿಯಲ್ಲಿ ಕೂಲಿ ರೂ ೦—೨—೮ ಸಿಗುತ್ತ ಅಂದರೆ ಹಳ್ಳಿಯಲ್ಲಿ ಹೆಂಗಸಿನ ಕೂಲಿ ಒಂದು ದುಡ್ಡು ಕಡಿಮೆ ಪಟ್ಟಣದ ಖರ್ಚಿನ ಮಾನದಿಂದ ಈ ಕೂಲಿ ಕಡಿಮೆಯೇನಲ್ಲ. ಒಬ್ಬನಿಗೆ ವರ್ಷಕ್ಕೆ ಊಟಕ್ಕೆ ೩೩೪ ರತ್ತಲು ಅಕ್ಕಿ ತಗಲುತ್ತದೆ, ಅಂದರೆ ಸರಾಸರಿ ೨ ಚೀಲ (=೧೬೬ ರತ್ತಲು) ಗಿರಣಿಯ ಅಕ್ಕಿಕೊಳ್ಳದೆ ಊರ ಅಕ್ಕಿ ಕೊಂಡರೆ ತಲೆಗೆ ರೂಪಾಯಿ ೧-೬-೬ ಹೆಚ್ಚಿಗೆ ತಗಲುತ್ತದೆ. ಫಲದ ವಿಚಾರ ಮಾಡಿದರೆ ಈ ರಕಮು ತೀರ ಅಲ್ಪವಾದುದು, ಗಿರಣಿಯ ಅಕ್ಕಿಯ ಸೇವನದಿಂದ ಉಂಟಾಗುವ ಆರೋಗ್ಯಬಾಧೆ ತಪ್ಪುತ್ತದೆ, ದೇಶ ಬಾಂಧವರಿಗೆ ಕೆಲಸ ಕೊಟ್ಟ ಶ್ರೇಯಸ್ಸು ಸಿಗುತ್ತದೆ. ಹೀಗೆ ಆತ್ಮಹಿತ-ದೇಶಹಿತವೆರಡೂ ಸಾಧಿಸುವದರಿಂದ ಶ್ರೀ| ಸೀತಾರಾಮ ಶಾಸ್ತ್ರಿಯವರು ಊರ ಅಕ್ಕಿಯನ್ನೇ ಉಪಯೋಗಿಸಬೇಕಾಗಿ ಬಿನ್ನೈಸಿಕೊಳ್ಳುತ್ತಾರೆ

೬. ಆರೋಗ್ಯಬಾಧೆಯ ವಿಚಾರವು ಬರೇ ಭಾವನೆಯದೆಂದು ಯಾರೂ ಎಣಿಸಕೂಡದು. ಮಹಾತ್ಮರು ಕೋಲಮ್ ಎಂಡ ಸಿಮಂಡ್ಸ ಎಂಬವರು ಬರೆದ (*The Newer Knowledge of Nutrition*) ಶರೀರ ಪೋಷಣೆಯ ನೂತನ ಜ್ಞಾನವೆಂಬ ಗ್ರಂಥದೊಳಗಿಂದ ಪ್ರಕಟಿಸಿದ ಆಧಾರ ಸಂಬಂಧಿಸಬಹುದು. ಈ ಗ್ರಂಥವನ್ನು ಮಹಾತ್ಮರಿಗೆ ಒಬ್ಬ ಡಾಕ್ಟರ ಗೆಳೆಯರು ಪ್ರಶಂಸೆ ಮಾಡಿ ಕಳಿಸಿಕೊಟ್ಟಿದ್ದಾರೆ ಆ ಗ್ರಂಥಕರ್ತರ ಅಭಿಪ್ರಾಯವೇನೆಂದರೆ— "ಸರಾಸರಿ ಅರ್ಧಾಂಶ ಮಾನವ ಕೋಟಿಯವರು ಅಕ್ಕಿಯ ಆಹಾರಿಗಳು, ಕೆಲ ಮೂಲನಿವಾಸಿಗಳು ಅಂದರೆ ಈಗಿನ ವಿಚಾರದಂತೆ ಸುಧಾರಿಸದ ಜನರು) ಪಾಲೀಸಿಲ್ಲದ ಕೆಂಪು ಅಕ್ಕಿಯನ್ನು ಉಣ್ಣುತ್ತಾರೆ ಈ ಅಕ್ಕಿಯ ಹೊರಮೈಗೆ ಖನಿಜ ಕ್ಷಾರದ ಥರವಿರುತ್ತದೆ, ಶರೀರಪೋಷಕವಾದ ಕ್ರಿಮಿಗಳೂ ಕ್ಷಾರವೂ ಅಕ್ಕಿಯ ಪ್ರಧಾನ ಸತ್ವಸಾಮಗ್ರಿಗಳು ಗಿರಣಿಯ ಅಕ್ಕಿಯಲ್ಲಿ ಇವೆರಡೂ ಕಾಣ ಕ್ರಿಮಿ ಕ್ಷಾರಗಳಿದ್ದರೆ ಅಕ್ಕಿ ಬಹುಕಾಲ ಬಾಳುವದಿಲ್ಲ ರಪ್ತಿನ ಅಕ್ಕಿಗೆ ಬಾಳಿಕೆ ಅವಶ್ಯಕ. ಆದಕಾರಣ ಕ್ರಿಮಿ-ಕ್ಷಾರಗಳನ್ನು ತೆಗೆದು ಅದಕ್ಕೆ ಪಾಲೀಸು ಮಾಡುತ್ತಾರೆ ಹೀಗೆ ಪಾಲೀಸು ತೆಗೆದದ್ದರಿಂದ ಅಕ್ಕಿ ನೋಟಕ್ಕೆ ಚಂದ ಆದರೆ, ಶರೀರ ಬೆಳವಣಿಗೆಗೆ ಅವಶ್ಯವುಳ್ಳ ಖನಿಜ ದ್ರವ್ಯಗಳು ಇದರೊಳಗೆ ಉಳಿದಿಲ್ಲ ಇದಕ್ಕಾಗಿ ಈ ಅಕ್ಕಿಯ ಸೇವನೆಯಿಂದ 'ಬೆರಿ-ಬೆರಿ' ಮೊದಲಾದ ರೋಗಗಳು ಉದ್ಭವಿಸುತ್ತವಾಗಿ ಡಾಕ್ಟರರ ಅಭಿಪ್ರಾಯವಿದೆ ಶ್ರೀ| ಸೀತಾರಾಮ ಶಾಸ್ತ್ರಿಯವರೂ 'ಹರಿಜನ' ಪತ್ರಕರ್ತರೂ ಇದೇ ಪ್ರಕಾರ ಅಭಿಪ್ರಾಯಪಡುತ್ತಾರೆ. ಮಾನವನು ಸ್ವಾರ್ಥಪರಾಯಣನೆಂದು ಲೋಕವೇ ಹೇಳುತ್ತದೆ ಆಹಾರ ಕೊಳ್ಳುವದು ದೃಷ್ಟಿಸುಖಕ್ಕಲ್ಲ, ದೇಹಪೋಷಣಗೆ. ಆದರಿಂದ ಸುವಿಚಾರ ಹಿಡಿದು ಜನರು ಗಿರಣಿ ಅಕ್ಕಿಯ ಉಪಯೋಗ ಬಿಟ್ಟು ಊರ ಅಕ್ಕಿಯನ್ನೇ ಉಪಯೋಗಿಸಿ ಸ್ವಹಿತ ಸಾಧಿಸಬೇಕಾಗಿ ವಿನಂತಿ

೭. ಸ್ವಹಿತದೊಡನೆ ದೇಶಹಿತವೂ ಸಾಧಿಸುತ್ತದೆ. ಕೆಲ ಅಂಕಿಗಳನ್ನು ಸಂಬಂಧಿಸಬಹುದು. ಇಡೀ ಬ್ರಿಟಿಶ ಹಿಂದುಸ್ಥಾನದಲ್ಲಿ ೪ ಕೋಟಿ ೮೮ ಲಕ್ಷ ಎಕರೆ ಕ್ಷೇತ್ರದಲ್ಲಿ ಬೇಸಾಯವಾಗುತ್ತದೆ. ಅವುಗಳಲ್ಲಿ ೧ ಕೋಟಿ ೮೮ ಲಕ್ಷ ಎಕ್ರೆ ಭೂಮಿಯಲ್ಲಿ ಭತ್ತ ಬೆಳೆಯುತ್ತವೆ ಎಕ್ರೆಗೆ ೧೨ ಚೀಲ ಬತ್ತ ಹಿಡಿದರೆ ಅಂಕು ೨೨ ಕೋಟಿ ೫೬ ಲಕ್ಷ ಭತ್ತ ಬೆಳೆಯುತ್ತದಂತಾಯಿತು. ಇಬ್ಬರು ದಿನಾ ಒಂದು ಚೀಲ ಬತ್ತ ಮೆರೆಯುತ್ತಾರೆ. ಸರಾಸರಿ ಒಬ್ಬ ಕೂಲಿಯವನು ವರ್ಷಕ್ಕೆ ೩೦೦ ದಿನ ಕೆಲಸ ಮಾಡುತ್ತಾನೆಂದು ಎಣಿಸಬಹುದು ೧೫ ಲಕ್ಷ ಜನರಿಗೆ ಇಡೀ ವರ್ಷ ಹುಟ್ಟಿದ ಭತ್ತ ಅಕ್ಕಿ ಮಾಡಲು ತಗಲುತ್ತದೆ. ಕೂಲಿ ತಕ್ಕಷ್ಟಿದೆ. ಈಗ ಹಿಂದುಸ್ಥಾನದಲ್ಲಿ ನಡೆಯುವ ಹತ್ತಿಯ ಗಿರಣಿ, ಉಕ್ಕಿನ ಕಾರಖಾನೆ, ಅಕ್ಕಿಯ ಗಿರಣಿ, ಎಣ್ಣೆಯ ಗಿರಣಿ ಮೊದಲಾದ ಯಾವತ್ತು ಗಿರಣಿ ಕಾರಖಾನೆಗಳಲ್ಲಿ ಕೂಡಿ ೧೪ ಲಕ್ಷ ಕೂಲಿಕಾರರಿಗೆ ಕೆಲಸವಿದೆ. ಜನರು ಮನೆ-ಮಾರು ಬಿಟ್ಟು ಕಾರಖಾನೆಗಳಿಗೆ ಹೋಗಿ ಕಷ್ಟಪಡಬೇಕು. ಮೆರೆದ ಅಕ್ಕಿಯನ್ನೇ ಊಟ ಮಾಡಿ ಗಿರಣಿ ಅಕ್ಕಿಗೆ ಆಶ್ರಯ ಕೊಡದಿದ್ದರೆ, ೧೫ ಲಕ್ಷ ಜನರಿಗೆ ಸ್ವಗ್ರಾಮಗಳಲ್ಲಿ ಬಾಳಿಸಿಕೊಂಡು ಅನ್ನಸಂತರ್ಪಣೆ ಮಾಡಿದ ಶ್ರೇಯಸ್ಸು ಸಿಗುತ್ತದೆ ಸ್ವ-ಪರಹಿತಗಳೆರಡೂ ಸಾಧಿಸುವಾಗ ದೇಶಬಾಂಧವರು ಗ್ರಾಮೋದ್ಯೋಗಿಕ ಸಂಘದ ಅಪ್ಪಣೆಯಂತೆ ತಮ್ಮ ತಮ್ಮ ಊರುಗಳಲ್ಲಾದ ಜಿನಸುಗಳನ್ನೇ ಉಪಯೋಗಿಸುವರೆಂದು ನಾವು ತುಂಬಾ ಕೋರುತ್ತೇವೆ

ಅಲ್ಲಲ್ಲಿ ಇಷ್ಟಿಷ್ಟು!

ಮಹಾತ್ಮರಿಗೆ ಸರ್ಕಾರಾಧಿಪತಿಗಳು ಗಡಿನಾಡಿಗೆ ಹೋಗಲು ಅಪ್ಪಣೆ ನಿರಾಕರಿಸುವ ಕಾರಣವನ್ನು 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ದಿಲ್ಲಿಯ ಸುದ್ದಿಗಾರರು ಶಂಶೋಧಿಸಿದ್ದಾರೆ ಅದೇನಂದರೆ— ಅಲ್ಲಿಯ ಗವ್ಹರ್ನರರಾದ ಮಿ. ಕನಿಂಘೆಮರವರು ಸಜ್ಜನರು. ಅವರಿಗೂ ಮಹಾತ್ಮರಿಗೂ ಒಳ್ಳೇ ಪರಿಚಯವಿದೆ. ಕನಿಂಘೆಮರವರು ಇರ್ವಿನ್ ದೊರೆಗಳ ಖಾಸಗಿ ಕಾರ್ಯದರ್ಶಿಗಳಿದ್ದು ಗಾಂಧಿ-ಇರ್ವಿನರ ಒಡಂಬಡಿಕೆಯ ಕಾಲದಲ್ಲಿ ಮಹಾತ್ಮರೊಡನೆ ಆಲೋಚನೆ ಮಾಡಿದವರಲ್ಲೊಬ್ಬರಾಗಿದ್ದರು. ಮಹಾತ್ಮರು ನಿರ್ಮಲಚಿತ್ತದವರೆಂದು ಅವರು ಒಪ್ಪುತ್ತಾರೆ, ಮಹಾತ್ಮರು "ನುಡಿದಂತೆ ನಡೆ" ಇಡುವವರೆಂದೂ, ಶಾಂತಿಭಂಗವನ್ನಾಗಲಿ, ಚಳವಳಿಯನ್ನಾಗಲಿ ಪ್ರಾರಂಭಿಸಲಿಕ್ಕಿಲ್ಲವಾಗಿಯೂ ಗಡಿನಾಡಿನ ಸರಕಾರದ ಅಭಿಪ್ರಾಯವಿದೆ. ಆದರೆ ಮಹಾತ್ಮರು ಗಡಿನಾಡಿಗೆ ಹೋದ ಕೂಡಲೇ ವಿಚಿತ್ರ ವಾರ್ತೆಗಳು ಗಡಿಪ್ರದೇಶದಲ್ಲಿ ಹಬ್ಬಿ ಬ್ರಿಟಿಶರ ಆಧಿಪತ್ಯವು ಹಿಂದುಸ್ಥಾನದಲ್ಲಿ ಹೀನಬಲವಾಯಿತೆಂದು ಭಾವನೆಯುಂಟಾಗಿ ಗಡಿಸೀಮೆಯಲ್ಲಿರುವ ಪಾಳೆಯಗಾರರು ಗಡಿನಾಡಿನಲ್ಲಿ ಬಂಡು ಉಪದ್ರವ ಕೊಡುವರೆಂತಲೂ, ಕೆಂಪಂಗಿಯವರಿಗೆ ಹುರುಪು ಬರುವದೆಂತಲೂ ಅವರಿಗೆ ಭೀತಿಯಿದೆ. ಮುಂಬಯಿ ಮಹಾತ್ಮರು ಧ್ವನಿ ಪುರುಷರೆಂದೂ ಹೇಳುತ್ತಾರೆ. ಈಗಿನಂಥ ಸುದ್ದಿಗಳಿಗೆ ಹೆಚ್ಚಿನ ಆಧಾರ ದೊರಕಿ ಗಡಿನಾಡಿನಲ್ಲಿ ಶಾಂತತೆ ಕಾಪಾಡುವದು ಕಠಿಣವಾಗುವದೆಂದು ಅವರ ಹೇಳಿಕೆ. ಮಹಾತ್ಮರ ಮೇಲೆ ಸರಕಾರಕ್ಕೆ ಯಾವದೇ ಪ್ರಕಾರದ ಅಪನಂಬಿಗೆಯಿಲ್ಲ ಇತ್ಯಾದಿ ವಕೀಲಿಯ ವಾರ್ತೆಯನ್ನು ಸುದ್ದಿಗಾರರು ಪ್ರಕಟಿಸುತ್ತಾರೆ. ಹಿಂದುಸ್ಥಾನ ಸರಕಾರವು ಸಭ್ಯವಿದೆ, ಲೋಕಹಿತಕಾರಿ ಇದೆ. ಗಡಿನಾಡಿನ ಸರಕಾರವೂ ಪ್ರಜಾಹಿತಕ್ಕಾಗಿಯೇ ಹೇಳಾಡುತ್ತದೆ, ಮಹಾತ್ಮರು ಪರೋಪಕಾರಕ್ಕಾಗಿಯೇ ಪ್ರಯತ್ನಪಡುತ್ತಿದ್ದಾರೆ. ಗಡಿನಾಡಿಗೆ ಮಹಾತ್ಮರು ಹೋಗಲಪೇಕ್ಷಿಸುವದು ಜನಹಿತಕ್ಕಾಗಿಯೇ ಸರಕಾರದ ಪ್ರತಿಬಂಧವಾಗುವದೂ ಜನಹಿತಕ್ಕಾಗಿಯೇ. ಇಷ್ಟೇ. ಜನಹಿತದ ದೃಷ್ಟಿಕೋನಗಳು ಮಾತ್ರ ಬೇರೆ ಬೇರೆ.

* * *

ಆಸಾಮ ಪ್ರಾಂತದಲ್ಲಿ ನೆರೆಯಿಂದ ನಿರಾಶ್ರಿತರಾದವರ ಕಷ್ಟ ಹೇಳಲಾಸಲ್ಲ ಕೇಳಲಿಲ್ಲದೆ ಲಕ್ಷಾವಧಿ ಜನರು ಬಳಲುತ್ತಿದ್ದಾರೆ; ಅರಿವೆ-ಅಂಚಡಿಗಳಿಲ್ಲದೆ ಕಷ್ಟಪಡುತ್ತಿದ್ದಾರೆ ಮುಂಬಯಿ ಅತ್ತ ಕಡೆಯಿಂದ ಹಳೇ ಅರಿವೆ-ಅಂಚಡಿಗಳನ್ನು ಸಂಗ್ರಹಿಸಿ ಕಳಿಸುವ ಏರ್ಪಾಟು ನಡೆದಿದೆ. ಒಂದೂವರೆ ಲಕ್ಷ ಜನರು ಎಲೆ ತಿಂದು ಪ್ರಾಣವನ್ನು ಜೋಪಾನ ಮಾಡಿಕೊಳ್ಳುತ್ತಾರಾಗಿ ಪ್ರಕಟವಾಗಿದೆ. ಏನವಸ್ಥೆಯಿದು!

* * *

ಕುಲಾಬಾ ಜಿಲ್ಲೆಯೊಳಗಿನ ಪ್ರಮುಖ ಜಮೀನದಾರರು ಪನವೇಲದಲ್ಲಿ ಸಭೆಸೇರಿ ಜಮೀನದಾರರ ಸಂಘವನ್ನೊಂದು ಏರ್ಪಡಿಸಿದ್ದಾರೆ ಸರಕಾರದ ತೀರ್ವೆ ಆಕರಣೆ ವಸೂಲಿಯ ಕ್ರಮದ ಕುರಿತು ಚರ್ಚೆಮಾಡಿ ಜೋಪಾಸಿಷ್ಕರಣ ಮಾಡುವದು, ಬೇಸಾಯಗಾರರ ಕಷ್ಟಪರಿಹಾರದ ಉಪಾಯ ಸೂಚಿಸುವದು, ಜಿಲ್ಲೆಯೊಳಗಿನ ಬೇಸಾಯಗಾರರ ಹಿತ ಕಾಪಾಡುವದು, ಇವೇ ಮೊದಲಾದವು ಈ ಸಂಘದ ಉದ್ದೇಶಗಳು.

* * *

ಪಂಜಾಬ ಕಾಯಿದೆ ಕೌನ್ಸಿಲಿನ ಚುನಾವಣೆಯ ಸಮಯ, ಅಂದರೆ ನವಂಬರ ೧೬ನೇ ತಾರೀಖಿಗೆ ರಾಷ್ಟ್ರೀಯ ಸಭೆಯವರಿಗೆ ಮತ ಕೊಡಬೇಕಾಗಿ ಮಾಡಿದ ಭಾಷಣದಿಂದ ರಾಜದ್ರೋಹವಾಯಿತೆಂದು ಪಂಜಾಬದ ಪ್ರಮುಖ ಕಾಂಗ್ರೆಸ ಕಾರ್ಯಕರ್ತರಾದ ಡಾ| ಸತ್ಯಪಾಲರ ಮೇಲೆ ಖಟ್ಲೆ ನಡೆದು ೧ ವರ್ಷದ ಕಠಿಣ ಶಿಕ್ಷೆಯಾಗಿದೆ ಖಟ್ಲೆ ವಿಚಾರದ ಕಾಲಕ್ಕೆ ಸರಕಾರಿ ಪಕ್ಷದ ಸಾಕ್ಷಿಗಾರರೊಬ್ಬರು ಡಾ| ಸತ್ಯಪಾಲರ ಭಾಷಣದ ವಿವರ ಕೊಟ್ಟರು. ಭಾಷಣವು ರಾಜದ್ರೋಹದ್ದು ಇತ್ತ ದರಿಂದ ಸಾಕ್ಷಿಗಾರರು ಹೇಳಿದ ಭಾಷಣದ ವಿವರವನ್ನು ಪತ್ರಿಕಾ ಪ್ರತಿನಿಧಿಗಳು ಪ್ರಕಟಿಸಬಾರದಾಗಿ ಸರಕಾರಿ ವಕೀಲರು ಸುದ್ದಿಗಾರರಿಗೆ ಎಚ್ಚರಿಕೆ ಕೊಟ್ಟರು ಇದರಿಂದ ಭಾಷಣವು ರಾಜದ್ರೋಹದ್ದೆಂದು ಸರಕಾರಿ ವಕೀಲರು ಗ್ರಹಿಸುತ್ತಾರಾಗಿಯೂ, ಹಾಗೆ ಗ್ರಹಿಸುವದು ಅನ್ಯಾಯದ್ದೆಂದೂ ಡಾ| ಸತ್ಯಪಾಲರ ಕಡೆ ಬಾರಿಸ್ಟರರಾದ ಆಸಫ್ ಅಲ್ಲಿಯವರು ತಕರಾರು ಮಾಡಿದರು ಮೆಜಿಸ್ಟ್ರೇಟರು ಅಭಿಪ್ರಾಯ ಕೊಡಲಿಲ್ಲ ಖಟ್ಲೆ ತೀರ್ಮಾನವಾಗುವ ಮುಂಚೆಯೇ ಸರಕಾರಿ ವಕೀಲರು ಆರೋಪಿಯ ಭಾಷಣವು ರಾಜದ್ರೋಹದ್ದಿರುತ್ತದೆಂದು ಗೃಹೀತ ಹಿಡಿಯುವದು ಹೇಗೆ?

* * *

ಅಮೇರಿಕೆಯಲ್ಲಿ ರೂಝುವೆಲ್ಟರವರು ಅಧ್ಯಕ್ಷರಾಗಿ ಆರಿಸಿಬಂದ ಬಳಿಕ ಮದ್ಯಪಾನ ಪ್ರತಿಬಂಧಕ ಕಾಯಿದೆ ರದ್ದಾಯಿತು ಈ ಒಂದು ವರ್ಷದಲ್ಲಿ ೯ ಅಬ್ಜ ರೂಪಾಯಿಗಳ ಸರಾಯಿ ಖರ್ಚಾಯಿತಂತೆ! ಕುಡಿದು ಸೂರಾಯಿತು! ಮದ್ಯಪಾನದಿಂದುಂಟಾದ ರಾಷ್ಟ್ರನಷ್ಟದ ಪರಿಮಾಣ ನೋಡಿದರೆ ಕಣ್ಣು ತಿರುಗುತ್ತದೆ!

(೧೧ನೇ ಪಾನಿನ ಮೇಲೆ ಮುಂದರಿಸಿದೆ)

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ದ್ರಾಕ್ಷಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಕರಧ್ವಜ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ಶಿರಃಪ್ರವಾತಕ್ಕೆ ಅತ್ಯುತ್ತಮ)
ಮಹಾನಾರಾಯಣ ತೈಲ (ವಾತರೋಗಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಪ್ಲೀಹಾ ರೋಗಕ್ಕೆ ಅತ್ಯುತ್ತಮ)
ಕೃಷ್ಣಾರಿಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ರಕ್ತಪಿತ್ತ, ಅಪಸ್ಮಾರ, ರಾಜಯಕ್ಷ್ಮಗಳಿಗೆ ರಾಮಬಾಣ)
ಭುವನ ರಂಜನ (ಸರ್ವ ತರದ ಶರೀರದ ನೋವುಗಳಿಗೆ ಅತ್ಯಂತ ಗುಣಕಾರಿ).
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಮಾತ್ರೆಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾವಕಾಶವಾಗಿ ನೋಡಿ ತುಂಬಾ ಆನಂದಪಟ್ಟೆನು ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಅನುಭವಶಾಲಿಗಳಾಗಿಯೂ ಇರುವ ಶ್ರೀಮಂತರಾಗಿದ್ದಾರೆ ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಸ್ಥವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ಪರೀಕ್ಷಾ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸುವದಾದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ ೧೦-೧೧-೧೯೩೪

ವಿದ್ವಾನ್ ಕೇ. ಶೇಷಶಾಸ್ತ್ರಿ ಪ್ರಧಾನ ಮಂತ್ರಿ,
ಅಖಿಲ ಇಂಡಿಯಾ ಆಯುರ್ವೇದ ವೈದ್ಯ ವಿದ್ಯಾಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

೨೦ನೆ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ

ಶ್ರೀ|| ಪಂಜೆ ಮಂಗೇಶರಾಯರು.

ಅಲ್ಪ ಪರಿಚಯ.

ಶ್ರೀ| ಪಂಜೆ ಮಂಗೇಶರಾವ್, ಬಿ.ಎ., ಎಲ್.ಟಿ. ಅವರು ದಕ್ಷಿಣ ಕನ್ನಡಿಗರು. ಕಾರವಾರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಲನದಿಂದ ಇತ್ತೀಚೆಗೆ ಪ್ರತಿ ವರುಷವೂ ಅವರ ಹೆಸರು ಸಮ್ಮೇಲನದ ಅಧ್ಯಕ್ಷಸ್ಥಾನಕ್ಕೆ ಸೂಚಿತವಾಗುತ್ತಿದ್ದರೂ, ಒಂದಿಲ್ಲೊಂದು ಅನಾನುಕೂಲತೆಯ ಮೂಲಕ ಅವರ ಆ ಸ್ಥಾನವನ್ನಲಂಕರಿಸುವ ಸುಯೋಗವು ಇನ್ನೂ ತನಕ ಬರಲಿಲ್ಲ. ಅದು ಈ ವರುಷ ಕೂಡಿಬಂತು

ದಕ್ಷಿಣ ಕನ್ನಡದಲ್ಲಿ ಕನ್ನಡ ಸಾಹಿತ್ಯ ಸೇವೆಯಲ್ಲಿ ಇವರು ಬಹಳ ಶ್ರಮ ವಹಿಸಿದ್ದಾರೆ ಇವರು ವಿದ್ಯಾಧಿಕಾರಿಗಳಾಗಿದ್ದುದರಿಂದ, ಅವರ ವೃತ್ತಿಯು ಸಹಜವಾಗಿ ಈ ಕಾರ್ಯದಲ್ಲಿ ಅವರಿಗೆ ತುಂಬಾ ನೆರವಾಯಿತು ಇವರು ಶ್ರೇಷ್ಠ ತರಗತಿಯ ಶಿಕ್ಷಕರೆಂದು ಹೆಸರುಪಟ್ಟಿದ್ದಾರೆ ಅಧ್ಯಾಪನದ ಕೆಲಸವನ್ನು ಅವರಷ್ಟು ಉತ್ಸಾಹದಿಂದ, ಸ್ಫೂರ್ತಿಯಿಂದ, ಉತ್ಕಟ ಭಾವನೆಯಿಂದ ಮಾಡುವಂಥ ಶಿಕ್ಷಕರು ಸಿಕ್ಕುವದು ದುರ್ಲಭವೆಂದೆನ್ನುತ್ತಾರೆ. ಅವರು ಹುಟ್ಟು ಶಿಕ್ಷಕರು (*a born teacher*) ಅವರು ಕೊನೆಗು ಪ್ರಾಂತದಲ್ಲಿ ಉಚ್ಚ ಶಿಕ್ಷಣಾಧಿಕಾರಿಯಾಗಿ (*Educational Inspector*) ಸೇವಾನಿವೃತ್ತರಾಗಿದ್ದಾರೆ

ಶ್ರೀ| ಪಂಜೆಯವರು 'ಕವಿಶಿಷ್ಯ'ನೆಂಬ ಹೆಸರಿಟ್ಟುಕೊಂಡು ಅನೇಕ ಉತ್ತಮ ಕವಿತೆಗಳನ್ನು ಪ್ರಕಟಿಸಿದ್ದಾರೆ ಚಿಕ್ಕ ಮಕ್ಕಳಿಗಾಗಿ ಸಾಹಿತ್ಯವನ್ನು ಪ್ರಕಟಿಸುವ ಕಾರ್ಯವು ಇವರ ಸ್ಫೂರ್ತಿಯಿಂದಲೇ ಮೊದಲಾಯಿತೆನ್ನಬಹುದು ಅವರು 'ಕೋಟಿಚೆನ್ನಯ್ಯ'ವೆಂಬ ಪುಸ್ತಕವನ್ನಲ್ಲದೆ, ಇನ್ನಾವ ಗ್ರಂಥ ರಚನೆಗೂ ಕೈಹಾಕಲಿಲ್ಲ ಆದರೂ ಅವರು ಅನೇಕ ವಿಷಯಗಳನ್ನೆತ್ತಿ ಅನೇಕ ಪತ್ರಿಕೆಗಳಲ್ಲಿ ಸರಸವಾದ ಲೇಖನಗಳನ್ನು ಬರೆದಿದ್ದಾರೆ. ಅವುಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಗ್ರಂಥವಾಗಿ ಪ್ರಕಟಿಸುವದು ಅವಶ್ಯವೆಂದು ನಾವು ಇಲ್ಲಿ ಸೂಚಿಸದೆ ಇರಲಾರೆವು ಮಹಾರಾಷ್ಟ್ರದಲ್ಲಿ ಇಂತಹ ಅನೇಕ ಪ್ರಯತ್ನಗಳು ನಡೆದಿವೆ ಅವುಗಳಲ್ಲಿ ಕೈ| ವಾ| ಶ್ರೀಪಾದ ಕೃಷ್ಣ ಕೊಲ್ಹಟಕರರ ಸ್ಮಾರಕ ಗ್ರಂಥವು ಆದರ್ಶಪ್ರಾಯವಾದುದು. ಅದು ಅವರ ಅನುಯಾಯಿಗಳಿಂದಲೂ ಶಿಷ್ಯರಿಂದಲೂ ಅವರ ಜೀವಮಾನದಲ್ಲಿ ಪ್ರಕಟಿಸಲ್ಪಟ್ಟು ಅವರಿಗೇ ಅರ್ಪಿಸಲ್ಪಟ್ಟಿತು. ಶ್ರೀ| ಮಂಗೇಶರಾಯರ ವಿಷಯದಲ್ಲಿಯೂ ಕನ್ನಡಿಗರು ಇಂತಹ ಪ್ರಯತ್ನವನ್ನು ಯಾಕೆ ಮಾಡಬಾರದು ?

ಶ್ರೀ. ಪಂಜೆ ಮಂಗೇಶರಾಯರು ಕೊಂಕಣಿಗರು, ಅವರ ಮಾತೃಭಾಷೆ ಕೊಂಕಣಿ ಹಾಗಿದ್ದಿಯೂ ಕೊಂಕಣಿಯವರಾಗಿದ್ದರೂ ಕನ್ನಡದಲ್ಲಿ ವಿಶೇಷ ಪ್ರಾವೀಣ್ಯ ದೊರಕಿಸಿ ಸಮ್ಮೇಲನದ ಅಧ್ಯಕ್ಷಪದವಿಗೇರಿದವರಲ್ಲಿ ಶ್ರೀ| ಬೆನಗಲ್ಲ ರಾಮರಾಯರು ಮೊದಲನೆಯವರು, ಶ್ರೀ| ಪಂಜೆಯವರು ಎರಡನೆಯವರು ಇದು ಅವರಿಗೆ ಅತ್ಯಂತ ಭೂಷಣಾಸ್ಪದವೆಂಬುದರಲ್ಲಿ ಸಂದೇಹವಿಲ್ಲ

ರಾಯಚೂರಿನಲ್ಲಿ ಕೂಡಿದ ೨೦ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಅವರು ಕೊಟ್ಟ ಉಪನ್ಯಾಸದೊಳಗಿನ ಮಹತ್ವದ ಭಾಗಗಳು ಇದರಡಿ ಪ್ರಕಟಿಸಿವೆ. ಅದರಲ್ಲಿ ಅವರು ಕೆಲವು ಹೊಸ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ ಅವು ಯಾವವೆಂದರೆ (೧) ಕಾವ್ಯದಲ್ಲಿ ಪದಶಕ್ತಿ ಅದರ ಧ್ವನಿಶಕ್ತಿ, (೨) ಪ್ರಪಂಚದ ವಾಙ್ಮಯದೊಳಗಿನ ಪ್ರಸಿದ್ಧ ವಾಗ್ಮಿಗಳ ಆದರ್ಶ ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸುವದರ ಆವಶ್ಯಕತೆ, (೩) ರೇಡಿಯೋ, ಗ್ರಾಮೋಫೋನ, ಟಾಕೀಸ್‌ಗಳಿಂದ ಕನ್ನಡ ಭಾಷಾ ಪ್ರಸಾರ ಮಾಡಿಕೊಳ್ಳಬಹುದಾದ ಸಹಾಯ ಈ ವಿಷಯಗಳನ್ನು ಸುಜ್ಞ ವಾಚಕರು ಗಮನಿಸಬೇಕು

೨೦ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ.

ಕಳೆದ ೧೯ ವರ್ಷಗಳಿಂದ ಕನ್ನಡನಾಡಿನ ಪ್ರಖ್ಯಾತ ವಿದ್ವಾಂಸರ ಭೂಷಣಗಳಿಂದ ಬೆಳಗಿದ ಈ ಮಹಾಸಭೆಯ ಅಗ್ರಾಸನವು ಬಹಳ ಜವಾಬ್ದಾರಿಯದು, ನನ್ನ ಶಕ್ತಿಗೆ ಮೀರಿದುದು, ಹಿಂದೆ ಒಂದೆರಡು ಸಲ ಅದನ್ನು ವಹಿಸಲಿಕ್ಕೆ ಒಪ್ಪದಿದ್ದ ಬಗ್ಗೆ ತಮ್ಮ ಕ್ಷಮೆ ಬೇಡುವೆನು ಮತ್ತು ಇಂದಿನ ಅಧಿವೇಶನದ ಅಧ್ಯಕ್ಷಪದವಿಗೆ ನನ್ನನ್ನು ಏರಿಸಿಟ್ಟ ಗೌರವಕ್ಕೆ ಸ್ವಾಗತ ಮಂಡಳಿಯವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುವೆನು ಈ ಅಧ್ಯಕ್ಷಪದದ ಸ್ವೀಕಾರದಿಂದ ನನ್ನ ಹಿಂದಿನ ಅಧೈರ್ಯವೆಲ್ಲ ಮಾಸಿಯಾಗಿ ನನ್ನಲ್ಲಿ ಅರ್ಹತೆ ನೆಲೆಬಿದಯೆಂದಾಗಲಿ, ಈ ವರ್ಷದ ಸಭಾಕಾರ್ಯಗಳ ಜವಾಬ್ದಾರಿ ಕಡಿಮೆಯಾಗಿದೆಯೆಂದಾಗಲಿ ನನ್ನ ತಿಳುವಳಿಕೆಯುಳ್ಳ. ಈ ಕಾರ್ಯಕ್ಕೆ ನಾನು ಈಗಲೂ ಅಸಮರ್ಥನು ಆದರೆ ಅರ್ಹತೆ ಇಲ್ಲದಲ್ಲಿ ಅದನ್ನು ಕಲ್ಪಿಸುವದು ತಮಗೇನು ವಿಶೇಷವಲ್ಲ ಸಕಲ ಕಾರ್ಯಗಳನ್ನು ನೆರವೇರಿಸಿಕೊಳ್ಳುವದು ತಮ್ಮನ್ನು ಹೊಂದಿಕೊಂಡಿದೆ ಈ ಅಧ್ಯಕ್ಷನು ಗಟ್ಟಿದ ಕೇಗಿನ ತೆಂಕುನಾಡಿನ ತೆಂಗಿನಕಾಯಿಯೆಂದು ಭಾವಿಸಿ, ಅದನಲ್ಲಿ ತಮ್ಮ ಮಂತ್ರಶಕ್ತಿಯಿಂದ ಪ್ರಾಣಪ್ರತಿಷ್ಠೆ ಮಾಡಿರಿ.

ನಾನು ಕನ್ನಡ ಲೇಖಕನೂ ಅಲ್ಲ, ಕನ್ನಡಕಾವ್ಯವ ಅರಿದು ಮಣಿದವನೂ ಅಲ್ಲ ನಾನು ಬರೇ ಕರ್ನಾಟಕ ಪ್ರಾಂತದವನು, ಕರ್ನಾಟಕ ಸೀಮೆಯ ಹೊರಗಿನಲ್ಲಿ ನಿಂತ ಕನ್ನಡ ಜಿಲ್ಲೆಯವನು ನನ್ನ ಜಿಲ್ಲೆಯ ಹೆಸರು ಕನ್ನಡವಿದ್ದರೂ ಹುಟ್ಟಿದ ಜನರ ಮನೆಯ ಮಾತು ಕನ್ನಡವಲ್ಲ, ತುಳು-ಕೊಂಕಣಿಗಳು. ಈ ಅರಭಾಷೆಗಳು ಬರಹಗಳಲ್ಲಿ ವ್ಯಕ್ತವಾಗದೆ ಇನ್ನೂ ಆಯಿ ಮಾತುಗಳಾಗಿ ಉಳಿದಿವೆ ಕೊಂಕಣಿ ಮಾತಿನ ನಾಲಿಗೆಯಿಂದ ತಂದ-ಜಿಂದ ಕನ್ನಡ ನುಡಿಗಳು ಸವೆ

ಮುಂಬಯಿ ಸ್ವದೇಶೀ ವಸ್ತುಪ್ರದರ್ಶನದಲ್ಲಿ ಉಚ್ಚ ತರಗತಿಯ ಪಾರಿತೋಷಕ ಪಡೆದ,

ವೆಜಿಟೆಬಲ್ ಸೋಪ ವರ್ಕ್ಸ, ಕಲ್ಲಿಕೋಟೆ.

ಡಿಸ್ಟ್ರಿಬ್ಯೂಟರರು.— ಬಸ್ತಿಹಿತ್ತಲ ಮಹಮೂದ ಸಾಹೇಬ, ಕುಮಟಾ.(ಉ ಕನ್ನಡ)

ರಾಗಿ ಒರವಾದವು "ಕನ್ನಡಂ ಕತ್ತುರಿಯಲ್ತೆ", 'ಕನ್ನಡ ಭಾಷೆ ಕನ್ನಡಿಗನ ಭಾಗ್ಯ", "ಸಿರಿಗನ್ನಡಂ ಗೆಲ್ಗೆ" ಎಂಬೀ ಹೇಮ್ಮೂತುಗಳು ಮುಟ್ಟುಗನ್ನಡಿಗ ನನ್ನು ನನ್ನ ಹೃದಯವನ್ನು ... ಅವರೆ ಅವುಗಳ ... ಕನ್ನಡಿಗನಲ್ಲದ ನನ್ನ ಮನಸ್ಸಿನ ಆಳಕ್ಕೆ ಇಳಿಯುವಷ್ಟು ಜ ತಿ ಕನ್ನಡಿಗನ ಬುದ್ಧಿಗ ಸ್ಪಷ್ಟವಾಗದ ... ಕಣ್ಣಿನ ಅರ್ಥ ಕಣ್ಣು ... ಇಲ್ಲದವನಿಗೆ ಜಿನ್ನಾಗಿ ... ತ್ತದ

ಯಾವದೊಂದು ಜನಾಂಗವು ... ಬೇಕಾದರೆ ಅದಕ್ಕೊಂದು ಭಾಷೆ ಬೇಗತ್ಯ. ಅದು ... ಮನುಷ್ಯನ ಸಾಮಾನ್ಯ ವ್ಯವಹಾರಗಳಿಗೆ ಉಪಯುಕ್ತವಾಗುವಷ್ಟೇ ಇದ್ದರೆ ಸಾಲದು ಆ ಭಾಷೆಗೊಂದು ಬರಹ, ಉತ್ತಮ ಗ್ರಂಥರಾಶಿ ಗ್ರಂಥಗಳನ್ನು ಅನುಭವಿಸುವ ಜನರು ಇರಬೇಕು. ಜನಾಂಗವು ಬಾಳುವದು. ಇಲ್ಲದಿದ್ದರೆ ಆ ಜನಾಂಗವು ಸಂಸ್ಕಾರಗಳಿಲ್ಲ ಬದುಕಿ ಬದುಕದಂತಾಗಿದ್ದೀತು ... ಭಾಷೆಯು ಮೌಲ್ಯಗಾದರ ಜನರಳ ... ಮಣಿಗಳಾಗುತ್ತವ ... ಜನಾಂಗವು ಕ್ಷಯಿಸುತ್ತದ

ಕನ್ನಡದ ಘನತೆ.

ಕನ್ನಡವು ಒಂದೂಕಾಲು ಕೋಟಿ ಜನರು ಆಡುವ ಮುದ್ದು ಮಾತಿನ ಬಳುವ ... ಇಷ್ಟು ಪ್ರಾಚೀನ, ಶಕ್ತ, ಪ್ರೌಢ ಭಾಷೆ ಹಿಂದುಸ್ಥಾನದಲ್ಲಿ ಮತ್ತೊಂದು ಇದ್ದೀತೇ ಎಂದು ನನ್ನ ಶಂಕೆ ... ಭಾಷೆ ದೊರಕಿರುದು ಕನ್ನಡಿಗನ ಪುಣ್ಯ! ಕ್ರಿಸ್ತ ಶಕದ ಪೂರ್ವದಲ್ಲೇ ಅಲ್ಲಲ್ಲಿ ಚೆಲ್ಲ ಚೆದರಿದಂತಿದ್ದ ... ಮಾನವ ಜೈನರು ಸಂಸ್ಕೃತ ಪರ್ವಣಿದಿಂದ ಪುಟಕ್ಕಿಟ್ಟ ಸೂತ್ರಗಳಿಗ ಸರಿಬರುವ ಹಾಗೆ ಮಾಡ ... ವೈಯಾಕರಣರು ನ ... ಹೊರಯಿ... ಕತವಾನದಿಂದ ... ಅಧಿಕಾರರೂ ... ಗಾನವರೂ ಒಳ್ಳೆ ಕೊಟ್ಟಿದ್ದ ಕರ್ನಾಟಕದ ... ಶಿಲಾಶಾಸನಗಳಲ್ಲಿ ... ಹೂಯ್ದಂತಿದ್ದ ... ಹದ ಭಂಡಾರಕ್ಕೆ ಭಾಗಿಯಾದ ಕನ್ನಡಿಗನು ಎಷ್ಟು ಧನಾಢ್ಯನು! ಈ ದನವಿರುವಷ್ಟು ಕಾಲ ಕನ್ನಡಿಗನಿಗ ಸೋಲಿಗ ಕಡಮೆ ಇತ್ತೇ?

ಮಧ್ಯದಲ್ಲಿ ದುಃಸ್ಥಿತಿ

ಹೀಗಿದ್ದರೂ ಕನ್ನಡವು ಮುಂದೆ ಮುನ್ನೂರು ವರ್ಷ ... ವಿಜಯನಗರದ ಸಾಮ್ರಾಜ್ಯವು ಧ್ವಂಸವಾಗಿ, ಕನ್ನಡ ನಾಡಿನ ತುಂಡುಗಳಿಂದ, ಕನ್ನಡವನ್ನು ಕೇಳುವವರಿಲ್ಲದೆ ಹೋಯಿತು ... ಒಡೆಯರುಗಳಿಂದಲೂ, ಒರ... ಗಳಿಂದಲೂ ... ಇಲ್ಲದಿರುವದರಿಂದಲೂ ಕನ್ನಡವು ದುಃಸ್ಥಿತಿಗಿಳಿಯಿತು ಇಂಗ್ಲಿಷ ವಿದ್ಯಾಭ್ಯಾಸವು ಬಂದು ಕನ್ನಡವನ್ನು ಚೇತರಿಸಬೇಕಾಯಿತು ಇಂಗ್ಲಿಷ ವಾಙ್ಮಯದ ಅಭ್ಯಾಸದಿಂದ ನವ್ಯರೊಳಗ ಭಾಷಾಪ್ರೇಮ, ದೇಶವಾತ್ಸಲ್ಯ ಮೊದಲಾದ ಉದಾತ್ತ ವಿಚಾರಗಳು ಮೂಡಿದವು. ಈ ವಿಚಾರಗಳ ಫಲವೇ ಈ ಸಾಹಿತ್ಯ ಸಮ್ಮೇಳನ

ಇಂಗ್ಲಿಷರ ಮೊದಲು ನಮ್ಮಲ್ಲಿ ಸಾಹಿತ್ಯ ಸಭೆಗಳಿದ್ದವು ... ಸನ್ಮಾನ, ಉತ್ಕೃಷ್ಟ ಕೃತಿಗಳ ಮೆರವಣಿಗೆ, ವೀರ ಶಾಸನಗಳ ಕೆತ್ತಿಗೆ ಮುಂತಾದವುಗಳು ಒಗ್ಗಿ ಸಮ್ಮೇಳನಗಳು ... ದುತ್ತಿದ್ದವು. ಆ ಸಮ್ಮೇಳನಗಳಿಗಿಂತ ಈ ಸಮ್ಮೇಳನದ ಕಾರ್ಯಕ್ಷೇತ್ರವು ವಿಸ್ತಾರವಾದದ್ದು ಈ ಸಮ್ಮೇಳನವು ಪರಸ್ಪರ ಪರಿಚಯ ಮಾಡಿಕೊಡುತ್ತದೆ. ಯೋಗ್ಯ ಸಾಹಿತ್ಯ ರಚನೆಗ ಅನುಕೂಲ್ಯ ಕಲ್ಪಿಸುತ್ತದೆ, ಗ್ರಂಥಕರ್ತರ ಸಮಸ್ಯೆಗಳನ್ನು ಬಿಡಿಸುತ್ತದೆ, ಕರ್ನಾಟಕತ್ವದ ಸಿದ್ಧಿಗಾಗಿ ... ಮಾಡುತ್ತದ ಈ ಸಮ್ಮೇಳನವು ಪ್ರಸಿದ್ಧ ಗ್ರಂಥಗಳನ್ನು ಪರಿಷ್ಕರಿಸಿ ... ಈ ಸಮ್ಮೇಳನದ ಮೂಲಕ ಒರಸ್ಪರ ಪರಿಚಯವಾಗಿ ಅಲ್ಲಲ್ಲಿ ಸಂಘ, ಗ ... ಕಾಲೇಜುಗಳಿ, ... ಸಮಾರಂಭಗಳೂ, ಕವಿಗಳ ಸ್ಮರಣೆಯೂ, ಗ್ರಂಥ ಪ್ರದರ್ಶನಗಳೂ ನಡೆಯುತ್ತವೆ ... ಕೆ ಪ್ರಕಟಣಾ ... ಪೆಟ್ಟಿದ, ಗ್ರಂಥಗಳು ... ಹುಟ್ಟಿವೆ, ಮುದ್ರಣವು ... ಗತ್ತಿದೆ ಇದ ... ಶ್ರೇಯಸ್ಸು ಈ ಪರಿಷತ್ತಿಗೆ ಸಲ್ಲತಕ್ಕದ್ದು

ನೂತನ ಪದ್ಧತಿಯ ಸಾಹಿತ್ಯ

ಇತ್ತೀಚಿಗೆ ಕನ್ನಡ ಸಾಹಿತ್ಯರಚನೆಯಲ್ಲಿ ಒಂದು ನವೀನ ಮಾರ್ಗವು ಕಣ್ಣಿಗೆ ಬೀಳುತ್ತಿದೆ ... ಗ್ರಂಥ ... ವಿಷಯ, ಸ ... ತಿಳಿಸಿಕೊ ... ದವ ಗ್ರಂಥಗಳು ಇದ್ದಿಲ್ಲ ... ಸಾಹಿತ್ಯ", ಪ್ರತಿಭೆ ... ಮೊದಲಾದ ... ಗಳು, ಮನಸ್ಸಿನ ... ಕ್ಕೆ ... ತಿದ್ದುವಂಥ ಗ್ರಂಥವನ್ನು ... ಕವಾದ ... ಬೆಳೆದ ಒಂದಿದ ಗ್ರಂಥ ... ಈ ... ಯೆಂದು ... ಸ್ವತಂತ್ರ ... ಸಾಮಾಜಿಕ ... ಹಾಡಬಹುದು

ಕಾವ್ಯದಲ್ಲಿ ಧ್ವನಿಶಕ್ತಿ

ಇತ್ತೀಚಿಗೆ ಗ್ರಂಥವಿಮರ್ಶೆ ... ಒಂದ ಒಂದು ಹೊಸ ... ಎಂದ ... ಸಾಂಕೇತಿಕ ... ಇಲ್ಲ, ಯಮ... ಸಂಸ್ಕೃತ ಅಲಂಕಾರ ... ಜ್ಞಾರ ... ಯಲ್ಲಿ ಶ್ರೀ ಬೆಂದ್ರ ... ಶ್ರೀ ಮಾಸ್ತಿಯವರು ಪದಶಕ್ತಿಯ ವಿಚಾರ ಮಾಡಿರುತ್ತಾರೆ ಪದಶಕ್ತಿಯ ವಿಮರ್ಶ ಮಾಡುವರು ಶ್ರೀ ... ನವರು ಉಚ್ಚಾರಣೆಯಿಂದ ಕವಿಗಳ ಮೇಲೆ ಒಂದು ವಿಧದ ಪರಿಣಾಮವನ್ನುಂಟು ಮಾಡುವ ಅಕ್ಷರಸಂಯೋಗವು ಮನೋಭಾವನೆಗಳ ವ್ಯಕ್ತತೆಗೆ ನೆರವಾಗುತ್ತದೆಂದು ಗುಂಡಪ್ಪನವರು ವಿವರೀಕರಿಸಿರುವರು ಇದೇ ದೃಷ್ಟಿಯಿಂದ ಈ ಶಕ್ತಿಯು ಕನ್ನಡದಲ್ಲಿದ್ದಷ್ಟು ಪರಭಾಷೆಗಳಲ್ಲಿ ಕಂಡುಬರುವದಿಲ್ಲ. ಈ ಅಮೂಲ್ಯ ಪದಾರ್ಥವು ಕನ್ನಡಿಗರ ಬೊಕ್ಕಸದಲ್ಲಿ ಅಗಣಿತವಿದೆ ಇದರ ರಕ್ಷಣ ಮಾಡುವದು ಅವಶ್ಯವಿದ ಈ ವಿಷಯ ದೃಷ್ಟಾಂತ ಕೊಡುವನು

ಗಬ್ಬದ ಮೇಲಣ ಲಕ್ಷ್ಮೀಶನ ಒಳ್ಳೆ ... ಸಮುದ್ರದ ಸ್ವರೂಪ ನೋಡಿದ್ದಿತೇ ಇಲ್ಲವೋ ಕೇಳಿ—

"ಪಲಯುದಮುಲ ಸೌಭಾಗ್ಯ ರತ್ನಾಕರಂ
ಪೇರ್ಚಿನಿಂ ಮೇರೆವರಿಯೆ—"

ಇಲ್ಲ 'ಪಲಯುದಮುಲ' ಈ ಅರು ಹ್ರಸ್ವ ವರ್ಣಗಳು ... ತೆರೆಗಳನ್ನು ಸೂಚಿಸುತ್ತಿವ ... ಅಲೆ ಅಲೆಯಾಗಿ ಕದಲಿದ ನೀರು ... 'ಏಕದ ... ರಿಬರುವದನ್ನು 'ಸೌಭಾಗ್ಯ ರತ್ನಾಕರಂ' ಪದಗಳು ಧ್ವನಿಸುತ್ತವೆ ಏರಿದ ತೆರೆಯು ತುಂಡಾಗುವ ... 'ಪೇರ್ಚಿನಿಂ' ಪದದಲ್ಲ ವ್ಯಕ್ತವಾಗಿದೆ. ... ನೀರು ಸೂರೆಯಾಗಿ ... ಹರಿದು ... ಹೋಗುವದನ್ನು 'ಮೇರೆವರಿಯೆ' ಪದವು ಅಂಕಿಸುತ್ತದೆ ... ಭಾ' ಎಂಬ ಮಹಾಪ್ರಾಣವು ... ಒಂದು ವಿಚಿತ್ರ ಪರಿಣಾಮ ಉಂಟುಮಾಡುತ್ತದೆ ಇದೇ ಧ್ವನಿಶಕ್ತಿ.

ಕುಮಾರ ವ್ಯಾಸನ ಭಾರತದೊಳಗಿನ ಈ ಉದಾಹರಣ ನೋಡಿರಿ.

'ಬೀಸು, ಒಳವಾರಾತಿ ಸೇನಾ | ಬೀಸು, ಕುರುಕ ... ಕುಸುಮಮಾರ್ಗಣ | ಬೀಸು ....

ತನ್ನ ... ವಲ್ಲಭೆಯು ಬಾಯಿಂದ ಕೇಳದನ್ನು ... ಎಂದು ಕವಿಯು ... 'ಬೀಸು' ಎಂಬ ಪದದ ಪುನರುಕ್ತಿ ಮಾಡಿದ್ದಾನೆ ... ತೆಯು ಸೂಚನಗ ... ಮಹಾಪ್ರಾಣದ ಪ್ರಯೋಗ, ಪೌರುಷ, ಸೈನ್ಯವಿಸ್ತಾರ ತೋರಿಸಲಿಕ್ಕೆ ... ಸ್ವರಗಳು ... ಲಘುತ್ವ ತೋರಿಸಲಿಕ್ಕೆ ಲಘುಸ್ವರಗಳು. ಮಾರ್ಗಣ ... ದೇಹವು ತುಂಡಾಗಿ ಕತ್ತರಿಸುವ ಭಾವವನ್ನು ಸೂಚಿಸುತ್ತದೆ

ಈ ಧ್ವನಿಶಕ್ತಿ ವಿಸ್ತರಿಸಿ ಹೇಳುವದರಲ್ಲಿ ನನ್ನ

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ

ಜೀವವಿಮೆಯ ಒಳ್ಳೆಯ ಎಲ್ಲ ಕಾರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ—ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ !!

[ವಿ ಸೂ 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ]

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!

ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು.—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು — ಮೊಸರ್ಸ ಜೀವನ ಏಜನ್ಸಿ, ಕಾರವಾರ.

ದರೊಂದು ಉಪೇಕ್ಷಣೀಯ ಶಾಸ್ತ್ರದೀವನು ಹೊಸಗನ್ನಡ ಪ್ರಯೋಗದ ಹಳಗನ್ನಡದ ವಾಹನದಲ್ಲೇ ಏತಕ್ಕೆ ನಿಂತನು? ಕನ್ನಡ ಶಬ್ದಗಳ ಹೊಸ ರೂಪಗಳಿಗಿಂತ ಹಳೆಯವುಗಳಲ್ಲಿ ಧ್ವನಿಶಕ್ತಿ ಅಧಿಕವೆಂದು ಕವೀಶ್ವರರು ಮನಗಂಡಿರಬಹುದಲ್ಲವೇ? ಹಳಗನ್ನಡದಲ್ಲಿ ಒರುವ ನ್, ರ್ ವ್ಯಂಜನಗಳಿಂದಲೂ ವಾದಿ, ಗಾದಿ, ನಾದಿ ಶಬ್ದಗಳ ಆಧಿಕ್ಯದಿಂದಲೂ ಹಳಗನ್ನಡಕ್ಕೆ ಸ್ವಾಭಾವಿಕ ಮೃದುಮಧುರ ನಾದವಿದೆ ಹಳಗನ್ನಡದ ವ್ಯಂಜನಾಂತ ಶಬ್ದಗಳು ಸ್ವರಾಂತಗಳಾಗಿ ಹೊಸಗನ್ನಡಕ್ಕೆ ಇಳಿಯುವಾಗ ಧ್ವನಿಶಕ್ತಿ ಅರುಕ್ಕಿದೆ. ಧ್ವನಿಶಕ್ತಿಯ ಮರ್ಮವು ಕೆಲವು ಹೊಸಗನ್ನಡದ ಗ್ರಂಥಗಳಲ್ಲಿಯೂ ಕಾಣುತ್ತದೆ. ಗದ್ಯಕ್ಕೆ ಆವಶ್ಯಕವಾದ ಮಾರ್ದವ ಮಂಜುಲತ್ವಗಳು ಪ್ರಾಪ್ತವಾಗಬೇಕು ವಾಚಕರು ಕವಿಯ ಧ್ವನಿಶಕ್ತಿಯನ್ನು ಸಂಗೀತದಲ್ಲಿ ಮುಳುಗಿಸಿ ಕೊಳ್ಳದಿರಲಿ

ಪ್ರಾಚೀನ ಗ್ರಂಥಗಳಲ್ಲಿ ಶ್ಲೇಷಾರ್ಥವು ನೋಯಿಸುತ್ತಿತ್ತು. ಶಬ್ದಕೋಶಗಳ ಅಭಾವದಲ್ಲಿ ಹಿಂದಿನ ಗ್ರಂಥಕಾರರು ಒಗಟು-ಪದ್ಯಗಳನ್ನು ಉಪಯೋಗಿಸುತ್ತಿದ್ದರು ಸಂಗ್ರಹಕಾರರು ಉತ್ತಮ ಕಾವ್ಯಗಳನ್ನು ಆಯ್ದುಕೊಂಡು, ಅವುಗಳಲ್ಲಿಯ ಅಸಭ್ಯ, ಕ್ಷತಕ ಭಾಗಗಳನ್ನು ತೆಗೆದುಹಾಕಿ ಪ್ರಸಿದ್ಧಿಗೆ ತಂದರು ಹೀಗೆ ಪರಿಷ್ಕರಿಸಿ ನಿರ್ಮಿಸಿದ ಸಾಹಿತ್ಯದ ಮೇಲೆ ಯಾವದೇ ದೋಷಾರೋಪಣೆಯಿಲ್ಲ: ಹೊಸಗನ್ನಡ ಪುಸ್ತಕಗಳ ಬಗ್ಗೆ ದೂಷಣೆಯಿದೆ. ಹೊಸ ಸಾಹಿತ್ಯವು ಮಕ್ಕಳ ಕಥೆ, ಸಣ್ಣ ಕಥೆ, ಕವಿತೆ, ಕಾದಂಬರಿ, ನಾಟಕ ಹೀಗೆ ನಾನಾ ರೂಪಗಳನ್ನು ಧರಿಸಿದೆ. ವರ್ಷದಲ್ಲಿ ನೂರಾರು ಪುಸ್ತಕಗಳು ಪ್ರಕಟವಾಗುತ್ತವೆ ಕೆಲವು ಸ್ವತಂತ್ರ ಗ್ರಂಥಗಳು; ಕೆಲವು ಅನುವಾದಗಳು ಪತ್ರಿಕೆಗಳಲ್ಲಿ ಆಗಾಗ ಆಗುವ ವಿಮರ್ಶೆಗಳ ಮೇಲಿಂದ, ಹೊಸ ಪುಸ್ತಕಗಳಲ್ಲಿ ಸಣ್ಣ ಕಥೆಗೆ ಆದರಣೆ, ನಾಟಕಗಳ ಬಗ್ಗೆ ತಾಟಸ್ಥ್ಯ ಮತ್ತು ಹೊಸ ಕವನಗಳ ಬಗ್ಗೆ ದೂಷಣೆ ಕಂಡುಬರುತ್ತಿದೆ. ಈ ದೃಷ್ಟಿಭೇದವು ವ್ಯಕ್ತಿಮೂಲಕವೋ, ಪಕ್ಷಪಾತಮೂಲಕವೋ ತಿಳಿಯದು ಒಬ್ಬನೇ ಗ್ರಂಥಕಾರನ ನಾಟಕವಾದರೆ ಆಕ್ಷೇಪಣೆಯಿಲ್ಲ, ಕವನಗಳಾದರೆ ಅಸಮಾಧಾನ. ಇದರಲ್ಲಿ ಪಕ್ಷಪಾತದ ಮಾರು ಸರಿಯಲ್ಲ. ಈ ತಿರಸ್ಕಾರಕ್ಕೆ ಪ್ರಾಸಭಂಗವೇ ಕಾರಣವೆಂದು ನನ್ನ ಎಣಿಕೆ. 'ಪ್ರಾಸವಿರುವ ಕವಿತೆಯೇ ಪ್ರಾಮಾಣಿಕ' ಎಂದು ನಡೆದು ಬಂದಲ್ಲಿ ಪ್ರಾಸಲೋಪವು ಅಸಹನವಾದರೆ ಆಶ್ಚರ್ಯವೇನು? ಪ್ರಾಸವಿಲ್ಲದೆ ಹೋದರೆ ಗದ್ಯ-ಪದ್ಯಗಳ ಭೇದವಳಿದು ಅವ್ಯವಸ್ಥೆ ಉಂಟಾಗಲಿಕ್ಕಿಲ್ಲವೇ? ಹೀಗೆ ಕೆಲವರು ಹೇಳುತ್ತಾರೆ ಹೊಸಬರು ಪ್ರಾಸ ತಿರಸ್ಕರಿಸಿದ್ದರಿಂದ ಸಹಜತೆ — ಸರಳತೆಗಳು ತಲೆದೋರಿವೆ ಪ್ರತಿಭೆಯಿಲ್ಲದ ಪ್ರಾಸಬದ್ಧವಾದ ಕವಿತೆಗಳು ಹಳೆಯವಾದರೂ ಉಳಿಯಲಾರವು, ಪ್ರಾಸವಿಲ್ಲವೆಂಬ ಒಂದೇ ಕಾರಣದಿಂದ ಹೊಸ ಕವಿತೆಗಳು ಅಳಿಯಲಾರವು. ಕಾವ್ಯಕ್ಕೆ ಪ್ರತಿಭೆಯೇ ಜೀವಕಳೆ

"ಹೊಸ ಕವನ"ಕಾರರಲ್ಲಿ ಅನೇಕರು ಹಳಗನ್ನಡದಲ್ಲಿ ನುರಿತವರು, ಸಂಸ್ಕೃತಾಭಿಜ್ಞರು, ಇತರ ವಾಙ್ಮಯಗಳ ಪರಿಚಯವಿದ್ದವರು ಇರುತ್ತಾರೆ. ಇಂಥವರು ಗೊಂದಲವೆಬ್ಬಿಸಿ ಕನ್ನಡದ್ರೋಹ ಮಾಡುವರೆಂದು ತಿಳಿಯಲಾಗದು. ಹೊಸ ಕವನಗಳಲ್ಲಿ ಉತ್ತಮ ಭಾವಗೀತಗಳು ಅನೇಕ ಇವೆ ಆದರೆ ಹೊಸ ಕವಿತೆಗಳೆಲ್ಲ ಮೇಲ್ತರಗತಿಯವೆಂದು ಯಾರೂ ಹೇಳರು ಅವು ನಡೆ ಕಲಿಯುವ ಬಾಲಕರ ತಪ್ಪು ಹೆಜ್ಜೆಗಳು. ಇಂಥ ಕುಸ್ತಿಯ ಸಾಧಕ ಮಾಡಿಯೇ ರನ್ನನು 'ಗದಾಯುದ್ಧ' ಮಾಡಿದನೆಂಬುದನ್ನು ಮರೆಯಲಾಗದು.

ಹೊಸಗನ್ನಡದ ಗ್ರಂಥಾವತರಣದಿಂದ ನಮ್ಮ ಸಂಸ್ಕೃತಿಗೆ ಭಂಗ ಬಂದೀತೆಂಬುದೊಂದು ಕೆಲವರ ಭೀತಿ. ಅವರಿಗೆ ಹೊಸ ನಾಟಕಗಳ ಪಾತ್ರಸೃಷ್ಟಿಯು ಸಮ್ಮತವಾಗುವದಿಲ್ಲ. ಪುರಾಣೇತಿಹಾಸಗಳ ಕಥೆಗಳನ್ನು ನಾಟಕಕ್ಕೆ ಸರಿಯಾಗಿ ಬದಲಿಸಿಕೊಂಡರೆ ಅದು ಅತ್ಯಾಚಾರವೆಂದು ಅವರಿಗೆ ಅಸಮಾಧಾನವಾಗುತ್ತದೆ "ದೀನಗಿಂತ ದೇವ ಒಡವನೆಂದು ಬಗೆದೆಯಾ?" ಎಂಬ ಅಸ್ಪೃಶ್ಯರ ಪದ್ಯದಿಂದ ಶಾಸ್ತ್ರಿಗಳು ನೊಂದುಕೊಳ್ಳುತ್ತಾರೆ. ಈ ಆಕ್ಷೇಪಣಗಳು ಸರಿಯಲ್ಲ ಕವಿಯ ಮಾತು ಕವಿಗಳಿಟ್ಟ ಸಂದರ್ಭದಲ್ಲಿ ಓದಬೇಕು, ಅಲ್ಲಿಂದ ಕಳಚಿದರೆ ವಿಪರೀತಾರ್ಥ ಕೊಡುತ್ತವೆ ನಮ್ಮ ಸಂಸ್ಕೃತಿಗೆ ಸಾಹಿತ್ಯದ ಜ್ಞಾನದಿಂದ ಬಾಧೆಯಿಲ್ಲ. ಆದರೆ ಜ್ಞಾನ ಮತ್ತು ಸಂಸ್ಕೃತಿಗಳೊಳಗಣ ಭೇದ ನಾವು ಲಕ್ಷ್ಯದಲ್ಲಿಡಬೇಕು ಜ್ಞಾನ ಮತ್ತು ಸಂಸ್ಕೃತಿಗಳು ಭಿನ್ನವಿರುತ್ತವೆ ಒಂದು ಜನಾಂಗದ ಜ್ಞಾನ ಬೇರೆ, ಸಂಸ್ಕೃತಿ ಬೇರೆ ಜ್ಞಾನವೆಂದರೆ ಗಣಿತ ಸಿದ್ಧಾಂತಗಳ, ವಿಜ್ಞಾನ ಶೋಧಗಳ, ಕಸಬುಗಾರಿಕೆಗಳ ಜ್ಞಾನ ಸಂಸ್ಕೃತಿಯೆಂದರೆ ಧರ್ಮ, ಆಧ್ಯಾತ್ಮ ವಿಚಾರ, ನೀತಿಕಲ್ಪನ, ಆಚಾರವ್ಯವಹಾರಗಳು ಮಾನವ ಸಂಸ್ಕೃತಿಯು ಜ್ಞಾನದಿಂದ ಜನಿಸಿ, ಮಾನವನು ಮುಂದುವರಿದಂತೆ ಬೇರೆಯಾಗಿ ನಿಂತು ಅನುರೂಪ ಸ್ಥಿತಿ ತಾಳುವದು, ಆದ್ದರಿಂದ ಭಿನ್ನ ಭಿನ್ನ ಜನಾಂಗಗಳ ಸಂಸ್ಕೃತಿಯು ಭಿನ್ನ ಭಿನ್ನವಾಗಿದೆ. ಆದರೆ ಜ್ಞಾನದಲ್ಲಿ ವೈವಿಧ್ಯವಿಲ್ಲ, ಎಲ್ಲ ಕಾಲದಲ್ಲಿ ಅದು ಒಂದೇ ಜ್ಞಾನವನ್ನು ಪರರಿಗೆ ಕೊಟ್ಟು ಪರರಿಂದ ತರಬಹುದು ಆದರೆ ಸಂಸ್ಕೃತಿಯ ವ್ಯಾಪಾರ ಸುಲಭ ಸಾಧ್ಯವಲ್ಲ ರಾಷ್ಟ್ರೋನ್ನತಿಗೆ ಜ್ಞಾನ ಸಂಸ್ಕೃತಿಗಳ ಅಭಿವೃದ್ಧಿ ಅಗತ್ಯ. ರಾಷ್ಟ್ರೋನ್ನತಿ ಜ್ಞಾನವನ್ನು ಅವಲಂಬಿಸಿದೆ, ಸಂಸ್ಕೃತಿಯನ್ನಲ್ಲ. ಸಂಸ್ಕೃತಿಯಿಲ್ಲದೆ ಬರಿಯ ಜ್ಞಾನವೃದ್ಧಿಯ ಬಲದಿಂದಲೇ ಮೇಲಿಂದ ರಾಷ್ಟ್ರೋನ್ನತಿ ಚಿರಕಾಲ ಬಾಳದು, ಸಂಸ್ಕೃತಿಯ ಜಾಡ್ಯ ನಿವಾರಣೆಗೆ ಪರರಿಂದಾದರೂ ಜ್ಞಾನೌಷಧ ತಂದು ಹಿಂಜರಿಯುವ ಜನಾಂಗವು ಶ್ರೇಯೋಭಿವೃದ್ಧಿ ಪಡೆಯದು. ಜ್ಞಾನವು ನಿರ್ಗುಣ, ಅದನ್ನು ಇತರರಿಂದ ಪಡೆಯಬೇಕು. ಜ್ಞಾನದ ಸ್ವೀಕಾರ-ಪ್ರಸಾರಗಳು ಗ್ರಂಥಕಾರರಿಂದ ನಡೆಯಬೇಕು ಜ್ಞಾನಸ್ವೀಕಾರಕ್ಕೆ ಒಪ್ಪದ ಹಿಂದಿನ ಕನ್ನಡ ಗ್ರಂಥಗಳು ಮೂಲೆಪಾಲಾಗಿ ದಾಸರ ಪದಗಳು ಮುಂದೆ ಬಂದವು ದಾಸರು ಕಾಲಕ್ಕೆ ತಕ್ಕ ಜ್ಞಾನ ಹರಡಿ ನಮ್ಮ ಸಂಸ್ಕೃತಿಯ ರಕ್ಷಣೆ ಮಾಡಿದರು ಇಂದಿನ ಗ್ರಂಥಕಾರರು ಪಾಶ್ಚಾತ್ಯರ ಜ್ಞಾನ ಅನುಕರಿಸುತ್ತಾರೆ, ಸಂಸ್ಕೃತಿಯನ್ನಲ್ಲ. ಸಂಸ್ಕೃತಿಯ ಅನುಕರಣಾಗ್ರಹಣ ಕಾಲವು ಹಿಂದಾಯಿತು. ಇಂದು ಜ್ಞಾನ ತೀರ್ಥದ ಸ್ನಾನ ನಡೆದಿದೆ ಹಿಂದಿನ ದಾಸರು ಆ ಕಾಲಕ್ಕನುಗುಣವಾಗಿ ಹಾಡಿದರು, ಇಂದಿನವರು ಈಗಿನ ಪರಿಸ್ಥಿತಿಗನುಗುಣವಾಗಿ ಹಾಡುತ್ತಾರೆ. ಅದರಿಂದ ಸಂಸ್ಕೃತಿಗೆ ಭಂಗವಿಲ್ಲ. ಸಂಸ್ಕೃತಿಯ ಭಂಗವಾಗುವದಾದರೆ ನಮ್ಮ ಅವಿದ್ಯೆಯಿಂದಾಗುವದು, ಪಾಶ್ಚಾತ್ಯ ಜ್ಞಾನದಿಂದಲ್ಲ.

ಸಾಹಿತ್ಯ ಪ್ರಚಾರಕ್ಕೆ ಅಡ್ಡಿ.

ಕನ್ನಡದ ಹೊಸ ಸಾಹಿತ್ಯದ ಬೆಳವಣಿಗೆಗೆ ನಮ್ಮ ಹಳ್ಳಿಗಳಲ್ಲಿರುವ ಬಡತನವೂ ನಿರಕ್ಷರತನವೂ ದೊಡ್ಡ ಆತಂಕಗಳು. ಕನ್ನಡ ಮಕ್ಕಳ ವಿದ್ಯಾಭ್ಯಾಸ ಹೇಗೆ ಮಾಡಿಸಬೇಕೆಂಬ ವಿಷಯದಲ್ಲಿ ಹಿಂದಿನ ಅಧ್ಯಕ್ಷರು ಕೂಲಂಕುಷವಾಗಿ ವಿವರಿಸಿದ್ದಾರೆ. ನಾನು ಆ ಬಗ್ಗೆ ಹೇಳುವ ಅವಶ್ಯಕತೆಯಿಲ್ಲ ಮಕ್ಕಳ ಪುಸ್ತಕಗಳು ಯಾವುದೇ ಇದ್ದರಡ್ಡಿಯಿಲ್ಲ. ಅಕ್ಷರಸಂಯೋಜನೆಯು ಆವಾಂತರ ಮಾತ್ರ ಇರಬಾರದು. ಮಕ್ಕಳ

(೯ನೇ ಪಾನಿನ ಮೇಲೆ ಮುಂದರಿಸಿದೆ).

ಎರಡು ಲಕ್ಷಕ್ಕಿಂತ ಹೆಚ್ಚು—

ಒಕ್ಕಲಿಗರು ಪ್ರತಿ ವರುಷ ತಮ್ಮ ಭೂಮಿಯ ಸಾಗುವಳಿಯನ್ನು

ಕಿರ್ಲೋಸ್ಕರ ಕಬ್ಬಿಣದ ರೆಂಟೆಯಿಂದ

ಮಾಡುತ್ತಲಿದ್ದಾರೆ ಯಾಕೆಂದರೆ- ಭೂಮಿಯು ಹಸನಾಗಿ ಬೆಳೆಯು ಉತ್ಕೃಷ್ಟವಾಗಬೇಕಾದರೆ "ಕಿರ್ಲೋಸ್ಕರ ರೆಂಟೆ" ಉಪಯೋಗಿಸಬೇಕೆಂದು ಒಕ್ಕಲಿಗರು ತಮ್ಮ ೩೦ ವರ್ಷಗಳ ಅನುಭವದಿಂದ ಖಾತ್ರಿ ಮಾಡಿಕೊಂಡಿದ್ದಾರೆ

ಕಿರ್ಲೋಸ್ಕರ ರೆಂಟೆಗಳು ೩೦ ತರದವಿರುವದರಿಂದ ನಿಮ್ಮ ಹೊಲದ ಸ್ಥಿತಿಗೆ ಯೋಗ್ಯವಾದ ರೆಂಟೆಯು ಕಿರ್ಲೋಸ್ಕರ ರೆಂಟೆಗಳಲ್ಲೇ ಸಿಗುವದು ಮಾಹಿತಿ ಪತ್ರಿಕೆಯ ಬಗ್ಗೆ ಇಂದೇ ಬರೆಯಿರಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್,
ಕಿರ್ಲೋಸ್ಕರವಾಡಿ. (ಜಿಲ್ಲಾ- ಸಾತಾರಾ.)

ಯುರೋಪದ ಕಾರಸ್ಥಾನ ಬ್ರಹ್ಮನಿಗೂ ತಿಳಿಯದು!

[ನಿರೀಕ್ಷಕನು ಬರೆದುದು.]

ಯುರೋಪದ ಕಾರಸ್ಥಾನ ಬ್ರಹ್ಮನಿಗೂ ತಿಳಿಯದು. ಅಷ್ಟು ಅದು ಸಂಕೀರ್ಣವಾದುದು. ಹೊರಸೂತ್ರಗಳು, ಒಳಸೂತ್ರಗಳು ಒಂದಕ್ಕೊಂದು ಸಂಲಗ್ನವಾಗಿವೆ. ಅವುಗಳನ್ನು ಬಿಡಿಸಿ ಶತ್ರುಗಳ್ಯಾರು, ಮಿತ್ರರ್ಯಾರು? ಎಂಬ ಸಂಗತಿಯನ್ನು ನಿರ್ದಿಷ್ಟಗೊಳಿಸುವದು ದುಃಸಾಧ್ಯವಾದುದು? ವಾಶಿಂಗಟನ್ ತಹನಾಮೆಯ ಸಂಗತಿಯನ್ನೇ ಆಳವಾಗಿ ವಿಚಾರಿಸಿದರೆ, ಬೇರೆ ಬೇರೆ ದೇಶಗಳೊಳಗೆ ಉಂಟಾಗುವ ಬೇರೆ ಬೇರೆ ಪರಿಣಾಮಗಳು ಹೊಳೆಯುವವು. ಚೀನ ದೇಶದೊಳಗೆ ಪಾರುಪತ್ಯ ನಡಿಸುವದಕ್ಕಾಗಿ ಜಪಾನಕ್ಕೆ ನೌಕಾಬಲ ಬೆಳೆಸಲು ಬೇಕು; ಅಮೇರಿಕೆಯ ಅತ್ತ ಕಡೆ ಹಿತಸಂಬಂಧಗಳಿಗೆ ಬಾಧೆ ತಟ್ಟುತ್ತದಾದ್ದರಿಂದ ಜಪಾನದ ಮಹತ್ವಾಕಾಂಕ್ಷೆಗೆ ಅಮೇರಿಕೆಯವರ ವಿರೋಧ. ನೌಕಾಖಾತೆಯ ಕಾರ್ಯದರ್ಶಿಗಳಾದ ಮಿ|| ಸ್ವಾನಸನ್‌ರವರು ನುಡಿದಂತೆ, ಅಮೇರಿಕೆಯ ನೌಕಾಬಲವು ಅದ್ವಿತೀಯವಾಗಿರದಿದ್ದರೆ, ರಾಷ್ಟ್ರಕ್ಕೆ ಅಪಾಯವಿದೆ. ಹಡಗುಪಡೆಗಳು, ನೌಕಾ ಸೈನಿಕರು ಯಾವಾಗಲೂ ಸಿದ್ಧರಾಗಿರಬೇಕೆಂದು ಅವರ ಅಂಬೋಣ. ಯುದ್ಧಕ್ಕೆ ಕರೆ ಬಂದೊಡನೆ ನೌಕಾದಲ ಒಮ್ಮೆಲೇ ಸಜ್ಜಾಗಿ ಕೂಚು ಮಾಡಬಲ್ಲಾಗಿರಬೇಕು. ವಾಶಿಂಗಟನ್ ತಹನಾಮೆ ರದ್ದಾಗಬಾರದಾಗಿ ಅಮೇರಿಕೆಯವರ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಜಪಾನ ಸರಕಾರವು ಶಾಸ್ತ್ರದಂತೆ ಶನಿವಾರ ತಾ|| ೨೯ನೇ ವಾಶಿಂಗಟನ್ ತಹನಾಮೆ ಧಿಕ್ಕರಿಸುತ್ತದಾಗಿ ಅಮೇರಿಕೆಯ ಸರಕಾರಕ್ಕೆ ತಿಳಿಸಿದೆ. ಈ ಧಿಕ್ಕಾರದ ಪರಿಣಾಮವೇನೆಂದು ಕೇಳುವಿರಾದರೆ, ಬ್ರಿಟಿಶರೂ ಅಮೇರಿಕೆಯವರೂ ಒಕ್ಕಟ್ಟಾಗಬಹುದಂತೆ! ಆದರೆ ಪ್ರತ್ಯಕ್ಷ ತಹನಾಮೆಯಾಗಬಾರದಂತೆ! ಬ್ರಿಟಿಶರು-ಅಮೇರಿಕೆಯವರು ಮಾಡಿದಷ್ಟು ಒಕ್ಕಟ್ಟಿನಲ್ಲಿ ಶಾಂತತೆಯ ಭಂಗವಾಗಬಹುದಂತೆ!! ಆದರಿಂದ ವಿವಕ್ಷಿತ ಸೀಮೆಯೊಳಗೆ ಒಕ್ಕಟ್ಟಾಗುವ ಬಗೆ ಹೇಗೆಂಬ ವಿಚಾರ ನಡೆದದೆ. ತಾತ್ವಿಕ ವಿಚಾರ ಬೇರೆ, ವ್ಯವಹಾರಿಕ ಪರಿಣಾಮ ಬೇರೆ. ಇಂಥ ಸಂಗತಿಯಲ್ಲಿ ನಡಾವಳಿ ಹೇಗಿರಬೇಕೆಂದು ತಿಳಿಯದೆ ವಾಶಿಂಗಟನ್‌ದೊಳಗಿನ ಅಧಿಕಾರಿಗಳು ದಿಙ್ಮೂಢರಾಗಿದ್ದಾರಂತೆ. ಬ್ರಿಟಿಶರ ಸ್ನೇಹ ಬೆಳಸಲು ಅಮೇರಿಕೆಯವರು ಮುಂದಾಗದೆ ಬ್ರಿಟಿಶರೇ ಮುಂದಾಗುವ ನಿರೀಕ್ಷೆ ಮಾಡುವರಂತೆ! ಯುರೋಪದ ರಾಜಕಾರಣದಲ್ಲಿ ಸಿಲುಕಿಕೊಳ್ಳದೆ ಅಲಿಪ್ತರಾಗಿ ಉಳಿದು ಪೆಸಿಫಿಕ್ ಮಹಾಸಾಗರದೊಳಗಿನ ತಮ್ಮ ಪ್ರತಿಷ್ಠೆಯನ್ನು ಕಾಪಾಡುವದೇ ಅಮೇರಿಕೆಯ ಅಧ್ಯಕ್ಷರಾದ ರೂಜ್ವೆಲ್ಟರವರ ಉದ್ದೇಶ. ಬ್ರಿಟನ್-ಅಮೇರಿಕೆಗಳೊಳಗೆ ಸಾಲದ ವಿವಾದವಿದೆ. ಈ ವಿವಾದವನ್ನು ಬಗೆಹರಿಸದೆ ಬ್ರಿಟಿಶರ ಸಹಕಾರವನ್ನು ಅಮೇರಿಕೆಯವರು ಅಪೇಕ್ಷಿಸುತ್ತಿದ್ದಾರೆ

ಜಪಾನಿಯರಂತೆ ಫ್ರಾನ್ಸದ ಸರಕಾರವೂ ವಾಶಿಂಗಟನ್ ತಹನಾಮೆಯನ್ನು ಧಿಕ್ಕರಿಸುವ ವಿಚಾರದಲ್ಲಿದೆ. ವಾಶಿಂಗಟನ್ ತಹನಾಮೆ ರದ್ದಾದ್ದರಿಂದ ಫ್ರಾನ್ಸ-ಇಟಾಲಿ ದೇಶಗಳೊಳಗಿನ ನೌಕಾಪರಿಮಿತಿಯ ತಹನಾಮೆ ರದ್ದಾಗುತ್ತದೆ. ಇಟಾಲಿಯವರು ಬೇಕಷ್ಟು ಹಡಗುಪಡೆ ಬೆಳೆಸಲು ಸ್ವತಂತ್ರರಾಗಿದ್ದಾರೆ. ಭೂಮಧ್ಯ ಸಮುದ್ರದ ಒಡೆತನ ಇಟಾಲಿ-ಫ್ರೆಂಚ ತಹನಾಮೆಯಂತೆ ಈಗ ಫ್ರೆಂಚರ ಕೈಯಲ್ಲಿದೆ. ಅದು ಇಟಾಲಿಯ ಸ್ವಾಧೀನವಾಗತ್ತದೆ. ಇಟಾಲಿಯವರು ಈಗಲೇ ೩೫ ಸಾವಿರ ಟನ್ ಭಾರದ ಎರಡು ಹಡಗುಪಡೆಗಳನ್ನು ಕಟ್ಟಿಸತೊಡಗಿದ್ದಾರೆ. ಇದಕ್ಕೆ ಪ್ರತಿಯಾಗಿ ಫ್ರಾನ್ಸ ದೇಶವು ೩೫ ಸಾವಿರ ಟನ್ನ ತೂಕದ ಎರಡು ಹಡಗುಪಡೆಗಳನ್ನು ಕಟ್ಟಿಸುವರು. ಇನ್ನೂ ಹೆಚ್ಚಿನ ಹಡಗುಪಡೆಗಳನ್ನು ಫ್ರೆಂಚರು ಕಟ್ಟಿಸುವ ಆಲೋಚನೆ ಮಾಡದಿದ್ದರೆ ಭೂಮಧ್ಯ ಸಮುದ್ರದೊಳಗಿನ ಪಾರುಪತ್ಯಾಧಿಕಾರವು ಫ್ರೆಂಚರ ಕಡೆಯಿಂದ ಇಟಾಲಿಯ ಕಡೆಗೆ ಸಾಗಿಹೋಗುತ್ತದೆ. ಬ್ರಿಟಿಶ್ ಪರರಾಷ್ಟ್ರೀಯ ಪ್ರಧಾನರಾದ ಸರ್ ಜಾನ ಸೈಮನ್‌ರವರು ನಾತಾಳ ಹಬ್ಬಕ್ಕಾಗಿ ಕೇನ್ಸ ಪಟ್ಟಣಕ್ಕೆ ಹೋಗುವಾಗ ಶನಿವಾರ ಪ್ಯಾರಿಸ ಪಟ್ಟಣದಲ್ಲಿ ೧ ದಿನ ಉಳಿದು ೧|| ಘಂಟೆ ಫ್ರೆಂಚ ಪ್ರಧಾನ ಮಂಡಳದ ಪ್ರಮುಖರಾದ ಎಮ್. ಫ್ಲೆಂಡಿನ್ ಹಾಗು ಎಮ್. ಲಾವಲ್‌ರವರೊಡನೆ ಯುರೋಪಿಯನ್ ರಾಜಕಾರಣದ ಚರ್ಚೆಯನ್ನು ಅಂತರಂಗದಿಂದ ನಡಿಸಿ ಮುಂದಾದರಂತೆ. ಸಂಭಾಷಣೆಯ ವಿವರ ಪ್ರಕಟವಾಗಿಲ್ಲ

ಜಪಾನಿಯರು ಈ ಹಿಂದೆ ಹೇಳಿದಂತೆ ಬ್ರಿಟಿಶರ ಜೀವದ ಗೆಳೆಯರು. ಚೀನ ದೇಶದೊಳಗಿನ ಮಂಚೂಕೋ ಯಾನೆ ಮಂಚೂರಿಯಾ ಪ್ರದೇಶದೊಳಗಿನ ವ್ಯಾಪಾರವನ್ನು ಅಂಶತಃ ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಬ್ರಿಟಿಶರು ಹೊಂಚುಹಾಕುತ್ತಿದ್ದಾರೆ. ಮಳೆಗಾಲದಲ್ಲಿ ಅತ್ತ ಕಡೆ ಬ್ರಿಟಿಶ ವರ್ತಕರ ಶಿಷ್ಟಮಂಡಳವೊಂದು ಕಳಿಸಲಾಗಿತ್ತು. ಇವರ ರಿಪೋರ್ಟು ಕಳೆದ ವಾರ ಪ್ರಕಟವಾಗಿದೆ. ಚೀನ ದೇಶದ ವ್ಯಾಪಾರದಲ್ಲಿ ಜಪಾನ ಸರಕಾರದೊಡನೆ ಸಹಕಾರ ನೀಡಿ ಬ್ರಿಟಿಶ ಸರಕು ಖರ್ಚು ಮಾಡಲು ಒಳ್ಳೇ ಅವಕಾಶವಿದೆ. ಬ್ರಿಟಿಶ ಸರಕಾರವು ಜಪಾನ ಸರಕಾರದೊಡನೆ ಆಲೋಚಿಸಿ, ಇತ್ತಿಟ್ಟಿಗೂ ಸಾಮಾನ್ಯವಾದ ಒಂದು ಮಂಡಳ ನೇಮಿಸಿಕೊಂಡು ವ್ಯಾಪಾರದ ವ್ಯವಸ್ಥೆ ಮಾಡಿಕೊಳ್ಳಬೇಕಾಗಿ ಶಿಷ್ಟರು ಸೂಚಿಸುತ್ತಾರೆ. ಆದರೆ ಬ್ರಿಟಿಶ-ಜಪಾನಿಯರು ಈ ಕಾರಣದ ಮೂಲಕ ಒಕ್ಕಟ್ಟಾಗತೊಡಗಿದರೆ ಅಮೇರಿಕೆಯವರಂತು ಮುನಿಯುತ್ತಾರೆ. ಜೊತೆಗೆ ಬ್ರಿಟಿಶ ಸಾಮ್ರಾಜ್ಯಕ್ಕೊಳಪಟ್ಟಿದ ಕೆನಡಾ ದೇಶವು ಬ್ರಿಟನ ಮೇಲೆ ಮುನಿಯುತ್ತದೆ. ಕೆನಡಾ ದೇಶವು ಅಮೇರಿಕೆಯ ನೆರೆಹೊರೆಯದಿದ್ದು, ಅಮೇರಿಕೆಯ ಪಕ್ಷಪಾತಿಯಾದ ರಾಷ್ಟ್ರ. ಮಂಚೂಕೋದೊಳಗಿನ ವ್ಯಾಪಾರದ ಸ್ಪರ್ಧೆ ಹಿಡಿದು ಜಗತ್ತಿಗೆ ದ್ರೋಹ ಬಗೆಯಬಾರದೆಂದು ಮಿ|| ವಿಕಾಮ ಸ್ಟೀಡರವರು 'ಹೆಡ್‌ವೇ' ಎಂಬ ಲಂಡನಿನ ಮಾಸಪತ್ರಿಕೆಯ ಮುಖಾಂತರ ಬ್ರಿಟಿಶರಿಗೆ ಎಚ್ಚರಿಕೆ ಕೊಟ್ಟಿದ್ದಾರೆ

ಅಬಿಸೀನಿಯಾದೊಳಗಿನ ಉಲವೆಲ್ ಗ್ರಾಮದ ಮೇಲೆ ಇಟಾಲಿಯರು ಥಕ್ಕನೆ ಹಲ್ಲೆ ಮಾಡಿದ ಪ್ರಕರಣದ ಕುರಿತು ಕಳೆದ ಸೋಮವಾರ ಇಟಾಲಿಯ ಮುಸೊಲಿನಿಯವರು ರಾಷ್ಟ್ರಸಂಘದ ಬಳಿ ಖುಲಾಸೆ ಅಂತ ಮಾಡಿಕೊಂಡರು: "ಅಬಿಸೀನಿಯಾದವರು ಇದೇ ಪ್ರಕಾರ ಕಾಲು ಕೆದರಿ ಬಹು ಕಾಲದಿಂದ ಜಗಳ ಮಾಡುತ್ತಿದ್ದಾರೆ. ಅಬಿಸೀನಿಯಾದ ಸೇನಾಪತಿಗಳು ತಮ್ಮ ಬಲ ತತ್ಕಾಲದಲ್ಲಿ ಹೆಚ್ಚಿದೆಂಬ ಗರ್ವದಿಂದ ಒಮ್ಮೆಲೇ ಸಾಗಿಬಂದು, ಉಲವೆಲ್ ಗ್ರಾಮವನ್ನು ಕೈವಶ ಮಾಡಿಕೊಳ್ಳಲುದ್ಯುಕ್ತರಾದರು. ೧೯೨೮ನೇ ಇಸ್ವಿಯಲ್ಲಿ ಅಬಿಸೀನಿಯಾ ಮತ್ತು ಇಟಾಲಿ ದೇಶದೊಳಗೆ ತಹನಾಮೆಯಾದಂತೆ, ೧೯೦೮ನೇ ಇಸ್ವಿಯಲ್ಲಿ ಸೀಮೆ ನಿರ್ಣಯದ ಕಾರ್ಯ ಕೈಕೊಂಡಿತ್ತು. ಆದರೆ, ಅಬಿಸೀನಿಯಾದವರು ಅಲ್ಲಿನ ಅಡ್ಡಿಗಳನ್ನು ಮುಂದೊಡ್ಡಿ ಕಾರ್ಯಹಾನಿ ಮಾಡಿದರು. ತಹನಾಮೆಯಂತೆ ಈಗಲೂ ನಡಕೊಳ್ಳಲು ಇಟಾಲಿಯರು ಸಿದ್ಧರೇ. ಆದರೆ ಪಂಚಾಯತಿಗೆ ಕೊಡುಕೊಳ್ಳಬೇಕಾದರೆ ಮೊಟ್ಟಮೊದಲು ಅಬಿಸೀನಿಯಾ ಸರಕಾರವು ಕ್ಷಮೆ ಬೇಡಬೇಕು; ನಷ್ಟಭರಪಾಯಿ ರಕಮು ತೆರಬೇಕು." ಹೀಗೆ ಖುಲಾಸೆ ಮಾಡಿ, ಮುಸೊಲಿನಿಯವರು ರಾಷ್ಟ್ರಸಂಘದ ಮಧ್ಯಸ್ಥಿಕೆಯನ್ನು ಧಿಕ್ಕರಿಸುತ್ತಿದ್ದಾರೆ. ಅಬಿಸೀನಿಯಾ ರಾಜ್ಯಕ್ಕೆ ಒಪ್ಪಿದ ರಾದೀರ, ಅಡ್ವಾ, ಗುರ್ಲೋಗುಬಿ ಪಟ್ಟಣಗಳಲ್ಲಿ ಇಟಾಲಿಯವರು ಬಲಾತ್ಕಾರದಿಂದ ಮೋಟಾರು ಮಾರ್ಗ ಕಟ್ಟಿಸಲಾರಂಭಿಸಿದ್ದಾರೆ. ಗುರ್ಲೋಗುಬಿಯು ಅಬಿಸೀನಿಯಾದ ಸ್ವಸ್ವಾಮ್ಯ. ಅಲ್ಲಿ ಇಟಾಲಿಯ ವಿಮಾನಗಳು ಹಾರ್‍ಯಾಡುತ್ತಿವೆ. ಅಫದೂಬ ಪಟ್ಟಣವನ್ನು ಇಟಾಲಿಯವರು ಕೈವಶ ಮಾಡಿಕೊಂಡರು. ಈ ಕುರಿತು ಅಬಿಸೀನಿಯಾ ಸರಕಾರವು ರಾಷ್ಟ್ರಸಂಘದ ಬಳಿ ದೂರಿಕೊಂಡಿದೆ. ಬಲಾತ್ಕಾರದ ಸಂಗತಿಯನ್ನು ಇಟಾಲಿಯ ರಾಯಭಾರಿಗಳು ಸಂಪೂರ್ಣವಾಗಿ ನಿರಾಕರಿಸುತ್ತಾರೆ.

ಇಟಾಲಿ-ಅಬಿಸೀನಿಯಾ ಕಲಹದ ಕಾರಣವು ಪ್ಯಾರಿಸದೊಳಗಿನ 'ನೊವೆಲಿ ದಿಪೆಚ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸೋಮಾಲಿ ಪ್ರಾಂತವೂ, ಅಬಿಸೀನಿಯಾ ದೇಶವೂ ಕೆಂಪು ಸಮುದ್ರ ಗುಂಟದ ಪ್ರದೇಶಗಳು, ಇಟಾಲಿಗೆ ವಸಾಹತು ಮಾಡಲು ಇಲ್ಲಿ ಒಳ್ಳೇ ಇಂಬಿದೆ. ಅತ್ತ ಇಟಾಲಿಯ ಒಡೆತನ ಹಬ್ಬಿದರೆ, ಕೆಂಪು ಸಮುದ್ರದ ದಾರಿಯಿಂದ ಅರಬೀ ಸಮುದ್ರದ ಮಾರ್ಗವಾಗಿ ಹಿಂದೀ ಮಹಾಸಾಗರಕ್ಕೆ ಪ್ರವೇಶ ಮಾಡಲು ಇಟಾಲಿಗೆ ಸಮುದ್ರ ಮಾರ್ಗ ದೊರೆಯುವದಾಗಿ ವಸಾಹತು ಪ್ರಧಾನರಾದ ಬೋನೋರವರ ಅಭಿಪ್ರಾಯವಿರುತ್ತದೆ. ಅವರ ಕಾರ್ಯದರ್ಶಿಗಳಾದ ಸಿನೋರ ಲಿಸೋನಾರವರು ಇದೇ ಪ್ರಕಾರ ಅಭಿಪ್ರಾಯಪಡುತ್ತಾರಂತೆ. ಆದರೆ ಅಬಿಸೀನಿಯಾ ದೇಶದಲ್ಲಿ ಇಟಾಲಿಯ ಪ್ರಭುತ್ವ ಬೆಳಸಲು ಬ್ರಿಟಿಶ-ಫ್ರೆಂಚರ ಒಪ್ಪಿಗೆಯಿಲ್ಲ. ೧೯೦೬ನೇ ಇಸ್ವಿಯಲ್ಲಿ ಫ್ರಾನ್ಸ, ಇಂಗ್ಲಂಡ, ಇಟಾಲಿ ದೇಶಗಳೊಳಗೆ ಆದ ತಹನಾಮೆಯಂತೆ ಇಟಾಲಿಗೆ ಈ ಪಾರ್ಶ್ವದಲ್ಲಿ ಪ್ರಸ್ಥ ಬೆಳಸಬಾರದಾಗಿ ಕಟ್ಟಪ್ಪಣೆ ಇದೆ. ಕೆಂಪು ಸಮುದ್ರ, ಅರಬೀ ಸಮುದ್ರ, ಹಿಂದೀ ಮಹಾಸಾಗರ ಮೊದಲಾದವುಗಳೆಲ್ಲ ನಮ್ಮ ಹಿಂದುಸ್ಥಾನಕ್ಕೆ ಸಂಬಂಧಪಟ್ಟವು. ಇಲ್ಲಿ ಇಟಾಲಿಗೆ ಚಂಚುಪ್ರವೇಶ ಕೊಡಲು ಬ್ರಿಟಿಶರು ಎಷ್ಟಕ್ಕೂ ಒಪ್ಪರು. ಮುಸೊಲಿನಿಯವರಂತು, ಅಬಿಸೀನಿಯಾದವರ ಗೋಣು ಮುರಿಯಲು ಟೊಂಕಕಟ್ಟಿ ನಿಂತಿದ್ದಾರೆ! ರಾಷ್ಟ್ರಸಂಘದ ಪರಿವೆಯನ್ನು ಅವರು ಲೆಕ್ಕಿಸುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಮುಂದೇನಾದೀತೆಂದು ನಾನು ಹೇಗೆ ಹೇಳಲಿ?

ಜರ್ಮನಿ-ಫ್ರಾನ್ಸ ದೇಶಗಳೊಳಗೆ ಕಲಹ ಕ್ಷೇತ್ರವಾಗಿರುವ ಸಾರ ಪ್ರಾಂತದಲ್ಲಿ ಮತದಾನದ ಒಳ್ಳೇ ರಭಸ ನಡೆದದೆ. "ಜರ್ಮನಿಯ ಸರ್ವಸತ್ತಾಧಾರಿಗಳಾದ ಹಿಟ್ಲರರು ಜರ್ಮನಿಯ ತಾರಕರು. ಅವರಿಂದಲೇ ಜರ್ಮನ ರಾಷ್ಟ್ರವು ಇಂದಿಗೆ ಸಮರ್ಥವಾಗಿ ಕೀರ್ತಿಪಡೆದಿದೆ. ಯುರೋಪ ಖಂಡದಲ್ಲಿ ಕಳೆದ ವರ್ಷ ಶಾಂತತೆಯನ್ನು ಕಾಪಾಡಿದ ಸಂಪೂರ್ಣ ಶ್ರೇಯಸ್ಸು ಹಿಟ್ಲರರಿಗೇ ಸಲ್ಲಬೇಕು. ಹಿಟ್ಲರರು ಬಡಬಗ್ಗರಿಗೆ, ನಿರ್ಗತಿಕರಿಗೆ, ನಿರುದ್ಯೋಗಿಗಳಿಗೆ ನೆರವಾಗಿ ದೇಶೋದ್ಧಾರ ಮಾಡಿದ್ದಾರೆ." ಈ ಪ್ರಕಾರ ಜರ್ಮನ್ ಸರಕಾರದ ರುಡೊಲ್ಫ ಹೆಸ್‌ರವರು ಪರದೇಶಸ್ಥ ಜರ್ಮನ್

ರಿಗೆಲ್ಲ ವಾಯುಸಂದೇಶ (*Broadcast*) ಕಳುಹಿಸಿದ್ದಾರೆ. "ಜರ್ಮನಿಯು ನಮಗೆ ಸರ್ವಸ್ವವನ್ನಿತ್ತಿದೆ. ತಾಯಿಯು ಬಾಲಕನಿಗೆ ರಕ್ಷಣ ಮಾಡುವಂತೆ ನಮಗೆ ಜರ್ಮನಿಯು ಸಲಹಿದೆ. ಸಮಾಜಕಲ್ಯಾಣ ಸಿದ್ಧಿಗಾಗಿ ಮರ್ಮಾನನ ೬ ಕೋಟಿ ಮಾರ್ಕ (= ೧೫ ಲಕ್ಷ ಪವನು) ನಾಣ್ಯಗಳು ನಮಗೆ ಜರ್ಮನಿಯಿಂದ ಸಿಕ್ಕಿವೆ. ಫ್ರಾನ್ಸ ದೇಶವು ನಮಗೆ ಕೊಟ್ಟದ್ದೇನಿಲ್ಲ. ಸಾರ ಪ್ರದೇಶದೊಳಗಿನ ಸಂಪತ್ತನ್ನು ಅಪಹರಿಸಿದೆ" ಈ ಪ್ರಕಾರ ಸಾರ ಪ್ರದೇಶದ ಕೋಟ್ಯಾಧೀಶರಾದ ರೋಚಲಿಂಗರವರು ಪ್ಯಾರೀಸ ಪಟ್ಟಣದೊಳಗಿನ "ಪೆಟಿಟ್ ಜರ್ನಲ್" ಪತ್ರಿಕೆಯ ಪ್ರತಿನಿಧಿಗಳ ಬಳಿ ಹೇಳಿದರು. ಜರ್ಮನಿಯವರು ಸಾರ ಪ್ರದೇಶವನ್ನು ಎಷ್ಟುಕ್ಕೂ ಕೈವಶ ಮಾಡಿಕೊಳ್ಳದೆ ಬಿಡುವದಿಲ್ಲ. ಶೇಕಡಾ ೯೭ ರಷ್ಟು ಜನರು ಜರ್ಮನಿಗೇ ಅನುಕೂಲವಾಗಿ ಮತದಾನ ಮಾಡುವರೆಂದು 'ಜರ್ಮನ್ ಫ್ರಂಟ'ದ ಎಣಿಕೆ. ಉತ್ತರ-ದಕ್ಷಿಣ ಅಮೇರಿಕೆಯಲ್ಲಿ ಸಾರ ಪ್ರದೇಶದ ಕೆಲ ಮತದಾರರಿದ್ದರು. ೩೫೦ ಮತದಿಗಳಿಗೆ ಜರ್ಮನ್ ಫ್ರಂಟದವರು ಬರಹೋಗುವ ಖರ್ಚು ಕೊಟ್ಟು ರಾಜಧಾನಿಯಾದ ಸಾರಬ್ರೂಕನ್‌ಕ್ಕೆ ಕಳೆದ ತಾರೀಖಕ್ಕೆ ಕರಿಸಿಕೊಂಡಿದ್ದಾರೆ. ಅವರಿಗೆ ಪ್ರಚಂಡ ಸ್ವಾಗತವಾಯಿತೆಂಗಿ 'ರ್ಯೂಟರ' ವಾರ್ತಾವಾಹಕರ ಪ್ರಕಟಣೆ. ಸಾರ ಪ್ರದೇಶದೊಳಗಿನ ಸ್ತ್ರೀಯರಿಗಂತೂ ಹಿಟ್ಲರರ ಮೇಲೆ ಒಳ್ಳೇ ಮಮತೆ. ಜರ್ಮನಿಯಲ್ಲಿ ಸಂತತಿಯ ಅಭಿವೃದ್ಧಿಗಾಗಿ ಭಯಂಕರ ಪ್ರಯತ್ನವನ್ನು ಹಿಟ್ಲರರು ನಡೆಸಿದರೂ ಸ್ವತಃ ಅವರು ಅವಿವಾಹಿತರು. ಇತ್ತೀಚೆಗೆ ವಿವಾಹವಾಗ ಒಲ್ಲರಂತೆ. ಅದಕ್ಕಾಗಿ ಸಾರ ಪ್ರಾಂತದೊಳಗಿನ ೬೦ ಮಂದಿ ಕುಲೀನ, ಮನೋಹರ ಅವಿವಾಹಿತ ಸ್ತ್ರೀಯರು ವಿವಾಹಾಭಿಲಾಷೆಯಿಂದ ಬರ್ಲಿನ್ ಪಟ್ಟಣಕ್ಕೆ ಹೋಗಿದ್ದರು. ಹಿಟ್ಲರರು ನಗೆಮೊಗದಿಂದ, ಸವಿ ಮಾತಿನಿಂದ ಅವರೆಲ್ಲರಿಗೆ ಹಿಂದಕ್ಕೆ ಕಳಿಸಿದರಾಗ್ಯೂ, "ಹಿಟ್ಲರರು ಪರಾಕ್ರಮಿ ಪುರುಷರು, ಸ್ವಾಭಿಮಾನಿ ದೇಶಾಭಿಮಾನಿಗಳು, ಕಾರ್ಯದಕ್ಷರು" ಎಂಬುದಾಗಿ ಅವರು ಪ್ರಶಂಸಿಸುತ್ತಾರೆ. ಜರ್ಮನಿಯಲ್ಲಿ ಕಬ್ಬಿಣ, ಸತುವು, ತಾಮ್ರ ಮೊದಲಾದ ಸ್ಫೋಟಕ ದ್ರವ್ಯಗಳಿಗೆ ಪೋಷಕವಾದ ಧಾತುಗಳ ಖರೀದಿ ಜೋರಿಲೆ ಬೆಳೆದಿದೆ. ೧೯೩೩ನೇ ಇಸ್ವಿಗಿಂತ ೧೯೩೪ನೇ ಇಸ್ವಿಯಲ್ಲಿ ತಕ್ಕಮಟ್ಟಿಗೆ ೧| ಪಟ್ಟು ಹೆಚ್ಚು ಒದಗಿದೆಯಂತೆ. ೧೯೩೪ನೇ ಇಸ್ವಿಯು ಹಿಂದಿನ ೧೯೩೩ನೇ ಇಸ್ವಿಗಿಂತ ಹೆಚ್ಚು ಆಹಾರ ಸಾಮಗ್ರಿಯ ಖರೀದಿ ತಗ್ಗಿದೆ. ಜರ್ಮನ್ ಸರಕಾರವು ಸ್ವದೇಶದಲ್ಲಿ ಆಹಾರಸಾಮಗ್ರಿಗಳ ಬೆಳೆಯನ್ನು ಹೆಚ್ಚಿಸಿ ಬೇರೆ ಆಹಾರಸಾಮಗ್ರಿಗಳಿಗಾಗಿ ಪರದೇಶಗಳ ಮೇಲೆ ಅವಲಂಬಿಸಿರಕೂಡದೆಂದು ಮನೋನಿಶ್ಚಯ ಮಾಡಿದೆ. ಜರ್ಮನಿಯ ಒಕ್ಕಲಿಗರಿಗೆಲ್ಲ ರಾಷ್ಟ್ರಕ್ಕೆ ಅವಶ್ಯವುಳ್ಳ ಬೆಳೆಯನ್ನು ಹೆಚ್ಚಿಸಬೇಕೆಂತಾಗಿಯೂ, ಬಂಜರು ಭೂಮಿಯನ್ನು ಸಾಗುವಳಿಯಲ್ಲಿ ತರಬೇಕಾಗಿಯೂ, ಬೇಸಾಯಕ್ಕೆ ಉಪಯೋಗವಾಗುವಂಥ ದನಗಳನ್ನು ಕಾಪಾಡಬೇಕಾಗಿಯೂ ಹಿಟ್ಲರರು ಅಪ್ಪಣೆ ಮಾಡಿದ್ದಾರೆ. ಜರ್ಮನಿಯ ಕಾರಖಾನೆಗಳನ್ನು ಪುನರ್ಘಟನೆ ಮಾಡುವದಕ್ಕಾಗಿ ಸಾರ ಪ್ರದೇಶದೊಳಗಿನ ಕೋಟ್ಯಾಧೀಶರಾದ, ಕಾರಖಾನೆಯ ಯಾವತ್ತೂ ಮಾಹಿತಿಯುಳ್ಳ ರೋಚಲಿಂಗರವರಿಗೆ ನೇಮಿಸಲಾಗಿದೆ. ಜರ್ಮನ್ ದೇಶದೊಳಗಿಂದ ಪರದೇಶಕ್ಕೆ ದ್ರವ್ಯಪ್ರವಾಹ ಹರಿದುಹೋಗದಂತೆ ಜರ್ಮನರು ಪರದೇಶಗಮನ ಮಾಡಬಾರದೆಂದು ಪ್ರತಿಬಂಧ ಮಾಡಲಾಗಿದೆ. ಪರದೇಶಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಹಿಂದಿರುಗಿಕೊಳ್ಳಬೇಕಾಗಿದೆ. ಸದ್ಯಕ್ಕೆ ಜರ್ಮನಿಯ ಯಾವತ್ತೂ ಕಾರಖಾನೆಗಳನ್ನು ಸರಕಾರದ ಸ್ವಾಧೀನವಲ್ಲಿಟ್ಟುಕೊಳ್ಳುವದಕ್ಕಾಗಿ ಹಿಟ್ಲರರು ವಿವಿಧ ಕಟ್ಟಳೆಗಳನ್ನು ಏರ್ಪಡಿಸಿದ್ದಾರೆ. ಕಾರಖಾನೆಯವರು ಶೇಕಡಾ ೬ಕ್ಕೆ ಮಿಕ್ಕಿ ಲಾಭ ಹಂಚಿಕೊಳ್ಳಬಾರದು. ಅದಕ್ಕೂ ಮಿಕ್ಕಿ ದೊರೆಯುವ ಲಾಭವನ್ನು (*Loan Reserve*) ಋಣನಿಧಿಯೆಂದು ಸರಕಾರದ ವಶದಲ್ಲಿಡಬೇಕು. ಗಿರಣಿಗಳಲ್ಲಿ ತಯಾರಾಗುವ ಸರಕುಗಳನ್ನೂ ಕೈಯಿಂದ ತಯಾರಿಸುವ ಸಾಮಾನುಗಳನ್ನೂ ಸರಕಾರದ ಅಂಕೆಯಲ್ಲಿಡಬೇಕು. ಒಕ್ಕಲಿಗರ ಕಾಳು-ಕಡಿಗಳಿಗೆ ಒಳ್ಳೇ ದರ ಸಿಗುವಂತೆ ಏರ್ಪಾಟಾಗಬೇಕು. ಕಲ್ಲಿದ್ದಲಿ, ಕಬ್ಬಿಣ ಮೊದಲಾದ ಧಾತು ಸಿಗುವ ಖಣಿಗಳ ಸಂಶೋಧನವಾಗಬೇಕು. ಖನಿಜಗಳು ಖಾಸಗಿ ಆಸ್ತಿಯಲ್ಲಿ ಸಿಕ್ಕಿದಾಗ್ಯೂ ಅವು ಸರಕಾರದವೇ. ಸಾಲಗಾರರ ರಕ್ಷಣೆಯಾಗುವಂತೆ, ಸಾವಕಾರರು ಬಡ್ಡಿಯ ಕ್ರಮ ಹೊರಡಿಸಿ ಸಾಲಗಾರರಿಗೆ ದಣಿಸದಂತೆ ಏರ್ಪಾಟಾಗಿದೆ. ಈ ಪ್ರಕಾರ ಜರ್ಮನರು ಒಳ್ಳೇ ರಭಸದಿಂದ ಸಂಘಟಿತರಾಗುತ್ತಿದ್ದಾರೆ. ಸಾರಪ್ರದೇಶದ ಮತದಾನದ ಸಮಯ ಗಡಿಬಿಡಿಯಾಗಬಾರದೆಂದು ಬ್ರಿಟಿಶ, ಇಟಾಲಿ, ಹಾಲಂಡ ದೇಶಗಳೊಳಗಿಂದ ಸೈನ್ಯ ಪಥಕಗಳು ಬಿಟ್ಟು, ಮದ್ದು-ಗುಂಡು ಮುಂತಾದ ಯಾವತ್ತೂ ಪರಿವಾರದೊಡನೆ ರವಾನೆಯಾಗಿವೆ. ಇಟಾಲಿಯ ಸೈನ್ಯ ಸಾರ ಪ್ರದೇಶದಲ್ಲಿ ಒಂದಷ್ಟು ಜರ್ಮನರಿಗೆ ಸೇರಲಿಲ್ಲವಾಗಿ 'ರ್ಯೂಟರ' ವಾರ್ತಾವಾಹಕರ ವಾರ್ತೆ. ಸಾರ ಪ್ರದೇಶದಲ್ಲಿ ಯಾರು ಯಾವ ಪ್ರಕಾರ ಧ್ವಜ ಏರಿಸಬಾರದಾಗಿ ಮತಸಂಗ್ರಹದ ಅಧಿಕಾರ ಮಂಡಳವು ಅಪ್ಪಣೆ ಹೊರಡಿಸಿದೆ. ಇದನ್ನು ಜರ್ಮನರು ಬಹು ಅಸಂತೋಷದಿಂದ ನಿರುಪಾಯದಿಂದ ಪಾಲಿಸುತ್ತಿದ್ದಾರೆ. ಇಷ್ಟೆಲ್ಲ ಭದ್ರತೆ ಕಾಪಾಡಿದಾಗ್ಯೂ, ಮತಸಂಗ್ರಹದ ಏದಿರ್ನಿರ್ಣಯದಿಂದ ಘೋರಗಂಡಾಂತರಾಗಿ ಸಾರ ಪ್ರದೇಶದೊಳಗಿನ ಪರಿಸ್ಥಿತಿ *inflammable* ಜ್ವಾಲಾಗ್ರಾಹಿ ಎಂಬುದಾಗಿ ಮುಂಬಯಿಯ 'ಟೈಮ್ಸ' ಪತ್ರಿಕೆಯ ಅಭಿಪ್ರಾಯ. ಇಂಥಲ್ಲಿ ನಾನೇನು ಹೇಳಲಿ? ಭದ್ರತೆ ಕಾಪಾಡಲು ರವಾನೆಯಾದ ಸೈನ್ಯ ಪಥಕಗಳೇ ಯುದ್ಧ ಯೋಗವನ್ನು ಘಟಿಸಿ ತರುವವೇನೆಂಬುದೊಂದು ಭೀತಿ. ಈ ಸಂದರ್ಭದಲ್ಲಿ ಬ್ರಿಟಿಶ್ ಸೇನಾದಳದ ನಾಯಕರಾದ ಬ್ರಿಗೇಡಿಯರ್ ಪ್ರೀಸ್ಟಮನ್ನರವರು ತಮ್ಮ ಪಥಕಕ್ಕೆ ಕೊಟ್ಟ ಸಂದೇಶ ಬಹಳ ಮನನೀಯವಿದೆ: "ನಾವು ಒಂದು ವಿಚಿತ್ರ ಕೆಲಸಕ್ಕೆ ಕಳಿಸಲ್ಪಟ್ಟಿರುತ್ತೇವೆ. ನಾವು ಅಲ್ಲಿ (ಸಾರ ಪ್ರಾಂತಕ್ಕೆ) ಮುಟ್ಟುವ ವರೆಗೆ ಅದೆಂಥ ಕೆಲಸವೆಂದು ತಿಳಿಯದು! ಅದೆಂಥ ಕೆಲಸವಿದ್ದಾಗ್ಯೂ, ನಾವು ಅಲ್ಲಿಯ ನಿವಾಸಿಕರ ಕೂಡ ಸಭ್ಯತನದಿಂದ ವರ್ತಿಸಿದರೆ, ನಾವು ನಮ್ಮ ಕೆಲಸವನ್ನು ಮರ್ಯಾದೆಯಿಂದ ಕೊನೆಗಾಣಿಸಬಹುದಾಗಿದೆ. ನಾವು ಎಂದೂ ಅಜಾಗರೂಕರಾಗಿರಬಾರದು. ಎಂತಹ ಪ್ರಸಂಗ ಬಂದಾಗ್ಯೂ ನಾವು ನಮ್ಮ ಪಥಕದ, ಬ್ರಿಟಿಶ ಸೈನ್ಯದ ಮಾನವನ್ನು ಕಾಪಾಡಿಕೊಳ್ಳತಕ್ಕದ್ದು." ವ್ಯಂಗ್ಯ ಶಬ್ದಗಳಿಂದ ತುಂಬಿದ ಈ ಸಂದೇಶವು ರಣಕ್ಷೇತ್ರಕ್ಕೆ ಹೊರಡುವ ಸೈನ್ಯಕ್ಕೆ ಕೊಡಲಾಗುವ ಸಂದೇಶದಂತೆ ತೋರುತ್ತದೆ.

ಫ್ರಾನ್ಸ-ರಶಿಯಾ ದೇಶಗಳೊಳಗೆ ಗುಪ್ತ ತಹನಾಮೆಯಾದ ಸಂಗತಿಯನ್ನು ರುಶ್ಯ ಸರಕಾರದ ಮುಖಪತ್ರಿಕೆಯಾದ ಮೊಸ್ಕೋದೊಳಗಿನ "ಪ್ರಾವ್ಡಾ" ಪತ್ರಿಕೆಯು ನಮೂದಿಸಿ ಯುದ್ಧದ ಪೂರ್ವಸಿದ್ಧತೆಯ ವ್ಯವಸ್ಥೆಯೆಂದು ಅಭಿಪ್ರಾಯಪಟ್ಟಿದೆ. ಈ ಮೈತ್ರಿಯಿಂದ ಪೋಲಂಡ ಸರಕಾರವು ಜಾಗ್ರತ ಪಡೆದ. ಜರ್ಮನಿಯ ಪಕ್ಷವನ್ನು ತೊರೆಯಬೇಕಾಗಿ 'ಪ್ರಾವ್ಡಾ' ಪತ್ರಕರ್ತರ ಸೂಚನೆ. ಇದೆಲ್ಲ ಯಾತರ ದ್ಯೋತಕ? ಜ್ವಾಲಾಗ್ರಾಹಿ ಪರಿಸ್ಥಿತಿ ತಯಾರಿದೆ. ಕಿಡಿಯನ್ನೇ ಅದು ನಿರೀಕ್ಷಿಸುತ್ತಿದೆ. ಮತಸಂಗ್ರಹದ ಅತ್ಯುತ್ಸಾಹ-ಆವೇಶಗಳ ಭರದಲ್ಲಿ ಥಟ್ಟನೆ ಜ್ವಾಲೆಯೊಂದು ದೊರೆತರೆ ಇಡೀ ಯುರೋಪ ಖಂಡವು ರಣಯಜ್ಞದಲ್ಲಿನ ಸಮಿಧೆ, ನೀ ಮುಂದೆ ಎಂದು ಬಿದ್ದು ಹೊರಳಾಡಲಾರದೇ?

ಅಫಘಾಣಿಸ್ಥಾನ-ಇರಾಣ ಪ್ರದೇಶಗಳೊಳಗಿನ ಗಡಿನಾಡಿನ ಘೋರಾಬಾದ ಗ್ರಾಮದಲ್ಲಿ ನಡೆದ ದೊಂಬಿಯು ಇರಾಣ-ಅಫಘಾಣ ಸರಕಾರಗಳ ವಿವಾದಕ್ಕೆ ಸಂಬಂಧ ಪಟ್ಟದ್ದೆಂದು ನಾನು ಸೂಚಿಸಿದ್ದೆ. ಕಾಬೂಲದೊಳಗಿನ 'ಇಸ್ಲಾ' ಪತ್ರಿಕೆಯ ಖುಲಾಸೆ ಸಮಾಧಾನಕರವಲ್ಲವಾಗಿಯೂ ನಾನು ಧ್ವನಿಸಿದ್ದೆ. ಈಗ ಚೌಕಶಿಗಾಗಿ ಇತ್ತಿಟ್ಟನ ರಾಯಭಾರಿಗಳೂ, ಪರರಾಷ್ಟ್ರೀಯ ಪ್ರಧಾನರೂ ನೇಮಿಸಲ್ಪಟ್ಟಿದ್ದಾರಂತೆ. ಇರಾಣದ ರಾಯಭಾರಿಗಳು ಅಫಘಾಣ ಸರಕಾರದ ಕಡೆ ದೊಂಬಿಯ ಕುರಿತು ಕೂಡಲೇ ನಿಷೇಧ ಮಾಡಿದ್ದರಂತೆ. ಹಿಂದುಸ್ಥಾನದೊಳಗಿನ ದಿಲ್ಲಿಯೊಳಗಿದ್ದ ಇರಾಣದ ರಾಯಭಾರಿಗಳ ಕಡೆ ಈ ಕುರಿತು ಚೌಕಶಿ ಮಾಡಲಾಗಿ ಅವರು ಯಾವ ವಿವರವನ್ನೂ ಸರಿಯಾಗಿ ಹೇಳಲಿಲ್ಲ: "ಇರಾಣ ಸರಕಾರವು ಪುರಸ್ಕರಿಸಿದ ಕ್ರಮ ಅಂತರರಾಷ್ಟ್ರೀಯ ಕಾಯಿದೆ ತತ್ವಗಳಿಗೆ ಅನುರೂಪವಿದ್ದಿದೆ, ಆ ಪ್ರಕಾರ ಇರಾಣ ಸರಕಾರವು ನಡೆದುಕೊಂಡದ್ದು ಯುಕ್ತವಾಯಿತು; ಯಾವತ್ತೂ ವಿವರ ರಾಷ್ಟ್ರಸಂಘದ ಬಳಿ ಅರಿಕೆಮಾಡಿಕೊಳ್ಳಲ್ಪಡುವದು" ಇತ್ಯಾದಿ ಸರ್ವಸಾಮಾನ್ಯ ವೇದಾಂತ ಹೇಳಿ ಸುಮ್ಮಗುಳಿದ್ದಾರೆ. ಇದರ ಮೇಲಿಂದ ಅಫಘಾಣ-ಇರಾಣ ಸರಕಾರಗಳೊಳಗೆ ಮನಸ್ಸು ನೆಟ್ಟಗಿಲ್ಲ, ವಿತುಷ್ಟವಾಗಿದೆ. ಒಂದಿಲ್ಲೊಂದು ದಿನ ಹೋರಾಟವಾಗಬಹುದು ಹೀಗನಿಸುತ್ತದೆ.

ಯಾವತ್ತೂ ಕಾರಭಾರ ಗುಪ್ತವಾಗಿಯೇ ನಡೆದದೆ. ಜಗತ್ತಿನ ಶಾಂತತೆ, ಯುರೋಪ ಖಂಡದ ಶಾಂತತೆ ಹೀಗೆ ಶಾಂತತೆಯ ಹೆಸರಿನಿಂದಲೇ ಯುದ್ಧದ ತಯಾರಿ ನಡೆದದೆ. ಸಮಸ್ತ ಕ್ರಿಸ್ತ ಧರ್ಮಾನುಯಾಯಿಗಳ ಜಗದ್ಗುರುಗಳಾದ ಪೋಪರವರು ರೋಮ ಪಟ್ಟಣದಲ್ಲಿ ಕಳೆದ ಸೋಮವಾರ ನೆರೆದ ಧರ್ಮಸಭೆಯಲ್ಲಿ ನುಡಿದದ್ದೇನಂದರೆ – "ಶಸ್ತ್ರಾಸ್ತ್ರಗಳಿಂದಲೇ ಶಾಂತತೆಯ ರಕ್ಷಣೆಯಾಗಿದೆ ಎಂದಾಗಿ ಹೇಳುತ್ತಾರೆ. ಆದರೆ ಇದು ಸರಿಯಲ್ಲ. ಶಸ್ತ್ರಾಸ್ತ್ರಗಳು ಘಾತುಕತ್ವ, ಯುದ್ಧ ಪ್ರವೃತ್ತಿಯ ಲಕ್ಷಣಗಳು. ಇವನ್ನು ಪ್ರದರ್ಶಿಸುವವರಿಗೆ ಧಿಕ್ಕರಿಸಬೇಕಾಗಿ ನಾವು ಈಶಪ್ರಾರ್ಥನೆ ನಡಿಸಬೇಕು." ಪೋಪ ಧರ್ಮಗುರುಗಳು ಕಳಕಳಿ, ಆಕ್ರಂದಿಸಲಿ! ಪಾಶ್ಚಾತ್ಯ ರಾಷ್ಟ್ರಗಳು ವಿಂಥಾಲೋಲುಪತನ, ಸ್ವಾರ್ಥ ಸಾಧನೆಯನ್ನೇ ಸಾಧಿಸಹೋಗಿ ರಣ ಕುಂಡದಲ್ಲಿ ಬೀಳುವವೆಂದು ನಿಸ್ಸಂದೇಹವಾಗಿ ಹೇಳಬಹುದು. ಯುರೋಪ ಖಂಡದ ಪ್ರಕೃತಿ ಅಷ್ಟು ಸೂಕ್ಷ್ಮವಾಗಿದೆ. ಸಂಕೀರ್ಣವಾಗಿದೆ. ಅದನ್ನು ಸರಿಯಾಗಿ ಬಿಡಿಸಿ ಬಗೆಹರಿಸುವದು ಅಸಾಧ್ಯವಾಗಿತು. ಎಲ್ಲರ ಸ್ವಾರ್ಥವನ್ನು ಸಂಪೂರ್ಣವಾಗಿ ಸಾಧಿಸಲಿಕ್ಕೆ ಜಗತ್ತು ತೀರ ಸಣ್ಣದು. ಇಂಥಲ್ಲಿ ಯುದ್ಧವಾದ ಹೊರತು ಬೇರೆ ಗತಿಯೇ ಕಾಣದೆಂದು ಹೇಳಿದರೆ ವಸ್ತುಸ್ಥಿತಿಯ ವಿಪರ್ಯಾಸವಾದೀತೇನು?

ಸ್ಥಾನಿಕ ವೃತ್ತಾಂತ

ಕುಮಟಾ— [illegible]

[illegible]

ಹೊನ್ನಾವರ— [illegible]

[illegible]

ಭಟಕಳ— [illegible]

[illegible]

ಶಿರ್ಸಿ— [illegible]

[illegible]

ಸಿದ್ದಾಪುರ— [illegible]

[illegible]

ವೃತ್ತಸಾರ.

— [illegible]

[illegible]

ವೇ|| ಮೊಗೇರಿ ಭಾಸ್ಕರ ಆಚಾರ್ಯರಿಂದ
ಸೂರ್ಯಸಿದ್ಧಾಂತರೀತ್ಯಾ ತಯಾರಿಸಲ್ಪಟ್ಟ,
ಕಲ್ಯಾಣ ಶ್ರೀ ಧರ್ಮ ವಿದ್ಯಾಪರಿಷತ್ತಿನ ಆಶ್ರಯ ಪಡೆದ

ಯುವ ಸಂ|| ಪಂಚಾಂಗವು

ಜನವರಿ ೫ನೇ ತಾರೀಖಿಗೆ

ಮಾರಾಟಕ್ಕೆ ಸಿದ್ಧವಾಗುವದು!

ಶ್ರೀ ವಿದ್ಯಾರಣ್ಯ ಗ್ರಂಥ ಪ್ರಕಾಶನ ಸಮಿತಿ

ಕಥೆ ಕಾದಂಬರಿ ನಾಟಕ, ಇತಿಹಾಸ ಮೊದಲಾದ ವಿಷಯಗಳ, ನೇರೆ ... ಕರ್ನಾಟಕದ ... ಲೇಖಕರಿಂದ ಬರೆಯಿಸಿದ ... ಗ್ರಂಥಗಳು ... ಪ್ರಸಿದ್ಧವಾಗುವವು. ... ವರ್ಗದ ... ರೂ. ... ಕಾರ್ಯಾಲಯದ ... ಪ್ರಕಟನೆಯನ್ನು ... ಪಡೆಯಿರಿ. ... —

... ಗ್ರಂಥಮಾಲೆ ...

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ

(೮ನೇ ಪಾನದಿಂದ ಮುಂದರಿಸಿದ್ದು)

ಕ್ರಮಿಕ ಪುಸ್ತಕಗಳು ಮೊದಲಾದವೂ ಇಡಿಯ ಕರ್ನಾಟಕದಲ್ಲಿ ಅಕ್ಷರಲೇಖನಗಳು ಏಕರೂಪವಿರಬೇಕು. ಅಕ್ಷರಲೇಖನದ ಏಕರೂಪತೆಯು ಭಾಷಾಪ್ರದೇಶದ ಸ್ವರೂಪ [illegible] ಮನಸ್ಸಿನಲ್ಲಿ ಮೂಡಿ ಹೋಗುತ್ತದೆ. ಆದುದರಿಂದ ಅಕ್ಷರಲೇಖನದ ಏಕರೂಪತೆಯ ಪ್ರಯತ್ನದ [illegible] ನಮ್ಮ [illegible] ಗವರ್ನ್‌ಮೆಂಟು ಪ್ರಾಥಮಿಕ ಶಾಲೆಯ ಪುಸ್ತಕಗಳಲ್ಲಿರುವ ಶಬ್ದಸಂಖ್ಯೆ ಒಂದು ಸಾವಿರಕ್ಕೆ ಮಿಕ್ಕುವದಿಲ್ಲ. ಇವುಗಳಲ್ಲಿ [illegible] ಶಬ್ದಗಳನ್ನು ರೂಪಾಂತರಗೊಳಿಸಿ ಬರೆಯುತ್ತಾರೆ. ಓದ್ದರಿಂದಲೆ, ಆದುದರಿಂದಲೇ, ಓದುದರಿಂದಲೆ, ಆದ್ದರಿಂದಲೇ, ಆದ್ದರಿಂದ್ದು ಆದದರಿಂದಲೆ — ಹೀಗೆ ವಿವಿಧ ರೂಪಗಳು. ಈ ರೂಪಗಳನ್ನು ಸಮರ್ಥಿಸಲು ಆಧಾರಗಳಿದ್ದರೂ ಅದರ ನಮಗೆ ಬೇಕಾದುದು ಮಕ್ಕಳು [illegible]-ಬರಹಗಳನ್ನು ತಪ್ಪಿಲ್ಲದೆ, ತೊಡಕಿಲ್ಲದೆ ಕಲಿಯುವದು. ರೂಪಗಳ ಸಮರ್ಥನೆಯಲ್ಲಿ ಇದಕ್ಕಾಗಿ ನಿಷ್ಣಾತರಿಂದ ನಿರ್ಧರಿಸಿದ ಶಬ್ದಗಳ ಪಟ್ಟಿಯೊಂದನ್ನು ಸಿದ್ಧಪಡಿಸಿ ಪ್ರತಿಯೊಂದು ಶಾಲೆಗೆ ಕಳಿಸಿಕೊಡುವ ಏರ್ಪಾಟಾಗಬೇಕು.

ಹೊಸಗನ್ನಡ ವ್ಯಾಕರಣ

[illegible] ಸಭೆಗಳಲ್ಲಿ ವ್ಯಾಕರಣದ ಸಂಬಂಧವಾದ ನಿರ್ಣಯ ಮಾಡಿ ಯಾರೂ ಹೊಸ ವ್ಯಾಕರಣ ರಚನೆಯ ಕಾರ್ಯಕ್ಕೆ ಕೈಹಚ್ಚಿದ್ದು ತೋರುವದಿಲ್ಲ. ವ್ಯಾಕರಣ ರಚನೆಯ ಕಾರ್ಯವನ್ನು ವಹಿಸುವವರು ಪ್ರಸ್ತುತದಲ್ಲಿ ಹೊಸ ವ್ಯಾಕರಣದಲ್ಲಿ ಸಂಧಿ ಸಮಾಸ [illegible] ಪ್ರಕರಣಗಳೆಂದು ಎಣಿಸಿ ವ್ಯಾಕರಣರಚನೆ, ವಾಕ್ಯ ರಚನೆ ಮುಖ್ಯ ವಿಷಯಗಳೆಂದು [illegible] ಅವುಗಳ ಲಕ್ಷಣಗಳನ್ನು ವಿಸ್ತರಿಸಬೇಕು. ಹೊಸ ವ್ಯಾಕರಣವು ಭಾಷೆಯನ್ನು ಉಸುರುಕಟ್ಟಿ [illegible] ಹಾಕದಂತೆ, ಹುಟ್ಟಿದ ಚಿಕ್ಕಿಗೆ ಹಿಡಿಸದಂತೆ ಇರಬೇಕು. ವ್ಯಾಕರಣದಿಂದ ಭಾಷೆಯ ಸ್ವತಂತ್ರ ಬೆಳವಣಿಗೆಗೆ ಬಂಧಕ ಬರಬಾರದು.

ಆದರ್ಶ ಭಾಷಣಗಳ ಪ್ರಕಟಣೆ

ಇನ್ನೊಂದು ಸಂಗ್ರಹಾತ್ಮಕ ಪುಸ್ತಕದ ಆವಶ್ಯಕತೆಯಿದೆ. [illegible], ಇತಿಹಾಸಗಳು ತ್ರಯಿಯಲ್ಲಿ ಸಾಧ್ಯವಿರದಿದ್ದರೂ ಪ್ರಪಂಚದ ವಾಙ್ಮಯದಲ್ಲಿಯ ಪ್ರಸಿದ್ಧ ವ್ಯಕ್ತಿಗಳ ಭಾಷಣಗಳನ್ನು ಕನ್ನಡಕ್ಕೆ ಪರಿವರ್ತಿಸಿ ಆದರ್ಶ ಭಾಷಣಗಳೆಂದು ಪ್ರಕಟಿಸುವದು ಆಗತ್ಯವಿದೆ. ಕನ್ನಡದಲ್ಲಿ ಭಾಷಣವಿದ್ಯೆ ಏನೇನೂ ಬೆಳೆದಿಲ್ಲ. ಉತ್ತಮ ಭಾಷಣ ಕೇಳಿಸಿಗುವದು ಅನೇಕರಿಗೆ ದುರ್ಲಭ. ಅಂಥವರ ದಿವ್ಯವಾಣಿಯನ್ನು ಹಿಡಿದಿಟ್ಟುಕೊಳ್ಳಲಿಕ್ಕೆ ಕನ್ನಡ ಶೀಘ್ರಲೇಖನ ಪದ್ಧತಿಯು ಇನ್ನೂ ಪ್ರಚಾರಕ್ಕೆ ಬಂದಿಲ್ಲ. ವ್ಯಕ್ತಿಗಳ ಬಾಯಿಮಾತಿಯಲ್ಲಿ ದಿವ್ಯಶಕ್ತಿಯಿದೆ. ಈ ಜನಕಳ ಗ್ರಂಥಗಳಲ್ಲಿಲ್ಲ. ಈ ವಾಣಿಯು ಒಲಿಸಿದ್ದವರು [illegible] ನಮ್ಮ ನಗರಪತಿಗಳ, ನ್ಯಾಯವಿಧಾಯಕರು, ಮಾರ್ಗದರ್ಶಿಗಳು ಇಂಥವರ ಬಾಯಿ-ಬಲವನ್ನು ರೇಡಿಯೋ ಯಂತ್ರದ್ವಾರಾ ಹಳ್ಳಿ-ಹಳ್ಳಿಗಳಿಗೆ ಮುಟ್ಟಿಸಿದರೆ ಕನ್ನಡ ಭಾಷಾಭಿವೃದ್ಧಿಯು ಬಹಳವಾಗುವದು.

ಗ್ರಾಮೊಫೋನ್ ಟೊಕೀಸ್ ಟೈಪರೈಟಿಂಗ

ಪರಪ್ರಾಂತಗಳಲ್ಲಿ ಗ್ರಾಮೊಫೋನ್ 'ಟೊಕೀಸ್' ಮುಂತಾದ ಸಾಧನಗಳನ್ನು ಭಾಷಾಪ್ರಚಾರಕ್ಕೆ ಉಪಯೋಗಿಸುತ್ತಾರೆ. ನಮ್ಮಲ್ಲಿ ಹೆಚ್ಚಿದಾದ "ಟಾಕೀ" [illegible] ಇರುವದಿಲ್ಲ. ಇದರಿಂದಲೇ ನಮ್ಮಲ್ಲಿ ಉತ್ಕೃಷ್ಟವಾದ ದೈನಂದಿನ ಪತ್ರಿಕೆ ಹೊರಡಿಸಲಿಕ್ಕೆ ಅನುಕೂಲತೆಯಿರುವದಿಲ್ಲ. ಟೈಪರೈಟರ್, ಗ್ರಾಮೊಫೋನುಗಳಿಂದ ಭಾಷೆಯ ಪ್ರಸರಕ್ಕೆ ಸಹಾಯವಾಗುವಂತಿದೆ. ಗ್ರಾಮೊಫೋನು ಹೊಸ ಕವಿತೆಗಳನ್ನು ಭಾಷಣಗಳನ್ನೂ ಮನೆ-ಮನೆಗೆ ಮುಟ್ಟಿಸಬಹುದು. ಕನ್ನಡದಲ್ಲಿ ಅಕ್ಷರಗಳ ಸಂಖ್ಯೆ ಹೆಚ್ಚಿರುವದರಿಂದ ಟೈಪರೈಟರ್ ತಯಾರಿಸಲಿಕ್ಕೆ ಅಡಚಣೆಯೆಂದು ಹೇಳುತ್ತಾರೆ. ಅದರ ಲಿಪಿ ಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿದರೆ ಅಡಚಣೆ ದೂರಾಗುವದು. ತುರ್ಕೆಯವರು ಅರಬೀ ಲಿಪಿಯನ್ನು ತ್ಯಜಿಸಿ ರೋಮನ್ ಲಿಪಿಯನ್ನು ಸ್ವೀಕರಿಸಿದಂತೆ ನಾವು ಕನ್ನಡ ಲಿಪಿಯ ಸಂಸ್ಕರಣವನ್ನು ಏತಕ್ಕೆ ಮಾಡಬಾರದು?

ಹಳ್ಳಿಯ ಶಿಕ್ಷಕರ ಸಹಕಾರ

ನಾವು ನಮ್ಮ ಕಾರ್ಯಕ್ಕೆ ಹಳ್ಳಿಯ ಶಾಲಾ ಶಿಕ್ಷಕರನ್ನು ಎಳೆದು ಕೊಳ್ಳಬೇಕು. ಸಾಹಿತ್ಯರಚನೆ, ಭಾಷಾವೃದ್ಧಿ ಮೊದಲಾದ ಸತ್ಕಾರ್ಯಗಳು ಈ ಅಧ್ಯಾಪಕರ ಕೈಯಲ್ಲಿವೆ. ಅವರನ್ನು ನಾವು ಸಹಸ್ವರನ್ನಾಗಿ ಮಾಡಿಕೊಳ್ಳಬೇಕು. ಅವರು ನೆರವಾದರೆ ನಮ್ಮ ಕಾರ್ಯವು ಸುಲಭವಾಗುವದು.

ಉಪಸಂಹಾರ

ನನ್ನ ಈ ಭಾಷಣವು ಮತಿಪ್ರೇರಿತವಾದ್ದು. ಯಾರು ನಾನು ಮುಟ್ಟಿಸಿದ ಮುಮುಕ್ಷು ನನ್ನಿಂದೇನು [illegible]? ನಮ್ಮ ಸಮ್ಮೇಳನಕ್ಕೆ ಬೇಕಾದವರು ಕುಶಲ ಪತ್ರಿಕಾಕರ್ತರು, ವಿಶ್ವಾಸಪಾತ್ರ ದೇಶಭಕ್ತರು, ಯುವಕರು ಮುಂದಾಗಿ ಈ ಕಾರ್ಯಕ್ಕೆ ತಲೆಗೊಡಬೇಕು. ಬಂಗಾಲಿ ನಮ್ಮ ಕಾರ್ಯ ಸಫಲಪ್ರದಾಯಕವಾಗುವದು. ಕರ್ನಾಟಕವು ಪ್ರಪಂಚಕ್ಕೆ ತನ್ನ ಕರೆಕೆ ಸಲ್ಲಿಸಲಿಕ್ಕಿದೆ. ಬಂಗಾಲವು ಟಾಗೋರರ ಬಾಯಿಂದ ಗೀತಾಂಜಲಿಯನ್ನು ಹಾಡಿಸಿದ, ತಮಿಳುನಾಡು ರಾಮನ್‌ರ ಕಡೆಯಿಂದ ಪರ್ಣರಶ್ಮಿಯನ್ನು ಬೀರಿದೆ. ಮಹಾರಾಷ್ಟ್ರ ಲೋಕಮಾನ್ಯರಿಂದ ಗೀತಾರಹಸ್ಯವನ್ನು ಒದಗಿಸಿದೆ. ಗುಜರಾತವು ಮಹಾತ್ಮರ ತ್ರಿಕರಣಗಳಿಂದ ಅಹಿಂಸಾಮಂತ್ರವನ್ನು ಉಪದೇಶಿಸಿದೆ. ಕರ್ನಾಟಕ- ಮಾತೇ, ನಿನ್ನ ಪದರ ಸಲ್ಲಿಸಿ ನಿನ್ನ ಹೆಸರು ಹೊಳೆಸುವ ಕಾಣಿಕೆಯನ್ನು ನಮ್ಮ ಕೈಗಿತ್ತು ನಮ್ಮನ್ನು ಒಗ್ಗೂಡಿಸಿ ಎಂದು ಕೇಳುವ?

—ಜಪಾನದಲ್ಲಿ ಆಗ್ನೇಯರಕ್ಷಣದ ಮಾರ್ಗ ಹಿಂದು ಸ್ಥಾನಕ್ಕೆ ಸಲ್ಲುತ್ತದಂತೆ. ಲೋಕದಲ್ಲಿ ಬೆಳೆಯುವ ಜಪಾನಿನ ಅರ್ಧಾಂಶವು ಇಲ್ಲಿ ಖರ್ಚಾಗುತ್ತದೆ! [illegible] ಸಂಯುಕ್ತ ಸಂಸ್ಥಾನಗಳಲ್ಲಿ [illegible]ಗಳಷ್ಟು ಖರ್ಚಾಗುತ್ತದೆ, ಅಂದರೆ ತಲೆಯೊಂದಕ್ಕೆ ೩ ಪೌಂಡುಗಳಷ್ಟು. ಇಂಗ್ಲಂಡದಲ್ಲಿ ತಲೆಯೊಂದಕ್ಕೆ ಸರಾಸರಿ ೬ ಪೌಂಡು ಖರ್ಚಾಗುತ್ತದೆ!

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ [illegible] ಕಂಪನಿ [illegible], ಕತ್ತೂರಿಗಳು [illegible] ಇದೆ ಕಂಪನಿಯ ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ ಇಂಡಿಯನ್ ಟ್ರಸ್ಟಿನ ಸಿಕ್ಯುರಿಟಿಗಳಲ್ಲಿಯೂ [illegible] ಇಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ವಿಸ್ತೃತ ಮಾಹಿತಿ [illegible] ವಿಳಾಸದ ಕಡೆಗೆ ಅಥವಾ ಪತ್ರದ್ವಾರದಿಂದ ಕೇಳಿದ [illegible] ಪುಕ್ಕಟೆಯಾಗಿ ಸಿಗುವದು.

[illegible] Agents

D K Nayak Bros
D S Pai
K N Nayak
[illegible] Agent
R V Prabhu

K. Padmanabha Rao & Sons
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಹಿಡಿಯುವಷ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಗಳಿಗೆ ಆರೋಗ್ಯ [illegible] ಗಳನ್ನು ಕೊಟ್ಟಿರುವದು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ಮೂಗು ಬಂಟಕರನೋವು [illegible] ಕಣ್ಣುಗಳಲ್ಲಿ ಉಂಟಾಗತಕ್ಕ ನರ್ವ ವ್ಯಾಧಿಗಳ [illegible] ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ [illegible] ವ್ಯಾಧಿಗಳನ್ನೂ ಸ್ಪಷ್ಟಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. [illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ [illegible] ಬೆರಸಿ ಮಿಶ್ರಮಾಡಿದರೆ ಬಹಳ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ



(Registered Trade-Mark)

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಗೋಸ್ಕರ ಪುಕ್ಕಟೆ ಕಳಿಸಲಾಗುವದಿಲ್ಲ.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, [illegible] ಡಜನ್ ೧ಕ್ಕೆ ರೂ ೨-೮-೦ ವಿ. ಪಿ. [illegible]

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನು ಸರಿಯಾಗಿ ತಿಳಿಸುವಂತೆ ವಿನಂತಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೧, ಪೋಕರ್ಡನ್, ಮುಂಬಯಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳದ ಠರಾವುಗಳು

ರವಿವಾರ ತಾ ೨೨-೧೨-೧೯೩೫ಕ್ಕೆ ಕೂಡಿದ ಕರ್ನಾಟಕ ಪ್ರಾಂ|| ಕಾಂ ಕಮಿಟಿಯ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ ಪಾಸಾದವು —

೧ ಪ್ರಥಮ ಕರ್ನಾಟಕ ಪರಿಷತ್ತಿನ ಅಧ್ಯಕ್ಷರೂ, ಕರ್ನಾಟಕದ ಏಕೀಕರಣದ ಬಗ್ಗೆ ಯಾವಾಗಲೂ ದುಡಿದವರೂ, ದೇಶಾಭಿಮಾನಿಗಳೂ, ರಾಜಕಾರಣ-ಧುರಂಧರರೂ ಆದ ಶ್ರೀ|| ಸಿ ಪಿ ಮಾಧವರಾಯರ ನಿಧನದ ಬಗ್ಗೆ ಈ ಸಭೆಯು ಅತ್ಯಂತ ದುಃಖವನ್ನು ವ್ಯಕ್ತಪಡಿಸುತ್ತದೆ, ಮತ್ತು ಅವರ ಕುಟುಂಬದವರ ದುಃಖದಲ್ಲಿ ಸಹಭಾಗಿಯಾಗುತ್ತದೆ

೨ ಆಂಧ್ರ ಪ್ರಾಂತದಲ್ಲಿ ಸೇರಿಸಲ್ಪಟ್ಟ ಬಳ್ಳಾರಿ ಜಿಲ್ಲೆಯೊಳಗಿನ ಆಲೂರ, ಆದವಾನಿ ಮತ್ತು ರಾಯದುರ್ಗ ಈ ಮೂರು ತಾಲೂಕುಗಳನ್ನು, ಕಾಂಗ್ರೆಸ ಕಾರ್ಯವು ಅಲ್ಲಿ ಒಳ್ಳೇ ರೀತಿಯಿಂದ ಜರಗುವದಕ್ಕೆ ಕರ್ನಾಟಕ ಪ್ರಾಂತದಲ್ಲಿ ಸೇರಿಸಬೇಕಾಗಿ ಈ ಸಭೆಯು ಅ|| ಭಾ|| ಕಾಂ| ಕಮಿಟಿಗೆ ವಿನಂತಿ ಮಾಡಿಕೊಳ್ಳುತ್ತದೆ ಭಾಷಾವಾರ ಪ್ರಾಂತ ರಚನೆಯ ತತ್ವವನ್ನು ಅನುಸರಿಸಿ ಈ ಸೂಚನೆ ಮಾಡಿರುವದರಿಂದ ಈ ಬಗ್ಗೆ ತಪ್ಪು ತಿಳುವಳಿಕೆಯಾಗಕೂಡದು

೩ ರಾಷ್ಟ್ರೀಯ ಸಭೆಯ ಅಪ್ಪಣೆಯಂತೆ ಎಸೆಂಬ್ಲಿಯ ಚುನಾವಣೆಯಲ್ಲಿ ರಾಷ್ಟ್ರೀಯ ಸಭೆಯ ಹುರಿಯಾಳುಗಳನ್ನು ಪ್ರಚಂಡ ಬಹುಮತದಿಂದ ಆರಿಸಿಕೊಟ್ಟ ಬಗ್ಗೆ ಎಸೆಂಬ್ಲಿಯ ಮತದಾರರನ್ನು ಈ ಸಭೆಯು ಕೃತಜ್ಞತಾಪೂರ್ವಕ ಅಭಿನಂದಿಸುತ್ತದೆ ರಾಷ್ಟ್ರೀಯ ಸಭೆಯ ಹೊರಗಣ ಜನರು ಸಹ ಈ ಕಾರ್ಯದಲ್ಲಿ ಸಹಾಯ ಮಾಡಿದ್ದಕ್ಕಾಗಿ ಅವರಿಗೆ ಈ ಸಭೆಯು ಅಭಿನಂದಿಸುತ್ತದೆ

೪ ಜೋಯಿಂಟ ಪಾರ್ಲಿಮೆಂಟರಿ ಕಮಿಟಿಯ ವರದಿಯನ್ನು ಪಾಟಣಾದಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ತ್ಯಾಜ್ಯವೆಂದು ತಿರಸ್ಕರಿಸಿದ ನಿರ್ಣಯಕ್ಕೆ ಈ ಸಭೆಯು ಬೆಂಬಲ ಸೂಚಿಸುತ್ತದೆ

೫ ಕೂಡಲೇ ಕೈಕೊಳ್ಳಬೇಕಾದ ಕಾರ್ಯಕ್ರಮದ ವಿಷಯವಾಗಿ ಕಾರ್ಯಕಾರಿ ಮಂಡಳವು ಮಾಡಿದ ಠರಾವನ್ನು ಜಿಲ್ಲಾ ಕಾಂಗ್ರೆಸ ಕಮಿಟಿಗಳು ಲಕ್ಷ್ಯದಲ್ಲಿಟ್ಟು ವಿಳಂಬ ಮಾಡದೆ ಈ ಕೆಳಗೆ ಕಾಣಿಸಿದ ಕಾರ್ಯಕ್ರಮವನ್ನು ಕೈಕೊಳ್ಳಬೇಕು —

(೧) ಕಾಂಗ್ರೆಸ ಸಭಾಸದರನ್ನು ಮಾಡುವದು (೨) ಅಖಿಲ ಭಾರತೀಯ ಗ್ರಾಮೋದ್ಧಾರ ಸಂಘಕ್ಕೆ ಸಹಾಯ ಮಾಡುವದು, (೩) ಕರಾಚಿಯ ರಾಷ್ಟ್ರೀಯ ಸಭೆಯಲ್ಲಿ ಪಾಸಾದ ಮೂಲಭೂತ ಹಕ್ಕುಗಳ ವಿಷಯವಾಗಿ ಜನರಿಗೆ ಜ್ಞಾನ ಮಾಡಿಕೊಡುವದು

೬ ರಾಷ್ಟ್ರೀಯ ಸಭೆಯವರು ಸತ್ಯಾಗ್ರಹವನ್ನು ನಿಲ್ಲಿಸಿ ಶಾಂತ ಮಾರ್ಗದಿಂದ ವಿಧಾಯಕ ಕಾರ್ಯಕ್ರಮವನ್ನು ಅನುಸರಿಸುತ್ತಿರುವಾಗ ಸರಕಾರದವರು ಖಾನ ಅಬದುಲ್ ಗಫೂರಖಾನ, ಡಾ| ಸತ್ಯಪಾಲ ಮೊದಲಾದವರ ಮೇಲೆ ರಾಜದ್ರೋಹದ ಆರೋಪದ ಮೇಲೆ ತನಿಖೆ ನಡೆಸಿದ್ದನ್ನೂ, ಬಾಬು ಸುಭಾಸ ಚಂದ್ರರ ಮೇಲೆ ಅಸಹ್ಯ ನಿರ್ಬಂಧಗಳನ್ನು ಹಾಕಿದ್ದನ್ನೂ, ಬಾಬು ಶರಚ್ಚಂದ್ರರ ಬಂದನವನ್ನು ಮುಂದರಿಸಿದ್ದನ್ನೂ, ಶ್ರೀಮತಿ ಕಮಲಾ ನೆಹರು ಇವರು ತೀರ ವಿಪನ್ನಾವಸ್ಥೆಯಲ್ಲಿದ್ದಾಗಲೂ ಕೂಡ ಜವಾಹಿರಲಾಲರ ವಿಷಯ ವಹಿಸಿದ ಧೋರಣವನ್ನೂ, ಸೆರೆಮನೆಯಲ್ಲಿರುವ ಕರ್ನಾಟಕ ಸತ್ಯಾಗ್ರಹಿಗಳನ್ನು ಇನ್ನೂ ಬಿಡುಗಡೆ ಮಾಡದಿರುವದನ್ನು ಈ ಸಭೆಯು ಬಲವಾಗಿ ನಿಷೇಧಿಸುತ್ತದೆ ಆದರೂ ಸರಕಾರದ ಈ ಧೋರಣವನ್ನು ಲೆಕ್ಕಿಸದೆ ವಿಧಾಯಕ ಕಾರ್ಯವನ್ನು ಮನಗೊಟ್ಟು ಮಾಡುವ ಬಗ್ಗೆ ರಾಷ್ಟ್ರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ

೭ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಹೊಸ ಘಟನೆಯನ್ನು ತಯಾರಿಸುವದಕ್ಕೆ ಶ್ರೀ|| ದಿವಾಕರ, ಹುಕ್ಕೇರಿಕರ ಮತ್ತು ಜೋಶಿ ಈ ಮೂವರ ಕಮಿಟಿಯನ್ನು ನೇಮಿಸಲಾಗಿದೆ ಬರುವ ಜನವರಿ ತಿಂಗಳ ಹದಿನೈದನೇ ತಾರೀಖಿನೊಳಗಾಗಿ ಸದರಿ ಕಮಿಟಿಯು ತನ್ನ ವರದಿಯನ್ನು ಒಪ್ಪಿಸತಕ್ಕದ್ದು

೮ ಕರ್ನಾಟಕ ಪ್ರಾಂತಿಕ ಪರಿಷತ್ತು ಶ್ರೀ|| ಕರ್ನಾಟಕ ಸದಾಶಿವರಾಯರ ಸ್ಮಾರಕ ಮಂದಿರದಲ್ಲಿ ಮಂಗಳೂರಿನಲ್ಲಿ ಸೇರಬೇಕು ಅದು ಸಾಧ್ಯವಾಗದಿದ್ದರೆ ಪರಿಷತ್ತನ್ನು ಎಲ್ಲಿ ಮತ್ತು ಯಾವಾಗ ಸೇರಿಸಬೇಕೆಂಬ ನಿರ್ಣಯವನ್ನು ಅಧ್ಯಕ್ಷರು ಮಾಡತಕ್ಕದ್ದು

೯ ಬರುವ ಏಪ್ರಿಲ ತಿಂಗಳ ಮುಂಚೆಯೇ ಕರ್ನಾಟಕಕ್ಕೆ ವಿಶೇಷ ಸರಕಾರದ ರಜಿಸ್ಟರು ಭೆಟ್ಟಿ ಕೊಡುವ ಹಾಗೆ ಕಾಂಗ್ರೆಸಿಗೆ ಈ ಸಭೆಯು ಆಗ್ರಹದ ವಿನಂತಿಯನ್ನು ಮಾಡುತ್ತದೆ

೧೦ ಪ್ರಾಂತಿಕ ಪದದ ಬಗ್ಗೆ ಯಾವ ಮಾದರಿಯ ತತ್ವವನ್ನು ಮಾನ್ಯ ಮಾಡಬೇಕೆಂಬುದರ ವಿಷಯದಲ್ಲಿ ಜಿಲ್ಲಾ ಕಾಂ ಕಮಿಟಿಗಳು ಅಭಿಪ್ರಾಯ ತಿಳಿಸಕೊಡತಕ್ಕದ್ದು

೧೧ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಸಭಾಸದರ ಚುನಾವಣೆಯನ್ನು ಟಪಾಲ ಮುಖಾಂತರ ನಡಿಸತಕ್ಕದ್ದು ಮತಪತ್ರಿಕೆಗಳ ಪರೀಕ್ಷಣದ ಬಗ್ಗೆ (೧) ಶ್ರೀಮತಿ ಉಮಾಬಾಯಿ ಕುಂದಾಪೂರ (೨) ಶ್ರೀ|| ರಮಾನಾಥ ಹುಕ್ಕೇರಿಕರ ಮತ್ತು (೩) ಶ್ರೀ|| ಗುರುನಾಥ ವಾಳವೇಕರ ಇವರನ್ನು ನೇಮಿಸಿದೆ

೧೨ ಈ ವರ್ಷ ಕರ್ನಾಟಕದಲ್ಲಿ ಕನಿಷ್ಠ ೫೦ ಸಾವಿರ ಕಾಂಗ್ರೆಸ ಸಭಾಸದರನ್ನು ಮಾಡಬೇಕಾಗಿ ಈ ಸಭೆಯು ಸಂಕಲ್ಪವಿರುತ್ತದೆ ಈ ಕೆಲಸವು ಎಪ್ರಿಲ್ ತಾ ೧೫ ರೊಳಗೆ ಆಗಬೇಕಾಗಿದ್ದರಿಂದ ಎಲ್ಲರೂ ಈ ಕೆಲಸಕ್ಕೆ ತೊಡಗಬೇಕು ಈ ಕಾರಣ ಅವಶ್ಯವುಳ್ಳ ಪ್ರಚಾರ ಕಾರ್ಯವನ್ನ ಡಾ|| ಹರ್ಡೀಕರ ಮತ್ತು ಶ್ರೀ|| ಕಣಮಂಕರ ಇವರು ಮಾಡತಕ್ಕದ್ದು [ಪ್ರಾಂ ಕಮಿಟಿಯ ಸಭಾಸದರ ಪ್ರಮಾಣದಿಂದ ಆಯಾ ಜಿಲ್ಲೆಗಳಲ್ಲಿ ಮಾಡತಕ್ಕ ಸಭಾಸದರ ಸಂಖ್ಯೆಯು ಹಂಚಲಾಗುವದು.]

೧೩ ಭಾಷಾವಾರ ಪ್ರಾಂತರಚನೆಯ ತತ್ವವು ರಾಷ್ಟ್ರೀಯ ಸಭೆಗೆ ಸಮ್ಮತವಾಗಿದ್ದು, ಆ ಪ್ರಕಾರ ಮುಂಬಯಿ, ಮದ್ರಾಸ ಇಲಾಖೆಗಳೊಳಗಿನ ಕನ್ನಡ ಜಿಲ್ಲೆಗಳನ್ನೂ, ಕೊಡಗು ಪ್ರಾಂತವನ್ನೂ ಒಳಗೊಂಡು ಒಂದು ಸ್ವತಂತ್ರ ಪ್ರಾಂತ ನಿರ್ಮಾಣ ಮಾಡದ ಹೊರತು ಕರ್ನಾಟಕಸ್ಥರ ಏಳ್ಗೆಯು ಶಕ್ಯವಿಲ್ಲದ್ದರಿಂದ, ಶ್ರೀ|| ಕಾರ್ನಾಡ, ಶ್ರೀ|| ಅನಂತಶಯನಂ ಮತ್ತು ಶ್ರೀ|| ಅಲ್ಲಾಡಿ ಇವರು ಈ ವಿಷಯವನ್ನು ಎಸೆಂಬ್ಲಿಯೊಳಗಿನ ಕಾಂಗ್ರೆಸ ಪಕ್ಷದ ಮುಂದೆ ಮಂಡಿಸಿ, ಅದರ ಕಡೆಯಿಂದ ಕರ್ನಾಟಕದ ಸ್ವತಂತ್ರ ಪ್ರಾಂತ ರಚನೆಯ ಬಗ್ಗೆ ಗೊತ್ತುವಳಿಯನ್ನು ಎಸೆಂಬ್ಲಿಯಲ್ಲಿ ತರುವ ವ್ಯವಸ್ಥೆ ಮಾಡಬೇಕಾಗಿ ಈ ಸಭೆಯು ಬಿನ್ನೈಸುತ್ತದೆ ಈ ವಿಷಯವನ್ನು ತಮ್ಮ ಪಕ್ಷದ ಪ್ರಶ್ನೆಯಾಗಿ ಮಾಡಬೇಕೆಂದು ಅಸೆಂಬ್ಲಿಯೊಳಗಿನ ಕಾಂಗ್ರೆಸ ಪಕ್ಷದ ಧುರೀಣರಾದ ಶ್ರೀ|| ಭುಲಾಭಾಯಿ ದೇಸಾಯಿಯವರಿಗೂ, ಸಭಾಸದರಿಗೂ ಈ ಸಭೆಯು ಆಗ್ರಹದ ವಿನಂತಿ ಮಾಡಿಕೊಳ್ಳುತ್ತದೆ

೧೪ ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮವನ್ನು ನೆರವೇರಿಸಲಿಕ್ಕೆ ಸ್ವಯಂಸೇವಕರು ಅವಶ್ಯವಿರುವದರಿಂದ, ಆಯಾ ಜಿಲ್ಲಾ ಕಾಂ ಕಮಿಟಿಗಳು ಸ್ವಯಂಸೇವಕ ಪಥಕಗಳನ್ನು ಘಟಿಸಬೇಕು ಈ ಘಟನೆಗೆ ಮಾರ್ಗದರ್ಶಕರೆಂದು ಶ್ರೀ|| ದಿವಾಕರ ರಂಗರಾಯರನ್ನು ನೇಮಿಸಿದೆ

೧೫ (ಅ) ಕರ್ನಾಟಕದಲ್ಲಿ ಈ ವರ್ಷ ವಿಶೇಷ ಬರ ಬಿದ್ದ ಮೂಲಕ ಅಧಿಕಾರಿಗಳು ಜನರಿಗೆ ಕೂಡಲೇ ನಿವಾರಣೋಪಾಯಗಳ ಯೋಜನೆ ಮಾಡುವರಾಗಿ ಈ ಸಭೆಯು ಆಶಿಸುತ್ತದೆ (ಬ) ಬಳ್ಳಾರಿ ಜಿಲ್ಲೆಯಲ್ಲಿ ಅತಿಶಯ ಬರವಿರುವ ಕಾರಣ ಅಲ್ಲಿಯವರು ತೀವ್ರವೇ ನಿವಾರಣೆಯ ಕಾರ್ಯ ಕೈಕೊಳ್ಳಬೇಕೆಂದು ಈ ಸಭೆಯು ಕೋರುತ್ತದೆ

೧೬ ಚುನಾವಣೆಯ ಸಂಭ್ರಮದಲ್ಲಿ ಕಾರವಾರ ಕೃಷಿಕರ ಸಮಸ್ಯೆಯ ಕಾರ್ಯವು ಹಿಂದೆ ಬಿದ್ದಿದ್ದು, ಕೃಷಿಕರ ಪರಿಸ್ಥಿತಿಯು ದಿನೇ ದಿನೇ ಕೆಡುತ್ತ ನಡೆದದ್ದರಿಂದ ಎಲ್ಲ ಕಾರ್ಯಕರ್ತರು ಆ ಕಾರ್ಯವನ್ನು ಮುಂದುವರಿಸಬೇಕಾಗಿ ಈ ಸಭೆಯು ಬಿನ್ನೈಸುತ್ತದೆ

೧೭ ಧಾರವಾಡ ಮ್ಯು| ಯ ಚುನಾವಣೆಗೆ ನಿಂತ ಕಾಂ ಹುರಿಯಾಳುಗಳಿಗೆ ಈ ಸಭೆಯು ಬೆಂಬಲಿಸಿದೆ

ಡಾ|| ಮಹಿಷಿಯವರ

ಎಲ್ಲಾ ಥರದ ಔಷಧಗಳು

ದೇವಪ್ಪ ಅಯ್ಯು ನಾಯ್ಕ ಕುಮಟಾ

(ಸೋಲ ಎಜಂಟ ಕಾರವಾರ ಜಿಲ್ಲಾ) ಇವರಲ್ಲಿ ಮಾರಾಟಕ್ಕೆ ಸಿಗುತ್ತವೆ

Siromani Udipi Narayanacharya

CHAUKHAMBA BENARES CITY



SUNECO BENARES CITY

ಮಹಾಕಾಶಿಯ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮುಕ್ತ ಮನೋರಥವನ್ನು ಹೊಂದಿರಿ ಕೈಡಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಬಂದಂತೆ ಕ್ರಯ ಹೆಚ್ಚುವದು. ಕಂಠಿ ಸರ 32 ಮಣಿ 1ಕ್ಕೆ ರೂ 0 8-0ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ 3 8 0ರಿಂದ ೫೦ ವರೆಗೆ ಮತ್ತು ಬೇರೆ ಮಾಲುಗಳು ವಿವರ ತಿಳಿಯಲು ಅಪೇಕ್ಷಿಸುವವರು 0 1 0 ಸ್ಟಾಂಪು ಕಳಿಸಿದರೆ, 1 ಶಾಲಿ ಪತ್ರೆ, 1 ವಿಶ್ವೇಶರನ ಪದ ಪುಸ್ತಕ ಕಳಿಸಲಾಗುವದು.

ಪತ್ತೆ — ಶಿರೋಮಣಿ ನಾರಾಯಣಾಚಾರ್ಯ, ಚೌಖಾಂಬಾ, ಕಾಶೀ ಕ್ಷೇತ್ರ

ಅಲ್ಲಲ್ಲಿ ಇಷ್ಟಿಷ್ಟು!

(ಎರಡನೆ ಪುಟದಿಂದ ಮುಂದರಿದುದು)

ಮಹಾಯುದ್ಧ ಕಾಲದಲ್ಲಿ ಅಮೇರಿಕೆಯಿಂದ ಬ್ರಿಟನ್–ಫ್ರಾನ್ಸ ಮೊದಲಾದ ಮಿತ್ರರಾಷ್ಟ್ರಗಳು ಖರ್ವ ಪದ್ಮ ರೂಪಾಯಿಗಳ ಸಾಲ ತೆಗೆದಿದ್ದರು. ಆ ಸಾಲವನ್ನು ಕಂತಿನಿಂದ ವಸೂಲ ಕೊಡುವ ವ್ಯವಸ್ಥೆಯಾಗಿತ್ತು. ಆ ವ್ಯವಸ್ಥೆಯಂತೆ ಡಿಸೆಂಬರ ತಿಂಗಳಲ್ಲಿ ಕೊಡಬೇಕಾಗಿದ್ದ ಕಂತುಗಳನ್ನು ಕೊಡಲಾಗುವದಿಲ್ಲವಾಗಿ ಬ್ರಿಟಿಶ, ಫ್ರೆಂಚ ಸರಕಾರಗಳು ಅಮೇರಿಕೆಗೆ ತಿಳಿಸಿವೆ. ಹಡಗುಪಡೆಗಳಿಗೆ, ಮದ್ದುಗುಂಡುಗಳಿಗೆ, ಶಸ್ತ್ರಾಸ್ತ್ರಗಳಿಗೆ ಖರ್ಚು ಮಾಡಲಿಕ್ಕೆ ಹಣದ ಅಡಚಣೆ ಇಲ್ಲ. ಸಾಲ ತೀರಿಸಲಿಕ್ಕೆ ಮಾತ್ರ ಹಣದ ಅಡಚಣೆ!

* * *

ಆರೋಗ್ಯದಲ್ಲಿ ಆಸ್ಟ್ರೇಲಿಯಾ ದೇಶವು ಈಗ ಪ್ರಪಂಚದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದೆ. ಅಲ್ಲಿಯ ಮರಣಗಳ ಪ್ರಮಾಣವು ತಗ್ಗಿದೆ. ಇದಕ್ಕೆ ಪ್ರತ್ಯಕ್ಷ ಪ್ರಮಾಣ ಅಲ್ಲಿ ಈಗ ಸಾವಿರಕ್ಕೆ ೮ರಂತೆ ಮರಣಗಳು ಮತ್ತು ೧೭ ಜನನಗಳು ಸಂಭವಿಸುತ್ತವೆ. ಪ್ರಪಂಚದಲ್ಲಿ ಜನಸಂಖ್ಯೆಯ ವೃದ್ಧಿಯು ಸಾವಿರಕ್ಕೆ ೧೦ರಂತೆ ಆಗುತ್ತಿದ್ದರೆ, ಆಸ್ಟ್ರೇಲಿಯಾದಲ್ಲಿ ೧೫ರಂತೆ ಆಗುತ್ತದೆ. ೧೦೦ ವಯಸ್ಸಿಗೆ ಮೇಲ್ಪಟ್ಟವರ ಆಸ್ಟ್ರೇಲಿಯಾದಲ್ಲಿ ಕಳೆದ ವರ್ಷ ೨೬ ಮಂದಿ ಸತ್ತರು. ಆಸ್ಟ್ರೇಲಿಯಾದ ಜನಸಂಖ್ಯೆಯು ಈಗ ಸುಮಾರು ೬೬ ಲಕ್ಷ ಇರುವದು.

* * *

ಫ್ಲೋರಿಡ್ ಸ್ (ಅಮೇರಿಕಾ) ನಗರದೊಳಗಿನ, ೧೫೦೦ ಟನ್ನು ಭಾರವುಳ್ಳ ಮತ್ತು ೨೦೦ ಅಡಿ ಎತ್ತರವಾದ ಬಂಕವನ್ನು ಇದ್ದಕಿದ್ದ ಹಾಗೆ ೬೦೦ ಅಡಿ ದೂರಕ್ಕೆ ಸರಿಸಿರುವರು. ಈ ಬಂಕವು ೬೫ ವರ್ಷಗಳಿಂದ ಕಟ್ಟಲ್ಪಟ್ಟಿತ್ತು. ಇಂಥ ಹಳೇ ಬಂಕವನ್ನು ಕೆಡಿಸದೆ ಕುದುರೆಗಳ ಸಹಾಯದಿಂದ ದೂರಕ್ಕೆ ಒಯ್ದ ಇಂಜಿನಿಯರರ ಚಾತುರ್ಯ ನೋಡಿರಿ!

* * *

ಫ್ರಾನ್ಸ ದೇಶದ ಪ್ರೇಗನೋಲಿಸ ಗ್ರಾಮದಲ್ಲಿ ಸಣ್ಣದೊಂದು ಗೊಂದಲ. ಮಾರ್ಕೋವಿಚ್ ಎಂಬವನ ಹೆಂಡತಿಯೂ ನೆರೆಮನೆಯವನ ಹೆಂಡತಿ ಒಂದೇ ಕಾಲಕ್ಕೆ ಒಂದೇ ಮನೆಯಲ್ಲಿ ಗಂಡುಮಕ್ಕಳನ್ನು ಹಡೆದರು. ಗದ್ದಲದಲ್ಲಿ ಸೂಲಗಿತ್ತಿಯು ಎರಡೂ ಶಿಶುಗಳನ್ನು ಒಂದೇ ತೊಟ್ಟಿಲಲ್ಲಿ ಹಾಕಿದಳು. ಯಾವ ಶಿಶು ಯಾರದು ಎಂದು ತಿಳಿಯಲನುಕೂಲವಾಗುವಂತೆ ಗುರುತು ಮಾಡಿಡಲಿಲ್ಲ! ಹೀಗಾಗಿ ಮಾರ್ಕೋವಿಚ್‌ನಿಗೆ ತನ್ನ ಮಗನ್ಯಾವನು, ನೆರೆಮನೆಯವನ್ಯಾರು? ಎಂದು ತಿಳಿಯುವ ಪ್ರಸಂಗ! ಮಾರ್ಕೋವಿಚ್‌ನ ಹೆಂಡತಿಯು ತನ್ನ ಮಗನನ್ನು ಆರಿಸಬಹುದು. ಯಾರ ತಪ್ಪನ್ನು ಆರಿಸಬಹುದು. ತಾನು ಯಾರಿಗೆ ಮುದ್ದಿಡುತ್ತೇನೆಂಬುದು ಅವನೇ ಬಲ್ಲನು!

* * *

ಕಾಸರಗೋಡು ತಾಲ್ಲೂಕಿನಲ್ಲಿ ಹೆಲ್ತ ಆಫೀಸರ ಆರೋಗ್ಯ ರಕ್ಷಣ ಖಾತೆಯ ಆ ಜಾಗೆಗೆ [illegible] ನೇಮಣೂಕಿಯಾಗುವದಿತ್ತು. ಜಿಲ್ಲೆಯೊಳಗಿನ ಬಾಕಿ ಜವಾಬದಾರ ಸ್ಥಳಗಳನ್ನೆಲ್ಲ ಮುಸಲ್ಮಾನರು ಆಕ್ರಮಿಸಿರುವದರಿಂದ ಮುಸಲ್ಮಾನ ಅಧ್ಯಕ್ಷರು ಒಬ್ಬ ಹಿಂದು ಉಮೇದವಾರನಿಗೆ ಹೆಲ್ತ ಆಫೀಸರನ ಜಾಗೆಯ ಮೇಲೆ ನೇಮಿಸಬೇಕೆಂದು ಸೂಚಿಸಿದರು. ಆದರೆ ಹಿಂದು ಸಭಾಸದರಿಲ್ಲರೂ ಮುಸಲ್ಮಾನ ಉಮೇದ್ವಾರನೇ ಹೆಚ್ಚು ಲಾಯಖ ಇರುವವನೆಂದು ಠರಾಯಿಸಿದರು!

* * *

ಅಮೇರಿಕೆಗೆ ಸಲ್ಲತಕ್ಕ ಸಾಲದ ಕಂತನ್ನು ಕೊಡಲಿಕ್ಕೆ ಇಂಗ್ಲಂಡಕ್ಕೆ ಸಾಧ್ಯವಿಲ್ಲೆಂತ ಕೋಶಾಧ್ಯಕ್ಷರಾದ ಚೇಂಬರಲೇನರು ಜಾಹೀರ ಮಾಡಿದರು. ಈ ಒಗ್ಗ ಒರೆಯುವಾಗ ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯು ಹೇಳುವದೇನೆಂದರೆ — 'ಈ ರೀತಿ ಕಂತುಗಳನ್ನು ತೆರುತ್ತ ಹೋದರೆ ಪ್ರಜೆಗಳು ಶಾಶ್ವತವಾಗಿ ಸರ್ವಾವಧಿಯ ಕರಗಳ ಹೊರೆಯನ್ನು ಹೊರಬೇಕಾದೀತು! ಲೋಕೋಪಕಾರಿ ಸಾಲ – ರಿಗಳನ್ನು ತಗ್ಗಿಸಬೇಕಾಗುವದು! ಬ್ರಿಟಿಶ ಲಷ್ಕರೀ ಖರ್ಚುಗಳ ಕಡಿಮೆ ಮಾಡಬೇಕಾಗುವದು. ಇದನ್ನು ನೋಡಿ ಅಮೇರಿಕೆಯ ರಾಜಕಾರಣಿಗಳು ಸಹ ಸ್ತಂಭಿತರಾಗಬಹುದು! ಲೋಕಮತದ ಪರಿವೆಯಿಲ್ಲ, ಯಾವ ಸರಕಾರವೂ ಇಂಥ ಧೋರಣವನ್ನು ಅನುಸರಿಸದು!" ಈ ಮಾತು ಹಿಂದುಸ್ಥಾನಕ್ಕೆ ಅನ್ವಯಿಸಬಹುದೇ?

* * *

ಅಲಹಾಬಾದ ಜಿಲ್ಹೆಯೊಳಗೆ ಮುರಲೀಪುರದಿಂದ ೩ ಮೈಲು ಅಂತರದಲ್ಲಿ ೧೮ ನೆ ಶತಮಾನದ ೧೦ ಅಡಿ ಎತ್ತರವಾದ ಪರ್ವತಾಕಾರ ಆನೆಯ ಅಸ್ಥಿಪಂಜರವೊಂದು ಸಿಕ್ಕಿದೆ. ಮಾಟ ಮೊದಲು ದನ ಕಾಯುವವರು ಈ ಪಂಜರದ ಕೆಲಭಾಗವನ್ನು ಕಂಡು ಹಿಡಿದರು. ಅಸುಬ್ರಿಯು ಕ್ರಮೇಣ ಡ್ಯಿಯಾ ಜಮೀನದಾರರಾದ ರಾಜಾ ಭಗವತೀ ಪ್ರಸಾದ ಸಿಂಹಜಿಯವರ ತನಕ ಮುಟ್ಟಿತು. ಸಿಂಹಜಿಯವರು ಪುರಾಣವಸ್ತುಶೋಧಕರನ್ನು ಕರೆಯಿಸಿ, ಹಳ್ಳದಲ್ಲಿ ಅಗಿಸಿ ತೆಗೆದರು. ಅಗಿಯುವಾಗ ಪಂಜರದ ಅನೇಕ ಭಾಗಗಳು ಹಾಳಾದವು. ಉಳಿದ ಅವಯವಗಳು ಸ್ವಾಯವಾಗಿವೆ. ಆನೆಯ ಈ ಎಲ್ಲ ಅವಶೇಷಗಳನ್ನು ರಾಜರು ಕಾಶಿಯೊಳಗಿನ ಹಿಂದು ವಿಶ್ವವಿದ್ಯಾಲಯಕ್ಕೆ ದಾನಮಾಡಿದ್ದಾರೆ. ಈ ಆನೆಯ ಒಂದು ಕಾಲಿಯು ೧೨ ಫೂಟು ಉದ್ದವಿರುತ್ತದೆ. ಅಂದ ಮೇಲೆ ಇದರ ಆಕಾರವು ಎಷ್ಟು ದೊಡ್ಡದಿರಬಹುದೆಂದು ವಾಚಕರೇ ಊಹಿಸಲಿ. ಈ ಆನೆಯು ೧ ಲಕ್ಷ ವರ್ಷ ಹಿಂದಿನದಾಗಿರಬೇಕೆಂದು ತಜ್ಞರ ತರ್ಕವಿದೆ.

* * *

"ನಾಪುತ್ರಸ್ಯ ಗತಿಃ" ಎಂದು ನಮ್ಮ ಹಿಂದು ಧರ್ಮ ಶಾಸ್ತ್ರಗಳು ಹೇಳುತ್ತವೆ. ವಿಲಾಯತಿಯೊಳಗಿನ ಬಿಷಪ್ ಆಫ್‌ಪೋರ್ಡ ಬಿಶಪರು ಇದೇ ತತ್ವವನ್ನು ಆಧುನಿಕ ಭಾಷೆಯಲ್ಲಿ ಹೇಳುತ್ತಾರೆ: "ಪುತ್ರರಿಲ್ಲದ ದಾಂಪತ್ಯವು ನಿರರ್ಥಕವಾದುದು. ಪ್ರಜೋತ್ಪಾದನೆಯು ದಂಪತಿಗಳ ಕರ್ತವ್ಯ. ಒಂದು ಜೋಡಿಗೆ ಸರಾಸರಿ ನಾಲ್ಕು ಮಕ್ಕಳಾದರೂ ಆಗಬೇಕು. ಮಕ್ಕಳಾಗಬಾರದೆಂಬ ದಾಂಪತ್ಯವನ್ನು ನಾನು ನಿಷೇಧಿಸುವೆನು. ಇಂಥ ದಾಂಪತ್ಯ ಜೀವನವು ಸುಖಕ್ಕೆ ಮಾತ್ರ ಕಾರಣವಾಗುವದು." ಎಂದು ಈ ಬಿಶಪರು ಒಂದು ವಿವಾಹ ಸಮಾರಂಭದ ಕಾಲಕ್ಕೆ ನುಡಿದಿರುವರು!

ಆರೋಗ್ಯದ ಬಗ್ಗೆ ಮುತ್ತಿನಂತಹ ಮಾತುಗಳು

೧ ನಿನ್ನ ಶರೀರವನ್ನು ದೇವಾಲಯದಂತೆ ಪವಿತ್ರವಾಗಿ [illegible] ಇಡಬೇಕು. ೨ ಆರೋಗ್ಯವನ್ನು ಸಂಪಾದಿಸುವ ಸಾಮರ್ಥ್ಯವು ನಿನಗೆ ಬೇಕಾಗುವದು. ೩ ಪ್ರತಿಯೊಂದು ವಸ್ತುವಿನಲ್ಲಿಯೂ ಒಳ್ಳೆಯದೆಂಬುದು ಇದ್ದದ್ದೇ. ಆ ಒಳ್ಳೆಯವನ್ನೇ ಸಂಪಾದಿಸು. ಪ್ರತಿಯೊಂದು ವಿಚಾರದಲ್ಲಿ ತಿಳಿಯದೇ ವರ್ತಿಸುತ್ತಿರುವ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುತ್ತದೆ. ೪ [illegible] ಸಂತೋಷವಾಗಿದ್ದರೆ ಆರೋಗ್ಯವು ಸರಿಯೇ. ೫ ಮಿತವಾದ ಊಟ, ನಗು ಮೊಗಗಳೂ ಪ್ರೀತಿಯ ಎರಡು [illegible]. ೬ ತಾರುಣ್ಯವು ಬಾಲ್ಯದಲ್ಲಿದೆ, ವಯಸ್ಸಿನಲ್ಲಿಲ್ಲ. ೭ ೬೦ ವರ್ಷದ ಮುದುಕನ ವೃದ್ಧತ್ವ ೬೦ ವರ್ಷದ ಬಲಿಷ್ಠನು ಕಳೆಯಬಹುದು. ೮ ನಿಸರ್ಗಶಕ್ತಿಯು ಅನೇಕ ರೋಗಗಳನ್ನು [illegible] ದೂರಮಾಡುತ್ತದೆ. ೯ ಆರೋಗ್ಯ ವಿಷಯಗಳ ಜ್ಞಾನವು ಆರೋಗ್ಯದ [illegible]. ೧೦ [illegible] ಇದ್ದರೆ ತೀವ್ರ ನೈಸರ್ಗಿಕ ಕ್ರಿಯೆಯೇ ಮೇಲಾದ ಔಷಧವೆಂದು ಗಟ್ಟಿಯಾಗಿ ನಂಬಬೇಕು. ೧೧ ಊಟ ಮಾಡುವದು ಬದುಕುವದಕ್ಕಾಗಿ, ಜೀವನದ ಉದ್ದೇಶ ಊಟ ಮಾಡುವದಕ್ಕಲ್ಲ. ೧೨ ಗದ್ದಲವಿರದ ಏಕಾಂತ ರೋಗವನ್ನು, ವ್ಯಸನವನ್ನು ಸಂರಕ್ಷಿಸುತ್ತದೆ. ೧೩ ಒಬ್ಬನಿಗೆ ಒಂದು ಔಷಧವಾದರೆ ಮತ್ತೊಬ್ಬನಿಗೆ ಅದು ವಿಷವಾಗಬಹುದು. ೧೪ ಯೋಗ್ಯಸಮಯಕ್ಕೆ ದೊರೆತ ಔಷಧ (ಟಾನಿಕ್) ವು ನೂರಾರು ಔಷಧಗಳ ವೆಚ್ಚವನ್ನು ಉಳಿಸುತ್ತದೆ. ರೋಗವುಂಟಾದ ಕೂಡಲೇ ಅದನ್ನು ಕಳೆಯುವ ನೈಸರ್ಗಿಕ ಉಪಾಯವನ್ನು ಕೈಕೊಳ್ಳು. ೧೫ ವಿಶ್ರಾಂತಿ, ಬೆಳಕು ಸಹಕಾರ ಮೊದಲಾದವುಗಳು ಸೌಂದರ್ಯವನ್ನು ಹೆಚ್ಚಿಸುತ್ತವೆ. ೧೬ ಕೃತ್ರಿಮ ಔಷಧಗಳು ಎಷ್ಟಿಷ್ಟು ಉತ್ತಮವೆಂದು ಸೇವಿಸಿ ಪ್ರಕೃತಿಯೊ[illegible] ಅತ್ತ ವಿಷಪೂರ್ಣವೆಂದು ತಿಳಿಯಬೇಕು. ೧೭ ನಿತ್ಯ ವ್ಯಾಯಾಮವು ಆರೋಗ್ಯವು ಆನಂದದಲ್ಲಿದೆ. ೧೮ ಬಾಯಿಯಿಂದ ಉಸಿರಾಡಬೇಡ. ಅದರಿಂದ ನರಗಳು ಬಲಹೀನವಾಗಿ ಧಮನ್ಯಗಳ ಕಳೆದು ಹೋಗುತ್ತದೆ. ೧೯ ಹಿತ ಮತ್ತು ಮಿತವಾದ ಆಹಾರವು ದೀರ್ಘಾಯುಷ್ಯದ ಲಕ್ಷಣವು. ೨೦ ಸ್ವಚ್ಛತೆಯಲ್ಲಿ ಮಾತ್ರ ಇದು ಅವಶ್ಯವಾದದ್ದು. ೨೧ ವ್ಯಾಯಾಮವು ಮತ್ತು ವಿಶ್ರಾಂತಿಯೂ ಶರೀರಕ್ಕೆ ಅನ್ನಕ್ಕಿಂತಲೂ ಅವಶ್ಯವಾಗಿದೆ. ೨೨ ಸಮಯೋಚಿತ ಕಾರ್ಯ ಎಂದೂ ನೋಡಬೇಕು. ೨೩ ಹೊಟ್ಟೆಯನ್ನು ಬರಿದಾಗಿ ಹೊತ್ತು ಜಗಿ ತಿನ್ನುವುದು ಬಾಯಿಯು ಊಟದ ಕೆಲಸ. ಈ ಪದ್ಧತಿಯು ದೀರ್ಘಾಯುಷ್ಯವನ್ನು ಕೊಡುತ್ತದೆ. ೨೪ ರೋಗಗಳನ್ನು ಗುರುತಿಸಿ ತಡೆಯಬೇಕು. ೨೫ ಶರೀರವನ್ನು ಆರಾಮ ತರಬಲ್ಲ ಹಸಿವೆಯಾಗುವ ರೋಗವು ಇಲ್ಲವು. ೨೬ ಔಷಧವು ತಿನ್ನುವದಕ್ಕಾಗಿ. ೨೭ ಜೀರ್ಣವಾದ ಉತ್ಕೃಷ್ಟ ಆಹಾರ ಬೇಕು, ಹೊಸ ಉಡುಗೆ ಸಾಕಾದ ಮೆಚ್ಚದಿಂದ ಶರೀರವನ್ನು ಪೋಷಿಸುವದು ಮೇಲು.

— ಸ್ವದೇಶಾಭಿಮಾನಿ

ಕಾರವಾರ ಸಿವಿಲ್ ಆಸ್ಪತ್ರೆಯ ಎದುರಿಗೆ ಇರುವ

ನಮ್ಮ ದಂತಚಿಕಿತ್ಸಾಲಯ

ದಲ್ಲಿ ಎಲ್ಲ ತರದ ದಂತಚಿಕಿತ್ಸೆ ಮಾಡಲ್ಪಡುತ್ತದೆ! ಉತ್ಕೃಷ್ಟವಾದ ರಸ್ತ್ರಾಂಗ ಭಾರದಿಂದ ನೋವಿಲ್ಲದೆ ಹಲ್ಲು ತೆಗೆಯುವವು. ಹೊಸ ಕೃತ್ರಿಮ ದಂತಪಂಕ್ತಿಯನ್ನು ಅಚ್ಚುಕಟ್ಟಾಗಿ ಕೂಡ್ರಿಸಿಕೊಡುವೆವು. ನವ ಸಾಧನಗಳು ಸಿದ್ಧವಾಗಿವೆ!

ಡಾ|| ಎಚ್. ಎಲ್. ಪಿ. ಡಿಸೋಜಾ

ಡಿ ಡಿ ಎಸ್ ಸಿ ಕಾರವಾರ.